THE BOOK WAS DRENCHED


RIG-VEDA SAMHITA
ಋಗ್ವೇದಸಂಹಿತಾ

UNIVERSAL
LIBRARY
OU_200832
UNIVERSAL
LIBRARY

ಋಗ್ವೇದಸಂಹಿತಾ

ಭಾಗ—೧೮

ತೃತೀಯಾಷ್ಟಕದಲ್ಲಿ ಆರು, ಏಳು ಮತ್ತು
ಎಂಟನೆಯ ಅಧ್ಯಾಯಗಳು

ಚತುರ್ಥ ಮಂಡಲದ ಸೂಕ್ತಗಳು ೧೯–೫೮ ಮತ್ತು
ಪಂಚಮ ಮಂಡಲದ ಸೂಕ್ತಗಳು ೧–೬

ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲಾ

ಸಂಖ್ಯೆ—೧೮

RIG-VEDA

ಸಾಯಣಭಾಷ್ಯಸಮೇತಾ

ಋಗ್ವೇದಸಂಹಿತಾ

(ಕರ್ಣಾಟಕ ಭಾಷಾರ್ಥಾನುವಾದವಿವರಣೆಗಳೊಡನೆ)

ಭಾಗ—೧೮

ತೃತೀಯಾಷ್ಟಕದಲ್ಲಿ ಆರು, ಏಳು ಮತ್ತು ಎಂಟನೆಯ ಅಧ್ಯಾಯಗಳು.

ಚತುರ್ಥ ಮಂಡಲದ ಸೂಕ್ತಗಳು ೧೯—೫೮

ಮತ್ತು

ಪಂಚಮ ಮಂಡಲದ ಸೂಕ್ತಗಳು ೧—೮

Translated with Exhaustive Critical Notes & Explanations
by

Asthana Mahavidwan

H. P VENKATA RAO.

Editor

Printed at
SREE SHARADA PRESS
MYSORE
1952

Published by the gracious permission of

His Highness

Sri Jayachamarajendra Wadiyar Bahadur,

G C B, G C S I, Maharaja of Mysore

ಯದುವಂಶತಿಲಕಂ ಜಯಚಾಮರಾಜೇಂದ್ರಂ ಸತ್ಪ್ರಜಾಪ್ರಭುತ್ವಾಯೈದಿಕವಿದ್ಯಾವರ್ಧಕರೂ

ಮೈಸೂರು ದೇಶವನ್ನಾಳುವ ಧರ್ಮಪ್ರಭುಗಳೂ ಆದ ಶ್ರೀಮನ್ಮಹಾರಾಜ

ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್,

ಜಿ ಸಿ.ಬಿ., ಜಿ ಸಿ.ಎಸ್ ಐ. ರವರು.

ವೇದಪ್ರಕಟನಕಾರ್ಯಕ್ಕಾಗಿ ಸಂಯೋಜಿತವಾಗಿರುವ

ವೇದವಿಮರ್ಶನವಿದ್ವನ್ಮಂಡಲಿ

Translator & Editor

ಆಸ್ಥಾನ ಮಹಾವಿದ್ವಾನ್ H P ವೆಂಕಟರಾವ್

Associate

1 ಬ್ರಾ ಶ್ರೀ C N ಚಕ್ರವರ್ತಿ M A
Professor of Sanskrit St Philomina's College, Mysore

ಸಹಾಯಕ ವಿದ್ವನ್ಮಂಡಲಿ

2 ಬ್ರಾ ಶ್ರೀ ಜಿ. ವಿಷ್ಣುಮೂರ್ತಿಭಟ್ಟರು, ಸಾಹಿತ್ಯವೈದಿಕವಿದ್ವಾನ್,
ಶ್ರೀಮನ್ಮಹಾರಾಜರವರ ಸಂಸ್ಕೃತಪುಸ್ತಕಾಗಾರದ ಎಸ್ಟರು

3 ಆಸ್ಥಾನ ವಿದ್ವಾನ್ ಬ್ರಾ ಶ್ರೀ H ಗಂಗಾಧರಶಾಸ್ತ್ರಿಗಳು, ಸಾಹಿತ್ಯವೈದಿಕವಿದ್ವಾನ್
ಮತ್ತು ಕರ್ನಾಟಕ ಭಾಷಾಪಂಡಿತರು

4 ಬ್ರಾ ಶ್ರೀ ಶ್ರೀನಿವಾಸಶಾಸ್ತ್ರಿಗಳು, ಋಗ್ವೇದ ಘನಪಾಠಿಗಳು

5 ಬ್ರಾ ಶ್ರೀ ಹಿಟ್ಟುವಳ್ಳಿ ಬಿಳಿಗಿರಿರಂಗಾಜೋಯಿಸರು, ವೈದಿಕವಿದ್ವಾನ್

6 ಬ್ರಾ ಶ್ರೀ ಹಿಟ್ಟುವಳ್ಳಿ ದೇವರಭಟ್ಟರು, ಸಾಮಪಾಂಸಾರ್ವಕಪಂಡಿತರು

7 ಬ್ರಾ ಶ್ರೀ ವೆಂಕಟರಮಣಾಚಾರ್, M A , B L , ಸಾಹಿತ್ಯವಿದ್ವಾನ್

8 ಬ್ರಾ ಶ್ರೀ S ರಂಗನಾಥನ್, ಸಾಹಿತ್ಯ ವಿದ್ವಾನ್, ಆರಮನೆ ಸರಸ್ವತೀ ಭಂಡಾರ

9 ಬ್ರಾ ಶ್ರೀ ಪುತ್ತೂರು ಅನಂತಕೃಷ್ಣಾಚಾರ್, ಸಾಹಿತ್ಯವಿದ್ವಾನ್,
Govt. Oriental Research Institute, Mysore

10 ಬ್ರಾ ಶ್ರೀ S ಸೀತಾರಾಮಶಾಸ್ತ್ರಿಗಳು, ರಿಪೈರ್ ಪಂಡಿತರು
Govt. Oriental Research Institute, Mysore

ಪೀಠಿಕೆ.

ವಿಶ್ವದ ಮೂಲತತ್ತ್ವ ಮತ್ತು ವಿಶ್ವಸೃಷ್ಟಿಯ ವಿಷಯದಲ್ಲಿಯೂ, ದೇವತೆಗಳ ವಿಷಯದಲ್ಲಿಯೂ ಋಗ್ವೇದ ಕಾಲದ ಋಷಿಗಳ ವಿಚಾರಕಲ್ಪನೆ ಮತ್ತು ತತ್ಸಂಬಂಧವಾದ ಕಥೆಗಳ ವಿಷಯವಾಗಿ ಕೆಲವು ಸಂಗತಿಗಳನ್ನು ಇಲ್ಲಿ ವಿಮರ್ಶಮಾಡುವುದು ಅಪ್ರಕೃತವೆನಿಸಲಾರದು

ಮಾನವನ ಇತಿಹಾಸದ ಅರುಣೋದಯದಲ್ಲಿ ಜಗತ್ತಿನ ಮೂಲತತ್ತ್ವದ ವಿಷಯದಲ್ಲಿ ಚಿಂತಿಸುತ್ತಿದ್ದ ತತ್ತ್ವಜಿಜ್ಞಾಸುಗಳ ಮನಸ್ಸಿಗೆ ವಿಶ್ವರಹಸ್ಯದ ವಿಷಯದಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸಿದವು ಆಯಾ ಮನಃ ಪರಿಪಾಕಕ್ಕೆ ತಕ್ಕಂತೆ ವೈಯಕ್ತಿಕವಾದ ಸಮಸ್ಯಾಪರಿಹಾರಗಳೂ ಆ ಧ್ಯಾನಮಗ್ನವಾದ ಮನಸ್ಸಿಗೇ ಹೊಳೆಯುತ್ತಿದ್ದವು ಒಂದೊಂದು ಸಲ ಜಗತ್ತಿನ ಸೃಷ್ಟಿಸ್ಥಿತಿಗಳು ಅನಾದಿಯಾದ ಭೌತಿಕಶಕ್ತಿಯ ಸ್ವಾಭಾವಿಕವಾದ ಪರಿಣಾಮ ವಿಶೇಷಗಳೆಂದೂ, ಇನ್ನು ಕೆಲವು ಸಲ ಕೆಲವು ಅಸಾಧಾರಣವಾದ ಬುದ್ಧಿಗೆ ಆಧ್ಯಾತ್ಮಿಕತತ್ತ್ವವೇ ಜಗದ್ವ್ಯವಹಾರಗಳಿಗೆಲ್ಲಾ ಮೂಲವೆಂದೂ ಭಾಸವಾಗಿರುತ್ತದೆ. ಪ್ರಕೃತಿಯ ಎಲ್ಲಾ ಭಾಗಗಳಲ್ಲಿಯೂ ಸಹ ಅನುಸ್ಯೂತವಾಗಿ ಕಂಡ ಬರುತ್ತಿರುವ ನಾನಾವಿಧವಾದ ಪರಿಣಾಮಗಳೂ, ಬೆಳವಣಿಗೆಗಳೂ ಒಂದೊಂದು ಸಲ ಒಂದೊಂದು ವಿಧವಾದ ಕಲ್ಪನೆಗೆ ಅವಕಾಶವನ್ನು ಕೊಟ್ಟವೆ ಸಮಸ್ತ ಜಗತ್ತೂ ಅನದ್ರೂಪವಾದ ತತ್ತ್ವದಿಂದಲೇ (**ನಾಸದಾಸೀನ್ನೋ ಸದಾಸೀತ್**) ಉತ್ಪನ್ನವಾಯಿತೆಂದು ಒಂದು ಮತವೂ, ಸೂಕ್ಷ್ಮಾವಸ್ಥೆಯಲ್ಲಿದ್ದ ತತ್ತ್ವವು ವಿಕಸಿತವಾಗಿ ನಾನಾ ಪರಿಣಾಮಗಳಿಗೆ ಅವಕಾಶವನ್ನು ಕೊಟ್ಟಿದೆಯೆಂದು ಇನ್ನೊಂದು ಮತವೂ, ಜಗತ್ಸೃಷ್ಟಿಯ ವಿಷಯದಲ್ಲಿ ತಮ್ಮ ಕಲ್ಪನೆಗನುಗುಣವಾದ ವಿಚಾರಗಳನ್ನು ವಿವರಿಸಿವೆ ಸ್ವಭಾವನಾದವನ್ನು ಸಮರ್ಥಿಸುವ ಸಾಂಖ್ಯಮತಕ್ಕೆ ಈ ಎರಡನೆಯ ಮತವೇ ಮೂಲವಾಯಿತು ಎಂದರೆ ಅತಿ ಸೂಕ್ಷ್ಮಾವಸ್ಥೆಯಲ್ಲಿದ್ದ ಮೂಲತತ್ತ್ವವು ಸ್ವಾಭಾವಿಕವಾದ ವಿಕಾಸ ಮತ್ತು ಪರಿಣಾಮವನ್ನು ಹೊಂದುವುದೇ ಜಗದ್ವ್ಯವಹಾರವು ಎಂಬುದೇ ಈ ಮತದ ಸಾರಾಂಶ ಅಥವಾ, ರಾತ್ರಿಯಲ್ಲಿ ಗೂಢವಾಗಿ ಅಡಗಿದ್ದ ಸಮಸ್ತನಾಮರೂಪಗಳೂ ಪ್ರಾತಃಕಾಲದಲ್ಲಿ ಸೂರ್ಯೋದಯವಾದನಂತರ ಪ್ರಕಾಶಕ್ಕೆ ಬರುವಂತೆ, ವಿಶ್ವದ ಸಮಸ್ತ ನಾಮರೂಪಾತ್ಮಕವಾದ ವಸ್ತುಗಳು ಅನಾದಿಯೂ, ಮೂಲಭೂತವೂ ಆದ ತಮಸ್ಸಿನಿಂದ ಆವಿರ್ಭೂತವಾದವು ಎಂಬುದೂ ಇನ್ನೊಂದು ಮತ, **'' ತಮ ಆಸೀತ್ತಮಸಾ ಗೂಹ್ಯಮಗ್ರೇ ''** (ಋ. ಸಂ. ೧೦-೧೯೯-೩) ಪ್ರಥಮತಃ ವಿಶ್ವವನ್ನೆಲ್ಲಾ ವ್ಯಾಪಿಸಿದ್ದ ತಮಸ್ಸಿನಿಂದ ಭಾವರೂಪವಾದ ಜಗತ್ತು ಆವಿರ್ಭೂತವಾಯಿತು ಎಂದು ಋಕ್ಸಂಹಿತೆಯ ಒಂದು ಭಾಗದಲ್ಲಿ ತಿಳಿಸಿರುತ್ತದೆ ಆದರೆ, ಭಾವರೂಪದ್ದೂ, ಕ್ರಮಬದ್ಧವಾದುದೂ ಆದ ವಿಶ್ವರಚನೆಯು ಅಭಾವರೂಪದ್ದೂ, ಶೂನ್ಯಾತ್ಮಕವೂ ಆದ ತಮಸ್ಸಿನಿಂದ ಆವಿರ್ಭೂತವಾಯಿತು ಎಂದು ಹೇಳುವುದು ಕೆಲವು ಜಿಜ್ಞಾಸುಗಳ ವಿಚಾರಕ್ಕೆ ಸಮಾಧಾನವನ್ನು ತರಲಿಲ್ಲ ಯಾವ ರೀತಿ ಮಾನವನ ವ್ಯವಹಾರಗಳು ಒಂದು ಗುರಿಯನ್ನಿಟ್ಟು ಅದನ್ನು ಸಾಧಿಸಲು ಸುಸಂಘಟಿತವಾಗಿಯೂ, ಸುಸಂವಿಧಾನದಿಂದ ಕೂಡಿಯೂ, ಸಂಕಲ್ಪಮೂಲವಾಗಿರುವುವೋ, ಅದೇ ರೀತಿ ನಿಯಮಬದ್ಧವಾದ ಪ್ರಕೃತಿಯ ವ್ಯವಹಾರಗಳಿಗೂ ಒಂದು ಚಿದಾತ್ಮಕವಾದ ತತ್ತ್ವದ ಸುಸಂಘಟಿತವಾದ ಸಂಕಲ್ಪವೂ, ನಿಯಮವ್ಯವಸ್ಥೆಯೂ ಇದ್ದೇ ತೀರಬೇಕು ನಿಯಮಬದ್ಧವಾದ ಜಗದ್ವ್ಯವಹಾರಗಳಿಗೆ ಅಂಧರೂಪವೂ, ಶೂನ್ಯಾತ್ಮಕವೂ ಆದ ಅಭಾವವು ಮೂಲವಾಗಿರಲು ಸಾಧ್ಯವಿಲ್ಲ ಆದುದರಿಂದ ಚಿದ್ವಿಶೇಷದ ಅತ್ಯುತ್ತಮವಾದ ಸಂಕಲ್ಪದ ಫಲವೇ ಜಗತ್ತಿನ ಸೃಷ್ಟಿಯು ಎಂದು ಇನ್ನೊಂದು ಮತವೂ ಋಕ್ಸಹಿಂತಾದ್ರಷ್ಟೃಗಳಾದ ಕೆಲವು ಋಷಿಗಳ ವಾಕ್ಯಗಳಲ್ಲಿ ಕಂಡುಬರುತ್ತದೆ

ಈ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದಂಶವಿರುತ್ತದೆ ಉಪನಿಷದಾದಿಗಳಲ್ಲಿ ವರ್ಣಿತವಾಗಿರುವ ಈಶ್ವರತತ್ತ್ವಕ್ಕೂ ಋಕ್ಸಂಹಿತೆಯಲ್ಲಿ ವರ್ಣಿತವಾಗಿರುವ ಈಶ್ವರತತ್ತ್ವಕ್ಕೂ ವ್ಯತ್ಯಾಸವಿದೆಯೆಂದು ಆಧುನಿಕ ವಿಮರ್ಶಕರಲ್ಲಿ ಕೆಲವರ ಮತವಾಗಿರುತ್ತದೆ. ಆ ವ್ಯತ್ಯಾಸವೇನೆಂದರೆ, ಚಿದಚಿದಾತ್ಮಕವಾದ ಸಮಸ್ತ ವಿಶ್ವವೂ ಒಂದೇ ಮೂಲತತ್ತ್ವದ ಸಂಕಲ್ಪ ಮತ್ತು ನಿಯಮನಗಳಿಗೆ ಒಳಪಟ್ಟಿದೆಯೆಂಬುದೇ ಉಪನಿಷತ್ತಿನ ಸಾರಾಂಶ ಋಕ್ಸಂಹಿತೆಯಲ್ಲಿ ಈ ಏಕತತ್ತ್ವವಾದವು ಅಷ್ಟಾಗಿ ಕಂಡುಬರುವುದಿಲ್ಲ ಪ್ರಕೃತಿಯು ನಾನಾ ಭಾಗಗಳುಳ್ಳದ್ದಾಗಿರುತ್ತದೆ ಒಂದೊಂದು ಭಾಗಕ್ಕೆ ಒಂದೊಂದು ಅಧಿದೇವತೆ ಆಯಾ ಭಾಗಗಳು ಆಯಾ ದೇವತೆಗಳ ಸಂಕಲ್ಪ ಮತ್ತು ನಿಯಮನಗಳಿಗೆ ಅನುಸಾರವಾಗಿ ವ್ಯವಸ್ಥಿತವಾಗಿರುತ್ತವೆ ಎಂದು ದೇವತಾಬಹುತ್ವದಲ್ಲಿ ಶ್ರದ್ಧೆಯಿರುವುದು ಋಕ್ಸಂಹಿತೆಯಲ್ಲಿ ಕಂಡು ಬರುತ್ತದೆ ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿದರೆ ಬೇರೆ ಬೇರೆ ದೇವತೆಗಳೂ ಒಂದೇ ಮೂಲತತ್ತ್ವದ ವಿಭೂತಿ ವಿಶೇಷಗಳೇ ಹೊರತು ತಾತ್ತ್ವಿಕವಾದ ವೈವಿಧ್ಯವನ್ನು ಹೊಂದಿಲ್ಲ ಎಂಬುದೂ ಒಂದು ಮತ ಈ ಅಂಶವನ್ನು ವಿಶೇಷ ವಿಷಯಪ್ರಕರಣಗಳಲ್ಲಿ ಕೆಲವೆಡೆ ಸೂಚಿಸಿದೆ. ಒಂದು ವೇಳೆ ಈ ಭಾಗಗಳು ಪರಸ್ಪರ ಸಂಬಂಧವನ್ನು ಹೊಂದಿ ತಮ್ಮ ವೈವಿಧ್ಯದಲ್ಲಿಯೂ ಒಂದು ಐಕ್ಯವಿದೆ ಎಂಬ ಅಂಶವನ್ನು ಸೂಚಿಸಿದರೂ ಸಹ, ವ್ಯಾವಹಾರಿಕಪ್ರಭೇದಗಳಿಗನುಗುಣವಾಗಿ ಆಯಾ ಭಾಗಗಳು ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿರುತ್ತವೆ ಪ್ರತಿಯೊಂದು ವಿಭಾಗಕ್ಕೂ ಸುವ್ಯವಸ್ಥಿತವಾದ ಕಟ್ಟಳೆಯನ್ನು ತೋರಿಸುವ ಒಂದೊಂದು ಅಧಿದೇವತೆಯು ನಿಯತವಾಗಿರಲೇಬೇಕು ಆದುದರಿಂದ ಪ್ರತಿಯೊಂದು ದೇವತೆಯೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರಲೇಬೇಕು ಎಂದು ದೇವತಾಬಹುತ್ವದಲ್ಲಿನ ನಂಬಿಕೆಯು ವಿಶದವಾಗಿದೆ. ಆದರೆ, ಈ ಅಂಶವನ್ನೂ ನಿಷ್ಕೃಷ್ಟವಾಗಿ ವಿವರಿಸಲು ಸಾಧ್ಯವಿಲ್ಲ. ವೈಯಕ್ತಿಕವಾದ ಪ್ರಭುತ್ವವನ್ನು ಹೊಂದಿರುವವರೆಂದು ವರ್ಣಿತವಾಗಿರತಕ್ಕ ದೇವತೆಗಳು ಒಂದೊಂದು ಸಲ ತಾವೇ ದೇವತಾಂತರದ ನಿಯಮನಕ್ಕೆ ಒಳಪಟ್ಟವರೆಂದು ವರ್ಣಿತರಾಗಿರುತ್ತಾರೆ. ಆದುದರಿಂದ ಈ ವಿಷಯದಲ್ಲಿ ಸೂಕ್ಷ್ಮವಾದ ಪರಿಶೀಲನವು ಅತ್ಯಗತವಾಗಿರುತ್ತದೆ.

ಋಗ್ವೇದಕಾಲದ ಋಷಿಗಳ ಕಲ್ಪನಾವೈವಿಧ್ಯ.

ಋಗ್ವೇದದ ಸೂಕ್ತಗಳು ಬೇರೆಬೇರೆ ಕಾಲದ ಬೇರೆ ಬೇರೆ ಋಷಿಗಳಿಂದ ನಿರ್ಮಿತವಾದವು ಈ ಸೂಕ್ತಗಳ ಸಂಖ್ಯೆಯು ಸಹಸ್ರಕ್ಕೂ ಮಿಗಿದೆ. ಈ ಸೂಕ್ತಗಳಲ್ಲೆಲ್ಲಾ ಆಯಾ ಋಷಿಗಳು ತಮ್ಮದೇ ಆದ ಸಾಂಪ್ರದಾಯಿಕವೂ ವೈಯಕ್ತಿಕವೂ ಆದ ಭಾವನೆಗಳನ್ನು ಪ್ರಕಾಶಪಡಿಸಿದ್ದಾರೆ. ಪ್ರಕೃತಿಸಂಪತ್ತಿನ ವೈವಿಧ್ಯದಿಂದ ಕೂಡಿದ ಸನ್ನಿವೇಶಗಳು ಈ ಋಷಿಗಳ ಮನಸ್ಸಿನಲ್ಲಿ ಬಾಹ್ಯಪ್ರಪಂಚದ ವೈವಿಧ್ಯದ ಸತ್ಯತೆಯನ್ನು ತೋರಿಸಿ ತಮ್ಮ ಪ್ರಭಾವವನ್ನು ಬೀರಿರಬೇಕು ಋಷಿಗಳ ಕಲ್ಪನಾಶಕ್ತಿಗಳು ಒಂದೊಂದು ಅಂಶವನ್ನು ಒಂದೊಂದು ವಿಧವಾಗಿ ವರ್ಣಿಸತೊಡಗಿದವು ಒಂದು ಕಡೆ ನಕ್ಷತ್ರಭರಿತವಾದ ಅಂತರಿಕ್ಷ, ಒಂದು ಕಡೆ ಅಂತರಿಕ್ಷದಲ್ಲಿ ಸಂಚರಿಸತಕ್ಕ ಆದಿತ್ಯನ ಪರಿಭ್ರಮಣ, ಇನ್ನೊಂದು ಕಡೆ, ನಾನಾರೂಪಗಳನ್ನೂ ಹೊಂದಿ ಪೃಥಿವ್ಯಂತರಿಕ್ಷಗಳ ನಡುನೆ ಸಂಚರಿಸತಕ್ಕ ಮೇಘಗಳು ಮತ್ತು ಅವುಗಳಲ್ಲಿ ಉತ್ಪನ್ನವಾಗುವ ವಿದ್ಯುತ್ಪ್ರಕಾಶ ಮತ್ತು ಪ್ರಭಾವ. ಹೀಗೆ ಒಂದೊಂದು ಸನ್ನಿವೇಶವೂ ಒಂದೊಂದು ವೈಶಿಷ್ಟ್ಯವನ್ನು ಪ್ರಕಾಶಪಡಿಸಿದುದರ ಪರಿಣಾಮವಾಗಿ ಋಷಿಗಳ ಭಾವಗಳು ಶ್ರದ್ಧಾಭಕ್ತಿಗಳಿಂದ ಕೂಡಿ ಆಯಾ ಶಕ್ತಿಗಳನ್ನು ಆರಾಧಿಸಲು ತೊಡಗಿದರು ಆಯಾ ಶಕ್ತಿಗಳನ್ನು ಪ್ರತಿಬಿಂಬಿಸತಕ್ಕ ದೇವತಾಕಲ್ಪನೆಗಳೂ ಸಾಧ್ಯವಾದವು. ಪ್ರತಿದೇವತೆಯನ್ನೂ ಒಂದೊಂದು ಋಷಿಯು ಒಂದೊಂದು ವಿಧವಾಗಿ ಸ್ತುತಿಸಿದ್ದಾನೆ ಆದರೆ, ಈ ಸ್ತುತಿವೈವಿಧ್ಯದಲ್ಲಿಯೂ ಒಂದು ಸಾಂಪ್ರದಾಯಿಕವಾದ ಸಮಾನತೆಯು ಕಂಡುಬರುತ್ತದೆ ದೇವತೆಗಳ ಮೂಲತತ್ತ್ವಗಳಲ್ಲಿ ಭಾವಭೇದಗಳಿಲ್ಲ. ಆದರೆ

ಅವರ ಶಕ್ತ್ಯತಿಶಯಗಳನ್ನು ಸ್ತುತಿಸುವಾಗ ಪ್ರಶಂಸಾಪ್ರಭೇದಗಳಿರುತ್ತವೆ. ಈ ದೇವತೆಗಳ ವೈಯಕ್ತಿಕವಾದ ಸ್ವರೂಪ ಮತ್ತು ಪ್ರಭಾವಗಳನ್ನು ತಿಳಿಯುವ ಮೊದಲು ಈ ದೇವತೆಗಳ ಸಂಖ್ಯೆ, ಇವರ ಸ್ಥಾನಮಾನಗಳ ವಿಷಯದಲ್ಲಿ ವೈದಿಕವಾದ ಮತ್ತು ವೈದಿಕಸಂಪ್ರದಾಯಗಳನ್ನನುಸರಿಸುವ ನಿರುಕ್ತಾದಿಗಳ ವಿವರಣೆಗಳನ್ನು ತಿಳಿಯುವುದು ಅವಶ್ಯವಾಗಿರುತ್ತದೆ

ಯಾಸ್ಕರ ರೀತ್ಯಾ ದೇವತೆಗಳ ವರ್ಗೀಕರಣ.

ಹಿಂದಿನ ಸಂಪ್ರದಾಯವನ್ನೇ ಅನುಸರಿಸಿ ಯಾಸ್ಕರು ದೇವತಾವಿಭಾಗಕ್ರಮವನ್ನು ತನ್ನ ನಿರುಕ್ತದಲ್ಲಿ ಈ ರೀತಿ ತಿಳಿಸಿದ್ದಾರೆ —

> **ತಿಸ್ರ ಏವ ದೇವತಾ ಇತಿ ನೈರುಕ್ತಾಃ। ಅಗ್ನಿಃ ಪೃಥಿವೀಸ್ಥಾನಃ। ವಾಯುರ್ವಾ ಇಂದ್ರೋ ವಾ ಅಂತರಿಕ್ಷಸ್ಥಾನಃ। ಸೂರ್ಯೋ ದ್ಯುಸ್ಥಾನಃ। ತಾಸಾಂ ಮಹಾಭಾಗ್ಯಾತ್ ಏಕೈಕಸ್ಯಾ ಅಪಿ ಬಹೂನಿ ನಾಮಧೇಯಾನಿ ಭವಂತಿ। ಅಪಿ ವಾ ಪೃಥಗೇವ ಸ್ಯುಃ। ಪೃಥಕ್ ಹಿ ಸ್ತುತಯೋ ಭವಂತಿ। ತಥಾ ಅಭಿಧಾನಾನಿ।** (ನಿ ೭-೫)

ನೈರುಕ್ತರ ಮತದಂತೆ ದೇವತೆಗಳ ಸಂಖ್ಯೆ ಮೂರು. **ಅಗ್ನಿ**ಯು ಪೃಥಿವೀಸ್ಥನಾದ ದೇವತೆ, ಅಂತರಿಕ್ಷಸ್ಥನಾದ ದೇವತೆಯು **ವಾಯು** ಅಥವಾ **ಇಂದ್ರನು**, **ಸೂರ್ಯ**ನು ದ್ಯುಸ್ಥಾನದ ದೇವತೆ ಸಂಹಿತಾವಾಕ್ಯವು ಈ ವಿಭಾಗಕ್ಕೆ ಅನುಗುಣವಾಗಿದೆ ಮತ್ತು ಅಂತಹ ವಾಕ್ಯಗಳ ಆಧಾರದ ಮೇಲೆಯೇ ಈ ವಿಭಾಗವನ್ನೂ ನೈರುಕ್ತರು ಮಾಡಿರಬಹುದು. **"ಸೂರ್ಯೋ ನೋ ದಿವಸ್ಪಾತು....."** (ಋ ಸಂ. ೧೦-೧೫೮-೮೧) ಇತ್ಯಾದಿವಾಕ್ಯಗಳೇ ಇದಕ್ಕೆ ಉದಾಹರಣೆ. ಈ ದೇವತೆಗಳೇ ಅವರವರ ವೈಯಕ್ತಿಕವಾದ ಮಾಹಾತ್ಮ್ಯಗಳಿಂದಲೂ ಮತ್ತು ಕರ್ಮವೈವಿಧ್ಯಗಳಿಂದಲೂ ಕೂಡ ಅನೇಕವಿಧವಾದ ಅಭಿಧಾನಗಳನ್ನು ಹೊಂದಿರುವರು. ಒಬ್ಬನೇ ಪುರುಷನು ಯಜ್ಞದ ಬೇರೆಬೇರೆ ಕರ್ಮಗಳನ್ನು ಮಾಡುವಾಗ **ಹೋತೃ, ಅಧ್ವರ್ಯು, ಬ್ರಹ್ಮ, ಉದ್ಗಾತೃ,** ಇತ್ಯಾದಿ ಬೇರೆಬೇರೆ ಹೆಸರುಗಳಿಂದ ಕರೆಯಲ್ಪಡುವಂತೆ ಒಂದೇ ದೇವತೆಯು ಬೇರೆಬೇರೆ ಕರ್ಮಗಳಿಗೆ ಅಪೇಕ್ಷನಾಗಿರುವಾಗ ಆಯಾ ಕರ್ಮಗಳಿಗನುಗುಣವಾದ ಹೆಸರುಗಳಿಂದ ನಿರ್ದಿಷ್ಟನಾಗಿರುತ್ತಾನೆ ಅಥವಾ ಈ ದೇವತೆಗಳ ಸ್ತುತಿಯಲ್ಲಿಯೂ ವ್ಯತ್ಯಾಸಗಳಿರುವುದರಿಂದ ತಾತ್ಪರ್ಯವಾದ ಭೇದವೇ ಇದ್ದರೂ ಇರಬಹುದು. ಆ ಭೇದಾನುಸಾರವಾದ ಅಭಿಧಾನಗಳೂ ಬೇರೆಬೇರೆಯಾಗಿರಬಹುದು ಎಂದು ಯಾಸ್ಕರ ವಾಕ್ಯಕ್ಕೆ ತಾತ್ಪರ್ಯ ಈ ಮೂರು ವಿಭಾಗಗಳನ್ನೇ ಅನುಸರಿಸಿ ಸೈಷಂಟುಕದ ಐದನೆಯ ಅಧ್ಯಾಯದಲ್ಲಿ ಯಾಸ್ಕರು ದೇವತಾಸ್ಥಾನವನ್ನು ಮೂರು ಭಾಗವಾಗಿ ವಿಂಗಡಿಸಿದ್ದಾರೆ. ನಿರುಕ್ತದಲ್ಲಿ ೭ನೇ ಅಧ್ಯಾಯದ ೧೪ನೇ ಖಂಡದಿಂದ ೯ನೇ ಅಧ್ಯಾಯದ ೪೩ನೇ ಖಂಡದವರೆಗೆ ಪೃಥಿವೀಸ್ಥರಾದ ದೇವತಾವಿಷಯವೂ, ೧೦ನೇ ಅಧ್ಯಾಯದ ೧ ನೇ ಖಂಡದಿಂದ ೧೧ ನೇ ಅಧ್ಯಾಯದ ೫೦ ನೇ ಖಂಡದ ವರೆಗೆ ಅಂತರಿಕ್ಷಸ್ಥರಾದ ದೇವತಾವಿಷಯವೂ, ೧೩ನೇ ಅಧ್ಯಾಯದ ೧ ನೇ ಖಂಡದಿಂದ ೪೬ ನೇ ಖಂಡದ ವರೆಗೆ ದ್ಯುಲೋಕದೇವತಾವಿಷಯವೂ ವಿವರಿಸಲ್ಪಟ್ಟಿದೆ

ಯಾಸ್ಕರ ವರ್ಗೀಕರಣಗಳನ್ನನುಸರಿಸಿ, ದೇವತಾಪ್ರಶಂಸಕಗಳಾದ ಸೂಕ್ತಗಳನ್ನೂ ಸಹ ಮೂರು ಭಾಗ ಮಾಡಬಹುದು. ಈ ಮಂತ್ರವಿಭಾಗವನ್ನೂ ಯಾಸ್ಕರು ಈ ರೀತಿ ಮಾಡಿದ್ದಾರೆ —(ದೇವತಾಸ್ಥಾನ ಮತ್ತು ಸಂಖ್ಯಾಪ್ರಭೇದಗಳಿಗೂ ಈ ವಿಭಜನೆಗೂ ಸಾಕ್ಷಾತ್ಸಂಬಂಧವಿಲ್ಲದಿದ್ದರೂ ಸಹ, ಈ ಅಂಶವನ್ನರಿಯುವುದು ಅತ್ಯವಶ್ಯವಾಗಿರುತ್ತದೆ.)

" ತಾಃ ತ್ರಿವಿಧಾ ಋಚಃ । ಪರೋಕ್ಷಕೃತಾಃ ಪ್ರತ್ಯಕ್ಷಕೃತಾಃ ಆಧ್ಯಾತ್ಮಿಕ್ಯಶ್ಚ । ತತ್ರ ಪರೋಕ್ಷ-ಕೃತಾಃ ಸರ್ವಾಭಿಃ ನಾಮವಿಭಕ್ತಿಭಿಃ ಯುಜ್ಯಂತೇ । ಪ್ರಥಮಪುರುಷೈಶ್ಚ ಅಖ್ಯಾತಸ್ಯ ॥"
(ನಿ. ೭-೧)

ದೇವತಾಪ್ರಶಂಸಕವಾದ ಋಕ್ಕುಗಳೂ ಮೂರು ವಿಧವಾಗಿವೆ :—(೧) **ಪರೋಕ್ಷಕೃತ,** (೨) **ಪ್ರತ್ಯಕ್ಷಕೃತ** ಮತ್ತು (೩) **ಆಧ್ಯಾತ್ಮಿಕೀ** ಎಂಬುದೇ ಈ ಮೂರು ಪ್ರಭೇದಗಳು.

೧. **" ಇಂದ್ರೋ ದಿವ ಇಂದ್ರ ಈಶೇ "** (ಋ. ಸಂ ೧೦-೮೯-೧೦) ' ಇಂದ್ರನು ದ್ಯಾವಾಪೃಥಿವಿಗಳಿಗೆಲ್ಲಾ ಪ್ರಭುವಾಗಿದ್ದಾನೆ' ಇತ್ಯಾದಿಯಾಗಿ ಪ್ರಥಮಪುರುಷದಲ್ಲಿ ದೇವತೆಯನ್ನುದ್ದೇಶಿಸಿ ಪ್ರಶಂಸಿಸುವ ವಾಕ್ಯಗಳು ಮೊದಲನೆಯ ಗುಂಪಿಗೆ ಸೇರಿದವು

೨. **" ವಿ ನ ಇಂದ್ರ ಮೃಧೋ ಜಹಿ "** (ಋ ಸಂ ೧೦-೧೫೨-೪) ' ಎಲೈ ಇಂದ್ರನೇ, ನಮ್ಮ ಶತ್ರುಗಳನ್ನು ಜಯಿಸು' ಇತ್ಯಾದಿಯಾಗಿ ಮಧ್ಯಮಪುರುಷದಲ್ಲಿ ದೇವತೆಗಳನ್ನುದ್ದೇಶಿಸಿ ಪ್ರಾರ್ಥಿಸುವುದು ಎರಡನೆಯ ಗುಂಪಿಗೆ ಸೇರಿದುವು

" ಅಹಂ ಭುವಂ ವಸುನಃ " (ಋ ಸ ೧೦-೪೮-೧) ' ಸಕಲ ಧನಕ್ಕೂ ನಾನೇ ಸ್ವಾಮಿಯು ' ಇತ್ಯಾದಿಯಾಗಿ ಉತ್ತಮಪುರುಷದಲ್ಲಿ ದೇವತಾಪ್ರಶಂಸಕವಾಕ್ಯಗಳು ಮೂರನೆಯ ಗುಂಪಿನವು. ಇವುಗಳಲ್ಲಿ ಮೊದಲನೆಯ ಎರಡು ಗುಂಪುಗಳಿಗೆ ಸೇರಿದ ಸೂಕ್ತಗಳೇ ಅಧಿಕವಾಗಿವೆ

ದೇವತೆಗಳ ಸಂಖ್ಯೆ.

ಋಕ್ಸಂಹಿತೆಯ ಅನೇಕ ವಾಕ್ಯಗಳಲ್ಲಿ ದೇವತೆಗಳ ಸಂಖ್ಯೆಯು ೩೩ ಎಂಬುದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಉದಾಹರಣೆಗೆ—

" ಎಲೈ ಅಶ್ವಿನೀದೇವತೆಗಳೇ, ಅಮೃತಪಾನವನ್ನು ಮಾಡಲು ಮೂವತ್ತುಮೂರು ದೇವತೆಗಳೊಡನೆಯೂ ಕೂಡಿಕೊಂಡು ಬನ್ನಿರಿ." (ಋ. ಸಂ ೧-೩೧-೧೪)

" ರೋಹಿತಾಶ್ವವುಳ್ಳವನೂ, ಸ್ತುತಿಪ್ರಿಯನೂ ಆದ ಎಲೈ ಅಗ್ನಿಯೇ, ಮೂವತ್ತುಮೂರು ದೇವತೆಗಳನ್ನೂ ಇಲ್ಲಿ ಕರೆದುಕೊಂಡು ಬಾ " (ಋ. ಸಂ ೧-೪೫-೨)

" ಎಲೈ ದೇವತೆಗಳೇ, ನೀವು ದ್ಯುಲೋಕದಲ್ಲಿ ಹನ್ನೊಂದು ಸಂಖ್ಯೆಯುಳ್ಳವರಾಗಿಯೂ, ಅಂತರಿಕ್ಷದಲ್ಲಿ ಹನ್ನೊಂದು ಸಂಖ್ಯೆಯುಳ್ಳವರಾಗಿಯೂ ಪೃಥ್ವಿಯಲ್ಲಿ ಹನ್ನೊಂದು ಸಂಖ್ಯೆಯುಳ್ಳವರಾಗಿಯೂ ಇದ್ದೀರಿ." (ಋ ಸಂ ೧-೧೩೯-೧೧)

" ಎಲೈ ಅಗ್ನಿಯೇ, ಪದ್ಧತಿಯಂತೆ, ಪತ್ನಿಯರೊಡಗೂಡಿದ ಮೂವತ್ತಮೂರು ದೇವತೆಗಳನ್ನೂ ಕರೆದುಕೊಂಡು ಬಂದು ಅವರಿಗೆಲ್ಲಾ ತೃಪ್ತಿಯನ್ನುಂಟುಮಾಡು " (ಋ ಸಂ ೩-೬-೯)

"ನಮ್ಮ ಯಜ್ಞವೇದಿಕೆಯಲ್ಲಿ ದರ್ಭಾಸನದ ಮೇಲೆ ಕುಳಿತಿರುವ ಮೂವತ್ತಮೂರು ದೇವತೆಗಳೂ ಸಹನಮ್ಮನ್ನು ಪುರಸ್ಕರಿಸಿ ನನಗೆ ದ್ವಿಗುಣವಾಗಿ ಧನಗಳನ್ನೂ ಪುತ್ರಾದಿಸಂಪತ್ತುಗಳನ್ನೂ ಕೊಡಲಿ." (ಋ ಸಂ. ೪-೩೪-೧)

''ಮನುವಿನಿಂದ ಪೂಜಿತರಾದ ಎಲೈ ಮೂವತ್ತ್ತುಮೂರು ದೇವತೆಗಳೇ, ನನ್ನಿಂದಲೂ ಸ್ತುತರಾಗಿ ನಮ್ಮ ಶತ್ರುಗಳನ್ನು ನಾಶಮಾಡಿರಿ.'' (ಋ. ಸಂ. ೮-೩೦-೨)

''ಎಲೈ ಅಶ್ವಿನೀದೇವತೆಗಳೇ, ಮೂವತ್ತ್ತಮೂರು ದೇವತೆಗಳೊಡನೆಯೂ, ಅಬ್ದೇವತೆಯೊಡನೆಯೂ, ಮರುತ್ತುಗಳೊಡನೆಯೂ, ಭೃಗುಗಳೊಡನೆಯೂ, ಉಷಸ್ಸು ಮತ್ತು ಸೂರ್ಯನೊಡನೆಯೂ ಕೂಡಿಕೊಂಡು ಬಂದು ನಮ್ಮಿಂದ ಅರ್ಪಿತವಾದ ಸೋಮವನ್ನು ಪಾನಮಾಡಿ'' (ಋ ಸಂ. ೮-೩೫-೩)

''ಎಲೈ ಸೋಮನೇ, ಈ ಎಲ್ಲಾ ಮೂವತ್ತ್ತಮೂರು ದೇವತೆಗಳೂ ಸಹ ನಿನ್ನ ಅನುಗ್ರಹಕ್ಕೆ ಕಾದಿದ್ದಾರೆ.'' (ಋ ಸಂ ೯-೯೭-೪)

ಇತ್ಯಾದಿಯಾಗಿ ಅನೇಕ ವಾಕ್ಯಗಳು ಈ ಮೂವತ್ತ್ತಮೂರು ಎಂಬ ದೇವತಾಸಂಖ್ಯೆಯನ್ನು ನಿಸ್ಸಂದಿಗ್ಧವಾಗಿ ತಿಳಿಸುತ್ತವೆ ಈ ವಿಭಾಗವು ಋಸ್ಸಂಹಿತಾವಾಕ್ಯಗಳಲ್ಲೇ ಅಲ್ಲದೇ ಇತರ ಶ್ರುತಿವಾಕ್ಯಗಳಲ್ಲೂ ಏರ್ಪಿಸ್ಟವಾಗಿದೆ ಉದಾಹರಣೆಗೆ.—

''ಯೇ ದೇವಾ ದಿವಿಷದೋ ಅಂತರಿಕ್ಷಸದಶ್ಚ ಯೇ ಚ ಇಮೇ ಭೂಮ್ಯಾಂ ಅಧಿ'' ಎಂಬ ಈ ಅಥರ್ವನೇದದ ವಾಕ್ಯದಲ್ಲಿ ಮೂವತ್ತ್ತುಮೂರು ಎಂಬ ಸಂಖ್ಯಾನಿರ್ದೇಶವಿಲ್ಲದಿದ್ದರೂ, ಪೃಥಿವೀಸ್ಥರು, ಅಂತರಿಕ್ಷಸ್ಥರು ಮತ್ತು ದ್ಯುಲೋಕಸ್ಥರು ಎಂಬ ವಿಭಾಗವಿರುತ್ತದೆ ಸಾಮನೇದವಾಕ್ಯದಲ್ಲಿ ಸ್ವಲ್ಪ ವ್ಯತ್ಯಸ್ತವಾದ ವಿವರಣೆಯಿದೆ. (ಅ. ನೇ ೧೮-೯-೧೨)

''ಯೇ ದೇವಾ ದಿವಿ ಸ್ಥ ಯೇ ಪೃಥಿವ್ಯಾಂ ಯೇ ಅಂತರಿಕ್ಷೇ ಓಷಧೀಷು ಪಶುಷು ಅಪ್ಸು ಅಂತಃ'' ಎಂಬ ಈ ವಾಕ್ಯದಲ್ಲಿ ದ್ಯುಲೋಕಸ್ಥರೂ, ಪೃಥಿವೀಸ್ಥರೂ, ಅಂತರಿಕ್ಷಸ್ಥರೂ, ಓಷಧಿಗಳಲ್ಲಿ ಅಂತರ್ಗತರಾಗಿರುವವರೂ, ಪಶುಗಳಲ್ಲಿ ಅಂತರ್ಯಾಮಿಗಳಾಗಿರುವವರೂ, ಉಪ್ಪುತಿರ್ಗಳಾಗಿರುವವರೂ ಆದ ದೇವತೆಗಳು ಎಂಬ ವಿಭಾಗವಿರುತ್ತದೆ (ಸಾ ವೇ ೧-೩೦-೩)

ಈ ಮುವತ್ತ್ತುಮೂರು ದೇವತೆಗಳು ಯಾರೆಂಬುದನ್ನು ಶತಪಥಬ್ರಾಹ್ಮಣದ ವಾಕ್ಯಗಳು ಈ ರೀತಿ ತಿಳಿಸುತ್ತವೆ

''ಅಷ್ಟೌ ವಸವಃ । ಏಕಾದಶ ರುದ್ರಾ ದ್ವಾದಶಾದಿತ್ಯಾ ಇಮೇ ಏವ ದ್ಯಾವಾಪೃಥಿವೀ ತ್ರಯ-ಸ್ತ್ರಿಗ್ಂಶ್ಯೌ ತ್ರಯಸ್ತ್ರಿಗ್ಂಶದ್ವೈ ದೇವಾಃ । ಪ್ರಜಾಪತಿಶ್ಚತುಸ್ತ್ರಿಗ್ಂಶಃ ॥

(ಶ ಬ್ರಾ. ೪-೫-೭-೨)

''ವಸುಗಳ ಸಂಖ್ಯೆಯು ೮, ರುದ್ರರು ೧೧, ಆದಿತ್ಯರು ೧೨ ಅಲ್ಲದೇ ದ್ಯಾವಾಪೃಥಿವಿಗಳು ೨, ಎಲ್ಲವೂ ಸೇರಿದರೆ ೩೩ ದೇವತೆಗಳು. ಇವರೊಂದಿಗೆ ಪ್ರಜಾಪತಿಯು ಸೇರಿಕೊಂಡರೆ ಮುವ್ವತ್ತ್ತನಾಲ್ಕನೆಯವನಾಗುತ್ತಾನೆ, ಎಂದು ಸಂಖ್ಯಾನಿರ್ದೇಶವಿದೆ. ಇದಲ್ಲದೇ ಈ ಸಂಖ್ಯೆಯ ವಿಷಯದಲ್ಲಿ ಒಂದು ಚರ್ಚೆಯೂ ಸಹ ನಡೆದಿರುತ್ತೆ ಯಾಜ್ಞವಲ್ಕ್ಯಸಿಗೂ, ಶಾಕಲ್ಯನಿಗೂ ನಡೆದ ಸಂಭಾಷಣೆಯಲ್ಲಿ ಈ ವಿಷಯವು ಈ ರೀತಿ ವಿವರಿಸಲ್ಪಟ್ಟಿದೆ.

''ಸ ಹೋವಾ ಚ । ಕತಿ ದೇವಾ ಯಾಜ್ಞವಲ್ಕ್ಯೇತಿ ತ್ರಯಶ್ಚ ತ್ರೀ ಚ ಶತಾ ತ್ರಯಶ್ಚ ತ್ರೀ ಚ ಸಹಸ್ರೇತ್ಯೋಮಿತಿ ಹೋವಾಚ । ಕತ್ಯೇವ ದೇವಾ ಯಾಜ್ಞವಲ್ಕ್ಯೇತಿ ತ್ರಯಸ್ತ್ರಿಗ್ಂಶ-ದಿತ್ಯೋಮಿತಿ ಹೋವಾಚ ಕತ್ಯೇವ ದೇವಾ ಯಾಜ್ಞವಲ್ಕ್ಯೇತಿತ್ರಯ ಇತ್ಯೋಮಿತಿ ಹೋವಾಚ

ಕತ್ಯೇವ ದೇವಾ ಯಾಜ್ಞವಲ್ಕ್ಯೇತಿ ದ್ವಾವಿತ್ಯೋಮಿತಿ ಹೋವಾಚ ಕತ್ಯೇವ ದೇವಾ ಯಾಜ್ಞವಲ್ಕ್ಯೇತ್ಯಧ್ಯರ್ಧ ಇತ್ಯೋಮಿತಿ ಹೋವಾಚ ಕತ್ಯೇವ ದೇವಾ ಯಾಜ್ಞವಲ್ಕ್ಯೇತ್ಯೇಕ ಇತ್ಯೋಮಿತಿ ಹೋವಾಚ ಕತಮೇ ತೇ ತ್ರಯಶ್ಚ ತ್ರೀ ಚ ಶತಾ ತ್ರಯಶ್ಚ ತ್ರೀ ಚ ಸಹಸ್ರೇತಿ ''

(ಶ. ಬ್ರಾ. ೧೧-೬-೩-೪)

ಶಾಕಲ್ಯ.—ಎಲೈ ಯಾಜ್ಞವಲ್ಕ್ಯನೇ, ದೇವತಾ ಸಂಖ್ಯೆಗಳೆಷ್ಟು ?

ಯಾಜ್ಞವಲ್ಕ್ಯ :—ಮುನ್ನೂರುಮೂರು, ಮೂರುಸಾವಿರದ ಮೂರು.

ಶಾಕಲ್ಯ.—ಸತ್ಯವಾಗಿಯೂ ದೇವತೆಗಳ ಸಂಖ್ಯೆಯೆಷ್ಟು ಹೇಳು.

ಯಾಜ್ಞವಲ್ಕ್ಯ.—ಮೂವತ್ತುಮೂರು.

ಶಾಕಲ್ಯ —ಇನ್ನೂ ಖಂಡಿತವಾಗಿ ಹೇಳು.

ಯಾ.—ಮೂರು.

ಶಾ :—ಒಪ್ಪಿಕೊಂಡೆ ಇನ್ನೂ ಖಂಡಿತವಾಗಿ ಹೇಳು.

ಯಾ.—ಎರಡು

ಶಾ.—ಅದೂ ಆಗಬಹುದು ಇನ್ನೂ ನಿಷ್ಕೃಷ್ಟವಾಗಿ ಹೇಳು.

ಯಾ.—ಒಂದೂವರೆ.

ಶಾ :—ಅದೂ ಸತ್ಯವೇ ಸರಿ. ಇನ್ನೂ ಖಚಿತವಾಗಿ ಹೇಳು.

ಯಾ.—ಒಂದು. ಖಂಡಿತವಾಗಿಯೂ ಒಂದೇ

ಶಾ.—ಹಾಗಾದರೆ, ಮುನ್ನೂರುಮೂರು, ಮೂರುಸಾವಿರದ ಮೂರು ಎಂದೆಯಲ್ಲಾ ಅದಕ್ಕೆ ಅರ್ಥವೇನು ಹೇಳು ಎಂದು ಪ್ರಶ್ನಿಸಲು ಪುನಃ ಯಾಜ್ಞವಲ್ಕ್ಯನು ಈ ರೀತಿ ವಿವರಿಸಿದ್ದಾನೆ.

'' ಸ ಹೋವಾಚ । ಮಹಿಮಾನ ಏವೈಷಾಮೇತೇ ತ್ರಯಸ್ತ್ರಿಗ್ಂಶತ್ತ್ವೇವ ದೇವಾ ಇತಿ ಕತಮೇ ತೇ ತ್ರಯಸ್ತ್ರಿಗ್ಂಶದಿತ್ಯಷ್ಟೌ ವಸವ ಏಕಾದಶ ರುದ್ರಾ ದ್ವಾದಶಾದಿತ್ಯಾಸ್ತ ಏಕಸ್ತ್ರಿಗ್ಂಶದಿಂದ್ರಶ್ಚೈವ ಪ್ರಜಾಪತಿಶ್ಚ ತ್ರಯಸ್ತ್ರಿಗ್ಂಶಾವಿತಿ.'' (ಶ. ಬ್ರಾ. ೧೧-೬-೩-೫)

ಯಾಜ್ಞವಲ್ಕ್ಯ —ದೇವತೆಗಳ ಸಂಖ್ಯೆಯು ಕೇವಲ ಮೂವತ್ತುಮೂರು ಆದರೆ ಉಳಿದ ಸಂಖ್ಯೆಗಳು ಅವರ ಮಹಿಮಾವಿಶೇಷಗಳನ್ನು ತಿಳಿಸತಕ್ಕ ಅಭಿಧಾನಗಳು.

ಶಾಕಲ್ಯ--ಆ ಮೂವತ್ತುಮೂರು ದೇವತೆಗಳು ಯಾರು ಯಾರು ?

ಯಾಜ್ಞವಲ್ಕ್ಯ—ವಸುಗಳು ೮, ರುದ್ರರು ೧೧, ಆದಿತ್ಯರು ೧೨, ಈ ಒಟ್ಟು ೩೧ ಇಂದ್ರನೂ ಪ್ರಜಾಪತಿಯೂ ಸೇರಿ ಒಟ್ಟು ೩೩.

[ಮೇಲೆ ಉದಹರಿಸಿದ ಶ. ಬ್ರಾ. ೪-೫-೬-೨ ನೇ ವಾಕ್ಯದ ವಿವರಣೆಗೂ ಈ ವಾಕ್ಯದ ವಿವರಣೆಗೂ ಇರತಕ್ಕ ವ್ಯತ್ಯಾಸವನ್ನು ಗಮನಿಸಬೇಕು]

"ತ್ರಯಸ್ತ್ರಿಂಶಚ್ಚ ವೈ ದೇವಾಃ" (ಮ. ಭಾ. ಅ. ಪ. ೧೬೧) ಎಂಬ ಮಹಾಭಾರತದ ವಾಕ್ಯದಲ್ಲೂ ಈ ಸಂಖ್ಯಾನಿರ್ದೇಶನವಿದೆ ರಾಮಾಯಣದಲ್ಲೂ ಇವೇ ಸಂಖ್ಯೆಯನ್ನು ನಿರ್ದೇಶಿಸುತ್ತಾ,

"ಆದಿತ್ಯಾಂ ಜಜ್ಞಿರೇ ದೇವಾಸ್ತ್ರಯಸ್ತ್ರಿಂಶದರಿಂದಮ ।
ಆದಿತ್ಯಾ ವಸವೋ ರುದ್ರಾ ಅಶ್ವಿನೌ ಚ ಪರಂತಪ ॥"

(ರಾಮಾಯಣ ಅ ಕಾ ೧೪-೧೪)

ದ್ವಾದಶಾದಿತ್ಯರೂ, ಅಷ್ಟವಸುಗಳೂ, ಏಕಾದಶರುದ್ರರೂ, ಅಶ್ವಿನೀದೇವತೆಗಳೂ ಆದಿತಿಯಲ್ಲಿ ಜನಿಸಿದರು ಎಂದಿದೆ. ಆದರೆ ಅಶ್ವಿನೀದೇವತೆಗಳು ಇಲ್ಲಿ ಸೇರಿದ್ದಾರ ಈ ದೇವತಾಸಂಖ್ಯೆಯ ವಿಷಯವನ್ನು ವಿಮರ್ಶಿಸುವಾಗ ಐತರೇಯ ಬ್ರಾಹ್ಮಣದ ವಾಕ್ಯಗಳು ಈರೀತಿ ತಿಳಿಸುತ್ತವೆ.

ತ್ರಯಸ್ತ್ರಿಂಶದ್ವೈ ದೇವಾಃ ಸೋಮಪಾಸ್ತ್ರಯಸ್ತ್ರಿಂಶದಸೋಮಪಾ ಅಷ್ಟೌ ವಸವ ಏಕಾದಶ ರುದ್ರಾ ದ್ವಾದಶಾದಿತ್ಯಾಃ ಪ್ರಜಾಪತಿಶ್ಚ ವಷಟ್ಕಾರಶ್ಚೈತೇ ದೇವಾಃ ಸೋಮಪಾ ಏಕಾದಶ ಸ್ಯಯೋಜಾ ಏಕಾದಶಾನುಯೋಜಾ ಏಕಾದಃೂಪಯೋಜಾ ಏತೇ೨ಸೋಮಪಾಃ ಪಶು-ಭಾಜನಾಃ ಸೋಮೇನ ಸೋಮಪಾನ್ ಪ್ರೀಣಾತಿ ಪಶುನಾ೨ಸೋಮಪಾನ್"

(ಐ ಬ್ರಾ. ೨-೧೪)

ಸೋಮಪಾನವನ್ನು ಮಾಡತಕ್ಕ ದೇವತೆಗಳು ೩೩. ಸೋಮಪಾನವನ್ನು ಮಾಡದಿರುವ ದೇವತೆಗಳ ಸಂಖ್ಯೆ ೩೩ ಅಷ್ಟವಸುಗಳೂ, ಏಕಾದಶ ರುದ್ರರೂ ಮತ್ತು ದ್ವಾದಶಾದಿತ್ಯರೂ ಪ್ರಜಾಪತಿಯೂ ಮತ್ತು ವಷಟ್ಕಾರನೂ ಸಹ ಸೋಮಪರು ಹನ್ನೊಂದು ಪ್ರಯಾಜದೇವತೆಗಳೂ, ಹನ್ನೊಂದು ಅನುಯಾಜರೂ, ಹನ್ನೊಂದು ಉಪಯಾಜರೂ ಸೋಮಪಾನವನ್ನು ಪಾಡತಕ್ಕನರಲ್ಲ ಅವರು ಪಶುಗಳ ಆಹುತಿಯನ್ನು ಸ್ವೀಕರಿಸತಕ್ಕವರು ಯಜ್ಞಕರ್ತನು ಸೋಮಪರಾದ ದೇವತಗಳನ್ನು ಸೋಮದ ಅರ್ಪಣೆಯಿಂದಲೂ, ಅಸೋಮಪರನ್ನು ಪಶುಗಳ ಆಹುತಿಯಿಂದಲೂ ತೃಪ್ತಿಪಡಿಸುತ್ತಾನೆ

ಈ ವಿಧವಾಗಿ ಒಂದು ರೀತ್ಯಾ ಸಾಮಂಜಸ್ಯವಿದ್ದರೂ ಇನ್ನೊಂದು ರೀತ್ಯಾ ಈ ಸಂಖ್ಯೆಗಳ ವಿಷಯದಲ್ಲಿ ಸಾಮಂಜಸ್ಯವಿರುವುದಿಲ್ಲ ಪಶುರುದ್ರಾದಿತ್ಯರ ವಿಷಯದಲ್ಲಿ ವ್ಯಾಯಃ ಅನೇಕ ಮತಗಳು ಒಂದೇ ಆಗಿರುತ್ತವೆ ಮೂವತ್ತೆರಡು ಮೂವತ್ತಮೂರನೆಯ ದೇವತೆಗಳ ವಿಷಯದಲ್ಲಿ ಒಂದಕ್ಕೊಂದಕ್ಕೆ ವ್ಯತ್ಯಾಸವಿರುತ್ತದೆ ಅಲ್ಲದೇ ಒಂದರಡೆಡೆಗಳಲ್ಲಿ ವಸುಗಳಾತೆಂಬುದರ ವಿಷಯದಲ್ಲೂ ಸಂಶಯಕ್ಕೆ ಅವಕಾಶವಿರುತ್ತದೆ (ಶ ಬ್ರಾ. ೧೧-೬-೨-೬.)

ಆದುದರಿಂದ ಈ ಮೂವತ್ತುನೂರು ಎಂಬ ಸಂಖ್ಯೆಯು ನಿಷ್ಕೃಷ್ಟವಾದ ಅಭಿಪ್ರಾಯವನ್ನು ಎಲ್ಲಾ ಕಡೆಯೂ ಸೂಚಿಸುವುದಿಲ್ಲ ಕೆಲವೆಡೆಗಳಲ್ಲಿ, **ಅಗ್ನಿ, ಅಶ್ವಿನೀದೇವತೆಗಳು** ಮತ್ತು **ಮರುತ್ತುಗಳು** ಈ ಸಂಖ್ಯೆಯಲ್ಲಿ ಸೇರಿಲ್ಲ ವೆಂದು ಪ್ರತ್ಯೇಕನಿರ್ದೇಶದಿಂದ ತಿಳಿದುಬರುತ್ತದೆ ಮೇಲೆ ಉದಾಹರಿಸಿರುವ ಶತಪಥಬ್ರಾಹ್ಮಣದ (೧೧-೬-೩-೬) ವಾಕ್ಯದಲ್ಲಿ **ಇಂದ್ರನನ್ನು** ದ್ವಾದಶಾದಿತ್ಯರಲ್ಲಿ ಸೇರಿಸಿಲ್ಲ ಆದಿತ್ಯರ ಜೊತೆಯಲ್ಲಿ ಇಂದ್ರನು ಮೂವತ್ತೆರಡನೆಯ ದೇವತೆಯೆಂದು ತಿಳಿಸಿದೆ.

ಋಕ್ಸಂಹಿತೆಯ ಕೆಲವು ವಾಕ್ಯಗಳಲ್ಲಿ ಎಂದರೆ, ಋ. ಸಂ. ೩-೯-೯ ಮತ್ತು ೧೦-೫೨-೬ನೇ ಮಂತ್ರಗಳಲ್ಲಿ **" ತ್ರೀಣಿ ಶತಾ ತ್ರೀ ಸಹಸ್ರಾಣಿ "** ಮುನ್ನೂರು, ಮೂರುಸಾವಿರ, ಮೂವತ್ತೊಂಭತ್ತು ದೇವತೆಗಳು ಅಗ್ನಿಯನ್ನು ಪೂಜಿಸಿದರೆಂದಿದೆ.

ಋಕ್ಸಂಹಿತೆಯ ಇನ್ನೊಂದು ಮಂತ್ರದಲ್ಲಿ ದೇವತೆಗಳ ಗುಂಪನ್ನು ಹಿರಿಯರು ಮತ್ತು ಕಿರಿಯರು ಎಂಬ ವಿಭಾಗವನ್ನು ಮಾಡಿದೆ **" ನಮೋ ಮಹದ್ಭ್ಯೋ ನಮೋ ಅರ್ಭಕೇಭ್ಯಃ....** " (ಋ ಸಂ. ೧-೨೭-೧೩) ಎಂಬಲ್ಲಿ ಮಹತ್ಸ್ವರೂಪವುಳ್ಳ ದೇವತೆಗಳು ಅರ್ಭಕರಾದ ಕಿರಿಯ ದೇವತೆಗಳಿಗೂ ನಮಸ್ಕಾರವು ಎಂದು ವಿಭಾಗಿಸಿದೆ ಆದರೆ ಇದಕ್ಕೆ ವಿರುದ್ಧವಾಗಿ **ನಹಿ ವೋ ಅಸ್ತ್ಯರ್ಭಕೋ ದೇವಾಸೋ ನ ಕುಮಾರಕಃ । ವಿಶ್ವೇ ಸತೋಮಹಾಂತ ಇತ್** ॥ (ಋ ಸಂ ೮-೩೦-೧) ಎಂಬಲ್ಲಿ ಎಲೈ ದೇವತೆಗಳೇ, ನಿಮ್ಮಲ್ಲಿ ಹಿರಿಯರು, ಕಿರಿಯರು ಎಂಬ ವ್ಯತ್ಯಾಸವಿಲ್ಲ. ಎಲ್ಲರೂ ಮಹತ್ಸ್ವರೂಪವುಳ್ಳವರೇ ಆಗಿದ್ದೀರಿ ಎಂದು ಪ್ರಶಂಸಿಸಿದೆ

ದೇವತೆಗಳ ಮೂಲ ಮತ್ತು ಅಮರ್ತ್ಯತ್ವ

" ವಿಶ್ವೇ ಅಮೃತಾ ಅಮೂರಾಃ " ಇತ್ಯಾದಿ ವಾಕ್ಯಗಳಿಂದ ಋಕ್ಸಂಹಿತೆಯಲ್ಲಿ ದೇವತೆಗಳನ್ನೆಲ್ಲಾ ಮರಣರಹಿತರೆಂದು ನಿರ್ದೇಶಿಸಿದೆ. (ಋ. ಸಂ ೧-೩೪-೧, ೧-೭೨-೨, ೧-೭೨-೧೦, ೧-೧೪೯-೩, ೩-೪-೧೧, ೩-೨೧-೧, ೪-೪೩-೧, ೭-೧೧-೧, ೭-೧೭-೪, ೧೦-೧೩-೧, ೧೦-೬೫-೧೫, ೧೧-೬೯-೯, ೧೦-೭೭-೫) ಆದರೆ, ಉತ್ಪತ್ತಿರಹಿತರೆಂದಾಗಲಿ, ಸ್ವಯಂ ಅವಿರ್ಭೂತರೆಂದಾಗಲಿ ನಿರ್ದೇಶಿಸಲ್ಪಟ್ಟಿಲ್ಲ ದೇವತೆಗಳ ಉತ್ಪತ್ತಿ ವಿಷಯವನ್ನು ತಿಳಿಸುವಾಗೆಲ್ಲಾ ಕೇವಲ ಭೌತಿಕವಾದ ಅವಿರ್ಭಾವಗಳೆಂದರ್ಥಮಾಡಬೇಕೆಂದು Max Muller ಎಂಬ ಪಂಡಿತನು ಹೇಳಿದ್ದಾನೆ ಅಹಸ್ಸಿನ ಅವಿರ್ಭಾವ, ಸೂರ್ಯನ ಉದಯ, ಸಂವತ್ಸರದ ಆದಿ ಇತ್ಯಾದಿಗಳು ಉದಾಹರಣೆಗಳು (ಮುಂದಿನ ಭಾಗದಲ್ಲಿ ದೇವತೆಗಳ ಉತ್ಪತ್ತಿ ವಿಷಯದ ವಿವರಣೆಯನ್ನು ತಿಳಿಸಿದೆ) ಋ. ಸಂ ೧-೧೧೩-೧೯ನೇ ಮಂತ್ರದಲ್ಲಿ ಉಷಸ್ಸು **(ದೇವಾನಾಂ ಮಾತಾ)** ದೇವತೆಗಳ ಮಾತೆಯೆಂದು ವರ್ಣಿತಳಾಗಿದ್ದಾಳೆ ಋ ಸಂ. ೨-೨೬-೩ರಲ್ಲಿ ಬ್ರಹ್ಮಣಸ್ಪತಿಯನ್ನು ದೇವತೆಗಳ ಪಿತೃವೆಂದು ಕರೆದಿದೆ ೯-೯೭-೨ರಲ್ಲಿ ಸೋಮನನ್ನು ನಿರ್ಮಾಣಕೌಶಲ್ಯವನ್ನು ಹೊಂದಿರುವವನೂ ದೇವತೆಗಳ ಪಿತೃವೆಂದೂ ಕರೆದಿದೆ (೯-೪೨-೪, ೯-೪೬-೧೦, ೯-೧೦೯-೪ ಇತ್ಯಾದಿ ಮಂತ್ರಗಳಲ್ಲೂ ಇದೇ ವಿಷಯವನ್ನು ತಿಳಿಸಿದೆ) ೯-೯೬-೫ರಲ್ಲು ಇದೇ ಸೋಮನು ದ್ಯಾವಾಪೃಥಿವಿಗಳಿಗೂ, ಅಗ್ನಿ, ಸೂರ್ಯ, ಇಂದ್ರ ಮತ್ತು ವಿಷ್ಣು ಈ ದೇವತೆಗಳಿಗೂ ಜನಕನೆಂದು ಸ್ತುತಿಸಿದೆ ದೇವತೆಗಳು ಅದಿತಿಯನ್ನು ಅನುಸರಿಸಿ ಉತ್ಪನ್ನರಾದರೆಂದು ೧೦-೭೨-೫ನೇ ಮಂತ್ರದ ಪ್ರತಿಪಾದನೆಯಾಗಿದೆ ಕೆಲವು ಓಷಧಿಗಳು ದೇವತೆಗಳಿಗಿಂತಲೂ ಮೂರು ಯುಗಗಳ ಪೂರ್ವಭಾವಿಯಾಗಿ ಉತ್ಪನ್ನವಾದವು ಎಂದು ೧೦-೯೭-೨ನೇ ಋಕ್ಕಿನಲ್ಲಿ ತಿಳಿಸಿದೆ ವಿಶ್ವದ ಸೃಷ್ಟಿಯಾದನಂತರವೇ ದೇವತೆಗಳು ಉತ್ಪನ್ನರಾದುದರಿಂದ ವಿಶ್ವದ ಮೂಲವನ್ನೂ ಸೃಷ್ಟಿಕ್ರಮವನ್ನೂ ವಿವರಿಸಲು ಅವರಿಗೆ ಸಾಧ್ಯವಿಲ್ಲವಾಯಿತು ಎಂದು ೧೦-೧೨೯-೬ನೇ ಮಂತ್ರವು ಪ್ರಕಟಪಡಿಸುತ್ತದೆ. ಇದಲ್ಲದೇ, ದೇವತೆಗಳ ಉತ್ಪತ್ತಿಕ್ರಮವನ್ನು ಕೆಳಗೆ ಉದಾಹೃತವಾಗಿರುವ ಮಂತ್ರಗಳು ಈ ರೀತಿ ತಿಳಿಸಿವೆ

" ಸಕಲ ದೇವತೆಗಳೂ ಉಚ್ಛಿಷ್ಟದಿಂದ ಉತ್ಪನ್ನರಾದರು " (ಅ. ವೇ. ೧೧-೭ ೨೩)

" ಇದೇ ಸಮುದ್ರದಿಂದಲೇ ಸಕಲ ದೇವತೆಗಳೂ, ಸಕಲ ಪ್ರಾಣಿಗಳೂ ಉತ್ಪನ್ನವಾದವು "

" ಏತಸ್ಮಾದ್ವೈ ಸಮುದ್ರಾತ್ ಸರ್ವೇ ದೇವಾಃ ಸರ್ವಾಣಿ ಭೂತಾನಿ ಸಮುದ್ಪ್ರವಂತಿ "
(ಶ ಬ್ರಾ. ೧೪-೨-೨-೨)

''ವರುಣ, ಮಿತ್ರ, ಅರ್ಯಮ, ಭಗ, ದಕ್ಷ ಮತ್ತು ಅಂಶ ಎಂಬ ಈ ದೇವತೆಗಳು ಅದಿತಿಪುತ್ರರು. ಆದುದರಿಂದಲೇ ಆದಿತ್ಯರು'' (೨-೨೭-೧)

ಇಂದ್ರನ ಉತ್ಪತ್ತಿಯೂ ಮತ್ತು ಅವನ ಮಾತಾಪಿತೃಗಳ ನಿರ್ದೇಶವೂ ಅನೇಕ ಕಡೆಗಳಲ್ಲಿ ಸೂಚಿತವಾಗಿವೆ. (೪-೧೭-೪, ೧-೧೭-೧೩, ೪-೧೪-೫, ೪-೧೪-೧೩, ೮-೪೫-೪, ೮-೬೬-೧, ೧೦-೧೩೪-೧) **ನಿಷ್ಟ್ವಿಗ್ರಿಯೇ** ಇಂದ್ರನ ತಾಯಿ (೧೦-೧೦೧-೧೨) ೬-೫೯-೨ರಲ್ಲಿ ಇಂದ್ರಾಗ್ನಿಗಳ ಜನಕನು ಒಬ್ಬನೇ ಎಂದೂ, ಇವರಿಬ್ಬರೂ ಅವಳಿಜನವಳಿ ಮಕ್ಕಳೆಂದೂ ಸ್ತುತಿಸಿದೆ **ಸಮಾನೋ ವಾಂ ಜನಿತಾ ಭ್ರಾತರಾ ಯುವಂ ಯಮಾವಿಹೇಹ ಮಾತರಾ ॥**

''ಯೇ ವೋ ದೇವಾಃ ಪಿತರೋ ಯೇ ಚ ಪುತ್ರಾಃ '' (ಅ. ವೇ. ೧೮-೩೦-೨)

ಎಲೈ ದೇವತೆಗಳೇ, ನಿಮ್ಮಲ್ಲಿ ಯಾರು ಪಿತೃಗಳೋ ಮತ್ತು ಯಾರು ಪುತ್ರರೋ ಎಂಬ ಅಥರ್ವವೇದದ ವಾಕ್ಯದಲ್ಲಿ ಜನ್ಯಜನಕಭಾಗವು ನಿರೂಪಿತವಾಗಿದೆ.

ಅಮರ್ತ್ಯತ್ವ.

ಋ. ಸಂ. ೪-೫೪-೨ ನೇ ಮಂತ್ರದಲ್ಲಿ ಸವಿತೃವು ದೇವತೆಗಳಿಗೆ ಅಮೃತತ್ವವನ್ನು ಅನುಗ್ರಹಿಸುತ್ತಾನೆಂದಿದೆ (ಸಾಯಣರು ಈ ವಾಕ್ಯದಲ್ಲಿ **ಅಮೃತತ್ವಂ** ಎಂಬ ಪದಕ್ಕೆ ಅಮರ್ತ್ಯತ್ವಸಾಧಕವಾದ ಸೋಮಾದಿಗಳನ್ನನುಗ್ರಹಿಸಿ ಕೊಟ್ಟನು ಎಂದರ್ಥಮಾಡಿದ್ದಾರೆ.) ಇದೇ ಸವಿತೃವು ಋಭುಗಳಿಗೂ ಸಹ ಮರಣರಾಹಿತ್ಯವನ್ನು ಹೊಂದುವಂತೆ ಅನುಗ್ರಹಿಸಿದನು ಎಂದು ೧-೧೧೦-೩ ನೇ ಮಂತ್ರದಲ್ಲಿ ಪ್ರಶಂಸೆಯಿದೆ. ಇದೇ ಭಾವವನ್ನು ವಿವರಿಸತಕ್ಕ ಇನ್ನೂ ಕೆಲವು ವಾಕ್ಯಗಳನ್ನು ಉದಾಹರಣೆಗಾಗಿ ಪರಿಶೀಲಿಸಬಹುದು "ಯಾವ ದೇವತೆಗಳು, ಶಿಶುರೂಪನಾಗಿ ಉತ್ಪನ್ನನಾದವನೂ, ತನ್ನ ಪಿತೃಗಳ ಉದರದಿಂದ ಆವಿರ್ಭೂತನಾದವನೂ ಆದ ಅಗ್ನಿಯನ್ನು ಪೂಜಿಸುವರೋ ಆ ದೇವತೆಗಳಿಗೆ ಅಗ್ನಿಯು ತನ್ನ ಮಹತ್ತ್ವದಿಂದ ಅಮರ್ತ್ಯತ್ವವನ್ನನುಗ್ರಹಿಸುವನು

(೬-೭-೪)

''ದೇವತೆಗಳು ಅಮೃತತ್ವದ ಸಂಪಾದನೆಗಾಗಿ ಸೋಮಪಾನವನ್ನು ಮಾಡುತ್ತಾರೆ''

(೯-೧೦೬-೪)

ಇದೇ ವಿಷಯದಲ್ಲಿ ಶತಪಥಬ್ರಾಹ್ಮಣದಲ್ಲಿ ಒಂದು ಕಥಾಸನ್ನಿವೇಶವು ಈರೀತಿ ವಿವೃತವಾಗಿದೆ,—

''ದೇವೇಭ್ಯೋ ಹ ವೈ ಅಮೃತತ್ವಮಪಚಕ್ರಾಮ। ಅಭಿಷುತ್ಯ ಆಗ್ನಾವಜುಹವುಃ। ತದಗ್ನಾವಮೃತಮಾದದುಃ . ....ತತೋ ದೇವಾ ಅಮೃತಾ ಅಭವನ್ ॥''

(ಶ ಬ್ರಾ ೯-೫-೧-೧ ರಿಂದ ೪)

ಒಂದುಸಲ ದೇವತೆಗಳು ಅಮೃತತ್ವವನ್ನು ಕಳೆದುಕೊಂಡರು. ಆದರೆ, ವ್ರತಕರ್ಮಗಳ ಆಚರಣೆಯಿಂದ ಪುನಃ ಅದನ್ನು ಸಂಪಾದಿಸಬೇಕೆಂದಿಚ್ಛಿಸಿದರು ಆಗ ಅಗ್ನಿಯಲ್ಲಿ ಸೋಮವನ್ನರ್ಪಿಸಿ ಅಗ್ನಿಗೆ ಅಮೃತತ್ವವು ಲಭಿಸುವಂತೆ ಮಾಡಿದರು. ಅಗ್ನಿಯೇ ಸಕಲ ದೇವತೆಗಳಿಗೂ ಆತ್ಮರೂಪನಾಪುದರಿಂದ ಅವರಿಗೂ ಅಮೃತತ್ವವು ಒಡನೆಯೇ ಲಭಿಸಿತು. ಸೋಮವೇ ಅಮೃತತ್ವಸಾಧಕವು. ಈ ಸೋಮದ ಪ್ರಭಾವದಿಂದಲೇ ಇಂದ್ರನು ದೇವಲೋಕವನ್ನು ಜಯಿಸಿದನು (೧೦-೧೬೭-೧) ಮತ್ತು ಸೋಮರೂಪವಾದ ಹವಿಸ್ಸನ್ನರ್ಪಿಸಿ ಮಹತ್ತ್ವವನ್ನು ಪಡೆದನು (೧೮-೧೫೯-೪).

"ಯೇನ ದೇವಾ ಅಮೃತಮನ್ವವಿಂದನ್" ಇತ್ಯಾದಿ ವಾಕ್ಯಗಳಲ್ಲಿ ಅಗ್ನಿಯೇ ದೇವತೆಗಳಿಗೆಲ್ಲಾ ಅಮೃತತ್ವಸಾಧಕನೆಂದು ಅಥರ್ವವೇದವು ಪ್ರಶಂಸಿಸಿದೆ (ಅ ವೇ. ೪-೨೩-೬) **''ಬ್ರಹ್ಮಚರ್ಯೇಣ ತಪಸಾ ದೇವಾಃ ಮೃತ್ಯುಮಪಾಘ್ನತ''** ದೇವತೆಗಳು ಬ್ರಹ್ಮಚರ್ಯದಿಂದಲೂ, ತಪಸ್ಸಿನಿಂದಲೂ ಮೃತ್ಯುವನ್ನು ನಾಶಮಾಡಿದರೆಂದು ಅದೇ ನೇದದಲ್ಲಿ ತಿಳಿಸಿದೆ (ಅ. ವೇ ೯-೫-೯೯) ರೋಹಿತನ ಸಹಾಯದಿಂದ ಅಮೃತತ್ವವನ್ನು ಪಡದರೆಂದೂ ಒಂದು ಸಲ ಹೇಳಿದೆ (ಅ. ವೇ. ೧೩-೧-೭)

ಹೀಗೆ ವ್ರತಾದಿಗಳಿಂದ ದೇವತೆಗಳು ಅಮೃತತ್ವವನ್ನು ಸಂಪಾದಿಸಿದರೆಂಬ ಭಾವವು ನಾನಾ ಕಡೆಗಳಲ್ಲಿ ಸೂಚಿತವಾಗಿದೆ ಅ ವೇ ೩-೨೨-೩, ೪-೧೧-೬, ೪-೧೪-೧, ಶ ಬ್ರಾ ೧-೭-೩-೧, ಐ ಬ್ರಾ. ೬-೩೦, ತೈ. ಸಂ. ೧-೭-೧-೩, ೬-೫-೩-೧

''ತಥೈವ ತಪಸಾ ದೇವಾ ಮಹಾಮಾಯಾ ದಿವಂ ಗತಾಃ'' (ಮಹಾಭಾರತ)

ಇದೇ ಅಮೃತತ್ವಸಾಧನೆಯ ವಿಷಯದಲ್ಲಿ ಶತಪಥಬ್ರಾಹ್ಮಣದಲ್ಲೂ, ತೈತ್ತಿರೀಯಸಂಹಿತೆಯಲ್ಲಿಯೂ ಸಹ ಸ್ವಾರಸ್ಯವಾದ ಸನ್ನಿವೇಶಗಳು ವಿವೃತವಾಗಿವೆ.

''ಪ್ರಜಾಪತಿಂ ನೈ ಭೂತಾನ್ಯುಪಾಸೀದನ್..... ಯಜ್ಞೋ ವೋ೭ನ್ನಮಮೃತತ್ವಂ ಚ''
(ಶ ಬ್ರಾ. ೨-೪-೨-೧)

ಒಂದು ಸಲ ಸಕಲ ಭೂತಗಳೂ ಪ್ರಜಾಪತಿಯನ್ನು ಸಮೀಪಿಸಿ "ನಾವು ಬದುಕಬೇಕಾದ ಮಾರ್ಗವನ್ನು ಪದೇಶಿಸು" ಎಂದು ಪ್ರಾರ್ಥಿಸಿದವು. ಅದೇ ಕಾಲದಲ್ಲಿ ದೇವತೆಗಳೂ ಸಹ ಯಜ್ಞೋಪವೀತಧಾರಿಗಳಾಗಿ ಬಂದು ನಮಸ್ಕರಿಸಿ ಪ್ರಾರ್ಥಿಸಿದಾಗ "ಯಜ್ಞವೇ ನಿಮಗೆ ಅನ್ನವು. ಅಮೃತತ್ವವೇ ಸಾರವು ಮತ್ತು ಆದಿತ್ಯನೇ ಜ್ಯೋತಿಯು" ಎಂದು ಹೇಳಿದನು. ಇದೇ ವಿಷಯವು ಕೊಂಚ ವ್ಯತ್ಯಸ್ತವಾದ ರೀತಿಯಲ್ಲಿ ತೈತ್ತಿರೀಯಸಂಹಿತೆಯಲ್ಲಿ ಈ ರೀತಿ ತಿಳಿಸಲ್ಪಟ್ಟಿದೆ.

ಯಥಾ ವೈ ಮನುಷ್ಯಾ ಏವಂ ದೇವಾ ಅಗ್ರ ಆಸನ್ ತೇ೭ಕಾಮಯಂತಾವರ್ತಿಂ ಪಾಸ್ಮಾನಂ ಮೃತ್ಯುಮಪಹತ್ಯ ದೈವೀಗ್ಂ ಸಂಗ್ಂ ಸದಂ ಗಚ್ಛೇಮೇತಿ..... ...ಗಚ್ಛೇನ್ ॥
(ತೈ ಸಂ ೭-೪-೨-೧)

ಪೂರ್ವದಲ್ಲಿ ದೇವತೆಗಳೂ ಮಾನವರಂತೆಯೇ ಇದ್ದರು. ಅವರು ಮಾನವರಿಗೆ ಸಹಜವಾದ ಕಾಮ, ದುಃಖ ಮತ್ತು ಮೃತ್ಯುಗಳನ್ನು ದಾಟ ದೇವಪರಿಷತ್ತಿಗೆ ಹೋಗಿ ಸೇರಬೇಕೆಂದಿಚ್ಛಿಸಿದರು ಆಗ ಅವರು **ಚತುರ್ವಿಂಶತಿರಾತ್ರೆ**ವೆಂಬ ಸತ್ರವನ್ನು ಧ್ಯಾನಿಸಿ ಅದನ್ನಾಚರಿಸಿದರು ಅದರ ಫಲವಾಗಿ ಅವರು ದುಃಖ ಮತ್ತು ಮರಣಗಳ ಭಯದಿಂದ ಮುಕ್ತರಾಗಿ ದೇವಸಂಸತ್ತನ್ನು ಸೇರಿದರು. ಇದರಂತೆಯೇ ತೈತ್ತಿರೀಯ ಬ್ರಾಹ್ಮಣದಲ್ಲೂ ಸಹ **'ತಪಸಾ ದೇವಾ ದೇವತಾಮಗ್ರ ಆಯನ್'** (ತೈ. ಬ್ರಾ ೩-೧೨-೩-೧) ತಪಸ್ಸಿನಿಂದಲೇ ದೇವತೆಗಳು ದೇವತ್ವವನ್ನು ಪಡೆದರೆಂಬ ವಿಷಯವನ್ನು ತಿಳಿಸಿದೆ

ಕೆಲವು ಶ್ರುತಿವಾಕ್ಯಗಳು, **ಇಂದ್ರಾದಿ** ಕೆಲವು ದೇವತೆಗಳು ಸ್ವಾಭಾವಿಕವಾಗಿಯೇ ಅಜರರೂ, ಅಮರ್ತ್ಯರೂ ಆಗಿರುವರೆಂದು ತಿಳಿಸುತ್ತವೆ. (೩-೪೬-೧, ೫-೪೨ ೬) "ಶರತ್ತುಗಳಾಗಲಿ, (ಶರತ್ ಎಂದರೆ ಸಂವತ್ಸರವು) ಮಾಸಗಳಾಗಲಿ, ದಿವಸಗಳಾಗಲಿ ಇಂದ್ರನಿಗೆ ಜರೆಯನ್ನುಂಟುಮಾಡಲಾರವು" (೬-೨೪-೭).

ದೇವತೆಗಳ ಈ ವಿಧವಾದ ಅಮರ್ತ್ಯತ್ವವು ಪರವಸ್ತುವಿನ ಅಮರ್ತ್ಯತ್ವದಂತೆ ಅನಂತವೇ ಅಥವಾ ಸಾಂತವೇ ಎನ್ನುವ ವಿಷಯದಲ್ಲಿ ಸಂಹಿತಾವಾಕ್ಯಗಳು ಯಾವ ಅಭಿಪ್ರಾಯವನ್ನೂ ತಿಳಿಸಿಲ್ಲ ಆದರೆ, ಬ್ರಾಹ್ಮಣಾದಿಗಳ ವಿವರಣೆಯಂತೆ ಅದು ಸಾಂತವೆಂದೇ ತಿಳಿಯುತ್ತದೆ. ವಿಶ್ವಸೃಷ್ಟಿ ಮತ್ತು ವಿಶ್ವಪ್ರಳಯಗಳನ್ನು ವರ್ಣಿಸುವ ಪುರಾಣವಾಕ್ಯಗಳು ದೇವತೆಗಳನ್ನೂ ವಿಶ್ವರಚನೆಯ ಒಂದು ಭಾಗವೆಂದು ತಿಳಿಸಿ ವಿಶ್ವಪ್ರಳಯಕಾಲದಲ್ಲಿ ದೇವತೆಗಳೂ ಪ್ರಳಯನಿಯಮಕ್ಕೆ ಒಳಪಡುವರೆಂದು ಖಚಿತವಾಗಿ ವಿವರಿಸಿವೆ.

" ಬಹೂನೀಂದ್ರಸಹಸ್ರಾಣಿ ದೇವಾನಾಂ ಚ ಯುಗೇ ಯುಗೇ ।
ಕಾಲೇನ ಸಮತೀತಾನಿ ಕಾಲೋ ಹಿ ದುರತಿಕ್ರಮಃ ''

(ಸಾಂಖ್ಯಕಾರಿಕಾಭಾಷ್ಯ)

ಇತ್ಯಾದಿ ವಾಕ್ಯಗಳಿಂದ ಈ ವಿಷಯವು ಸ್ಪಷ್ಟಪಡುತ್ತದೆ ಇಂದ್ರಾದಿದೇವತೆಗಳೆಲ್ಲರೂ ಸಹ ಕಾಲನಿಯಮಕ್ಕೆ ಒಳಪಟ್ಟು ಸೃಷ್ಟಿಪ್ರಳಯಗಳ ರಚನೆಗೆ ಬದ್ಧರೆಂಬುದು ವ್ಯಕ್ತವಾಗುತ್ತದೆ. ಜರಾಮರಣಾದಿ ದುಃಖವು ದೇವಮಾನವಾದಿಗಳಿಗೆಲ್ಲಾ ಸಮಾನವೆಂದು ಸಾಂಖ್ಯಸೂತ್ರದ ವಿಷಯವು (ಸಾ. ಸೂ ೩-೫೩). ಈ ಸೂತ್ರದ ಭಾಷ್ಯವು ಈ ಅಭಿಪ್ರಾಯವನ್ನು ಇನ್ನೂ ಅಧಿಕವಾಗಿ ವಿವರಿಸುತ್ತದೆ ಆದರೆ ಈ ನಿಯಮವು ಮುಕ್ತಾತ್ಮರಿಗೆ ಅನ್ವಯಿಸುವುದಿಲ್ಲವೆಂದು ಕೆಲವರ ಮತ ಬ್ರಹ್ಮಸೂತ್ರಾದಿಗಳು ಈ ಶ್ರದ್ಧೆಯನ್ನು ಬಲಪಡಿಸುತ್ತವೆ

ದೇವತೆಗಳ ಸಂತತಿನೈಧ್ಯ ಮತ್ತು ಅವುಗಳ ಪರಸ್ಪರ ಸಂಬಂಧ

ಹಿಂದಿನ ಪ್ರಕರಣದಲ್ಲಿ ದೇವತೆಗಳ ಉತ್ಪತ್ತಿಯ ವಿಷಯವನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ ಕೆಲವು ದೇವತೆಗಳಿಗೆ ಮಾತಾಪಿತೃಗಳೂ ನಿರ್ದೇಶಿಸಲ್ಪಟ್ಟಿದ್ದಾರೆ ಈ ಅಂಶವು ದೇವತೆಗಳ ಸಂತತಿಪ್ರಭೇದಗಳನ್ನೂ ತಿಳಿಯಲು ಸಾಹಾಯ್ಯಕವಾಗಿರುತ್ತದೆ ದೇವತೆಗಳ ಜನನೀಜನಕರ ವಿಷಯಗಳನ್ನು ತಿಳಿಸುವ ಕೆಲವು ಮಂತ್ರಗಳನ್ನು ಪ್ರಥಮತಃ ಪರಿಶೀಲಿಸಬೇಕು

" ಎಲೈ ಇಂದ್ರನೇ, ನಿನ್ನ ಮಾತೃವನ್ನು ವಿಧವೆಯನ್ನಾಗಿ ಮಾಡಿದವರಾರು ? ನೀನು ಸುಪ್ತನಾಗಿರುವಾಗಾಗಲಿ ಅಥವಾ ಸಂಚರಿಸುತ್ತಿರುವಾಗಾಗಲಿ ನಿನ್ನನ್ನು ನಾಶಮಾಡಬೇಕೆಂದಿಚ್ಛಿಸಿದವರಾರು ? ನೀನು ನಿನ್ನ ಪಿತೃವಿನ ಪಾದವನ್ನು ಹಿಡಿದುಕೊಂಡು ಅವನನ್ನು ಕೊಂದಕಾಲದಲ್ಲಿ ಯಾವ ದೇವತೆಯು ನಿನ್ನ ಸಮೀಪದಲ್ಲಿದ್ದಳು ?'' (೪-೧೮-೧೩) ಎಂಬ ತಾತ್ಪರ್ಯವನ್ನು ಕೊಡುವ ಈ ಮಂತ್ರಕ್ಕೆ ಭಾಷ್ಯವನ್ನು ವಿವರಿಸುವಾಗ ಸಾಯಣರು ತೈತ್ತಿರೀಯಸಂಹಿತೆಯಲ್ಲಿ ಉಕ್ತವಾಗಿರುವ ಈ ಪ್ರಕರಣವನ್ನು ಉದಾಹರಣೆಯಾಗಿ ಹೇಳಿದ್ದಾರೆ ತೈತ್ತಿರೀಯಸಂಹಿತೆಯಲ್ಲಿ ಹೇಳಿರುವಂತೆ ಈ ಪ್ರಕರಣದ ವಿವರಣವು ಈ ರೀತಿಯಿದೆ —

"ಯಜ್ಞವು ದಕ್ಷಿಣೆಯನ್ನು ತಾನು ಹೊಂದಬೇಕೆಂದಿಚ್ಛಿಸಿ ಅದರ ಸಂಸರ್ಗವನ್ನು ಪಡೆಯಿತು ಅದರ ನಿಮಿತ್ತವಾಗಿ ಅದರೊಡನೆ ಸಂಯುಕ್ತವಾಯಿತು. ಈ ಸಂಯೋಗದಿಂದ ಇಂದ್ರನು ಹೆದರಿದನು "ಇವರ ಸಂಸರ್ಗದಿಂದ ಉತ್ಪನ್ನವಾಗತಕ್ಕ ವ್ಯಕ್ತಿಯು ಈ ಲೋಕವೇ ಆಗುತ್ತದೆ'' ಎಂಬ ನಿರೀಕ್ಷೆಯಿಂದ ತಾನೇ ಆ ದಕ್ಷಿಣೆಯ ಗರ್ಭವನ್ನು ಪ್ರವೇಶಿಸಿದನು. ಆ ಗರ್ಭದಿಂದ ಉತ್ಪನ್ನನಾಗಿ, ಪುನಃ ಆ ಗರ್ಭದಿಂದ ಉತ್ಪನ್ನನಾಗುವ ವ್ಯಕ್ತಿಯು ಈ ಲೋಕವೇ ಆಗುವುದೆಂದು ಹೆದರಿ ಆ ಗರ್ಭವನ್ನೇ ಸೀಳಿಹಾಕಿದನು ಅದರಿಂದ ಗೋವಿನ ಉತ್ಪತ್ತಿಯಾಯಿತು"

(ತೈ. ಸಂ ೬-೧-೩-೬)

ಸಾಯಣರು ತೋರಿಸಿರುವ ಈ ಉದಾಹರಣೆಯಲ್ಲಿ ಇಂದ್ರನು ತನ್ನ ಪಿತೃವಧಕ್ಕೆ 'ಕಾರಣನಾದನು ಎಂಬಂಶವೇ ಇಲ್ಲ. ಆದರೂ ಸಹ ಈ ಸನ್ನಿವೇಶವು ದೇವತೆಗಳಲ್ಲೂ ಜನ್ಯಜನಕಭಾವವಿದೆಯೆಂದೂ, ಸಂತತಿಯ ಬೆಳೆವಣಿಗೆಗೆ ಇದು ಮೂಲವೆಂದೂ ತಿಳಿಯಪಡಿಸುತ್ತದೆ. ಇದಲ್ಲದೇ, **ಪೂರ್ವಯುಗ, ಪ್ರಥಮಯುಗ** ಇತ್ಯಾದಿ ಪ್ರಯೋಗಗಳೂ ಸಹ ಈ ಅಂಶವನ್ನು ವಿವರಿಸುತ್ತವೆ. (೧೦-೭೨-೩, ೧೦-೭೨-೪ ಇತ್ಯಾದಿ). ೧-೧೬೪-೫೦ ಮತ್ತು ೧೦-೯೦-೧೬ ನೇ ಮಂತ್ರಗಳಲ್ಲಿ **ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ** ಎಂಬ ವಾಕ್ಯದ ತಾತ್ಪರ್ಯವು ಈ ಸಂದರ್ಭದಲ್ಲಿ ವಿಚಾರಾರ್ಹವಾದುದು.

ಸಾಧ್ಯರೆಂದರೆ ದ್ಯುಸ್ಥಾನದೇವತೆಗಳೆಂದರ್ಥಮಾಡಿದ್ದಾರೆಂದು ನಿರುಕ್ತಕಾರರು ತಿಳಿಸುತ್ತಾರೆ (ನಿ. ೧೨-೪೧) ಇನ್ನೊಂದು ಆಖ್ಯಾನದಂತೆ ಪೂರ್ವಕಾಲವು ದೇವಯುಗವೆಂದರ್ಥ ಛಂದಸ್ಸುಗಳೇ ಸಾಧ್ಯರೆಂದು ಐತರೇಯಬ್ರಾಹ್ಮಣದ ಮತ (ಐ. ಬ್ರಾ. ೧-೧೬) ಆದಿತ್ಯರೂ ಅಂಗಿರಸ್ಸುಗಳೂ ಸಾಧ್ಯಸಂಜ್ಞಕರೆಂದು ಸಾಯಣರ ವಿವರಣೆಯಿದೆ ಸಾಧ್ಯರು ದೇವತಾವಿಶೇಷಗಳಲ್ಲಿ ಸೇರಿದವರೆಂದೂ, ಯಜ್ಞಾದಿಗಳಿಗೆ ಮಾರ್ಗದರ್ಶಕರೆಂದೂ, ಯಜ್ಞಾದಿಕರ್ಮಾಚರಣೆಯಿಂದ ಉತ್ತಮವಾದ ಲೋಕವನ್ನು ಪಡೆದರೆಂದೂ ಅವರನ್ನು ಅನೇಕ ಕಡೆಗಳಲ್ಲಿ ಪ್ರಶಂಸಿಸಿದೆ. Wilson ಎಂಬ ಪಂಡಿತನೂ ಈ ಮತವನ್ನೇ ಅನುಮೋದಿಸಿ ವಿವರಿಸಿದ್ದಾನೆ. ಆದರೆ, ವಾಜಸನೇಯ ಸಂಹಿತೆಯ ೩೧-೧೬ ನೇ ಮಂತ್ರಕ್ಕೆ ಮಹೀಧರ ವ್ಯಾಖ್ಯಾನವು ಈ ಅರ್ಥಗಳು ಅಷ್ಟು ಸಮಂಜಸವಾಗಿಲ್ಲವೆಂದು ಸೂಚಿಸುತ್ತದೆ ಆ ವ್ಯಾಖ್ಯಾನದಂತೆ ದೇವತೆಗಳ ಗುಂಪು ಎರಡು ಭಾಗವಾಗಿರುವುದು. **ಕರ್ಮದೇವಾಃ, ಅಜಾನದೇವಾಃ** ಎಂದು ದೇವತೆಗಳು ಎರಡು ಗುಂಪುಳ್ಳವರಾಗಿರುತ್ತಾರೆ ತಮ್ಮ ಅತ್ಯುತ್ತಮವಾದ ಕರ್ಮಗಳಿಂದಲೇ ದೇವತ್ವವನ್ನು ಪಡೆದವರ ಗುಂಪೊಂದು ಜನ್ಮತಃ ದೇವತ್ವವನ್ನು ಹೊಂದಿರುವ ದೇವತೆಗಳ ಗುಂಪಿನ್ನೊಂದು, ಬೃಹದಾರಣ್ಯಕವು ಈ ಗುಂಪಿನಲ್ಲಿ ಎರಡನೆಯ ಶ್ರೇಣಿಗೆ ಸೇರಿದವರೇ ಶ್ರೇಷ್ಠರೆಂದು ತಿಳಿಸುತ್ತದೆ ಈ ರೀತಿ ಅರ್ಥಾಂತರಗಳು ಸಾಧ್ಯವಿರುವುದರಿಂದ Wilson ಎಂಬ ಪಂಡಿತನು "It would seem that in Sayana's day, the purport of the designation ಸಾಧ್ಯ had become uncertain" ಸಾಯಣರ ಕಾಲದಲ್ಲಿ ಈ ಪದಕ್ಕೆ ನಿಶ್ಚಿತವಾದ ಅರ್ಥವನ್ನು ಹೇಳಲು ಸಾಧ್ಯವಿರಲಿಲ್ಲ ಎಂದು ತಿಳಿಸಿದ್ದಾನೆ

ಈ ರೀತಿ ದೇವತೆಗಳ ಗುಂಪುಗಳು ಬೇರೆಬೇರೆಯಾಗಿದ್ದಿರಲು ಸಾಧ್ಯವೆಂದು ಮೇಲಿನ ವಾಕ್ಯಗಳು ಸೂಚಿಸುತ್ತವೆ. ಈ ಗುಂಪುಗಳು ಯಾವಾಗಲೂ ಅನ್ಯೋನ್ಯವಾದ ಮೈತ್ರೀಭಾವವನ್ನು ಹೊಂದಿದ್ದವು ಎಂದು ಹೇಳಲು ಸಾಧ್ಯವಿಲ್ಲ ಋ ಸಂ. ೪-೩೦-೫ ಮತ್ತು ೪-೩೦-೫ ಇತ್ಯಾದಿ ಮಂತ್ರಗಳ ವಿವರಣವು ಈ ಅಂಶವನ್ನು ಸಮರ್ಥಿಸುವುದಿಲ್ಲ ಆದರೆ ಈ ಮಂತ್ರಗಳಿಗೂ ಸಹ ಒಬ್ಬೊಬ್ಬರ ವಿವರಣವು ಒಂದೊಂದು ವಿಧವಾಗಿರುತ್ತದೆ

ದೇವತೆಗಳ ಪ್ರಭಾವ ಮತ್ತು ಅಧಿಕಾರಗಳು

"ದೇವತೆಗಳು ಸ್ವಚ್ಛಂದವಾಗಿ ಯಾವರೀತಿ ಬೇಕಾದರೂ ವರ್ತಿಸಬಹುದು ಅವರ ರಚನೆಗಳನ್ನು ಯಾವ ಮಾನವನೂ, ಎಷ್ಟು ಪ್ರಬಲವಾದ ಶತ್ರುವೂ ಸಹ ನಿರೋಧಿಸಲಾರನು" (೮-೩೮-೪). ೮-೨೦-೧೬ ನೇ ಮಂತ್ರದಲ್ಲಿ ಇದೇ ರೀತಿ ಮರುತ್ತುಗಳ ಪ್ರಶಂಸೆಯಿದೆ. ೮-೫೦-೪ ಮತ್ತು ೮-೫೫-೪ ನೇ ಮಂತ್ರಗಳು ಇಂದ್ರನ ಪ್ರಭಾವವನ್ನು ವರ್ಣಿಸಿ ಈ ಅಂಶವನ್ನು ತಿಳಿಸುತ್ತವೆ ಕೆಳಗೆ ಉದಾಹೃತವಾಗಿರುವ ವಾಕ್ಯಗಳು ದೇವತೆಗಳ ಅಸಾಧಾರಣವಾದ ಪ್ರಭಾವವನ್ನು ವಿವರಿಸುತ್ತವೆ

" ಯಾರೇ ಆಗಲಿ, ಎಷ್ಟೇ ಪ್ರಭಾವಶಾಲಿಯಾಗಲಿ, ದೇವತೆಗಳ ಉತ್ತಮವಾದುದೂ ಸ್ಥಿರವಾದುದೂ ಆದ ವ್ರತಗಳನ್ನು (ಕಾರ್ಯಗಳನ್ನು) ನಿರೋಧಿಸಲಾರರು." (೩-೫೬-೧)

" ದೇವತೆಗಳ ಪ್ರಭುತ್ವವು ಸಕಲ ಭುವನಗಳ ಮೇಲೂ ಇರುತ್ತದೆ." (೧೦-೬೫-೧೫)

'' ಮನುವಿನ ಮಾರ್ಗವನ್ನು ಬಿಟ್ಟು ಬೇರೆ ಮಾರ್ಗದಲ್ಲಿ ದೇವತೆಗಳು ನಮ್ಮನ್ನು ಒಯ್ಯದಿರಲಿ "
(೮-೩೦-೩)

" ದೇವತೆಗಳಿಂದ ನಿಯಮಿತವಾದ ನೂರು ವರ್ಷಗಳಿಗಿಂತ ವಿಾರಿ ಯಾರೂ ಜೀವಿಸಿರಲಾರರು ''
(೧೦-೩೩-೯)

" ದೇವತೆಗಳು ಸಕಲ ಇಷ್ಟಾರ್ಥಗಳನ್ನೂ ಸಾಧಿಸಲು ಅನುಕೂಲ ಮಾಡುತ್ತಾರೆ ಅವರಿಗಿಂತಲೂ ಅಧಿಕವಾಗಿ ಸಹಾಯಮಾಡತಕ್ಕವರಾರೂ ಇರಲಾರರು '' (೧೦-೬೪-೨)

" ವಿಷ್ಣುವು ತನ್ನ ನೂರು ಪಾದಗಳನ್ನೂ ಇಟ್ಟು ಆಕ್ರಮಿಸಿದ ಪ್ರದೇಶಗಳಲ್ಲೆಲ್ಲಾ ದೇವತೆಗಳು ಹರ್ಷವನ್ನನುಭವಿಸುತ್ತಾರೆ." (೮-೨೯-೬)

" ದೇವತೆಗಳ ನಿವಾಸಸ್ಥಾನಕ್ಕೆ ಕರೆದೊಯ್ಯುವ ಮಾರ್ಗವು ಯಾರಿಗೆ ಗೊತ್ತಿದೆ? ಕೆಳಗಿನ ಲೋಕದ ಅವರ ಸ್ಥಾನವು ಸಾಧಾರಣವಾಗಿ ಗೋಚರವಾಗುತ್ತದೆ. ಆದರೆ ಇದಕ್ಕಿಂತಲೂ ವಿಾರಿದುದೂ, ರಹಸ್ಯವಾದುದೂ, ಮಾನವನ ಗೋಚರಾತೀತವಾದುದೂ ಆದ ಪ್ರದೇಶವು ಬೇರೊಂದಿದೆ '' (೩-೫೫-೫)

" ಸೋಮಪಾನವನ್ನು ಮಾಡತಕ್ಕವನು ಮಾತ್ರ ಅಮೃತತ್ವವನ್ನು ಪಡೆದು ದೇವತಾಜ್ಞಾನವನು ಹೊಂದುತ್ತಾನೆ'' (೮-೪೮-೩)

'' ಯಾಗಾದಿಕರ್ಮಾಚರಣೆಯಲ್ಲಿ ನಿರತರಾಗಿರತಕ್ಕವರನ್ನು ದೇವತೆಗಳು ಪ್ರತಿಫಲದಾನದಿಂದ ಸತ್ಕರಿಸುತ್ತಾರೆ. ಕರ್ಮಭ್ರಷ್ಟರನ್ನು ಶಿಕ್ಷಿಸುತ್ತಾರೆ '' (೮-೨-೧೮)

" ದೇವಪೂಜಕನಾದ ಯಜಮಾನನ ರಥವು ಸಕಲ ಯಜ್ಞಗಳಲ್ಲೂ ಜಯವನ್ನು ತರತಕ್ಕದ್ದಾಗಿದೆ ಯಜ್ಞಕರ್ತನಾಗಿ ದೇವತೆಗಳನ್ನು ತೃಪ್ತಿಪಡಿಸುವ ಮಾನವನು ಕರ್ಮಭ್ರಷ್ಟರನ್ನು ಸೋಲಿಸುವ ಶಕ್ತಿಯನ್ನು ಹೊಂದುತ್ತಾನೆ"
(೮-೩೧-೧೫)

'' ಮನೋ ಹ ವೈ ದೇವಾಃ ಮನುಷ್ಯಸ್ಯ ಆಜಾನಂತಿ . ತೇ ಅಸ್ಯ ಗೃಹೇಷೂಪವಸಂತಿ ''
(೫ ಬ್ರಾ ೧-೧-೯-೭)

ದೇವತೆಗಳು ಮಾನವನ ಅಭೀಷ್ಟವನ್ನು ಪೂರ್ಣವಾಗಿ ಅರಿಯುತ್ತಾರೆ ಅವರನ್ನೇ ಧ್ಯಾನಿಸುತ್ತಾ ಅವರಿಗೆ ಸಕಾಲದಲ್ಲಿ ಆಹುತ್ಯಾದಿಗಳನ್ನರ್ಪಿಸಿದರೆ ಅವರು ಅಂತಹ ಯಜಮಾನನ ಗೃಹಕ್ಕೆ ಬಂದು, ಅಲ್ಲೇ ವಸಿಸಿ ಅವನನ್ನು ಅನುಗ್ರಹಿಸುತ್ತಾರೆ

ಮೇಲೆ ಉದ್ಧರಿಸಿರುವ ಈ ವೈದಿಕವಾಕ್ಯಗಳಲ್ಲಿ ಸಾಧಾರಣವಾಗಿ ದೇವತಾಸಮೂಹಕ್ಕೆಲ್ಲಾ ಸೇರಿದಂತಿರುವ ಪ್ರಭಾವಗಳೂ, ಅತಿಶಯವಾದ ಅಧಿಕಾರವೂ ವರ್ಣಿತವಾಗಿವೆ ಆಯಾ ದೇವತೆಯ ವೈಯುಕ್ತಿಕವಾದ ಗುಣಗಳನ್ನು ಸಂದರ್ಭಾನುಸಾರ ವಿಮರ್ಶಿಸಲಾಗುತ್ತದೆ

ಅತಿಪ್ರಾಚೀನವೂ, ಅತಿಗಹನವೂ, ಅತಿವಿಸ್ತಾರವೂ, ಸರ್ವಶಾಸ್ತ್ರಗಳಿಗೂ ಮೂಲಭೂತವೂ ಆದ ಇಂತಹ ಋಗ್ವೇದಸಂಹಿತೆಯನ್ನು ಸರಳವಾದ ಕನ್ನಡ ಭಾಷೆಯಲ್ಲಿ ವಿಮರ್ಶಾನುವಾದಸಹಿತವಾಗಿ ಪ್ರಕಾಶಪಡಿಸುವುದು ಸುಲಭವಾದ ಕೆಲಸವಲ್ಲ ಆದರೂ ಇಂತಹ ಮಹತ್ಕಾರ್ಯದಿಂದ ಪಂಡಿತಪಾಮರರಾದಿಯಾದ ಸಕಲ ಜನರೂ ಜ್ಞಾನಾಭಿವೃದ್ಧಿಯನ್ನು ಪಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಲೆಂಬ ಘನವಾದ ಉದ್ದೇಶದಿಂದ ಕರ್ನಾಟಕ ಸಿಂಹಾಸನಾಧೀಶ್ವರರೂ, ವೇದವಿದ್ಯಾಭಿಮಾನಿಗಳೂ, ಸ್ವಯಂಪಂಡಿತರೂ, ಪ್ರಜಾನುರಾಗಿಗಳೂ, ದೈವಭಕ್ತಿತತ್ಪರರೂ ಆದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ, ಜಿ.ಸಿ.ಎಸ್.ಐ.** ಮಹಾಪ್ರಭುವರ್ಯರು ಬಹುದ್ರವ್ಯಸಾಧ್ಯವಾದ ಈ ಗ್ರಂಥಪ್ರಕಟನೆಯನ್ನು ತಮ್ಮ ಉದಾರಾಶ್ರಯದಿಂದ ಪ್ರೋತ್ಸಾಹಮಾಡುತ್ತಿರುವುದು ಕರ್ನಾಟಕ ಜನಕೋಟಿಯ ಸುಕೃತವೆಂದೇ ಹೇಳಬೇಕು. ಇಂತಹ ಉದಾರಮತಿಗಳಾದ ನಮ್ಮ ಪ್ರಭುವರ್ಯರಿಗೂ, ಅವರ ಕುಟುಂಬಕ್ಕೂ (ವೇದಮಂತ್ರಗಳಲ್ಲಿ ಅತಿಮುಖ್ಯನೆಂದು ಪರಿಗಣಿಸಲ್ಪಟ್ಟಿರುವ **ಗಾಯಿತ್ರೀ** ಎಂಬ ಮಂತ್ರನಾಮಾಂಕಿತರಾದ) ರಾಜಕುಮಾರಿಗೂ, ದ್ವಿತೀಯ ರಾಜಕುಮಾರಿಗೂ ಸಮಸ್ತ ಪ್ರಜಾಕೋಟಿಗೂ ಸಹ ವೇದಪುರುಷನಾದ ಸರ್ವೇಶ್ವರನು ಐಹಿಕಫಲಗಳಾದ ಆಯುರಾರೋಗ್ಯೈಶ್ವರ್ಯಾದಿಸಕಲಸಂಪತ್ತನ್ನೂ, ಪಾರಿಮಾರ್ಥಿಕವಾದ ಅಧ್ಯಾತ್ಮಜ್ಞಾನವನ್ನೂ ಇತೋಽಪ್ಯತಿಶಯವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಮೈಸೂರು,
ನಂದನನಾಮ ಸಂ॥ ಕಾರ್ತಿಕ ಬ॥ ದಶಮೀ ಬುಧವಾರ
ತಾ॥ 12—11—52.

ಅನುವಾದಕ
ಹೆಚ್. ಪಿ. ವೆಂಕಟರಾವ್,
ಆಸ್ಥಾನ ಮಹಾವಿದ್ವಾನ್

ಸಂಕೇತಾಕ್ಷರಗಳ ವಿವರಣೆಯು.

ಅಥ. ಸಂ.—ಅಥರ್ವವೇದಸಂಹಿತಾ
ಆಪ. ಸೂ.—ಆಪಸ್ತಂಬಶ್ರೌತಸೂತ್ರ
ಆಪ. ಧ. ಸೂ —ಆಪಸ್ತಂಬ ಧರ್ಮ ಸೂತ್ರ
ಆಪ ಪ ಸೂ.—ಆಪಸ್ತಂಬ ಪರಿಭಾಷಾಸೂತ್ರ
ಆ. ಸೂ ಅಥವಾ ಆ —ಆಶ್ವಲಾಯನ ಶ್ರೌತಸೂತ್ರ
ಉ. ಸೂ.—ಉಣಾದಿ ಸೂತ್ರ
ಋ. ಸಂ —ಋಗ್ವೇದ ಸಂಹಿತಾ
ಐ ಆ —ಐತರೇಯಾರಣ್ಯಕ
ಐ. ಉ.—ಐತರೇಯೋಪನಿಷತ್
ಐ. ಬ್ರಾ —ಐತರೇಯ ಬ್ರಾಹ್ಮಣ
ಛಾ. ಉ —ಛಾಂದೋಗ್ಯೋಪನಿಷತ್
ಜೈ ಸೂ —ಜೈಮಿನಿಯ ಪೂರ್ವಮೀಮಾಂಸಾ ಸೂತ್ರ
ಜೈ ನ್ಯಾ ವಿ —ಜೈಮಿನಿಯ ನ್ಯಾಯಮಾಲಾ ವಿಸ್ತರ
ತಾ. ಬ್ರಾ —ತಾಂಡ್ಯಮಹಾ ಬ್ರಾಹ್ಮಣ
ತೈ. ಆ. —ತೈತ್ತಿರೀಯ ಆರಣ್ಯಕ
ತೈ ಬ್ರಾ —ತೈತ್ತಿರೀಯ ಬ್ರಾಹ್ಮಣ
ತೈ ಸಂ.—ತೈತ್ತಿರೀಯ ಸಂಹಿತಾ
ನಿ —ನಿರುಕ್ತ, ನಿಘಂಟು
ಪಾ. ಸೂ.—ಪಾಣಿನೀಯ ಸೂತ್ರ
ಪಾ. ಶಿ.—ಪಾಣಿನೀಯ ಶಿಕ್ಷಾ
ಫಿ. ಅಥವಾ ಫಿ ಸೂ —ಫಿಟ್ ಸೂತ್ರ
ಬ್ರ. ಸೂ —ಬ್ರಹ್ಮ ಸೂತ್ರ
ಮ. ಭಾ.—ಮಹಾಭಾರತ
ಮ ಸ್ಮೃ —ಮನು ಸ್ಮೃತಿ
ಮೈ. ಸಂ.—ಮೈತ್ರಾಯಣೀಯಸಂಹಿತಾ
ಯಾ ಸ್ಮೃ.—ಯಾಜ್ಞವಲ್ಕ್ಯ ಸ್ಮೃತಿ
ವಾ. ಸಂ.—ವಾಜಸನೇಯ ಸಂಹಿತಾ
ವಾ. ಪು —ವಾಯುಪುರಾಣ
ವಿ ಪು —ವಿಷ್ಣುಪುರಾಣ
ವೇ. ಸೂ.—ವೇದಾಂತ ಸೂತ್ರ
ಶ ಬ್ರಾ.—ಶತಪಥಬ್ರಾಹ್ಮಣ
ಸಾ. ಸಂ.—ಸಾಮವೇದ ಸಂಹಿತಾ ಇತ್ಯಾದಿ.

॥ ಶ್ರೀಃ ॥

ವಿ ಷ ಯಾ ನು ಕ್ರ ಮ ಣಿ ಕೆ.

ಪುಟಸಂಖ್ಯೆ

೧೯. ಅವಾಸೃಜಂತ ಎಂಬ ಹತ್ತೊಂಭತ್ತನೆಯ ಸೂಕ್ತವು—

ಸೂಕ್ತದ ಪೀಠಿಕೆ—ನಾಮದೇವಋಷಿಯ ಸೂಕ್ಷ್ಮಪರಿಚಯ 1
ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು 2
ಚಿತ್ ಎಂಬ ಶಬ್ದದ ನಾನಾರ್ಥಗಳು ಮತ್ತು ಪ್ರಯೋಗ 4
ಇಂದ್ರನು ವೃತ್ರಾಸುರಸನ್ನು ಪೌರ್ಣಮಾಸಿಯ ದಿವಸ ಸಂಹಾರಮಾಡಿದನೆಂಬ ವಿಚಾರ ಇತ್ಯಾದಿ 7
ಸ್ಫುರದ್ಗ್ರತ್ಯಾಸದಿಂದ ಅರ್ಧಮೃತ್ಯಾಸವಾಗುವುದೆಂಬ ವಿಚಾರ 8
ವೃತ್ರಾಸುರವಧವಿಚಾರ (ಐತರೇಯಬ್ರಾಹ್ಮಣ ಮತ್ತು ತೈತ್ತಿರೀಯಸಂಹಿತೆಯಲ್ಲಿರುವಂತೆ) 9
ತುರ್ವಿತಿ, ವಯ್ಯ ಎಂಬುವರ ವಿಷಯ 19
ಇಂದ್ರನು **ಅಗ್ರು** ಎಂಬ ಕನ್ಯೆಯ ಪುತ್ರನಾದ **ಪರಾವೃಕ್ತ**ನೆಂಬುವನನ್ನು ಹುತ್ತದಿಂದ ಕಾಪಾಡಿದ ವಿಚಾರ 24
ನು ಎಂಬ ಶಬ್ದದ ನಾನಾರ್ಥಗಳು 27
ನ ಎಂಬ ಶಬ್ದದ ಪ್ರಯೋಗ ಮತ್ತು ಅರ್ಥಗಳು 28

೨೦. ಆ ನ ಇಂದ್ರಃ ಎಂಬ ಇಪ್ಪತ್ತನೆಯ ಸೂಕ್ತ—

ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು 29
ಶ್ವಘ್ನಿ ಎಂಬ ಶಬ್ದದ ಅರ್ಥವಿವರಣೆ ಇತ್ಯಾದಿ 34
ಸೃಣಿ ಶಬ್ದದ ಅರ್ಥವಿವರಣೆ 38
ನಿಷ್ಕೇವಲ್ಯಶಸ್ತ್ರಮಂತ್ರಗಳ ವಿವರಣೆ (ಐತರೇಯಬ್ರಾಹ್ಮಣದಲ್ಲಿರುವಂತೆ)
ಇಂದ್ರನು ಪ್ರಜಾಪತಿಯ ಸ್ನಾನಪಾನಗಳನ್ನು ಅಪೇಕ್ಷಿಸುವುದು—
ಪ್ರಜಾಪತಿಗ **ಕಃ** ಎಂದು ಹೆಸರು ಬರಲು ಕಾರಣ— ಯಜ್ಞದಲ್ಲಿ ಇಂದ್ರನ ಹವಿರ್ಭಾಗವು 48
ನಿಷ್ಕೇವಲ್ಯಶಸ್ತ್ರದಲ್ಲಿ ಯಾಜ್ಯಾಹೋಮದ ವಿಷಯವಾಗಿ ಪೂರ್ವೋಪಾಖ್ಯಾನವು 50
ಇಂದ್ರನ ಪತ್ನಿಯಾದ **ಪ್ರಾಸಹಾದೇವಿಯ** ಕಥೆ 51
ನಿಷ್ಕೇವಲ್ಯಶಸ್ತ್ರದಲ್ಲಿರುವ ಧಾಯ್ಯಾಮಂತ್ರದ ಪೂರ್ವೇತಿಹಾಸ 52
ರಾಜನು ಶತ್ರುಸೇನೆಗಳನ್ನು ಸೋಲಿಸುವ ಬಗೆ 53
ವಿರಾಟ್ಛಂದಸ್ಸಿನ ಯಾಜ್ಯಾಮಂತ್ರದಲ್ಲಿ ಎಲ್ಲಾ ದೇವತೆಗಳಿಗೂ ಹವಿರ್ಭಾಗವಿರುವುದು 53
ಈ ಸಂದರ್ಭದಲ್ಲಿ ವಿರಾಟ್ಛಂದಸ್ಸಿಗಿರುವ ಪ್ರಾಮುಖ್ಯತೆ 54

ಪುಟಸಂಖ್ಯೆ

ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿರುವ **ಋಕ್** ಮತ್ತು ಸಾಮಮಂತ್ರಗಳು 54
ಋಕ್ಕುಗಳಿಗೂ ಸಾಮಕ್ಕೂ ಇರುವ ನಿಕಟಸಂಬಂಧವು 55
ಸಾಮಗಾನಮಾಡುವ ಋತ್ವಿಜರು ಏತಕ್ಕಾಗಿ ಮೂರು ಋಕ್ಕುಗಳನ್ನು ಪರಿಸಿ ಗಾನಮಾಡುವರು 56
ಋಕ್ ಮತ್ತು ಸಾಮಮಂತ್ರಗಳ ಐದುವಿಧ ಪ್ರಭೇದಗಳು 57
ಈ ಎರಡುವಿಧವೂ ವಿರಾಟ್‌ಛಂದಸ್ಸಿನಲ್ಲಿರುವುದು 58
ನಿಷ್ಕೇವಲ್ಯಶಸ್ತ್ರದ ಐದು ವಿಭಾಗಗಳು 59
ನಿಷ್ಕೇವಲ್ಯಶಸ್ತ್ರದ ವಿಭಾಗಗಳು ಮತ್ತು ಸ್ವರವಿಶೇಷಗಳು 62
ನಿಷ್ಕೇವಲ್ಯಶಸ್ತ್ರದ **ಸ್ತೋತ್ರಿಯ, ಆನುರೂಪ, ಧಾಯ್ಯಾ ಸಾಮಪ್ರಗಾಥ** ಮತ್ತು **ನಿವಿದ್ಧಾನೀಯ** ಸೂಕ್ತಗಳು 62

೨೧. ಆ ಯಾತ್ವಿಂದ್ರಃ ಎಂಬ ಇಪ್ಪತ್ತೊಂದನೆಯ ಸೂಕ್ತವು—

ಸೂಕ್ತದ ವಿನಿಯೋಗ ಮತ್ತು ಋಷಿದೇವತಾ ಛಂದಸ್ಸುಗಳು 67
ದ್ಯು ಶಬ್ದದ ನಾನಾರ್ಥಗಳು 69
ಇಂದ್ರನಿಗೂ ಮರುತ್ತುಗಳಿಗೂ ಇರುವ ರಾಜಾಪ್ರಜಾಸಂಬಂಧ ಮತ್ತು ಸಾಹಚರ್ಯ 73
ವಿದಥ ಶಬ್ದದ ವಿವಿಧಾರ್ಥಗಳು 77
ಉಕ್ಥದ ಮಹಿಮೆ ಇತ್ಯಾದಿ 79
ಗವಯಃ, ಗೌರಃ ಎಂಬ ಶಬ್ದಗಳ ಅರ್ಥವಿವರಣೆ ಇತ್ಯಾದಿ 87

೨೨. ಯನ್ನ ಇಂದ್ರೋ ಜುಜುಷೇ ಎಂಬ ಇಪ್ಪತ್ತೆರಡನೆಯ ಸೂಕ್ತ—

ಸೂಕ್ತವಿನಿಯೋಗ ಇತ್ಯಾದಿ 94

೨೩. ಕಥಾ ಮಹಾಮವೃಧತ್ ಎಂಬ ಇಪ್ಪತ್ತಮೂರನೆಯ ಸೂಕ್ತವು—

ಸೂಕ್ತದ ವಿನಿಯೋಗ ಮತ್ತು ಋಷಿದೇವತಾ ಛಂದಸ್ಸುಗಳು 114
ಇಂದ್ರನು ಓರ್ವ ರಾಕ್ಷಸ ಸ್ತ್ರೀಯನ್ನು ಸಂಹಾರಮಾಡಿದ ವಿಚಾರ 125

೨೪. ಕಾ ಸುಷ್ಟುತಿಃ ಶವಸಃ ಎಂಬ ಇಪ್ಪತ್ತನಾಲ್ಕನೆಯ ಸೂಕ್ತ—

ಸೂಕ್ತದ ವಿನಿಯೋಗ ಇತ್ಯಾದಿ 134
ಕ್ರಯವಿಕ್ರಯಮಾಡುವವರ ವಿಷಯವಾದ ಉಪವಾನವು 148

೨೫. ಕೋ ಅದ್ಯ ನರ್ಯಃ ಎಂಬ ಇಪ್ಪತ್ತೈದನೆಯ ಸೂಕ್ತವು—

ಸೂಕ್ತದ ವಿನಿಯೋಗ ಇತ್ಯಾದಿ 154

೨೬. ಅಹಂ ಮನುರಭವಂ ಎಂಬ ಇಪ್ಪತ್ತಾರನೆಯ ಸೂಕ್ತವು—

ಸೂಕ್ತದ ವಿನಿಯೋಗ ಇತ್ಯಾದಿ 166
ಕಕ್ಷೀವಾನ್ ಎಂಬ ಋಷಿಯ ಉತ್ಪತ್ತಿವಿಚಾರ ಇತ್ಯಾದಿ 167

ಪುಟಸಂಖ್ಯೆ

ಶಂಬರನ ವಿಷಯ ಇತ್ಯಾದಿ 176

ಮನುವಿನ ವಿಷಯ 178

ಗಾಯತ್ರೀ ಛಂದಸ್ಸು ಶ್ಯೇನಪಕ್ಷಿರೂಪದಿಂದ ಸೋಮನನ್ನು ಸ್ವರ್ಗದಿಂದ ಭೂಮಿಗೆ ತಂದ ವಿಚಾರ 180

೨೭. ಗರ್ಭೇ ನು ಸನ್ ಎಂಬ ಇಪ್ಪತ್ತೇಳನೆಯ ಸೂಕ್ತವು—

ಸೂಕ್ತದ ವಿನಿಯೋಗ ಇತ್ಯಾದಿ 185

ಸೋಮಾಹರಣೋಪಾಖ್ಯಾನ—ಶ್ಯೇನಪಕ್ಷಿಯು ಸೋಮವನ್ನು ಸ್ವರ್ಗದಿಂದ ತರುವಾಗ ಸೋಮವಾಲಕರಲ್ಲಿ ಒಬ್ಬನಾದ ಕೃಶಾನುವು ಆ ಪಕ್ಷಿಯ ರೆಕ್ಕೆಯನ್ನು ಕತ್ತರಿಸಿದ ವಿಚಾರ ಇತ್ಯಾದಿ 190

ಗಾಯತ್ರೀಛಂದಸ್ಸಿನ ಪ್ರಾಶಸ್ತ್ಯ ಇತ್ಯಾದಿ 197

೨೮. ತ್ವಾ ಯುಜಾ ತವ ಎಂಬ ಇಪ್ಪತ್ತೆಂಟನೆಯ ಸೂಕ್ತವು—

ಸೂಕ್ತದ ವಿನಿಯೋಗ ಇತ್ಯಾದಿ 202

ಇಂದ್ರನು ಸೂರ್ಯರಥಚಕ್ರವನ್ನು ಅಪಹರಿಸಿದ ವಿಚಾರ 204

೨೯. ಆ ನಃ ಸ್ತುತಃ ಎಂಬ ಇಪ್ಪತ್ತೊಂಭತ್ತನೆಯ ಸೂಕ್ತವು—

ಸೂಕ್ತದ ವಿನಿಯೋಗ ಇತ್ಯಾದಿ 209

೩೦ ನಕಿರಿಂದ್ರ ತ್ವತ್ ಎಂಬ ಮೂವತ್ತನೆಯ ಸೂಕ್ತವು—

ಸೂಕ್ತದ ವಿನಿಯೋಗ ಇತ್ಯಾದಿ 216

ಇಂದ್ರನು **ಏತಶ**ನಿಂದ ಖಡ್ಗವನ್ನು ಪ್ರಾರ್ಥಿಸಿದ ವಿಷಯ 222

ಇಂದ್ರನು ಉಷೋದೇವತೆಯ ರಥವನ್ನು ಪುಡಿಪುಡಿಮಾಡಿದ ವಿಷಯ 227

ಶುಷ್ಣನೆಂಬ ಅಸುರನ ವಿಷಯ 230

ಶಂಬರನ ವಿಷಯ 231

ಇಂದ್ರನು **ಅಗ್ನಿ**ಯು ಸ್ತ್ರೀಯ ಸ್ವರೂಪವನ್ನು **ಪರಾವೃಕ್ತ**ನನ್ನು ಕಾಪಾಡಿದ ವಿಚಾರ, ಪರಾವೃಕ್ತನ ವಿಷಯ ಇತ್ಯಾದಿ 234

ತುರ್ವಶ ಎಂಬ ರಾಜನ ಜನನಾಂಗದ ವಿಷಯ ಇತ್ಯಾದಿ 241

ದಭೀತಿಯ ವಿಷಯ 247

೩೧. ಕಯಾ ನಶ್ಚಿತ್ರಃ ಎಂಬ ಮೂವತ್ತೊಂದನೆಯ ಸೂಕ್ತವು—

ಸೂಕ್ತದ ವಿನಿಯೋಗ ಇತ್ಯಾದಿ 251

೩೨. ಆ ತೂ ನ ಇಂದ್ರ ಎಂಬ ಮೂವತ್ತೆರಡನೆಯ ಸೂಕ್ತವು—

ಸೂಕ್ತದ ವಿನಿಯೋಗ ಇತ್ಯಾದಿ 266

ಇಂದ್ರನ ಕುದುರೆಗಳ ಸ್ತುತಿವರ್ಣನೆ ಇತ್ಯಾದಿ 288

ಕನೀನಿಕೆ ಎಂಬ ಶಬ್ದದ ನಿರ್ವಚನ ಇತ್ಯಾದಿ 289

ಆರನೆಯ ಅಧ್ಯಾಯವು ಸಮಾಪ್ತವು

ಪುಟಸಂಖ್ಯೆ

ಮೂರನೆಯ ಅಷ್ಟಕದಲ್ಲಿ ಏಳನೆಯ ಅಧ್ಯಾಯ

೩೩. **ಪ್ರ ಋಭುಭ್ಯೋ ದೂತಂ ಎಂಬ ಮೂವತ್ತಮೂರನೆಯ ಸೂಕ್ತ**—

ಪೀಠಿಕೆ—**ಋಭುಗಳ** ವಿಷಯ 294

ಸೂಕ್ತದ ವಿನಿಯೋಗ ಇತ್ಯಾದಿ 300

೩೪. **ಋಭುರ್ವಿಭ್ವಾ ಎಂಬ ಮೂವತ್ತನಾಲ್ಕನೆಯ ಸೂಕ್ತವು**—

ಸೂಕ್ತದ ವಿನಿಯೋಗ ಇತ್ಯಾದಿ 315

೩೫. **ಇಹೋಪ ಯಾತ ಎಂಬ ಮೂವತ್ತೈದನೆಯ ಸೂಕ್ತವು**—

ಸೂಕ್ತದ ವಿನಿಯೋಗ ಇತ್ಯಾದಿ 331

೩೬ **ಆನಶ್ಮೋ ಜಾತಃ ಎಂಬ ಮೂವತ್ತಾರನೆಯ ಸೂಕ್ತವು**—

ಸೂಕ್ತದ ವಿನಿಯೋಗ, ಋಷಿದೇವತಾಛಂದಸ್ಸುಗಳು 342

೩೭. **ಉಪ ನೋ ವಾಜಾಃ ಎಂಬ ಮೂವತ್ತೇಳನೆಯ ಸೂಕ್ತವು**—

ಸೂಕ್ತದ ವಿನಿಯೋಗ ಇತ್ಯಾದಿ 354

೩೮. **ಉತೋ ಹಿ ವಾಂ ಎಂಬ ಮೂವತ್ತೆಂಟನೆಯ ಸೂಕ್ತವು**—

ಸೂಕ್ತದ ಪೀಠಿಕೆ—**ದಧಿಕ್ರಾ** ಎಂಬ ದೇವತೆಯ ವಿಷಯ 364

ಸೂಕ್ತದ ವಿನಿಯೋಗ ಇತ್ಯಾದಿ 366

ತ್ರಸದಸ್ಯು ಎಂಬ ರಾಜನ ವಿಷಯ ಮತ್ತು **ಪುರುಕುತ್ಸನ** ವಿಷಯ ಸಹ 368

ಆ ದಧಿಕ್ರಾಃ ಎಂಬ ಋಕ್ಕಿನ ವಿಶೇಷವಿನಿಯೋಗ 381

೩೯. **ಆಶುಂ ದಧಿಕ್ರಾಂ ಎಂಬ ಮೂವತ್ತೊಂಭತ್ತನೆಯ ಸೂಕ್ತವು**—

ಸೂಕ್ತದ ವಿನಿಯೋಗ ಇತ್ಯಾದಿ 382

೪೦. **ದಧಿಕ್ರಾವ್ಣ ಇದು ಎಂಬ ನಲವತ್ತನೆಯ ಸೂಕ್ತವು**—

ಸೂಕ್ತದ ವಿನಿಯೋಗ, ಋಷಿದೇವತಾಛಂದಸ್ಸುಗಳು 389

ಹಂಸಃ ಶುಚಿಷತ್ ಎಂಬ ಋಕ್ಕಿನ ವಿಶೇಷವಿನಿಯೋಗ 396

ಈ ಋಕ್ಕಿನ ಪ್ರತಿಪದಕ್ಕೂ ವಿಶೇಷಾರ್ಥವಿವರಣೆ--ಈ ಋಕ್ಕಿಗೆ **ಅಗ್ನಿ** ಮತ್ತು ಆದಿತ್ಯಪರವಾದ ಅರ್ಥವಿವರಣೆ ಇತ್ಯಾದಿ 397

ಐತರೇಯ ಬ್ರಾಹ್ಮಣದಲ್ಲಿ ಈ ಋಕ್ಕನ್ನು **ಹಂಸವತೀ** ಋಕ್ಕೆಂದು ಕರೆದು ಇದರ ಅರ್ಥ ವಿವರಣೆ ಮಾಡಿರುವುದರ ವಿಮರ್ಶೆ 400

ಈ ಋಕ್ಕಿಗೆ ಯಾಸ್ಕರ ನಿರ್ವಚನ 402

ಈ ಋಕ್ಕಿನ ವಿಷಯದಲ್ಲಿ Wilson ಎಂಬ ಆಂಗ್ಲಪಂಡಿತನ ಅಭಿಪ್ರಾಯ ಇತ್ಯಾದಿ 403

ಪುಟಸಂಖ್ಯೆ

೪೧. **ಇಂದ್ರಾ ಕೋ ವಾಂ ಎಂಬ ನಲವತ್ತೊಂದನೆಯ ಸೂಕ್ತವು—**

ಸೂಕ್ತದ ವಿನಿಯೋಗ ಇತ್ಯಾದಿ 405

೪೨. **ಮಮ ದ್ವಿತಾ ರಾಷ್ಟ್ರಂ ಎಂಬ ನಲವತ್ತೆರಡನೆಯ ಸೂಕ್ತವು--**

ಸೂಕ್ತದ ವಿನಿಯೋಗ ಇತ್ಯಾದಿ 419

ತ್ರಸದಸ್ಯುರಾಜನ ಆತ್ಮಪ್ರಶಂಸೆ–ಇತ್ಯಾದಿ 421

ತ್ರಸದಸ್ಯುವಿನ ಜನ್ಮವೃತ್ತಾಂತವು 430

೪೩. **ಕ ಉ ಶ್ರವತ್ಕತಮಃ ಎಂಬ ನಲವತ್ತಮೂರನೆಯ ಸೂಕ್ತವು—**

ಸೂಕ್ತದ ಪೀಠಿಕೆ—ಪುರುಮಿಳ್ಳ ಮತ್ತು ಅಜಮಿಳ್ಳರ ವಿಷಯ 433

ಶ್ವಾವಾಶ್ವನ ವಿಷಯ ಇತ್ಯಾದಿ 436

ಸೂಕ್ತದ ವಿನಿಯೋಗ ಇತ್ಯಾದಿ 438

೪೪. **ತಂ ವಾಂ ರಥಂ ಎಂಬ ನಲವತ್ತನಾಲ್ಕನೆಯ ಸೂಕ್ತವು—**

ಸೂಕ್ತದ ವಿನಿಯೋಗ ಇತ್ಯಾದಿ 448

೪೫ **ಏಷ ಸ್ಯ ಭಾನುಃ ಎಂಬ ನಲವತ್ತೈದನೆಯ ಸೂಕ್ತವು—**

ಸೂಕ್ತದ ವಿನಿಯೋಗ ಇತ್ಯಾದಿ 457

ಮೂರು ವಿಧವಾದ ಅನ್ನಗಳು 459

೪೬. **ಆಗ್ಮಂ ಪಿಬಾ ಮಧೂನಾಂ ಎಂಬ ನಲವತ್ತಾರನೆಯ ಸೂಕ್ತವು—**

ಸೂಕ್ತದ ವಿನಿಯೋಗ ಇತ್ಯಾದಿ 467

ವಾಯುವೇ ದೇವತೆಗಳಲ್ಲೆಲ್ಲಾ ಮೊದಲು ಸೋಮಪಾನಾರ್ಹನೆಂಬ ವಿಚಾರ 469

ಈ ವಿಷಯದಲ್ಲಿ ಐತರೇಯಬ್ರಾಹ್ಮಣದಲ್ಲಿರುವ ಪೂರ್ವೇತಿಹಾಸ 469

೪೭. **ವಾಯೋ ಶುಕ್ರೋ ಅಯಾಮಿ ಎಂಬ ನಲವತ್ತೇಳನೆಯ ಸೂಕ್ತ—**

ಸೂಕ್ತದ ವಿನಿಯೋಗ ಇತ್ಯಾದಿ 478

೪೮. **ವಿಹಿ ಹೋತ್ರಾ ಅವೀತಾ ಎಂಬ ನಲವತ್ತೆಂಟನೆಯ ಸೂಕ್ತ—**

ಸೂಕ್ತದ ವಿನಿಯೋಗ ಇತ್ಯಾದಿ 483

೪೯. **ಇದಂ ವಾಮಾಸ್ಯೇ ಎಂಬ ನಲವತ್ತೊಂಭತ್ತನೆಯ ಸೂಕ್ತವು—**

ಸೂಕ್ತದ ವಿನಿಯೋಗ, ಋಷಿದೇವತಾಛಂದಸ್ಸುಗಳು 489

೫೦. **ಯಸ್ತಸ್ತಂಭ ಸಹಸಾ ಎಂಬ ಐವತ್ತನೆಯ ಸೂಕ್ತವು—**

ಸೂಕ್ತದ ಪೀಠಿಕೆ—**ಬೃಹಸ್ಪತಿ**ದೇವತೆಯ ವಿಷಯವಿಮರ್ಶೆ 495

ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು 500

ಪುಟಸಂಖ್ಯೆ

ವಿವಾ ಪಿತ್ರೇ ಎಂಬ ಋಕ್ಕಿನ ವಿಶೇಷವಿನಿಯೋಗ 508

ಪುರೋಹಿತಪ್ರಶಂಸಾ—ಪುರೋಹಿತನ ಸ್ಥಾನಮಾನಗಳು (ಇತರೇಯಬ್ರಾಹ್ಮಣದಲ್ಲಿರುವಂತೆ) 510

ಪುರೋಹಿತನ ಸಹಾಯದಿಂದ ಯಜ್ಞಾದಿಗಳನ್ನು ಮಾಡುವ ರಾಜನನ್ನು ಅಗ್ನಿಯು ರಕ್ಷಿಸುವನು 514

ಪುರೋಹಿತನ ಯೋಗ್ಯತೆ ಇತ್ಯಾದಿ—ನೂರುವಿಧ ಪುರೋಹಿತರು ಪುರೋಹಿತಸ್ಥಾನಕ್ಕೆ ಇರುವ ಅರ್ಹತೆ—ಪುರೋಹಿತನನ್ನು ನೇಮಿಸಿಕೊಳ್ಳುವ ಕ್ರಮ ಇತ್ಯಾದಿ 515

ಏಳನೆಯ ಅಧ್ಯಾಯವು ಸಮಾಪ್ತವು

ಮೂರನೆಯ ಅಷ್ಟಕದಲ್ಲಿ ಎಂಟನೆಯ ಅಧ್ಯಾಯವು

೫೧. ಇದಮು ತ್ಯತ್ಪುರುತಮಂ ಎಂಬ ಐವತ್ತೊಂದನೆಯ ಸೂಕ್ತವು—

ಸೂಕ್ತದ ಪೀಠಿಕೆ—**ಉಷೋದೇವತೆಯ** ವಿಷಯ 525

ಉಷೋದೇವತೆಯ ಸ್ವರೂಪವನ್ನು ವಿವರಿಸುವ ೧೬ ಶಬ್ದಗಳ ಅರ್ಥವಿವರಣೆ ಇತ್ಯಾದಿ 526

ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು 529

ನವಗ್ವ, ದಶಗ್ವ ಎಂಬ ಶಬ್ದಗಳ ಅರ್ಥವಿವರಣೆ 534

ಉಷಃಕಾಲದ ವರ್ಣನೆ 537

೫೨. ಪ್ರತಿ ಷ್ಯಾ ಸೂನರೀ ಎಂಬ ಐವತ್ತೆರಡನೆಯ ಸೂಕ್ತವು—

ಸೂಕ್ತದ ವಿನಿಯೋಗ ಇತ್ಯಾದಿ 545

೫೩ ತದ್ದೇವಸ್ಯ ಸವಿತುಃ ಎಂಬ ಐವತ್ತಮೂರನೆಯ ಸೂಕ್ತವು—

ಸೂಕ್ತದ ವಿನಿಯೋಗ ಇತ್ಯಾದಿ 552

೫೪. ಅಭೂದ್ದೇವಃ ಎಂಬ ಐವತ್ತನಾಲ್ಕನೆಯ ಸೂಕ್ತವು—

ಸೂಕ್ತದ ಪೀಠಿಕೆ—ಸವಿತೃದೇವತೆಯ ಸ್ವರೂಪ ಮತ್ತು ವಿಸ್ತಾರವಾದ ವಿವರಣೆ ಇತ್ಯಾದಿ 562

ಸವಿತೃಶಬ್ದದ ನಿರ್ವಚನವನ್ನು ತಿಳಿಸುವ ಶ್ರುತಿವಾಕ್ಯಗಳು 565

ಸವಿತೃವಿಗೂ ಸೂರ್ಯನಿಗೂ ತಾದಾತ್ಮ್ಯ ಮತ್ತು ಭಿನ್ನತೆಯನ್ನು ತೋರಿಸುವ ಶ್ರುತಿವಾಕ್ಯಗಳು 568

ಸೂಕ್ತದ ವಿನಿಯೋಗ ಇತ್ಯಾದಿ 570

೫೫. ಕೋ ನಸ್ತ್ರಾತಾ ಎಂಬ ಐವತ್ತೈದನೆಯ ಸೂಕ್ತವು—

ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು 579

ಅದಿತಿಯೆಂಬ ದೇವತೆಯ ವಿಷಯ—ಅದಿತಿಯ ಸ್ವರೂಪವನ್ನು ವರ್ಣಿಸುವ ವಿಶೇಷಣಗಳು 588

ಅದಿತಿಯ ಮೂಲರೂಪದ ವಿಷಯದಲ್ಲಿ Roth ಮತ್ತು Max-Muller ಎಂಬ ಪಂಡಿತರು ತಿಳಿಸಿರುವ ಅಭಿಪ್ರಾಯಗಳು 389

ಪುಟಸಂಖ್ಯೆ

ಅದಿತಿಯು ಆದಿತ್ಯರ ಮಾತೆ ಎಂದು ವರ್ಣಿಸಿರುವ ಪ್ರಕರಣಗಳು 590

ಅದಿತಿಗೂ ಅಂತರಿಕ್ಷಕ್ಕೂ ತಾದಾತ್ಮ್ಯಭಾವವಿದೆಯೇ 591

ಅದಿತಿಯು ಪೃಥ್ವಿಗಿಂತಲೂ ಬೇರೆಯಾದ ದೇವತೆ ಎಂಬುದಕ್ಕೆ ಆಧಾರಗಳು 592

ಅದಿತಿ ಮತ್ತು ದಿತಿ 594

ವಿಶ್ವಪ್ರಕೃತಿಯನ್ನು ಪ್ರತಿಬಿಂಬಿಸುವ ದೇವತಾತತ್ತ್ವವೇ ಅದಿತಿಯು 595

ಅದಿತಿಯು ಪಾಪವನ್ನು ಕ್ಷಮಿಸತಕ್ಕ ದೇವತೆ 596

ವಿಶ್ವನಿಯಾಮಕಳಾದ ಅದಿತಿಯೂ ಸಹ ಇತರ ಶಕ್ತಿಗಳಿಂದ ನಿಯಂತ್ರಿತಳಾದವಳು ಎಂದು ವರ್ಣಿಸುವ ಕೆಲವು ಪ್ರಕರಣಗಳು 598

ಋಗ್ವೇದ ಹತ್ತನೆಯ ಮಂಡಲದ ೭೨ನೆಯ ಸೂಕ್ತವನ್ನಲ್ಲಿ ವರ್ಣಿತವಾಗಿರುವಂತೆ ವಿಶ್ವಸೃಷ್ಟಿಯ ಕ್ರಮ—**ಅದಿತಿ, ದಕ್ಷ, ಆದಿತ್ಯರು,** ಮತ್ತು ಇತರ ದೇವತೆಗಳ ಉತ್ಪತ್ತಿಸ್ವರೂಪ 598

೫೬. **ಮಹೀ ದ್ಯಾವಾಪೃಥಿವೀ ಎಂಬ ಐವತ್ತಾರನೆಯ ಸೂಕ್ತವು—**

ಸೂಕ್ತದ ಪೀಠಿಕೆ—**ದ್ಯಾವಾಪೃಥಿವಿಗಳ** ಸ್ವರೂಪವರ್ಣನೆ 606

ದ್ಯಾವಾಪೃಥಿವಿಗಳು ವಿಶ್ವಕ್ಕೆಲ್ಲಾ ಮಾತಾಪಿತೃಗಳು ಎಂದು ವರ್ಣಿಸಿರುವ ಶ್ರುತಿವಾಕ್ಯಗಳು 607

ದ್ಯಾವಾಪೃಥಿವಿಯ ಉತ್ಪತ್ತಿಕ್ರಮವನ್ನು ವಿವರಿಸುವ ಪ್ರಕರಣಗಳು 609

ದ್ಯಾವಾಪೃಥಿವಿಗಳ ಉತ್ಪತ್ತಿವಿಷಯದಲ್ಲಿ ಕೆಲವು ಕಲ್ಪನೆಗಳು 611

ಸೂಕ್ತದ ವಿನಿಯೋಗ ಮತ್ತು ಋಷಿದೇವತಾ ಛಂದಸ್ಸುಗಳು 612

೫೭ **ಕ್ಷೇತ್ರಸ್ಯ ಪತಿನಾ ವಯಂ ಎಂಬ ಐವತ್ತೇಳನಯ ಸೂಕ್ತವು—**

ಸೂಕ್ತದ ವಿನಿಯೋಗ ಇತ್ಯಾದಿ 621

ಕ್ಷೇತ್ರಪತಿದೇವತೆಯ ವಿಷಯ 623

ಕ್ಷೇತ್ರಸ್ಯ ಪತಿನಾ ಎಂಬ ಋಕ್ಕಿಗೆ ಯಾಸ್ಕರ ನಿರ್ವಚನವು 624

ಕ್ಷೇತ್ರಪತಿಯು ಇಂದ್ರ ಅಥವಾ ಅಗ್ನಿಯ ವಿಭೂತಿವಿಶೇಷವೆಂಬ ವಿಷಯ 627

ಶುನ ಮತ್ತು **ಶುನಾಸೀರ** ದೇವತೆಗಳು 631

ಶುನಾಸೀರೀಯ ಹವಿರ್ಧಾನ ವೆಂಬ ಕರ್ಮದ ವಿಷಯ 634

ಸೀತಾ ಎಂಬ ದೇವತೆಯ ವಿಷಯ 639

೫೮. **ಸಮುದ್ರಾದೂರ್ಮಿಃ ಎಂಬ ಐವತ್ತೆಂಟನೆಯ ಸೂಕ್ತವು—**

ಸೂಕ್ತದ ವಿನಿಯೋಗ ಇತ್ಯಾದಿ 643

ಈ ಋಕ್ಕಿಗೆ ಪಾರ್ಥಿವಾಗ್ನಿ, ವೈದ್ಯುತಾಗ್ನಿ, ಘೃತ, ಆಪಃ, ಮೊದಲಾದ ದೇವತೆಗಳ ಪರವಾದ ವಿವರಣೆಯು 645

ಈ ಋಕ್ಕಿಗೆ ಯಾಸ್ಕರ ನಿರ್ವಚನವು 646

ಚತ್ವಾರಿಶೃಂಗಾಃ ಎಂಬ ಋಕ್ಕಿಗೆ ಯಾಸ್ಕರ ನಿರ್ವಚನವು 651

ಪುಟಸಂಖ್ಯೆ

ಚತ್ವಾರಿಶೃಂಗಾಃ ಎಂಬ ಋಕ್ಕಿಗೆ ಅಗ್ನಿ ಪರವಾದ ಅರ್ಥವಿವರಣೆ 651

ಈ ಋಕ್ಕಿಗೆ ಸೂರ್ಯನ ಪರವಾದ ಅರ್ಥವಿವರಣೆ 653

ಅಭಿಪ್ರವಂತ ಎಂಬ ಋಕ್ಕಿಗೆ ಯಾಸ್ಕರು ಹೇಳಿರುವ ನಿರ್ವಚನವು 661

ಧಾಮಂತೇ ವಿಶ್ವಂ ಎಂಬ ಋಕ್ಕಿನ ವಿಶೇಷಾರ್ಥವಿವರಣೆ ಇತ್ಯಾದಿ 665

ಇಲ್ಲಿಗೆ ನಾಲ್ಕನೆಯ ಮಂಡಲವು ಸಮಾಪ್ತವು

ಐದನೆಯ ಮಂಡಲವು

ಪೀಠಿಕೆ--ಮಂಡಲದ್ರಷ್ಟೃವಾದ **ಆತ್ರಿಋಷಿಯ** ಪರಿಚಯ 669

ಐದನೆಯ ಮಂಡಲದ ಋಷಿಗಳು ಮತ್ತು ಅವರಿಂದ ದೃಷ್ಟವಾದ ಋಕ್ಕುಗಳ ವಿವರಣೆ ಇತ್ಯಾದಿ 670

ಅತ್ರಿಋಷಿಯ ಪರಿಚಯ 674

ಈ ಮಂಡಲದ ಮೊದಲನೆಯ ಸೂಕ್ತದ ದ್ರಷ್ಟೃಗಳಾದ **ಬುಧ, ಗವಿಷ್ಠಿರ** ಎಂಬ ಋಷಿಗಳ ಪರಿಚಯ 682

ಅಗ್ನಿದೇವತೆಯ ಸ್ವರೂಪ ಮತ್ತು ವಿಶೇಷವರ್ಣನೆ 683

ಅಗ್ನಿಯ ಕರ್ಮಗಳು 683

ಅಗ್ನಿಯು ನೀರಿನಲ್ಲಿ ಅವಿತುಕೊಂಡಿದ್ದಾಗ ದೇವತೆಗಳು ಅವನನ್ನು ಹುಡುಕಿಕೊಂಡು ಹೋಗಿ ಅವನೊಡನೆ ಸಂಭಾಷಣೆ ನಡೆಸಿದ ವಿವರ (ಋಗ್ವೇದದಲ್ಲಿರುವಂತೆ ಋ ಸಂ ೧೦-೫೧ ನೇ ಸೂಕ್ತ) 687

ಅದೇ ವಿಷಯವರ್ಣನೆಯು—ತೈತ್ತಿರೀಯ (ಯಜುರ್ವೇದ) ಸಂಹಿತೆಯಲ್ಲಿರುವಂತೆ 688

ಅಗ್ನಿಯ ಉತ್ಪತ್ತಿ ಮತ್ತು ಮೂರು ಸ್ಥಾನಗಳು 690

ಅಗ್ನಿಗೆ ಇರುವ **ದ್ವಿಜನ್ಮಾ, ಭೂರಿಜನ್ಮಾ** ಇತ್ಯಾದಿ ವಿಶೇಷಣಗಳ ವಿವರಣೆ 696

ಅಗ್ನಿಯ ಸ್ವಾಭಾವಿಕ ಗುಣಗಳನ್ನು ವರ್ಣಿಸುವ ವಿಶೇಷಣಗಳು 698

ಅಗ್ನಿಯ ದಿವ್ಯಕರ್ಮಗಳು 701

ಅಗ್ನಿಯು ತನ್ನ ಭಕ್ತರಲ್ಲಿಟ್ಟಿರುವ ಸಾಕ್ಷಾತ್ಸಂಬಂಧ 704

ಅಗ್ನಿಗೂ ಇಂದ್ರನಿಗೂ ಇರುವ ಸಾಹಚರ್ಯ ಇತ್ಯಾದಿ 708

೧. **ಅಚೋಧ್ಯಗ್ನಿಃ** ಎಂಬ **ಮೊದಲನೆಯ ಸೂಕ್ತವು**--

ಸೂಕ್ತದ ವಿನಿಯೋಗ ಇತ್ಯಾದಿ 709

ದಮೂನಾಃ ಎಂಬ ಶಬ್ದಕ್ಕೆ ಯಾಸ್ಕರ ವಿವರಣೆ 723

ಅತಿಥಿ ಶಬ್ದಾರ್ಥ 725

ಅಗ್ನಿಯು **ಯುವಕ ಯವಿಷ್ಠ** ಎಂಬ ಹಸರಿನಿಂದ ಕರೆಯಲ್ಪಡುವ ವಿಚಾರವಾಗಿ ವಿವರಣೆ 727

೨. **ಕುಮಾರಂ ಮಾತಾ ಯುವತಿಃ** ಎಂಬ ಎರಡನೆಯ **ಸೂಕ್ತವು**—

ಸೂಕ್ತದ ಪೀಠಿಕೆ—ಕುಮಾರಃ, ವೃಶಃ, ಜಾನಃ ಎಂಬ ಈ ಸೂಕ್ತದ್ರಷ್ಟೃಗಳಾದ ಋಷಿಗಳ ಪರಿಚಯ 730

ಪುಟಸಂಖ್ಯೆ

ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು 733

ಕುಮಾರಂ ಮಾತಾ ಯುವತಿಃ ಎಂಬ ಋಕ್ಕಿನಲ್ಲಿ ಹೇಳಿರುವ ಕಥಾಸಂದರ್ಭದಲ್ಲಿ
ಸಾಮನೇದದ ಶಾಟ್ಯಾಯನಬ್ರಾಹ್ಮಣದಲ್ಲಿ ಹೇಳಿರುವ ಪೂರ್ವೇತಿಹಾಸವಿವರಣೆಯು 736

ಅಗ್ನಿಗೆ **ಕುಮಾರ**ನೆಂಬ ಹೆಸರು ಹೇಗೆ ಬಂದಿತೆಂಬ ವಿಚಾರ 739

ಈ ಋಕ್ಕಿಗೆ ವಿಲ್ಸನ್ ಪಂಡಿತನ ಅಭಿಪ್ರಾಯ 741

ಉಷಸ್ಸು ಅಗ್ನಿಜನನಿಯೆಂಬ ವಿಚಾರ 744

ಅಗ್ನಿಯು **ಇಂದ್ರಶಬ್ದವಾಚ್ಯ**ನೆಂಬ ವಿಷಯಸಮರ್ಥನೆ ಇತ್ಯಾದಿ 747

ಸನುತಃ ಎಂಬ ಶಬ್ದದ ಅರ್ಥವಿವರಣೆ ಇತ್ಯಾದಿ 750

ಅರಣಃ ಎಂಬ ಶಬ್ದದ ಅರ್ಥವಿಮರ್ಶೆ 752

ವೃಶಋಷಿಯು ಅಗ್ನಿಯನ್ನು ಪ್ರಾರ್ಥಿಸಿದ ಸನ್ನಿವೇಶ 755

ಶುನಃಶೇಪೋಪಾಖ್ಯಾನದ ವಿಷಯದಲ್ಲಿ (ನರಮೇಧಯಜ್ಞದ ವಿಷಯದಲ್ಲಿ) ಕೆಲವು ಆಂಗ್ಲ
ಪಂಡಿತರು ಪಡುವ ಅಭಿಪ್ರಾಯವು ಸರಿಯಾದುದಲ್ಲ ಎಂಬ ವಿಷಯವಿಮರ್ಶೆಯು 757

೩. **ತ್ವಮಗ್ನೇ ವರುಣೋ ಜಾಯಸೇ ಎಂಬ ಮೂರನೆಯ ಸೂಕ್ತವು**—

ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು 769

ಅಗ್ನಿಯು ಇತರ ಎಲ್ಲಾ ದೇವತೆಗಳ ಸ್ವರೂಪನೆಂಬ ವಿಷಯ 770

ತ್ವಮರ್ಯಮಾ ಭವಸಿ ಎಂಬ ಋಕ್ಕಿನ ವಿಶೇಷವಿನಿಯೋಗ 772

ಅಗ್ನಿಯನ್ನು ಪಿತೃಸ್ವತ್ರಭಾವದಿಂದ ಸ್ತುತಿಸಿರುವ ವಿಷಯಸಮರ್ಥನೆ 784

೪. **ತ್ವಾಮಗ್ನೇ ವಸುಪತಿಂ ಎಂಬ ನಾಲ್ಕನೆಯ ಸೂಕ್ತವು**—

ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು 789

ಹವ್ಯವಾಳಗ್ನಿರಜರಃ ಎಂಬ ಋಕ್ಕಿನ ವಿಶೇಷವಿನಿಯೋಗ 792

ಇಳಾಶಬ್ದದ ನಾನಾರ್ಥಗಳು 794

ಜುಷ್ಟೋ ದಮೂನಾ ಎಂಬ ಋಕ್ಕಿನ ವಿಶೇಷವಿನಿಯೋಗ 796

ತ್ರಿಷಧಸ್ಥಶಬ್ದದ ಅರ್ಥವಿವರಣ ಇತ್ಯಾದಿ 799

ಯಸ್ತ್ವಾ ಹೃದಾ ಎಂಬ ಋಕ್ಕಿನ ವಿಶೇಷವಿನಿಯೋಗ 803

ಉ ಎಂಬ ಶಬ್ದದ ಅರ್ಥವಿವರಣೆ ಇತ್ಯಾದಿ 804

ಸ್ವಸ್ತಿ ಶಬ್ದಾರ್ಥವಿವರಣೆ 805

೫. **ಸುಸಮಿದ್ಧಾಯ ಎಂಬ ಐದನೆಯ ಸೂಕ್ತವು**—

ಸೂಕ್ತದ ವಿನಿಯೋಗ ಇತ್ಯಾದಿ 805

ಯತ್ರ ನೇತ್ಥ ವನಸ್ಪತೇ ಎಂಬ ಋಕ್ಕಿನ ವಿಶೇಷ ವಿನಿಯೋಗ 815

ಪುಟಸಂಖ್ಯೆ

೬. **ಅಗ್ನಿಂ ತಂ ಮನ್ಯೇ ಎಂಬ ಆರನೆಯ ಸೂಕ್ತವು—**

ಸೂಕ್ತದ ವಿನಿಯೋಗ ಇತ್ಯಾದಿ 816

ಅ ತೇ ಅಗ್ನ ಎಂಬ ಋಕ್ಕಿನ ವಿಶೇಷ ವಿನಿಯೋಗ 822

ಉಭೇ ಸುಶ್ಚಂದ್ರೆ ಎಂಬ ಋಕ್ಕಿನ ವಿಶೇಷ ವಿನಿಯೋಗ 828

೭. **ಸಖಾಯಃ ಸಂ ವಃ ಎಂಬ ಏಳನೆಯ ಸೂಕ್ತವು—**

ಸೂಕ್ತದ ವಿನಿಯೋಗ ಮತ್ತು ಋಷಿದೇವತಾ ಛಂದಸ್ಸುಗಳು 830

೮. **ತ್ವಾಮಗ್ನ ಯುತಾಯವಃ ಎಂಬ ಎಂಟನೆಯ ಸೂಕ್ತವು—**

ಸೂಕ್ತದ ವಿನಿಯೋಗ ಮತ್ತು ಋಷಿದೇವತಾ ಛಂದಸ್ಸುಗಳು 841

ತ್ವಾಮಗ್ನೇ ಮಾನುಷೀಃ ಎಂಬ ಋಕ್ಕಿನ ವಿಶೇಷ ವಿನಿಯೋಗ 845

ದೇವತೆಗಳು ಅಗ್ನಿಯನ್ನು ತಮ್ಮ ದೂತನನ್ನಾಗಿ ಮಾಡಿಕೊಂಡರೆಂಬ ವಿಚಾರ—
ಈ ವಿಷಯದಲ್ಲಿ ದೇವತೆಗಳಿಗೆ ಹವಿಸ್ಸನ್ನು ವಹಿಸುವ ಅಗ್ನಿಗೆ **ಹವ್ಯವಾಹನ** ನೆಂದೂ, ಪಿತೃಗಳಿಗೆ ಕವ್ಯವನ್ನು ವಹಿಸುವ ಅಗ್ನಿಗೆ **ಕವ್ಯವಾಹನ**ನೆಂದೂ, ಯಜ್ಞಾದಿ ಕರ್ಮಗಳನ್ನು ರಾಕ್ಷಸರ ಬಾಧೆಯಿಂದ ಕಾಪಾಡುವ ಅಗ್ನಿಗೆ ಸಹರಕ್ಷ (ರಕ್ಷೋಹಾಗ್ನಿ) ಎಂದೂ ಅಗ್ನಿಯ ಮೂರುವಿಧ ಹೆಸರುಗಳು 849

ವಿಷಯಾನುಕ್ರಮಣಿಕೆ ಸಮಾಪ್ತವು

॥ ಶ್ರೀಃ ॥

॥ ಶ್ರೀ ಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯಾ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

ಸಾಯಣಭಾಷ್ಯಸಹಿತಾ

ಋಗ್ವೇದಸಂಹಿತಾ

(ಕರ್ನಾಟಕ ಭಾಷಾರ್ಥಾನುವಾದ ವಿವರಣೆ ಸಹಿತವಾಗಿ)

ಭಾಗ—೧೮

॥ ತೃತೀಯಾಷ್ಟಕೇ ಷಷ್ಠೋಽಧ್ಯಾಯಃ ॥

ಮೂರನೆಯ ಅಷ್ಟಕದಲ್ಲಿ ಆರನೆಯ ಅಧ್ಯಾಯವು

॥ ಚತುರ್ಥಂ ಮಂಡಲಂ ॥

ನಾಲ್ಕನೆಯ ಮಂಡಲದಲ್ಲಿ ಹತ್ತೊಂಭತ್ತನೆಯ ಸೂಕ್ತವು.

ಪೀಠಿಕೆ

ಈ ಸೂಕ್ತವು ವಾಮದೇವಋಷಿದೃಷ್ಟವಾದುದು. ವಾಮದೇವಋಷಿಯ ವಿಷಯವನ್ನು ನಾವು ಈ ಮಂಡಲದ ಪ್ರಾರಂಭದಲ್ಲಿ ಎಂದರೆ ೧೭ ನೆಯ ಭಾಗದಲ್ಲಿ ಸೂಕ್ಷ್ಮವಾಗಿ ವಿವರಿಸಿರುವೆವು. ಈ ವಾಮದೇವನು ಗೋತಮಋಷಿಯ ಪುತ್ರನು. ಈ ನಾಲ್ಕನೆಯ ಮಂಡಲದ ಸೂಕ್ತಗಳು ೧–೭ (ಒಟ್ಟು ಋಕ್ಕುಗಳು ೨೦೬), ೧೮ ನೆಯ ಸೂಕ್ತದಲ್ಲಿ ೨–೩॥ ಮತ್ತು ೮–೧೩ (ಒಟ್ಟು ೮॥ ಎಂಟುವರೆ ಋಕ್ಕುಗಳು), ೧೯–೪೧ ಸೂಕ್ತಗಳು (ಒಟ್ಟು ೨೩೯ ಋಕ್ಕುಗಳು), ೪೫–೫೮ (ಒಟ್ಟು ೧೦೭ ಋಕ್ಕುಗಳು) ಇವೆಲ್ಲವೂ ಸೇರಿ ಆಗುವ ಒಟ್ಟು ೫೬೦॥ ಐನೂರ ಅರವತ್ತೂವರೆ ಋಕ್ಕುಗಳಿಗೆ ಋಷಿಯಾಗಿರುವನು. ಹಿಂದಿನ ಭಾಗದಲ್ಲಿ ಈ ಮಂಡಲದ ೧೮ ಸೂಕ್ತಗಳು ಮುಗಿದು ಈಗ ಈ ಭಾಗವು ೧೯ ನೆಯ ಸೂಕ್ತದಿಂದ ಪ್ರಾರಂಭವಾಗಿರುವುದು.

॥ ಸಾಯಣಭಾಷ್ಯಂ ॥

ಚತುರ್ಥೇ ಮಂಡಲೇ ದ್ವಿತೀಯೋನುವಾಕೇ೭ಷ್ಟ ಸೂಕ್ತಾನಿ ವ್ಯಾಖ್ಯಾತಾನಿ । ಏವಾ ತ್ವಾಮಿಂದ್ರೇತ್ಯೇಕಾದಶರ್ಚಂ ನವಮಂ ಸೂಕ್ತಂ । ತಸ್ಯ ಮಂಡಲಾದಿಪರಿಭಾಷಯಾ ವಾಮದೇವ ಋಷಿಃ । ಅನಾದೇಶಪರಿಭಾಷಯಾ ತ್ರಿಷ್ಟುಪ್ ಛಂದಃ । ಇಂದ್ರೋ ದೇವತಾ । ತಥಾ ಚಾನುಕ್ರಾಂತಂ । ಏವೈಕಾದಶೇತಿ ॥ ಅಗ್ನಿಷ್ಟೋಮೇ ಮಾಧ್ಯಂದಿನಸವನೇ ಮೈತ್ರಾವರುಣಶಸ್ತ್ರ ಇದಂ ಸೂಕ್ತಂ । ಸೂತ್ರ್ಯತೇ ಹಿ । ಏವಾ ತ್ವಾಮಿಂದ್ರೋಶನ್ನು ಹು ಣಃ ಸುಮನಾ ಉಪಾಕ ಇತಿ ಯಾಜ್ಯಾ । ಆ. ೫-೧೬ । ಇತಿ ॥ ಪೃಷ್ಠ್ಯಾಭಿಪ್ಲವಷಡಹಯೋಃ ಪ್ರಥಮೇ೭ಹನಿ ಮೈತ್ರಾವರುಣಶಸ್ತ್ರೇ೭ಹೀನಸೂಕ್ತಂ ತತ್ಸ್ಥಾನೇ ತ್ರೀಣಿ ಸಂಪಾತಸೂಕ್ತಾನಿ । ತತ್ರೇದಂ ಪ್ರಥಮಂ ಸೂಕ್ತಂ । ಸೂತ್ರಿತಂ ಚ । ಏವಾ ತ್ವಾಮಿಂದ್ರ ಯನ್ನ ಇಂದ್ರಃ । ಆ. ೭-೫ । ಇತಿ ॥

ಅನುವಾದವು—ಹಿಂದಿನ ಭಾಗದಲ್ಲಿ ಈ ನಾಲ್ಕನೆಯ ಮಂಡಲದ ಎರಡನೆಯ ಅನುವಾಕದಲ್ಲಿ ಎಂಟು ಸೂಕ್ತಗಳನ್ನು ವಿವರಿಸಿದ್ದಾಯಿತು ಈಗ ವಿವರಿಸುವ **ಏವಾ ತ್ವಾಮಿಂದ್ರ** ಎಂಬ ಸೂಕ್ತವು ಎರಡನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು ಈ ಸೂಕ್ತಕ್ಕೆ ಮಂಡಲದ್ರಷ್ಟ್ರವಾದ ವಾಮದೇವನೇ ಋಷಿಯು; ತ್ರಿಷ್ಟುಪ್ ಛಂದಸ್ಸು, ಇಂದ್ರನು ದೇವತೆಯು ಅನುಕ್ರಮಣಿಕೆಯಲ್ಲಿ **ಏವೈಕಾದಶ** ಎಂದು ಮೊದಲಾಗಿ ಹೇಳಿರುವುದು ಅಗ್ನಿಷ್ಟೋಮ ಯಾಗದಲ್ಲಿ ಮಾಧ್ಯಂದಿನಸವನಕಾಲದಲ್ಲಿ ವೈತ್ರಾವರುಣಶಸ್ತ್ರಮಂತ್ರಪರನಕ್ಕಾಗಿ ಈ ಸೂಕ್ತದ ವಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಏವಾ ತ್ವಾಮಿಂದ್ರೋಶನ್ನು ಹು ಣಃ ಸುಮನಾ ಉಪಾಕ ಇತಿ ಯಾಜ್ಯಾ** ಎಂದು ವಿನೃತವಾಗಿರುವುದು (ಆ ೫-೧೬), ಪೃಷ್ಠ್ಯ ಮತ್ತು ಅಭಿಪ್ಲವ ಷಡಹವೆಂಬ ಯಾಗಗಳ ಮೊದಲನೆಯ ದಿವಸ ವೈತ್ರಾವರುಣಶಸ್ತ್ರಮಂತ್ರಗಳನ್ನು ಪರಿಸುವಾಗ ಅಹೀನಸೂಕ್ತವನ್ನು ಪರಿಸುವುದಕ್ಕೆ ಪ್ರತಿಯಾಗಿ ಮೂರು ಸಂಪಾತ ಸೂಕ್ತಗಳನ್ನು ಪರಿಸಬೇಕು ಅವುಗಳಲ್ಲಿ ಈ ಸೂಕ್ತವು ಮೊದಲನೆಯದು. ಈ ವಿಷಯವು ಆಶ್ವಲಾಯನಶ್ರೌತಸೂತ್ರದ **ಏವಾ ತ್ವಾಮಿಂದ್ರ ಯನ್ನ ಇಂದ್ರಃ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ ೭-೫)

ಸೂಕ್ತ—೧೯

ಮಂಡಲ—೪ ॥ ಅನುವಾಕ—೨ ॥ ಸೂಕ್ತ—೧೯ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ—೧, ೨ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ--೧೧ ॥
॥ ಋಷಿಃ—ವಾಮದೇವಃ ॥
॥ ದೇವತಾ—ಇಂದ್ರಃ ॥
॥ ಛಂದಃ--ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಏವಾ ತ್ವಾಮಿಂದ್ರ ವಜ್ರಿನ್ನತ್ರ ವಿಶ್ವೇ ದೇವಾಸಃ ಸುಹವಾಸ ಊಮಾಃ ।
ಮಹಾಮುಭೇ ರೋದಸೀ ವೃದ್ಧವೃಷ್ಣಂ ನಿರೇಕಮಿದ್ಭೃಣತೇ ವೃತ್ರಹತ್ಯೇ ॥

॥ ಪದಪಾಠಃ ॥

ಏವ । ತ್ವಾಂ । ಇಂದ್ರ । ವಜ್ರಿನ್ । ಅತ್ರ । ವಿಶ್ವೇ । ದೇವಾಸಃ । ಸುಽಹವಾಸಃ । ಊಮಾಃ ।
ಮಹಾಂ । ಉಭೇ ಇತಿ । ರೋದಸೀ ಇತಿ । ವೃದ್ಧಂ । ಋಷ್ವಂ । ನಿಃ । ಏಕಂ । ಇತ್ । ವೃಣತೇ ।
ವೃತ್ರಽಹತ್ಯೇ ॥ ೧ ॥

॥ ಸಾಯಣಭಾಷ್ಯಂ ॥

ಅತ್ರಾಸ್ಮಿನ್ಯಜ್ಞೇ ವಜ್ರಿನ್ ಹೇ ವಜ್ರವನ್ನಿಂದ್ರ ಸುಹವಾಸಃ ಸುಹವಾಃ ಶೋಭನಾಹ್ವಾನಾ ಊಮಾ ರಕ್ಷಕಾ ವಿಶ್ವೇ ದೇವಾಸಃ ಸರ್ವೇ ದೇವಾ ಉಭೇ ರೋದಸೀ ದ್ಯಾವಾಪೃಥಿವ್ಯೌ ಚ ಏವೈವಮುಕ್ತಪ್ರಕಾರೇಣ ಸ್ತ್ರೂಯಮಾನಂ ಮಹಾಂ ಮಹಾಂತಂ ಪ್ರಭೂತಂ ವೃದ್ಧಂ ಗುಣೈಃ ಪ್ರವೃದ್ಧಮೃಷ್ವಂ ದರ್ಶನೀಯಂ ತ್ವಾಮೇಕಮಿದೇಕಮೇವ ವೃತ್ರಹತ್ಯೇ ವೃತ್ರಹನನಾರ್ಥಂ ನಿರ್ವೃಣತೇ । ನಿಃಶೇಷೇಣ ಸಂಭಜಂತೇ ॥

॥ ಪ್ರತಿಪದಾರ್ಥ ॥

ವಜ್ರಿನ್—ವಜ್ರಾಯುಧವನ್ನು ಹಿಡಿದಿರುವ । **ಇಂದ್ರ**—ಎಲೈ ಇಂದ್ರನೇ । **ಅತ್ರ**—ಈ ಯಜ್ಞದಲ್ಲಿ । **ಸುಹವಾಸಃ**—ಭಕ್ತಿಪೂರ್ವಕವಾಗಿ ಕರೆಯಲ್ಪಟ್ಟವರೂ । **ಊಮಾಃ**—ರಕ್ಷಕರೂ ಆದ । **ವಿಶ್ವೇ ದೇವಾಸಃ**—ಸಕಲ ದೇವತೆಗಳೂ । **ಉಭೇ ರೋದಸೀ**—ದ್ಯಾವಾಪೃಥಿವಿಗಳೆರಡೂ ಸಹ । **ಏವ**—ಈ ರೀತಿಯಲ್ಲಿ ಸ್ತುತನಾದವನೂ । **ಮಹಾಂ**—ಮಹಾತ್ಮನೂ । **ವೃದ್ಧಂ**—ವೃದ್ಧಿಹೊಂದಿದ ಮಹದ್ಗುಣಗಳುಳ್ಳವನೂ । **ಋಷ್ವಂ**—ಆಕರ್ಷಕವಾದ ರೂಪವುಳ್ಳವನೂ ಆದ । **ತ್ವಾಂ**—ನಿನ್ನನ್ನು । **ಏಕಮಿತ್**—ಒಬ್ಬನನ್ನೇ । **ವೃತ್ರಹತ್ಯೇ**—ವೃತ್ರನನ್ನು ನಾಶಮಾಡಲು । **ನಿಃ ವೃಣತೇ**—ಪೂರ್ಣವಾಗಿ ಪ್ರಾರ್ಥಿಸಿ ಕರೆಯುತ್ತಾರೆ (ಪೂಜಿಸಿ ಪ್ರಾರ್ಥಿಸುತ್ತಾರೆ)

॥ ಭಾವಾರ್ಥ ॥

ವಜ್ರಧಾರಿಯಾದ ಎಲೈಇಂದ್ರನೇ, ಈ ಯಜ್ಞದಲ್ಲಿ ಭಕ್ತಿಪುರಸ್ಸರವಾಗಿ ಕರೆಯಲ್ಪಟ್ಟವರೂ, ರಕ್ಷಕರೂ ಆದ ಸಕಲ ದೇವತೆಗಳೂ, ದ್ಯಾವಾಪೃಥಿವಿಗಳೂ ಸಹ ವೃತ್ರಹನನಕ್ಕಾಗಿ ನಿನ್ನೊಬ್ಬನನ್ನೇ ಪೂಜಿಸಿ ಪ್ರಾರ್ಥಿಸುತ್ತಾರೆ ಈ ಕಾರ್ಯಕ್ಕೆ ನೀನೊಬ್ಬನಲ್ಲದೇ ಬೇರೆ ಯಾರೂ ಶಕ್ತರಲ್ಲ. ನೀನು ಆಕರ್ಷಕವಾದ ರೂಪವುಳ್ಳವನೂ, ವೃದ್ಧಿಹೊಂದಿದ ಮಹದ್ಗುಣಗಳುಳ್ಳವನೂ ಆಗಿರುವೆ ಆದುದರಿಂದ ನಿನ್ನೊಬ್ಬನನ್ನೇ ಈ ಕಾರ್ಯಕ್ಕೆ ನಂಬಿ ಪ್ರಾರ್ಥಿಸುತ್ತಾರೆ

English Translation.

Indra, wielder of the thunderbolt, all the protecting deities who are reverently invoked, and both the heaven and the earth, glorify you who are verily one alone, mighty, vast, and pleasing of aspect, for the destruction of Vritra.

॥ ವಿಶೇಷವಿಷಯಗಳು ॥

ವಜ್ರಿನ್ ಇಂದ್ರ ಆತ್ರ ಸುಹವಾಸಃ ಊಮಾಃ ವಿಶ್ವೇ ದೇವಾಸಃ ಉಭೇ ರೋದಸೀ ಏವ ಮಹಾಂ ವೃದ್ಧಂ ಋಷ್ವಂ ತ್ವಾಂ ಏಕಮಿತ್ ವೃತ್ರಹತ್ಯೇ ನಿಃ ವೃಣತೇ—ಎಲೈ ವಜ್ರಾಯುಧವನ್ನು ಧರಿಸಿರುವ ಇಂದ್ರನೇ, ಸಕಲದೇವತೆಗಳೂ ನಿನ್ನನ್ನು ವೃತ್ರಹನನಕ್ಕಾಗಿ ಪ್ರಾರ್ಥಿಸಿ ಕರೆಯುತ್ತಾರೆ ಆ ದೇವತೆಗಳಾದರೋ ಈ ಯಜ್ಞದಲ್ಲಿ ಯಜ್ಞರಕ್ಷಣಾರ್ಥವಾಗಿ ನಮ್ಮಿಂದ ಆಹ್ವಾನಿತರಾಗಿರುವರು ಇಂತಹ ಸಮಸ್ತ ದೇವತೆಗಳೂ ದ್ಯಾವಾಪೃಥಿವಿಗಳೂ ಸಹ ಮಹಾತ್ಮನೂ, ಯಜ್ಞಭೂಮಿಯಲ್ಲಿ **ಚೆನ್ನಾ**ಗಿ ಬೆಳಗುತ್ತಿರುವವನೂ ಸೌಮ್ಯವಾದ ರೂಪವುಳ್ಳವನೂ ಆದ ನಿನ್ನನ್ನು ಮಾತ್ರವೇ ಗೌರವಿಸಿ ವೃತ್ರಹನನಕ್ಕಾಗಿ ಪ್ರಾರ್ಥಿಸಿರುವರು. ಏಕೆಂದರೆ ವೃತ್ರನನ್ನು ಸಂಹಾರಮಾಡಲು ನೀನಲ್ಲದೆ ಇತರರಿಂದ ಸಾಧ್ಯವಿಲ್ಲ ಆದುದರಿಂದ ಈ ವಿಷಯದಲ್ಲಿ ಇತರ ದೇವತೆಗಳನ್ನು ಪ್ರಾರ್ಥಿಸದೆ ನಿನ್ನನ್ನೇ ಪ್ರಾರ್ಥಿಸುವರು ಎಂದು ಮುಖ್ಯಾಭಿಪ್ರಾಯವು

ಚಿತ್—ಯಾಸ್ಕರು ಚಿತ್ ಎಂಬ ನಿಪಾತವು **ಚಿದಿತ್ಯೇಷೋಽನೇಕಕರ್ಮಾ** ಅನೇಕ ವಿಧವಾದ ಅರ್ಥಗಳಲ್ಲಿಯೂ ಪ್ರಯುಕ್ತವಾಗಿರುವುದು ಎಂದು ಹೇಳಿ, **ಆಚಾರ್ಯಶ್ಚಿದಿದಂ ಬ್ರೂಯಾದಿತಿ ಪೂಜಾಯಾಂ, ದಧಿಚಿದಿತ್ಯುಪಮಾರ್ಥೇ, ಕುಲ್ಮಾಷಾಂಶ್ಚಿದಾಹರೇತ್ಯವಕುತ್ಸಿತೇ** । ಆಚಾರ್ಯಶ್ಚಿದ್ ಎಂಬ ವಾಕ್ಯದಲ್ಲಿ ಪೂಜಾರ್ಥವಾಗಿ ಪ್ರಯುಕ್ತವಾಗಿದೆ **ದಧಿಚಿತ್** ಎಂಬ ವಾಕ್ಯದಲ್ಲಿ ಉಪಮಾರ್ಥದಲ್ಲಿಯೂ, **ಕುಲ್ಮಾಷಾಂಶ್ಚಿದ್** ಎಂಬಲ್ಲಿ ನಿಂದಾರ್ಥಕವಾಗಿಯೂ ಪ್ರಯುಕ್ತವಾಗಿದೆ ಎಂದು ಉದಾಹರಣೆಯನ್ನು ಹೇಳಿ ಅರ್ಥವನ್ನು ವಿವರಿಸಿದ್ದಾರೆ. ಇಲ್ಲಿ ಸಾಯಣರು ಪೂಜಾರ್ಥದಲ್ಲಿ ಪ್ರಯುಕ್ತವಾಗಿದೆ ಎಂದು ಆರ್ಧವನ್ನು ವರ್ಣಿಸಿ ಇಂದ್ರನ ಮಹಿಮೆಯನ್ನೂ ಸಾಮರ್ಥ್ಯಾತಿಶಯವನ್ನೂ ವಿವರಿಸಿರುವುದೆಂದು ಹೇಳಿದಾರೆ.

॥ ಸಂಹಿತಾಪಾಠಃ ॥

ಅವಾಸೃಜಂತ ಜಿವ್ರಯೋ ನ ದೇವಾ ಭುವಃ ಸಮ್ರಾಳಿಂದ್ರ ಸತ್ಯಯೋನಿಃ ।
ಅಹನ್ನಹಿಂ ಪರಿಶಯಾನಮರ್ಣಃ ಪ್ರ ವರ್ತನೀರರದೋ ವಿಶ್ವಧೇನಾಃ ॥ ೨ ॥

॥ ಪದಪಾಠಃ ॥

ಅವ । ಅಸೃಜಂತ । ಜಿವ್ರಯಃ । ನ । ದೇವಾಃ । ಭುವಃ । ಸಂಽರಾಟ್ । ಇಂದ್ರ । ಸತ್ಯಽಯೋನಿಃ ।
ಅಹನ್ । ಅಹಿಂ । ಪರಿಽಶಯಾನಂ । ಅರ್ಣಃ । ಪ್ರ । ವರ್ತನೀಃ । ಅರದಃ । ವಿಶ್ವಽಧೇನಾಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ದೇವಾಸ್ತ್ವಾಂ ಜಿವ್ರಯೋ ನ ಜೀರ್ಣಾಃ ಪ್ರವೃದ್ಧಾಃ ಪಿತರೋ ಯೂನಃ ಪುತ್ರಾನಿವಾವಾಸೃಜಂತ । ಅಸುರವಧಾರ್ಥಂ ಪ್ರೈರಯನ್ । ತತೋ ಹೇ ಇಂದ್ರ ಸತ್ಯಯೋನಿಃ ಸತ್ಯನಿವಾಸಸ್ತ್ವಂ

ಸಮ್ರಾಟ್ ಸರ್ವೇಷಾಂ ಲೋಕಾನಾಮಧೀಶ್ವರೋ ಭುವಃ । ಅಭವಃ । ಅರ್ಣ ಉದಕಂ ಲಕ್ಷೀಕೃತ್ಯ ಪರಿಶಯಾನಂ ಪರಿತಃ ಸಮಂತಾಚ್ಛಯನಂ ಕುರ್ವಂತಮಹಿಂ ವೃತ್ರಾಸುರಮಹನ್ । ಅವಧೀಃ । ವಿಶ್ವಧೇನಾ ವಿಶ್ವಸ್ಯ ಪ್ರೀಣಯಿತ್ರೀರ್ವರ್ತನೀಃ ಸರ್ವತ್ರ ಪ್ರವರ್ತಿಕಾ ನದೀಃ ಪ್ರಾರದಃ । ಪ್ರಕರ್ಷೇಣ ವಿಲೇಖನಂ ಕೃತವಾನಸಿ । ಇಂದ್ರೋ ವೃತ್ರಂ ಹತ್ವಾ ತೇನಾವೃತಾನ್ಯುದಕಾನಿ ಪ್ರವಾಹರೂಪೇಣ ಪ್ರವರ್ತಯತೀತ್ಯರ್ಥಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಜಿವ್ರಯೋ ನ**—ವೃದ್ಧರು ಯುವಕರಾದ ಪುತ್ರರನ್ನು ಮುಂದೆ ಬಿಟ್ಟು ಪ್ರೇರಿಸುವಂತೆ । **ದೇವಾಃ**—ದೇವತೆಗಳು । **ಅವಾಸೃಜಂತ**—ಅಸುರವಧಕ್ಕಾಗಿ ನಿನ್ನನ್ನು ಪ್ರೇರಿಸಿ ಮುಂದೆ ಬಿಟ್ಟರು (ಆನಂತರವೇ) । **ಸತ್ಯಯೋನಿಃ**—ಸತ್ಯಕ್ಕೆ ಮೂಲನಾದ ನೀನು । **ಸಮ್ರಾಟ್** – ದೇವಮಾನವಾದಿಗಳಿಗೆಲ್ಲಾ ಪ್ರಭುವಾದವನಾಗಿ । **ಭುವಃ**—ಆದೆ । **ಅರ್ಣಃ**—ಉದಕದ ಅಭಿಮುಖವಾಗಿ । **ಪರಿಶಯಾನಂ**—ಸುತ್ತಲೂ ಅಡ್ಡಕಟ್ಟೆ ಮಲಗಿದ್ದ । **ಅಹಿಂ**—ವೃತ್ರಾಸುರನನ್ನು । **ಅಹನ್**—ನಾಶಪಡಿಸಿದೆ । **ವಿಶ್ವಧೇನಾಃ**—ಸಕಲಲೋಕಕ್ಕೂ ಪ್ರೀತಿಕಾರಕನಾದವೂ । **ವರ್ತನೀಃ**—ಸುತ್ತಲೂ ಹರಡುವುವೂ ಆದ ನದಿಗಳನ್ನು । **ಪ್ರ ಅರದಃ**—ಸೀಳಿ ಅವುಗಳು ಸುಲಭವಾಗಿ ಹರಿಯುವಂತೆ ಮಾಡಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ವೃದ್ಧರು ಯುವಕರಾದ ಪುತ್ರರನ್ನು ಮುಂದೆ ಬಿಟ್ಟು ಪ್ರೇರಿಸುವಂತೆ ದೇವತೆಗಳು ಅಸುರ ವಧಕ್ಕಾಗಿ ನಿನ್ನನ್ನು ಪ್ರೇರಿಸಿ ಮುಂದೆ ಬಿಟ್ಟರು. ಆನಂತರವೇ, ಸತ್ಯಕ್ಕೆ ಮೂಲನಾದ ನೀನು ದೇವಮಾನವಾದಿಗಳಿಗೆಲ್ಲಾ ಪ್ರಭುವಾದೆ ಉದಕದ ಅಭಿಮುಖವಾಗಿ ಸುತ್ತಲೂ ಅಡ್ಡಕಟ್ಟೆ ಮಲಗಿದ್ದ ವೃತ್ರಾಸುರನನ್ನು ನಾಶ ಪಡಿಸಿದೆ. ಸಕಲ ಲೋಕಕ್ಕೂ ಪ್ರೀತಿಕಾರಕವೂ, ಸುತ್ತಲೂ ಹರಡಿರುವುವೂ ಆದ ನದಿಗಳನ್ನು ಸೀಳಿ ಅವುಗಳನ್ನು ಸುಲಭವಾಗಿ ಹರಿಯುವಂತೆ ಮಾಡಿದೆ.

English Translation.

As elders (send forth their young), so the gods have sent you (against Vritra) thence you became, Indra who are the abode of truth, the sovereign of the world you have slain the slumbering Ahi for (the release of) the water, and have marked out (the channels of) the all delighting rivers.

॥ ವಿಶೇಷವಿಷಯಗಳು ॥

ಇಂದ್ರ ಜಿವ್ರಯೋ ನ ದೇವಾಃ ಅವಾಸೃಜಂತ—ಸ್ರವೃದ್ಧಾಃ ಪಿತರೋ ಯೂನಃ ಪುತ್ರಾನಿವ ಅಸುರವಧಾರ್ಥಂ ಪ್ರೈರಯನ್ । ಲೋಕದಲ್ಲಿ ತಂದೆತಾಯಿಗಳು ಕಷ್ಟಸಾಧ್ಯವಾದ ಕೆಲಸಕಾರ್ಯಗಳನ್ನು ಸಾಧಿಸುವುದಕ್ಕಾಗಿ ಅಥವಾ ಯುದ್ಧಾದಿಗಳಲ್ಲಿ ಶತ್ರುಗಳನ್ನು ಜಯಿಸುವುದಕ್ಕಾಗಿ ಯೌವನೋಪೇತರೂ ದೃಢಾಂಗವುಳ್ಳವರೂ

ऊत्साहशालिगळू आद तम्म पुत्ररन्नु कळुहिसुवुदु सरियल्लि. अदरंते देवतेगळेल्लरू सेरि महा बलशालियाद वृत्रनन्नु संहारमाडलु इंद्रनन्नु प्रेरिसिदरु एंदभिप्राय्वु

सत्यॊनेः सामराट् भुवः—एलै इंद्रने, नीनु सत्यक्के आश्रयभूतनादवनु. देवतेगळिगू, मानवरिगू प्रभुवादवनु इंतह नीनु वृत्रासुरनन्नु संहारमाडलु शक्तनागिरुवे

अर्णः सरिशयानं अहिं अहन्—एलै इंद्रने, मेघमंडलदल्लिरुव उदकद सुत्तलू व्याप्तिसि उदकवु भूमियमेलॆ बीळदंते तडॆगट्टिमलगिरुव वृत्रासुरनन्नु नीनु संहार माडिदॆ एंदभिप्राय्वु. इदे अभिप्राय्वन्नु हिंदॆ **अहन्नहिमन्वपस्ततर्द** (ऋ सं ८-४७-८) एंब ऋक्किनल्लि हिरण्यस्तूपऋषियु विवरिसिरुवनु.

विश्वधेनाः वर्तनीः प्र अरदः—समस्त जनरन्नु संतोषपडिसुव नदिगळु तम्म पात्रगळल्लि हरियुवंते माडिदॆ. एंदरॆ वृत्रवधानंतर आवनु तडॆयिद्द उदकगळु वृष्टिमूलक भूमिय मेलॆ बिद्दु नदिगळ रूपदल्लि सकलजनरिगू आहारादिगळन्नु ऒदगिसि तृप्तिपडिसुत्ता क्लृप्तवाद मार्गगळल्लि एंदरॆ नदीपात्रगळल्लि हरियुत्तिरुववु इंतह अगाध कॆलसवन्नु नीनु माडिरुवॆ एंदु इंद्रनन्नु स्तुतिसलागिदॆ.

॥ संहितापाठः ॥

अत्रृप्नुवंतं वियंतमबुध्यमबुध्यमानं सुषुप्राणमिंद्र ।
सप्त प्रति प्रवत आशयानमहिं वज्रेण वि रिणा अपर्वन् ॥ ४ ॥

॥ पदपाठः ॥

अत्रृप्नुवंतं । वियंतं । अबुध्यं । अबुध्यमानं । सुसुप्रानं । इंद्र ।
सप्त । प्रति । प्रवतः । आशयानं । अहिं । वज्रेण । वि । रिणाः । अपर्वन् ॥ ४ ॥

॥ सायणभाष्यं ॥

हे इंद्र त्वमतृप्नुवंतं भोगेष्वतृप्यंतं वियंतं शिथिलांगमबुध्यं दुर्विज्ञानमबुध्यमानं किमप्यजानंतं सुषुप्राणं सुप्तं सप्त सर्पणस्वभावाः

ಪ್ರವತೋ೨ಪಃ ಪ್ರತ್ಯಾಶಯಾನಮಾವೃತ್ಯ ತಿಷ್ಠಂತಮಹಿಂ ವೃತ್ರಮಪರ್ವನ್ ಅಪರ್ವಣಿ ಪೌರ್ಣಮಾಸ್ಯಾಂ ವಜ್ರೇಣ ವಿ ರಿಣಾಃ । ವ್ಯರಿಣಾಃ । ವಿಶೇಷೇಣ ಹತವಾನಸಿ । ಪೌರ್ಣಮಾಸ್ಯಾಂ ವೃತ್ರವಧಸ್ಯೋಷ್ಣಾ ಹತಪುತ್ರ ಇತ್ಯನುವಾಕೇ ಘ್ನಂತಿ ವಾ ಏನಂ ಪೌರ್ಣಮಾಸ ಅಮಾವಾಸ್ಯಾಯಾಂ ಪ್ಯಾಯಯಂತೀತಿ ತೈತ್ತಿರೀಯೇ೨ಪ್ಯುಕ್ತಃ । ತೈ. ಸಂ. ೨-೫-೨-೫ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಅತೃಪ್ಣುವಂತಂ**--ಭೋಗಗಳಲ್ಲಿ ತೃಪ್ತಿಯಿಲ್ಲದಿರುವವನೂ । **ವಿಯೆತಂ**—ಶಿಥಿಲವಾದ ಅಂಗವುಳ್ಳವನೂ । **ಅಬುಧ್ಯಂ**—(ಅವನ ಸ್ವಭಾವವನ್ನು) ತಿಳಿಯಲು ಸಾಧ್ಯವಿಲ್ಲದವನೂ । **ಅಬುಧ್ಯಮಾನಂ**—ಯಾವ ಪರಿಜ್ಞಾನವೂ ಇಲ್ಲದವನೂ । **ಸುಷುಪಾಣಂ**—ಸುಪ್ತಾವಸ್ಥೆಯಲ್ಲಿ ಅಲಸನಾಗಿ ಬಿದ್ದಿದ್ದವನೂ । **ಸಪ್ತ**—ಹರಿಯುವ ಸ್ವಭಾವವುಳ್ಳ । **ಪ್ರವತಃ ಪ್ರತಿ**—ಉದಕಗಳ ಎದುರಾಗಿ । **ಆಶಯಾನಂ**—ಸುತ್ತಲೂ ಆವರಿಸಿ ಮಲಗಿದ್ದವನೂ ಆದ । **ಅಹಿಂ**—ವೃತ್ರಾಸುರನನ್ನು । **ಅಪರ್ವನ್**—ಪೌರ್ಣಮಾಸ್ಯಾದಿನದಲ್ಲಿ । **ವಜ್ರೇಣ**—ವಜ್ರಾಯುಧದಿಂದ । **ವಿ ರಿಣಾಃ**—ಸೀಳಿ ಕೊಂದಿರುವೆ

॥ ಭಾವಾರ್ಥ ॥

ಎಲೈ ಇಂದ್ರನೇ, ಭೋಗಗಳಲ್ಲಿ, ತೃಪ್ತಿಯಿಲ್ಲದಿರುವವನೂ, ಶಿಥಿಲವಾದ ಅಂಗವುಳ್ಳವನೂ, ಅವನ ಸ್ವಭಾವವನ್ನೇ ತಿಳಿಯಲಾರದಷ್ಟು ವಂಚಕನೂ, ಯಾವ ಪರಿಜ್ಞಾನವೂ ಇಲ್ಲದವನೂ, ಸುಪ್ತಾವಸ್ಥೆಯಲ್ಲಿ ಅಲಸನಾಗಿ ಬಿದ್ದಿದ್ದವನೂ, ಹರಿಯುವ ಸ್ವಭಾವವುಳ್ಳ ಉದಕಗಳ ಎದುರಾಗಿ ಸುತ್ತಲೂ ಆವರಿಸಿ ಮಲಗಿದ್ದವನೂ ಆದ ವೃತ್ರಾಸುರನನ್ನು ಪೌರ್ಣಮಾಸ್ಯಾದಿನದಲ್ಲಿ ವಜ್ರಾಯುಧದಿಂದ ಸೀಳಿ ಕೊಂದಿರುವೆ

English Translation.

On the day of full moon you have slain with the thunderbolt the insatiable, unnerved, ignorant, un-apprehending, slumbering Ahi, obstructing the gliding-down-ward-flowing (streams).

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ವೃತ್ರಾಸುರನ ದುಷ್ಟಸ್ವಭಾವವನ್ನು ವಿವರಿಸಿದೆ ಆ ವೃತ್ರನು ಎಷ್ಟು ಭೋಗಗಳನ್ನನುಭವಿಸಿದರೂ ತೃಪ್ತಿಯಿಲ್ಲದವನು, ಇವನ ಅಂಗಗಳು ದೃಢವಾಗಿಲ್ಲ. ಇವನ ಸ್ವಭಾವವು ಯಾರಿಗೂ ತಿಳಿಯದು ಇವನಿಗೆ ಯಾವ ಉತ್ತಮ ಪರಿಜ್ಞಾನವೂ ಇಲ್ಲ ಯಾವಾಗಲೂ ಉದಕಗಳನ್ನು ಅಡ್ಡಗಟ್ಟಿ ಮಲಗಿರುವುದೇ ಇವನ ಸ್ವಭಾವ. ಇಂತಹ ನೀಚಸ್ವಭಾವವುಳ್ಳ ವೃತ್ರನನ್ನು ಇಂದ್ರನು ಪೌರ್ಣಮಾಸಿಯ ದಿವಸ ವಜ್ರಾಯುಧದಿಂದ ಸಂಹರಿಸಿದನೆಂದು ಈ ಋಕ್ಕಿನಲ್ಲಿ ವರ್ಣಿಸಿದೆ ಈ ವಿಷಯದಲ್ಲಿ ಭಾಷ್ಯಕಾರರು—

ತೈತ್ತಿರೀಯ ಸಂಹಿತಾವಾಕ್ಯವನ್ನು ದಾಹರಿಸಿ ಅದರಲ್ಲಿ ಇಂದ್ರನು ವೃತ್ರನನ್ನು ಪೌರ್ಣಮಾಸಿಯ ದಿನದಲ್ಲಿ ಸಂಹಾರಮಾಡಿರುವ ವಿಷಯವು ಉಕ್ತವಾಗಿದೆಯೆಂದು ತಿಳಿಸಿದಾರೆ. ಇಂದ್ರನು ವೃತ್ರನನ್ನು ಸಂಹಾರಮಾಡಿದ

ವಿಷಯವನ್ನು ಎಲ್ಲಾ ಋಷಿಗಳೂ ಪ್ರಶಂಸೆಮಾಡಿರುವುದರಿಂದ ಆ ವೃತ್ರಹನನದ ವಿಸ್ತಾರವಾದ ವಿವರಣೆಯನ್ನು ಇಲ್ಲಿ ಹೇಳುವುದು ಆವಶ್ಯಕವು. ಆದುದರಿಂದ ಆ ವಿವರವನ್ನು ತಿಳಿಸುವ ಯಜುರ್ವೇದದ ಮಂತ್ರಭಾಗವನ್ನೂ ಅದರ ಅರ್ಥಾನುವಾದವನ್ನೂ ಇಲ್ಲಿ ವಿವರಿಸಿದೇವೆ—

ತ್ವಷ್ಟಾ ಹತಪುತ್ರೋ ವೀಂದ್ರಗ್ಂ ಸೋಮಮಾಹರತ್ತಸ್ಮಿನ್ನಿಂದ್ರ ಉಪಹವಮೈಚ್ಛತ ತಂ ನೋಪಾಹ್ವಯತ ಪುತ್ರಂ ಮೇ೭ವಧೀರಿತಿ ಸ ಯಜ್ಞವೇಶಸಂ ಕೃತ್ವಾ ಪ್ರಾಸಹಾ ಸೋಮಮಪಿಬತ್ತಸ್ಯ ಯೆದತ್ಯಶಿಷ್ಯತ ತತ್ತ್ವಷ್ಟಾಹವನೀಯಮುಪ ಸ್ರಾವರ್ಕಯತ್ಸಾ೭ಹೇಂದ್ರಶತ್ರುರ್ವರ್ಧಸ್ವೇತಿ ಯದವರ್ಕಯತ್ತದ್ವೃತ್ರಸ್ಯ ವೃತ್ರತ್ವಂ ಯದಬ್ರವೀತ್ಸಾ೭ಹೇಂದ್ರಶತ್ರುರ್ವರ್ಧಸ್ವೇತಿ ತಸ್ಮಾದಸ್ಯೇಂದ್ರಃ ಶತ್ರುರಭವತ್ಸ ಸಂಭವನ್ನಗ್ನೀಷೋಮಾವಭಿ ಸಮಭವತ್ಸ ಇಷುಮಾತ್ರಮಿಷುಮಾತ್ರಂ ವಿಷ್ಪಜ್ಜವರ್ಧತ ಸ ಇಮಾನ್ ಲೋಕಾನವೃಣೋದ್ಯದಿಮಾನ್ ಲೋಕಾನವೃಣೋತ್ತದ್ವೃತ್ರಸ್ಯ ವೃತ್ರತ್ವಂ ತಸ್ಮಾದಿಂದ್ರೋ೭ಬಿಭೇತ್ ॥

(ತೈ. ಸಂ. ೨-೫-೨-೧)

ಈ ಅನುವಾಕದಲ್ಲಿ ಇಂದ್ರನು ವೃತ್ರನನ್ನು ಸಂಹರಿಸಿದ ವಿವರವು ಉಕ್ತವಾಗಿದೆ. ಈ ಕಥಾಸಂದರ್ಭಕ್ಕೆ ಹಿನ್ನೆಲೆಯಾಗಿ ಇನ್ನೊಂದು ಉಪಾಖ್ಯಾನವಿರುವುದು ಅದನ್ನು ನಾವು ಹಿಂದೆ ವಿವರಿಸಿರುವೆವಾದರೂ ಇಲ್ಲಿ ಮುಂದಿನ ವಿವರಣೆಗೆ ಪೀಠಿಕಾರೂಪವಾಗಿ ಸೂಕ್ಷ್ಮರೀತಿಯಿಂದ ವಿವರಿಸುವುದು ಆವಶ್ಯಕವು ಪೂರ್ವದಲ್ಲಿ ತ್ವಷ್ಟೃ ಪ್ರಜಾಪತಿಗೆ ವಿಶ್ವರೂಪನೆಂಬ ಪುತ್ರನಿದ್ದನು. ಅವನು ದೇವತೆಗಳಿಗೆ ಪುರೋಹಿತನಾಗಿದ್ದನು ಆದರೂ ಇವನು ಅಸುರಸ್ತ್ರೀಯಲ್ಲಿ ಜನಿಸಿದವನಾದ್ದರಿಂದ ಇವನಿಗೆ ಅಸುರರ ವಿಷಯದಲ್ಲಿ ವಿಶೇಷವಾಗಿ ಅಭಿಮಾನವಿತ್ತು. ಹೀಗಿರುವಾಗ ಈ ವಿಶ್ವರೂಪನು ನಮಗೆ ಪುರೋಹಿತನಾಗಿದ್ದರೂ ಅಸುರಪಕ್ಷಪಾತಿಯಾದ್ದರಿಂದ ಸ್ವಮಯ ಸಾಧಿಸಿ ಅಸುರರಿಗೆ ಸಹಾಯಮಾಡುತ್ತಾ ದೇವತೆಗಳಿಗೆ ರಾಜ್ಯವೇ ಇಲ್ಲದಂತೆ ಒಳಸಂಚು ನಡೆಸಬಹುದೆಂದು ಇಂದ್ರನು ಹೆದರಿದನು. ಆದ್ದರಿಂದ ಇಂದ್ರನು ಇವನನ್ನು ಉಪಾಯಾಂತರದಿಂದ ಸಂಹಾರಮಾಡಿದನು ಈ ವಿಷಯವನ್ನೇ ಇಲ್ಲಿ **ತ್ವಷ್ಟಾ ಹತಪುತ್ರಃ ವೀಂದ್ರಗ್ಂ ಸೋಮಮಾಹರತ್** ಎಂಬ ವಾಕ್ಯದಿಂದ ಹೇಳಲಾಗಿದೆ ತನ್ನ ಮಗನನ್ನು ಕೊಂದನೆಂಬ ಕೋಪದಿಂದ ತ್ವಷ್ಟೃವು ತಾನು ಯಜ್ಞಮಾಡುವಾಗ ಇಂದ್ರನನ್ನು ಯಜ್ಞದಲ್ಲಿ ಆಹ್ವಾನಮಾಡದೆ ಅವನನ್ನು ಬಿಟ್ಟೇ ಯಜ್ಞಮಾಡಿದನು. ಅವನಿಗೆ ಪಾನಾರ್ಹವಾಗಿ ಸೋಮುವನ್ನೂ ಕೊಡಲಿಲ್ಲ ಅದರಿಂದ ಕೋಪಗೊಂಡ ಇಂದ್ರನು ಅವನ ಯಜ್ಞಕ್ಕೆ ಬಂದು ಯಜ್ಞಕ್ಕೆ ವಿಘ್ನವನ್ನುಂಟುಮಾಡಿದ್ದಲ್ಲದೆ ಯಜ್ಞಕ್ಕಾಗಿ ಸಿದ್ಧಪಡಿಸಿಟ್ಟಿದ್ದ ಸೋಮರಸವನ್ನು ಬಲಾತ್ಕಾರವಾಗಿ ಪಾನ ಮಾಡಿದನು. ಇದನ್ನು ನೋಡಿ ತ್ವಷ್ಟೃವು ಇಂದ್ರನಿಗೆ ತಕ್ಕ ಪ್ರತೀಕಾರಮಾಡಬೇಕೆಂದು ಯೋಚಿಸಿ ಇಂದ್ರನು ಕುಡಿದು ಮಿಕ್ಕ ಸೋಮರಸವನ್ನು ಆಹವನೀಯಾಗ್ನಿಯಲ್ಲಿ ಸುರಿದು **ಸ್ವಾಹೇಂದ್ರಶತ್ರುರ್ವರ್ಧಸ್ವ**—ಇಂದ್ರನನ್ನು ಜಯಿಸುವ ಮತ್ತು ಇಂದ್ರನಿಗೆ ಶತ್ರುವಾದ ಪುತ್ರನುಂಟಾಗಲಿ ಎಂದು ಅಗ್ನಿಯನ್ನು ಪ್ರಾರ್ಥಿಸುತ್ತಾ ಸೋಮಶೇಷವನ್ನು ಅಗ್ನಿಯಲ್ಲಿ ಹೋಮಮಾಡಿದನು ಹೀಗೆ ಹೋಮಮಾಡುವಾಗ ಮಂತ್ರದಲ್ಲಿ ಸ್ವರವ್ಯತ್ಯಾಸವಾದುದರಿಂದ ಇಂದ್ರನನ್ನು ಜಯಿಸುವ ಪುತ್ರನಿಗೆ ಬದಲಾಗಿ ಇಂದ್ರನಿಂದ ಜಯಿಸಲ್ಪಡುವ ಪುತ್ರನಾದನು. ಈ ಪುತ್ರನೇ ವೃತ್ರನು ಇದೇ ಇವನ ಉತ್ಪತ್ತಿಯ ಕ್ರಮವು. ಯಜ್ಞಾದಿಗಳಲ್ಲಿ ಮಂತ್ರಸರನಮಾಡುವಾಗ ಸ್ವರವ್ಯತ್ಯಾಸವಾದರೆ ಯಜಮಾನನಿಗೆ ಹಾನಿಯುಂಟಾಗುವುದೆಂದು—

ದುಷ್ಟಃ ಶಬ್ದಃ ಸ್ವರತೋ ವರ್ಣತೋ ವಾ ಮಿಥ್ಯಾಪ್ರಯುಕ್ತೋ ನ ತಮರ್ಥಮಾಹ ।
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ ಯಥೇಂದ್ರ ಶತ್ರುಃ ಸ್ವರತೋಽಪರಾಧತ್ ॥

(ಪಾಣಿನೀಯಶಿಕ್ಷಾ)

ಪಾಣಿನಿಮಹರ್ಷಿಯು ಈ ಮಂತ್ರವನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡು ಹೇಳಿರುವರು. ಹೀಗೆ ಮಂತ್ರದ ಸ್ವರವ್ಯತ್ಯಾಸದಿಂದ ತ್ವಷ್ಟೃವಿಗೆ ತನಗೆ ಬೇಕಾದ ಇಂದ್ರನನ್ನು ನಿಗ್ರಹಿಸುವ ಪುತ್ರನಿಗೆ ಬದಲಾಗಿ ಇಂದ್ರನಿಂದ ಸಂಹೃತನಾಗುವ ಪುತ್ರನು ಜನಿಸಿದನು ಆದರೂ ಆ ವೃತ್ರನು, ಅಗ್ನಿಯಲ್ಲಿ ಅಗ್ನಿ ಮತ್ತು ಸೋಮದೇವತೆಗಳನ್ನು ಉದ್ದೇಶಿಸಿ ಮಾಡಿದ ಹವಿಸ್ಸಿನಿಂದ ವೃದ್ಧಿಯನ್ನೈದುತ್ತಾ ಬಂದನು ಅವನು ಪ್ರತಿದಿನವೂ ಒಂದು ಬಿಲ್ಲಿನ ಪ್ರಮಾಣದಂತೆ ಬೆಳೆಯುತ್ತಾ ದೊಡ್ಡ ಆಕಾರವುಳ್ಳವನಾಗಿ ಈ ಲೋಕಗಳನ್ನೆಲ್ಲಾ ಎಲ್ಲೆಲ್ಲಿಯೂ ವ್ಯಾಪಿಸಿದನು. ಹೀಗೆ ಸರ್ವಪ್ರದೇಶಗಳನ್ನೂ ವ್ಯಾಪಿಸುವ ಸ್ವಭಾವವುಳ್ಳವನಾದ್ದರಿಂದ ವೃತ್ರನಿಗೆ ವೃತ್ರನೆಂದು ಹೆಸರಾಯಿತು ಆಚ್ಛಾದಿಸು, ಮುಚ್ಚು ವ್ಯಾಪಿಸು ಎಂಬರ್ಥವುಳ್ಳ ವೃಞ್ ವರಣೇ ಎಂಬ ಧಾತುವಿನಿಂದ ವೃತ್ರಶಬ್ದವು ನಿಷ್ಪನ್ನವಾಗಿ ಇವನು ಸರ್ವವನ್ನೂ ವ್ಯಾಪಿಸುವವನು ಎಂಬ ಅನ್ವರ್ಥನಾಮವನ್ನು ಸೂಚಿಸುವುದು ವೃತ್ರನ ಈ ವಿಧವಾದ ಬೆಳವಣಿಗೆಯನ್ನು ಕಂಡು ಇಂದ್ರನು ಹೆದರಿದನು

ಸ ಪ್ರಜಾಪತಿಮುಪಾಧಾವಜ್ಞಾತ್ಯೈ ವೈ ಽಜನೀತಿ ತಸ್ಮೈ ವಜ್ರಗಂ ನಿಕ್ತ್ವಾ ಪ್ರಾಯಚ್ಛ-
ದೇತೇನ ಜಹೀತಿ ತೇನಾಭ್ಯಾಯತ ।

ಬಳಿಕ ಇಂದ್ರನು ಪ್ರಜಾಪತಿಯ ಸಮೀಪಕ್ಕೆ ಹೋಗಿ ಎಲೈ ಬ್ರಹ್ಮನೇ, ನನಗೆ ಒಬ್ಬ ಶತ್ರುವು ಜನಿಸಿರುವನು ಅವನನ್ನು ಸಂಹರಿಸುವ ಬಗೆ ಹೇಗೆ ಎಂದು ಪ್ರಾರ್ಥಿಸಲು ಪ್ರಜಾಪತಿಯು ಇಂದ್ರನನ್ನು ಹೆದರಬೇಡವೆಂದು ಸಂತೈಸಿ ಅವನ ವಜ್ರಾಯುಧವನ್ನು ಹರಿತವನ್ನಾಗಿ ಮಾಡಿಕೊಟ್ಟು ಈ ಆಯುಧದಿಂದ ನಿನ್ನ ಶತ್ರುವನ್ನು ಸಂಹರಿಸೆಂದು ಹೇಳಲು ಇಂದ್ರನು ಅದನ್ನು ತೆಗೆದುಕೊಂಡು ವೃತ್ರನ ಬಳಿಗೆ ಬಂದನು

ತಾವಬ್ರೂತಾಮಗ್ನೀಷೋಮೌ ಮಾ ಪ್ರಹಾರಾವಮಂತಃ ಸ್ವ ಇತಿ ಮಮ ನೈ ಯುವಗ್ಗ್ ಸ್ಥ ಇತ್ಯ-
ಬ್ರವೀನ್ಮಾಮಭ್ಯೇತಮಿತಿ ತೌ ಭಾಗಧೇಯಮೈಚ್ಛೇತಾಂ ತಾಭ್ಯಾಮೇತಮಗ್ನೀಷೋಮಾಯ-
ಮೇಕಾದಶಕಪಾಲಂ ಪೂರ್ಣಮಾಸೇ ಪ್ರಾಯಚ್ಛತ್ತಾವಬ್ರೂತಾಮಭಿ ಸಂದಹ್ಯಾ ನೈ ಸ್ವೋ ನ
ಶಕ್ನುವ ಐತುಮಿತಿ ಸ ಇಂದ್ರ ಆತ್ಮನಃ ಶೀತರೂರಾವಜನಯತ್ತಚ್ಛೈತರೂರಯೋರ್ಜನ್ಮ ಯ
ಏವಗ್ಂ ಶೀತರೂರಯೋರ್ಜನ್ಮ ವೇದ ನೈನಗ್ಂ ಶೀತರೂರೌ ಹತಸ್ತಾಭ್ಯಾಮೇನಮಭ್ಯನ-
ಯತ್ತಸ್ಮಾಜ್ಜಂಜಭ್ಯಮಾನಾದಗ್ನೀಷೋಮೌ ನಿರಕ್ರಾಮತಾಂ ॥

ಆನಂತರ ಇಂದ್ರನು ತನ್ನ ಆಯುಧದಿಂದ ವೃತ್ರನನ್ನು ಪ್ರಹರಿಸಲು ಉದ್ಯುಕ್ತನಾದಾಗ ಅಗ್ನಿ ಮತ್ತು ಸೋಮರು ಇಂದ್ರನನ್ನು ಹೂಡಿಯಬೇಡವಂದು ತಡೆಮು—ಎಲೈ ಇಂದ್ರನೇ, ಈಗ ವೃತ್ರನನ್ನು ಹೊಡೆಯಬೇಡ. ಅಗ್ನೀಸೋಮು ದೇವತೆಗಳಾದ ನಾವು ಈ ವೃತ್ರನ ಮುಖದಲ್ಲಿ ವಾಸಿಸುತ್ತಿರುವೆವು ಎನ್ನಲು, ಇಂದ್ರನು ಎಲೈ ಅಗ್ನೀಸೋಮರೇ, ನೀವು ನಮ್ಮವರು ತಾನೆ. ಆದ್ದರಿಂದ ನೀವು ವೃತ್ರನ ಶರೀರವನ್ನು ಬಿಟ್ಟು ನನ್ನ ಬಳಿಗೆ ಬನ್ನಿ. ಅನಂತರ ನಾನು ವೃತ್ರನನ್ನು ಸಂಹರಿಸುವೆನು ಎಂದನು ಅದನ್ನು ಕೇಳಿ ಅಗ್ನೀಸೋಮುದೇವತೆಗಳು—ಎಲೈ ಇಂದ್ರನೇ, ನೀನು ಹೇಳುವಂತೆ ನಾವು ಮಾಡುವುದಾದರೆ ನಮಗೆ ಏನು ಉಪಕಾರ ಮಾಡುತ್ತೀಯೆ ? ನಮಗೂ ಯಜ್ಞದಲ್ಲಿ ಭಾಗವನ್ನು ಕಲ್ಪಿಸಿ

ಕೊಡುವುದಾದರೆ ನೀನು ಹೇಳುವಂತೆ ಕೇಳುವೆವು ಎನ್ನಲು ಅದಕ್ಕೆ ಇಂದ್ರನು ಸಮ್ಮತಿಸಿ ಅವರಿಗೆ ಪೂರ್ಣಮಾಸ ಯಾಗದಲ್ಲಿ ಏಕಾದಶ ಕಪಾಲವೆಂಬ ಪೋರಾಡಶ ಹವಿಸ್ಸಿನ ಆಹುತಿಭಾಗವನ್ನು ಕಲ್ಪಿಸಿಕೊಟ್ಟನು. ಬಳಿಕ ಅಗ್ನಿ ಸೋಮದೇವತೆಗಳು ಈ ರೀತಿ ತಮಗೆ ಬೇಕಾದ ವರವನ್ನು ಪಡೆದರೂ ಸಹ ಇಂದ್ರನನ್ನು ಕುರಿತು--ಎಲೈ ಇಂದ್ರನೇ, ಈಗ ನಾವು ವೃತ್ರನ ಮುಖದಿಂದ ಹೊರಟುಬರಲು ಸಾಧ್ಯವಿಲ್ಲ. ನಾವು ವೃತ್ರನ ಹಲ್ಲುಗಳ ಮಧ್ಯೆ ಸಿಕ್ಕಿ ಬಲವಾಗಿ ಹಿಡಿಯಲ್ಪಟ್ಟಿದ್ದೇವೆ ಅವನು ಬಾಯನ್ನು ತೆರೆದಲ್ಲದೆ ನಾವು ಈಚೆಗೆ ಬರಲಾಗುವುದಿಲ್ಲ ಎಂದರು. ಆಗ ಇಂದ್ರನು ಇದಕ್ಕೊಂದುಪಾಯವನ್ನು ಯೋಚಿಸಿದನು ತನ್ನ ಶರೀರದಿಂದ ಶೀತಜ್ವರ ಮತ್ತು ಅದರಿಂದ ಉಂಟಾಗುವ ಮಹಾ ತಾಪವನ್ನು ಸೃಷ್ಟಿಮಾಡಿದನು. ಛಳಿಜ್ವರವು ಪ್ರಪಂಚದಲ್ಲಿ ಜನರನ್ನು ಬಾಧಿಸುವುದಕ್ಕೆ ಇದೇ ಮೊದಲು. ಈ ಛಳಿ ಜ್ವರದ, ಈ ರೀತಿಯಾದ ಉತ್ಪತ್ತಿಕ್ರಮವನ್ನು ಯಾವ ಪುರುಷನು ತಿಳಿಯುವನೋ ಅವನಿಗೆ ಈ ಶೀತಜ್ವರದಿಂದ ಬಾಧೆ ಇರುವುದಿಲ್ಲ. ಬಳಿಕ ಇಂದ್ರನು ತಾನು ಸೃಷ್ಟಿಸಿದ ಛಳಿಜ್ವರಗಳನ್ನು ಕರೆದುಕೊಂಡು ಹೋಗಿ ವೃತ್ರಾಸುರನ ಶರೀರವನ್ನು ಪ್ರವೇಶಿಸುವಂತೆ ಮಾಡಿದನು ಆಗ ವೃತ್ರಾಸುರನು ಛಳಿಯಿಂದ ನಡುಗುತ್ತಾ ಜ್ವರದ ತಾಪದಿಂದ ಬಳಲಿ ಆಯಾಸದಿಂದ ನಿಟ್ಟುಸುರನ್ನು ಬಿಡುವುದಕ್ಕಾಗಿ ಬಾಯನ್ನು ಅಗಲವಾಗಿ ತೆರೆದನು. ತತ್ಕ್ಷಣ ಅವನ ಬಾಯಿಯಿಂದ ಅಗ್ನಿಸೋಮದೇವದೇವತೆಗಳು ಹೊರಹೊರಟು ಈಚೆಗೆ ಬಂದರು

ಪ್ರಾಣಾಪಾನೌ ವಾ ಏನಂ ತದಜಹಿತಾಂ ಪ್ರಾಣೋ ವೈ ದಕ್ಷೋಽಪಾನಃ ಕ್ರತುಸ್ತಸ್ಮಾಜ್ಜಂಜಭ್ಯ-ಮಾನೋ ಬ್ರೂಯೊನ್ಮಯಿ ದಕ್ಷಕ್ರತೂ ಇತಿ ಪ್ರಾಣಾಪಾನಾವೇವಾತ್ಮನ್ಧತ್ತೇ ಸರ್ವ-ಮಾಯುರೇತಿ ।

ಅನಂತರ ಪ್ರಾಣ, ಅಪಾನ ಎಂಬ ವಾಯುಗಳು ಆ ವೃತ್ರನನ್ನು ತ್ಯಜಿಸಿದವು ಎಂದರೆ ಅವನ ಶರೀರವನ್ನು ಬಿಟ್ಟು ಹೋದವು. ಪ್ರಾಣಶಬ್ದಕ್ಕೆ ದಕ್ಷವೆಂದೂ ಅಪಾನಶಬ್ದಕ್ಕೆ ಕ್ರತುವೆಂದೂ ಅರ್ಥವಿರುವುದು ದಕ್ಷವೆಂದರೆ ಕೆಲಸ ಕಾರ್ಯಗಳಲ್ಲಿ ಕುಶಲತೆಯು, ಪ್ರಜ್ಞೆಯು, ಕ್ರತುವೆಂದರೆ ಕೆಲಸಮಾಡುವ ದೇಹಶಕ್ತಿ, ಸಾಮರ್ಥ್ಯ, ಇವೆರಡೂ ಬಾಯನ್ನು ತೆರೆದಿದ್ದ ಆ ವೃತ್ರನನ್ನು ಬಿಟ್ಟುಹೋದವು ಆದ್ದರಿಂದ ಯಜ್ಞಕರ್ಮವನ್ನು ನೆರವೇರಿಸುತ್ತಿರುವಾಗ ದೇಹಚೇಷ್ಟೆ ಮಾಡಿದರೂ, ಆಕಳಿಸಿ ಬಾಯನ್ನು ತೆರೆದರೂ ಆಗ **ಮಯಿ ದಕ್ಷಕ್ರತೂ** ಎಂಬ ಮಂತ್ರವನ್ನುಚ್ಚರಿಸ ಬೇಕು. ಹಾಗೆಮಾಡಿದರೆ ಪ್ರಾಣಾಪಾನಗಳು ಯಜಮಾನನನ್ನು ಬಿಟ್ಟುಹೋಗದೆ ಸ್ಥಿರವಾಗಿ ನಿಲ್ಲುವವು, ದೀರ್ಘಾಯುಸ್ಸೂ ಉಂಟಾಗುವುದು

ಸ ದೇವತಾ ವೃತ್ರಾನ್ನಿರ್ಹೂಯ ವಾರ್ತ್ರಘ್ನಗ್ಂ ಹವಿಃ ಪೂರ್ಣಮಾಸೇ ನಿರವಪದ್ ಘ್ನಂತಿ ವಾ ಏನಂ ಪೂರ್ಣಮಾಸ ಆಮಾವಾಸ್ಯಾಯಾಂ ಪ್ಯಾಯಯಂತಿ ತಸ್ಮಾದ್ವಾರ್ತ್ರಘ್ನೀ ಪೂರ್ಣಮಾಸೇಽನೂಚ್ಯೇತೇ ವೃಧನತ್ವೀ ಅಮಾವಾಸ್ಯಾಯಾಂ ।

ಅನಂತರ ಇಂದ್ರನು ವೃತ್ರಾಸುರನ ಮುಖದಲ್ಲಿ ಇದ್ದ ಅಗ್ನೀಷೋಮಾದಿದೇವತೆಗಳನ್ನೆಲ್ಲಾ ಅಲ್ಲಿಂದ ಈಚೆಗೆ ಕರೆದು ವೃತ್ರನ ಸಂಹಾರಕ್ಕೆ ಸಾಧನಭೂತವಾದ ಹವಿರಾಜ್ಯಭಾಗದ್ರವ್ಯರೂಪವಾದ ಆಹುತಿಯನ್ನು ಪೌರ್ಣಮಾಸಿಯ ದಿವಸ ಸಿದ್ಧಪಡಿಸಿದನು. ಲೋಕವ್ಯವಹಾರದಲ್ಲಿಯೂ ಅಂಧಕಾರವೆಂಬ ಎಲ್ಲೆಲ್ಲಿಯೂ ಆವರಿಸಿರುವ ಕತ್ತಲೆಯೆಂಬ ಶತ್ರುವು ಪೌರ್ಣಮಾಸಿಯ ಪ್ರಕಾಶಮಾನವಾದ ಬೆಳದಿಂಗಳಿನಿಂದ ನಾಶವಾಗುವ ವಿಷಯವು ಎಲ್ಲರಿಗೂ ತಿಳಿದೇ ಇದೆ. ಆದರೆ

ಅಮಾವಾಸ್ಯೆಯ ದಿವಸ ಬೆಳದಿಂಗಳಿನ ಪ್ರಕಾಶವು ಇರುವುದಿಲ್ಲವಾದ್ದರಿಂದ ಆಗ ಕತ್ತಲೆಯೆಂಬ ಶತ್ರುವು (ವೃತ್ರ) ಎಲ್ಲೆಲ್ಲಿಯೂ ಆವರಿಸಿ ವೃದ್ಧಿಯಾಗುವುದು. ಆದುದರಿಂದ ವೃತ್ರಹನನಕ್ಕಾಗಿ ಪೂರ್ಣಮಾಸಿಯ ದಿವಸ ಅಗ್ನೀಷೋಮೀಯ ಆಜ್ಯಭಾಗಗಳೆಂಬ ಆಹುತಿಗಳಿಗೆ ಪೂರ್ವಭಾವಿಯಾಗಿ,

ಅಗ್ನಿರ್ವೃತ್ರಾಣಿ ಜಂಘನದ್ಧ್ರವಿಣಸ್ಯುರ್ವಿಪನ್ಯಯಾ । ಸಮಿದ್ಧಃ ಶುಕ್ರ ಆಹುತಃ ।

(ಋ ಸಂ. ೬-೧೬-೩೪)

ತ್ವಂ ಸೋಮಾಸಿ ಸತ್ಪತಿಸ್ತ್ವಂ ರಾಜೋತ ವೃತ್ರಹಾ । ತ್ವಂ ಭದ್ರೋ ಅಸಿ ಕ್ರತುಃ ॥

(ಋ ಸಂ ೧-೯೧-೫)

ಎಂಬ ಋಕ್ಕುಗಳನ್ನು ಪುರೋನುವಾಕ್ಯಾಮಂತ್ರಗಳನ್ನಾಗಿ ಪರಿಸಬೇಕು. ಈ ಎರಡು ಋಕ್ಕುಗಳಲ್ಲಿಯೂ ವೃತ್ರಹನನವನ್ನು ಸೂಚಿಸುವ ಶಬ್ದಗಳ ಪ್ರಯೋಗವಿರುವುದರಿಂದ ಈ ಋಕ್ಕುಗಳಿಗೆ ವಾರ್ತ್ರಘ್ನೀ ಋಕ್ಕುಗಳೆಂದು ಹೆಸರು. ಏಕೆಂದರೆ— ಪೌರ್ಣಮಾಸಿಯ ದಿವಸವೇ ವೃತ್ರನ ಸಂಹಾರವಾಯಿತು ಆದುದರಿಂದ ಆ ದಿವಸ ವೃತ್ರಹನನ ಸಂಬಂಧವಾದ ಋಕ್ಕುಗಳನ್ನು ಪರಿಸಿ ಹೋಮ ಮಾಡುವುದು ಯುಕ್ತವಾಗಿದೆ ಅಮಾವಾಸ್ಯೆಯ ದಿವಸ ಅಂಧಕಾರವು ವೃದ್ಧಿಯಾಗಿರುವುದು ಎಂದರೆ, ತಮಸ್ಸಿನಿಂದ ಸರ್ವವನ್ನು ವ್ಯಾಪಿಸುವ ವೃತ್ರನು ಅಭಿವೃದ್ಧಿಯನ್ನೈದುವನು. ಆದುದರಿಂದ ಆ ದಿವಸ ವೃಧಿ-ವೃದ್ಧೌ ಎಂಬ ವೃದ್ಧಿಯನ್ನು ಸೂಚಿಸುವ ಧಾತುವಿನಿಂದ ನಿಷ್ಪನ್ನವಾದ ಶಬ್ದಗಳನ್ನೊಳಗೊಂಡ—

ಅಗ್ನಿಃ ಪ್ರಶ್ನೇನ ಮನ್ಮನಾ ಶುಂಭಮಾನಸ್ತನ್ವಂ ೧ ಸ್ವಾಂ । ಕವಿರ್ವಿಪ್ರೇಣ ವಾವೃಧೇ ॥

(ಋ ಸಂ ೮-೪೪-೧೨)

ಸೋಮ ಗೀರ್ಭಿಷ್ಟ್ವಾ ವಯಂ ವರ್ಧಯಾಮೋ ವಚೋವಿದಃ । ಸುಮೃಳೀಕೋ ನ ಆ ವಿಶ ॥

(ಋ ಸಂ ೧-೯೧-೧೧)

ಎಂಬ ಋಕ್ಕುಗಳನ್ನು ಪರಿಸಬೇಕು ವೃದ್ಧಿಯನ್ನು ಸೂಚಿಸುವ ಶಬ್ದಗಳಿಂದ ಸಹಿತವಾದ ಈ ಋಕ್ಕುಗಳಿಗೆ ವೃಧನ್ವತೀ ಋಕ್ಕುಗಳೆಂದು ಹೆಸರು ಇವುಗಳನ್ನು ಅಂಧಕಾರದಿಂದ ವೃದ್ಧಿಯಾಗಿರುವ ಅಮಾವಾಸ್ಯೆಯ ದಿವಸ ಪರಿಸಬೇಕು

ತತ್ಸಗ್ಂಸ್ಥಾಪ್ಯ ವಾರ್ತ್ರಘ್ನಗ್ಂ ಹವಿರ್ವಜ್ರಮಾದಾಯ ಪುನರಭ್ಯಾಯತ ತೇ ಅಬ್ರೂತಾಂ ದ್ಯಾವಾಪೃಥಿವೀ ಮಾ ಪ್ರಹಾರಾವಯೋರ್ವೈ ಶ್ರಿತ ಇತಿ ತೇ ಅಬ್ರೂತಾಂ ವರಂ ವೃಣಾವಹೈ ನಕ್ಷತ್ರವಿಹಿತಾಹಮಸಾನೀತ್ಯಸಾವಬ್ರವೀಚ್ಚಿತ್ರವಿಹಿತಾಹಮಿತೀಯಂ ತಸ್ಮಾನ್ನಕ್ಷತ್ರವಿಹಿತಾಸೌ ಚಿತ್ರವಿಹಿತೇಯಂ ಯ ಏವಂ ದ್ಯಾವಾಪೃಥಿವ್ಯೋರ್ವರಂ ವೇದೈನಂ ವರೋ ಗಚ್ಛತಿ ಸ ಆಭ್ಯಾಮೇವ ಪ್ರಸೂತ ಇಂದ್ರೋ ವೃತ್ರಮಹನ್ ।

ಅನಂತರ ಇಂದ್ರನು ವೃತ್ರಹನನಹೇತುಭೂತವಾದ ಆಜ್ಯಭಾಗ ಮತ್ತು ಪವಿಸ್ಸುಗಳನ್ನು ಪೂರ್ತಿಯಾಗಿ ನೆರವೇರಿಸಿ ಹಿಂದಿನಂತೆ ವಜ್ರಾಯುಧವನ್ನು ಕೈಯಲ್ಲಿ ಹಿಡಿದುಕೊಂಡು ವೃತ್ರನನ್ನು ಸಂಹಾರಮಾಡುವ ಉದ್ದಿಶ್ಯದಿಂದ ಅವನ

ಅಭಿಮುಖವಾಗಿ ನುಗ್ಗಿಹೋದನು. ಆಗ ದ್ಯಾವಾಪೃಥಿವಿಗಳು (ಭೂಮ್ಯಂತರಿಕ್ಷಗಳು) ಇಂದ್ರನನ್ನು ತಡೆದು—ಎಲೈ ಇಂದ್ರನೇ, ನೀನು ಈ ವೃತ್ರನನ್ನು ಕೊಲ್ಲಬೇಡ. ಇವನು ಭೂಮಿಯಿಂದ ಸ್ವರ್ಗಪರ್ಯಂತರ ಇರುವ ಪ್ರದೇಶವನ್ನೆಲ್ಲಾ ವ್ಯಾಪಿಸಿ ಇರುವನು. ನಮ್ಮನ್ನಾಶ್ರಯಿಸಿ ಇರುವ ಇವನನ್ನು ನಾವು ಬಿಟ್ಟುಕೊಡಲಾರೆವು ಎಂದವು ಆದಕ್ಕೆ ಇಂದ್ರನು ಒಪ್ಪದಿರಲು ಮತ್ತೆ ದ್ಯಾವಾಪೃಥಿವಿಗಳು ಇಂದ್ರನನ್ನು ಕುರಿತು—ಎಲೈ ಇಂದ್ರನೇ, ಒಂದು ವೇಳೆ ನಾವು ವೃತ್ರ ಸಂಹಾರಕ್ಕೆ ಅವಕಾಶವನ್ನು ಕೊಡುವುದಾದರೆ ನಾವು ಕೇಳುವ ವರಗಳನ್ನು ಕೊಡಬೇಕು ಎಂದು ಹೇಳಲು ಇಂದ್ರನು ಹಾಗೆಯೇ ಆಗಲೆಂದನು. ಆಗ ಅಂತರಿಕ್ಷವು (ದ್ಯೌಃ) ತಾನು ನಕ್ಷತ್ರಗಳಿಂದ ಅಲಂಕೃತವಾಗಿರಬೇಕೆಂದು ವರವನ್ನು ಬೇಡಿತು. ಭೂಮಿಯು ನಾನಾವಿಧವಾದ ಮನುಷ್ಯಪಶುವೃಕ್ಷಪರ್ವತನದೀಸಮುದ್ರಾದಿ ವಿಚಿತ್ರವಸ್ತುಗಳಿಂದ ಕೂಡಿರ ಬೇಕೆಂದು ವರವನ್ನು ಕೇಳಿತು ಇಂದ್ರನು ಅದರಂತೆ ವರವನ್ನು ಕೊಟ್ಟನು. ದ್ಯಾವಾಪೃಥಿವಿಗಳ ಈ ವಿಧವಾದ ವರಪ್ರಾಪ್ತಿಕ್ರಮವನ್ನು ತಿಳಿಯುವ ಪುರುಷನು ತನಗೆ ಬೇಕಾದ ಇಷ್ಟಾರ್ಥಗಳನ್ನು ಪಡೆದು ಸುಖಿಸುವನು ಬಳಿಕ ಇಂದ್ರನು ದ್ಯಾವಾಪೃಥಿವಿಗಳ ಅನುಮತಿಯನ್ನು ಪಡೆದು ವೃತ್ರನನ್ನು ವಜ್ರಾಯುಧದಿಂದ ಹೊಡೆದು ಸಂಹರಿಸಿದನು.

ತೇ ದೇವಾ ವೃತ್ರಗ್ಂ ಹತ್ವಾಗ್ನೀಷೋಮಾವಬ್ರುವನ್ ಹವ್ಯಂ ನೋ ವಹತಮಿತಿ ತಾವಬ್ರೂತಾ-ಮಪತೇಜಸೌ ವೈ ಥ್ಯೌ ವೃತ್ರೇ ವೈ ತ್ಯಯೋಸ್ತೇಜ ಇತಿ ತೇಽಬ್ರುವನ್ ಕ ಇದಮಚ್ಛೈತೀತಿ ಗೌರಿತ್ಯಬ್ರುವನ್ಗೌರ್ವಾವ ಸರ್ವಸ್ಯ ಮಿತ್ರಮಿತಿ ಸಾಬ್ರವೀದ್ವರಂ ವೃಣೈ ಮಯ್ಯೇವ ಸತೋ-ಭಯೀನ ಭುನಜಾಥ್ವಾ ಇತಿ ತದ್ಗೌರಾಹರತ್ತಸ್ಮಾದ್ಗವಿ ಸತೋಭಯೀನ ಭುಜಂತ ಏತದ್ವಾ ಅಗ್ನೇಸ್ತೇಜೋ ಯದ್ಘೃತಮೇತತ್ಸೋಮಸ್ಯ ಯತ್ಪಯೋ ಯ ಏವಮಗ್ನೀಷೋಮಯೋ-ಸ್ತೇಜೋ ವೇದ ತೇಜಸ್ವ್ಯೇವ ಭವತಿ ।

ವೃತ್ರಹನನಾನಂತರ ಇಂದ್ರನ ಸಖಿಪದಲ್ಲಿದ್ದ ದೇವತೆಗಳೆಲ್ಲರೂ ಅಗ್ನೀಷೋಮರನ್ನು ಕುರಿತು—ಎಲೈ ಅಗ್ನೀ ಸೋಮದೇವತೆಗಳೇ, ನೀವು ಈಗ ವೃತ್ರನ ಮುಖದಿಂದ ಹಿಂತಿರುಗಿ ಬಂದಿರುವಿರಷ್ಟೆ. ಇನ್ನು ಮುಂದೆ ನಮಗಾಗಿ ಯಜ್ಞಾದಿಗಳಲ್ಲಿ ಹೋಮಮಾಡುವ ಹವಿಸ್ಸುಗಳನ್ನು ವಹಿಸಿ ತಂದು ನಮಗೆ ಅರ್ಪಿಸಿರಿ ಎಂದರು ಆದಕ್ಕೆ ಆ ಅಗ್ನೀಷೋಮರು ದೇವತೆಗಳನ್ನು ಕುರಿತು—ಎಲೈ ದೇವತೆಗಳೇ, ನಾವು ಬಹಳ ಕಾಲದಿಂದಲೂ ವೃತ್ರನ ಶರೀರದಲ್ಲಿದ್ದು ಅವನ ದಂತದಶನಾದಿಗಳಿಂದ ನಿಸ್ತೇಜಸ್ಕರಾಗಿದೇವೆ, ಎಂದರೆ ನಮ್ಮ ಶಕ್ತಿಯು ಕುಗ್ಗಿಹೋಗಿದೆ ನಮ್ಮ ಶಕ್ತಿ ಅಥವಾ ತೇಜಸ್ಸೆಲ್ಲವೂ ವೃತ್ರನಲ್ಲಿಯೇ ನಿಂತುಹೋಗಿದೆ ಎಂದರು ಆಗ ದೇವತೆಗಳು ವೃತ್ರನ ಶರೀರದಲ್ಲಿದ್ದು ಅಗ್ನಿಸೋಮರು ಬಿಟ್ಟುಬಂದ ತೇಜಸ್ಸನ್ನು ಹಿಂದಕ್ಕೆ ತರುವ ಬಗೆ ಹೇಗೆಂದು ತಮ್ಮತಮ್ಮಲ್ಲಿಯೇ ಆಲೋಚಿಸಿ, ಗೋವು ಯಾರಿಗೂ ಕೆಡಕುಮಾಡದೆ ಎಲ್ಲರಲ್ಲಿಯೂ ಸ್ನೇಹಭಾವದಿಂದ ವರ್ತಿಸುತ್ತಿರುವುದರಿಂದ ಅದನ್ನು ಕಳುಹಿಸಿ ವೃತ್ರನಲ್ಲಿದ್ದ ತೇಜಸ್ಸನ್ನು ತರಿಸಬೇಕೆಂದು ನಿರ್ಧರಿಸಿದರು ಬಳಿಕ ಅವರು ಹಸುವನ್ನು ಕರೆದು ವೃತ್ರನಲ್ಲಿರುವ ತೇಜಸ್ಸನ್ನು ತರಬೇಕೆಂದು ಹೇಳಲು, ಅದು ಹಾಗೆಯೇ ಆಗಲಿ ಆದರೆ ನಾನು ತರುವ ತೇಜಸ್ಸು ಹಾಲು ತುಪ್ಪ ಇವುಗಳ ರೂಪದಲ್ಲಿ ಸದಾ ನನ್ನಲ್ಲಿಯೇ ನೆಲಸಿರಬೇಕು ಅವುಗಳನ್ನು ಜನರು ನನ್ನಿಂದ ಪಡೆದು ಭೋಜನಾದಿಗಳನ್ನು ನೆರವೇರಿಸಬೇಕು. ಈ ರೀತಿ ವರವನ್ನು ಕೊಡುವುದಾದರೆ ತರುತ್ತೇನೆಂದಿತು. ದೇವತೆಗಳು ಹಾಗೆಯೇ ಆಗಲೆಂದು ಹೇಳಿ ಅದರಂತೆ ವರವನ್ನು ಕೊಟ್ಟರು. ವರವನ್ನು ಪಡೆದು ಗೋವು ಆ ತೇಜಸ್ಸನ್ನು ತಂದಿತು. ಈ ವಿಧವಾದ ವರಪ್ರದಾನದ ಫಲವಾಗಿ ಈಗಲೂ ಲೋಕದಲ್ಲಿರುವ ಜನರು ಗೋವುಗಳಿಂದಲೇ ಹಾಲು, ತುಪ್ಪ ಮೊದಲಾದ ಪುಷ್ಟಿಪ್ರದವಾದ ಆಹಾರವನ್ನು ಆಗಾಗ್ಯೆ ಪಡೆಯುತ್ತಾ

ಭೋಜನಮಾಡುತ್ತಿರುವರು ಇಲ್ಲಿ ತುಪ್ಪ ಅಥವಾ ಘೃತವು ಅಗ್ನಿಯ ತೇಜಸ್ಸೆಂದು ಹೇಳಲ್ಪಡುವುದು. ಆದುದರಿಂದಲೇ ಯಜ್ಞಾದಿಗಳಲ್ಲಿ ಜನರು ಘೃತ ಅಥವಾ ತುಪ್ಪದಿಂದ ಅಗ್ನಿಯಲ್ಲಿ ಹೋಮಾದಿಗಳನ್ನು ಮಾಡಿ ಅಗ್ನಿಯು ಪ್ರಜ್ವಲಿಸುವಂತೆ ಮಾಡುವರು. ಹಾಲು ಸೋಮದ ತೇಜಸ್ಸೆಂದು ಹೇಳಲ್ಪಡುವುದು ಏಕೆಂದರೆ ಸೋಮವು ಹಾಲಿನಂತೆ ದ್ರವರೂಪದಲ್ಲಿರುವುದು ಮತ್ತು ಸೋಮರಸದ ರುಚಿಯನ್ನು ಹೆಚ್ಚಿಸುವುದಕ್ಕಾಗಿ ಆದರ ಜತೆಗೆ ಹಾಲನ್ನು ಮಿಶ್ರಮಾಡುವರು. ಇದಕ್ಕೆ ಗವಾಶಿರವೆಂದು ಹೆಸರು. ಈ ರೀತಿ ಹಾಲನ್ನು ಮಿಶ್ರಮಾಡುವುದರಿಂದ ಸೋಮದ ತೇಜಸ್ಸು ಅಥವಾ ಸತ್ತ್ವವು (ರುಚಿಯು) ಹೆಚ್ಚುವುದು. ಈ ರೀತಿಯಾದ ಅಗ್ನಿಯ ಮತ್ತು ಸೋಮದ ತೇಜಸ್ಸುಗಳ ಮಹಿಮೆಯನ್ನು ತಿಳಿಯುವ ಪುರುಷನು ತೇಜಸ್ವಿಯಾಗುವನು

ಬ್ರಹ್ಮವಾದಿನೋ ವದಂತಿ ಕಿಂದೇವತ್ಯಂ ಪೌರ್ಣಮಾಸಮಿತಿ ಪ್ರಾಜಾಪತ್ಯಮಿತಿ ಬ್ರೂಯಾತ್ತೇನೇಂದ್ರಂ ಜ್ಯೇಷ್ಠಂ ಪುತ್ರಂ ನಿರವಾಸಾಯಯದಿತಿ ತಸ್ಮಾಜ್ಜ್ಯೇಷ್ಠಂ ಪುತ್ರಂ ಧನೇನ ನಿರವಾಸಯಂತಿ ॥

(ತೈ ಸಂ ೨-೫-೨-೧ ರಿಂದ ೭)

ಈ ಪೌರ್ಣಮಾಸ್ಯವೆಂಬ ಯಾಗಕ್ಕೆ ಮುಖ್ಯದೇವತೆಯಾರು ಎಂದು ಬ್ರಹ್ಮವಾದಿಗಳು ಕೇಳುವರು ಆದಕ್ಕೆ ಪ್ರಜಾಪತಿಯೇ ಯಜ್ಞಾಧಿಷ್ಠಾತೃವಾದ ದೇವತೆಯು ಎಂದು ಪ್ರತ್ಯುತ್ತರವನ್ನು ಹೇಳಬೇಕು ಆದರೆ ಈ ಯಾಗದಲ್ಲಿ ಪ್ರಜಾಪತಿಗೆ ಯಾವ ಹವಿರ್ಭಾಗವೂ ಇರುವುದಿಲ್ಲವಲ್ಲ ? ಆದ್ದರಿಂದ ಈ ಯಜ್ಞಕ್ಕೆ ಪ್ರಜಾಪತಿಯು ಹೇಗೆ ದೇವತೆಯು ? ಎಂದರೆ ಪೂರ್ವದಲ್ಲಿ ಪ್ರಜಾಪತಿಯು ಎಲ್ಲಾ ಯಜ್ಞಗಳನ್ನೂ ಸೃಷ್ಟಿಮಾಡಿದನು ಈ ವಿಷಯವು—

ಪ್ರಜಾಪತಿರ್ಯಜ್ಞಾನಸೃಜತಾಗ್ನಿಹೋತ್ರಂ ಚಾಗ್ನಿಷ್ಟೋಮಂ ಚ ಪೌರ್ಣಮಾಸೀಂ ಚೋಕ್ಥ್ಯಂ ಚಾಮಾವಾಸ್ಯಾಂ ಚಾತಿರಾತ್ರಂ ಚ ॥

(ತೈ ಸಂ. ೧-೫-೯-೧)

ಎಂಬ ಶ್ರುತಿವಾಕ್ಯವಲ್ಲಿ ಹೇಳಲಾಗಿದೆ ಎಂದರೆ ಪ್ರಜಾಪತಿಯು—ಅಗ್ನಿಹೋತ್ರ, ಅಗ್ನಿಷ್ಟೋಮ, ಪೌರ್ಣಮಾಸಿ (ಪೌರ್ಣಮಾಸಿಯ ದಿನದಲ್ಲಿ ಮಾಡುವ ಯಾಗ), ಉಕ್ಥ್ಯ, ಅಮಾವಾಸ್ಯಾ (ಅಮಾವಾಸ್ಯೆಯ ದಿನದಲ್ಲಿ ಮಾಡುವ ಯಾಗ) ಅತಿರಾತ್ರ ಮೊದಲಾದ ಯಜ್ಞಗಳನ್ನೆಲ್ಲಾ ಸೃಷ್ಟಿಮಾಡಿದನು ಎಂದು ಇಲ್ಲಿ ಹೇಳಿದೆ. ಪ್ರಜಾಪತಿಯು ಸೃಷ್ಟಿಸಿದಂತಹ ಯಜ್ಞಗಳೆಲ್ಲಾ ಅವನ ಸ್ವಕೀಯವಾದ ಆಸ್ತಿಯಾಯಿತು ಆದುದರಿಂದ ಲೋಕವ್ಯವಹಾರದಲ್ಲಿ ರೂಢಿಯಾಗಿರುವಂತೆ ಎಂದರೆ ತನ್ನ ಆಸ್ತಿಯನ್ನು ತನ್ನ ಜ್ಯೇಷ್ಠಪುತ್ರನಿಗೆ ಕೊಡುವಂತೆ, ಪ್ರಜಾಪತಿಯು ತನ್ನ ಜ್ಯೇಷ್ಠಪುತ್ರನಾದ ಇಂದ್ರನಿಗೆ ಈ ಯಜ್ಞಗಳ ಮುಖ್ಯದೇವತ್ವವನ್ನು ವಹಿಸಿಕೊಟ್ಟನು ಈ ವಿಷಯವು—**ತೇನೇಂದ್ರಂ ನಿರವಾಸಾಯಯತ್ತೇನೇಂದ್ರಃ ಪರಮಾಂ ಕಾಷ್ಠಾಮಗಚ್ಛತ್**—ಎಂಬ ತೈತ್ತಿರೀಯಸಂಹಿತಾ ವಾಕ್ಯದಲ್ಲಿಯೇ ಹೇಳಿದೆ ಆದುದರಿಂದ ಪುತ್ರನಾದ ಇಂದ್ರನಿಗೆ ಪೌರ್ಣಮಾಸ್ಯಯಾಗದಲ್ಲಿ ಅರ್ಪಿತವಾಗುವ ಹವಿಸ್ಸುಗಳೆಲ್ಲವೂ ತಂದೆಯಾದ ಪ್ರಜಾಪತಿಗೆ ಅರ್ಪಿತವಾದಂತೆಯೇ ಎಂದು ಭಾವಿಸಬೇಕು ಈ ಕಾರಣದಿಂದಲೇ ಈ ಪೌರ್ಣಮಾಸ್ಯಯೆಂಬ ಯಾಗವು ಪ್ರಾಜಾಪತ್ಯ ಎಂದರೆ ಪ್ರಜಾಪತಿಸಂಬಂಧವಾದುದು ಎಂದು ಹೇಳುವ ರೂಢಿಯಿದೆ. ಈ ಕ್ರಮವನ್ನನುಸರಿಸಿ ಈಗಲೂ ಲೋಕವ್ಯವಹಾರದಲ್ಲಿ ತಂದೆಯು ತನ್ನ ಧನಾದಿಯಾದ ಸಮಸ್ತ ಆಸ್ತಿಯನ್ನೂ ತನ್ನ ಹಿರಿಯಮಗನಿಗೆ ಕೊಡುವುದು ರೂಢಿಯಲ್ಲಿದೆ.

॥ ಸಂಹಿತಾಪಾಠಃ ॥

ಅಕ್ಷೋದಯಚ್ಛವಸಾ ಕ್ಷಾಮ ಬುಧ್ನಂ ವಾರ್ಣ ವಾತಸ್ತವಿಷೀಭಿರಿಂದ್ರಃ ।

ದೃಳ್ಹಾನ್ಯೌಭ್ನಾದುಶಮಾನ ಓಜೋಽವಾಭಿನತ್ಕಕುಭಃ ಪರ್ವತಾನಾಂ ॥ ೪ ॥

॥ ಪದಪಾಠಃ ॥

ಅಕ್ಷೋದಯತ್ । ಶವಸಾ । ಕ್ಷಾಮ । ಬುಧ್ನಂ । ವಾಃ । ನ । ವಾತಃ । ತವಿಷೀಭಿಃ । ಇಂದ್ರಃ ।

ದೃಳ್ಹಾನಿ । ಔಭ್ನಾತ್ । ಉಶಮಾನಃ । ಓಜಃ । ಅವ । ಅಭಿನತ್ । ಕಕುಭಃ । ಪರ್ವತಾನಾಂ ॥ ೪ ॥

॥ ಸಾಯಣಭಾಷ್ಯಂ ॥

ಇಂದ್ರಃ ಪರಮೈಶ್ವರ್ಯಯುಕ್ತಃ ಶವಸಾ ಬಲೇನ ಬುಧ್ನಮಂತರಿಕ್ಷಂ ಕ್ಷಾಮ ಕ್ಷೇಣೋದಕ-ಮಕ್ಷೋದಯತ್ । ಸಂಪಿಪೇಷ । ತತ್ರ ದೃಷ್ಟಾಂತಃ । ವಾತೋ ವಾಯುಸ್ತವಿಷೀಭಿರ್ಬಲೈರ್ವಾರ್ನ ಉದಕಮಿವ ತದ್ವತ್ । ಕಿಂಚ ಓಜೋ ಬಲಮುಶಮಾನಃ ಕಾಮಯಮಾನ ಇಂದ್ರೋ ದೃಳ್ಹಾನಿ ದೃಢಾನಿ ಸ್ಥಿರಾಣ್ಯಪ್ಯಭ್ರಾಣ್ಯೌಭ್ನಾತ್ । ಅಭಾಂಕ್ಷೀತ್ । ತಥಾ ಪರ್ವತಾನಾಂ ಗಿರೀಣಾಂ ಕಕುಭಃ ಪಕ್ಷಾನವಾಭಿ-ನತ್ । ಅತ್ಯಂತಮಭೈತ್ಸೀತ್ ॥

॥ ಪ್ರತಿಪದಾರ್ಥ ॥

ವಾತಃ—ವಾಯುವು । **ತವಿಷೀಭಿಃ**—ತನ್ನ ಶಕ್ತಿಗಳಿಂದ । **ವಾಃ ನ**—ಉದಕವನ್ನು ಕ್ಷುಬ್ಧವನ್ನಾಗಿ (ಅಲ್ಲೋಲಕಲ್ಲೋಲವನ್ನಾಗಿ) ಮಾಡುವಂತೆ । **ಇಂದ್ರಃ**—ಇಂದ್ರನು । **ಶವಸಾ**—ತನ್ನ ಬಲದಿಂದ । **ಬುಧ್ನಂ**—ಅಂತರಿಕ್ಷವನ್ನು । **ಕ್ಷಾಮ**—ಉದಕವೆಲ್ಲಾ ಪೂರ್ಣವಾಗಿ ಸುರಿಯುವಂತೆ । **ಅಕ್ಷೋದಯತ್**—ಬಲವಾಗಿ ಅಲ್ಲಾಡಿಸಿದನು । **ಓಜಃ**—ವೀರ್ಯವನ್ನು । **ಉಶಮಾನಃ**—ಅಪೇಕ್ಷಿಸುವ ಇಂದ್ರನು । **ದೃಳ್ಹಾನಿ**—ದೃಢವಾದ ಪರ್ವತಗಳನ್ನೂ । **ಔಭ್ನಾತ್**—ಸೀಳಿಹಾಕಿದನು । **ಪರ್ವತಾನಾಂ**—ಪರ್ವತಗಳ । **ಕಕುಭಃ**—ಶಿಖರಗಳನ್ನು (ಪಕ್ಷಗಳನ್ನು) । **ಅವಾಭಿನತ್**—ಸೀಳಿಹಾಕಿದನು

॥ ಭಾವಾರ್ಥ ॥

ವಾಯುವು ತನ್ನ ಶಕ್ತಿಗಳಿಂದ ಉದಕವನ್ನು ಅಲ್ಲೋಲಕಲ್ಲೋಲವನ್ನಾಗಿ ಮಾಡುವಂತೆ ಪ್ರಭುವಾದ ಇಂದ್ರನು ತನ್ನ ಬಲದಿಂದ ಅಂತರಿಕ್ಷವನ್ನು ಅಲ್ಲಾಡಿಸಿ ಉದಕವನ್ನು ಸುರಿಸುವಂತೆ ಮಾಡಿದನು, ವೀರ್ಯವನ್ನು ಪ್ರಕಟಿಸಲು ಅಪೇಕ್ಷಿಸಿದ ಇಂದ್ರನು ದೃಢವಾದ ಪರ್ವತಗಳನ್ನು ಸೀಳಿಹಾಕಿದನು ಪರ್ವತಗಳ ಶಿಖರಗಳನ್ನೂ (ಪಕ್ಷಗಳನ್ನೂ) ಸೀಳಿಹಾಕಿದನು.

English Translation.

Indra, by his strength, has agitated the exhausted firmament, as wind, by its violent (gusts, agitates) the water exulting in his strength, he has divided the solid (clouds), and has shattered the peaks of the mountains.

॥ ವಿಶೇಷವಿಷಯಗಳು ॥

ವಾತಃ ತವಿಷೀಭಿಃ ವಾಃ ನ ಇಂದ್ರಃ ಶವಸಾ ಬುಧ್ನಂ ಕ್ಷಾಮ ಅಕ್ಷೋದಯತ್—ವಾಯುವು ವೇಗವಾಗಿ ಬೀಸುವುದರಿಂದ ಸಮುದ್ರವೇ ಮೊದಲಾದ ಜಲಾಶಯಗಳಲ್ಲಿರುವ ಉದಕವು ಅಲ್ಲೋಲಕಲ್ಲೋಲವಾಗಿ ದೊಡ್ಡದೊಡ್ಡ ಅಲೆಗಳಿಂದ ಕೂಡಿ ಪ್ರಕ್ಷುಬ್ಧವಾಗಿ ಮಾಡುವಂತೆ ಇಂದ್ರನು ತನ್ನ ಮಹಾಶಕ್ತಿಯಿಂದ ಅಂತರಿಕ್ಷನನ್ನು ಎಂದರೆ ಅಂತರಿಕ್ಷದಲ್ಲಿರುವ ಮೇಘಸಮೂಹವನ್ನು ಅಲ್ಲೋಲಕಲ್ಲೋಲವಾಗುವಂತೆ ಮಾಡಿ ಮೇಘಗಳು ವೃಷ್ಟಿಯನ್ನು ಸುರಿಯುವಂತೆ ಮಾಡಿದನು ಎಂದಭಿಪ್ರಾಯವು

ಓಜಃ ಉಶಮಾನಃ ದೃಳ್ಹಾನಿ ಬಿಭ್ನತ್, ಪರ್ವತಾನಾಂ ಕಕುಭಃ ಆವಾಭಿನತ್—ಬಲವನ್ನು ಆಕಾಂಕ್ಷಿಸುವ ಎಂದರೆ ಅತ್ಯಂತ ಬಲವುಳ್ಳ ಇಂದ್ರನು ಭೂಮಿಯಮೇಲೆ ಜಲಸದೆ ದೃಢವಾಗಿ ಸ್ಥಾಪಿತವಾಗಿರುವ ಪರ್ವತಾದಿಗಳನ್ನು ಸೀಳಿಹಾಕಿದನು ಮತ್ತು ಆ ಪರ್ವತಗಳ ವಿಶಿರಗಳನ್ನು ಅಥವಾ ರೆಕ್ಕೆಗಳನ್ನು ಸೀಳಿ (ಕತ್ತರಿಸಿ) ದನು

ಈ ಋಕ್ಕಿನಲ್ಲಿ ಇಂದ್ರನು ಇತರರಿಂದ ಮಾಡಲಸಾಧ್ಯವಾದ ಸಾಹಸಕರ್ಮಗಳನ್ನು— ಎಂದರೆ ಮೇಘೆಗಳನ್ನು ಪ್ರಹರಿಸಿ ವೃಷ್ಟಿಯನ್ನುಂಟುಮಾಡುವುದು, ಅಚಲವಾದ ಪರ್ವತಾದಿಗಳನ್ನು ಸೀಳುವುದು ಮುಂತಾದ ಸಾಹಸ ಕೃತ್ಯಗಳನ್ನು ವರ್ಣಿಸಿ ಇಂದ್ರನ ಶಕ್ತಿಸಾಮರ್ಥ್ಯಗಳು ಅಗಾಧವಾದುವು ಎಂಬ ವರ್ಣನೆ ಇರುವುದು ಇಂದ್ರನು ಪರ್ವತಗಳ ರೆಕ್ಕೆಗಳನ್ನು ಕತ್ತರಿಸಿದ ವಿಷಯದಲ್ಲಿ ಪುರಾಣಾದಿಗಳಲ್ಲಿ ಅನೇಕ ಉಪಾಖ್ಯಾನಗಳವೆ ಪೂರ್ವದಲ್ಲಿ ಪರ್ವತಗಳು ನೃಷ್ಟಿಸಲ್ಪಟ್ಟಾಗ ಅವುಗಳಿಗೆ ರೆಕ್ಕೆಗಳಿದ್ದವೆಂತಲೂ, ಅವು ಹಾರಾಡುತ್ತಾ ಗ್ರಾಮನಗರಗಳ ಮೇಲೆ ಕುಳಿತು ಅವುಗಳನ್ನು ಧ್ವಂಸಮಾಡಿ ಜನರಿಗೆ ಹಿಂಸೆಯನ್ನುಂಟುಮಾಡುತ್ತಿದ್ದುದರಿಂದ ಇಂದ್ರನು ತನ್ನ ವಜ್ರಾಯುಧದಿಂದ ಅವುಗಳ ರೆಕ್ಕೆಗಳನ್ನು ಕತ್ತರಿಸಿ ಅವುಗಳು ಚಲಿಸದಂತೆ ಮಾಡಿದನೆಂದೂ ಆದುದರಿಂದ ಪರ್ವತಗಳಿಗೆ ಅಚಲವೆಂಬ ಹೆಸರು ಬಂದಿತೆಂದೂ ವರ್ಣನೆಗಳವೆ

ತವಿಷೀ, ಶವಃ, ಓಜಃ ಎಂಬ ಶಬ್ದಗಳು ಬಲನಾಮಗಳಲ್ಲಿ ಪರಿತವಾಗಿವೆ **ಕಕುಭಃ** ಎಂಬ ಶಬ್ದಕ್ಕೆ ಭಾಷ್ಯಕಾರರು **ಪಕ್ಷಾನ್**—ರೆಕ್ಕೆಗಳನ್ನು ಎಂದು ಅರ್ಧವಿವರಣೆಮಾಡಿದಾರೆ ಆದರೆ ಯಾಸ್ಕರು **ಈ** ಶಬ್ದವನ್ನು ದಿಙ್ನಾಮಗಳಲ್ಲಿ ಪರಿಸಿ ದಿಕ್ಕುಗಳೆಂದು ಅರ್ಥಮಾಡಿದಾರೆ (ನಿ. ೨-೧೫) ಇದಲ್ಲದೆ **ಕಕುಪ್** ಎಂಬುದು—**ಕಕುಪ್ ಕಕುಭಿನೀ ಭವತಿ । ಕಕುಪ್ಚ ಕುಜತೇರ್ವೋರ್ಧ್ವತೇರ್ವಾ ।** ಎಂದು ಯಾಸ್ಕರು ನಿರ್ವಚನವನ್ನು ಹೇಳಿದಾರೆ (ನಿ ೭-೧೭) ಎಂದರೆ, **ಕಕುಪ್** ಎಂಬುವುದು **ಉಷ್ಣಿಕ್** ಎಂಬ ಹೆಸರಿನ ಛಂದಸ್ಸುಗಳಲ್ಲಿ ಒಂದು ಪ್ರಭೇದವು. ಈ ಜಾತಿಯ ಛಂದಸ್ಸುಗಳಲ್ಲಿ ಒಂದು ಪಾದವು ಜಗತೀ ಛಂದಸ್ಸಿನ ಪಾದವನ್ನೊಳಗೊಂಡು ಇರುವುದರಿಂದ **ಈ** ಛಂದಸ್ಸಿಗೆ **ಕಕುಪ್** ಎಂದು ಹೆಸರು ಈ ಶಬ್ದವು ಕುಟಿಲಸ್ವಭಾವವನ್ನು ಸೂಚಿಸುವ ಕುಜತಿ ಧಾತುವಿನಿಂದ ನಿಷ್ಪನ್ನವಾಗಿ

ವಕ್ರವಾಗಿರುವುದೆಂಬ ಅರ್ಥವನ್ನು ಸೂಚಿಸುವುದು. ಎಂದರೆ **ಉಷ್ಣಿಕ್** ಛಂದಸ್ಸಿನಲ್ಲಿ ಸೇರಿದ್ದರೂ ಅದರ ಕ್ರಮದಂತಿರದೆ ಮಧ್ಯದಲ್ಲಿ ಜಗತೀಛಂದಸ್ಸಿನ ಕ್ರಮವನ್ನೊಳಗೊಂಡು ವಕ್ರರೀತಿಯಿಂದ ಇರುವುದೆಂದಭಿಪ್ರಾಯವು.

। ಸಂಹಿತಾಪಾಠಃ ।

ಅಭಿ ಪ್ರ ದದ್ರ್ಯುರ್ಜನಯೋ ನ ಗರ್ಭಂ ರಥಾ ಇವ ಪ್ರ ಯಯುಃ ಸಾಕಮದ್ರಯಃ ।
ಅತರ್ಪಯೋ ವಿಸೃತ ಉಬ್ಜ ಊರ್ಮಾನ್ತ್ಸಂ ವೃತಾ ಅರಿಣಾ ಇನ್ದ್ರ ಸಿನ್ಧೂನ್ ॥ ೫ ॥

॥ ಪದಪಾಠಃ ॥

ಅಭಿ । ಪ್ರ । ದದ್ರ್ಯುಃ । ಜನಯಃ । ನ । ಗರ್ಭಂ । ರಥಾಃ । ಇವ । ಪ್ರ । ಯಯುಃ । ಸಾಕಂ । ಅದ್ರಯಃ ।
ಅತರ್ಪಯಃ । ವಿಸೃತಃ । ಉಬ್ಜಃ । ಊರ್ಮಾನ್ । ತ್ವಂ । ವೃತಾನ್ । ಅರಿಣಾಃ । ಇನ್ದ್ರ । ಸಿನ್ಧೂನ್॥

। ಸಾಯಣಭಾಷ್ಯಂ ।

ಹೇ ಇನ್ದ್ರ ತ್ವಾಮದ್ರಯೋ ಮರುತೋ ಜನಯೋ ಜವನ್ಯೋ ಗರ್ಭಂ ನ ಪುತ್ರಮಿವಾಭಿ ಪ್ರ ಪದ್ರ್ಯುಃ । ಅಭಿಜಗ್ಮುಃ । ಕಿಂಚ ರಥಾ ಇವ ರಂಹಣಶೀಲಾ ರಥಾ ಯಥಾ ತಥಾ ವೃತ್ರವಧಾರ್ಥಂ ತ್ವಯಾ ಸಾಕಂ ಪ್ರ ಯಯುಃ । ಪ್ರಕರ್ಷೇಣಾಯಯಾಸಿಷುಃ । ಹೇ ಇನ್ದ್ರ ತ್ವಂ ವಿಸೃತೋ ವಿಸರಣಶೀಲಾ ನದೀರತರ್ಪಯಃ । ಅದ್ರಿರಪೂರಯಃ । ತಥೋರ್ಮಾನ್ನೇಳಾನುಬ್ಜಃ । ಅವಧೀಃ । ತಥಾ ತ್ವಂ ವೃತಾನ್ಸ್ವೈರ್ರೇಣಾವೃತಾನ್ ಸಿಂಧೂನಪೋಽರಿಣಾಃ । ಪ್ರೈರಯಃ ॥

। ಪ್ರತಿಪದಾರ್ಥ ।

ಇನ್ದ್ರ—ಎಲೈ ಇಂದ್ರನೇ । **ಜನಯಃ**—ತಾಯಿಯರು । **ಗರ್ಭಂ ನ**—ತಮ್ಮ ತಮ್ಮ ಮಕ್ಕಳಿಗೆ ಎದುರಾಗಿ ಓಡಿಬಂದು ಸೇರಿಕೊಳ್ಳುವಂತೆ । **ಅದ್ರಯಃ**—ಮರುತ್ತುಗಳು । **ಅಭಿ**—ನಿನಗೆದುರಾಗಿ । **ಪ್ರ ದದ್ರ್ಯುಃ**—(ಪ್ರೀತಿಯಿಂದ) ಓಡಿಬಂದು ನಿನ್ನೊಡನೆ ಸೇರಿಕೊಂಡರು । **ರಥಾ ಇವ**—ಶೀಘ್ರಗಾಮಿಗಳಾದ ರಥಗಳಂತೆ । **ಸಾಕಂ**—ನಿನ್ನೊಡನೆ ಸೇರಿ । **ಪ್ರ ಯಯುಃ**—ವೇಗವಾಗಿ ಮುನ್ನುಗ್ಗಿದ್ದಾರೆ । (**ಇನ್ದ್ರ**—ಎಲೈ ಇಂದ್ರನೇ) । **ತ್ವಂ**—ನೀನು । **ವಿಸೃತಃ**—ವಿಸ್ತೃತವಾಗಿ ಹರಡುವ ಸ್ವಭಾವವುಳ್ಳ ನದಿಗಳನ್ನು । **ಅತರ್ಪಯಃ**—ನೀರುಗಳಿಂದ

ತುಂಬಿ ಪೂರ್ಣವಾದವನ್ನಾಗಿ ಮಾಡಿದೆ । **ಊರ್ಮಿಣಃ**—ಮೇಘಗಳನ್ನು । **ಉಜ್ಜಃ**—ಸೀಳಹಾಕಿದೆ । **(ತ್ವಂ**—ನೀನು) । **ವೃತಾನ್**—ವೃತ್ರನಿಂದ ಸುತ್ತುವರೆಯಲ್ಪಟ್ಟ । **ಸಿಂಧೂನ್**—ಉದಕಗಳನ್ನು । **ಅರಿಣಾಃ**—ಹರಿಯುವಂತೆ ಪ್ರೇರಿಸಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ತಾಯಿಯರು ಪ್ರೀತಿಯಿಂದ ತಮ್ಮ ಮಕ್ಕಳ ಎದುರಾಗಿ ಓಡಿಬಂದು ಸೇರಿಕೊಳ್ಳುವಂತೆ ಮರುತ್ತುಗಳು ನಿನಗೆದುರಾಗಿ ಪ್ರೀತಿಯಿಂದ ಓಡಿಬಂದು ನಿನ್ನೊಡನೆ ಸೇರಿಕೊಂಡರು ಮತ್ತು ಶೀಘ್ರಗಾಮಿಗಳಾದ ರಥಗಳಂತೆ ನಿನ್ನೊಡನೆ ಸೇರಿ ವೇಗವಾಗಿ ಮುನ್ನುಗ್ಗಿದ್ದಾರೆ. ಎಲೈ ಇಂದ್ರನೇ, ನೀನು ವಿಸ್ತೃತವಾಗಿ ಹರಡುವ ಸ್ವಭಾವವುಳ್ಳ ನದಿಗಳನ್ನು ನೀರುಗಳಿಂದ ತುಂಬಿ ಪೂರ್ಣವಾದವನ್ನಾಗಿ ಮಾಡಿದೆ ಮೇಘಗಳನ್ನು ಸೀಳಹಾಕಿದೆ. ಮತ್ತು ವೃತ್ರನಿಂದ ಸುತ್ತುವರೆಯಲ್ಪಟ್ಟ ಉದಕಗಳನ್ನು ಹರಿಯುವಂತೆ ಪ್ರೇರಿಸಿದೆ

English Translation.

The Maruts have hastened to you like mothers to their young. like chariots they have rushed in along (with you), you, Indra, have satisfied the flowing streams you have shattered the clouds you have set free the obstructed rivers.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ಇಂದ್ರನ ಮಹಿಮೆಯ ವರ್ಣನೆ ಇದೆ ಮಕ್ಕಳನ್ನು ಬಿಟ್ಟು ಸ್ವಲ್ಪಕಾಲ ಅಗಲಿದ್ದ ತಾಯಿಯರು ತಮ್ಮ ಮಕ್ಕಳ ಬಳಿಗೆ ಬಹಳ ತ್ವರೆಯಿಂದ ಓಡಿಬರುವಂತೆಯೂ, ರಥಗಳು ವೇಗವಾಗಿ ಚಲಿಸುವಂತೆಯೂ ನಿನ್ನ ಪ್ರೀತಿಗೆ ಪಾತ್ರರಾದ ಮರುದ್ದೇವತೆಗಳು ನಿನಗಭಿಮುಖವಾಗಿ ಪ್ರೀತಿಯಿಂದ ನಿನ್ನ ಬಳಿಗೆ ಓಡಿಬಂದು ಸೇರಿದರು ಎಂದು ಈ ಋಕ್ಕಿನ ಪೂರ್ವಾರ್ಧದಲ್ಲಿ ವರ್ಣನೆ ಇದೆ ಇಲ್ಲಿ ಭಾಷ್ಯಕಾರರು **ಅದ್ರಯಃ** ಎಂಬ ಶಬ್ದಕ್ಕೆ ಮರುತ್ತುಗಳು ಎಂದರ್ಥಮಾಡಿದಾರೆ ಅದ್ರಿಶಬ್ದವು ಉದಕನಾಮಗಳಲ್ಲಿಯೂ (ನಿ ೫-೨೪), ಪರ್ವತನಾಮಗಳಲ್ಲಿಯೂ ಪಠಿತವಾಗಿದೆ. ಯಾಸ್ಕರು ಈ ಶಬ್ದಕ್ಕೆ **[ಅದ್ರಿವನ್—ಅದ್ರಿರಾದೃಣೋತ್ಯೇತೇನ** (ನಿ ೪-೪) ಆದರಿಸಲ್ಪಡುವವನಾದುದರಿಂದ ಇಂದ್ರನಿಗೆ **ಅದ್ರಿವನ್** ಎಂಬ ಹೆಸರು. **ಅದ್ರಯಃ ಆದರಣೀಯಾಃ** (ನಿ ೯-೯) ಆದರಿಸಲ್ಪಡಲು ಯೋಗ್ಯರಾದವರು ಎಂದು ನಿರ್ವಚನವನ್ನು ಹೇಳಿದಾರೆ ಇಲ್ಲಿ ಮರುದ್ದೇವತೆಗಳು ಇಂದ್ರನಿಗೆ ಪ್ರೀತಿಪಾತ್ರರಾದುದರಿಂದಲೂ, ಇಂದ್ರನಿಗೂ ಮರುದ್ದೇವತೆಗಳಿಗೂ ಯಾವಾಗಲೂ ಸಾಹಚರ್ಯವಿರುವುದರಿಂದಲೂ (೨ು ಸಂಘಾಗ ಅ ಪೇಜು 172 ನೋಡಿ) ಮರುದ್ದೇವತೆಗಳನ್ನು **ಅದ್ರಯಃ** ಎಂಬ ಶಬ್ದದಿಂದ ಸೂಚಿಸಿರುವುದು ಯುಕ್ತವಾಗಿದೆ

ಮತ್ತು ವೃತ್ರನಿಂದ ಆವರಿಸಲ್ಪಟ್ಟು ವೃಷ್ಟಿಪ್ರದಾನವನ್ನು ಮಾಡದಿರುವ ಮೇಘಗಳನ್ನು ಸೀಳಿ ಅವು ಭೂಮಿಯ ಮೇಲೆ ಮಳೆ ಹುಯ್ಯುವಂತೆ ಮಾಡಿದೆ ಆ ವೃಷ್ಟ್ಯುದಕದಿಂದ ನೀರಿಲ್ಲದೆ ಕೃಶವಾಗಿದ್ದ ನದಿಗಳು ಜಲದಿಂದ ಪೂರ್ಣವಾಗಿ ಹರಿಯುವಂತಾಯಿತು ಎಂದು ಇಂದ್ರನ ಸಾಹಸಕೃತ್ಯವು ಈ ಋಕ್ಕಿನ ಉತ್ತರಾರ್ಧದಲ್ಲಿ ವಿವೃತವಾಗಿದ

॥ ಸಂಹಿತಾಪಾಠಃ ॥

ತ್ವಂ ಮಹೀಮವನಿಂ ವಿಶ್ವಧೇನಾಂ ತುರ್ವೀತಯೇ ವಯ್ಯಾಯ ಕ್ಷರಂತೀಂ।
ಅರಮಯೋ ನಮಸೈಜದರ್ಣಃ ಸುತರಣಾಁ ಅಕೃಣೋರಿಂದ್ರ ಸಿಂಧೂನ್ ॥೬॥

॥ ಪದಪಾಠಃ ॥

ತ್ವಂ । ಮಹೀಂ । ಅವನಿಂ । ವಿಶ್ವಧೇನಾಂ । ತುರ್ವೀತಯೇ । ವಯ್ಯಾಯ । ಕ್ಷರಂತೀಂ ।
ಅರಮಯಿಃ । ನಮಸಾ । ಏಜತ್ । ಅರ್ಣಃ । ಸುತರಣಾನ್ । ಅಕೃಣೋಃ । ಇಂದ್ರ । ಸಿಂಧೂನ್ ॥೬॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಮಹೀಂ ಮಹತೀಂ ವಿಶ್ವಧೇನಾಂ ವಿಶ್ವಸ್ಯ ಪ್ರೀಣಯಿತ್ರೀಂ ತುರ್ವೀತಯೇ ತುರ್ವೀತಿನಾಮ್ನೇ ರಾಜ್ಞೇ ವಯ್ಯಾಯ ವಯ್ಯನಾಮ್ನೇ ಚ ಕ್ಷರಂತೀಮಭೀಷ್ಟಾನ್ ಕಾಮಾನ್ಪ್ರಹತೀಮವನಿಂ ಭೂಮಿಂ ನಮಸಾನ್ನೇನೈಜದೇಜತಾ ಚಲತಾರ್ಣೋ೭ರ್ಣಸೋದಕೇನ ಚಾರಮಯಿಃ। ರಮಯಸಿ। ಇಂದ್ರಃ ಪೃಥಿವೀಮನ್ನೋದಕಸಮೃದ್ಧಾಂ ಕರೋತೀತ್ಯರ್ಥಃ। ಕಿಂಚ ಹೇ ಇಂದ್ರ ತ್ವಂ ಸಿಂಧೂನ್ ಜಲಾನಿ ಸುತರಣಾನ್ ಸುಷ್ಠು ತೀರ್ಣಾನ್ಯಕೃಣೋಃ। ಅಕಾರ್ಷೀಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ। **ತ್ವಂ**—ನೀನು। **ತುರ್ವೀತಯೇ**—ತುರ್ವಿತಿಯೆಂಬ ರಾಜನಿಗೂ। **ವಯ್ಯಾಯ**—ವಯ್ಯನೆಂಬುವನಿಗೂ ಸಹಾಯವಾಲು। **ಮಹೀಂ**—ಮಹತ್ತಾದುದೂ। **ವಿಶ್ವಧೇನಾಃ**—ವಿಶ್ವಕ್ಕೆಲ್ಲಾ ತೃಪ್ತಿದಾಯಕವಾದುದೂ। **ಕ್ಷರಂತೀಂ**—ಇಷ್ಟಾರ್ಥವನ್ನು ಕರೆಯತಕ್ಕದ್ದೂ ಆದ। **ಅವನಿಂ**—ಭೂಮಿಯನ್ನು। **ನಮಸಾ**—ಅನ್ನದಿಂದಲೂ। **ಏಜತ್**—ಹರಿಯುವ। **ಅರ್ಣಃ**—ಉದಕದಿಂದಲೂ। **ಅರಮಯಿಃ**—(ತುಂಬಿ) ನಲಿಯುವಂತೆ ಮಾಡಿರುವೆ। **ಸಿಂಧೂನ್**—ಉದಕಪೂರ್ಣವಾದ ನದಿಗಳನ್ನು। **ಸುತರಣಾನ್**—ದಾಟಲು ಅನುಕೂಲವಾಗುವಂತೆ। **ಅಕೃಣೋಃ**—ಮಾಡಿರುವೆ

॥ ಭಾವಾರ್ಥ ॥

ಎಲೈ ಇಂದ್ರನೇ, ತುರ್ವೀತಿಯೆಂಬ ರಾಜನಿಗೂ, ವಯ್ಯನೆಂಬ ರಾಜನಿಗೂ ಅನುಕೂಲವಾಗಲೆಂಬ ಉದ್ದಿಶ್ಯದಿಂದ ಮಹತ್ತಾದುದೂ, ವಿಶ್ವಕ್ಕೆಲ್ಲಾ ತೃಪ್ತಿದಾಯಕವಾದುದೂ ಇಷ್ಟಾರ್ಥವನ್ನು ಕರೆಯತಕ್ಕದ್ದೂ ಆದ ಭೂಮಿಯನ್ನು ಅನ್ನದಿಂದಲೂ, ಹರಿಯುವ ಉದಕದಿಂದಲೂ ತುಂಬಿ ನಲಿಯುವಂತೆ ಮಾಡಿರುವೆ ಉದಕಪೂರ್ಣವಾದ ನದಿಗಳನ್ನು ದಾಟಲು ಅನುಕೂಲವಾಗಿರುವಂತೆ ಮಾಡಿರುವೆ

English Translation.

You have made the vast, all-cherishing, and exuberant earth, delighted with (abundant) food, and tremulous water, for (the sake of) Turviti and Vayya you have made the rivers easy to be crossed.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ **ತುರ್ವೀತಿ, ವಯ್ಯ** ಎಂಬುವರಿಗೆ ಇಂದ್ರನು ಸಹಾಯಮಾಡಿದನೆಂದು ಹೇಳಿದೆ. **ತುರ್ವೀತಿ ವಯ್ಯ** ಎಂಬ ಎರಡು ಹೆಸರುಗಳೂ ಸಾಧಾರಣವಾಗಿ ಒಟ್ಟಿಗೆ ಪ್ರಯೋಗಿಸಲ್ಪಡುವುದಾದರೂ ಕೆಲವು ಕಡೆ ಮಾತ್ರ ತುರ್ವೀತಿಯೊಬ್ಬನ ಹೆಸರೇ ಇರುತ್ತದೆ. **ತುರ್ವೀತಿ** ಎಂಬುವನು ತುರ್ವಶ ಮತ್ತು ಯದುಗಳೆಂಬ ಜನಾಂಗಗಳ ರಾಜನೆಂದು Lvdwig ಮೊದಲಾದ ಪಾಶ್ಚಾತ್ಯಪಂಡಿತರ ಅಭಿಪ್ರಾಯವಾಗಿದೆ. ಆದರೆ ಇದಕ್ಕೆ ತಕ್ಕ ಸಮರ್ಥನೆ ದೊರೆಯುವುದಿಲ್ಲ. ಬಹುಶಃ ಇವನು ತುರ್ವಶ ಜನಾಂಗಕ್ಕೆ ಸೇರಿದ ಒಬ್ಬ ಮುಖಂಡನಾಗಿರಬಹುದು ಋಗ್ವೇದದಲ್ಲಿ ಇದರ ಹೆಸರು ಪ್ರಕೃತ ಋಕ್ಕಿನಲ್ಲಿಯೂ—

ಅರಮಯಸ್ಸರಪಸಸ್ತರಾಯ ಕಂ ತುರ್ವೀತಯೇ ಚ ವಯ್ಯಾಯ ಚ ।
(ಋ ಸಂ ೨-೧೩-೧೨)

ತ್ವಮಾವಿಥ ನರ್ಯಂ ತುರ್ವಶಂ ಯದುಂ ತ್ವಂ ತುರ್ವೀತಿಂ ವಯ್ಯಂ ಶತಕ್ರತೋ ।
(ಋ ಸಂ ೧-೫೪-೬)

ಎಂಬ ಋಕ್ಕುಗಳಲ್ಲಿಯೂ ಪರಿತವಾಗಿದೆ. ಈ ಋಕ್ಕುಗಳಲ್ಲಿ ಇಂದ್ರನು ಇವರಿಗೆ ನದಿಯನ್ನು ದಾಟಲು ಸಹಾಯ ಮಾಡಿರುವುದಾಗಿ ವರ್ಣನೆ ಇದೆ. ಇದಲ್ಲದೆ ತುರ್ವೀತಿಯ ಹೆಸರು ಋಗ್ವೇದದಲ್ಲಿ ಋ ಸಂ ೧-೩೬-೧೮, ೧-೬೧-೧೧, ೧-೧೧೨-೨೩ ಎಂಬ ಋಕ್ಕುಗಳಲ್ಲಿಯೂ ವಯ್ಯನೆಂಬುವನ ಹೆಸರು ಪರಿತವಾಗಿದೆ

॥ ಸಂಹಿತಾಪಾಠಃ ॥

ಪ್ರಾಗ್ರುವೋ ನಭನ್ವೋ ೭ ನ ವಕ್ವಾ ಧ್ವಸ್ರಾ ಅಪಿನ್ವದ್ಯುವತೀರ್ಋತಜ್ಞಾಃ ।
ಧನ್ವಾನ್ಯಜ್ರಾಁ ಅಪೃಣಕ್ತೃಷಾಣಾಁ ಅಧೋಗಿಂದ್ರಃ ಸ್ತರ್ಯೋ ೭ ದಂಸುಪತ್ನೀಃ ॥ ೭ ॥

॥ ಪದಪಾಠಃ ॥

ಪ್ರ । ಅಗ್ರುವಃ । ನಭನ್ವಃ । ನ । ವಕ್ವಾಃ । ಧ್ವಸ್ರಾಃ । ಅಪಿನ್ವತ್ । ಯುವತೀಃ । ಋತಜ್ಞಾಃ ।
ಧನ್ವಾನಿ । ಅಜ್ರಾನ್ । ಅಪೃಣಕ್ । ತೃಷಾಣಾನ್ । ಅಧೋಕ್ । ಇಂದ್ರಃ । ಸ್ತರ್ಯಃ । ದಂಸುಪತ್ನೀಃ ॥

॥ ಸಾಯಣಭಾಷ್ಯಂ ॥

ಇಂದ್ರೋ ನಭನ್ಯಃ ಶತ್ರೂಣಾಂ ಹಿಂಸಿಕಾ ವಕ್ವಾ ನ ಸೇನಾ ಇವ ಧ್ವಸ್ರಾಃ ಕೂಲಾನಾಂ ಧ್ವಂಸಿಕಾ ಯುವತೀರದ್ಭಿರ್ಮಿಶ್ರಿತಾ ಯತಜ್ಜಾ ಯತೇಸ್ಯಾನ್ನಸ್ಯ ಜನಯಿತ್ರೀರಗ್ರುವಃ । ಆಗ್ರುವ ಇತಿ ನದೀನಾ-ನೈತತ್ । ಆಗ್ರಗಾಮಿನೀರ್ನದೀಃ ಪ್ರಾಪಿನ್ವತ್ । ಪ್ರಕರ್ಷೇಣಾಪೂರಯತ್ । ತಥಾ ಧನ್ವಾನಿ ನಿರ್ಜಲಾ-ನುನ್ನತಾನ್ದೇಶಾಂಶ್ಚ ವೃಷ್ಟ್ಯಾಪೃಣಕ್ । ಅಪೂರಯತ್ । ತಥಾಜ್ರಾನ್ಮಾರ್ಗಸ್ಯ ಗಂತೄನ್ ಶೃಷಾಣಾನ್ ಪಿಪಾಸಯಾ ಯುಕ್ತಾನ್ ಪುರುಷಾನಪೃಣಕ್ । ಅಪೂರಯತ್ । ಕಿಂಚ ಇಂದ್ರೋ ದಂಸುಪತ್ನೀಃ । ದಮನಪರಾ ಅಸುರಾಃ ಸುಷ್ಠು ಪತಯೋ ಯಾಸಾಂ ತಾಃ ಸ್ತೇರ್ಯಃ ಸ್ತರೀರ್ನಿವೃತ್ತಪ್ರಸವಾ ಗಾ ಅಧೋಕ್ । ಅಧುಕ್ಷತ್ । ಇಂದ್ರೋ ರಾಷ್ಟ್ರಸಕೃತನಿರೋಧದುಃಖಾನ್ನಿರುದ್ಧಪ್ರಸವಾ ಅಪಿ ಗಾ ವಿಮುಚ್ಯ ಸಪ್ರಸವಾಶ್ಚ ಕಾರೇತ್ಯರ್ಥಃ ॥

॥ ಪ್ರತಿಪದಾರ್ಥ ॥

(ಇಂದ್ರನು) **ನಭನ್ಯಃ**—ಶತ್ರುಹಿಂಸಕರಾದ । **ವಕ್ವಾಃ ನ**—ಸೇನೆಗಳಂತೆ । **ಧ್ವಸ್ರಾಃ**—ದಡಗಳನ್ನು ನಾಶನಮಾಡುವವೂ । **ಯುವತೀಃ**—ಉದಕಗಳಿಂದ ಪೂರ್ಣವಾದವೂ । **ಯತಜ್ಜಾಃ**—ಅನ್ನವನ್ನು ಉತ್ಪನ್ನ ಮಾಡುವವೂ ಆದ । **ಅಗ್ರುವಃ**—ನದಿಗಳನ್ನು । **ಪ್ರ ಅಪಿನ್ವತ್**—ಉದಕಗಳಿಂದ ತುಂಬಿದನು । **ಧ್ವನಾನಿ**—ಮಳೆಯಿಲ್ಲದೇ ಬೆಂಗಾಡಾಗಿದ್ದ ಭೂಮಿಗಳನ್ನೂ । **ಅಸೃಣಕ್**—ನೀರಿನಿಂದ ತುಂಬಿ ಫಲವತ್ತಾಗುವಂತೆ ಮಾಡಿದನು। **ಅಜ್ರಾನ್**—ಮಾರ್ಗಸಂಚಾರಿಗಳನ್ನೂ । **ಶೃಷಾಣಾನ್**—ಬಾಯಾರಿಕೆಯಿಂದ ಬಳಲಿದವರನ್ನೂ (ಉದಕದಿಂದ ತೃಪ್ತಿಗೊಳಿಸಿದನು) । **ಇಂದ್ರಃ**—ಇಂದ್ರನು । **ದಂಸುಪತ್ನೀಃ**—ಅಸುರರ ಪ್ರಭುತ್ವಕ್ಕೆ ಸಿಕ್ಕಿದವೂ । **ಸ್ತೇರ್ಯಃ**—ಬಂಜೆಯಾಗಿದ್ದವೂ ಆದ ಗೋವುಗಳನ್ನು । **ಅಧೋಕ್**—(ಕ್ಷೀರವನ್ನು ಕೊಡುವಂತೆ ಮಾಡಿದನು)

॥ ಭಾವಾರ್ಥ ॥

ಶತ್ರುಹಿಂಸಕಗಳಾದ ಸೇನೆಗಳಂತೆ ದಡಗಳನ್ನು ನಾಶಮಾಡುವವೂ, ಉದಕಗಳಿಂದ ಪೂರ್ಣವಾದವೂ, ಅನ್ನಕ್ಕೆ ಉತ್ಪಾದಕವಾದವೂ ಆದ ನದಿಗಳನ್ನು ಇಂದ್ರನು ಉದಕಗಳಿಂದ ತುಂಬಿದನು ಮಳೆಯಿಲ್ಲದೇ ಬೆಂಗಾಡಾಗಿದ್ದ ಭೂಮಿಗಳನ್ನೂ ನೀರಿನಿಂದ ತುಂಬಿ ಫಲವತ್ತಾಗುವಂತೆ ಮಾಡಿದನು ಮಾರ್ಗಸಂಚಾರದಿಂದ ಬಳಲಿದವರನ್ನೂ ಬಾಯಾರಿಕೆಯಿಂದ ಬಳಲಿದವರನ್ನು ಉದಕದಿಂದ ತೃಪ್ತಿಗೊಳಿಸಿದನು ಅಸುರರ ಪ್ರಭುತ್ವಕ್ಕೆ ಸಿಕ್ಕಿದವೂ, ಬಂಜೆಯಾಗಿದ್ದವೂ ಆದ ಗೋವುಗಳನ್ನು ಕ್ಷೀರವನ್ನು ಕೊಡುವಂತೆ ಮಾಡಿದನು

English Translation.

Indra has filled the youthful rivers, the parents of plenty, the corroders (of their banks), like armies destructive (of the r foes), he has inundated the dry lands, and (satisfied) the thirsty travellers. he has milked the barren cows whom the Asuras had become the lords of.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಇಂದ್ರನು ಮಾಡಿದ ಲೋಕೋಪಕಾರವಾದ ಕೆಲವು ವಿಷಯಗಳ ವರ್ಣನೆ ಇದೆ ನದಿಗಳು ತಮ್ಮ ಉದಕಗಳಿಂದ ಲೋಕದ ಜನರ ಕೃಷಿವ್ಯವಸಾಯಾದಿ ಕಾರ್ಯಗಳಿಗೆ ಸಹಾಯಮಾಡುತ್ತಾ ಅವರಿಗೆ ಅನ್ನಾದ್ಯಾಹಾರಗಳನ್ನು ಒದಗಿಸಿಕೊಡುವವು ಈ ನದಿಗಳಲ್ಲಿ ನೀರಿಲ್ಲದಿದ್ದರೆ ಅಥವಾ ಅತ್ಯಲ್ಪವಾಗಿದ್ದರೆ ಈ ಕಾರ್ಯವು ಇವುಗಳಿಂದ ಸಾಧ್ಯವಾಗುವುದಿಲ್ಲ. ಆದುದರಿಂದ ಇಂದ್ರನು ವ್ಯಷ್ಟ್ಯುದಕದಿಂದ ಈ ನದಿಗಳಿಗೆ ನೀರುತುಂಬಿ ಅವು ಪೂರ್ಣಪ್ರವಾಹದಿಂದ ಹರಿಯುವಂತೆ ಮಾಡಿದನು. ಭೂಮಿಯ ಮೇಲೆ ಮಳೆಯನ್ನು ಸುರಿಸುವುದರಿಂದ ಬೆಂಗಾಡಾಗಿದ್ದ ಭೂಮಿಯನ್ನು ಫಲವತ್ತಾಗುವಂತೆ ಮಾಡಿದನು ಮತ್ತು ಮಾರ್ಗಗಳಲ್ಲಿ ಪ್ರಯಾಣಮಾಡುತ್ತಿದ್ದ ಪಥಿಕರಿಗೆ ದಾಹವಡಗುವಂತೆ ವೃಷ್ಟ್ಯುದಕದಿಂದ ನೀರನ್ನೊದಗಿಸಿ ಕೊಟ್ಟನು ಇದಲ್ಲದೆ (ಪಣಿಗಳೆಂಬ ಅಸುರರಲ್ಲಿ ಬಂಧಿತವಾಗಿ ಸರಿಯಾದ ಆಹಾರಾದಿಗಳಿಲ್ಲದೆ ಕೃಶವಾಗಿ ಹಾಲನ್ನು ಕೊಡದೆ ಬಂಜೆಯಾಗಿದ್ದ) ಗೋವ್ರಗಳನ್ನು ತೃಣಸಮೃದ್ಧಿಯಿಂದ ತೃಪ್ತಿಗೊಳಿಸಿ) ಹಾಲನ್ನು ಕೊಡುವಂತೆ ಮಾಡಿದನು ಈ ವಿಧವಾದ ಲೋಕೋಪಕಾರ್ಯಗಳನ್ನೆಲ್ಲಾ ಇಂದ್ರನು ಮಾಡಿದನು ಎಂದು ಇಂದ್ರನ ಪ್ರೀತ್ಯತಿಶಯಗಳನ್ನು ಇಲ್ಲಿ ವರ್ಣಿಸಲಾಗಿದೆ

॥ ಸಂಹಿತಾಪಾಠಃ ॥

ಪೂರ್ವೀರುಷಸಃ ಶರದಶ್ಚ ಗೂರ್ತಾ ವೃತ್ರಂ ಜಘನ್ವಾಁ ಅಸೃಜದ್ವಿ ಸಿಂಧೂನ್ ।
ಪರಿಷ್ಠಿತಾ ಅತೃಣದ್ಬದ್ಬಧಾನಾಃ ಸೀರಾ ಇಂದ್ರಃ ಸ್ರವಿತವೇ ಪೃಥಿವ್ಯಾ ॥ ೪ ॥

॥ ಪದಪಾಠಃ ॥

ಪೂರ್ವೀಃ । ಉಷಸಃ । ಶರದಃ । ಚ । ಗೂರ್ತಾಃ । ವೃತ್ರಂ । ಜಘನ್ವಾನ್ । ಅಸೃಜತ್ । ವಿ । ಸಿಂಧೂನ್ ।
ಪರಿಸ್ಥಿತಾಃ । ಅತೃಣತ್ । ಬದ್ಬಧಾನಾಃ । ಸೀರಾಃ । ಇಂದ್ರಃ । ಸ್ರವಿತವೇ । ಪೃಥಿವ್ಯಾ ॥ ೪ ॥

॥ ಸಾಯಣಭಾಷ್ಯಂ ॥

ವೃತ್ರಂ ವೃತ್ರಾಖ್ಯಮಸುರಂ ಜಘನ್ವಾನ್ಹತವಾನಿಂದ್ರೋ ಗೂರ್ತಾಸ್ತುಮಿಸ್ರುಮಾ ಗೀರ್ಣಾಃ ಪೂರ್ವೀರ್ಬಹ್ವೀರುಷಸಃ ಶರದಶ್ಚ ಸಂವತ್ಸರಾಂಶ್ಚ ವ್ಯಸೃಜತ್ । ವಿಶೇಷೇಣ ಸಸರ್ಜ। ತಥಾ ಸಿಂಧೂನ್ ವೃತ್ರೇಣಾವೃತಾನ್ಯುದಕಾನಿ ವ್ಯಸೃಜತ್ । ಕಿಂಚ ಇಂದ್ರಃ ಪರಿಷ್ಠಿತಾ ಮೇಘೇಷು ಪರಿತಃ ಸ್ಥಿತಾ ಬದ್ಬಧಾನಾ ವೃತ್ರೇಣ ಪರಿತೋ ಬಧ್ಯಮಾನಾಃ ಸೀರಾ ನದೀಃ। ಸೀರಾ ಇತಿ ನದೀನಾಮೈತತ್। ಪೃಥಿವ್ಯಾ ಪೃಥಿವೀರೂಪೇಣ ಮಾರ್ಗೇಣ ಸ್ರವಿತವೇ ಸ್ರವಿತುಂ ಗಮನಾರ್ಥಮತೃಣತ್ । ಅವಿಧ್ಯತ್ ॥

॥ ಪ್ರತಿಪದಾರ್ಥ ॥

ವೃತ್ರಂ—ವೃತ್ರಾಸುರನನ್ನು । **ಜಘನ್ವಾನ್**—ಕೊಂದಂತಹ ಇಂದ್ರನು । **ಗೂರ್ತಾಃ**—ತಮಸ್ಸಿನಿಂದ ಮುಚ್ಚಲ್ಪಟ್ಟ । **ಪೂರ್ವೀಃ**—ಬಹುಸಂಖ್ಯಾತವಾದ । **ಉಷಸಃ**—ಉಷಸ್ಸುಗಳನ್ನು । **ಶರದಶ್ಚ**—ಸಂವತ್ಸರಗಳನ್ನೂ । **ವಿ ಅಸೃಜತ್**—(ತಮಸ್ಸಿನಿಂದ) ಬಿಡಿಸಿ ಪ್ರಕಾಶಿಸುವಂತೆ ಮಾಡಿದನು । **ಸಿಂಧೂನ್**—ನದಿಗಳನ್ನು ಬಿಡಿಸಿ ಪ್ರವಹಿಸುವಂತೆ ಮಾಡಿದನು । **ಇಂದ್ರಃ**—ಇಂದ್ರನು । **ಪರಿಷ್ಠಿತಾಃ**—ಮೇಘಗಳ ಮಧ್ಯೆ ಸಿಕ್ಕಿ ನಿಂತಿದ್ದವೂ । **ಬದ್ಬಧಾನಾಃ**—ಸುತ್ತಲೂ ಬಂಧಿತವಾಗಿದ್ದವೂ ಆದ ಉದಕಗಳಿಂದ । **ಸೀರಾಃ**—ನದಿಗಳನ್ನು । **ಪೃಥಿವ್ಯಾ**—ಪೃಥಿವಿಯ ಮಾರ್ಗದಿಂದ । **ಸ್ರವಿತವೇ**—ಹರಿಯಲು ಅನುಕೂಲವಾಗುವಂತೆ । **ಅತೃಣತ್**—ಬಿಡಿಸಿ ಪ್ರವಹಿಸುವಂತೆ ಮಾಡಿದನು

॥ ಭಾವಾರ್ಥ ॥

ವೃತ್ರಾಸುರನನ್ನು ಕೊಂದ ಇಂದ್ರನು ತಮಸ್ಸಿನಿಂದ ಮುಚ್ಚಲ್ಪಟ್ಟ ಅನೇಕ ಉಷಸ್ಸುಗಳನ್ನೂ ಸಂವತ್ಸರಗಳನ್ನೂ ತಮಸ್ಸಿನಿಂದ ಬಿಡಿಸಿ ಪ್ರಕಾಶಿಸುವಂತೆ ಮಾಡಿದನು ಮೇಘಗಳ ಮಧ್ಯೆ ಸಿಕ್ಕಿಸಿಂತಿದ್ದವೂ, ಸುತ್ತಲೂ ಬಂಧಿತವಾಗಿದ್ದವೂ ಆದ ವೃಷ್ಟ್ಯುದಕಗಳಿಂದ ನದಿಗಳನ್ನು ಪೃಥಿವಿಯ ಮಾರ್ಗದಿಂದ ಹರಿಯಲು ಅನುಕೂಲವಾಗುವಂತೆ ಬಿಡಿಸಿ ಪ್ರವಹಿಸುವಂತೆ ಮಾಡಿದನು

English Translation.

Having slain Vritra, he has liberated many mornings and years (that had been) swallowed up by darkness, and has set the rivers free Indra has released the imprisoned rivers, encompassed (by the cloud), to flow upon the earth

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಇಂದ್ರನು ವೃತ್ರಾಸುರನನ್ನು ಕೊಂದು ಅವನು ತಡೆದಿದ್ದ ಮೇಘಗಳನ್ನು ವೃಷ್ಟಿಸುರಿಸುವಂತೆ ಮಾಡಿ ಆ ಉದಕಗಳಿಂದ ನದಿಗಳು ಭೂಮಿಯ ಮೇಲೆ ತುಂಬಿ ಹರಿಯುವಂತೆ ಮಾಡಿದನು ರಾತ್ರೆಯ ಅಂಧಕಾರದಿಂದ ಆವೃತವಾಗಿದ್ದ ಉಷಃಕಾಲಗಳನ್ನು ಬೆಳಗುವಂತೆ ಮಾಡಿದನು ಸಂವತ್ಸರ ಮೊದಲಾದ ಕಾಲವಿಭಾಗಗಳನ್ನು ಸೃಷ್ಟಿಸಿದನು ಎಂಬ ವಿಷಯವು ವರ್ಣಿತವಾಗಿದೆ

॥ ಸಂಹಿತಾಪಾಠಃ ॥

ವ॒ಮ್ರಿ॒ಭಿಃ ಪು॒ತ್ರ ಇ॒ಗ್ರುವೋ॑ ಅ॒ದಾನಂ॒ ನಿ॒ವೇಶ॑ನಾದ್ಧ॒ರಿ॒ವ॒ ಆ ಜ॑ಭರ್ಥ ।
ವ್ಯ॒ಂಗ್ಯೋ॑ ಅ॒ಖ್ಯದ॑ಹಿ॒ಮಾದ॒ದಾನೋ॑ ನಿ॒ರ್ಭೂ॒ದು॒ಖ॒ಚ್ಛಿ॒ತ್ಸ॒ಮ॒ರಂ॒ತ॒ ಪರ್ವ॑ ॥

॥ ಪದಪಾಠಃ ॥

ವಮ್ರೀಭಿಃ । ಪುತ್ರಂ । ಅಗ್ರುವಃ । ಅದಾನಂ । ನಿವೇಶನಾತ್ । ಹರಿವಃ । ಅ । ಜಭರ್ಥ ।
ವಿ । ಅಂಧಃ । ಅಖ್ಯತ್ । ಅಹಿಂ । ಅದದಾನಃ । ನಿಃ । ಭೂತ್ । ಉಖ್ಯಚ್ಛಿತ್ । ಸಂ । ಅರಂತ ।
ಪರ್ವ ॥ ೯ ॥

॥ ಸಾಯಣಭಾಷ್ಯಂ ॥

ಹೇ ಹರಿವೋ ಹರಿಸಂಜ್ಞಕಾಶ್ವೋಪೇತೇಂದ್ರ ತ್ವಂ ವಮ್ರೀಭಿರುಪಜಿಹ್ವಿಕಾಭಿರದಾನಮದ್ಯಮಾನಮಗ್ರುವಃ । ಅಗ್ರೂ ನಾಮ ಕಾಚಿತ್ । ತಸ್ಯಾಃ ಪುತ್ರಂ ನಿವೇಶನಾದ್ವಲ್ಮೀಕಾಖ್ಯಾತ್ಸ್ಥಾನಾದಾ ಜಭರ್ಥ । ಆಹೃತವಾನಸಿ । ಅದದಾನ ಇಂದ್ರೇಣಾಹ್ರಿಯಮಾಣೋಽಗ್ರುವಃ ಪುತ್ರೋಽಂಧಃ ಪೂರ್ವಮಂಧಃ ಸನ್ ಅಹಿಂ ಸರ್ಪಂ ವ್ಯಖ್ಯತ್ । ವಿಶೇಷೇಣಾಪಶ್ಯತ್ । ತತೋ ನಿರ್ಭೂತ್ । ವಲ್ಮೀಕಾನ್ನಿರ್ಗತೋಽಭೂತ್ । ಉಖಚ್ಛಿದ್ವಲ್ಮೀಕಾಖ್ಯಾಯಾ ಉಖಾಯಾಶ್ಛಿದಕಾನಿ ಪರ್ವ ಪರ್ವಾಣ್ಯಸ್ಯ ಸರ್ವಾಣ್ಯಂಗಾನಾಂ ಶಿಥಿಲಾನಿ ಪರ್ವಾಣಿ ಸಮರಂತ । ಸಮಗಚ್ಛಂತ । ಉಪಜಿಹ್ವಿಕಾಭಿಃ ಶಿಥಿಲೀಕೃತಾನ್ಯಗ್ರುವಃ ಪುತ್ರಸ್ಯ ಪರ್ವಾಣೀಂದ್ರೇಣ ಸಮಧೀಯಂತೇತ್ಯರ್ಥಃ ॥

॥ ಪ್ರತಿಪದಾರ್ಥ ॥

ಹರಿವಃ—ಹರಿಸಂಜ್ಞಕಗಳಾದ ಅಶ್ವಗಳಿಂದ ಕೂಡಿದ ಎಲೈ ಇಂದ್ರನೇ । **ವಮ್ರೀಭಿಃ**—ವಮ್ರಿಯೆಂಬ ಇರುವೆಗಳಿಂದ । **ಅದಾನಂ**—ಕಚ್ಚಲ್ಪಡುತ್ತಿದ್ದ । **ಅಗ್ರುವಃ ಪುತ್ರಂ**—ಅಗ್ರೂ ಎಂಬುವಳ ಮಗನನ್ನು । **ನಿವೇಶನಾತ್**—ವಮ್ರಿಗಳ ಹುತ್ತದಿಂದ । **ಅ ಜಭರ್ಥ**—ಎತ್ತಿಕೊಂಡು ಹೊರಕ್ಕೆ ಬಂದೆ । **ಅದದಾನಃ**—ಇಂದ್ರನಿಂದ ಹೊರಕ್ಕೆ ಕರೆತರಲ್ಪಟ್ಟ ಅವನು । **ಅಂಧಃ**—ಕುರುಡನಾಗಿದ್ದರೂ ಸಹ । **ಅಹಿಂ**—ಸರ್ಪನನ್ನು । **ವಿ ಅಖ್ಯತ್**—ಗುರ್ತಿಸಿದನು। **ನಿರ್ಭೂತ್**—ಹುತ್ತದಿಂದ ಹೊರಕ್ಕೂ ಬಂದನು। **ಉಖಚ್ಛಿತ್**—ಇರುವೆಗಳಿಂದ ಕಚ್ಚಲ್ಪಟ್ಟು ಛಿನ್ನವಾಗಿದ್ದ। **ಪರ್ವ**—ಅವನ ದೇಹದ ಪರ್ವಪ್ರದೇಶಗಳು । **ಸಮರಂತ**—ಒಟ್ಟಿಗೆ ಸೇರಿಕೊಂಡು ಸರಿಯಾದವು.

॥ ಭಾವಾರ್ಥ ॥

ಹರಿನಾಮಕಗಳಾದ ಅಶ್ವಗಳಿಂದ ಕೂಡಿದ ಎಲೈ ಇಂದ್ರನೇ, ವಮ್ರಿಯೆಂಬ ಇರುವೆಗಳಿಂದ ಕಚ್ಚಲ್ಪಡುತ್ತಿದ್ದ **ಅಗ್ರೂ** ಎಂಬುವಳ ಮಗನನ್ನು ವಮ್ರಿಗಳ ಹುತ್ತದಿಂದ ಎತ್ತಿಕೊಂಡು ಹೊರಕ್ಕೆ ಬಂದೆ ಇಂದ್ರನಿಂದ ಹೊರಕ್ಕೆ ತರಲ್ಪಟ್ಟ ಅವನು ಕುರುಡನಾಗಿದ್ದರೂ ಸಹ ಸರ್ಪನನ್ನು ಗುರ್ತಿಸಿದನು ಹುತ್ತದಿಂದ ಹೊರಕ್ಕೆ ಬಂದಾಗ, ಇರುವೆಗಳಿಂದ ಕಚ್ಚಲ್ಪಟ್ಟು ಛಿನ್ನವಾಗಿದ್ದ ಅವನ ದೇಹದ ಪರ್ವಪ್ರದೇಶವು ಒಟ್ಟಿಗೆ ಸೇರಿಕೊಂಡು ಸರಿಯಾದವು

English Translation.

Lord of horses, you have brought the son of Agru from his dwelling where he was being devoured by the ants when extricated, although

blind, he distinguished the serpent, and when he came forth the joints that had been sundered in the ant-hill were restrung.

॥ ವಿಶೇಷವಿಷಯಗಳು ॥

ಹರಿವಃ ಆದಾನಂ ಅಗ್ರುವಃ ಪುತ್ರಂ ನಿವೇಶನಾತ್ ಆ ಜಭರ್ಥ—ಇಲ್ಲಿ **ವಮ್ರೀಭಿಃ** ಎಂಬ ಶಬ್ದಕ್ಕೆ ಒಂದು ವಿಧವಾದ ಇರುವೆಗಳು (ಗೆಜ್ಜಲು) ಎಂದರ್ಥವು **ವಮ್ರಿ**ವೆಂದರೆ ಗಂಡಿರುವೆಯೆಂದೂ, **ವಮ್ರಿ** ಎಂದರೆ ಹೆಣ್ಣಿರುವೆಯೆಂದೂ ಅರ್ಥವು ಈ ಋಕ್ಕಿನಲ್ಲಿ ಅಗ್ರುವೆಂಬ ಕನ್ಯೆಯ ಪುತ್ರನು ವಲ್ಮೀಕ ಅಥವಾ ಹುತ್ತದಲ್ಲಿ ಇರುವೆಗಳಿಂದ ಕಟ್ಟಲ್ಪಟ್ಟು ಹಿಂಸೆಯನ್ನನುಭವಿಸುತ್ತಿದ್ದುದನ್ನು ಇಂದ್ರನು ಕಂಡು ಅವನನ್ನು ಹುತ್ತದಿಂದ ಹೊರಕ್ಕೆ ಎಳೆದು ತಂದು ಇರುಸೆಗಳ ಬಾಧೆಯಿಂದ ಕಾಪಾಡಿದನೆಂದೂ, ಇಂದ್ರನ ಮಹಿಮೆಯಿಂದ ಇರುವೆಗಳಿಂದ ಕಟ್ಟಲ್ಪಟ್ಟು ಶಿಥಿಲವಾಗಿದ್ದ ಅವನ ಶರೀರವು ಪೂರ್ವದಂತೆ ಸರಿಯಾಯಿತೆಂದೂ ವರ್ಣಿಸಿದೆ. ವಮ್ರಿಶಬ್ದವು ಋ ಸಂ ೧-೫೧-೯, ೪-೧೦೨-೨೧ರಲ್ಲಿ ಪಠಿತವಾಗಿದೆ. ಈ ಉಪಾಖ್ಯಾನವು ಸೂಕ್ಷ್ಮವಾಗಿ ವಾಜಸನೇಯಸಂಹಿತಾ ೩೭-೪, ತೈತ್ತಿರೀಯ ಬ್ರಾಹ್ಮಣ ೧-೨-೧-೩, ಶತಪಥಬ್ರಾಹ್ಮಣ ೧೪-೯-೧-೪, ೧೪ ಇತ್ಯಾದಿ ಸ್ಥಳಗಳಲ್ಲಿ ವಿವರಿಸಲಾಗಿದೆ ಈ ಅಗ್ರುವಿನ ಪುತ್ರನಿಗೆ ವಮ್ರಕನೆಂದು ಋಗ್ವೇದದಲ್ಲಿ ಕೆಲವು ಕಡೆ ಹೇಳಿದೆ ಮತ್ತು ಅಗ್ರುವಿನ ಪುತ್ರನನ್ನು ಇರುವೆಗಳ ಹುತ್ತದಿಂದ ಇಂದ್ರನು ಕಾಪಾಡಿದ ವಿಷಯವು—

ಉತ ತ್ಯಂ ಪುತ್ರಮಗ್ರುವಃ ಪರಾವೃಕ್ತಂ ಶತಕ್ರತುಃ ।
ಉಕ್ಥೇಷ್ವಿಂದ್ರ ಆಭಜತ್ ॥

(ಋ ಸಂ. ೪-೩೦-೧೬)

ಯದದತ್ತ್ಯಪಜಿಘ್ನಿಕಾ ಯದ್ಧನ್ಯೋ ಅತಿಸರ್ಪತಿ ।
ಸರ್ವಂ ತದಸ್ತು ತೇ ಘೃತಂ ।

(ಋ ಸಂ ೪-೧೦೨-೨೧)

ಏವಾ ಮಹೋ ಅಸುರ ವಕ್ಷಥಾಯ ವಮ್ರಕಃ ಪಡ್ಭಿರುಪ ಸರ್ಪದಿಂದ್ರಂ ।

(ಋ ಸಂ ೧೦-೯೯-೧೨)

ಎಂಬ ಋಕ್ಕುಗಳಲ್ಲಿ ಸೂಚಿತವಾಗಿರುವುದು

ಆದದಾನಃ ಅಂಧಃ ಅಹಿಂ ವಿ ಅಖ್ಯತ್—ಅಗ್ರುವಿನ ಪುತ್ರನು ಹುತ್ತದಲ್ಲಿದ್ದ ಇರುವೆಗಳಿಂದ ಕಚ್ಚಲ್ಪಡುತ್ತಿದ್ದರೂ ಅಲ್ಲಿಂದ ತಪ್ಪಿಸಿಕೊಂಡು ಈಚೆಗೆ ಬರಲಾರದವನಾಗಿದ್ದನು ಏಕೆಂದರೆ ಅವನಿಗೆ ಕಣ್ಣು ಕಾಣಿಸುತ್ತಿರಲಿಲ್ಲ. ಕುರುಡನಾಗಿದ್ದನು. ಆದರೂ ಇಂದ್ರನು ಅವನನ್ನು ಹುತ್ತದಿಂದ ಹೊರಕ್ಕೆ ತಂದನಂತರ ಹುತ್ತದಲ್ಲಿದ್ದ ಹಾವನ್ನು ಕಂಡು ತಿಳಿಯುವಂತಾಯಿತು ಹುತ್ತದಲ್ಲಿ ಹಾವಿರುವುದು ಎಲ್ಲರಿಗೂ ತಿಳಿದ ವಿಷಯವು. ಅಂತಹ ಅಪಾಯಸ್ಥಳದಿಂದ ಇಂದ್ರನು ರಕ್ಷಿಸಿದನು ಎಂದು ಮುಖ್ಯಾಭಿಪ್ರಾಯವು. ಇದೆಲ್ಲಾ ಇಂದ್ರನ ಮಹಿಮೆಯು.

॥ संहितापाठः ॥

प्र ते॑ पूर्वा॑णि॒ करणा॑नि विप्रा॒विद्वाँ॑ आ॒ह वि॒दुषे॒ करा॑ꣳसि ।

यथा॑यथा॒ वृष्ण्या॑नि॒ स्वगू॑र्ताऽपा॒ꣳसि राज॒न्नर्या॒विवे॑षीः॥७०॥

॥ पदपाठः ॥

प्र । ते॒ । पूर्वा॑णि । करणा॑नि । वि॒प्र॒ । आ॒विद्वान् । आ॒ह । वि॒दुषे॑ । करा॑ꣳसि ।

यथा॑ऽयथा । वृष्ण्या॑नि । स्वऽगू॑र्ता । अ॒पा॒ꣳसि । राज॑न् । नर्या॑ । आ॒विवे॑षीः ॥ ७० ॥

॥ सायणभाष्यं ॥

हे राजन्प्रजावमानेंद्र वृष्ण्यानि वर्षणयोग्यानि स्वगूर्ता स्वगूर्तानि स्वयमुद्गीर्णानि नर्या नर्याणि मनुष्यहितान्यपाꣳसि त्वत्संबंधीनि कर्माणि यथा-यथाविवेषीर्व्याप्नोतेः । आकार्षीरिति यावत् । तथातथा हे विप्र प्राज्ञेंद्र विदुषे विदुषः सर्वं जानतस्ते त्वत्संबंधीनि पूर्वाणि पुरातनानि करणानि कर्माण्याविद्वान् आ समंताज्जानन् वामदेवः करांसि त्वदीयानि कर्माणि प्र प्रकर्षेणाह । ब्रवीति ॥

॥ प्रतिपदार्थ ॥

राजन्—प्रकाशमानನಾದ ಎಲೈ ಇಂದ್ರನೇ। **वृष्ण्यानि**—ವೃಷ್ಟಿಕಾರಕವಾದವೂ। **स्वगूर्ता**—ಸ್ವಯಂಪ್ರಕಾಶಿತವಾದವೂ। **नर्या**—ಮಾನವರಿಗೆ ಹಿತಕಾರಿಯಾದವೂ ಆದ। **अपाꣳसि**—ನಿನ್ನ ಕಾರ್ಯಗಳನ್ನು। **यथायथा**—ಯಾವಯಾವ ರೀತಿಯಲ್ಲಿ। **आविवेषीः**—ನೆರವೇರಿಸಿದೆಯೋ (ಅದೇ ರೀತಿಯಲ್ಲಿ)। **विप्र**—ಪ್ರಾಜ್ಞನಾದ ಇಂದ್ರನೇ। **विदुषे**—ಸರ್ವಜ್ಞನಾದ। **ते**—ನಿನ್ನ। **पूर्वाणि**—ಪ್ರಾಚೀನಗಳಾದ। **करणानि**—ಕರ್ಮಗಳನ್ನು। **आविद्वान्**—ಪೂರ್ಣವಾಗಿ ತಿಳಿದ ವಾಮದೇವನು। **करांसि**—ನಿನ್ನ ಕರ್ಮಗಳನ್ನು। **प्र आह**—ಪೂರ್ಣವಾಗಿ ಪ್ರಶಂಸಿಸುತ್ತಾನೆ

॥ भावार्थ ॥

ಪ್ರಕಾಶಮಾನನಾದ ಎಲೈ ಇಂದ್ರನೇ, ವೃಷ್ಟಿಕಾರಕವಾದವೂ, ಸ್ವಯಂಪ್ರಕಾಶಿತವೂ, ಮಾನವರಿಗೆ ಹಿತಕಾರಿಯಾದವೂ ಆದ ನಿನ್ನ ಕಾರ್ಯಗಳನ್ನು ಯಾವಯಾವ ರೀತಿಯಲ್ಲಿ ನೆರವೇರಿಸಿದೆಯೋ, ಅದೇ ರೀತಿಯಲ್ಲಿ ಸರ್ವಜ್ಞನಾದ ನಿನ್ನ ಪುರಾತನ ಕರ್ಮಗಳನ್ನು ಪೂರ್ಣವಾಗಿ ತಿಳಿದ ವಾಮದೇವನು ನಿನ್ನ ಕರ್ಮಗಳನ್ನು ಪೂರ್ಣವಾಗಿ ಪ್ರಶಂಸಿಸುತ್ತಾನೆ.

English Translation

The sage, (Vamadeva), knowing, royal Indra, ancient deeds of you who are all-wise, has proclaimed the actions, such as you have performed hem, generative of rain, self-evolved, and beneficial to man.

॥ ವಿಶೇಷವಿಷಯಗಳು ॥

ಇಂದ್ರನು ಲೋಕೋಪಕಾರಾರ್ಥವಾಗಿ ಪೂರ್ವದಲ್ಲಿ ಮಾಡಿದ ವೃತ್ರಹನನ, ವೃಷ್ಟ್ಯುದಕಪ್ರಾಪ್ತಿ ಮೊದಲಾದ ಅನೇಕ ಸಾಹಸಕಾರ್ಯಗಳು ತನಗೆ ತಿಳಿದಿರುವುದೆಂದೂ, ಅವುಗಳನ್ನು ತಾನು ಆದರದಿಂದ ಪ್ರಶಂಸಿಸುವನೆಂದೂ, ನುಂತ್ರದ್ರಷ್ಟೃವಾದ ವಾಮದೇವಋಷಿಯು ಈ ಋಕ್ಕಿನಲ್ಲಿ ಹೇಳಿದಾನೆ.

॥ ಸಂಹಿತಾಪಾಠಃ ॥

ನೂ ಷ್ಟುತ ಇಂದ್ರ ನೂ ಗೃಣಾನ ಇಷಂ ಜರಿತ್ರೇ ನದ್ಯೋ೨ ನ ಪೀಪೇಃ ।
ಅಕಾರಿ ತೇ ಹರಿವೋ ಬ್ರಹ್ಮ ನವ್ಯಂ ಧಿಯಾ ಸ್ಯಾಮ ರಥ್ಯಃ ಸದಾಸಾಃ ॥ ೧೧ ॥

॥ ಪದಪಾಠಃ ॥

ನು । ಸ್ತುತಃ । ಇಂದ್ರ । ನು । ಗೃಣಾನಃ । ಇಷಂ । ಜರಿತ್ರೇ । ನದ್ಯಃ । ನ । ಪೀಪೇರಿತಿ ಪೀಪೇಃ ।
ಅಕಾರಿ । ತೇ । ಹರಿವಃ । ಬ್ರಹ್ಮ । ನವ್ಯಂ । ಧಿಯಾ । ಸ್ಯಾಮ । ರಥ್ಯಃ । ಸದಾ೨ಸಾಃ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ನು ಕ್ಷಿಪ್ರಂ ಸ್ತುತಃ ಪೂರ್ವೈರ್ಋಷಿಭಿಃ ಸಂಸ್ತುತೋ ನು ಕ್ಷಿಪ್ರಂ ಗೃಣಾನೋ೨ಸ್ಮಾಭಿಃ ಸ್ತೂಯಮಾನಸ್ತ್ವಮಿಷಮನ್ನಂ ಜರಿತ್ರೇ ಸ್ತೋತ್ರೇ ಮಹ್ಯಂ ನದ್ಯೋ ನಾದ್ಭಿರ್ನದೀರಿವ ಪೀಪೇಃ । ಪ್ಯಾಯಯಯ । ಪ್ರವೃದ್ಧಂ ಕುರು । ಹೇ ಹರಿವೋ ಹರಿಸಂಜ್ಞಕಾಶ್ವೋಪೇತೇಂದ್ರ ತೇ ತುಭ್ಯಂ ನವ್ಯಂ ನವತರಂ ಬ್ರಹ್ಮ ಸ್ತೋತ್ರಮಕಾರಿ । ಅಸ್ಮಾಭಿಃ ಕ್ರಿಯತೇ । ರಥ್ಯೋ ರಥವಂತೋ ವಯಂ ಧಿಯಾ ಪ್ರಜ್ಞಾರೂಪಯಾ ಸ್ತುತ್ಯಾ ಸದಾಸಾಸ್ತ್ವಾಂ ಸರ್ವದಾ ಭಜಮಾನಾಸ್ತ್ವದರ್ಥಂ ಹವೀರೂಪಸ್ಯಾನ್ನಸ್ಯ ದಾತಾರೋ ವಾ ಸ್ಯಾಮ । ಭೂಯಾಸ್ಮ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ನು—ಅತಿಶಯವಾಗಿ । ಸ್ತುತಃ—ಹಿಂದಿನ ಋಷಿಗಳಿಂದ ಸ್ತುತನಾದ ವನೂ । ನು—ಅದೇ ಶ್ರದ್ಧೆಯಿಂದ । ಗೃಣಾನಃ—(ನಮ್ಮಿಂದಲೂ) ಸ್ತುತನಾಗತಕ್ಕವನೂ ಆಗಿ । ನದ್ಯಃ ನ—

ನದಿಗಳನ್ನು ಉದಕಗಳಿಂದ ತುಂಬುವಂತೆ। **ಜರಿತ್ರೇ**—ಸ್ತೋತೃವಾದ ನನಗೆ। **ಇಷಂ**—ಅನ್ನವನ್ನು। **ಪೀಪೇಃ**—ತುಂಬಿಕೊಂಡು। **ಹರಿವಃ**—ಹರಿಸಂಜ್ಞಕಗಳಾದ ಅಶ್ವಗಳುಳ್ಳ ಇಂದ್ರನೇ। **ತೇ**—ನಿನ್ನನ್ನುದ್ದೇಶಿಸಿ। **ನವ್ಯಂ**—ನೂತನವಾದ। **ಬ್ರಹ್ಮ**—ಸ್ತೋತ್ರವು। **ಅಕಾರಿ**—ನಿರ್ಮಿತವಾಗುತ್ತದೆ। **ರಥ್ಯಃ**—ರಥಗಳನ್ನು ಹೊಂದಿರುವ ನಾವು। **ಧಿಯಾ**—ಪ್ರಜ್ಞಾಪೂರ್ವಕವಾದ ಸ್ತುತಿಯಿಂದ। **ಸದಾಸಾಃ**—ನಿನ್ನನ್ನು ಪೂಜಿಸಿ ಹವಿಸ್ಸನ್ನ ರ್ಪಿಸುವವರಾಗಿ। **ಸ್ಯಾಮ**—ಆಗುವಂತೆ ಅನುಗ್ರಹಿಸು

॥ ಭಾವಾರ್ಥ ॥

ಎಲೈ ಇಂದ್ರನೇ, ಹಿಂದಿನ ಋಷಿಗಳಿಂದ ಅತಿಶಯವಾಗಿ ಸ್ತುತನಾದವನೂ, ಆದೇ ಶ್ರದ್ಧೆಯಿಂದ ನಮ್ಮಿಂದಲೂ ಸ್ತುತನಾಗತಕ್ಕವನೂ ಆಗಿ ನದಿಗಳನ್ನು ಉದಕಗಳಿಂದ ತುಂಬುವಂತೆ ಸ್ತೋತೃವಾದ ನನಗೆ ಅನ್ನವನ್ನು ತುಂಬಿಕೊಡು. ಹರಿಸಂಜ್ಞಕಗಳಾದ ಅಶ್ವವುಳ್ಳ ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ನೂತನವಾದ ಸ್ತೋತೃವು ನಿರ್ಮಿತವಾಗುತ್ತದೆ ರಥಗಳನ್ನು ಹೊಂದಿರುವ ನಾವು ಪ್ರಜ್ಞಾಪೂರ್ವಕವಾದ ಸ್ತುತಿಯಿಂದ ನಿನ್ನನ್ನು ಪೂಜಿಸಿ ಹವಿಸ್ಸನ್ನರ್ಪಿಸುವವರಾಗಿ ಆಗುವಂತಾಗಲಿ

English Translation

Glorified (in the past), glorified, India, at present, satisfy your worshipper with food, as rivers (are filled with water) lord of horses, a new hymn has been made for you may we, possessed of chariots, be ever diligent in your praise.

॥ ವಿಶೇಷವಿಷಯಗಳು ॥

ಈ ಋಕ್ಕು ಈ ಸೂಕ್ತದಲ್ಲಲ್ಲಿ ೨೦-೨೪ನೇ ಸೂಕ್ತಗಳಲ್ಲಿ ಕೊನೆಯ ಋಕ್ಕುಗಳಾಗಿ ಪಠಿತವಾಗಿದೆ

ಇಂದ್ರ **ನು ಸ್ತುತಃ ನು ಗೃಣಾನಃ ನದ್ಯಃ ನ ಜರಿತ್ರೇ ಇಷಂ ಪಿನ್ವೇಃ**—ಎಲೈ ಇಂದ್ರನೇ, ನೀನು ಹಿಂದೆ ಅನೇಕ ಋಷಿಗಳಿಂದ ಸ್ತುತಿಸಲ್ಪಟ್ಟೆಯಲ್ಲವೆ ಈಗ ನಮ್ಮಿಂದ ಸ್ತುತಿಸಲ್ಪಡುವೆ ನದಿಗಳಿಗೆ ವೃಷ್ಟ್ಯುದಕವು ತುಂಬಿ ಪೂರ್ಣವಾಗಿ ಹರಿಯುವಂತೆ ನಿನ್ನನ್ನು ಸ್ತೋತ್ರಮಾಡುವ ನಮಗೆ ಅನ್ನವನ್ನು (ಅನ್ನಾದ್ಯಾಹಾರವನ್ನು) ತುಂಬಿ ಕೊಡು, ಎಂದರೆ ಯಥೇಚ್ಛವಾಗಿ ಕೊಡು

ನು—ನು ಇತ್ಯೇಷೋ೭ನೇಕಕರ್ಮಾ। ಇದಂ ನು ಕರಿಷ್ಯತೀತಿ ಹೇತ್ವಪದೇಶೇ। ಕಥಂ ನು ಕರಿಷ್ಯತೀತ್ಯನುಪೃಷ್ಟೇ (ನಿ ೧-೪) **ನು** ಎಂಬ ನಿಪಾತಕ್ಕೆ ಅನೇಕ ಅರ್ಥಗಳಿವೆ **ಇದಂ ನು ಕರಿಷ್ಯತಿ** ಎನ್ನುವಾಗ **ನು** ಎಂಬ ಶಬ್ದಕ್ಕೆ ಆದ್ದರಿಂದ ಎಂದು ಹೇತ್ವರ್ಥವಾಗುತ್ತದೆ **ಕಥಂ ನು ಕರಿಷ್ಯತಿ** ಎನ್ನುವಾಗ **ನು** ಎಂಬ ಶಬ್ದಕ್ಕೆ ಹೇಗೆ ಎಂಬ ಪ್ರಶ್ನಾರ್ಥಕವಾಗುತ್ತದೆ ಹೀಗೆಯೇ **ಅಥಾಪ್ಯುಪಮಾರ್ಥೇ ಭವತಿ।** ಉಪಮಾನವನ್ನು ಸೂಚಿಸುವಾಗಲೂ ಸಹ **ನು** ಎಂಬ ಶಬ್ದದ ಪ್ರಯೋಗವಿರುವುದು ಉದಾಹರಣೆಗೆ—

ಅಕ್ಷೋ ನ ಚಕ್ರ್ಯೋಃ ಶೂರ ಬೃಹನ್ಪ ೃ ತೇ ಮಹ್ನಾ ರಿರಿಚೇ ರೋದಸ್ಯೋಃ ।
ವೃಕ್ಷಸ್ಯ ನು ತೇ ಪುರುಹೂತ ವಯೋ ವ್ಯೂ ೩ ತಯೋ ರುರುಹುರಿಂದ್ರ ಪೂರ್ವೀಃ ॥

(ಋ ಸಂ. ೬–೨೪–೩)

ಎಂಬ ಋಕ್ಕನ್ನು ನಿರುಕ್ತಕಾರರು ಉದಾಹರಿಸಿ (ನಿ. ೧–೪), **ವೃಕ್ಷಸ್ಯ ನು ತೇ । ವೃಕ್ಷಸ್ಯೇವ ತೇ ।** ವೃಕ್ಷದಂತೆ ಅಥವಾ ವೃಕ್ಷದ ಶಾಖೆಗಳಂತೆ ಎಂದು **ನು** ಎಂಬ ಶಬ್ದಕ್ಕೆ ಉಪಮಾರ್ಥವನ್ನು ಹೇಳಿದೆಯೆಂದು ತಿಳಿಸಿದಾರೆ. ಹೀಗೆಯೇ—

ನೂ ಮರ್ತೋ ದಯತೇ ಸನಿಷ್ಯನ್ಯೋ ವಿಷ್ಣವ ಉರುಗಾಯಾಯ ದಾಶತ್ ।

(ಋ ಸಂ ೭–೧೦೦–೧೧)

ಇತ್ಯಾದಿ ಋಕ್ಕುಗಳಲ್ಲಿ **ನು** ಎಂಬ ಶಬ್ದಕ್ಕೆ **ಕ್ಷಿಪ್ರಂ** ಬೇಗನೆ, ಜಾಗ್ರತೆಯಾಗಿ ಎಂಬರ್ಥವೂ,

ನೂ ಇಂದ್ರ ಶೂರ ಸ್ತವಮಾನ ಊತೀ ಬ್ರಹ್ಮಜೂತಸ್ತನ್ವಾ ವಾವೃಧಸ್ವ ।

(ಋ. ಸಂ. ೭–೧೯–೧೧)

ಇತ್ಯಾದಿ ಋಕ್ಕುಗಳಲ್ಲಿ **ನು** ಎಂದರೆ **ಅದ್ಯ,** ಈಗ, ಒಡನೆಯೇ **ಎಂಬ** ಅರ್ಥವಿರುವುದೆಂದು ನಿರುಕ್ತಕಾರರು ಉದಾಹರಣೆ ಸಹಿತವಾಗಿ ವಿವರಿಸಿದಾರೆ. ಪ್ರಕೃತವಾದ ಋಕ್ಕಿನಲ್ಲಿ **ಕ್ಷಿಪ್ರಂ** ಬೇಗನೆ, ಶೀಘ್ರವಾಗಿ ಎಂದರ್ಥವು

ಜರಿತ್ರೇ—ಜರಿತೃಶಬ್ದವು ಸ್ತೋತೃನಾಮಗಳಲ್ಲಿ ಪರಿತವಾಗಿದೆ (ನಿ. ೩–೧೯) **ಜರಿತಾ ಗರಿತಾ** (ನಿ ೧–೭) ಎಂದು ನಿರ್ವಚನವೂ ಇರುವುದರಿಂದ **ಜರಿತ್ರೇ** ಎಂದರೆ ಇಲ್ಲಿ ಸ್ತೋತ್ರಮಾಡುವ ನನಗೆ ಎಂದರ್ಥವು

ನ—ನ ಎಂಬ ಶಬ್ದಕ್ಕೆ ನಿರುಕ್ತಕಾರರು ಎರಡು ವಿಧವಾದ ಅರ್ಥವನ್ನು ಹೇಳಿರುವರು—

ನೇತಿ ಪ್ರತಿಷೇಧಾರ್ಥೀಯೋ ಭಾಷಾಯಾಂ । ಉಭಯಮನ್ವಧ್ಯಾಯಂ । ನೇಂದ್ರಂ ದೇವಮಮಂಸತ ಇತಿ ಪ್ರತಿಷೇಧಾರ್ಥೀಯಃ ಪುರಸ್ತಾದುಪಚಾರಸ್ತಸ್ಯ ಯೇತ್ಪ್ರತಿಷೇಧತಿ । ದುರ್ಮದಾಸೋ ನ ಸುರಾಯಾಂ ಇತ್ಯುಪಮಾರ್ಥೀಯಃ । ಉಪರಿಷ್ಟಾದುಪಚಾರಸ್ತಸ್ಯ ಯೋನೋಪಮಿಮಿತೇ ॥ (ನಿ ೧–೪)

ಎಂದರೆ **ನ** ಎಂಬ ಶಬ್ದವು ಲೋಕವ್ಯವಹಾರದ ಭಾಷೆಯಲ್ಲಿ ಎಂದರೆ, ವೇದಭಾಷೆಯಲ್ಲದ ಆಧುನಿಕ ಸಂಸ್ಕೃತ ಭಾಷೆಯಲ್ಲಿ ನಿಷೇಧಾರ್ಥದಲ್ಲಿ (ಇಲ್ಲ, ಅಲ್ಲ ಎಂಬರ್ಥದಲ್ಲಿ) ಉಪಯೋಗಿಸಲ್ಪಡುವುದು ಇದು ಎಲ್ಲರಿಗೂ ತಿಳಿದೇ ಇದೆ. ಆದರೆ ವೇದಗಳಲ್ಲಿ ನಿಷೇಧಾರ್ಥದಲ್ಲಿಯೂ, ಉಪಮಾರ್ಥದಲ್ಲಿಯೂ **ನ** ಎಂಬ ಶಬ್ದದ ಪ್ರಯೋಗವಿರುವುದು ಹೇಗೆಂದರೆ— **ನೇಂದ್ರಂ ದೇವಮಮಂಸತ** ಎಂಬ ವಾಕ್ಯದಲ್ಲಿನ **ನ** ಎಂಬ ಶಬ್ದವು ನಿಷೇಧಾರ್ಥದಲ್ಲಿ ಸ್ರಯುಕ್ತವಾಗಿರುವುದು **ಪ್ರತಿಷೇಧ**ವೆಂದರೆ ಒಬ್ಬ ವ್ಯಕ್ತಿಯನ್ನು ಪ್ರತ್ಯಕ್ಷವಾಗಿ ಅಥವಾ ಎದುರಿಗೆ ಹೊಗಳದೇ ಇರುವುದು. ಇಂದ್ರನನ್ನು ದೀಪ್ತಿಯುಕ್ತನಾದವನೆಂದು ತಿಳಿಯಲಾಗುವುದಿಲ್ಲ ಎಂಬ ವಾಕ್ಯದಲ್ಲಿ ಇಲ್ಲ (**ನ** ಎಂಬುದರ ಅರ್ಥ) ಎಂಬ ಶಬ್ದವು ಇಂದ್ರನ ವಿಷಯಕವಾದ ಉನಚಾರೋಕ್ತಿಗೆ ವಿರುದ್ಧವಾದ ಅರ್ಥವನ್ನು ಸೂಚಿಸುವುದು ಇದಕ್ಕೆ ಪ್ರತಿಷೇಧಾರ್ಥವೆಂದು ಹೆಸರು **ದುರ್ಮದಾಸೋ ನ ಸುರಾಯಾಂ** ಎಂಬ ವಾಕ್ಯದಲ್ಲಿ **ನ** ಎಂಬ ಶಬ್ದವು ಉಪಮಾರ್ಥವನ್ನು (ಹೋಲಿಕೆಯನ್ನು) ಸೂಚಿಸುವುದು. ಮದ್ಯವನ್ನು ಪಾನಮಾಡಿದ ಜನರಂತೆ ದುರಹಂಕಾರವುಳ್ಳವರು ಎಂದು

ಈ ವಾಕ್ಯದ ಅರ್ಥವು ಇಲ್ಲಿ ಒಂದು ವ್ಯಕ್ತಿಯಲ್ಲಿರುವ ಗುಣಾವಗುಣಗಳನ್ನು ಮತ್ತೊಂದು ವ್ಯಕ್ತಿಯಲ್ಲಿರುವ ಗುಣಾವಗುಣಗಳಿಗೆ ಹೋಲಿಸಿ ಹೇಳುವುದೇ ಉಪಮಾರ್ಥವು ಮದ್ಯಪಾನಮಾಡಿದವರು ಮತಿಹೀನರಾಗಿ ಅಹಂಕಾರದಿಂದ ನೀಚಮಾರ್ಗದಲ್ಲಿ ವರ್ತಿಸುವರು ಆ ಜನರಂತೆ ದುರಹಂಕಾರವುಳ್ಳವರು ಎಂಬುದೇ ಉಪಮಾರ್ಥವು. ಈ ವಿಧವಾದ ಅರ್ಥಗಳನ್ನು ವೇದಗಳಲ್ಲಿ **ನ** ಎಂಬ ಪದದಿಂದಲೂ, **ಇವ** ಎಂಬ ಪದದಿಂದಲೂ ನಿರ್ದೇಶಿಸಲ್ಪಡುವುದು ಈ ವಿಧವಾದ ಉಪಮಾರ್ಥದಲ್ಲಿ **ನ** ಎಂಬ ಶಬ್ದದ ಪ್ರಯೋಗವು ವೇದಗಳಲ್ಲಿ ಮಾತ್ರ ಇರುವುದು. ಬಳಸುವ ಭಾಷೆಯಲ್ಲಿಲ್ಲ ಅದಕ್ಕೆ ಬದಲಾಗಿ ಅಲ್ಲಿ **ಇವ** ಎಂಬ ಶಬ್ದದ ಪ್ರಯೋಗಮಾತ್ರವಿರುವುದು

ಸೂಕ್ತದ ಉಪಸಂಹಾರರೂಪವಾದ ಈ ಋಕ್ಕಿನಲ್ಲಿ ವಾಮದೇವಋಷಿಯು ದೇವತೆಗೆ ಹೊಸದಾಗಿ ರಚಿತವಾದ ಸ್ತೋತ್ರವನ್ನರ್ಪಿಸಿ ದೇವತೆಯ ಅನುಗ್ರಹವನ್ನು ವ್ಯಾರ್ಥಿಸುವುದು ಉಕ್ತವಾಗಿದೆ

ಇಪ್ಪತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಆ ನ ಇಂದ್ರ ಇತ್ಯೇಕಾದಶರ್ಚಂ ದಶಮಂ ಸೂಕ್ತಂ ವಾಮದೇವಸ್ಯಾರ್ಷಂ ತ್ರೈಷ್ಟುಭಮೈಂದ್ರಂ। ಆ ನ ಇತ್ಯನುಕ್ರಮಣಿಕಾ ॥ ಪೃಷ್ಠ್ಯಾಭಿಪ್ಲವಪಡಹಯೋಃ ಪ್ರಥಮೇऽಹನಿ ನಿಷ್ಕೇವಲ್ಯ ಏತನ್ನಿವಿದ್ಧಾನೀಯಂ। ಸೂತ್ರಿತಂ ಚ। ಆ ನ ಇಂದ್ರ ಇತಿ ನಿಷ್ಕೇವಲ್ಯಂ। ಆ ೬ ೫। ಇತಿ ॥ ಮಹಾವ್ರತೇ೭ಪ್ಯೇತತ್ಸಂಪಾತಸೂಕ್ತಂ। ತಥೈವ ಪಂಚಮಾರಣ್ಯಕೇ ಸೂತ್ರಿತಂ ಚ। ಆ ನ ಇಂದ್ರೋ ದೂರಾದಾ ನ ಆಸಾದಿತಿ ಸಂಪಾತಃ। ಐ ಆ. ೫-೨-೨। ಇತಿ ॥

ಅನುವಾದವ—**ಆ ನ ಇಂದ್ರ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು ಈ ಸೂಕ್ತಕ್ಕೆ ವಾಮದೇವನು ಋಷಿಯು, ಇಂದ್ರನು ದೇವತೆಯು, ತ್ರಿಷ್ಟುಪ್ ಛಂದಸ್ಸು ಅನುಕ್ರಮಣಿಕೆಯಲ್ಲಿ **ಆ ನಃ** ಎಂದು ಮೊದಲಾಗಿ ಹೇಳಿರುವುದು ಪೃಷ್ಠ್ಯ ಮತ್ತು ಅಭಿಪ್ಲವ ಷಡಹವೆಂಬ ಯಾಗಗಳ ಮೊದಲನೆಯ ದಿನಸದಲ್ಲಿ ನಿಷ್ಕೇವಲ್ಯಶಸ್ತ್ರಸಂತ್ರಗಳನ್ನು ಪರಿಸುವಾಗ ಈ ಸೂಕ್ತವನ್ನು ನಿವಿನ್ಮಂತ್ರಗಳಿಗಾಗಿ ಉಪಯೋಗಿಸಬೇಕೆಂದು ಆಶ್ವಲಾಯನರ್ತ್ವಿಜಸೂತ್ರದ—**ಆ ನ ಇಂದ್ರ ಇತಿ ನಿಷ್ಕೇವಲ್ಯಂ** ಎಂಬ ಸೂತ್ರದಿಂದ (ಆ ೬-೫) ವಿಸ್ತೃತವಾಗಿರುವುದು. ಮಹಾವ್ರತದಲ್ಲಿಯೂ ಕೂಡ ಸಂಪಾತಸೂಕ್ತಪರನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಐತರೇಯ ಆರಣ್ಯಕದ ಪಂಚನಾರಣ್ಯಕದಲ್ಲಿ **ಆ ನ ಇಂದ್ರೋ ದೂರಾದಾ ನ ಆಸಾದಿತಿ ಸಂಪಾತಃ** ಎಂಬ ವಾಕ್ಯದಿಂದ ವಿವೃತವಾಗಿರುವುದು (ಐ ಆ ೫-೨-೨)

ಸೂಕ್ತ—೨೦

ಮಂಡಲ—೪ ॥ ಅನುವಾಕ—೨ ॥ ಸೂಕ್ತ—೨೦ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ—೩, ೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—ವಾಮದೇವಃ ॥
ದೇವತಾ—ಇಂದ್ರಃ ॥
ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಆ ನ ಇಂದ್ರೋ ದೂರಾದಾ ನ ಆಸಾದಭಿಷ್ಟಿಕೃದವಸೇ ಯಾಸದುಗ್ರಃ ।
ಓಜಿಷ್ಠೇಭಿರ್ನೃಪತಿರ್ವಜ್ರಬಾಹುಃ ಸಂಗೇ ಸಮತ್ಸು ತುರ್ವಣಿಃ ಪೃತನ್ಯೂನ್॥

॥ ಪದಪಾಠಃ ॥

ಆ । ನಃ । ಇಂದ್ರಃ । ದೂರಾತ್ । ಆ । ನಃ । ಆಸಾತ್ । ಅಭಿಷ್ಟಿಽಕೃತ್ । ಅವಸೇ । ಯಾಸತ್ । ಉಗ್ರಃ।
ಓಜಿಷ್ಠೇಭಿಃ । ನೃಽಪತಿಃ । ವಜ್ರಽಬಾಹುಃ । ಸಂಽಗೇ । ಸಮತ್ಽಸು । ತುರ್ವಣಿಃ । ಪೃತನ್ಯೂನ್ ॥ ೧ ॥

॥ ಸಾಯಣಭಾಷ್ಯಂ ॥

ಅಭಿಷ್ಟಿಕೃದ್ಯಜಮಾನಸಂಬಂಧಿನಾಮಭೀಷ್ಟಾನಾಂ ಕರ್ತೋಗ್ರಸ್ತೇಜಸ್ವೀಂದ್ರೋ ನೋಽಸ್ಮಾಕ-
ಮವಸೇ ರಕ್ಷಣಾಯ ದೂರಾದಾ ಯಾಸತ್। ಆಯಾತು। ಆಗಚ್ಛತು। ಆಪಿ ಚ ಆಸಾದಾಸನ್ನಾದಂತಿಕಾಚ್ಚ
ನೋಽಸ್ಮಾಕಮವಸೇ ರಕ್ಷಣಾಯಾ ಯಾಸತ್। ಆಯಾತು। ಕೀದೃಶಃ। ಸಮತ್ಸು ಸಂಗ್ರಾಮೇಷು ಸಂಗೇ
ಶತ್ರುಭಿಃ ಸಂಯೋಗೇ ಸತಿ ಪೃತನ್ಯೂನ್ ಶತ್ರೂನ್ ತುರ್ವಣಿರ್ಹಿಂಸನ್ ವಜ್ರಬಾಹುರ್ವಜ್ರಹಸ್ತೋ
ನೃಪತಿರ್ನೃಷ್ವಿದ್ಧಾರಾ ನೃಣಾಂ ಮನುಷ್ಯಾಣಾಂ ಪಾಲಕ ಓಜಿಷ್ಠೇಭಿರತಿಶಯೇನ ತೇಜಸ್ವಿಭಿರ್ಮರುದ್ಭಿ-
ರ್ಯುಕ್ತ ಇತಿ ಶೇಷಃ ॥

॥ ಪ್ರತಿಪದಾರ್ಥ ॥

ಅಭಿಷ್ಟಿಕೃತ್—ಯಜಮಾನರ ಇಷ್ಟಾರ್ಥಗಳನ್ನು ಈಡೇರಿಸುವವನೂ । **ಉಗ್ರಃ**—ತೇಜಸ್ವಿಯೂ । **ಸಮತ್ಸು**—ಸಂಗ್ರಾಮಗಳಲ್ಲಿ । **ಸಂಗೇ**—ಶತ್ರುಗಳೊಡನೆ ಹೋರಾಡುತ್ತಿರುವಾಗ । **ಪೃತನ್ಯೂನ್**—ಶತ್ರುಗಳನ್ನು । **ತುರ್ವಣಿಃ**—ಹಿಂಸಿಸುವವನೂ । **ವಜ್ರಬಾಹುಃ**—ವಜ್ರಾಯುಧವನ್ನು ಹಿಡಿದಿರುವ ಬಾಹುವುಳ್ಳವನೂ । **ನೃಪತಿಃ**—ಮಾನವರ ಪಾಲಕನೂ ಆದ । **ಇಂದ್ರಃ**—ಇಂದ್ರನು । **ಓಜಿಷ್ಠೇಭಿಃ**—ಅತಿಶಯವಾದ ಓಜಸ್ಸುಳ್ಳ ಮರುತ್ತುಗಳೊಡಗೂಡಿ । **ನಃ**—ನಮ್ಮ । **ಅವಸೇ**—ರಕ್ಷಣೆಗಾಗಿ । **ದೂರಾತ್**—ದೂರದಿಂದಲೂ । **ಆ ಯಾಸತ್**—ಬರಲಿ । **ಆಸಾತ್**—ಹತ್ತಿರದಿಂದಲೂ ಸಹ । **ಆ (ಯಾಸತ್)**—ಬರಲಿ

। ಭಾವಾರ್ಥ ॥

ಯಜಮಾನರ ಇಷ್ಟಾರ್ಥಗಳನ್ನು ಈಡೇರಿಸುವವನೂ, ತೇಜಸ್ವಿಯೂ ಸಂಗ್ರಾಮಗಳಲ್ಲಿ ಶತ್ರುಗಳೊಡನೆ ಹೋರಾಡುತ್ತಿರುವಾಗ ಅವರನ್ನು ಹಿಂಸಿಸುವವನೂ, ವಜ್ರಾಯುಧವನ್ನು ಬಾಹುವಿನಲ್ಲಿ ಹಿಡಿದಿರುವವನೂ, ಮಾನವರ ಪಾಲಕನೂ ಆದ ಇಂದ್ರನು ಅತಿಶಯವಾದ ಓಜಸ್ಸುಳ್ಳ ಮರುತ್ತುಗಳೊಡಗೂಡಿ ನಮ್ಮ ರಕ್ಷಣೆಗಾಗಿ ದೂರದಲ್ಲಿರಲಿ ಅಥವಾ ಹತ್ತಿರವಿರಲಿ, ಖಂಡಿತವಾಗಿ ಬರಬೇಕು.

English Translation.

May the illustrious Indra, the granter of desires, come to us, whether from afar or nigh, for our protection . he who is the lord of men, armed with the thunderbolt, overcoming his foes in conflict and in combats, (attended) by the most illustrious (Maruts).

॥ ವಿಶೇಷವಿಷಯಗಳು ॥

ಸಮತ್ಸು, ಪೃತನಾ ಎಂಬ ಶಬ್ದಗಳು ಸಂಗ್ರಾಮನಾಮಗಳಲ್ಲಿ ಪರಿತವಾಗಿದೆ (ನಿ ೩-೬) **ಈ** ಋಕ್ಕಿನಲ್ಲಿ **ಪೃತನ್ಯೂನ್** ಎಂಬ ಶಬ್ದಕ್ಕೆ ಯಾಸ್ಕಾಭಿಲಾಷಿಗಳೆಂಬ ಅರ್ಥದಲ್ಲಿ **ಶತ್ರೂನ್**--ಶತ್ರುಗಳನ್ನು ಎಂದು ಭಾಷ್ಯಕಾರರು ಅರ್ಥವಿವರಣೆಮಾಡಿದ್ದಾರೆ

ಆಸಾತ್—**ಆಸಾತ್** ಎಂಬ ಶಬ್ದವು ಅಂತಿಕನಾಮಗಳಲ್ಲಿ ಪರಿತವಾಗಿರುವುದರಿಂದ (ನಿ ೩-೯) **ಆಸಾತ್** ಎಂದರೆ ಸಮೀಪದಲ್ಲಿ ಎಂದರ್ಥವು

ತುರ್ವಣಿಃ—ಈ ಋಕ್ಕಿನಲ್ಲಿರುವ **ತುರ್ವಣಿಃ** ಎಂಬ ಶಬ್ದಕ್ಕೆ ಭಾಷ್ಯಕಾರರು **ಹಿಂಸನ್**—ಶತ್ರುಗಳನ್ನು ಹಿಂಸಿಸುವವನು ಎಂದು ಅರ್ಥವಿವರಣೆ ಮಾಡಿದಾರೆ ಆದರ ಯಾಸ್ಕರು ಈ ಶಬ್ದಕ್ಕೆ--

ತುರ್ವಣಿಸ್ತೂರ್ಣವನಿಃ । ಸ ತುರ್ವಣಿರ್ಮಹೌ ಆರೇಣುಸೌಂಸ್ಯೇ ಇತ್ಯಪಿ ನಿಗನೋ ಭವತಿ ।
(ನಿ. ೬-೧೪)

ಎಂದು ನಿರ್ವಚನವನ್ನು ಹೇಳಿ ಉದಾಹರಣೆಯನ್ನು ಕೊಟ್ಟಿರುವರು ಎಂದರೆ **ತುರ್ವಣಿಃ** ಎಂದರೆ **ತೂರ್ಣಂ ಹಿಂಯಃ ಸಂಭಜತೇ ಸ ತೂರ್ಣವನಿತಾ ಸನ್ ತೂರ್ಣವನಿರಿತ್ಯುಕ್ತಃ** । ಇಂದ್ರನು ತನ್ನನ್ನು ಸ್ತೋತ್ರಮಾಡುವವರ ಸಮೀಪಕ್ಕೆ ಬೇಗ ಬರುವವನು ಎಂದು ಈ ಶಬ್ದದ ಅರ್ಥವಿವರಣೆಮಾಡಿದ್ದಾರೆ.

ಓಜಿಷ್ಠೇಭಿಃ—**ಅತಿಶಯೇನ ತೇಜಸ್ವಿಭಿಃ ಮರುದ್ಭಿರ್ಯುಕ್ತ ಇತಿ ಶೇಷಃ । ಓಜಿಷ್ಠೇಭಿಃ** ಎಂಬ ಶಬ್ದಕ್ಕೆ ತೇಜಸ್ವಿಗಳಾದವರು, ಪರಾಕ್ರಮಶಾಲಿಗಳು ಎಂಬರ್ಥಮಾತ್ರ ಇರುವುದಾದರೂ ಭಾಷ್ಯಕಾರರು ಸಂದರ್ಭಾನುಸಾರವಾಗಿ ಅರ್ಥಹೊಂದುವಂತೆ **ಮರುದ್ಭಿಃ**—ಮರುದ್ದೇವತೆಗಳೊಡನೆ ಎಂದು ವಿವರಿಸಿದ್ದಾರೆ.

॥ संहितापाठः ॥

आ न इन्द्रो हरिभिर्यात्वच्छार्वाचीनोऽवसे राधसे च ।
तिष्ठाति वज्री मघवा विरप्शीमं यज्ञमनु नो वाजसातौ ॥

॥ पदपाठः ॥

आ । नः । इन्द्रः । हरिऽभिः । यातु । अच्छ । अर्वाचीनः । अवसे । राधसे । च ।
तिष्ठाति । वज्री । मघऽवा । विऽरप्शी । इमम् । यज्ञम् । अनु । नः । वाजऽसातौ ॥ ३ ॥

॥ सायणभाष्यम् ॥

अर्वाचीनोऽस्मदभिमुख इन्द्रोऽवसेऽस्मदीयाय रक्षणाय राधसे च धनाय च नोऽस्माञ्छ्रान्हि लक्षीकृत्य हरिभिरश्वैः सहा यातु । आगच्छतु । किंच वज्री वज्रवान्मघवा धनवान्विरप्शी महान् । विरप्शीति महन्नामसु पाठात् । अस्मदीयेऽस्य कर्मणोऽद्येष्वृभिरसुरादिभिः सह नोऽस्माकं वाजसातौ युद्धे प्राप्तेऽस्मदीयमिमं यज्ञमनूद्दिश्य तिष्ठाति । तिष्ठतु ॥

॥ प्रतिपदार्थ ॥

अर्वाचीनः—नम्मನ್ನು ಅನುಗ್ರಹಬುದ್ಧಿಯಿಂದ ನೋಡುವ । **इन्द्रः**—ಇಂದ್ರನು ! **अवसे**—ನಮ್ಮ ರಕ್ಷಣೆಗಾಗಿಯೂ । **राधसे च**—ನಮ್ಮ ಧನಲಾಭಕ್ಕಾಗಿಯೂ । **नः अच्छ**—ನಮಗೆ ಅಭಿಮುಖನಾಗಿ । **हरिभिः**—ಅಶ್ವಗಳೊಡನೆ । **आ यातु**—ಬರಲಿ । **वज्री**—ವಜ್ರಾಯುಧವುಳ್ಳವನೂ । **मघवा**—ಧನವಂತನೂ । **विरप्शी**—ಮಹತ್ಸ್ವರೂಪವುಳ್ಳವನೂ ಆದ ಇಂದ್ರನು । **नः**—ನಮಗೂ (ನಮ್ಮ ಶತ್ರುಗಳಿಗೂ) । **वाजसातौ**—ಯುದ್ಧವು ಸಂಭವಿಸಿದ ಕಾಲದಲ್ಲಿ । **इमं यज्ञं अनु**—ಈ ಯಜ್ಞವನ್ನುದ್ದೇಶಿಸಿ । **तिष्ठाति**—ಬಂದು ಕುಳಿತುಕೊಳ್ಳಲಿ.

॥ भावार्थ ॥

ಅಂತರಿಕ್ಷದಲ್ಲಿದ್ದರೂ ಸಹ ನಮ್ಮನ್ನು ಅನುಗ್ರಹಬುದ್ಧಿಯಿಂದ ನೋಡತಕ್ಕ ಇಂದ್ರನು ನಮ್ಮ ರಕ್ಷಣೆಗಾಗಿಯೂ, ಧನಲಾಭಕ್ಕಾಗಿಯೂ ನಮಗೆ ಅಭಿಮುಖನಾಗಿ ಅಶ್ವಗಳೊಡನೆ ಬರಲಿ ವಜ್ರಾಯುಧವುಳ್ಳವನೂ, ಧನವಂತನೂ, ಮಹತ್ಸ್ವರೂಪವುಳ್ಳವನೂ ಆದ ಇಂದ್ರನು ನಮಗೂ ನಮ್ಮ ಶತ್ರುಗಳಿಗೂ ಯುದ್ಧವು ಸಂಭವಿಸಿದ ಕಾಲದಲ್ಲಿ ಈ ಯಜ್ಞವನ್ನುದ್ದೇಶಿಸಿ ಬಂದು ಕುಳಿತುಕೊಳ್ಳಲಿ.

English Translation.

May Indra, looking down upon us, come with his steeds to our presence for our protection and enrichment. may the mighty thunderer,

the possessor of wealth, (aiding us) in battle, be present at this our sacrifice.

॥ ವಿಶೇಷವಿಷಯಗಳು ॥

ವಿರಷ್ಮೀ—**ವಿರಷ್ಮೀ** ಎಂಬ ಶಬ್ದವು ಮಹನ್ನಾಮಗಳಲ್ಲಿ ಪರಿತವಾಗಿರುವುದರಿಂದ (ನಿ. ೩–೧೩) ಮಹತ್ಸ್ವರೂಪವುಳ್ಳವನು, ಮಹಾಮಹಿಮೆಯುಳ್ಳವನು ಎಂದರ್ಥವು. ನಿರುಕ್ತವ್ಯಾಖ್ಯಾಕಾರರಾದ ದುರ್ಗಾಚಾರ್ಯರು—**ಮಷ್ಟಾ ಅಮತ್ರೋ ವೃಜನೇ ವಿರಷ್ಮಿ** (ಋ. ಸಂ. ೩–೩೬–೪) ಎಂಬ ಋಕ್ಕಿಗೆ ಅರ್ಥವಿವರಣೆ ಮಾಡುವಾಗ—**ವಿರಷ್ಮೀ ವಿರಾವಣಶೀಲಃ** । ಯುದ್ಧಾದಿಗಳಲ್ಲಿ ಬಹಳ ಘಟ್ಟಿಯಾಗಿ ಅರ್ಭಟಿಸುವವನೆಂದು. ಇಂದ್ರನ ಪರವಾಗಿ ಅರ್ಥಮಾಡಿದಾರೆ

ವಾಜಸಾತೌ—**ವಾಜಸಾತೌ** ಎಂಬ ಶಬ್ದವು ಸಂಗ್ರಾಮನಾಮಗಳಲ್ಲಿ ಪರಿತವಾಗಿರುವುದರಿಂದ (ನಿ ೩–೯) ಯುದ್ಧದಲ್ಲಿ ಎಂದರ್ಥವು. ಈ ಶಬ್ದಕ್ಕೆ ಇನ್ನೊಂದು ವಿಧ ಅರ್ಥವೂ ಇರುವುದು. ವಾಜಃಶಬ್ದವು ಅನ್ನನಾಮಗಳಲ್ಲಿ ಪರಿತವಾಗಿರುವುದರಿಂದ **ವಾಜಸಾತಿ** ಶಬ್ದಕ್ಕೆ ಅನ್ನಪ್ರಾಪ್ತಿ ಎಂಬರ್ಥವನ್ನು ಹೇಳಬಹುದು ಯಾಸ್ಕರು—**ವಾಜಸಾತಯೇ ಅನ್ನಸಂಸನನಾಯ, ಅನ್ನಸಂಭಜನಾಯ** (ನಿ. ೧೨–೪೬) ಎಂದು ನಿರ್ವಚನವನ್ನು ಹೇಳಿರುವರು.

॥ ಸಂಹಿತಾಪಾಠಃ ॥

ಇಮಂ ಯಜ್ಞಂ ತ್ವಮಸ್ಮಾಕಮಿಂದ್ರ ಪುರೋ ದಧತ್ಸನಿಷ್ಯಸಿ ಕ್ರತುಂ ನಃ ।
ಶ್ವಘ್ನೀವ ವಜ್ರಿನ್ಸನಯೇ ಧನಾನಾಂ ತ್ವಯಾ ವಯಮರ್ಯ ಆಜಿಂ
ಜಯೇಮ ॥ ೩ ॥

॥ ಪದಪಾಠಃ ॥

ಇಮಂ । ಯಜ್ಞಂ । ತ್ವಂ । ಅಸ್ಮಾಕಂ । ಇಂದ್ರ । ಪುರಃ । ದಧತ್ । ಸನಿಷ್ಯಸಿ । ಕ್ರತುಂ । ನಃ ।
ಶ್ವಘ್ನೀವ್ಇವ । ವಜ್ರಿನ್ । ಸನಯೇ । ಧನಾನಾಂ । ತ್ವಯಾ । ವಯಂ । ಆರ್ಯಃ । ಆಜಿಂ । ಜಯೇಮ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ನೋ‍ಽಸ್ಮಾನ್ಪುರೋ ದಧತ್ ಪುರಸ್ಕೃತಾನ್ ಕುರ್ವನ್ ಅಸ್ಮಾಕಂ ಕ್ರತುಂ ಕ್ರಿಯಮಾಣಮಿಮಂ ಯಜ್ಞಂ ಸನಿಷ್ಯಸಿ । ಸಂಭಜಿಷ್ಯಸಿ । ಅಪಿ ಚ ಶ್ವಘ್ನೀವ ಮೃಗಯುರ್ಮೃಗಾನಿವ ಹೇ ವಜ್ರಿನ್ ವಜ್ರವನ್ನಿಂದ್ರ ತ್ವಯೋರ್ಯೋ‍ಽರಯಃ ಸ್ತೋತಾರೋ ವಯಂ ಧನಾನಾಂ ಪಶ್ವಾದಿಧನಾನಾಂ ಸನಯೇ ಲಾಭಾಯಾಜಿಂ ಶತ್ರುಸಂಬಂಧಿನಂ ಸಂಗ್ರಾಮಂ ಜಯೇಮ । ಸಂಜೀಯಾಸ್ಮ ॥

॥ प्रतिपदार्थ ॥

इन्द्र—ಎಲೈ ಇಂದ್ರನೇ । **त्वं**—ನೀನು । **नः**—ನಮ್ಮನ್ನು । **पुरो दधत्**—ನಿನ್ನ ಮುಂಭಾಗದಲ್ಲಿರಿಸಿಕೊಂಡು । **अस्माकं**—ನಮ್ಮಿಂದ । **कृतुं**—ನೆರವೇರಿಸಲ್ಪಡುವ । **इमं यज्ञं**—ಈ ಯಜ್ಞವನ್ನು । **सनिष्यसि**—ಸೇವಿಸು । **वज्रिन्**—ವಜ್ರಾಯುಧವನ್ನು ಧರಿಸಿರುವ ಎಲೈ ಇಂದ್ರನೇ । **त्वया**—ನಿನ್ನ ಸಹಾಯದಿಂದ । **आर्यः**—ಸ್ತೋತೃಗಳಾದ । **वयं**—ನಾವು । **धनानां**—ಪಶ್ವಾದಿ ಧನಗಳ । **सनये**—ಲಾಭಕ್ಕಾಗಿ । **आजिं**—ಯುದ್ಧವನ್ನು । **श्वघ्नीव**—ಬೇಟೆಗಾರನು ಮೃಗಗಳನ್ನು ಕೊಲ್ಲುವಂತೆ । (ನಮ್ಮ ಶತ್ರುಗಳನ್ನು ಕೊಲ್ಲುತ್ತಾ) **जयेम**—ಜಯಿಸುವಂತೆ ಆಗಲಿ.

॥ भावार्थ ॥

ಎಲೈ ಇಂದ್ರನೇ, ನಿನ್ನ ಮುಂಭಾಗದಲ್ಲಿ ನಮ್ಮನ್ನಿರಿಸಿಕೊಂಡು ನಮ್ಮಿಂದ ನೆರವೇರಿಸಲ್ಪಡುವ ಈ ಯಜ್ಞವನ್ನು ಸೇವಿಸು ವಜ್ರಧಾರಿಯಾದ ಇಂದ್ರನೇ, ಸ್ತೋತೃಗಳಾದ ನಾವು ನಿನ್ನ ಸಹಾಯದಿಂದ ನಮ್ಮ ಶತ್ರುಗಳನ್ನೆಲ್ಲಾ ಬೇಟೆಗಾರನು ಮೃಗಗಳನ್ನು ಕೊಲ್ಲುವಂತೆ ನಾಶಪಡಿಸಿ, ಯುದ್ಧವನ್ನು ಜಯಿಸಿ ನಮಗೆ ಬೇಕಾದ ಪಶ್ವಾದಿ ಧನಗಳನ್ನು ಪಡೆಯುವಂತಾಗಲಿ.

English Translation.

You, Indra, placing us before you, shall receive this sacrifice, our holy offering and as the huntsman (kills his game), may we, your worshippers, holder of the thunderbolt, for the acquirement of riches through you, be victorious in battle.

॥ विशेषविषयगळु ॥

ಈ ಋಕ್ಕಿನಲ್ಲಿ ಇಂದ್ರನು ಯಜ್ಞದಲ್ಲಿ ಅಗ್ರಸ್ಥಾನವನ್ನು ಪಡೆದು ಯಜ್ಞವನ್ನು ನೆರವೇರಿಸಬೇಕೆಂದೂ ಧನಪ್ರಾಪ್ತಿಗಾಗಿ ನಾವು ಮಾಡುವ ಯುದ್ಧಗಳಲ್ಲಿ ಬೇಟೆಗಾರನು ಮೃಗಗಳನ್ನು ಕೊಲ್ಲುವಂತೆ ನಾವು ನಮ್ಮ ಶತ್ರುಗಳನ್ನು ಕೊಂದು ಜಯಶೀಲರಾಗೋಣ ಎಂದೂ ವಾಮದೇವಋಷಿಯು ಇಂದ್ರನನ್ನು ಪ್ರಾರ್ಥಿಸಿದಾನೆ.

कृतु ಶಬ್ದವು ಕರ್ಮನಾಮಗಳಲ್ಲಿಯೂ (ನಿ. ೩–೧) **आजि** ಶಬ್ದವು ಸಂಗ್ರಾಮನಾಮಗಳಲ್ಲಿಯೂ (ನಿ. ೩–೯) ಪರಿತಪಾಗಿದೆ.

आर्यः—ಅರ್ಯಶಬ್ದವು ಈಶ್ವರನಾಮಗಳಲ್ಲಿ ಪರಿತವಾಗಿದೆ (ನಿ ೩–೧೧) ಪ್ರಭು, ಸ್ವಾಮಿ ಎಂದರ್ಥ. ಪ್ರಕೃತ ಋಕ್ಕಿನಲ್ಲಿ **ऋ गतौ** ಎಂಬ ಧಾತುವಿನಿಂದ ನಿಷ್ಪನ್ನವಾಗಿರುವಂತೆ ಭಾವಿಸಿ **आर्यः** ಎಂಬ ಶಬ್ದಕ್ಕೆ **अरयः स्तोतारः** ಸ್ತೋತೃಗಳಾದ ಎಂಬರ್ಥವನ್ನು ಭಾಷ್ಯಕಾರರು ಹೇಳಿರುವರು

श्वघ्नीव—ಈ ಶಬ್ದಕ್ಕೆ ಮೋಸಮಾಡತಕ್ಕ ಜೂಜುಗಾರನೆಂದೂ, ವ್ಯಾಧನೆಂದೂ, ವ್ಯಾಧನ ಪತ್ನಿಯೆಂದೂ ಮೂರು ವಿಧವಾಗಿ ಅರ್ಥಮಾಡಬಹುದು. ಮೊದಲನೆಯದಾಗಿ, ನಿರುಕ್ತಕಾರರ ವಿವರಣೆಯಂತೆ—

ಶ್ವಘ್ನೀ ಕಿತವೋ ಭವತಿ ಸ್ವಂ ಹಂತಿ ಸ್ವಂ ಪುನರಾಶ್ರಿತಂ ಭವತಿ। ಕೃತಂ ನ ಶ್ವಘ್ನೀ ವಿ ಚಿನೋತಿ ದೇವನೇ। ಕಿತವಃ ಕಿಂ ತವಾಸ್ತೀತಿ ಶಬ್ದಾನುಕೃತಿಃ। ಕೃತವಾನ್ಯಾಶೀರ್ನಾಮಕಃ।

(ನಿ. ೫-೩೨)

ಶ್ವಘ್ನಿಯೆಂದರೆ ಜೂಜುಗಾರನು. ತಾನು ತನ್ನನ್ನೇ ನಾಶಮಾಡಿಕೊಳ್ಳುತ್ತಾನೆ. ಮತ್ತು ಪರಾಧೀನನಾಗುತ್ತಾನೆ. ಎಂದು ವಿವರಿಸಿ, ಋಕ್ಸಂಹಿತೆಯ—

ಕೃತಂ ನ ಶ್ವಘ್ನೀ ವಿ ಚಿನೋತಿ ದೇವನೇ ಸಂವರ್ಗಂ ಯನ್ಮೃಘವಾ ಸೂಯೇ೯ ಜಯತ್।

(ಋ ಸಂ. ೧೦-೪೩-೫)

ಎಂಬ ಋಕ್ಕನ್ನು ಉದಾಹರಿಸುತ್ತಾರೆ ಈ ವಿವರಣೆಯನ್ನು ಅನುಸರಿಸಿದರೆ, ಇಲ್ಲಿ ಜೂಜುಗಾರನೆಂದಾಗುತ್ತದೆ. ಸ್ಕಂದಸ್ವಾಮಿಗಳು **ಶ್ವಭಿರ್ಹಂತೀತಿ ಶ್ವಘ್ನಿರ್ಲುಬ್ಧಕ** ಇಹೋಚ್ಯತೇ ನಾಯಿಗಳ ಮುಖಾಂತರ ಪ್ರಾಣಿಗಳನ್ನು ಕೊಲ್ಲುತಕ್ಕ ಬೇಟಿಗಾರ ಎಂದೂ, ಸಾಯಣರು—**ಶುನಾ ಮೃಗಾನ್ ಹತವಾನ್ ಶ್ವಹಾ। ತಸ್ಯ ಸ್ತ್ರೀ ಶ್ವಘ್ನೀ** ನಾಯಿಗಳ ಮೂಲಕ ಮೃಗಗಳನ್ನು ಕೊಲ್ಲುತಕ್ಕ ವ್ಯಾಧನ ಸ್ತ್ರೀ (ಪತ್ನಿ) ಎಂದೂ ವಿವರಿಸುತ್ತಾರೆ. ಋಕ್ಸಂಹಿತೆಯಲ್ಲಿ ಪ್ರಕೃತ ಋಕ್ಕಿನಲ್ಲಲ್ಲದೆ ಋ ಸಂ ೧-೯೨-೧೦, ೨-೧೭-೪, ೧೦-೪೨-೯, ೧೦-೪೩-೫, ೮-೪೫-೩ ಎಂಬ ಋಕ್ಕುಗಳಲ್ಲಿ **ಶ್ವಘ್ನೀ** ಎಂಬ ಶಬ್ದದ ಪ್ರಯೋಗವಿದೆ ಪ್ರಕೃತ ಋಕ್ಕಿನಲ್ಲಿ ಈ ಶಬ್ದಕ್ಕೆ ವ್ಯಾಧನೆಂದು ಅರ್ಥಮಾಡಿದಾರೆ.

॥ ಸಂಹಿತಾಪಾಠಃ ॥

ಉಶನ್ನು ಷು ಣಃ ಸುಮನಾ ಉಪಾಕೇ ಸೋಮಸ್ಯ ನು ಸುಷುತಸ್ಯ ಸ್ವಧಾವಃ।
ಪಾ ಇಂದ್ರ ಪ್ರತಿಭೃತಸ್ಯ ಮಧ್ವಃ ಸಮಂಧಸಾ ಮಮದಃ ಪೃಷ್ಟ್ಯೇನ ॥೪॥

॥ ಪದಪಾಠಃ ॥

ಉಶನ್। ಊಂ ಇತಿ। ಷು। ಣಃ। ಸುಽಮನಾಃ। ಉಪಾಕೇ। ಸೋಮಸ್ಯ। ನು। ಸುಽಸುತಸ್ಯ। ಸ್ವಧಾಽವಃ।

ಪಾಃ। ಇಂದ್ರ। ಪ್ರತಿಽಭೃತಸ್ಯ। ಮಧ್ವಃ। ಸಂ। ಆಂಧಸಾ। ಮಮದಃ। ಪೃಷ್ಟ್ಯೇನ ॥ ೪ ॥

॥ ಸಾಯಣಭಾಷ್ಯಂ ॥

ಅಗ್ನಿಷ್ಟೋಮೇ ಮಾಧ್ಯಂದಿನಸವನೇ ಮೈತ್ರಾವರುಣಸ್ಯೋಶನ್ನು ಷು ಣ ಇತಿ ಶಸ್ತ್ರಯಾಜ್ಯಾ। ಸೂತ್ರಿತಂ ಚ। ಉಶನ್ನು ಷು ಣಃ ಸುಮನಾ ಉಪಾಕ ಇತಿ ಯಾಜ್ಯಾ। ಆ. ೫-೧೬। ಇತಿ ॥

ಹೇ ಸ್ವಧಾವೋಽನ್ನವನ್ನಿಂದ್ರ ಸುಮನಾಃ ಶೋಭನಮನಸ್ಕಸ್ತ್ವಮುಷಾಕೇ ಸಮೀಪೇ ನೋಽಸ್ಮಾನುಶನ್ನು ಸು ಅತ್ಯಂತಂ ಕಾಮಯಮಾನಃ ಸನ್ ಸುಷುತಸ್ಯ ಸುಷ್ಠ್ವಭಿಷುತಂ ಪ್ರತಿಭೃತಸ್ಯ ಸಂಭೃತಂ ಮಧ್ವೋ ಮಾದಕಂ ಸೋಮಸ್ಯ ಸೋಮಂ ನು ಕ್ಷಿಪ್ರಮೇವ ಪಾಃ । ಪಿಬ । ಪೃಷ್ಟ್ಯೇನ । ಪೃಷ್ಟ್ಯಶಬ್ದೇನ ಮಾಧ್ಯಂದಿನಸವನ ಉದ್ಗಾತೃಭಿರುದ್ಗೀಯಮಾನಂ ಸ್ತೋತ್ರಮುಚ್ಯತೇ । ತತ್ಸಂಬಂಧಿನಾಂಧಸಾ ಪೀತೇನ ಸೋಮೇನ ಸಂ ಮಮದಃ । ಪ್ರಹೃಷ್ಟೋ ಭವ ॥

॥ ಪ್ರತಿಪದಾರ್ಥ ॥

ಸ್ವಧಾವಃ—ಅನ್ನವಂತನಾದ । **ಇಂದ್ರ**—ಇಂದ್ರನೇ । **ಸುಮನಾಃ**—ಕಲ್ಯಾಣಕಾರಕವಾದ ಮನಸ್ಸುಳ್ಳ ನೀನು । **ಉಷಾಕೇ**—ನಮ್ಮ ಸಮೀಪದಲ್ಲಿ । **ನಃ**—ನಮ್ಮನ್ನು । **ಸು ಉಶನ್**—ಅತಿಶಯವಾಗಿ (ನಮ್ಮ ಸಾಹಚರ್ಯವನ್ನು) ಅಪೇಕ್ಷಿಸುತ್ತಾ । **ಸುಷುತಸ್ಯ**—ಶ್ರೇಷ್ಠವಾಗಿ ಹಿಂಡಲ್ಪಟ್ಟುದೂ । **ಪ್ರತಿಭೃತಸ್ಯ**—ಶೇಖರಿಸಲ್ಪಟ್ಟುದೂ । **ಮಧ್ವಃ**—ಮಾದಕವಾದುದೂ ಆದ । **ಸೋಮಸ್ಯ**—ಸೋಮವನ್ನು । **ನು**—ಶೀಘ್ರವಾಗಿ । **ಪಾಃ**—ಪಾನಮಾಡು । **ಪೃಷ್ಟ್ಯೇನ**—ಮಾಧ್ಯಂದಿನಸವನಕಾಲದ ಸ್ತುತಿಯೊಡನೆ । **ಅಂಧಸಾ**—(ಪಾನಮಾಡಿದ) ಸೋಮದಿಂದ । **ಸಂ ಮಮದಃ**—ಸಂತೃಪ್ತನಾಗು

॥ ಭಾವಾರ್ಥ ॥

ಅನ್ನವಂತನಾದ ಇಂದ್ರನೇ, ಕಲ್ಯಾಣಕಾರಕವಾದ ಮನಸ್ಸುಳ್ಳ ನೀನು ನಮ್ಮ ಸಾಹಚರ್ಯವನ್ನು ಅತಿಯಾಗಿ ಅಪೇಕ್ಷಿಸುತ್ತಾ ನಮ್ಮ ಸಮೀಪದಲ್ಲಿ ಕುಳಿತುಕೋ ಮತ್ತು ಉತ್ತಮರೀತಿಯಲ್ಲಿ ಹಿಂಡಲ್ಪಟ್ಟುದೂ ಆದರದಿಂದ್ಕೆ ಶೇಖರಿಸಲ್ಪಟ್ಟುದೂ, ಮಾದಕವಾದುದೂ ಆದ ಸೋಮವನ್ನು ಶೀಘ್ರವಾಗಿ ಪಾನಮಾಡು. ಮಾಧ್ಯಂದಿನಸವನಕಾಲದಲ್ಲಿ ಉದ್ಗಾತೃಗಳಿಂದ ಪರಿತವಾದ ಸ್ತುತಿಯೊಡನೆ ಪಾನಮಾಡಿದ ಸೋಮದಿಂದ ತೃಪ್ತನಾಗು.

English Translation·

Indra, the giver of food, be near to us, favourably disposed , and, anxious for our (good), drink of the effused, prepared, exhilarating Soma, and be pleased by the (sacrificial) food (offered) with the noon-day hymn.

॥ ವಿಶೇಷವಿಷಯಗಳು ॥

ಸ್ವಧಾ ಶಬ್ದವು ಅನ್ನನಾಮಗಳಲ್ಲಿಯೂ (ನಿ. ೩–೯) **ಉಷಾಕೇ** ಎಂಬ ಶಬ್ದವು ಅಂತಿಕನಾಮಗಳಲ್ಲಿಯೂ (ನಿ. ೩–೯) **ಅಂಧಃ** ಶಬ್ದವು ಅನ್ನನಾಮಗಳಲ್ಲಿಯೂ (ನಿ. ೩–೯) ಪರಿತವಾಗಿದೆ

ಪೃಷ್ಟ್ಯೇನ—ಇಲ್ಲಿ ಪೃಷ್ಟ್ಯಶಬ್ದಕ್ಕೆ ಮಾಧ್ಯಂದಿನಸವನ ಕಾಲದಲ್ಲಿ ಉದ್ಗಾತೃವೆಂಬ ಋತ್ವಿಜನು ಗಾನಮಾಡುವ ಸ್ತೋತ್ರನೆಂದು ಅರ್ಥಮಾಡಿದಾರೆ ಋಕ್ಕಿನ ಅರ್ಥವು ಸ್ಪಷ್ಟವಾಗಿದೆ

॥ संहितापाठः ॥

वि योः ररप्श ऋषिभिर्नवेभिर्वृक्षो न पक्वः सृण्यो न जेता ।
मर्यो न योषामभि मन्यमानोऽच्छा विवक्मि पुरुहूत-
मिन्द्रं ॥ ५ ॥

॥ पदपाठः ॥

वि । यः । ररप्शे । ऋषिऽभिः । नवेभिः । वृक्षः । न । पक्वः । सृण्यः । न । जेता ।
मर्यः । न । योषाम् । अभि । मन्यमानः । अच्छ । विवक्मि । पुरुऽहूतं । इन्द्रं ॥५॥

॥ सायणभाष्यं ॥

पक्वः पक्वफलो वृक्षो न वृक्ष इव । अत्र सृणिशब्दोऽङ्कुशवाची । तेनायुधमात्रं लक्ष्यते । सृण्य आयुधकुशलो जेता न शत्रुविजयीव वीरपुरुष इव यो नवेभिर्नव्यैर्नूतनैर्ऋषिभिर्वि ररप्शे । विविधं स्तूयते । स्तोताहं पुरुहूतं बहुभिराहूतं तमिन्द्रमच्छाभि लक्षीकृत्य विवक्मि । विशेषेण वच्मि । स्तौमि । तत्र दृष्टान्तः । अभि मन्यमानो मदीयोऽयं योषितिति भिजानन्पत्योर्न मर्त्यो योषां न स्त्रीमिव तद्वत् ॥

॥ प्रतिपदार्थ ॥

पक्वः—पक्वफाद फलगळुळ्ळ । **वृक्षो न**—वृक्षदंते सम्यृद्धनू । **सृण्यः**—उत्तमवाद आयुधवुळ्ळवनू । **जेता न**—शत्रुगळन्नु जयिसुव वीरनंतिरुवनू आद । **यः**—यावा इंद्रनु । **नवेभिः**—नूतनरादा । **ऋषिभिः**--ऋषिगळिंद । **वि ररप्शे**--विशेष रीतियल्लि स्तुतिसल्पडुवनो अंतहवनू । **पुरुहूतं**—अनेकरिंद करेयल्पडुववनू आद । **इन्द्रं**—इंद्रनन्नु । **अच्छ**—आदरदिंद उद्देशिसि । **अभि मन्यमानः**—अत्यंत अभिमानदिंद कूडिद । **मर्यः**—मानवनु । **योषां न**—तन्न पत्नियन्नु हूगळुवंते । **विवक्मि**—अतिशयवागि स्तुतिसुत्तेनै.

॥ भावार्थ ॥

पक्ववाद फलगळुळ्ळ वृक्षदंते सम्यृद्धनू, उत्तमवाद आयुधवुळ्ळवनू, शत्रुगळन्नु जयिसुव वीरनंतिरुवनू आद यावा इंद्रनु नूतनवाद ऋषिगळिंद विशेषरीतियलि सु तिसल

ಡುವನೋ ಅಂತಹವನೂ, ಅನೇಕರಿಂದ ಸಹಾಯಾರ್ಥವಾಗಿ ಕರೆಯಲ್ಪಡುವವನೂ ಆದ ಇಂದ್ರನನ್ನು ಆದರದಿಂದ ಉದ್ದೇಶಿಸಿ ಅತ್ಯಂತ ಅಭಿಮಾನದಿಂದ ಕೂಡಿದ ಪುರುಷನು ತನ್ನ ಪತ್ನಿಯನ್ನು ಹೊಗಳುವಂತೆ ಅತಿಶಯವಾಗಿ ಸ್ತುತಿಸುತ್ತೇನೆ.

English Translation.

Like a man boasting of his wife, I glorify that Indra who is invoked of many, who is hymned by recent sages, (who is) like a tree with ripe fruit, like a victorious (warrior), skilful in arms.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ವಾಮದೇನಋಷಿಯು ಇಂದ್ರನನ್ನು ಸ್ತೋತ್ರಮಾಡುವ ವಿಷಯದಲ್ಲಿ ಕೆಲವು ದೃಷ್ಟಾಂತಗಳನ್ನು ಹೇಳಿದಾನೆ.

ಪಕ್ವಃ ವೃಷ್ಣೋ ನ—ಪಕ್ವಫಲಗಳಿಂದ ತುಂಬಿದ ವೃಕ್ಷಗಳು ಹೇಗೆ ಜನರಿಗೆ ಸಮೃದ್ಧಿಯನ್ನೂ ಆನಂದವನ್ನೂ ಉಂಟುಮಾಡುವುದೋ, ಅದರಂತೆ ಇಂದ್ರನು ತನ್ನನ್ನು ಸ್ತೋತ್ರಮಾಡುವವರಿಗೆ ಸಮೃದ್ಧಿಯಾದ ಧನಾದಿಗಳನ್ನು ಕೊಡುವನೆಂದು ಪಕ್ವಫಲವೃಕ್ಷಸಾಮ್ಯವನ್ನು ಇಂದ್ರನಿಗೆ ಹೋಲಿಸಿದೆ ಈ ಋಕ್ಕಿನಲ್ಲಿ ಮೂರಾವೃತ್ತಿಪರಿತವಾಗಿರುವ ನ ಎಂಬ ಶಬ್ದವು ಉಪಮಾರ್ಥದಲ್ಲಿ ಪ್ರಯುಕ್ತವಾಗಿವೆ

ಸೃಣ್ಯಃ ಜೇತಾ ನ—ಸೃಣಿ ಶಬ್ದಕ್ಕೆ ಭಾಷ್ಯಕಾರರು ಅಂಕುಶ ಎಂಬ ಆಯುಧವಿಶೇಷವೆಂದು ಅರ್ಥಮಾಡಿದಾರೆ. ಯಾಸ್ಕರೂ ಸಹ—

ಸೃಣಿರಂಕುಶೋ ಭವತಿ ಸರಣಾತ್ । ಅಂಕುಶೋಽಞ್ಜತೇರಾಕುಚಿತೋ ಭವತೀತಿ ವಾ । ನೇದೀಯ ಇತ್ಸೃಣ್ಯಃ ಪಕ್ವಮೇಯಾತ್ ಇತ್ಯಪಿ ನಿಗಮೋ ಭವತಿ । ಅಂತಿಕತಮಮಂಕುಶಾದಾಯಾತ್ಪಕ್ವಮೌಷಧಮಾಗಚ್ಛತ್ಯಿತ್ಯಾಗಚ್ಛತ್ಯಿತಿ ।

(ನಿ ೫-೨೮)

ಎಂದು ನಿರ್ವಚನವನ್ನು ಹೇಳಿದಾರೆ. ಎಂದರೆ ಸೃಣಿಶಬ್ದಕ್ಕೆ ಅಂಕುಶವೆಂದರ್ಥವು. ಏಕೆಂದರೆ, ಸರಿ, ಒಳಕ್ಕೆ ಹೋಗು ಎಂಬರ್ಥವುಳ್ಳ ಸೃಧಾತುವಿನಿಂದ ಈ ಶಬ್ದವು ನಿಷ್ಪನ್ನವಾಗಿ ಆನೆಯ ಶಿರಸ್ಸಿನಲ್ಲಿ ಒಳಹೊಗುವುದರಿಂದ ಇದಕ್ಕೆ ಸೃಣಿ ಎಂದರೆ ಅಂಕುಶವೆಂದು ಹೆಸರು. ಅಥವಾ ಈ ಅಂಕುಶವು ಕೊಂಡಿಯಂತೆ ಬಗ್ಗಿರುವುದರಿಂದ (ಕುಟಿಲ, ವಕ್ರವಾಗಿರುವುದರಿಂದ) ಈ ಶಬ್ದವು ಅಂಚತಿಧಾತುವಿನಿಂದ ನಿಷ್ಪನ್ನವಾಗಬಹುದು. ಈ ವಿಧವಾದ ಅರ್ಥವನ್ನು ವಿವರಿಸುವುದಕ್ಕಾಗಿ ಯಾಸ್ಕರು—

ಯುನಕ್ತ ಸೀರಾ ವಿ ಯುಗಾ ತನುಧ್ವಂ ಕೃತೇ ಯೋನೌ ವಪತೇಹ ಬೀಜಂ ।
ಗಿರಾ ಚ ಶ್ರುಷ್ಟಿಃ ಸಭರಾ ಅಸನ್ನೋ ನೇದೀಯ ಇತ್ಸೃಣ್ಯಃ ಪಕ್ವಮೇಯಾತ್ ॥

(ಋ. ಸಂ ೧೦-೧೦೧-೩)

ಎಂಬ ಋಕ್ಕನ್ನು ದಾಹರಿಸಿ ಅಲ್ಲಿ ಸೃಣ್ಯಃ ಎಂಬ ಶಬ್ದಕ್ಕೆ ವಕ್ರವಾಗಿ ಬಗ್ಗಿರುವ ಅಂಕುಶ ಎಂದರೆ ಎತ್ತರವಾದ ವೃಕ್ಷದ ತುದಿಯಲ್ಲಿರುವ ಹಣ್ಣುಗಳನ್ನು ಕುಯ್ಯುವುದಕ್ಕೆ ಉಪಯೋಗಿಸುವ ತೋಟ ಎಂದು ಅರ್ಥವಿವರಣೆಮಾಡಿದಾರೆ ಪ್ರಕೃತ ಋಕ್ಕಿನಲ್ಲಿ ಅಂಕುಶ ಅಥವಾ ಅಂಕುಶದಂತಿರುವ ಈಟಿ, ಭರ್ಜಿ ಎಂಬ ಆಯುಧವನ್ನು ಧರಿಸಿ ಯುದ್ಧಮಾಡುವ ಯೋಧನು ಎಂಬರ್ಥವಿರುವುದು. ಆದುದರಿಂದ **ಸೃಣ್ಯಃ ಜೇತಾ ನ** ಎಂಬ ವಾಕ್ಯಕ್ಕೆ ಅಂಕುಶವೆಂಬ ಮೊನುಚಾದ ಆಯುಧಪ್ರಯೋಗದಲ್ಲಿ ಕುಶಲನಾದ ಭಟನು ಶತ್ರುವೀರರನ್ನು ಜಯಿಸುವಂತೆ ಎಂದು ಇಂದ್ರನ ಪರಾಕ್ರಮದ ಮತ್ತು ವಜ್ರಾಯುಧದ ವಿಷಯದಲ್ಲಿ ಉಪಮಾನವನ್ನು ಹೇಳಿದೆ ಎಂದರೆ ಹರಿತವಾದ ಅಂಕುಶವೆಂಬ ಆಯುಧವನ್ನು ಧರಿಸಿ ಯುದ್ಧಮಾಡುವ ವೀರನು ಯಾವರೀತಿ ಶತ್ರುಗಳನ್ನು ಜಯಿಸುವನೋ ಆದರಂತೆ ಇಂದ್ರನು ವಜ್ರಾಯುಧವನ್ನು ಧರಿಸಿ ಶತ್ರುಗಳನ್ನು ಜಯಿಸುವನು ಎಂದು ಇಂದ್ರನ ಪರಾಕ್ರಮದ ವಿಷಯದಲ್ಲಿ ದೃಷ್ಟಾಂತವನ್ನು ಹೇಳಿದೆ

ನವೇಭಿಃ ಋಷಿಭಿಃ ವಿ ರರಶ್ಮೇ—ನೂತನೈಃ ಋಷಿಭಿಃ ವಿವಿಧಂ ಸ್ತೂಯತೇ। ನೂತನಋಷಿಗಳಿಂದ ಎಂದರೆ ವಾಮದೇವ ಋಷಿಯ ಕಾಲದಲ್ಲಿದ್ದ ಅಥವಾ ವಾಮದೇವ ಋಷಿಯ ಸಮಕಾಲೀನರಾದ ಋಷಿಗಳಿಂದ ಇಂದ್ರನು ಸ್ತುತಿಸಲ್ಪಡುವನು ಎಂದು ಹೇಳಿದೆ ಕೆಲವು ಋಷಿಗಳು ಅಗ್ನಿಯ ವಿಷಯದಲ್ಲಿಯೂ **ಅಗ್ನಿಃಪೂರ್ವೇಭಿರ್ಋಷಿಭಿರೀಡ್ಯೋ ನೂತನೈರುತ।** ಅಗ್ನಿಯೂ ಪೂರ್ವದ (ಹಿಂದಿನ) ಋಷಿಗಳಿಂದಲೂ, ಈಗಿನ ಋಷಿಗಳಿಂದಲೂ ಸ್ತುತಿಸಲ್ಪಡುವನು ಎಂದು ಮೊದಲಾಗಿ ವರ್ಣಿಸಿದಾರೆ ಎಂದರೆ ಇಂದ್ರನು ಹಿಂದಿನ ಕಾಲದ ಋಷಿಗಳಿಂದಲೂ ಸ್ತುತಿಸಲ್ಪಡುವವನಾದ್ದರಿಂದ **ಈ** ಋಕ್ಕಿನಲ್ಲಿ **ಪುರುಹೂತಂ** ಎಂದರೆ ಅನೇಕ ಋಷಿಜನರಿಂದ ಸ್ತುತಿಸಿ ಆಹ್ವಾನಿಸಲ್ಪಡುವವನು ಎಂದು ವರ್ಣಿಸಿದೆ.

ಅಭಿ ಮನ್ಯಮಾನಃ ಮಯರ್ಃ ಯೋಷಾಂ ನ ವಿವಕ್ಷಿ ಮದೀಯೇಯಂ ಯೋಷಿದಿತ್ಯಭಿಜಾನನ್ ಮರ್ತ್ಯಃ ಯಥಾ ಸ್ವಸ್ರೀಯಂ ಪ್ರಶಂಸತಿ ತದ್ವತ್। ಲೋಕದಲ್ಲಿ ಜನರು ತಮ್ಮವರನ್ನು ಎಂದರೆ ಬಂಧುಗಳು, ಸ್ವಜನರು ಮೊದಲಾದವರನ್ನು ಹೊಗಳುವುದು ರೂಢಿಯಲ್ಲಿದೆ ಆದರಂತೆ ಮನುಷ್ಯರು ತಮ್ಮ ಪತ್ನಿಯರೇ ಮೊದಲಾದವರನ್ನು ಪ್ರಶಂಸೆಮಾಡುವರು, ಎಂದರೆ ವ.ನಃಪೂರ್ವಕವಾಗಿ ಅವರ ಗುಣವರ್ಣನೆ ಮಾಡುವರು ಆದರಂತೆ ನಾನು ಇಂದ್ರನನ್ನು ಸ್ತುತಿಸುವೆನು ಎಂದು ಋಷಿಯು ಈ ಪತಿಪತ್ನಿಯರ ದೃಷ್ಟಾಂತವನ್ನು ವರ್ಣಿಸಿ ಇಂದ್ರನಲ್ಲಿ ತನಗಿರುವ ಆದರಾತಿಶಯವನ್ನು ಸೂಚಿಸಿರುವನು.

॥ ಸಂಹಿತಾಪಾಠಃ ॥

ಗಿರಿರ್ನ ಯಃ ಸ್ವತವಾ̀ ಋಷ್ವ ಇಂದ್ರಃ ಸನಾದೇವ ಸಹಸೇ ಜಾತ ಉಗ್ರಃ ।
ಆದರ್ತಾ̀ ವಜ್ರಂ ಸ್ಥವಿರಂ ನ ಭೀಮ ಉದ್ನೇವ ಕೋಶಂ ವಸುನಾ
ನ್ಯೃಷ್ಟಂ ॥ ೬ ॥

॥ ಪದಪಾಠಃ ॥

ಗಿರಿಃ । ನ । ಯಃ । ಸ್ವ॒ತವಾನ್ । ಋಷ್ವಃ । ಇಂದ್ರಃ । ಸನಾತ್ । ಏವ । ಸಹಸೇ । ಜಾತಃ । ಉಗ್ರಃ ।

ಆ॒ದರ್ತಾ । ವಜ್ರಂ । ಸ್ಥವಿರಂ । ನ । ಭೀಮಃ । ಉದ್ನಾ॒ಇವ॑ । ಕೋಶಂ । ವಸುನಾ । ನಿ॒ಋಷ್ವಂ ॥೬॥

॥ ಸಾಯಣಭಾಷ್ಯಂ ॥

ಗಿರಿರ್ನ ಪರ್ವತ ಇವ ಸ್ವತವಾನ್ ಸ್ವಯಂ ಪ್ರವೃದ್ಧ ಋಷ್ವೋ ಮಹಾನ್ । ಋಷ್ವ ಇತಿ ಮಹನ್ನಾಮ ಮಹತ್ ಬ್ರಧ್ನ ಋಷ್ವ ಇತಿ ತನ್ನಾಮಸು ಪಾಠಾತ್ । ಉಗ್ರ ಓಜಸ್ವೀ ಯ ಇಂದ್ರಃ ಸಹಸೇ ಶತ್ರೋರಭಿಭವಾಯ ಸನಾದೇವ ಚಿರಾದೇವ ಜಾತ ಉತ್ಪನ್ನೋ ಭೀಮಃ ಶತ್ರೂಣಾಂ ಭಯಂಕರಃ ಸ ಇಂದ್ರ ಉದ್ನೇವ ಕೋಶಮುದಕೇನ ಜಲಪಾತ್ರಮಿವ ವಸುನಾ ತೇಜಸಾ ನ್ಯೃಷ್ವಂ ನಿಗತಂ ಸ್ಥವಿರಂ ಬೃಹದ್ವಜ್ರಂ ನ ವಜ್ರಂ ಚ । ನೇತಿ ಚಾರ್ಥೇ । ಆದರ್ತಾ । ಆದೃತವಾನಾಸೀತ್ ॥

॥ ಪ್ರತಿಪದಾರ್ಥ ॥

ಗಿರಿಃ ನ—ಪರ್ವತದಂತೆ । **ಸ್ವತವಾನ್**—ಸ್ಥಿರನಾಗಿಯೂ, ಪ್ರವೃದ್ಧನಾಗಿಯೂ ಇರುವವನೂ । **ಋಷ್ವಃ**—ಮಹಾತ್ಮನೂ । **ಉಗ್ರಃ**—ಓಜಸ್ವಿಯೂ ಆದ । **ಯಃ ಇಂದ್ರಃ**—ಯಾವ ಇಂದ್ರನು । **ಸಹಸೇ**—ಶತ್ರುಗಳನ್ನು ಸೆದೆಬಡಿಯಲು । **ಸನಾದೇವ**—ಬಹಳ ಕಾಲದಿಂದಲೇ । **ಜಾತಃ**—ಉತ್ಪನ್ನನಾಗಿ । **ಭೀಮಃ**—(ಶತ್ರುಗಳಿಗೆ) ಭಯಂಕರನಾಗಿರುವನೋ (ಅದೇ ಇಂದ್ರನು) । **ಕೋಶಂ**—ಉದಕಪಾತ್ರವು । **ಉದ್ನಾ ಇವ**—ಉದಕದಿಂದ ತುಂಬಿ ಪ್ರಕಾಶಿಸುವಂತೆ । **ವಸುನಾ**—ತೇಜಸ್ಸಿನಿಂದ । **ನ್ಯೃಷ್ವಂ**—ಕೂಡಿದುದೂ । **ಸ್ಥವಿರಂ**—ಬೃಹತ್ಸ್ವರೂಪವುಳ್ಳದೂ ಆದ । **ವಜ್ರಂ ನ**—ವಜ್ರಾಯುಧವನ್ನೂ ಸಹ । **ಆದರ್ತಾ**—ಆದರದಿಂದ ಹಿಡಿದಿದ್ದಾನೆ

॥ ಭಾವಾರ್ಥ ॥

ಪರ್ವತದಂತೆ ಸ್ಥಿರನಾಗಿಯೂ, ಪ್ರವೃದ್ಧನಾಗಿಯೂ ಇರುವವನೂ, ಮಹಾತ್ಮನೂ, ಓಜಸ್ವಿಯೂ ಆದ ಯಾವ ಇಂದ್ರನು ಶತ್ರುಗಳನ್ನು ಸೆದೆಬಡಿಯಲು ಬಹಳ ಕಾಲದಿಂದಲೇ ಉತ್ಪನ್ನನಾಗಿ ಶತ್ರುಗಳಿಗೆ ಭಯಂಕರನಾಗಿರುವನೋ ಅದೇ ಇಂದ್ರನು ವಜ್ರಾಯುಧವನ್ನೂ ಸಹ ಹಿಡಿದಿದ್ದಾನೆ ಉದಕಪಾತ್ರವು ಉದಕದಿಂದ ತುಂಬಿ ಪ್ರಕಾಶಿಸುವಂತೆ, ಇಂದ್ರನೂ ಸಹ ವಜ್ರಾಯುಧವನ್ನು ಹಿಡಿದು ಪ್ರಕಾಶಿಸುತ್ತಿದ್ದಾನೆ.

English Translation

He who is vast aud and self-sustained like a mountain, the radiant and formidable Indra, born of old for the destruction (of the foes of the gods), the wielder of the ancient thunderbolt, charged with splendour, like a jar (filled) with water.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಇಂದ್ರನ ಗುಣಾತಿಶಯಗಳ ವರ್ಣನೆ ಇದೆ. ಇಂದ್ರನು ಪರ್ವತದಂತೆ ಮಹಾಶರೀರವುಳ್ಳವನಾಗಿರುವನು, ಮಹಾಮಹಿಮೆಯುಳ್ಳವನು, ಪರಾಕ್ರಮಶಾಲಿಯು, ಶತ್ರುಗಳ ನಾಶಕ್ಕಾಗಿ ಬಹುಕಾಲದ ಹಿಂದೆಯೇ ಉತ್ಪನ್ನನಾದವನು, ಶತ್ರುಗಳಿಗೆ ಭಯಂಕರನು, ವಜ್ರಾಯುಧವನ್ನು ಕೈಯಲ್ಲಿ ಹಿಡಿದಿರುವನು ಎಂದು ಮುಂತಾಗಿ ವರ್ಣಿಸಿದೆ ನೀರನ್ನು ತುಂಬುವ ಪಾತ್ರೆಯು ಉದಕಪೂರ್ಣವಾಗಿದ್ದರೆ ಹೀಗೆ ಪ್ರಕಾಶಿಸುವುದೋ ಎಂದರೆ ಚೆನ್ನಾಗಿ ಕಾಣಿಸುವುದೋ ಅದರಂತೆ ಪರಾಕ್ರಮಶಾಲಿಯಾದ ಇಂದ್ರನ ಕೈಯಲ್ಲಿ ಧಳಧಳನೆ ಹೊಳೆಯುತ್ತಿರುವ ವಜ್ರಾಯುಧ ವಿರುವುದರಿಂದ ಇಂದ್ರನೂ ತೇಜಸ್ವಿಯಾಗಿ ಕಾಣುವನು ಎಂದು ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

न यस्य वर्ता जनुषा न्वस्ति न राधस आमरीता मघस्य ।

उद्वावृषाणस्तविषीव उग्रास्मभ्यं दद्धि पुरुहूत रायः ॥२॥

॥ ಪದಪಾಠಃ ॥

न । यस्य । वर्ता । जनुषा । नु । अस्ति । न । राधसः । आऽमरीता । मघस्य ।

उत्ऽवावृषाणः । तविषीऽवः । उग्र । अस्मभ्यं । दद्धि । पुरुऽहूत । रायः ॥ २ ॥

॥ ಸಾಯಣಭಾಷ್ಯಂ ॥

हे इन्द्र यस्य तव कश्चिज्जनुषा जन्मना स्वत एव नु सत्यं वर्ता वारयिता नास्ति । राधसो यज्ञादिकर्मणां साधकस्य मघस्य त्वया दीयमानस्य धनस्यामरीता कश्चिदपि नाशयिता नास्ति हे तविषीवो बलवन्नुग्र तेजस्विन् हे पुरुहूत बहुभिराहूतेन्द्र उद्वावृषाणोऽभीष्टान् कामान्सर्षकस्त्वं रायः पश्वादिधनान्यस्मभ्यं स्तोतृभ्यो दद्धि । देहि ॥

॥ ಪ್ರತಿಪದಾರ್ಥ ॥

(ಇಂದ್ರ—ಎಲೈ ಇಂದ್ರನೇ) **जनुषा**—ನಿನ್ನ ಜನ್ಮದ ಸ್ವಭಾವದಿಂದಲೇ । (ಮಹಾತ್ಮನಾದ) **यस्य**—ಯಾವ ನಿನಗೆ । **नु**—ಸತ್ಯವಾಗಿಯೂ । **वर्ता**—ವಿರೋಧಿಸುವವನು । **न अस्ति**—ಯಾರೂ ಇಲ್ಲ । (ಆದರಂತೆಯೇ) **राधसः**—ಯಜ್ಞಾದಿ ಕರ್ಮಗಳಿಗೆ ಸಾಧಕವಾದುದೂ । **मघस्य**—ನಿನ್ನಿಂದ ಕೊಡಲ್ಪಟ್ಟುದೂ

ಆದ ಧನಕ್ಕೆ | **ಅಮರೀತಾ**—ನಾಶಕನು | **ನ**—ಯಾರೂ ಇರಲಾರರು | **ತವಿಷೀವಃ**—ಬಲವಂತನೂ | **ಉಗ್ರ**—ತೇಜಸ್ವಿಯೂ | **ಪುರುಹೂತ**—ಅನೇಕರಿಂದ ಕರೆಯಲ್ಪಡುವವನೂ ಆದ ಎಲೈ ಇಂದ್ರನೇ | **ಉದ್ವವೃ-ಷಾಣಃ**—ಇಷ್ಟಾರ್ಥಗಳನ್ನು ಸುರಿಸುವ ನೀನು | **ರಾಯಃ**—ಪಶ್ವಾದಿ ಧನಗಳನ್ನು | **ಅಸ್ಮಭ್ಯಂ**—ಸ್ತೋತೃಗಳಾದ ನಮಗೆ | **ದದ್ಧಿ**—ಕೊಡು.

॥ ಭಾವಾರ್ಥ ॥

ಉತ್ಪತ್ತಿಯ ಸ್ವರೂಪದಿಂದಲೇ ಅಪ್ರತಿಹತವಾಗ ಶಕ್ತಿಯನ್ನು ಹೊಂದಿರುವ ಎಲೈ ಇಂದ್ರನೇ, ನಿನ್ನನ್ನು ವಿರೋಧಿಸುವ ಶಕ್ತಿಯುಳ್ಳ ಪುರುಷನಾರೂ ಇಲ್ಲ. ಆದರಂತೆಯೇ ಯಜ್ಞಾದಿ ಕರ್ಮಗಳಿಗೆ ಸಾಧಕವಾದುದೂ, ನಿನ್ನಿಂದ ಕೊಡಲ್ಪಟ್ಟುದೂ ಆದ ಧನವನ್ನು ನಾಶಮಾಡಬಲ್ಲ ಪುರುಷನೂ ಯಾರೂ ಇಲ್ಲ ಬಲವಂತನೂ, ತೇಜಸ್ವಿಯೂ, ಅನೇಕರಿಂದ ಕರೆಯಲ್ಪಡುವವನೂ ಆದ ಎಲೈ ಇಂದ್ರನೇ, ಇಷ್ಟಾರ್ಥಗಳನ್ನು ಸುರಿಸುವ ನೀನು ಸ್ತೋತೃಗಳಾದ ನಮಗೆ ಪಶ್ವಾದಿ ಧನಗಳನ್ನು ಕೊಡು,

English Translation.

Of whom there is no opposer by (reason of) his birth, nor any destroyer of the wealth that accomplishes (pious works). powerful and resplendent (Indra), the invoked of many, the showerer (of benefits) bestow upon us riches.

॥ ವಿಶೇಷವಿಷಯಗಳು ॥

ಜನುಷಾ ಯಸ್ಯ ನು ವರ್ತಾ ನ ಅಸ್ತಿ—ಎಲೈ ಇಂದ್ರನೇ, ಜನಿಸಿದಕಾಲದಿಂದಲೂ ಮಹಾಬಲಶಾಲಿಯಾಗಿರುವೆ. ಇಂತಹ ನಿನ್ನನ್ನು ಎದುರಿಸುವವರು ಯಾರೂ ಇಲ್ಲ

ರಾಧಸಃ ಮಘಸ್ಯ ಅಮರೀತಾ ನ—ನೀನು ನಿನ್ನನ್ನು ಸ್ತೋತ್ರಮಾಡುವವರಿಗೆ ಯಜ್ಞಾದಿಕರ್ಮಗಳಿಗಾಗಿ ಕೊಡುವ ಧನವನ್ನು ಯಾರೂ ನಾಶಮಾಡಲಾರರು.

ತವಿಷೀವಃ ಉಗ್ರ ಪುರುಹೂತ ಉದ್ವವೃಷಾಣಃ ರಾಯಃ ಅಸ್ಮಭ್ಯಂ ದದ್ಧಿ—ಎಲೈ ಇಂದ್ರನೇ, ನೀನು ಮಹಾಬಲಶಾಲಿಯು, ತೇಜಸ್ವಿಯು ಮತ್ತು ನಿನ್ನನ್ನು ಅನೇಕರು ಯಜ್ಞಾರ್ಥವಾಗಿ ಆಹ್ವಾನಿಸುವರು. ನೀನು ಸ್ತೋತೃಜನರಿಗೆ ಇಷ್ಟಾರ್ಥಗಳನ್ನು ಸುರಿಸುವವನು (ಕೊಡುವವನು) ಇಂತಹ ನೀನು ನಿನ್ನನ್ನು ಸ್ತೋತ್ರಮಾಡುತ್ತಿರುವ ನಮಗೆ ಪಶುಸಂಪತ್ತೇ ಮೊದಲಾದ ಧನಾದಿಗಳನ್ನು ಒದಗಿಸಿಕೊಡು ಎಂದು ಇಂದ್ರನನ್ನು ಪ್ರಾರ್ಥಿಸಲಾಗಿದೆ

ರಾಧಃ, ಮಘಂ, ರಾಯಃ ಎಂಬ ಶಬ್ದಗಳು ಧನನಾಮಗಳಲ್ಲಿ ಪಠಿತವಾಗಿವೆ. (ನಿ. ೩-೯) **ತವಿಷೀ** ಎಂಬ ಶಬ್ದವು ಬಲನಾಮಗಳಲ್ಲಿ ಪಠಿತವಾಗಿದೆ. (ನಿ. ೩-೮)

॥ संहितापाठः ॥

ईक्षे॒ रा॒यः क्षय॑स्य चर्षणी॒नामु॒त व्र॒जम॑पवर्ता॒स्यि॑ गो॒नां।
शि॒क्षा॒न॒रः स॒मिथे॑षु प्रहा॒वान्त्स्वो॒ दा॒शमि॒भिने॑ता॒स्यि॑ भूरि॑ं ॥ ९॥

॥ पदपाठः ॥

ईक्षे॑ । रा॒यः । क्षय॑स्य । चर्षणी॒नाम् । उ॒त । व्र॒जम् । अ॒प॒ऽव॒र्ता॒ । अ॒सि॒ । गो॒नाम् ।
शि॒क्षा॒ऽन॒रः । स॒म्ऽइथे॑षु । प्र॒हा॒ऽवान् । वस्वः॑ । दा॒शम् । अ॒भि॒ऽने॒ता । अ॒सि॒ । भूरि॑म् ॥ ९ ॥

॥ सायणभाष्यं ॥

हे इन्द्र त्वं चर्षणीनां प्रजानां रायो धनस्य क्षयस्य गृहस्य चेक्षे। ईक्षसे। उतापि च गोनां गवां व्रजं समूहमपवर्तापवारकोऽसि। निरोधकेभ्योऽसुरेभ्यो गवां मोचयिता भवसीत्यर्थः। किंच हे इन्द्र शिक्षानरः शिक्षयानेता प्रज्ञानां शासकः समिथेषु युद्धेषु प्रहावान् प्रहरणवांस्त्वं भूरिं प्रभूतं वस्वो धनस्य दाशं समूहमभिनेतासि। प्रापयिता च भवसि ॥

॥ प्रतिपदार्थ ॥

(ಎಲೈ ಇಂದ್ರನೇ) **चर्षणीनाम्**—ಪ್ರಜೆಗಳ। **रायः**—ಧನಕ್ಕೂ। **क्षयस्य**—ಗೃಹಕ್ಕೂ। **ईक्षे**—(ನೀನೇ) ಪ್ರಭುವಾಗಿದ್ದೀಯೆ। **उत**—ಮತ್ತು। **गोनाम्**—ಗೋವುಗಳ। **व्रजम्**—ಸಮೂಹವನ್ನು। **अपवर्ता**—(ಅಸುರರಿಂದ) ರಕ್ಷಿಸುವವನಾಗಿಯೂ। **असि**—ಆಗಿದ್ದೀಯೆ (ಮತ್ತು)। **शिक्षानरः**—ಉಪದೇಶಕನೂ। **समिथेषु**—ಯುದ್ಧಗಳಲ್ಲಿ। **प्रहावान्**—ಶತ್ರುಗಳನ್ನು ಸದೆಬಡಿಯುವವನೂ ಆದ ನೀನು। **भूरिं**—ಪ್ರಭೂತವಾದ। **वस्वः**—ಧನದ। **दाशम्**—ಸಮೂಹವನ್ನು। **अभि ेता असि**—ಒದಗಿಸುವವನೂ ಆಗಿದ್ದೀಯೆ

॥ भावार्थ ॥

ಎಲೈ ಇಂದ್ರನೇ, ನಿನ್ನನ್ನು ಪೂಜಿಸುವ ಪ್ರಜೆಗಳ ಧನಕ್ಕೂ ಮತ್ತು ಗೃಹಕ್ಕೂ ನೀನೇ ಈಶ್ವರನಾಗಿದ್ದೀಯೆ. ಮತ್ತು ಅಸುರರಿಂದ ತಡೆಯಲ್ಪಟ್ಟ ಗೋವುಗಳನ್ನು ರಕ್ಷಿಸುವವನೂ ನೀನೇ ಆಗಿದ್ದೀಯೆ. ಮಾನವರಿಗೆ ಉಪದೇಶಕನೂ, ಯುದ್ಧಗಳಲ್ಲಿ ಶತ್ರುಗಳನ್ನು ಸದೆಬಡಿಯುವವನೂ ಆದ ನೀನು ಪ್ರಭೂತವಾದ ಧನದ ರಾಶಿಯನ್ನು ಒದಗಿಸುವವನೂ ಆಗಿದ್ದೀಯೆ

English Translation.

You rule over the riches and the dwellings of men, you are the rescuer of the herd of cattle, you are the giver of instruction, the smiter in battles, and the distributor of great heaps of riches.

॥ विशेषविषयगलु ॥

चर्षणीनाम् रायः क्षयस्य ईक्षे—ಎಲೈ ಇಂದ್ರನೇ, ನೀನು ಪ್ರಜೆಗಳ (ಜನರ) ಧನಕ್ಕೂ ನಿವಾಸಸ್ಥಾನಗಳಿಗೂ ಪ್ರಭುವಾಗಿದ್ದೀಯೆ. ಎಂದರೆ ಜನಗಳಿಗೆ ಅವಶ್ಯಕವಾಗಿರುವ ಧನಗಳನ್ನೂ ವಾಸಸ್ಥಾನಗಳನ್ನೂ ನೀನೇ ಒದಗಿಸಿಕೊಡುವೆ ಎಂದಭಿಪ್ರಾಯವು. **चर्षणि** ಶಬ್ದವು ಧನನಾಮಗಳಲ್ಲಿ ಪಠಿತವಾಗಿರುವುದು (ನಿ. ೩-೭) **रायः** ಶಬ್ದವು ಧನನಾಮಗಳಲ್ಲಿಯೂ (ನಿ. ೩-೯) **क्षये** ಶಬ್ದವು ನಿವಾಸವೆಂಬರ್ಥದಲ್ಲಿಯೂ (ನಿ. ೮-೧೮) ಪಠಿತವಾಗಿರುವುದು.

गोनाम् व्रजम् अपवर्ता असि-गवाम् समूहम् अपवारकोऽसि । निरोधके भ्योऽसुरेभ्यो गवाम् मोचयिता भवसीत्यर्थः । ಪಣಿಗಳೆಂಬ ಅಸುರರು ಅಪಹರಿಸಿದ್ದ ಗೋವುಗಳನ್ನು ಅವರಿಂದ ಬಿಡಿಸಿ ಹಿಂದಕ್ಕೆ ತಂದು ರಕ್ಷಿಸಿರುವೆ ಎಂದಭಿಪ್ರಾಯವು.

शिक्षानरः समिथेषु प्रहावान् भूरिं वस्वः रातिं अभिनेता असि—ಜನರಿಗೆ ಮಾರ್ಗದರ್ಶಕನೂ, ಉಪದೇಶಕನೂ, ಯುದ್ಧಗಳಲ್ಲಿ ಶತ್ರುಗಳನ್ನು ಹೊಡೆದೋಡಿಸುವವನೂ ಆದ ನೀನು ನಿನ್ನನ್ನು ಸೇವಿಸುವ ಜನರಿಗೆ ಬಹಳವಾದ ಧನದ ರಾಶಿಯನ್ನು ತಂದೊದಗಿಸುವೆ.

॥ संहितापाठः ॥

कया॒ तच्छृ॑ण्वे॒ शच्या॒ शचि॑ष्ठो॒ ययो॒ कृणो॑ति मुहु॒ का चि॒दृष्वः ।
पु॒रु दा॒शुषे॑ वि॒चयि॑ष्ठो॒ अंहो॑ऽथा दधाति द्र॒विणं॑ जरि॒त्रे॥

॥ पदपाठः ॥

क॒या॒ । तत् । शृ॒ण्वे॒ । शच्या॒ । शचि॑ष्ठः । यया॒ । कृ॒णोति॑ । मु॒हु॒ । का । चि॒त् । ऋ॒ष्वः ।
पु॒रु । दा॒शुषे॑ । वि॒ऽचयि॑ष्ठः । अंहः॑ । अथ॑ । द॒धा॒ति॒ । द्र॒विण॑म् । ज॒रि॒त्रे ॥ ९ ॥

॥ ಸಾಯಣಭಾಷ್ಯಂ ॥

ಶಚಿಷ್ಠೋ೭ತಿಶಯೇನ ಪ್ರಾಜ್ಞಃ । ತದಿತಿ ಲಿಂಗವ್ಯತ್ಯಯಃ । ತತ್ ಸ ಇಂದ್ರಃ ಕಯಾ ಶಚ್ಯಾ ಕಯಾ ಪ್ರಜ್ಞಯಾ । ಶಚೀತಿ ಪ್ರಜ್ಞಾನಾಮೈತತ್ । ಶ್ನಥೇ । ಶ್ರಾಯತೇ । ಋಷ್ವೋ ಮಹಾನಿಂದ್ರೋ ಮುಹು ಮುಹುರ್ಯಯಾ ಪ್ರಜ್ಞಯಾ ಕಾ ಚಿತ್ ಕಾನಿಚಿತ್ಕರ್ಮಾಣಿ ಕೃಣೋತಿ । ಕರೋತಿ । ಸ ಇಂದ್ರೋ ದಾಶುಷೇ ಹವಿರ್ದತ್ತವತೇ ಯಜಮಾನಾಯ ಪುರು ಭೂಯಿಷ್ಠಮಂಹಃ ಪಾಪಂ ವಿಚಯಿಷ್ಠೋ೭ತಿಶಯೇನ ನಾಶಕೋ ಭವತಿ । ಅಥಾಪಿ ಚ ಜರಿತ್ರೇ ಸ್ತೋತ್ರೇ ದ್ರವಿಣಂ ಪಶ್ವಾದಿಧನಂ ದಧಾತಿ । ದದಾತಿ ॥

॥ ಪ್ರತಿಪದಾರ್ಥ ॥

ಶಚಿಷ್ಠಃ—ಅತ್ಯಂತ ಪ್ರಾಜ್ಞನಾದ । **ತತ್**—ಆದೇ ಇಂದ್ರನು । **ಕಯಾ ಶಚ್ಯಾ**—ಯಾವ ಪ್ರಜ್ಞೆಯೊಡನೆ । **ಶ್ನಥೇ**—ಪ್ರಸಿದ್ಧನಾಗಿದ್ದಾನೋ । **ಋಷ್ವಃ**—ಮಹಾತ್ಮನಾದ ಇಂದ್ರನು । **ಮುಹುಃ**—ಪದೇ ಪದೇ । **ಯಯಾ**—ಯಾವ ಪ್ರಜ್ಞೆಯಿಂದ । **ಕಾ ಚಿತ್**—ಅನೇಕ ಮಹತ್ಕಾರ್ಯಗಳನ್ನು । **ಕೃಣೋತಿ**—ಮಾಡುತ್ತಾನೆಯೋ (ಆದೇ ಇಂದ್ರನು) । **ದಾಶುಷೇ**—ಹವಿಸ್ಸನ್ನು ಅರ್ಪಿಸುವ ಯಜಮಾನನಿಗೆ । **ಪುರು**—ಅಧಿಕವಾಗಿದ್ದರೂ ಸಹ । **ಅಂಹಃ**—ಪಾಪವನ್ನು । **ವಿಚಯಿಷ್ಠಃ**- ಪೂರ್ಣನಾಗಿ ನಾಶಮಾಡುವವನಾಗುತ್ತಾನೆ । **ಅಥ**—ಮತ್ತು । **ಜರಿತ್ರೇ**—ಸ್ತುತಿಕರ್ತನಿಗೆ । **ದ್ರವಿಣಂ**—ಪಶ್ವಾದಿ ಧನವನ್ನು । **ದಧಾತಿ**—ಕೊಡುತ್ತಾನೆ.

॥ ಭಾವಾರ್ಥ ॥

ಅತ್ಯಂತ ಪ್ರಾಜ್ಞನಾದ ಇಂದ್ರನು ಯಾವ ಮಹದ್ಗುಣದಿಂದ ಪ್ರಸಿದ್ಧನಾಗಿರುವನೋ ಅಂತಹ ಪ್ರಜ್ಞೆಯ ಸ್ವರೂಪವೇನು? ಯಾವ ವಿಧವಾದ ಪ್ರಜ್ಞೆಯಿಂದ ಅವನು ಮಹತ್ಕಾರ್ಯಗಳನ್ನು ಪದೇ ಪದೇ ಮಾಡಲು ಶಕ್ತನಾಗಿರುತ್ತಾನೆ? ಈ ರೀತಿ ಪ್ರಜ್ಞಾವಂತನಾದುದರಿಂದಲೇ, ಇಂದ್ರನು ಹವಿಸ್ಸನ್ನು ಅರ್ಪಿಸುವ ಯಜಮಾನನ ಪಾಪವು ಅತ್ಯಧಿಕವಾಗಿದ್ದರೂ ಸಹ ಅದನ್ನು ಪೂರ್ಣವಾಗಿ ನಾಶಪಡಿಸುತ್ತಾನೆ ಮತ್ತು ಸ್ತುತಿಕರ್ತನಿಗೆ ಪಶ್ವಾದಿ ಧನವನ್ನೂ ಕೊಡುತ್ತಾನೆ

English Translation.

By what wisdom is he who is most wise renowned? by that wherewith the mighty Indra repeatedly does (great things): he is the especial effacer of the manifold sin of the worshipper, and bestows wealth upon his adorer.

॥ ವಿಶೇಷವಿಷಯಗಳು ॥

ಶಚಿಷ್ಠಃ ತತ್ ಕಯಾ ಶಚ್ಯಾ ಶ್ನಥೇ—ಅತಿಶಯೇನ ಪ್ರಾಜ್ಞಃ ನ ಇಂದ್ರಃ ಕಯಾ ಪ್ರಜ್ಞಯಾ ಶ್ರಾಯತೇ । ಶಚೀಶಬ್ದವು ವಾಙ್ನಾಮಗಳಲ್ಲಿಯೂ (ನಿ. ೨ ೧೩) ಕರ್ಮನಾಮಗಳಲ್ಲಿಯೂ (ನಿ ೩–೨) ಪ್ರಜ್ಞಾನಾಮಗಳಲ್ಲಿಯೂ ಪಠಿತವಾಗಿದೆ (ನಿ. ೩–೧೩) ಇಲ್ಲಿ ಪ್ರಜ್ಞೆಯೆಂಬರ್ಥದಲ್ಲಿ ಪ್ರಯುಕ್ತವಾಗಿದೆ. ಅತಿಶಯವಾಗಿ

प्राज्ञनाद इन्द्रनु यावत प्रज्ञैयिंद अथवा साहसकर्मदिंद (शचीशब्दक्कै कर्मवेंदूं अर्थवु) प्रसिद्धियन्नु पडेदिदानै? **ईं** वाक्यदल्लि **तेत्** एंब शब्दवु लिंगव्यत्ययदिंद **सः** एंब पुल्लिंगार्थवन्नु सूचिसुवुदागिदे.

ऋष्वः मुहु ययाँ काचित् कृणोति— अदे महात्मनाद इंद्रनु तन्न यावत प्रज्ञैयिंद अथवा सामर्थ्यदिंद साहसकृत्य अथवा महत्कार्यगळन्नु माडलु समर्थनागिदानै? इत्यादियागि वामदेवऋषियु प्रश्नोत्तर मूलकवागि इंद्रन गुणवर्णनेयन्नु माडिदानै.

दाशुषे पुरु अंहः विचेयिष्ठः—ईं इंद्रनु हविस्सन्नु अर्पिसुव यजमानन पापगळु बहळवागिद्दरू अवुगळन्नु पूर्णवागि नाशमाडि अवनन्नु रक्षिसुत्तानै. **अंहः** एंब शब्दक्कै यास्करु—**अंहतिरश्नोतेर्व्यंहतिश्छाँहश्छाँहुश्च हंतेर्निरूढोपधात् विपरीतात्** (नि. ४-३॥) एंदु निर्वचनवन्नु हेळिदारे. एंदरे **अंहति, अंहः, अंहुः** एंब शब्दगळु **हन हिंसागतौ**-ः हिंसेमाडु, कॊल्लु एंदर्थविरुव धातुविनिंद निष्पन्नवागि अक्षर व्यत्यासदिंद (एंदरे अंत्याक्षरवु प्रथमाक्षरियागि) परिवर्तितवागिरुवदु मनुष्यनु माडिद दुष्कर्मगळु अथवा पापगळु अवनन्नु व्याप्तिसि अनुसरिसि बरुवुदरिंद अवुगळिगे **अंहः** पापवेंदु हेसरु अथवा दुष्कर्ममाडिदवनन्नु इदु हिंसिसुवुदरिंद इदक्कै (पापक्कै) **अंहः** एंदु हसरु एंदु अर्थविवरणेमाडिदारे.

जरित्रे द्रविणं दधाति—स्तोत्रमाडुव यजमाननिगे धनवन्नु कॊडुत्तानै **द्रविण** शब्दवु धननामगळल्लियूं (नि ३-७) **जरिता** एंब शब्दवु स्तोतृनामगळल्लियूं पठितवागिदे (नि ३-१८).

॥ संहितापाठः ॥

मा नो॑ मर्धीरा भ॑रा द॒द्धि तन्नः॑ प्र दा॒शुषे॑ दा॒तवे॑ भूरि॑ यत्ते॑ ।
नव्ये॑ दे॒ष्णे श॒स्ते अ॒स्मिन्त॑ उ॒क्थे प्र ब्र॑वाम व॒यमि॑न्द्र स्तु॒वन्तः॑ ॥ ८० ॥

॥ पदपाठः ॥

मा । नः । मर्धीः । आ । भर । दद्धि । तत् । नः । प्र । दाशुषे । दातने । भूरि । यत् । ते ।

नव्ये । देष्णे । शस्ते । अस्मिन् । ते । उक्थे । प्र । ब्रवाम । वयं । इन्द्र । स्तुवंतः ॥ ८० ॥

॥ सायणभाष्यं ॥

हे इन्द्र त्वं नोऽस्मान्मा मर्धीः । मा हिंसीः । किंतु त्वमा भर । पोषकोभव । हे इन्द्र ते त्वदीयं भूरि बह्वपि यद्धनं दाशुषे हविर्दत्तवतेयजमानाय दातवे दातुं । प्र भवतीति शेषः । नोऽस्मभ्यं तद्धनमाहृत्य दद्धि । देहि । हे इन्द्र त्वां स्तुवंतोवयमस्मिन्नुक्थेऽस्मिन्नैक्येवल्याख्यशस्त्रे ते त्वदर्थं नव्ये नूतनेशस्ते प्रशस्ते देष्णे दातव्ये हविषि निमित्तभूतेसति प्र ब्रवाम । प्रकर्षेण त्वां वदाम ॥

॥ प्रतिपदार्थ ॥

(इन्द्र—ऐश्वर्य इन्द्रसे) **नः**—नमको । **मा मर्धीः**—हिंसा मत कर । **आ भर**—नमको पोषक होकर । **ते**—तेरा । **भूरि**—प्रभूत । **यत्**—जो धन है । **दाशुषे**—हविदाताको । **दातवे**—देनेके लिये । **प्र (भवति)**—पूर्ण होता है । **तत्**—उस धनको । **नः**—नमको । **दद्धि**—दे । **इन्द्र**—ऐश्वर्य इन्द्रसे । **स्तुवंतः**—तेरी स्तुति करते हुए । **वयं**—हम । **अस्मिन् उक्थे**—इस ऐन्द्रैवल्याख्य । **ते**—तेरे । **नव्ये**—नूतन । **शस्ते**—प्रशस्त । **देष्णे**—देने योग्य हविके निमित्त । **प्र ब्रवाम**—अतिशय स्तुति करते हैं ।

॥ भावार्थ ॥

ऐश्वर्य इन्द्रसे, तू नमको हिंसा मत कर नमको पोषक होकर तेरा जो धन हविदाताको देनेके लिये पूर्ण होता है, उस धनको नमको दे । ऐश्वर्य इन्द्रसे, तेरी स्तुति करते हुए हम इस ऐन्द्रैवल्याख्य शस्त्रमें तेरे नूतन प्रशस्त देने योग्य हविके निमित्त तेरी अतिशय स्तुति करते हैं ।

English Translation.

Harm us not, but cherish us, Indra. bestow upon us that abundant wealth which it is yours to give to the donor (of the oblation): praising you, we celebrate you at this sacred rite, which is new and excellent, and (at which the oblation) is proper to be presented.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ವಾಮದೇವಋಷಿ ಮತ್ತು ಅವನ ಕಡೆಯವರು ಇಂದ್ರನನ್ನು ಸ್ತುತಿಸಿ ಪ್ರಾರ್ಥಿಸಿದ್ದಾರೆ. ತಮ್ಮನ್ನು ಹಿಂಸಿಸಬೇಡವೆಂದೂ, ಪೋಷಕನಾಗಿ ಬಹಳವಾದ ಧನಗಳನ್ನು ಕೊಡಬೇಕೆಂದೂ ಇಂದ್ರನನ್ನು ಪ್ರಾರ್ಥಿಸಿರುವುದಲ್ಲದೆ ಈಗ ನೂತನವಾಗಿ ತಾವು ರಚಿಸಿರುವ ನಿಷ್ಕೇವಲ್ಯವೆಂಬ ಶಸ್ತ್ರಮಂತ್ರಗಳಲ್ಲಿ ಇಂದ್ರನನ್ನು ಬಹಳವಾಗಿ ಸ್ತುತಿಸಿ ಹವಿಸ್ಸನ್ನ ಪಿಸುವುದಾಗಿಯೂ ಪ್ರಾರ್ಥಿಸಿದಾರೆ.

ಈ ಋಕ್ಕಿನಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳಿಂದ ಇಂದ್ರನನ್ನು ಸ್ತುತಿಸಿರುವ ವಿಷಯವು ಉಕ್ತವಾಗಿದೆ ನಿಷ್ಕೇವಲ್ಯಶಸ್ತ್ರವು ಇಂದ್ರನಿಗೆ ಬಹಳ ಪ್ರೀತಿದಾಯಕವಾದುದೆಂದು ಐತರೇಯಬ್ರಾಹ್ಮಣದಲ್ಲಿ ಹೇಳಿದೆ. ಋಗ್ವೇದದಲ್ಲಿ ಅನೇಕ ಕಡೆಗಳಲ್ಲಿ ಭಾಷ್ಯಕಾರರು ನಿಷ್ಕೇವಲ್ಯಶಸ್ತ್ರಮಂತ್ರಗಳ ವಿಷಯವನ್ನು ಪ್ರಸ್ತಾಪಮಾಡಿ ಅರ್ಥವಿವರಣೆಮಾಡಿರುವರು. ಆದ್ದರಿಂದ ನಾವು ಈ ನಿಷ್ಕೇವಲ್ಯಶಸ್ತ್ರಮಂತ್ರಗಳ ಸ್ವರೂಪವನ್ನೂ, ಪೂರ್ವೇತಿಹಾಸವನ್ನೂ, ವಿವರಣೆಯನ್ನೂ ಐತರೇಯಬ್ರಾಹ್ಮಣದಲ್ಲಿರುವಂತೆ ವಿವರಿಸಿರುವೆವು—

ನಿಷ್ಕೇವಲ್ಯಶಸ್ತ್ರಮಂತ್ರಗಳ ವಿವರಣೆ

(ಇಂದ್ರನು ಪ್ರಜಾಪತಿಯ ಸ್ಥಾನ (ಪದವಿ) ಯನ್ನು ಆಪೇಕ್ಷಿಸುವುದು—ಪ್ರಜಾಪತಿಗೆ ಕಃ ಎಂಬ ಹೆಸರು ಬರಲು ಕಾರಣ—ಯಜ್ಞದಲ್ಲಿ ಇಂದ್ರನ ಹವಿರ್ಭಾಗವು)

ಈ ವಿಷಯದಲ್ಲಿ ಒಂದು ಉಪಾಖ್ಯಾನವಿರುವುದು—

ಇಂದ್ರೋ ವೈ ವೃತ್ರಂ ಹತ್ವಾ ಸರ್ವಾ ವಿಜಿತೀರ್ವಿಜಿತ್ಯಾಬ್ರವೀತ್ಪ್ರಜಾಪತಿಮಹಮೇತದಸಾನಿ ಯತ್ತ್ವಮಹಂ ಮಹಾನಸಾನೀತಿ ಸ ಪ್ರಜಾಪತಿರಬ್ರವೀದಥ ಕೋ೨ಹಮಿತಿ ಯದೈ-ವೈತದವೋಚ ಇತ್ಯಬ್ರವೀತ್ಕತೋ ವೈ ಕೋ ನಾಮ ಪ್ರಜಾಪತಿರಭವತ್ಕೋ ವೈ ನಾಮ ಪ್ರಜಾಪತಿರ್ಯನ್ಮಹಾನಿಂದ್ರೋ೨ಭವತ್ಕಸ್ಮಹೇಂದ್ರಸ್ಯ ಮಹೇಂದ್ರತ್ವಂ ।

(ಐ. ಬ್ರಾ. ೧೨-೨೧)

ಪೂರ್ವದಲ್ಲಿ ಇಂದ್ರನು ವೃತ್ರನನ್ನು ಸಂಹಾರಮಾಡಿದನಂತರ ಭೂಮಂಡಲದ ಸಮಸ್ತ ಪ್ರದೇಶಗಳನ್ನೂ ಜಯಿಸಿ, ಪ್ರಜಾಪತಿಯನ್ನು ಕುರಿತು—ಎಲೈ ಪ್ರಜಾಪತಿಯೇ, ಈಗ ನೀನು ಮಹತ್ಸ್ಥಾನವನ್ನು ಗಳಿಸಿ ಪೂಜ್ಯನಾಗಿರುವಿಯಷ್ಟೆ ಇನ್ನುಮೇಲೆ ನಿನ್ನ ಮಹತ್ಪದವಿಯು ನನಗೆ ಬೇಕು ಎಂದನು ಆದಕ್ಕೆ ಪ್ರಜಾಪತಿಯು ನನ್ನ ಪದವಿಯನ್ನು ನೀನು ತೆಗೆದುಕೊಂಡರೆ, ಆಗ ನಾನು ಯಾರು (ಕಃ) ನನ್ನ ಸ್ಥಾನಮಾನವೇನು ಎಂದು ಕೇಳಲು, ಅದಕ್ಕೆ ಇಂದ್ರನು—ಎಲೈ

ಪ್ರಜಾಪತಿಯೇ, ಈಗ ನೀನೇ ಹೇಳಿದಂತೆ ನಿನ್ನ ಹೆಸರು ಇನ್ನುಮೇಲೆ ಕಃ (ಯಾರು) ಎಂದಾಗುವುದು ಎಂದರೆ **ಕ** ಶಬ್ದವಾಚ್ಯನಾಗುವೆ ಎಂದನು ಆದುದರಿಂದ ಆ ಕಾಲ ಮೊದಲುಗೊಂಡು ಪ್ರಜಾಪತಿಯು **ಕ** ಶಬ್ದವಾಚ್ಯನಾದನು. ಈ ವಿಷಯವು ಪ್ರಸಿದ್ಧವಾಗಿರುವುದು. ಆದುದರಿಂದಲೇ ಯಾವುದಾದರೂ ದಾನವನ್ನು ಸ್ವೀಕರಿಸುವಂಗ ಪರಿಸಬೇಕಾದ ಪ್ರತಿಗ್ರಹಮಂತ್ರಗಳಲ್ಲಿ ಈ ವಿಷಯವು ಉಕ್ತವಾಗಿರುವುದು ಎಂದರೆ—**ಕ ಇದಂ ಕಸ್ಮಾ ಅದಾದಿತ್ಯಾಹ ಪ್ರಜಾಪತಿರ್ವೈ ಕಃ ಪ್ರಜಾಪತಯ ಏವ ತದ್ದದಾತಿ** ಎಂದು ಇತರ ವೇದಗಳ ಬ್ರಾಹ್ಮಣವಾಕ್ಯವಿರುವುದು **ಕ** ಶಬ್ದಕ್ಕೆ ಸುಖವೆಂಬ ಅರ್ಥವಿರುವುದರಿಂದ ಪ್ರಜಾಪತಿ ಸಂಬಂಧವಾದ ವ್ಯವಹಾರಗಳಲ್ಲಿಯೂ, ವಿಷಯಗಳಲ್ಲಿಯೂ ಪ್ರಜಾಪತಿಯು ಸುಖಸ್ವರೂಪನು ಎಂದೇ ಹೇಳಲ್ಪಡುವುದು ಈ ರೀತಿ ಪ್ರಜಾಪತಿಯ ಮಹತ್ತ್ವವನ್ನು ಇಂದ್ರನು ಸ್ವೀಕರಿಸಿದುದರಿಂದ ಇಂದ್ರನಿಗೆ **ಮಹಾನ್** ಎಂಬ ಅಭಿಧಾನವು ಬಂದಿತು. ಎಂದರೆ—ಇಂದ್ರನು ಮಹಾನಿಂದ್ರನಾದನು ಈ ವಿಷಯವು ಇತರ ವೇದಗಳಲ್ಲಿ—**ಇಂದ್ರೋ ವೃತ್ರಮಹನ್ತ್ಸಂ ದೇವಾ ಅಬ್ರುವನ್ಮಹಾನ್ವಾ ಅಯಮಭೂದ್ಯೋ ವೃತ್ರಮವಧೀದಿತಿ ತನ್ಮಹೇಂದ್ರಸ್ಯ ಮಹೇಂದ್ರತ್ವಂ** । ಇಂದ್ರನು ವೃತ್ರನನ್ನು ಸಂಹಾರಮಾಡಿದ ವಿಷಯವನ್ನು ದೇವತೆಗಳು ಪ್ರಶಂಸಿಸುತ್ತಾ ಈ ಇಂದ್ರನು ವೃತ್ರನನ್ನು ಸಂಹಾರ ಮಾಡಿದ್ದರಿಂದ ಮಹೇಂದ್ರನಾದನು (ಮಹತ್ಪದವಿಯನ್ನು ಗಳಿಸಿದನು) ಎಂದರೆ ಎಲ್ಲಾ ದೇವತೆಗಳಿಗಿಂತಲೂ ಶ್ರೇಷ್ಠನಾದನು ಇಂದ್ರನಿಗೆ ಮಹೇಂದ್ರನೆಂಬ ಹೆಸರು ಬರಲು ಇದೇ ಕಾರಣವು—ಎಂದು ಹೇಳಿದೆ

ಸ ಮಹಾನ್ಭೂತ್ವಾ ದೇವತಾ ಅಬ್ರವೀದುದ್ಧಾರಂ ಮ ಉದ್ಧರತೇತಿ ಯಥಾಸ್ಯೇತರ್ಹೀಚ್ಛತಿ ಯೋ ವೈ ಭವತಿ ಯಃ ಶ್ರೇಷ್ಠತಾಮಶ್ನುತೇ ಸ ಮಹಾನ್ಭವತಿ ತಂ ದೇವಾ ಅಬ್ರುವನ್ ಸ್ವಯಮೇವ ಬ್ರೂಷ್ವ ಯತ್ತೇ ಭವಿಷ್ಯತೀತಿ ಸ ಏತಂ ಮಾಹೇಂದ್ರಂ ಗ್ರಹಮಬ್ರೂತ ಮಾಧ್ಯಂದಿನಂ ಸವನಾನಾಂ ನಿಷ್ಕೇವಲ್ಯಮುಕ್ಥಾನಾಂ ತ್ರಿಷ್ಟುಭಂ ಛಂದಸಾಂ ಪೃಷ್ಠಂ ಸಾಮ್ನಾಂ ತಮಸ್ಮಾ ಉದ್ಧಾರಮುದಹರನ್ ಉದಸ್ಮಾ ಉದ್ಧಾರಂ ಹರಂತಿ ಯ ಏವಂ ವೇದ ।

ಬಳಿಕ ಇಂದ್ರನು ಮೇಲೆ ಹೇಳಿದಂತೆ ಮಹತ್ಪದವಿಯನ್ನು ಗಳಿಸಿ ದೇವತೆಗಳನ್ನು ಕರೆದು ಇಂತೆಂದನು—ಎಲೈ ದೇವತೆಗಳೇ, ನಾನು ಮಹತ್ಪದವಿಯನ್ನು ಗಳಿಸಿರುವುದರಿಂದ ಇದರ ನಿಮಿತ್ತವಾಗಿ ಎಂದರೆ ನನ್ನನ್ನು ಅಭಿನಂದಿಸುವುದಕ್ಕಾಗಿ ಗೌರವಸೂಚಕವಾದ ಸತ್ಕಾರವೊಂದನ್ನು ಏರ್ಪಡಿಸಿ ಎಂದನು ಲೋಕವ್ಯವಹಾರದಲ್ಲಿಯೂ ಸಹ ಒಬ್ಬ ಪುರುಷನಿಗೆ ಅತುಲೈಶ್ವರ್ಯಪ್ರಾಪ್ತಿಯಾಗಲಿ, ವಿದ್ಯಾದಿಗಳಲ್ಲಿ ಪ್ರಶಸ್ತಿಯಾಗಲಿ, ರಾಜಸನ್ಮಾನವಾಗಲಿ ಲಭಿಸಿದಲ್ಲಿ ಅಂತಹ ಪುರುಷನು ಜನರ ಮಧ್ಯೆ ಗಣ್ಯನಾದವನೆಂದು ಪ್ರಸಿದ್ಧನಾಗಿರುವುದರಿಂದ, ಜನರು ಸಾಧಾರಣವಾಗಿ ಅಂತಹ ಪುರುಷನನ್ನು ಅಭಿನಂದಿಸಲು ಸತ್ಕಾರಕೂಟವನ್ನು ಏರ್ಪಡಿಸುವುದು ರೂಢಿಯಲ್ಲಿದೆ. ಆದರಂತೆ ಇಂದ್ರನು ದೇವತೆಗಳನ್ನು ಈ ವಿಷಯವಾಗಿ ಪ್ರಶ್ನೆಮಾಡಿದನು ದೇವತೆಗಳೂ ಸಹ ಇಂದ್ರನ ಮಾತನ್ನನುಮೋದಿಸಿ—ಎಲೈ ಇಂದ್ರನೇ, ಈ ಸತ್ಕಾರ ಸಮಾರಂಭವನ್ನು ಯಾವ ರೀತಿ ಮಾಡಬೇಕು ? ಹೇಗೆ ಮಾಡಿದರೆ ನಿನಗೆ ಸಂತೋಷವಾಗುವುದು ? ಅದನ್ನು ನೀನೇ ಹೇಳಬೇಕು ನಾವು ಅದರಂತೆ ನಡೆಸುವೆವು ಎನ್ನಲು, ಅದಕ್ಕೆ ಇಂದ್ರನು—ಗ್ರಹಗಳ (ಗ್ರಹವಂದರೆ ಸೋಮವನ್ನು ಪಾನಮಾಡುವ ಪಾತ್ರವಿಶೇಷ) ಮಧ್ಯದಲ್ಲಿ ಮಹೇಂದ್ರ ಗ್ರಹವು (ಮಹೇಂದ್ರನಾದ ನನಗೆ ಅರ್ಪಿಸುವ ಸೋಮಪಾನ ಪಾತ್ರೆಯು) ಎಲ್ಲಾ ಗ್ರಹಗಳಿಗಿಂತ ಶ್ರೇಷ್ಠವಾದುದಾಗಿರಬೇಕು ಆದರಂತೆಯೇ, ಪ್ರಾತಃಸವನ, ಮಾಧ್ಯಂದಿನಸವನ, ತೃತೀಯಸವನಗಳೆಂಬ ಮೂರು ಸವನಗಳಲ್ಲಿ ಮಾಧ್ಯಂದಿನಸವನವೂ, ಆಪ್ತಿನಶಸ್ತ್ರ, ಮರುತ್ವತೀಯ

ಮೊದಲಾದ ಶಸ್ತ್ರ (ಮಂತ್ರ) ಗಳಲ್ಲಿ ನಿಷ್ಕೇವಲ್ಯಶಸ್ತ್ರವೂ, ಗಾಯತ್ರ್ಯಾದಿಛಂದಸ್ಸುಗಳಲ್ಲಿ ತ್ರಿಷ್ಟುಪ್‌ಛಂದಸ್ಸೂ, ಸಾಮಗಾನಗಳ ಮಧ್ಯದಲ್ಲಿ ಪೃಷ್ಠಸ್ತೋತ್ರನಿಷ್ಪಾದಕವಾದ ಬೃಹದ್ರಥಂತರಸಾಮವೂ, ಶ್ರೇಷ್ಠವಾಗಿರುವುದೆಂದು ನೀವು ಅನುಮೋದಿಸಬೇಕು. ಏಕೆಂದರೆ ಅವುಗಳೆಲ್ಲಾ ನನಗೆ ಪ್ರಿಯವಾಗಿರುವವು. ಇದೇ ನೀವು ನನಗೆ ಮಾಡುವ ಸತ್ಕಾರವು ಎಂದನು. ದೇವತೆಗಳು ಹಾಗೆಯೇ ಆಗಲೆಂದೊಪ್ಪಿ ಯಜ್ಞಾದಿಗಳಲ್ಲಿ ಮಾಹೇಂದ್ರಗ್ರಹಾದಿಗಳಿಗೆ ಶ್ರೇಷ್ಠತೆಯನ್ನು ಅನುಮೋದಿಸಿದರು ಈ ವಿಷಯವು ಇತರ ವೇದಗಳಲ್ಲಿಯೂ—**ಸ ಏತಂ ಮಾಹೇಂದ್ರಮುದಹರತ ವೃಶ್ಚಂ ಹತ್ವಾನ್ಯಾಸು ದೇವತಾಸ್ವಧೀತಿ ಯನ್ಮಾಹೇಂದ್ರೋ ಗೃಹ್ಯತ ಉದ್ಧಾರಮೇವ ತಂ ಯಜಮಾನ ಉದ್ಧರತೇ ನ ಪ್ರಜಾಸ್ವಧಿ** । ಎಂದು ಹೇಳಿರುವುದು. ಈ ವಿಷಯವನ್ನು ಯಜ್ಞಮಾಡುವ ಯಾವ ಯಜಮಾನನು ತಿಳಿಯುವನೋ ಅವನು ಜನರಲ್ಲಿ ಶ್ರೇಷ್ಠತೆಯನ್ನೂ, ಗಣ್ಯಸ್ಥಾನವನ್ನೂ ಪಡೆಯುವನು.

ತಂ ದೇವಾ ಅಬ್ರುವನ್ಸರ್ವಂ ವಾ ಅವೋಚಥಾ ಅಪಿ ನೋಽತ್ರಾಸ್ತ್ವಿತಿ ಸ ನೇತ್ಯಬ್ರವೀತ್ಕಥಂ ವೋಽಪಿ ಸ್ಯಾದಿತಿ ತಮಬ್ರುವನ್ನಸ್ಮೈವ ನೋಽಸ್ತು ಮಘವನ್ನಿತಿ ತಾನೀಷ್ಟಕೈವ ॥

(ಐ ಬ್ರಾ. ೧೨ ೨೧)

ಅನಂತರ ದೇವತೆಗಳು ಇಂದ್ರನನ್ನು ಕುರಿತು—ಎಲೈ ಇಂದ್ರನೇ, ನಾವು ನಿನ್ನನ್ನು ಸತ್ಕರಿಸಿ ಯಜ್ಞದಲ್ಲಿ ನಿನಗೆ ಬೇಕಾದ ಸಾರವಸ್ತುಗಳನ್ನೆಲ್ಲಾ ಅರ್ಪಿಸಿರುವೆವು ಸಾರವಾದ ಎಲ್ಲ ವಸ್ತುಗಳನ್ನೂ ನೀನೇ ತೆಗೆದುಕೊಂಡಿರುವೆ. ಇವುಗಳಲ್ಲಿ ಕೆಲವನ್ನು ನಮಗೂ ಕೊಡು ಎಂದರು. ಇಂದ್ರನು—ಅದಾಗುವುದಿಲ್ಲ. ಈ ಸಾರವಸ್ತುಗಳನ್ನೆಲ್ಲಾ ನಾನೇ ಅಪೇಕ್ಷಿಸಿದೆನು. ಅವೆಲ್ಲಾ ನನಗೆ ಲಭಿಸಿತು. ನಿಮಗೆ ಕೊಡಲು ಕಾರಣವೇನು ? ಎಂದನು ದೇವತೆಗಳು ಮತ್ತೆ—ಎಲೈ ಇಂದ್ರನೇ, ಈ ರೀತಿ ನಮ್ಮ ಪ್ರಾರ್ಥನೆಯನ್ನು ನಿರಾಕರಿಸಬೇಡ ನಮಗೂ ಸ್ವಲ್ಪ ಭಾಗವನ್ನು ಕೊಡು ಎಂದು ಪ್ರಾರ್ಥಿಸಲು ಇಂದ್ರನು ಅವರನ್ನು ಅನುಗ್ರಹದೃಷ್ಟಿಯಿಂದ ನೋಡಿದನು ಮತ್ತೇನನ್ನೂ ಹೇಳಲಿಲ್ಲ

ನಿಷ್ಕೇವಲ್ಯಶಸ್ತ್ರದಲ್ಲಿ ಯಾಜ್ಯಾಹೋಮದ ವಿಷಯವಾಗಿ ಪೂರ್ವೋಪಾಖ್ಯಾನವು

(ಇಂದ್ರನ ಪತ್ನಿಯಾದ ಪ್ರಸಹಾದೇವಿಯ ಕಥೆ—ನಿಷ್ಕೇವಲ್ಯಶಸ್ತ್ರದಲ್ಲಿರುವ ಧಾನ್ಯಾಸಂತ್ರದ ಪೂರ್ವೇತಿಹಾಸ—ರಾಜನು ಶಸ್ತ್ರವೇದಿಯನ್ನು ಸೋಲಿಸುವ ಬಗೆ - ವಿರಾಟ್‌ಛಂದಸ್ಸಿನ ಯಾಜ್ಯಾಮಂತ್ರದಲ್ಲಿ ಎಲ್ಲಾ ದೇವತೆಗಳಿಗೂ ಹವಿರ್ಭಾಗವಿರುವುದು— ಈ ಸಂದರ್ಭದಲ್ಲಿ ವಿರಾಟ್ ಛಂದಸ್ಸಿಗಿರುವ ಪ್ರಾಮುಖ್ಯತೆ)

ತೇ ದೇವಾ ಅಬ್ರುವನ್ನಿಯಂ ವಾ ಇಂದ್ರಸ್ಯ ಪ್ರಿಯಾ ಜಾಯಾ ವಾವಾತಾ ಪ್ರಸಹಾ ನಾಮಾಸ್ಯಾ ಮೇವೇಚ್ಛಾಮಹಾ ಇತಿ ತಥೇತಿ ತಸ್ಯಾಮೈಚ್ಛಂತ ಸೈನಾನಬ್ರವೀತ್ಪ್ರತರ್ದಃ ಪ್ರತಿವಕ್ತಾಸ್ಮೀತಿ ತಸ್ಮಾತ್ಸ್ತ್ರಿಯಃ ಪತ್ಯಾ ವಿಚ್ಛಂತೇ ತಸ್ಮಾದು ಸ್ತ್ರ್ಯನುರಾತ್ರೇ ಪತ್ಯಾ ವಿಚ್ಛಿತೇ ತಾಂ ಪ್ರಾತರುಪಾಯನ್ಸ್ಮೈತದೇವ ಪ್ರತ್ಯಪದ್ಯತ ।

(ಐ ಬ್ರಾ ೧೨-೨೨)

ಇಂದ್ರನು ಯಾವ ಮಾತನ್ನೂ ಆಡದ್ದರಿಂದ ದೇವತೆಗಳಿಗೆ ಇಂದ್ರನ ಅಭಿಪ್ರಾಯವು ತಿಳಿಯಲಿಲ್ಲ ಆದ್ದರಿಂದ ಅವರು ಪರಸ್ಪರ ಈ ರೀತಿ ಮಾತನಾಡಿಕೊಂಡರು. ಈಗ ನಮ್ಮೆದುರಿಗೆ ಇರುವ ಈ ಸ್ತ್ರೀಯು ಇಂದ್ರನಿಗೆ ಪ್ರೀತಿಪಾತ್ರಳಾದ ಪತ್ನಿಯು ಇವಳು ಮಧ್ಯಮಜಾತಿಯವಳು. ಇವಳ ಹೆಸರು ವಾವಾತಾ ಎಂದು ರಾಜರಿಗೆ ಮೂರುವಿಧವಾದ

ಪತ್ನಿಯರಿರುವರು ಅವರಲ್ಲಿ ಉತ್ತಮಜಾತಿಯ ಪತ್ನಿಗೆ ಮಹಿಷಿ ಎಂದೂ, ಮಧ್ಯಮ ಜಾತಿಯ ಪತ್ನಿಗೆ ವಾವಾತಾ ಎಂದೂ, ಅಧಮಜಾತಿಯ ಪತ್ನಿಗೆ ಪರಿವೃಕ್ತಿ ಎಂದೂ ಹೇಳುವ ರೂಢಿ ಇದೆ. ಆದ್ದರಿಂದಲೇ ಅಶ್ವಮೇಧಯಜ್ಞದಲ್ಲಿ ಸ್ತ್ರೀಯರು ಮಾಡಬೇಕಾದ ಕರ್ತವ್ಯಕರ್ಮಗಳಲ್ಲಿ **ಮಹಿಷಿ**ಯನ್ನು **ಭೂಃ** ಎಂಬ ಶಬ್ದದಿಂದಲೂ **ವಾವಾತಾ** ಎಂಬ ಪತ್ನಿಯನ್ನು **ಭುವಃ** ಎಂಬ ಶಬ್ದದಿಂದಲೂ **ಪರಿವೃಕ್ತಿ** ಎಂಬ ಪತ್ನಿಯನ್ನು **ಸುವಃ** ಎಂಬ ಶಬ್ದದಿಂದಲೂ ನಿರ್ದೇಶಿಸುವರು ಈ ಮೂವರಲ್ಲಿ **ವಾವಾತಾ** ಎಂಬ ಮಧ್ಯಮಜಾತಿಗೆ ಸೇರಿದ ಸತ್ನಿಗೆ **ಪ್ರಾಸಹಾ** ಎಂದು ಹೆಸರಿದೆ. ಏಕೆಂದರೆ ಈ ಪತ್ನಿಯು ಪತಿಯ ಇಷ್ಟವನ್ನು ತಿಳಿದು ಆದರಂತೆ ವರ್ತಿಸುತ್ತಾ ಬಲಾತ್ಕಾರದಿಂದ ಸಮಸ್ತ ಕೆಲಸವನ್ನೂ ಮಾಡಲು ಸಮರ್ಥಳಾದ್ದರಿಂದ ಇವಳು ರಾಜನಿಗೆ ಬಹಳ ಪ್ರೀತಿ ಪಾತ್ರಳಾಗಿರುವಳು. ಆದ್ದರಿಂದ ಇವಳ ಮೂಲಕ ರಾಜನಾದ ಇಂದ್ರನ ಅಭಿಪ್ರಾಯವನ್ನು ತಿಳಿದುಕೊಳ್ಳುವುದು ಯುಕ್ತವೆಂದರಿತು, ಇವಳಲ್ಲಿ ತಮ್ಮ ವಿಚಾರವನ್ನು ಅರಿಕೆಮಾಡಿಕೊಂಡರು. ಅದನ್ನು ಕೇಳಿ ವಾವಾತೆಯು—ಎಲೈ ದೇವತೆಗಳೇ, ನಿಮ್ಮ ವಿಚಾರವನ್ನು ಇಂದ್ರನಿಗೆ ತಿಳಿಸಿ ಅವನ ಅಭಿಪ್ರಾಯವನ್ನು ತಿಳಿಯಬೇಕಾದರೆ ಈಗ ಸರಿಯಾದ ಕಾಲವಲ್ಲ ಲೋಕದಲ್ಲಿ ಸ್ತ್ರೀಯರು ತಮ್ಮ ಪತಿಗೆ ತಿಳಿಸಬೇಕಾದ ಯಾವ ಮುಖ್ಯ ವಿಷಯವನ್ನಾಗಲಿ ರಾತ್ರಿಕಾಲದಲ್ಲಿ ಏಕಾಂತದಲ್ಲಿರುವಾಗ ತಿಳಿಸುವುದು ರೂಢಿಯಷ್ಟೆ. ಏಕಾಂತದಲ್ಲಿರುವಾಗ ಯಾವ ವಿಘ್ನವಾದ ಅಡ್ಡಿ ಆತಂಕಗಳಿಲ್ಲದೆ ಇರುವುದರಿಂದ ಸ್ತ್ರೀಯರು ಹೇಳಿದ್ದನ್ನು ಪುರುಷನು ಸಹಾನುಭೂತಿಯಿಂದ ಕೇಳಿ ಯೋಗ್ಯವಾದ ಉತ್ತರವನ್ನು ಹೇಳುವನು ಆದ್ದರಿಂದ ನಾನು ಈ ರಾತ್ರಿ ಇಂದ್ರನೊಡನೆ ಏಕಾಂತದಲ್ಲಿರುವಾಗ ನಿನ್ನ ವಿಷಯವನ್ನು ಪ್ರಸ್ತಾಪಮಾಡಿ ಇಂದ್ರನ ಅಭಿಪ್ರಾಯವನ್ನು ತಿಳಿದುಕೊಳ್ಳುವೆನು. ಆದ್ದರಿಂದ ನೀವು ನಾಳೆ ಬೆಳಿಗ್ಗೆ ಬಂದರೆ ಇಂದ್ರನ ಪ್ರತ್ಯುತ್ತರವನ್ನು ತಿಳಿಸುವೆನು ಎಂದಳು. ದೇವತೆಗಳು ಹಾಗೇ ಆಗಲೆಂದು ಹೇಳಿ ಮಾರನೆಯ ದಿವಸ ಪ್ರಾತಃಕಾಲ ಬಂದು ಕೇಳಲು, ಆ ವಾವಾತೆಯು ಪ್ರತ್ಯುತ್ತರರೂಪವಾಗಿ ಮಂತ್ರರೂಪವಾದ ಈ ವಾಕ್ಯವನ್ನು ಹೇಳಿದಳು—

ಯದ್ವಾವಾ ನ ಪುರುತಮಂ ಪುರಾಷಾಳಾ ವೃತ್ರಹೇಂದ್ರೋ ನಾಮಾನ್ಯಪ್ರಾಃ ।
ಅಚೇತಿ ಪ್ರಾಸಹಸ್ಪತಿಸ್ತುವಿಷ್ಮಾನ್..... .... ॥

(ಋ ಸಂ ೧೦-೭೪-೬)

ಪುರಾತನ ಪುರುಷರ ಮಧ್ಯದಲ್ಲಿ ಇಂದ್ರನು ವೃತ್ರನನ್ನು ಸಂಹಾರಮಾಡಿ, ಇತರ ಅನೇಕ ಯುದ್ಧಗಳಲ್ಲಿಯೂ ಜಯಶಾಲಿಯಾಗಿ ಪ್ರಪಂಚದಲ್ಲೆಲ್ಲಾ ಖ್ಯಾತಿಯನ್ನು ಗಳಿಸಿರುವನು. ಆದ್ದರಿಂದ ಇಂದ್ರನಿಗೆ ಪ್ರಾಸಹಸ್ಪತಿ ಎಂಬ ಹಸರು **ಪ್ರ**-ಎಂದರೆ ಅತಿಶಯವಾದ, **ಸಹಃ**-ಬಲಕ್ಕೆ, **ಪತಿಃ**-ಪ್ರಭುವು, ಅತ್ಯಂತ ಬಲಶಾಲಿಯು ಎಂಬ ಹೆಸರು ಅನ್ವರ್ಥನಾಮವಾಗಿರುವುದು. ಇಂತಹ ಹೆಸರನ್ನು ವೃತ್ರಸಂಹಾರರೂಪವಾದ ಮಹಾಕಾರ್ಯದಿಂದ ಗಳಿಸಿ, ಮಾಹೇಂದ್ರ ಗ್ರಹ, ಮಾಧ್ಯಂದಿನಸವನ ಮೊದಲಾದ ಪ್ರಶಸ್ತನಾಮಗಳು ತನಗೆ ಅತ್ಯಂತ ಪ್ರಿಯವಾಗಿರುವುದೆಂದು ಪ್ರಪಂಚದಲ್ಲೆಲ್ಲಾ ಹರಡಿರುವನು. ಈ ಇಂದ್ರನು ದೇವತೆಗಳ ಅಭೀಷ್ಟವೇನೆಂಬುದನ್ನೂ ತಿಳಿದೇ ಇರುವನು. ಮತ್ತು ಇವನು ಬಹಳ ಬಲಶಾಲಿಯು—ಎಂದು ಈ ಋಕ್ಕಿನ ಮೂರು ಪಾದಗಳಿಗೆ ಅರ್ಥವು ಇದನ್ನೇ ವಾವಾತೆಯು ದೇವತೆಗಳಿಗೆ ತಿಳಿಸಿದಳು.

ಇಂದ್ರೋ ವೈ ಪ್ರಾಸಹಸ್ಪತಿಸ್ತುವಿಷ್ಮಾನ್ । ಯದೀಮುಶ್ಮಸಿ ಕರ್ತವೇ ಕರತ್ತದಿತಿ ಯದೇವೈತ-
ದೇವೋಚಾಮಾಕರತ್ತದಿತ್ಯೇವೈನಾಂಸ್ತದಬ್ರವೀತ್ ॥

ಮೇಲೆ ಹೇಳಿದಂತೆ ಮಂತ್ರದ ಮೂರು ಪಾದಗಳಿಂದ ವಾವಾತೆಯು ಹೇಳಿದ ಉತ್ತರವನ್ನು ಕೇಳಿ ದೇವತೆಗಳು—

ಯದೀಮುಶ್ಮಸಿ ಕರ್ಹನೇ ಕರತ್ತ್ ।

ಎಂಬ ನಾಲ್ಕನೆಯ ಪಾದದಿಂದ ತಮ್ಮತಮ್ಮಲ್ಲಿ ಮಾತನಾಡಿಕೊಂಡರು ದೇವತೆಗಳಾದ ನಮಗೂ ಯಜ್ಞದಲ್ಲಿ ಭಾಗವಿರುವುದಾದರೆ ಮತ್ತು ಇಂದ್ರನು ನಮಗೆ ಆ ಯಜ್ಞಭಾಗವನ್ನು ಕಲ್ಪಿಸಿಕೊಡುವುದಾದರೆ, ನಮ್ಮ ಅಪೇಕ್ಷೆಯನ್ನು ಇಂದ್ರನು ನೆರವೇರಿಸಿದಂತಾಗುವುದು ಎಂದು, ಅಥವಾ ಈ ನಾಲ್ಕನೆಯ ಪಾದದ ವಾಕ್ಯವನ್ನು ವಾವಾತೆಯ ಪ್ರತ್ಯುತ್ತರವೆಂದೇ ಪರಿಗಣಿಸುವುದಾದರೆ ಆಗ—ಎಲೈ ದೇವತೆಗಳೇ, ನೀವು ಆಲೋಚಿಸಿ ಇಂದ್ರನನ್ನು ಪ್ರಾರ್ಥಿಸಿದ ಕಾರ್ಯವನ್ನು ಇಂದ್ರನು ನೆರವೇರಿಸುತ್ತಾನೆ ಅಥವಾ ನೆರವೇರಿಸುವನು, ಎಂದು ಚತುರ್ಥಪಾದದ ಅರ್ಥವು. ಅದನ್ನೇ ಇಲ್ಲಿ ಸ್ಪಷ್ಟವಾಗಿ ಹೇಳಿರುವುದು.

ತೇ ದೇವಾ ಆಬ್ರುವನ್ನಸ್ಯಾ ಇಹಾಸ್ತು ಯಾ ನೋಽಸ್ಮಿನ್ನ ನೈ ಕಮವಿದದಿತಿ ತಥೇತಿ ತಸ್ಯಾ ಆಸ್ಯತ್ರಾಕುರ್ವನ್ ।

ಈ ರೀತಿ ಹೇಳಿದ ವಾವಾತೆಯ ಪ್ರತ್ಯುತ್ತರವನ್ನು ದೇವತೆಗಳು ಕೇಳಿ ಈ ವಾವಾತೆಯು ದೇವತೆಗಳಾದ ನಮಗೆ ಬಹಳ ಉಪಕಾರಮಾಡಿದ್ದಾಳೆ ಆದ್ದರಿಂದ ಇವಳಿಗೆ ನಾವು ಪ್ರತ್ಯುಪಕಾರವನ್ನು ಮಾಡಬೇಕಾಗಿರುವುದು. ನಿಷ್ಕೇವಲ್ಯ ಶಸ್ತ್ರದಲ್ಲಿ ಈ ವಾವಾತೆಗೆ ಯಾವುದಾದರೂ ಸಂಬಂಧವಿದೆಯೋ ಇಲ್ಲವೋ ತಿಳಿಯದು ಹೇಗಾದರೂ ಆಗಲಿ ಈ ವಾವಾತೆಗೆ ನಿಷ್ಕೇವಲ್ಯಶಸ್ತ್ರದಲ್ಲಿ ಯೋಗ್ಯವಾದ ಸಂಬಂಧವನ್ನು ಕಲ್ಪಿಸೋಣ ಎಂದು ಯೋಚಿಸಿ ಅದರಂತೆ ಮಾಡಿದರು.

ತಸ್ಮಾದೇಷಾತ್ರಾಸಿ ಶಸ್ಯತೇ ಯದ್ವಾವಾನ ಪುರುತಮಂ ಪುರಾಷಾಳಿತಿ ।

ಈ ರೀತಿ ನಿಷ್ಕೇವಲ್ಯಶಸ್ತ್ರದಲ್ಲಿ ವಾವಾತೆಗೆ ಈ ಋಕ್ಕಿನ (ಯದ್ವಾವಾನ ಋ ಸಂ. ೧೦-೭೪-೬) ಸಂಬಂಧವನ್ನು ದೇವತೆಗಳು ಕಲ್ಪಿಸಿದ್ದರಿಂದ ಈ ಋಕ್ಕು ನಿಷ್ಕೇವಲ್ಯಶಸ್ತ್ರದಲ್ಲಿ ಧಾಯ್ಯಾಮಂತ್ರವೆಂದು ಹೇಳಲ್ಪಡುವುದು.

ಸೇನಾ ವಾ ಇಂದ್ರಸ್ಯ ಪ್ರಿಯಾ ಜಾಯಾ ವಾವಾತಾ ಪ್ರಾಸಹಾ ನಾಮ ಕೋ ನಾಮ ಪ್ರಜಾಪತಿಃ ಶ್ವಶುರಸ್ತದ್ಯಾಸ್ಯ ಕಾಮೇ ಸೇನಾ ಜಯೇತ್ಸಸ್ಯಾ ಅರ್ಧಾತ್ಪಿಷ್ಕಂಸ್ಕೃಣಮುಭಯತಃ ಪರಿಚ್ಛಿದ್ಯೇತರಾಂ ಸೇನಾಮಭ್ಯಸ್ಯೇತ್ಪ್ರಾಸಹೇ ಕಸ್ತ್ವಾ ಪಶ್ಯತೀತಿ ತದ್ಯಥೈವಾದಃ ಸ್ನುಷಾ ಶ್ವಶುರಾಲ್ಲಜ್ಜಮಾನಾ ನಿಲೀಯಮಾನೈತ್ಯೇವಮೇವ ಸಾ ಸೇನಾ ಭಜ್ಯಮಾನಾ ನಿಲೀಯಮಾನೈತಿ ಯತ್ರೈವಂ ವಿದ್ವಾಂಸ್ಕೃಣಮುಭಯತಃ ಪರಿಚ್ಛಿದ್ಯೇತರಾಂ ಸೇನಾಮಭ್ಯಸ್ಯತಿ ಪ್ರಾಸಹೇ ಕಸ್ತ್ವಾ ಪಶ್ಯತೀತಿ ।

ಈ ಧಾಯ್ಯಾಮಂತ್ರವನ್ನು ಹೇಳಿದ ಇಂದ್ರಪತ್ನಿಯಾದ ವಾವಾತೆಯ ಪ್ರಶಂಸೆಯನ್ನು ಸ್ವಲ್ಪ ವಿವರವಾಗಿ ಇಲ್ಲಿ ತಿಳಿಸಿದೆ. ಹಿಂದೆ ವಾವಾತೆಯೆಂಬುವಳು ಇಂದ್ರನ ಪ್ರಿಯಪತ್ನಿಯೆಂದೂ ಇವಳ ಹೆಸರು ಪ್ರಾಸಹಾ ಎಂದೂ ಹೇಳಿದೆಯಷ್ಟೆ. ಲೋಕವ್ಯವಹಾರದಲ್ಲಿ ಈ ವಾವಾತಾ ಅಥವಾ ಪ್ರಾಸಹಾ ಎಂಬುವಳು ಯುದ್ಧಕ್ಕಾಗಿ ಸಿದ್ಧವಾಗಿರುವ ಸೇನಾರೂಪದಿಂದ ಇರುವಳೆಂದು ಹೇಳುವರು ಏಕೆಂದರೆ ಇಂದ್ರಪತ್ನಿಯು ಸೇನಾಭಿಮಾನಿದೇವತೆಯು ವೇದದಲ್ಲಿಯೂ ಸಹ **ಇಂದ್ರಾಣಿ ನೈ ಸೇನಾಯ ದೇವತಾ ।** ಎಂದು ಹೇಳಿರುವುದು. ಮತ್ತು **ಕೋ ನಾಮ**—ನಾನು

ಯಾರು ಎಂದು ಹೇಳಿದ್ದರಿಂದ ಪ್ರಜಾಪತಿಯು ಕಶಬ್ದವಾಚ್ಯನೆಂದೂ ಹಿಂದೆ ವಿವರಿಸಲಾಗಿದೆಯಷ್ಟೆ. ಆ ಪ್ರಜಾಪತಿಯೇ ಇಂದ್ರಪತ್ನಿಯ **ಶ್ವಶುರ** ಅಥವಾ ಮಾವನು　ಇಂದ್ರನು ಪ್ರಜಾಪತಿಯ ಪುತ್ರನೆಂಬ ವಿಷಯದಲ್ಲಿ— **ಪ್ರಜಾಪತಿರಿಂದ್ರಮಸೃಜತಾನುಜಾವರಂ ದೇವಾನಾಂ**— ಎಂದು ವೇದದಲ್ಲಿಯೇ ಹೇಳಿದೆ　ಈ ವಿಷಯವು ಹೀಗಿರುವಾಗ **ಲೌಕಿಕ** ವ್ಯವಹಾರದಲ್ಲಿ ಯುದ್ಧಾಭಿಲಾಷಿಯಾದ ಪುರುಷನು ತನ್ನ ಸೇನೆಯು ಜಯವನ್ನು ಪಡೆಯಬೇಕೆಂದು ತನಗಿಷ್ಟವಿದ್ದರೆ ಆಗ ಅವನೊಂದು ಕಾರ್ಯವನ್ನು ಮಾಡಬೇಕು　ಯುದ್ಧಸಮಯದಲ್ಲಿ ಎರಡು ಸೇನೆಗಳೂ : ಪರಸ್ಪರಾಭಿಮುಖವಾಗಿ ಯುದ್ಧಮಾಡಲು ನಿಂತಿರುವಾಗ ಆ ಪುರುಷನು ತನ್ನ ಸೇನೆಯನ್ನ ತಿಕ್ರಮಿಸಿ ಎಂದರೆ ಸೇನೆಯ ಮಧ್ಯಭಾಗದಿಂದ ಸ್ವಲ್ಪ ಮುಂದಕ್ಕೆ ಹೋಗಿ ಭೂಮಿಯಲ್ಲಿ ನಿಂತುಕೊಂಡು ಒಂದು ಹುಲ್ಲುಕಡ್ಡಿಯನ್ನು ತೆಗೆದುಕೊಂಡು ಅದರ ಬೇರನ್ನೂ ತುದಿಯನ್ನೂ ಕತ್ತರಿಸಿ ಉಳಿದ ಮಧ್ಯಭಾಗವನ್ನೂ ಶತ್ರುಸೇನೆಯ ಅಭಿಮುಖವಾಗಿ (ಎದುರಿಗೆ) ಬಾಣವನ್ನು ಎಸೆಯುವಂತೆ ಎಸೆಯಬೇಕು　ಹೀಗೆ **ಎಸೆಯುವಾಗ—ಪ್ರಾಸಹೇ ಕಸ್ತ್ವಾ ಪಶ್ಯತಿ**।　ಎಲೈ ಪ್ರಾಸಹಾ ಎಂಬ ಹೆಸರುಳ್ಳ ಇಂದ್ರಪತ್ನಿಯೇ, ಕಶಬ್ದವಾಚ್ಯನೂ, ನಿನ್ನ ಮಾವನೂ ಆದ ಪ್ರಜಾಪತಿಯು ನಿನ್ನನ್ನು ತನ್ನ ಕಣ್ಣುಗಳಿಂದ ನೋಡುವನು—ಎಂಬ ಮಂತ್ರದಿಂದ ಆ ಹುಲ್ಲುಕಡ್ಡಿಯನ್ನು ಎಸೆಯಬೇಕು. ಈ ಮಂತ್ರದಿಂದ ಹುಲ್ಲುಕಡ್ಡಿಯನ್ನು ಈ ರೀತಿ ಎಸೆದರೆ ಶತ್ರುಸೇನೆಗೆ ಪರಾಜಯವುಂಟಾಗುವುದು. ಇದನ್ನು ಒಂದು ದೃಷ್ಟಾಂತಮೂಲಕಸ್ಪಷ್ಟಪಡಿಸುವರು　ಲೋಕವ್ಯವಹಾರದಲ್ಲಿ ದೊಡ್ಡಮನುಷ್ಯರೂ ಪೂರ್ವಾಚಾರ ಸಂಪ್ರದಾಯನಿಷ್ಠರೂ ಆದ ಗೃಹಸ್ಥರ ಮನೆಯಲ್ಲಿ ತರುಣಿಯಾದ ಸೊಸೆಯು ತನ್ನ ಮಾವನನ್ನು ಕಂಡರೆ ನಾಚಿಕೆಯಿಂದ ಸೀರೆಯ ಸೆರಗನ್ನು ಸರಿಮಾಡಿಕೊಳ್ಳುತ್ತಾ ಹಸ್ತಾದ್ಯವಯವಗಳನ್ನು ಮುದುರಿಕೊಂಡು ಮನೆಯ ಒಳಭಾಗಕ್ಕೆ ಮೆಲ್ಲನೆ ಹೊರಟು ಹೋಗುವಳು.　ಆದರಂತೆ ಮಂತ್ರಪೂರ್ವಕವಾದ ತೃಣವಿಕ್ಷೇಪದಿಂದ ಶತ್ರುಸೇನೆಗೆ ಪರಾಭವ (ಸೋಲು) ವುಂಟಾಗಿ ಅದು ಪರ್ವತಾರಣ್ಯನದಿಗಳನ್ನು ದಾಟ ಹಿಂದಕ್ಕೆ ಸರಿಯುತ್ತಾ ತನ್ನ ಸ್ವದೇಶಕ್ಕೆ ಪಲಾಯನ ಮಾಡುವುದು. ಪ್ರಾಸಂಗಿಕವಾಗಿ ಹೇಳಿದ ಈ ವಿಷಯವನ್ನು ಇಲ್ಲಿಗೆ ನಿಲ್ಲಿಸಿ ಮುಂದೆ ಪ್ರಕೃತಸಂದರ್ಭವನ್ನು ವಿಸ್ತರಿಸಿರುವರು—

ತಾನಿಂದ್ರ ಉವಾಚಾಸಿ ವೋಽತ್ರಾಸ್ತ್ವಿತಿ ತೇ ದೇವಾ ಅಬ್ರುವನ್ನಿರಾಡ್ಯಾಜ್ಯಾಸ್ತು ನಿಷ್ಕೇವಲ್ಯಸ್ಯ ಯಾ ತ್ರಯಸ್ತ್ರಿಂಶದಕ್ಷರಾ ತ್ರಯಸ್ತ್ರಿಂಶದ್ವೈ ದೇವಾ ಅಷ್ಟೌ ವಸವ ಏಕಾದಶ ರುದ್ರಾ ದ್ವಾದಶಾದಿತ್ಯಾಃ ಪ್ರಜಾಪತಿಶ್ಚ ವಷಟ್ಕಾರಶ್ಚ ದೇವತಾ ಅಕ್ಷರಭಾಜಃ ಕರೋತ್ಯಕ್ಷರಮಕ್ಷರಮೇವ ತದ್ದೇವತಾ ಅನು ಪ್ರಸಿಬಂತಿ ದೇವಪಾತ್ರೇಣೈವ ತದ್ದೇವತಾಸ್ತ್ರಪ್ಯಂತಿ।

ವಾವಾತೆಯ ವಚನವನ್ನು (ಪ್ರತ್ಯುತ್ತರವನ್ನು) ಕೇಳಿ ದೇವತೆಗಳು ಇಂದ್ರನ ಸನ್ನಿಧಾನಕ್ಕೆ ಹೋಗಲು, ಇಂದ್ರನು ಅವರನ್ನು ಕುರಿತು—ಎಲೈ ದೇವತೆಗಳೇ, ನೀವು ಅಪೇಕ್ಷಿಸುವಂತೆ ಯಜ್ಞದ ನಿಷ್ಕೇವಲ್ಯಶಸ್ತ್ರದಲ್ಲಿ ನಿಮಗೆ ಯಜ್ಞಭಾಗವು ಕೊಡಲ್ಪಟ್ಟಿರುವುದು ಎಂದನು　ಅದನ್ನು ಕೇಳಿ ದೇವತೆಗಳು—ನಾವು (ದೇವತೆಗಳು) ಮೂವತ್ತಮೂರು ಮಂದಿ ಇರುವೆವು. ಹೇಗೆಂದರೆ, ಎಂಟುಮಂದಿ ವಸುಗಳು, ಹನ್ನೊಂದುಮಂದಿ ರುದ್ರರು, ಹನ್ನೆರಡುಮಂದಿ ಆದಿತ್ಯರು, ಇವರ ಜತೆಗೆ ಪ್ರಜಾಪತಿ ಒಬ್ಬನು, ವಷಟ್ಕಾರವು ಒಂದು, ಒಟ್ಟು ಮೂವತ್ತಮೂರು ದೇವತೆಗಳಿರುವುದರಿಂದ ಮೂವತ್ತಮೂರು ಅಕ್ಷರಗಳುಳ್ಳ ವಿರಾಟ್ ಎಂಬ ಛಂದಸ್ಸಿನ ಯಾಜ್ಯಾಮಂತ್ರದಿಂದ ಎಂದರೆ—

ಪಿಬಾ ಸೋಮಮಿಂದ್ರ ಮಂದತು ತ್ವಾ ಯಂ ತೇ ಸುಷಾವ ಹರ್ಯಶ್ವಾದ್ರಿಃ।
ಸೋತುರ್ಬಾಹುಭ್ಯಾಂ ಸುಯತೋ ನಾರ್ವಾ।　　(ಋ. ಸಂ. ೭-೨೨-೧)

ಎಂಬ ಯಾಜ್ಯಾಮಂತ್ರದಿಂದ ಸೋಮಪಾನವನ್ನು ಕಲ್ಪಿಸಬೇಕೆಂದು ಇಂದ್ರನನ್ನು ಪ್ರಾರ್ಥಿಸಿದರು. ಈ ಯಾಜ್ಯಾ ಮಂತ್ರದಲ್ಲಿ ಮೂವತ್ತಮೂರು ಅಕ್ಷರಗಳಿರಬೇಕು. ಆದರೆ ಹಾಗಿಲ್ಲದೆ ಇಪ್ಪತ್ತೊಂಭತ್ತು ಅಕ್ಷರಗಳು ಮಾತ್ರ ಇರುವವು. ಆದರೂ ಅಕ್ಷರಸಂಯೋಜನಾಕ್ರಮದಿಂದ ಅಕ್ಷರಗಳು ಕಮ್ಮಿ ಇದ್ದರೂ ಒಟ್ಟು ಮೂವತ್ತುಮೂರು ಅಕ್ಷರಗಳಿರುವುವೆಂದೇ ಪರಿಗಣಿಸಬೇಕು. ಈ ರೀತಿ ಯಾಜ್ಯಾಮಂತ್ರದಲ್ಲಿರುವ ಮೂವತ್ತಮೂರು ಅಕ್ಷರಗಳೂ, ಒಂದೊಂದು ಅಕ್ಷರ ಒಂದೊಂದು ದೇವತೆಯಂತೆ, ಮೂವತ್ತಮೂರು ದೇವತೆಗಳನ್ನೂ ತೃಪ್ತಿಪಡಿಸುವವು. ಈ ಕ್ರಮವನ್ನು ಬಿಟ್ಟು ಬೇರೆ ಛಂದಸ್ಸಿನ ಮಂತ್ರದಿಂದ ಯಾಜ್ಯಾಹುತಿಯನ್ನು ಅರ್ಪಿಸಿದರೆ ಅದರಿಂದ ಉಂಟಾಗುವ ಹಾನಿಯನ್ನು ವಿವರಿಸುವರು—

यं कामयेतानायतवान् स्यादित्यविराजास्य यजेद्गायत्र्या वा त्रिष्टुभा वान्येन वा छंदसा वषट्कुर्यादनायतनवंतमेवैनं तत्कुरुते यं कामयेतायतनवान् स्यादिति विराजास्य यजेत्त्रिष्टुभा सोममिंद्र मंदतु त्वेत्येतयायतनवंतमेवैनं तत्कुरुते ।

(ಐ ಬ್ರಾ ೧೨-೨೨)

ಯಜ್ಞಮಾಡುವ ಯಜಮಾನನಿಗೆ ಗೃಹಾದಿಸಂಪತ್ತುಗಳು ನಾಶವಾಗಬೇಕೆಂಬ ಅಪೇಕ್ಷೆಯು ಹೋತೃವಿಗಿದ್ದಲ್ಲಿ ಆಗ ಅವನು ನಿಷ್ಕೇವಲ್ಯಶಸ್ತ್ರದಲ್ಲಿ ಪಠಿಸಬೇಕಾದ ಯಾಜ್ಯಾಮಂತ್ರವನ್ನು ವಿರಾಟ್‌ಛಂದಸ್ಸಿನ ಋಕ್ಕಿನಿಂದ ಪಠಿಸದೆ ಗಾಯತ್ರೀ, ತ್ರಿಷ್ಟುಪ್ ಅಥವಾ ಬೇರೆ ಛಂದಸ್ಸಿನ ಮಂತ್ರಗಳನ್ನು ಪಠಿಸುತ್ತಾ ಹೋಮಮಾಡಬೇಕು. ಆ ರೀತಿ ಮಾಡಿದಲ್ಲಿ ಯಜಮಾನನ ಗೃಹಾದಿನಿವಾಸಸ್ಥಾನಗಳು ನಾಶವಾಗುವವು. ಆದ್ದರಿಂದ ಯಜಮಾನನಿಗೆ ಗೃಹಸಂಪತ್ತು ಶಾಶ್ವತವಾಗಿರಲಿ ಎಂಬ ಅಪೇಕ್ಷೆಯಿದ್ದಲ್ಲಿ ಹೋತೃವು ಈ ಯಾಜ್ಯಾಹೋಮವನ್ನು ವಿರಾಟ್‌ಛಂದಸ್ಸಿನ ಋಕ್ಯಾದ-- ಪಿಬಾ ಸೋಮಮಿಂದ್ರ (ಋ ಸಂ ೭-೨೨-೧) ಎಂಬ ಮಂತ್ರದಿಂದಲೇ ನೆರವೇರಿಸಬೇಕು ಹಾಗೆ ಮಾಡಿದಲ್ಲಿ ಯಜಮಾನನಿಗೆ ಗೃಹಾದಿನಿವಾಸಸ್ಥಾನಗಳ ಸಮೃದ್ಧಿಯುಂಟಾಗುವುದು.

ನಿಷ್ಕೇವಲ್ಯ ಶಸ್ತ್ರಮಂತ್ರಗಳಲ್ಲಿರುವ ಋಕ್ ಮತ್ತು ಸಾಮಮಂತ್ರಗಳು

ಋಕ್ಕುಗಳಿಗೂ ಸಾಮಕ್ಕೂ ಇರುವ ನಿಕಟಸಂಬಂಧವು—ಸಾಮಗಾನಮಾಡುವ ಋತ್ವಿಜರು
ಏತಕ್ಕಾಗಿ ಮೂರು ಋಕ್ಕುಗಳನ್ನು (ತೃಚ) ಪಠಿಸಿ ಗಾನಮಾಡುವರು—ಈ ಋಕ್
ಮತ್ತು ಸಾಮಮಂತ್ರಗಳ ಐದುವಿಧ ಪ್ರಭೇದಗಳು—ಈ ಎರಡು ವಿಧವೂ
ವಿರಾಟ್‌ಛಂದಸ್ಸಿನಲ್ಲಿರುವುದು—ನಿಷ್ಕೇವಲ್ಯಶಸ್ತ್ರದ ಐದು ವಿಭಾಗಗಳು

ऋक्ष्वै वा इदमग्रे साम चास्तां स्रैव नाम ऋगासीदेषो नाम साम सा वा ऋक्सामोपावदन्निथुनं संभवाव स्रजात्या इति नेत्यब्रवीत्सामं ज्यायानवा अतोऽमम महिमेति ते द्वे भूत्वोपावदताम तेन प्रतिचेन समवदतताम्तस्रो भूत्वोपावदंस्तत्त्रिसृभिः समभवद्यत्त्रिसृभिः समभवत्तस्मात्त्रिसृभिः स्तुवंति तिसृभिरुद्गायंति तिसृभिर्हि साम संमितं तस्मादेकस्य बहोर्ज्यो जायो भवंति नैकस्यैक बहवः सह पतयो यदेवै तत्सा चामक्ष्म समभवताम तत्सामाभवत्तत्सामसु सामत्वं सामन्वती य एवं वेद ।

ಈಗ ಋಙ್ಮಂತ್ರಗಳಿಗೂ ಸಾಮಮಂತ್ರಗಳಿಗೂ ಪರಸ್ಪರ ಸಂಬಂಧವಿದ್ದು, ಯಜ್ಞದಲ್ಲಿ ಇವು ಪರಸ್ಪರ ಆಶ್ರಯಭೂತವಾಗಿವೆ. ಆದರೆ ಪೂರ್ವದಲ್ಲಿ ಹಾಗಿರಲಿಲ್ಲ. ಇವು ಬೇರೆಬೇರೆಯಾಗಿದ್ದವು ಎಂದರೆ, ಋಙ್ಮಂತ್ರವು ಅಕ್ಷರ ಮತ್ತು ಪದಗಳಿಂದ ಕೂಡಿ ಛಂದೋಬದ್ಧವಾದ ಋಕ್ಕುಗಳಾಗಿದ್ದವು, ಸಾಮಮಂತ್ರವು ಗೀತಿರೂಪದಲ್ಲಿ (ಗಾನಮಾಡಲು ಅನುಕೂಲವಾದ ರೂಪದಲ್ಲಿ) ಪ್ರತ್ಯೇಕವಾದ ಮಂತ್ರವಾಗಿದ್ದಿತು. ಇವುಗಳಲ್ಲಿ ಒಂದಕ್ಕೊಂದು ಸಂಬಂಧವಿರಲಿಲ್ಲ ಎರಡೂ ಬೇರೆ ಬೇರೆಯಾಗಿಯೇ ಇದ್ದವು. ಈ ಋಕ್ ಮತ್ತು ಸಾಮ ಎಂಬ ಎರಡುವಿಧವಾದ ಮಂತ್ರಗಳ ಸಂಮೇಲನ (ಒಟ್ಟಗೆ ಸೇರಿ ಯಜ್ಞಕ್ಕೆ ಸಹಕಾರಿಯಾಗಿರುವುದನ್ನು) ಸಾಮ ಎಂಬ ಶಬ್ದದಲ್ಲಿ ಅಂತರ್ಭೂತವಾಗಿರುವುದನ್ನು ಅಡಗಿರುವುದನ್ನು) ಸ್ಪಷ್ಟಪಡಿಸುವುದಕ್ಕಾಗಿ ಒಂದು ಉಪಾಖ್ಯಾನವು ಉಕ್ತವಾಗಿರುವುದು ಸಾಮ ಎಂಬ ಶಬ್ದವು ಸಾ+ಅಮ ಎಂಬ ಬೇರೆ ಬೇರೆ ಶಬ್ದಗಳು ಸೇರಿ ಉಂಟಾಗಿದೆ ಈ ಎರಡು ಶಬ್ದಗಳಲ್ಲಿ ಸಾ ಎಂಬ ಶಬ್ದವು ಋಗ್ವೇದಮಂತ್ರವಾದ ಋಕ್ಕು ಆಗಿದ್ದಿತು. ಅಮ ಎಂಬ ಶಬ್ದವು ಸಾಮವೇದದ ಸಾಮಮಂತ್ರವಾಗಿದ್ದಿತು ಆದ್ದರಿಂದ ಋಙ್ಮಂತ್ರ ಅಥವಾ ಋಕ್ಕು ಸಾಮದೊಡನೆ ಮಿಲನವಾಗಬೇಕೆಂದು ಅಥವಾ ಸೇರಿ ಒಂದಾಗಬೇಕೆಂದು ಬಯಸಿ, ಋಕ್ಕು (ಋಕ್ ಶಬ್ದವು ಸ್ತ್ರೀಲಿಂಗವು) ಸಾಮಮಂತ್ರದ ಬಳಿಗೆ ಹೋಗಿ—ನಾವಿಬ್ಬರೂ ಮಿಥುನಭಾವವನ್ನು ಎಂದರೆ, ಪತಿಪತ್ನಿಯರ ಭಾವವನ್ನು ಹೊಂದೋಣ ಈ ವಿಧವಾದ ಸಂಮೇಲನದಿಂದ ಪ್ರಜೋತ್ಪತ್ತಿಗೆ ಸಹಾಯವಾಗುವುದು ಎಂದಿತು. ಅದನ್ನು ಕೇಳಿ ಸಾಮವು—ಋಙ್ಮಂತ್ರದ ಮಹಿಮೆಗಿಂತ ನನ್ನ ಸಾಮಮಂತ್ರದ ಮಹಿಮೆಯೇ ಅಧಿಕವಾಗಿರುವುದು ಲೋಕವ್ಯವಹಾರದಲ್ಲಿ ವಿವಾದ (ವ್ಯವಹಾರ) ವೂ, ವಿವಾಹಾದಿ ಸಂಬಂಧವೂ ಸರಿಸಮಾನದಲ್ಲಿ ಮಾತ್ರ ನಡೆಯುವುದು ರೂಢಿಯಲ್ಲಿ ಆದರಂತೆ ಈಗ ನಿನ್ನ ಮಹಿಮೆಗಿಂತ ನನ್ನ ಮಹಿಮೆಯು ಅಧಿಕವಾಗಿರುವುದರಿಂದ ನಿನ್ನೊಡನೆ ಸಂಬಂಧಮಾಡಲು ಸಾಧ್ಯವಿಲ್ಲ ಎಂದು ಹೇಳಿ ಋಕ್ಕಿನ ಮಾತನ್ನು ತಿರಸ್ಕರಿಸಿತು ಅನಂತರ ಋಕ್ಕು ತಾನೂ ಸಾಮದ ಮಹಿಮೆಗೆ ಸರಿಸಮವಾಗಿ ಆಗಬೇಕೆಂದು ಇಚ್ಛಿಸಿ ಒಂದಾಗಿದ್ದ (ಎಂದರ ಒಂದು ಋಕ್ಕನ್ನು) ಋಕ್ಕನ್ನು ಎರಡು ಋಕ್ಕುಗಳನ್ನಾಗಿ ಪರಿವರ್ತಿಸಿಕೊಂಡಿತು ಅನಂತರ ಈ ಎರಡು ಋಕ್ಕುಗಳೂ ಸಾಮದ ಬಳಿಗೆ ಹೋಗಿ ಹಿಂದ ಹೇಳಿದಂತೆ ಸಾಮವನ್ನು ಪ್ರಾರ್ಥಿಸಿದವು ಆಗಲೂ ಸಾಮವು ಅದಕ್ಕೊಪ್ಪದೆ ಆ ಎರಡು ಋಕ್ಕುಗಳ ಮಾತನ್ನು ತಿರಸ್ಕರಿಸಿತು. ಆದ್ದರಿಂದ ಮತ್ತೆ ಆ ಎರಡು ಋಕ್ಕುಗಳು ಮೂರು ಋಕ್ಕುಗಳಾಗಿ ಪರಿವರ್ತಿತವಾಗಿ ಸಾಮದ ಬಳಿಗೆ ಬಂದು ಹಿಂದಿನಂತೆ ಪ್ರಾರ್ಥಿಸಿದುವು ಆಗ ಸಾಮವು ಆ ಮೂರು ಋಕ್ಕುಗಳನ್ನು ತನಗೆ ಸರಿಸಮಾನನೆಂದು ಪರಿಗಣಿಸಿ ಋಕ್ಕುಗಳ ಪ್ರಾರ್ಥನೆಯನ್ನಂಗೀಕರಿಸಿ ಅವುಗಳೊಡನೆ ಸಂಯೋಗವನ್ನು ಮಾಡಿತು ಈ ರೀತಿ ಸಾಮವು ಮೂರು ಋಕ್ಕುಗಳೊಡನೆ ಸಂಯೋಗಮಾಡಿದ್ದರಿಂದ ಸಾಮಗಾನಮಾಡುವವರು ಮೂರು ಮೂರು ಋಕ್ಕುಗಳಿಂದ ಎಂದರೆ ಮೂರು ಋಕ್ಕುಗಳನ್ನೊಳಗೊಂಡ ಸ್ತೋತ್ರಗಳಿಂದ ಯಜ್ಞದಲ್ಲಿ ಗಾನಮಾಡಿ ಸ್ತುತಿಸುತ್ತಾರೆ ಅದನ್ನೇ ಇಲ್ಲಿ **ತಿಸೃಭಿಃ ಸ್ತುವಂತಿ ತಿಸೃಭಿರುದ್ಗಾಯಂತಿ** ಎಂಬ ವಾಕ್ಯದಿಂದ ವಿವರಿಸಿದೆ. ಎಂದರೆ ಉದ್ಗಾತೃ ಮೊದಲಾದ ಸಾಮಗಾನಮಾಡುವ ಋತ್ವಿಜರು ತಮ್ಮ ಕರ್ತವ್ಯವಾದ ಸಾಮಗಾನವನ್ನು ಮೇಲೆ ಹೇಳಿದಂತೆ ಮೂರು ಋಕ್ಕುಗಳನ್ನು ಗಾನಮಾಡಿ ಸ್ತುತಿಸುತ್ತಾರೆ ಎಂಬಭಿಪ್ರಾಯವು. ಆದ್ದರಿಂದಲೇ ವೇದದಲ್ಲಿ (ಶಾಖಾಂತರದಲ್ಲಿ)-**ಏಕಂ ಸಾಮ ತ್ರಿಚೇ ಕ್ರಿಯತೇ ಸ್ತೋತ್ರಿಯಂ**—ಎಂದರೆ ಒಂದಾದ ಸಾಮಮಂತ್ರದಲ್ಲಿ ಮೂರು ಋಕ್ಕುಗಳನ್ನೊಳಗೊಂಡ ಸ್ತೋತ್ರವಿರುವುದು ಎಂದು ಹೇಳಿದೆ. ಮತ್ತು ಛಂದಸ್ಸಾನುವೆಂಬ ಗ್ರಂಥದಲ್ಲಿ ಒಂದು ಋಕ್ಕಿನಲ್ಲಿಯೇ ಸಾಮಮಂತ್ರವು ಉತ್ಪನ್ನವಾಗಿದೆ (ಎಂದರೆ ಸಾಮದಲ್ಲಿ ಒಂದೇ ಋಕ್ಕಿದೆ) ಎಂದು ಹೇಳಿದ್ದರೂ ಆ ಗ್ರಂಥದ ಉತ್ತರಭಾಗದಲ್ಲಿ—ಪ್ರಯೋಗಕಾಲದಲ್ಲಿ ಎಂದರೆ ಸಾಮಮಂತ್ರವನ್ನು ಗಾನಮಾಡುವ ಕಾಲದಲ್ಲಿ ಮೂರು ಋಕ್ಕುಗಳಿಂದ ಗಾನಮಾಡಬೇಕು ಎಂದು ಹೇಳಿರುವುದು ಆ ಮೂರು ಋಕ್ಕುಗಳಲ್ಲಿ ಮೊದಲನೆಯ

ಋಕ್ಕಿಗೆ ಯೋನಿ (ಅಥವಾ ಮೂಲಸ್ಥಾನ) ಎಂದು ಹೆಸರು. ಯೋನಿರೂಪವಾದ ಮೊದಲನೆಯ ಋಕ್ಕಿನ ಗಾನವನ್ನು ಸರಿಸಿ ಎರಡನೆಯ ಮತ್ತು ಮೂರನೆಯ ಋಕ್ಕುಗಳ ಗಾನವನ್ನು ಊಹಿಸಿ ಗಾನಮಾಡಬೇಕು ಎಂದು ಶಾಖಾಂತರದಲ್ಲಿಯೂ ಸಹ— **ಯದ್ಯೋನ್ಯಾಂ ತದುತ್ತರಯೋರ್ಗಾಯತಿ** ಎಂದು ಹೇಳಿರುವುದು. ಆದುದರಿಂದ ಉದ್ಗಾತೃವರ್ಗದ ಋತ್ವಿಜರು ತಮ್ಮ ಗಾನಕರ್ಮವನ್ನು ಮೂರು ಋಕ್ಕುಗಳನ್ನು ಗಾನಮಾಡುವುದರಿಂದ ನೆರವೇರಿಸುತ್ತಾರೆ. **ಈ** ಉಪಾಖ್ಯಾನದಲ್ಲಿ ಹಿಂದೆ ಹೇಳಿರುವಂತೆ ಒಂದು ಸಾಮಮಂತ್ರಕ್ಕೆ ಮೂರು ಋಕ್ಕುಗಳು ಸಮನಾಗಿರುವುದರಿಂದ ಎಂದರೆ ಮೂರು ಋಕ್ಕುಗಳು ಸೇರಿ ಒಂದು ಸಾಮವಾಗಿರುವುದರಿಂದ ಸಾಮದ ಮಹಿಮೆಯು ಋಕ್ಕಿನ ಮಹಿಮೆಗೆ ಮೂರರಷ್ಟು ಅಧಿಕವಾಗಿರುವುದು. ಲೋಕವ್ಯವಹಾರದಲ್ಲಿಯೂ ಕೂಡ ಒಬ್ಬ ಪುರುಷನಿಗೆ ಅನೇಕ ಪತ್ನಿಯರಿರುವರು. ಒಬ್ಬ ಸ್ತ್ರೀಗೆ ಅನೇಕ ಪತಿಯರಿರುವುದಿಲ್ಲ ಅದರಂತೆ ಋಕ್ಕು ಸ್ತ್ರೀಸ್ಥಾನದಲ್ಲಿರುವುದು. ಸಾಮವು ಪುರುಷಸ್ಥಾನದಲ್ಲಿರುವುದು. ಆದ್ದರಿಂದ ಪುರುಷಸ್ಥಾನದಲ್ಲಿರುವ ಸಾಮಮಂತ್ರಕ್ಕೆ ಸ್ತ್ರೀಸ್ಥಾನದಲ್ಲಿರುವ ಮೂರು ಋಕ್ಕುಗಳು (ಪತ್ನಿಭಾವದಲ್ಲಿ) ಸೇರಿರುವುದು ಯುಕ್ತವಾಗಿದೆ ಇದಕ್ಕೆ ವಿರುದ್ಧವಾದ ವರ್ತನವು ಎಲ್ಲಿಯೂ ಕಂಡುಬರುವುದಿಲ್ಲ ಒಟ್ಟನಲ್ಲಿ—ಋಕ್ ಶಬ್ದವನ್ನು ಎಂದರೆ ಋಕ್ಕಿನ ಅಕ್ಷರ ಪದಾದಿಗಳನ್ನು ಸೂಚಿಸುವ **ಸಾ** ಎಂಬ ಶಬ್ದವೂ, ಸಾಮಮಂತ್ರವನ್ನು ಸೂಚಿಸುವ **ಅಮ** ಶಬ್ದವೂ ಸೇರಿ ಸಾಮ ಎಂಬ ಶಬ್ದವಾಗಿರುವುದು. **ಈ** ಸಾಮಮಂತ್ರದಲ್ಲಿ ಋಕ್ ಮತ್ತು ಸಾಮವೆಂಬ ಎರಡು ವಿಧಮಂತ್ರಗಳೂ ಸೇರಿರುವವು ಎಂದು ಮುಖ್ಯಾಭಿಪ್ರಾಯವು **ಈ** ವಿಷಯವನ್ನು ತಿಳಿದಿರುವ ಪುರುಷನು ಪೂಜಾರ್ಹನಾಗುವನು.

ಯೋ ವೈ ಭವತಿ ಯಃ ಶ್ರೇಷ್ಠತಾಮಶ್ನುತೇ ಸ ಸಾಮನ್ ಭವತ್ಯಸಾಮನ್ಯ ಇತಿ ಹಿ ನಿಂದಂತಿ ।

ಲೋಕವ್ಯವಹಾರದಲ್ಲಿಯೂ ಕೂಡ ಯಾವ ಪುರುಷನು ಐಶ್ವರ್ಯಪ್ರಾಪ್ತಿಯನ್ನಾಗಲಿ, ವಿದ್ಯಾಪ್ರಶಸ್ತಿಯನ್ನಾಗಲಿ ಸಂಪಾದಿಸುವನೋ ಅವನನ್ನು **ಸಾಮನ್** ಎಂದು ಕರೆಯುವರು ಎಂದರೆ ಅವನು ತನ್ನಂತೆಯೇ ಇತರರಲ್ಲಿಯೂ ಸರ್ವಸಮದೃಷ್ಟಿಯಿಂದ ವರ್ತಿಸುವವನೆಂದು ಹೇಳುವರು ಹಾಗಿಲ್ಲದಿದ್ದರೆ, ಇತರರ ವಿಷಯದಲ್ಲಿ ಪಕ್ಷಪಾತಬುದ್ಧಿಯನ್ನು ಪ್ರದರ್ಶಿಸುವನಾದರೆ ಅವನನ್ನು **ಅಸಾಮಾನ್ಯ** ಎಂದು ನಿಂದಿಸುವರು. ಆದರಂತೆಯೇ ಇಲ್ಲಿಯೂ ಗಾನರೂಪವಾಗಿರುವ ಸಾಮಮಂತ್ರವು ಒಂದಾಗಿರುವುದರಿಂದ ಇದಕ್ಕೆ ಪ್ರಾಶಸ್ತ್ಯವಿದೆಯೆಂದು ಹೇಳುವರು

ತೇ ವೈ ಪಂಚಾನ್ಯದ್ಧೃತ್ವಾ ಪಂಚಾನ್ಯದ್ಧೃತ್ವಾ ಕಲ್ಪೇತಾಮಾಹಾವಶ್ಚ ಹಿಂಕಾರಶ್ಚ ಪ್ರಸ್ತಾವಶ್ಚ ಪ್ರಥಮಾ ಚ ಋಗುದ್ಗೀಥಶ್ಚ ಮಧ್ಯಮಾ ಚ ಪ್ರತಿಹಾರಶ್ಚೋತ್ತಮಾ ಚ ನಿಧನಂ ಚ ವಷಟ್ಕಾರಶ್ಚ ।

ಯಜ್ಞಕರ್ಮಗಳ ಅನುಕೂಲಕ್ಕಾಗಿ ಋಕ್ ಮತ್ತು ಸಾಮ ಎಂಬ ಎರಡು ವಿಧ ಮಂತ್ರಗಳಲ್ಲಿಯೂ ಐದುವಿಧ ಪ್ರಭೇದಗಳನ್ನು ಕಲ್ಪಿಸಲಾಗಿದೆ ಎಂದರೆ ಋಗ್ವೇದಸಂಬಂಧವಾದ ಶಸ್ತ್ರಮಂತ್ರಗಳಲ್ಲಿ (೧) **ಆಹಾವಃ**, (೨-೫) ಸ್ತೋತ್ರೀಯ ಋತೃಚ ಎಂದರೆ ಮೊದಲನೆಯ ಋಕ್ಕು, ಮಧ್ಯದ ಋಕ್ಕು, ಕೊನೆಯ ಋಕ್ಕು ಎಂದು ಮೂರು ಋಕ್ಕುಗಳು (೫) ಯಾಜ್ಯಾಮಂತ್ರದ ಕೊನೆಯಲ್ಲಿ ಪರಿಸುವ ವಷಟ್ಕಾರವು ಎಂದು ಐದು ಅವಯವಗಳು, **ಈ** ಐದೂ ಶಸ್ತ್ರಮಂತ್ರಗಳು ಮತ್ತು ಋಗ್ವೇದಕ್ಕೆ ಸಂಬಂಧಪಟ್ಟಿರುವವು ಸಾಮಮಂತ್ರದಲ್ಲಿ (೧) **ಹಿಂ** ಎಂಬ ಹಿಂಕಾರ (೨) **ಪ್ರಸ್ತಾವಃ** (೩) **ಉದ್ಗೀಥಃ** (೪) **ಪ್ರತಿಹಾರಃ** (೫) **ನಿಧನಂ** ಎಂದು ಐದು ಪ್ರಭೇದ ಅಥವಾ ಅವಯವಗಳಿರುವವು. **ಈ** ಐದೂ ಸ್ತೋತ್ರರೂಪವಾದ ಸಾಮದ ಅವಯವಗಳು ಇವುಗಳ ವಿವರಣೆಯು **ಈ** ರೀತಿ ಇರುವುದು.

1. **ಶಸ್ತ್ರಮಂತ್ರಗಳ ೫ ಅವಯವಗಳು.—**

೧. **ಆಹಾವಃ । ಶೋಂ ೩ ಸಾವೋಂ ೩** ಎಂದು ಮಂತ್ರದ ಆದಿಯಲ್ಲಿ ಪಠಿಸುವ ಮಂತ್ರವು

೨. ತೃಚವೆಂಬ ಮೂರು ಋಕ್ಕುಗಳಲ್ಲಿ ಮೊದಲನೆಯ ಋಕ್ಕು

೩. ,, ,, ,, ಎರಡನೆಯ ,,

೪. ,, ,, ,, ಮೂರನೆಯ ,,

೫ ಯಾಜ್ಯಾಮಂತ್ರದ ಕೊನೆಯಲ್ಲಿ ಸೇರಿಸಿ ಪಠಿಸುವ **ವೌಷಟ್** ಎಂಬ ವಷಟ್ಕಾರವು.

ಈ ಐದೂ ಋಗ್ವೇದಮಂತ್ರಗಳನ್ನೊಳಗೊಂಡ ಶಸ್ತ್ರಮಂತ್ರಗಳು ಇವುಗಳನ್ನು ಹೋತೃವರ್ಗದ ಋತ್ವಿಜರು ಪಠಿಸುವರು.

2 ಇದರಂತೆ ಸಾಮಮಂತ್ರದ ೫ ಅವಯವಗಳು—

೧ **ಹಿಂ** ಎಂಬ **ಹಿಂಕಾರ.** ಇದನ್ನು ಉದ್ಗಾತೃನೆಂಬ ಋತ್ವಿಜನು ಸಾಮಗಾನದ ಪ್ರಾರಂಭದಲ್ಲಿ ಪಠಿಸುವನು

೨ **ಪ್ರಸ್ತಾವಃ** । ಇದನ್ನು ಪ್ರಸ್ತೋತೃನೆಂಬ ಋತ್ವಿಜನು ಗಾನಮಾಡುವನು.

೩ **ಉದ್ಗೀಥಃ** । ಇದನ್ನು ಉದ್ಗಾತೃನೆಂಬ ಋತ್ವಿಜನು ಗಾನಮಾಡುವನು

೪ **ಪ್ರತಿಹಾರಃ** । ಪ್ರತಿಹರ್ತೃವೆಂಬ ಋತ್ವಿಜನು ಇದನ್ನು ಗಾನಮಾಡುವನು

೫ **ನಿಧನಂ** । ಸಾಮಗಾನದ ಕೊನೆಯಲ್ಲಿ ಉದ್ಗಾತೃವರ್ಗದ ಋತ್ವಿಜರೆಲ್ಲರೂ ಸೇರಿ ಒಟ್ಟಾಗಿ ಇದನ್ನು ಗಾನಮಾಡುವರು.

ಮೇಲೆ ಸೂಚಿಸಿರುವಂತೆ ಶಸ್ತ್ರಮಂತ್ರದ ಐದು ಅವಯವಗಳಿಗೂ ಸಾಮಮಂತ್ರದ ಐದು ಅವಯವಗಳಿಗೂ ಸಾದೃಶ್ಯ ವಿರುವುದು ಕಂಡುಬರುವುದು ಈ ವಿಧವಾದ ಸಾದೃಶ್ಯವಿರುವುದರಿಂದ ಈ ಸಿಷ್ಯೇವಲ್ಯಶಸ್ತ್ರವು ಪ್ರಶಸ್ತವಾದುದೆಂದು ಹೇಳಲ್ಪಡುವುದು. ತೈತ್ತಿರೀಯಸಂಹಿತೆಯಲ್ಲಿ ಸಾಮಮಂತ್ರದ ಐದುವಿಧ ಅವಯವ ವಿಭಾಗಗಳನ್ನು ಅವುಗಳ ಅಭಿಮಾನಿದೇವತೆಗಳನ್ನು ಹೇಳಿದೆ—

ವಾಯುರ್ಹಿಂಕರ್ತಾಗ್ನಿಃ ಪ್ರಸ್ತೋತಾ ಪ್ರಜಾಪತಿಃ ಸಾಮ ಬೃಹಸ್ಪತಿರುದ್ಗಾತಾ ವಿಶ್ವೇ ದೇವಾ ಉಪಗಾತಾರೋ ಮರುತಃ ಪ್ರತಿಹರ್ತಾರ ಇಂದ್ರೋ ನಿಧನಂ ತೇ ದೇವಾಃ ।

(ತೈ ಸಂ. ೩-೩-೨-೧)

ಎಂದರೆ ಸಾಮಗಾನದ ಅವಯವಗಳಾದ ಹಿಂಕಾರಕ್ಕೆ ವಾಯುವೂ, ಪ್ರಸ್ತಾವಕ್ಕೆ ಪ್ರಜಾಪತಿಯೂ, ಉದ್ಗೀಥಕ್ಕೆ ಬೃಹಸ್ಪತಿಯೂ, (ವಿಶ್ವೇದೇವತೆಗಳು ಉಪಗಾತೃಗಳೆಂದು ಇಲ್ಲಿ ವಿಶೇಷವಿಷಯವಿದೆ) ಪ್ರತಿಹಾರಕ್ಕೆ ಮರುದ್ದೇವತೆಗಳೂ, ನಿಧನಕ್ಕೆ ಇಂದ್ರನೂ ಅಭಿಮಾನಿದೇವತೆಗಳು. ಇಲ್ಲಿ ವಿಶ್ವೇದೇವತೆಗಳೆಂದರೆ ಎಲ್ಲಾ ದೇವತೆಗಳು ಎಂದರ್ಥ. ಉಪಗಾನವೆಂದರೆ ಎಲ್ಲರೂ ಸೇರಿ ಒಟ್ಟಿಗೆ ಗಾನಮಾಡುವುದು. ಗಾನಾಂತ್ಯದಲ್ಲಿ ಮೊದಲನೆಯ ಹಿಂಕಾರವನ್ನೂ ಕೊನೆಯ

ನಿಧನವನ್ನೂ ಎಲ್ಲ ದೇವತೆಗಳೂ ಸೇರಿ ಒಟ್ಟಿಗೆ ಗಾನಮಾಡುವರು. ಆದುದರಿಂದ ಇಲ್ಲಿ **ವಿಶ್ವೇ ದೇವಾ ಉಪಗಾತಾರಃ** ಎಂಬ ವಿವರಣೆ ಇವೆ. ಈ ಐದು ವಿಧವಾದ ಅವಯವಗಳಿಂದ ಕೂಡಿರುವ ಒಟ್ಟು ಸಾಮಮಂತ್ರಕ್ಕೆ ಸರ್ವದೇವತಾ ಜನಕನಾದ ಪ್ರಜಾಪತಿಯು ಅಭಿಮಾನಿದೇವತೆಯು ಎಂದು ಇಲ್ಲಿ ಹೇಳಿದೆ

ತೇ ಯತ್ಪಂಚಾನ್ಯದ್ಭೂತ್ವಾ ಸಂಚಾನ್ಯದ್ಭೂತ್ವಾ ಕಲ್ಪೇತಾಂ ತಸ್ಮಾದಾಹುಃ ಪಾಂಕ್ತೋ ಯಜ್ಞಃ ಪಾಂಕ್ತಾಃ ಪಶವಃ ।

ಸಾಮ ಮತ್ತು ಶಸ್ತ್ರಮಂತ್ರಗಳ ಪಂಚಾವಯವವಿಭಾಗವನ್ನು ಪ್ರಕಾರಾಂತರದಿಂದ ವರ್ಣಿಸುವರು ಸಾಮಮಂತ್ರದಲ್ಲಿಯೂ, ಶಸ್ತ್ರಮಂತ್ರದಲ್ಲಿಯೂ ಮೇಲೆ ಹೇಳಿದಂತೆ ಐದೈದು ಅವಯವವಿಭಾಗಗಳಿರುವುದರಿಂದಲೂ, ಯಜ್ಞದಲ್ಲಿ ಸಾಮಶಸ್ತ್ರಮಂತ್ರಗಳಿಗೆ ಬಹು ಮುಖ್ಯನಾದ ಸ್ಥಾನವಿರುವುದರಿಂದಲೂ, ಯಜ್ಞದಲ್ಲಿಯೂ ಐದು ಐದು ಅವಯವ ವಿಭಾಗವಿದ್ದಂತಾಯಿತು ಆದ್ದರಿಂದಲೇ ಪಂಕ್ತಿಶ್ಛಂದಸ್ಸಿನಲ್ಲಿ ಐದು ಪಾದಗಳಿರುವಂತೆ ಯಜ್ಞವೂ ಸಹ ಐದು ವಿಭಾಗಗಳನ್ನೊಳಗೊಂಡಿದೆ ಆದ್ದರಿಂದ **ಪಾಂಕ್ತೋ ಯಜ್ಞಃ** ಎಂದು ಹೇಳುವರೆಂದೂ, ಪಶುಗಳಿಗೂ ಸಹ ನಾಲ್ಕು ಪಾದಗಳು, ಒಂದು ಮುಖ ಒಟ್ಟು ಐದು ಅವಯವಗಳಿರುವುವೆಂದೂ ಪಂಚಾವಯವವಿಷಯದಲ್ಲಿ ಯಜ್ಞಕ್ಕೆ ಪಶುಸಾಮ್ಯವನ್ನು ಹೇಳುವರು

ಯದು ವಿರಾಜಂ ದಶಿನೀಮಭಿಸಮಪದ್ಯೇತಾಂ ತಸ್ಮಾದಾಹುರ್ವಿರಾಜಿ ಯಜ್ಞೋ ದಶಿನ್ಯಾಂ ಪ್ರತಿಷ್ಠಿತ ಇತಿ ।

ಯಜ್ಞದ ವಿಷಯದಲ್ಲಿ ಮತ್ತೊಂದು ದೃಷ್ಟಾಂತವನ್ನು ಹೇಳಿರುವರು. ವಿರಾಟ್ಛಂದಸ್ಸಿನ ಪಾದದಲ್ಲಿ ಹತ್ತು ಅಕ್ಷರಗಳಿರುವವು (ಹತ್ತೇ ಅಕ್ಷರಗಳಿರುವುದು ಸರಿಯಲ್ಲ, ವ್ಯತ್ಯಾಸವಿರುವುದು) ಸಾಮಮಂತ್ರದ ಐದು ಅವಯವಗಳೂ ಶಸ್ತ್ರ ಮಂತ್ರದ ಐದು ಅವಯವಗಳೂ ಸೇರಿ ಹತ್ತು ಅವಯವಗಳಾಗುವವು ಈ ಹತ್ತು ಅವಯವಗಳು ವಿರಾಟ್ಛಂದಸ್ಸಿನ ಹತ್ತು ಅಕ್ಷರಗಳಿಗೆ ಸದೃಶವಾಗಿರುವವು ಈ ಎರಡರಲ್ಲಿಯೂ ಹತ್ತು ವಿಭಾಗಗಳಿರುವುದರಿಂದ ವಿರಾಟ್ಛಂದಸ್ಸು ಹತ್ತು ಅಕ್ಷರಗಳಿಂದ ಕೂಡಿ ಪ್ರಕಾಶಿಸುವಂತೆ ಯಜ್ಞವೂ ಸಾಮ ಮತ್ತು ಶಸ್ತ್ರಮಂತ್ರಗಳಲ್ಲಿರುವ ಹತ್ತು ಅವಯವ ಭಾಗಗಳಿಂದ ಕೂಡಿ ಪ್ರಕಾಶಿಸುತ್ತಿರುವುದೆಂದು ಹೇಳುವರು

ಆತ್ಮಾ ವೈ ಸ್ತೋತ್ರಿಯಃ ಪ್ರಜಾನುರೂಪಃ ಪತ್ನೀ ಧಾಯ್ಯಾ ಪಶವಃ ಪ್ರಗಾಥೋ ಗೃಹಾಃ ಸೂಕ್ತಂ । ಸ ವಾ ಅಸ್ಮಿಂಶ್ಚ ಲೋಕೇ೨ಮುಷ್ಮಿಂಶ್ಚ ಪ್ರಜಯಾ ಚ ಪಶುಭಿಶ್ಚ ಗೃಹೇಷು ವಸತಿ ಯ ಏವಂ ವೇದ ।

(ಐ ಬ್ರಾ ೧೨ ೨೩)

ಸಾಮಮಂತ್ರವಲ್ಲಿಯೂ, ಶಸ್ತ್ರಮಂತ್ರದಲ್ಲಿಯೂ ಐದೈದು ವಿಭಾಗಗಳಿರುವಂತೆ ನಿಷ್ಕೇವಲ್ಯಶಸ್ತ್ರದಲ್ಲಿಯೂ ಐದು ವಿಭಾಗಗಳಿರುವವು ಸ್ತೋತ್ರಿಯ, ಆನುರೂಪ, ಧಾಯ್ಯಾ, ಪ್ರಗಾಥ, ನಿವಿದ್ಧಾನೀಯಸೂಕ್ತಂ ಎಂದು ಐದು ವಿಭಾಗ ಗಳು. ಇವುಗಳಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳ ಪ್ರಾರಂಭದಲ್ಲಿ ಸಾಮಗಾನಮಾಡುವವರು ಗಾನಮಾಡುವ ತೃಚಕ್ಕೆ (ಮೂರು ಋಕ್ಕುಗಳಿಗೆ) **ಸ್ತೋತ್ರಿಯ** ಅಥವಾ ಸ್ತೋತ್ರಿಯಸ್ತೃಚವೆಂದು ಹೆಸರು ಈ ಸ್ತೋತ್ರಿಯಸ್ತೃಚವನ್ನನುಸರಿಸಿ ಅದಕ್ಕೆ ಸದೃಶವಾದ ಬೇರೆ ತೃಚವನ್ನು ಗಾನಮಾಡುವರು ಎರಡನೆಯ ಸಲ ಗಾನಮಾಡುವ ಈ ತೃಚಕ್ಕೆ **ಆನುರೂಪ**ವೆಂದು ಹೆಸರು. ಶಸ್ತ್ರಮಂತ್ರಗಳ ಮಧ್ಯದಲ್ಲಿ ಸೇರಿಸುವ ನುಂತ್ರಕ್ಕೆ **ಧಾಯ್ಯಾ** ಎಂದು ಹೆಸರು. ರಥಂತರ

ಮೊದಲಾದ ಮುಖ್ಯ ಸಾಮಮಂತ್ರಕ್ಕೆ **ಪ್ರಗಾಥ**ವೆಂದು ಹೆಸರು. ದೇವತೆಗಳ ಗುಣಗಳನ್ನು ವರ್ಣಿಸುವ ಸೂಕ್ತಕ್ಕೆ **ನಿವಿತ್**ಸೂಕ್ತವೆಂದು ಹೆಸರು. ಈ ಐದು ಮಂತ್ರಗಳಿಗೂ ಇಲ್ಲಿ ಬೇರೆ ಬೇರೆ ಸ್ಥಾನಗಳನ್ನು ಕಲ್ಪಿಸಿ ಗೃಹಸ್ಥಪುರುಷನ ದೃಷ್ಟಾಂತದಿಂದ ವರ್ಣಿಸಲಾಗಿದೆ. ಹೇಗೆಂದರೆ—ಸ್ತೋತ್ರಿಯವೇ ಗೃಹಸ್ಥನ ಶರೀರದಲ್ಲಿರುವ ಆತ್ಮವು, ಅನುರೂಪವೇ ಪುತ್ರನು, ಧಾಯ್ಯಾಮಂತ್ರವೇ ಪತ್ನಿಯು, ಪ್ರಗಾಥವೇ ಪಶುವು (ಗೋವು), ನಿವಿದ್ಧಾನೀಯಸೂಕ್ತವೇ ಗೃಹವು ಎಂದು ಹೇಳುವರು.

ನಿಷ್ಕೇವಲ್ಯಶಸ್ತ್ರದ ವಿಭಾಗಗಳಾದ (1) ಸ್ತೋತ್ರಿಯ (2) ಅನುರೂಪ (3) ಧಾಯ್ಯಾ (4) ಪ್ರಗಾಥ (5) ನಿವಿದ್ಧಾನೀಯ ಸೂಕ್ತ ಎಂಬ ಐದು ವಿಭಾಗಗಳನ್ನು ಪರಿಸುವ ಮಂತ್ರಗಳನ್ನು ಇಲ್ಲಿ ವಿವರಿಸಲಾಗಿದೆ—

(1) **ಸ್ತೋತ್ರೀಯ ಮಂತ್ರಗಳು—**

ಅಭಿ ತ್ವಾ ಶೂರ ನೋನುಮೋ೭ದುಗ್ಧಾ ಇವ ಧೇನವಃ ।
ಈಶಾನಮಸ್ಯ ಜಗತಃ ಸ್ವರ್ದೃಶಮೀಶಾನಮಿಂದ್ರ ತಸ್ಥುಷಃ ॥

(ಋ. ಸಂ. ೭-೩೨-೨೨, ಸಾಮ. ೨೫೩, ೬೮೦, ಆಥರ್ವ ೨೦-೧೨೧-೧; ವಾಜ ಸಂ ೨೭-೩೫, ತೈ ಸಂ. ೩-೪-೧೪-೨).

ನ ತ್ವಾವಾँ ಅನ್ಯೋ ದಿವ್ಯೋ ನ ಪಾರ್ಥಿವೋ ನ ಜಾತೋ ನ ಜನಿಷ್ಯತೇ ।
ಅಶ್ವಾಯಂತೋ ಮಘವನ್ನಿಂದ್ರ ವಾಜಿನೋ ಗವ್ಯಂತಸ್ತ್ವಾ ಹವಾಮಹೇ ॥

(ಋ. ಸಂ ೭-೩೨-೨೩, ಸಾಮ ೬೮೧, ಆಥರ್ವ ೨೦-೧೨೧-೨, ವಾಜ ಸಂ. ೨೭-೩೬)

ಈ ಎರಡು ಋಕ್ಕುಗಳನ್ನು ಹೋತೃವೂ, ಸಾಮಗಾನಮಾಡುವವರೂ ಮೂರು ಋಕ್ಕುಗಳನ್ನಾಗಿ ಮಾಡಿ ಪರಿಸುವರು. ಇದೇ ಪ್ರಾರಂಭದಲ್ಲಿ ಪರಿಸುವ ಸ್ತೋತ್ರಿಯಮಂತ್ರವು. ಇದನ್ನು ರಥಂತರಸಾಮವೆಂದೂ ಹೇಳುವರು. ಈ ಎರಡು ಋಕ್ಕುಗಳನ್ನು ಮೂರು ಋಕ್ಕುಗಳನ್ನಾಗಿಯೂ ಐದು ವಿಭಾಗಗಳನ್ನಾಗಿಯೂ ಹೇಗೆ ಗಾನಮಾಡುವರು ಎಂಬುದನ್ನು ಇಲ್ಲಿ ವಿವರಿಸಿದೇವೆ—

೧ ನೇ ಋಕ್ಕು—

(೧) **ಪ್ರಸ್ತಾವ—ಹುಂ । ಅಭಿ ತ್ವಾ ಶೂರನೋನುಮೋ ವಾ ॥**

(೨) **ಉದ್ಗೀಥ—ಓಮಾದುಗ್ಧಾ ಇವ ಧೇನವ ಈಶಾನಮಸ್ಯ ಜಗತಃ ಸುವಾ ಈಶಾಂ ॥**

(೩) **ಪ್ರತಿಹಾರ—ಅ ಈಶಾನಮಾ ಇಂದ್ರಾ ॥**

(೪) **ಉಪದ್ರವ—ಸುಸ್ಥುಷಾ ಓವಾ ಹಾ ಉವಾ ॥**

(೫) **ನಿಧನಂ—ಅಸ್ ॥**

೨ನೇ ಋಕ್ಕು –

(೧) ಪ್ರಸ್ತಾವ—ಇಶೋ ವಾ ।

(೨) ಉದ್ಗೀಥ— ಓನಾಮಿಂದ್ರ ಸುಸ್ತಶೋನತ್ವಾವಾಁ ಅನ್ಯೋ ದಿವಿಯೋ ನ ಪಾರ್ಥಿವಾಃ ।

(೩) ಪ್ರತಿಹಾರ—ನ ಜಾತೋ ನಾಜಾ ।

(೪) ಉಪದ್ರವ—ನಾಇಷ್ಯಾತಾ ಓವಾ ಹಾ ಉವಾ ।

(೫) ನಿಧನಂ—ಅಸ್ ॥

೩ನೇ ಋಕ್ಕು—

(೧) ಪ್ರಸ್ತಾವ—ನಜೋವಾ ।

(೨) ಉದ್ಗೀಥ—ಓತೋನ ಜನಿಷ್ಯತೇ ಅಶ್ವಾಯಂತೋ ಮಘವನ್ನಿಂದ್ರವಾಜಿನಾಃ ।

(೩) ಪ್ರತಿಹಾರ—ಗವ್ಯಂತಸ್ತ್ವಾಹಾ ।

(೪) ಉಪದ್ರವ—ವಾಮಾಹಾ ಓವಾ ಹಾ ಉವಾ ।

(೫) ನಿಧನಂ—ಅಸ್ ॥

(2) **ಅನುರೂಪೆ** । ಇದರಲ್ಲಿಯೂ ಎರಡೇ ಋಕ್ಕುಗಳಿರುವವು. ಇವನ್ನು ಮೂರು ಋಕ್ಕುಗಳನ್ನಾಗಿ ಪರಿಸುವರು. ಈ ಅನುರೂಪಮಂತ್ರವೂ ಸಹ ಸ್ತೋತ್ರಿಯ ಮಂತ್ರದ ಪ್ರಾರಂಭದಲ್ಲಿರುವ **ಅಭಿತ್ವಾ** ಎಂಬ ಶಬ್ದಗಳಿಂದಲೇ ಆರಂಭವಾಗಬೇಕು—

ಅಭಿ ತ್ವಾ ಪೂರ್ವಪೀತಯೆ ಇಂದ್ರ ಸ್ತೋಮೇಭಿರಾಯವಃ ।
ಸಮಿಾಚೀನಾಸ ಋಭವಃ ಸಮಸ್ವರನ್ ರುದ್ರಾ ಗೃಣಂತ ಪೂರ್ವ್ಯಂ ॥
(ಋ. ಸಂ. ೮-೩-೭, ಸಾಮ. ೨೫೬, ೧೫೭೩, ಅಥರ್ವ ೨೦-೯೯-೧)

ಅಸ್ಯೇದಿಂದ್ರೋ ವಾವೃಧೇ ವೃಷ್ಣ್ಯಂ ಶವೋ ಮದೇ ಸುತಸ್ಯ ವಿಷ್ಣವಿ ।
ಅದ್ಯಾ ತಮಸ್ಯ ಮಹಿಮಾನಮಾಯವೋಽನು ಷ್ಟುವಂತಿ ಪೂರ್ವಥಾ ॥
(ಋ ಸಂ ೮-೩-೮, ಸಾಮ ೧೫೭೪, ಅಥರ್ವ ೨೦-೯೯-೨, ವಾಜ ಸಂ ೩೩-೯೭)

(3) ಧಾಯ್ಯಾ ಮಂತ್ರವು—

ಯದ್ವಾವಾನ ಪುರುತಮಂ ಪುರಾಷಾಳಾ ವೃತ್ರಹೇಂದ್ರೋ ನಾಮಾನ್ಯಪ್ರಾಃ ।
ಅಚೇತಿ ಪ್ರಾಸಹಸ್ಪತಿಸ್ತುವಿಷ್ಮಾನ್ ಯದೀಮುಶ್ಮಸಿ ಕರ್ತವೇ ಕರತ್ತತ್ ॥
(ಋ ಸಂ. ೧೦-೨೪ ೬)

(4) ಪ್ರಗಾಥ ಅಥವಾ ಸಾಮಪ್ರಗಾಥ—

ಪಿಬಾ ಸುತಸ್ಯ ರಸಿನೋ ಮತ್ಸ್ವಾ ನ ಇಂದ್ರ ಗೋಮತಃ ।
ಆಪಿರ್ನೋ ಬೋಧಿ ಸಧಮಾದ್ಯೋ ವೃಧೇ ಽಸಾವಾಁ ಅನಂತು ತೇ ಧಿಯಃ ॥
(ಋ. ಸಂ ೮-೩-೧, ಸಾಮ. ೨೩೯, ೧೪೨೧).

(5) निवित् सूक्त —

इन्द्रस्य नु वीर्याणि प्र वोचं यानि चकार प्रथमानि वज्री ।
अहन्नहिमन्वपस्ततर्द प्र वक्षणा अभिनत्पर्वतानाम् ॥ १ ॥

अहन्नहिं पर्वतेशिश्रियाणं त्वष्टास्मै वज्रं स्वर्यं ततक्ष ।
वाश्रा इव धेनवः स्यन्दमाना अंजः समुद्रमव जग्मुरापः ॥ २ ॥

वृषायमाणोऽवृणीत सोमं त्रिकद्रुकेष्वपिबत्सुतस्य ।
आ सायकं मघवादत्त वज्रमहन्नेनं प्रथमजामहीनाम् ॥ ३ ॥

यदिन्द्राहन्प्रथमजामहीनामान्मायिनाममिनाः प्रोत मायाः ।
आत्सूर्यं जनयन्द्यामुषासं तादित्ना शत्रुं न किला विवित्से ॥ ४ ॥

अहन्व्रत्रं वृत्रतरं व्यंसमिन्द्रो वज्रेण महता वधेन ।
स्कन्धांसीव कुलिशेना विवृक्णाहिः शयत उपपृक् पृथिव्याः ॥ ५ ॥

अयोद्धेव दुर्मद आ हि जुह्वे महावीरं तुविबाधमृजीषम् ।
नातारीदस्य समृतिं वधानां सं रुजानाः पिपिष इन्द्रशत्रुः ॥ ६ ॥

अपादहस्तो अपृतन्यदिन्द्रमास्य वज्रमधि सानौ जघान ।
वृष्णो वध्रिः प्रतिमानं बुभूषन् पुरुत्रा वृत्रो अशयद्व्यस्तः ॥ ७ ॥

नदं न भिन्नममुया शयानं मनोरुहाणा अति यन्त्यापः ।
याश्छिद्यन्त्रो महिना पर्यतिष्ठत्तासामहिः पत्सुतःशीर्बभूव ॥ ८ ॥

इन्द्रो देवः सोमं पिबतु । एकजानानां वीरतमः । भूरिदानां तवस्तमः । हर्यो स्थाता । पृश्नेः स्त्रेता । वज्रस्य भर्ता । पुराम् भेत्ता । पुरां दर्मा । अपां स्रष्टा । अपां नेता । सप्तीनां नेता । निजघ्निर्दूरेश्रवाः । उपमातिकृद्दंसनावान् । इहोशन देवो बभूवान् । इन्द्रो देव इह श्रवदिह सोमस्य पिबतु । प्रेमां देवो देवहूतिमवतु देव्या धिया । प्रेदं ब्रह्म प्रेदं क्षत्रं । प्रेदं सुन्वन्तं यजमानं अवतु । चित्रश्चित्राभिरूतिभिः । श्रवद्प्रह्माण्यवसागमत् ॥

नीचावया अभवद्वृत्रपुत्रेन्द्रो अस्या अव वधर्जभार ।
उत्तरा सूरधरः पुत्र आसीद्दानुः शये सहवत्सा न धेनुः ॥ ९ ॥

अतिष्ठन्तीनामनिवेशनानां काष्ठानां मध्ये निहितं शरीरम् ।
वृत्रस्य निण्यं वि चरन्त्यापो दीर्घं तमु आशयदिन्द्रशत्रुः ॥ १० ॥

दासपत्नीरहिगोपा अतिष्ठन्निरुद्धा आपः पणिनेव गावः ।
अपां बिलमपिहितं यदासीद्वृत्रेण जघ्नुषा अप तद्ववार ॥ ८८ ॥

अश्व्यो वारो अभवस्तदिन्द्र सृके यत्त्वा प्रत्यहन् देव एकः ।
अजयो गा अजयः शूर सोममवास्रजः सर्तवे सप्त सिन्धून् ॥ ८९ ॥

नास्मै विद्युन्न तन्यतुः सिषेध न यां मिहमकिरद्ध्रादुनिं च ।
इन्द्रश्च यद्युयुधाते अहिश्चोतापरीभ्यो मघवा वि जिग्ये ॥ ९० ॥

अहेर्यातारं कमपश्य इन्द्र हृदि यत्ते जघ्नुषो भीरगच्छत् ।
नव च यन्नवतिं च स्रवन्तीः श्येनो न भीतो अतरो रजांसि ॥ ९१ ॥

इन्द्रो यातोऽवसितस्य राजा शमस्य च शृंगिणो वज्रबाहुः ।
सेदु राजा क्षयति चर्षणीनामरान्न नेमिः परि ता बभूव ॥ ९२ ॥

(ऋ. सं. ८-४१-८ रिंद ९२)

ಈ ವಿಧವಾದ ಸಾಮಶಸ್ತ್ರಮಂತ್ರಗಳ ಅವಯವ ವಿಭಾಗಕ್ರಮವನ್ನು ತಿಳಿದಿರುವ ಪುರುಷನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಪಶುಪುತ್ರಾದಿಗಳಿಂದ ಕೂಡಿ ಉತ್ತಮವಾದ ಗೃಹದಲ್ಲಿ ವಾಸಮಾಡುವನು

ನಿಷ್ಕೇವಲ್ಯಶಸ್ತ್ರದ ವಿಭಾಗಗಳು ಮತ್ತು ಸ್ವರವಿಶೇಷಗಳು

(ನಿಷ್ಕೇವಲ್ಯಶಸ್ತ್ರದ ಸ್ತೋತ್ರಿಯ, ಅನುರೂಪ, ಧಾಯ್ಯ, ಸಾಮಪ್ರಗಾಥ, ಮತ್ತು ನವಿದ್ಧಾನೀಯಸೂಕ್ತಗಳು)

ಹಿಂದೆ ನಿಷ್ಕೇವಲ್ಯಶಸ್ತ್ರದಲ್ಲಿ ಐದು ವಿಭಾಗಗಳಿರುವವೆಂದು ಹೇಳಿರುವುದಷ್ಟೆ ಅವುಗಳಲ್ಲಿ ಪ್ರಥಮ ಭಾಗವಾದ ಸ್ತೋತ್ರಿಯವನ್ನು ವಿವರಿಸುವರು

स्तोत्रियꣳ शंसत्यात्मा वै स्तोत्रियः शं मध्यमयो वाचा शंसत्यात्मानमेव तत्संस्कुरुते ।

ಹಿಂದೆ ಹೇಳಿದಂತೆ ಸ್ತೋತ್ರಿಯ ಮಂತ್ರಗಳಾದ **अभि त्वा शूर नोनु मः** ಎಂಬ ಮಂತ್ರಗಳನ್ನು ನಿಷ್ಕೇವಲ ಶಸ್ತ್ರದ ಪ್ರಾರಂಭದಲ್ಲಿ ಸಾಮಗಾನಮಾಡುವವರು ಪರಿಸಿ ಗಾನಮಾಡುವರು. ಈ ಮಂತ್ರಕ್ಕೆ ಗೃಹಸ್ಥನ ಸ್ವರೂಪವಿರುವುದೆಂದು ಹಿಂದೆಯೇ ಹೇಳಿದೆ ಈ ಮಂತ್ರವನ್ನು ಅತಿಘಟ್ಟಿಯಾಗಿಯೂ ಹೇಳಬಾರದು, ಅತಿ ಮೆಲ್ಲಗೂ ಹೇಳಬಾರದು. ಈ ಎರಡಕ್ಕೂ ಮಧ್ಯಸ್ಥವಾದ ಸಾಧಾರಣಧ್ವನಿಯಿಂದ ಪರಿಸಬೇಕು. ಎಂದರೆ ಯಜ್ಞಭೂಮಿಯಲ್ಲಿರುವವರಿಗೆ ಕೇಳಿಸುವಂತಿರಬೇಕು. ಅದರಿಂದಾಚೆ ಇರುವವರಿಗೆ ಕೇಳಿಸಬಾರದು. ಇಂತಹ ಧ್ವನಿಯಿಂದ ಪರಿಸಬೇಕು. ಈ ಮಂತ್ರವು ಯಜಮಾನನ ಆತ್ಮಸ್ವರೂಪವಾಗಿರುವುದು. ಈ ಮಂತ್ರವನ್ನು ಈ ರೀತಿ ಪರಿಸುವುದರಿಂದ ಯಜಮಾನನು ತನ್ನ ಆತ್ಮಶುದ್ಧಿಯನ್ನು ಮಾಡಿಕೊಂಡಂತಾಗುವುದು.

अनुरूपꣳ शंसति प्रजा वा अनुरूपः स उच्चैःस्तरामिवानुरूपꣳ शंस्तव्यः प्रजामेव तच्छ्रेयसीमात्मनः कुरुते ।

ಸ್ತೋತ್ರಿಯಮಂತ್ರಕ್ಕೆ ಸದೃಶವಾದ ಮಂತ್ರಕ್ಕೆ ಅನುರೂಪವೆಂದು ಹೆಸರು. ಇಲ್ಲಿ ಅನುರೂಪಮಂತ್ರವೆಂದರೆ— **ಅಭಿತ್ವಾ ಪೂರ್ವಪೀತಯೇ** ಮತ್ತು **ಇಂದ್ರ ಸ್ತೋಮೇಭಿರಾಯವಃ** ಎಂಬ ಋಕ್ಕುಗಳು. ಇವೇ ಪ್ರಗಾಥ ಮಂತ್ರವು ಈ ಎರಡು ಋಕ್ಕುಗಳು ಸ್ತೋತ್ರಿಯ ಮಂತ್ರದ ಋಕ್ಕುಗಳಿಗಿರುವ ಛಂದಸ್ಸು ಮತ್ತು ದೇವತೆಗಳನ್ನು ಹೊಂದಿರುವುದರಿಂದ ಇವು ಸಮಾನಛಂದಸ್ಕ ಮತ್ತು ಸಮಾನದೇವತಾಕವು ಆದುದರಿಂದಲೇ ಇವುಗಳಿಗೆ ಅನುರೂಪ ಮಂತ್ರಗಳೆಂದು ಹೆಸರು ಪಿತೃಪುತ್ರರಿಗೆ ಪರಸ್ಪರ ಅನುರೂಪವಿರುವುದರಿಂದ ಈ ಅನುರೂಪಮಂತ್ರವು ಪುತ್ರ ಸ್ಥಾನೀಯವೆಂದು ಹೇಳಲ್ಪಡುವುದು ಈ ಮಂತ್ರವನ್ನು ಸ್ತೋತ್ರಿಯ ಮಂತ್ರವನ್ನು ಪರಿಸುವ ಧ್ವನಿಗಿಂತಲೂ ಅಧಿಕವಾದ ಎಂದರೆ ಘಟ್ಟಿಯಾದ ಧ್ವನಿಯಿಂದಲೇ ಉಚ್ಚರಿಸಬೇಕು. ಹೀಗೆ ಮಾಡಿದರೆ ತನಗಿಂತಲೂ ತನ್ನ ಪುತ್ರರಲ್ಲಿ **ಆಧಿಕ್ಯ**ವನ್ನು (ಅಧಿಕ ಗುಣವನ್ನು) ಸಂಪಾದಿಸಿದಂತಾಗುವುದು

ಧಾಯ್ಯಾಂ ಶಂಸತಿ ಪತ್ನೀ ವೈ ಧಾಯ್ಯಾ ಸಾ ನೀಚೈಸ್ತರಾಮಿವ ಧಾಯ್ಯಾ ಶಂಸ್ತವ್ಯಾ ।

ಯದ್ವಾವಾ ನ ಎಂಬ **ಧಾಯ್ಯಾ** ಮಂತ್ರವು ಪತ್ನೀಸ್ಥಾನೀಯವೆಂದು ಹೇಳಲ್ಪಡುವುದು ಈ ಮಂತ್ರವನ್ನು ನೀಚ ಧ್ವನಿಯಿಂದ ಎಂದರೆ ಬಹುಮೆಲ್ಲನೆ ಧ್ವನಿಯಿಂದ ಪರಿಸಬೇಕು

ಆಪ್ರತಿವಾದಿನೀ ಹಾಸ್ಯ ಗೃಹೇಷು ಪತ್ನೀ ಭವತಿ ಯತ್ರೈವಂ ವಿದ್ವಾನ್ನೀಚೈಸ್ತರಾಂ ಧಾಯ್ಯಾಂ ಶಂಸತಿ ।

ಪತ್ನಿಯು ಪತಿಯ ಮಾತಿಗೆ ವಿರೋಧವಿಲ್ಲದಂತೆ ಎಂದರೆ ಪ್ರತಿಯಾಗಿ ಏನನ್ನೂ ಹೇಳದೆ, ಪತಿಯ ಇಚ್ಛಾನುಸಾರ ಗೃಹದಲ್ಲಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಪತಿಗೆ ವಿಧೇಯಳಾಗಿರುವಳು ಈ ವಿಧೇಯತೆಯನ್ನು ಸ್ವಪ್ಪಪಡಿಸುವುದಕ್ಕಾಗಿ ಪತ್ನೀಸ್ಥಾನೀಯವಾದ ಈ ಧಾಯ್ಯಾಮಂತ್ರವನ್ನು ವಿದ್ವಾಂಸನಾದವನು ಬಹಳ ಮೆಲ್ಲಗೆ ಪರಿಸಬೇಕು.

ಪ್ರಗಾಥಂ ಶಂಸತಿ ಸ ಸ್ವರವತ್ಯಾ ವಾಚಾ ಶಂಸ್ತವ್ಯಃ ಪಶವೋ ವೈ ಸ್ವರಃ ಪಶವಃ ಪ್ರಗಾಥಃ ಪಶೂನಾಮವರುಧ್ಯೈ ।

ಪ್ರಗಾಥಮಂತ್ರವನ್ನು ಸ್ವರಸಹಿತವಾಗಿ ಉಚ್ಚಾರಣೆಮಾಡಬೇಕು ಪ್ರಗಾಥಮಂತ್ರವು ಪಶುಸಂಪತ್ತನ್ನು ಒದಗಿಸುವುದೆಂದು ಹಿಂದೆಯೇ ಹೇಳಿದೆ ಸ್ವರಗಳಿಗೂ ಪಶುಗಳಿಗೂ ಸಂಬಂಧವಿದೆ **ಚತುಷ್ಪಾದಃ ಪಶವಃ** ಎಂದು ಪಶುಗಳು ನಾಲ್ಕು ಕಾಲುಗಳುಳ್ಳವು ಎಂದು ಹೇಳಿರುವುದು ಸ್ವರಗಳೂ ಅನುದಾತ್ತ, ಅನುದಾತ್ತೇತರ, ಉದಾತ್ತ, ಸ್ವರಿತ ಗಳೆಂದು ನಾಲ್ಕುವಿಧಗಳಾಗಿವೆ ಇದುವರೆಗೆ ಶಸ್ತ್ರಮಂತ್ರಗಳನ್ನು ಏಕಶ್ರುತಿಯಿಂದ (ಸ್ವರವಿಲ್ಲದೆ ಒಂದೇ ಸಮನಾದ ಧ್ವನಿ) ಹೇಳಿ ಈಗ ಪ್ರಗಾಥಮಂತ್ರವನ್ನು ಮಾತ್ರ ಸ್ವರಚತುಷ್ಪಯಯುಕ್ತವಾಗಿ ಪರಿಸಲಾಗುವುದು

ಇಂದ್ರಸ್ಯ ನು ವೀರ್ಯಾಣಿ ಪ್ರವೋಚಮಿತಿ ಸೂಕ್ತಂ ಶಂಸತಿ ತದ್ವಾ ಏತತ್ಪ್ರಿಯಮಿಂದ್ರಸ್ಯ ನಿಷ್ಕೇವಲ್ಯಂ ಹೈರಣ್ಯಸ್ತೂಪಮೇತೇನ ವೈ ಸೂಕ್ತೇನ ಹಿರಣ್ಯಸ್ತೂಪ ಆಂಗಿರಸ ಇಂದ್ರಸ್ಯ ಪ್ರಿಯಂ ಧಾಮೋಪಾಗಚ್ಛತ್ಸ ಪರಮಂ ಲೋಕಮಜಯತ್ ।

ಈಗ ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿ ಕೊನೆಯ ವಿಭಾಗವಾದ ಹದಿನೈದು ಋಕ್ಕುಗಳುಳ್ಳ **ಇಂದ್ರಸ್ಯ ನು ವೀರ್ಯಾಣಿ ಪ್ರವೋಚಂ** ಎಂಬ ನಿವಿದ್ಧಾನೀಯ ಸೂಕ್ತ ಪರನವನ್ನು ವಿವರಿಸುವರು ಈ ಸೂಕ್ತವು ಇಂದ್ರನಿಗೆ ಪ್ರಿಯವಾಗು

ವುದು. ಇದಕ್ಕೆ ನಿಷ್ಕೇವಲ್ಯಸೂಕ್ತವೆಂದು ಹೆಸರು. ಹಿರಣ್ಯಸ್ತೂಪಋಷಿದೃಷ್ಟವಾದುದರಿಂದ ಈ ಸೂಕ್ತಕ್ಕೆ ಹೈರಣ್ಯ ಸ್ತೂಪಸೂಕ್ತವೆಂದೂ ಹೆಸರು ಅಂಗಿರಸಋಷಿಯ ಪುತ್ರನಾದ ಹಿರಣ್ಯಸ್ತೂಪಋಷಿಯು ಈ ಸೂಕ್ತದಿಂದ ಇಂದ್ರನನ್ನು ಸ್ತುತಿಸಿ ಇಂದ್ರನಿಗೆ ಪ್ರಿಯವಾದ ಉತ್ತಮಸ್ಥಾನವನ್ನು ಸೇರಿ ಅನಂತರ ಅದಕ್ಕಿಂತಲೂ ಉತ್ಕೃಷ್ಟವಾದ ಲೋಕವನ್ನೂ ಪಡೆದನು.

ಉಪೇಂದ್ರಸ್ಯ ಪ್ರಿಯಂ ಧಾಮ ಗಚ್ಛತಿ ಜಯತಿ ಪರಮಂ ಲೋಕಂ ಯ ಏವಂ ವೇದ ।

ಈ ವಿಷಯವನ್ನು ತಿಳಿದಿರುವ ಪುರುಷನು ಇಂದ್ರನ ಅನುಗ್ರಹದಿಂದ ಪರಮೋತ್ಕೃಷ್ಟವಾದ ಲೋಕವನ್ನು ಜಯಿಸುವನು ಎಂದರೆ ಪಡೆಯುವನು.

ಗೃಹಾ ವೈ ಪ್ರತಿಷ್ಠಾ ಸೂಕ್ತಂ ತತ್ಪ್ರತಿಷ್ಠಿತತಮಯಾ ವಾಚಾ ಶಂಸ್ತವ್ಯಂ ತಸ್ಮಾದ್ಯದ್ಯಪಿ ದೂರ ಇವ ಪಶೂನ್ ಲಭತೇ ಗೃಹಾನೇವೈನಾನಾಜಿಗಮಿಷತಿ ಗೃಹಾ ಹಿ ಪಶೂನಾಂ ಪ್ರತಿಷ್ಠಾ ಪ್ರತಿಷ್ಠಾ ॥

(ಐ ಬ್ರಾ ೧೨–೨೪)

ಇಂದ್ರಸ್ಯ ನು ವೀರ್ಯಾಣಿ ಪ್ರವೋಚಂ ಎಂಬ ಈ ನಿವಿದ್‌ಸೂಕ್ತವು ಗೃಹಸ್ಥಾನೀಯವೆಂದು ಹೇಳಲ್ಪಡುವುದು. ಗೃಹದ ತಳಪಾಯವು ಭದ್ರವಾಗಿರಬೇಕಷ್ಟೆ ಆದ್ದರಿಂದ ಗೃಹವು ಭದ್ರವಾಗಿರುವುದಕ್ಕಾಗಿ ಈ ಸೂಕ್ತವನ್ನು ಅವಸರಪಡದೆ ಒಂದೇ ಸಮನಾದ ಧ್ವನಿಯಿಂದ ನಿಧಾನವಾಗಿ ಪಠಿಸಬೇಕು ದೂರದಲ್ಲಿ ಮೇಯುತ್ತಿರುವ ಗೋವುಗಳನ್ನು ಕಂಡು ಪುರುಷನು ಸಾಯಂಕಾಲವಾದಕೂಡಲೆ ತನ್ನ ಮನೆಗೆ ಆಟ್ಟಿಕೊಂಡು ಬಂದು ಗೃಹದ ಒಂದು ಭಾಗದಲ್ಲಿರುವ ಕೊಟ್ಟಿಗೆಯಲ್ಲಿ ಕಟ್ಟುವನು. ಪಶುಗಳಿಗೆ ಕೊಟ್ಟಿಗೆ ಆಥವಾ ಗೃಹವೇ ಭದ್ರವಾದ ಸ್ಥಾನವು. ಈ ಸೂಕ್ತವು ಪಶುಸಂಪತ್ತಿನಿಂದ ಕೂಡಿದ ಗೃಹಸ್ಥಾನೀಯವೆಂದು ಹೇಳಲ್ಪಡುವುದರಿಂದ ಇದು ಭದ್ರವಾಗಿರುವುದು ಆವಶ್ಯಕವು. ಆದ್ದರಿಂದ ಈ ಸೂಕ್ತವನ್ನು ಅವಸರವಿಲ್ಲದಂತೆ ನಿಧಾನವಾಗಿಯೂ ಸ್ಪಷ್ಟವಾಗಿಯೂ ಪಠಿಸಬೇಕು.

ಇಲ್ಲಿಗೆ ನಿಷ್ಕೇವಲ್ಯಶಸ್ತ್ರಮಂತ್ರಗಳ ವಿವರಣೆಯು ಸಮಾಪ್ತವು.

॥ ಸಂಹಿತಾಪಾಠಃ ॥

ನೂ ಷ್ಟುತ ಇಂದ್ರ ನೂ ಗೃಣಾನ ಇಷಂ ಜರಿತ್ರೇ ನದ್ಯೋ೭ ನ ಪೀಪೇಃ ।
ಅಕಾರಿ ತೇ ಹರಿವೋ ಬ್ರಹ್ಮ ನವ್ಯಂ ಧಿಯಾ ಸ್ಯಾಮ ರಥ್ಯಃ ಸದಾಸಾಃ ॥ ೧೧ ॥

॥ ಪದಪಾಠಃ ॥

ನು । ಸ್ತುತಃ । ಇಂದ್ರ । ನು । ಗೃಣಾನಃ । ಇಷಂ । ಜರಿತ್ರೇ । ನದ್ಯಃ । ನ । ಪೀಪೇರಿತಿ ಪೀಪೇಃ ।
ಅಕಾರಿ । ತೇ । ಹರಿವಃ । ಬ್ರಹ್ಮ । ನವ್ಯಂ । ಧಿಯಾ । ಸ್ಯಾಮ । ರಥ್ಯಃ । ಸದಾಸಾಃ ॥ ೧೧ ॥

। ಸಾಯಣಭಾಷ್ಯಂ ।

हे इन्द्र नु क्षिप्रं स्तुतः पूर्व्यर्षिभिः संस्तुतो नु क्षिप्रं गृणानोऽस्माभिः स्तूयमानस्त्वमिषमन्नं जरित्रे स्तोत्रे मह्यं नदीर्न दीरिव पीपेः। स्याम यथा। प्रवृद्धं कुरु। हे हरिवो हरिसंज्ञकाश्वोपेतेन्द्र ते तुभ्यं नव्यं नवतरं ब्रह्म स्तोत्रमकारि। अस्माभिः क्रियतेः। रथ्यो रथवन्तो वयं धिया प्रज्ञारूपया स्तुत्या सदासास्त्वां सर्वदा भजमानास्त्वद्दर्शं हविरूपस्यान्नस्य दातारो वा स्याम। भूयास्म॥

। ಪ್ರತಿಪದಾರ್ಥ ।

ಇಂದ್ರ—ಎಲೈ ಇಂದ್ರನೇ। **ನು**—ಅತಿಶಯವಾಗಿ। **ಸ್ತುತಃ**—ಹಿಂದಿನ ಋಷಿಗಳಿಂದ ಸ್ತುತನಾದ ವನೂ। **ನು**—ಅದೇ ಶ್ರದ್ಧೆಯಿಂದ। **ಗೃಣಾನಃ**—(ನಮ್ಮಿಂದಲೂ) ಸ್ತುತನಾಗತಕ್ಕವನೂ ಆಗಿ। **ನದ್ಯಃ ನ**—ನದಿಗಳನ್ನು ಉದಕಗಳಿಂದ ತುಂಬುವಂತೆ। **ಜರಿತ್ರೇ**—ಸ್ತೋತೃವಾದ ನನಗೆ। **ಇಷಂ**—ಅನ್ನವನ್ನು। **ಪೀಪೇಃ**—ತುಂಬಿಕೊಡು। **ಹರಿವಃ**—ಹರಿಸಂಜ್ಞಕಗಳಾದ ಅಶ್ವಗಳುಳ್ಳ ಇಂದ್ರನೇ। **ತೇ**—ನಿನ್ನನ್ನುದ್ದೇಶಿಸಿ। **ನವ್ಯಂ**—ನೂತನವಾದ। **ಬ್ರಹ್ಮ**—ಸ್ತೋತ್ರವು। **ಅಕಾರಿ**—ನಿರ್ಮಿತವಾಗುತ್ತದೆ। **ರಥ್ಯಃ**—ರಥಗಳನ್ನು ಹೊಂದಿರುವ ನಾವು। **ಧಿಯಾ**—ಪ್ರಜ್ಞಾಪೂರ್ವಕವಾದ ಸ್ತುತಿಯಿಂದ। **ಸದಾಸಾಃ**—ನಿನ್ನನ್ನು ಪೂಜಿಸಿ ಹವಿಸ್ಸನ್ನ ರ್ಪಿಸುವವರಾಗಿ। **ಸ್ಯಾಮ**—ಆಗುವಂತೆ ಅನುಗ್ರಹಿಸು.

। ಭಾವಾರ್ಥ ।

ಎಲೈ ಇಂದ್ರನೇ, ಹಿಂದಿನ ಋಷಿಗಳಿಂದ ಅತಿಶಯವಾಗಿ ಸ್ತುತನಾದವನೂ, ಅದೇ ಶ್ರದ್ಧೆಯಿಂದ ನಮ್ಮಿಂದಲೂ ಸ್ತುತನಾಗತಕ್ಕವನೂ ಆಗಿ ನದಿಗಳನ್ನು ಉದಕಗಳಿಂದ ತುಂಬುವಂತೆ ಸ್ತೋತೃವಾದ ನನಗೆ ಅನ್ನವನ್ನು ತುಂಬಿಕೊಡು. ಹರಿಸಂಜ್ಞಕಗಳಾದ ಅಶ್ವವುಳ್ಳ ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ನೂತನವಾದ ಸ್ತೋತ್ರವು ನಿರ್ಮಿತವಾಗುತ್ತದೆ. ರಥಗಳನ್ನು ಹೊಂದಿರುವ ನಾವು ಪ್ರಜ್ಞಾಪೂರ್ವಕವಾದ ಸ್ತುತಿಯಿಂದ ನಿನ್ನನ್ನು ಪೂಜಿಸಿ ಹವಿಸ್ಸನ್ನರ್ಪಿಸುವವರಾಗಿ ಆಗುವಂತಾಗಲಿ.

English Translation.

Glorified (in the past), glorified, Indra, at present, satisfy your worshipper with food, as rivers (are filled with water). lord of horses, a new hymn has been made for you. may we, possessed of chariots, be ever diligent in your praise.

॥ ವಿಶೇಷವಿಷಯಗಳು ।

ಈ ಋಕ್ಕು ಈ ಸೂಕ್ತದಲ್ಲಲ್ಲದೆ ೨೦-೨೪ ನೇ ಸೂಕ್ತಗಳಲ್ಲಿ ಕೊನೆಯ ಋಕ್ಕುಗಳಾಗಿ ಪರಿತವಾಗಿದೆ

ಇಂದ್ರ ನು ಸ್ತುತಃ ನು ಗೃಣಾನಃ ನದ್ಯಃ ನ ಜರಿತ್ರೇ ಇಷಂ ಪಿಪೇಃ—ಎಲೈ ಇಂದ್ರನೇ, ನೀನು ಹಿಂದೆ ಅನೇಕ ಋಷಿಗಳಿಂದ ಸ್ತುತಿಸಲ್ಪಟ್ಟಿರುವೆ ಈಗ ನಮ್ಮಿಂದ ಸ್ತುತಿಸಲ್ಪಡುವೆ. ನದಿಗಳಿಗೆ ವೃಷ್ಟ್ಯುದಕವು ತುಂಬಿ

ಪೂರ್ಣವಾಗಿ ಹರಿಯುವಂತೆ ನಿನ್ನನ್ನು ಸ್ತೋತ್ರಮಾಡುವ ನಮಗೆ ಅನ್ನವನ್ನು (ಅನ್ನಾದ್ಯಾಹಾರವನ್ನು) ತುಂಬಿ ಕೊಡು, ಎಂದರೆ ಯಥೇಚ್ಛವಾಗಿ ಕೊಡು.

ನು—ನು ಇತ್ಯೇಷೋಽನೇಕಕರ್ಮಾ। ಇದಂ ನು ಕರಿಷ್ಯತೀತಿ ಹೇತ್ವಪದೇಶೇ। ಕಥಂ ನು ಕರಿಷ್ಯತೀತ್ಯನುಪೃಷ್ಟೇ (ನಿ. ೧-೪) **ನು** ಎಂಬ ನಿಪಾತಕ್ಕೆ ಅನೇಕ ಅರ್ಥಗಳಿವೆ. **ಇದಂ ನು ಕರಿಷ್ಯತಿ** ಎನ್ನುವಾಗ **ನು** ಎಂಬ ಶಬ್ದಕ್ಕೆ ಆದ್ದರಿಂದ ಎಂದು ಹೇತ್ವರ್ಥವಾಗುತ್ತದೆ. **ಕಥಂ ನು ಕರಿಷ್ಯತಿ** ಎನ್ನುವಾಗ **ನು** ಎಂಬ ಶಬ್ದಕ್ಕೆ ಹೇಗೆ ಎಂಬ ಪ್ರಶ್ನಾರ್ಥಕವಾಗುತ್ತದೆ ಹೀಗೆಯೇ **ಅಥಾಪ್ಯುಪಮಾರ್ಥೇ ಭವತಿ।** ಉಪಮಾನ ವನ್ನು ಸೂಚಿಸುವಾಗಲೂ ಸಹ **ನು** ಎಂಬ ಶಬ್ದದ ಪ್ರಯೋಗವಿರುವುದು ಉದಾಹರಣೆಗೆ—

ಅಕ್ಷೋ ನ ಚಕ್ರ್ಯೋಃ ಶೂರ ಬೃಹನ್ಪ್ರ ತೇ ಮಹ್ನಾ ರಿರಿಚೇ ರೋದಸ್ಯೋಃ।
ವೃಕ್ಷಸ್ಯ ನು ತೇ ಪುರುಹೂತ ವಯೋ ವ್ಯೂ ೩ ತಯೋ ರುರುಹುರಿಂದ್ರ ಪೂರ್ವೀಃ॥

(ಋ ಸಂ ೬-೨೪-೩)

ಎಂಬ ಋಕ್ಕನ್ನು ನಿರುಕ್ತಕಾರರು ಉದಾಹರಿಸಿ (ನಿ. ೧-೪), **ವೃಕ್ಷಸ್ಯ ನು ತೇ। ವೃಕ್ಷಸ್ಯೇವ ತೇ।** ವೃಕ್ಷದಂತೆ ಅಥವಾ ವೃಕ್ಷದ ಶಾಖೆಗಳಂತೆ ಎಂದು **ನು** ಎಂಬ ಶಬ್ದಕ್ಕೆ ಉಪಮಾರ್ಥವನ್ನು ಹೇಳಿದೆಯೆಂದು ತಿಳಿಸಿದಾರೆ. ಅದೇ ರೀತಿಯೇ—

ನೂ ಮರ್ತೋ ದಯತೇ ಸನಿಷ್ಯನ್ಯೋ ವಿಷ್ಣವ ಉರುಗಾಯಾಯ ದಾಶತ್।

(ಋ ಸಂ ೭-೧೦೦-೧೧)

ಇತ್ಯಾದಿ ಋಕ್ಕುಗಳಲ್ಲಿ **ನು** ಎಂಬ ಶಬ್ದಕ್ಕೆ **ಕ್ಷಿಪ್ರಂ** ಬೇಗನೆ, ಜಾಗ್ರತೆಯಾಗಿ ಎಂಬರ್ಥವೂ,

ನೂ ಇಂದ್ರ ಶೂರ ಸ್ತವಮಾನ ಊತೀ ಬ್ರಹ್ಮಜೂತಸ್ತನ್ವಾ ವಾವೃಧಸ್ವ।

(ಋ ಸಂ. ೭-೧೯-೧೧)

ಇತ್ಯಾದಿ ಋಕ್ಕುಗಳಲ್ಲಿ **ನು** ಎಂದರೆ **ಅದ್ಯ,** ಈಗ, ಒಡನೆಯೇ ಎಂಬ ಅರ್ಥವಿರುವುದೆಂದು ನಿರುಕ್ತಕಾರರು ಉದಾಹರಣೆ ಸಹಿತವಾಗಿ ವಿವರಿಸಿದಾರೆ. ಪ್ರಕೃತವಾದ ಋಕ್ಕಿನಲ್ಲಿ **ಕ್ಷಿಪ್ರಂ** ಬೇಗನೆ, ಶೀಘ್ರವಾಗಿ ಎಂದರ್ಥವು

ಜರಿತ್ರೇ—ಜರಿತೃಶಬ್ದವು ಸ್ತೋತೃನಾಮಗಳಲ್ಲಿ ಪಠಿತವಾಗಿದೆ (ನಿ. ೩-೧೯) **ಜರಿತಾ ಗರಿತಾ** (ನಿ ೧-೭) ಎಂದು ನಿರ್ವಚನವೂ ಇರುವುದರಿಂದ **ಜರಿತ್ರೇ** ಎಂದರೆ ಇಲ್ಲಿ ಸ್ತೋತ್ರಮಾಡುವ ನನಗೆ ಎಂದರ್ಥವು

ನ—ನ ಎಂಬ ಶಬ್ದಕ್ಕೆ ನಿರುಕ್ತಕಾರರು ಎರಡು ವಿಧವಾದ ಅರ್ಥವನ್ನು ಹೇಳಿರುವರು—

ನೇತಿ ಪ್ರತಿಷೇಧಾರ್ಥೀಯೋ ಭಾಷಾಯಾಂ। ಉಭಯಮನ್ವಧ್ಯಾಯ್ಯಂ। ನೇಂದ್ರಂ ದೇವಮಮಂಸತ ಇತಿ ಪ್ರತಿಷೇಧಾರ್ಥೀಯಃ ಪುರಸ್ತಾದುಪಚಾರಸ್ತಸ್ಯ ಯೇತ್ಪ್ರತಿಷೇಧತಿ। ದುರ್ಮದಾಸೋ ನ ಸುರಾಯಾಂ ಇತ್ಯುಪಮಾರ್ಥೀಯಃ। ಉಪರಿಷ್ಟಾದುಪಚಾರಸ್ತಸ್ಯ ಯೇನೋಪಮಿಮೀತೇ॥ (ನಿ. ೧-೪)

ಎಂದರೆ **ನ** ಎಂಬ ಶಬ್ದವು ಲೋಕವ್ಯವಹಾರದ ಭಾಷೆಯಲ್ಲಿ ಎಂದರೆ, ವೇದಭಾಷೆಯಲ್ಲದ ಆಧುನಿಕ ಸಂಸ್ಕೃತ ಭಾಷೆಯಲ್ಲಿ ನಿಷೇಧಾರ್ಥದಲ್ಲಿ (ಇಲ್ಲ, ಅಲ್ಲ ಎಂಬರ್ಥದಲ್ಲಿ) ಉಪಯೋಗಿಸಲ್ಪಡುವುದು ಇದು ಎಲ್ಲರಿಗೂ ತಿಳಿದೇ ಇದೆ ಆದರೆ ವೇದಗಳಲ್ಲಿ ನಿಷೇಧಾರ್ಥದಲ್ಲಿಯೂ, ಉಪಮಾರ್ಥದಲ್ಲಿಯೂ **ನ** ಎಂಬ ಶಬ್ದದ ಪ್ರಯೋಗವಿರುವುದು. ಹೇಗೆಂದರೆ— **ನೇಂದ್ರಂ ದೇವಮಮಂಸತ** ಎಂಬ ವಾಕ್ಯದಲ್ಲಿನ **ನ** ಎಂಬ ಶಬ್ದವು ನಿಷೇಧಾರ್ಥದಲ್ಲಿ ಪ್ರಯುಕ್ತವಾಗಿರುವುದು ಪ್ರತಿಷೇಧವೆಂದರೆ ಒಬ್ಬ ವ್ಯಕ್ತಿಯನ್ನು ಪ್ರತ್ಯಕ್ಷವಾಗಿ ಅಥವಾ ಎದುರಿಗೆ ಹೊಗಳದೇ ಇರುವುದು ಇಂದ್ರನನ್ನು ದೀಪ್ತಿಯುಕ್ತನಾದನನೆಂದು ತಿಳಿಯಲಾಗುವುದಿಲ್ಲ ಎಂಬ ವಾಕ್ಯದಲ್ಲಿ **ಇಲ್ಲ (ನ** ಎಂಬುದರ ಅರ್ಥ) ಎಂಬ ಶಬ್ದವು ಇಂದ್ರನ ವಿಷಯಕವಾದ ಉಪಚಾರೋಕ್ತಿಗೆ ವಿರುದ್ಧವಾದ ಅರ್ಥವನ್ನು ಸೂಚಿಸುವುದು ಇದಕ್ಕೆ ಪ್ರತಿಷೇಧಾರ್ಥವೆಂದು ಹೆಸರು. **ದುರ್ಮದಾಸೋ ನ ಸುರಾಯಾಂ** ಎಂಬ ವಾಕ್ಯದಲ್ಲಿ **ನ** ಎಂಬ ಶಬ್ದವು ಉಪಮಾರ್ಥವನ್ನು (ಹೋಲಿಕೆಯನ್ನು) ಸೂಚಿಸುವುದು ಮದ್ಯವನ್ನು ಪಾನಮಾಡಿದ ಜನರಂತೆ ದುರಹಂಕಾರವುಳ್ಳವರು ಎಂದು **ಈ** ವಾಕ್ಯದ ಅರ್ಥವು ಇಲ್ಲಿ ಒಂದು ವ್ಯಕ್ತಿಯಲ್ಲಿರುವ ಗುಣಾವಗುಣಗಳನ್ನು ಮತ್ತೊಂದು ವ್ಯಕ್ತಿಯಲ್ಲಿರುವ ಗುಣಾವಗುಣಗಳಿಗೆ ಹೋಲಿಸಿ ಹೇಳುವುದೇ ಉಪಮಾರ್ಥವು ಮದ್ಯಪಾನಮಾಡಿದವರು ಮತಿಹೀನರಾಗಿ ಅಹಂಕಾರದಿಂದ ನೀಚಮಾರ್ಗದಲ್ಲಿ ವರ್ತಿಸುವರು ಆ ಜನರಂತೆ ದುರಹಂಕಾರವುಳ್ಳವರು ಎಂಬುದೇ ಉಪಮಾರ್ಥವು. **ಈ** ವಿಧವಾದ ಅರ್ಥಗಳನ್ನು ವೇದಗಳಲ್ಲಿ **ನ** ಎಂಬ ಪದದಿಂದಲೂ, **ಇವ** ಎಂಬ ಪದದಿಂದಲೂ ನಿರ್ದೇಶಿಸಲ್ಪಡುವುದು **ಈ** ವಿಧವಾದ ಉಪಮಾರ್ಥದಲ್ಲಿ **ನ** ಎಂಬ ಶಬ್ದದ ಪ್ರಯೋಗವು ವೇದಗಳಲ್ಲಿ ಮಾತ್ರ ಇರುವುದು ಬಳಸುವ ಭಾಷೆಯಲ್ಲಿಲ್ಲ ಅದಕ್ಕೆ ಬದಲಾಗಿ ಅಲ್ಲಿ **ಇವ** ಎಂಬ ಶಬ್ದದ ಪ್ರಯೋಗಮಾತ್ರವಿರುವುದು

ಸೂಕ್ತದ ಉಪಸಂಹಾರರೂಪವಾದ **ಈ** ಋಕ್ಕಿನಲ್ಲಿ ವಾಮದೇವಋಷಿಯು ದೇವತೆಗೆ ಹೊಸದಾಗಿ ರಚಿತವಾದ ಸ್ತೋತ್ರವನ್ನರ್ಪಿಸಿ ದೇವತೆಯ ಅನುಗ್ರಹವನ್ನು ಪ್ರಾರ್ಥಿಸಿರುವುದು ಉಕ್ತವಾಗಿದೆ

ಇಪ್ಪತ್ತೊಂದನೆಯ ಸೂಕ್ತವು.

। ಸಾಯಣಭಾಷ್ಯಂ ।

ಆ ಯಾತ್ವಿಂದ್ರ ಇತ್ಯೇಕಾದಶರ್ಚಮೇಕಾದಶಂ ಸೂಕ್ತಂ ವಾಮದೇವಸ್ಯಾರ್ಷಂ ತ್ರೈಷ್ಟುಭ-ಮೈಂದ್ರಂ । ಆ ಯಾತ್ವಿತ್ಯನುಕ್ರಾಂತಂ ॥ ಪೃಷ್ಠ್ಯಾಭಿಪ್ಲವಷಡಹಯೋಃ ಪ್ರಥಮೇಽಹನ್ಯೇತನ್ನಿವಿದ್ಧಾ-ನೀಯಂ । ಸೂತ್ರಿತಂ ಚ । ಆ ಯಾತ್ವಿಂದ್ರೋಽವಸ ಇತಿ ಮರುತ್ವತೀಯಂ । ಅ. ೭-೫ । ಇತಿ ॥

ಅನುವಾದವು—**ಆ ಯಾತ್ವಿಂದ್ರ** ಎಂಬ **ಈ** ಸೂಕ್ತವು ಎರಡನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು ಇದರಲ್ಲಿ ಹನ್ನೊಂದು ಋಕ್ಕುಗಳಿರುವವು **ಈ** ಸೂಕ್ತಕ್ಕೆ ವಾಮದೇವನು ಋಷಿಯು, ಇಂದ್ರನು ದೇವತೆಯು, ತ್ರಿಷ್ಟುಪ್ ಛಂದಸ್ಸು ಅನುಕ್ರಮಣಿಕೆಯಲ್ಲಿ **ಆ ಯಾತು** ಎಂದು ಮೊದಲಾಗಿ ಹೇಳಿರುವುದು ಪೃಷ್ಠ್ಯ ಮತ್ತು ಅಭಿಪ್ಲವಷಡಹವೆಂಬ ಯಾಗಗಳ ಮೊದಲನೆಯ ದಿವಸದಲ್ಲಿ **ಈ** ಸೂಕ್ತವನ್ನು ನಿವಿದ್ಧಾನೀಯಸೂಕ್ತವನ್ನಾಗಿ ಪರಿಸಲ್ಪಡಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆ ಯಾತ್ವಿಂದ್ರೋಽವಸ ಇತಿ ಮರುತ್ವತೀಯಂ** ಎಂಬ ಸೂತ್ರದಿಂದ (ಅ. ೭-೫) ವಿವೃತವಾಗಿರುವುದು

ಸೂಕ್ತ—೨೧

ಮಂಡಲ—೪ ॥ ಅನುವಾಕ—೨ ॥ ಸೂಕ್ತ—೨೧ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ—೫, ೬ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—ವಾಮದೇವಃ ।
ದೇವತಾ—ಇಂದ್ರಃ ।
ಛಂದಃ—ತ್ರಿಷ್ಟುಪ್ ।

॥ ಸಂಹಿತಾಪಾಠಃ ॥

ಆ ಯಾತ್ವಿಂದ್ರೋಽವಸ ಉಪ ನ ಇಹ ಸ್ತುತಃ ಸಧಮಾದಸ್ತು ಶೂರಃ ।
ವಾವೃಧಾನಸ್ತವಿಷೀರ್ಯಸ್ಯ ಪೂರ್ವೀರ್ದ್ಯೌರ್ನ ಕ್ಷತ್ರಮಭಿಭೂತಿ ಪುಷ್ಯಾತ್॥೧॥

॥ ಪದಪಾಠಃ ॥

ಆ । ಯಾತು । ಇಂದ್ರಃ । ಅವಸೇ । ಉಪ । ನಃ । ಇಹ । ಸ್ತುತಃ । ಸಧ್ತಮಾತ್ । ಅಸ್ತು । ಶೂರಃ ।
ವವೃಧಾನಃ । ತವಿಷೀಃ । ಯಸ್ಯ । ಪೂರ್ವೀಃ । ದ್ಯೌಃ । ನ । ಕ್ಷತ್ರಂ । ಅಭಿಽಭೂತಿ । ಪುಷ್ಯಾತ್ ॥ ೧ ॥

॥ ಸಾಯಣಭಾಷ್ಯಂ ॥

ಸ ಇಂದ್ರೋ ನೋಽಸ್ಮಾಕಮವಸೇ ರಕ್ಷಣಾಯೋಪಾ ಯಾತು । ಉಪಾಗಚ್ಛತು । ಯ ಇಂದ್ರ ಇಹಾಸ್ಮಿನ್ಯಜ್ಞೇ ಸ್ತುತಃ । ಶೂರೋ ವಿಕ್ರಾಂತೋ ವವೃಧಾನಃ ಪ್ರವೃದ್ಧೋಽಯಮಿಂದ್ರಃ ಸಧಮಾದಸ್ತು । ಅಸ್ಮಾಭಿಃ ಸಹ ಮಾದ್ಯನ್ ಭವತು । ಯಸ್ಯೇಂದ್ರಸ್ಯ ತವಿಷೀಸ್ತವಿಸ್ಯೋ ಬಲಾನಿ ಪೂರ್ವೀಃ ಪೂರ್ವ್ಯೋ ಬಹೂನಿ । ಸಂತೀತಿ ಶೇಷಃ । ಯಶ್ಚೇಂದ್ರೋ ದ್ಯೌರ್ನ ದ್ಯೌರ್ತದ್ವನಃ ಸೂರ್ಯ ಇವಾಭಿಭೂತಿ ಪರಕೀಯಂ ಬಲಮಭಿಭವುಕಂ ಕ್ಷತ್ರಂ ಸ್ವಕೀಯಂ ಬಲಂ ತೇಜೋ ವಾ ಪುಷ್ಯಾತ್ ಪುಷ್ಯತು । ಸ ಇಂದ್ರೋ ಉಪಾಯಾತ್ಪಿತಿ ಪೂರ್ವೇಣ ಸಂಬಂಧಃ ॥

॥ ಪ್ರತಿಪದಾರ್ಥ ॥

ಇಂದ್ರಃ—ಇಂದ್ರನು । ನಃ—ನಮ್ಮ । ಅವಸೇ—ರಕ್ಷಣಾರ್ಥವಾಗಿ । ಉಪ ಆ ಯಾತು—ನಮ್ಮ ಸಮೀಪಕ್ಕೆ ಬರಲಿ । ಇಹ—ಈ ಯಜ್ಞದಲ್ಲಿ । ಸ್ತುತಃ—ಪ್ರಶಂಸಿತನಾಗುವವನೂ । ಶೂರಃ—ಪರಾಕ್ರಮಿಯೂ । ವವೃಧಾನಃ—ಪ್ರವೃದ್ಧಿಯನ್ನು ಪಡೆಯುವವನೂ ಆದ ಇಂದ್ರನು । ಸಧಮಾತ್—ನಮ್ಮೊಡನೆ ಸೇರಿ ಹರ್ಷಪಡುವವನಾಗಿ । ಅಸ್ತು—ಆಗಲಿ । ಯಸ್ಯ—ಯಾವ ಇಂದ್ರನ । ತವಿಷೀಃ—ಶಕ್ತಿಗಳು । ಪೂರ್ವೀಃ—ಬಹು

ಪ್ರಕಾರವಾಗಿನೆಯೋ । **(ಯೆಃ**—ಯಾವ ಇಂದ್ರನು) । **ದ್ಯೌಃ ನ**—ಪ್ರಕಾಶಮಾನನಾದ ಸೂರ್ಯನಂತೆ ಪ್ರಕಾಶಿಸುತ್ತಾನೆಯೋ (ಅಂತಹ ಇಂದ್ರನ) । **ಅಭಿಭೂತಿ**—ಶತ್ರುಸೈನ್ಯವನ್ನು ನಾಶಮಾಡತಕ್ಕ । **ಕ್ಷತ್ರಂ**—ತೇಜೋಯುತವಾದ ಬಲವು । **ಪುಷ್ಯಾತ್**—ವೃದ್ಧಿಯನ್ನು ಹೊಂದಲಿ.

॥ ಭಾವಾರ್ಥ ॥

ಇಂದ್ರನು ನಮ್ಮ ರಕ್ಷಣಾರ್ಥವಾಗಿ ನಮ್ಮ ಸಮಿಾಪಕ್ಕೆ ಬರಲಿ. ಈ ಯಜ್ಞದಲ್ಲಿ ಪ್ರಶಂಸಿತನಾಗುವವನೂ, ಪರಾಕ್ರಮಿಯೂ, ಪ್ರವೃದ್ಧಿಯನ್ನು ಪಡೆಯುವವನೂ ಆದ ಇಂದ್ರನು ನಮ್ಮೊಡನೆ ಸೇರಿ ಹರ್ಷಪಡುವವನಾಗಿ ಆಗಲಿ. ಯಾವ ಇಂದ್ರನ ಶಕ್ತಿಗಳು ಬಹುಪ್ರಕಾರವಾಗಿನೆಯೋ, ಯಾವ ಇಂದ್ರನು ಪ್ರಕಾಶಮಾನನಾದ ಸೂರ್ಯನಂತೆ ಪ್ರಕಾಶಿಸುತ್ತಾನೆಯೋ, ಅಂತಹ ಇಂದ್ರನ ಶತ್ರುಸೈನ್ಯವನ್ನು ನಾಶಮಾಡತಕ್ಕ ತೇಜೋಯುತವಾದ ಬಲವು ವೃದ್ಧಿಯನ್ನು ಹೊಂದಲಿ.

English Translation.

May Indra come to us for our protection, and being praised (by us), may the mighty hero be exhilarated along with (us) at this rite, he whose energies are many : may he, like the radiant sun, recruit his own overpowering vigour.

॥ ವಿಶೇಷವಿಷಯಗಳು ॥

ತವಿಷೀ—ಎಂಬ ಶಬ್ದವು ಬಲನಾಮಗಳಲ್ಲಿ ಪಠಿತವಾಗಿದೆ (ನಿ ೩-೯) **ಪುರು** ಶಬ್ದವು ಬಹುನಾಮಗಳಲ್ಲಿ ಪಠಿತವಾಗಿದೆ (ನಿ ೩-೧೩) ಪುರು ಶಬ್ದದಿಂದ **ಪೂರ್ವೀಃ** ಎಂಬ ಶಬ್ದವು ನಿಷ್ಪನ್ನವಾಗಿರುವುದರಿಂದ ಪೂರ್ವೀಃ ಎಂದರೆ ಬಹಳವಾದ ಎಂದರ್ಥವು **ಕ್ಷತ್ರ** ಶಬ್ದವು ಉದಕನಾಮಗಳಲ್ಲಿಯೂ (ನಿ ೨-೨೪) **ಧನ** ನಾಮಗಳಲ್ಲಿಯೂ, (ನಿ. ೩-೯) ಪಠಿತವಾಗಿದ್ದರೂ ಇಲ್ಲಿ ತೇಜೋಯುತವಾದ ಬಲವೆಂದು ಭಾಷ್ಯಕಾರರು ಅರ್ಥಮಾಡಿದಾರೆ. **ಅಭಿಭೂತಿ-ಅಭಿ** ಎಂಬ ಉಪಸರ್ಗಪೂರ್ವಕವಾದ ಭೂ ಸತ್ತಾಯಾಂ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದಕ್ಕೆ ಪರಾಭವ, ಸೋಲು ಎಂದರ್ಥವು.

ದ್ಯೌಃ—ದ್ಯು ಶಬ್ದಕ್ಕೆ ಅನೇಕಾರ್ಥಗಳಿರುವವು **ದ್ಯುರಿತ್ಯಹ್ನೋ ನಾಮಧೇಯಂ ದ್ಯೋತತ ಇತಿ ಸತಃ** (ನಿ. ೧-೬) ದ್ಯು ಎಂದರೆ ಹಗಲಿಗೆ ಹೆಸರು. ಏಕಂದರೆ, ಹಗಲಿನಲ್ಲಿ ಪ್ರಕಾಶ (ಬೆಳಕು) ಇರುವುದು, ದ್ಯು ಶಬ್ದವು ಅಹರ್ನಾಮಗಳಲ್ಲಿ **ದ್ಯೌಃ (ದ್ಯುಃ) ಭಾನುಃ** ಇತ್ಯಾದಿಯಾಗಿ ಪಠಿತವಾಗಿರುವುದು. (ನಿ. ೨-೨೧), **ದ್ಯಾಂ ದಿವಂ** (ನಿ. ೯-೧೩ ಮತ್ತು ೧೦-೩೨) ಎಂದು ದ್ಯು ಶಬ್ದಕ್ಕೆ ಸ್ವರ್ಗವೆಂಬ ಅರ್ಥವೂ ಇರುವುದು, **ದ್ಯೌರಾದಿತ್ಯೋ ಭವತಿ** (ನಿ ೨-೧೪) ಎಂದರೆ ದ್ಯೌಃ ಶಬ್ದಕ್ಕೆ ಆದಿತ್ಯನೆಂಬ ಅರ್ಥವೂ ಇರುವುದು.

॥ संहितापाठः ॥

तस्येदिह स्तवथ वृष्ण्यानि तुविद्युम्नस्य तुविराधसो नॄन् ।
यस्य क्रतुर्विदथ्येषु नः सम्राट् सहाव्वा तरुत्रो अभ्यस्ति कृष्टीः ॥ ३ ॥

॥ पदपाठः ॥

तस्य । इत् । इह । स्तवथ । वृष्ण्यानि । तुविद्युम्नस्य । तुविराधसः । नॄन् ।
यस्य । क्रतुः । विदथ्येषु । नः । सम्ऽराट् । सहाव्वान् । तरुत्रः । अभि । अस्ति । कृष्टीः ॥ ३ ॥

॥ सायणभाष्यं ॥

तुविद्युम्नस्य बहुकीर्तेरस्तुविराधसो बहुधनस्य तस्येत्तस्यैवेंद्रस्यैव वृष्ण्यानि बलभूतान्नॄन् नेतॄन्मरुतो हे स्तोतारो यूयमिहास्मिन्यज्ञे स्तवथ । स्तुत । साह्वान् शत्रूनभिभावुकस्तरुत्रोऽस्मानापद्भ्यस्त्रातकोऽस्ति यस्यैवंद्रस्य क्रतुः कर्म कृष्टीः शत्रुसंबंधिनीः प्रजा अभ्यस्ति अभिभवति । तत्र दृष्टांतः । विदथ्येषु न सम्राट् । विदथार्हो न यज्ञार्हः सम्राट् सकललोकानामधिपतिरिव सद्वत् । तस्य वृष्ण्यानीति पूर्वेण संबंधः ॥

॥ प्रतिपदार्थ ॥

(ऐ स्तोतृगणे) तुविद्युम्नस्य—बहुप्रकारवाद कीर्तियुळ्ळवनू । तुविराधसः—प्रभूतवाद धनवुळ्ळवनू आद । तस्येत्—आदे इंद्रन । वृष्ण्यानि—बलप्रायरू । नॄन्—नेतृगळू आद मरुत्तुगळन्नु । इह—ई यज्ञदल्लि । स्तवथ—स्तुतिसि । साह्वान्—शत्रुगळन्नु सेदेबडियतक्कद्दू । तरुत्रः—नम्मन्नु रक्षिसतक्कद्दू आद । यस्य क्रतुः—यावं आदे इंद्रन कर्मगळु । कृष्टीः—(शत्रुसंबंधवाद) प्रजेगळन्नु । विदथ्येषु—यज्ञार्हतेयन्नु पडेदिरुव । सम्राट् नः—चक्रवर्तियु सकल शत्रुगळन्नू सोलिसुवंते । अभ्यस्ति—सोलिसि नाशपडिसुत्तदे.

॥ भावार्थ ॥

ऐ स्तोतृगळे, बहुप्रकारवाद कीर्तियुळ्ळवनू, प्रभूतवाद धनवुळ्ळवनू आद इंद्रन शक्तिवर्धकरू, नेतृगळू आद मरुत्तुगळन्नु ई यज्ञदल्लि स्तुतिसि, यज्ञार्हतेयन्नु

ಪಡೆದು, ಶತ್ರುನಾಶಕವಾದ ಶಕ್ತಿಯನ್ನು ಪಡೆದಿರುವ ಚಕ್ರವರ್ತಿಯು ತನ್ನ ಸಾಮರ್ಥ್ಯದಿಂದ ಸಕಲ ಶತ್ರುಗಳನ್ನೂ ನಾಶಪಡಿಸುವಂತೆ, ಶತ್ರುನಾಶಕವೂ, ನಮ್ಮನ್ನು ಆಪತ್ತಿನಿಂದ ರಕ್ಷಿಸತಕ್ಕವೂ ಆದ ಇಂದ್ರನ ಶಕ್ತಿಯುತವಾದ ಕರ್ಮಗಳು ಶತ್ರುಸಂಬಂಧಿಯಾದ ಪ್ರಜೆಗಳನ್ನು ಸೋಲಿಸಿ ನಾಶಪಡಿಸುತ್ತದೆ

English Translation.

Glorify the powerful leaders of that renowned and opulent (Indra), whose victorious and protecting energy rules over men, like a universal sovereign entitled to veneration.

॥ ವಿಶೇಷವಿಷಯಗಳು ॥

ತುವಿದ್ಯುಮ್ನಸ್ಯ ತುವಿರಾಧಸಃ ತಸ್ಯೇತ್ ವೃಷ್ಣ್ಯಾನಿ ನ್ಯಾನ್ ಇಹ ಸ್ತವಥ—ಹೇ ಸ್ತೋತಾರಃ ಬಹುಕೀರ್ತೇಃ ಬಹುಧನಸ್ಯ ತಸ್ಯೇಂದ್ರಸ್ಯೈವ ಬಲಭೂತಾನ್ ನೇತೃನ್ ಮರುತೋ ಯೂಯಂ ಅಸ್ಮಿನ್ಯಜ್ಞೇ ಸ್ತುತ । ಎಲೈ ಸ್ತೋತೃಗಳೇ, ನೀವು ಬಹುಕೀರ್ತಿಯುತನೂ, ಬಹುಧನವುಳ್ಳವನೂ ಆದ ಇಂದ್ರನಿಗೆ ಯುದ್ಧಾದಿಗಳಲ್ಲಿ ಸಹಾಯ ಮಾಡುವವರೂ ಬಲಪರಾಕ್ರಮಯುಕ್ತರೂ ಆಥವಾ ಇಂದ್ರನ ಶಕ್ತಿಯನ್ನು ತಮ್ಮ ಸಹಾಯದಿಂದ ವೃದ್ಧಿಪಡಿಸುವವರೂ ಮಾರ್ಗದರ್ಶಕರೂ ಆದ ಮರುದ್ದೇವತೆಗಳನ್ನು ಈ ಯಜ್ಞದಲ್ಲಿ ಸ್ತುತಿಸಿ ಎಂದು ಯಜಮಾನನು ಋತ್ವಿಗ್ಜನರನ್ನು ಸಂಬೋಧಿಸಿ ಹೇಳುವನು **ತುವಿ** ಶಬ್ದಕ್ಕೆ **ಬಹು** ಎಂಬರ್ಥವಿರುವುದು (ನಿ ೩-೧೩) **ದ್ಯುಮ್ನ** ಶಬ್ದವು ಧನನಾಮಗಳಲ್ಲಿ ಪಠಿತವಾಗಿರುವುದು (ನಿ ೩-೯) ಇದಲ್ಲದೆ, ಯಾಸ್ಕರು—**ದ್ಯುಮ್ನಂ ದ್ಯೋತತೇರ್ಯಶೋ ವಾ ಅನ್ನಂ ವಾ** ಎಂದು ನಿರ್ವಚನವನ್ನು (ನಿ ೫-೫) ಹೇಳಿರುವುದರಿಂದ ದ್ಯುಮ್ನ ಶಬ್ದಕ್ಕೆ ಯಶಸ್ಸು ಅನ್ನ ಎಂಬೆರಡರ್ಥಗಳೂ ಇರುವವು. ಆದುದರಿಂದ ಪ್ರಕೃತ ಋಕ್ಕಿನಲ್ಲಿ ಬಹಳವಾದ ಕೀರ್ತಿಯುಳ್ಳ ಅಥವಾ ಅನ್ನವುಳ್ಳ ಎಂಬ ಎರಡರ್ಥಗಳನ್ನು ಇಂದ್ರನ ಪರವಾಗಿ ಹೇಳಬಹುದು **ರಾಧಃ** ಶಬ್ದವೂ ಧನನಾಮಗಳಲ್ಲಿ (ನಿ ೩-೯) ಪಠಿತವಾಗಿರುವುದರಿಂದ **ತುವಿರಾಧಸಃ** ಎಂಬ ಶಬ್ದಕ್ಕೆ ಬಹುಧನವುಳ್ಳ ಅಥವಾ ತನ್ನನ್ನು ಸ್ತೋತ್ರಮಾಡುವನರಿಗೆ ಬಹಳವಾದ ಧನವನ್ನು ಕೊಡುವ ಇಂದ್ರನೆಂದರ್ಥವು **ಕೃತು** ಶಬ್ದವು ಕರ್ಮನಾಮಗಳಲ್ಲಿಯೂ, (ನಿ ೩-೧) **ಕೃಷ್ಟೀಃ** ಎಂಬ ಶಬ್ದವು ಮನುಷ್ಯನಾಮಗಳಲ್ಲಿಯೂ, (ನಿ ೧೦-೭೯) **ವಿದಥೆ** ಶಬ್ದವು ಯಜ್ಞನಾಮಗಳಲ್ಲಿಯೂ (ನಿ ೩-೧೯) ಪಠಿತವಾಗಿದೆ

ಸಾಹ್ವಾನ್ ತರುತ್ರಃ ಯಸ್ಯ ಕೃತುಃ ಕೃಷ್ಟೀಃ ಅಭ್ಯಸ್ತಿ—ಶತ್ರುನಾಶಕವಾದುದೂ ನಮ್ಮನ್ನು ಹಿಂಸೆಯಿಂದ ಕಾಪಾಡುವುದೂ ಆದ ಇಂದ್ರನ ಸಾಹಸಕೃತ್ಯವು (ನಮ್ಮ) ಶತ್ರುಗಳನ್ನು ಸೋಲಿಸಿ ನಾಶಪಡಿಸುತ್ತದೆ. ಎಂದರೆ ಇಂದ್ರನ ಸಾಮರ್ಥ್ಯಾತಿಶಯವು ಬಹಳವಾಗಿದೆ ಅಂತಹ ಶಕ್ತಿಸಾಹಸಕರ್ಮಗಳಿಂದ ಸಹಿತನಾದ ಇಂದ್ರನು ನಮ್ಮ ಶತ್ರುಗಳನ್ನು ಪರಾಭವಗೊಳಿಸುವನೆಂದಭಿಪ್ರಾಯವು ಇಲ್ಲಿ **ಕೃಷ್ಟೀಃ** ಎಂಬ ಶಬ್ದವು ಮನುಷ್ಯರನ್ನು ಎಂದು ಮಾತ್ರ ಸೂಚಿಸುವುದಾದರೂ ಶತ್ರುಜನರನ್ನು ಎಂದು ಸಂದರ್ಭೋಚಿತವಾದ ಅರ್ಥವನ್ನು ಹೇಳಬೇಕು

ವಿದಥ್ಯಃ ಸಾಮ್ರಾಟ್ ನ—ಇಂದ್ರನು ಶತ್ರುಗಳನ್ನು ಸೋಲಿಸುವ ವಿಷಯದಲ್ಲಿ ಇಲ್ಲಿ ಒಂದು ದೃಷ್ಟಾಂತವು ಉಕ್ತವಾಗಿರುವುದು ಸಕಲ ಭೂಮಂಡಲಕ್ಕೂ ಅಧಿಪತಿಯಾಗಿ ಸಾರ್ವಭೌಮನೆನಿಸಿದ ಚಕ್ರವರ್ತಿಯು ತನ್ನ

शत्रुगळन्नु यावं रीति सुलभवागि सोलिसुवनोर अदरंते इंद्रनु नम्म अथवा अवन शत्रुगळन्नु अनायासवागि सोलिसुवनेंदभिप्रायवु. इल्लि विदथ्यः एंब शब्दवु समम्राट् शब्दक्के विशेषण वागिदे. विदथशब्दक्के यज्ञवेंदर्थविरुवुदरिंद यज्ञदल्लि दीक्षेवहिसिरुव अथवा यज्ञमाड बेकेंदु इच्छिसुव एंदर्थवु. यज्ञमाडुवाग राजरु दिग्विजयवन्नु माडि अनेक शत्रुगळन्नु सोलिसि धनवन्नु संग्रहिसुवुदु प्रसिद्धियु अदन्नेर इल्लि सूचिसिरबहुदु. इल्लि न एंब शब्दवु उपमार्थदल्लि प्रयुक्तवागिदे.



। संहितापाठः ।

आ यात्विंद्रो दिव आ पृथिव्या मुक्षू समुद्रादुत वा पुरीषात् ।
स्वर्णरादवसे नो मरुत्वान्परावतो वा सदनादृतस्य ॥ ६ ॥

॥ पदपाठः ॥

आ । यातु । इंद्रः । दिवः । आ । पृथिव्याः । मुक्षु । समुद्रात् । उत । वा । पुरीषात् ।
स्वः३नरात् । अवसे । नः । मरुत्वान् । परा३वतः । वा । सदनात् । ऋतस्य ॥ ६ ॥

॥ सायणभाष्यं ॥

मरुत्वान्मरुद्भिः सहित इंद्रो नोऽस्माकमवसे रक्षणायै दिवः स्वर्गलोकादा यातु । आगच्छतु । पृथिव्या भूलोकाच्चै मुक्षु शीघ्रमा यातु । उत वा अथवा समुद्रादंतरिक्षलोकाच्चा यातु । समुद्रो इत्यंतरिक्षनाम सगरः समुद्रोऽध्वरमिति तन्नामसु पाठात् । अथवा पुरीषादुदकादायातु । पुरीषमित्युदकनाम मधु पुरीषं पिप्पलमिति तन्नामसु पाठात् । स्वर्णरात् स्वरादित्यो नरो नेता यस्य तस्मात्स्वर्लोकादायातु । परावतो वा दूरादायातु । ऋतस्योदकस्य सदनात्स्थानान्मेघलोकादायातु ॥

॥ ಪ್ರತಿಪದಾರ್ಥ ॥

ಮರುತ್ವಾನ್—ಮರುತ್ತುಗಳಿಂದ ಕೂಡಿದ । **ಇಂದ್ರಃ**—ಇಂದ್ರನು । **ನಃ**—ನಮ್ಮ । **ಅವಸೇ**—ರಕ್ಷಣಾರ್ಥವಾಗಿ । **ದಿವಃ**—ಸ್ವರ್ಗಲೋಕದಿಂದ । **ಆ ಯಾತು**—ಬರಲಿ । **ಪೃಥಿವ್ಯಾಃ**—ಪೃಥಿವಿಯಿಂದಲೂ । **ಮಕ್ಷು**—ಶೀಘ್ರವಾಗಿ । **ಆ (ಯಾತು)**—ಬರಲಿ । **ಉತ ವಾ**—ಅಥವಾ । **ಸಮುದ್ರಾತ್**—ಅಂತರಿಕ್ಷದಿಂದ ಲಾಗಲಿ । **ಪುರೀಷಾತ್**—ಉದಕಮಧ್ಯದಿಂದಾಗಲಿ । **ಸ್ವರ್ಣರಾತ್**—ಆದಿತ್ಯನಿಗೆ ಮಾರ್ಗವಾದ ದ್ಯುಲೋಕ ದಿಂದಾಗಲಿ (ಬರಲಿ) । **ಪರಾವತೋ ವಾ**—ದೂರಪ್ರದೇಶದಿಂದಾದರೂ (ಬರಲಿ) । **ಋತಸ್ಯ**—ಉದಕದ । **ಸದನಾತ್**—ಆವಾಸಸ್ಥಾನವಾದ ಮೇಘಲೋಕದಿಂದಾಗಲಿ (ಬರಲಿ).

॥ ಭಾವಾರ್ಥ ॥

ಮರುತ್ತುಗಳಿಂದ ಕೂಡಿದ ಇಂದ್ರನು ನಮ್ಮ ರಕ್ಷಣಾರ್ಥವಾಗಿ ಎಲ್ಲಿದ್ದರೂ ಬರಲಿ ಸ್ವರ್ಗದಲ್ಲಿದ್ದರೂ ಅಥವಾ ಪೃಥ್ವಿಯಲ್ಲಿದ್ದರೂ ಅಥವಾ ಅಂತರಿಕ್ಷಸ್ಥನಾಗಿದ್ದರೂ ಅಥವಾ ಉದಕಮಧ್ಯದಲ್ಲಿದ್ದರೂ ಅಥವಾ ಆದಿತ್ಯನ ಆವಾಸಸ್ಥಾನವೂ, ಸಂಚಾರಮಾರ್ಗವೂ ಆದ ದ್ಯುಲೋಕದಲ್ಲಿದ್ದರೂ ಅಥವಾ ಅತ್ಯಂತ ದೂರಪ್ರದೇಶದಲ್ಲಿದ್ದರೂ ಅಥವಾ ಉದಕಕ್ಕೆ ಆವಾಸಸ್ಥಾನವಾದ ಮೇಘಲೋಕದಲ್ಲಿದ್ದರೂ ಸಹ ಖಂಡಿತವಾಗಿಯೂ ನಮ್ಮ ರಕ್ಷಣೆಗೆ ಬರಲಿ.

English Translation.

May Indra, accompanied by the Maruts, come quickly for our protection, from the heaven, from the earth, from the firmament, or from the waters, from the sphere of the sun, from (any) distant region, from the abode of the rains.

॥ ವಿಶೇಷವಿಷಯಗಳು ॥

ಇಂದ್ರನಿಗೂ ಮರುತ್ತುಗಳಿಗೂ ಇರುವ ಶಾಶ್ವತವಾದ ಸಾಹಚರ್ಯವು ಶ್ರುತಿಪ್ರಸಿದ್ಧವಾದುದು. ಇಂದ್ರನಿಗೂ ಮರುತ್ತುಗಳಿಗೂ ಇರುವ ರಾಜಪ್ರಜಾಸಂಬಂಧವೂ, ಮರುತ್ತುಗಳೊಡಗೂಡಿದ ಇಂದ್ರನಿಗೆ ಮುಖ್ಯವಾದ ಯಜ್ಞ ಕ್ರಿಯೆಗಳಲ್ಲಿ ಹವಿಸ್ಸಿನ ಅರ್ಪಣೆಯೂ ಮತ್ತು ವೃತ್ರಾಸುರನೊಡನೆ ಯುದ್ಧವನ್ನು ನಡೆಸುವಾಗ ಇಂದ್ರನಿಗೆ ಮರುತ್ತುಗಳು ಸಹಾಯಮಾಡುವುದೂ ಸಂಹಿತೆಗಳಲ್ಲಿಯೂ, ಬ್ರಾಹ್ಮಣಗಳಲ್ಲಿಯೂ ಅನೇಕಕಡೆ ಸ್ತುತಿಸಲ್ಪಟ್ಟಿದೆ ಇಂದ್ರನು ಮರುತ್ತುಗಳೊಡನೆ ಸೇರಿಕೊಂಡು ಉಳಿದ ದೇವತೆಗಳಿಂದ ಪ್ರತ್ಯೇಕವಾಗಿದ್ದುದನ್ನು ಹೇಳುವ ಪೂರ್ವಕಥೆಯೊಂದು ಶತಪಥ ಬ್ರಾಹ್ಮಣದಲ್ಲಿ ಈ ರೀತಿ ವರ್ಣಿತವಾಗಿದೆ

ಆಥಿತ್ಯೇನ ವೈ ದೇವಾ ಇಷ್ವಾ । ತಾನ್ಸ್ವಮದವಿಂದತ್ತೇ ಚತುರ್ಧಾ ವ್ಯದ್ರವನ್ನನ್ಯೋನ್ಯಸ್ಯ ಶ್ರಿಯಾ೨ತಿಷ್ಠಮಾನಾ ಅಗ್ನಿರ್ವಸುಭಿಃ, ಸೋಮೋ ರುದ್ರೈರ್ವರುಣ ಆದಿತ್ಯೈರಿಂದ್ರೋ ಮರುದ್ಭಿರ್ಬೃಹಸ್ಪತಿರ್ವಿಶ್ವೈದೇವೈಃ ।

(ಶ ಬ್ರಾ ೩-೪-೩-೧).

ಹಿಂದೆ ದೇವತೆಗಳು ಆತಿಥ್ಯಕ್ರಿಯೆಯನ್ನು ನೆರವೇರಿಸಿದಾಗ ಅವರವರಲ್ಲೇ ವೈಮನಸ್ಯವುಂಟಾಗಿ ಒಬ್ಬರಿಗೊಬ್ಬರು ಸೋಲಲಿಸ್ಪಪಡದೇ ನಾಲ್ಕು ಗುಂಪುಮಾಡಿಕೊಂಡು ಬೇರೆ ಬೇರೆಯಾದರು ಅಗ್ನಿಯು ವಸುಗಳೊಂದಿಗೂ,

ಸೋಮನು ರುದ್ರರೊಂದಿಗೂ, ವರುಣನು ಆದಿತ್ಯರೊಂದಿಗೂ, ಇಂದ್ರನಃ ಮರುತ್ತುಗಳೊಂದಿಗೂ ಮತ್ತು ಬೃಹಸ್ಪತಿಯು ವಿಶ್ವೇದೇವತೆಗಳೊಂದಿಗೂ ಕೂಡಿಕೊಂಡು ಪ್ರತ್ಯೇಕವಾಗಿ ಗುಂಪುಮಾಡಿಕೊಂಡರು, ಎಂಬ ಈ ಕಥೆಯಲ್ಲಿ ಇಂದ್ರನು ಮರುತ್ತುಗಳೊಡನೆ ಸಾಹಚರ್ಯವನ್ನು ಬೆಳೆಸಿ ಅವರೊಡನೆ ಇಟ್ಟುಕೊಂಡಿರುವ ನಿಕಟವಾದ ಸಂಬಂಧವನ್ನು ಹೇಳಿರುವುದು. ಇದೂ ಅಲ್ಲದೇ, ಇಂದ್ರನೇ ದೊರೆಯೆಂದೂ ಮರುತ್ತುಗಳೇ ಪ್ರಜೆಗಳೆಂದೂ ಅನೇಕಕಡೆ ಹೇಳಿದೆ. ಉದಾಹರಣೆಗೆ—

ಕ್ಷತ್ರಂ ವಾ ಇಂದ್ರೋ ವಿಶೋ ಮರುತೋ ವಿಶಾ ವೈ ಕ್ಷತ್ರಿಯೋ ಬಲವಾನ್ ಭವತಿ ।

(ಶ. ಬ್ರಾ. ೪-೩-೩-೬)

ಇಂದ್ರನು ಕ್ಷತ್ರತೇಜಸ್ಸುಳ್ಳ ರಾಜನು, ಮರುತ್ತುಗಳೇ ಪ್ರಜೆಗಳು. ಪ್ರಜೆಗಳ ಸಹಕಾರದಿಂದಲೇ ರಾಜನು ಶಕ್ತಿಯುಳ್ಳವನಾಗಿ ಆಗುತ್ತಾನೆಂದೂ ಮರುತ್ತುಗಳ ಸಹಾಯದಿಂದ ಇಂದ್ರನ ಪರಾಕ್ರಮವು ವೃದ್ಧಿಯಾಯಿತೆಂದೂ ಸೂಚಿಸಿದೆ. ಈ ರೀತಿಯಾದ ನಿಕಟವಾದ ಸಂಬಂಧವೂ, ಸಾಹಚರ್ಯವೂ ಇರುವುದರಿಂದಲೇ ಇಂದ್ರನನ್ನೂ ಮರುತ್ತುಗಳನ್ನೂ ಒಟ್ಟಿಗೆ ಉದ್ದೇಶಿಸಿ ಹವಿಸ್ಸುಗಳನ್ನು ಅರ್ಪಿಸುವ ಕ್ರಮವೂ ಶ್ರುತಿಗಳಲ್ಲಿ ಕಂಡುಬರುತ್ತದೆ.

ಅನವಧ್ಯೈರಭಿದ್ಯುಭಿರ್ಮಖಃ ಸಹಸ್ವದರ್ಚತಿ ।
ಗಣೈರಿಂದ್ರಸ್ಯ ಕಾಮ್ಯೈಃ ॥

(ಋ. ಸಂ ೧-೬-೮)

ಮಂದ್ರಾಃ ಸುಜಿಹ್ವಾಃ ಸ್ವರಿತಾರ ಆಸಭಿಃ ಸಂಮಿಶ್ಲಾ ಇಂದ್ರೇ ಮರುತಃ ಪರಿಷ್ಟುಭಃ ।

(ಋ . ಸಂ ೧-೧೬೬-೧೧)

ಸ ನೋ ಮರುದ್ಭಿರ್ವೃಷಭ ಶ್ರವೋ ಧಾ ಉಗ್ರ ಉಗ್ರೇಭಿ ಸ್ಥವಿರಃ ಸಹೋದಾಃ ।

(ಋ ಸಂ ೧-೧೭೧-೫)

ಎಂಬವೇ ಮುಂತಾದ ಋಕ್ಕುಗಳಿಂದ ಇಂದ್ರನಿಗೂ ಮರುತ್ತುಗಳಿಗೂ ಒಟ್ಟಿಗೆ ಸೇರಿಸಿ ಆಹ್ವಾನವೂ ಹವಿಸ್ಸಿನ ಅರ್ಪಣೆಯೂ ಇದೆ ಈ ರೀತಿಯ ಸಾಹಚರ್ಯವಿರುವುದರಿಂದಲೇ ಇಲ್ಲಿಯೂ ಸಹ **ಮರುತ್ವಾನ್** ಎಂದು ವಿಶೇಷಣವಿದೆ ಮರುತ್ತುಗಳೊಡಗೂಡಿದ ಇಂದ್ರನನ್ನು ಉದ್ದೇಶಿಸಿರುವ ಸಮಯಗಳಲ್ಲೆಲ್ಲಾ **ಮರುತ್ವಾನ್** ಎಂದು ಕರೆದಿದೆಯೆಂದು ಬೃಹದ್ದೇವತೆಯಲ್ಲಿ ಈ ದೇವತೆಗಳ ಸಂಬಂಧಸೂಚಕವಾದ ವಿಶೇಷಣವನ್ನು ವಿವರಿಸಿದೆ

ಮರುದ್ಭಿಃ ಸಹ ಯತ್ರೇಂದ್ರೋ ಮರುತ್ವಾಂಸ್ತತ್ರ ಸೋಽಭವತ್ ।

(ಬೃ ದೇ ೪-೫೬)

ಸ್ವರ್ಣರಾತ್—ಸ್ವಃ ಎಂಬ ಶಬ್ದಕ್ಕೆ ಅನೇಕಾರ್ಥಗಳಿರುವುವು ಇಲ್ಲಿ ಸ್ವರ್ಗವೆಂಬ ಸಾಧಾರಣಾರ್ಥದಲ್ಲಿ ಇದರ ಪ್ರಯೋಗವಿರುವುದು (ನಿ ೩-೧೩)

ಪ್ರತ್ಯಙ್ ದೇವಾನಾಂ ವಿಶಃ ಪ್ರತಙ್ಙುದೇಷಿ ಮಾನುಷಾನ್ ।
ಪ್ರತ್ಯಙ್ ವಿಶ್ವಂ ಸ್ವರ್ದೃಶೇ ॥

(ಋ ಸಂ. ೧-೫೦-೫)

ಎಂಬ ಋಕ್ಕಿನಲ್ಲಿ ಸ್ವಃ ಎಂಬ ಶಬ್ದಕ್ಕೆ ಸ್ವಃ—ಸ್ವರ್ಲೋಕಂ ಎಂದು ಭಾಷ್ಯಕಾರರು ವ್ಯಾಖ್ಯಾನಮಾಡಿರುವುದರಿಂದ ಸ್ವರ್ಗಲೋಕವೆಂದರ್ಥವು ಸ್ವರಾದಿತ್ಯೋ ಭವತಿ । ಸ್ವಃ ಎಂದರೆ ಸೂರ್ಯನ ಹೆಸರು

ಯಾಭೀ ರೇಭಂ ನಿವೃತಂ ಸಿತಮದ್ಭ್ಯ ಉದ್ವಂದನಮೈರಯತಂ ಸ್ವರ್ದೃಶೇ ।

(ಋ. ಸಂ ೧-೧೧೨-೫)

ಎಂಬ ಋಕ್ಕಿನಲ್ಲಿ ಸ್ವಃ ಎಂಬ ಶಬ್ದವು ಸ್ವರಾದಿತ್ಯಂ—ಆದಿತ್ಯ ಅಥವಾ ಸೂರ್ಯನೆಂಬ ಅರ್ಥದಲ್ಲಿಯೂ,

ತ್ಮನಾ ವಹಂತೋ ದುರೋ ವ್ಯೃಣ್ವನ್ನವತಿ ವಿಶ್ವೇ ಸ್ವ ೧ರ್ದೃಶೀಕೇ ।

(ಋ. ಸಂ. ೧-೬೯-೫)

ಸಿಂಧುಂ ನ ಕ್ಷೋದಃ ಪ್ರ ನೀಚೀರೈನೋನ್ನವಂತ ಗಾವಃ ಸ್ವ ೧ರ್ದೃಶೀಕೇ ।

(ಋ ಸಂ ೧-೬೬-೫)

ಎಂಬ ಋಕ್ಕುಗಳಲ್ಲಿ ಸ್ವಃ-ನಭಸಿ, ಅಂತರಿಕ್ಷವೆಂಬರ್ಥದಲ್ಲಿಯೂ,

ನಿ ಯಂ ದಧುರ್ಮನುಷ್ಯಾಸು ವಿಕ್ಷು ಸ್ವ ೧ರ್ಣ ಚಿತ್ರಂ ವಪುಷೇ ವಿಭಾವಂ ।

(ಋ ಸಂ. ೧-೧೪೪-೧)

ಎಂಬ ಋಕ್ಕಿನಲ್ಲಿ ಯಾಸ್ಕರು ಸ್ವರಾದಿತ್ಯೋ ಭವತಿ ಸು ಆರಣಃ ಸು ಈರಣಃ ಸ್ವೃತೋ ೬ಸಾನ್ತ್ಸನ್ನತೋ ಭಾಸಂ ಜ್ಯೋತಿಷಾಂ ಸ್ವೃತೋ ಭಾಸೇತಿ ವಾ—ಎಂದು ಹೇಳಿರುವಂತೆ ಭಾಸಾ-ಎಂದರೆ ಪ್ರಕಾಶವೆಂದೂ ಅರ್ಥವು ಸ್ವಃ ಎಂಬ ಶಬ್ದವು ಅರ್ಣಃ ಕ್ಷೋದಃ ಮೊದಲಾದ ನೂರೊಂದು ಉದಕನಾಮಗಳ ಮಧ್ಯದಲ್ಲಿಯೂ ಪಠಿತವಾಗಿರುವುದರಿಂದ ಸ್ವಃ ಎಂದರೆ ಉದಕವೆಂದೂ ಅರ್ಥವು.

(ನಿ. ೨-೨೪)

। ಸಂಹಿತಾಪಾಠಃ ॥

ಸ್ಥೂರಸ್ಯ ರಾಯೋ ಬೃಹತೋ ಯ ಈಶೇ ತಮು ಷ್ಟವಾಮ ವಿದಥೇಷ್ವಿಂದ್ರಂ ।

ಯೋ ವಾಯುನಾ ಜಯತಿ ಗೋಮತೀಷು ಪ್ರ ಧೃಷ್ಣುಯಾ ನಯತಿ ವಸ್ಯೋ ಅಚ್ಛ ॥ ೪ ॥

॥ पदपाठः ॥

स्थूरस्य । रायः । बृहतः । यः । ईशे । तं । ऊं इति । स्तवाम । विदथेषु । इंद्रं ।
यः । वायुना । जयति । गोऽमतीषु । प्र । धृष्णुऽया । नयति । वस्यः । अच्छ ॥४॥

॥ सायणभाष्यं ॥

य इंद्रः स्थूरस्य स्थूलस्य बृहतो महतो रायो धनस्येशे ईष्टे विदथेषु यज्ञेषु । विदथ इति यज्ञनामैतत् । तमिंद्रमु तमिंद्रमेव वयं स्तोतारः स्तवाम । य इंद्रो वायुना प्राणरूपेण बलेन गोमतीषु सेनासु जयति शत्रून्निजयतेऽ । धृष्णुया धृष्णुः प्रगल्भो य इंद्रः स्तोत्रभ्यस्स्यो वसीयः श्रेयस्करं पशवादिधनमच्छाभि प्रणयति प्रापयति । तमेवेंद्रं स्तवामेति पूर्वेण संबंधः ॥

॥ प्रतिपदार्थ ॥

यः—ಯಾವ ಇಂದ್ರನು । विदथेषु—ಯಜ್ಞಗಳಲ್ಲಿ । स्थूरस्य—ಪ್ರಭೂತವಾದುದೂ । बृहतः—ಅಧಿಕವಾದ ಬೆಲೆಯುಳ್ಳದ್ದೂ ಆದ । रायः—ಧನಕ್ಕೆ । ईशे—ಪ್ರಭುವಾಗಿದ್ದಾನೆಯೋ (ಮತ್ತು) । यः—ಯಾವ ಇಂದ್ರನು । वायुना—ಪ್ರಾಣರೂಪವಾದ ಬಲದಿಂದ । गोमतीषु—ಸೇನೆಗಳಲ್ಲಿ (ಸೇನೆಗಳಿಂದ) । जयति—(ಶತ್ರುಗಳನ್ನು) ಜಯಿಸುವನೋ । धृष्णुया—ಪ್ರಗಲ್ಭನಾದ ಯಾವ ಇಂದ್ರನು । वस्यः—ಶ್ರೇಷ್ಠವಾದ ಧನಗಳನ್ನು । अच्छ—ಸ್ತೋತೃಗಳ ಅಭಿಮುಖವಾಗಿ । प्र नयति—ಸೇರಿಸುತ್ತಾನೆಯೋ । तं इंद्रं ऊ—ಅದೇ ಇಂದ್ರನನ್ನೇ । स्तवाम—ನಾವು ಸ್ತುತಿಸುತ್ತೇವೆ.

॥ भावार्थ ॥

ಯಾವ ಇಂದ್ರನು ಯಜ್ಞಗಳಲ್ಲಿ ಸ್ಥಿರವಾದುದೂ, ಪ್ರಭೂತವಾದುದೂ, ಅಧಿಕವಾದ ಬೆಲೆಯುಳ್ಳದ್ದೂ ಆದ ಧನಕ್ಕೆ ಪ್ರಭುವಾಗಿದ್ದಾನೆಯೋ, ಯಾವ ಇಂದ್ರನು ಪ್ರಾಣರೂಪವಾದ ಬಲದಿಂದ ತನ್ನ ಬಲವಾದ ಸೇನೆಗಳಿಂದ ಶತ್ರುಗಳನ್ನು ಜಯಿಸುವನೋ, ಮತ್ತು ಪರಾಕ್ರಮಿಯಾದ ಯಾವ ಇಂದ್ರನು ಸ್ತೋತೃಗಳಿಗೆ ಉತ್ತಮವಾದ ಪಶ್ವಾದಿ ಧನಗಳನ್ನು ಒದಗಿಸುವನೋ ಅಂತಹ ಇಂದ್ರನನ್ನೇ ಸ್ತೋತೃಗಳಾದ ನಾವು ಸ್ತುತಿಸುತ್ತೇವೆ.

English Translation.

We glorify, in solemn rites, this Indra who rules over substantial, abundant riches, who by his powess is victor over (hostile) hosts, who by his munificence brings excellent (wealth) to the presence (of his worshippers).

॥ ವಿಶೇಷವಿಷಯಗಳು ॥

ವಿದಥೇಷು—ಯಜ್ಞೇಷು । ಯಜ್ಞಗಳಲ್ಲಿ ಎಂದರೆ ಯಜ್ಞಸ್ಥಾನಗಳಲ್ಲಿ ಎಂದರ್ಥ. **ವೇದಯತ್ಸು ಸ್ತೋತ್ರೇಷು ನಿಮಿತ್ತಭೂತೇಷು** ಎಂಬುದರಿಂದ **ವಿದಥ** ಶಬ್ದದ ನಿರ್ವಚನವನ್ನು ತೋರಿಸಿದೆ. ಇಲ್ಲಿ ನಿರುಕ್ತ ಕಾರರ ನಿರ್ವಚನಗಳಲ್ಲಿ ಒಂದನ್ನು ಮಾತ್ರ ಅನುಸರಿಸಿದೆ. **ಯಜ್ಞಾ ನೇನಃ** ಇತ್ಯಾದಿ **ಯಜ್ಞನಾಮ**ಗಳಲ್ಲಿ ಪರಿತ ವಾಗಿದೆ. (ನಿ. ೩–೯) ಮತ್ತು **ವಿದಥಾನಿ ವೇದನಾನಿ ।** ವಿದಥ ಶಬ್ದಕ್ಕೆ ಜ್ಞಾನವೆಂದರ್ಥನೆಂಬುದನ್ನು (ನಿ. ೭–೭) ತೋರಿಸಲು—

ಹೋತಾ ದೇವೋ ಅಮರ್ತ್ಯಃ ಪುರಸ್ತಾದೇತಿ ಮಾಯಯಾ । ವಿದಥಾನಿ ಪ್ರಚೋದಯನ್ ॥

(ಋ. ಸಂ. ೩–೨೭–೭)

ಎಂಬ ಋಕ್ಕನ್ನುದಹರಿಸಿ ಅಲ್ಲಿ **ಜ್ಞಾನಾರ್ಥಕ**ವಾದ **ವಿದ್** ಧಾತುವಿನಿಂದ ನಿಷ್ಪನ್ನವಾಗಿದೆಯೆಂದು ತಿಳಿಸಿದ್ದಾರೆ. ಇಲ್ಲಿ ಸಾಯಣರು **ವಿದಥಾನಿ ವೇದಿತವ್ಯಾನಿ ಕರ್ಮಾಣಿ ।** ಅರಿಯಲ್ಪಡಬೇಕಾದ ಕರ್ಮಗಳು ಎಂದರ್ಥಮಾಡಿ ದ್ದಾರೆ ಈ ಪದಕ್ಕಾಗಿ ನಿಷ್ಕರ್ಷವಾದ ಅರ್ಥವನ್ನು ಹೇಳಬೇಕೆಂದು ಕೆಲವು ಪಂಡಿತರು ಪ್ರಯತ್ನಿಸಿ ಎಲ್ಲರೂ ತಮ್ಮ ವೈಯಕ್ತಿಕವಾದ ಅಭಿಪ್ರಾಯವನ್ನು ತಿಳಿಸಿರುವರು ಒಬ್ಬೊಬ್ಬರು ಒಂದೊಂದು ವಿಧವಾದ ಈ ಪದದ ನಿರ್ವಚನವನ್ನು ತೋರಿಸಿ ಬೇರೆ ಬೇರೆ ಅರ್ಥಮಾಡಿರುವುದರಿಂದ ಆ ಎಲ್ಲಾ ಅರ್ಥಗಳೂ ಸಂದರ್ಭಾನುಸಾರವಾಗಿ ಹೊಂದಿಕೊಳ್ಳುವುವು ಎಂದು ತಿಳಿಯುತ್ತದೆ

ವಿದಥ ಶಬ್ದವು **ಧಾ** ಧಾತುವಿಗೆ **ವಿ** ಎಂಬ ಉಪಸರ್ಗವನ್ನು ಸೇರಿಸುವುದರಿಂದ ನಿಷ್ಪನ್ನವಾಗಿದೆ. **ವಿಧಾ** ಎಂದರೆ ಹಂಚು, **ನಿಯಮಿಸು** ಎಂದರ್ಥವಾಗುತ್ತದೆ ನಿಯಮಪಾಲನೆಯೆಂದೂ ಅರ್ಥವಾಗಬಹುದು. **ವಿದಥ** ಮತ್ತು **ವಿಧಾ** ಈ ಎರಡು ಪದಗಳ ಅರ್ಥಗಳೂ ಒಂದೇ ಎಂಬ ಅಂಶವನ್ನು,

ವಯಮಗ್ನೇ ವನುಯಾಮ ತ್ವೋತಾ ವಸೂಯವೋ ಹವಿಷಾ ಬಧ್ಯಮಾನಾಃ ।
ವಯಂ ಸಮರ್ಯೇ ವಿದಥೇಷ್ವಹ್ನಾಂ ವಯಂ ರಾಯಾ ಸಹಸಸ್ಪುತ್ರ ಮರ್ತಾನ್ ॥

(ಋ ಸಂ. ೫–೩–೬)

ಎಂಬ ಋಕ್ಕಿನಲ್ಲಿರುವ **ವಿದಥೇಷ್ವಹ್ನಾಂ** ಎಂಬ ಪದಗಳಿಗೂ,

ವಿ ಯೇ ದಧುಃ ಶರದಂ ಮಾಸಮಾದಹರ್ಯಜ್ಞಮಕ್ತುಂ ಚಾದೃಚಂ ।
ಅನಾಪ್ಯಂ ವರುಣೋ ಮಿತ್ರೋ ಅರ್ಯಮಾ ಕ್ಷತ್ರಂ ರಾಜಾನ ಆಶತ ॥

(ಋ ಸಂ ೭–೬೬–೧೧)

ಎಂಬ ಋಕ್ಕಿನಲ್ಲಿರುವ **ವಿ—ದಧುಃ** ಎಂಬ ಪದಗಳಿಗೂ ಇರತಕ್ಕ ಸಮಾನಾರ್ಥದಿಂದ ತಿಳಿಯುತ್ತದೆ. ಮತ್ತು **ವಿಹಿತ, ವಿದಥ** ಎಂಬ ಪದಗಳ ಅರ್ಥಗಳೂ ಒಂದೇ ಆಗಿ, ಶಾಸ್ತ್ರವಿಹಿತವಾದ ಯಜ್ಞವೇ **ವಿದಥ**ವೆಂಬ ಹೆಸರಿನಿಂದ ಕರೆಯಲ್ಪಟ್ಟಿತು. ಯಜ್ಞ ಅಥವಾ ಯಜ್ಞಸಭೆ ಎಂಬ ಅರ್ಥವು ಕೊನೆಯಲ್ಲಿ ಉಳಿಯಿತು ಎಂದು ಕೆಲವು ಪಾಶ್ಚಾತ್ಯಪಂಡಿತರು ವಿವರಿಸಿದ್ದಾರೆ.

॥ संहितापाठः ॥

उप॑ यो॒ नमो॒ नमसि स्तभा॒यन्नि॒यर्ति॒ वाच॑ं ज॒नय॒न्यज॑ध्यै ।
ऋ॒ंजसा॑नः पुरुवार॒ उक्थ्यै॒रेंद्रं॑ कृण्वी॒त स॒दनेषु॒ होता॑ ॥

॥ पदपाठः ॥

उप॑ । यः । नमः॑ । नम॑सि । स्तभा॒यन् । इ॒यर्ति॑ । वाच॑म् । ज॒नय॑न् । यज॑ध्यै ।
ऋ॒ंजसा॑नः । पुरु॑ऽवारः । उक्थ्यैः॑ । आ । इ॒न्द्र॒म् । कृ॒ण्वी॒त॒ । स॒दने॑षु । होता॑ ॥ ४ ॥

॥ सायणभाष्यं ॥

उप स्तभायन् लोकानुपस्तंभयेन् यजध्यै यज्ञं वाचं गर्जितलक्षणां वाचं जनयन् प्रजनयन् ऋंजसानः प्रसाध्यमानः । ऋंजतिः प्रसाधनकर्मेति यास्कः । उक्थ्यैः शस्त्रलक्षणैः स्तोत्रैश्च पुरुवारः बहुभिः संभजनीयो यः इंद्रो नमसि । नम इत्यन्ननामैतत् । यजमानैर्दत्तेन हविषि नमो यजमानेभ्यो यज्ञादिसाधनमन्नमिति यास्कः प्रेरयति । इंद्रो हविषा तृप्तः सन् वृष्टिद्वारान्नं प्रयच्छति तेन चान्नेन पुनर्यज्ञः प्रजायत इत्यर्थः । अस्मदीयो होता सदनेषु यज्ञगृहेषु तमिंद्रमा कृण्वीत । अभिमुखीकरोतु ॥

॥ प्रतिपदार्थ ॥

यः—यावं इन्द्रनु । **उप स्तभायन्**—लोकगळन्नु भद्रवाद तळहदिय मेलॆ शाश्वतवागि निल्लिसुत्तलू । **यजध्यै**—यज्ञवमाडुवुदक्के (सूचकवाद) । **वाचं**—गर्जन रूपवाद वाक्यन्नु । **जनयन्**—उत्पन्नमाडुत्तलू । **ऋंजसानः**—आराधिसल्पडुत्तलू । **उक्थ्यैः**—शस्त्रमंत्रगळिंद । **पुरुवारः**—अनेकरिंद स्तुतिसल्पडुत्तलू । **नमसि**—हविस्सिन रूपद अन्नक्के प्रतियागि । **नमः**—यजमानरिगे उपयुक्तवाद अन्नवन्नु । **इयर्ति**—ओदगिसुत्तानॆयो । (तं) इंद्रं—आदे इंद्रनन्नु । **होता**—होतृवु । **सदनेषु**—यज्ञगृहगळल्लि । **आ कृण्वीत**—(यज्ञकर्तरिगे) अभिमुखनागिरुवंतॆ माडलि.

॥ भावार्थ ॥

यावं इंद्रनु सकल लोकगळन्नू सह भद्रवाद तळहदिय मेलॆ शाश्वतवागि निल्लिसुववनागियू, यज्ञमाडलु सूचकवाद गर्जनरूपवाद वाक्यन्नु उत्पन्नमाडुववनागियू मत्तु

ಯಜಮಾನರಿಂದ ಆರಾಧಿಸಲ್ಪಡುವವನಾಗಿಯೂ, ಶಸ್ತ್ರರೂಪವಾದ ಸ್ತೋತ್ರಗಳಿಂದ ಸ್ತುತಿಸಲ್ಪಡುವವನಾಗಿಯೂ ಸಹ ಹವಿಸ್ಸಿನ ರೂಪದ ಅನ್ನಕ್ಕೆ ಪ್ರತಿಯಾಗಿ ಯಜಮಾನನಿಗೆ ವೃಷ್ಟಿಜನಿತವಾದ ಅನ್ನವನ್ನು ಒದಗಿಸುತ್ತಾನೆಯೋ ಅದೇ ಇಂದ್ರನನ್ನು ಹೋತೃವು ಯಜ್ಞಗೃಹಗಳಲ್ಲಿ ಯಜ್ಞಕರ್ತನಿಗೆ ಅಭಿಮುಖನಾಗಿರುವಂತೆ ಮಾಡಲಿ

English Translation

Let the invoking priest bring to our dwellings that (Indra) who, firmly fixing the (world), returns food for (sacrificial food), and (utters) a voice enjoining (men) to worship . he who is to be propitiated by praises, who is adored by many.

॥ ವಿಶೇಷವಿಷಯಗಳು ॥

ಉಕ್ಥೈಃ—ಸ್ತೋತ್ರೈಃ । ಸ್ತೋತ್ರಗಳಿಂದ ಎಂದು ಸಾಧಾರಣವಾದ ಅರ್ಥವನ್ನು ಮಾತ್ರ ವ್ಯಾಖ್ಯಾನದಲ್ಲಿ ಹೇಳದೆ ಆದರ, **ತ್ಯತ್ ತೇ ಉಕ್ಥಂ** । ಪ್ರಸಿದ್ಧವಾದುದೂ, ನಿನ್ನನ್ನು ಉದ್ದೇಶಿಸಿದುದೂ ಆದ **ಉಕ್ಥ**ವನ್ನು ಎಂದು ಹೇಳಿರುವುದರಿಂದ ಇಂದ್ರಪರವಾದುದೂ ಯಾಗಕಾಲದಲ್ಲಿ ಹಿಂದಿನಿಂದಲೂ ಪರಿಸಲ್ಪಡುತ್ತಿರುವುದೂ ಆದ ಉಕ್ಥವೆಂದು ಸೂಚಿಸಿದೆ. ಇಂದ್ರಪರವಾದ ಈ ಉಕ್ಥಕ್ಕೆ ಒಂದು ಅಸಾಧಾರಣವಾದ ವೈಶಿಷ್ಟ್ಯವಿದೆ

ಉಕ್ಥದ ಸ್ವರೂಪವನ್ನೂ, ಅದರ ಮಹಿಮೆಯನ್ನೂ, ಶಸ್ತ್ರ, ಉಕ್ಥ ಸಾಮ ಇವುಗಳಿಗಿರುವ ಸಂಬಂಧ ಮತ್ತು ಸೂಕ್ಷ್ಮವಾದ ವ್ಯತ್ಯಾಸಗಳನ್ನೂ, ಹೋತೃವೂ ಅವನ ಸಹಾಯಕರಾದ ಋತ್ವಿಕ್ಕುಗಳೂ ಇದನ್ನು ಸವನ ಕಾಲದಲ್ಲಿ ಪಠಿಸಬೇಕಾದ ಕ್ರಮವನ್ನೂ ಹಿಂದಿನ ಭಾಗಗಳಲ್ಲಿ ವಿಶದವಾಗಿ ವಿವರಿಸಿದೆ ಇಲ್ಲಿ ಇಂದ್ರನ ಮಹಿಮೆಯನ್ನು ಉಕ್ಥದ ಮೂಲಕ ಪ್ರಶಂಸಿಸುವುದರಿಂದ ಅದಕ್ಕೆ ಸಂಬಂಧಿಸಿದ ಪೂರ್ವಕಥಾಸಂದರ್ಭದೊಂದಿಗೆ ಉಕ್ಥದ ಪ್ರಭಾವವೂ ತನ್ಮೂಲಕ ಇಂದ್ರನ ಮಹಿಮೆಯೂ ಸೂಕ್ಷ್ಮವಾಗಿ ತಿಳಿಸಲ್ಪಡುತ್ತದೆ. ಉಕ್ಥದ ಶಕ್ತಿಯು ಅತ್ಯಧಿಕವಾದುದೆಂದೂ ಅಸುರರು ಅವರ ಮಸೆಹೊಕ್ಕಿದುದರಿಂದ ಅವರ ಶಕ್ತಿಯೂ ವೃದ್ಧಿಯಾಯಿತೆಂದೂ ಆಗ ಇಂದ್ರನು ಸ್ತುತನಾಗಿ ಬಂದು ಇವರನ್ನು ಓಡಿಸಿದನೆಂದೂ ಐತರೇಯ ಬ್ರಾಹ್ಮಣದಲ್ಲಿ ಒಂದು ಕಥೆಯಿದೆ

ತೇ ವಾ ಅಸುರಾ ಮೈತ್ರಾವರುಣಸ್ಯೋಕ್ಥಮಶ್ರಯಂತ ಸೋಽಬ್ರವೀದಿಂದ್ರಃ ಕಶ್ಚಾಹಂ ಚೇಮಾ-ನಿತೋಽಸುರಾನ್ನೋತ್ಸ್ಯಾವಹಾ ಇತ್ಯಹಂ ಚೇತ್ಯಬ್ರವೀದ್ವರುಣಸ್ತಸ್ಮಾದೈಂದ್ರಾವರುಣಂ ಮೈತ್ರಾವರುಣಸ್ತೃತೀಯಸವನೇ ಶಂಸತೀಂದ್ರೇಣ ಹಿ ತಾನ್ಸರುಣಶ್ಚ ತತೋ ನುದೇತಾಂ ॥

ಅಸುರರು ಮೈತ್ರಾವರುಣ ಉಕ್ಥವನ್ನು ಪ್ರವೇಶಿಸಿದರು. ಆಗ ಇಂದ್ರನು ಈ ಅಸುರರನ್ನು ಈ ಉಕ್ಥದಿಂದ ಓಡಿಸಲು ನನಗೆ ನಿಮ್ಮಲ್ಲಿ ಯಾರು ಸಹಾಯಮಾಡುತ್ತೀರಿ ಎಂದಾಗ ವರುಣನು ತಾನು ಸಹಾಯನಾಮಾಡುವುದಾಗಿ ಹೇಳಿದನು. ಆ ಕಾಲದಲ್ಲಿ ಹೋತೃವಿಗೆ ಸಹಾಯಕನಾದ ಮೈತ್ರಾವರುಣನು ತೃತೀಯಸವನಕಾಲದಲ್ಲಿ,

ಇಂದ್ರಾವರುಣಾ ಯುವಮಧ್ವರಾಯ ನೋ ವಿಶೇ ಜನಾಯ ಮಹಿ ಶರ್ಮ ಯಚ್ಛತಂ ।

(ಋ. ಸಂ. ೭-೮೨-೧)

ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವನ್ನು ಪರಿಸಿ ಇಂದ್ರನನ್ನೂ, ವರುಣನನ್ನೂ ಸ್ತುತಿಸಿದನು. ಆಗ ಇಂದ್ರಾವರುಣರು ಆ ಅಸುರರನ್ನು ಮಿತ್ರಾವರುಣಶಸ್ತ್ರದಿಂದ ಓಡಿಸಿದರು.

ತೇ ವೈ ತತೋ೭ಪಹತಾ ಅಸುರಾ ಬ್ರಾಹ್ಮಣಾಚ್ಛಂಸಿನ ಉಕ್ಥಮಶ್ರಯಂತೆ ಸೋ೭ಬ್ರವೀದಿಂದ್ರಃ ಕಶ್ಚಾಹಂ ಚೇಮಾನಿತೋ೭ಸುರಾನ್ನೋತ್ಸ್ಯವಹಾ ಇತ್ಯಹಂ ಚೇತ್ಯಬ್ರವೀದ್ಬೃಹಸ್ಪತಿಸ್ತ್ವಾ-ದ್ವೈಂದ್ರಾಬಾರ್ಹಸ್ಪತ್ಯಂ ಬ್ರಾಹ್ಮಣಾಚ್ಛಂಸೀ ತೃತೀಯಸವನೇ ಶಂಸತೀಂದ್ರಶ್ಚ ಹಿ ತಾನ್ಬೃಹ-ಸ್ಪತಿಶ್ಚ ಹಿ ತತೋ ನುದೇತಾಂ ॥

ಅಲ್ಲಿಂದ ಓಡಿಸಲ್ಪಟ್ಟ ಅಸುರರು ಬ್ರಾಹ್ಮಣಾಚ್ಛಂಸಿಯ ಉಕ್ಥದಲ್ಲಿ ಪ್ರವೇಶಿಸಿದರು.

ಆಗ ಇಂದ್ರನು ಎದ್ದು ಈ ಅಸುರರನ್ನು ಇಲ್ಲಿಂದ ಓಡಿಸಲು ಯಾರು ಸಹಾಯಮಾಡುತ್ತೀರಿ ಎಂದಾಗ ಬೃಹಸ್ಪತಿಯು ಎದ್ದು ತಾನು ಸಹಾಯಮಾಡುವುದಾಗಿ ಹೇಳಿದನು. ಆಗ ಬ್ರಾಹ್ಮಣಾಚ್ಛಂಸಿಯು ತೃತೀಯಸವನ ಕಾಲದಲ್ಲಿ,

ಉದಪುತ್ರೋ ನ ವಯೋ ರಕ್ಷಮಾಣಾ ವಾವದತೋ ಅಭ್ರಿಯೇಸ್ಯೇವ ಘೋಷಾಃ ।

(ಋ. ಸಂ ೧೦-೬೮-೧)

ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವನ್ನು ಪರಿಸಿ ಇಂದ್ರನನ್ನೂ, ಬೃಹಸ್ಪತಿಯನ್ನೂ ಸ್ತುತಿಸಿದನು ಆಗ ಇಂದ್ರನೂ ಬೃಹಸ್ಪತಿಯೂ ಸಹ ಅಸುರರನ್ನು ಅಲ್ಲಿಂದ ಓಡಿಸಿದರು

ತೇ ವೈ ತತೋ೭ಪಹತಾ ಅಸುರಾ ಅಚ್ಛಾವಾಕಸ್ಯೋಕ್ಥಮಶ್ರಯಂತ ಸೋ೭ಬ್ರವೀದಿಂದ್ರಃ ಕಶ್ಚಾಹಂ ಚೇಮಾನಿತೋ೭ಸುರಾನ್ನೋತ್ಸ್ಯವಹಾ ಇತ್ಯಹಂ ಚೇತ್ಯಬ್ರವೀದ್ವಿಷ್ಣುಸ್ತ್ವಾ-ದ್ವೈಂದ್ರಾವೈಷ್ಣವಮಚ್ಛಾವಾಕಸ್ಯ ತೃತೀಯಸವನೇ ಶಂಸತೀಂದ್ರಶ್ಚ ಹಿ ತಾನ್ವಿಷ್ಣುಶ್ಚ ತತೋ-ನುದೇತಾಂ ॥

(ಐ. ಬ್ರಾ. ೧೫-೬)

ಬ್ರಾಹ್ಮಣಾಚ್ಛಂಸಿಯ ಉಕ್ಥದಿಂದ ಓಡಿಸಲ್ಪಟ್ಟ ಅಸುರರು ಅಚ್ಛಾವಾಕನ ಉಕ್ಥದಲ್ಲಿ ಸೇರಿಕೊಂಡರು. ಆಗ ಇಂದ್ರನು ಎದ್ದು ಇವರನ್ನು ಇಲ್ಲಿಂದ ಓಡಿಸಲು ನಿಮ್ಮಲ್ಲಿ ಯಾರು ಸಹಾಯಮಾಡುತ್ತೀರೆಂದು ಕೇಳಿದನು ಆಗ ವಿಷ್ಣುವು ತಾನು ಸಹಾಯಮಾಡುತ್ತೇನೆಂದು ಹೇಳಿದನು. ಆ ಕಾಲದಲ್ಲಿ ಅಚ್ಛಾವಾಕನು,

ಸಂ ವಾಂ ಕರ್ಮಣಾ ಸಮಿಷಾ ಹಿನೋಮಿಂದ್ರಾವಿಷ್ಣೂ ಅಪಸಸ್ಪಾರೇ ಅಸ್ಯ ।

(ಋ ಸಂ. ೬-೬೯-೧)

ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವನ್ನು ಪರಿಸಿ ಇಂದ್ರನನ್ನೂ, ವಿಷ್ಣುವನ್ನೂ ಸ್ತುತಿಸಿದನು. ಆಗ ಅವರು ಅಸುರರನ್ನು ಅಲ್ಲಿಂದಲೂ ಓಡಿಸಿದರು ಎಂಬ ಕಥೆಯು ಐತರೇಯ ಬ್ರಾಹ್ಮಣದಲ್ಲಿ (೧೫-೬) ಪರಿತವಾಗಿದೆ ಇದರಿಂದ **ಉಕ್ಥದ** ಶಕ್ತಿಯೂ, ಇಂದ್ರನ ಮಹಿಮೆಯೂ ತಿಳಿಯುತ್ತದೆ. **ತತ್ ಶ್ಯೇ ಉಕ್ಥಂ** ಎಂದರೆ ಈ ಪ್ರಭಾವವುಳ್ಳ ಉಕ್ಥವನ್ನು ಎಂದರ್ಥವು.

ಆಮದರಿಂದಲೇ ಶತಪಥ ಬ್ರಾಹ್ಮಣದಲ್ಲಿಯೂ ಸಹ,

ಇಂದ್ರೋ ವೈ ಯಜ್ಞಸ್ಯ ದೇವತಾ ತಸ್ಮಾದಾಹೇಂದ್ರಾಯ ಶ್ವೇತಿ ಬೃಹದ್ವತೇ ವಯಸ್ವತ ಇತಿ ವೀರ್ಯವತ ಇತ್ಯೇವೈತದಾಹ ಯದಾಹ ಬೃಹದ್ವತೇ ವಯಸ್ವತ ಇತ್ಯುಕ್ಥಾಖ್ಯಂ ಗೃಹ್ಣಾಮೀತ್ಯುಕ್ಥೇಭ್ಯೋ ಹ್ಯೇನಂ ಗೃಹ್ಣಾತಿ।

(ಶ. ಬ್ರಾ. ೪-೨-೩-೧೦)

ಇಂದ್ರನೇ ಯಜ್ಞಕ್ಕೆಲ್ಲಾ ದೇವತೆ. ಆದುದರಿಂದಲೇ " ಬೃಹದುಕ್ಥದಿಂದ ಕೂಡಿದವನೂ, ವೀರ್ಯವಂತನೂ ಆದ ಇಂದ್ರನಿಗೆ " ಎಂದು ಇಂದ್ರನ ವೀರ್ಯಕ್ಕೂ ತೃಪ್ತಿಗೂ ಕಾರಣವಾದ ಉಕ್ಥವನ್ನೂ ತನ್ಮೂಲಕ ಇಂದ್ರನನ್ನೂ ಸ್ತುತಿಸಿದೆ.

ಯಾಗಾದಿ ಕರ್ಮಗಳ ಕಾಲದಲ್ಲಿ ಯಾವ ರೀತಿ ಉಕ್ಥದ ಪ್ರಭಾವವನ್ನು ವರ್ಣಿಸಿದೆಯೋ ಆದೇ ರೀತಿ ಆಧ್ಯಾತ್ಮಿಕವಾದ ಜ್ಞಾನವನ್ನು ಉಪದೇಶಿಸುವ ಕಾಲದಲ್ಲೂ ಸಹ ಸ್ತೋತ್ರಾತ್ಮಕವಾದ ಈ ಉಕ್ಥದ ಮಹಿಮೆಯನ್ನು ಪ್ರಶಂಸಿಸಿದೆ. ಬೃಹದಾರಣ್ಯಕೋಪನಿಷತ್ತಿನಲ್ಲಿ—

ಉಕ್ಥಂ ಪ್ರಾಣೋ ವಾ ಉಕ್ಥಂ ಪ್ರಾಣೋ ಹೀದಂ ಸರ್ವಮುತ್ಥಾಪಯತ್ಯುದ್ಥಾಸ್ಮಾದುಕ್ಥವಿದ್ವೀರಸ್ತಿಷ್ಠತ್ಯುಕ್ಥಸ್ಯ ಸಾಯುಜ್ಯಂ ಸಲೋಕತಾಂ ಜಯತಿ ಯ ಏವಂ ವೇದ।

(ಬೃ ಉ ೫-೧೩-೧)

ಉಕ್ಥಂ ತತೋಪಾಸನಾಂತರಂ। ಉಕ್ಥ ಶಸ್ತ್ರಂ। ತದ್ಧಿ ಪ್ರಧಾನಂ ಮಹಾವ್ರತೇ ಕೃತೌ।

(ಶಾಂಕರಭಾಷ್ಯ)

ಮಹಾವ್ರತರೂಪವಾದ ಯಾಗದಲ್ಲಿ ಪ್ರಧಾನಶಸ್ತ್ರವಾದ ಉಕ್ಥವೇ ಪ್ರಾಣವು. ಇದರಿಂದಲೇ ಉತ್ಥಾನವಾಗುತ್ತದೆ. ಆದರಿಂದ ಉಕ್ಥಜನಾದ ಪುತ್ರನು ಉತ್ಪನ್ನನಾಗಿ ತತ್ಸಮಾನತೆಯನ್ನೂ ಸಮಾನವಾದ ಮಾನ್ಯತೆಯನ್ನೂ ಪಡೆಯುತ್ತಾನೆ ಎಂದು ಉಕ್ಥದ ಮಹತ್ತ್ವವನ್ನು ಹೇಳಿದೆ

॥ ಸಂಹಿತಾಪಾಠಃ ॥

ಧಿಷಾ ಯದಿ ಧಿಷಣ್ಯಂತಃ ಸರಣ್ಯಾನ್ತ್ಸದಂತೋ ಆದ್ರಿಮೌಶಿಜಸ್ಯ ಗೋಹೇ।
ಆ ದುರೋಷಾಃ ಪಾಸ್ತ್ಯಸ್ಯ ಹೋತಾ ಯೋ ನೋ ಮಹಾನ್ತ್ಸಂವರಣೇಷು ವಹ್ನಿಃ ॥ ೬ ॥

॥ ಪದಪಾಠಃ ॥

ಧಿಷಾ । ಯದಿ । ಧಿಷಣ್ಯಂತಃ । ಸರಣ್ಯಾನ್ । ಸದಂತಃ । ಆದ್ರಿಂ । ಔಶಿಜಸ್ಯ । ಗೋಹೇ ।
ಆ । ದುರೋಷಾಃ । ಪಾಸ್ತ್ಯಸ್ಯ । ಹೋತಾ । ಯಃ । ನಃ । ಮಹಾನ್ । ಸಂವರಣೇಷು । ವಹ್ನಿಃ ॥೬॥

॥ ಸಾಯಣಭಾಷ್ಯಂ ॥

ಧಿಷಣ್ಯಂತೋ ಧಿಷಣಾಮಿಂದ್ರವಿಷಯೋಂ ಸ್ತುತಿಮಿಚ್ಛಂತ ಔಶಿಜಸ್ಯ । ಉಶಿಜಃ ಕಾಮಯಮಾನಾ ಋತ್ವಿಜಃ । ತೇಷಾಂ ಸಂಬಂಧ್ಯೌಶಿಜೋ ಯಜಮಾನಃ । ತಸ್ಯ ಗೋಹೇ ಗೃಹೇ ಸದಂತೋ ನಿಷೀದಂತೋ ಜನಾ ಆದ್ರಿಂ । ಆದೃಣಾತಿ ಶತ್ರೂನಿತ್ಯದ್ರಿರಿಂದ್ರಃ । ತಮಿಂದ್ರಂ ಧಿಷಾ ಸ್ತುತ್ಯಾ ಯದಿ ಯದಾ ಸರಣ್ಯಾನ್ ಉಪಾಗಚ್ಛೇಯುಃ ತದಾ ಸ ಇಂದ್ರ ಆ ಯಾತು । ನೋಽಸ್ಮಾಕಂ ಸಂವರಣೇಷು ಶತ್ರುಸಂಬಂಧಿಷು ನಿರೋಧೇಷು ವಹ್ನಿರ್ವೋಢಾ ಪಾಸ್ತ್ಯಸ್ಯ ಪಸ್ತ್ಯೇ ಗೃಹೇ ವಸತಾ ಯಜಮಾನೇನ ಹೋತಾಹ್ವಾತಾ ದುರೋಷಾ ದುಸ್ತರಕ್ರೋಧೋ ಯ ಇಂದ್ರೋ ಮಹಾನ್ವ್ಯಭೂತೋ ಭವತಿ । ಸ ಆಯಾತ್ವಿತಿ ॥

॥ ಪ್ರತಿಪದಾರ್ಥ ॥

ಧಿಷಣ್ಯಂತಃ—ಇಂದ್ರನನ್ನು ಸ್ತುತಿಸಲಿಚ್ಛಿಸುವವರೂ । **ಔಶಿಜಸ್ಯ**—ಋತ್ವಿಕ್ಕುಗಳ ಸಂಬಂಧಿಯಾದ ಯಜಮಾನನ । **ಗೋಹೇ**—ಯಜ್ಞಗೃಹದಲ್ಲಿ । **ಸದಂತಃ**—ಕುಳಿತಿರುವವರೂ ಆದ ಸ್ತೋತೃಗಳು । **ಅದ್ರಿಂ**—ಶತ್ರುನಾಶಕನಾದ ಇಂದ್ರನನ್ನು । **ಧಿಷಾ**—ಸ್ತುತಿಯಿಂದ । **ಯದಿ**—ಯಾವಾಗ । **ಸರಣ್ಯಾನ್**—ಸಮಿಾಪಿಸುವರೋ (ಆಗ) । **ಆ (ಯಾತು)**—ಇಂದ್ರನು ದಯಮಾಡಲಿ । **ಸಂವರಣೇಷು**—ಶತ್ರುಗಳೊಡನೆ ಹೋರಾಡುವ ಕಾಲದಲ್ಲಿ । **ನಃ**—ನಮ್ಮ । **ವಹ್ನಿಃ**—ವಾಹಕನೂ (ರಕ್ಷಕನೂ) । **ಪಾಸ್ತ್ಯಸ್ಯ**—ಯಜ್ಞಗೃಹದಲ್ಲಿರುವ ಯಜಮಾನನಿಗೆ । **ಹೋತಾ**—ಹೋತೃವಾಗಿರುವವನೂ । **ದುರೋಷಾಃ**—ತಡೆಯಲಸಾಧ್ಯವಾದ **ಕ್ರೋಧವುಳ್ಳವನೂ** ಆದ । **ಯಃ**—ಯಾವ ಇಂದ್ರನು । **ಮಹಾನ್**—ಮಹದ್ಗುಣಗಳಿಂದ ಕೂಡಿದ್ದಾನೆಯೋ (ಆ ಇಂದ್ರನು ದಯಮಾಡಲಿ)

॥ ಭಾವಾರ್ಥ ॥

ಇಂದ್ರನನ್ನು ಸ್ತುತಿಸಲಿಚ್ಛಿಸುವವರೂ, ಋತ್ವಿಕ್ಕುಗಳಿಗೆ ಸಂಬಂಧಿಯಾದ ಯಜಮಾನನ ಯಜ್ಞಗೃಹದಲ್ಲಿ ಕುಳಿತಿರುವವರೂ ಆದ ಸ್ತೋತೃಗಳು ಶತ್ರುನಾಶಕನಾದ ಇಂದ್ರನನ್ನು ಸ್ತುತಿಯಿಂದ ಯಾವಾಗ ಸಮಿಾಪಿಸುವರೋ ಆಗ ಇಂದ್ರನು ನಮ್ಮಲ್ಲಿಗೆ ಬರಲಿ. ಶತ್ರುಗಳೊಡನೆ ಹೋರಾಡುವ ಕಾಲದಲ್ಲಿ ನಮ್ಮ ರಕ್ಷಕನೂ, ಯಜಮಾನನಿಗೆ ಹೋತೃವೂ, ತಡೆಯಲಸಾಧ್ಯವಾದ ಕೋಪವುಳ್ಳವನೂ ಆದ ಯಾವ ಇಂದ್ರನು ಮಹದ್ಗುಣಗಳಿಂದ ಕೂಡಿರುವನೋ, ಆ ಇಂದ್ರನು ಬರಲಿ

English Translation.

When the repeaters of (his) commendations, abiding in the dwelling of the worshipper, approach Indra with praise, may he who is our (great) sustainer in conflicts, whose wrath is difficult to be (appeased), become the ministering priest of the master of the house.

॥ ವಿಶೇಷವಿಷಯಗಳು ॥

ಧಿಷಣ್ಯಂತಃ ಔಶಿಜಸ್ಯ ಗೋಹೇ ಸದಂತಃ ಆದ್ರಿಂ ಧಿಷಾ ಯದಿ ಸರಣ್ಯಾನ್ ಆ (ಯಾತು)— **ಧಿಷಣಾ** ಎಂಬ ಶಬ್ದವು ವಾಙ್ಮಾಮಗಳಲ್ಲಿ ಪಠಿತವಾಗಿದೆ (ನಿ ೨–೨೩) ಸ್ತುತಿರೂಪವಾದ ವಾಕ್ಯೈಂದರ್ಥವು. **ಧಿಷಣ್ಯಂತಃ** ಎಂದರೆ ಸ್ತುತಿರೂಪವಾದ ವಾಕ್ಯಗಳಿಂದ ಇಂದ್ರನನ್ನು ಸ್ತೋತ್ರಮಾಡಬೇಕೆಂದು ಬಯಸುವ ಎಂದರ್ಥವು. **ಉಶಿಕ್** ಶಬ್ದವು ಕಾಂತಿಕರ್ಮನಾಮಗಳಲ್ಲಿಯೂ, (ನಿ ೩–೯) ನೇಧಾವಿನಾಮಗಳಲ್ಲಿಯ (ನಿ ೩–೧೯) ಪಠಿತವಾಗಿದೆ ಇಲ್ಲಿ ಮೇಧಾವಿಗಳಾದ ಋತ್ವಿಕ್ಕುಗಳೆಂಬ ಅರ್ಥದಲ್ಲಿ ಪ್ರಯುಕ್ತವಾಗಿದೆ ಋತ್ವಿಕ್ಕುಗಳಿಗೂ ಯಜ್ಞಮಾಡುವ ಯಜಮಾನನಿಗೂ ನಿಕಟಸಂಬಂಧವಿರುವುದರಿಂದ ಇಲ್ಲಿ ಯಜಮಾನನ ಎಂಬ ಅರ್ಥವನ್ನು ಸೂಚಿಸುವುದಕ್ಕಾಗಿ **ಔಶಿಜಸ್ಯ** ಎಂಬ ಶಬ್ದಪ್ರಯೋಗವಿದೆ **ಗೋಹ** ಎಂಬ ಶಬ್ದಕ್ಕೆ ಯಾಸ್ಕರು ನಿರ್ವಚನವನ್ನು ಹೇಳಿಲ್ಲವಾದರೂ ಭಾಷ್ಯಕಾರರು ಈ ಶಬ್ದಕ್ಕೆ ಗೃಹನೆಂದು ಅರ್ಥಮಾಡಿದಾರೆ ಯಜಮಾನನ ಯಜ್ಞಗೃಹದಲ್ಲಿ ಋತ್ವಿಜರು ಕುಳಿತುಕೊಂದು ಇಂದ್ರನನ್ನು ಸ್ತುತಿರೂಪವಾದ ವಾಕ್ಯಗಳಿಂದ ಕರೆಯುವಾಗ ಇಂದ್ರನು ಈ ಯಜ್ಞಭೂಮಿಗೆ ಬರಲಿ ಎಂದು ಈ ವಾಕ್ಯದ ಮುಖ್ಯಾಭಿಪ್ರಾಯವು ಈ ವಾಕ್ಯದಲ್ಲಿ ಕ್ರಿಯಾಪದವಿಲ್ಲದಿರುವುದರಿಂದಲೂ **ಆ** ಎಂಬ ಉಪಸರ್ಗಮಾತ್ರವಿರುವುದರಿಂದಲೂ ಯಾತು—ಬರಲಿ ಎಂಬ ಕ್ರಿಯಾಪದವನ್ನು ಅಧ್ಯಾಹಾರಮಾಡಿ ಅರ್ಥವಿವರಣೆಮಾಡಿರುವರು

ಸಂವರಣೇಷು ನಃ ವಹ್ನಿಃ ಪಾಸ್ತ್ಯಸ್ಯ ಹೋತಾ ದುರೋಷಾಃ ಯಃ ಮಹಾನ್ (ನಃ ಆಯಾತು) ಈ ವಾಕ್ಯವು ಇಂದ್ರನಿಗೆ ವಿಶೇಷಣವಾಗಿರುವುದು ಪಸ್ತ್ಯಶಬ್ದವು ಗೃಹನಾಮಗಳಲ್ಲಿ (ನಿ. ೩–೪) ಪಠಿತವಾಗಿದೆ **ಪಾಸ್ತ್ಯಸ್ಯ** ಎಂದರೆ ಗೃಹದಲ್ಲಿರುವ, ಗೃಹದಲ್ಲಿ ವಾಸಿಸುವ ಯಜಮಾನನ ಎಂದರ್ಥವು ಶತ್ರುಗಳೊಡನೆ ಯುದ್ಧಮಾಡುವ ಕಾಲದಲ್ಲಿ ತಡೆಯಲಸಾಧ್ಯವಾದ ಕೋಪದಿಂದ ಶತ್ರುಗಳೊಡನೆ ಹೋರಾಡುತ್ತಾ ನಮ್ಮನ್ನು ರಕ್ಷಿಸುವವನೂ ಯಜಮಾನನಿಂದ ಪ್ರಾರ್ಥಿಸಿ ಕರೆಯಲ್ಪಡುವವನೂ ಮಹತ್ವಗುಣವಿಶಿಷ್ಟನೂ ಆದ ಇಂದ್ರನು ಯಜ್ಞಭೂಮಿಗೆ ಬರಲಿ ಎಂದು ಹಿಂದಿನ ವಾಕ್ಯದೊಡನೆ ಸಂಬಂಧವು

॥ ಸಂಹಿತಾಪಾಠಃ ॥

ಸತ್ರಾ ಯದೀಂ ಭಾರ್ವರಸ್ಯ ವೃಷ್ಣಃ ಸಿಷಕ್ತಿ ಶುಷ್ಮಃ ಸ್ತುವತೇ ಭರಾಯ ।
ಗುಹಾ ಯದೀಮೌಶಿಜಸ್ಯ ಗೋಹೇ ಪ್ರ ಯದ್ಧಿಯೇ ಪಾಯಸೇ ಮದಾಯ ॥ ೭ ॥

॥ ಪದಪಾಠಃ ॥

ಸತ್ರಾ । ಯತ್ । ಈಂ । ಭಾರ್ವರಸ್ಯ । ವೃಷ್ಣಃ । ಸಿಸಕ್ತಿ । ಶುಷ್ಮಃ । ಸ್ತುವತೇ । ಭರಾಯ ।
ಗುಹಾ । ಯತ್ । ಈಂ । ಔಶಿಜಸ್ಯ । ಗೋಹೇ । ಪ್ರ । ಯತ್ । ಧಿಯೇ । ಪ್ರ । ಅಯಸೇ । ಮದಾಯ ॥

॥ सायणभाष्यं ॥

भावर्वरस्य । भर्वरोः जगद्भर्त्तार प्रजापतिः । तस्य पुत्रोः भावर्वरः । तस्य वृष्णः कामानां वर्षितुरिंद्रस्य संबंधि ईमेः इह शुष्मोः बलं स्तुवतेः स्तोत्रं कुर्वंतं यजमानं सिषक्ति सेवत इति यत्तत्सत्यं तत्र्या सत्यमेव । ईमेःतद्बलमौशिजस्य यजमानस्य भरायै भर्तुं गुहा गुहायां गुहारूपे हृदयेः प्र भवतीति यत्तत्सत्यं । यजमानस्य गोहे गृहे धियेः कर्मणेः प्र भवतीति यत्तत्सत्यं । अयसे गमनाय कामानां प्राप्तयेः मदाय हर्षाय तत्र यद्बलं प्रभवति तत्सत्यं । इंद्रस्य बलं यजमानं सर्वदा पालयतीत्यर्थः ॥

॥ प्रतिपदार्थ ॥

भावर्वरस्य—जगद्भर्तृवाद प्रजापतिय पुत्रनू । **वृष्णः**—कामवर्षकनू आद इंद्रन । **ईं शुष्मः**—प्रसिद्धवाद बलवु । **स्तुवतेः**—इंद्रनन्नु स्तुतिसुव यजमाननन्नु । **सिषक्ति यत्**—सेविसुत्तदेयेंब यावद विषयवु प्रसिद्धवागिदेयो अदु । **सत्या**—सत्यवागियेः इदे । **ईं**—इदे बलवु । **औशिजस्य**—यजमानन । **भरायै**—भरणक्के साहायक्यकवागलु । **गुहा**—गुहारूपवाद हृदयदल्लि । **प्र (भवति)**—पोषितवागुत्तदे ऎंब । **यत्**—यावद विषय विदेयो अदू सह सत्यवु । **गोहे**—यजमानन गृहदल्लि । **धियेः**—कर्मार्चरणेगे । **प्र (भवति)**—सहायमाडुत्तदेंबुदु । **यत्**—यावुदिदेयो अदू प्रसिद्धवागिदे । **अयसे**—इष्टार्थवन्नु पडेयुवुदक्कू । **मदाय**—हर्षजननक्कू इदु साधकवागुवुदेंबुदू सह सत्यवे आगिदे.

॥ भावार्थ ॥

जगद्भर्तृवाद प्रजापतिय पुत्रनू, कामवर्षकनू आद इंद्रन प्रसिद्धवाद बलवु इंद्रनन्नु स्तुतिसुव यजमाननन्नु सेविसुत्तदे ऎंब यावद विषयवु प्रसिद्धवागिदेयो अदू, इदे बलवु यजमानन रक्षणेगू, पोषणेगू साहायक्यकवागिरलु अवन हृदयदल्लि ध्यानरूपदल्लि पोषितवागुत्तदेंबुदू, यजमानन गृहदल्लि अवन सकल कर्मगळू साङ्गवागि नेरवेरलु अनुकूलकारियेंब विषयवू, अवन इष्टार्थवु नेरवेरुवुदक्कू मत्तु अवनिगे हर्षकारक वागिरुवुदक्कू साधकवागिरुत्तदेंबुदू सह सकलवू सत्यवागियेः इरुत्तदे. इदरल्लि यावुदू उत्प्रेक्षेयिल्ल

English Translation

True it is that this might of the son of the protector of the world, the showerer (of benifits), affects for his advantage the offerer of praise:

it (prevails) in the secret (thoughts) of the worshipper, and in his dwelling, for (the accomplishment of his) pious acts, (the attainment of his) desires, and his delight.

॥ ವಿಶೇಷವಿಷಯಗಳು ॥

ಇಲ್ಲಿ **ಭಾರ್ವರಸ್ಯ** ಎಂಬ ಶಬ್ದಕ್ಕೆ ಸಾಯಣರು—**ಭರ್ವರೋ ಜಗದ್ಭರ್ತಾ ಪ್ರಜಾಪತಿಃ ತಸ್ಯ ಪುತ್ರೋ ಭಾರ್ವರಃ ತಸ್ಯ**—ಜಗದ್ಭರ್ತನಾದ ಪ್ರಜಾಪತಿಗೆ ಭರ್ವರನೆಂದೂ ಆವನ ಪುತ್ರನಾದ ಇಂದ್ರನಿಗೆ ಭಾರ್ವರನೆಂದೂ ಅರ್ಥವೆಂದು ಭಾಷ್ಯಕಾರರ ವಿವರಣೆಯಿದೆ. ಯಜುರ್ವೇದಾದಿಗಳಲ್ಲಿ--**ಪ್ರಜಾಪತಿರಿಂದ್ರಮಸೃಜತಾನುಜಾವರಂ ದೇವಾನಾಂ** ಎಂದು ಹೇಳಿರುವುದರಿಂದ ಇಂದ್ರನು ಪ್ರಜಾಪತಿಯ ಪುತ್ರನಾದಂತಾಯಿತು. ಈ ವಿಷಯವನ್ನು ನಾವು ಈ ಭಾಗದಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳನ್ನು ವಿವರಿಸುವಾಗ ಹೇಳಿದೇವೆ ಇಂತಹ ಕಾಮವರ್ಷಕನಾದ ಇಂದ್ರನ ಬಲವು ಎಂದರೆ ಅನುಗ್ರಹಾತ್ಮಕವಾದ ಬುದ್ಧಿಯು ಯಜ್ಞಮಾಡುವ ಯಜಮಾನನ ವಿಷಯದಲ್ಲಿ ಒಳ್ಳೆಯದನ್ನು ಮಾಡುವುದು ಎಂಬ ವಿಷಯವು ಸತ್ಯವು ಇಂದ್ರನ ಆಪಾರವಾದ ಮಹಿಮೆಯೂ, ತನ್ನನ್ನು ಸ್ತೋತ್ರಮಾಡುವವರ ವಿಷಯದಲ್ಲಿ ಇಂದ್ರನು ತೋರಿಸುವ ಸಾಹಸಕೃತ್ಯವೂ ಯಜಮಾನನಿಗೆ ಇಷ್ಟಾರ್ಥಗಳನ್ನು ಕೊಟ್ಟು ಪೋಷಿಸುವುದಲ್ಲದೆ ಅವನನ್ನು ಪೋಷಿಸುತ್ತಾ ಅವನು ಮಾಡುವ ಯಜ್ಞಾದಿಗಳಿಗೆ ಸಹಾಯಮಾಡುತ್ತದೆ ಎಂದೂ ಈ ವಿಧವಾದ ಇಂದ್ರನ ಅನುಗ್ರಹದಿಂದ ಯಜಮಾನನಿಗೆ ಸಂತೋಷವುಂಟಾಗುವುದೆಂದು ಈ ಋಕ್ಕಿನ ಮುಖ್ಯಾಭಿಪ್ರಾಯವು

॥ ಸಂಹಿತಾಪಾಠಃ ॥

ವಿ ಯದ್ವರಾಂಸಿ ಪರ್ವತಸ್ಯ ವೃಣ್ವೇ ಪಯೋಭಿರ್ಜಿನ್ವೇ ಅಪಾಂ ಜವಾಂಸಿ ।
ವಿದದ್ಗಾರಸ್ಯ ಗವಯಸ್ಯ ಗೋಹೇ ಯದೀ ವಾಜಾಯ ಸುಧ್ಯೋ ವಹಂತಿ ॥

॥ ಪದಪಾಠಃ ॥

ವಿ । ಯತ್ । ವರಾಂಸಿ । ಪರ್ವತಸ್ಯ । ವೃಣ್ವೇ । ಪಯಃಭಿಃ । ಜಿನ್ವೇ । ಅಪಾಂ । ಜವಾಂಸಿ ।
ವಿದತ್ । ಗಾರಸ್ಯ । ಗವಯಸ್ಯ । ಗೋಹೇ । ಯದಿ । ವಾಜಾಯ । ಸುಽಧ್ಯಃ । ವಹಂತಿ ॥ ೮ ॥

॥ ಸಾಯಣಭಾಷ್ಯಂ ॥

ಇಂದ್ರಃ ಪರ್ವತಸ್ಯ ಮೇಘಸ್ಯ ವರಾಂಸಿ ದ್ವಾರಾಣಿ ವಿ ವೃಣ್ವೇ ವಿವೃತಾನಿ ಕೃತವಾನಿತಿ ಯತ್ । ಅಪಾಮುದಕಾನಾಂ ಜವಾಂಸಿ ವೇಗಾನ್ಪಯೋಭಿರ್ಜಲೈರ್ಜಿನ್ವೇ ಪ್ರಾಯಯತೀತಿ ಯತ್ । ಯದಿ ಯದಾ

ಸುಧ್ಯಃ ಶೋಭನಕರ್ಮಾಣೋ ಯಜಮಾನಾ ವಾಜಾಯಾನ್ನಾಯ ವಹಂತಿ ಇಂದ್ರಂ ಪ್ರಾಪ್ನುವಂತಿ ತದಾ ಗೋಹೇ ಗೃಹೇ ಗೌರಸ್ಯ ಗೌರಮೃಗಸ್ಯ ಗವಯಸ್ಯ ಗವಯಮೃಗಸ್ಯ ಚ ವಿದತ್ ತೌ ದ್ವೌ ಪಶೂ ಲಭತ ಇತಿ ಯತ್ । ತತ್ಸರ್ವಂ ಸತ್ಯೇತಿ ಪೂರ್ವೇಣ ಸಂಬಂಧಃ ॥

॥ ಪ್ರತಿಪದಾರ್ಥ ॥

(**ಇಂದ್ರಃ**—ಇಂದ್ರನು) । **ಪರ್ವತಸ್ಯ**—ಮೇಘದ । **ವರಾಂಸಿ**—ದ್ವಾರಗಳನ್ನು । **ವಿ ವೃಣ್ವೇ**—ತೆರೆದನು ಎಂಬ । **ಯತ್**—ಯಾವ ವಿಷಯವುಂಟೋ ಅದೂ । **ಅಪಾಂ**—ಉದಕಗಳ । **ಜವಾಂಸಿ** ವೇಗಯುತವಾದ ಪ್ರವಾಹಗಳನ್ನು । **ಪಯೋಭಿಃ**—ಉದಕಗಳಿಂದ । **ಜಿನ್ವೇ**—ತುಂಬುತ್ತಾನೆಂಬುದು ಯಾವುದುಂಟೋ ಅದೂ । **ಯದಿ**—ಯಾವಾಗ । **ಸುಧ್ಯಃ** ಶ್ರೇಷ್ಠವಾದ ಕರ್ಮಕರ್ತರಾದ ಯಜಮಾನರು । **ವಾಜಾಯ**—ಅನ್ನಕ್ಕಾಗಿ । **ವಹಂತಿ**—ಇಂದ್ರನನ್ನು ಸಮೀಪಿಸಿರುತ್ತಾರೋ ಆಗ । **ಗೌರಸ್ಯ**—ಗೌರಾಖ್ಯವಾದ ಮೃಗದ (ಮತ್ತು) । **ಗವಯಸ್ಯ**—ಗವಯವೆಂಬ ಮೃಗದ । **ಗೋಹೇ**—ಗುಹಾರೂಪವಾದ ಗೃಹದಲ್ಲಿ । **ವಿದತ್**—ಅದನ್ನು ಪಡೆದನು ಎಂಬುದು ಯಾವುದುಂಟೋ ಅದೆಲ್ಲವೂ ಸತ್ಯವಾಗಿಯೇ ಇದೆ

॥ ಭಾವಾರ್ಥ ॥

ಇಂದ್ರನು ಮೇಘದ ದ್ವಾರಗಳನ್ನು ತೆರೆದನು ಎಂಬ ಯಾವ ವಿಷಯವುಂಟೋ ಅದೂ, ಉದಕಗಳ ವೇಗಯುತವಾದ ಪ್ರವಾಹಗಳನ್ನು ಉದಕಗಳಿಂದ ತುಂಬುತ್ತಾನೆಂಬುದು ಯಾವುದುಂಟೋ ಅದೂ ಮತ್ತು ಶ್ರೇಷ್ಠವಾದ ಕರ್ಮಕರ್ತರಾದ ಯಜಮಾನರು ಅನ್ನಕ್ಕಾಗಿ ಇಂದ್ರನನ್ನು ಸಮೀಪಿಸಿದಾಗ ಗೌರಾಖ್ಯವೂ ಗವಯಾಖ್ಯವೂ ಆದ ಮೃಗಗಳ ಗುಹಾರೂಪವಾದ ಗೃಹದಲ್ಲಿ ಅನ್ನವನ್ನು ಕಂಡುಹಿಡಿದನು ಎಂಬ ಯಾವ ವಿಷಯವುಂಟೋ ಅವೆಲ್ಲವೂ ಸತ್ಯವಾಗಿಯೇ ಇವೆ.

English Translation

Inasmuch as he has opened the doors of the cloud, and has supplied the rapid courses of the waters with (additional) torrents, so when the pious have recourse to Indra for food, he finds (it) in the haunt of the Gaura and Gavaya.

॥ ವಿಶೇಷವಿಷಯಗಳು ॥

ಹಿಂದಿನ ಋಕ್ಕಿನಂತೆ ಈ ಋಕ್ಕಿನ ಅರ್ಥವಿವರಣೆಯೂ ಸ್ವಲ್ಪ ತೊಡಕಾಗಿಯೇ ಇರುವುದು ಮುಖ್ಯಾಭಿಪ್ರಾಯವೇನೆಂದರೆ—ಯಜ್ಞಮಾಡುವ ಯಜಮಾನನು ಅನ್ನಾದ್ಯಾಹಾರಗಳಿಗಾಗಿ ಇಂದ್ರನನ್ನು ಸಮೀಪಿಸಿ ಪ್ರಾರ್ಥಿಸುವಾಗ ಇಂದ್ರನು ವೃಷ್ಟ್ಯುದಕಗಳನ್ನು ತಡೆದಿದ್ದ ಮೇಘಗಳನ್ನು (ಒಳಗೆ ಬಂಧಿತವಾಗಿದ್ದ ಪ್ರಾಣಿಯನ್ನು ಬಾಗಿಲು ತೆಗೆದು ಈಚೆಗ ಬೆಡುವಂತೆ) ಮಳೆ ಹುಯ್ಯುವಂತೆ ಮಾಡಿ ಆ ಉದಕಗಳು ನದಿಗಳ ಪ್ರವಾಹಗಳಲ್ಲಿ ಹರಿಯುವಂತೆ ಮಾಡಿದನು. ಈ ವಿಧವಾದ ವೃಷ್ಟಿಪ್ರದಾನಕರ್ಮದಿಂದ ಯಜಮಾನನಿಗೆ ಸಸ್ಯಾದ್ಯಾಹಾರ

ಗಳನ್ನು ಒದಗಿಸಿದಂತಾಯಿತು. ಇದಲ್ಲದೆ **ಗೌರಸ್ಯ ಗವಯಸ್ಯ ಗೋಹೇ ವಿದತ್**—**ಗೌರ** ಮತ್ತು **ಗವಯ** ಎಂಬ ಪಶುಗಳನ್ನು ಆಹಾರಕ್ಕಾಗಿ ಒದಗಿಸಿಕೊಟ್ಟನು ಎಂದು ಹೇಳಿದೆ. ಗೌರ ಮತ್ತು ಗವಯ ಎಂಬಿವು ಒಂದು ವಿಧ ಜಾತಿಯ ಕಾಡೆತ್ತುಗಳೆಂದು ಹೇಳಲಾಗಿದೆ. ಕೆಲವರು ಇವು ಅರಣ್ಯದಲ್ಲಿ ಸಂಚರಿಸುವ ಒಂದು ಜಾತಿಯ ಮೃಗ ಗಳೆಂದೂ ಇವುಗಳ ಮಾಂಸವು ಮನುಷ್ಯನ ಆಹಾರಕ್ಕಾಗಿ ಉಪಯೋಗಿಸಲ್ಪಡುವುದೆಂದೂ ಹೇಳುತ್ತಾರೆ. ಇಂದ್ರನು ಈ ಮೃಗಗಳನ್ನು ಯಜಮಾನನ ಆಹಾರಕ್ಕಾಗಿ ಅಥವಾ ಯಜ್ಞಪಶುಗಳಿಗಾಗಿ ಒದಗಿಸಿಕೊಟ್ಟನು ಎಂದಭಿಪ್ರಾಯವು.

ಗವಯಃ ಗೌರಃ—ಎಂಬ ಶಬ್ದಗಳು ಅಶ್ವಮೇಧಯಜ್ಞದಲ್ಲಿ ಹೇಳಿರುವ ಪಶುಗಳ ಪಟ್ಟಿಯಲ್ಲಿ ಸೇರಿರು ವುದು ಈ ವಿಷಯವಾಗಿ ತೈತ್ತಿರೀಯ ಸಂಹಿತೆಯಲ್ಲಿ—

ಇಂದ್ರಾಯ ರಾಜ್ಞೇ ಸೂಕರೋ ವರುಣಾಯ ರಾಜ್ಞೇ ಕೃಷ್ಣೋ ಯಮಾಯ ರಾಜ್ಞ ಋಶ್ಯ ಋಷಭಾಯ ರಾಜ್ಞೇ ಗವಯಃ ಶಾರ್ದೂಲಾಯ ರಾಜ್ಞೇ ಗೌರಃ ಪುರುಷರಾಜಾಯ ಮರ್ಕಟಃ ಕ್ಷಿಪ್ರಶ್ಯೇನಸ್ಯ ವರ್ತಿಕಾ ನೀಲಂಗೋಃ ಕ್ರಿಮಿಃ ಸೋಮಸ್ಯ ರಾಜ್ಞಃ ಕುಲುಂಗಃ ಸಿಂಧೋಃ ಶಿಗ್ಂಶುಮಾರೋಽರ್ಹಮವತೋ ಹಸ್ತೀ ॥

(ತೈ. ಸಂ ೫-೫-೧೧-೧)

ಮತ್ತು ಯಜುರ್ವೇದ ತೈತ್ತಿರೀಯ ಸಂಹಿತೆಯ ಮತ್ತೊಂದು ಕಡೆಯಲ್ಲಿಯೂ,

ಗವಯಮಾರಣ್ಯಮನು ತೇ ದಿಶಾಮಿ ತೇನ ಚಿನ್ಪಾನಸ್ತನುವೋ ನಿಷೀದ ।

(ತೈ ಸಂ ೪-೩-೧೦-೩)

ಎಂದು ಗವಯ ಎಂಬ ಅರಣ್ಯಪಶುವನ್ನು ಅರ್ಪಿಸುವ ವಿಷಯವಾಗಿ ಹೇಳಿದೆ **ಗೌರ** ನುತ್ತು **ಗವಯ** ಎಂಬ ಪಶುಗಳು (Gayal and Bos gavaeus) ಅರಣ್ಯದಲ್ಲಿ ವಾಸಿಸುವ ಒಂದು ವಿಧವಾದ ಜಿಂಕೆ ಮತ್ತು ಎತ್ತು ಅಶ್ವಮೇಧ ಯಜ್ಞದಲ್ಲಿ ಉಪಯೋಗಿಸುವ ಸುಮಾರು ೮೧ ಅರಣ್ಯಪಶುಗಳ ಪಟ್ಟಿಯಲ್ಲಿ ತೈ ಸಂ ೫-೫-೧೧ರಿಂದ ೨೮ ಅನುವಾಕ ಗಳಲ್ಲಿ ಉಕ್ತವಾಗಿದೆ ಕನ್ನಡದಲ್ಲಿ ಇವುಗಳಿಗೆ ಸರಿಯಾದ ಹೆಸರುಗಳಿಲ್ಲ **ಗವಯ** ಎಂದರೆ ಒಂದುಜಾತಿಯ ಕಾಡೆತ್ತು ಇದರ ಹೆಸರು ಋಗ್ವೇದದಲ್ಲಿ ಕೆಲವು ಕಡೆ ಮಾತ್ರ ಉಕ್ತವಾಗಿದೆ ಆದರೆ ಮೈತ್ರಾಯಣಿಯಸಂಹಿತಾ ೩-೧೪-೧೦, ಕಾರಕಸಂಹಿತಾ ೧೬-೧೭, ವಾಜಸನೇಯಸಂಹಿತಾ ೨೪-೨೮, ಏತರೇಯ ಬ್ರಾಹ್ಮಣ ೨-೮, ೩-೩೪, ಶತಪಥ ಬ್ರಾಹ್ಮಣ ೧-೨-೩-೯, ಸಾಂಖ್ಯಾಯನಶ್ರೌತ ಸೂತ್ರ ೩-೧೪ ಇತ್ಯಾದಿ ಸ್ಥಳಗಳಲ್ಲಿ **ಈ ಗವಯ**ಶಬ್ದದ ಪ್ರಯೋಗ ವಿರುವುದು. **ಈ** ಶಬ್ದವು **ಗೌರ** ಎಂಬ ಶಬ್ದದೊಡನೆ ಪ್ರಕೃತಋಕ್ಕಿನಲ್ಲಿಯೂ ಗೌರ ಮತ್ತು ಮಹಿಷ ಎಂಬ ಶಬ್ದ ಗಳೊಡನೆ ವಾ ಸಂ ೨೪-೨೮, ೧೩-೪೯ರಲ್ಲಿಯೂ ಮೈತ್ರಾಯಣಿಸಂಹಿತಾ ೨-೬-೧೬, ಕಾರಕಸಂಹಿತಾ ೧೬-೧೭ ರಲ್ಲಿಯೂ ಪಠಿತವಾಗಿದೆ.

ಗೌರ ಎಂಬುದು ಸಹ ಒಂದು ಜಾತಿಯ ಕಾಡೆತ್ತು (Bos gaurus) ಇದು ಸಾಧಾರಣವಾಗಿ **ಗವಯ** ಶಬ್ದದೊಡನೆ ಋಗ್ವೇದ ೧-೧೬-೪ ೪-೨೧-೮, ೪-೫೮-೨, ೫-೬೯-೬, ೬-೬೮-೧ ಇತ್ಯಾದಿ ಸ್ಥಳಗಳಲ್ಲಿ ಉಕ್ತವಾಗಿದೆ. ಮೈತ್ರಾಯಣೀಯಸಂಹಿತಾ ೩-೧೪-೧೦, ವಾಜಸನೇಯ ಸಂಹಿತಾ ೨೪-೨೮,

ಐತರೇಯಬ್ರಾಹ್ಮಣ ೩-೩೪ ಇತ್ಯಾದಿಸ್ಥಳಗಳಲ್ಲೂ ಈ ಶಬ್ದದ ಪ್ರಯೋಗವಿದೆ. ಇದು ಅರಣ್ಯಮೃಗವೆಂದು ವಾ. ಸಂ. ೧೩-೪೮ರಲ್ಲಿ ಹೇಳಿದೆ. **ಗೌರಿ** ಎಂಬ ಹೆಣ್ಣುಮೃಗದ ಹೆಸರು ಋ ಸಂ ೧-೪೪-೧೦; ೪-೧೨-೬; ೯-೧೨-೩; ೧-೧೬೪-೧೧ ಎಂಬ ಋಕ್ಕುಗಳಲ್ಲಿದೆ **ಗೌರಮೃಗ** ಎಂಬ ಹೆಸರೂ ಸಹ ವಾಜಸನೇಯಸಂಹಿತಾ ೨೪-೩೨, ಐತರೇಯ ಬ್ರಾಹ್ಮಣ ೩-೪ ಎಂಬ ಸ್ಥಳಗಳಲ್ಲಿದೆ.

॥ संहितापारः ॥

भद्रा ते हस्ता सुकृतोत पाणे प्रयंतारा स्तुवते राध इन्द्र ।
का ते निषत्तिः किमु नो ममत्सि किं नोदुदु हर्षसे दातवा उ ॥ ९ ॥

॥ पदपारः ॥

भद्रा । ते । हस्ता । सुऽकृता । उत । पाणे इति । प्रऽयंतारा । स्तुवते । राधः । इन्द्र । का । ते । निऽसत्तिः । किं । ऊं इति । नः । इति । ममत्सि । किं । न । उत्ऽउत । ऊं- इति । हर्षसे । दातवै । ऊं इति ॥ ९ ॥

॥ सायणभाष्यं ॥

अभ्युदयेऽप्याविंद्रस्य प्रदातुर्भद्रा ते हस्तेति याज्या । सूक्तिकं च । दीर्घस्ते अस्त्वंकुशो भद्रा ते हस्ता सुकृतोत पाणे । अ. ३-०३ । इति ॥

हे इंद्र ते त्वदीयौ भद्रौ कल्याणौ हस्तौ सुकृता सुकृतौ शोभनकर्माणौ भवतः । उतापि च पाणे त्वदीयौ हस्तौ स्तुवते स्तोत्रेऽस्मै यजमानायेत्यर्थः राधो धनं प्रयंतारा प्रयंतारौ प्रदातारौ भवतः । हे इंद्र ते त्वदीया निषत्तिर्निषदनं स्थितिः का । त्वमस्मान् किमु किमर्थं नो ममत्सि । न मादयसि । किमुदुदु किमर्थमेव दातवा अस्माकं धनं दातुं न हर्षसे । हृष्टो न भवसि ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ। **ತೇ**—ನಿನ್ನ। **ಭದ್ರಾ**—ಕಲ್ಯಾಣಕಾರಕವಾದ। **ಹಸ್ತಾ**—ಹಸ್ತಗಳು। **ಸುಕೃತಾ**—ಶ್ರೇಷ್ಠವಾದ ಕರ್ಮಗಳನ್ನು ಮಾಡತಕ್ಕವು। **ಉತ**—ಮತ್ತು। **ಪಾಣೀ**—ನಿನ್ನ ಹಸ್ತಗಳು। **ಸ್ತುವತೇ**—ಸ್ತೋತ್ರಮಾಡುವ ಯಜಮಾನನಿಗೆ। **ರಾಧಃ**—ಧನವನ್ನು। **ಪ್ರಯಂತಾರಾ**—ಒದಗಿಸಿಕೊಡುತ್ತವೆ। (**ಇಂದ್ರ**—ಎಲೈ ಇಂದ್ರನೇ)। **ತೇ**—ನಿನ್ನ। **ನಿಷತ್ತಿಃ**—ಸ್ಥಿತಿಯು। **ಕಾ**—ಯಾವ ಪ್ರಕಾರವುಳ್ಳದ್ದು? । **ಕಿಮು**—ಏತಕ್ಕೋಸ್ಕರ। **ನೋ ಮಮತ್ಸಿ**—ನಮ್ಮನ್ನು ಹರ್ಷಗೊಳಿಸುವುದಿಲ್ಲ? । **ಕಿಂ ಉದುದು**—ಖಂಡಿತ ಏತಕ್ಕಾಗಿ। **ದಾತವೈ**—ನಮಗೆ ಧನವನ್ನು ಕೊಡಲು। **ನ ಹರ್ಷಸೇ**—ಹರ್ಷಿತನಾಗುವುದಿಲ್ಲ?

॥ ಭಾವಾರ್ಥ ॥

ಎಲೈ ಇಂದ್ರನೇ, ಕಲ್ಯಾಣಕಾರಕಗಳಾದ ನಿನ್ನ ಹಸ್ತಗಳು ಶ್ರೇಷ್ಠವಾದ ಕರ್ಮಗಳನ್ನು ಮಾಡತಕ್ಕವಾಗಿವೆ. ನಿನ್ನ ಹಸ್ತಗಳು ಸ್ತೋತ್ರಮಾಡುವ ಯಜಮಾನನಿಗೆ ಧನವನ್ನು ಒದಗಿಸತಕ್ಕವಾಗಿವೆ ಎಲೈ ಇಂದ್ರನೇ, ನಿನ್ನ ಸ್ಥಿತಿಯು ಯಾವ ಪ್ರಕಾರವುಳ್ಳದ್ದು? ನೀನು ಏತಕ್ಕಾಗಿ ನಮ್ಮನ್ನು ಇನ್ನೂ ಹರ್ಷಗೊಳಿಸಿಲ್ಲ ನಮಗೆ ಧನವನ್ನು ಕೊಡಲು ನಿನಗೆ ಏತಕ್ಕಾಗಿ ಹರ್ಷವಿಲ್ಲ?

English Translation.

Your auspicious hands, Indra, are the doers of good deeds your two hands, Indra, are the extenders of wealth to him who praises you: what, Indra, is this delay? why do you not exhilarate us? why are you not delighted to make us gifts?

॥ ವಿಶೇಷವಿಷಯಗಳು ॥

ಆಭ್ಯುದಯೇಷ್ಟಿಯಲ್ಲಿ ಇಂದ್ರನನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ಭದ್ರಾ ತೇ ಹಸ್ತಾ** ಎಂಬ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ದೀರ್ಘಸ್ತೇ ಅಸ್ತ್ವಂಕುಶೋ ಭದ್ರಾ ತೇ ಹಸ್ತಾ ಸುಕೃತೋತ ಪಾಣೀ** ಎಂಬ ಸೂತ್ರದಿಂದ (ಆ. ೩–೧೩) ವಿವೃತವಾಗಿರುವುದು.

ಈ ಋಕ್ಕಿನಲ್ಲಿ ಋಷಿಯು ಇಂದ್ರನ ಹಸ್ತಗಳು ಯಜಮಾನನಿಗೆ ಧನಾದಿಗಳನ್ನು ಕೊಡುವುವೆಂದು ಎಂದರೆ, ಕೊಡುವ ಸಾಮರ್ಥ್ಯವಿರುವುದೆಂದು ಪ್ರಶಂಸೆಮಾಡಿ, ಹೀಗಿದ್ದರೂ ಇಂದ್ರನು ನಮಗೆ ಏತಕ್ಕಾಗಿ ಧನಾದಿಗಳನ್ನು ಕೊಡುವುದಿಲ್ಲ? ಏತಕ್ಕೆ ನಮಗೆ ಸಂತೋಷವನ್ನುಂಟುಮಾಡುವುದಿಲ್ಲ ಎಂದು ಪ್ರಶ್ನಿಸಿದಾನೆ ಎಂದರೆ, ಇಂದ್ರನಿಗೆ ಧನಾದಿಗಳನ್ನು ಕೊಡುವ ಸಾಮರ್ಥ್ಯವಿದ್ದರೂ ಅವುಗಳನ್ನು ನಮಗೆ ಒದಗಿಸುವುದರಲ್ಲಿ ಏತಕ್ಕೆ ಸಾವಕಾಶಮಾಡುತ್ತಾನೆಯೋ ತಿಳಿಯದು ಎಂಬ ಭಾವನೆಯನ್ನು ಋಷಿಯು ವ್ಯಕ್ತಪಡಿಸಿದಾನೆ

॥ ಸಂಹಿತಾಪಾಠಃ ॥

ಏವಾ ವಸ್ವ ಇಂದ್ರಃ ಸತ್ಯಃ ಸಮ್ರಾಡ್ಧಂತಾ ವೃತ್ರಂ ವರಿವಃ ಪೂರವೇ ಕಃ ।
ಪುರುಷ್ಟುತ ಕ್ರತ್ವಾ ನಃ ಶಗ್ಧಿ ರಾಯೋ ಭಕ್ಷೀಯ ತೇಽವಸೋ ದೈವ್ಯಸ್ಯ ॥೧೦॥

॥ ಪದಪಾಠಃ ॥

ಏವ । ವಸ್ವಃ । ಇಂದ್ರಃ । ಸತ್ಯಃ । ಸಂಽರಾಟ್ । ಹಂತಾ । ವೃತ್ರಂ । ವರಿವಃ । ಪೂರವೇ । ಕರಿತಿ ಕಃ ।
ಪುರುಽಸ್ತುತ । ಕ್ರತ್ವಾ । ನಃ । ಶಗ್ಧಿ । ರಾಯಃ । ಭಕ್ಷೀಯ । ತೇ । ಅವಸಃ । ದೈವ್ಯಸ್ಯ ॥ ೧೦ ॥

॥ ಸಾಯಣಭಾಷ್ಯಂ ॥

ಇಂದ್ರಸ್ಯ ವಾರ್ತ್ರಘ್ನಸ್ಯ ಹಶಾವೇವಾ ವಸ್ವ ಇತಿ ಹವಿರ್ಧಾನೋ ಯಾಜ್ಯಾ । ಸೂತ್ರಿತಂ ಚ । ಏವಾ ವಸ್ವ ಇಂದ್ರಃ ಸತ್ಯಃ ಸಮ್ರಾಡ್ಯದ್ವಾಗ್ದದಂತ್ಯವಿಚೇತನಾನಿ । ಅ. ೩-೮ । ಇತಿ ॥

ಏವೈವಮುಕ್ತಪ್ರಕಾರೇಣ ಸ್ತೂಯಮಾನಃ ಸತ್ಯಃ ಸತ್ಯವಾನ್ವಸ್ವೋ ಧನಸ್ಯ ಸಮ್ರಾಡೀಶ್ವರೋ ವೃತ್ರಂ ವೃತ್ರನಾಮಾನಮಸುರಂ ಹಂತಾ ಹಿಂಸಿತೇಂದ್ರಃ ಪೂರವೇ ಮನುಷ್ಯಾಯ ಯಜಮಾನಾಯ ವರಿವೋ ಧನಂ ಕಃ । ಕರೋತಿ । ದದಾತೀತ್ಯರ್ಥಃ । ಕ್ರತ್ವಾ ಕರ್ಮಣಾ ಸ್ತುತಿಹೇತುನಾ ಹೇ ಪುರುಷ್ಟುತ ಬಹುಭಿರ್ಯಜಮಾನೈಃ ಸ್ತುತೇಂದ್ರ ಕ್ವಂ ನೋಽಸ್ಮಭ್ಯಂ ರಾಯೋ ಧನಾನಿ ಶಗ್ಧಿ । ದೇಹಿ । ತೇ ತ್ವಯಾ ದೀಯಮಾನಸ್ಯ ದೈವ್ಯಸ್ಯ ದೇವಸಂಬಂಧಿನೋಽವಸೋಽನ್ನಸ್ಯ ॥ ಕರ್ಮಣಿ ಷಷ್ಠೀ ॥ ಅನ್ನಂ ಭಕ್ಷೀಯ । ಅಹಂ ಭಜೇಯ ॥

॥ ಪ್ರತಿಪದಾರ್ಥ ॥

ಏವಾ—ಮೇಲೆ ವರ್ಣಿತವಾದಂತೆ ಸ್ತುತನಾಗತಕ್ಕವನೂ । **ಸತ್ಯಃ**—ಸತ್ಯಾತ್ಮಕನೂ । **ವಸ್ವಃ**—ಧನಕ್ಕೆ । **ಸಮ್ರಾಟ್**—ಈಶ್ವರನೂ । **ವೃತ್ರಂ**—ವೃತ್ರಾಸುರನನ್ನು । **ಹಂತಾ** – ನಾಶಮಾಡಿದವನೂ ಆದ । **ಇಂದ್ರಃ**—ಇಂದ್ರನು । **ಪೂರವೇ**—ಮಾನವನಾದ ಯಜಮಾನನಿಗೆ । **ವರಿವಃ**—ಧನವನ್ನು । **ಕಃ** – ಒದಗಿಸಿ ಕೊಡುತ್ತಾನೆ । **ಕ್ರತ್ವಾ**—ಸ್ತುತಿರೂಪವಾದ ಕರ್ಮಗಳಿಂದ । **ಪುರುಷ್ಟುತ**—ಅನೇಕರಿಂದ ಸ್ತುತನಾದ ಇಂದ್ರನೇ । **ನಃ**—ನಮಗೆ । **ರಾಯಃ**—ಧನಗಳನ್ನು । **ಶಗ್ಧಿ**—ಕೊಡು । **ತೇ**—ನಿನ್ನಿಂದ ಕೊಡಲ್ಪಟ್ಟುದೂ । **ದೈವ್ಯಸ್ಯ**—ದೈವಿಕಸ್ವರೂಪವುಳ್ಳದ್ದೂ ಆದ । **ಅವಸಃ**—ಅನ್ನದ । **ಭಕ್ಷೀಯ**—ಭೋಕ್ತೃವಾಗಿ (ನಾನು) ಆಗುವಂತೆ ಅನುಗ್ರಹಿಸು.

॥ ಭಾವಾರ್ಥ ॥

ಅನೇಕ ರೀತಿಯಲ್ಲಿ ಸ್ತುತನಾಗತಕ್ಕವನೂ, ಸತ್ಯಾತ್ಮಕನೂ, ಧನಕ್ಕೆ ಒಡೆಯನೂ, ವೃತ್ರಹಂತಕನೂ ಆದ ಇಂದ್ರನು ಮಾನವನಾದ ಯಜಮಾನನಿಗೆ ಧನವನ್ನು ಒದಗಿಸಿಕೊಡುತ್ತಾನೆ ಸ್ತುತಿರೂಪವಾದ ಕರ್ಮಗಳಿಂದ

ಅನೇಕರಿಂದ ಸ್ತುತನಾದ ಎಲೈ ಇಂದ್ರನೇ, ನಮಗೆ ಧನಗಳನ್ನು ಕೊಡು. ನಿನ್ನಿಂದ ಕೊಡಲ್ಪಟ್ಟುದೂ, ದೈವಿಕವಾದ ಸ್ವರೂಪ ಮತ್ತು ಸಂಬಂಧವುಳ್ಳದ್ದೂ ಆದ ಅನ್ನವನ್ನು ನಾನು ಭುಜಿಸುವಂತೆ ಅನುಗ್ರಹಿಸು.

English Translation.

Thus (glorified), Indra, who is faithful (to his word), the lord of wealth, the slayer of Vritra, bestows riches on man, so you, the praised of many, give us riches for our pious acts, that I may eat of your divine food.

॥ ವಿಶೇಷವಿಷಯಗಳು ॥

ವಾರ್ತ್ರಘ್ನ ಎಂಬ ಅಭಿಧಾನದಿಂದ ಕರೆಯಲ್ಪಡುವ ಇಂದ್ರನನ್ನುದ್ದೇಶಿಸಿ ಮಾಡುವ ಪಶುಹೋಮದಲ್ಲಿ ಹವಿಸ್ಸನ್ನು ಹೋಮಮಾಡುವಾಗ **ಏವಾ ವಸ್ಯಃ** ಎಂಬ ಈ ಋಕ್ಕನ್ನು ಯಾಜ್ಯಾನುವಾಕ್ಯಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಏವಾ ವಸ್ವ ಇಂದ್ರಃ ಸತ್ಯಃ ಸಮ್ರಾಡ್ಯದ್ವಾಗ್ವದಂತ್ಯವಿಚೇತನಾನಿ** ಎಂಬ ಸೂತ್ರದಿಂದ (ಅ ೩-೪) ವಿನಿಯುಕ್ತವಾಗಿರುವುದು.

ಸೂಕ್ತದ ಉಪಸಂಹಾರರೂಪವಾದ ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ವಾಮದೇವಋಷಿಯು ಇಂದ್ರನನ್ನು ಸ್ತುತಿಸಿ ತನಗೆ ಧನಾದಿಗಳನ್ನೂ ಅನ್ನಾದ್ಯಾಹಾರಗಳನ್ನೂ ಕೊಡಬೇಕೆಂದು ಪ್ರಾರ್ಥಿಸಿದಾನೆ

॥ ಸಂಹಿತಾಪಾಠಃ ॥

ನೂ ಷ್ಟುತ ಇಂದ್ರ ನೂ ಗೃಣಾನ ಇಷಂ ಜರಿತ್ರೇ ನದ್ಯೋ ನ ಪೀಪೇಃ ।
ಅಕಾರಿ ತೇ ಹರಿವೋ ಬ್ರಹ್ಮ ನವ್ಯಂ ಧಿಯಾ ಸ್ಯಾಮ ರಥ್ಯಃ ಸದಾಸಾಃ ॥ ೧೧ ॥

॥ ಪದಪಾಠಃ ॥

ನು । ಸ್ತುತಃ । ಇಂದ್ರ । ನು । ಗೃಣಾನಃ । ಇಷಂ । ಜರಿತ್ರೇ । ನದ್ಯಃ । ನ । ಪೀಪೇರಿತಿ ಪೀಪೇಃ ।
ಅಕಾರಿ । ತೇ । ಹರಿವಃ । ಬ್ರಹ್ಮ । ನವ್ಯಂ । ಧಿಯಾ । ಸ್ಯಾಮ । ರಥ್ಯಃ । ಸದಾಸಾಃ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ನು ಕ್ಷಿಪ್ರಂ ಸ್ತುತಃ ಪೂರ್ವೈರ್ಋಷಿಭಿಃ ಸಂಸ್ತುತೋ ನು ಕ್ಷಿಪ್ರಂ ಗೃಣಾನೋಽಸ್ಮಾಭಿಃ ಸ್ತೂಯಮಾನಸ್ತ್ವಮಿಷಮನ್ನಂ ಜರಿತ್ರೇ ಸ್ತೋತ್ರೇ ಮಹ್ಯಂ ನದ್ಯೋ ನಾದ್ಧಿರ್ನದೀರಿವ ಪೀಪೇಃ ।

ಸ್ಯಾಯಯೇ । ಪ್ರವೃದ್ಧಂ ಕುರು । ಹೇ ಹರಿವೋ ಹರಿಸಂಜ್ಞಕಾಶ್ವೋಪೇತೇಂದ್ರ ತೇ ತುಭ್ಯಂ ನವ್ಯಂ ನವತರಂ ಬ್ರಹ್ಮ ಸ್ತೋತ್ರಮಕಾರಿ । ಅಸ್ಮಾಭಿಃ ಕ್ರಿಯತೇ । ರಥ್ಯೋ ರಥವಂತೋ ವಯಂ ಧಿಯಾ ಪ್ರಜ್ಞಾರೂಪಯಾ ಸ್ತುತ್ಯಾ ಸದಾಸಾಸ್ತ್ವಾಂ ಸರ್ವದಾ ಭಜಮಾನಾಸ್ತ್ವದರ್ಥಂ ಹವೀರೂಪಸ್ಯಾನ್ನಸ್ಯ ದಾತಾರೋ ವಾ ಸ್ಯಾಮ । ಭೂಯಾಸ್ಮ ॥

। ಪ್ರತಿಪದಾರ್ಥ ।

ಇಂದ್ರ—ಎಲೈ ಇಂದ್ರನೇ । **ನು**—ಅತಿಶಯವಾಗಿ । **ಸ್ತುತಃ**—ಹಿಂದಿನ ಋಷಿಗಳಿಂದ ಸ್ತುತನಾದ ವನೂ । **ನು**—ಆದೇ ಶ್ರದ್ಧೆಯಿಂದ । **ಗೃಣಾನಃ**—(ನಮ್ಮಿಂದಲೂ) ಸ್ತುತನಾಗತಕ್ಕವನೂ ಆಗಿ । **ನದ್ಯಃ ನ**—ನದಿಗಳನ್ನು ಉದಕಗಳಿಂದ ತುಂಬುವಂತೆ । **ಜರಿತ್ರೇ**—ಸ್ತೋತೃವಾದ ನನಗೆ । **ಇಷಂ**—ಅನ್ನವನ್ನು । **ಪೀಪೇಃ**—ತುಂಬಿಕೊಡು ! **ಹರಿವಃ**—ಹರಿಸಂಜ್ಞಕಗಳಾದ ಅಶ್ವಗಳುಳ್ಳ ಇಂದ್ರನೇ । **ತೇ**—ನಿನ್ನನ್ನುದ್ದೇಶಿಸಿ । **ನವ್ಯಂ**—ನೂತನವಾದ । **ಬ್ರಹ್ಮ**—ಸ್ತೋತ್ರವು । **ಅಕಾರಿ**—ನಿರ್ಮಿತವಾಗುತ್ತದೆ । **ರಥ್ಯಃ**—ರಥಗಳನ್ನು ಹೊಂದಿರುವ ನಾವು । **ಧಿಯಾ**—ಪ್ರಜ್ಞಾಪೂರ್ವಕವಾದ ಸ್ತುತಿಯಿಂದ । **ಸದಾಸಾಃ**—ನಿನ್ನನ್ನು ಪೂಜಿಸಿ ಹವಿಸ್ಸನ್ನ ರ್ಪಿಸುವವರಾಗಿ । **ಸ್ಯಾಮ**—ಆಗುವಂತೆ ಅನುಗ್ರಹಿಸು.

। ಭಾವಾರ್ಥ ।

ಎಲೈ ಇಂದ್ರನೇ, ಹಿಂದಿನ ಋಷಿಗಳಿಂದ ಅತಿಶಯವಾಗಿ ಸ್ತುತನಾದವನೂ, ಆದೇ ಶ್ರದ್ಧೆಯಿಂದ ನಮ್ಮಿಂದಲೂ ಸ್ತುತನಾಗತಕ್ಕವನೂ ಆಗಿ ನದಿಗಳನ್ನು ಉದಕಗಳಿಂದ ತುಂಬುವಂತೆ ಸ್ತೋತೃವಾದ ನನಗೆ ಅನ್ನವನ್ನು ತುಂಬಿಕೊಡು. ಹರಿಸಂಜ್ಞಕಗಳಾದ ಅಶ್ವವುಳ್ಳ ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ನೂತನವಾದ ಸ್ತೋತ್ರವು ನಿರ್ಮಿತವಾಗುತ್ತದೆ. ರಥಗಳನ್ನು ಹೊಂದಿರುವ ನಾವು ಪ್ರಜ್ಞಾಪೂರ್ವಕವಾದ ಸ್ತುತಿಯಿಂದ ನಿನ್ನನ್ನು ಪೂಜಿಸಿ ಹವಿಸ್ಸನ್ನ ರ್ಪಿಸುವವರಾಗಿ ಆಗುವಂತಾಗಲಿ.

English Translation.

Glorified (in the past), glorified, Indra, at present, satisfy your worshipper with food, as rivers (are filled with water): lord of horses, a new hymn has been made for you. may we, possessed of chariots, be ever diligent in your praise.

। ವಿಶೇಷವಿಷಯಗಳು ।

ಈ ಋಕ್ಕು ಈ ಸೂಕ್ತದಲ್ಲಲ್ಲದೆ ೨೦-೨೪ ನೇ ಸೂಕ್ತಗಳಲ್ಲಿ ಕೊನೆಯ ಋಕ್ಕುಗಳಾಗಿ ಪರಿತವಾಗಿದೆ.

ಇಂದ್ರ ನು ಸ್ತುತಃ ನು ಗೃಣಾನಃ ನದ್ಯಃ ನ ಜರಿತ್ರೇ ಇಷಂ ಪೀಪೇಃ—ಎಲೈ ಇಂದ್ರನೇ, ನೀನು ಹಿಂದೆ ಅನೇಕ ಋಷಿಗಳಿಂದ ಸ್ತುತಿಸಲ್ಪಟ್ಟರುವೆ ಈಗ ನಮ್ಮಿಂದ ಸ್ತುತಿಸಲ್ಪಡುವೆ. ನದಿಗಳಿಗೆ ವೃಷ್ಟ್ಯುದಕವು ತುಂಬಿ ಪೂರ್ಣವಾಗಿ ಹರಿಯುವಂತೆ ನಿನ್ನನ್ನು ಸ್ತೋತ್ರಮಾಡುವ ನಮಗೆ ಅನ್ನವನ್ನು (ಅನ್ನಾದ್ಯಾಹಾರವನ್ನು) ತುಂಬಿ ಕೊಡು, ಎಂದರೆ ಯಥೇಚ್ಛವಾಗಿ ಕೊಡು.

ನು—**ನು ಇತ್ಯೇಷೋಽನೇಕಕರ್ಮಾ । ಇದಂ ನು ಕರಿಷ್ಯತೀತಿ ಹೇತ್ವಪದೇಶೇ । ಕಥಂ ನು ಕರಿಷ್ಯತೀತ್ಯನುಪಪ್ಲವೇ** (ನಿ ೧-೪) **ನು** ಎಂಬ ನಿಪಾತಕ್ಕೆ ಅನೇಕ ಅರ್ಥಗಳಿವೆ. **ಇದಂ ನು ಕರಿಷ್ಯತಿ** ಎನ್ನುವಾಗ **ನು** ಎಂಬ ಶಬ್ದಕ್ಕೆ ಆದ್ದರಿಂದ ಎಂದು ಹೇತ್ವರ್ಥವಾಗುತ್ತದೆ **ಕಥಂ ನು ಕರಿಷ್ಯತಿ** ಎನ್ನುವಾಗ **ನು** ಎಂಬ ಶಬ್ದಕ್ಕೆ ಹೇಗೆ ಎಂಬ ಪ್ರಶ್ನಾರ್ಥಕವಾಗುತ್ತದೆ ಹೀಗೆಯೇ **ಅಥಾಪ್ಯುಪಮಾರ್ಥೇ ಭವತಿ ।** ಉಪಮಾನವನ್ನು ಸೂಚಿಸುವಾಗಲೂ ಸಹ **ನು** ಎಂಬ ಶಬ್ದದ ಪ್ರಯೋಗವಿರುವುದು ಉದಾಹರಣೆಗೆ---

ಅಕ್ಷೋ ನ ಚಕ್ರ್ಯೋಃ ಶೂರ ಬೃಹನ್ಪ್ರ ತೇ ಮಹ್ನಾ ರಿರಿಚೇ ರೋದಸ್ಯೋಃ ।
ವೃಕ್ಷಸ್ಯ ನು ತೇ ಪುರುಹೂತ ವಯಾ ವ್ಯೂ ೩ ತಯೋ ರುರುಹುರಿಂದ್ರ ಪೂರ್ವೀಃ ॥

(ಋ ಸಂ ೬-೨೪-೩)

ಎಂಬ ಋಕ್ಕನ್ನು ನಿರುಕ್ತಕಾರರು ಉದಾಹರಿಸಿ (ನಿ. ೧-೪), **ವೃಕ್ಷಸ್ಯ ನು ತೇ । ವೃಕ್ಷಸ್ಯೇವ ತೇ ।** ವೃಕ್ಷದಂತೆ ಅಥವಾ ವೃಕ್ಷದ ಶಾಖೆಗಳಂತೆ ಎಂದು **ನು** ಎಂಬ ಶಬ್ದಕ್ಕೆ ಉಪಮಾರ್ಥವನ್ನು ಹೇಳಿದೆಯೆಂದು ತಿಳಿಸಿದಾರೆ. ಹೀಗೆಯೇ—

ನೂ ಮರ್ತೋ ದಯತೇ ಸನಿಷ್ಯನ್ಯೋ ವಿಷ್ಣವ ಉರುಗಾಯಾಯ ದಾಶತ್ ।

(ಋ ಸಂ ೭-೧೦೦-೧೧)

ಇತ್ಯಾದಿ ಋಕ್ಕುಗಳಲ್ಲಿ **ನು** ಎಂಬ ಶಬ್ದಕ್ಕೆ **ಕ್ಷಿಪ್ರಂ** ಬೇಗನೆ, ಜಾಗ್ರತೆಯಾಗಿ ಎಂಬರ್ಥವೂ,

ನೂ ಇಂದ್ರ ಶೂರ ಸ್ತವಮಾನ ಊತೀ ಬ್ರಹ್ಮಜೂತಸ್ತನ್ವಾ ವಾವೃಧಸ್ವ ।

(ಋ ಸಂ ೭-೧೯-೧೧)

ಇತ್ಯಾದಿ ಋಕ್ಕುಗಳಲ್ಲಿ **ನು** ಎಂದರೆ **ಅದ್ಯ,** ಈಗ, ಒಡನೆಯೇ ಎಂಬ ಅರ್ಥವಿರುವುದೆಂದು ನಿರುಕ್ತಕಾರರು ಉದಾಹರಣೆ ಸಹಿತವಾಗಿ ವಿವರಿಸಿದಾರೆ ಪ್ರಕೃತವಾದ ಋಕ್ಕಿನಲ್ಲಿ **ಕ್ಷಿಪ್ರಂ** ಬೇಗನೆ, ಶೀಘ್ರವಾಗಿ ಎಂದರ್ಥವು

ಜರಿತ್ರೇ—ಜರಿತೃಶಬ್ದವು ಸ್ತೋತೃನಾಮಗಳಲ್ಲಿ ಪಠಿತವಾಗಿದೆ (ನಿ. ೩-೧೯) **ಜರಿತಾ ಗರಿತಾ** (ನಿ. ೧-೭) ಎಂದು ನಿರ್ವಚನವೂ ಇರುವುದರಿಂದ **ಜರಿತ್ರೇ** ಎಂದರೆ ಇಲ್ಲಿ ಸ್ತೋತ್ರಮಾಡುವ ನನಗೆ ಎಂದರ್ಥವು

ನ—**ನ** ಎಂಬ ಶಬ್ದಕ್ಕೆ ನಿರುಕ್ತಕಾರರು ಎರಡು ವಿಧವಾದ ಅರ್ಥವನ್ನು ಹೇಳಿರುವರು—

ನೇತಿ ಪ್ರತಿಷೇಧಾರ್ಥೀಯೋ ಭಾಷಾಯಾಂ । ಉಭಯಮನ್ವಧ್ಯಾಯ್ಯಂ । ನೇಂದ್ರಂ ದೇವಮಮಂಸತ ಇತಿ ಪ್ರತಿಷೇಧಾರ್ಥೀಯಃ ಪುರಸ್ತಾದುಪಚಾರಸ್ತಸ್ಯ ಯತ್ಪ್ರತಿಷೇಧತಿ । ದುರ್ಮದಾಸೋ ನ ಸುರಾಯಾಂ ಇತ್ಯುಪಮಾರ್ಥೀಯಃ । ಉಪರಿಷ್ಟಾದುಪಚಾರಸ್ತಸ್ಯ ಯೇನೋಪಮಿಮೀತೇ ॥ (ನಿ. ೧-೪)

ಎಂದರೆ **ನ** ಎಂಬ ಶಬ್ದವು ಲೋಕವ್ಯವಹಾರದ ಭಾಷೆಯಲ್ಲಿ ಎಂದರೆ, ವೇದಭಾಷೆಯಲ್ಲದ ಆಧುನಿಕ ಸಂಸ್ಕೃತ ಭಾಷೆಯಲ್ಲಿ ನಿಷೇಧಾರ್ಥವಲ್ಲಿ (ಇಲ್ಲ, ಅಲ್ಲ ಎಂಬರ್ಥದಲ್ಲಿ) ಉಪಯೋಗಿಸಲ್ಪಡುವುದು. ಇದು ಎಲ್ಲರಿಗೂ ತಿಳಿದೇ ಇದೆ. **ಆದರೆ**

ವೇದಗಳಲ್ಲಿ ನಿಷೇಧಾರ್ಥದಲ್ಲಿಯೂ, ಉಪಮಾರ್ಥದಲ್ಲಿಯೂ **ನ** ಎಂಬ ಶಬ್ದದ ಪ್ರಯೋಗವಿರುವುದು. ಹೇಗೆಂದರೆ— **ನೇಂದ್ರಂ ದೇವಮಮಂಸತ** ಎಂಬ ವಾಕ್ಯದಲ್ಲಿನ **ನ** ಎಂಬ ಶಬ್ದವು ನಿಷೇಧಾರ್ಥದಲ್ಲಿ ಪ್ರಯುಕ್ತವಾಗಿರುವುದು. ಪ್ರತಿಷೇಧವೆಂದರೆ ಒಬ್ಬ ವ್ಯಕ್ತಿಯನ್ನು ಪ್ರತ್ಯಕ್ಷವಾಗಿ ಅಥವಾ ಎದುರಿಗೆ ಹೊಗಳದೇ ಇರುವುದು. ಇಂದ್ರನನ್ನು ದೀಪ್ತಿಯುಕ್ತನಾದವನೆಂದು ತಿಳಿಯಲಾಗುವುದಿಲ್ಲ ಎಂಬ ವಾಕ್ಯದಲ್ಲಿ **ಇಲ್ಲ (ನ** ಎಂಬುದರ ಅರ್ಥ) ಎಂಬ ಶಬ್ದವು ಇಂದ್ರನ ವಿಷಯಕವಾದ ಉಪಚಾರೋಕ್ತಿಗೆ ವಿರುದ್ಧವಾದ ಅರ್ಥವನ್ನು ಸೂಚಿಸುವುದು. ಇದಕ್ಕೆ ಪ್ರತಿಷೇಧಾರ್ಥವೆಂದು ಹೆಸರು. **ದುರ್ಮದಾಸೋ ನ ಸುರಾಯಾಂ** ಎಂಬ ವಾಕ್ಯದಲ್ಲಿ **ನ** ಎಂಬ ಶಬ್ದವು ಉಪಮಾರ್ಥವನ್ನು (ಹೋಲಿಕೆಯನ್ನು) ಸೂಚಿಸುವುದು. ಮದ್ಯವನ್ನು ಪಾನಮಾಡಿದ ಜನರಂತೆ ದುರಹಂಕಾರವುಳ್ಳವರು ಎಂದು **ಈ** ವಾಕ್ಯದ ಅರ್ಥವು ಇಲ್ಲಿ ಒಂದು ವ್ಯಕ್ತಿಯಲ್ಲಿರುವ ಗುಣಾವಗುಣಗಳನ್ನು ಮತ್ತೊಂದು ವ್ಯಕ್ತಿಯಲ್ಲಿರುವ ಗುಣಾವಗುಣಗಳಿಗೆ ಹೋಲಿಸಿ ಹೇಳುವುದೇ ಉಪಮಾರ್ಥವು ಮದ್ಯಪಾನಮಾಡಿದವರು ಮತಿಹೀನರಾಗಿ ಅಹಂಕಾರದಿಂದ ನೀಚಮಾರ್ಗದಲ್ಲಿ ವರ್ತಿಸುವರು ಆ ಜನರಂತೆ ದುರಹಂಕಾರವುಳ್ಳವರು ಎಂಬುದೇ ಉಪಮಾರ್ಥವು. **ಈ** ವಿಧವಾದ ಅರ್ಥಗಳನ್ನು ವೇದಗಳಲ್ಲಿ **ನ** ಎಂಬ ಪದದಿಂದಲೂ, **ಇವ** ಎಂಬ ಪದದಿಂದಲೂ ನಿರ್ದೇಶಿಸಲ್ಪಡುವುದು. **ಈ** ವಿಧವಾದ ಉಪಮಾರ್ಥದಲ್ಲಿ **ನ** ಎಂಬ ಶಬ್ದದ ಪ್ರಯೋಗವು ವೇದಗಳಲ್ಲಿ ಮಾತ್ರ ಇರುವುದು. ಬಳಸುವ ಭಾಷೆಯಲ್ಲಿಲ್ಲ. ಅದಕ್ಕೆ ಬದಲಾಗಿ ಅಲ್ಲಿ **ಇವ** ಎಂಬ ಶಬ್ದದ ಪ್ರಯೋಗಮಾತ್ರವಿರುವುದು

ಸೂಕ್ತದ ಉಪಸಂಹಾರರೂಪವಾದ **ಈ** ಋಕ್ಕಿನಲ್ಲಿ ವಾಮದೇವಋಷಿಯು ದೇವತೆಗೆ ಹೊಸದಾಗಿ ರಚಿತವಾದ ಸ್ತೋತ್ರವನ್ನರ್ಪಿಸಿ ದೇವತೆಯ ಅನುಗ್ರಹವನ್ನು ಪ್ರಾರ್ಥಿಸಿರುವುದು ಉಕ್ತವಾಗಿದೆ.

ಇಪ್ಪತ್ತೆರಡನೆಯ ಸೂಕ್ತವು

ತತ್ರ ತೃತೀಯೋನುವಾಕ ಏಕಾದಶ ಸೂಕ್ತಾನಿ । ತಶ್ರ ಯನ್ನ ಇಂದ್ರ ಇತ್ಯೇಕಾದಶರ್ಚಂ ಪ್ರಥಮಂ ಸೂಕ್ತಂ ವಾಮದೇವಸ್ಯಾರ್ಷಂ ತ್ರೈಷ್ಟುಭಮೈಂದ್ರಂ । ಯನ್ನ ಇತ್ಯನುಕ್ರಮಣಿಕಾ ॥ ಪೃಷ್ಠ್ಯಾಭಿಪ್ಲವಷಡಹಯೋಃ ಪ್ರಥಮೇಽಹನಿ ಮಾಧ್ಯಂದಿನಸವನೇ ಮೈತ್ರಾವರುಣಶಸ್ತ್ರೇ ದ್ವಿತೀಯಮಿದಂ ಸಂಪಾತಸೂಕ್ತಂ । ಸೂತ್ರಿತಂ ಚ । ಏವಾ ತ್ವಾಮಿಂದ್ರ ಯನ್ನ ಇಂದ್ರಃ । ಆ. ೭-೫ । ಇತಿ ॥

ಅನುವಾದವು—ಚತುರ್ಥಮಂಡಲದ ಮೂರನೆಯ ಅನುವಾಕದಲ್ಲಿ ಹನ್ನೊಂದು ಸೂಕ್ತಗಳಿರುವವು ಆವುಗಳಲ್ಲಿ **ಯನ್ನ ಇಂದ್ರಃ** ಎಂಬ ಈ ಸೂಕ್ತವು ಮೊದಲನೆಯದು ಇದರಲ್ಲಿ ಹನ್ನೊಂದು ಋಕ್ಕುಗಳಿರುವವು. **ಈ** ಸೂಕ್ತಕ್ಕೆ ವಾಮದೇವನು ಋಷಿಯು, ಇಂದ್ರನು ದೇವತೆಯು, ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ— **ಯನ್ನಃ** ಎಂದು ಮೊದಲಾಗಿ ಹೇಳಿರುವುದು, ಪೃಷ್ಠ್ಯ ಮತ್ತು ಅಭಿಪ್ಲವ ಷಡಹವೆಂಬ ಯಾಗಗಳ ಮೊದಲನೆಯ ದಿವಸ ಮಾಧ್ಯಂದಿನಸವನಕಾಲದಲ್ಲಿ ಮೈತ್ರಾವರುಣಶಸ್ತ್ರಮಂತ್ರಗಳ ಮಧ್ಯದಲ್ಲಿ ಪಠಿಸಬೇಕಾದ ಮೂರು ಸಂಪಾತಸೂಕ್ತಗಳಲ್ಲಿ **ಈ** ಸೂಕ್ತವು ಎರಡನೆಯದು. **ಈ** ವಿಷಯವು ಆಶ್ವಲಾಯನ ಶ್ರೌತಸೂತ್ರದ—**ಏವಾ ತ್ವಾಮಿಂದ್ರ ಯನ್ನ ಇಂದ್ರಃ** ಎಂಬ ಸೂತ್ರದಿಂದ (ಆ ೭-೫) ವಿವೃತವಾಗಿರುವುದು.

ಸೂಕ್ತ—೨೨

ಮಂಡಲ—೪ ॥ ಅನುವಾಕ—೩ ॥ ಸೂಕ್ತ—೨೨ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ—೭, ೮ ॥

॥ ಸೂಕ್ತದಲ್ಲಿರುವ ಏಕ್ಸಂಖ್ಯೆ—೧೧ ॥
॥ ಋಷಿಃ—ವಾಮದೇವಃ ॥
॥ ದೇವತಾ—ಇಂದ್ರಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಯನ್ನ॒ ಇಂದ್ರೋ॑ ಜುಜು॒ಷೇ ಯಚ್ಚ॒ ವಷ್ಟಿ॒ ತನ್ನೋ॑ ಮ॒ಹಾನ್ಕ॑ರತಿ ಶು॒ಷ್ಮ್ಯ॑ಚಿ॑ತ್ ।
ಬ್ರ॒ಹ್ಮ ಸ್ತೋ॑ಮ॒ಂ ಮ॒ಘ॒ವಾ ಸೋ॑ಮ॒ಮು॒ಕ್ಥ್ಯಂ॑ ಯೋ ಅ॒ಶ್ಮಾ॒ನಂ ಶ॒ವ॒ಸಾ ಬಿ॒ಭ್ರ॒ದೇ॑ತಿ॑ ॥ ೧ ॥

॥ ಪದಪಾಠಃ ॥

ಯತ್ । ನ॒ಃ । ಇಂ॒ದ್ರೋ॑ । ಜು॒ಜು॒ಷೇ । ಯತ್ । ಚ॒ । ವಷ್ಟಿ॑ । ತತ್ । ನ॒ಃ । ಮ॒ಹಾನ್ । ಕ॒ರ॒ತಿ॒ । ಶು॒ಷ್ಮ್ಯೇ । ಅ । ಚಿ॒ತ್ ।
ಬ್ರ॒ಹ್ಮ । ಸ್ತೋ॒ಮ॒ಂ । ಮ॒ಘ॒ವಾ । ಸೋ॒ಮ॒ಂ । ಉ॒ಕ್ಥಾ । ಯಃ । ಅ॒ಶ್ಮಾ॒ನಂ । ಶ॒ವ॒ಸಾ । ಬಿ॒ಭ್ರ॒ತ್ ।
ಏ॒ತಿ॒ ॥ ೧ ॥

॥ ಸಾಯಣಭಾಷ್ಯಂ ॥

ಇಂದ್ರೋ ನೋ॒ಽಸ್ಮದೀಯಂ ಯದ್ಧವಿರ್ಲಕ್ಷಣಾನ್ನಾದಿಕಂ ಜುಜುಷೇ ಸೇವತೇ ಯಚ್ಚ ಹವಿರಾದಿಕಂ ಚ ವಷ್ಟಿ ಕಾಮಯತೇ ಮಹಾನ್ ಪ್ರಭೂತಃ ಶುಷ್ಮ್ಯೇ ಬಲವಾನಿಂದ್ರಃ। ಚಿದಿತಿ ಚಾರ್ಥೇ। ಬ್ರಹ್ಮ ಚಿತ್ ಹವಿರ್ಲಕ್ಷಣಪುರೋಡಾಶಾದಿಕಮನ್ನಂ ಚ ಸ್ತೋಮಂ ಸ್ತೋತ್ರಸಮೂಹಂ ಚ ಸೋಮಮಭಿಷುತಂ ಸೋಮಂ ಚೋಕ್ಥೋಕ್ಥಾನಿ ಶಸ್ತ್ರಾಣಿ ಚೇತ್ಯೇವಂಭೂತಂ ತದ್ಬ್ರಹ್ಮಾದಿಚತುಷ್ಟಯಮಾಕರತಿ। ಆಕರೋತು। ಸ್ವೀಕರೋತು। ಮಘವಾ ಧನವಾನ್। ಅಶ್ಮಾನಂ ಶಬ್ದೋ ವಜ್ರವಾಚೀ। ಅಶ್ಮಾನಂ

वज्रं बिभ्रत् धारयन् शवसा बलेन युक्तो यं इन्द्रं इति आगच्छति । स इन्द्रः स्वीकरोत्विति पूर्वेण संबन्धः ॥

॥ ಪ್ರತಿಪದಾರ್ಥ ॥

मघवा—ಧನವಂತನೂ । **आशानं**—ವಜ್ರಾಯುಧವನ್ನು । **बिभ्रत्**—ಧರಿಸಿಕೊಂಡು । **शवसा**—ಬಲದಿಂದ ಕೂಡಿರುವವನೂ ಆದ । **यः**—ಯಾವ ಇಂದ್ರನು । **इति**—ಬರುತ್ತಾನೆಯೋ ಅಂತಹವನೂ । **महान्**—ಮಹತ್ಸ್ವರೂಪವುಳ್ಳವನೂ । **शुष्मी**—ಬಲಶಾಲಿಯೂ ಆದ । **इन्द्रः**—ಇಂದ್ರನು । **नः**—ನಮ್ಮ । **युत्**—ಯಾವ ಹವಿರಾದಿಗಳನ್ನು । **जुजुषे**—ಸೇವಿಸುತ್ತಾನೆಯೋ । **यत् च**—ಯಾವ ಹವಿರಾದಿಗಳನ್ನು । **वष्टि**—ಅಪೇಕ್ಷಿಸುತ್ತಾನೆಯೋ ಅಂತಹ । **ब्रह्मचित्**—ಪುರೋಡಾಶಾದಿರೂಪವಾದ ಅನ್ನವನ್ನೂ । **स्तोमं**—ಸ್ತೋತ್ರಸಮೂಹವನ್ನೂ । **सोमं**—ಹಿಂಡಿರುವ ಸೋಮವನ್ನೂ । **उक्था**—ಶಸ್ತ್ರಗಳನ್ನೂ । **तत्**—ಈ ನಾಲ್ಕನ್ನು ಒಟ್ಟಿಗೆ । **आ करति**—ಸ್ವೀಕರಿಸಲಿ.

॥ ಭಾವಾರ್ಥ ॥

ಧನವಂತನೂ, ವಜ್ರಾಯುಧವನ್ನು ಹಿಡಿದುಕೊಂಡು ನಮ್ಮೆದುರಿಗೆ ಬರುವವನೂ ಆದರ ಸಹಾಯದಿಂದ ಅಧಿಕವಾದ ಶಕ್ತಿಯುಳ್ಳವನೂ, ಮಹತ್ಸ್ವರೂಪವುಳ್ಳವನೂ, ಬಲಶಾಲಿಯೂ ಆದ ಇಂದ್ರನು ಯಾವ ನಮ್ಮ ಹವಿರಾದಿಗಳನ್ನು ಸೇವಿಸಲು ಅಪೇಕ್ಷಿಸುತ್ತಾನೆಯೋ ಅಂತಹ ನಮ್ಮ ಸಮಸ್ತವಾದ ಪುರೋಡಾಶಾದಿರೂಪವಾದ ಅನ್ನವನ್ನೂ ಸ್ತೋತ್ರಸಮೂಹವನ್ನೂ, ಹಿಂಡಿರುವ ಸೋಮವನ್ನೂ, ಶಸ್ತ್ರಮಂತ್ರಗಳನ್ನೂ ಒಟ್ಟಿಗೆ ಸ್ವೀಕರಿಸಲಿ

English Translation.

Since the great and mighty Indra is propitiated by our (oblations), since he desires (them) from us, may he, the possessor of opulence, who comes wielding the thunderbolt by his strength, accept the (sacrificial) food, the hymn, the Soma libation, and the prayers.

॥ ವಿಶೇಷವಿಷಯಗಳು ॥

ಬಲವುಳ್ಳ ಇಂದ್ರನು ನಮ್ಮ ಯಜ್ಞಕ್ಕೆ ವಜ್ರಾಯುಧವನ್ನು ಹಿಡಿದು ಬಂದು ನಾವು ಸಮರ್ಪಿಸುವ ಹವಿರ್ರೂಪವಾದ ಅನ್ನವನ್ನೂ, ಪುರೋಡಾಶಾದಿ ಹವಿಸ್ಸುಗಳನ್ನೂ, ಸ್ತೋತ್ರಗಳನ್ನೂ, ಸೋಮವನ್ನೂ ಸ್ವೀಕರಿಸುವನೆಂದು **ಋಷಿಯು** ಪ್ರಾರ್ಥಿಸಿದಾನೆ ಎಂದರೆ ಯಜಮಾನರ ಆಹ್ವಾನವನ್ನು ಸ್ವೀಕರಿಸಿ ಯಜ್ಞಭೂಮಿಗೆ ಶಕ್ತಿಯುತನೂ ವಜ್ರಾಯುಧವನ್ನು ಧರಿಸಿರುವವನೂ ಆದ ಇಂದ್ರನು ಯಜ್ಞಭೂಮಿಗೆ ಬಂದು ಋತ್ವಿಗ್ಜನರು ಮಾಡುವ ಸ್ತೋತ್ರಾದಿಗಳನ್ನು ಕೇಳಿ ಸಂತುಷ್ಟನಾಗಿ ಯಜ್ಞದಲ್ಲಿ ಅರ್ಪಿಸುವ ಹವಿರಾದಿ ಅನ್ನವನ್ನೂ, ಪುರೋಡಾಶವನ್ನೂ ಸ್ವೀಕರಿಸಿ ಸಿದ್ಧಪಡಿಸಿರುವ ಸೋಮರಸವನ್ನು ಪಾನಮಾಡಿ ತೃಪ್ತಿಯನ್ನು ಹೊಂದಲಿ ಎಂಬ ಆಶಂಸನೆಯನ್ನು ವಾಮದೇವ **ಋಷಿಯು** ವ್ಯಕ್ತಪಡಿಸಿದಾನೆ

ತುಷ್ಮ ಶಬ್ದವೂ, **ಶವಃ** ಶಬ್ದವೂ ಬಲನಾಮಗಳಲ್ಲಿ ಪಠಿತವಾಗಿದೆ (ನಿ ೩-೯). **ಉಕ್ಥ** ಶಬ್ದವು ಪ್ರಶಸ್ಯ ನಾಮಗಳಲ್ಲಿಯೂ (ನಿ ೩-೧೩) ಬ್ರಹ್ಮಶಬ್ದವು ಧನನಾಮಗಳಲ್ಲಿಯೂ (ನಿ. ೩-೯) **ಅಶ್ಮಾ** ಎಂಬ ಶಬ್ದವು ಮೇಘ ನಾಮಗಳಲ್ಲಿಯೂ (ನಿ. ೩-೩೧) ಪಠಿತವಾಗಿದೆ. ಆದರೆ ಇಲ್ಲಿ ಬ್ರಹ್ಮಶಬ್ದಕ್ಕೆ ಅನ್ನವೆಂದೂ, **ಉಕ್ಥ** ಶಬ್ದಕ್ಕೆ ಸ್ತೋತ್ರ ವೆಂದೂ, **ಅಶ್ಮಾ** ಎಂಬ ಶಬ್ದಕ್ಕೆ ವಜ್ರಾಯುಧವೆಂದೂ ಅರ್ಥವಿವರಣೆಮಾಡಿದೆ

। ಸಂಹಿತಾಪಾಠಃ ।

ವೃಷಾ ವೃಷಂಧಿಂ ಚತುರಶ್ರಿಮಸ್ಯನ್ನುಗ್ರೋ ಬಾಹುಭ್ಯಾಂ ನೃತಮಃ ಶಚೀವಾನ್ ।
ಶ್ರಿಯೇ ಪರುಷ್ಣೀಮುಷಮಾಣ ಊರ್ಣಾಂ ಯಸ್ಯಾಃ ಪರ್ವಾಣಿ ಸಖ್ಯಾಯ ವಿವ್ಯೇ ॥ ೭ ॥

। ಪದಪಾಠಃ ।

ವೃಷಾ । ವೃಷಂಧಿಂ । ಚತುಃಽಅಶ್ರಿಂ । ಅಸ್ಯನ್ । ಉಗ್ರಃ । ಬಾಹುಽಭ್ಯಾಂ । ನೃತಮಃ । ಶಚೀಽವಾನ್ ।
ಶ್ರಿಯೇ । ಪರುಷ್ಣೀಂ । ಉಷಮಾಣಃ । ಊರ್ಣಾಂ । ಯಸ್ಯಾಃ । ಪರ್ವಾಣಿ । ಸಖ್ಯಾಯ । ವಿವ್ಯೇ ॥ ೭ ॥

। ಸಾಯಣಭಾಷ್ಯಂ ।

ವೃಷಾ ಕಾಮಾನಾಂ ವರ್ಷಿತಾ ವೃಷಂಧಿಂ ಮೇಘಭೇದನದ್ವಾರೇಣ ವರ್ಷಂ ಕುರ್ವಂತಂ ಚತುರಶ್ರಿಂ ಚತುಸ್ಯಶ್ರಿಭಿರ್ಧಾರಾಭಿರುಪೇತಂ ವಜ್ರಂ ಬಾಹುಭ್ಯಾಂ ಹಸ್ತಾಭ್ಯಾಮಸ್ಯನ್ ಶತ್ರುಷು ಪ್ರಕ್ಷಿಪನ್ ಉಗ್ರ ಉದ್ಗೂರ್ಣಬಲೋ ನೃತಮಃ ನೇತೃತಮಃ ಶಚೀವಾನ್ ಕರ್ಮವಾನಿಂದ್ರ ಊರ್ಣಾ-ಮಾಚ್ಛಾದಿಕಾಂ ಪರುಷ್ಣೀಂ ಪರ್ವವತೀಂ ನದೀಂ ಶ್ರಿಯ ಆಶ್ರಯಣಾರ್ಥಮುಷಮಾಣಃ ಸೇವಮಾನೋ ಭವತಿ। ಯಸ್ಯಾ ನದ್ಯಾಃ ಪರ್ವಾಣಿ ಭಿನ್ನಾನ್ದೇಶಾನ್ ಸಖ್ಯಾಯ ಸಖಿಕರ್ಮಣೇ ವಿವ್ಯೇ ಸಂವೃತಾನ್ ॥

। ಪ್ರತಿಪದಾರ್ಥ ।

ವೃಷಾ—ಕಾಮವರ್ಷಕನೂ । **ವೃಷಂಧಿಂ**—ಮೇಘವನ್ನು ಸೀಳುವುದರ ಮೂಲಕ ವೃಷ್ಟಿಯನ್ನು ಸುರಿಸುವುದೂ । **ಚತುರಶ್ರಿಂ**—ನಾಲ್ಕು ಹರಿತವಾದ ಅಲಗುಗಳಿಂದ ಕೂಡಿದುದೂ ಆದ ವಜ್ರಾಯುಧವನ್ನು । **ಬಾಹುಭ್ಯಾಂ**—ಕೈಗಳಿಂದ । **ಅಸ್ಯನ್**—ಶತ್ರುಗಳ ಮೇಲೆ ಎಸೆಯುತ್ತಾ । **ಉಗ್ರಃ**—ಪ್ರಕಟಿಸುತ್ತಿರುವ ಬಲವುಳ್ಳವನೂ । **ನೃತಮಃ**—ನೇತೃತಮನೂ । **ಶಚೀವಾನ್**—ಕರ್ಮವಂತನೂ ಆದ ಇಂದ್ರನು । **ಯಸ್ಯಾಃ**—

ಯಾವ ನದಿಯ। **ಪರ್ವಾಣಿ**—ವಿಭಾಗ ಪ್ರದೇಶಗಳನ್ನು। **ಸಖ್ಯಾಯ**—ತನ್ನ ಸಖಿತ್ವವನ್ನು ತೋರ್ಪಡಿಸಲು। **ವಿವ್ಯೇ**—ಸಂಚರಿಸಿ ವ್ಯಾಪಿಸುವನೋ ಅಂತಹ। **ಊರ್ಣಾಂ**—ಪ್ರವಾಹರೂಪದಲ್ಲಿ ವ್ಯಾಪಿಸಿರುವ। **ಪರುಷ್ಣೀಂ**—ಪರುಷ್ಣೀ ನದಿಯನ್ನು। **ಶ್ರಿಯೇ**—ಸಂಪದ್ವೃದ್ಧಿಗಾಗಿ। **ಉಪಮಾಣಃ**—ಸೇವಿಸುತ್ತಾನೆ.

। ಭಾವಾರ್ಥ ।

ಕಾಮವರ್ಷಕನೂ, ಮೇಘವನ್ನು ಸೀಳುವುದರಮೂಲಕ ವೃಷ್ಟಿಯನ್ನು ಸುರಿಸುವುದೂ, ನಾಲ್ಕು ಹರಿತವಾದ ಅಲಗುಗಳಿಂದ ಕೂಡಿದುದೂ ಆದ ವಜ್ರಾಯುಧವನ್ನು ಕೈಗಳಿಂದ ಶತ್ರುಗಳ ಮೇಲೆ ಎಸೆಯುತ್ತಾ ತನ್ನ ಬಲವನ್ನು ಪ್ರಕಟಿಸುವವನೂ, ಭಯಂಕರನೂ, ನೇತೃತ್ವವುಳ್ಳವನೂ, ಕರ್ಮವಂತನೂ ಆದ ಇಂದ್ರನು ಯಾವ ನದಿಯ ವಿಭಾಗ ಪ್ರದೇಶಗಳನ್ನು ಸಂಚರಿಸಿ, ಅಲ್ಲೆಲ್ಲಾ ವ್ಯಾಪಿಸಿ ತನ್ನ ಸಖಿತ್ವವನ್ನು ತೋರ್ಪಡಿಸಿದನೋ, ಪ್ರವಾಹರೂಪದಲ್ಲಿ ವ್ಯಾಪಿಸಿರುವ ಆದೇ ಪರುಷ್ಣೀನದಿಯನ್ನು ಸಂಪದ್ವೃದ್ಧಿಗಾಗಿ ಸೇವಿಸುತ್ತಾನೆ.

English Translation.

The showerer (of benefits), casting with his hands the quadrangular bolt that causes rain, fierce, the chief of leaders, the achiever of (glorious) acts, is desirous of the prosperity of the investing Parushni (river), whose (bordering) districts he has frequented through regard

। ವಿಶೇಷವಿಷಯಗಳು ।

ಚತುರಶ್ರಿಂ—ಈ ಋಕ್ಕಿನಲ್ಲಿ ವಜ್ರಾಯುಧಕ್ಕೆ ನಾಲ್ಕು ಅಲಗುಗಳಿರುವುದೆಂದು ಹೇಳಿದೆ. ಕೆಲವು ಕಡೆ ಎಂಟು ಅಲಗುಗಳಿವೆ ಎಂದೂ ವರ್ಣನೆ ಇದೆ. ಈ ವಜ್ರಾಯುಧವನ್ನು ಉಕ್ಕಿನಿಂದ (ಕಬ್ಬಿಣದಿಂದ) ದೇವಶಿಲ್ಪಿಯಾದ ತ್ವಷ್ಟೃವು ನಿರ್ಮಿಸಿ ತನಗೆ ಕೊಟ್ಟನೆಂದು—

ಮಹ್ಯಂ ತ್ವಷ್ಟಾ ವಜ್ರಮತಕ್ಷದಾಯಸಂ ಮಯಿ ದೇವಾಸೋ ವೃಜನಾಪಿ ಕ್ರತುಂ।

(ಋ. ಸಂ ೧೦-೪೮-೩)

ಎಂಬ ಋಕ್ಕಿನಲ್ಲಿ ಇಂದ್ರನೇ ಹೇಳಿದಾನೆ. ಅಂತರಿಕ್ಷದಲ್ಲಿ ಮೇಘಗಳ ಮಧ್ಯದಲ್ಲಿ ಗೋಚರವಾಗುವ ವಿದ್ಯುತ್ತು ಅಥವಾ ಮಿಂಚೇ ಇಂದ್ರನ ವಜ್ರಾಯುಧವೆಂದು ಅನೇಕಕಡೆ ವರ್ಣಿತವಾಗಿದೆ. ಸಾಧಾರಣವಾಗಿ ವಜ್ರಾಯುಧವು ವೃತ್ರನನ್ನು ಪ್ರಹರಿಸುವಾಗ ಉಪಯೋಗಿಸಲ್ಪಡುವುದಾದರೂ ಇತರ ಶತ್ರುಗಳ ನಿಗ್ರಹಕ್ಕಾಗಿಯೂ ಇಂದ್ರನು ತನ್ನ ವಜ್ರಾಯುಧವನ್ನು ಉಪಯೋಗಿಸುವನೆಂದು ಎಲ್ಲಲ್ಲಿ ಹೇಳಿದೆ. ಇದರ ವರ್ಣನೆಯನ್ನು ಮುಂದೆ ವಿವರಿಸಲಾಗುವುದು.

॥ ಸಂಹಿತಾಪಾಠಃ ॥

ಯೋ ದೇವೋ ದೇವತಮೋ ಜಾಯಮಾನೋ ಮಹೋ ವಾಜೇಭಿರ್ಮಹದ್ಭಿಶ್ಚ ಶುಷ್ಮೈಃ ।
ದಧಾನೋ ವಜ್ರಂ ಬಾಹ್ವೋರುಶಂತಂ ದ್ಯಾಮಮೇನ ರೇಜಯತ್ಪ ಭೂಮ ॥ ೩ ॥

॥ ಪದಪಾಠಃ ॥

ಯಃ। ದೇವಃ। ದೇವತಮಃ। ಜಾಯಮಾನಃ। ಮಹಃ। ವಾಜೇಭಿಃ। ಮಹದ್ಭಿಃ। ಚ। ಶುಷ್ಮೈಃ।
ದಧಾನಃ। ವಜ್ರಂ। ಬಾಹ್ವೋಃ। ಉಶಂತಂ। ದ್ಯಾಂ। ಅಮೇನ। ರೇಜಯತ್। ಪ್ರ। ಭೂಮ ॥ ೩ ॥

॥ ಸಾಯಣಭಾಷ್ಯಂ ॥

ದೇವೋ ದೀಪ್ಯಮಾನೋ ದೇವತಮೋ ದಾತೃತಮೋ ಜಾಯಮಾನ ಉತ್ಪದ್ಯಮಾನೋ ಯ ಇಂದ್ರೋ ಮಹೋ ಮಹದ್ಭಿರ್ವಾಜೇಭಿರನ್ನೈರ್ಮಹದ್ಭಿಃ ಶುಷ್ಮೈರ್ಬಲೈಶ್ಚ । ಯುಕ್ತೋಽಭವದಿತಿ ಶೇಷಃ । ಸ ಇಂದ್ರೋ ಬಾಹ್ವೋರ್ಹಸ್ತಯೋರುಶಂತಂ ಕಾಮಯಮಾನಂ ವಜ್ರಂ ದಧಾನೋ ಧಾರಯನ್ ಅಮೇನ ಬಲೇನ ದ್ಯಾಂ ದ್ಯುಲೋಕಂ ಚ ಭೂಮ ಭೂಲೋಕಂ ಚ ಪ್ರ ರೇಜಯತ್। ಪ್ರಕಂಪಯತಿ ಸ್ಮ॥

॥ ಪ್ರತಿಪದಾರ್ಥ ॥

ದೇವಃ—ಪ್ರಕಾಶಮಾನನೂ । **ದೇವತಮಃ**- ಉದಾರವಾದ ದಾನಿಗಳಲ್ಲಿ ಶ್ರೇಷ್ಠನೂ ಆದ । **ಯಃ**—ಯಾವ ಇಂದ್ರನು । **ಜಾಯಮಾನಃ**—ಉತ್ಪನ್ನನಾದೊಡನೆಯೇ । **ಮಹಃ**—ಪೂಜ್ಯವಾದ । **ವಾಜೇಭಿಃ**—ಅನ್ನಗಳೊಡನೆಯೂ । **ಮಹದ್ಭಿಃ**—ಅತಿಶಯವಾದ ಗುಣವುಳ್ಳ । **ಶುಷ್ಮೈಃ**—ಬಲಗಳಿಂದಲೂ ಕೂಡಿಕೊಂಡಿರುವ ಅಂತಹ ಇಂದ್ರನು । **ಬಾಹ್ವೋಃ**—ತೋಳುಗಳಿಂದ । **ಉಶಂತಂ**—ಅಪೇಕ್ಷಿಸಿದ । **ವಜ್ರಂ**—ವಜ್ರಾಯುಧವನ್ನು । **ದಧಾನಃ**—ಹಿಡಿದುಕೊಂಡು । **ಅಮೇನ**—ಬಲದಿಂದ । **ದ್ಯಾಂ**—ದ್ಯುಲೋಕವನ್ನೂ । **ಭೂಮ**—ಭೂಲೋಕವನ್ನೂ । **ಪ್ರ ರೇಜಯತ್**—ಕಂಪಿಸುವಂತೆ ಮಾಡುತ್ತಿದ್ದನು

॥ ಭಾವಾರ್ಥ ॥

ಪ್ರಕಾಶಮಾನನೂ, ಉದಾರಿಗಳಾದ ದಾನಿಗಳಲ್ಲಿ ಶ್ರೇಷ್ಠನೂ ಆದ ಯಾವ ಇಂದ್ರನು ಉತ್ಪನ್ನನಾದೊಡನೆಯೇ ಮಹತ್ತಾದ ಅನ್ನಗಳೊಡನೆಯೂ, ಅತಿಶಯವಾದ ಗುಣಗಳುಳ್ಳ ಶಕ್ತಿಗಳೊಡನೆಯೂ ಕೂಡಿಕೊಂಡಿರುವೋ

ಅಂತಹ ಇಂದ್ರನು ತಾನು ಅಪೇಕ್ಷಿಸಿದ ವಜ್ರಾಯುಧವನ್ನು ತೋಳುಗಳಿಂದ ಹಿಡಿದುಕೊಂಡು ತನ್ನ ಸ್ವಶಕ್ತಿಯಿಂದ ದ್ಯುಲೋಕವನ್ನೂ ಭೂಲೋಕವನ್ನೂ ಕಂಪಿಸುವಂತೆ ಮಾಡುತ್ತಿದ್ದನು.

English Translation·

Who divine, most divine, as soon as born (was endowed) with abundant viands, and great energies, holding in his arms the willing thunderbolt, and causing by his strength (both) heaven and earth to tremble.

॥ ವಿಶೇಷವಿಷಯಗಳು ॥

ಇಂದ್ರನು ತನ್ನ ಬಲದಿಂದ ದ್ಯಾವಾಪೃಥಿವಿಗಳನ್ನು ನಡುಗುವಂತೆ ಮಾಡಿದನು ಎಂದು ಇಲ್ಲಿ ಹೇಳಿದೆ ಇದರಂತೆ—

ಅರೇಜೇತಾಂ ರೋದಸೀ ಭಿಯಾನೇ ಕನಿಕ್ರದತೋ ವೃಷ್ಣೋ ಅಸ್ಯ ವಜ್ರಾನ್ ।

(ಋ. ಸಂ. ೨-೧೧-೯)

ಇತ್ಯಾದಿ ಸ್ಥಳಗಳಲ್ಲಿ ವಜ್ರಾಯುಧವನ್ನು ಹಿಡಿದಿರುವ ಇಂದ್ರನ ಬಲಕ್ಕೆ ಹೆದರಿ ದ್ಯಾವಾಪೃಥಿವಿಗಳು ನಡುಗಿದವೆಂದು ಹೇಳಿದೆ.

॥ ಸಂಹಿತಾಪಾಠಃ ॥

ವಿಶ್ವಾ ರೋಧಾಂಸಿ ಪ್ರವತಶ್ಚ ಪೂರ್ವೀರ್ದ್ಯೌರ್ಯಷ್ವಾಜ್ಜನಿಮನ್ರೇಜತ ಕ್ಷಾಃ।
ಆ ಮಾತರಾ ಭರತಿ ಶುಷ್ಮ್ಯಾ ಗೋರ್ನ ವಜ್ರಿನ್ಪರಿಜ್ಮನ್ನೋನುವಂತ ವಾತಾಃ ॥೪॥

॥ ಪದಪಾಠಃ ॥

ವಿಶ್ವಾ । ರೋಧಾಂಸಿ । ಪ್ರವತಃ । ಚ । ಪೂರ್ವೀಃ । ದ್ಯೌಃ । ಯಷ್ವಾತ್ । ಜನಿಮನ್ । ರೇಜತ । ಕ್ಷಾಃ।
ಆ । ಮಾತರಾ । ಭರತಿ । ಶುಷ್ಮೀ । ಅ । ಗೋಃ । ನ್ಯವತ್ । ಪರಿಜ್ಮನ್ । ನೋನುವಂತ । ವಾತಾಃ ॥ ೪ ॥

॥ ಸಾಯಣಭಾಷ್ಯಂ ॥

ವಿಶ್ವಾ ವಿಶ್ವಾನಿ ರೋಧಾಂಸಿ । ರೋಧಃಶಬ್ದೇನೋನ್ನತಪ್ರದೇಶಾ ಉಚ್ಯಂತೇ। ಉನ್ನತಪ್ರದೇಶಾಃ ಪರ್ವತಾಶ್ಚ ಪೂರ್ವೀಃ ಪೂರ್ವ್ಯೋ ಬಹೂನಿ ಪ್ರವತಃ ಪ್ರವಣಾನಿ । ಸಮುದ್ರಾಶ್ಚೇತ್ಯರ್ಥಃ । ದ್ಯೌರ್ಜ-

ಲೋಕಶ್ಚ ಕ್ಷ್ಮಾ ಪೃಥಿವೀ ಚ ಜನಿಮನ್ನಿಂದ್ರಸ್ಯ ಜನ್ಮನಿ ಸಖ್ಯಷ್ಟಾನ್ಮಹತೋಽಸ್ಮಾದಿಂದ್ರಾದ್ರೇಜತ । ಅರೇಜಂತ । ಅಕಂಪಂತ । ಕಿಂಚ ಶುಷ್ಮೀ ಬಲವಾನಿಂದ್ರೋ ಗೋರ್ಗಂತುಃ ಸೂರ್ಯಸ್ಯ ಮಾತರಾ ಮಾತರೌ ಮಾತಾಪಿತೃಭೂತೌ ದ್ಯಾವಾಪೃಥಿವ್ಯೌ ಚ । ಆ ಇತಿ ಚಾರ್ಥೇ । ಆ ಭರತಿ । ಆ ಸಮಂತಾದ್ಬಿಭರ್ತಿ । ನೃವನ್ನಮುಷ್ಯಾ ಇವ ವಾತಾ ಇಂದ್ರೇಣ ಪ್ರೇರಿತಾ ವಾಯವೆವಶ್ಚ ಪರಿಜ್ಮನ್ನಂತರಿಕ್ಷೇ ನೋನುವಂತ । ಶಬ್ದಾಯಂತೇ ॥

॥ ಪ್ರತಿಪದಾರ್ಥ ॥

ವಿಶ್ವಾ—ಸಮಸ್ತವಾದ । **ರೋಧಾಂಸಿ**—ಉನ್ನತಪ್ರದೇಶಗಳೂ (ಪರ್ವತಗಳೂ) । **ಪೂರ್ವೀಃ**—ಬಹುಸಂಖ್ಯಾತವಾದ । **ಪ್ರವತಃ**—ಪ್ರವಣಪ್ರದೇಶಗಳೂ (ಸಮುದ್ರಗಳೂ) । **ದ್ಯೌಃ**—ದ್ಯುಲೋಕವೂ । **ಕ್ಷ್ಮಾಃ**—ಪೃಥಿವಿಯೂ । **ಜನಿಮನ್**—(ಇಂದ್ರನು) ಉತ್ಪನ್ನನಾದೊಡನೆಯೇ । **ಯುಷ್ಮತ್**—ಅದ್ಭುತ ಸ್ವರೂಪವುಳ್ಳ ಇಂದ್ರನಿಂದ । **ರೇಜತ**—(ಹೆದರಿ) ನಡಗಿದವು । **ಶುಷ್ಮೀ**—ಶಕ್ತಿವಂತನಾದ ಇಂದ್ರನು । **ಗೋಃ**—ಸಂಚಾರಾತ್ಮಕನಾದ ಸೂರ್ಯನ । **ಮಾತರಾ**—ಮಾತಾಪಿತೃರೂಪವಾದ ದ್ಯಾವಾಪೃಥಿವಿಗಳನ್ನು । **ಆ ಭರತಿ**—ಪೂರ್ಣವಾಗಿ ಧರಿಸಿದ್ದಾನೆ (ಅವುಗಳ ರಕ್ಷಣೆಯನ್ನು ವಹಿಸಿಕೊಂಡಿದ್ದಾನೆ) । **ವಾತಾಃ**—ಇಂದ್ರನಿಂದ ಪ್ರೇರಿತಗಳಾದ ವಾಯುಗಳು । **ನೃವತ್**—ಮನುಷ್ಯರಂತೆ । **ಪರಿಜ್ಮನ್**—ಅಂತರಿಕ್ಷದ ಸುತ್ತಲೂ । **ನೋನುವಂತ**—ಶಬ್ದವನ್ನು ಮಾಡುತ್ತವೆ

॥ ಭಾವಾರ್ಥ ॥

ಇಂದ್ರನು ಉತ್ಪನ್ನನಾದೊಡನೆಯೇ ಇಂದ್ರನ ಅದ್ಭುತಸ್ವರೂಪವನ್ನು ನೋಡಿ ಸಮಸ್ತವಾದ ಪರ್ವತಗಳೂ, ಬಹುಸಂಖ್ಯಾಕವಾದ ಪ್ರವಣಪ್ರದೇಶಗಳೂ (ಸಮುದ್ರಗಳೂ) ದ್ಯುಲೋಕವೂ ಪೃಥಿವಿಯೂ ಸಹ ಹೆದರಿಕೊಂಡು ನಡುಗಿದವು ಶಕ್ತಿಯುತನಾದ ಇಂದ್ರನು ಸಂಚಾರಾತ್ಮಕನಾದ ಸೂರ್ಯನ ಮಾತಾಪಿತೃರೂಪವಾದ ದ್ಯಾವಾಪೃಥಿವಿಗಳ ರಕ್ಷಣೆಯ ಭಾರವನ್ನು ವಹಿಸಿದ್ದಾನೆ. ಇಂದ್ರನಿಂದ ಪ್ರೇರಿತಗಳಾದ ವಾಯುಗಳು ಅಂತರಿಕ್ಷದ ಸುತ್ತಲೂ ಮಾನವರಂತೆ ಶಬ್ದವನ್ನು ಮಾಡುತ್ತವೆ.

English Translation.

All the high places, and the many low places, the heaven and the earth, trembled (through fear) of the mighty (Indra) at his birth . the strong (Indra) cherishes the parents of the moveng (sun), and winds, like men, make a noise in their peregrination.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ಇಂದ್ರನ ಅದ್ಭುತವಾದ ಸಾಮರ್ಥ್ಯದ ವರ್ಣನೆ ಇದೆ ಇಂದ್ರನು ಉತ್ಪನ್ನನಾದ ಕೂಡಲೇ ದ್ಯಾವಾಪೃಥಿವಿಗಳೂ, ಪರ್ವತಗಳೂ, ಸಮುದ್ರಗಳೂ ಹೆದರಿ ನಡುಗಿದವೆಂದು ಈ ಋಕ್ಕಿನಲ್ಲಿ ಹೇಳಿರುವ ವಿಷಯವೇ ಅನೇಕ ಋಕ್ಕುಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸದೊಡನೆ ವರ್ಣಿತವಾಗಿದೆ—

ಅಸ್ಯೇದು ಭಿಯಾ ಗಿರಯೆಶ್ಚ ದೃಳ್ಹಾ ದ್ಯಾವಾ ಚ ಭೂಮಾ ಜನುಷಸ್ತುಜೇತೇ ।

(ಋ ಸಂ. ೧-೬೧-೧೪)

ಎಂಬ ಋಕ್ಕಿನಲ್ಲಿ ಇಂದ್ರನು ಜನಿಸಿದ ಕೂಡಲೇ ಅವನಿಗೆ ಹೆದರಿ ದೃಢವಾದ ಪರ್ವತಗಳೂ ಸ್ವರ್ಗಲೋಕ ಭೂಲೋಕ ಗಳೂ ನಡುಗಿದವು ಎಂದಿದೆ.

ತವ ತ್ವಿಷೋ ಜನಿಮನ್ ರೇಜತ ದ್ಯೌ ರೇಜದ್ಭೂಮಿರ್ಭಿಯೆಸಾ ಸ್ವಸ್ಯ ಮನ್ಯೋಃ ।

(ಋ ಸಂ. ೪-೧೬-೨)

ಇಂದ್ರನು ಉತ್ಪನ್ನನಾದ ಕೂಡಲೇ ಅವನ ಕೋಪಕ್ಕೆ ಹೆದರಿ ದ್ಯಾವಾಪೃಥಿವಿಗಳು ಭಯದಿಂದ ನಡುಗಿದವು

ಅತಶ್ಚಿದಿಂದ್ರಾದಭಯಂತ ದೇವಾ ವಿಶ್ವಾ ಅಪೋ ಅಜಯದ್ದಾಸಪತ್ನೀಃ ।

(ಋ. ಸಂ ೫-೩೦-೫)

ಎಂಬ ಋಕ್ಕಿನಲ್ಲಿ ದೇವತೆಗಳೂ ಇಂದ್ರನನ್ನು ಕಂಡು ಬಹಳವಾಗಿ ಹೆದರಿದರು ಎಂಬ ವರ್ಣನೆ ಇದೆ

॥ ಸಂಹಿತಾಪಾಠಃ ॥

ತಾ ತೂ ತ ಇಂದ್ರ ಮಹತೋ ಮಹಾನಿ ವಿಶ್ವೇಷ್ವಿತ್ಸವನೇಷು ಪ್ರವಾಚ್ಯಾ ।
ಯಚ್ಛೂರ ಧೃಷ್ಣೋ ಧೃಷತಾ ದಧೃಷ್ವಾನಹಿಂ ವಜ್ರೇಣ ಶವಸಾವಿವೇಷೀಃ ॥

॥ ಪದಪಾಠಃ ॥

ತಾ । ತು । ತೇ । ಇಂದ್ರ । ಮಹತಃ । ಮಹಾನಿ । ವಿಶ್ವೇಷು । ಇತ್ । ಸವನೇಷು । ಪ್ರವಾಚ್ಯಾ ।
ಯತ್ । ಶೂರ । ಧೃಷ್ಣೋ ಇತಿ । ಧೃಷತಾ । ದಧೃಷ್ವಾನ್ । ಅಹಿಂ । ವಜ್ರೇಣ । ಶವಸಾ । ಅವಿವೇಷೀಃ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಮಹತಃ ಪ್ರಭೂತಸ್ಯ ತೇ ತ್ವದೀಯಾನಿ ತಾ ತಾನಿ ಕರ್ಮಾಣಿ ತು ಕ್ಷಿಪ್ರಂ ಮಹಾನಿ ಮಹಾಂತಿ ಭವಂತಿ। ವಿಶ್ವೇಷ್ವಿತ್ಸರ್ವೇಷ್ವೇವ ಸವನೇಷು ಪ್ರಾತಃಸವನಾದಿಕರ್ಮಸು ತ್ವದೀಯಾನಿ ಕರ್ಮಾಣಿ ಪ್ರವಾಚ್ಯಾ ಪ್ರವಾಚ್ಯಾನಿ ಸ್ತೋತೃಭಿಃ ಪ್ರಕರ್ಷೇಣ ವಕ್ತುಂ ಯೋಗ್ಯಾನಿ ಸ್ತುತ್ಯಾನೀತಿ ಯತ್ । ಹೇ ಧೃಷ್ಣೋ ಪ್ರಗಲ್ಭ ಹೇ ಶೂರ ವಿಕ್ರಾಂತೇಂದ್ರ ದಧೃಷ್ವಾನ್ಪ್ರಬಲಕರ್ತ್ವೇನ ಲೋಕಾನ್ಧಾರಯನ್ ತವಸಾ ಬಲೇನ ಯುಕ್ತಸ್ತ್ವಂ ಧೃಷತಾ ಧರ್ಷಕೇಣ ವಜ್ರೇಣಾಹಿಂ ವೃತ್ರಮಸುರಮವಿವೇಷೀಃ ಅವಧೀರಿತಿ ಯತ್। ಏತದಾದೀನಿ ಕರ್ಮಾಣಿ ಮಹಾಂತೀತಿ ಪೂರ್ವೇಣ ಸಂಬಂಧಃ। ಅತ್ರಾವಿವೇಷೀರಿತಿ ವಧಕರ್ಮಾ॥

॥ ಪ್ರತಿಪದಾರ್ಥ ॥

ಧೃಷ್ಣೋ—ಶತ್ರುಧರ್ಷಕನೂ। **ಶೂರ**—ಪರಾಕ್ರಮಿಯೂ ಆದ। **ಇಂದ್ರ**—ಎಲೈ ಇಂದ್ರನೇ। **ಯತ್**—ಯಾವ ನಿನ್ನ ಮಾಹಾತ್ಮ್ಯದಿಂದ। **ದಧೃಷ್ವಾನ್**—ಲೋಕಗಳನ್ನು ಧರಿಸಿ ಪಾಲಿಸುತ್ತ। **ಶವಸಾ**—ಬಲದಿಂದ ಕೂಡಿದ ನೀನು। **ಧೃಷತಾ**—ಶತ್ರುನಾಶಕವಾದ। **ವಜ್ರೇಣ**—ವಜ್ರಾಯುಧದಿಂದ। **ಅಹಿಂ**—ವೃತ್ರಾಸುರನನ್ನು। **ಅವಿವೇಷೀಃ**—ಕೊಂದೆಯೋ (ಅದೇ ಮಾಹಾತ್ಮ್ಯದ ಪ್ರಭಾವದಿಂದ)। **ಮಹತಃ**—ಪ್ರಭೂತ ಗುಣಗಳುಳ್ಳ। **ತೇ**—ನಿನ್ನ। **ತಾ**—ಅದೇ ಮಹತ್ಕಾರ್ಯಗಳು। **ತು**—ಕ್ಷಿಪ್ರವಾಗಿ। **ಮಹಾನಿ**—(ನಿನ್ನಂತೆಯೇ) ಮಾಹಾತ್ಮ್ಯವನ್ನು ಪಡೆಯುತ್ತವೆ। **ವಿಶ್ವೇಷ್ವಿತ್**—ಸಕಲವಾದ। **ಸವನೇಷು**—ಸವನಕಾಲಗಳಲ್ಲಿಯೂ। **ಪ್ರವಾಚ್ಯಾ**—ಅತಿಶಯವಾಗಿ ಸ್ತುತಿಸಲ್ಪಡುತ್ತವೆ

॥ ಭಾವಾರ್ಥ ॥

ಶತ್ರುಧರ್ಷಕನೂ, ಪರಾಕ್ರಮಿಯೂ ಆದ ಎಲೈ ಇಂದ್ರನೇ, ಯಾವ ನಿನ್ನ ಮಾಹಾತ್ಮ್ಯದಿಂದ ಲೋಕಗಳನ್ನು ಧರಿಸಿ ಪಾಲಿಸುತ್ತ ಬಲದಿಂದ ಕೂಡಿದ ನೀನು ಶತ್ರುನಾಶಕವಾದ ವಜ್ರಾಯುಧದಿಂದ ವೃತ್ರಾಸುರನನ್ನು ಕೊಂದಯೋ ಅದೇ ಮಾಹಾತ್ಮ್ಯದ ಪ್ರಭಾವದಿಂದ ಪ್ರಭೂತವಾದ ಗುಣಗಳುಳ್ಳ ನಿನ್ನ ಆದೇ ಮಹತ್ಕಾರ್ಯಗಳು ಕ್ಷಿಪ್ರವಾಗಿ ನಿನ್ನಂತೆಯೇ ಮಾಹಾತ್ಮ್ಯವನ್ನೂ ಪಡೆಯುತ್ತವೆ ಮತ್ತು ಸಕಲ ಸವನಕಾಲಗಳಲ್ಲಿಯೂ ಅತಿಶಯವಾಗಿ ಸ್ತುತಿಸಲ್ಪಡುತ್ತವೆ

English Translation

Of you, Indra, who are mighty, great are the deeds, and to be proclaimed at all sacrifices, inasmuch as, high-minded hero, you, sustaining (the world), have by your strength slain Ahi with the resistless thunderbolt.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಲೋಕಗಳನ್ನು ಧರಿಸಿ ಪಾಲಿಸುವುದು, ವಜ್ರಾಯುಧದಿಂದ ವೃತ್ರನನ್ನು ಸಂಹಾರಮಾಡುವುದು ಇತ್ಯಾದಿ ಇಂದ್ರನ ಮಹತ್ಕಾರ್ಯಗಳು ಸವನಕಾಲಗಳಲ್ಲಿ ಸ್ತುತಿಸಲ್ಪಡುತ್ತವೆಂದು ಹೇಳಿದೆ ಇಂದ್ರನ ಶಕ್ತಿಸಾಮರ್ಥ್ಯಗಳ ವಿಚಾರವಾಗಿ—

ನಹೀ ನ್ವಸ್ಯ ಪ್ರತಿಮಾನಮಸ್ತ್ಯಂತರ್ಜಾತೇಷೂತ ಯೇ ಜನಿತ್ವಾಃ।

(ಋ ಸಂ ೪-೧೮-೪)

ಹಿಂದೆ ಜನಿಸಿರುವವರಲ್ಲಿಯೂ ಈಗಲೂ ಇಂದ್ರನಿಗೆ ಸಮಾನರಾದವರು ಯಾರೂ ಇರುವುದಿಲ್ಲ.

ನ ತ್ವಾವಾँ ಅನ್ಯೋ ದಿವ್ಯೋ ನ ಪಾರ್ಥಿವೋ ನ ಜಾತೋ ನ ಜನಿಷ್ಯತೇ।

(ಋ ಸಂ ೭-೩೨-೨೩)

ಇಂದ್ರನಿಗೆ ಸಮಾನರಾದವರು ಸ್ವರ್ಗದಲ್ಲಾಗಲಿ, ಭೂಮಿಯಲ್ಲಾಗಲಿ ಹಿಂದೆಯೂ ಜನಿಸಿಲ್ಲ, ಮುಂದೆಯೂ ಜನಿಸುವುದಿಲ್ಲ.

ಸತ್ಯಮಿತ್ತ್ವನ್ನ ತ್ವಾವಾँ ಅನ್ಯೋ ಅಸ್ತೀಂದ್ರ ದೇವೋ ನ ಮರ್ತ್ಯೋ ಜ್ಯಾಯಾನ್ ।

(ಋ. ಸಂ. ೬-೩೦-೪)

ಎಲೈ ಇಂದ್ರನೇ, ನಿನಗೆ ಸಮನಾದ ಬೇರೆ ದೇವತೆಯು ಇಲ್ಲವೇ ಇಲ್ಲ. ಮನುಷ್ಯರಲ್ಲಾಗಲಿ, ದೇವತೆಗಳಲ್ಲಾಗಲಿ ನಿನಗೆ ಸಮನಾದವರಾಗಲಿ, ನಿನಗಿಂತ ಅಧಿಕಬಲವುಳ್ಳವರಾಗಲಿ ಯಾರೂ ಇಲ್ಲ. ಇದು ಸತ್ಯವು

ನ ತೇ ಪೂರ್ವೇ ಮಘವನ್ನಾಪರಾಸೋ ನ ವೀರ್ಯಂ೧ ನೂತನಃ ಕಶ್ಚನಾಪ ।

(ಋ ಸಂ. ೫-೪೨-೬)

ಎಲೈ ಇಂದ್ರನೇ, ಹಿಂದೆ ಇದ್ದವರು, ಮುಂದೆ ಹುಟ್ಟುವವರು ಅಥವಾ ಈಗ ಇರುವವರು ಯಾರೂ ನಿನ್ನಷ್ಟು ಸಾಹಸಿಗಳಲ್ಲ. ಇತ್ಯಾದಿ ಅನೇಕ ಸ್ಥಳಗಳಲ್ಲಿ ಇಂದ್ರನ ಸರಿಸಮಾನರು ಯಾರೂ ಇಲ್ಲವೆಂಬ ವರ್ಣನೆಗಳಿವೆ

॥ ಸಂಹಿತಾಪಾಠಃ ॥

ತಾ ತೂ ತೇ ಸತ್ಯಾ ತುವಿನೃಮ್ಣ ವಿಶ್ವಾ ಪ್ರ ಧೇನವಃ ಸಿಸ್ರತೇ ವೃಷ್ಣ ಊಧ್ನಃ।
ಅಧಾ ಹ ತ್ವದ್ವೃಷಮಣೋ ಭಿಯಾನಾಃ ಪ್ರ ಸಿಂಧವೋ ಜವಸಾ ಚಕ್ರಮಂತ ॥ ೬ ॥

॥ ಪದಪಾಠಃ ॥

ತಾ । ತು । ತೇ । ಸತ್ಯಾ । ತುವಿನೃಮ್ಣ । ವಿಶ್ವಾ । ಪ್ರ । ಧೇನವಃ । ಸಿಸ್ರತೇ । ವೃಷ್ಣಃ । ಊಧ್ನಃ ।
ಅಧ । ಹ । ತ್ವತ್ । ವೃಷ್ಣಮಣಃ । ಭಿಯಾನಾಃ । ಪ್ರ । ಸಿಂಧವಃ । ಜವಸಾ । ಚಕ್ರಮಂತ ॥ ೬ ॥

॥ ಸಾಯಣಭಾಷ್ಯಂ ॥

ಹೇ ತುವಿನೃಮ್ಣಾಧಿಕಬಲೇಂದ್ರ ತೇ ತ್ವದೀಯಾನಿ ವಿಶ್ವಾ ವಿಶ್ವಾನಿ ತಾ ತಾನಿ ಕರ್ಮಾಣಿ ತು ಕ್ಷಿಪ್ರಂ ಸತ್ಯಾ ಸತ್ಯಾನಿ ಭವಂತಿ । ಹೇ ಇಂದ್ರ ವೃಷ್ಣಃ ಕಾಮಾನಾಂ ವರ್ಷಿತುಸ್ತ್ವತ್ತೋ ಭಯಾದ್ಧೇನವೋ ಗಾವ ಊಧ್ನಃ ಸ್ವಕೀಯಾದಾಪೀನಾತ್ಪ್ರ ಸಿಸ್ರತೇ । ಪ್ರಕರ್ಷೇಣ ಕ್ಷೀರಂ ಕ್ಷರಂತಿ । ಅಧಾಪಿ ಚ ಹೇ ವೃಷಮಣಃ ಕಾಮಾನಾಂ ವರ್ಷಣಪರಮನಸ್ಕೇಂದ್ರ ಸಿಂಧವೋ ನದ್ಯಸ್ತ್ವತ್ತ್ವತ್ತೋ ಭಿಯಾನಾ ಬಿಭ್ಯತ್ಯಃ ಸತ್ಯೋ ಜವಸಾ ವೇಗೇನ ಪ್ರ ಚಕ್ರಮಂತ ಹ । ಪ್ರಕರ್ಷೇಣ ಗಚ್ಛಂತಿ ಖಲು ॥

॥ ಪ್ರತಿಪದಾರ್ಥ ॥

ತವಿಷ್ಯಾಮ್ನು—ಅತ್ಯಧಿಕವಾದ ಬಲವುಳ್ಳ ಎಲೈ ಇಂದ್ರನೇ। **ತೇ**—ನಿನ್ನ। **ವಿಶ್ವಾ**—ಸಮಸ್ತವಾದವೂ। **ತಾ**—ಪ್ರಸಿದ್ಧವಾದವೂ ಆದ ಕರ್ಮಗಳು। **ತು**—ಕ್ಷಿಪ್ರವಾಗಿಯೇ। **ಸತ್ಯಾ**—ಸತ್ಯಾತ್ಮಕವಾಗಿ ಆಗುತ್ತವೆ। **ವೃಷ್ಣಃ**—ಕಾಮವರ್ಷಕನಾದ ನಿನ್ನ ಭಯದಿಂದಲೇ। **ಧೇನವಃ**—ಧೇನುಗಳು। **ಊಧ್ನಃ**—ತಮ್ಮ ಕೆಚ್ಚಲುಗಳಿಂದ। **ಪ್ರ ಸಿಸ್ರತೇ**—ಕ್ಷೀರವನ್ನು ಕರೆಯುತ್ತವೆ। **ಅಧ**—ಮತ್ತು। **ವೃಷಮನಃ**—ಇಷ್ಟಾರ್ಥಗಳನ್ನು ಸುರಿಸುವ ಮನಸುಳ್ಳ ಎಲೈ ಇಂದ್ರನೇ। **ಸಿಂಧವಃ**—ನದಿಗಳೂ। **ತ್ವತ್**—ನಿನ್ನಿಂದಲೇ। **ಭಿಯಾನಾಃ**—ಹೆದರಿದವುಗಳಾಗಿ। **ಜವಸಾ**—ವೇಗದಿಂದ। **ಪ್ರ ಚಕ್ರಮಂತ ಹ**—ಅತಿಶಯವಾಗಿ ಪ್ರವಹಿಸುತ್ತವೆಯಲ್ಲವೇ ?

॥ ಭಾವಾರ್ಥ ॥

ಅತ್ಯಧಿಕವಾದ ಬಲವುಳ್ಳ ಎಲೈ ಇಂದ್ರನೇ, ಪ್ರಸಿದ್ಧವಾದ ನಿನ್ನ ಸಮಸ್ತ ಕರ್ಮಗಳೂ ಸಹ ಕ್ಷಿಪ್ರವಾಗಿಯೇ ಸತ್ಯಾತ್ಮಕವಾಗಿ ಆಗುತ್ತವೆ. ಕಾಮವರ್ಷಕನಾದ ನಿನ್ನ ಭಯದಿಂದಲೇ ಧೇನುಗಳು ತಮ್ಮ ಕೆಚ್ಚಲುಗಳಿಂದ ಕ್ಷೀರವನ್ನು ಕರೆಯುತ್ತವೆ ಮತ್ತು ಇಷ್ಟಾರ್ಥಗಳನ್ನು ಸುರಿಸುವ ಮನಸ್ಸುಳ್ಳ ಎಲೈ ಇಂದ್ರನೇ, ನದಿಗಳೂ ಸಹ ನಿನಗಾಗಿಯೇ ಹೆದರಿ ಅತಿಶಯವಾಗಿ ಪ್ರವಹಿಸುತ್ತಾ ಲೋಕೋಪಕಾರಕಗಳಾಗುತ್ತವೆ.

English Translation.

Most powerful Indra, all these, your exploits, are verily true, through fear of you), the showerer (of benefits), the cows shed (milk) from their udders. then, benevolent-minded (Indra), the rivers, fearing you, flow with rapidity

॥ ವಿಶೇಷವಿಷಯಗಳು ॥

ಇಂದ್ರನ ಭಯದಿಂದಲೇ ಧೇನುಗಳು ತಮ್ಮ ಕೆಚ್ಚಲುಗಳಿಂದ ಹಾಲನ್ನು ಕರೆಯುತ್ತವೆ ಎಂದೂ, ನದಿಗಳು ಇಂದ್ರನ ಭಯದಿಂದಲೇ ಪ್ರವಹಿಸುತ್ತವೆ ಎಂದೂ ಇಲ್ಲಿ ವರ್ಣಿತವಾಗಿದೆ ಮೇಘಗಳಿಂದ ಜಲವಿಮೋಚನೆಮಾಡಿ ಭೂಮಿಯ ಮೇಲೆ ಉದಕಗಳು ಪ್ರವಾಹರೂಪದಲ್ಲಿ ಹರಿಯುವಂತೆ ಮಾಡುವುದು ಇಂದ್ರನ ಸಾಹಸಕಾರ್ಯಗಳಲ್ಲಿ ಮುಖ್ಯವಾದುದು ಈ ವಿಷಯವು ಋ. ಸಂ ೧-೫೭-೬, ೧೦-೮೯-೭, ೫-೩೨-೧, ೨ ಇತ್ಯಾದಿ ಋಕ್ಕುಗಳಲ್ಲಿ ವಿವರಿಸಲಾಗಿದೆ.

॥ ಸಂಹಿತಾಪಾಠಃ ॥

ಅತ್ರಾ ಹ ತೇ ಹರಿವಸ್ತಾ ಉ ದೇವೀರವೋಭಿರಿಂದ್ರ ಸ್ತವಂತ ಸ್ವಸಾರಃ ।
ಯತ್ಸೀಮನು ಪ್ರ ಮುಚೋ ಬದ್ಬಧಾನಾ ದೀರ್ಘಾಮನು ಪ್ರಸಿತಿಂ ಸ್ಯಂದ-
ಯಧ್ಯೈ ॥ ೬ ॥

। ಪದಪಾಠಃ ।

अश्व्रे । अहे । त्वे । हरिऽवः । तार्याः । ऊं इति । देवीः । अवःऽभिः । इन्द्र्ये । स्तुवन्त ।

स्वसारः ।

यत् । सीं । अनु । प्र । मुचः । बद्बधानाः । दीर्घाम् । अनु । प्रऽसितिं । स्यन्द-

यध्यै ॥ ६ ॥

। ಸಾಯಣಭಾಷ್ಯಂ ।

हे इन्द्र त्वं यद्यदा बद्बधाना वृत्रेण बध्यमानाः सीमनु इना नदीरुद्दिश्य दीर्घामत्यधिकाम् प्रसितिं बन्धनमनु स्यन्दयध्यै यथाकामं स्यन्दितुं प्र मुचः । प्रकर्षेणामोचयः । हे हरिवो हरिवन्निन्द्र अत्राहात्रैव मोचनवेलायाम् ता उ ताः प्रसिद्धा इव देवीर्देव्यो द्योतमानाः स्वसारो नद्यः । अश्व्रे स्वश्वशब्दो नदीवाची । अवोभिस्त्वत्कृतै रक्षणैस्ते त्वां स्तुवन्त । स्तावयन्ति । नदीपूरणादिभिः कर्मभिर्जना इन्द्रं स्तुवन्तीत्यर्थः ॥

। ಪ್ರತಿಪದಾರ್ಥ ॥

हरिवः—ಹರಿನಾಮಕಗಳಾದ ಅಶ್ವಗಳೂಡಗೂಡಿದ । **इन्द्र्ये**— ಎಲೈ ಇಂದ್ರನೇ । **यत्**—ಯಾವಾಗ । **बद्बधानाः**—ವೃತ್ರನಿಂದ ಬಂಧಿತಗಳಾದ । **सीं अनु**—ಈ ನದಿಗಳನ್ನು ಕಟ್ಟಿದ್ದವೂ । **दीर्घाम्** ದೀರ್ಘವಾದವೂ ಆದ । **प्रसितिं**—ಬಂಧನವನ್ನು । **अनु स्यन्दयध्यै**—ಅವುಗಳು ಸ್ವಚ್ಛಂದವಾಗಿ ಪ್ರವಹಿಸಲು ಅನುಕೂಲವಾಗುವಂತೆ । **प्र मुचः**—ಬಿಡಿಸಿದೆಯೋ । **अत्रा ह**—ಆ ಮೋಚನಕಾಲದಲ್ಲಿಯೇ। **ता उ**—ಪ್ರಸಿದ್ಧವಾದವೂ । **देवीः**—ಪ್ರಕಾಶಮಾನವಾದವೂ ಆದ । **स्वसारः**—ನದಿಗಳು । **अवोभिः**—ನಿನ್ನ ರಕ್ಷಣೆಗಳ ಪ್ರಭಾವಗಳಿಂದ । **त्वे**—ನಿನ್ನನ್ನು । **स्तुवन्त**—ಸ್ತುತಿಸುತ್ತವೆ.

॥ ಭಾವಾರ್ಥ ॥

ಹರಿನಾಮಕಗಳಾದ ಅಶ್ವಗಳಿಂದ ಕೂಡಿದ ಎಲೈ ಇಂದ್ರನೇ, ವೃತ್ರನಿಂದ ಬಂಧಿತಗಳಾದ ನದಿಗಳನ್ನು ಕಟ್ಟಿದ್ದವೂ, ದೀರ್ಘವಾದವೂ ಆದ ಬಂಧನವನ್ನು ಬಿಡಿಸಿ ಆ ನದಿಗಳು ಸ್ವಚ್ಛಂದವಾಗಿ ಪ್ರವಹಿಸಲು ಯಾವಾಗ ಅನುಕೂಲಮಾಡಿದೆಯೋ, ಆ ಒಡನೆಯೇ ಪ್ರಸಿದ್ಧವಾದವೂ ಪ್ರಕಾಶಮಾನವೂ ಆದ ಆ ನದಿಗಳು ನಿನ್ನ ರಕ್ಷಣೆಗಳ ಪ್ರಭಾವದಿಂದ ನಿನ್ನನ್ನು ಸ್ತುತಿಸುತ್ತವೆ.

English Translation.

Then, Indra, lord of horses, the divine sister (rivers) praise(you) for your protection when you set them free to flow, after having been impeded (by Vritra) through a long confinement.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ, ಹಿಂದಿನ ಋಕ್ಕಿನಲ್ಲಿ ಹೇಳಿರುವ ವಿಷಯವನ್ನೇ ಪ್ರಕಾರಾಂತರದಿಂದ ಹೇಳಿದೆ. ಜಲ ವಿಮೋಚನೆಗಾಗಿ ನದಿಗಳು ಇಂದ್ರನಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸುತ್ತಾ ಇಂದ್ರನನ್ನು ಸ್ತೋತ್ರಮಾಡಿದವು ಎಂಬ ವಿಶೇಷವಿವರಣೆ ಈ ಋಕ್ಕಿನಲ್ಲಿದೆ

॥ ಸಂಹಿತಾಪಾಠಃ ॥

ಪಿಪೀಳೇ ಅಂಶುರ್ಮದ್ಯೋ ನ ಸಿಂಧುರಾ ತ್ವಾ ಶಮೀ ಶಶಮಾನಸ್ಯ ಶಕ್ತಿಃ ।
ಅಸ್ಮದ್ರ್ಯಕ್ ಶುಶುಚಾನಸ್ಯ ಯಮ್ಯಾ ಆಶುರ್ನ ರಶ್ಮಿಂ ತುವ್ಯೋಜಸಂ ಗೋಃ ॥ ೮ ॥

॥ ಪದಪಾಠಃ ॥

ಪಿಪೀಳೇ । ಅಂಶುಃ । ಮದ್ಯಃ । ನ । ಸಿಂಧುಃ । ಆ । ತ್ವಾ । ಶಮೀ । ಶಶಮಾನಸ್ಯ । ಶಕ್ತಿಃ ।
ಅಸ್ಮದ್ರ್ಯಕ್ । ಶುಶುಚಾನಸ್ಯ । ಯಮ್ಯಾಃ । ಆಶುಃ । ನ । ರಶ್ಮಿಂ । ತುವಿ॒ಓಜಸಂ । ಗೋಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಮದ್ಯೋ ಮಾದಯಿತಾಂಶುಃ ಸೋಮಃ ಪಿಪೀಳೇ । ಆಪೀಡ್ಯತ । ಅಭ್ಯಸೂಯತೇತ್ಯರ್ಥಃ । ನೇತಿ ಸಂಪ್ರತ್ಯರ್ಥೇ । ನ ಇದಾನೀಂ ಸಿಂಧುಃ ಸ್ಯಂದಮಾನಃ ಸೋಮಸ್ತ್ವಾ ತ್ವಾಮಾಯಮ್ಯಾಃ । ಆಯಚ್ಛತು । ಶುಶುಚಾನಸ್ಯ ದೀಪ್ಯಮಾನಸ್ಯ ಶಶಮಾನಸ್ಯ ಸ್ತುವತಃ ಸಂಬಂಧ್ಯಸ್ಯದ್ರ್ಯಗಸ್ಮದಭಿಮುಖಂ ಶಮೀ ಶಮನಂ ಶಕ್ತಿಃ ಸ್ತುತಿಕರ್ಮ ಚಾಯಚ್ಛತು । ತತ್ರ ದೃಷ್ಟಾಂತಃ । ಆಶುಃ ಶೀಘ್ರಗಾಮಿ ಯಂತಾ ಗೋರ್ಗಂತುರಶ್ವಸ್ಯ ತುವ್ಯೋಜಸಂ ಬಹುಬಲಂ । ದೃಢಮಿತ್ಯರ್ಥಃ । ರಶ್ಮಿಂ ನ ಅಶ್ವಬಂಧನರಜ್ಜುಮಿವ ತದ್ವತ್ ॥

॥ ಪ್ರತಿಪದಾರ್ಥ ॥

(ಇಂದ್ರ—ಎಲೈ ಇಂದ್ರನೇ) । **ಮದ್ಯಃ**—ಹರ್ಷಕಾರಕವಾದ । **ಅಂಶುಃ**—ಸೋಮವು । **ಪಿಪೀಳೇ**—ಹಿಂಡಲ್ಪಟ್ಟಿದೆ । **ನ**—ಈಗಲೇ **ಸಿಂಧುಃ**—ಪ್ರವಹಿಸತಕ್ಕ ಸೋಮವು । **ತ್ವಾ**—ನಿನ್ನ ಅಭಿಮುಖವಾಗಿ । **ಆ ಯಮ್ಯಾಃ**—ಹರಿದುಬರಲಿ । **ಶುಶುಚಾನಸ್ಯ**—ಪ್ರಕಾಶಮಾನನೂ । **ಶಶಮಾನಸ್ಯ**—ನಿನ್ನನ್ನು ಸ್ತುತಿಸುವವನೂ ಆದ ಸ್ತೋತೃವಿನ ಸಂಬಂಧಿಯಾದುದೂ । **ಶಮೀ**—ಪಾಪನಾಶಕವಾದುದೂ ಆದ । **ಶಕ್ತಿಃ**—(ನಿನ್ನನ್ನು

ಸ್ತುತಿಸುವ) ಶಕ್ತಿಯು। **ಅಕುಃ**—ಶೀಘ್ರಗಾಮಿಯಾದ ಅಶ್ವವಾಹಕನು। **ಗೋಃ**—(ವೇಗವಾಗಿ) ಸಂಚರಿಸುವ ಅಶ್ವದ। **ತುವ್ಯೋಜಸಂ**—ಅತ್ಯಧಿಕವಾದ ಬಲವುಳ್ಳ। **ರಶ್ಮಿಂ ನ**—ಹಗ್ಗ (ಲಗಾಮನ್ನು) ವನ್ನು ಹಿಡಿಯುವಂತೆ। **ಅಸ್ಮಧ್ರ್ಯಕ್**—ನಮಗೆ ಅಭಿಮುಖವಾಗಿ ಬರಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ಹರ್ಷಕಾರಕವಾದ ಸೋಮವು ನಿನಗಾಗಿ ಹಿಂಡಲ್ಪಟ್ಟಿದೆ. ಪ್ರವಹಿಸತಕ್ಕ ಸೋಮವು ಈಗಲೇ ನಿನ್ನ ಅಭಿಮುಖವಾಗಿ ಹರಿದುಬರಲಿ. ಪ್ರಕಾಶಮಾನನೂ, ನಿನ್ನನ್ನು ಸ್ತುತಿಸುವವನೂ ಆದ ಸ್ತುತಿಕರ್ತನ ಸಂಬಂಧಿಯಾದುದೂ ಆದ ಸ್ತುತಿಶಕ್ತಿಯು ನಮ್ಮ ಅಭಿಮುಖವಾಗಿ ಬರಲಿ. ನಮಗೆ ನಿನ್ನನ್ನು ಸ್ತುತಿಸುವ ಶಕ್ತಿಯನ್ನುಂಟುಮಾಡಲಿ ಶೀಘ್ರಗಾಮಿಯಾದ ಅಶ್ವವಾಹಕನು ವೇಗವಾಗಿ ಸಂಚರಿಸುವ ಅಶ್ವದ ಅತ್ಯಧಿಕವಾದ ಬಲವುಳ್ಳ ಹಗ್ಗವನ್ನು (ಲಗಾಮನ್ನು) ಹಿಡಿಯುವಂತೆ ಆ ಶಕ್ತಿಯು ನಮ್ಮನ್ನು ಭದ್ರವಾಗಿ ಹಿಡಿದಿರಲಿ.

English Translation.

The exhilarating Soma juice has been expressed: now may the current flow to you and may the expiatory power of the illustrious utterer of praise be directed towards us as the quick rider holds firmly the reins of the steed.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಇಂದ್ರನಿಗಾಗಿ ಸೋಮರಸವು ಹಿಂಡಿ ಸಿದ್ಧಮಾಡಲ್ಪಟ್ಟಿರುವದೆಂದು ವರ್ಣಿಸಿದೆ. ಸೋಮಪಾನದಿಂದ ತೃಪ್ತನಾದ ಇಂದ್ರನನ್ನು ಸ್ತುತಿಸುವ ಶಕ್ತಿಯು ನಮಗೆ ಉಂಟಾಗಲಿ ಎಂದು ಋಷಿಯು ಪ್ರಾರ್ಥಿಸಿದಾನೆ. ಈ ವಿಷಯದಲ್ಲಿ ಒಂದು ದೃಷ್ಟಾಂತವೂ ಇಲ್ಲಿ ಹೇಳಿದೆ. ಕುದುರೆಯ ಮೇಲೆ ಕುಳಿತು ಸವಾರಿಮಾಡುವ ಸವಾರನು ವೇಗವಾಗಿ ಓಡುತ್ತಿರುವ ಕುದುರೆಯನ್ನು ಹತೋಟಿಯಲ್ಲಿಡುವುದಕ್ಕಾಗಿ ಲಗಾಮುಗಳನ್ನು ಬಲವಾಗಿ ಹಿಡಿಯುವಂತೆ ಇಂದ್ರನನ್ನು ಸ್ತುತಿಸ ವ ಶಕ್ತಿಯು ನಮ್ಮನ್ನು ಬಲವಾಗಿ ಹಿಡಿದಿರಲಿ ಎಂದರೆ ನಮಗೆ ಇಂದ್ರನನ್ನು ಸ್ತುತಿಸುವ ಬುದ್ಧಿ ಶಕ್ತಿಯೂ ಶ್ರದ್ಧೆಯೂ ಯಾವಾಗಲೂ ನಮ್ಮಲ್ಲಿರಲಿ ಎಂದಭಿಪ್ರಾಯವು ವ್ಯಕ್ತವಾಗಿದೆ.

॥ ಸಂಹಿತಾಪಾಠಃ ॥

ಅಸ್ಮೇ ವರ್ಷಿಷ್ಠಾ ಕೃಣುಹಿ ಜ್ಯೇಷ್ಠಾ ನೃಮ್ಣಾನಿ ಸತ್ರಾ ಸಹುರೇ ಸಹಾಂಸಿ ।
ಅಸ್ಮಭ್ಯಂ ವೃತ್ರಾ ಸುಹನಾನಿ ರಂಧಿ ಜಹಿ ವಧರ್ವನುಷೋ ಮರ್ತ್ಯಸ್ಯ ॥ ೯ ॥

॥ ಪದಪಾಠಃ ॥

ಅಸ್ಮೇ ಇತಿ । ವರ್ಷಿಷ್ಠಾ । ಕೃಣುಹಿ । ಜ್ಯೇಷ್ಠಾ । ನೃಮ್ಣಾನಿ । ಸತ್ರಾ । ಸಹುರೇ । ಸಹಾಂಸಿ ।

ಅಸ್ಮಭ್ಯಂ । ವೃತ್ರಾ । ಸುಷಹನಾನಿ । ರಂಧಿ । ಜಹಿ । ವಧಃ । ವನುಷಃ । ಮರ್ತ್ಯಸ್ಯ ॥ ೯ ॥

॥ ಸಾಯಣಭಾಷ್ಯಂ ॥

ಹೇ ಸಹುರೇ ಸಹನಶೀಲೇಂದ್ರ ತ್ವಂ ಸತ್ರಾ ಸರ್ವದಾ ಸಹಾಂಸಿ ಶತ್ರೂನಭಿಭವುಕಾನಿ ವರ್ಷಿಷ್ಠಾ ವರ್ಷಿಷ್ಠಾನಿ ಪ್ರವೃದ್ಧಾನಿ ಜ್ಯೇಷ್ಠಾ ಜ್ಯೇಷ್ಠಾನಿ ಪ್ರಶಸ್ತಾನಿ ನೃಮ್ಣಾನಿ ಬಲಾನ್ಯಸ್ಮೇ ಅಸ್ಮಭ್ಯಂ ಕೃಣುಹಿ । ಕುರು । ಹೇ ಇಂದ್ರ ತ್ವಮಸ್ಮಭ್ಯಂ ಸುಷಹನಾನಿ ಶೋಭನವಧಾನಿ ವೃತ್ರಾ ವೃತ್ರಾಣಿ ಶತ್ರೂನ್ ರಂಧಿ । ರಂಧಯ । ವಶಂ ನಯ । ಕಿಂಚ ವನುಷೋ ಹಿಂಸಕಸ್ಯ ಮರ್ತ್ಯಸ್ಯ ಮರಣಧರ್ಮಣಃ ಶತ್ರೋಃ ಸಂಬಂಧಿ ವಧೋ ಹನನಸಾಧನಮಾಯುಧಂ ಜಹಿ । ನಾಶಯ ॥

॥ ಪ್ರತಿಪದಾರ್ಥ ॥

ಸಹುರೇ—ಶತ್ರುವಿನ ಪ್ರತಿಭಟನೆಯನ್ನು ಸಹಿಸಲು ಶಕ್ತಿಯುಳ್ಳ ಎಲೈ ಇಂದ್ರನೇ । **ಸತ್ರಾ**—ಯಾವಾಗಲೂ । **ಸಹಾಂಸಿ**—ಶತ್ರುಗಳನ್ನು ಎದುರಿಸಲು ಯೋಗ್ಯವಾದವೂ। **ವರ್ಷಿಷ್ಠಾ**—ಪ್ರವೃದ್ಧವಾದವೂ। **ಜ್ಯೇಷ್ಠಾ**—ಪ್ರಶಸ್ಯವಾದವೂ ಆದ । **ನೃಮ್ಣಾನಿ**—ಬಲಗಳನ್ನು । **ಅಸ್ಮೇ**—ನಮಗೆ । **ಕೃಣುಹಿ**—ಉಂಟುಮಾಡು । **ಅಸ್ಮಭ್ಯಂ**—ನಮಗೆ (ಕಲ್ಯಾಣ ಉಂಟುಮಾಡಲು)। **ಸುಷಹನಾನಿ**—ವಧಾರ್ಹರಾದ । **ವೃತ್ರಾ**—ಶತ್ರುಗಳನ್ನು। **ರಂಧಿ**—ನಾಶಮಾಡು । **ವನುಷಃ**—ಹಿಂಸಕನೂ । **ಮರ್ತ್ಯಸ್ಯ**—ಮಾನವನೂ ಆದ ಶತ್ರುವಿನ । **ವಧಃ**—ನಾಶಕಾರಕವಾದ ಆಯುಧವನ್ನು । **ಜಹಿ**—ನಾಶಮಾಡು

॥ ಭಾವಾರ್ಥ ॥

ಶತ್ರುವಿನ ಪ್ರತಿಭಟನೆಯನ್ನು ಸಹಿಸಿ ಆವರನ್ನು ಸೆದೆಬಡಿಯುವ ಶಕ್ತಿಯುಳ್ಳ ಎಲೈ ಇಂದ್ರನೇ, ಶತ್ರುಗಳನ್ನು ಎದುರಿಸಲು ಯೋಗ್ಯವಾದವೂ, ಪ್ರವೃದ್ಧವಾದವೂ, ಪ್ರಶಸ್ಯವಾದವೂ ಆದ ಬಲಗಳನ್ನು ನಮಗೆ ಯಾವಾಗಲೂ ಕೊಡು. ನಮಗೆ ಕಲ್ಯಾಣವನ್ನುಂಟುಮಾಡಲು ವಧಾರ್ಹರಾದ ಶತ್ರುಗಳನ್ನು ನಾಶಮಾಡು ಹಿಂಸಕನೂ ಮಾನವರ ಗುಂಪಿಗೆ ಸೇರಿದವನೂ ಆದ ಶತ್ರುವಿನ ನಾಶಕಾರಕವಾದ ಆಯುಧವನ್ನು ನಾಶಮಾಡು.

English Translation.

Enduring Indra, bestow upon us energies, excellent, superior, powerful bring under subjection to us enemies deserving of death . demolish the weapon of the malevolent man.

॥ ವಿಶೇಷವಿಷಯಗಳು ॥

ಈ ಸೂಕ್ತದ ಕೊನೆಯ ಋಕ್ಕುಗಳಾದ ೯, ೧೦, ೧೧ನೆಯ ಋಕ್ಕುಗಳಲ್ಲಿ ಉಪಸಂಹಾರರೂಪವಾಗಿ ತನ್ನ ಇಷ್ಟಾರ್ಥಗಳನ್ನು ಸಲ್ಲಿಸಬೇಕೆಂಬ ಸಾಧಾರಣವರ್ಣನೆ ಇದೆ. ಈ ಋಕ್ಕಿನಲ್ಲಿ ಶತ್ರುಗಳನ್ನು ಗೆಲ್ಲುವುದಕ್ಕೆ ಸಹಾಯಕವಾದ ಶಕ್ತಿಸಾಮರ್ಥ್ಯಗಳನ್ನು ಕೊಡಬೇಕೆಂದೂ, ಶತ್ರುವಿನ ಆಯುಧವನ್ನು ನಾಶಮಾಡಬೇಕೆಂದೂ ಪ್ರಾರ್ಥಿಸಿದೆ.

॥ ಸಂಹಿತಾಪಾಠಃ ॥

ಅಸ್ಮಾಕಮಿತ್ಸು ಶೃಣುಹಿ ತ್ವಮಿಂದ್ರಾಸ್ಮಭ್ಯಂ ಚಿತ್ರಾಁ ಉಪ ಮಾಹಿ ವಾಜಾನ್।
ಅಸ್ಮಭ್ಯಂ ವಿಶ್ವಾ ಇಷಣಃ ಪುರಂಧೀರಸ್ಮಾಕಂ ಸು ಮಘವನ್ಬೋಧಿ ಗೋದಾಃ ॥ ೧೦ ॥

॥ ಪದಪಾಠಃ ॥

ಅಸ್ಮಾಕಂ। ಇತ್। ಸು। ಶೃಣುಹಿ। ತ್ವಂ। ಇಂದ್ರ। ಅಸ್ಮಭ್ಯಂ। ಚಿತ್ರಾನ್। ಉಪ। ಮಾಹಿ। ವಾಜಾನ್॥
ಅಸ್ಮಭ್ಯಂ। ವಿಶ್ವಾಃ। ಇಷಣಃ। ಪುರಂಽಧೀಃ। ಅಸ್ಮಾಕಂ। ಸು। ಮಘವನ್। ಬೋಧಿ। ಗೋಽದಾಃ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಮುಸ್ಮಾಕಮಿತ್ ಅಸ್ಮದೀಯಾ ಏವ ಸ್ತುತೀಃ ಸು ಸುಷ್ಠು ಶೃಣುಹಿ। ತಥಾ ಹೇ ಇಂದ್ರ ತ್ವಂ ಚಿತ್ರಾನ್ ಚಾಯನೀಯಾನಿ ವಾಜಾನನ್ನಾನ್ಯಸ್ಮಭ್ಯಮುಪ ಮಾಹಿ। ದೇಹಿ। ಕಿಂಚ ಅಸ್ಮಭ್ಯಂ ವಿಶ್ವಾಃ ಸರ್ವಾಃ ಪುರಂಧೀರ್ಬುದ್ಧೀರಿಷಣಃ। ಪ್ರೇರಯ। ಅಪಿ ಚ ಹೇ ಮಘವನ್ಧನವನ್ನಿಂದ್ರ ಅಸ್ಮಾಕಂ ಗೋದಾ ಗವಾಂ ದಾತಾ ಸು ಸುಷ್ಠು ಬೋಧಿ। ಭವ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ। **ತ್ವಂ**—ನೀನು। **ಅಸ್ಮಾಕಮಿತ್**—ನಮ್ಮ ಸ್ತುತಿಗಳನ್ನೇ। **ಸು**—ಅತಿಶಯವಾಗಿ। **ಶೃಣುಹಿ**—ಕೇಳು। **ಚಿತ್ರಾನ್**—ಆಕರ್ಷಕಗಳಾದ। **ವಾಜಾನ್**—ಅನ್ನಗಳನ್ನು। **ಅಸ್ಮಭ್ಯಂ**—ನಮಗೆ। **ಉಪ ಮಾಹಿ**—ಒದಗಿಸಿಕೊಡು। **ಅಸ್ಮಭ್ಯಂ**—ನಮಗೆ। **ವಿಶ್ವಾಃ**—ಸಮಸ್ತವಾದ। **ಪುರಂಧೀಃ**—ಬುದ್ಧಿಗಳನ್ನೂ। **ಇಷಣಃ**—ಪ್ರೇರಿಸು। **ಮಘವನ್**—ಧನವಂತವಾದ ಎಲೈ ಇಂದ್ರನೇ। **ಅಸ್ಮಾಕಂ**—ನಮಗೆ। **ಗೋದಾಃ**—ಗೋವುಗಳನ್ನು ಕೊಡುವವನಾಗಿ। **ಸು**—ಶ್ರೇಷ್ಠನಾದ ದಾತೃವಾಗಿ। **ಬೋಧಿ**—ಆಗಿರು.

॥ ಭಾವಾರ್ಥ ।

ಎಲೈ ಇಂದ್ರನೇ, ನೀನು ಇತರರ ಸ್ತುತಿಗಳನ್ನು ಲಕ್ಷಿಸದೇ, ನಮ್ಮ ಸ್ತುತಿಗಳನ್ನೇ ಅತಿಶಯವಾಗಿ ಕೇಳು. ನಮಗೆ ಆಕರ್ಷಕವಾದ ಅನ್ನಗಳನ್ನು ಒದಗಿಸಿಕೊಡು ನಮಗೆ ಸಮಸ್ತವಾದ ಬುದ್ಧಿಗಳನ್ನೂ ಪ್ರೇರಿಸು ಧನವಂತನಾದ ಎಲೈ ಇಂದ್ರನೇ, ಶ್ರೇಷ್ಠವಾದ ದಾತೃವಾಗಿ ನಮಗೆ ಗೋದಾತನಾಗಿರು

English Translation.

Hear our praises, Indra, and bestow upon us many kinds of food : fulfil all over desires, and know yourself, Maghavan, to be to us the donor of cattle

॥ ವಿಶೇಷವಿಷಯಗಳು ॥

ಹಿಂದಿನ ಋಕ್ಕಿನಲ್ಲಿ ಶತ್ರುನಧೆಗೆ ಸಹಾಯನೂಡಬೇಕೆಂದು ಪ್ರಾರ್ಥಿಸಿ, ಈ ಋಕ್ಕಿನಲ್ಲಿ ಇಂದ್ರನನ್ನು ದ್ವೇಶಿಸಿ ತಮ್ಮ ಸ್ತುತಿಗಳನ್ನು ಕೇಳಿ ಹರ್ಷಿತನಾಗಿ ತಮಗೆ ಅನ್ನಾದ್ಯಾಹಾರಗಳನ್ನೂ, ಸದ್ಬುದ್ಧಿಯನ್ನೂ, ಗೋವುಗಳನ್ನೂ ಕೊಟ್ಟು ರಕ್ಷಿಸುತ್ತಿರಬೇಕೆಂದು ಪ್ರಾರ್ಥನೆಯು ಉಕ್ತವಾಗಿದೆ

॥ ಸಂಹಿತಾಪಾಠಃ ॥

ನೂ ಷ್ಟುತ ಇಂದ್ರ ನೂ ಗೃಣಾನ ಇಷಂ ಜರಿತ್ರೇ ನದ್ಯೋ ನ ಪೀಪೇಃ ।
ಅಕಾರಿ ತೇ ಹರಿವೋ ಬ್ರಹ್ಮ ನವ್ಯಂ ಧಿಯಾ ಸ್ಯಾಮ ರಥ್ಯಃ ಸದಾಸಾಃ ॥ ೧೧ ॥

॥ ಪದಪಾಠಃ ॥

ನು । ಸ್ತುತಃ । ಇಂದ್ರ । ನು । ಗೃಣಾನಃ । ಇಷಂ । ಜರಿತ್ರೇ । ನದ್ಯಃ । ನ । ಪೀಪೇರಿತಿ ಪೀಪೇಃ ।
ಅಕಾರಿ । ತೇ । ಹರಿವಃ । ಬ್ರಹ್ಮ । ನವ್ಯಂ । ಧಿಯಾ । ಸ್ಯಾಮ । ರಥ್ಯಃ । ಸದಾಸಾಃ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ನು ಕ್ಷಿಪ್ರಂ ಸ್ತುತಃ ಪೂರ್ವೈರ್ಋಷಿಭಿಃ ಸಂಸ್ತುತೋ ನು ಕ್ಷಿಪ್ರಂ ಗೃಣಾನೋಽಸ್ಮಾಭಿಃ ಸ್ತ್ರೀಯಮಾನಸ್ತ್ವಮಿಷಮನ್ನಂ ಜರಿತ್ರೇ ಸ್ತೋತ್ರೇ ಮಹ್ಯಂ ನದ್ಯೋ ನಾದ್ಧಿರ್ನದೀರಿವ ಪೀಪೇಃ । ಪ್ಯಾಯಯಯ । ಪ್ರವೃದ್ಧಂ ಕುರು । ಹೇ ಹರಿವೋ ಹರಿಸಂಜ್ಞಕಾಶ್ವೋಪೇತೇಂದ್ರ ತೇ ತುಭ್ಯಂ ನವ್ಯಂ ನವತರಂ ಬ್ರಹ್ಮ ಸ್ತೋತ್ರಮಕಾರಿ । ಅಸ್ಮಾಭಿಃ ಕ್ರಿಯತೇ । ರಥ್ಯೋ ರಥವಂತೋ ವಯಂ ಧಿಯಾ

प्रज्ञारूपयो स्तुत्या सदासास्त्वं सर्वदा भज्ञमानास्त्वदर्थं० हविरूपस्यान्नस्य दातारोऽ वा स्याम । भूयास्म ॥

। प्रतिपदार्थ ।

इन्द्र—ಎಲೈ ಇಂದ್ರನೇ । **नु**—ಅತಿಶಯವಾಗಿ । **स्तुतः**—ಹಿಂದಿನ ಋಷಿಗಳಿಂದ ಸ್ತುತನಾದ ವನೂ । **नु**—ಅದೇ ಶ್ರದ್ಧೆಯಿಂದ । **गृणानः**—(ನಮ್ಮಿಂದಲೂ) ಸ್ತುತನಾಗತಕ್ಕವನೂ ಆಗಿ । **नद्यः न**—ನದಿಗಳನ್ನು ಉದಕಗಳಿಂದ ತುಂಬುವಂತೆ । **जरित्रे**—ಸ್ತೋತೃವಾದ ನನಗೆ । **इषं**—ಅನ್ನವನ್ನು । **पीपेरः**—ತುಂಬಿಕೊಡು । **हरिवः**—ಹರಿಸಂಜ್ಞಕಗಳಾದ ಅಶ್ವಗಳುಳ್ಳ ಇಂದ್ರನೇ । **तेऽ**—ನಿನ್ನನ್ನು ದ್ದೇಶಿಸಿ । **नव्यं**—ನೂತನವಾದ । **ब्रह्म**—ಸ್ತೋತ್ರವು । **अकारि**—ನಿರ್ಮಿತವಾಗುತ್ತದೆ । **रथ्यः**—ರಥಗಳನ್ನು ಹೊಂದಿರುವ ನಾವು । **धियो**—ಪ್ರಜ್ಞಾಪೂರ್ವಕವಾದ ಸ್ತುತಿಯಿಂದ । **सदासाः**—ನಿನ್ನನ್ನು ಪೂಜಿಸಿ ಹವಿಸ್ಸನ್ನ ರ್ಪಿಸುವವರಾಗಿ । **स्याम**—ಆಗುವಂತೆ ಅನುಗ್ರಹಿಸು.

। भावार्थ ।

ಎಲೈ ಇಂದ್ರನೇ, ಹಿಂದಿನ ಋಷಿಗಳಿಂದ ಅತಿಶಯವಾಗಿ ಸ್ತುತನಾದವನೂ, ಅದೇ ಶ್ರದ್ಧೆಯಿಂದ ನಮ್ಮಿಂದಲೂ ಸ್ತುತನಾಗತಕ್ಕವನೂ ಆಗಿ ನದಿಗಳನ್ನು ಉದಕಗಳಿಂದ ತುಂಬುವಂತೆ ಸ್ತೋತೃವಾದ ನನಗೆ ಅನ್ನವನ್ನು ತುಂಬಿಕೊಡು ಹರಿಸಂಜ್ಞಕಗಳಾದ ಅಶ್ವವುಳ್ಳ ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ನೂತನವಾದ ಸ್ತೋತ್ರವು ನಿರ್ಮಿತವಾಗುತ್ತದೆ. ರಥಗಳನ್ನು ಹೊಂದಿರುವ ನಾವು ಪ್ರಜ್ಞಾಪೂರ್ವಕವಾದ ಸ್ತುತಿಯಿಂದ ನಿನ್ನನ್ನು ಪೂಜಿಸಿ ಹವಿಸ್ಸನ್ನ ರ್ಪಿಸುವವರಾಗಿ ಆಗುವಂತಾಗಲಿ.

English Translation.

Glorified (in the past), glorified, Indra, at present, satisfy your worshipper with food, as rivers (are filled with water): lord of horses, a new hymn has been made for you. may we, possessed of chariots, be ever diligent in your praise.

॥ विशेषविषयगळु ॥

ಈ ಋಕ್ಕು ಈ ಸೂಕ್ತದಲ್ಲಲ್ಲದೆ ೨೦-೨೪ ನೇ ಸೂಕ್ತಗಳಲ್ಲಿ ಕೊನೆಯ ಋಕ್ಕುಗಳಾಗಿ ಪರಿತವಾಗಿದೆ

इन्द्र नु स्तुतः नु गृणानः नद्यः न जरित्रे इषं पीपेरः—ಎಲೈ ಇಂದ್ರನೇ, ನೀನು ಹಿಂದೆ ಅನೇಕ ಋಷಿಗಳಿಂದ ಸ್ತುತಿಸಲ್ಪಟ್ಟರುವೆ. ಈಗ ನಮ್ಮಿಂದ ಸ್ತುತಿಸಲ್ಪಡುವೆ. ನದಿಗಳಿಗೆ ವೃಷ್ಟ್ಯುದಕವು ತುಂಬಿ ಪೂರ್ಣವಾಗಿ ಹರಿಯುವಂತೆ ನಿನ್ನನ್ನು ಸ್ತೋತ್ರಮಾಡುವ ನಮಗೆ ಅನ್ನವನ್ನು (ಅನ್ನಾದ್ಯಾಹಾರವನ್ನು) ತುಂಬಿ ಕೊಡು, ಎಂದರೆ ಯಥೇಚ್ಛವಾಗಿ ಕೊಡು.

नु—**नु इत्येषोऽनेकर्कर्मा । इदं नु करिष्यतीति हेत्वपदेशे । कथं नु करिष्यतीत्यनुपपन्ने** (ನಿ. ೧-೪) **नु** ಎಂಬ ನಿಪಾತಕ್ಕೆ ಅನೇಕ ಅರ್ಥಗಳಿವೆ. **इदं नु करिष्यति**

ಎನ್ನುವಾಗ **ನು** ಎಂಬ ಶಬ್ದಕ್ಕೆ ಆದ್ದರಿಂದ ಎಂದು ಹೇತ್ವರ್ಥವಾಗುತ್ತದೆ. **ಕಥಂ ನು ಕರಿಷ್ಯತಿ** ಎನ್ನುವಾಗ **ನು** ಎಂಬ ಶಬ್ದಕ್ಕೆ ಹೇಗೆ ಎಂಬ ಪ್ರಶ್ನಾರ್ಥಕವಾಗುತ್ತದೆ. ಹೀಗೆಯೇ **ಅಥಾಪ್ಯುಪಮಾರ್ಥೇ ಭವತಿ** । ಉಪಮಾನವನ್ನು ಸೂಚಿಸುವಾಗಲೂ ಸಹ **ನು** ಎಂಬ ಶಬ್ದದ ಪ್ರಯೋಗವಿರುವುದು ಉದಾಹರಣೆಗೆ—

ಅಕ್ಷೋ ನ ಚಕ್ರ್ಯೋಃ ಶೂರ ಬೃಹನ್ಪ್ರ ತೇ ಮಹ್ನಾ ರಿರಿಚೇ ರೋದಸ್ಯೋಃ ।
ವೃಕ್ಷಸ್ಯ ನು ತೇ ಪುರುಹೂತ ವಯಾ ವ್ಯೋ ಽ ತಯೋ ರುರುಹುರಿಂದ್ರ ಪೂರ್ವೀಃ ॥
(ಋ ಸಂ ೬-೨೪-೩)

ಎಂಬ ಋಕ್ಕನ್ನು ನಿರುಕ್ತಕಾರರು ಉದಾಹರಿಸಿ (ನಿ. ೧-೪), **ವೃಕ್ಷಸ್ಯ ನು ತೇ । ವೃಕ್ಷಸ್ಯೇವ ತೇ ।** ವೃಕ್ಷದಂತೆ ಅಥವಾ ವೃಕ್ಷದ ಶಾಖೆಗಳಂತೆ ಎಂದು **ನು** ಎಂಬ ಶಬ್ದಕ್ಕೆ ಉಪಮಾರ್ಥವನ್ನು ಹೇಳಿದೆಯೆಂದು ತಿಳಿಸಿದಾರೆ. ಹೀಗೆಯೇ—

ನೂ ಮರ್ತೋ ದಯತೇ ಸನಿಷ್ಯನ್ಯೋ ವಿಷ್ಣವ ಉರುಗಾಯಾಯ ದಾಶತ್ ।
(ಋ ಸಂ ೭-೧೦೦-೧೧)

ಇತ್ಯಾದಿ ಋಕ್ಕುಗಳಲ್ಲಿ **ನು** ಎಂಬ ಶಬ್ದಕ್ಕೆ **ಕ್ಷಿಪ್ರಂ** ಬೇಗನೆ, ಜಾಗ್ರತೆಯಾಗಿ ಎಂಬರ್ಥವೂ,

ನೂ ಇಂದ್ರ ಶೂರ ಸ್ತವಮಾನ ಊತೀ ಬ್ರಹ್ಮಜೂತಸ್ತನ್ವಾ ವಾವೃಧಸ್ವ ।
(ಋ. ಸಂ. ೭-೧೯-೧೧)

ಇತ್ಯಾದಿ ಋಕ್ಕುಗಳಲ್ಲಿ **ನು** ಎಂದರೆ **ಅದ್ಯ**, ಈಗ, ಒಡನೆಯೇ ಎಂಬ ಅರ್ಥವಿರುವುದೆಂದು ನಿರುಕ್ತಕಾರರು ಉದಾಹರಣೆ ಸಹಿತವಾಗಿ ವಿವರಿಸಿದಾರೆ. ಪ್ರಕೃತವಾದ ಋಕ್ಕಿನಲ್ಲಿ **ಕ್ಷಿಪ್ರಂ** ಬೇಗನೆ, ಶೀಘ್ರವಾಗಿ ಎಂದರ್ಥವು

ಜರಿತ್ರೇ—ಜರಿತೃಶಬ್ದವು ಸ್ತೋತೃನಾಮಗಳಲ್ಲಿ ಪಠಿತವಾಗಿದೆ (ನಿ. ೩-೧೯) **ಜರಿತಾ ಗರಿತಾ** (ನಿ ೧-೭) ಎಂದು ನಿರ್ವಚನವೂ ಇರುವುದರಿಂದ **ಜರಿತ್ರೇ** ಎಂದರೆ ಇಲ್ಲಿ ಸ್ತೋತ್ರಮಾಡುವ ನನಗೆ ಎಂದರ್ಥವು.

ನ—**ನ** ಎಂಬ ಶಬ್ದಕ್ಕೆ ನಿರುಕ್ತಕಾರರು ಎರಡು ವಿಧವಾದ ಅರ್ಥವನ್ನು ಹೇಳಿರುವರು—

ನೇತಿ ಪ್ರತಿಷೇಧಾರ್ಥೀಯೋ ಭಾಷಾಯಾಂ । ಉಭಯಮನ್ವಾಧಾಯ್ಯಂ । ನೇಂದ್ರಂ ದೇವಮಮಂಸತ ಇತಿ ಪ್ರತಿಷೇಧಾರ್ಥೀಯಃ ಪುರಸ್ತಾದುಪಚಾರಸ್ತಸ್ಯ ಯೇತ್ಪ್ರತಿಷೇಧತಿ । ದುರ್ಮದಾಸೋ ನ ಸುರಾಯಾಂ ಇತ್ಯುಪಮಾರ್ಥೀಯಃ । ಉಪರಿಷ್ಟಾದುಪಚಾರಸ್ತಸ್ಯ ಯೇನೋಪಮಿಮೀತೇ ॥ (ನಿ ೮-೪)

ಎಂದರೆ **ನ** ಎಂಬ ಶಬ್ದವು ಲೋಕವ್ಯವಹಾರದ ಭಾಷೆಯಲ್ಲಿ ಎಂತೆ, ವೇದಭಾಷೆಯಲ್ಲದ ಆಧುನಿಕ ಸಂಸ್ಕೃತ ಭಾಷೆಯಲ್ಲಿ ನಿಷೇಧಾರ್ಥದಲ್ಲಿ (ಇಲ್ಲ, ಅಲ್ಲ ಎಂಬರ್ಥದಲ್ಲಿ) ಉಪಯೋಗಿಸಲ್ಪಡುವುದು. ಇದು ಎಲ್ಲರಿಗೂ ತಿಳಿದೇ ಇದೆ ಆದರೆ ವೇದಗಳಲ್ಲಿ ನಿಷೇಧಾರ್ಥದಲ್ಲಿಯೂ, ಉಪಮಾರ್ಥದಲ್ಲಿಯೂ **ನ** ಎಂಬ ಶಬ್ದದ ಪ್ರಯೋಗವಿರುವುದು. ಹೇಗೆಂದರೆ— **ನೇಂದ್ರಂ ದೇವಮಮಂಸತ** ಎಂಬ ವಾಕ್ಯದಲ್ಲಿನ **ನ** ಎಂಬ ಶಬ್ದವು ನಿಷೇಧಾರ್ಥದಲ್ಲಿ ಪ್ರಯುಕ್ತವಾಗಿರುವುದು.

ಪ್ರತಿಷೇಧನೆಂದರೆ ಒಬ್ಬ ವ್ಯಕ್ತಿಯನ್ನು ಪ್ರತ್ಯಕ್ಷವಾಗಿ ಅಥವಾ ಎದುರಿಗೆ ಹೊಗಳದೇ ಇರುವುದು. ಇಂದ್ರನನ್ನು ದೀಪ್ತಿಯುಕ್ತನಾದವನೆಂದು ತಿಳಿಯಲಾಗುವುದಿಲ್ಲ ಎಂಬ ವಾಕ್ಯದಲ್ಲಿ **ಇಲ್ಲ (ನ** ಎಂಬುದರ ಅರ್ಥ) ಎಂಬ ಶಬ್ದವು ಇಂದ್ರನ ವಿಷಯಕವಾದ ಉಪಚಾರೋಕ್ತಿಗೆ ವಿರುದ್ಧವಾದ ಅರ್ಥವನ್ನು ಸೂಚಿಸುವುದು ಇದಕ್ಕೆ ಪ್ರತಿಷೇಧಾರ್ಥ ನೆಂದು ಹೆಸರು. **ದುರ್ಮದಾಸೋ ನ ಸುರಾಯಾಂ** ಎಂಬ ವಾಕ್ಯದಲ್ಲಿ **ನ** ಎಂಬ ಶಬ್ದವು ಉಪಮಾರ್ಥವನ್ನು (ಹೋಲಿಕೆಯನ್ನು) ಸೂಚಿಸುವುದು. ಮದ್ಯವನ್ನು ಪಾನಮಾಡಿದ ಜನರಂತೆ ದುರಹಂಕಾರವುಳ್ಳವರು ಎಂದು ಈ ವಾಕ್ಯದ ಅರ್ಥವು ಇಲ್ಲಿ ಒಂದು ವ್ಯಕ್ತಿಯಲ್ಲಿರುವ ಗುಣಾವಗುಣಗಳನ್ನು ಮತ್ತೊಂದು ವ್ಯಕ್ತಿಯಲ್ಲಿರುವ ಗುಣಾವಗುಣಗಳಿಗೆ ಹೋಲಿಸಿ ಹೇಳುವುದೇ ಉಸಮಾರ್ಥವು ಮದ್ಯಪಾನಮಾಡಿದವರು ಮತಿಹೀನರಾಗಿ ಅಹಂಕಾರ ದಿಂದ ಸೀಜಮಾರ್ಗದಲ್ಲಿ ವರ್ತಿಸುವರು ಆ ಜನರಂತೆ ದುರಹಂಕಾರವುಳ್ಳವರು ಎಂಬುದೇ ಉಪಮಾರ್ಥವು ಈ ವಿಧವಾದ ಅರ್ಥಗಳನ್ನು ವೇದಗಳಲ್ಲಿ **ನ** ಎಂಬ ಪದದಿಂದಲೂ, **ಇವ** ಎಂಬ ಪದದಿಂದಲೂ ನಿರ್ದೇಶಿಸಲ್ಪಡುವುದು ಈ ವಿಧವಾದ ಉಪಮಾರ್ಥದಲ್ಲಿ **ನ** ಎಂಬ ಶಬ್ದವ ಪ್ರಯೋಗವು ವೇದಗಳಲ್ಲಿ ಮಾತ್ರ ಇರುವುದು ಬಳಸುವ ಭಾಷೆಯಲ್ಲಿಲ್ಲ ಅದಕ್ಕೆ ಬದಲಾಗಿ ಅಲ್ಲಿ **ಇವ** ಎಂಬ ಶಬ್ದದ ಪ್ರಯೋಗಮಾತ್ರವಿರುವುದು

ಸೂಕ್ತದ ಉಪಸಂಹಾರರೂಪವಾದ ಈ ಋಕ್ಕಿನಲ್ಲಿ ವಾಮದೇವಋಷಿಯು ದೇವತೆಗೆ ಹೊಸದಾಗಿ ರಚಿತವಾದ ಸ್ತೋತ್ರವನ್ನರ್ಪಿಸಿ ದೇವತೆಯ ಅನುಗ್ರಹವನ್ನು ಪ್ರಾರ್ಥಿಸಿರುವುದು ಉಕ್ತವಾಗಿದೆ.

ಇಪ್ಪತ್ತಮೂರನೆಯ ಸೂಕ್ತವು.

ಕಥಾ ಮಹಾಮಿತ್ಯೇಕಾದಶರ್ಚಂ ದ್ವಿತೀಯಂ ಸೂಕ್ತಂ ವಾಮದೇವಸ್ಯಾರ್ಷಂ ತ್ರೈಷ್ಟುಭ-ಮೈಂದ್ರಂ । ಋತಸ್ಯ ಹೀತ್ಯಾದ್ಯಾಸ್ತಿಸ್ರ ಋತವದೇವತಾಕಾ ವಾ । ತಥಾ ಚಾನುಕ್ರಾಂತಂ । ಕಥೋಪಸಾಂ-ತ್ಯಾಸ್ತಿಸ್ರ ಋತವದೇವ್ಯೋ ವೇತಿ ॥ ಅಭಿಪ್ಲವಿಕೇಽಹನಿ ದಶರಾತ್ರೇ ಪ್ರಥಮೇಽಹನಿ ಮಾಧ್ಯಂದಿನಸವನೇ ಮೈತ್ರಾವರುಣಶಸ್ತ್ರೇಽಹೀನಸೂಕ್ತಸ್ಯ ಸ್ಥಾನೇ ಇದಂ ತೃತೀಯಂ ಸಂಪಾತಸೂಕ್ತಂ । ಸೂತ್ರಿತಂ ಚ । ಕಥಾ ಮಹಾಮಿಂದ್ರಃ ಪೂರ್ಭಿರ್ದ್ಯ ಏಕ ಇತ್ । ಆ. ೭–೫ । ಇತಿ ॥ ಮಹಾವ್ರತೇ ನಿಷ್ಕೇವಲ್ಯ ಏತತ್ । ತಥೈವ ಪಂಚಮಾರಣ್ಯಕೇ ಶೌನಕೇನ ಸೂತ್ರಿತಂ ಚ । ಕಥಾ ಮಹಾಮನೃಧತ್ಕಸ್ಯ ಹೋತುರಿತಿ ಸಂಪಾತಃ । ಐ. ಆ. ೫–೨–೨ । ಇತಿ ।

ಅನುವಾದವು—**ಕಥಾ ಮಹಾಂ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಾಮದೇವನು ಋಷಿಯು, ಇಂದ್ರನು ದೇವತೆಯು, ತ್ರಿಷ್ಟುಪ್ಛಂದಸ್ಸು. ಈ ಸೂಕ್ತದ **ಋತಸ್ಯ ಹಿ** ಎಂದು ಮೊದಲಾಗುವ ಮೂರು ಋಕ್ಕುಗಳು (೮–೧೦ ಋಕ್ಕುಗಳು) ಇಂದ್ರ ಅಥವಾ ಋತುದೇವತಾಕವು. ಅನುಕ್ರಮಣಿಕೆಯಲ್ಲಿ—**ಕಥೋಪಸಾಂತ್ಯಸ್ತಿಸ್ರ ಋತವದೇವ್ಯೋ ವಾ** ಎಂದು ಹೇಳಿರುವುದು. ಅಭಿಪ್ಲವನೆಂಬ ಯಾಗದಲ್ಲಿಯೂ, ದಶರಾತ್ರವೆಂಬ ಯಾಗದ ಮೊದಲನೆಯ ದಿವಸದಲ್ಲಿಯೂ ಮಾಧ್ಯಂದಿನ ಸವನಕಾಲದಲ್ಲಿ ಮೈತ್ರಾವರುಣ ಶಸ್ತ್ರಮಂತ್ರ ಪಠನಮಾಡುವಾಗ ಅಹೀನಸೂಕ್ತದ ಸ್ಥಾನದಲ್ಲಿ ಎಂದರೆ

ಅಹೀನ ಸೂಕ್ತಕ್ಕೆ ಬದಲಾಗಿ ಈ ಸೂಕ್ತವನ್ನು ಮೂರನೆಯ ಸಂಪಾತ ಸೂಕ್ತವನ್ನಾಗಿ ಪರಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಕಥಾಮಹಮಿಂದ್ರಃ ಪೂರ್ಭಿದ್ಯ ಏಕ ಇತ್** ಎಂಬ ಸೂತ್ರದಿಂದ (ಆ. ೭–೫) ವಿವೃತವಾಗಿರುವುದು. ಮತ್ತು ಮಹಾವ್ರತದಲ್ಲಿಯೂ ನಿಷ್ಕೇವಲ್ಯಶಸ್ತ್ರದಲ್ಲಿ ಈ ಸೂಕ್ತದ ವಿನಿಯೋಗವಿರುವುದೆಂದು—**ಕಥಾ ಮಹಾ-ಮವೃಧತ್ಕಸ್ಯ ಹೋತುರಿತಿ ಸಂಪಾತಃ** ಎಂಬ ಏತರೇಯಾರಣ್ಯಕ ವಾಕ್ಯದಲ್ಲಿ (ಐ ಆ. ೫–೩–೩) ಪಂಚಮಾರಣ್ಯಕದಲ್ಲಿ ಶೌನಕಮಹರ್ಷಿಗಳಿಂದ ಸೂತ್ರಿತವಾಗಿರುವುದು.

ಸೂಕ್ತ—೨೩

ಮಂಡಲ—೪ ॥ ಅನುವಾಕ—೩ ॥ ಸೂಕ್ತ—೨೩ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ—೯, ೧೦ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
॥ ಋಷಿಃ—ವಾಮದೇವಃ ॥
॥ ದೇವತಾ—೧–೬, ೧೧. ಇಂದ್ರಃ । ೮–೧೦ ಇಂದ್ರ ಋಷಭದೇವೋ ವಾ ॥
ಛಂದಃ —ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಕ॒ಥಾ ಮ॒ಹಾಮ॑ವೃಧ॒ತ್ಕಸ್ಯ॑ ಹೋ॒ತುರ್ಯ॒ಜ್ಞಂ ಜು॒ಷ್ಟಾನೋ॑ ಅ॒ಭಿ ಸೋ॒ಮ॑-
ಮೂ॒ಧಃ ।
ಪಿ॒ಬ॒ನ್ನು॒ಶಾನೋ॑ ಜು॒ಷಮಾ॑ಣೋ॒ ಅಂ॑ಧೋ॒ ವವ॒ಕ್ಷ ಋ॒ಷ್ವಃ ಶು॒ಚ॒ತೇ
ಧ॒ನಾ॑ಯ ॥ ೧ ॥

॥ ಪದಪಾಠಃ ॥

ಕ॒ಥಾ । ಮ॒ಹಾಂ । ಅ॒ವ॒ಧ॒ತ್ । ಕಸ್ಯ॑ । ಹೋ॒ತುಃ । ಯ॒ಜ್ಞಂ । ಜು॒ಷ್ಟಾ॑ನಃ । ಅ॒ಭಿ । ಸೋ॒ಮ॑ಂ । ಊ॒ಧ॒ಃ ।
ಪಿ॒ಬ॒ನ್ । ಉ॒ಶಾನಃ । ಜು॒ಷಮಾ॑ಣಃ । ಅಂ॒ಧ॒ಃ । ವವ॒ಕ್ಷ॒ । ಋ॒ಷ್ವಃ । ಶು॒ಚ॒ತೇ । ಧ॒ನಾ॑ಯ ॥ ೧ ॥

॥ ಸಾಯಣಭಾಷ್ಯಂ ॥

ಮಹಾಂ ಮಹ್ಮಾನಂ ಗುಣೈಃ ಪ್ರವೃದ್ಧಮಿಂದ್ರಂ ಕಥಾ ಕಥಂ ಕೇನ ಪ್ರಕಾರೇಣಾವೃಧತ್ । ವರ್ಧಯೇತ್ । ಅಸ್ಮತ್ಪ್ರೇರಿತಾ ಸ್ತುತಿರಿತಿ ಶೇಷಃ । ತಸ್ಯ ಮಹಿಮ್ನೋಽತಿಮಹತ್ತ್ವಾದಿತಿ ಭಾವಃ । ಸ

ಏವೇಂದ್ರೋ ಹೋತುರ್ಹೋಮನಿಷ್ಪಾದಕಸ್ಯ ಕಸ್ಯ ಯೆಜಮಾನಸ್ಯ ಯಜ್ಞಂ ಯಾಗಂ ಜುಷಾಣಃ ಪ್ರೀಯಮಾನಃ ಸನ್ ಅಭಿ । ಗಚ್ಛೀದಿತಿ ಶೇಷಃ । ಉಪಸರ್ಗಶ್ರುತೇರುಚಿತಕ್ರಿಯಾಧ್ಯಾಹಾರಃ । ಕಿಂಚ ಊಧ ಉದ್ಧೆತಮತಿಪ್ರವೃದ್ಧಂ ಸೋಮಮಂಧಃ ಸೋಮಲಕ್ಷಣಮನ್ನಂ ಪಿಬನ್ನಾಸ್ವಾದಯನ್ ಉಶಾನಸ್ತದೇವಾನ್ನಂ ಕಾಮಯಮಾನೋ ಜುಷಮಾಣಃ ಸೇವಮಾನಶ್ಚ ಋಷ್ವೋ ಮಹಾನಿಂದ್ರಃ ಶುಚತೇ ಪ್ರದೀಪ್ತಾಯ ಧನಾಯ ಹಿರಣ್ಯಾದಿಲಕ್ಷಣಾಯ । ಉಕ್ತಲಕ್ಷಣಂ ಧನಂ ಕಸ್ಮೈ ಯಜಮಾನಾಯ ದಾತುಂ ವವಕ್ಷೇ । ವಹತಿ । ಪೀತಮೇವಾನ್ನಂ ಜಠರೇ ಧಾರಯತಿ । ಅನೇನ ವಾಕ್ಯದ್ವಯೇನೇಂದ್ರಸ್ಯಾಚಿಂತ್ಯಚರಿತತ್ವಂ ಖ್ಯಾಪಿತಂ ಭವತಿ ॥

॥ ಪ್ರತಿಪದಾರ್ಥ ॥

ಮಹಾಂ—ಮಹದ್ಗುಣಗಳಿಂದ ಕೂಡಿದ ಇಂದ್ರನನ್ನು । **ಕಥಾ**—ಯಾವ ಪ್ರಕಾರವಾಗಿ । **ಅವೃಧತ್**—(ನಮ್ಮ ಸ್ತುತಿಗಳು) ಪ್ರವೃದ್ಧನಾಗಿ ಬೆಳೆಯುವಂತೆ ಮಾಡುತ್ತವೆ । (ಅದೇ ಮಹಾತ್ಮನಾದ ಇಂದ್ರನು) **ಹೋತುಃ**—ಹೋಮನಿಷ್ಪಾದಕನಾದ । **ಕಸ್ಯ**—ಯಾವ ಯಜಮಾನನ । **ಯಜ್ಞಂ**—ಯಾಗವನ್ನು । **ಜುಷಾಣಃ**—ಸೇವಿಸುತ್ತಾ । **ಅಭಿ**—(ಯಜಮಾನನ) ಅಭಿಮುಖನಾಗಿ ಹೋಗುತ್ತಾನೆ । **ಊಧಃ**—ಪ್ರಭೂತವಾದ । **ಸೋಮಂ ಅಂಧಃ**—ಸೋಮರೂಪವಾದ ಅನ್ನವನ್ನು । **ಪಿಬನ್**—ಪಾನಮಾಡುತ್ತಾ । **ಉಶನ್**—ಅದನ್ನೇ (ಪುನಃ) ಅಪೇಕ್ಷಿಸುತ್ತಲೂ । **ಜುಷಮಾಣಃ**—(ಪದೇಪದೇ) ಸೇವಿಸುತ್ತಲೂ । **ಋಷ್ವಃ**—ಮಹಾತ್ಮನಾದ ಇಂದ್ರನು । **ಶುಚತೇ**—ಪ್ರಕಾಶಮಾನವಾದ । **ಧನಾಯ**—ಧನವನ್ನು । **ವವಕ್ಷೇ**—(ಯಾವ ಯಜಮಾನನಿಗೆ ಕೊಡಲು) ತನ್ನಲ್ಲಿ ವಹಿಸಿದ್ದಾನೆ ?

॥ ಭಾವಾರ್ಥ ॥

ಮಹದ್ಗುಣಗಳಿಂದ ಕೂಡಿದ ಇಂದ್ರನನ್ನು ನಮ್ಮ ಸ್ತುತಿಗಳು ಯಾವಪ್ರಕಾರವಾಗಿ ಪ್ರವೃದ್ಧನಾಗುವಂತೆ ಮಾಡುತ್ತವೆ ? ಮಹಾತ್ಮನಾದ ಇಂದ್ರನು ಹೋಮನಿಷ್ಪಾದಕನಾದ ಯಾವ ಯಜಮಾನನ ಯಾಗವನ್ನು ಸೇವಿಸುತ್ತಾ ಯಜಮಾನನ ಅಭಿಮುಖನಾಗಿ ಹೋಗುತ್ತಾನೆ ? ಪ್ರಭೂತವಾದುದೂ ಸೋಮರೂಪವಾದುದೂ ಆದ ಅನ್ನವನ್ನು ಪಾನಮಾಡುತ್ತಲೂ, ಪುನಃ ಪುನಃ ಅದನ್ನೇ ಅಪೇಕ್ಷಿಸುತ್ತಲೂ, ಪದೇಪದೇ ಅದನ್ನೇ ಸೇವಿಸುತ್ತಲೂ ಮಹಾತ್ಮನಾದ ಇಂದ್ರನು ಪ್ರಕಾಶಮಾನವಾದ ಧನವನ್ನು ಯಾವ ಯಜಮಾನನಿಗೆ ಕೊಡಲು ತನ್ನಲ್ಲಿ ವಹಿಸಿದ್ದಾನೆ ?

English Translation

In what manner may (any one) extol the mighty Indra ? at the sacrifice of what worshipper may he, propitiated, be present drinking the sacificial Soma beverge, desirous of the (sacred) food, and pleased (by the oblation) ? the mighty Indra is borne (to the rite) for the purpose of bestowing brilliant wealth.

॥ ವಿಶೇಷವಿಷಯಗಳು. ॥

ಈ ಋಕ್ಕಿನಲ್ಲಿಯೂ ಮುಂದಿನ ಕೆಲವು ಋಕ್ಕುಗಳಲ್ಲಿಯೂ ವಾಮದೇವಋಷಿಯು ಪ್ರಶ್ನೋತ್ತರರೂಪವಾದ ವಾಕ್ಯಗಳಿಂದ ಇಂದ್ರನ ಗುಣಗಳನ್ನು ವರ್ಣನೆ ಮಾಡುವನು.

ಮಹಾಂ ಕಥಾ ಅವೃಧತ್—ಮಹಾಮಹಿಮನಾದ ಇಂದ್ರನನ್ನು ಯಾವ ಪ್ರಕಾರವಾದ ಸ್ತೋತ್ರಗಳಿಂದ ಪ್ರವೃದ್ಧನಾಗುವಂತೆ ಮಾಡೋಣ ಎಂದು ಋಷಿಯು ಪ್ರಶ್ನಿಸುತ್ತಾನೆ. ದೇವತೆಗಳ ಗುಣಗಳನ್ನು ವರ್ಣಿಸುವುದರಿಂದ ಅವರು ಪ್ರವೃದ್ಧರಾಗುವರು ಎಂದರೆ ಸ್ತೋತ್ರಮಾಡುವವರ ವಿಷಯದಲ್ಲಿ ಅನುಗ್ರಹಾತ್ಮಕಬುದ್ಧಿಯುಳ್ಳವರಾಗುವರು ಎಂದಭಿಪ್ರಾಯವು. **ತಮಿದ್ವರ್ಧಂತು ನೋ ಗಿರಃ। ವರ್ಧಂತು ತ್ವಾ ಸುಷ್ಟುತಯೋ ಗಿರೋ ಮೇ** ಇತ್ಯಾದಿವಾಕ್ಯಗಳು—ಸ್ತೋತೃರೂಪವಾದ ವಾಕ್ಯಗಳು ದೇವತೆಗಳನ್ನು ವೃದ್ಧಪಡಿಸುವವು (ಸಂತೋಷಪಡಿಸುವವು) ಎಂಬ ವಿಷಯವನ್ನು ಸಮರ್ಥಿಸುತ್ತವೆ ಇಂದ್ರನು ಮಹಾಗುಣವಿಶಿಷ್ಟನಾದ್ದರಿಂದ ಇವನನ್ನು ಯಾವವಿಧವಾದ ಸ್ತುತಿವಾಕ್ಯಗಳಿಂದ ಸಂತೋಷಪಡಿಸಬೇಕು? ಎಂದು ಋಷಿಯು ಪ್ರಶ್ನಿಸಿ ಇಂದ್ರನ ಮಹತ್ತ್ವವನ್ನೂ, ಸ್ತೋತ್ರಮಾಡುವ ಋಷಿಗಳ ಅಸಾಮರ್ಥ್ಯತೆಯನ್ನೂ ವ್ಯಕ್ತಪಡಿಸಿರುವನು.

ಹೋತುಃ ಕಸ್ಯ ಯಜ್ಞಂ ಜುಷಾಣಃ ಅಭಿ—ಇಂದ್ರನು ಯಜ್ಞಮಾಡುವ ಅಥವಾ ಆಹ್ವಾನಮಾಡುವ ಅನೇಕ ಯಜಮಾನರ ಯಜ್ಞಗೃಹಗಳಿಗೆ ಹೋಗುವನು. ಈಗ ಯಾವ ಯಜಮಾನನ ಯಜ್ಞದಲ್ಲಿ ಸೇವಿಸಲ್ಪಡಲು ಹೋಗಿರುವನು? ಎಂದು ಋಷಿಯು ಪ್ರಶ್ನೆಮಾಡಿರುವನು. ಈ ವಾಕ್ಯದಲ್ಲಿ ಕ್ರಿಯಾಪದವಿಲ್ಲದಿದ್ದರೂ **ಉಪಸರ್ಗ-ಶ್ರುತೇರುಚಿತಕ್ರಿಯಾಧ್ಯಾಹಾರಃ** ಎಂಬ ವ್ಯಾಕರಾನುಸಾರವಾಗಿ **ಅಭಿ** ಎಂಬ ಉಪಸರ್ಗಕ್ಕೆ ಸರಿಹೋಗುವ **ಗಚ್ಛೇತ್** ಎಂಬ ಕ್ರಿಯಾಪದವನ್ನು ಅಧ್ಯಾಹಾರಮಾಡಿ ಅರ್ಥವನ್ನು ಹೇಳಬೇಕೆಂದು ಭಾಷ್ಯಕಾರರು ವಿವರಿಸಿದ್ದಾರೆ.

ಊಧಃ ಸೋಮಂ ಅಂಧಃ ಪಿಬನ್ ಉಶನ್ ಜುಷಮಾಣಃ ಯಷ್ಟಃ ಶುಚತೇ ಜನಾಯ ವವಕ್ಷೇ—ಇಂದ್ರನು ಸೋಮಪಾನದಲ್ಲಿ ಬಹಳವಾದ ಆಸಕ್ತಿಯುಳ್ಳವನಾದುದರಿಂದ ಸೋಮಪಾನವನ್ನು ಆಗಾಗ ಅಪೇಕ್ಷಿಸುವನು ಮತ್ತೂ ಮತ್ತು ಪಾನಮಾಡುವನು ಸೋಮಪಾನಾನಂತರ ಮಹತ್ಸ್ವರೂಪವುಳ್ಳ ಇಂದ್ರನು ಸಂತುಷ್ಟನಾಗಿ ಯಜಮಾನನಿಗೆ ಇಷ್ಟವಾದ ಮತ್ತು ಉತ್ತಮವಾದ ಧನಗಳನ್ನು ಕೊಡುವನು ಈಗ ಆ ರೀತಿ ಯಾವ ಯಜಮಾನನಿಗೆ ಧನಾದಿಗಳನ್ನು ಕೊಡಲು ಅವುಗಳನ್ನು ತೆಗೆದುಕೊಂಡು ಹೋಗುತ್ತಿರುವನು ಎಂಬ ಆಂಶವು ಈ ವಾಕ್ಯದಲ್ಲಿ ಉಕ್ತವಾಗಿದೆ.

॥ ಸಂಹಿತಾಪಾಠಃ ॥

ಕೋ ಅಸ್ಯ ವೀರಃ ಸಧಮಾದಮಾಪ ಸಮಾನಂಶ ಸುಮತಿಭಿಃ ಕೋ ಅಸ್ಯ।
ಕದಸ್ಯ ಚಿತ್ರಂ ಚಿಕಿತೇ ಕದೂತೀ ವೃಧೇ ಭುವಚ್ಛಶಮಾನಸ್ಯ ಯಜ್ಯೋಃ ॥

॥ पदपाठः ॥

कः । अस्य । वीरः । सधऽमादं । अप । सं । आनंश । सुऽमतिऽभिः । कः । अस्य ।

कत् । अस्य । चित्रं । चिकितेत् । कत् । ऊतीः । वृधे । भुवत् । शशमानस्य । यज्योः ॥ ३ ॥

॥ सायणभाष्यं ॥

अस्येंद्रस्य संबंधिनं सधमादं । सह माद्यंतीति सधमादः संग्रामः । तं सह सोमसानं वा वीरः स्तोत्राणामभित्राणां वा वीरयिता कः पुमानाप । प्राप्नोतीति । कश्चास्येंद्रस्य सुमतिभिः शोभनाभिरनुग्रहबुद्धिभिः समानंश । संगच्छेत्। कत्कदा वास्येंद्रस्य चित्रं चायनीयं धनं चिकितेत् । प्रज्ञायतेत् । तत्प्रदानसमयं न कोऽपि जानातीत्यर्थः । कत्कदा वा शशमानस्य स्तुवतो यज्योर्यष्टुर्यजमानस्य वृधे वर्धनायोतीः ऊत्या रक्षणा भुवत् । भवेत् ॥

॥ प्रतिपदार्थ ॥

कः वीरः—यावा वीरपुरुषनु । **अस्य**—ई इंद्रनोडने । **सधमादं**—युद्धदल्लि साहायक्यकवाद साहचर्यवन्नु । **अप**—पॊंदुत्तानॆ ? **कः**—यावा सुकृतियु । **अस्य**—ई इंद्रन । **सुमतिभिः**—अनुग्राहकवाद बुद्धिगळॊडनॆ । **समानंश**—सेरिकॊळ्ळुत्तानॆ ? **कत्**—यावाग । **अस्य**—ई इंद्रन । **चित्रं**—आकर्षकवाद धनवु । **चिकितेत्**—तिळियल्पडुत्तदॆ ? **कत्**—यावाग । **शशमानस्य**—स्तुतिसुवनू । **यज्योः**—यज्ञकर्तनू आद यजमानन । **वृधे**—वृद्धिगागियू । **ऊतीः**—रक्षणॆगागियू । **भुवत्**—(इंद्रनु) प्रत्यक्षनागुत्तानॆ.

॥ भावार्थ ॥

युद्धकालदल्लि सहायमाडतक्क ई इंद्रन साहचर्यवन्नु यावा वीरपुरुषनु युद्ध समयदल्लि हॊंदुतत्तानॆ ? यावा सुकृतियु ई इंद्रन अनुग्राहकगळाद बुद्धिगळन्नु पडॆयुत्तानॆ ? ई इंद्रन आकर्षकवाद धनवु यावाग तिळियल्पडुत्तदॆ ? स्तुतिसुववनू, यज्ञकर्तनू आद यजमानन वृद्धिगागियू, रक्षणॆगागियू इंद्रनु यावाग प्रत्यक्षनागुत्तानॆ.

English Translation.

What hero has enjoyed his fellowship (in battle)? who has been a sharer in his benevolent thoughts? when does any one apprreciate his wonderful bounty? when is he (present) for the promotion of the prosperity of the man who glorifies and worships him?

॥ ವಿಶೇಷವಿಷಯಗಳು ॥

ಈ ಋಕ್ಕಿನ ಅರ್ಥವು ಸ್ಪಷ್ಟವಾಗಿದೆ. ಈ ಋಕ್ಕಿನಲ್ಲಿಯೂ ಮುಂದಿನ ಕೆಲವು ಋಕ್ಕುಗಳಲ್ಲಿಯೂ ಋಷಿಯು ಇಂದ್ರನ ಗುಣಗಳನ್ನು ಪ್ರಶ್ನರೂಪವಾಗಿ ವರ್ಣಿಸಿದ್ದಾನೆ. ಅವುಗಳ ಅರ್ಥವು ಸುಲಭವಾಗಿಯೂ, ಸ್ಪಷ್ಟವಾಗಿಯೂ ಇರುವುದರಿಂದ ಹೆಚ್ಚು ವಿವರಣೆ ಅವಶ್ಯಕವಿಲ್ಲ.

॥ ಸಂಹಿತಾಪಾಠಃ ॥

ಕ॒ಥಾ ಶೃ॑ಣೋತಿ ಹೂ॒ಯಮಾ॑ನಮಿಂ॒ದ್ರಃ ಕ॒ಥಾ ಶೃ॒ಣ್ವನ್ನವ॑ಸಾಮಸ್ಯ ವೇದ ।
ಕಾ ಅ॑ಸ್ಯ ಪೂ॒ರ್ವೀರು॑ಪ॒ಮಾತಯೋ ಹ ಕ॒ಥೈನ॑ಮಾಹುಃ ಪ॒ಪುರಿಂ ಜ॑ರಿ॒ತ್ರೇ ॥

॥ ಪದಪಾಠಃ ॥

ಕ॒ಥಾ । ಶೃ॒ಣೋ॒ತಿ । ಹೂ॒ಯಮಾ॑ನಂ । ಇಂ॒ದ್ರಃ । ಕ॒ಥಾ । ಶೃ॒ಣ್ವನ್ । ಅವ॑ಸಾಂ । ಅ॒ಸ್ಯ । ವೇ॒ದ ।
ಕಾಃ । ಅ॒ಸ್ಯ॒ । ಪೂ॒ರ್ವೀಃ । ಉ॒ಪ॒ಮಾತ॑ಯಃ । ಹ । ಕ॒ಥಾ । ಏ॒ನ॒ಂ । ಆ॒ಹುಃ॒ । ಪ॒ಪುರಿಂ । ಜ॒ರಿ॒ತ್ರೇ ॥ ೩ ॥

॥ ಸಾಯಣಭಾಷ್ಯಂ ॥

ಇಂದ್ರಃ ಪರಮೈಶ್ವರ್ಯಯುಕ್ತೋ ಹೂಯಮಾನಮಾಹ್ವಯಂತಂ ಸ್ತೋತಾರಂ ಕಥಾ ಕಥಂ ಶೃಣೋತಿ । ಸ್ತೋತ್ರಾಣಿ ಶೃಣ್ವನ್ನಸ್ಯ ಸ್ತೋತುಃ ಸಂಬಂಧೀನ್ಯವಸಾಂ ರಕ್ಷಣಾನಿ ಕಥಾ ಕಥಂ ಚ ವೇದ । ವೇತ್ತಿ । ಪೂರ್ವೀಃ ಪುರಾತನಾನ್ಯಸ್ಯೇಂದ್ರಸ್ಯ ಸಂಬಂಧೀನ್ಯುಪಮಾತಯೋ ದಾನಾನಿ ಕಾ ಹ । ಕಾನಿ ಚಿತ್ ಸಂತೀತಿ ಶೇಷಃ । ತಾನಿ ದಾನಾನಿ ಜರಿತ್ರೇ ಸ್ತೋತುಃ ಸಂಬಂಧಿನಾಂ ಕಾಮಾನಾಂ ಪಪುರಿಂ ಪೂರಯಿತಾರಮೇನಮಿಂದ್ರಂ ಕಥಾ ಕಥಂ ಚಾಹುಃ । ವದಂತಿ ॥

॥ ಪ್ರತಿಪದಾರ್ಥ ॥

ಇಂದ್ರಃ—ಐಶ್ವರ್ಯಯುಕ್ತನಾದ ಇಂದ್ರನು । **ಹೂಯಮಾನಂ**—ಸ್ತುತಿಸಿ ಕರೆಯುವ ಸ್ತೋತೃವನ್ನು (ಅವನ ಸ್ತೋತ್ರವನ್ನು) । **ಕಥಾ**—ಯಾವ ಪ್ರಕಾರವಾಗಿ । **ಶೃಣೋತಿ**—ಕೇಳುತ್ತಾನೆ । **ಶೃಣ್ವನ್**—ಈ ಸ್ತುತಿಯನ್ನು ಕೇಳಿದನಂತರ । **ಅಸ್ಯ**—ಈ ಸ್ತೋತೃವಿಗೆ ಅಪೇಕ್ಷಿತಗಳಾದ । **ಅವಸಾಂ**—ರಕ್ಷಣೆಗಳನ್ನು । **ಕಥಾ**—ಯಾವಪ್ರಕಾರವಾಗಿ । **ವೇದ**—ತಿಳಿಯುತ್ತಾನೆ । **ಅಸ್ಯ**—ಈ ಇಂದ್ರನ । **ಪೂರ್ವೀಃ**—ಪುರಾತನಗಳಾದ । **ಉಪಮಾತಯಃ**—ದಾನಗಳು । **ಕಾಃ ಹ**—ಯಾವ ಪ್ರಕಾರವುಳ್ಳವಾಗಿವೆ । **ಜರಿತ್ರೇ**—ಸ್ತೋತೃವಿನಿಂದ ಅಪೇಕ್ಷಿತವಾದ ಕಾಮುಗಳನ್ನು । **ಪಪುರಿಂ**—ಪೂರೈಸತಕ್ಕ । **ಏನಂ**—ಈ ಇಂದ್ರನನ್ನು । **ಕಥಾ**—ಯಾವ ಬಗೆಯಲ್ಲಿ । **ಆಹುಃ**—ಸ್ತುತಿಸುತ್ತಾರೆ?

॥ भावार्थः ॥

महदैश्वर्ययुक्तनाद इन्द्रनु अवनन्नु स्तुतिसुव स्तुतिकर्तन स्तोत्रवन्नु यावप्रकारं केळुत्तानॆ? ई रीति स्तुतनादनंतर ऽ स्तुतिगळिगॆ प्रतियागि स्तोतृविगॆ अपेक्षितगळाद रक्षणॆगळेनेंबुदन्नु यावरीति तिळियुत्तानॆ? ई इंद्रन पुरातनवाद दानगळु यावप्रकारवुळ्ळवागिरुत्तवॆ? स्तोतृविनिंद अपेक्षितवाद कामगळन्नु पूर्यिसतक्क इंद्रनन्नु होतृगळु यावरीति स्तुतिसबल्लरु?

English Translation

How is it that Indra hears (the worshipper) who invokes him? and hearing, how does he know his necessities? what are his gifts of old, why have they termed him the fulfuller (of the desires) of him who offers praise?

॥ संहितापाठः ॥

कथा सबाधः शशमानो अस्य नशदभि द्रविणं दीध्यानः ।
देवो भुवन्नवेदा मे ऋतानां नमो जगृभ्वाँ अभि यज्जुजोषत् ॥ ५ ॥

॥ पदपाठः ॥

कथा । सऽबाधः । शशमानः । अस्य । नशत् । अभि । द्रविणं । दीध्यानः ।
देवः । भुवत् । नवेदाः । मे । ऋतानां । नमः । जगृभ्वान् । अभि । यत् ।
जुजोषत् ॥ ५ ॥

॥ सायणभाष्यं ॥

सबाधः सपत्नानां पीडासहितः शशमान इंद्रविषयॊं स्तुतिं कुर्वन् दीध्यानः कर्मभिर्दीप्यमानो यजमानोऽस्यैंद्रस्य संबंधि द्रविणं पशवादिधनं कथा कथमभि नशत् । अभिप्राप्नोति । नमो हविर्लक्षणमन्नं जगृभ्वान् गृहीतवानिंद्रो

ಯದ್ಯದಾಭಿ ಜುಜೋಷತ್ ಮಾನುಭಿಸೇವೇತ ತದಾ ದೇವೋ ದೀಧ್ಯಮಾನ ಇಂದ್ರೋ ಮೇ ಮದೀ-ಯಾನಾಮೃತಾನಾಂ ಸ್ತೋತ್ರಾಣಾಂ ನವೇದಾ ಅತಿಶಯೇನ ಜ್ಞಾತಾ ಭುವತ್ । ಭವೇತ್ । ಅತ್ರ ನಿಪಾತಸ್ಯೋ ನಕಾರೋಽತಿಶಯವಾಚೀ ॥

॥ ಪ್ರತಿಪದಾರ್ಥ ॥

ಶಶಮಾನಃ—ಇಂದ್ರನನ್ನು ಸ್ತುತಿಸುವವನೂ । **ದೀಧ್ಯಾನಃ**—ಕರ್ಮಗಳಿಂದ ಪ್ರಕಾಶಿಸುವವನೂ ಆದ ಯಜಮಾನನು । **ಸಬಾಧಃ**—ಶತ್ರುಗಳಿಂದ ಪೀಡಿಸಲ್ಪಡುತ್ತಿದ್ದರೂ ಸಹ । **ಅಸ್ಯ**—ಇಂದ್ರಸಂಬಂಧಿಯಾದ । **ದ್ರವಿಣಂ**—ಪಶ್ವಾದಿ ಧನಗಳನ್ನು । **ಕಥಾ**—ಯಾವಪ್ರಕಾರವಾಗಿ । **ಅಭಿ ನಶತ್**—ಹೊಂದುತ್ತಾನೆ । **ನಮಃ**—ಹವಿಸ್ಸಿನ ರೂಪದ ಅನ್ನವನ್ನು । **ಜಗೃಭ್ವಾನ್**—ಹಿಡಿದಿರುವ ಇಂದ್ರನು । **ಯತ್**—ಯಾವಾಗ । **ಅಭಿ ಜುಜೋಷತ್**—ನನ್ನೆದುರಿಗೆ ಸೇವಿಸಲ್ಪಡುವನೋ ಆಗ । **ದೇವಃ**—ಪೂಜ್ಯನಾದ ಅದೇ ಇಂದ್ರನು । **ಮೇ**—ನನ್ನಿಂದ ಅರ್ಪಿತಗಳಾದ । **ಯತಾನಾಂ**—ಸ್ತೋತ್ರಗಳನ್ನು । **ನವೇದಾಃ**—ತಿಳಿಯುವವನಾಗಿ । **ಭುವತ್**—ಆಗಲಿ

॥ ಭಾವಾರ್ಥ ॥

ಇಂದ್ರನನ್ನು ಸ್ತುತಿಸುತ್ತಲೂ, ಕರ್ಮಗಳಿಂದ ಪ್ರಕಾಶಿಸುತ್ತಲೂ ಇರುವ ಯಜಮಾನನು ಶತ್ರುಗಳಿಂದ ಪೀಡಿಸಲ್ಪಡುತ್ತಿದ್ದರೂ ಸಹ ಇಂದ್ರಸಂಬಂಧಿಯಾದ ಪಶ್ವಾದಿ ಧನಗಳನ್ನು ಯಾವಪ್ರಕಾರವಾಗಿ ಹೊಂದುತ್ತಾನೆ? ಹವಿಸ್ಸಿನ ರೂಪದ ಅನ್ನವನ್ನು ಹಿಡಿದಿರುವ ಇಂದ್ರನು ಯಾವಾಗ ನನಗೆ ಅಭಿಮುಖನಾಗಿದ್ದು ಸೇವಿಸಲ್ಪಡುವನೋ, ಆಗ ಪೂಜ್ಯನಾದ ಅದೇ ಇಂದ್ರನು ನನ್ನಿಂದ ಅರ್ಪಿತಗಳಾದ ಸ್ತೋತ್ರಗಳನ್ನು ತಿಳಿಯುವವನಾಗಿ ಆಗಲಿ.

English Translation

How does he who glorifies Indra, and is diligent in his worship, although encountering opposition, obtain from him wealth? may the divine Indra be the appreciator of my praises, when accepting the sacrificial food he is propitiated towords me.

॥ ಸಂಹಿತಾಪಾಠಃ ॥

ಕಥಾ ಕದಸ್ಯಾ ಉಷಸೋ ವ್ಯುಷ್ಟೌ ದೇವೋ ಮರ್ತಸ್ಯ ಸಖ್ಯಂ ಜುಜೋಷ।
ಕಥಾ ಕದಸ್ಯ ಸಖ್ಯಂ ಸಖಿಭ್ಯೋ ಯೇ ಅಸ್ಮಿನ್ನಾಮಂ ಸುಯುಜಂ ತತಸ್ರೇ ॥ ೫ ॥

॥ पदपाठः ॥

कथा । कत् । अस्याः । उषसः । व्यूऽउष्टौ । देवः । मर्त्यस्य । सख्यम् । जुजोषत ।

कथा । कत् । अस्य । सख्यम् । सखिऽभ्यः । ये । अस्मिन् । कामम् । सुऽयुयुजन् । कतस्ये ॥ ४ ॥

॥ सायणभाष्यम् ॥

देवो द्योतमान इन्द्रोऽस्या उषसो व्युष्टौ प्रभातेमर्त्यस्य मर्त्यस्य मनुष्यस्य स्तोतुः संबन्धि सख्यं सखिकर्म कथा कथं केन प्रकारेण कत्कदा जुजोषत सेवेत । ये स्तोतारोऽस्मिन्निन्द्रे सुयुयुजन सुष्ठु प्रयुञ्जमानं कामं कामनीयं हविः स्तोत्रं च ततस्ये वितेनिरे अस्येन्द्रस्य सख्यं सखिकर्म सखिभ्यः स्तोतृभ्यः कथा कथं कत्कदाचित् । भवेदिति शेषः ॥

॥ प्रतिपदार्थ ॥

देवः—प्रकाशमाननाद इन्द्रनु । अस्याः उषसः—ई उषस्सिन । व्युष्टौ—उदयकालदल्लि । मर्त्यस्य—मानवनाद स्तोतृविगे सहायमाडलु । सख्यं—सुहृत्कर्मवन्नु । कथा—यावा रीतियल्लि । कत्—यावाग । जुजोषत—नेरवेरिसुत्तानॆ । ये—यावा स्तोत्रगळु । अस्मिन्—ई इन्द्रनन्नुद्दॆशिसि । सुयुयुजन्—श्रेष्ठवागि अर्पितवागतक्क । कामं—हविस्सन्नु (अथवा स्तोत्रवन्नु) । ततस्ये—विस्तरिसि हरडिद्दारो (अंतह) । सखिभ्यः—इन्द्रन सुहृत्तुगळाद स्तोतृगळिगॆ । अस्य—ई इन्द्रन । सख्यं—सुहृद्भावद साहाय्यक कर्मवु । कथा—यावा प्रकारवागि । कत्—यावाग (प्रकाशितवागुत्तवॆ)

भावार्थ ॥

प्रकाशमानद इन्द्रनु ई उषस्सिन उदयकालदल्लि मानवनाद स्तोतृविगॆ सहाय माडलु तन्न सुहृत्कर्मवन्नु यावा रीतियल्लि यावाग नेरवेरिसुत्तानॆ ई इन्द्रनन्नुद्दॆशिसि श्रेष्ठवागि अर्पितवागतक्क हविस्सन्नागलि अथवा स्तुतियन्नागलि यारु विस्तृतवागि हरडि अर्पिसिद्दारो अंतह स्तोतृगळिगॆ सहायमाडतक्क इन्द्रन सखिकर्मवु यावाग यावा प्रकारवागि प्रकाशितवागुत्तदॆ

English Translation.

when, in what manner, at the dawning of this morning has the divine Indra accepted the friendship of a mortal? when, and in what manner, (is) his friendship (manifested) to the friends who have spread out the desirable and suitable (offering) before him?

॥ ಸಂಹಿತಾಪಾಠಃ ॥

ಕಿಮಾದಮಿತ್ರಂ ಸಖ್ಯಂ ಸಖಿಭ್ಯಃ ಕದಾ ನು ತೇ ಭ್ರಾತ್ರಂ ಪ್ರ ಬ್ರವಾಮ ।
ಶ್ರಿಯೇ ಸುದೃಶೋ ವಪುರಸ್ಯ ಸರ್ಗಾಃ ಸ್ವರ್ಣ ಚಿತ್ರತಮಮಿಷ್ಟ
ಆ ಗೋಃ ॥ ೬ ॥

॥ ಪದಪಾಠಃ ॥

ಕಿಂ । ಆತ್ । ಅಮಿತ್ರಂ । ಸಖ್ಯಂ । ಸಖಿಭ್ಯಃ । ಕದಾ । ನು । ತೇ । ಭ್ರಾತ್ರಂ । ಪ್ರ । ಬ್ರವಾಮ ।
ಶ್ರಿಯೇ । ಸುದೃಶಃ । ವಪುಃ । ಅಸ್ಯ । ಸರ್ಗಾಃ । ಸ್ವಃ । ನ । ಚಿತ್ರತಮಂ । ಇಷೇ । ಆ । ಗೋಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ವಯಂ ಯಜಮಾನಾಸ್ತೇ ತ್ವದೀಯಮಮಿತ್ರಂ ಶತ್ರೂನಭಿಭಾವುಕಂ ಸಖ್ಯಂ ಸಖಿಕರ್ಮ ಸಖಿಭ್ಯಃ ಸ್ತೋತೃಭ್ಯಃ ಕಿಮಾತ್ ಕಿಂ ಸ್ವಿತ್ ಪ್ರ ಬ್ರವಾಮ । ಪ್ರಕರ್ಷೇಣ ವದೇಮ । ತೇ ತ್ವದೀಯಂ ಭ್ರಾತ್ರಂ ಭ್ರಾತೃಕರ್ಮ ಚ ಕದಾ ನು ಕದಾ ಖಲು ಪ್ರ ಬ್ರವಾಮ । ಸುದೃಶಃ ಶೋಭನದರ್ಶನಸ್ಯಾಸ್ಯೇಂದ್ರಸ್ಯ ಸಂಬಂಧಿನಃ ಸರ್ಗಾ ಉದ್ಯೋಗಾಃ ಶ್ರಿಯೇ ಸರ್ವೇಷಾಂ ಸ್ತೋತೃಣಾಂ ಶ್ರೇಯಸೇ । ಭವಂತೀತಿ ಶೇಷಃ । ಸ್ವರ್ಣ ಸೂರ್ಯೋ ಯಥಾ ದರ್ಶನೀಯತಮಸ್ತಥಾ ಗೋರ್ಗಂತುರಿಂದ್ರಸ್ಯ ಚಿತ್ರತಮಂ ದರ್ಶನೀಯತಮಂ ವಪುಃ ಶರೀರಮೇಷೇ । ಆ ಸಮಂತಾತ್ಸರ್ವೈರಿಷ್ಯತೇ ॥

॥ ಪ್ರತಿಪದಾರ್ಥ ॥

ಇಂದ್ರ—(ಎಲೈ ಇಂದ್ರನೇ) । **ಅಮಿತ್ರಂ**—ಶತ್ರುನಾಶಕವಾದ । **ಸಖ್ಯಂ**—ನಿನ್ನ ಸುಹೃತ್ಕರ್ಮವನ್ನು । **ಸಖಿಭ್ಯಃ**—ನಿನ್ನ ಸುಹೃತ್ತುಗಳಾದ ಸ್ತೋತೃಗಳಿಗೆ । **ಕಿಮಾತ್**—ಯಾವಪ್ರಕಾರದಲ್ಲಿಯಾದರೂ । **ಪ್ರ ಬ್ರವಾಮ**—ಪ್ರಶಂಸಿಸಿ ಹೇಳಬಹುದೇ । **ತೇ**—ನಿನ್ನ । **ಭ್ರಾತ್ರಂ**—ಭ್ರಾತೃಕರ್ಮವು । **ಕದಾ ನು**—ಯಾವಾಗ ಪ್ರಶಂಸಿಸಲ್ಪಡಬೇಕು । **ಸುದೃಶಃ**—ಉತ್ತಮವಾದ ಸ್ವರೂಪವುಳ್ಳ । **ಅಸ್ಯ**—ಈ ಇಂದ್ರನ । **ಸರ್ಗಾಃ**—ವ್ಯಾಪಾರಗಳೆಲ್ಲವೂ । **ಶ್ರಿಯೇ**—(ಸಕಲ ಸ್ತೋತೃಗಳ) ಶ್ರೇಯಸ್ಸಿಗೂ ಕಾರಣವಾಗಿವೆ । **ಸ್ವಃ ನ**—ಸೂರ್ಯನಂತೆ ಪ್ರಭಾಯುತನಾಗಿ । **ಗೋಃ**—ಸಂಚರಿಸತಕ್ಕ ಇಂದ್ರನ । **ಚಿತ್ರತಮಂ**—ಅತ್ಯಂತ ಆಕರ್ಷಕವಾದ । **ವಪುಃ**—ಶರೀರವು । **ಆ ಇಷೇ**—ಎಲ್ಲರಿಂದಲೂ ಆದರಿಸಲ್ಪಡುತ್ತದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಶತ್ರುನಾಶಕವಾದ ನಿನ್ನ ಸುಹೃತ್ಕರ್ಮವನ್ನು ನಿನ್ನ ಸುಹೃತ್ತುಗಳಿಂದ ಸ್ತೋತೃಗಳಿಗೆ ಯಾವವಿಧದಲ್ಲಿಯಾದರೂ ಪ್ರಶಂಸಿಸಿ ಹೇಳಬಹುದೇ? ನಿನ್ನ ಭ್ರಾತೃಕರ್ಮವು ಯಾವಾಗ ಪ್ರಶಂಸಿತವಾಗಬೇಕು?

ಉತ್ತಮವಾದ ಸ್ವರೂಪವುಳ್ಳ ಈ ಇಂದ್ರನ ಕಾರ್ಯಗಳೆಲ್ಲವೂ ಸಕಲ ಸ್ತೋತೃಗಳ ಶ್ರೇಯಸ್ಸಿಗೂ ಕಾರಣವಾಗಿವೆ. ಸೂರ್ಯನಂತೆ ಪ್ರಭಾಯುತನಾಗಿ ಸಂಚರಿಸತಕ್ಕ ಇಂದ್ರನ ಅತ್ಯಂತ ಆಕರ್ಷಕವಾದ ಶರೀರವು ಎಲ್ಲರಿಂದಲೂ ಆದರಿಸಲ್ಪಡುತ್ತದೆ.

English Translation

May we in any manner proclaim your friendship for your friends? when may (we make known) your fraternal regard? the efforts of the well-looking Indra are for the happiness of all. the wonderful form of moving (Indra) is, like the sun, ever wished for.

॥ ಸಂಹಿತಾಪಾಠಃ ॥

द्रुहं जिघ्रांसन्ध्वरसमनिन्द्रां तेतिक्ते तिग्मा तुजसे अनीका।
ऋणा चिद्यत्र ऋणया न उग्रो दूरे अज्ञाता उषसो बबाधे ॥ ६ ॥

॥ ಪದಪಾಠಃ ॥

द्रुहं । जिघ्रांसन् । ध्वरसं । अनिन्द्रां । तेतिक्ते । तिग्मा । तुजसे । अनीका ।
ऋणा । चित् । यत्र । ऋण्यया । नः । उग्रः । दूरे । अज्ञाताः । उषसः । बबाधे ॥

॥ ಸಾಯಣಭಾಷ್ಯಂ ॥

अयमिन्द्रो द्रुहं द्रोहं कुर्वतीं ध्वरसं हिंसिकामनिन्द्रामिन्द्रमजानतीं राक्षसीं जिघ्रांसन् हंतुमिच्छन् तिग्मा तिग्मानि पूर्वमेव तीक्ष्णान्यनीकानीकान्यायुधानि तुजसे तद्वधाय तेतिक्ते। अत्यर्थं तीक्ष्णीकरोति। यत्र योसावृषभः सुतदुपलक्षितेप्यहःस्वृणा चित् ऋणान्यपि नोऽस्यान्बाधंत इति शेषः। ता उषसश्चोग्र उद्गूर्णबल ऋणया ऋणस्य हंतेंद्रः। यातिर्वधकर्मा। दूरेऽज्ञाता अननुभूताः सतीर्बबाधे। अपीडयत् ॥

॥ ಶಬ್ದಾರ್ಥ ॥

(ಇಂದ್ರಃ—ಇಂದ್ರನು) । **ದ್ರುಹಂ**—ದ್ರೋಹವನ್ನಾಚರಿಸುವವಳೂ । **ಧ್ವರಸಂ**—ಹಿಂಸಾಕಾರಕಳೂ । **ಅನಿಂದ್ರಾಂ**—ಇಂದ್ರನನ್ನು ಪೂಜಿಸದವಳೂ ಆದ ರಾಕ್ಷಸಿಯನ್ನು । **ಜಿಘಾಂಸನ್**—ಕೊಲ್ಲಲಿಚ್ಛಿಸಿ । **ತಿಗ್ಮಾ**—(ಮೊದಲೇ) ಹರಿತವಾಗಿದ್ದ । **ಅನೀಕಾ**—ಆಯುಧಗಳನ್ನು । **ತುಜಸೇ**—ಅವಳನ್ನು ಕೊಲ್ಲಲು । **ತೇತಿಕ್ತೇ**—ಇನ್ನೂ ಹರಿತವಾಗುವಂತೆ ಮಾಡಿದನು । **ಯತ್ರ**—ಯಾವ ಉಷಃಕಾಲಗಳಲ್ಲಿ (ಯಾವ ದಿನಗಳಲ್ಲಿ) । **ಋಣಾ ಚಿತ್**—ಋಣಗಳೂ ಸಹ (ಶತ್ರುಗಳಂತೆ) । **ನಃ**—ನಮ್ಮನ್ನು ಹಿಂಸಿಸುವುವೋ ಅಂತಹ । **ಉಷಸಃ**—ಉಷಃಕಾಲಗಳನ್ನು (ಅಂತಹ ದಿನಗಳನ್ನು) । **ಉಗ್ರಃ**—ಭಯಂಕರವಾದ ಬಲವುಳ್ಳವನೂ । **ಋಣಯಾಃ**—ಋಣನಾಶಕನೂ ಆದ ಇಂದ್ರನು । **ದೂರೇ**—ಬಹಳ ದೂರದಲ್ಲಿ । **ಅಜ್ಞಾತಾಃ**—ನಮ್ಮ ಗೋಚರಕ್ಕೆ ಬರದಂತೆ । **ಬಬಾಧೇ**—ತಳ್ಳಿದ್ದಾನೆ.

॥ ಭಾವಾರ್ಥ ॥

ದ್ರೋಹವನ್ನಾಚರಿಸುವನಳೂ, ಹಿಂಸಾಕಾರಕಳೂ, ಇಂದ್ರನನ್ನು ಪೂಜಿಸದವಳೂ ಆದ ರಾಕ್ಷಸಿಯನ್ನು ಕೊಲ್ಲಲಿಚ್ಛಿಸಿ, ಇಂದ್ರನು, ಮೊದಲೇ ಹರಿತವಾಗಿದ್ದ ಆಯುಧಗಳನ್ನು ಅವಳ ನಾಶಕ್ಕಾಗಿ ಇನ್ನೂ ಹರಿತವಾಗುವಂತೆ ಮಾಡಿದನು ಯಾವ ದಿನಗಳಲ್ಲಿ ಋಣಗಳೂ ಸಹ ನಮ್ಮನ್ನು ಶತ್ರುಗಳಂತೆ ಹಿಂಸಿಸುವುವೋ ಅಂತಹ ದಿನಗಳನ್ನು, ಭಯಂಕರವಾದ ಶಕ್ತಿಯುಳ್ಳವನೂ, ಋಣನಾಶಕನೂ ಆದ ಇಂದ್ರನು, ನಮ್ಮ ಗೋಚರಕ್ಕೇ ಬರದಂತೆ ದೂರ ತಳ್ಳಿದ್ದಾನೆ ಎಂದರೆ, ನಾವು ಎಂದೂ ಋಣಬಾಧೆಯಿಂದ ನರಳದಂತೆ ನಮ್ಮನ್ನು ರಕ್ಷಿಸಿದ್ದಾನೆ

English Translation

Resolving to kill the oppressing, malevolent (Rakshasi), not acknowleging Indra, he sharpened his sharp weapons for (her) destruction and the fierce (Indra), the canceller of debts, has kept afar the unknown dawns in which the debts (are to be paid)

॥ ವಿಶೇಷನಿಷಯಗಳು ॥

(ಇಂದ್ರಃ) **ದ್ರುಹಂ ಧ್ವರಸಂ ಅನಿಂದ್ರಾಂ ಜಿಘಾಂಸನ್ ತಿಗ್ಮಾ ಅನೀಕಾ ತುಜಸೇ ತೇತಿಕ್ತೇ—ಆಯಮಿಂದ್ರಃ ದ್ರೋಹಂ ಕುರ್ವತೀಂ ಹಿಂಸಿಕಾಂ ಇಂದ್ರಮಜಾನತೀಂ ರಾಕ್ಷಸೀಂ ಹಂತುಮಿಚ್ಛನ್ ಪೂರ್ವಮೇವ ತೀಕ್ಷ್ಣಾನಿ ಆಯುಧಾನಿ ತದ್ವಧಾಯ ಅತ್ಯರ್ಥಂ ತೀಕ್ಷ್ಣೀಕರೋತಿ ।** ಇತರರ ವಿಷಯದಲ್ಲಿ ದ್ರೋಹಬುದ್ಧಿಯಂದ ವರ್ತಿಸುವವಳೂ ಹಿಂಸೆಯನ್ನುಂಟುಮಾಡುವನಳೂ, ಇಂದ್ರನನ್ನು ಕಂಡರೆ ದ್ವೇಷಿಸುವವಳೂ ಆದ ಓರ್ವ ರಾಕ್ಷಸಿಯನ್ನು ಕೊಲ್ಲುವುದಕ್ಕಾಗಿ ಇಂದ್ರನು ತನ್ನ ಆಯುಧವನ್ನು ಮೊದಲೇ ಹರಿತವಾಗಿದ್ದರೂ, ಇನ್ನೂ ಹರಿತವಾಗುವಂತೆ ಮಾಡಿದನು. ಇಲ್ಲಿ ಹೇಳಿರುವ ರಾಕ್ಷಸಿಯು ಯಾರೆಂಬುದು ವಿಶದವಾಗಿಲ್ಲ ಋಷಿಜನರಿಗೆ ಸೆಹಿಂಯನ್ನುಂಟುಮಾಡುತ್ತಿದ್ದ ದಸ್ಯುಜಾತಿಗೆ ಸೇರಿದ ದುಷ್ಟಸ್ವಭಾವದ ಸ್ತ್ರೀ ಇರಬಹುದು

ಧ್ವರಶಬ್ದಕ್ಕೆ ಹಿಂಸೆಯೆಂಬರ್ಥವನ್ನು ಯಾಸ್ಕರು—**ಧ್ವರತಿರ್ಹಿಂಸಾಕರ್ಮಾ** (ನಿ. ೧–೮) ಎಂಬ ನಿರ್ವಚನದಿಂದ ಹೇಳಿರುವರು. **ತಿಗ್ಮಂ** ಎಂಬ ಶಬ್ದವು ವಜ್ರಾಯುಧನಾಮಗಳಲ್ಲಿ ಪರಿತವಾಗಿದ್ದರೂ (ನಿ ೩–೧೧) **ತಿಗ್ಮ** ಶಬ್ದಕ್ಕೆ ಹರಿತವಾದ ಎಂಬರ್ಥವಿರುವುದನ್ನು ಯಾಸ್ಕರು—

ಇಮಾ ರುದ್ರಾಯ ಸ್ಥಿರಧನ್ವನೇ ಗಿರಃ ಕ್ಷಿಪ್ರೇಷವೇ ದೇವಾಯ ಸ್ವಧಾವ್ನೇ ।
ಅಷಾಳ್ಹಾಯ ಸಹಮಾನಾಯ ವೇಧಸೇ ತಿಗ್ಮಾಯುಧಾಯ ಭರತಾ ಶೃಣೋತು ನಃ ॥

(ಋ. ಸಂ. ೭–೪೬–೧)

ಎಂಬ ಋಕ್ಕನ್ನು ದಾಹರಿಸಿ ಆದರಲ್ಲಿರುವ **ತಿಗ್ಮಾಯುಧಾಯ** ಎಂಬ ಶಬ್ದಕ್ಕೆ **ತೀಕ್ಷ್ಣಾಯುಧಾಯ** ಎಂದರ್ಥ ವಿವರಣೆಮಾಡಿರುವರು (ನಿ ೧೦–೭) **ತುಜಃ** ಎಂಬ ಶಬ್ದವೂ ವಜ್ರನಾಮಗಳಲ್ಲಿ ಪರಿತವಾಗಿದೆ (ನಿ. ೩–೧೧) ಇಲ್ಲಿ **ತುಜ ಹಿಂಸಾಯಾಂ** ಎಂಬ ಧಾತುವಿನಿಂದ ನಿಷ್ಪನ್ನವಾಗಿದೆಯೆಂದು **ತುಜಸೇ** ಎಂಬ ಶಬ್ದಕ್ಕೆ, ಕೊಲ್ಲುವುದಕ್ಕೆ ಎಂಬರ್ಥವನ್ನು ಹೇಳಿದೆ.

ಯತ್ರ ಋಣಾಚಿತ್ ನಃ ಉಷಸಃ ಉಗ್ರಃ ಋಣಯೋಃ ದೂರೇ ಅಜ್ಞಾತಾಃ ಬಬಾಧೇ—ಈ ವಾಕ್ಯದ ಅರ್ಥವು ಸ್ಪಷ್ಟವಾಗಿಲ್ಲ. ಶತ್ರುಗಳಂತೆ ಮನಸ್ಸಿಗೆ ಹಿಂಸೆಯನ್ನುಂಟುಮಾಡುವ ಋಣಬಾಧೆಗಳು (ಸಾಲಗಳು) ಉಷಃಕಾಲಗಳು ಪ್ರತಿದಿನದಲ್ಲಿಯೂ ಪ್ರಾಪ್ತವಾಗುವಂತೆ, ಯಾವಾಗಲೂ ಎಂದರೆ ಪ್ರತಿದಿವಸದಲ್ಲಿಯೂ ನಮಗ ಕ್ಲೇಶವನ್ನುಂಡುಮಾಡುತ್ತವೆ. ಅವುಗಳ ಬಾಧೆಯನ್ನು ಇಂದ್ರನು ಪರಿಹರಿಸಿದ್ದಾನೆ, ಎಂದರೆ ನಮಗೆ ಧನಾದಿಗಳನ್ನು ಕೊಟ್ಟು ನಮಗೆ ಸಾಲಗಾರರ ಹಿಂಸೆಯಿಲ್ಲದಂತೆ ನಮಗೆ ಉಪಕಾರ ಮಾಡಿದ್ದಾನೆ ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ಋತಸ್ಯ ಹಿ ಶುರುಧಃ ಸಂತಿ ಪೂರ್ವೀರೃತಸ್ಯ ಧೀತಿರ್ವೃಜಿನಾನಿ ಹಂತಿ ।
ಋತಸ್ಯ ಶ್ಲೋಕೋ ಬಧಿರಾ ತತರ್ದ ಕರ್ಣಾ ಬುಧಾನಃ ಶುಚಮಾನ ಆಯೋಃ ॥ ೮ ॥

॥ ಪದಪಾಠಃ ॥

ಋತಸ್ಯ । ಹಿ । ಶುರುಧಃ । ಸಂತಿ । ಪೂರ್ವೀಃ । ಋತಸ್ಯ । ಧೀತಿಃ । ವೃಜಿನಾನಿ । ಹಂತಿ ।
ಋತಸ್ಯ । ಶ್ಲೋಕಃ । ಬಧಿರಾ । ತತರ್ದ । ಕರ್ಣಾ । ಬುಧಾನಃ । ಶುಚಮಾನಃ । ಆಯೋಃ ॥ ೯ ॥

॥ ಸಾಯಣಭಾಷ್ಯಂ ॥

ಋತಪೇಯನಾಮ್ನ್ಯೇಕಾಹೇ ಮರುತ್ವತೀಯನಿಷ್ಕೇವಲ್ಯಶಸ್ತ್ರಯೋರ್ನಿವಿದ್ಧಾನಾತ್ಪುರಸ್ತಾದ್ಯ-ತಸ್ಯ ಹೀತ್ಯೇತದಾದಿಕೇ ದ್ವೇ ಋಚೌ ಕ್ರಮೇಣ ಶಂಸನೀಯೇ । ಸೂತ್ರಿತಂ ಚ । ಋತಸ್ಯ ಹಿ ಶುರುಧಃ ಸಂತಿ ಪೂರ್ವೀರಿತಿ ಸೂಕ್ತಮುಖೀಯೇ । ಆ. ೯-೭ । ಇತಿ ॥

ಅತ್ರ ಋತಶಬ್ದೇನೇಂದ್ರೋ ವಾದಿತ್ಯೋ ವಾ ಸತ್ಯಂ ವಾ ಯಜ್ಞೋ ವೋಚ್ಯತೇ ॥ ಋತಸ್ಯ ಋತದೇವಸ್ಯ ಸಂಬಂಧಿನ್ಯಃ ಪೂರ್ವೀರ್ಬಹ್ವ್ಯಃ ಶುರುಧ ಆಪಃ ಸಂತಿ ಹಿ । ಭವಂತಿ ಖಲು । ಋತಸ್ಯ ಋತದೇವಸ್ಯ ಸಂಬಂಧಿನೀ ಧೀತಿಃ ಪ್ರಜ್ಞಾ ತದ್ವಿಷಯಾ ಸ್ತುತಿರ್ವಾ ವೃಜಿನಾನಿ ವರ್ಜನೀಯಾನಿ ಪಾಪಾನಿ ಹಂತಿ । ಹಿನಸ್ತಿ । ಋತಸ್ಯ ಋತದೇವಸ್ಯ ಸಂಬಂಧಿನೀ ಶ್ಲೋಕಃ ಸ್ತುತಿರೂಪಾ ವಾಗಾಯೋರ್ಗಂತುರ್ಮನುಷ್ಯಸ್ಯ ಸಂಬಂಧಿನೌ ಬಧಿರಾ ಬಧಿರೌ ಪ್ರತಿಬದ್ಧೌ ಕರ್ಣಾ ಕರ್ಣೌ ತತರ್ದ । ತೃಣತ್ತಿ । ಕೀದೃಶಃ ಶ್ಲೋಕಃ । ಬುಧಾನೋ ಬುಧ್ಯಮಾನಃ ಶುಚಮಾನೋ ದೀಪ್ಯಮಾನಃ ॥

॥ ಪ್ರತಿಪದಾರ್ಥ ॥

ಋತಸ್ಯ—ಋತದೇವನ ಸಂಬಂಧಿಯಾದ । **ಶುರುಧಃ**—ಉದಕಗಳು । **ಪೂರ್ವೀಃ**—ಬಹುಪ್ರಕಾರವಾದವೆಂದು । **ಸಂತಿ ಹಿ**—ಪ್ರಸಿದ್ಧವಾಗಿವೆಯಲ್ಲವೇ ? **ಋತಸ್ಯ**—ಋತದೇವನಿಗೆ ಸಂಬಂಧಿಸಿದ । **ಧೀತಿಃ**—ಪ್ರಜ್ಞೆಯು (ಅಥವಾ ತದ್ವಿಷಯಕವಾದ ಸ್ತುತಿಯು । **ವೃಜಿನಾನಿ**—ಪಾಪಗಳನ್ನು । **ಹಂತಿ**—ನಾಶಮಾಡುತ್ತದೆ । **ಋತಸ್ಯ**—ಋತದೇವನನ್ನು ದ್ವೇಶಿಸಿದುದೂ । **ಬುಧಾನಃ**—ಪ್ರಜ್ಞಾಪೂರಿತವಾದುದೂ । **ಶುಚಮಾನಃ**—ಪ್ರಕಾಶಮಾನವಾದುದೂ ಆದ । **ಶ್ಲೋಕಃ**—ಸ್ತುತಿಯು । **ಆಯೋಃ**—ಮಾನವನ । **ಬಧಿರಾ**—ಕಿವುಡಾದ । **ಕರ್ಣಾ**—ಕಿವಿಗಳನ್ನು । **ತತರ್ದ**—ತೆರೆಯುತ್ತದೆ (ಶ್ರವಣಶಕ್ತಿಯನ್ನು ಕೊಡುತ್ತದೆ)

॥ ಭಾವಾರ್ಥ ॥

ಋತದೇವನಿಗೆ ಸಂಬಂಧಿಗಳಾದ ಉದಕಗಳು ಬಹುಪ್ರಕಾರವಾಗಿವೆಯೆಂದು ಪ್ರಸಿದ್ಧವಾಗಿದೆ ಋತದೇವನನ್ನು ದ್ವೇಶಿಸಿದ ಸ್ತುತಿಯು ಪಾಪವನ್ನು ನಾಶಮಾಡುತ್ತದೆ ಋತದೇವನನ್ನು ದ್ವೇಶಿಸಿದುದೂ, ಪ್ರಜ್ಞಾಪೂರಿತವಾದುದೂ, ಪ್ರಕಾಶಮಾನವಾದುದೂ ಆದ ಸ್ತುತಿಯು ಮಾನವನ ಕಿವುಡಾದ ಕಿವಿಗಳನ್ನು ತೆರೆದು ಅವುಗಳಿಗೆ ಶ್ರವಣಶಕ್ತಿಯನ್ನು ಕೊಡುತ್ತದೆ

English Translation

Many are the waters of Rita · the adoration of Rita destroys iniquities, the intelligent and brilliant praise of Rita has opened the deaf (ears) of man.

॥ ವಿಶೇಷವಿಷಯಗಳು ॥

ಈ ಋಕ್ಕಿನ ಭಾಷ್ಯದಲ್ಲಿ ಸಾಯಣರು— **ಅತ್ರ ಋತಶಬ್ದೇನೇಂದ್ರೋ ವಾದಿತ್ಯೋ ವಾ ಸತ್ಯಂ ವಾ ಯಜ್ಞೋ ವೋಚ್ಯತೇ** । ಎಂದರೆ, ಈ ಋಕ್ಕಿನಲ್ಲಿಯೂ, ಮುಂದಿನ ಎರಡು ಋಕ್ಕುಗಳಲ್ಲಿಯೂ ಇರುವ ಋತ ಶಬ್ದವು ಋತಶಬ್ದವಾಚ್ಯನಾದ ದೇವತೆಯನ್ನು ನಿರ್ದೇಶಿಸುವುದು. ಈ ದೇವತೆಯು—ಇಂದ್ರ, ಆದಿತ್ಯ, ಸತ್ಯ, ಯಜ್ಞ ಎಂಬ ದೇವತೆಗಳಲ್ಲಿ ಯಾರಾದರೂ ಆಗಬಹುದು ಎಂದು ಹೇಳಿದಾರೆ. **ಋತ** ಶಬ್ದಕ್ಕೆ—ಯಾಸ್ಕರು **ಸತ್ಯಂ ವಾ ಯಜ್ಞಂ ವಾ** ಎಂದು ನಿರ್ವಚನವನ್ನು ಹೇಳಿರುವರು. ಇಲ್ಲಿ ಉದಕ, ವೃಷ್ಟಿ, ಅನ್ನ, ಸ್ತುತಿ ಮೊದಲಾದ ವಿಷಯಗಳು ಪ್ರಸಕ್ತವಾಗಿರುವುದರಿಂದ ಇವೆಲ್ಲವೂ ಮೇಲೆ ಹೇಳಿದ ಯಾವ ದೇವತೆಗಾದರೂ ಅನ್ವಯಿಸಬಹುದು.

ಋತಪೇಯವೆಂಬ ಒಂದು ದಿವಸದ ಮಟ್ಟಿಗೆ ಮಾಡುವ ಯಾಗದಲ್ಲಿ ಮರುತ್ವತೀಯ ಮತ್ತು ನಿಷ್ಕೇವಲ್ಯಶಸ್ತ್ರ ಮಂತ್ರಗಳ ಪಠನಕ್ಕೆ ಪ್ರಾರಂಭದಲ್ಲಿ ನಿವಿತ್ಸೂಕ್ತವನ್ನು ಪಠಿಸುವರು ಆ ನಿವಿತ್ಸೂಕ್ತಕ್ಕೆ ಪೂರ್ವಭಾವಿಯಾಗಿ **ಋತಸ್ಯೃಹಿ** ಎಂದು ಮೊದಲಾದ ಈ ಸೂಕ್ತದ ಎರಡು ಋಕ್ಕುಗಳನ್ನು (ಈ ಸೂಕ್ತದ ೮-೯ನೇ ಋಕ್ಕುಗಳನ್ನು) ಕ್ರಮವಾಗಿ ಎಂದರೆ ಒಂದೊಂದು ನಿವಿದ್ಧಾನೀಯಸೂಕ್ತಕ್ಕೆ ಮೊದಲು ಒಂದೊಂದು ಋಕ್ಕಿನಂತೆ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಋತಸ್ಯ ಹಿ ಶುರುಧಃ ಸಂತಿ ಪೂರ್ವೀರಿತಿ ಸೂಕ್ತಮುಖೀಯೇ** ಎಂಬ ಸೂತ್ರದಿಂದ (೮ ೯-೭) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಋತಸ್ಯ ದೃಳ್ಹಾ ಧರುಣಾನಿ ಸಂತಿ ಪುರೂಣಿ ಚಂದ್ರಾ ವಪುಷೇ ವಪೂಂಷಿ ।
ಋತೇನ ದೀರ್ಘಮಿಷಣಂತ ಪೃಕ್ಷ ಋತೇನ ಗಾವ ಋತಮಾ ವಿವೇಶುಃ ॥

॥ ಪದಪಾಠಃ ॥

ಋತಸ್ಯ । ದೃಳ್ಹಾ । ಧರುಣಾನಿ । ಸಂತಿ । ಪುರೂಣಿ । ಚಂದ್ರಾ । ವಪುಷೇ । ವಪೂಂಷಿ ॥

ಋತೇನ । ದೀರ್ಘಂ । ಇಷಣಂತ । ಪೃಕ್ಷಃ । ಋತೇನ । ಗಾವಃ । ಋತಂ । ಆ । ವಿವೇಶುಃ ॥ ೯ ॥

॥ ಸಾಯಣಭಾಷ್ಯಂ ॥

ವಪುಷೇ ವಪುಷ್ಯತೇ । ಷಷ್ಠ್ಯರ್ಥೇ ಚತುರ್ಥೀ । ಋತಸ್ಯ ಋತದೇವಸ್ಯ ಸಂಬಂಧೀನಿ ದೃಳ್ಹಾ ದೃಢಾನಿ ಧರುಣಾನಿ ಧಾರಕಾಣಿ ಪುರೂಣಿ ಬಹೂನಿ ಚಂದ್ರಾ ಚಂದ್ರಾಣ್ಯಾಹ್ಲಾದಕಾನಿ ವಪೂಂಷಿ ರೂಪಾಣಿ ಸಂತಿ । ಭವಂತಿ । ಋತೇನ ಋತದೇವೇನ ದೀರ್ಘಮತ್ಯಧಿಕಂ ಪೃಕ್ಷೋಽನ್ನಮಿಷಣಂತ । ಸ್ತೋತಾರ ಇಚ್ಛಂತಿ । ಋತೇನ ಋತದೇವೇನ ಗಾವೋ ಧೇನವ ಋತಂ ಯಜ್ಞಂ ದಕ್ಷಿಣಾತ್ಮೇನಾ ವಿವೇಶುಃ । ಪ್ರವಿಶಂತಿ । ಯದ್ವಾ । ಗಾವೋ ರಶ್ಮಯ ಋತಮುದಕಮಾ ವಿವೇಶುಃ ॥

॥ ಪ್ರತಿಪದಾರ್ಥ ॥

ವಪುಷೇ—ಉತ್ತಮವಾದ ರೂಪವುಳ್ಳ । **ಋತಸ್ಯ**—ಋತದೇವನ । **ದೃಳ್ಹಾ**—ದೃಢವಾದವೂ **ಧರುಣಾನಿ**—ಲೋಕವನ್ನು ಧರಿಸುವ ಶಕ್ತಿಯುಳ್ಳವೂ ಆದ । **ವಪೂಂಷಿ**—ರೂಪಗಳು । **ಪುರೂಣಿ**—ಬಹು ಪ್ರಕಾರವಾಗಿಯೂ । **ಚಂದ್ರಾ**—ಆಹ್ಲಾದಕಾರಕವಾಗಿಯೂ । **ಸಂತಿ**—ಇವೆ । **ಋತೇನ**—ಋತದೇವನ ಸಹಾಯದಿಂದ । **ದೀರ್ಘಂ**—ಅತಿಪ್ರಭೂತವಾದ । **ಪೃಕ್ಷಃ**—ಅನ್ನವನ್ನು । **ಇಷಣಂತ**—(ಸ್ತೋತೃಗಳು) ಇಚ್ಛಿಸಿ (ಪಡೆಯುತ್ತಾರೆ) । **ಋತೇನ**—ಋತದೇವನಿಂದಲೇ । **ಗಾವಃ**—ಧೇನುಗಳು । **ಋತಂ**—ಯಜ್ಞವನ್ನು । **ಆ ವಿವೇಶುಃ**—ಪ್ರವೇಶಿಸುತ್ತವೆ

॥ ಭಾವಾರ್ಥ ॥

ಉತ್ತಮವಾದ ರೂಪವುಳ್ಳ ಋತದೇವನ ದೃಢವಾದವೂ, ಲೋಕವನ್ನು ಧರಿಸುವ ಶಕ್ತಿಯುಳ್ಳವೂ ಆದ ರೂಪಗಳು ಬಹುಪ್ರಕಾರವಾಗಿಯೂ ಆಹ್ಲಾದಕಾರಕವಾಗಿಯೂ ಇವೆ ಋತದೇವನ ಸಹಾಯದಿಂದಲೇ ಸ್ತೋತೃಗಳು ಪ್ರಭೂತವಾದ ಅನ್ನವನ್ನು ಪಡೆಯುತ್ತಾರೆ. ಋತದೇವನ ಸಹಾಯದಿಂದಲೇ ಧೇನುಗಳು ಯಜ್ಞವನ್ನು ಪ್ರವೇಶಿಸುತ್ತವೆ.

English Translation.

Many are the stable, sustaining, delightful forms of the embodied Rita : by Rita are (the pious) expectant of food, by Rita have the cows entered into the sacrifice.

॥ ಸಂಹಿತಾಪಾಠಃ ॥

ಋತಂ ಯೇಮಾನ ಋತಮಿದ್ವನೋತ್ವೃತಸ್ಯ ಶುಷ್ಮಸ್ತುರಯಾ ಉ ಗವ್ಯುಃ।
ಋತಾಯ ಪೃಥ್ವೀ ಬಹುಲೇ ಗಭೀರೇ ಋತಾಯ ಧೇನೂ ಪರಮೇ ದುಹಾತೇ ॥ ೧೦ ॥

॥ ಪದಪಾಠಃ ॥

ಋತಂ । ಯೇಮಾನಃ । ಋತಂ । ಇತ್ । ವನೋತಿ । ಋತಸ್ಯ । ಶುಷ್ಮಃ । ತುರ್ವಯಾಃ । ಊಂ ಇತಿ । ಗವ್ಯುಃ ।
ಋತಾಯ । ಪೃಥ್ವೀ ಇತಿ । ಬಹುಲೇ ಇತಿ । ಗಭೀರೇ ಇತಿ । ಋತಾಯ । ಧೇನೂ ಇತಿ । ಪರಮೇ ಇತಿ । ದುಹಾತೇ ಇತಿ ॥ ೧೦ ॥

॥ सायणभाष्यं ॥

ऋतमृतदेवं योमानो नियच्छैन् स्तुतिभिर्वशीकुर्वन् स्तोता ऋतमिद् ऋतदेवमेव वनोति । संभजते । ऋतस्य ऋतदेवस्य संबन्धि शुष्मो बलं तुरयास्तूर्णं गवूयुः । उ इति चार्थे । जलकामश्च भवति । बहुलेविस्तीर्णे गभीरे दुरवगाहे पृथ्वी द्यावापृथिव्यावृताय ऋतदेवाय भवतः । धेनू प्रीणयित्र्यौ परमे उत्कृष्टे द्यावापृथिव्यावृताय ऋतदेवायैव दुहाते । दोहनं कुर्वाते ॥

॥ प्रतिपदार्थ ॥

ऋतं—ऋतदेवनನ್ನು । **योमानः**—(स्तुतिगಳಿಂದ) ತನ್ನ ವಶಕ್ಕೆ ಬರಮಾಡಿಕೊಂಡು । **ऋतमिद्**—ಅದೇ ಋತವನ್ನೇ । **वनोति**—(स्तोतृವು) ಸೇವಿಸುತ್ತಾನೆ । **ऋतस्य**—ಋತದೇವನ । **शुष्मः**—ಬಲವು । **तुरयाः**—ವೇಗವಾಗಿ ಬೆಳೆಯತಕ್ಕದ್ದೂ । **उ**—ಮತ್ತು । **गवूयुः**—ಉದಕವನ್ನು ಅಪೇಕ್ಷಿಸುವುದಾಗಿಯೂ ಇದೆ । **बहुलेः**—ವಿಸ್ತೃತವಾದವೂ । **गभीरेः**—ಅತ್ಯಗಾಧವಾದವೂ ಆದ । **पृथ्वीः**—ದ್ಯಾವಾಪೃಥಿವಿಗಳೂ । **ऋतायः**—ಋತದೇವನ ಕಾರ್ಯಕ್ಕೆ ಸಹಾಯಮಾಡಲು ಸಿದ್ಧವಾಗಿವೆ । **धेनूः**—ಜಗತ್ತಿಗೆ ತೃಪ್ತಿಕಾರಕಗಳಾದವೂ । **परमेः**—ಉತ್ಕೃಷ್ಟವೂ ಆದ ದ್ಯಾವಾಪೃಥಿವಿಗಳು ! **ऋतायः**—ಋತುದೇವನನ್ನುದ್ದೇಶಿಸಿಯೇ । **दुहातेः**—ವೃಷ್ಟಿರೂಪವಾದ ಉದಕವನ್ನು ಕರೆಯುತ್ತವೆ.

॥ भावार्थ ॥

ಸ್ತೋತೃವು ಋತದೇವನನ್ನು ತನ್ನ ಸ್ತುತಿಯಿಂದ ತನ್ನ ವಶಮಾಡಿಕೊಂಡು ಅವನನ್ನೇ ಸೇವಿಸುತ್ತಾನೆ. ಋತದೇವನ ಬಲವು ವೇಗವಾಗಿ ಬೆಳೆಯತಕ್ಕದ್ದೂ ಮತ್ತು ಉದಕವನ್ನು ಅಪೇಕ್ಷಿಸತಕ್ಕದ್ದೂ ಆಗಿದೆ. ವಿಸ್ತೃತವಾದವೂ, ಅತ್ಯಗಾಧವಾದವೂ ಆದ ದ್ಯಾವಾಪೃಥಿವಿಗಳೂ ಋತುದೇವನ ಕಾರ್ಯಕ್ಕೆ ಸಹಾಯಮಾಡಲು ಸಿದ್ಧವಾಗಿವೆ. ಜಗತ್ತಿಗೆ ತೃಪ್ತಿಕಾರಕಗಳಾದವೂ, ಉತ್ಕೃಷ್ಟವಾದವೂ ಆದ ದ್ಯಾವಾಪೃಥಿವಿಗಳು ಋತದೇವನನ್ನುದ್ದೇಶಿಸಿಯೇ ವೃಷ್ಟಿರೂಪವಾದ ಉದಕವನ್ನೂ ಕರೆಯುತ್ತವೆ.

English Translation.

The (worshipper) subjecting Rita (to his will) verily enjoys Rita: the strength of Rita is (developed) with speed, and is desirous of (possesing) water to Rita belong the wide and profound heaven and earth supreme milch cows, they yield their milk to Rita.

॥ ಸಂಹಿತಾಪಾಠಃ ॥

ನೂ ಷ್ಟುತ ಇಂದ್ರ ನೂ ಗೃಣಾನ ಇಷಂ ಜರಿತ್ರೇ ನದ್ಯೋ೭ ನ ಪೀಪೇಃ ।
ಅಕಾರಿ ತೇ ಹರಿವೋ ಬ್ರಹ್ಮ ನವ್ಯಂ ಧಿಯಾ ಸ್ಯಾಮ ರಥ್ಯಃ ಸದಾಸಾಃ ॥ ೧೧ ॥

॥ ಪದಪಾಠಃ ॥

ನು । ಸ್ತುತಃ । ಇಂದ್ರ । ನು । ಗೃಣಾನಃ । ಇಷಂ । ಜರಿತ್ರೇ । ನದ್ಯಃ । ನ । ಪೀಪೇರಿತಿ ಪೀಪೇಃ ।
ಅಕಾರಿ । ತೇ । ಹರಿವಃ । ಬ್ರಹ್ಮ । ನವ್ಯಂ । ಧಿಯಾ । ಸ್ಯಾಮ । ರಥ್ಯಃ । ಸದಾ೭ಸಾಃ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ನು ಕ್ಷಿಪ್ರಂ ಸ್ತುತಃ ಪೂರ್ವೈರ್ಋಷಿಭಿಃ ಸಂಸ್ತುತೋ ನು ಕ್ಷಿಪ್ರಂ ಗೃಣಾನೋ೭ಸ್ಮಾಭಿಃ ಸ್ತೂಯಮಾನಸ್ತ್ವಮಿಷಮನ್ನಂ ಜರಿತ್ರೇ ಸ್ತೋತ್ರೇ ಮಹ್ಯಂ ನದ್ಯೋ ನಾಪ್ಯಿರ್ನದೀರಿವ ಪೀಪೇಃ । ಪ್ಯಾಯಯ । ಪ್ರವೃದ್ಧಂ ಕುರು । ಹೇ ಹರಿವೋ ಹರಿಸಂಜ್ಞಕಾಶ್ವೋಪೇತೇಂದ್ರ ತೇ ತುಭ್ಯಂ ನವ್ಯಂ ನವತರಂ ಬ್ರಹ್ಮ ಸ್ತೋತ್ರಮಕಾರಿ । ಅಸ್ಮಾಭಿಃ ಕ್ರಿಯತೇ । ರಥ್ಯೋ ರಥವಂತೋ ವಯಂ ಧಿಯಾ ಪ್ರಜ್ಞಾರೂಪಯಾ ಸ್ತುತ್ಯಾ ಸದಾಸಾಸ್ತ್ವಾಂ ಸರ್ವದಾ ಭಜಮಾನಾಸ್ತ್ವದರ್ಥಂ ಹವೀರೂಪಸ್ಯಾನ್ನಸ್ಯ ದಾತಾರೋ ವಾ ಸ್ಯಾಮ । ಭೂಯಾಸ್ಮ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ನು**—ಅತಿಶಯವಾಗಿ । **ಸ್ತುತಃ**—ಹಿಂದಿನ ಋಷಿಗಳಿಂದ ಸ್ತುತನಾದ ವನೂ । **ನು**—ಅದೇ ಶ್ರದ್ಧೆಯಿಂದ । **ಗೃಣಾನಃ**—(ನಮ್ಮಿಂದಲೂ) ಸ್ತುತನಾಗತಕ್ಕವನೂ ಆಗಿ । **ನದ್ಯಃ ನ**—ನದಿಗಳನ್ನು ಉದಕಗಳಿಂದ ತುಂಬುವಂತೆ । **ಜರಿತ್ರೇ**—ಸ್ತೋತೃವಾದ ನನಗೆ । **ಇಷಂ**—ಅನ್ನವನ್ನು । **ಪೀಪೇಃ**—ತುಂಬಿಕೊಡು । **ಹರಿವಃ**—ಹರಿಸಂಜ್ಞಕಗಳಾದ ಅಶ್ವಗಳುಳ್ಳ ಎಲೈ ಇಂದ್ರನೇ । **ತೇ**—ನಿನ್ನನ್ನುದ್ದೇಶಿಸಿ । **ನವ್ಯಂ**—ನೂತನವಾದ । **ಬ್ರಹ್ಮ**—ಸ್ತೋತ್ರವು । **ಅಕಾರಿ**—ನಿರ್ಮಿತವಾಗುತ್ತದೆ । **ರಥ್ಯಃ**—ರಥಗಳನ್ನು ಹೊಂದಿರುವ ನಾವು । **ಧಿಯಾ**—ಪ್ರಜ್ಞಾಪೂರ್ವಕವಾದ ಸ್ತುತಿಯಿಂದ । **ಸದಾಸಾಃ**—ನಿನ್ನನ್ನು ಪೂಜಿಸಿ ಹವಿಸ್ಸನ್ನರ್ಪಿಸುವವರಾಗಿ । **ಸ್ಯಾಮ**—ಆಗುವಂತೆ ಅನುಗ್ರಹಿಸು

॥ ಭಾವಾರ್ಥ ॥

ಎಲೈ ಇಂದ್ರನೇ, ಹಿಂದಿನ ಋಷಿಗಳಿಂದ ಅತಿಶಯವಾಗಿ ಸ್ತುತನಾದವನೂ, ಅದೇ ಶ್ರದ್ಧೆಯಿಂದ ನಮ್ಮಿಂದಲೂ ಸ್ತುತನಾಗತಕ್ಕವನೂ ಆಗಿ ನದಿಗಳನ್ನು ಉದಕಗಳಿಂದ ತುಂಬುವಂತೆ ಸ್ತೋತೃವಾದ ನನಗೆ ಅನ್ನವನ್ನು ತುಂಬಿಕೊಡು ಹರಿಸಂಜ್ಞಕಗಳಾದ ಅಶ್ವವುಳ್ಳ ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ನೂತನವಾದ ಸ್ತೋತ್ರವು ನಿರ್ಮಿತವಾಗುತ್ತದೆ.

ರಥಗಳನ್ನು ಹೊಂದಿರುವ ನಾವು ಪ್ರಜ್ಞಾಪೂರ್ವಕವಾದ ಸ್ತುತಿಯಿಂದ ನಿನ್ನನ್ನು ಪೂಜಿಸಿ ಹವಿಸ್ಸನ್ನರ್ಪಿಸುವವರಾಗಿ ಆಗುವಂತಾಗಲಿ.

English Translation

Glorified (in the past), glorified, Indra, at present, satisfy your worshipper with food, as rivers (are filled with water): lord of horses, a new hymn has been made for you · may we, possessed of chariots, be ever diligent in your praise.

॥ विशेषविषयगळु ॥

ಈ ಋಕ್ಕು ಈ ಸೂಕ್ತದಲ್ಲಲ್ಲದೆ ೨೦-೨೪ ನೇ ಸೂಕ್ತಗಳಲ್ಲಿ ಕೊನೆಯ ಋಕ್ಕುಗಳಾಗಿ ಪರಿತವಾಗಿದೆ.

ಇಂದ್ರ **ನು ಸ್ತುತಃ ನು ಗೃಣಾನಃ ನದ್ಯಃ ನ ಜರಿತ್ರೇ ಇಷಂ ಪೀಪೇಃ**—ಎಲೈ ಇಂದ್ರನೇ, ನೀನು ಹಿಂದೆ ಅನೇಕ ಋಷಿಗಳಿಂದ ಸ್ತುತಿಸಲ್ಪಟ್ಟಿರುವೆ. ಈಗ ನಮ್ಮಿಂದ ಸ್ತುತಿಸಲ್ಪಡುವೆ ನದಿಗಳಿಗೆ ವೃಷ್ಟ್ಯುದಕವು ತುಂಬಿ ಪೂರ್ಣವಾಗಿ ಹರಿಯುವಂತೆ ನಿನ್ನನ್ನು ಸ್ತೋತ್ರಮಾಡುವ ನಮಗೆ ಅನ್ನವನ್ನು (ಅನ್ನಾದ್ಯಾಹಾರವನ್ನು) ತುಂಬಿ ಕೊಡು, ಎಂದರೆ ಯಥೇಚ್ಛವಾಗಿ ಕೊಡು

ನು—**ನು ಇತ್ಯೇಷೋ೭ನೇಕಕರ್ಮಾ । ಇದಂ ನು ಕರಿಷ್ಯತೀತಿ ಹೇತ್ವಪದೇಶೇ । ಕಥಂ ನು ಕರಿಷ್ಯತೀತ್ಯನುಪೃಷ್ಟೇ** (ನಿ ೧-೪) **ನು** ಎಂಬ ನಿಪಾತಕ್ಕೆ ಅನೇಕ ಅರ್ಥಗಳಿವೆ **ಇದಂ ನು ಕರಿಷ್ಯತಿ** ಎನ್ನುವಾಗ **ನು** ಎಂಬ ಶಬ್ದಕ್ಕೆ ಆದ್ದರಿಂದ ಎಂದು ಹೇತ್ವರ್ಥವಾಗುತ್ತದೆ **ಕಥಂ ನು ಕರಿಷ್ಯತಿ** ಎನ್ನುವಾಗ **ನು** ಎಂಬ ಶಬ್ದಕ್ಕೆ ಹೇಗೆ ಎಂಬ ಪ್ರಶ್ನಾರ್ಥಕವಾಗುತ್ತದೆ ಹೀಗೆಯೇ **ಅಥಾಪ್ಯುಪಮಾರ್ಥೇ ಭವತಿ ।** ಉಪಮಾನವನ್ನು ಸೂಚಿಸುವಾಗಲೂ ಸಹ **ನು** ಎಂಬ ಶಬ್ದದ ಪ್ರಯೋಗವಿರುವುದು ಉದಾಹರಣೆಗೆ—

ಅಕ್ಷ್ಣೋ ನ ಚಕ್ರ್ಯೋಃ ಶೂರ ಬೃಹನ್ಪ್ಸ ತೇ ಮಹ್ನಾ ರಿರಿಚೇ ರೋದಸ್ಯೋಃ ।
ವೃಕ್ಷಸ್ಯ ನು ತೇ ಪುರುಹೂತ ವಯಾ ವ್ಯೂ ೩ ತಯೋ ರುರುಹುರಿಂದ್ರ ಪೂರ್ವೀಃ ॥
(ಋ ಸಂ ೬-೨೪-೩)

ಎಂಬ ಋಕ್ಕನ್ನು ನಿರುಕ್ತಕಾರರು ಉದಾಹರಿಸಿ (ನಿ. ೧-೪), **ವೃಕ್ಷಸ್ಯ ನು ತೇ । ವೃಕ್ಷಸ್ಯೇವ ತೇ ।** ವೃಕ್ಷದಂತೆ ಅಥವಾ ವೃಕ್ಷದ **ಶಾ**ಖೆಗಳಂತೆ ಎಂದು **ನು** ಎಂಬ ಶಬ್ದಕ್ಕೆ ಉಪಮಾರ್ಥವನ್ನು ಹೇಳಿದೆಯೆಂದು ತಿಳಿಸಿದಾರೆ. ಹೀಗೆಯೇ—

ನೂ ಮರ್ತೋ ದಯತೇ ಸನಿಷ್ಯನ್ಯೋ ವಿಷ್ಣವ ಉರುಗಾಯಾಯ ದಾಶತ್ ।
(ಋ. ಸಂ ೭-೧೦೦-೧೧)

ಇತ್ಯಾದಿ ಋಕ್ಕುಗಳಲ್ಲಿ **ನು** ಎಂಬ ಶಬ್ದಕ್ಕೆ **ಕ್ಷಿಪ್ರಂ** ಬೇಗನೆ, ಜಾಗ್ರತೆಯಾಗಿ ಎಂಬರ್ಥವೂ,

ನೂ ಇಂದ್ರ ಶೂರ ಸ್ತವಮಾನ ಊತೀ ಬ್ರಹ್ಮಜೂತಸ್ತನ್ವಾ ವಾವೃಧಸ್ವ ।
(ಋ. ಸಂ ೭-೧೯-೧೧)

ಇತ್ಯಾದಿ ಋಕ್ಕುಗಳಲ್ಲಿ **ನು** ಎಂದರೆ **ಅದ್ಯ, ಈಗ**, ಒಡನೆಯೇ ಎಂಬ ಅರ್ಥವಿರುವುದೆಂದು ನಿರುಕ್ತಕಾರರು ಉದಾಹರಣೆ ಸಹಿತವಾಗಿ ವಿವರಿಸಿದಾರೆ ಪ್ರಕೃತವಾದ ಋಕ್ಕಿನಲ್ಲಿ **ಕ್ಷಿಪ್ರಂ** ಬೇಗನೆ, ಶೀಘ್ರವಾಗಿ ಎಂದರ್ಥವು

ಜರಿತ್ರೇ—ಜರಿತೃಶಬ್ದವು ಸ್ತೋತೃನಾಮಗಳಲ್ಲಿ ಪರಿತವಾಗಿದೆ (ನಿ. ೩-೧೯) **ಜರಿತಾ ಗರಿತಾ** (ನಿ. ೧-೭) ಎಂದು ನಿರ್ವಚನವೂ ಇರುವುದರಿಂದ **ಜರಿತ್ರೇ** ಎಂದರೆ ಇಲ್ಲಿ ಸ್ತೋತ್ರಮಾಡುವ ನನಗೆ ಎಂದರ್ಥವು.

ನ—**ನ** ಎಂಬ ಶಬ್ದಕ್ಕೆ ನಿರುಕ್ತಕಾರರು ಎರಡು ವಿಧವಾದ ಅರ್ಥವನ್ನು ಹೇಳಿರುವರು—

ನೇತಿ ಪ್ರತಿಷೇಧಾರ್ಥೀಯೋ ಭಾಷಾಯಾಂ। ಉಭಯಮನ್ವಾಧಾಯ್ಯಂ। ನೇಂದ್ರಂ ದೇವಮಮಂಸತ ಇತಿ ಪ್ರತಿಷೇಧಾರ್ಥೀಯಃ ಪುರಸ್ತಾದುಪಚಾರಸ್ತಸ್ಯ ಯೇತ್ಕ್ರತಿಷೇಧತಿ। ದುರ್ಮದಾಸೋ ನ ಸುರಾಯಾಂ ಇತ್ಯುಪಮಾರ್ಥೀಯಃ। ಉಪರಿಷ್ಟಾದುಪಚಾರಸ್ತಸ್ಯ ಯೇನೋಪಮಿಮಾತೇ॥ (ನಿ ೧-೪)

ಎಂದರೆ **ನ** ಎಂಬ ಶಬ್ದವು ಲೋಕವ್ಯವಹಾರದ ಭಾಷೆಯಲ್ಲಿ ಎಂದರೆ, ವೇದಭಾಷೆಯಲ್ಲದ ಆಧುನಿಕ ಸಂಸ್ಕೃತ ಭಾಷೆಯಲ್ಲಿ ನಿಷೇಧಾರ್ಥದಲ್ಲಿ (ಇಲ್ಲ, ಅಲ್ಲ ಎಂಬರ್ಥದಲ್ಲಿ) ಉಪಯೋಗಿಸಲ್ಪಡುವುದು ಇದು ಎಲ್ಲರಿಗೂ ತಿಳಿದೇ ಇದೆ. ಆದರೆ ವೇದಗಳಲ್ಲಿ ನಿಷೇಧಾರ್ಥದಲ್ಲಿಯೂ, ಉಪಮಾರ್ಥದಲ್ಲಿಯೂ **ನ** ಎಂಬ ಶಬ್ದದ ಪ್ರಯೋಗವಿರುವುದು ಹೇಗೆಂದರೆ— **ನೇಂದ್ರಂ ದೇವಮಮಂಸತ** ಎಂಬ ವಾಕ್ಯದಲ್ಲಿನ **ನ** ಎಂಬ ಶಬ್ದವು ನಿಷೇಧಾರ್ಥದಲ್ಲಿ ಪ್ರಯುಕ್ತವಾಗಿರುವುದು. ಪ್ರತಿಷೇಧವೆಂದರೆ ಒಬ್ಬ ವ್ಯಕ್ತಿಯನ್ನು ಪ್ರತ್ಯಕ್ಷವಾಗಿ ಅಥವಾ ಎದುರಿಗೆ ಹೊಗಳದೇ ಇರುವುದು ಇಂದ್ರನನ್ನು ದೀಪ್ತಿಯುಕ್ತನಾದವನೆಂದು ತಿಳಿಯಲಾಗುವುದಿಲ್ಲ ಎಂಬ ವಾಕ್ಯದಲ್ಲಿ **ಇಲ್ಲ** (**ನ** ಎಂಬುದರ ಅರ್ಥ) ಎಂಬ ಶಬ್ದವು ಇಂದ್ರನ ವಿಷಯಕವಾದ ಉಪಚಾರೋಕ್ತಿಗೆ ವಿರುದ್ಧವಾದ ಅರ್ಥವನ್ನು ಸೂಚಿಸುವುದು ಇದಕ್ಕೆ ಪ್ರತಿಷೇಧಾರ್ಥವೆಂದು ಹೆಸರು. **ದುರ್ಮದಾಸೋ ನ ಸುರಾಯಾಂ** ಎಂಬ ವಾಕ್ಯದಲ್ಲಿ **ನ** ಎಂಬ ಶಬ್ದವು ಉಪಮಾರ್ಥವನ್ನು (ಹೋಲಿಕೆಯನ್ನು) ಸೂಚಿಸುವುದು ಮದ್ಯವನ್ನು ಪಾನಮಾಡಿದ ಜನರಂತೆ ದುರಹಂಕಾರವುಳ್ಳವರು ಎಂದು **ಈ** ವಾಕ್ಯದ ಅರ್ಥವು ಇಲ್ಲಿ ಒಂದು ವ್ಯಕ್ತಿಯಲ್ಲಿರುವ ಗುಣಾವಗುಣಗಳನ್ನು ಮತ್ತೊಂದು ವ್ಯಕ್ತಿಯಲ್ಲಿರುವ ಗುಣಾವಗುಣಗಳಿಗೆ ಹೋಲಿಸಿ ಹೇಳುವುದೇ ಉಪಮಾರ್ಥವು ಮದ್ಯಪಾನಮಾಡಿದವರು ಮತಿಹೀನರಾಗಿ ಅಹಂಕಾರದಿಂದ ನೀಚಮಾರ್ಗದಲ್ಲಿ ವರ್ತಿಸುವರು ಆ ಜನರಂತೆ ದುರಹಂಕಾರವುಳ್ಳವರು ಎಂಬುದೇ ಉಪಮಾರ್ಥವು. **ಈ** ವಿಧವಾದ ಅರ್ಥಗಳನ್ನು ವೇದಗಳಲ್ಲಿ **ನ** ಎಂಬ ಪದದಿಂದಲೂ, **ಇವ** ಎಂಬ ಪದದಿಂದಲೂ ನಿರ್ದೇಶಿಸಲ್ಪಡುವುದು. **ಈ** ವಿಧವಾದ ಉಪಮಾರ್ಥದಲ್ಲಿ **ನ** ಎಂಬ ಶಬ್ದದ ಪ್ರಯೋಗವು ವೇದಗಳಲ್ಲಿ ಮಾತ್ರ ಇರುವುದು ಬಳಸುವ ಭಾಷೆಯಲ್ಲಿಲ್ಲ ಅದಕ್ಕೆ ಬದಲಾಗಿ ಅಲ್ಲಿ **ಇವ** ಎಂಬ ಶಬ್ದದ ಪ್ರಯೋಗಮಾತ್ರವಿರುವುದು

ಸೂಕ್ತದ ಉಪಸಂಹಾರರೂಪವಾದ **ಈ** ಋಕ್ಕಿನಲ್ಲಿ ವಾಮದೇವಋಷಿಯು ದೇವತೆಗೆ ಹೊಸದಾಗಿ ರಚಿತವಾದ ಸ್ತೋತ್ರವನ್ನರ್ಪಿಸಿ ದೇವತೆಯ ಅನುಗ್ರಹವನ್ನು ಪ್ರಾರ್ಥಿಸಿರುವುದು ಉಕ್ತವಾಗಿದೆ.

ಇಪ್ಪತ್ತನಾಲ್ಕನೆಯ ಸೂಕ್ತವು

ಕಾ ಸುಷ್ಟುತಿರಿತ್ಯೇಕಾದಶರ್ಚಂ ತೃತೀಯಂ ಸೂಕ್ತಂ ವಾಮದೇವಸ್ಯಾರ್ಷಮ್ಮೈಂದ್ರಂ । ದಶಮ್ಯ-ನುಷ್ಟುಪ್ ಶಿಷ್ಟಾಸ್ತ್ರಿಷ್ಟುಭಃ । ತಥಾ ಚಾನುಕ್ರಮಣಿಕಾ । ಕಾ ಸುಷ್ಟುತಿರುಪಾಂತ್ಯಾನುಷ್ಟುಬಿತಿ । ವಿನಿಯೋಗೋ ಲೈಂಗಿಕಃ ॥

ಅನುವಾದವು—**ಕಾ ಸುಷ್ಟುತಿಃ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು ಈ ಸೂಕ್ತಕ್ಕೆ ವಾಮದೇವನು ಋಷಿಯು, ಇಂದ್ರನು ದೇವತೆಯು, ಈ ಸೂಕ್ತದ ಹತ್ತನೆಯ ಋಕ್ಕು ಅನುಷ್ಟುಪ್‌ಛಂದಸ್ಸವು ಉಳಿದ ಋಕ್ಕುಗಳು ತ್ರಿಷ್ಟುಪ್‌ಛಂದಸ್ಸವು ಅನುಕ್ರಮ ಣಿಕೆಯಲ್ಲಿ—**ಕಾ ಸುಷ್ಟುತಿರುಪಾಂತ್ಯಾನುಷ್ಟುಪ್** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು

ಸೂಕ್ತ—೨೪

ಮಂಡಲ—೪ ॥ ಅನುವಾಕ—೩ ॥ ಸೂಕ್ತ—೨೪ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ—೧೧, ೧೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—ವಾಮದೇವಃ ।
ದೇವತಾ—ಇಂದ್ರಃ ।
ಛಂದಃ—೧-೯, ೧೧ ತ್ರಿಷ್ಟುಪ್ । ೧೦ ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಕಾ ಸುಷ್ಟುತಿಃ ಶವಸಃ ಸೂನುಮಿಂದ್ರಮವಾ ಚೀನಂ ರಾಧಸ ಆ ವವರ್ತತ್ ।
ದದಿರ್ಹಿ ವೀರೋ ಗೃಣತೇ ವಸೂನಿ ಸ ಗೋಪತಿರ್ನಿಷ್ಷಿಧಾಂ ನೋ ಜನಾಸಃ ॥ ೧ ॥

॥ ಪದಪಾಠಃ ॥

ಕಾ । ಸುಽಸ್ತುತಿಃ । ಶವಸಃ । ಸೂನುಂ । ಇಂದ್ರಂ । ಅರ್ವಾಚೀನಂ । ರಾಧಸೇ । ಆ । ವವರ್ತತ್ ।
ದದಿಃ । ಹಿ । ವೀರಃ । ಗೃಣತೇ । ವಸೂನಿ । ಸಃ । ಗೋಽಪತಿಃ । ನಿಃಽಸಿಧಾಂ । ನಃ । ಜನಾಸಃ ॥ ೧ ॥

॥ ಸಾಯಣಭಾಷ್ಯಂ ॥

ಕಾ ಕೀದೃಶೀ ಸುಷ್ಟುತಿಃ ಶವಸಃ ಸೂನುಂ ಬಲಸ್ಯ ಪುತ್ರಂ । ಅತಿಬಲಿನಮಿತ್ಯರ್ಥಃ । ಅರ್ವಾ-ಚೀನಮಸ್ಮದಭಿಮುಖಮಿಂದ್ರಂ ಪರಮೈಶ್ವರ್ಯಯುಕ್ತಂ ರಾಧಸೇ ಧನಾಯಾಸ್ಮಭ್ಯಂ ಧನಂ ದಾತುಮಾ

ವವರ್ತತ್ । ಆವರ್ತಯೇತ್ । ಹೇ ಜನಾಸೋ ಜನಾ ಯಜಮಾನಾ ವೀರೋ ವಿಕ್ರಾಂತೋ ಗೋಪತಿಃ ಪಶ್ವಾದಿಧನಸ್ಯ ಪಾಲಕಃ ಸ ಇಂದ್ರೋ ನಿಷ್ಪಿಧಾಂ ನಿಷ್ಪೇದ್ಧ್ರಾಣಾಂ ಶತ್ರೂಣಾಂ ಸಂಬಂಧೀನಿ ವಸೂನಿ ಧನಾನಿ ಗೃಣತೇ ಗೃಣದ್ಭ್ಯಃ ಸ್ತೋತೃಭ್ಯೋ ನೋಽಸ್ಮಭ್ಯಂ ದದಿರ್ಹಿ । ದಾತಾ ಖಲು ಭವತಿ ॥

॥ ಪ್ರತಿಪದಾರ್ಥ ॥

ಕಾ—ಎಂತಹ । **ಸುಷ್ಟುತಿಃ**—ಶ್ರೇಷ್ಠವಾದ ಸ್ತುತಿಯು । **ಶವಸಃ ಸೂನುಂ**—ಶಕ್ತಿಪುತ್ರನಾದ (ಅತ್ಯಂತ ಶಕ್ತಿಯುಳ್ಳ) । **ಇಂದ್ರಂ**—ಇಂದ್ರನನ್ನು । **ರಾಧಸೇ**—ನಮಗೆ ಧನವನ್ನು ಕೊಡಲು । **ಆವರ್ಚೀನಂ**—ನಮಗೆ ಅಭಿಮುಖನಾಗಿರುವಂತೆ। **ಆ ವವರ್ತತ್**— ತಿರುಗಿಸಬಲ್ಲದು? । **ಜನಾಸಃ**—ಮಾನವರಾದ ಯಜಮಾನರೇ। **ವೀರಃ**—ಪರಾಕ್ರಮಿಯೂ । **ಗೋಪತಿಃ**—ಪಶ್ವಾದಿಧನಗಳಿಗೆ ಪಾಲಕನೂ ಆದ । **ಸಃ**—ಇಂದ್ರನು । **ನಿಷ್ಪಿಧಾಂ**—ತಡೆಗಟ್ಟಿತಕ್ಕ ಶತ್ರುಗಳಿಗೆ ಸೇರಿದ । **ವಸೂನಿ**—ಧನಗಳನ್ನು । **ಗೃಣತೇ**—ಅವನನ್ನು ಸ್ತುತಿಸತಕ್ಕ । **ನಃ**—ನಮಗೆ । **ದದಿರ್ಹಿ**—ಕೊಡತಕ್ಕವನಾಗಿದ್ದಾನೆ

॥ ಭಾವಾರ್ಥ ॥

ನಮಗೆ ಧನಾದಿಗಳನ್ನು ಕೊಡಲು ಸಮರ್ಥನೂ ಅತ್ಯಂತಶಕ್ತನೂ ಆದ ಇಂದ್ರನನ್ನು ನಮಗೆ ಅಭಿಮುಖನಾಗಿ ತಿರುಗುವಂತೆಯೂ ನಮ್ಮನ್ನು ಅನುಗ್ರಹಿಸುವಂತೆಯೂ ಯಾವ ವಿಧವಾದ ಸ್ತುತಿಯು ಮಾಡಬಲ್ಲದು ? ಮಾನವರಾದ ಎಲೈ ಯಜಮಾನರೇ, ಪರಾಕ್ರಮಿಯೂ, ಪಶ್ವಾದಿಧನಗಳಿಗೆ ಪಾಲಕನೂ ಆದ ಇಂದ್ರನು ವಿರೋಧಿಗಳಾದ ಶತ್ರುಗಳಿಗೆ ಸೇರಿದ ಧನಗಳನ್ನು ಕಸಿದು ಅವನ್ನು ಸ್ತುತಿಸುವ ನಮಗೆ ಕೊಡುವವನಾಗಿದ್ದಾನೆ

English Translation.

What suitable praise may bring the son of strength, Indra, before us, to give us wealth · the hero, the lord of cattle, is the donor, oh man, of the wealth of his adversaries to him who glorifies him

॥ ವಿಶೇಷವಿಷಯಗಳು ॥

ಶವಸಃ ಸೂನುಂ—ಶವಸಃ ಸೂನುಂ, ಸಹಸಃ ಪುತ್ರ ಇತ್ಯಾದಿ ಶಬ್ದಗಳು ಋಗ್ವೇದದಲ್ಲಿ ಅಗ್ನಿಪರವಾಗಿಯೇ ಉಪಯೋಗಿಸಲ್ಪಡುವವು. ಅಗ್ನಿಮಥನಮಾಡುವಾಗ ಬಲಪ್ರಯೋಗಮಾಡಿ ಕಡೆಯಬೇಕಾಗಿರುವುದರಿಂದ ಅಗ್ನಿಯನ್ನು ಬಲದ (ಬಲಪ್ರಯೋಗಮಾಡುವುದರಿಂದ ಹುಟ್ಟಿದ) ಪುತ್ರ ಎಂದು ಸಂಬೋಧಿತವಾಗಿರುವುದು ರೂಢಿಯಾಗಿದೆ. ಪ್ರಕೃತ ಋಕ್ಕಿನಲ್ಲಿ ಈ ಶಬ್ದಗಳು ಇಂದ್ರನ ಪರವಾಗಿ ಪ್ರಯುಕ್ತವಾಗಿದೆ. ಭಾಷ್ಯಕಾರರು ಹೇಳಿರುವಂತೆ **ಅತಿಬಲಿನಮಿತ್ಯರ್ಥಃ।** ಅತ್ಯಂತ ಬಲಶಾಲಿಯಾದ ಇಂದ್ರನನ್ನು ಎಂಬರ್ಥದಲ್ಲಿ **ಈ** ಶಬ್ದಗಳ ಪ್ರಯೋಗವಿರುವುದೆಂದು ಭಾವಿಸಬೇಕು

ಸಃ ನಿಷ್ಪಿಧಾಂ ವಸೂನಿ ಗೃಣತೇ ನಃ ದದಿರ್ಹಿ—ಆ ಇಂದ್ರನು ನಮ್ಮನ್ನು ವಿರೋಧಿಸುವ ಶತ್ರುಗಳಿಗೆ ಸೇರಿದ ಧನಗಳನ್ನು ನಮಗೆ ಕೊಡುತ್ತಾನೆ ಎಂದು ಹೇಳಿದೆ. ಎಂದರೆ ನಾವು ಶತ್ರುಗಳೊಡನೆ ಯುದ್ಧಮಾಡುವಾಗ

ನಮಗೆ ಇಂದ್ರನ ಅನುಗ್ರಹದಿಂದ ಜಯವುಂಟಾಗಿ ಶತ್ರುಗಳಲ್ಲಿರುವ ಧನಗಳು ನಮಗೆ ದೊರಕುವವು ಎಂದಭಿಪ್ರಾಯವು ಸೂಚಿತವಾಗಿದೆ.

॥ ಸಂಹಿತಾಪಾಠಃ ॥

ಸ ವೃತ್ರಹತ್ಯೇ ಹವ್ಯಃ ಸ ಈಡ್ಯಃ ಸ ಸುಷ್ಟುತ ಇಂದ್ರಃ ಸತ್ಯರಾಧಾಃ ।
ಸ ಯಾಮನ್ನಾ ಮಘವಾ ಮರ್ತ್ಯಾಯ ಬ್ರಹ್ಮಣ್ಯತೇ ಸುಷ್ವಯೇ ವರಿವೋ ಧಾತ್ ॥ ೨ ॥

॥ ಪದಪಾಠಃ ॥

ಸಃ । ವೃತ್ರಹತ್ಯೇ । ಹವ್ಯಃ । ಸಃ । ಈಡ್ಯಃ । ಸಃ । ಸುಷ್ಟುತಃ । ಇಂದ್ರಃ । ಸತ್ಯರಾಧಾಃ ।
ಸಃ । ಯಾಮನ್ । ಆ । ಮಘವಾ । ಮರ್ತ್ಯಾಯ । ಬ್ರಹ್ಮಣ್ಯತೇ । ಸುಷ್ವಯೇ । ವರಿವಃ । ಧಾತ್ ॥

॥ ಸಾಯಣಭಾಷ್ಯಂ ॥

ಸ ಇಂದ್ರೋ ವೃತ್ರಹತ್ಯೇ ವೃತ್ರಾಣಾಂ ಶತ್ರೂಣಾಂ ಹತ್ಯೇ ಹನನೇ ನಿಮಿತ್ತಭೂತೇ ಸತಿ ಯೋಮನ್ಯುದ್ಧೇ ಹವ್ಯ ಆಹ್ವಾತವ್ಯೋ ಭವತಿ। ಸ ಇಂದ್ರ ಈಡ್ಯಃ ಸ್ತುತ್ಯೋ ಭವತಿ। ಸ ಇಂದ್ರಃ ಸುಷ್ಟುತಃ ಸನ್ ಸತ್ಯರಾಧಾ ಯಜಮಾನೇಭ್ಯೋ ದಾತುಂ ಸತ್ಯಧನೋ ಭವತಿ। ಮಘವಾ ಧನವಾನ್ ಸ ಇಂದ್ರೋ ಬ್ರಹ್ಮಣ್ಯತೇ ಸ್ತೋತ್ರಮಿಚ್ಛತೇ ಸುಷ್ವಯೇ ಸೋಮಂ ಸುನ್ವತೇ ಮರ್ತ್ಯಾಯ ಮನುಷ್ಯಾಯ ಯಜಮಾನಾಯ ವರಿವೋ ಧನಂ । ವರಿವ ಇತಿ ಧನನಾಮೈತತ್ । ಆ ಧಾತ್ । ಆ ಸಮಂತಾದ್ದದಾತಿ ॥

॥ ಪ್ರತಿಪದಾರ್ಥ ॥

ಸಃ—ಇಂದ್ರನು । **ವೃತ್ರಹತ್ಯೇ**—ಶತ್ರುನಾಶಕವಾದ । **ಯಾಮನ್**—ಯುದ್ಧಕಾಲದಲ್ಲಿ । **ಹವ್ಯಃ**—ಸಹಾಯಕ್ಕಾಗಿ ಕರೆಯಲ್ಪಡುವವನಾಗಿದ್ದಾನೆ । **ಸಃ**—ಇಂದ್ರನು । **ಈಡ್ಯಃ**—ಪೂಜ್ಯನು । **ಸಃ ಇಂದ್ರಃ**—ಪೂಜ್ಯನಾದ ಅದೇ ಇಂದ್ರನು । **ಸುಷ್ಟುತಃ**—ಅತಿಶಯವಾಗಿ ಸ್ತುತನಾದಾಗ । **ಸತ್ಯರಾಧಾಃ** - ಸತ್ಯಾತ್ಮಕವಾದ ಧನದಾತನಾಗುತ್ತಾನೆ । **ಮಘವಾ**—ಧನವಂತನಾದ । **ಸಃ**—ಅದೇ ಇಂದ್ರನು । **ಬ್ರಹ್ಮಣ್ಯತೇ**—ಸ್ತುತಿಮಾಡತಕ್ಕವನನ್ನು । **ಸುಷ್ವಯೇ**—ಸೋಮವನ್ನು ಹಿಂಡತಕ್ಕವನನ್ನು ಆದ । **ಮರ್ತ್ಯಾಯ**—ಯಜಮಾನನಿಗೆ । **ವರಿವಃ**—ಧನವನ್ನು । **ಆ ಧಾತ್**—ಪೂರ್ಣವಾಗಿ ಕೊಡುತ್ತಾನೆ

॥ ಭಾವಾರ್ಥ ॥

ಪರಾಕ್ರಮಿಯಾದ ಇಂದ್ರನು ಶತ್ರುನಾಶಕವಾದ ಯುದ್ಧದಲ್ಲಿ ಸಹಾಯಕ್ಕಾಗಿ ಕರೆಯಲ್ಪಡುತ್ತಾನೆ ಅವನು ಅತ್ಯಂತ ಪೂಜ್ಯನಾಗಿದ್ದಾನೆ. ಈ ರೀತಿ ಪೂಜ್ಯನಾದ ಇಂದ್ರನು ಯಜಮಾನರಿಂದ ಪ್ರಶಂಸಿಸಲ್ಪಟ್ಟಾಗ ಸತ್ಯಾತ್ಮಕವಾದ

ಧನದಾತೃವಾಗುತ್ತಾನೆ. ಧನವಂತನಾದ ಆದೇ ಇಂದ್ರನು ತನ್ನನ್ನು ಸ್ತುತಿಸತಕ್ಕವನೂ, ಸೋಮವನ್ನು ಅರ್ಪಣೆಗಾಗಿ ಹಿಂಡತಕ್ಕವನೂ, ಮಾನವನೂ ಆದ ಯಜಮಾನನಿಗೆ ಪೂರ್ಣವಾಗಿ ಧನವನ್ನು ಕೊಡುತ್ತಾನೆ.

English Translation.

He, Indra, is to be invoked for the destruction of Vritra: he, the deservedly praised, is to be worshipped: the real donor of wealth, he, Maghavan, gives wealth, (acquired) in battle, to the mortal who offers him prayer and libations.

॥ ವಿಶೇಷವಿಷಯಗಳು ॥

ಯುದ್ಧಾದಿಗಳಲ್ಲಿ ಜಯವಾಗುವುದಕ್ಕಾಗಿ ಇಂದ್ರನ ಅನುಗ್ರಹವು ಅವಶ್ಯಕವಾದುದರಿಂದ ಆ ಕಾಲದಲ್ಲಿ ಇಂದ ನನ್ನು ಜಯಲಾಭಕ್ಕಾಗಿ ಕರೆಯುತ್ತೇವೆ ಇಂದ್ರನನ್ನು ಸ್ತುತಿಸುವುದರಿಂದ ಅವನು ಸಂತುಷ್ಟನಾಗಿ ನಮಗೆ ಧನಾದಿಗಳನ್ನು ಕೊಡುತ್ತಾನೆ ಮತ್ತು ಸ್ತೋತ್ರಮಾಡತಕ್ಕವರೂ, ಸೋಮರಸವನ್ನು ಹಿಂಡಿ ಅದನ್ನು ಇಂದ್ರನಿಗೆ ಅರ್ಪಿಸುವವರೂ ಆದ ಯಜಮಾನರಿಗೆ ಇಂದ್ರನು ಧನಾದಿಗಳನ್ನು ಕೊಟ್ಟು ಸಂತೋಷಪಡಿಸುತ್ತಾನೆ ಎಂಬಭಿಪ್ರಾಯವು ಇಲ್ಲಿ ಸೂಚಿತವಾಗಿದೆ

॥ ಸಂಹಿತಾಪಾಠಃ ॥

ತಮಿನ್ನರೋ ವಿ ಹ್ವಯಂತೇ ಸಮಿಾಕೇ ರಿರಿಕ್ವಾಂಸಸ್ತನ್ವಃ ಕೃಣ್ವತ ತ್ರಾಂ ।
ಮಿಥೋ ಯತ್ತ್ಯಾಗಮುಭಯಾಸೋ ಅಗ್ಮನ್ನರಸ್ತೋಕಸ್ಯ ತನಯಸ್ಯ ಸಾತೌ ॥ ೩ ॥

॥ ಪದಪಾಠಃ ॥

ತಂ । ಇತ್ । ನರಃ । ವಿ । ಹ್ವಯಂತೇ । ಸಂ೭ಈಕೇ । ರಿರಿಕ್ವಾಂಸಃ । ತನ್ವಃ । ಕೃಣ್ವತ । ತ್ರಾಂ ।
ಮಿಥಃ । ಯತ್ । ತ್ಯಾಗಂ । ಉಭಯಾಸಃ । ಅಗ್ಮನ್ । ನರಃ । ತೋಕಸ್ಯ । ತನಯಸ್ಯ । ಸಾತೌ ॥ ೩ ॥

॥ ಸಾಯಣಭಾಷ್ಯಂ ॥

ನರೋ ನೇತಾರೋ ಮನುಷ್ಯಾಃ ಸಮಿಾಕೇ ಯುದ್ಧೇ ತಮಿತ್ತಮೇವೇಂದ್ರಂ ವಿ ಹ್ವಯಂತೇ । ವಿವಿಧಮಾಹ್ವಾನಂ ಕುರ್ವತೇ । ತನ್ವಃ ಸ್ವಕೀಯಾನಿ ಶರೀರಾಣಿ ರಿರಿಕ್ವಾಂಸಸ್ತಪಸಾ ರೇಚಯಂತೋ

ಯೆಜಮಾನಾಸ್ತಮೇವೇಂದ್ರಂ ತ್ರಾಂ ತ್ರಾತಾರಂ ಕೃಣ್ವತ । ಕೃಣ್ವತೇ । ಕುರ್ವತೇ । ಯದ್ಯದಾ ಮಿಥಃ ಪರಸ್ಪರಂ ಸಂಗತಾ ಉಭಯಾಸ ಉಭಯೇ ಯೆಜಮಾನಾಃ ಸ್ತೋತಾರಶ್ಚ ತ್ಯಾಗಂ ತ್ಯಾಗಕರ್ತಾರಂ ದಾತಾರಮಿಂದ್ರಮಗ್ಮನ್ ಉಪಗಚ್ಛಂತಿ ತದಾ ನರ ಉಭಯವಿಧಾ ಮನುಷ್ಯಾಸ್ತೋಕಸ್ಯ ಪುತ್ರಸ್ಯ ತನಯಸ್ಯ ಪೌತ್ರಸ್ಯ ಚ ಸಾತೌ ಲಾಭೇ ನಿಮಿತ್ತಭೂತೇ ಸತಿ ತಮೇವೇಂದ್ರಂ ತ್ರಾತಾರಂ ಕುರ್ವಂತೀತಿ ಸಂಬಂಧಃ ॥

। ಪ್ರತಿಪದಾರ್ಥ ।

ನರಃ—ಮಾನವರು । **ಸಮಿತೀಷೇ**—ಯುದ್ಧದಲ್ಲಿ । **ತಮಿತ್**—ಆದೇ ಇಂದ್ರನನ್ನು (ಇಂದ್ರನನ್ನೇ) । **ವಿ ಹ್ವಯಂತೇ**—ವಿಧವಿಧವಾಗಿ ಸ್ತುತಿಸಿ ಕರೆಯುತ್ತಾರೆ । **ತನ್ವಃ**—ತಮ್ಮ ಶರೀರಗಳನ್ನು । **ರಿರಿಕ್ವಾಂಸಃ**—ತಪಸ್ಸಿನಿಂದ ಕೃಶಮಾಡಿಕೊಳ್ಳುವ ಯಜಮಾನರು । **ತ್ರಾಂ**—(ಇಂದ್ರನನ್ನೇ) ತಮ್ಮ ರಕ್ಷಕನಾಗಿರುವಂತೆ । **ಕೃಣ್ವತೇ**—ಮಾಡಿಕೊಳ್ಳುತ್ತಾನೆ । (ಮತ್ತು) **ಯತ್**—ಯಾವಾಗ । **ಉಭಯಾಸಃ**—ಯಜಮಾನರೂ, ಸ್ತೋತೃಗಳೂ । **ಮಿಥಃ**—ಒಟ್ಟಿಗೆ ಸೇರಿಕೊಂಡು । **ತ್ಯಾಗಂ**—ದಾನಿಯಾದ ಇಂದ್ರನನ್ನು । **ಅಗ್ಮನ್**—ಸಮಿಾಪಿಸುವರೋ ಆಗ । **ನರಃ**—ಎರಡು ಗುಂಪಿನವರೂ । **ತೋಕಸ್ಯ**—ಪುತ್ರರೂಪವಾದುದೂ । **ತನಯಸ್ಯ**—ಪೌತ್ರರೂಪವಾದುದೂ ಆದ ಧನವನ್ನು । **ಸಾತೌ**—ಪಡೆಯುವ ನಿಮಿತ್ತವಾಗಿ (ಇಂದ್ರನನ್ನು ಆರಿಸುವರು)

। ಭಾವಾರ್ಥ ।

ಮಾನವರಾದ ಯಜಮಾನರು ಯುದ್ಧದಲ್ಲಿ ಸಹಾಯಾರ್ಥವಾಗಿ ಇಂದ್ರನನ್ನೇ ವಿಧವಿಧವಾಗಿ ಸ್ತುತಿಸಿ ಕರೆಯುತ್ತಾರೆ. ತಮ್ಮ ಶರೀರಗಳನ್ನು ತಪಸ್ಸಿನಿಂದ ಕೃಶಮಾಡಿಕೊಂಡು ಇಂದ್ರನನ್ನು ಪೂಜಿಸುವ ಯಜಮಾನರು ಅವನನ್ನೇ ತಮ್ಮ ರಕ್ಷಕನನ್ನಾಗಿ ಮಾಡಿಕೊಳ್ಳುತ್ತಾರೆ ಯಜಮಾನರೂ, ಸ್ತೋತೃಗಳೂ ಒಟ್ಟಿಗೆ ಸೇರಿಕೊಂಡು ದಾನಿಯಾದ ಇಂದ್ರನನ್ನು ಸಮಿಾಪಿಸಿದಾಗ ಎರಡು ಗುಂಪಿನವರೂ ಸಹ ಪುತ್ರರೂಪವಾದುದೂ, ಪೌತ್ರರೂಪವಾದುದೂ ಆದ ಧನವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

English Translation.

Men verily call upon him in battle · the (devout) inflicters of austerity upon their persons constitute him their preserver when both (the worshipper and the priest) approach together the bountiful Indra, men (succeed) in (obtaining) the gift of sons and grandsons.

। ಸಂಹಿತಾಪಾಠಃ ।

ಕ್ರತ್ವಯಂತಿ । ಕ್ಷಿತಯೋ । ಯೋಗ । ಉಗ್ರಾಶುಷ್ಟಾಣಾಸೋ । ಮಿಥೋ । ಅರ್ನಸಾತೌ ।

ಸಂ ಯದ್ವಿಶೋಽವವೃತ್ರಂತ ಯುಧ್ಮಾ ಆದಿನ್ನೇವಂ ಇಂದ್ರಯಂತೇ
ಅಭೀಕೇ ॥ ೪ ॥

॥ ಪದಪಾಠಃ ॥

ಕೃತ್ವ್ಯಂತಿ । ಕ್ಷಿತಯಃ । ಯೋಗೇ । ಉಗ್ರ । ಆಶುಷಾಣಾಸಃ । ಮಿಥಃ । ಅರ್ಣಸಾತೌ ।
ಸಂ । ಯತ್ । ವಿಶಃ । ಅವವೃತ್ರಂತ । ಯುಧ್ಮಾಃ । ಆತ್ । ಇತ್ । ನೇಮೇ । ಇಂದ್ರಯಂತೇ ।
ಅಭೀಕೇ ॥ ೪ ॥

॥ ಸಾಯಣಭಾಷ್ಯಂ ॥

ಹೇ ಉಗ್ರೋದ್ಗೂರ್ಣಬಲೇಂದ್ರ ಆಶುಷಾಣಾಸೋ ವ್ಯಾಪ್ನುವಂತಃ ಕ್ಷಿತಯೋ ಮನುಷ್ಯಾಃ । ಕ್ಷಿತಯ ಇತಿ ಮನುಷ್ಯನಾಮೈತತ್ । ಅರ್ಣಸಾತೌ ಸಸ್ಯಾದಿಫಲಸಿದ್ಧ್ಯರ್ಥಮುದಕಲಾಭೇ ನಿಮಿತ್ತೇ ಸತಿ ಮಿಥಃ ಪರಸ್ಪರಂ ಯೋಗೇ ಸಂಬಂಧೇ ಸತಿ ಕೃತೂಯಂತಿ । ಕೃತೂನಿ ಕರ್ಮಾಣೀಚ್ಛಂತಿ । ಯದ್ಯದಾ ಯುಧ್ಮಾ ಯೋದ್ಧಯಿತೃಭ್ಯೋ ವಿಶಃ ಪ್ರಜಾ ಅಭೀಕೇ ಯುದ್ಧೇ । ಅಭೀಕ ಇತಿ ಸಂಗ್ರಾಮನಾಮೈತತ್ । ಸಮವವೃತ್ರಂತ ಸಂವರ್ತಂತೇ ಪರಸ್ಪರಂ ಸಂಗಚ್ಛಂತೇ ಆದಿತ್ ತದಾನೀಮೇವ ನೇಮೇ ಕೇಚನ ಭಾಗ್ಯವಂತೋ ಯೋಧಕಾ ಇಂದ್ರಯಂತೇ । ಯುದ್ಧೇ ಇಂದ್ರಮಿಚ್ಛಂತಿ ॥

॥ ಪ್ರತಿಪದಾರ್ಥ ॥

ಉಗ್ರ—ಪ್ರಕಟಿಸಲ್ಪಟ್ಟ ಶಕ್ತಿಯುಳ್ಳ ಎಲೈ ಇಂದ್ರನೇ! **ಆಶುಷಾಣಾಸಃ**—ವೃಷ್ಟಿಗಾಗಿ ತವಕಪಡುತ್ತಿರುವ! **ಕ್ಷಿತಯಃ**—ಮಾನವರು । **ಅರ್ಣಸಾತೌ**—ವೃಷ್ಟ್ಯರ್ಥವಾಗಿ । **ಮಿಥಃ**—ಒಟ್ಟಿಗೆ । **ಯೋಗೇ**—ಕೂಡಿಕೊಂಡು । **ಋತೂಯಂತಿ**—ಕರ್ಮವನ್ನು ಮಾಡಲಿಚ್ಛಿಸುತ್ತಾರೆ । **ಯತ್**—ಯಾವಾಗ । **ಯುಧ್ಮಾಃ**—ಯುದ್ಧಕಾಮರಾದ । **ವಿಶಃ**—ಪ್ರಜೆಗಳು । **ಅಭೀಕೇ**—ಯುದ್ಧದಲ್ಲಿ । **ಸಂ ಅವವೃತ್ರಂತ**—ಒಟ್ಟಿಗೆ ಸೇರುತ್ತಾರೋ । **ಆದಿತ್**—ಆಗಲೇ । **ನೇಮೇ**—ಕೆಲವು ಪುಣ್ಯವಂತರು ಮಾತ್ರ । **ಇಂದ್ರಯಂತೇ**—ಪ್ರಭುವಾದ ನಿನ್ನನ್ನು ಸಹಾಯಕ್ಕೆ ಅಪೇಕ್ಷಿಸುತ್ತಾರೆ

॥ ಭಾವಾರ್ಥ ॥

ಪ್ರಕಟಿತವಾದುದೂ, ಭಯಂಕರವಾದುದೂ ಆದ ಶಕ್ತಿಯುಳ್ಳ ಎಲೈ ಇಂದ್ರನೇ, ವೃಷ್ಟಿಗಾಗಿ ತವಕಪಡುತ್ತಿರುವ ಮಾನವರು ವೃಷ್ಟ್ಯರ್ಥವಾಗಿ ಒಟ್ಟಿಗೆ ಕೂಡಿಕೊಂಡು ಕರ್ಮವನ್ನು ಮಾಡಲಿಚ್ಛಿಸುತ್ತಾರೆ. ಯಾವಾಗ ಯುದ್ಧಕಾಮರಾದ ಪ್ರಜೆಗಳು ಒಟ್ಟಿಗೆ ಯುದ್ಧಕ್ಕಾಗಿ ಸೇರುತ್ತಾರೋ ಆಗ ಕೆಲವು ಸುಕೃತಿಗಳು ಮಾತ್ರ ಪ್ರಭುವಾದ ನಿನ್ನನ್ನು ಸಹಾಯಕ್ಕಾಗಿ ಅಪೇಕ್ಷಿಸಿ ಕರೆಯುತ್ತಾರೆ

English Translation.

Powerful Indra, men variously dispersed, come mutually together to celebrate sacred rites for the sake of obtaining rain. when men who are combatants assemble in battle, there are some of them who rely upon Indra.

॥ ಸಂಹಿತಾಪಾಠಃ ॥

ಆದಿದ್ಧ ನೇಮ ಇಂದ್ರಿಯಂ ಯಜಂತ ಆದಿತ್ಪಕ್ತಿಃ ಪುರೋಳಾಶಂ ರಿರಿಚ್ಯಾತ್।
ಆದಿತ್ಸೋಮೋ ವಿ ಪಪೃಚ್ಯಾದಸುಷ್ವೀನಾದಿಜ್ಜುಜೋಷ ವೃಷಭಂ ಯಜಧ್ಯೈ॥

॥ ಪದಪಾಠಃ ॥

ಆತ್ । ಇತ್ । ಹ । ನೇಮೇ । ಇಂದ್ರಿಯಂ । ಯಜಂತೇ । ಆತ್ । ಇತ್ । ಪಕ್ತಿಃ । ಪುರೋಳಾಶಂ । ರಿರಿಚ್ಯಾತ್ ।
ಆತ್ । ಇತ್ । ಸೋಮಃ । ವಿ । ಪಪೃಚ್ಯಾತ್ । ಅಸುಷ್ವೀನ್ । ಆತ್ । ಇತ್ । ಜುಜೋಷ । ವೃಷಭಂ ।
ಯಜಧ್ಯೈ ॥ ೫ ॥

॥ ಸಾಯಣಭಾಷ್ಯಂ ॥

ಆದಿತ್ತದಾನೀಮೇವ ಯುದ್ಧಕಾಲೇ ನೇಮೇಽನ್ಯೇ ಯೋಧಾ ಇಂದ್ರಿಯಂ ಬಲವಂತಮಿಂದ್ರಂ ಯಜಂತೇ ಹ । ಪೂಜಯಂತಿ ಖಲು । ಕಶ್ಚಿದಾದಿದನಂತರಮೇವ ಪುರೋಳಾಶಂ ಪಿಷ್ಟರೂಪಂ ಹವಿಃ ಪಕ್ತಿಃ ಪಚನ್ ರಿರಿಚ್ಯಾತ್ । ಇಂದ್ರಾಯ ದದ್ಯಾತ್ । ಆದಿದನಂತರಮೇವ ಸೋಮೋಽಭಿಷುತಸೋಮೋ ಯಜಮಾನೋಽಸುಷ್ವೀನಭಿಷುತಸೋಮಾನ್ಯಜಮಾನಾನ್ಸಿ ಪಪೃಚ್ಯಾತ್ । ಧನೈಃ ಪೃಥಕ್ಕುರ್ಯಾತ್ । ಆದಿದನಂತರಮೇವ ಕಶ್ಚಿದ್ವೃಷಭಂ ಕಾಮಾನಾಂ ವರ್ಷಿತಾರಮಿಂದ್ರಂ ಯಜಧ್ಯೈ ಯಷ್ಟುಂ ಜುಜೋಷ। ಸೇವತೇ ॥

॥ ಪ್ರತಿಪದಾರ್ಥ ॥

ಆದಿತ್—ಯುದ್ಧವು ಪ್ರಾಪ್ತವಾದೊಡನೆಯೇ । ನೇಮೇ—ಕೆಲವು ಯೋಧರು । ಇಂದ್ರಿಯಂ—ಶಕ್ತಿವಂತನಾದ ಇಂದ್ರನನ್ನು । ಯಜಂತೇ ಹ—ಪೂಜಿಸುತ್ತಾರೆ । ಆದಿತ್—ಆ ಒಡನೆಯೇ । ಪುರೋಳಾಶಂ—ಪುರೋಡಾಶರೂಪವಾದ ಹವಿಸ್ಸನ್ನು । ಪಕ್ತಿಃ—ಪಾಕಮಾಡಿ । ರಿರಿಚ್ಯಾತ್—ಇಂದ್ರನಿಗೆ ಅರ್ಪಿಸುತ್ತಾರೆ ।

ಆದಿತ್—ಒಡನೆಯೇ। **ಸೋಮಃ**—ಸೋಮವನ್ನು ಹಿಂಡಿದ ಯಜಮಾನನು। **ಅಸುಷ್ವೀನ್**—(ಯಜ್ಞಕರ್ತನಲ್ಲದ ಆದುದರಿಂದಲೇ) ಸೋಮವನ್ನು ಹಿಂಡದಿರುವ ಮಾನವರನ್ನು। **ಪಶ್ಚಾತ್**—ತನ್ನಿಂದ ಬೇರೆಮಾಡುತ್ತಾನೆ। **ಆದಿತ್**—ಕೂಡಲೇ। **ವೃಷಭಂ**—ಕಾಮವರ್ಷಕನಾದ ಇಂದ್ರನನ್ನು ಉದ್ದೇಶಿಸಿ। **ಯಜಧ್ಯೈ**—ಯಾಗ ಮಾಡುವುದಕ್ಕೆ। **ಜುಜೋಷ**—ಅಪೇಕ್ಷಿಸುತ್ತಾನೆ

॥ ಭಾವಾರ್ಥ ॥

ಯುದ್ಧವು ಪ್ರಾಪ್ತವಾದೊಡನೆಯೇ, ಕೆಲವು ಯೋಧರು ಶಕ್ತಿವಂತನಾದ ಇಂದ್ರನನ್ನು ಪೂಜಿಸುತ್ತಾರೆ ಆ ಒಡನೆಯೇ, ಪುರೋಡಾಶರೂಪವಾದ ಹವಿಸ್ಸನ್ನು ಪಾಕಮಾಡಿ ಇಂದ್ರನಿಗೆ ಅರ್ಪಿಸುತ್ತಾರೆ ಒಡನೆಯೇ ಯಜ್ಞಕ್ಕಾಗಿ ಸೋಮವನ್ನು ಹಿಂಡಿದ ಯಜಮಾನನು ಯಜ್ಞಕರ್ತನಲ್ಲದ (ಆದುದರಿಂದಲೇ) ಸೋಮವನ್ನು ಹಿಂಡದಿರುವ ಮಾನವಸಂದ ಬೇರೆಯಾಗುತ್ತಾನೆ ಕೂಡಲೇ, ಕಾಮವರ್ಷಕನಾದ ಇಂದ್ರನನ್ನುದ್ದೇಶಿಸಿ ಯಾಗಮಾಡುವುದಕ್ಕೆ ಅಪೇಕ್ಷಿಸುತ್ತಾನೆ

English Translation

Thereupon some verily worship the powerful (Indra), thereupon one man prepares the buttered cake that he may offer it to (Indra), thereupon the offerer of the Soma he distinguishes from him who presents no libation, thereupon some one rejoices to worship the showerer (of benefits).

॥ ಸಂಹಿತಾಪಾಠಃ ॥

ಕೃಣೋತ್ಯಸ್ಮೈ ವರಿವೋ ಯ ಇತ್ಥೇಂದ್ರಾಯ ಸೋಮಮುಶತೇ ಸುನೋತಿ।
ಸಧ್ರೀಚೀನೇನ ಮನಸಾವಿವೇನಂ ತಮಿತ್ಸಖಾಯಂ ಕೃಣುತೇ ಸಮತ್ಸು ॥

॥ ಪದಪಾಠಃ ॥

ಕೃಣೋತಿ। ಅಸ್ಮೈ। ವರಿವಃ। ಯಃ। ಇತ್ಥಾ। ಇಂದ್ರಾಯ। ಸೋಮಂ। ಉಶತೇ। ಸುನೋತಿ।
ಸಧ್ರೀಚೀನೇನ। ಮನಸಾ। ಅವಿವೇನಂ। ತಂ। ಇತ್। ಸಖಾಯಂ। ಕೃಣುತೇ। ಸಮತ್ಸು ॥ ೬ ॥

॥ ಸಾಯಣಭಾಷ್ಯಂ ॥

ಯೋ ಯಜಮಾನಃ ಸೋಮಮುಶತೇ ಕಾಮಯಮಾನಾಯೇತ್ಥಾಮುತ್ರ ಸ್ವರ್ಗಲೋಕೇ ಸ್ಥಿತಾಯೇಂದ್ರಾಯ ಸುನೋತಿ ಅಭಿಷವಂ ಕರೋತಿ ಇಂದ್ರೋಽಸ್ಮೈ ಯಜಮಾನಾಯ ವರಿವೋ

ಧನಂ ಕೃಣೋತಿ । ಕರೋತಿ । ಸಧ್ರೀಚೀನೇನ ಸಂಗತೇನ ಮನಸಾ ಪ್ರವಣೇನ ಚಿತ್ತೇನಾವಿವೇನಂ । ವೇನತಿಃ ಕಾಂತಿಕರ್ಮಾ । ವಿವೇನೋ ವಿಗತೇಚ್ಛಃ । ತದನ್ಯೋಽವಿವೇನಃ । ಆತ್ಮಾನಂ ಕಾಮಯಮಾನಂ ತಮಿತ್ತಮೇವ ಸುನ್ವಂತಂ ಯಜಮಾನಂ ಸಖಾಯಂ ಮಿತ್ರಂ ಸಮತ್ಸು ಸಂಗ್ರಾಮೇಷ್ವಿಂದ್ರಃ ಕೃಣುತೇ । ಕರೋತಿ ॥

॥ ಪ್ರತಿಪದಾರ್ಥ ॥

ಯಃ—ಯಾವ ಯಜಮಾನನು । **ಸೋಮಂ**—ಸೋಮವನ್ನು । **ಉಶತೇ**—ಇಚ್ಛಿಸುವ । **ಇಂದ್ರಾಯ**—ಇಂದ್ರನನ್ನುದ್ದೇಶಿಸಿ । **ಸುನೋತಿ**—ಸೋಮವನ್ನು ಹಿಂಡುವನೋ । **ಅಸ್ಮೈ**—ಅಂತಹ ಯಜಮಾನನಿಗಾಗಿ । **ಇತ್ಥಾ**—(ಇಂದ್ರನು) ಸ್ವರ್ಗದಲ್ಲಿದ್ದರೂ ಸಹ । **ವರಿವಃ**—ಧನವನ್ನು । **ಕೃಣೋತಿ**—ಒದಗಿಸಿಕೊಡುತ್ತಾನೆ । **ಸಧ್ರೀಚೀನೇನ**—ಯೋಗರೂಪದಲ್ಲಿ ತನ್ನಲ್ಲಿ ನೆರಿಸಿದ । **ಮನಸಾ**—ಮನಸ್ಸಿನಿಂದ । **ಅವಿವೇನಂ**—ತನ್ನನ್ನೇ ಧ್ಯಾನಿಸಿ ಅಪೇಕ್ಷಿಸಿದ । **ತಮಿತ್**—ಆ ಯಜಮಾನನನ್ನೇ । **ಸಖಾಯಂ**—ಮಿತ್ರನನ್ನಾಗಿ । **ಸಮತ್ಸು**—ಯುದ್ಧಗಳಲ್ಲಿ । **ಕೃಣುತೇ**—ಮಾಡಿಕೊಳ್ಳುತ್ತಾನೆ

॥ ಭಾವಾರ್ಥ ॥

ಸೃಧ್ವಿಯಲ್ಲಿರುವ ಯಾವ ಯಜಮಾನನು ಸೋಮವನ್ನಿಚ್ಛಿಸುವ ಇಂದ್ರನನ್ನುದ್ದೇಶಿಸಿ ಅರ್ಪಣೆಗಾಗಿ ಸೋಮವನ್ನು ಹಿಂಡುವನೋ ಅಂತಹ ಯಜಮಾನನಿಗೆ ಇಂದ್ರನು ಸ್ವರ್ಗದಲ್ಲಿದ್ದರೂ ಸಹ ಅಲ್ಲಿಂದಲೇ ಧನವನ್ನು ಒದಗಿಸುತ್ತಾನೆ. ಯೋಗರೂಪದಲ್ಲಿ ತನ್ನಲ್ಲಿ ನೆರಿಸಿದ ಮನಸ್ಸಿನಿಂದ ತನ್ನನ್ನೇ ಧ್ಯಾನಿಸಿ ತನ್ನ ಸಖ್ಯವನ್ನು ಅಪೇಕ್ಷಿಸಿದ ಯಜಮಾನನನ್ನೇ ಇಂದ್ರನು ಯುದ್ಧಗಳಲ್ಲಿ ಮಿತ್ರನನ್ನಾಗಿ ಮಾಡಿಕೊಳ್ಳುತ್ತಾನೆ

English Translation

Indra bestows wealth upon him who offers a libation to him, desiring it, though in another sphere, and with an humble mind, makes him who is devoted to him his friend in combats

॥ ಸಂಹಿತಾಪಾಠಃ ॥

ಯ ಇಂದ್ರಾಯ ಸುನವತ್ಸೋಮಮದ್ಯ ಪಚಾತ್ಪಕ್ತೀರುತ ಭೃಜ್ಜಾತಿ ಧಾನಾಃ ।

ಪ್ರತಿ ಮನಾಯೋರುಚಥಾನಿ ಹರ್ಯನ್ತ್ಸಿನ್ಧ್ವದ್ಧ್ವೃಷಣಂ ಶುಷ್ಮಮಿಂದ್ರಃ ॥

॥ ಪದಪಾಠಃ ॥

ಯಃ। ಇಂದ್ರಾಯ। ಸುನವತ್। ಸೋಮಂ। ಅದ್ಯ। ಪಚಾತ್। ಪಕ್ತೀಃ। ಉತ। ಭೃಜ್ಜಾತಿ। ಧಾನಾಃ।
ಪ್ರತಿ। ಮನಾಯೋಃ। ಉಚಥಾನಿ। ಹರ್ಯನ್। ತಸ್ಮಿನ್। ದಧತ್। ವೃಷಣಂ। ಶುಷ್ಮಂ। ಇಂದ್ರಃ॥೭॥

॥ ಸಾಯಣಭಾಷ್ಯಂ ॥

ಅದ್ಯಾಸ್ಮಿನ್ದಿವಸೇ ಯೋ ಯಜಮಾನ ಇಂದ್ರಾಯ ಪರಮೈಶ್ವರ್ಯಯುಕ್ತಾಯ ದೇವಾಯ ಸೋಮಂ ಸೋಮಲಕ್ಷಣಮನ್ನಂ ಸುನವತ್ ಸುನುಯಾತ್ ಅಭಿಷವಂ ಕುರ್ಯಾತ್। ತಥಾ ಯಃ ಪಕ್ತೀಃ ಪಕ್ತವ್ಯಾಂಶ್ಚ ಪುರೋಡಾಶಾದೀನ್ಪಚಾತ್ ಪಚೇತ್ ಪಚನಂ ಕುರ್ಯಾತ್। ಉತಾಪಿ ಚ ಯೋ ಧಾನಾ ಭರ್ಜನಯೋಗ್ಯಾನ್ಯವಾನ್। ಅತ್ರ ಭೃಷ್ಟಯವವಾಚೀ ಧಾನಾಶಬ್ದಸ್ತದ್ಯೋಗ್ಯಂ ಯವಮಾಶ್ರಿತ್ಯ ಲಕ್ಷಯತಿ। ಭೃಜ್ಜಾತಿ ಭೃಜ್ಜೇತ್ ಭರ್ಜನಂ ಕುರ್ಯಾತ್। ಇಂದ್ರೋ ಮನಾಯೋಃ ಸ್ತುತಿಮಿಚ್ಛತೋ ಯಜಮಾನಸ್ಯೋಚಥಾನಿ ಸ್ತೋತ್ರಾಣಿ ಪ್ರತಿ ಹರ್ಯನ್ ಪ್ರತಿಕಾಮಯಮಾನಃ ಸನ್ ತಸ್ಮಿನ್ಯಜಮಾನೇ ವೃಷಣಂ ಕಾಮಾನಾಂ ವರ್ಷಣಸಮರ್ಥಂ ಶುಷ್ಮಂ ಬಲಂ ದಧತ್। ಧಾರಯತಿ ॥

॥ ಪ್ರತಿಪದಾರ್ಥ ॥

ಅದ್ಯ—ಇಂದು। **ಯಃ**—ಯಾವ ಯಜಮಾನನು। **ಇಂದ್ರಾಯ**—ಇಂದ್ರನನ್ನುದ್ದೇಶಿಸಿ। **ಸೋಮಂ**—ಸೋಮವನ್ನು। **ಸುನವತ್**—ಹಿಂಡುವನೋ। **ಪಕ್ತೀಃ**—ಪಾಕಯೋಗ್ಯವಾದ ಪುರೋಡಾಶಾದಿಗಳನ್ನು। **ಪಚಾತ್**—ಪಕ್ವಮಾಡುವನೋ। **ಉತ**—ಮತ್ತು। **ಧಾನಾಃ**—ಯವಾದಿ ಧಾನ್ಯಗಳನ್ನು। **ಭೃಜ್ಜಾತಿ**—ಹುರಿದು ಭಕ್ಷಣಯೋಗ್ಯವನ್ನಾಗಿ ಮಾಡುವನೋ (ಅಂತಹ)। **ಮನಾಯೋಃ**—ಸ್ತುತಿಕರ್ತನಾದ ಯಜಮಾನನ। **ಉಚಥಾನಿ**—ಸ್ತೋತ್ರಗಳನ್ನು। **ಇಂದ್ರಃ**—ಇಂದ್ರನು। **ಪ್ರತಿ ಹರ್ಯನ್**—ಅಪೇಕ್ಷಿಸಿ ಸ್ವೀಕರಿಸುತ್ತಾ। **ತಸ್ಮಿನ್**—ಆ ಯಜಮಾನನಲ್ಲಿ। **ವೃಷಣಂ**—ಕಾಮವರ್ಷಕವಾದ। **ಶುಷ್ಮಂ**—ಬಲವನ್ನು। **ದಧತ್**—ಉಂಟುಮಾಡುತ್ತಾನೆ

॥ ಭಾವಾರ್ಥ ॥

ಇಂದ್ರನನ್ನು ಸ್ತುತಿಸುವ ಯಾವ ಯಜಮಾನನು ಇಂದು ಇಂದ್ರನನ್ನು ಉದ್ದೇಶಿಸಿ ಸೋಮವನ್ನು ಹಿಂಡಿಯೂ, ಪಾಕಯೋಗ್ಯವಾದ ಪುರೋಡಾಶಾದಿಗಳನ್ನು ಪಕ್ವಮಾಡಿಯೂ, ಯವಾದಿ ಧಾನ್ಯಗಳನ್ನು ಹುರಿದು ಭಕ್ಷಣಕ್ಕೆ ಯೋಗ್ಯವನ್ನಾಗಿ ಮಾಡಿಯೂ, ತನ್ನ ಸ್ತುತಿಪೂರ್ವಕವಾಗಿ ಇಂದ್ರನಿಗೆ ಅರ್ಪಿಸುವನೋ, ಅಂತಹ ಯಜಮಾನನ ಸ್ತೋತ್ರಗಳನ್ನು ಇಂದ್ರನು ಅಪೇಕ್ಷಿಸಿ ಸ್ವೀಕರಿಸುತ್ತಾ ಅವನಲ್ಲಿ ಕಾಮವರ್ಷಕವಾದ ಬಲವನ್ನುಂಟುಮಾಡುತ್ತಾನೆ.

English Translation.

Indra accepting graciously the praises of his devoted (worshipper), who to-day pours out the libation to him, who toasts the buttered cakes

or fries the barley for Indra, exercises towards him the power that grants his desires

॥ संहितापाठः ॥

यदा समर्यं वृचेदृघावा दीर्घं यदाजिमभ्यक्रदर्यः।
अचिक्रदद्वृषणं पत्न्याचा दुरोण आ निधितं सोमसुद्भिः ॥४॥

॥ पदपाठः ॥

यदा । स्वमर्यं । वि । अचेत् । यघावा । दीर्घं । यत् । आजिं । अभि । अभ्यक्रत् । अर्यः ।
अचिक्रदत् । वृषणं । पत्न्यै । अच्छ । दुरोणे । आ । निऽधितं । सोमसुत्ऽभिः ॥ ४ ॥

॥ सायणभाष्यं ॥

यदा यघावा शत्रोर्हिंसके इन्द्रः समर्यं सह मर्तव्यं शत्रुं वृचेत् वृञ्छीत् विशेषेण जानीयात् । यदा दार्यः स्वामीन्द्रो दीर्घमत्यधिकमाजिं संग्राममभ्यक्रत् अभिपश्येत् तदा तस्येन्द्रस्य पत्न्यै दुरोणे यज्ञगृहे सोमसुद्भिः सोमं सुन्वद्भिर्यज्ञिभिर्निधितं क्षिप्तं हविः । सोमपानेनोत्साहवंतमित्यर्थः । वृषणं कामानां वर्षितारमिन्द्रमभ्यच्छाभि अचिक्रदत् । अक्रंदयति । अह्वयतेत्यर्थः ॥

॥ प्रतिपदार्थ ॥

यदा—यावाग । यघावा—शत्रुहिंसकनाद इन्द्रनु । समर्यं—ओडनेयोग सायिसलु योग्यनाद शत्रुवन्नु । वृचेत्—चिन्नागि अरितनोग । यत्—यावाग । अर्यः—स्वामियाद इन्द्रनु । दीर्घं—अत्यधिकवागि । आजिं—संग्रामदल्लि । अभ्यक्रत्—विशेष आसक्तियिंद वीक्षिसुत्तिरुवनोग आग । पत्न्यै—अवन पत्नियु । दुरोणे—यज्ञगृहदल्लि । सोमसुद्भिः—सोमवन्नु हिंडुव ऋत्विक्कुगळिंद । निधितं—उत्साहितनादवनू । वृषणं—कामवर्षकनू आद इन्द्रनन्नु । अच्छ—तन्न अभिमुखवागि बरुवंते । आ चिक्रदत्—कूगि करेयुत्तायि

। ಭಾವಾರ್ಥ ।

ಶತ್ರುಹಿಂಸಕನಾದ ಇಂದ್ರನು ಒಡನೆಯೇ ಸಾಯಿಸಲು ಯೋಗ್ಯನಾದ ಶತ್ರುವನ್ನು ಯಾವಾಗ ಚೆನ್ನಾಗಿ ಅರಿತನೋ ಮತ್ತು ಸ್ವಾಮಿಯಾದ ಇಂದ್ರನು ಸಂಗ್ರಾಮದಲ್ಲಿ ಅತ್ಯಧಿಕವಾದ ಆಸಕ್ತಿಯಿಂದ ಯಾವಾಗ ವೀಕ್ಷಿಸುತ್ತಾ ನಿಲ್ಲುವನೋ ಆಗ ಅವನ ಪತ್ನಿಯು ಯಜ್ಞಗೃಹದಲ್ಲಿ ಸೋಮವನ್ನು ಹಿಂಡುವ ಋತ್ವಿಕ್ಕುಗಳಿಂದ ಉತ್ಸಾಹಿತನಾದವನೂ, ಕಾಮವರ್ಷಕನೂ ಆದ ಇಂದ್ರನನ್ನು ತನ್ನ ಭಮುಖವಾಗಿ ಬರುವಂತೆ ಕೂಗಿ ಕರೆಯುತ್ತಾಳೆ.

English Translation.

When the destroyer (of enemies) distinguishes a mortal foe, when the lord is engaged in the long (continued) battle, (his) bride summons to the dwelling the showerer (of benefits), encompassed by the offerers of the libation.

। ವಿಶೇಷವಿಷಯಗಳು ।

ಈ ಋಕ್ಕಿನ ಅರ್ಥವಿವರಣೆಯು ಸ್ವಲ್ಪ ತೊಡಕಾಗಿರುವುದು ಭಾಷ್ಯಕಾರರು ಆರ್ಯಶಬ್ದಕ್ಕೆ ಪ್ರಭುವಾದ ಇಂದ್ರನೆಂದೂ ಪತ್ನೀ ಎಂಬ ಶಬ್ದಕ್ಕೆ ಇಂದ್ರನ ಪತ್ನಿಯಾದ ಇಂದ್ರಾಣಿಯೆಂದೂ ಹೇಳಿ ಇಂದ್ರನು ತನ್ನನ್ನು ಸ್ತೋತ್ರ ಮಾಡುವವರ ಪರವಾಗಿ ದೀರ್ಘಕಾಲ ನಡೆಯುವ ಯುದ್ಧದಲ್ಲಿ ನಿರತನಾಗಿರುವಾಗ ಇಂದ್ರನಿಗಾಗಿ ಸೋಮರಸವನ್ನು ಅರ್ಪಿಸುತ್ತಿರುವ ಋತ್ವಿಗ್ಯಜಮಾನರಿಗೆ ಇಷ್ಟಾರ್ಥಗಳನ್ನು ಕೊಡುವುದಕ್ಕಾಗಿ ಇಂದ್ರನ ಪತ್ನಿಯಾದ ಇಂದ್ರಾಣಿಯು ದೂರಪ್ರದೇಶದಲ್ಲಿ ಯುದ್ಧಾಸಕ್ತನಾಗಿರುವ ಇಂದ್ರನನ್ನು ಬರುವಂತೆ ಆಹ್ವಾನಮಾಡುವಳು ಎಂದು ಮುಖ್ಯಾರ್ಥವನ್ನು ವಿವರಿಸಿರುವರು. ಆದರೆ ಕೆಲವು ಪಾಶ್ಚಾತ್ಯ ಪಂಡಿತರು ಆರ್ಯ ಶಬ್ದಕ್ಕೆ ಯಜ್ಞಮಾಡುವ ಯಜಮಾನನೆಂದು ಅರ್ಥಮಾಡಿ ಆ ಯಜಮಾನನು ಯುದ್ಧಕಾರ್ಯದಲ್ಲಿ ತೊಡಗಿದ್ದು ಬಹಳಕಾಲದವರೆಗೂ ಬರದಿರುವುದರಿಂದ ಅವನ ಪತ್ನಿಯು ಋತ್ವಿಜನರಿಂದ ಸೋಮರಸವನ್ನು ಸಿದ್ಧಪಡಿಸಿ ಇಂದ್ರನನ್ನು ಯಜಮಾನನ (ತನ್ನ ಪತಿಯ) ಪರವಾಗಿ ಆಹ್ವಾನಮಾಡುವಳು ಎಂಬರ್ಥವು ಈ ಋಕ್ಕಿನಲ್ಲಿ ಸೂಚಿತವಾಗಿದೆಯೆಂದು ಅಭಿಪ್ರಾಯಪಡುತ್ತಾರೆ Wilson ಎಂಬ ಆಂಗ್ಲಪಂಡಿತನು—Sayana explains ಆರ್ಯ by ಸ್ವಾಮಿ, lord, that is Indra, and ಪತ್ನಿ in the following passage, he says is Indra's wife, but it would be more consistent with the concluding passage to render ಆರ್ಯ as the name of the orthodox Hindu, in whose behalf his wife propitiates Indra ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ

॥ संहितापाठः ॥

भूयसा वस्नमचरत्कनीयोऽविक्रीतोऽअकानिषꣳ पुनर्यन् ।
स भूयसा कनीयोऽनारिरेचीद्दीना दक्षा वि दुहन्ति प्र वाणं ॥ ४ ॥

॥ पदपाठः ॥

भूयसा । वस्नं । अचरत् । कनीयः । अविक्रीतः । अकानिषं । पुनः । यन् ।
सः । भूयसा । कनीयः । न । अरिरेचीत् । दीनाः । दक्षाः । वि । दुहन्ति । प्र । वाणं ॥

॥ सायणभाष्यं ॥

अत्र ऋग्द्वयेऽपि संप्रदायविद्भिः पूर्वाचार्यैः केचित् श्लोकाः पठ्यन्ते । त एव लिख्यन्ते ॥ अल्पं यः परिगृह्णाति मूल्यं पण्येन भूयसा । स क्रेतारं पुनर्गच्छन्न विक्रीतस्त्वयं मया ॥ इति ब्रुवन्यामयते पुनर्मूल्यस्य पूरणं । स विक्रेता पुनर्मूल्यं भूयसा न प्रपूरयेत् । हीनं न लभते वस्नं यदा विक्रीतवान्पुरा । यथासमयमेव स्यात्तयोर्नः पुनरन्यथा ॥ अयं वि क्रीय इवेति समयश्चेत्कृतो भवेत् । अथ मूल्यार्थमेतत्स्याद्विचार्यैव हि निर्णयः ॥ इत्येवं समयोऽकारि तदा मूल्यं प्रपूर्यते । तस्मादादौ मयाऽकार्यः समयोऽत्रेति चिंतयन् ॥ वामदेवोऽवशीकृत्य शक्रं स्तोत्रेण भूयसा । विक्रीणन् समयं चक्रे इंद्रं क इमामिति ऋचि ॥ अतश्च द्व्यृचे विकारोऽयं भूयसा वस्नमित्यथमिति ॥ अयमभिप्रायः प्रतिपाद्यते । कश्चिद्भूयसा भूमा पण्येन द्रव्येण कनीयोऽल्पतरं वस्नं वसु मूल्यं धनमाचरत् । प्रापयेति । पुनर्यन् क्रेतारं पुनर्गच्छन् स विक्रेतायमर्थोऽयं मयाविक्रीत इति ब्रुवन्नकानिषं । मूल्यपूर्तिं कामयते ॥ व्यत्ययेनोत्तमपुरुषः ॥ स विक्रेता भूयसा धनेन कनीयोऽल्पतरं मूल्यं नारिरेचीत् । क्रेतुः सकाशान्न रिक्तीकरोति । न लभते इत्यर्थः । दीना असमर्थाः दक्षाः समर्थाश्च वाणं वचनं वि प्र दुहन्ति । यथोक्तं क्रयकाले तथैव लभंते ॥

॥ प्रतिपदार्थः ॥

भूयसा—ಅಧಿಕವಾದ ಬೆಲೆಯುಳ್ಳ ವಸ್ತುವಿನಿಂದ । कनीयः - ಬಹಳ ಸ್ವಲ್ಪವಾದ । वस्नं—ಮೂಲ್ಯವನ್ನು । अचरत्—(ನಾರುವವನು) ಪಡೆಯುತ್ತಾನೆ । पुनर्यन्—(ತನಗೆ ನಷ್ಟವಾಯಿತೆಂದು

ತಿಳಿದನಂತರ) ಪುನಃ ಕೊಂಡವನಲ್ಲಿಗೆ ಹೋಗಿ। **ಅವಿಕ್ರೀತಃ**—ನಿನಗೆ ನನ್ನ **ಪದಾರ್ಥ**ವನ್ನು ಮಾರಿಯೇ ಇಲ್ಲ ಎಂದು ಹೇಳುತ್ತಾ। **ಅಕಾನಿಷಂ**—ಪದಾರ್ಥದ ಯೋಗ್ಯತೆಗೆ ಬರಬೇಕಾದ ಬಾಕಿಯನ್ನು (ಕೇಳುತ್ತಾನೆ)। **ಸಃ**—ಕೊಂಡುಕೊಂಡವನು। **ಭೂಯಸಾ ಕನೀಯಃ ನಾರಿರೇಚೀತ್**--ಅಧಿಕವಾದ ಧನವನ್ನು ಕೊಡೋಣದರಿಂದ (ಹಿಂದೆ ಕೊಟ್ಟ) ಅಲ್ಪವಾದ ಮೊಬಲಗನ್ನು ಪೂರ್ಣಮಾಡುವುದಿಲ್ಲ। ಅಥವಾ **ಭೂಯಸಾ ಕನೀಯಃ ನಾರಿರೇಚೀತ್**-ತನಗೆ ಲಭಿಸಿದ ಬೆಲೆಯುಳ್ಳ ಪದಾರ್ಥವನ್ನು ಹಿಂದಕ್ಕೆ ಕೊಟ್ಟು ತಾನು ಕೊಟ್ಟದ್ದ ಅಲ್ಪಮೊಬಲಗನ್ನು ಮಾರಿದವನಿಂದ ಪಡೆಯುವುದಿಲ್ಲ। **ದೀನಾಃ**—ಅಸಮರ್ಥರಾಗಲಿ। **ದಕ್ಷಾಃ**—ಸಮರ್ಥರಾಗಲಿ। **ವಾಣಂ**—ತಾವು ಆಡಿದ ಮಾತಿನಂತೆ। **ವಿ ಪ್ರ ದುಹಂತಿ**—ಕ್ರಯಕಾಲದಲ್ಲಿ ಒಪ್ಪಿದ ಬೆಲೆಯನ್ನೇ ಪಡೆಯಬೇಕು

॥ ಭಾವಾರ್ಥ ॥

ಪದಾರ್ಥವನ್ನು ಮಾರುವವನು ತನ್ನ ಆತುರದಿಂದಾಗಲಿ ಅಥವಾ ಅಜ್ಞಾನದಿಂದಾಗಲಿ, ಬಹಳ ಬೆಲೆಯುಳ್ಳ ಪದಾರ್ಥವನ್ನು ಅಲ್ಪಬೆಲೆಗೆ ಮಾರಿ ನಂತರ ಅದರ ಪರಿಜ್ಞಾನವುಂಟಾಗಿ ಕೊಂಡವನಲ್ಲಿ ಬಂದು ನಿನಗೆ ನನ್ನ ಪದಾರ್ಥವನ್ನು ಮಾರಿಯೇ ಇಲ್ಲ, ಎಂದು ಹೇಳಿ ತನ್ನ ಪದಾರ್ಥವನ್ನಾಗಲಿ ಅಥವಾ ಅದರ ಯೋಗ್ಯತೆಗೆ ತಕ್ಕಂತೆ ಬರಬೇಕಾದ ಬಾಕಿಯನ್ನಾಗಲಿ ಅಪೇಕ್ಷಿಸುತ್ತಾನೆ ಆದರೆ ಕೊಂಡವನು ಅಂತಹ ಬೆಲೆಬಾಳುವ ವಸ್ತುವನ್ನು ಹಿಂದಕ್ಕೆ ಕೊಟ್ಟು ಅಲ್ಪವಾದ ಧನವನ್ನು ಪುನಃ ಪಡೆಯಲಿಚ್ಛಿಸುವುದಿಲ್ಲ ಸಮರ್ಥರಾಗಲಿ, ಅಸಮರ್ಥರಾಗಲಿ ಕ್ರಯಕಾಲದಲ್ಲಿ ಮಾತನಾಡಿ ಯಾವ ಬೆಲೆಯನ್ನು ನಿಶ್ಚಯಿಸಿಮಾಡುತ್ತಾರೋ ಆ ಬೆಲೆಯನ್ನು ಮಾತ್ರ ಪಡೆಯಬೇಕು.

English Translation.

A man has realized a small price for an article of great value, and again coming (to the buyer he says) this has not been sold, I require the full price, but he does not recover a small price by a large (equivalent). whether helpless or clever they adhere to their bargain

॥ ವಿಶೇಷವಿಷಯಗಳು ॥

ಈ ಋಕ್ಕು ಮತ್ತು ಮುಂದಿನ ಋಕ್ಕಿನ ವಿಷಯದಲ್ಲಿ ಸಂಪ್ರದಾಯಜ್ಞರಾದ ಪೂರ್ವಾಚಾರ್ಯರು ಕೆಲವು ಶ್ಲೋಕಗಳನ್ನು ಪಠಿಸುವರು ಎಂದು ಹೇಳಿ ಭಾಷ್ಯಕಾರರು ಆ ಶ್ಲೋಕಗಳನ್ನು ಇಲ್ಲಿ ವಿವರಿಸಿದಾರೆ—

ಅಲ್ಪಂ ಯಃ ಪರಿಗೃಹ್ಣಾತಿ ಮೂಲ್ಯಂ ಪಣ್ಯೇನ ಭೂಯಸಾ ।
ಸ ಕ್ರೇತಾರಂ ಪುನರ್ಗಚ್ಛೇನ್ನ ವಿಕ್ರೀತಸ್ತ್ವಯಂ ಮಯಾ ॥ ೧ ॥

ಇತಿ ಬ್ರುವನ್ ಕಾಮಯತೇ ಪುನರ್ಮೂಲ್ಯಸ್ಯ ಪೂರಣಂ ।
ಸ ವಿಕ್ರೇತಾ ಪುನರ್ಮೂಲ್ಯಂ ಭೂಯಸಾ ನ ಪ್ರಪೂರಯೇತ್ ॥ ೨ ॥

ಹೀನಂ ನ ಲಭತೇ ವಸ್ನಂ ಯದಾ ವಿಕ್ರೀತವಾನ್ ಪುರಾ ।
ಯಥಾ ಸಮಯಮೇವ ಸ್ಯಾತ್ತಯೋರ್ನ ಪುನರನ್ಯಥಾ ॥ ೩ ॥

ಆಯಂ ವಿಕ್ರಯ ಏವೇತಿ ಸಮಯೇಷ್ಟೇಶ್ಯತೋ ಭವೇತ್ ।
ಅಥ ಮೂಲ್ಯಾರ್ಥಮೇತತ್ಸ್ಯಾದ್ವಿಚಾರ್ಯೈವ ತು ನಿರ್ಣಯಃ ॥ ೪ ॥

ಇತ್ಯೇವಂ ಸಮಯೋ೭ಕಾರಿ ತದಾ ಮೂಲ್ಯಂ ಪ್ರಪೂರ್ಯತೇ ।
ತಸ್ಮಾದಾದೌ ಮಯಾ ಕಾರ್ಯಃ ಸಮಯೋ೭ತ್ರೇತಿ ಚಿಂತಯೆನ್ ॥ ೫ ॥
ವಾಮದೇವೋ ವಶೀಕೃತ್ಯ ಶಕ್ರಂ ಸ್ತೋತ್ರೇಣ ಭೂಯಸಾ ।
ವಿಕ್ರೀಣನ್ ಸಮಯಂ ಚಕ್ರ ಇಂದ್ರಂ ಕ ಇಮಮಿತ್ಯೃಚಿ ॥ ೬ ॥
ಅತಶ್ಚ ದ್ವ್ಯೃಚ ಏಕಾರ್ಥೋ ಭೂಯಸಾ ವಸ್ನಮಿತ್ಯಯಂ ॥ ಇತಿ ॥

ಈ ಋಕ್ಕಿಗೆ ಮುಂದಿನ ಋಕ್ಕಿಗೆ ಒಟ್ಟು ಸೇರಿ ಒಂದಭಿಪ್ರಾಯವನ್ನು ಸೂಚಿಸುವುದಾಗಿದೆ ಅದನ್ನು ಮೇಲಿನ ಶ್ಲೋಕಗಳು ಒಂದು ಉದಾಹರಣೆಯ ಮೂಲಕ ವಿಶದಪಡಿಸುತ್ತವೆ ಹೇಗೆಂದರೆ—ಒಬ್ಬ ಪುರುಷನು ಅಥವಾ ವ್ಯಾಪಾರ ಮಾಡುವವನು ಇನ್ನೊಬ್ಬ ಪುರುಷನಿಗೆ ಒಂದು ವಸ್ತುವನ್ನು ಮಾರುವನು. ವಸ್ತುವನ್ನು ಕೊಂಡುಕೊಳ್ಳುವ ಪುರುಷನು ಆ ಕಾಲದಲ್ಲಿ ಅದರ ಬೆಲೆಯನ್ನು ಕೇಳಿ ತಿಳಿದುಕೊಂಡು ನಿಷ್ಕರ್ಷೆಮಾಡಿ, ಮಾರುವವನು ನಿಷ್ಕರ್ಷೆಮಾಡಿದ ಬೆಲೆಯನ್ನು ಕೊಟ್ಟು ವಸ್ತುವನ್ನು ತೆಗೆದುಕೊಂಡು ಹೋಗುವನು ಅನಂತರ ಸ್ವಲ್ಪ ಹೊತ್ತಿನ ಮೇಲೆ ಆ ವ್ಯಾಪಾರಗಾರನು ಇಂತು ಯೋಚಿಸುವನು— ನಾನು ಮಾರಿದ ವಸ್ತುವು ಬಹಳ ಬೆಲೆ ಬಾಳುವುದು ಅದನ್ನು ಅಲ್ಪ ಬೆಲೆಗೆ ಮಾರಿದ್ದು ಅನ್ಯಾಯವಾಯಿತು ನನಗೆ ಇನ್ನೂ ಹೆಚ್ಚು ಬೆಲೆ ಬರಬೇಕು ಎಂದು ಮೊದಲಾಗಿ ಆಲೋಚಿಸಿ, ವಸ್ತುವನ್ನು ಕೊಂಡುಕೊಂಡ ಪುರುಷನ ಹತ್ತಿರ ಹೋಗಿ—ಎಲೈ ಪುರುಷನೇ, ನೀನು ಕೊಂಡುಕೊಂಡ ಪದಾರ್ಥದ ಬೆಲೆಯು ತೀರಾ ಕಮ್ಮಿ ಆದುದರಿಂದ ಈಗ ನನಗೆ ಅದಕ್ಕಾಗಿ ಹೆಚ್ಚು ಬೆಲೆಯನ್ನು ಕೊಡು ಎನ್ನುವನು ಆದರೆ ವಸ್ತುವನ್ನು ಕೊಂಡ ಪುರುಷನು ವ್ಯಾಪಾರಗಾರನನ್ನು ಕುರಿತು--ನೀನು ಹೇಳಿದ ಕ್ರಯವನ್ನು ಕೊಟ್ಟು ನಾನು ಕೊಂಡುಕೊಂಡಿದ್ದೇನೆ. ನನ್ನದೇನೂ ತಪ್ಪಿಲ್ಲ ವ್ಯಾಪಾರಕಾಲದಲ್ಲಿ ನೀನು ಕೇಳಿದ ಕ್ರಯವನ್ನು ನಾನು ಕೊಡಲು ಒಪ್ಪಿ, ಆದರಂತೆ ಮೂಲ್ಯವನ್ನು ಕೊಟ್ಟರುವುದರಿಂದ ಅದು ನಮ್ಮಿಬ್ಬರಿಗೂ ನಡೆದ ಒಂದು ಒಪ್ಪಂದವು. ಅದನ್ನು ನಾವಿಬ್ಬರೂ ಪಾಲಿಸಬೇಕು ಎನ್ನುವನು ಆದಕ್ಕೆ ವ್ಯಾಪಾರಗಾರನು ನ್ಯಾಯವನ್ನು ಬದಿಗೆ ಒತ್ತಿ, ನಾನು ನಿನಗೆ ಪದಾರ್ಥವನ್ನು ಮಾರಿಯೇ ಇಲ್ಲ ಅದನ್ನು ನನಗೆ ಹಿಂದಕ್ಕೆ ಕೊಡು ಎಂದು ಒರಟುತನವನ್ನು ಪ್ರದರ್ಶಿಸುವನು ಆಗ ಆದಕ್ಕೆ ಪ್ರತ್ಯುತ್ತರವಾಗಿ ಪದಾರ್ಥವನ್ನು ಕೊಂಡುಕೊಂಡ ಪುರುಷನು—ಎಲೈ ವ್ಯಾಪಾರಗಾರನೇ, ಪದಾರ್ಥವು ಹೆಚ್ಚು ಬೆಲೆ ಬಾಳುವುದಾದರೆ ಮಾರುವ ಕಾಲದಲ್ಲಿಯೇ ಅದಕ್ಕೆ ಹೆಚ್ಚು ಬೆಲೆಯನ್ನು ಕೇಳಬೇಕಾಗಿದ್ದಿತು ನನಗೆ ಇಷ್ಟಬಂದರೆ ತೆಗೆದುಕೊಳ್ಳುತ್ತಿದ್ದೆ ಇಲ್ಲವಾದರೆ ಇಲ್ಲ ಅದನ್ನು ಬಿಟ್ಟು ಈಗ ಹೆಚ್ಚು ಬೆಲೆ ಕೇಳುವುದು ನ್ಯಾಯವೂ ಅಲ್ಲ. ಅದರಂತೆ ಕೊಡುವುದು ಸಾಧ್ಯವೂ ಇಲ್ಲ. ವ್ಯಾಪಾರವೆಂದರೆ ಮಾರುವವನು ಮತ್ತು ಕೊಂಡುಕೊಳ್ಳುವವನು ಎಂಬ ಇಬ್ಬರ ಮಧ್ಯದಲ್ಲಿ ನಡೆಯುವ ಒಂದು ಒಪ್ಪಂದವು. ಅದನ್ನು ಇಬ್ಬರೂ ಪಾಲಿಸಲೇಬೇಕು ಯಾರೂ ಅತಿಕ್ರಮಿಸಕೂಡದು ಎಂದು ಹೇಳುವನು

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಮಾರುವವನಿಗೂ, ಕೊಳ್ಳುವವನಿಗೂ ವ್ಯಾಪಾರದಲ್ಲಿ ಒಂದು ಒಪ್ಪಂದವಾದ ಮೇಲೆ ಇಬ್ಬರೂ ಅದರಂತೆ ನಡೆಯಬೇಕು ಪದಾರ್ಥದ ಬೆಲೆ ಹೆಚ್ಚಾಗಿದ್ದು ಮಾರುವವನು ಅವನ್ನು ಆ ಕಾಲದಲ್ಲಿ ಕಾಣದೆ ಮಾರಿದರೆ ಆಮೇಲೆ ಅದರ ಹೆಚ್ಚು ಬೆಲೆಯನ್ನು ಕೇಳುವುದು ತಪ್ಪು. ಲಾಭವಾಗಲಿ ನಷ್ಟವಾಗಲಿ ಮಾರುವವನು ಅದನ್ನು ಅನುಭವಿಸಲೇಬೇಕು. ಅದರಂತೆ ಕೊಂಡುಕೊಳ್ಳುವವನು ಸಹ ತಾನು ಪಡೆದ ವಸ್ತುವು ಹೆಚ್ಚುಬೆಲೆಬಾಳುವುದಿಲ್ಲವೆಂದೂ ಕ್ರಯವು ಮೊಬಲಗು ಅತಿಹೆಚ್ಚಿದೆಂದು ಹೇಳಿ ಮೌಲ್ಯವನ್ನು ಹಿಂದಕ್ಕೆ

ಕೊಡಬೇಕೆಂದು ಅಥವಾ ಬೆಲೆಯನ್ನು ಕಮ್ಮಿಮಾಡಬೇಕೆಂದು ಕೇಳುವುದೂ ತಪ್ಪು ಪದಾರ್ಥದ ಬೆಲೆಯು ಹೆಚ್ಚೇ ಅಥವಾ ಕಡಿಮೆಯೇ ಎಂಬ ವಿಷಯವು ವ್ಯಾಪಾರಕಾಲದಲ್ಲಿಯೇ ಇತ್ಯರ್ಥವಾಗಿರುವುದರಿಂದ ಅಥವಾ ಇತ್ಯರ್ಥವಾಗಿದೆಯೆಂದು ಭಾವಿಸಲ್ಪಟ್ಟಿರುವುದರಿಂದ ಇಬ್ಬರಲ್ಲಿ ಯಾರೂ ಹೆಚ್ಚು ಬೆಲೆಯನ್ನು ಕೇಳುವುದಾಗಲಿ, ಕೊಡುವುದಾಗಲಿ ನ್ಯಾಯವಲ್ಲ. ಲಾಭವಾಗಲಿ, ನಷ್ಟವಾಗಲಿ ಇಬ್ಬರೂ ಅದನ್ನು ಅನುಭವಿಸಬೇಕು ಎಂದು ನ್ಯಾಯವು ಉಕ್ತವಾಗಿದೆ.

ಪ್ರಕೃತ ಋಕ್ಕುಗಳಲ್ಲಿ (ಅದರಲ್ಲಿಯೂ ೧೦ನೆಯ ಋಕ್ಕಿನಲ್ಲಿ) ಹೇಳಿರುವ ವಿಷಯವು ಈ ನ್ಯಾಯವನ್ನು ಅನುಸರಿಸಿದೆ ಹೇಗೆಂದರೆ—ವಾಮದೇವಋಷಿಯು ಇಂದ್ರನನ್ನು ಒಂದು ಅಥವಾ ಎರಡು ಸ್ತೋತ್ರಗಳಿಂದ ಮೊದಲೇ ಸ್ತುತಿಸಿ ಒಲಿಸಿಕೊಂಡಿದ್ದಾನೆ. ಹೀಗಿರುವಾಗ ಇನ್ನೊಬ್ಬ ಪುರುಷನು (ಅಥವಾ ಯಜಮಾನನು) ಇಂದ್ರನನ್ನು ಹತ್ತು ಸ್ತೋತ್ರಗಳಿಂದ ಸ್ತುತಿಸಿ ಇಂದ್ರನು ತನ್ನವನೆಂದು ಹೇಳಿಕೊಳ್ಳುವುದು ಸರಿಯಲ್ಲ ಏಕೆಂದರೆ ಮೇಲೆ ಹೇಳಿದ ನ್ಯಾಯದಂತೆ ವಾಮದೇವಋಷಿಯು ಇಂದ್ರನನ್ನು ಮೊದಲೇ ಸ್ತುತಿಸಿದಾನೆ. ಅವನು ಸ್ತುತಿಸಿರುವ ಸ್ತೋತ್ರಗಳು ಕಮ್ಮಿಯಾಗಿರಬಹುದು, ಆದರೂ ಅವನು ಇನ್ನೊಬ್ಬ ಯಜಮಾನನಿಗಿಂತ ಮೊದಲೇ ಸ್ತುತಿಸಿರುವುದರಿಂದ ಇಂದ್ರನು ವಾಮದೇವಋಷಿಗೇ ಮೊದಲು ಅನುಗ್ರಹಮಾಡಬೇಕು. ಹೆಚ್ಚು ಸ್ತೋತ್ರಗಳಿಂದ ಸ್ತುತಿಸಿದ ಹೊಸ ಯಜಮಾನನಿಗೆ ಇಂದ್ರನ ಅನುಗ್ರಹದ ವಿಷಯದಲ್ಲಿ ಹೆಚ್ಚು ಬಾಧ್ಯತೆ ಇರಲು ಕಾರಣವಿಲ್ಲ ಆದುದರಿಂದ ವಾಮದೇವಋಷಿಯು ಹೊಸ ಯಜಮಾನನ ಅಥವಾ ಹತ್ತು ಸ್ತೋತ್ರಗಳಿಂದ ಸ್ತುತಿಸಿದ ಪುರುಷನ ಕೂಡ ಇಂತು ಒಪ್ಪಂದ ಮಾಡಿಕೊಳ್ಳುವನು—ಎಲೈ ಇಂದ್ರಭಕ್ತನೇ, ಈ ಇಂದ್ರನನ್ನು ನಾನು ಮೊದಲೇ ಎಂದರೆ ನಿನಗಿಂತ ಮುಂಚೆ ಸ್ತುತಿಸಿರುವುದರಿಂದ ಈ ಇಂದ್ರನು ನನ್ನವನು, ನೀನು ತಾತ್ಕಾಲಿಕವಾಗಿ ಇಂದ್ರನನ್ನು ಹೆಚ್ಚು ಸ್ತೋತ್ರಗಳಿಂದ (ಹತ್ತು ಸ್ತೋತ್ರಗಳಿಂದ) ಸ್ತುತಿಸಿ ಒಲಿಸಿಕೊಂಡಿದ್ದೀಯೆ ಆದ್ದರಿಂದ ಇಂದ್ರನು ನೀನು ಮಾಡಿದ ಸ್ತೋತ್ರಗಳಿಗೆ ಪ್ರತ್ಯುಪಕಾರಾರ್ಥವಾಗಿ ನಿನ್ನ ಶತ್ರುಗಳನ್ನು ನಾಶಮಾಡಿದ ಕೂಡಲೇ ಇಂದ್ರನನ್ನು ಪುನಃ ಮೊದಲು ಸ್ತೋತ್ರಮಾಡಿದ ನನ್ನ ಬಳಿಗೇ ಕಳುಹಿಸಿಕೊಡಬೇಕು—ಎಂಬುದೇ ಆ ಒಪ್ಪಂದವು ಈ ವಿಷಯವನ್ನೇ ಈ ಎರಡು ಋಕ್ಕುಗಳಲ್ಲಿ ವ್ಯಾಪಾರದ ದೃಷ್ಟಾಂತದಿಂದ ವಿವರಿಸಲಾಗಿದೆ

॥ ಸಂಹಿತಾಪಾಠಃ ॥

ಕ ಇಮಂ ದಶಭಿರ್ಮಮೇಂದ್ರಂ ಕ್ರೀಣಾತಿ ಧೇನುಭಿಃ ।
ಯದಾ ವೃತ್ರಾಣಿ ಜಂಘನದಥೈನಂ ಮೇ ಪುನರ್ದದತ್ ॥ ೧೦ ॥

॥ ಪದಪಾಠಃ ॥

ಕಃ । ಇಮಂ । ದಶಭಿಃ । ಮಮ । ಇಂದ್ರಂ । ಕ್ರೀಣಾತಿ । ಧೇನುಭಿಃ ॥
ಯದಾ । ವೃತ್ರಾಣಿ । ಜಂಘನತ್ । ಅಥ । ಏನಂ । ಮೇ । ಪುನಃ । ದದತ್ ॥ ೧೦ ॥

॥ ಸಾಯಣಭಾಷ್ಯಂ ॥

ಮಮ ಮದೀಯೇಮಿಮಂ ಸ್ಮಭೂತಮಿಂದ್ರಂ ಧೇನುಭಿಃ ಪ್ರೀಣಯಿತ್ರೀಭಿರ್ದಶಭಿರ್ದಶಸಂಖ್ಯಾಕಾಭಿಃ ಸ್ತುತಿಭಿಃ ಕಃ ಕ್ರೀಣಾತಿ । ಕ್ರಯಂ ಕರೋತಿ । ತದಾನೀಂ ಹೇ ಕ್ರೇತಾರೋ ಯುಷ್ಮಾಕಂ ಮಧ್ಯ ಏವಮಪಿ ಸಮಯಃ ಕ್ರಿಯತೇ । ಯದಾಯಮಿಂದ್ರೋ ವೃತ್ರಾಣಿ ಕ್ಷದೀಯಾನ್ ಶತ್ರೂನ್ ಜಂಘನತ್ ಹನ್ಯಾತ್ ಅಥಾನಂತರಮೇನೈನಮಿಂದ್ರಂ ಮೇ ಮಹ್ಯಂ ಪುನರ್ದದತ್ । ಪುನರ್ದದ್ಯಾತ್ ॥

॥ ಪ್ರತಿಪದಾರ್ಥ ॥

ಮಮ ಇಮಂ--(ಸ್ತುತ್ಯಾದಿಗಳಿಂದ) ನನ್ನ ವನನ್ನಾಗಿಯೇ ಮಾಡಿಕೊಂಡಿರುವ । **ಇಂದ್ರಂ**—ಇಂದ್ರನನ್ನು । **ಧೇನುಭಿಃ**—ಪ್ರೀತಿಕಾರಕಗಳಾದವೂ । **ದಶಭಿಃ**—ದಶಸಂಖ್ಯಾಕವೂ ಆದ ಸ್ತುತಿಗಳಿಂದ । **ಕಃ**—ಯಾವ ಭಕ್ತನು । **ಕ್ರೀಣಾತಿ**—(ಸಹಾಯಾರ್ಥವಾಗಿ) ಕೊಂಡುಕೊಳ್ಳುವನೋ (ಅಂತಹ ಸ್ತುತಿಕರ್ತನೊಂದಿಗೆ ಕೆಳಗೆ ಕಂಡ ಈ ಸಮಯವನ್ನು ನಾನು ಮಾಡಿಕೊಳ್ಳುತ್ತೇನೆ. ಅದೇನೆಂದರೆ) । **ಯದಾ**—ಯಾವಾಗ । **ವೃತ್ರಾಣಿ**—(ಇಂದ್ರನನ್ನು ತಾತ್ಕಾಲಿಕವಾಗಿ ಕೊಂಡ ಸ್ತುತಿಕರ್ತನ) ಶತ್ರುಗಳನ್ನು । **ಜಂಘನತ್**—ನಾಶಪಡಿಸುವವನೋ । **ಅಥ**—ಆ ಒಡನೆಯೇ । **ಏನಂ**—ಈ ಇಂದ್ರನನ್ನು । **ಮೇ**—ನನಗೇನೇ । **ಪುನರ್ದದತ್**—ಹಿಂತಿರುಗಿ ವಾಪಸ್ಸು ಕಳುಹಬೇಕು.

॥ ಭಾವಾರ್ಥ ॥

ಸ್ತುತ್ಯಾದಿಗಳಿಂದ ನನ್ನ ವನನ್ನಾಗಿಯೇ ಮಾಡಿಕೊಂಡಿರುವ ಈ ಇಂದ್ರನನ್ನು ಪ್ರೀತಿಕಾರಕಗಳಾದವೂ ದಶಸಂಖ್ಯಾಕವಾದವೂ ಆದ ಸ್ತುತಿಗಳಿಂದ ಯಾವ ಭಕ್ತನು ಸಹಾಯಾರ್ಥವಾಗಿ ಕೊಂಡುಕೊಳ್ಳುವನೋ ಅಂತಹವನೊಂದಿಗೆ ನಾನು ಕೆಳಗೆ ಕಂಡ ಈ ಸಮಯವನ್ನು ಮಾಡಿಕೊಳ್ಳುವೆನು ಅದೇನೆಂದರೆ, "ಎಲೈ ಇಂದ್ರಭಕ್ತನೇ, ಈ ಇಂದ್ರನು ನನ್ನವನು. ನೀನು ತಾತ್ಕಾಲಿಕವಾಗಿ ಮಾತ್ರ ಕೊಂಡಿದ್ದೀಯೆ, ಇವನು ನಿನ್ನ ಶತ್ರುಗಳನ್ನು ನಾಶಪಡಿಸಿದೊಡನೆಯೇ ಇವನನ್ನು ಪುನಃ ನನ್ನಲ್ಲಿಗೇ ಕಳುಹಿಸಿಕೊಡಬೇಕು" ಎಂಬುದೇ ಆ ಸಮಯವು.

English Translation

Who buys this, my Indra, with ten milch cows? when he shall have slain (your) foes, then let (the purchaser) give him again to me.

॥ ವಿಶೇಷವಿಷಯಗಳು ॥

೯ ಮತ್ತು ೧೦ ನೇ ಋಕ್ಕುಗಳಿಗೆ ಪರಸ್ಪರ ಸಂಬಂಧವಿರುವುದರಿಂದ ಈ ಎರಡು ಋಕ್ಕುಗಳಿಗೂ ಒಟ್ಟಿಗೆ ಕೊಂಡುವಂತೆ ವಿಶೇಷವಿಷಯವನ್ನು ೯ ನೇ ಋಕ್ಕಿನಲ್ಲಿಯೇ ವಿವರಿಸಿದೆ ಈ ಋಕ್ಕಿಗೆ ಪ್ರತ್ಯೇಕವಾದ ವಿವರಣೆ ಆವಶ್ಯಕವಿಲ್ಲ

॥ संहितापाठः ॥

नू ष्टुत इन्द्र नू गृणान इषं जरित्रे नद्योऽ३ न पीपेः ।
अकारि ते हरिवो ब्रह्म नव्यं धिया स्याम रथ्यः सदासाः ॥ ८८ ॥

॥ पदपाठः ॥

नु । स्तुतः । इन्द्र । नु । गृणानः । इषं । जरित्रे । नद्यः । न । पीपेरिति पीपेः ।
अकारि । ते । हरिऽवः । ब्रह्म । नव्यं । धियाः । स्याम । रथ्यः । सदाऽसाः ॥ ८८ ॥

॥ सायणभाष्यं ॥

हे इन्द्र नु क्षिप्रं स्तुतः पूर्वैर्ऋषिभिः संस्तुतोः नु क्षिप्रं गृणानोऽस्माभिः स्तूयमानस्त्वमिषमन्नं जरित्रे स्तोत्रे मह्यं नद्योः नाद्धिर्नदीरिव पीपेः । प्यायय । प्रवृद्धं कुरु । हे हरिवोः हरिसंज्ञकाश्वोपेतेन्द्र ते तुभ्यं नव्यं नवतरं ब्रह्म स्तोत्रमकारि । अस्माभिः क्रियतेः । रथ्योः रथवंतोः वयं धिया प्रज्ञारूपया स्तुत्या सदासास्त्वां सर्वदा भजमानास्त्वदर्थं हविरूपस्यान्नस्य दातारोः वा स्याम । भूयास्म ॥

॥ प्रतिपदार्थ ॥

इन्द्र—ಎಲೈ ಇಂದ್ರನೇ । **नु**—ಅತಿಶಯವಾಗಿ । **स्तुतः**—ಹಿಂದಿನ ಋಷಿಗಳಿಂದ ಸ್ತುತನಾದ ವನೂ । **नु**—ಅದೇ ಶ್ರದ್ಧೆಯಿಂದ । **गृणानः**—(ನಮ್ಮಿಂದಲೂ) ಸ್ತುತನಾಗತಕ್ಕವನೂ ಆಗಿ । **नद्यः न**—ನದಿಗಳನ್ನು ಉದಕಗಳಿಂದ ತುಂಬುವಂತೆ । **जरित्रे**—ಸ್ತೋತೃವಾದ ನನಗೆ । **इषं**—ಅನ್ನವನ್ನು । **पीपेः**—ತುಂಬಿಕೊಡು । **हरिवः**—ಹರಿಸಂಜ್ಞಕಗಳಾದ ಅಶ್ವಗಳುಳ್ಳ ಎಲೈ ಇಂದ್ರನೇ । **ते**—ನಿನ್ನನ್ನುದ್ದೇಶಿಸಿ । **नव्यं**—ನೂತನವಾದ । **ब्रह्म**—ಸ್ತೋತ್ರವು । **अकारि**—ನಿರ್ಮಿತವಾಗುತ್ತದೆ । **रथ्यः**—ರಥಗಳನ್ನು ಹೊಂದಿರುವ ನಾವು । **धियाः**—ಪ್ರಜ್ಞಾಪೂರ್ವಕವಾದ ಸ್ತುತಿಯಿಂದ । **सदासाः**—ನಿನ್ನನ್ನು ಪೂಜಿಸಿ ಹವಿಸ್ಸನ್ನ ರ್ಪಿಸುವವರಾಗಿ । **स्याम**—ಆಗುವಂತೆ ಅನುಗ್ರಹಿಸು.

॥ भावार्थ ॥

ಎಲೈ ಇಂದ್ರನೇ, ಹಿಂದಿನ ಋಷಿಗಳಿಂದ ಅತಿಶಯವಾಗಿ ಸ್ತುತನಾದವನೂ, ಅದೇ ಶ್ರದ್ಧೆಯಿಂದ ನಮ್ಮಿಂದಲೂ ಸ್ತುತನಾಗತಕ್ಕವನೂ ಆಗಿ ನದಿಗಳನ್ನು ಉದಕಗಳಿಂದ ತುಂಬುವಂತೆ ಸ್ತೋತೃವಾದ ನನಗೆ ಅನ್ನವನ್ನು ತುಂಬಿಕೊಡು. ಹರಿಸಂಜ್ಞಕಗಳಾದ ಅಶ್ವವುಳ್ಳ ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ನೂತನವಾದ ಸ್ತೋತ್ರವು ನಿರ್ಮಿತವಾಗುತ್ತದೆ.

ರಥಗಳನ್ನು ಹೊಂದಿರುವ ನಾವು ಪ್ರಜ್ಞಾಪೂರ್ವಕವಾದ ಸ್ತುತಿಯಿಂದ ನಿನ್ನನ್ನು ಪೂಜಿಸಿ ಹವಿಸ್ಸನ್ನರ್ಪಿಸುವವರಾಗಿ ಆಗುವಂತಾಗಲಿ.

English Translation.

Glorified (in the past), glorified, Indra, at present, satisfy your worshipper with food, as rivers (are filled with water): lord of horses, a new hymn has been made for you: may we, possessed of chariots, be ever diligent in your praise.

॥ ವಿಶೇಷವಿಷಯಗಳು ॥

ಈ ಋಕ್ಕು ಈ ಸೂಕ್ತದಲ್ಲಲ್ಲದೆ ೨೦-೨೪ ನೇ ಸೂಕ್ತಗಳಲ್ಲಿ ಕೊನೆಯ ಋಕ್ಕುಗಳಾಗಿ ಪರಿತವಾಗಿದೆ

ಇಂದ್ರ ನು ಸ್ತುತಃ ನು ಗೃಣಾನಃ ನದ್ಯಃ ನ ಜರಿತ್ರೇ ಇಷಂ ಪೀಪೇಃ—ಎಲೈ ಇಂದ್ರನೇ, ನೀನು ಹಿಂದೆ ಅನೇಕ ಋಷಿಗಳಿಂದ ಸ್ತುತಿಸಲ್ಪಟ್ಟಿರುವೆ. ಈಗ ನಮ್ಮಿಂದ ಸ್ತುತಿಸಲ್ಪಡುವೆ. ನದಿಗಳಿಗೆ ವೃಷ್ಟ್ಯುದಕವು ತುಂಬಿ ಪೂರ್ಣವಾಗಿ ಹರಿಯುವಂತೆ ನಿನ್ನನ್ನು ಸ್ತೋತ್ರಮಾಡುವ ನಮಗೆ ಅನ್ನವನ್ನು (ಅನ್ನಾದ್ಯಾಹಾರವನ್ನು) ತುಂಬಿ ಕೊಡು, ಎಂದರೆ ಯಥೇಚ್ಛವಾಗಿ ಕೊಡು.

ನು—ನು ಇತ್ಯೇಷೋ೭ನೇಕಕರ್ಮಾ । ಇದಂ ನು ಕರಿಷ್ಯತೀತಿ ಹೇತ್ವಪದೇಶೇ । ಕಥಂ ನು ಕರಿಷ್ಯತೀತ್ಯನುಪೃಷ್ಟೇ (ನಿ. ೧-೪) **ನು** ಎಂಬ ನಿಪಾತಕ್ಕೆ ಅನೇಕ ಅರ್ಥಗಳಿವೆ **ಇದಂ ನು ಕರಿಷ್ಯತಿ** ಎನ್ನುವಾಗ **ನು** ಎಂಬ ಶಬ್ದಕ್ಕೆ ಆದ್ಯರಿಂದ ಎಂದು ಹೇತ್ವರ್ಥವಾಗುತ್ತದೆ **ಕಥಂ ನು ಕರಿಷ್ಯತಿ** ಎನ್ನುವಾಗ **ನು** ಎಂಬ ಶಬ್ದಕ್ಕೆ ಹೇಗೆ ಎಂಬ ಪ್ರಶ್ನಾರ್ಥಕವಾಗುತ್ತದೆ **ಅಥಾಪ್ಯುಪಮಾರ್ಥೇ ಭವತಿ ।** ಉಪಮಾನವನ್ನು ಸೂಚಿಸುವಾಗಲೂ ಸಹ **ನು** ಎಂಬ ಶಬ್ದದ ಪ್ರಯೋಗವಿರುವುದು ಉದಾಹರಣೆಗೆ—

ಅಸ್ಮೋ ನ ಚಕ್ರ್ಯೋಃ ಶೂರ ಬೃಹನ್ನ್ ತೇ ಮಹ್ನಾ ರಿರಿಚೇ ರೋದಸ್ಯೋಃ ।
ವೃಕ್ಷಸ್ಯ ನು ತೇ ಪುರುಹೂತ ವಯೋ ವ್ಯು ೩ ತಯೋ ರುರುಹುರಿಂದ್ರ ಪೂರ್ವೀಃ ॥
(ಋ ಸಂ ೬-೨೪-೩)

ಎಂಬ ಋಕ್ಕನ್ನು ನಿರುಕ್ತಕಾರರು ಉದಾಹರಿಸಿ (ನಿ. ೧-೪), **ವೃಕ್ಷಸ್ಯ ನು ತೇ । ವೃಕ್ಷಸ್ಯೇವ ತೇ ।** ವೃಕ್ಷದಂತೆ ಅಥವಾ ವೃಕ್ಷದ ಶಾಖೆಗಳಂತೆ ಎಂದು **ನು** ಎಂಬ ಶಬ್ದಕ್ಕೆ ಉಪಮಾರ್ಥವನ್ನು ಹೇಳಿದೆಯೆಂದು ತಿಳಿಸಿದಾರೆ. ಹೀಗೆಯೇ—

ನೂ ಮರ್ತೋ ದಯತೇ ಸನಿಷ್ಯನ್ಯೋ ವಿಷ್ಣವ ಉರುಗಾಯಾಯ ದಾಶತ್ ।
(ಋ ಸಂ. ೭-೧೦೦-೧೧)

ಇತ್ಯಾದಿ ಋಕ್ಕುಗಳಲ್ಲಿ **ನು** ಎಂಬ ಶಬ್ದಕ್ಕೆ **ಕ್ಷಿಪ್ರಂ** ಬೇಗನೆ, ಜಾಗ್ರತೆಯಾಗಿ ಎಂಬರ್ಥವೂ,

ನೂ ಇಂದ್ರ ಶೂರ ಸ್ತವಮಾನ ಊತೀ ಬ್ರಹ್ಮಜೂತಸ್ತನ್ವಾ ವಾವೃಧಸ್ವ ।
(ಋ. ಸಂ. ೭-೧೯-೧೧)

ಇತ್ಯಾದಿ ಋಕ್ಕುಗಳಲ್ಲಿ **ನು** ಎಂದರೆ **ಆದ್ಯ, ಈಗ,** ಒಡನೆಯೇ ಎಂಬ ಅರ್ಥವಿರುವುದೆಂದು ನಿರುಕ್ತಕಾರರು ಉದಾಹರಣೆ ಸಹಿತವಾಗಿ ವಿವರಿಸಿದಾರೆ ಪ್ರಕೃತವಾದ ಋಕ್ಕಿನಲ್ಲಿ **ಕ್ಷಿಪ್ರಂ** ಬೇಗನೆ, ಶೀಘ್ರವಾಗಿ ಎಂದರ್ಥವು

ಜರಿತ್ರೇ—ಜರಿತೃಶಬ್ದವು ಸ್ತೋತೃನಾಮಗಳಲ್ಲಿ ಪಠಿತವಾಗಿದೆ (ನಿ. ೩-೧೯) **ಜರಿತಾ ಗರಿತಾ** (ನಿ. ೧-೭) ಎಂದು ನಿರ್ವಚನವೂ ಇರುವುದರಿಂದ **ಜರಿತ್ರೇ** ಎಂದರೆ ಇಲ್ಲಿ ಸ್ತೋತ್ರಮಾಡುವ ನನಗೆ ಎಂದರ್ಥವು

ನ—**ನ** ಎಂಬ ಶಬ್ದಕ್ಕೆ ನಿರುಕ್ತಕಾರರು ಎರಡು ವಿಧವಾದ ಅರ್ಥನನ್ನು ಹೇಳಿರುವರು—

ನೇತಿ ಪ್ರತಿಷೇಧಾರ್ಥೀಯೋ ಭಾಷಾಯಾಂ। ಉಭಯಮನ್ವಾಧ್ಯಂ। ನೇಂದ್ರಂ ದೇವಮಮಂಸತ ಇತಿ ಪ್ರತಿಷೇಧಾರ್ಥೀಯಃ ಪುರಸ್ತಾದುಪಚಾರಸ್ತಸ್ಯ ಯೇತ್ಪ್ರತಿಷೇಧತಿ। ದುರ್ಮದಾಸೋ ನ ಸುರಾಯಾಂ ಇತ್ಯುಪಮಾರ್ಥೀಯಃ। ಉಪರಿಷ್ಟಾದುಪಚಾರಸ್ತಸ್ಯ ಯೇನೋಪಮಿಮೀತೇ ॥ (ನಿ ೧-೪)

ಎಂದರೆ **ನ** ಎಂಬ ಶಬ್ದವು ಲೋಕವ್ಯವಹಾರದ ಭಾಷೆಯಲ್ಲಿ ಎಂದರೆ, ವೇದಭಾಷೆಯಲ್ಲದ ಆಧುನಿಕ ಸಂಸ್ಕೃತ ಭಾಷೆಯಲ್ಲಿ ನಿಷೇಧಾರ್ಥದಲ್ಲಿ (ಇಲ್ಲ, ಅಲ್ಲ ಎಂಬರ್ಥದಲ್ಲಿ) ಉಪಯೋಗಿಸಲ್ಪಡುವುದು ಇದು ಎಲ್ಲರಿಗೂ ತಿಳಿದೇ ಇದೆ. ಆದರೆ ವೇದಗಳಲ್ಲಿ ನಿಷೇಧಾರ್ಥದಲ್ಲಿಯೂ, ಉಪಮಾರ್ಥದಲ್ಲಿಯೂ **ನ** ಎಂಬ ಶಬ್ದದ ಪ್ರಯೋಗವಿರುವುದು ಹೇಗೆಂದರೆ— **ನೇಂದ್ರಂ ದೇವಮಮಂಸತ** ಎಂಬ ವಾಕ್ಯದಲ್ಲಿನ **ನ** ಎಂಬ ಶಬ್ದವು ನಿಷೇಧಾರ್ಥದಲ್ಲಿ ಪ್ರಯುಕ್ತವಾಗಿರುವುದು. ಪ್ರತಿಷೇಧನೆಂದರೆ ಒಬ್ಬ ವ್ಯಕ್ತಿಯನ್ನು ಸ್ಪಷ್ಟವಾಗಿ ಅಥವಾ ಎದುರಿಗೆ ಹೊಗಳದೇ ಇರುವುದು ಇಂದ್ರನನ್ನು ಪ್ರೀಪ್ರಿಯುಕ್ತನಾದವನೆಂದು ತಿಳಿಯಲಾಗುವುದಿಲ್ಲ ಎಂಬ ವಾಕ್ಯದಲ್ಲಿ ಇಲ್ಲ (**ನ** ಎಂಬುದರ ಅರ್ಥ) ಎಂಬ ಶಬ್ದವು ಇಂದ್ರನ ವಿಷಯಕವಾದ ಉನಚಾರೋಕ್ತಿಗೆ ವಿರುದ್ಧವಾದ ಅರ್ಥವನ್ನು ಸೂಚಿಸುವುದು ಇದಕ್ಕೆ ಪ್ರತಿಷೇಧಾರ್ಥವೆಂದು ಎಸರು **ದುರ್ಮದಾಸೋ ನ ಸುರಾಯಾಂ** ಎಂಬ ವಾಕ್ಯದಲ್ಲಿ **ನ** ಎಂಬ ಶಬ್ದವು ಉಪಮಾರ್ಥವನ್ನು (ಹೋಲಿಕೆಯನ್ನು) ಸೂಚಿಸುವುದು ಮದ್ಯನನ್ನು ಪಾನಮಾಡಿದ ಜನರಂತೆ ದುರಹಂಕಾರವುಳ್ಳವರು ಎಂದು ಈ ವಾಕ್ಯದ ಅರ್ಥವು ಇಲ್ಲಿ ಒಂದು ವ್ಯಕ್ತಿಯಲ್ಲಿರುವ ಗುಣಾವಗುಣಗಳನ್ನು ಮತ್ತೊಂದು ವ್ಯಕ್ತಿಯಲ್ಲಿರುವ ಗುಣಾವಗುಣಗಳಿಗೆ ಹೋಲಿಸಿ ಹೇಳುವುದೇ ಉಪಮಾರ್ಥವು ಮದ್ಯಪಾನಮಾಡಿದವರು ಮತಿಹೀನರಾಗಿ ಅಹಂಕಾರದಿಂದ ನೀಚಮಾರ್ಗದಲ್ಲಿ ವರ್ತಿಸುವರು. ಆ ಜನರಂತೆ ದುರಹಂಕಾರವುಳ್ಳವರು ಎಂಬುದೇ ಉಪಮಾರ್ಥವು. ಈ ವಿಧವಾದ ಅರ್ಥಗಳನ್ನು ವೇದಗಳಲ್ಲಿ **ನ** ಎಂಬ ಪದದಿಂದಲೂ, **ಇವ** ಎಂಬ ಪದದಿಂದಲೂ ನಿರ್ದೇಶಿಸಲ್ಪಡುವುದು. ಈ ವಿಧವಾದ ಉಪಮಾರ್ಥದಲ್ಲಿ **ನ** ಎಂಬ ಶಬ್ದದ ಪ್ರಯೋಗವು ವೇದಗಳಲ್ಲಿ ಮಾತ್ರ ಇರುವುದು ಬಳಸುವ ಭಾಷೆಯಲ್ಲಿಲ್ಲ. ಅದಕ್ಕೆ ಬದಲಾಗಿ ಅಲ್ಲಿ **ಇವ** ಎಂಬ ಶಬ್ದದ ಪ್ರಯೋಗಮಾತ್ರವಿರುವುದು

ಸೂಕ್ತದ ಉಪಸಂಹಾರರೂಪವಾದ ಈ ಋಕ್ಕಿನಲ್ಲಿ ವಾಮದೇವಋಷಿಯು ದೇವತೆಗೆ ಹೊಸದಾಗಿ ರಚಿತವಾದ ಸ್ತೋತ್ರವನ್ನರ್ಪಿಸಿ ದೇವತೆಯ ಅನುಗ್ರಹವನ್ನು ಪ್ರಾರ್ಥಿಸಿರುವುದು ಉಕ್ತವಾಗಿದೆ.

ಇಪ್ಪತ್ತೈದನೆಯ ಸೂಕ್ತವು.

ಕೋ ಅದ್ಯೇತ್ಯಷ್ಟರ್ಚಂ ಚತುರ್ಥಂ ಸೂಕ್ತಂ ವಾಮದೇವಸ್ಯಾರ್ಷಂ ತ್ರೈಷ್ಟುಭಮೈಂದ್ರಂ । ತಥಾ ಚಾನುಕ್ರಾಂತಂ । ಕೋ ಅದ್ಯಾಷ್ಟಾವಿತಿ ॥ ದಶರಾತ್ರೇ ಚತುರ್ಥೇಽಹನಿ ಮಾಧ್ಯಂದಿನೇ ಸವನೇ ಸ್ತೋಮವೃದ್ಧ್ಯೈ ವೈತ್ರಾವರುಣಶಸ್ತ್ರ ಆರಂಭಣೀಯಾಯಾ ಉಪರಿಷ್ಟಾದಿದಂ ಸೂಕ್ತಮಾವಪನೀಯಂ ಚ । ಸೂತ್ರಿತಂ ಚ । ಸ್ತೋಮೇ ವರ್ಧಮಾನೇ ಕೋ ಅದ್ಯ ನರ್ಯಃ । ಆ. ೭–೧೨ । ಇತಿ ॥

ಅನುವಾದವು—**ಕೋ ಅದ್ಯ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಾಮದೇವನು ಋಷಿಯು, ಇಂದ್ರನು ದೇವತೆಯು, ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಕೋ ಅದ್ಯಾಷ್ಟೌ** ಎಂದು ಹೇಳಿರುವುದು. ದಶರಾತ್ರವೆಂಬ ಹತ್ತು ದಿವಸಗಳ ವರೆಗೆ ಮಾಡುವ ಯಾಗದ ನಾಲ್ಕನೆಯ ದಿವಸ ಮಾಧ್ಯಂದಿನಸವನಕಾಲದಲ್ಲಿ ಸೋಮವೃದ್ಧಿಗಾಗಿ ವೈತ್ರಾವರುಣಶಸ್ತ್ರ ಮಂತ್ರಗಳ ಪರನದ ಆರಂಭಮಂತ್ರದ ಕೊನೆಯಲ್ಲಿ ಈ ಸೂಕ್ತವನ್ನು ಅವಪನಸೂಕ್ತವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಸ್ತೋಮೇ ವರ್ಧಮಾನೇ ಕೋ ಅದ್ಯ ನರ್ಯಃ** ಎಂಬ ಸೂತ್ರದಿಂದ (ಆ. ೭–೧೨) ವಿವೃತವಾಗಿರುವುದು

ಸೂಕ್ತ—೨೫

ಮಂಡಲ—೪ ॥ ಅನುವಾಕ—೩ ॥ ಸೂಕ್ತ—೨೫ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ—೧೩, ೧೪ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
॥ ಋಷಿಃ—ವಾಮದೇವಃ ॥
॥ ದೇವತಾ—ಇಂದ್ರಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಕೋ ಅದ್ಯ ನರ್ಯೋ ದೇವಕಾಮ ಉಶನ್ನಿಂದ್ರಸ್ಯ ಸಖ್ಯಂ ಜುಜೋಷ ।
ಕೋ ವಾ ಮಹೇಽವಸೇ ಪಾರ್ಯಾಯ ಸಮಿದ್ಧೇ ಅಗ್ನೌ ಸುತಸೋಮ ಈಟ್ಟೇ ॥ ೧ ॥

॥ ಪದಪಾಠಃ ॥

ಕಃ । ಅದ್ಯ । ನರ್ಯಃ । ದೇವ್ಯಕಾಮಃ । ಉಶನ್ । ಇಂದ್ರಸ್ಯ । ಸಖ್ಯಂ । ಜುಜೋಷ ।
ಕಃ । ವಾ । ಮಹೇ । ಅವಸೇ । ಪಾರ್ಯಾಯ । ಸಂಽಇದ್ಧೇ । ಅಗ್ನೌ । ಸುತ್ಯಸೋಮಃ । ಈಟ್ಟೇ ॥ ೧ ॥

॥ ಸಾಯಣಭಾಷ್ಯಂ ॥

ಅದ್ಯಾಸ್ಮಿನ್ದಿವಸೇ ನಯೋ೯ೀ ಮನುಷ್ಯಹಿತೋ೯ ದೇವಕಾಮೋ ದೇವಾನಿಚ್ಛನ್ ಉಶನ್ ಕಾಮಯಮಾನಃ ಕೋ ಯಜಮಾನ ಇಂದ್ರಸ್ಯ ಸಖ್ಯಂ ಸಖಿತ್ವಂ ಜುಜೋಷ । ಸೇವತೇ । ಕಿಂಚ ಸುತಸೋಮೋ೨ಭಿಷುತಸೋಮಃ ಕೋ ವಾ ಯಜಮಾನೋ೨ಗ್ನೌ ಸಮಿದ್ಧೇ ಪ್ರಜ್ವಲಿತೇ ಸತಿ ಮಹೇ ಮಹತೇ ಪ್ರವೃದ್ಧಾಯ ಪಾರ್ಯಾಯ ಪಾರಮರ್ಹತೇ೨ವಸೇ ತರ್ಪಣಾಯೇಟ್ಟೇ । ಇಂದ್ರಂ ಸ್ತೌತಿ ॥

॥ ಪ್ರತಿಪದಾರ್ಥ ॥

ಅದ್ಯ—ಇಂದು । **ನಯೋ೯ೀ**—ಮಾನವರ ಹಿತಕಾರಿಯೂ । **ದೇವಕಾಮಃ**—ದೇವತೆಗಳ ಸಹಾಯವನ್ನಿಚ್ಛಿಸುವವನೂ ಆದ । **ಕಃ**—ಯಾವ ಯಜಮಾನನು । **ಇಂದ್ರಸ್ಯ**—ಇಂದ್ರನ । **ಸಖ್ಯಂ**—ಸಖಿತ್ವವನ್ನು । **ಉಶನ್**—ಅಪೇಕ್ಷಿಸುತ್ತಾ । **ಜುಜೋಷ**—ಸೇವಿಸುತ್ತಾನೆ? **ಸುತಸೋಮಃ**—ಸೋಮರಸವನ್ನು ಹಿಂಡಿದ । **ಕೋ ವಾ**—ಯಾವ ಯಜಮಾನನು ತಾನೇ । **ಅಗ್ನೌ ಸಮಿದ್ಧೇ**—(ಯಾಗಕ್ಕಾಗಿ) ಅಗ್ನಿಯು ಪ್ರಜ್ವಲಿತನಾದಾಗ । **ಮಹೇ**—ಮಹತ್ತಾದುದೂ । **ಪಾರ್ಯಾಯ**—ಅಪರಿಮಿತವಾದುದೂ ಆದ । **ಅವಸೇ**—ರಕ್ಷಣೆಗಾಗಿ । **ಈಟ್ಟೇ**—ಇಂದ್ರನನ್ನು ಸ್ತುತಿಸುತ್ತಾನೆ?

॥ ಭಾವಾರ್ಥ ॥

ಮಾನವರ ಹಿತಕಾರಿಯೂ, ದೇವತೆಗಳ ಸಹಾಯವನ್ನಿಚ್ಛಿಸುವವನೂ ಆದ ಯಾವ ಯಜಮಾನನು ಇಂದು ಇಂದ್ರನ ಸಖಿತ್ವವನ್ನಪೇಕ್ಷಿಸಿ ಸೇವಿಸುತ್ತಾನೆ? ಸೋಮರಸವನ್ನು ಹಿಂಡಿದ ಯಾವ ಯಜಮಾನನು ತಾನೇ, ಯಾಗಕ್ಕಾಗಿ ಅಗ್ನಿಯು ಪ್ರಜ್ವಲಿತನಾದಾಗ ಮಹತ್ತಾದುದೂ, ಅಪರಿಮಿತವಾದುದೂ ಆದ ರಕ್ಷಣೆಗಾಗಿ ಇಂದ್ರನನ್ನು ಸ್ತುತಿಸುತ್ತಾನೆ

English Translation

What friend of man, or worshipper of the gods, deserving the friendship of Indra, has to-day enjoyed (it)? or what offerer of the libation on the kindled fire praises him (sufficienlty) for his great and unbounded protection?

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ವಾಮದೇವಋಷಿಯು ಇಂದ್ರನನ್ನು ಸ್ತುತಿಸುತ್ತಾ ಯಜ್ಞಮಾಡುವ ಎಲ್ಲಾ ಯಜಮಾನರೂ ಇಂದ್ರನ ಸ್ನೇಹವನ್ನೂ, ಅನುಗ್ರಹವನ್ನೂ ಅಪೇಕ್ಷಿಸುವುದರಿಂದ ಮತ್ತು ಇಂದ್ರನು ಏಕಕಾಲದಲ್ಲಿ ನಡೆಯುತ್ತಿರುವ ಅನೇಕ ಯಜ್ಞಗಳಿಗೆ ಹೋಗಲು ಇಂದ್ರನು ಸಮರ್ಥನಾಗಿರುವುದರಿಂದ ಈಗ ಯಾವ ಯಜಮಾನನು ಇಂದ್ರನನ್ನು ತನ್ನ ಯಜ್ಞಭೂಮಿಗೆ ಬರಬೇಕೆಂದು ಆಹ್ವಾನಮಾಡಿದಾನೆ? ಯಾವ ಯಜಮಾನನು ಇಂದ್ರನ ಸ್ನೇಹವನ್ನು ಅಪೇಕ್ಷಿಸುತ್ತಾನೆ? ಯಾವ ಯಜಮಾನನು ಇಂದ್ರನ ತೃಪ್ತ್ಯರ್ಥವಾಗಿ ಸೋಮರಸವನ್ನು ಸಿದ್ಧಪಡಿಸಿಕೊಂಡು

ಯಜ್ಞದಲ್ಲಿ ಅಗ್ನಿಯನ್ನು ಪ್ರಜ್ವಲಗೊಳಿಸಿ ಇಂದ್ರನ ರಕ್ಷಣೆಗಾಗಿ ಸ್ತೋತ್ರಮಾಡುತ್ತಿರುತ್ತಾನೆ ಎಂದು ತನ್ನ ಕುತೂಹಲವನ್ನು ವ್ಯಕ್ತಪಡಿಸಿದ್ದಾನೆ.

॥ ಸಂಹಿತಾಪಾಠಃ ॥

ಕೋ ನಾನಾಮ ವಚಸಾ ಸೋಮ್ಯಾಯ ಮನಾಯುರ್ವಾ ಭವತಿ ವಸ್ತ ಉಸ್ರಾಃ ।

ಕ ಇಂದ್ರಸ್ಯ ಯುಜ್ಯಂ ಕಃ ಸಖಿತ್ವಂ ಕೋ ಭ್ರಾತ್ರಂ ವಷ್ಟಿ ಕವಯೇ ಕ ಊತೀ ॥ ೨ ॥

॥ ಪದಪಾಠಃ ॥

ಕಃ । ನನಾಮ । ವಚಸಾ । ಸೋಮ್ಯಾಯ । ಮನಾಯುಃ । ವಾ । ಭವತಿ । ವಸ್ತೇ । ಉಸ್ರಾಃ ।

ಕಃ । ಇಂದ್ರಸ್ಯ । ಯುಜ್ಯಂ । ಕಃ । ಸಖಿತ್ವಂ । ಕಃ । ಭ್ರಾತ್ರಂ । ವಷ್ಟಿ । ಕವಯೇ । ಕಃ । ಊತೀ ॥

॥ ಸಾಯಣಭಾಷ್ಯಂ ॥

ಕೋ ಯಜಮಾನೋ ವಚಸಾ ವಾಗ್ರೂಪಯಾ ಸ್ತುತ್ಯಾ ಸೋಮ್ಯಾಯ ಸೋಮಾರ್ಹಾಯೇಂದ್ರಾಯ ನನಾಮ । ನಮತಿಃ ಪ್ರೀಣ್ಯರ್ಥೋ ಭವತಿ । ಕೋ ನೇಂದ್ರಾಯ ಮನಾಯುರ್ಭವತಿ । ಸ್ತುತಿಕಾಮೋಽಸ್ತಿ । ಕ ಉಸ್ರಾ ಇಂದ್ರೇಣ ದತ್ತಾ ಗಾ ವಸ್ತೇ । ಆಚ್ಛಾದಯತಿ । ಧಾರಯತೀತ್ಯರ್ಥಃ । ಕ ಇಂದ್ರಸ್ಯ ಯುಜ್ಯಂ ಸಾಹಾಯ್ಯಂ ವಷ್ಟಿ । ಇಚ್ಛತಿ । ಕಃ ಸಖಿತ್ವಂ ಕಃ ಭ್ರಾತ್ರಂ ಭ್ರಾತೃಭಾವಂ ವಷ್ಟಿ । ಇಚ್ಛತಿ। ಕವಯೇ ಕ್ರಾಂತದರ್ಶಿನ ಇಂದ್ರಾಯೇತೀ ಊತಯೇ ತರ್ಪಣಾಯ । ಕೋ ಭವತೀತಿ ಶೇಷಃ॥

॥ ಪ್ರತಿಪದಾರ್ಥ ॥

ಕಃ—ಯಾವ ಯಜಮಾನನು । **ವಚಸಾ**—ವಾಗ್ರೂಪವಾದ ಸ್ತುತಿಯಿಂದ । **ಸೋಮ್ಯಾಯ**—ಸೋಮಪಾನಕ್ಕೆ ಯೋಗ್ಯನಾದ ಇಂದ್ರನನ್ನು । **ನನಾಮ**—ಪೂಜಿಸಿ ನಮಸ್ಕರಿಸುತ್ತಾನೆ । **(ಕೋ) ವಾ**—ಯಾವನು ತಾನೇ । **ಮನಾಯುಃ**—ಸ್ತುತಿಕಾಮನಾಗಿ । **ಭವತಿ**—ಆಗುತ್ತಾನೆ । **ಉಸ್ರಾಃ**—(ಇಂದ್ರನಿಂದ) ದತ್ತವಾದ ಗೋವುಗಳನ್ನು । **ವಸ್ತೇ**—(ಯಾವನು) ಪೋಷಿಸುತ್ತಾನೆ । **ಕಃ**—ಯಾವನು । **ಇಂದ್ರಸ್ಯ**—ಇಂದ್ರನ । **ಯುಜ್ಯಂ**—ಸಾಹಾಯ್ಯವನ್ನು । **ವಷ್ಟಿ**—ಇಚ್ಛಿಸುತ್ತಾನೆ । **ಕಃ**—ಯಾವನು । **ಸಖಿತ್ವಂ**—ಸುಹೃದ್ಭಾವವನ್ನೂ । **ಕಃ**—ಯಾವನು । **ಭ್ರಾತ್ರಂ**—ಭ್ರಾತೃಭಾವವನ್ನು (ಇಚ್ಛಿಸುತ್ತಾನೆ) । **ಕವಯೇ**—ಕ್ರಾಂತದರ್ಶಿಯಾದ ಇಂದ್ರನ । **ಊತೀ**—ತೃಪ್ತಿಕಾರಕನಾಗಿ । **ಕಃ**—ಯಾರಿದ್ದಾರೆ

॥ ಭಾವಾರ್ಥ ॥

ಸೋಮಪಾನಕ್ಕೆ ಯೋಗ್ಯನಾದ ಇಂದ್ರನನ್ನು ವಾಗ್ರೂಪವಾದ ಸ್ತುತಿಯಿಂದ ಯಾವ ಯಜಮಾನನು ಪೂಜಿಸಿ ನಮಸ್ಕರಿಸುತ್ತಾನೆ? ಯಾವನು ಇಂದ್ರನ ಸ್ತುತಿಕಾಮನಾಗುತ್ತಾನೆ? ಇಂದ್ರನಿಂದ ದತ್ತವಾದ ಗೋವುಗಳನ್ನು ಯಾವ ಯಜಮಾನನು ಪೋಷಿಸುತ್ತಾನೆ? ಇಂದ್ರನ ಸಾಹಾಯ್ಯವನ್ನು ಇಚ್ಛಿಸುವ ಯಜಮಾನನಾರು? ಇಂದ್ರನ ಸುಹೃದ್ಭಾವವನ್ನೂ, ಭ್ರಾತೃಭಾವವನ್ನೂ ಇಚ್ಛಿಸುವ ಯಜಮಾನನಾರು? ಕ್ರಾಂತದರ್ಶಿಯಾದ ಇಂದ್ರನಿಗೆ ತೃಪ್ತಿಕಾರಕನಾದ ಯಜಮಾನನಾರಿದ್ದಾನೆ?

English Translation.

who has reverenced with (suitable) words the (deity) worthy of the libation? who supports the cattle (given by him)? who desires the society of Indra? who his friendship? who his fraternity? who (has recourse) to the sage Indra for protection?

॥ ವಿಶೇಷವಿಷಯಗಳು ॥

ಹಿಂದಿನ ಋಕ್ಕಿನಂತೆ ಈ ಋಕ್ಕಿನಲ್ಲಿಯೂ—ಯಾವ ಯಜಮಾನನು ಇಂದ್ರನನ್ನು ಸೋಮಪಾನಕ್ಕಾಗಿ ಆಹ್ವಾನಿಸಿ ಸ್ತುತಿಸುತ್ತಾನೆ, ಯಾವ ಪುರುಷನು ಇಂದ್ರನ ಸಹಾಯವನ್ನೂ, ಸ್ನೇಹವನ್ನೂ, ಭಾತ್ರಭಾವವನ್ನೂ ಅಪೇಕ್ಷಿಸುತ್ತಾನೆ ಎಂದು ಪ್ರಶ್ನೆಯ ಮೂಲಕ ತನ್ನ ಕುತೂಹಲವನ್ನು ವ್ಯಕ್ತಪಡಿಸಿದ್ದಾನೆ.

॥ ಸಂಹಿತಾಪಾಠಃ ॥

ಕೋ ದೇವಾನಾಮವೋ ಅದ್ಯಾ ವೃಣೀತೇ ಕ ಆದಿತ್ಯೈ ಅದಿತಿಂ ಜ್ಯೋತಿರೀಟ್ಟೇ ।
ಕಸ್ಯಾಶ್ವಿನಾವಿಂದ್ರೋ ಅಗ್ನಿಃ ಸುತಸ್ಯಾಂಶೋಃ ಪಿಬಂತಿ ಮನಸಾವಿವೇನಂ ॥

॥ ಪದಪಾಠಃ ॥

ಕಃ । ದೇವಾನಾಂ । ಅವಃ । ಅದ್ಯ । ವೃಣೀತೇ । ಕಃ । ಆದಿತ್ಯೈ । ಅದಿತಿಂ । ಜ್ಯೋತಿಃ । ಈಟ್ಟೇ ।
ಕಸ್ಯ । ಅಶ್ವಿನಾ । ಇಂದ್ರಃ । ಅಗ್ನಿಃ । ಸುತಸ್ಯ । ಅಂಶೋಃ । ಪಿಬಂತಿ । ಮನಸಾ । ಅವಿವೇನಂ ॥ ೩ ॥

। ಸಾಯಣಭಾಷ್ಯಂ ॥

ಅದ್ಯಾಸ್ಮಿನ್ದಿನೇ ಕೋ ಯಜಮಾನೋ ದೇವಾನಾಂ ದ್ಯೋತಮಾನಾನಾಮಿಂದ್ರಾದೀನಾಮವೋ ರಕ್ಷಣಂ ವೃಣೀತೇ । ಪ್ರಾರ್ಥಯತೇ । ಕ ಆದಿತ್ಯಾನ್ದೇವಾನದಿತಿಂ ದೇವಮಾತರಂ ಚ ಜ್ಯೋತಿರುದಕಂ ಚೇಟ್ಟೇ । ಯಾಚತೇ । ಅಶ್ವಿನಾವಶ್ವಿದೇವಾವಿಂದ್ರಶ್ಚಾಗ್ನಿಶ್ಚ ಮನಸಾ ಸ್ತುತ್ಯಾ ಪ್ರೀತಾಃ ಸಂತೋऽವಿನೇ-ನಮವಿಗತಕಾಮಂ । ಯಥಾಕಾಮಮಿತ್ಯರ್ಥಃ । ಕಸ್ಯ ಯಜಮಾನಸ್ಯ ಸಂಬಂಧಿನಂ ಸುತಸ್ಯಾಭಿಷುತ-ಸ್ಯಾಂಶೋಃ ಸೋಮಸ್ಯ । ಸೋಮಮಿತ್ಯರ್ಥಃ । ಪಿಬಂತಿ । ಪಾನಂ ಕುರ್ವಂತಿ ॥

। ಪ್ರತಿಪದಾರ್ಥ ॥

ಅದ್ಯ—ಇಂದು । **ಕಃ**—ಯಾವ ಯಜಮಾನನು । **ದೇವಾನಾಂ**—ಇಂದ್ರಾದಿ ದೇವತೆಗಳ । **ಅವಃ**—ರಕ್ಷಣವನ್ನು । **ವೃಣೀತೇ**—ಅಪೇಕ್ಷಿಸಿ ಪ್ರಾರ್ಥಿಸುತ್ತಾನೆ । **ಕಃ**—ಯಾವನು । **ಆದಿತ್ಯಾನ್**—ಅದಿತಿಯ ಪುತ್ರರಾದ ದೇವತೆಗಳನ್ನೂ । **ಅದಿತಿಂ**—ಅದಿತಿಯನ್ನೂ । **ಜ್ಯೋತಿಃ**—ತೇಜಸ್ಸನ್ನೂ । **ಈಟ್ಟೇ**—ಪ್ರಾರ್ಥಿಸುತ್ತಾನೆ । **ಅಶ್ವಿನೌ**—ಅಶ್ವಿನಿದೇವತೆಗಳೂ । **ಇಂದ್ರಃ**—ಇಂದ್ರನೂ । **ಅಗ್ನಿಃ**—ಅಗ್ನಿಯೂ । **ಮನಸಾ**—ಸ್ತುತಿಯಿಂದ ಪ್ರೀತರಾಗಿ । **ಅವಿನೇನಂ**—ತಮಗೆ ಪೂರ್ಣವಾಗಿ ತೃಪ್ತಿಯುಂಟಾಗುವ ವರೆಗೂ । **ಕಸ್ಯ**—ಯಾವ ಯಜಮಾನನ । **ಸುತಸ್ಯ**—ಹಿಂಡಲ್ಪಟ್ಟ । **ಅಂಶೋಃ**—ಸೋಮವನ್ನು । **ಪಿಬಂತಿ**—ಪಾನಮಾಡುತ್ತಾರೆ.

ಭಾವಾರ್ಥ ॥

ಯಾವ ಯಜಮಾನನು ಇಂದ್ರಾದಿದೇವತೆಗಳ ರಕ್ಷಣವನ್ನಪೇಕ್ಷಿಸಿ ಇಂದು ಪ್ರಾರ್ಥಿಸುತ್ತಾನೆ? ಯಾವನು ಅದಿತಿಪುತ್ರರಾದ ದೇವತೆಗಳನ್ನೂ, ಅದಿತಿಯನ್ನೂ ತೇಜೋರೂಪವಾದ ಉದಕನನ್ನೂ ಪ್ರಾರ್ಥಿಸುತ್ತಾನೆ? ಅಶ್ವಿನೀದೇವತೆಗಳೂ, ಇಂದ್ರನೂ, ಅಗ್ನಿಯೂ, ಯಾವ ಯಜಮಾನನ ಸ್ತುತಿಯಿಂದ ಪ್ರೀತರಾಗಿ ಅವನಿಂದ ಹಿಂಡಿ ಅರ್ಪಿತವಾದ ಸೋಮವನ್ನು ತಮಗೆ ತೃಪ್ತಿಯುಂಟಾಗುವವರೆಗೂ ಪಾನಮಾಡುತ್ತಾರೆ?

English Translation.

who solicits to-day the protection of the gods? who glorifies the Adityas, Aditi, light? of whose effused libation do the Ashwins, Indra, Agni, drink at will, propitiated by his praise?

। ಸಂಹಿತಾಪಾಠಃ ।

ತಸ್ಮಾ ಅಗ್ನಿರ್ಭಾರತಃ ಶರ್ಮ ಯಂಸಜ್ಜ್ಯೋಕ್ಪಶ್ಯಾತ್ಸೂರ್ಯಮುಚ್ಚ-ರಂತಂ ।

ಯ ಇಂದ್ರಾಯ ಸುನವಾಮೇತ್ಯಾಹ ನರೇ ನರ್ಯಾಯ ನೃತಮಾಯ ನೃಣಾಂ ॥ ೪ ॥

॥ ಪದಪಾಠಃ ॥

ತಸ್ಮೈ । **ಅಗ್ನಿಃ** । **ಭಾರತಃ** । **ಶರ್ಮ** । **ಯಂಸತ್** । **ಜ್ಯೋಕ್** । **ಪಶ್ಯಾತ್** । **ಸೂರ್ಯಂ** । **ಉತ್ಽಚರಂತಂ** । **ಯಃ** । **ಇಂದ್ರಾಯ** । **ಸುನವಾಮ** । **ಇತಿ** । **ಆಹ** । **ನರೇ** । **ನರ್ಯಾಯ** । **ನೃತಮಾಯ** । **ನೃಣಾಂ** ॥ ೪ ॥

॥ ಸಾಯಣಭಾಷ್ಯಂ ॥

ಭಾರತೋ ಹವಿಷೋ ಭರ್ತಾಗ್ನಿಃ । ಪ್ರಾಣೋ ಭೂತ್ವಾ ಪ್ರಜಾ ಧಾರಯನ್ ಭಾರತ ಇತಿ ವಾಜಸನೇಯಕಂ । ಅಗ್ನಿಸ್ತಸ್ಮೈ ಯಜಮಾನಾಯ ಶರ್ಮ ಸುಖಂ ಯಂಸತ್ । ಯಚ್ಛೇತ್ । ಕಿಂಚ ಅಯಮಗ್ನಿರ್ಜ್ಯೋಕ್ ಚಿರಕಾಲಮುಚ್ಚರಂತಮುದ್ಯಂತಂ ಸೂರ್ಯಂ ಪಶ್ಯಾತ್ । ಪಶ್ಯೇತ್ । ಯೋ ಯಜಮಾನ ಇಂದ್ರಾಯ ಸುನವಾಮೇತ್ಯಾಹ ಇಂದ್ರಾರ್ಥಂ ಸೋಮಾಭಿಷವಂ ಕುರ್ಯಾಮಿತಿ ಬ್ರವೀತಿ । ಕೀದೃಶಾಯೇಂದ್ರಾಯ । ನರೇ ನೇತ್ರೇ ನರ್ಯಾಯ ನರಹಿತಾಯ ನೃಣಾಂ ನರಾಣಾಂ ನೇತೄಣಾಂ ಮಧ್ಯೇ ನೃತಮಾಯ ನೇತೃತಮಾಯ ॥

॥ ಪ್ರತಿಪದಾರ್ಥ ॥

ಯಃ—ಯಾವ ಯಜಮಾನನು । **ನರೇ**—ನೇತೃವಾದವನೂ । **ನರ್ಯಾಯ**—ಮಾನವರಿಗೆ ಹಿತಕಾರಿಯೂ । **ನೃಣಾಂ**—ಮಾನವರ ನಡುವೆ (ನೇತೃಗಳಲ್ಲೆಲ್ಲಾ) । **ನೃತಮಾಯ**—ಅತ್ಯಂತ ಶ್ರೇಷ್ಠಪುರುಷನೂ (ಅತ್ಯಂತ ಶ್ರೇಷ್ಠವಾದ ನೇತೃವಾದವನೂ ಆದ । **ಇಂದ್ರಾಯ** – ಇಂದ್ರನನ್ನು ದ್ದೇಶಿಸಿ । **ಸುನವಾಮ**—(ಯಜ್ಞಾರ್ಥವಾಗಿ) ಸೋಮವನ್ನು ಹಿಂಡೋಣ । **ಇತ್ಯಾಹ**—ಎಂದು ಸಂಕಲ್ಪಿಸುವನೋ । **ತಸ್ಮೈ**—ಆ ಯಜಮಾನನಿಗೆ । **ಭಾರತಃ**—ಹವಿಸ್ಸನ್ನು ಭರಿಸತಕ್ಕ । **ಅಗ್ನಿಃ**—ಅಗ್ನಿಯು । **ಶರ್ಮ**—ಸುಖವನ್ನು । **ಯಂಸತ್**—ಒದಗಿಸಿಕೊಡಲಿ । **ಜ್ಯೋಕ್**—ಬಹುದೀರ್ಘಕಾಲ । **ಉಚ್ಚರಂತಂ**—ಉದಯಿಸತಕ್ಕ । **ಸೂರ್ಯಂ**—ಸೂರ್ಯನನ್ನು । **ಪಶ್ಯಾತ್**—(ಅವನ ಗೃಹದಿಂದ) ನೋಡಲಿ ।

॥ ಭಾವಾರ್ಥ ॥

ನೇತೃವಾದವನೂ, ಮಾನವರ ಹಿತಕಾರಿಯಾದವನೂ, ನೇತೃಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ನೇತೃವೂ ಆದ ಇಂದ್ರನನ್ನು ದ್ದೇಶಿಸಿ ಸೋಮವನ್ನು ಯಜ್ಞಾರ್ಥವಾಗಿ ಹಿಂಡೋಣ ಎಂದು ಯಾವ ಯಜಮಾನನು ಸಂಕಲ್ಪಿಸುವನೋ ಆ ಯಜಮಾನನಿಗೆಹವಿರ್ವಾಹಕನಾದ ಅಗ್ನಿಯು ಸುಖವನ್ನುಂಟುಮಾಡಲಿ. ಅವನು ತನ್ನ ಯಜ್ಞಗೃಹದಿಂದ ಬಹಳ ದೀರ್ಘಕಾಲ ಉದಯಿಸುವ ಸೂರ್ಯನನ್ನು ನೋಡಲಿ (ಎಂದರೆ ಬಹುಕಾಲ ಜೀವಿಸಿರಲಿ)

English Translation.

May Agni, the bearer of oblations, grant him felicity, and long behold the rising sun (in the dwelling of him) who says, let us offer libations to Indra, leader (of rites), the friend of man, the chief leader amongst leaders.

॥ ಸಂಹಿತಾಪಾಠ: ॥

ನ ತಂ ಜಿನಂತಿ ಬಹವೋ ನ ದಭ್ರಾ ಉರ್ವಸ್ಮಾ ಅದಿತಿಃ ಶರ್ಮ ಯಂಸತ್ ।
ಪ್ರಿಯಃ ಸುಕೃತ್ಪ್ರಿಯ ಇಂದ್ರೇ ಮನಾಯುಃ ಪ್ರಿಯಃ ಸುಪ್ರಾವೀಃ ಪ್ರಿಯೋ
ಅಸ್ಯ ಸೋಮಾ ॥ ೫ ॥

॥ ಪದಪಾಠಃ ॥

ನ । ತಂ । ಜಿನಂತಿ । ಬಹವಃ । ನ । ದಭ್ರಾಃ । ಉರು । ಅಸ್ಮೈ । ಅದಿತಿಃ । ಶರ್ಮ । ಯಂಸತ್ ।
ಪ್ರಿಯಃ । ಸುಽಕೃತ್ । ಪ್ರಿಯಃ । ಇಂದ್ರೇ । ಮನಾಯುಃ । ಪ್ರಿಯಃ । ಸುಪ್ರಽಅವೀಃ । ಪ್ರಿಯಃ । ಅಸ್ಯ ।
ಸೋಮಾ ॥ ೫ ॥

॥ ಸಾಯಣಭಾಷ್ಯಂ ॥

ದಭ್ರಾ ಅಲ್ಪಾ ಬಹವೋ ನ ಬಹವೋಽಪಿ ಶತ್ರುಜನಾಸ್ತಂ ಯಜಮಾನಂ ನ ಜಿನಂತಿ । ನ ಹಿಂಸಂತು । ಯ ಇಂದ್ರಾಯ ಸುನವಾಮೇತ್ಯಾಹ ತಮಿತಿ ಪೂರ್ವೇಣ ಸಂಬಂಧಃ । ಅದಿತಿರಿಂದ್ರಮಾತಾಸ್ಮೈ ಯಜಮಾನಾಯೋರು ವಿಸ್ತೀರ್ಣಂ ಶರ್ಮ ಸುಖಂ ಯಂಸತ್ । ಯಚ್ಛತು । ಕಿಂಚ ಇಂದ್ರ ಇಂದ್ರಾಯ ಸುಕೃತ್ ಶೋಭನಯಾಗಾದೀನಾಂ ಕರ್ತ್ರಾ ಯಜಮಾನಃ ಪ್ರಿಯೋ ಭವತಿ । ಮನಾಯುರಿಂದ್ರವಿಷಯಸ್ತುತಿಕಾಮಶ್ಚಾಸ್ಯೇಂದ್ರಸ್ಯ ಪ್ರಿಯೋ ಭವತಿ । ಸುಪ್ರಾವೀಃ ಸುಷ್ಠು ಪ್ರಾವಿತಾ ಸುಷ್ಠು ಪ್ರಗಚ್ಛನ್ನುಪಗಚ್ಛನ್ನಾ ಯಜಮಾನೋಽಸ್ಯೇಂದ್ರಸ್ಯ ಪ್ರಿಯೋ ಭವತಿ । ಸೋಮಾ ಸೋಮವಾನ್ಯಜಮಾನೋಽಸ್ಯೇಂದ್ರಸ್ಯ ಪ್ರಿಯೋ ಭವತಿ ॥

॥ ಪ್ರತಿಪದಾರ್ಥ ॥

ದಭ್ರಾಃ—ಅಲ್ಪಸಂಖ್ಯೆಯುಳ್ಳವರೂ । ಬಹವಃ—ಅಧಿಕ ಸಂಖ್ಯೆಯುಳ್ಳವರೂ ಆದ ದುರ್ಜನರು । ತಂ—(ಇಂದ್ರನಿಗೆ ಸೋಮವನ್ನು ಅರ್ಪಿಸುವೆನು ಎಂದು ಸಂಕಲ್ಪಿಸಿದ) ಆ ಯಜಮಾನನನ್ನು । ನ ಜಿನಂತಿ—ಹಿಂಸಿಸ

ದಿರಲಿ । **ಅದಿತಿಃ**—ಇಂದ್ರಮಾತೆಯು । **ಅಸ್ಮೈ**—ಈ ಯಜಮಾನನಿಗೆ । **ಉರು**—ಅತ್ಯಧಿಕವಾದ । **ಶರ್ಮ**—ಸುಖವನ್ನು । **ಯಂಸತ್**—ಒದಗಿಸಲಿ । **ಇಂದ್ರೇ**—ಇಂದ್ರನನ್ನುದ್ದೇಶಿಸಿ । **ಸುಕೃತ್**—ಶ್ರೇಷ್ಠವಾದ ಯಾಗಾದಿ ಕರ್ಮಗಳನ್ನು ಮಾಡುವ ಯಜಮಾನನು । **ಪ್ರಿಯಃ**—ಇಂದ್ರನಿಗೆ ಪ್ರಿಯನಾಗುತ್ತಾನೆ । **ಮನಾಯುಃ**—ಇಂದ್ರನನ್ನು ಸ್ತುತಿಸಲಿಚ್ಛಿಸುವವನು । **ಪ್ರಿಯಃ**—ಬೇಕಾದವನಾಗುತ್ತಾನೆ । **ಸುಷ್ರಾವೀಃ**—ವಿನಯದಿಂದ ಇಂದ್ರನನ್ನು ಸಮಿಾಪಿಸುವವನು । **ಪ್ರಿಯಃ**—ಆದರಕ್ಕೆ ಪಾತ್ರನಾಗುತ್ತಾನೆ । **ಸೋಮಿಾ**—ಇಂದ್ರನಿಗೆ ಸೋಮವನ್ನರ್ಪಿಸುವ ಯಜಮಾನನು । **ಅಸ್ಯ**—ಈ ಇಂದ್ರನಿಗೆ । **ಪ್ರಿಯಃ**—ಪ್ರೀತಿಪಾತ್ರನಾಗುತ್ತಾನೆ.

॥ ಭಾವಾರ್ಥ ॥

ಇಂದ್ರನಿಗೆ ಸೋಮವನ್ನರ್ಪಿಸಲಿಚ್ಛಿಯುಳ್ಳ ಯಜಮಾನನನ್ನು ಅವನ ಶತ್ರುಗಳು ಹಿಂಸಿಸದಿರಲಿ. ಆ ಶತ್ರುಗಳ ಸಂಖ್ಯೆಯು ಅಧಿಕವಾಗಿರಲಿ ಅಥವಾ ಕಡಿಮೆಯಾಗಿರಲಿ, ಅವರಿಂದ ಈ ಯಜಮಾನನಿಗೆ ತೊಂದರೆಯುಂಟಾಗದಿರಲಿ. ಇಂದ್ರನ ತೃಪ್ತಿಗಾಗಿ ಉತ್ತಮವಾದ ಯಾಗಾದಿಗಳನ್ನು ಮಾಡುವವನೂ, ಇಂದ್ರನನ್ನು ಸ್ತುತಿಸುವವನೂ, ಭಯಭಕ್ತಿಗಳಿಂದ ಇಂದ್ರನನ್ನು ಸಮಿಾಪಿಸುವವನೂ, ಇಂದ್ರನಿಗೆ ಸೋಮವನ್ನರ್ಪಿಸುವವನೂ ಆದ ಯಜಮಾನನು ಇಂದ್ರನ ಪ್ರೀತಿಗೆ ಪಾತ್ರನಾಗುತ್ತಾನೆ ಇವುಗಳಲ್ಲಿ ಒಂದು ವಿಧವಾಗಿಯಾದರೂ ಇಂದ್ರನಿಗೆ ತೃಪ್ತಿಕಾರಕನಾದರೂ ಸಹ ಅವನ ಆದರಕ್ಕೆ ಪಾತ್ರನಾಗುತ್ತಾನೆ

English Translation.

Him neither many nor few can molest may Aditi grant him infinite happiness. the performer of pious acts is dear (to Indra) dear to Indra is he whose mind is intent upon him, dear is he who approaches him with homage, dear to him is the offerer of the libation.

॥ ಸಂಹಿತಾಪಾಠಃ ॥

ಸುಪ್ರಾವ್ಯಃ ಪ್ರಾಶುಷಾಳೇಷ ವೀರಃ ಸುಷ್ವೇಃ ಪಕ್ತಿಂ ಕೃಣುತೇ ಕೇವಲೇಂದ್ರಃ।
ನಾಸುಷ್ವೇರಾಪಿರ್ನ ಸಖಾ ನ ಜಾಮಿರ್ದುಷ್ಪ್ರಾವ್ಯೋಽವಹಂತೇದವಾಚಃ ॥

॥ ಪದಪಾಠಃ ॥

ಸುಪ್ರಾವ್ಯಃ । ಪ್ರಾಶುಷಾಟ್ । ಏಷಃ । ವೀರಃ । ಸುಷ್ವೇಃ । ಪಕ್ತಿಂ । ಕೃಣುತೇ । ಕೇವಲಾ । ಇಂದ್ರಃ । ನ । ಅಸುಷ್ವೇಃ । ಆಪಿಃ । ನ । ಸಖಾ । ನ । ಜಾಮಿಃ । ದುಃಪ್ರಾವ್ಯಃ । ಅವಾವಹಂತಾ । ಇತ್ । ಅವಾಚಃ ॥ ೬ ॥

॥ ಸಾಯಣಭಾಷ್ಯಂ ॥

ಪ್ರಾಶುಷಾಟ್ ಶತ್ರೂಣಾಂ ಪ್ರಕರ್ಷೇಣ ಶೀಘ್ರಮಭಿಭವತಾ ವೀರೋ ವಿಕ್ರಾಂತ ಏಷ ಇಂದ್ರಃ ಸುಪ್ರಾವ್ಯಃ ಸುಷ್ಠೂಪಗಚ್ಛತೋ ಹವಿರ್ಭಿಃ ಸುಷ್ಠು ಪ್ರತಿಪರ್ಯಯಿತುರ್ವಾ ಸುಷ್ವೇಃ ಸುನ್ವತೋ ಯಜಮಾನಸ್ಯ ಸಂಬಂಧಿನೀಂ ಕೇವಲಾ ಕೇವಲಾಮಸಾಧಾರಣಾಂ ಪಕ್ತಿಂ ಕೃಣುತೇ। ಆತ್ಮನಃ ಕುರುತೇ। ಕಿಂಚೇಂದ್ರೋ೭ಸುಷ್ವೇರಸುನ್ವತೋ ಯಜಮಾನಸ್ಯಾಪಿವ್ಯಾಪ್ತೋ ನ ಭವತಿ। ಇಂದ್ರೋ೭ಯಜಮಾನಸ್ಯ ಸಖಾ ನ ಭವತಿ। ಜಾಮಿರ್ಬಂಧುಶ್ಚ ನ ಭವತಿ। ಅಪಿ ಚ ದುಷ್ಪ್ರಯ್ಯೋ ದುರುಪಗಮನಸ್ಯಾವಾಚಃ ಸ್ತುತಿರಹಿತಸ್ಯ ಪುರುಷಸ್ಯಾವಹಂತೇತ್ ಹಿಂಸಿತೈವ ಭವತಿ ॥

॥ ಪ್ರತಿಪದಾರ್ಥ ॥

ಪ್ರಾಶುಷಾಟ್—ಶತ್ರುಗಳನ್ನು ಅತಿಶೀಘ್ರದಲ್ಲಿ ನಾಶಪಡಿಸುವವನೂ। **ವೀರಃ**—ಪರಾಕ್ರಮಿಯೂ ಆದ। **ಏಷಃ ಇಂದ್ರಃ**—ಈ ಇಂದ್ರನು। **ಸುಪ್ರಾವ್ಯಃ**—ಅತ್ಯಂತ ವಿನಯದಿಂದ ಸಮೀಪಿಸಲ್ಪಡತಕ್ಕವನು। **ಸುಷ್ವೇಃ**—ಸೋಮವನ್ನು ಹಿಂಡುವ ಯಜಮಾನನ। **ಪಕ್ತಿಂ**—ಪಾಪಕ್ರಿಯೆಯನ್ನು (ಅನ್ನಸಂಪತ್ತನ್ನು)। **ಕೇವಲಾ**—ಬಹಳ ಅಸಾಧಾರಣವಾದುದನ್ನಾಗಿ। **ಕೃಣುತೇ**—ಮಾಡುತ್ತಾನೆ। **ಅಸುಷ್ವೇಃ**—ಸೋಮವನ್ನು ಹಿಂಡದಿರುವವನಿಗೆ। **ಆಪಿಃ**—ಹಿತಕಾರಿಯಾಗಿ। **ನ**—ಆಗುವುದಿಲ್ಲ। **ಸಖಾ**—ಸ್ನೇಹಿತನಾಗಿ। **ನ**—ಆಗುವುದಿಲ್ಲ। **ಜಾಮಿಃ**—ಅವನಿಗೆ ಬಂಧುವಾಗಿಯೂ। **ನ**—ಆಗುವುದಿಲ್ಲ। **ಅವಾಚಃ**—ಇಂದ್ರನನ್ನು ಸ್ತುತಿಸದಿರುವ ಯಜಮಾನನಿಗೆ। **ದುಷ್ಪ್ರಯ್ಯಃ**—ಸಿಕ್ಕತಕ್ಕವನೇ ಅಲ್ಲ। **ಅವಹಂತೇತ್**—ಅವನನ್ನು ಖಂಡಿತವಾಗಿಯೂ ಹಿಂಸಿಸುವವನು.

॥ ಭಾವಾರ್ಥ ॥

ಶತ್ರುಗಳನ್ನು ಅತಿ ಶೀಘ್ರದಲ್ಲಿ ನಾಶಪಡಿಸುವವನೂ, ಪರಾಕ್ರಮಿಯೂ ಆದ ಇಂದ್ರನನ್ನು ಯಜಮಾನರು ಅತ್ಯಂತ ವಿನಯದಿಂದ ಸಮೀಪಿಸಬೇಕು ಇಂದ್ರನು ತನಗಾಗಿ ಸೋಮವನ್ನು ಹಿಂಡುವವನಿಗೆ ಅಸಾಧಾರಣವಾದ ಅನ್ನಸಂಪತ್ತನ್ನೊದಗಿಸುತ್ತಾನೆ. ಸೋಮವನ್ನು ಹಿಂಡದೇ ಯಜ್ಞವನ್ನಾಚರಿಸದೇ ಇರುವ ಯಜಮಾನನಿಗೆ ಹಿತವನ್ನುಂಟುಮಾಡುವುದಿಲ್ಲ ಅವನಿಗೆ ಸುಹೃತ್ತಾಗುವುದಿಲ್ಲ ಬಂಧುವೂ ಆಗುವುದಿಲ್ಲ ಮತ್ತು ಇಂದ್ರನನ್ನು ಸ್ತುತಿಸದಿರುವ ಯಜಮಾನನಿಗೆ ಲಭ್ಯವೇ ಅಲ್ಲ ಅಂತಹವನನ್ನು ಖಂಡಿತ ಹಿಂಸಿಸುತ್ತಾನೆ.

English Translation·

This hero, Indra, the prompt discomfiter (of foes), who is to be approached with homage, grants special maturity to the presenter of the libation : he is not the kinsmen, nor friend, nor relative, of him who offers no oblation (to him) · he is difficult of access, and the punisher of him who repeats not (his) praise.

॥ ಸಂಹಿತಾಪಾಠಃ ॥

ನ ರೇವತಾ ಪಣಿನಾ ಸಖ್ಯಮಿಂದ್ರೋಽಸುನ್ವತಾ ಸುತಪಾಃ ಸಂ ಗೃಣೀತೇ ।
ಅಸ್ಯ ವೇದಃ ಖಿದತಿ ಹಂತಿ ನಗ್ನಂ ವಿ ಸುಷ್ವಯೇ ಪಕ್ತಯೇ ಕೇವಲೋ ಭೂತ್ ॥ ೭ ॥

॥ ಪದಪಾಠಃ ॥

ನ । ರೇವತಾ । ಪಣಿನಾ । ಸಖ್ಯಂ । ಇಂದ್ರಃ । ಅಸುನ್ವತಾ । ಸುತಃಪಾಃ । ಸಂ । ಗೃಣೀತೇ ।
ಅ । ಅಸ್ಯ । ವೇದಃ । ಖಿದತಿ । ಹಂತಿ । ನಗ್ನಂ । ವಿ । ಸುಷ್ವಯೇ । ಪಕ್ತಯೇ । ಕೇವಲಃ । ಭೂತ್ ॥೭॥

॥ ಸಾಯಣಭಾಷ್ಯಂ ॥

ಸುತಪಾ ಅಭಿಷುತಂ ಸೋಮಂ ಪಿಬನ್ನಿಂದ್ರೋ ರೇವತಾ ಧನವತಾ ಪಣಿನಾ ವಣಿಜಾ ಲುಬ್ಧೇನಾಸುನ್ವತಾ ಸೋಮಾಭಿಷವಮಕುರ್ವತಾಯಜಮಾನೇನ ಸಹ ಸಖ್ಯಂ ಸಖಿತ್ವಂ ನ ಸಂ ಗೃಣೀತೇ । ನ ಸಂಸ್ತೌತಿ । ನಾನುಮನ್ಯತ ಇತ್ಯರ್ಥಃ । ಕಿಂಚ ಅಸ್ಯಾಯಜಮಾನಸ್ಯ ನಗ್ನಂ ನಿರರ್ಥಕಂ ವೇದೋ ಧನಂ ಜ್ಞಾನಂ ವಾ ಆ ಖಿದತಿ । ಉದ್ದರತಿ । ಹಂತಿ । ಹಿನಸ್ತಿ ಚ । ಅಪಿ ಚ ಸುಷ್ವಯೇ ಸೋಮಂ ಸುನ್ವತೇ ಪಕ್ತಯೇ ಹವೀಂಷಿ ಪಚತೇ ಯಜಮಾನಾಯ ಕೇವಲೋಽಸಾಧಾರಣಃ ಸನ್ ವಿ ಭೂತ್ । ವಿಭವತಿ ॥

॥ ಪ್ರತಿಪದಾರ್ಥ ॥

ಸುತಪಾಃ—ಹಿಂಡಿದ ಸೋಮವನ್ನು ಪಾನಮಾಡತಕ್ಕ । **ಇಂದ್ರಃ**—ಇಂದ್ರನು । **ರೇವತಾ**—ಧನವಂತನೂ । **ಪಣಿನಾ**—ಲೋಭಿಯೂ । **ಅಸುನ್ವತಾ**—ಯಜ್ಞಕ್ಕಾಗಿ ಸೋಮವನ್ನು ಹಿಂಡದಿರುವವನೂ ಆದ ಪುರುಷನೊಡನೆ । **ಸಖ್ಯಂ**—ಮೈತ್ರಿಯನ್ನು । **ನ ಸಂ ಗೃಣೀತೇ**—ಒಪ್ಪುವುದಿಲ್ಲ । **ಅಸ್ಯ**—ಅದೇ ಪುರುಷನ । **ನಗ್ನಂ**—ನಿರರ್ಥಕವಾದ । **ವೇದಃ**—ಧನವನ್ನು । **ಆ ಖಿದತಿ**—ಅಪಹರಿಸುತ್ತಾನೆ । **ಹಂತಿ**—ನಾಶಪಡಿಸುತ್ತಾನೆ । **ಸುಷ್ವಯೇ**—ಸೋಮವನ್ನು ಹಿಂಡುವವನೂ । **ಪಕ್ತಯೇ**—ಯಜ್ಞಕ್ಕಾಗಿ ಹವಿಸ್ಸನ್ನು ಪಾಕಮಾಡುವವನೂ ಆದ ಯಜಮಾನನಿಗೆ । **ಕೇವಲಃ**—ಅಸಾಧಾರಣನಾಗಿ । **ವಿ ಭೂತ್**—ಆತನ ವೈಭವಕ್ಕೆ ಕಾರಣನಾಗುತ್ತಾನೆ

॥ ಭಾವಾರ್ಥ ॥

ಹಿಂಡಿದ ಸೋಮವನ್ನು ಪಾನಮಾಡತಕ್ಕ ಇಂದ್ರನು ಧನವಂತನೂ, ಲೋಭಿಯೂ ಯಜ್ಞಕ್ಕಾಗಿ ಸೋಮವನ್ನು ಹಿಂಡದಿರುವವನೂ ಆದ ಪುರುಷನೊಡನೆ ಮೈತ್ರಿಯನ್ನು ಹೊಂದಲು ಇಚ್ಛಿಸುವುದಿಲ್ಲ ಆ ಪುರುಷನ ಧನವು ನಿರರ್ಥಕವಾದುದರಿಂದ ಆದನ್ನು ಅಪಹರಿಸುತ್ತಾನೆ ಅಥವಾ ನಾಶಪಡಿಸುತ್ತಾನೆ. ಸೋಮವನ್ನು ಹಿಂಡುವವನೂ ಯಜ್ಞಕ್ಕಾಗಿ ಹವಿಸ್ಸನ್ನು ಪಾಕಮಾಡುವವನೂ ಆದ ಯಜಮಾನನಿಗೆ ಅಸಾಧಾರಣವಾದ ವೈಭವನನ್ನು ಂಟುಮಾಡುತ್ತಾನೆ.

English Translation.

(Indra), the drinker of the effused Soma, contracts no friendship with the wealthy trader who offers not any libation, he takes away his wealth, destroys him when destitute, but he is a special (friend) to him who presents the libation and oblation.

॥ संहितापाठः ॥

इन्द्रं परेऽवरे मध्यमास इन्द्रं यान्तोऽवसितास इन्द्रं।
इन्द्रं क्षियन्त उत युध्यमाना इन्द्रं नरो वाजयन्तो हवन्ते ॥ ९ ॥

॥ पदपाठः ॥

इन्द्रं। परे। अवरे। मध्यमासः। इन्द्रं। यान्तः। अवऽसितासः। इन्द्रं।
इन्द्रं। क्षियन्तः। उत। युध्यमानाः। इन्द्रं। नरः। वाजयन्तः। हवन्ते ॥ ९ ॥

॥ सायणभाष्यं ॥

पर उत्कृष्टा अवरे निकृष्टाश्च जना इन्द्रं हवन्ते। आह्वयन्ति। मध्यमासो मध्यमाश्चेन्द्रमेव हवन्ते। यान्तः कार्यसिद्ध्यर्थं गच्छन्तो जना इन्द्रमेवाह्वयन्ति। अवसितासो निविष्टाश्चेन्द्रमेवाह्वयन्ति। क्षियन्तो गृहे निवसन्तो जना इन्द्रमेव हवन्ते। उताऽपि च युध्यमाना युद्धं कुर्वाणा जना जयार्थमिन्द्रमेवाह्वयन्ति। वाजयन्तो वाजमन्नमिच्छन्तो नरो नेतारो मनुष्या इन्द्रमेव हवन्ते ॥

॥ पदार्थ ॥

परे—उत्कृष्टरादवरू। अवरे—निकृष्टरादवरू सह। इन्द्रं—इन्द्रनन्नु। हवन्ते—सहायकृत्यागि प्रार्थिसि करेयुत्तारे। मध्यमासः—मध्यमवर्गक्के सेरिदवरू। इन्द्रं—इन्द्रनन्नेये करेयुत्तारे। यान्तः—कार्यसिद्धिगोस्कर होगुवनरू। अवसितासः—

ಕುಳಿತಿರುವವರೂ । **ಇಂದ್ರಂ**--ಇಂದ್ರನನ್ನೇ ಕರೆಯುತ್ತಾರೆ । **ಕ್ಷಯಂತಃ**—ಗೃಹದಲ್ಲಿ ವಾಸಿಸುವವರೂ । **ಇಂದ್ರಂ**—ಇಂದ್ರನನ್ನೇ ಕರೆಯುತ್ತಾರೆ । **ಉತ**—ಮತ್ತು । **ಯುಧ್ಯಮಾನಾಃ**—ಶತ್ರುಗಳೊಡನೆ ಯುದ್ಧ ಮಾಡುವವರೂ । **ವಾಜಯಂತಃ**—ಅನ್ನವನ್ನು ಇಚ್ಛಿಸುವವರೂ ಆದ । **ನರಃ**—ಮಾನವರು । **ಇಂದ್ರಂ**—ಇಂದ್ರನನ್ನೇ ಅಪೇಕ್ಷಿಸಿ ಕರೆಯುತ್ತಾರೆ.

। ಭಾವಾರ್ಥ ।

ಉತ್ಕೃಷ್ಟರಾದವರೂ, ನಿಕೃಷ್ಟರಾದವರೂ, ಇಂದ್ರನನ್ನು ಸಹಾಯಕ್ಕಾಗಿ ಪ್ರಾರ್ಥಿಸಿ ಕರೆಯುತ್ತಾರೆ. ಮಧ್ಯಮವರ್ಗಕ್ಕೆ ಸೇರಿದವರೂ ಸಹ ಇವನ ಸಹಾಯವನ್ನೇ ಅಪೇಕ್ಷಿಸುತ್ತಾರೆ ಕಾರ್ಯಸಿದ್ಧಿಗೋಸ್ಕರ ಹೊರಡುವವರೂ, ಕುಳಿತಿರುವವರೂ, ಗೃಹದಲ್ಲಿ ವಾಸಿಸುವವರೂ, ಶತ್ರುಗಳೊಡನೆ ಯುದ್ಧಮಾಡುವವರೂ, ಅನ್ನವನ್ನು ಇಚ್ಛಿಸುವವರೂ ಆದ ಸಕಲ ಮಾನವವರ್ಗವೂ ಸಹ ಇಂದ್ರನ ಸಹಾಯವನ್ನೇ ಅಪೇಕ್ಷಿಸಿ ಅವನನ್ನೇ ಪ್ರಾರ್ಥಿಸಿ ಕರೆಯುತ್ತಾರೆ.

English Translation.

The most exalted, the most humble, (invoke) Indra, the middle (classes) invoke Indra, those going, those stopping, (invoke) Indra, those dwelling at home, those going to battle, (invoke) Indra, men needing food invoke Indra.

ಇಪ್ಪತ್ತಾರನೆಯ ಸೂಕ್ತವು.

ಅಹಂ ಮನುರಿತಿ ಸಪ್ತೇರ್ಚಂ ಪಂಚಮಂ ಸೂಕ್ತಂ ವಾಮದೇವಸ್ಯಾರ್ಷಂ । ಅತ್ರೇಯಮನುಕ್ರಮಣಿಕಾ। ಅಹಂ ಮನುಃ ಸಸ್ತ್ಯಾದ್ಯಾಭಿಸ್ತಿಸೃಭಿರಿಂದ್ರಮಿವಾತ್ಮಾನಮೃಷಿಸ್ತುಷ್ಟಾವೇಂದ್ರೋ ವಾತ್ಮಾನಂ ಪರಾ ನವಾಹ್ವೌ ವಾ ಶ್ಯೇನಸ್ತುತಿರಿತಿ । ಅತ್ರಾಹಂ ಮನುರಿತ್ಯಾದ್ಯಾಭಿಸ್ತಿಸೃಭಿರಾತ್ಮಾನಮಿಂದ್ರರೂಪೇಣ ವಾಮದೇವಃ ಸ್ತುತವಾನ್ । ಯದ್ವಾ । ಇಂದ್ರ ಏವಾತ್ಮಾನಂ ಸ್ತುತವಾನ್ । ಅತೋ ವಾಮದೇವವಾಕ್ಯಪಕ್ಷೇ ವಾಮದೇವ ಋಷಿರಿಂದ್ರೋ ದೇವತಾ । ಇಂದ್ರವಾಕ್ಯಪಕ್ಷೇ ತ್ವಿಂದ್ರ ಋಷಿಃ ಪರಮಾತ್ಮಾ ದೇವತಾ । ತ್ರಿಷ್ಟುಪ್ ಛಂದಃ । ಅವಶಿಷ್ಟಾನಾಂ ವಾಮದೇವ ಋಷಿಃ । ಅವಶಿಷ್ಟಾಭಿರುತ್ತರಸೂಕ್ತೇನ ಚ ಸುಪರ್ಣಾತ್ಮನಾ ಬ್ರಹ್ಮ ಸ್ತೂಯತೇ । ಅತಸ್ತಾಸಾಂ ಪರಬ್ರಹ್ಮ ದೇವತಾ ॥ ಶ್ಯೇನನಾಮ್ನ್ಯೇಕಾಹೇ ಮಾಧ್ಯಂದಿನಸವನೇ ಮರುತ್ವತೀಯಶಸ್ತ್ರ ಇದಂ ಸೂಕ್ತಂ । ಸೂತ್ರಿತಂ ಚ । ಶ್ಯೇನಾಜಿರಾಭ್ಯಾಮಭಿಚರನ್ಯಜೇತಾಹಂ ಮನುರ್ಗರ್ಭೇ ನು ಸನ್ । ಆ. ೯-೭ । ಇತಿ ॥

ಅನುವಾದವು—**ಅಹಂ ಮನುಃ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಾಮದೇವನು ಋಷಿಯು, ಅನುಕ್ರಮಣಿಕೆಯಲ್ಲಿ—**ಅಹಂ ಮನುಃ ಸಪ್ತಾದ್ಯಾಭಿಸ್ತಿಸೃಭಿರಿಂದ್ರಮಿವಾತ್ಮಾನಮೃಷಿಸ್ತುಷ್ಟಾವೇಂದ್ರೋ ವಾತ್ಮಾನಂ ಪರಾ ನವಾಷ್ಟೌ ವಾ ಶ್ಯೇನಸ್ತುತಿಃ** ಎಂದು ಹೇಳಿರುವುದು ಇಲ್ಲಿ **ಅಹಂ ಮನುಃ** ಎಂದು ಮೊದಲಾಗುವ ಮೂರು ಋಕ್ಕುಗಳಿಂದ ವಾಮದೇವಋಷಿಯು ತನ್ನನ್ನು ಇಂದ್ರರೂಪದಿಂದ ಸ್ತುತಿಸುವನು. ಅಥವಾ ಇಂದ್ರನೇ ತನ್ನನ್ನು ಸ್ತುತಿಸಿಕೊಂಡಿರುವನು ಎಂದೂ ಹೇಳಬಹುದು. ಆದ್ದರಿಂದ ವಾಮದೇವನ ವಾಕ್ಯಪಕ್ಷದಲ್ಲಿ ಈ ಸೂಕ್ತಕ್ಕೆ ವಾಮದೇವನು ಋಷಿಯು, ಇಂದ್ರನು ದೇವತೆಯು ಎಂದು ಹೇಳಬೇಕಾಗುವುದು. ಇಂದ್ರನ ವಾಕ್ಯಪಕ್ಷದಲ್ಲಿ ಈ ಸೂಕ್ತದ ಮೂರು ಋಕ್ಕುಗಳಿಗೆ ಇಂದ್ರನೇ ಋಷಿಯು, ಪರಮಾತ್ಮನು ದೇವತೆಯು ಎಂದು ಹೇಳಬೇಕು. ತ್ರಿಷ್ಟುಪ್ ಛಂದಸ್ಸು, ಉಳಿದ ಋಕ್ಕುಗಳಿಗೆ ಎಂದರೆ ೪-೭ ಋಕ್ಕುಗಳಿಗೆ ವಾಮದೇವನು ಋಷಿಯು. ಈ ೪-೭ ಋಕ್ಕುಗಳಿಗೂ ಮುಂದಿನ ಸೂಕ್ತದ ಋಕ್ಕುಗಳಿಗೂ—ಇವುಗಳಲ್ಲಿ ಸುಪರ್ಣಾತ್ಮಕನಾದ ಬ್ರಹ್ಮನು ಸ್ತುತಿಸಲ್ಪಟ್ಟಿರುವುದರಿಂದ—ಪರಬ್ರಹ್ಮನೇ ದೇವತೆಯು. ಶ್ಯೇನವೆಂಬ ಒಂದು ದಿನದ ಮಟ್ಟಿಗೆ ಮಾಡಲ್ಪಡುವ ಯಾಗದ ಮಾಧ್ಯಂದಿನಸವನಕಾಲದಲ್ಲಿ ಮರುತ್ವತೀಯಶಸ್ತ್ರಪರನ ಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಶ್ಯೇನಾಜಿರಾಭ್ಯಾಮಭಿಚರನ್ಯಜೇತಾಹಂ ಮನುರ್ಗರ್ಭೇ ನು ಸನ್** ಎಂಬ ಸೂತ್ರದಿಂದ (ಆ. ೯-೭) ವಿವೃತವಾಗಿರುವುದು.

ಸೂಕ್ತ—೨೬

ಮಂಡಲ—೪ ॥ ಅನುವಾಕ—೩ ॥ ಸೂಕ್ತ—೨೬ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ—೧೫ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
॥ ಋಷಿಃ—೧-೩ ವಾಮದೇವ ಇಂದ್ರೋ ವಾ । ೪-೭ ವಾಮದೇವಃ ॥
॥ ದೇವತಾ—೧-೩ ಇಂದ್ರ ಆತ್ಮಾ ವಾ । ೪-೭ ಶ್ಯೇನಃ ॥
ಛಂದಃ —ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಅಹಂ ಮನುರಭವಂ ಸೂರ್ಯಶ್ಚಾಹಂ ಕಕ್ಷೀವಾಁ ಋಷಿರಸ್ಮಿ ವಿಪ್ರಃ ।
ಅಹಂ ಕುತ್ಸಮಾರ್ಜುನೇಯಂ ನ್ಯೃಂಜೇಽಹಂ ಕವಿರುಶನಾ ಪಶ್ಯತಾ ಮಾ ॥

॥ ಪದಪಾಠಃ ॥

ಅಹಂ । ಮನುಃ । ಅಭವಂ । ಸೂರ್ಯಃ । ಚ । ಅಹಂ । ಕಕ್ಷೀವಾನ್ । ಋಷಿಃ । ಅಸ್ಮಿ । ವಿಪ್ರಃ ।
ಅಹಂ । ಕುತ್ಸಂ । ಆರ್ಜುನೇಯಂ । ನಿ । ಋಂಜೇ । ಅಹಂ । ಕವಿಃ । ಉಶನಾ । ಪಶ್ಯತ । ಮಾ ॥ ೧॥

॥ ಸಾಯಣಭಾಷ್ಯಂ ॥

ಇದಮಾದಿಮಂತ್ರತ್ರಯೇಣ ಗರ್ಭೇ ವಸನ್ವಾಮದೇವ ಉತ್ಪನ್ನತತ್ತ್ವಜ್ಞಾನಃ ಸನ್ ಸಾರ್ವಾತ್ಮ್ಯಂ ಸ್ವಾನುಭವಂ ಮನ್ವಾದಿರೂಪೇಣ ಪ್ರದರ್ಶಯನ್ನಾಹ । ಅಹಂ ವಾಮದೇವ ಇಂದ್ರೋ ವಾ ಮನುರಭವಂ । ಸರ್ವಸ್ಯ ಮಂತಾ ಪ್ರಜಾಪತಿರಸ್ಮಿ । ಅಹಮೇವ ಸೂರ್ಯಶ್ಚ ಸರ್ವಸ್ಯ ಪ್ರೇರಕಃ ಸವಿತಾ ಚಾಸ್ಮಿ । ವಿಪ್ರೋ ಮೇಧಾವೀ ಕಕ್ಷೀವಾನ್ ದೀರ್ಘತಮಸಃ ಪುತ್ರ ಏತರ್ಹ್ಯಂಜ್ಞಕ ಋಷಿರಪ್ಯಹಮೇವಾಸ್ಮಿ । ಆರ್ಜುನೇಯಮರ್ಜುನ್ಯಾಃ ಪುತ್ರಂ ಕುತ್ಸಮೇತನ್ನಾಮಕಮೃಷಿಮಹಮೇವ ನ್ಯೃಂಜೇ । ನಿತರಾಂ ಪ್ರಸಾಧಯಾಮಿ । ಕವಿಃ ಕ್ರಾಂತದರ್ಶನೈತದಾಖ್ಯ ಋಷಿರಹಮೇವಾಸ್ಮಿ । ಉಕ್ತಮುಪಲಕ್ಷಣಂ । ಪರಮಾರ್ಥದೃಷ್ಟ್ಯಾ ಕೃತ್ಸ್ನಮಪ್ಯಹಮೇವಾಸ್ಮೀತ್ಯರ್ಥಃ । ಹೇ ಜನಾ ಮಾ ಮಾಂ ಸರ್ವಾತ್ಮಕಂ ಪಶ್ಯತ । ಯೂಯಮಪ್ಯೇವಮೇವ ಸಸ್ವರೂಪಮನುಭವತೇತ್ಯುಕ್ತಂ ಭವತಿ ॥

॥ ಪ್ರತಿಪದಾರ್ಥ ॥

ಅಹಂ—ವಾಮದೇವನೆಂದು ಪ್ರಸಿದ್ಧನಾದ ನಾನು । **ಮನುಃ ಅಭವಂ**—ಸಕಲವನ್ನೂ ತಿಳಿದ ಪ್ರಜಾಪತಿಯಾಗಿದ್ದೇನೆ । **ಅಹಂ**—ನಾನೇ । **ಸೂರ್ಯಶ್ಚ**—ಜಗತ್ಪ್ರೇರಕನಾದ ಸೂರ್ಯನೂ ಆಗಿದ್ದೇನೆ । **ವಿಪ್ರಃ**—ಮೇಧಾವಿಯೂ । **ಕಕ್ಷೀವಾನ್**—ಕಕ್ಷೀವಾನ್ ಎಂಬ ಹೆಸರುಳ್ಳವನೂ ಆದ । **ಋಷಿಃ ಅಸ್ಮಿ**—ಋಷಿಯೂ ನಾನೇ । **ಆರ್ಜುನೇಯಂ**—ಅರ್ಜುನಿಯ ಪುತ್ರನಾದ । **ಕುತ್ಸಂ**—ಕುತ್ಸನನ್ನು । **ಅಹಂ**—ನಾನೇ । **ನ್ಯೃಂಜೇ**—ಅತಿಯಾಗಿ ಅನುಗ್ರಹಿಸುತ್ತೇನೆ । **ಕವಿಃ**—ಕ್ರಾಂತದರ್ಶಿಯಾದ । **ಉಶನಾ**—ಉಶನಸ್ಸೆಂಬ ಋಷಿಯೂ । **ಅಹಂ**—ನಾನೇ ಆಗಿದ್ದೇನೆ । (ಎಲೈ ಮಾನವರೇ) **ಮಾ**—ನನ್ನನ್ನೇ (ಸರ್ವವ್ಯಾಪಿಯೂ ಸರ್ವಾತ್ಮನೂ ಆಗಿರುವವನೆಂದು) । **ಪಶ್ಯತ**—ತಿಳಿಯಿರಿ.

॥ ಭಾವಾರ್ಥ ॥

ವಾಮದೇವನೆಂಬ ಹೆಸರಿನಿಂದ ಪ್ರಸಿದ್ಧನಾದ ನಾನು ಸಕಲವನ್ನೂ ತಿಳಿದ ಪ್ರಜಾಪತಿಯಾಗಿದ್ದೇನೆ. ಜಗತ್ಪ್ರೇರಕನಾದ ಸೂರ್ಯನೂ ನಾನೇ ಮೇಧಾವಿಯೂ, ಕಕ್ಷೀವಾನ್ ಎಂಬ ಹೆಸರುಳ್ಳ ಋಷಿಯೂ ನಾನೇ ಆರ್ಜುನಿಯ ಪುತ್ರನಾದ ಕುತ್ಸನನ್ನು ಅನುಗ್ರಹಿಸಿದವನೂ ನಾನೇ ಕ್ರಾಂತದರ್ಶಿಯಾದ ಉಶನಸ್ಸೆಂಬ ಋಷಿಯೂ ನಾನೇ ಎಲೈ ಮಾನವರೇ, ನನ್ನನ್ನೇ ಸರ್ವವ್ಯಾಪಿಯೂ ಸರ್ವಾತ್ಮನೂ ಆಗಿರುವವನೆಂದು ತಿಳಿಯಿರಿ

English Translation

I have been Manu and Surya I am the wise Rishi, Kakshivath, I have befriended Kutsa, the son of Arjuni I am the far-seeing Ushanas, so behold me.

॥ ವಿಶೇಷವಿಷಯಗಳು ॥

ಕಕ್ಷೀವಾನ್—ಉಶಿಜಃ ಪುತ್ರಃ ಕಕ್ಷೀವಾನಹಂ । **ಉಶಿಕ್** ಎಂಬವಳ ಮಗನೂ, ಕಕ್ಷೀವಂತನೆಂಬ ಹೆಸರುಳ್ಳವನೂ ಆದ ನಾನು ಎಂದು **ಈ** ಸೂಕ್ತದ್ರಷ್ಟಾವಾದ ಋಷಿಯು ಹೇಳಿಕೊಳ್ಳುತ್ತಾನೆ ಇವನು ದೀರ್ಘತಮಸ್ಸೆಂಬ ಋಷಿಯಿಂದ **ಉಶಿಕ್** ಎಂಬವಳಲ್ಲಿ ಉತ್ಪನ್ನನಾದವನು ಎಂದು ಬೃಹದ್ದೇವತೆಯ ಆಧಾರದಿಂದ ತಿಳಿಯುತ್ತದೆ

ಅಂಗರಾಜಗೃಹೇ ಯುಕ್ತಾಂ ಉಶಿಜಂ ಪುತ್ರಕಾಮಯಾ ।
ರಾಜ್ಞಾ ಚ ಪ್ರೇಹಿತಾಂ ದಾಸೀಂ ಭಕ್ತಾಂ ಮತ್ವಾ ಮಹಾತಪಾಃ ॥
ಜನಯೋಮಾಸ ಚೋತ್ಥಾಯ ಕಕ್ಷೀವತ್ಪ್ರಮುಖಾನ್ ಋಷೀನ್ ॥

(ಬೃ. ದೇ. ೪-೨೪, ೨೫)

ಅಂಗರಾಜನ ಮನೆಯಲ್ಲಿ ಕೆಲಸಕ್ಕೆ ಇದ್ದ **ಉಶಿಕ್** ಎಂಬವಳನ್ನು ದೊರೆಯು ಪುತ್ರೇಚ್ಛೆಯಿಂದ **ದೀರ್ಘತಮಸ್** ಎಂಬ ಋಷಿಯ ಸಮೀಪಕ್ಕೆ ಕಳುಹಿಸಿದನು. ಇವಳು ಬಹಳ ಭಕ್ತಿಯುತಳಾಗಿ ಅವನಿಗೆ ಸೇವೆಯನ್ನು ಸಲ್ಲಿಸುತ್ತಿದ್ದುದರಿಂದ ಅವನು ಸಂತುಷ್ಟನಾಗಿ ಇವಳಲ್ಲಿ ಕಕ್ಷೀವತ್ಪ್ರಮುಖರಾದ ಋಷಿಗಳನ್ನು ಉತ್ಪನ್ನಮಾಡಿದನು ಎಂದು ಕಥೆಯು ಉಕ್ತವಾಗಿದೆ.

ಯುವಂ ನರಾ ಸ್ತುವತೇ ಪಜ್ರಿಯಾಯ ಕಕ್ಷೀವತೇ ಅರದತಂ ಪುರಂಧಿಂ ।

(ಋ ಸಂ ೧-೧೧೬-೭)

ತದ್ವಾಂ ನರಾ ಶಂಸ್ಯಂ ಪಜ್ರಿಯೇಣ ಕಕ್ಷೀವತಾ ನಾಸತ್ಯಾ ಪರಿಜ್ಮನ್ ।

(ಋ ಸಂ ೧-೧೧೭-೮)

ಇತ್ಯಾದಿ ಋಕ್ಕುಗಳಿಂದ ಇವನು **ಪಜ್ರ** ಸಂತತಿಯವನೆಂದು ತಿಳಿಯುತ್ತದೆ.

ಮದಚ್ಯುತಃ ಕೃತನಾವತೋ ಅತ್ಯಾನ್ಕಕ್ಷೀವಂತ ಉದಮೃಕ್ಷಂತ ಪ್ರಜಾಃ ।

(ಋ. ಸಂ ೧-೧೭೬-೩)

ಎಂಬ ಋಕ್ಕಿನಲ್ಲಿ ಇವನ ವಂಶದಲ್ಲಿ ಉತ್ಪನ್ನರಾದವರೂ **ಪಜ್ರ**ರೆಂದೇ ಕರೆಯಲ್ಪಡುವುದಾಗಿ ತಿಳಿಯುತ್ತದೆ

ಕಕ್ಷೀವಾನ್ ಎಂಬ ಹೆಸರಿನವನು ಒಬ್ಬ ರಾಜನು ಇವನ ಉತ್ಪತ್ತಿಯ ಇತಿಹಾಸವು ಹೀಗಿದೆ—ಹಿಂದೆ ಅಂಗದೇಶದ ರಾಜನು ಒಂದುಸಾರಿ ಪತ್ನೀದಾಸೀಯರೊಡನೆ ಜಲಕ್ರೀಡಾರ್ಥವಾಗಿ ಗಂಗಾನದಿಗೆ ಹೋಗಿದ್ದನು. ಆ ಸಮಯಕ್ಕೆ ಸರಿಯಾಗಿ ದೀರ್ಘತಮನೆಂಬ ಋಷಿಯು ಒಂದು ದೋಣಿಯಲ್ಲಿ ತೇಲಿಕೊಂಡು ಬರುತ್ತಿದ್ದನು. ಆ ಋಷಿಯು ಅತಿದುರ್ಬಲನಾಗಿದ್ದುದರಿಂದ ಆ ಋಷಿಯ ಪತ್ನಿಪುತ್ರಾದಿಗಳು, ಇಂತಹ ದುರ್ಬಲನು ತಮಗೆ ಬೇಡವೆಂದು ಅವನನ್ನು ಒಂದು ದೋಣಿಯಲ್ಲಿಟ್ಟು ಗಂಗಾನದಿಗೆ ಎಸೆದಿದ್ದರು ಅಂಗರಾಜನು ಅಕಸ್ಮಾತ್ತಾಗಿ ತಾನಿದ್ದ ಸ್ಥಳಕ್ಕೆ ದೋಣಿಯಲ್ಲಿ ಬಂದ ದೀರ್ಘತಮ ಋಷಿಯನ್ನು ನೋಡಿ, ಅತ್ಯಂತ ಸಂತೋಷದಿಂದ ವಂದಿಸಿ ಅವನನ್ನು ದೋಣಿಯಿಂದಿಳಿಸಿ ಪೂಜಿಸಿ, " ಸ್ವಾಮಿ, ನನಗೆ ಬಹುಕಾಲದಿಂದ ಮಕ್ಕಳಿಲ್ಲ. ಇದೋ ನನ್ನ ಪತ್ನಿಯು ಇಲ್ಲಿಯೇ ಇರುವಳು. ಇವಳಲ್ಲಿ ಒಬ್ಬ ಪುತ್ರನನ್ನು ಉತ್ಪಾದನೆ ಮಾಡಿ " ಎಂದು ಪ್ರಾರ್ಥಿಸಿಕೊಂಡನು ಆಗ ರಾಣಿಯು ಅತ್ಯಂತ ವೃದ್ಧನಾಗಿರುವ ಈ ಋಷಿಯನ್ನು ನೋಡಿ ಅವನೊಡನೆ ಕೂಡಲು ಇಷ್ಟಪಡದೆ **ಉಶಿಕ್** ಎಂಬ **ಹೆಸರಿನ** ತನ್ನ ದಾಸಿಯೊಬ್ಬಳನ್ನು ಕಳುಹಿಸಿಕೊಟ್ಟಳು. ಸರ್ವಜ್ಞನಾದ ಆ ಮಹರ್ಷಿಯು ಆಕೆಯ ಮೇಲೆ ಮಂತ್ರಪೂತವಾದ ಜಲವನ್ನು ಪ್ರೋಕ್ಷಿಸಲು ಆ ದಾಸಿಯು ಋಷಿಪತ್ನಿಯಂತೆ ಕಂಗೊಳಿಸಿದಳು ಆಕೆಯಲ್ಲಿ ಜನಿಸಿದ ಮಗನೇ ಕಕ್ಷೀವಾನ್ ಎಂಬ ಋಷಿಯು. ಈತನು ರಾಜಸೂಯವೇ ಮೊದಲಾದ ಅನೇಕ ಯಾಗಗಳನ್ನು ಮಾಡಿದನು ಆ ಯಾಗಗಳಿಂದ ಪ್ರಸನ್ನನಾದ ಇಂದ್ರನು ಕಕ್ಷೀವಂತನಿಗೆ ವೃಚಯಾ ಎಂಬ ಹೆಸರಿನ ತರುಣಿಯೊಬ್ಬಳನ್ನು ಅನುಗ್ರಹಿಸಿಕೊಟ್ಟನು

ಕಕ್ಷ್ಯಾ ಶಬ್ದಕ್ಕೆ ಕುದುರೆಯನ್ನು ಕಟ್ಟುವ ಹಗ್ಗ ಎಂದೂ ಅರ್ಥವಿದೆ. **ಕಕ್ಷೀವಾನ್ ಕಕ್ಷಾವಾನ್** (ನಿರು ೬-೧೦) ಎಂದು ನಿರುಕ್ತವಚನವಿರುವುದು

ಈ ಕಕ್ಷೀವಾನನ ಹೆಸರು ಋಗ್ವೇದ ಸಂ. ೧-೧೪೯-೧, ೧-೫೧-೧೫, ೧-೧೧೨-೧೧, ೧-೧೧೬-೭, ೧-೧೧೭-೬, ೧-೧೨೬-೩, ೪-೨೬-೩, ೮-೯-೧೦, ೯-೭೪-೪, ೧೦-೨೪-೧೦, ೧೦-೬೯-೧೬ **ಎಂಬ** ಋಕ್ಕುಗಳಲ್ಲಿಯೂ ಅರ್ಥವೇದ ೪-೨೯-೫ರಲ್ಲಿಯೂ ಪಠಿತವಾಗಿದೆ, ಇವನ ವಂಶವು ಪಜ್ರ ಎಂದಿರಬೇಕು. ಏಕೆಂದರೆ ಇವನನ್ನು ಪಜ್ರಿಯ ಎಂದು ಋ ಸಂ ೧-೧೧೬-೭ ೧-೧೧೭-೬, ರಲ್ಲಿ ಕರೆಯಲಾಗಿದೆ ಮತ್ತು ಋ ಸಂ. ೧-೧೨೬-೪ ರಲ್ಲಿ ಇವನ ಸಂತತಿಯವರನ್ನು ಪಜ್ರಾ ಎಂದೂ ಕರೆದಿದ್ದಾರೆ. ಋ ಸಂ ೧-೧೨೬ ನೇ ಸ್ತೂದಲ್ಲಿ **ಈ** ಋಷಿಯು ಸ್ಪನಯ ಭಾವ್ಯ ಎಂಬ ರಾಜನು ತನಗೆ ಕೊಟ್ಟ ದಾನವಸ್ತುಗಳ ವಿಷಯವಾಗಿ ಪ್ರಶಂಸೆಮಾಡಿದಾನೆ. ಮತ್ತು ಸಾಂಖ್ಯಾಯನ ಶ್ರೌತಸೂತ್ರ ೧೬-೪-೫ರಲ್ಲಿ ನಾರಾಶಂಸಸೂಕ್ತಗಳೆಂಬ ವೀರರನ್ನು ಪ್ರಶಂಸೆಮಾಡುವ ಮಂತ್ರಗಳ ಸಮುದಾಯದಲ್ಲಿ ಉಶಿಜ ಪುತ್ರನಾದ ಕಕ್ಷೀವಾನ್ ಎಂಬುವನು ಮಾಡಿದ ಸ್ಪನಯಭಾವಯವ್ಯ ಎಂಬ ರಾಜನ ದಾನಪ್ರಶಂಸೆಯ ಮಂತ್ರವೂ ಸೇರಿರುವುದು ಇವನು ವಯಸ್ಸಾದ ಮೇಲೆ ವೃಚಯಾ ಎಂಬ ಕನ್ಯೆಯನ್ನು ಮದುವೆಯಾದ ವಿಷಯವು (ಋ ಸಂ ೧-೫೧-೧೫) ಎಂಬ ಋಕ್ಕಿನಲ್ಲಿ ವರ್ಣಿತವಾಗಿದೆ ಇವನು ಒಂದುನೂರು ವರ್ಷಗಳವರೆಗೆ ಜೀವಿಸಿದ್ದನೆಂದು ಋ ಸಂ ೯-೭೪-೪ ಋಕ್ಕಿನಿಂದ ತಿಳಿದುಬರುವುದು ಋ ಸಂ. ೪-೨೬-೧೦ರಲ್ಲಿ ಇವನ ಹೆಸರು ಕುತ್ಸ ಮತ್ತು ಕವಿ ಉಶನಸ್ ಎಂಬವರೊದನೆ ಸೂಚಿತವಾಗಿದೆ ಋ ಸಂ ೮-೯-೧೦ ಎಂಬ ಒಂದು ಋಕ್ಕಿನಲ್ಲಲ್ಲದೆ ಮತ್ತೆಲ್ಲಿಯೂ ದೀರ್ಘತಮಸ್ ಎಂಬ ಋಷಿಯೊಡನೆ ಸಂಬಂಧವಿರುವ ವಿಷಯವು ಕಂಡುಬರುವುದಿಲ್ಲ ಆದರೆ ಬೃಹದ್ದೇವತಾ ಎಂಬ ಶೌನಕೋಕ್ತಗ್ರಂಥದಲ್ಲಿ **ಈ** ಕಕ್ಷೀವಾನ್ ಎಂಬವನು ದೀರ್ಘತಮಸ್ಸೆಂಬ ಋಷಿಗೆ ಉಶಿಜೆ ಎಂಬ ದಾಸಿಯಲ್ಲಿ ಜನಿಸಿದ ಪುತ್ರನೆಂದು ಹೇಳಿರುವುದು (ಬೃ ದೇ ೪-೧೧)

Weber ಎಂಬ ಪಾಶ್ಚಾತ್ಯ ಪಂಡಿತನು ತೈ ಸಂ ೫-೬-೫-೩, ಕಾರಕಸಂಹಿತಾ ೧೩-೩, ಪಂಚವಿಂಶ ಬ್ರಾಹ್ಮಣ ೨೫-೧೬-೩ ಎಂಬ ಮಂತ್ರಗಳ ಆಧಾರದ ಮೇಲೆ **ಈ** ಕಕ್ಷೀವಾನ್ ಎಂಬುವನು ಮೊದಲು ಕ್ಷತ್ರಿಯನಾಗಿದ್ದನೆಂದೂ, ಆದುದರಿಂದಲೇ ಇವನ ಹೆಸರು ಮೇಲೆ ಕೊಟ್ಟಿರುವ ಮಂತ್ರಗಳಲ್ಲಿ ಪರ, ಆತ್ಮಾರ, ವೀತಹವ್ಯ, ಶ್ರಾಯಸ, ತ್ರಸದಸ್ಯ, ಪೌರುಕುತ್ಸ ಎಂಬ ರಾಜರ ಜತೆಯಲ್ಲಿ ಪಠಿತವಾಗಿರುವುದೆಂದೂ ಅಭಿಪ್ರಾಯಪಡುವನು. **ಈ** ಋಷಿಯು ಋಗ್ವೇದದ ಪ್ರಥಮ ಮಂಡಲದಲ್ಲಿ ೧೧೬ ರಿಂದ ೧೨೬ ವರೆಗಿನ ಸೂಕ್ತಗಳಲ್ಲಿರುವ ೧೪೬ ಋಕ್ಕುಗಳಿಗೂ ೧೩೬ನೆಯ ಸೂಕ್ತದಲ್ಲಿ ೧-೫ ಋಕ್ಕುಗಳಿಗೂ ಒಟ್ಟು ೧೫೧ ಋಕ್ಕುಗಳಿಗೆ ದ್ರಷ್ಟೃವಾಗಿರುವನು. ಇದಲ್ಲದೆ ಒಂಭತ್ತನೆಯ ಮಂಡಲದ ೭೪ನೆಯ ಸೂಕ್ತದಲ್ಲಿರುವ ೯ ಋಕ್ಕುಗಳಿಗೆ **ಕಕ್ಷೀವಾನ್ ದೈರ್ಘತಮಸಃ**—ದೀರ್ಘತಮಸ್ಸೆಂಬ ಋಷಿಯ ಪುತ್ರನಾದ ಕಕ್ಷೀವಾನ್ ಎಂಬುವನು ಋಷಿಯೆಂದು ಹೇಳಲ್ಪಟ್ಟಿರುವುದರಿಂದ ಅಲ್ಲಿ ಔಶಿಜನೆಂಬ ವಿಶೇಷಣ ವಿಲ್ಲದಿದ್ದರೂ ಪ್ರಸಕ್ತವಾದ ಸೂಕ್ತದ ಋಷಿಯು ಅದಕ್ಕೂ ಋಷಿಯೆಂದು ಹೇಳಬಹುದು

ಸಿಂಧೂನದಿಯ ದಡದಲ್ಲಿದ್ದ ಭಾವಯವ್ಯನ ಮಗನಾದ **ಸ್ಪನಯನು** ತನಗೆ ಅತಿಪ್ರಭೂತವಾದ ದಾನವನ್ನು ಕೊಟ್ಟುದಾಗಿ ಪ್ರಶಂಶಿಸಿದಾನೆ **ಈ** ದಾನವನ್ನು ಕೊಡಬೇಕಾದ ಸಂದರ್ಭವೂ, ಇವರಿಬ್ಬರಿಗೂ ಉಂಟಾದ ನಿಕಟವಾದ ಸಂಬಂಧವೂ ಬೃಹದ್ದೇವತೆಯಲ್ಲಿ ಉಕ್ತವಾಗಿರುವ ಕಥೆಯಿಂದ ತಿಳಿಯುತ್ತದೆ

ಅಧಿಗಮ್ಯ ಗುರೋರ್ವಿದ್ಯಾಂ ಗಚ್ಛನ್ ಸ್ವನಿಲಯೇಂ ಕಿಲ ।
ಕಕ್ಷೀವಾನಧ್ವನಿ ಶ್ರಾಂತಃ ಸುಷ್ವಾಪಾರ್ಯಗೋಚರಃ ॥
ತಂ ರಾಜಾ ಸ್ವನಯೋ ನಾಮ ಭಾವಯವ್ಯಸುತೋ ವ್ರಜನ್ ।
ಕ್ರೀಡಾರ್ಥಂ ಸಾನುಗೋಽಪಶ್ಯತ್ ಸಭಾರ್ಯಃ ಸಪುರೋಹಿತಃ ॥
ಅಥೈನಂ ರೂಪಸಂಪನ್ನಂ ದೃಷ್ಟ್ವಾ ದೇವಸುತೋಪಮಂ ।
ಕನ್ಯಾದಾನೇ ಮತಿಂ ಚಕ್ರೇ ವರ್ಣಗೋತ್ರಾವಿರೋಧತಃ ॥
ಸಂಭೋಧ್ಯೈನಂ ಸ ಪಪ್ರಚ್ಛ ವರ್ಣಗೋತ್ರಾದಿಕಂ ತತಃ ।
ರಾಜನ್ನಾಂಗಿರಸೋಽಸ್ಮೀತಿ ಕುಮಾರಃ ಪ್ರತ್ಯುವಾಚ ತಂ ॥
ಪುತ್ರೋಽಹಂ ದೀರ್ಘತಮಸ ಔಚಥ್ಯಸ್ಯ ಋಷೇರ್ನೃಪ ।
ಅಥಾಸ್ಮೈ ಸ ದದೌ ಕನ್ಯಾ ದಶಾಭರಣಭೂಷಿತಾಃ ॥
ತಾವತಶ್ಚ ರಥಾಞ್ಚೈವಾನ್ತೀಡ್ಯಂಗಾನ್ತ್ಸೈ ಚತುರ್ಯುಜಃ ।
ವಧೂನಾಂ ವಾಹನಾರ್ಥಾಯ ಧನಕುಪ್ಯಮಜಾವಿಕಂ ॥
ನಿಷ್ಕಾಣಾಂ ವೈಸಭಾಣಾಂ ಚ ಶತಂ ಶತಮದಾತ್ಪುನಃ ।
ಏತದುತ್ತರಸೂಕ್ತೇನ ಶತಮಿತ್ಯಾದಿನೋದಿತಂ ॥
ಶತಮಶ್ವಾನ್ಯುತಂ ನಿಷ್ಕಾನ್ ರಥಾನ್ ದಶ ವಧೂಮತಃ ।
ಚತುರ್ಯುಜೋ ಗವಾಂ ಚೈವ ಸಹಸ್ರಂ ಪಷ್ಟ್ಯುಪಾಧಿಕಂ ॥
ಸ್ವನಯಾದ್ಭಾವಯವ್ಯಾದ್ಯಃ ಕಕ್ಷೀವಾನ್ಪ್ರತ್ಯಪದ್ಯತ ।
ಪ್ರತಿಗೃಹ್ಯ ಚ ತುಷ್ಟಾವ ಪ್ರಾತಃ ಪಿತ್ರೇ ಶಶಂಸ ಚ ।

(ಬೃ. ದೇ ೩-೧೪೬ ರಿಂದ ೧೫೦)

ಗುರುವಿನ ಮನೆಯಲ್ಲಿ ವಿದ್ಯಾಭ್ಯಾಸವಾದ ಮೇಲೆ ಕಕ್ಷೀವಂತನು ಮನೆಗೆ ಹಿಂತಿರುಗುತ್ತಿದ್ದಾಗ ದಾರಿಯಲ್ಲಿ ಬಳಲಿದವನಾಗಿ ಕಾಡಿನಲ್ಲಿ ಮಲಗಿ ನಿದ್ರೆಹೋಗುತ್ತಿದ್ದನು ಆಗ ಭಾವಯವ್ಯಪುತ್ರನಾದ **ಸ್ವನಯ**ನೆಂಬ ರಾಜನು ತನ್ನ ಪತ್ನೀಭೃತ್ಯಾದಿಪರಿವಾರಗಳೊಡನೆ ಕ್ರೀಡಾರ್ಥವಾಗಿ ಅಲ್ಲಿಗೆ ಬಂದಾಗ ಅವನನ್ನು ನೋಡಿದನು. ಅವನ ಸೌಂದರ್ಯವನ್ನು ನೋಡಿ ಸಂತೋಷಗೊಂಡು ವರ್ಣ ಮತ್ತು ಗೋತ್ರಗಳ ದೃಷ್ಟಿಯಿಂದ ತನಗೆ ಏನೂ ವಿರೋಧವಿಲ್ಲದಿದ್ದರೆ ಅವನಿಗೆ ಮಗಳನ್ನು ಕೊಟ್ಟು ವಿವಾಹವನ್ನು ಮಾಡಬೇಕೆಂದುಚ್ಛಿಸಿ ಅವನನ್ನು ಎಬ್ಬಿಸಿ ಅವನ ವಂಶಾದಿಗಳ ವಿಷಯವನ್ನು ಪ್ರಶ್ನಿಸಿದನು. ಆಗ ಕಕ್ಷೀವಂತನು ತಾನು ಅಂಗೀರಸನ ವಂಶದವನೆಂದೂ ಔಚಥ್ಯ ಪುತ್ರನಾದ ದೀರ್ಘತಮಸ್ಸಿನ ಮಗನೆಂದೂ ಹೇಳಿದೊಡನೆಯೇ **ಸ್ವನಯನನು** ಅವನಿಗೆ ಅಲಂಕೃತರಾದ ಹತ್ತುಜನ ಕನ್ಯೆಯರನ್ನು ದಾನಮಾಡಿದನು ಜೊತೆಯಲ್ಲಿಯೇ ಅಶ್ವಗಳನ್ನೂ, ರಥಗಳನ್ನೂ, ಧನವನ್ನೂ, ಆಜಾದಿಸಂಪತ್ತುಗಳನ್ನೂ ಪ್ರಭೂತವಾಗಿ ದಾನಮಾಡಿದನು. ಈ ವಿಷಯವು

ಅಮುಂದಾನ್ನೋಮಾನ್ಪ್ರ ಭರೇ ಮನೀಷಾ ಸಿಂಧಾವಧಿ ಕ್ಷಿಯತೋ ಭಾವ್ಯಸ್ಯ ।
ಯೋ ಮೇ ಸಹಸ್ರಮಮಿನಾತ ಸವಾನತೂರ್ತೋ ರಾಜಾ ಶ್ರವ ಇಚ್ಛಮಾನಃ ॥

ಶತಂ ರಾಜ್ಞೋ ನಾಧಮಾನಸ್ಯ ನಿಷ್ಕಾಞ್ಛತಮಶ್ವಾನ್ಪ್ರಯತಾನ್ತ್ಸದ್ಯ ಆದಂ ।
ಶತಂ ಕಕ್ಷೀವಾಁ ಅಸುರಸ್ಯ ಗೋನಾಂ ದಿವಿ ಶ್ರವೋ೭ಜರಸಾ ತತಾನ ॥

(ಋ ಸಂ ೧-೧೨೬-೧ ಮತ್ತು ೨)

ಇತ್ಯಾದಿ ಋಕ್ಕುಗಳಲ್ಲಿ ಹೇಳಲ್ಪಟ್ಟಿದೆ. ಋಕ್ಸಂಹಿತೆಯಲ್ಲಿಯೂ ಬ್ರಾಹ್ಮಣಾದಿಗಳಲ್ಲಿಯೂ ಸಹ ಇವನು ಪ್ರಾಜ್ಞನೂ, ಪೂಜ್ಯನೂ ಆದ ಋಷಿಯೆಂದು ಇವನನ್ನು ಪ್ರಶಂಸಿಸಿದೆ

ಅಹಂ ಮನುರಭವಂ ಸೂರ್ಯಶ್ಚಾಹಂ ಕಕ್ಷೀವಾಁ ಋಷಿರಸ್ಮಿ ವಿಪ್ರಃ ।

(ಋ ಸಂ ೪-೨೬-೧)

ಅಯಂ ಕಕ್ಷೀವತೋ ಮಹೋ ವಿ ವೋ ಮದೇ ಮತಿಂ ವಿಪ್ರಸ್ಯ ವರ್ಧಯದ್ವಿವಕ್ಷಸೇ ॥

(ಋ ಸಂ. ೧೦-೨೫-೧೦)

ಇತ್ಯಾದಿ ಋಕ್ಕುಗಳಲ್ಲಿಯೂ ಮತ್ತು

ಏತಾಭಿರ್ಹಾಶ್ವಿನೋಃ ಕಕ್ಷೀವಾನ್ಪ್ರಿಯಂ ಧಾನೋಪಾಗಚ್ಛತ್ಸ ಪರಮಂ ಲೋಕಮಜಯತ್ ।

(ಐ. ಬ್ರಾ ೧-೨೧)

(ಋ ಸಂ ೧-೧೨೦-೧ ರಿಂದ ೯ ರವರೆಗೆ ಋಕ್ಕುಗಳನ್ನು ಪಠಿಸಿಕೊಂಡು) ಕಕ್ಷೀವಂತನು ಅಶ್ವನೀದೇವತೆಗಳ ನಿವಾಸಕ್ಕೆ ಹೋಗಿ ಸೇರಿ ಅವನಿಂದ ಅನುಗ್ರಹೀತನಾಗಿ ಇನ್ನೂ ಉತ್ತಮವಾದ ಲೋಕವನ್ನು ಸೇರಿದನು ಎಂದು ಐತರೇಯ ಬ್ರಾಹ್ಮಣದಲ್ಲಿಯೂ,

ಕಕ್ಷೀವಂತಂ ಯ ಔಶಿಜಃ । ಯೋ ದೇವಾನ್ಯೋ೭ವಿಾವಹಾ ।
ವಸುವಿತ್ಪುಷ್ಟಿವರ್ಧನಃ । ಸ ನಃ ಸಿಷಕ್ತು ಯಸ್ತುರಃ ॥

(ಶ ಬ್ರಾ ೨-೩-೪-೩೫)

ಪುಷ್ಟಿವಂತನೂ, ಶತ್ರುನಾಶಕನೂ, ಧನದಾತನೂ, ಸಂಪದ್ವರ್ಧಕನೂ **ಉಶಿಜೆಯ** ಪುತ್ರನೂ ಆದ **ಕಕ್ಷೀವಂತನು** ನಮ್ಮೊಂದಿಗಿರಲಿ ಎಂದು ಶತಪಥಬ್ರಾಹ್ಮಣವಾಕ್ಯಗಳಲ್ಲಿಯೂ ಸಹ **ಕಕ್ಷೀವಂತನು** ಶ್ರೇಷ್ಠವಾದ ವ್ಯಕ್ತಿಯೆಂದು ಸ್ತುತಿಸಿದೆ.

ಯಾಭಿಸ್ತಿಮಂತುರಭವದ್ವಿಚಕ್ಷಣಸ್ತಾಭಿರೂಷು ಊತಿಭಿರಶ್ವಿನಾ ಗತಂ ।

(ಋ ಸಂ. ೧-೧೧೭-೩)

ಎಂಬ ಋಕ್ಕಿನಲ್ಲಿ **ಕಕ್ಷೀವಂತನು ಪಾಕಯಜ್ಞ, ಹವಿರ್ಯಜ್ಞ** ಮತ್ತು **ಸೋಮಯಜ್ಞ**ಗಳ ವಿಷಯದಲ್ಲಿ ಪೂರ್ಣವಾದ ಜ್ಞಾನವನ್ನು ಪಡೆದಿದ್ದನೆಂದು ಹೇಳಿದೆ ಇವನು ಮೊದಲು ಅತ್ಯಂತ ಮೂಢನಾಗಿದ್ದುದರಿಂದ ಹೇಗಾದರೂ ಪ್ರಯತ್ನಿಸಿ ಭೂತಭವಿಷ್ಯದ್ವರ್ತಮಾನ ಕಾಲಗಳ ವ್ಯವಹಾರಗಳ ವಿಷಯಗಳಲ್ಲೆಲ್ಲಾ ಅಪ್ರತಿಹತವಾದ ಜ್ಞಾನವನ್ನು ಸಂಪಾದಿಸಬೇಕೆಂಬ ಉತ್ಕಟವಾದ ಇಚ್ಛೆಯುಂಟಾಗಿ **ಅಶ್ವಿನೀದೇವತೆ**ಗಳನ್ನುದ್ದೇಶಿಸಿ ಯಜ್ಞಮಾಡಿದ ನಂತರ ಅವರು ಸಂತುಷ್ಟರಾಗಿ ಇವನಿಗೆ ತ್ರಿಕಾಲವಿಷಯಕವಾದುದೂ, ಸರ್ವಾರ್ಥವಿಷಯಕವಾದುದೂ ಆದ ಜ್ಞಾನವನ್ನು ಅನುಗ್ರಹಿಸಿದರು ಎಂಬ ಕಥೆಯಿದೆ.

ಯುವಂ ನರಾ ಸ್ತುವತೇ ಪಜ್ರಿಯಾಯ ಕಕ್ಷೀವತೇ ಽರದತಂ ಪುರಂಧಿಂ ।

(ಋ. ಸಂ. ೧-೧೧೬-೬)

ಎಂಬಲ್ಲಿ **ಕಕ್ಷಿವಂತನೇ** ಈ ಕಥೆಯನ್ನು ಸೂಚಿಸಿದ್ದಾನೆ **ತ್ರಿಮಂತುಃ ವಿಚಿಕ್ಷಣಃ** ಎಂಬ ವಿಶೇಷಣಗಳಿಂದ **ಕಕ್ಷೀವಂತನು** ಸರ್ವಾರ್ಥಗಳನ್ನು ತಿಳಿದವನು, ಪ್ರಾಜ್ಞನು ಎಂದು ವಿದಿತವಾಗುತ್ತದೆ.

ಕುತ್ಸಂ—ಇಲ್ಲಿ **ಕುತ್ಸ** ಶಬ್ದಕ್ಕೆ ಎರಡು ವಿಧವಾದ ಅರ್ಥವನ್ನು ಹೇಳಬಹುದೆಂದು ಸಾಯಣರ ವಿವರಣೆಯು ತಿಳಿಸುತ್ತದೆ. ಮೊದಲನೆಯದಾಗಿ, **ಕುತ್ಸಂ-ಕರ್ತನಸಾಧನಂ** ಕರ್ತೃಸಿವ ಸಾಧನವಾದ ಎಂದು ವಜ್ರಾಯುಧಕ್ಕೆ ವಿಶೇಷಣವಾಗಿಯೂ ಎರಡನೆಯದಾಗಿ, **ಕುತ್ಸಂ ಕುತ್ಸನಾಮಾನಂ ಋಷಿಂ ।** ಕುತ್ಸನೆಂಬ ಋಷಿಯನ್ನು ಎಂದೂ ವಿವರಿಸಿದ್ದಾರೆ. ಋಷಿಯೆಂದರ್ಥಮಾಡಿದರೆ ಶುಷ್ಣನೆಂಬ ಅಸುರನನ್ನು ಕೊಂದು ಕುತ್ಸನಿಗೆ ಸಹಾಯಮಾಡಿದನೆಂದು ಇಂದ್ರನ ಪ್ರಶಂಸೆಯಾಗುತ್ತದೆ.

ಆರ್ಜುನೇಯಂ ಕುತ್ಸನಿಗೂ, ಇಂದ್ರನಿಗೂ ಇರತಕ್ಕ ಸಂಬಂಧವು ಅತ್ಯಂತ ನಿಕಟವಾದುದೆಂದು ಋಕ್ಸಂಹಿತೆಯಲ್ಲಿರುವ ವರ್ಣನೆಗಳಿಂದ ತಿಳಿಯುತ್ತದೆ. ಕುತ್ಸನಿಗೆ ಆರ್ಜನೇಯ ಎಂಬ ವಿಶೇಷಣವು ಅನೇಕ ಕಡೆಗಳಲ್ಲಿರುತ್ತದೆ. **ಆರ್ಜುನೇಯ** ಎಂಬ ಪದಕ್ಕೆ **ಆರ್ಜುನೀ** ಎಂಬ ಹೆಂಗಸಿನ ಮಗನೆಂದಾಗಬಹುದು. ಅಥವಾ **ಆರ್ಜುನ ಇತೀಂದ್ರಸ್ಯ ನಾಮ । ತಸ್ಯ ಪುತ್ರಃ**, ಇಂದ್ರನಿಗೆ ಆರ್ಜುನನೆಂದು ಹೆಸರು ಕುತ್ಸನು ಇವನ ಪುತ್ರನಾದುದರಿಂದ ಆರ್ಜುನೇಯನೆಂಬ ವಿಶೇಷಣವು ಸಹಜವಾಗಿದೆ ಎಂದು ಇನ್ನೊಂದು ವಿಧವಾಗಿ ಅರ್ಥವನ್ನು ಹೇಳಬಹುದು. ಇಂದ್ರನಿಗೆ **ಆರ್ಜುನ** ಎಂಬ ಹೆಸರುಂಟು ಎಂದು ಸಮರ್ಥಿಸಲು ಸಾಯಣರು ಕೆಲವೆಡೆಗಳಲ್ಲಿ,

ಏತದ್ವಾ ಇಂದ್ರಸ್ಯ ಗುಹ್ಯಂ ನಾಮ ಯದರ್ಜುನಃ ।

ಎಂಬ ವಾಜಸನೇಯ ಸಂಹಿತಾಮಂತ್ರವನ್ನು ದಾಹರಿಸಿದ್ದಾರೆ. ಆದರೆ,

ಅಹಂ ಕುತ್ಸಮಾರ್ಜುನೇಯಂ ನ್ಯೃಂಜೇಽಹಂ ಕವಿರುಶನಾ ಪಶ್ಯತಾ ಮಾ ।

(ಋ ಸಂ ೪-೨೬-೧)

ದಾಸಂ ಯಚ್ಛುಷ್ಣಂ ಕುಯವಂ ನ್ಯಸ್ಮಾ ಅರಂಧಯ ಆರ್ಜುನೇಯಾಯ ಶಿಕ್ಷನ್ ।

(ಋ. ಸಂ. ೭-೧೯-೨)

ವಹತ್ಕುತ್ಸಮಾರ್ಜುನೇಯಂ ಶತಕ್ರತುಃ ತ್ಸರದ್ಗಂಧರ್ವಮಸ್ತೃತಂ ।

ಎಂಬ ಋಕ್ಕುಗಳಲ್ಲಿ ಇರತಕ್ಕ **ಆರ್ಜುನೇಯ** ಪದಗಳೆಲ್ಲಾ ಸಾಯಣರೂ ಸಹ **ಆರ್ಜುನ್ಯಾಃ ಪುತ್ರಂ ಕುತ್ಸಂ । ಆರ್ಜುನೀ** ಎಂಬ ಹೆಂಗಸಿನ ಪುತ್ರನಾದ ಕುತ್ಸನೆಂದೇ ಅರ್ಥಮಾಡಿದ್ದಾರೆ. **ಆರ್ಜುನ, ಆರ್ಜುನೀ** ಎಂಬ ಪದಗಳೂ ಇಂದ್ರಸಂಬಂಧವಾದವು ಎಂದು ಶ್ರುತ್ಯಂತರಗಳಲ್ಲಿ ಹೇಳಿರುವುದರಿಂದ ಮೇಲಿನ ಎರಡು ವಿಧವಾದ ವಿವರಣೆಗಳೂ ಒಂದೇ ಅರ್ಥವನ್ನು ಕೊಡುವುವು ಎಂದು ಹೇಳಬಹುದು. ಉದಾಹರಣೆಗೆ—

ಫಲ್ಗುನೀಷ್ವಗ್ನೀ ಆದಧೀತ । ಏತಾ ವಾ ಇಂದ್ರನಕ್ಷತ್ರಂ ಯತ್ಫಲ್ಗುನ್ಯೋಽಸ್ಯೈಷ ಪ್ರತಿನಾಮ್ನ್ಯೋಽರ್ಜುನೋ ಹ ವೈ ನಾಮೇಂದ್ರೋ ಯದಸ್ಯ ಗುಹ್ಯಂ ನಾಮಾರ್ಜುನ್ಯೋ ವೈ ನಾಮೈತಾಸ್ತಾ ಏತತ್ಫಲ್ಗುನೋಽಚಕ್ಷತೇ ಫಲ್ಗುನ್ಯ ಇತಿ ಕೋ ಹೈತಸ್ಯಾರ್ಹತಿ ಗುಹ್ಯಂ ನಾಮ..... ।

(ಶ. ಬ್ರಾ ೨-೧-೨-೧೧)

ಇಂದ್ರೋ ಭವತಿ ಯಚ್ಛ್ಯ ಕ್ಷತ್ರಿಯೋ ಯದು ಚ ಯಜಮಾನಸ್ತಸ್ಮಾದಾಹಾರಿಷ್ಟೋರ್ಜುನ ಇತಿ । (ಶ. ಬ್ರಾ. ೫-೪-೩-೭)

ಫಲ್ಗುನಿಗಳು ಐಂದ್ರನಕ್ಷತ್ರಗಳು ಹೆಸರಿನಲ್ಲಿಯೂ ಹೊಂದಿಕೆಯಿದೆ ಇಂದ್ರನಿಗೂ ಅರ್ಜುನನೆಂಬ ಹೆಸರು. ಫಲ್ಗುನಿಗಳಿಗೂ ಅರ್ಜುನಿಗಳೆಂಬ ಹೆಸರು ಎಂಬುದಾಗಿ ಶತಪಥಬ್ರಾಹ್ಮಣದಲ್ಲಿಯೂ ಇತರ ಕಡೆಗಳಲ್ಲಿಯೂ ಹೇಳಿರುವುದರಿಂದ ಕುತ್ಸನನ್ನು ಇಂದ್ರಪುತ್ರ ಅರ್ಜುನೀಪುತ್ರ ಎಂದು ಎರಡು ವಿಧವಾಗಿಯೂ ಕರೆಯಬಹುದೆಂದು ಹೇಳಬಹುದು. ಋಕ್ಸಂಹಿತೆಯಲ್ಲಿ ಅನೇಕ ಕಡೆಗಳಲ್ಲಿ **ಕುತ್ಸನು** ಇಂದ್ರನ ಸಹಾಯದಿಂದಲೇ ತನ್ನ ಶತ್ರುಗಳನ್ನು ಜಯಿಸುತ್ತಾನೆಂದು ಇಂದ್ರಕುತ್ಸರ ಸಂಬಂಧವನ್ನು ತೋರಿಸಿದೆ

ತ್ವಂ ಶುಷ್ಣಂ ವೃಜನೇ ಪೃಕ್ಷ ಆಣಾ ಯೂನೇ ಕುತ್ಸಾಯ ದ್ಯುಮತೇ ಸಚಾಹನ್ ।
(ಋ. ೧-೬೩-೩)

ಕುತ್ಸಾಯ ಯತ್ರ ಪುರುಹೂತ ವನ್ವನ್ಶುಷ್ಣಮನಂತೈಃ ಪರಿಯಾಸಿ ವಧ್ರೈಃ ।
(ಋ ಸಂ. ೧-೧೭೨-೯)

ಎಂಬ ಋಕ್ಕುಗಳಲ್ಲಿಯೂ ಹೀಗೆಯೇ ಇತರ ಅನೇಕ ಕಡೆಗಳಲ್ಲಿಯೂ ಇಂದ್ರನು ಕುತ್ಸನಿಗೆ ಸಹಾಯಮಾಡಲು ಶುಷ್ಣನನ್ನು ಕೊಂದನು ಎಂದು ವರ್ಣನೆಯಿದೆ, ಮತ್ತು,

ಅಹಂ ಪಿತೇವ ವೇತಸೌರಭಿಷ್ಟಯೇ ತುಗ್ರಂ ಕುತ್ಸಾಯ ಸ್ಮದಿಭಂ ಚ ರಂಧಯಂ ।
(ಋ ಸಂ. ೧೦-೪೯-೪)

ಕುತ್ಸನಿಗಾಗಿ ನಾನು ವೇತಸು, ತುಗ್ರ, ಸ್ಮದಿಭ್ಭ ಇತ್ಯಾದಿ ಶತ್ರುಗಳನ್ನೆಲ್ಲಾ ಸೋಲಿಸಿ, ತನ್ನ ಮಿತ್ರನಿಗೆ ಸಹಾಯಮಾಡಿದೆನು ಎಂದು ಇಂದ್ರನೇ ಹೇಳಿಕೊಂಡಿದ್ದಾನೆ ಆದರೆ,

ತ್ವಮಸ್ಯೈ ಕುತ್ಸಮತಿಥಿಗ್ವಮಾಯುಂ ಮಹೇ ರಾಜ್ಞೇ ಯೂನೇ ಅರಂಧನಾಯಃ ।
(ಋ ಸಂ ೧-೫೩-೧೦)

ಯ ಆಯುಂ ಕುತ್ಸಮತಿಥಿಗ್ವಮರ್ದಯೋ ವಾವೃಧಾನೋ ದಿವೇದಿವೇ ।
(ಋ ಸಂ. ೮-೫೩-೨)

ಇತ್ಯಾದಿ ಋಕ್ಕುಗಳಲ್ಲಿ ಇಂದ್ರನು ಕುತ್ಸಾದಿಗಳನ್ನು ಸೋಲಿಸಿದುದಾಗಿಯೂ ವರ್ಣಿತವಾಗಿದೆ ಇವನ ವಿಷಯದಲ್ಲಿ Keith ಎಂಬ ಪಂಡಿತನು ತನ್ನ Religion and Philosophy of the Vedas ಎಂಬ ಗ್ರಂಥದಲ್ಲಿ ಈ ರೀತಿ ಹೇಳಿದ್ದಾನೆ—

Sushan's chief rival is Kutsa, who appears as battling against him, and as victor by the aid of Indra, who, for his sake tore from the Sun a wheel, prolonging the daylight and thus enabling, it may be assumed, Kutsa to turn the issue of the battle. The feat of Indra is several times mentioned and the fact that Kutsa is a real hero is suggested' though not proved, by the fact that elsewhere he appears in hostile relation to Indra, just as Athithigva, who is normally the protege of Indra, in one or two places apyears

in the reverse relation. It is true that it is not to be expected that a god, or a hero of divine dimensions, would be thus placed in opposition to the God, though, as the God is the uncertain Indra, the argument is by no means conclusive, Kutsa, in the case of his real personality must be a king, and this is not inconsistent with his being called a seer royal seers are not unknown :

(Harwad Oriental Series Vol 31. p 130),

॥ ಸಂಹಿತಾಪಾಠಃ ॥

ಅಹಂ ಭೂಮಿಮದದಾಮಾರ್ಯಾಯಾಹಂ ವೃಷ್ಟಿಂ ದಾಶುಷೇ ಮರ್ತ್ಯಾಯ।
ಅಹಮಪೋ ಅನಯಂ ವಾವಶಾನಾ ಮಮ ದೇವಾಸೋ ಅನು ಕೇತಮಾಯನ್ ॥ ೨ ॥

॥ ಪದಪಾಠಃ ॥

ಅಹಂ । ಭೂಮಿಂ । ಅದದಾಂ । ಆರ್ಯಾಯ । ಅಹಂ । ವೃಷ್ಟಿಂ । ದಾಶುಷೇ । ಮರ್ತ್ಯಾಯ ।
ಅಹಂ । ಅಪಃ । ಅನಯಂ । ವಾವಶಾನಾಃ । ಮಮ । ದೇವಾಸಃ । ಅನು । ಕೇತಂ । ಆಯನ್ ॥ ೨ ॥

॥ ಸಾಯಣಭಾಷ್ಯಂ ॥

ಅಹಂ ವಾಮದೇವ ಇಂದ್ರೋ ವಾ ಆರ್ಯಾಯ ಮನವೇ ಭೂಮಿಂ ಪೃಥ್ವೀಮದದಾಂ । ದತ್ತವಾನಸ್ಮಿ । ದಾಶುಷೇ ಹವಿರ್ದತ್ತವತೇ ಮರ್ತ್ಯಾಯ ಮನುಷ್ಯಾಯ ಯಜಮಾನಾಯ ವೃಷ್ಟಿಂ ಸಸ್ಯಾದ್ಯಭಿವೃದ್ಧ್ಯರ್ಥಂ ವೃಷ್ಟಿಲಕ್ಷಣಮುದಕಮಹಮೇವಾದದಾಂ । ಕಿಂಚ ಅಹಂ ವಾವಶಾನಾಃ ಶಬ್ದಾಯಮಾನಾ ಅಪ ಉದಕಾನ್ಯನಯಂ । ಸರ್ವಮಪಿ ಪ್ರದೇಶಮಗಮಯಂ । ದೇವಾಸೋ ವಹ್ನ್ಯಾದಯೋ ದೇವಾ ಮಮ ಕೇತಂ ಮದೀಯಂ ಸಂಕಲ್ಪಮನ್ವಾಯನ್ । ಅನುಯಂತಿ ॥

॥ ಪ್ರತಿಪದಾರ್ಥ ॥

ಅಹಂ—ವಾಮದೇವನಾದ ನಾನು । ಆರ್ಯಾಯ—ಪೂಜ್ಯನಾದ ಮನುವಿಗೆ । ಭೂಮಿಂ—ಪೃಥ್ವಿಯನ್ನು । ಅದದಾಂ—ಕೊಟ್ಟಿದ್ದೇನೆ । ದಾಶುಷೇ—ಹವಿಸ್ಸನ್ನರ್ಪಿಸುವವನೂ । ಮರ್ತ್ಯಾಯ—ಮಾನವನೂ ಆದ ಯಜಮಾನನಿಗಾಗಿ । ವೃಷ್ಟಿಂ—ಮಳೆಯನ್ನು । ಅಹಂ—ನಾನೇ ಸುರಿಸಿದ್ದೇನೆ । ಅಹಂ—ನಾನೇ । ವಾವಶಾನಾಃ—ಶಬ್ದಮಾಡತಕ್ಕ । ಅಪಃ—ಉದಕಗಳನ್ನು । ಅನಯಂ—ಸಕಲ ಪ್ರದೇಶಗಳಲ್ಲಿಯೂ ಹರಡಿಸಿದ್ದೇನೆ ।

ದೇವಾಸಃ ಅಗ್ನ್ಯಾದಿ ದೇವತೆಗಳೂ ಸಹ । **ಮಮ**—ನನ್ನ । **ಕೇತಂ**—ಆದೇಶವನ್ನೇ (ಸಂಕಲ್ಪವನ್ನೆ) । **ಅನು ಆಯನ್**—ಪಾಲಿಸುತ್ತಾರೆ (ನೆರವೇರಿಸುತ್ತಾರೆ)

॥ ಭಾವಾರ್ಥ ॥

ವಾಮದೇವಾಖ್ಯನಾದ ನಾನು ಪೂಜ್ಯನಾದ ಮನುವಿಗೆ ಪೃಥ್ವಿಯನ್ನು ಕೊಟ್ಟಿದ್ದೇನೆ ಹವಿಸ್ಸನ್ನರ್ಪಿಸುವವನೂ ಮಾನವನೂ ಆದ ಯಜಮಾನನಿಗಾಗಿ ನ ನೇ ಮಳೆಯನ್ನು ಸುರಿಸಿದ್ದೇನೆ ಶಬ್ದಮಾಡತಕ್ಕ ಉದಕಗಳನ್ನೂ ಸಹ ಸಕಲ ಪ್ರದೇಶಗಳಲ್ಲಿಯೂ ಹರಿಯುವಂತೆ ಹರಡಿರುವವನೂ ನಾನೇ ಅಗ್ನ್ಯಾದಿ ಸಕಲ ದೇವತೆಗಳೂ ನನ್ನ ಸಂಕಲ್ಪವನ್ನೇ ಪಾಲಿಸುತ್ತಾರೆ

English Translation

I gave the earth to the venerable (Manu) I have bestowed rain upon the mortal who presents (oblations), I have let forth the sounding waters the gods obey my will



॥ ಸಂಹಿತಾಪಾಠಃ ॥

ಅಹಂ ಪುರೋ ಮಂದಸಾನೋ ವ್ಯೈರಂ ನವ ಸಾಕಂ ನವತೀಃ ಶಂಬರಸ್ಯ ।
ಶತತಮಂ ವೇಶ್ಯಂ ಸರ್ವತಾತಾ ದಿವೋದಾಸಮತಿಥಿಗ್ವಂ ಯದಾವಂ ॥ ೩ ॥

॥ ಪದಪಾಠಃ ॥

ಅಹಂ । ಪುರಃ । ಮಂದಸಾನಃ । ವಿ । ಐರಂ । ನವ । ಸಾಕಂ । ನವತೀಃ । ಶಂಬರಸ್ಯ ।
ಶತ್ಯತಮಂ । ವೇಶ್ಯಂ । ಸರ್ವಽತಾತಾ । ದಿವಃಽದಾಸಂ । ಅತಿಥಿಽಗ್ವಂ । ಯತ್ । ಆವಂ ॥ ೩ ॥

॥ ಸಾಯಣಭಾಷ್ಯಂ ॥

ಅಹಂ ವಾಮದೇವ ಇಂದ್ರೋ ವಾ ಮಂದಸಾನಃ ಸೋಮೇನ ಮಾದ್ಯನ್ನವ ನವಸಂಖ್ಯಾಕಾ ನವತೀರ್ನವತಿಸಂಖ್ಯಾಕಾಶ್ಚ ಶಂಬರಸ್ಯೈತನ್ನಾಮಕಸ್ಯಾಸುರಸ್ಯ ಸಂಬಂಧಿನಿ ಪುರಃ ಪುರಾಣಿ ಸಾಕಂ ಯುಗಪದೇವ ವ್ಯೈರಂ । ಅಧ್ವಂಸಯಂ । ಶತತಮಂ ಶತಸಂಖ್ಯಾಪೂರಣಂ ಪುರಂ ವೇಶ್ಯಂ ದಿವೋದಾಸನಾಮ್ನೇ ಪ್ರವೇಶಾರ್ಹಮಕರವಂ । ಸರ್ವತಾತಾ ಸರ್ವತಾತೌ ಯಜ್ಞೇಽತಿಥಿಗ್ವಮತಿಥೀನಾಮಭಿಗಂತಾರಂ ದಿವೋದಾಸಂ ದಿವೋದಾಸನಾಮಕಂ ರಾಜರ್ಷಿಂ ಯದಾವಂ ಅಪಾಲಯಂ । ತದಾ ಪುರೋ ವ್ಯೈರಮಿತಿ ಪೂರ್ವೇಣ ಸಂಬಂಧಃ ॥

॥ ಪ್ರತಿಪದಾರ್ಥ ॥

ಸರ್ವತಾತಾ—ಸರ್ವರಕ್ಷಕವಾದ ಯಜ್ಞದಲ್ಲಿ । **ಅತಿಥಿಗ್ವಂ**—ಅತಿಥಿಗಳನ್ನು ಎದುರುಗೊಳ್ಳುವ । **ದಿವೋದಾಸಂ**—ದಿವೋದಾಸನೆಂಬ ರಾಜರ್ಷಿಯನ್ನು । **ಯತ್**—ಯಾವಾಗ । **ಅವಂ**—ರಕ್ಷಿಸಿದನೋ (ಆಗ) । **ಅಹಂ**—ವಾಮದೇವನೆಂದು ಪ್ರಸಿದ್ಧನಾದ ನಾನು (ಅಥವಾ ಇಂದ್ರಾತ್ಮಕನಾದ ನಾನು) । **ಮಂದಸಾನಃ**—ಸೋಮಪಾನದಿಂದ ಹರ್ಷಿತನಾಗಿ । **ಶಂಬರಸ್ಯ**—ಶಂಬರಾಸುರನಿಗೆ ಸೇರಿದವೂ । **ನವ ನವತೀಃ**—ತೊಂಭತ್ತೊಂಭತ್ತು ಸಂಖ್ಯೆಯುಳ್ಳವೂ ಆದ । **ಪುರಃ**—ಪಟ್ಟಣಗಳನ್ನು । **ಸಾಕಂ**—ಒಟ್ಟಿಗೆ । **ವ್ಯೈರಂ**—ನಾಶ ಮಾಡಿದೆನು । **ಶತತಮಂ**—ನೂರನೆಯ ಪಟ್ಟಣವನ್ನು । **ವೇಶ್ಯಂ**—ದಿವೋದಾಸನಿಗೆ ಪ್ರವೇಶಯೋಗ್ಯ ವಾಗುವಂತೆ ಮಾಡಿದೆನು.

॥ ಭಾವಾರ್ಥ ॥

ವಾಮದೇವನೆಂದು ಪ್ರಸಿದ್ಧನಾದ (ಇಂದ್ರಾತ್ಮಕನಾದ) ನಾನು ಸರ್ವರಕ್ಷಕವಾದ ಯಜ್ಞದಲ್ಲಿ ಅತಿಥಿಗಳನ್ನು ಸತ್ಕರಿಸುವ ದಿವೋದಾಸನೆಂಬ ರಾಜರ್ಷಿಯನ್ನು ರಕ್ಷಿಸಿದಾಗ, ಸೋಮಪಾನದಿಂದ ಹರ್ಷಿತನಾಗಿ ಶಂಬರಾಸುರನಿಗೆ ಸೇರಿದವೂ ತೊಂಭತ್ತೊಂಭತ್ತು ಸಂಖ್ಯೆಯುಳ್ಳವೂ ಆದ ಪಟ್ಟಣಗಳನ್ನು ಒಟ್ಟಿಗೆ ನಾಶಮಾಡಿದನು ಮತ್ತು ನೂರನೆಯ ಪಟ್ಟಣವನ್ನು ದಿವೋದಾಸನಿಗೆ ವಾಸಯೋಗ್ಯವಾಗುವಂತೆ ಮಾಡಿದೆನು.

English Translation.

Exhilarated (by the soma beverage) I have destroyed the ninety and nine citiies of Shambara, the hundredth I gave to be occupied by Divodasa when I protected him, Atithigva, at his sacrifice.

॥ ವಿಶೇಷವಿಷಯಗಳು ॥

ಶಂಬರಂ (ಅಹನ್)—ಇಂದ್ರ ಶತ್ರುವಾದ ಶಂಬರನ ವಿಷಯವನ್ನು ಋಕ್ಸಂಹಿತೆಯ ೧-೫೧-೬, ೧-೫೪-೪, ೧-೫೫-೪, ೧-೫೬-೪, ೧-೧೦೩-೮, ೧-೧೮೨-೧೪, ೧-೧೮೩-೬ ಇತ್ಯಾದಿ ಋಕ್ಕುಗಳಲ್ಲಿ ಹೇಳಿದೆ ಸಾಧಾರಣವಾಗಿ ಶುಷ್ಣ, ಪಿಪ್ರು, ವರ್ಚಿ ಎಂಬ ಅಸುರರ ಜೊತೆಯಲ್ಲಿ ಇವನ ಹೆಸರು ಬರುವುದು ವಾಡಿಕೆ

ಅವ ಗಿರೇರ್ದಾಸಂ ಶಂಬರಂ ಹನ್ನಾವೋ ದಿವೋದಾಸಂ ಚಿತ್ರಾಭಿರೂತೀ ।

(ಋ. ಸಂ. ೬-೨೬-೫)

ಎಂಬ ಋಕ್ಕಿನಲ್ಲಿ ಇವನನ್ನು ದಾಸನೆಂದು ಕರೆದಿದೆ.

ದಿವೋದಾಸಾಯ ನವತಿಂ ಚ ನವೇಂದ್ರಃ ಪುರೋ ವ್ಯೈರಚ್ಛಂಬರಸ್ಯ ।

(ಋ ಸಂ ೨-೧೯-೬)

ಅಧ್ವರ್ಯವೋ ಯಃ ಶತಂ ಶಂಬರಸ್ಯ ಪುರೋ ಬಿಭೇದಾಶ್ಮನೇವ ಪೂರ್ವೀಃ ।

(ಋ. ಸಂ ೨-೧೪-೬)

ಇತ್ಯಾದಿ ಋಕ್ಕುಗಳಲ್ಲಿ ದಿವೋದಾಸನೆಂಬುವನು ಇಂದ್ರನ ಆಪ್ತಮಿತ್ರನೂ, ಶಂಬರನ ಶಾಶ್ವತವಾದ ಶತ್ರುವೂ ಆಗಿದ್ದು, ಆ ದಿವೋದಾಸನೆಂಬ ರಾಜನಿಗಾಗಿ ಇಂದ್ರನು ಶಂಬರನ ತೊಂಭತ್ತೊಂಭತ್ತು, ನೂರು (ಎಂದರೆ ಅಸಂಖ್ಯಾಕವಾದ) ಕೋಟೆಗಳನ್ನೆಲ್ಲಾ ಉರುಳಿಸಿ ಅವನ ಸ್ವತ್ತನ್ನು ಸ್ವಾಧೀನಪಡಿಸಿಕೊಂಡನು ಎಂಬ ವರ್ಣನೆಯಿದೆ. ಹೀಗೆಯೇ,

ಅತಿಥಿಗ್ವಾಯ ಶಂಬರಂ ಗಿರೇರುಗ್ರೋ ಅವಾಭರತ್ ।
(ಋ ಸಂ ೧-೧೩೦-೭)
ಉತ ದಾಸಂ ಕೌಲಿತರಂ ಬೃಹತಃ ಪರ್ವತಾದಧಿ ।
ಅವಾಹನ್ನಿಂದ್ರ ಶಂಬರಂ ॥
(ಋ ಸ ೪-೩೦-೧೪)
ಅವ ಗಿರೇರ್ದಾಸಂ ಶಂಬರಂ ಹನ್ಪೂರ್ವೇ ದಿವೋದಾಸಂ ಚಿತ್ಯಾಭರೂತೀ ॥
(ಋ. ಸಂ. ೬-೨೬-೫)

ಇತ್ಯಾದಿ ಋಕ್ಕುಗಳಿಂದ ಶಂಬರನು ಬೆಟ್ಟಗುಡ್ಡಗಳಲ್ಲಿ ಅವಿತುಕೊಂಡು ಅತಿಥಿಗ್ವನಿಗೂ ದಿವೋದಾಸನಿಗೂ ಅತ್ಯಂತವಾಗಿ ಹಿಂಸೆಯನ್ನು ಕೊಡುತ್ತಿದ್ದುದರಿಂದ ಅವನನ್ನು ಇಂದ್ರನು ನಾಶಮಾಡಿ ಇವರಿಬ್ಬರಿಗೂ ತನ್ನ ರಕ್ಷಣೆಯನ್ನು ನೀಡಿದನು ಎಂದು ತಿಳಿಸಿದೆ ಹೀಗೆಯೇ ಇನ್ನೂ ಅನೇಕ ಕಡೆಗಳಲ್ಲಿ ಶಂಬರನ ವಧೆಯ ವಿಷಯವನ್ನು ತಿಳಿಸಿದೆ

॥ ಸಂಹಿತಾಪಾಠಃ ॥

ಪ್ರ ಸು ಷ ವಿಭ್ಯೋ ಮರುತ್ಭೋ ವಿರಸ್ತು ಪ್ರ ಶ್ಯೇನಃ ಶ್ಯೇನೇಭ್ಯ ಆಶುಪತ್ವಾ ।
ಅಚಕ್ರಯಾ ಯತ್ಸ್ವಧಯಾ ಸುಪರ್ಣೋ ಹವ್ಯಂ ಭರನ್ಮನವೇ ದೇವ-
ಜುಷ್ಟಂ ॥ ೪ ॥

॥ ಪದಪಾಠಃ ॥

ಪ್ರ । ಸು । ಸಃ । ವಿಭ್ಯಃ । ಮರುತಃ । ವಿಃ । ಅಸ್ತು । ಪ್ರ । ಶ್ಯೇನಃ । ಶ್ಯೇನೇಭ್ಯಃ । ಆಶುಪತ್ವಾ ।
ಅಚಕ್ರಯಾ । ಯತ್ । ಸ್ವಧಯಾ । ಸುಪರ್ಣಃ । ಹವ್ಯಂ । ಭರತ್ । ಮನವೇ । ದೇವಜುಷ್ಟಂ ॥೪॥

॥ ಸಾಯಣಭಾಷ್ಯಂ ॥

ಆಥೈತದಾದಿಭಿಃ ಶ್ಯೇನಃ ಸ್ತೂಯತೇ । ಹೇ ಮರುತೋ ವೇಗೇನ ಮರುತ್ಸದೃಶಾಃ ಪಕ್ಷಿಣಃ ಸ ಪ್ರಸಿದ್ಧಃ ಶ್ಯೇನಾಖ್ಯೋ ವಿಃ ಪಕ್ಷೀ ವಿಭ್ಯಃ ಪಕ್ಷಿಭ್ಯೋ ಯುಷ್ಮತ್ತಃ ಪ್ರ ಸು ಅಸ್ತು । ಬಲೇನ ಪ್ರಕೃಷ್ಟೋ ಭವತು । ಕಿಂಚ ಶ್ಯೇನೇಭ್ಯಃ ಶಂಸನೀಯೆಗಮನೇಭ್ಯಃ ಸ್ವಸಮಾನಜಾತಿಭ್ಯಃ ಪಕ್ಷಿಭ್ಯಃ ಸಕಾಶಾದಾಶುಪತ್ವಾಶುಪತನಃ ಶೀಘ್ರಗಾಮಿ ಶ್ಯೇನಃ ಪ್ರಕೃಷ್ಟೋ ಭವತು । ಸುಪರ್ಣಃ ಶೋಭನಪತನೋ ಯದ್ಯದಾ

ಶ್ಯೇನೋ೨ಚಕ್ರಯಾ ಚಕ್ರವರ್ತಿತಯಾ ಸ್ವಧಯಾ ರಥೇನ ದೇವಜುಷ್ಟಂ ದೇವೈಃ ಸೇವಿತಂ ಹವ್ಯಂ ಸೋಮಲಕ್ಷಣಂ ಹವಿರ್ಮನವೇ ಪ್ರಜಾಪತಯೇ ಭರತ್ ಅಹರತ್ ಮ್ಯುಲೋಕಸಕಾಶಾದಾಹೃತವಾನ್। ಅತ್ರ ಸ್ವಧಾಶಬ್ದೋ ರಥವಾಚ್ಯಚಕ್ರಯಾ ಸ್ವಧಯಾ ವರ್ತಮಾನಮಿತ್ಯಾದೌ। ಋಗ್ವೇ. ೧೦-೨೭-೧೯। ದರ್ಶನಾತ್ ॥

॥ ಪ್ರತಿಪದಾರ್ಥ ॥

ಮರುತಃ—ಎಲೈ ಮರುತ್ತುಗಳೇ। **ಯತ್**—ಯಾವ ಸ್ವಶಕ್ತಿಯಿಂದ। **ಸುಪರ್ಣಃ**—ಶ್ರೇಷ್ಠವಾದ ಪಕ್ಷಗಳುಳ್ಳ। **ಶ್ಯೇನಃ**—ಈ ಶ್ಯೇನಪಕ್ಷಿಯು। **ಅಚಕ್ರಯಾ**—ಚಕ್ರರಹಿತವಾದ। **ಸ್ವಧಯಾ**—ರಥದಿಂದ। **ದೇವಜುಷ್ಟಂ**—ದೇವತೆಗಳಿಂದ ಸೇವಿಸಲ್ಪಡುವ। **ಹವ್ಯಂ**—ಸೋಮರೂಪವಾದ ಅನ್ನವನ್ನು। **ಮನವೇ**—ಮನುರೂಪನಾದ ಪ್ರಜಾಪತಿಗೆ। **ಭರತ್**—ವಹಿಸಿಕೊಂಡು ಹೋಯಿತೋ (ಆದ್ದರಿಂದಲೇ)। **ಅಶುಪತ್ತ್ವಾ**—ಶೀಘ್ರವಾಗಿ ಸಂಚರಿಸತಕ್ಕ। **ಸಃ ವಿಃ**—ಅದೇ ಶ್ಯೇನಪಕ್ಷಿಯು। **ಶ್ಯೇನೇಭ್ಯಃ ವಿಭ್ಯಃ**—ಇತರ ಶ್ಯೇನಪಕ್ಷಿಗಳಿಗಿಂತಲೂ। **ಪ್ರ ಸು ಅಸ್ತು**—ಉತ್ಕೃಷ್ಟವಾದುದಾಗಿರಲಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಯಾವ ಸ್ವಶಕ್ತಿಯಿಂದ ಉತ್ತಮವಾದ ರೆಕ್ಕೆಗಳುಳ್ಳ ಈ ಶ್ಯೇನಪಕ್ಷಿಯು ಚಕ್ರರಹಿತವಾದ ರಥದಿಂದ ದೇವತೆಗಳ ಸೇವನಕ್ಕೆ ಯೋಗ್ಯವಾದ ಸೋಮರೂಪವಾದ ಅನ್ನವನ್ನು ಮನುರೂಪನಾದ ಪ್ರಜಾಪತಿಗೆ ವಹಿಸಿಕೊಂಡು ಹೋಯಿತೋ, ಆ ಕಾರಣದಿಂದಲೇ ಶೀಘ್ರವಾಗಿ ಸಂಚರಿಸತಕ್ಕ ಶ್ಯೇನ ಪಕ್ಷಿಯು ಇತರ ಶ್ಯೇನಪಕ್ಷಿಗಳಿಗಿಂತಲೂ ಶ್ರೇಷ್ಠವಾದುದಾಗಿರಲಿ.

English Translation.

May this bird, Maruts, be pre-eniment over (other) hawks, since with a wheelless car the swift-winged bore the Soma, accepted by the gods to Manu

॥ ವಿಶೇಷವಿಷಯಗಳು ॥

ಮನುಃ—ಋಗ್ವೇದದಲ್ಲಿ ಮನುವಿನ ಹೆಸರು ಅನೇಕಕಡೆ ಪರಿತವಾಗಿದ್ದರೂ ಹೆಚ್ಚು ವಿವರಣೆ ಎಲ್ಲಿಯೂ ದೊರಕುವುದಿಲ್ಲ. ಮನುವು ಮಾನವ ಕುಲಕ್ಕೆ ಯಜ್ಞಯಾಗಾದಿಗಳ ಅನುಷ್ಠಾನಕ್ರಮದಲ್ಲಿ ಮಾರ್ಗದರ್ಶಕನೆಂದು ತಿಳಿಯಬರುವುದು. ಇವನು ತನ್ನ ಆಸ್ತಿಯನ್ನು ತನ್ನ ಮಕ್ಕಳಿಗೆ ಹಂಚಿಕೊಡುವಾಗ ಇವನ ಕಿರಿಯ ಮಗನಾದ ನಾಭಾನೇದಿಷ್ಠನೆಂಬುವನು ,ಗುರುಕುಲದಲ್ಲಿ ಬ್ರಹ್ಮಚರ್ಯದಿಂದ ವಿದ್ಯಾಭ್ಯಾಸವನ್ನು ಮಾಡುತ್ತಿದ್ದುದರಿಂದ ಅವನಿಗೆ ಯಾವ ದಾಯಭಾಗವೂ ದೊರಕಲಿಲ್ಲವೆಂದೂ ಅವನು ವಿದ್ಯಾಭ್ಯಾಸ ಮುಗಿಸಿಕೊಂಡು ಬಂದು ತಂದೆಯನ್ನು ತನ್ನ ದಾಯಭಾಗಕ್ಕಾಗಿ ಪ್ರಶ್ನೆಮಾಡಲು ಇವನನ್ನು—ಅಂಗಿರಾಋಷಿಗಳು ಯಜ್ಞಮಾಡುವ ಸ್ಥಳಕ್ಕೆ ಹೋಗಿ ಅವರಿಗೆ ಕೆಲವು ಮಂತ್ರಗಳನ್ನು ಉಪದೇಶಮಾಡಿದರೆ ಅವರು ನಿನಗೆ ಯಥೇಚ್ಛವಾಗಿ ಧನವನ್ನು ಕೊಡುವರೆಂದು ಹೇಳಿ ಕಳುಹಿಸಿದನು ಈ ವೃತ್ತಾಂತವು ಐತರೇಯಬ್ರಾಹ್ಮಣದಲ್ಲಿಯೂ, ಯಜುರ್ವೇದತೈತ್ತಿರೀಯಸಂಹಿತೆಯಲ್ಲಿಯೂ

ವಿವರಿಸಿರುವುದು. ಮುಖ್ಯವಾಗಿ ಈ ಮನುವು ಮಾಡಿದ ಯಜ್ಞವು ಪ್ರಸಿದ್ಧಿಯಾಗಿರುವುದರಿಂದ ಋಗ್ವೇದದಲ್ಲಿ ಮನುವು ಮಾಡಿದ ಯಜ್ಞದ ವಿಷಯವು ಅಲ್ಲಲ್ಲಿ ಪ್ರಸ್ತಾಪಿಸಲ್ಪಟ್ಟಿರುವುದು. ಈ ಮನುವಿನ ವಿಷಯವು ಋಗ್ವೇದದಲ್ಲಲ್ಲದೆ ಅಥರ್ವವೇದ (೧೪-೨-೪೧) ತೈತ್ತಿರೀಯಸಂಹಿತಾ (೧-೫-೧-೩, ೭-೫-೧೫-೩, ೨-೫-೯-೧; ೨-೬-೭-೧, ೩-೩-೨-೧, ೫-೪-೧೦-೫, ೬-೬-೬-೧,) ಕಾರಕಸಂಹಿತಾ (೮-೧೫) ಶತಪಥಬ್ರಾಹ್ಮಣ (೧-೮-೪-೧೪) ಜೈಮಿನೀಯ ಉಪನಿಷದ್ಬ್ರಾಹ್ಮಣ (೩-೧೫-೨) ಮೊದಲಾದ ಸ್ಥಳಗಳಲ್ಲಿ ಉಕ್ತವಾಗಿರುವುದು.

ಮನುವಿಗೆ ವಿವಸ್ವಾನ್ (ಋ. ಸಂ. ೮-೫೨-೧) ಎಂದೂ ವಿವಸ್ವಂತನ (ಒಬ್ಬ ದೇವತೆ) ಮಗನಾದುದರಿಂದ ವೈವಸ್ವತನೆಂದೂ (ಅಥ ೮-೧೦-೨೪, ಶ ಬ್ರಾ ೧೩-೪-೩-೩) ಸುವರ್ಣಾ ಎಂಬುವಳ ವಂಶಸ್ಥನಾದುದರಿಂದ ಸಾವರ್ಣಿ ಎಂದೂ, ಸಂವರಣನ ವಂಶಸ್ಥನಾದುದರಿಂದ ಸಾಂವರಣಿ (ಋ ಸಂ. ೮-೫೧-೧) ಎಂದೂ ಅನೇಕ ಹೆಸರುಗಳಿವೆ.

॥ ಸಂಹಿತಾಪಾಠಃ ॥

ಭರದ್ಯದಿ ವಿರತೋ ವೇವಿಜಾನಃ ಪಥೋರುಣಾ ಮನೋಜವಾ ಅಸರ್ಜಿ ।
ತೂಯಂ ಯಯೌ ಮಧುನಾ ಸೋಮ್ಯೇನೋತ ಶ್ರವೋ ವಿವಿದೇ ಶ್ಯೇನೋ ಅತ್ರ ॥ ೫ ॥

॥ ಪದಪಾಠಃ ॥

ಭರತ್ । ಯದಿ । ವಿಃ । ಅತಃ । ವೇವಿಜಾನಃ । ಪಥಾ । ಉರುಣಾ । ಮನಃಜವಾಃ । ಅಸರ್ಜಿ ।
ತೂಯಂ । ಯಯೌ । ಮಧುನಾ । ಸೋಮ್ಯೇನ । ಉತ । ಶ್ರವಃ । ವಿವಿದೇ । ಶ್ಯೇನಃ । ಅತ್ರ ॥ ೫ ॥

॥ ಸಾಯಣಭಾಷ್ಯಂ ॥

ಯದಿ ಯದಾ ವಿಃ ಪಕ್ಷೀ ಶ್ಯೇನೋಽತೋಽಮುಷ್ಮಾದ್ದ್ಯುಲೋಕಾದ್ವೇವಿಜಾನಃ ಸೋಮಪಾಲಕಾನ್ ಭೀಷಯನ್ ಭರತ್ । ಅಹರತ್ । ಸೋಮಮಾಹೃತವಾನ್ । ತದೋರುಣಾ ವಿಸ್ತೀರ್ಣೇನ ಪಥಾಂತರಿಕ್ಷಮಾರ್ಗೇಣ ಮನೋಜವಾ ಮನೋವದ್ವೇಗಯುಕ್ತಃ ಸನ್ ಅಸರ್ಜಿ । ಸಂಸೃಷ್ಟ ಆಸೀತ್ । ಸೋಮ್ಯೇನ ಸೋಮಮಯೇನ ಮಧುನಾನ್ನೇನ ಸಹ ತೂಯಂ ಕ್ಷಿಪ್ರಂ ಯಯೌ । ಜಗಾಮ । ಉತಾಪಿ ಚ ಅತ್ರಾಸ್ಮಿನ್ ಲೋಕೇ ಶ್ಯೇನಃ ಸುಪರ್ಣಃ ಶ್ರವಃ ಸೋಮಾಹರಣನಿಮಿತ್ತಂ ಯಶೋ ವಿವಿದೇ । ಲೇಭೇ ॥

॥ ಪ್ರತಿಪದಾರ್ಥ ॥

ಯದಿ—ಯಾವಾಗ। **ವಿಃ**—ಶ್ಯೇನಪಕ್ಷಿಯು। **ಅತಃ**—ದ್ಯುಲೋಕದಿಂದ। **ವೇವಿಜಾನಃ**—(ಸೋಮ ಪಾಲಕರನ್ನು) ಬೆದರಿಸಿ। **ಭರತ್**—(ಸೋಮವನ್ನು) ಅಪಹರಿಸಿತೋ (ಆಗ) । **ಉರುಣಾ**— ವಿಸ್ತೃತವಾದ। **ಪಥಾ**—ಆಂತರಿಕ್ಷನಾರ್ಗದಿಂದ। **ಮನೋಜವಾ**—ಮನೋವೇಗದಲ್ಲಿ। **ಅಸರ್ಜಿ**—ಕೂಡಿಕೊಂಡು (ಅತಿಶಯವಾದ ವೇಗದಿಂದ)। **ಸೋಮ್ಯೇನ**—ಸೋಮಾತ್ಮಕವಾದ। **ಮಧುನಾ**—ಅನ್ನದೊಡನೆ (ಅಥವಾ ಮಧುರವಾದ ಸೋಮದೊಡನೆ)। **ತೂಯಂ**—ಕ್ಷಿಪ್ರವಾಗಿ। **ಯಯೌ**—ಹಾರಿಬಂದಿತು। **ಉತ**—ಮತ್ತು । **ಅತ್ರ**—ಈ ಲೋಕದಲ್ಲಿ। **ಶ್ಯೇನಃ**—ಶ್ಯೇನವು। **ಶ್ರವಃ**—ತನ್ನಮಿತ್ರವಾದ ಯಶಸ್ಸನ್ನು । **ವಿವಿದೇ**—ಪಡೆಯಿತು.

॥ ಭಾವಾರ್ಥ ॥

ಶ್ಯೇನಪಕ್ಷಿಯು ಸೋಮಪಾಲಕರನ್ನು ಬೆದರಿಸಿ ದ್ಯುಲೋಕದಿಂದ ಸೋಮವನ್ನು ಅಪಹರಿಸಿದಾಗ, ಅದೇ ಮಧುರವಾದ ಸೋಮದೊಡನೆ ಕೂಡಿಕೊಂಡು ವಿಸ್ತೃತವಾದ ಆಂತರಿಕ್ಷನಾರ್ಗದಿಂದ ಮನೋವೇಗದಿಂದ ಅತಿಶಯವಾದ ವೇಗದಿಂದ ಹಾರಿಬಂದಿತು ಆ ಕಾರಣದಿಂದಲೇ ಈ ಲೋಕದಲ್ಲಿ ಶ್ಯೇನವು ಅತಿಶಯವಾದ ಕೀರ್ತಿಯನ್ನು ಪಡೆಯಿತು.

English Translation.

when the bird, intimidating (its guardians), carried off from hence (the Soma) it was at large. (flying) swift as thought along the vast path of the firmament), it went rapidly with the sweet Soma plant, and the hawks thence acquired celebrity in this world.

॥ ವಿಶೇಷವಿಷಯಗಳು ॥

ಈ ವಿಷಯದಲ್ಲಿ ಒಂದು ಪೂರ್ವೇತಿಹಾಸವಿರುವುದು. ಪೂರ್ವದಲ್ಲಿ ಸೋಮವು ದೇವಲೋಕದಲ್ಲಿ ಇದ್ದಿತಷ್ಟೆ. ಅದನ್ನು ಭೂಮಿಗೆ ತರಬೇಕೆಂದು ದೇವತೆಗಳು ಯೋಚಿಸಿ ಇದನ್ನು ತರಲು ಶಕ್ತರಾರು ಎಂದು ಆಲೋಚಿಸಿದಾಗ ಗಾಯತ್ರ್ಯಾದಿಛಂದಸ್ಸುಗಳೇ ಸೋಮವನ್ನು ತರಲು ಸಮರ್ಥವಾಗಿರುವವು ಎಂದು ನಿಶ್ಚಯಿಸಲಾಯಿತು.

ಜಗತ್ಯುದಪತಚ್ಛತುರ್ದಶಾಕ್ಷರಾ ಸತೀ ಸಾ೨ಪ್ರಾಪ್ಯ ನ್ಯವರ್ತತ ತಸ್ಯೈ ದ್ವೇ ಅಕ್ಷರೇ ಅಮಿಯೇ-ತಾಗ್ಂ ಸಾ ಪಶುಭಿಶ್ಚ ದೀಕ್ಷಯಾ ಚಾಗಚ್ಛತ್ತಸ್ಮಾಜ್ಜಗತೀ ಛಂದಸಾಂ ಪಶವ್ಯಕಮಾ ತಸ್ಮಾತ್ಪಶುಮಂತಂ ದೀಕ್ಷೋಪನಮತಿ ತ್ರಿಷ್ಟುಗುದಪತತ್ತ್ರಯೋದಶಾಕ್ಷರಾ ಸತೀ ಸಾ೨ಪ್ರಾಪ್ಯ ನ್ಯವರ್ತತ ತಸ್ಯೈ ದ್ವೇ ಅಕ್ಷರೇ ಅಮಿಯೇತಾಗ್ಂ ಸಾ ದಕ್ಷಿಣಾಭಿಶ್ಚ ತಪಸಾ ಚಾಗಚ್ಛತ್ತ-ಸ್ಮಾತ್ತ್ರಿಷ್ಟುಭೋ ಲೋಕೇ ಮಾಧ್ಯಂದಿನೇ ಸವನೇ ದಕ್ಷಿಣಾ ನೀಯಂತ ಏತತ್ಖಲು ವಾವ ತಪ ಇತ್ಯಾಹುರ್ಯಃ ಸ್ವಂ ದದಾತೀತಿ ಗಾಯತ್ರ್ಯುದಪತಚ್ಛತುರಕ್ಷರಾ ಸತ್ಯಜಯಾ ಜ್ಯೋತಿಷಾ ತಮಸ್ಯಾ ಅಜಾಭ್ಯರುಂಧತ ತದಜಾಯಾ ಅಜತ್ವಗ್ಂ ಸಾ ಸೋಮಂ ಚಾಹರಚ್ಚತ್ವಾರಿ ಚಾಕ್ಷರಾಣಿ ಸಾಷ್ಟಾಕ್ಷರಾ ಸಮಪದ್ಯತ ಬ್ರಹ್ಮವಾದಿನೋ ವದಂತಿ ಕಸ್ಮಾತ್ಸತ್ಯಾದ್ಗಾಯತ್ರೀ

ಕನಿಷ್ಠಾ ಛಂದಸಾಗ್ಂ ಸತೀ ಯಜ್ಞಮುಖಂ ಪರೀಯಾಯೇತಿ ಯದೇವಾದಃ ಸೋಮಮಾಹರತ್ತೇನ್ಮಾದ್ಯಜ್ಞಮುಖಂ ಪರ್ಯೈರ್ತ್ತನ್ಮಾತ್ತೇಜಸ್ವಿನೀತಮಾ ಪದ್ಭ್ಯಾಂ ದ್ವೇ ಸವನೇ ಸಮಗೃಹ್ಣನ್ಮುಖೇನೈಕಂ ಯನ್ಮುಖೇನ ಸಮಗೃಹ್ಣತ್ತದಥಯತ್ತನ್ಮಾದ್ದ್ವೇ ಸವನೇ ಶುಕ್ರವತೀ ಪ್ರಾತಃಸವನಂ ಚ ಮಾಧ್ಯದಿನಂ ಚ ತಸ್ಮಾತ್ತೃತೀಯಸವನಮೃಜೀಷ-ಮಭಿಷುಣ್ವಂತಿ ಧೀತಮಿವ ಹಿ ಮನ್ಯಂತೇ ಅಶಿರಮವನಯತಿ ಸಶುಕ್ರತ್ವಾಯೋಥೋ ಸಂಧರತ್ಯೇವೈನತ್ ।

(ತೈ. ಸಂ ೬-೧-೬-೨, ೩, ೪, ೫)

ಆಗ ಮೊದಲು ಜಗತೀ ಛಂದಸ್ಸು ತಾನು ಸೋಮವನ್ನು ತರುತ್ತೇನೆಂದು ಹೊರಟು ಅಂತರಿಕ್ಷಕ್ಕೆ ನೆಗೆಯಿತು. ಆ ಕಾಲದಲ್ಲಿ ಜಗತೀಛಂದಸ್ಸಿನ ಒಂದೊಂದು ಪಾದಕ್ಕೂ ಹದಿನಾಲ್ಕು ಅಕ್ಷರಗಳಿದ್ದುವು. ಆದರೆ ಸೋಮವನ್ನು ತರಲು ಸಾಧ್ಯವಾಗದೆ ಬಳಲಿ ಆಯಾಸದಿಂದ ಹಿಂದಕ್ಕೆ ಬಂದಿತು. ಆಗ ಅದು ಹದಿನಾಲ್ಕು ಅಕ್ಷರಗಳಲ್ಲಿ ಎರಡು ಅಕ್ಷರಗಳನ್ನು ಕಳೆದುಕೊಂಡಿತು ಆದರೆ ಬರುವಾಗ ಅಲ್ಲಿದ್ದ ಯಜ್ಞ ಪಶುಗಳನ್ನೂ ದೀಕ್ಷಾಕ್ರಮವನ್ನು (ಯಜ್ಞದಲ್ಲಿ ದೀಕ್ಷೆವಹಿಸುವ ವಿಧಿ) ತನ್ನ ಜೊತೆಯಲ್ಲಿ ತಂದಿತು. ಆದುದರಿಂದ ಲೋಕದಲ್ಲಿ ಜಗತೀಛಂದಸ್ಸು ಬಹುಪಶುಗಳು ಳ್ಳದೆಂದು ಪ್ರಸಿದ್ಧಿಯಾಯಿತು. ಮತ್ತು ಪಶುಸಂಪತ್ತಿನಿಂದ ಕೂಡಿದ ಯಜಮಾನನ್ನು ದೀಕ್ಷೆಯು ಅನುಸರಿಸಿಯೇ ಇರುವುದು. ಅನಂತರ ತ್ರಿಷ್ಟುಪ್‌ಛಂದಸ್ಸು ತಾನು ಸೋಮವನ್ನು ತರುತ್ತೇನೆಂದು ಅಂತರಿಕ್ಷಕ್ಕೆ ನೆಗೆಯಿತು. ಆಗ ತ್ರಿಷ್ಟುಪ್‌ಛಂದಸ್ಸಿನ ಒಂದೊಂದು ಪಾದಕ್ಕೂ ಹದಿಮೂರು ಅಕ್ಷರಗಳಿದ್ದುವು ತ್ರಿಷ್ಟುಪ್ ಛಂದಸ್ಸೂ ಸಹ ಸೋಮವನ್ನು ತರಲಾರದೆ ಬಳಲಿ ಬೆಂಡಾಗಿ ತನ್ನಲ್ಲಿದ್ದ ಹದಿಮೂರು ಅಕ್ಷರಗಳಲ್ಲಿ ಎರಡಕ್ಷರಗಳನ್ನು ಕಳೆದುಕೊಂಡು ಹಿಂತಿರುಗಿ ಬಂದಿತು ಬರುವಾಗ ಯಜ್ಞದಕ್ಷಿಣೆಯನ್ನೂ ತಪಸ್ಸನ್ನೂ ತನ್ನ ಜೊತೆಯಲ್ಲಿ ತಂದಿತು ಆದುದರಿಂದ ಯಜ್ಞಮಾಡುವಾಗ ಮಾಧ್ಯಂದಿನಸವನದಲ್ಲಿ (ಋತ್ವಿಗ್ಜನರಿಗೆ) ದಕ್ಷಿಣೆಗಳನ್ನು ಕೊಡುವರು ತನ್ನಲ್ಲಿರುವ ವಸ್ತುವನ್ನು ದಾನಮಾಡುವುದೇ ತಪಸ್ಸೆಂದು ಹೇಳಲ್ಪಡುವುದು ಅನಂತರ ಗಾಯತ್ರೀಛಂದಸ್ಸು ತಾನು ಸೋಮವನ್ನು ತರುತ್ತೇನೆಂದು ಹೋರಟು ಅಂತರಿಕ್ಷಕ್ಕೆ ಶ್ಯೇನಪಕ್ಷಿರೂಪದಿಂದ ಹಾರಿತು. ಆಗ ಗಾಯತ್ರೀ ಛಂದಸ್ಸಿಗೆ ಒಂದೊಂದುಪಾದಕ್ಕೆ ನಾಲ್ಕು ಅಕ್ಷರಗಳಿದ್ದುವು ಹೊರಡುವಾಗ ಗಾಯತ್ರಿಯು ತನ್ನ ಜೊತೆಯಲ್ಲಿ ಸಹಾಯಕ್ಕಾಗಿ ಪ್ರಕಾಶಮಾನವಾದ ಒಂದು ಹೆಣ್ಣು ಆಡನ್ನು ತೆಗೆದುಕೊಂಡುಹೋಯಿತು ಆ ಆಡು ಸೋಮವನ್ನು ತರುವಾಗ ಗಾಯತ್ರಿಗೆ ಸಹಾಯಮಾಡಿತು. ಆದುದರಿಂದ ಆಡಿಗೆ ಅಜಾ ಎಂಬ ಹೆಸರು ಪ್ರಸಿದ್ಧವಾಯಿತು ಅನಂತರ ಗಾಯತ್ರಿಯು ಸ್ವರ್ಗದಲ್ಲಿದ್ದ ಸೋಮವನ್ನೂ ಜಗತೀ ಮತ್ತು ತ್ರಿಷ್ಟುಪ್‌ಛಂದಸ್ಸುಗಳು ಕಳೆದುಕೊಂಡಿದ್ದ ನಾಲ್ಕು ಅಕ್ಷರಗಳನ್ನೂ ಹಿಂದಕ್ಕೆ ತಂದಿತು. ತಾನು ಹಿಂದಕ್ಕೆ ತಂದ ನಾಲ್ಕು ಅಕ್ಷರಗಳೂ ಸೇರಿ ಗಾಯತ್ರಿಗೆ ಎಂಟು ಅಕ್ಷರಗಳಾದುವು (ಜಗತೀ ಛಂದಸ್ಸಿಗೆ ಹನ್ನೆರಡು ಅಕ್ಷರಗಳೂ ತ್ರಿಷ್ಟುಪ್ ಛಂದಸ್ಸಿಗೆ ೧೧ ಅಕ್ಷರಗಳೂ ಆದವು) ಬ್ರಹ್ಮವಾದಿಗಳು ಹೇಳುವಂತೆ ಇಲ್ಲಿ ಒಂದು ಸಂಶಯವು ತಲೆದೋರುವುದು ಗಾಯತ್ರೀಛಂದಸ್ಸು ಎಲ್ಲಾ ಛಂದಸ್ಸುಗಳಿಗಿಂತಲೂ ಬಹಳ ಚಿಕ್ಕದಾಗಿದ್ದರೂ ಯಜ್ಞದಲ್ಲಿ ಹೇಗೆ ಪ್ರಾಮುಖ್ಯತೆಯನ್ನು ಪಡೆಯಿತು ? ಎಂದರೆ, ಈ ಗಾಯತ್ರಿಯು ಸೋಮವನ್ನು ತಂದಿತು. ಆದುದರಿಂದ ಯಜ್ಞಕರ್ಮಗಳಲ್ಲಿ ಗಾಯತ್ರಿಗೇ ಪ್ರಾಧಾನ್ಯತೆಯು ಉಂಟಾಗಿರುವುದು ಮತ್ತು ಇದು ಬಹಳ ತೇಜಸ್ಸಿನಿಂದಲೂ ಬೆಳಗುತ್ತಿರುವುದು. ಈ ಗಾಯತ್ರಿಯು ಸ್ವರ್ಗದಿಂದ ಸೋಮವನ್ನು ತರುವಾಗ ಶ್ಯೇನಪಕ್ಷಿಯ ರೂಪವನ್ನು ಧರಿಸಿ ತನ್ನ ಎರಡು ಪಾದಗಳಿಂದ (ಗಾಯತ್ರಿಯ ಎಂಟು ಅಕ್ಷರಗಳ ಮೂರುಪಾದಗಳಲ್ಲಿ ಎರಡು ಕಾಲುಗಳೆಂದೂ ಮೂರನೆಯದು ಮುಖವೆಂದೂ

ಹೇಳಲ್ಪಡುವುದು) ಪ್ರಾತಸ್ಸವನ ಮತ್ತು ಮಾಧ್ಯಂದಿನಸವನ ಎಂಬ ಎರಡು ವಿಧವಾದ ಸವನಗಳನ್ನು ಹಿಡಿದು ಕೊಂಡೂ ಮುಖದಿಂದ (ಕೊಕ್ಕಿನಿಂದ) ಮೂರನೆಯದಾದ ತೃತೀಯಸವನವನ್ನು ಕಚ್ಚಿಕೊಂಡೂ ತಂದಿತು. ಕಾಲು ಗಳಲ್ಲಿ ಹಿಡಿದಿದ್ದ ಪ್ರಾತಸ್ಸವನ ಮತ್ತು ಮಾಧ್ಯಂದಿನ ಸವನಗಳು ಏನೂ ವ್ಯತ್ಯಾಸವನ್ನು ಹೊಂದದೆ ಹಾಗೆಯೇ ಇದ್ದುದರಿಂದ ಆ ಎರಡು ಸವನಗಳಲ್ಲಿಯೂ ಸೋಮಲತೆಗಳನ್ನು ಜಜ್ಜಿ ಪ್ರಕಾಶಮಾನವಾದ ಮತ್ತು ಶುದ್ಧವಾದ ರಸವನ್ನು ಹಿಂಡಿ ತೆಗೆಯುವರು. ಆದರೆ ಕೊಕ್ಕಿನಿಂದ ತೃತೀಯಸವನನನ್ನು ತರುವಾಗ ಆ ಸೋಮಲತೆಯನ್ನು ಸ್ವಲ್ಪ ಮಟ್ಟಿಗೆ ಕಚ್ಚಿ ರಸವನ್ನು ಹಿಂಡಿ ಪಾನಮಾಡಿತೆಂದು ಭಾವಿಸುವುದರಿಂದ ತೃತೀಯಸವನಕಾಲದಲ್ಲಿ ಹೊಸ ಸೋಮಲತೆ ಗಳನ್ನು ಉಪಯೋಗಿಸದೆ, ಪ್ರಾತಸ್ಸವನ ಮತ್ತು ಮಾಧ್ಯಂದಿನಸವನಗಳಲ್ಲಿ ರಸವನ್ನು ಒಂದಾವರ್ತಿ ಹಿಂಡಿ ತೆಗೆದು ಉಳಿದ ಸಿಪ್ಪೆಯಂತಿರುವ (ಋಜೀಷ) ಜಜ್ಜಿದ ಲತೆಗಳಿಂದಲೇ ಉಳಿದುಳಿದಿರುವ ರಸವನ್ನು ಮತ್ತೊಂದಾವರ್ತಿ ಚೆನ್ನಾಗಿ ಹಿಂಡಿ ತೆಗೆಯುವರು. ಹೀಗೆ ತೆಗೆಯುವ ರಸವು ಹೆಚ್ಚಾಗಿರುವುದಿಲ್ಲವಾದ್ದರಿಂದ ಇದರ ಜೊತೆಗೆ ಆಶಿರದ್ರವ್ಯಗಳನ್ನು (ಹಾಲು, ಮೊಸರು, ಹಿಟ್ಟು) ಸೇರಿಸಿ ಪಾನಯೋಗ್ಯವಾಗುವಂತೆ ಮಾಡುವರು.

॥ संहितापाठः ॥

ऋजीषी श्येनो ददमानो अंशुं परावतः शकुनो मन्द्रं मदं ।
सोमं भरद्दाद्दृहाणो देवावान्दिवो अमुष्मादुत्तरादादायै ॥ ६ ॥

॥ पदपाठः ॥

ऋजीषी । श्येनः । ददमानः । अंशुं । परा॒ऽवतः । शकुनः । मन्द्रं । मदं ।
सोमं । भरत् । दद्दृहाणः । देव॒ऽवान् । दिवः । अमुष्मात् । उत्ऽतरात् ।
आदायै ॥ ६ ॥

॥ सायणभाष्यं ॥

ऋजीषी ऋजुगामिना परावतो दूरादंशुं सोमं ददमानो धारयन् श्येनः शंसनीयगमनो देववान्देवैः सहितः शकुनः पक्षी मन्द्रं मदनीयं स्तुत्यं

ಮದಂ ಮದಕರಂ ಸೋಮಮುತ್ತ್ರರಾದುದ್ಗತರಾದನಮುಷ್ಮಾದ್ದಿವೋ ದ್ಯುಲೋಕಾದಾದಾಯ ಸ್ವೇಕೃತ್ಯ ದೆದೃಹಾಣೋ ದೃಢೀಭವನ್ ಭರತ್ । ಅಹರತ್ ॥

॥ ಪ್ರತಿಪದಾರ್ಥ ॥

ಋಜೀಷೀ—ನೇರವಾಗಿ ಹಾರತಕ್ಕದ್ದೂ । **ಶ್ಯೇನಃ**—ಪ್ರಶಸ್ಯವಾದ ಗಮನವುಳ್ಳದ್ದೂ ಆದ । **ಶಕುನಃ**—(ಆದೇ) ಪಕ್ಷಿಯು । **ಪರಾವತಃ**—ಅತ್ಯಂತ ದೂರಪ್ರದೇಶದಿಂದ । **ಅಂಶುಂ**—ಸೋಮಲತೆಯನ್ನು । **ದದಮಾನಃ**—ಹೊತ್ತುಕೊಂಡು ಬಂದಿತು । **ದೇವವಾನ್**—ದೇವತೆಗಳೊಡನೆ ಕೂಡಿಕೊಂಡು । **ಮದಂ**—ಹರ್ಷಜನಕವಾದುದೂ । **ಮಂದ್ರಂ**—ಪ್ರಶಸ್ಯವಾದುದೂ ಆದ । **ಸೋಮಂ**—ಸೋಮವನ್ನು । **ಉತ್ತ್ರರಾತ್**—ಅತ್ಯಂತ ಉನ್ನತ ಪ್ರದೇಶವೂ । **ಅಮುಷ್ಮಾತ್**—ದೂರದೇಶದಲ್ಲಿರುವುದೂ ಆದ । **ದಿವಃ**—ದ್ಯುಲೋಕದಿಂದ । **ಆದಾಯ**—ತೆಗೆದುಕೊಂಡು । **ದೆದೃಹಾಣಃ**—ದೃಢಸಂಕಲ್ಪದೊಡನೆ । **ಭರತ್**—ಅಪಹರಿಸಿತು

॥ ಭಾವಾರ್ಥ ॥

ವಕ್ರಗಮನವಿಲ್ಲದೇ ನೇರವಾಗಿ ಹಾರತಕ್ಕದ್ದೂ, ಪ್ರಶಸ್ಯವಾದ ಹಾರಾಟವುಳ್ಳದ್ದೂ ಆದ ಆದೇ ಶ್ಯೇನ ಪಕ್ಷಿಯು ಸೋಮಲತೆಯನ್ನು ಅತ್ಯಂತ ದೂರಪ್ರದೇಶದಿಂದ ಹೊತ್ತುಕೊಂಡು ಬಂದಿತು ಪ್ರಶಸ್ಯವಾದುದೂ ಹರ್ಷ ಜನಕವಾದುದೂ ಆದ ಸೋಮವನ್ನು ಅತ್ಯಂತ ಉನ್ನತಪ್ರದೇಶವಾದ ದ್ಯುಲೋಕದಿಂದ ತೆಗೆದುಕೊಂಡು ದೃಢಸಂಕಲ್ಪ ದೊಡನೆ ಅಪಹರಿಸಿತು

English Translation

The straight-flying hawk, conveying the Soma plant from afar, the bird, attended by the gods, brought, resolute of purpose, the adorable exhilarating Soma, having taken it from that lofty heaven.

॥ ಸಂಹಿತಾಪಾಠಃ ॥

ಆದಾಯ ಶ್ಯೇನೋ ಅಭರತ್ಸೋಮಂ ಸಹಸ್ರಂ ಸವಾ ಅಯುತಂ ಚ ಸಾಕಂ ।
ಅತ್ರಾ ಪುರಂಧಿರಜಹಾದರಾತೀರ್ಮದೇ ಸೋಮಸ್ಯ ಮೂರಾ ಅಮೂರಃ ॥

॥ ಪದಪಾಠಃ ॥

ಆ॒ದಾ॒ಯ॑ । ಶ್ಯೇ॒ನಃ । ಅ॒ಭ॒ರ॒ತ್ । ಸೋ॒ಮ॑ಂ । ಸ॒ಹ॒ಸ್ರಂ॑ । ಸ॒ವಾ॑ನ್ । ಅ॒ಯು॒ತ॑ಂ । ಚ॒ । ಸಾ॒ಕಂ । ಅತ್ರ॑ । ಪು॒ರಂ॒ಧಿಃ । ಅ॒ಜ॒ಹಾ॒ತ್ । ಅ॒ರಾ॒ತೀಃ॑ । ಮದೇ॑ । ಸೋ॒ಮ॒ಸ್ಯ । ಮೂ॒ರಾಃ । ಅ॒ಮೂ॒ರಃ ॥ ೬ ॥

॥ ಸಾಯಣಭಾಷ್ಯಂ ॥

ಶ್ಯೇನಃ ಶಂಸನೀಯೇಗಮನಃ ಪಕ್ಷೀ ಸವಾನ್ ಸವಾನಾಂ ಯಜ್ಞಾನಾಂ ಸಹಸ್ರಂ ಸಹಸ್ರಸಂಖ್ಯಾಕಮಯುತಂ ಚಾಯುತಸಂಖ್ಯಾಕಂ । ಅಪರಿಮಿತಸಂಖ್ಯಾಕಮಿತ್ಯರ್ಥಃ । ಸಾಕಂ ಸಹ ಸೋಮಂ ಸೋಮಲಕ್ಷಣಮನ್ನಮಾದಾಯಾದಾನಂ ಕೃತ್ವಾಭರತ್ । ಆಹರತ್ । ಅಜಹಾರ । ಅತ್ರಾಸ್ಮಿನ್ ಸೋಮ ಆಹೃತೇ ಸತಿ ಪುರಂಧಿಃ ಪುರಂಧೀರ್ಬಹುಕರ್ಮಾಮೂರೋಽಮೂಢಃ ಪ್ರಾಜ್ಞ ಇಂದ್ರಃ ಸೋಮಸ್ಯ ಸಂಬಂಧಿನಿ ಮದೇ ಹರ್ಷೇ ಸತಿ ಮೂರಾ ಮೂಢಾ ಅರಾತೀಃ ಶತ್ರೂನಜಹಾತ್ । ಅತ್ಯಜತ್ । ಜಘಾನೇತ್ಯರ್ಥಃ ॥ ಅತ್ರಾರಾತಿಶಬ್ದಃ ಸ್ತ್ರೀಲಿಂಗಃ ॥

॥ ಪ್ರತಿಪದಾರ್ಥ ॥

ಶ್ಯೇನಃ—ಶ್ಯೇನಪಕ್ಷಿಯು । **ಸಾಕಂ**—ತನ್ನೊಡನೆ । **ಸೋಮಂ**—ಸೋಮವನ್ನು । **ಸಹಸ್ರಂ**—ಸಹಸ್ರಸಂಖ್ಯಾಕವಾದುದೂ । **ಅಯುತಂ**—ಅಪರಿಮಿತವಾದ ಸಂಖ್ಯೆಯುಳ್ಳದ್ದೂ ಆದ । **ಸವಾನ್**—ಯಜ್ಞಗಳನ್ನುದ್ದೇಶಿಸಿ । **ಆದಾಯ**—ತೆಗೆದುಕೊಂಡು । **ಅಭರತ್**—ಅಪಹರಿಸಿತು । (ಅಥವಾ ಅಪರಿಮಿತವಾದ ಯಜ್ಞಗಳೊಡನೆ ಸೋಮವನ್ನು ಅಪಹರಿಸಿತು) **ಅತ್ರ**—ಈ ಸೋಮಾಹರಣವಾದೊಡನೆಯೇ । **ಪುರಂಧಿಃ**—ಅನೇಕ ಕರ್ಮಗಳನ್ನು ನೆರವೇರಿಸುವವನೂ । **ಅಮೂರಃ**—ಪ್ರಾಜ್ಞನೂ (ಸ್ಥಿರಚಿತ್ತನೂ) ಆದ ಇಂದ್ರನು । **ಸೋಮಸ್ಯ**—ಸೋಮಪಾನದಿಂದ ಉಂಟಾದ । **ಮದೇ**—ಹರ್ಷದಲ್ಲಿ । **ಮೂರಾಃ**—ಚಂಚಲಚಿತ್ತರಾದ । **ಅರಾತೀಃ**—ಶತ್ರುಗಳನ್ನು । **ಅಜಹಾತ್**—ನಾಶಮಾಡಿದನು

॥ ಭಾವಾರ್ಥ ॥

ಶ್ಯೇನಪಕ್ಷಿಯು, ಸಹಸ್ರಸಂಖ್ಯಾತವೂ, ಅಪರಿಮಿತವಾದ ಸಂಖ್ಯೆಯುಳ್ಳವೂ ಆದ ಯಜ್ಞಾರ್ಥವಾಗಿ ಸೋಮವನ್ನು ಅಪಹರಿಸಿಕೊಂಡು ಬಂದಿತು ಈ ಸೋಮಾಹರಣವಾದೊಡನೆಯೇ, ಅನೇಕ ಕರ್ಮಕರ್ತನೂ, ಪ್ರಾಜ್ಞನೂ, ಸ್ಥಿರಚಿತ್ತನೂ ಆದ ಇಂದ್ರನು ಸೋಮಪಾನದಿಂದ ಉಂಟಾದ ಹರ್ಷದಲ್ಲಿ ಮೂಢರೂ ಚಂಚಲಚಿತ್ತರೂ ಆದ ಶತ್ರುಗಳನ್ನು ನಾಶಮಾಡಿದನು.

English Translation.

Having taken it, the hawk brought the Soma with him to a thousand and ten thousand sacrifices, and this being provided, the performer of many (great) deeds, the unbewildered (Indra) destroyed, in the exhilaration of the Soma, (his) bewildered foes.

ಇಪ್ಪತ್ತೇಳನೆಯ ಸೂಕ್ತವು

ಗರ್ಭೇ ನ್ವಿತಿ ಪಂಚರ್ಚಂ ಷಷ್ಠಂ ಸೂಕ್ತಂ ವಾಮದೇವಸ್ಯಾರ್ಷಂ ತ್ರೈಷ್ಟುಭಂ । ಅಂತ್ಯಾ ಶಕ್ವರೀ ಷಟ್ಪಂಚಾಶದಕ್ಷರಾ । ಶ್ಯೇನೋ ದೇವತಾ । ಪೂರ್ವಸೂಕ್ತೇಽಷ್ಟೌ ವೇತ್ಯುಕ್ತತ್ವಾದಂತ್ಯಯಾ ಇಂದ್ರೋ ವಾ ದೇವತಾ । ತಥಾ ಚಾನುಕ್ರಾಂತಂ । ಗರ್ಭೇ ನು ಪಂಚಾಂತ್ಯಾ ಶಕ್ವರೀತಿ ॥ ಶ್ಯೇನೇ ನಿಷ್ಕೇವಲ್ಯಶಸ್ತ್ರ ಇದಂ ಸೂಕ್ತಂ । ಸೂತ್ರಂ ತು ಪೂರ್ವಮುದಾಹೃತಂ ।

ಅನುವಾದವು—**ಗರ್ಭೇ ನು** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಾಮದೇವನು ಋಷಿಯು, ತ್ರಿಷ್ಟುಪ್ ಛಂದಸ್ಸು; ಕೊನೆಯಋಕ್ಕು ಶಕ್ವರೀಛಂದಸ್ಕವು ಇದರಲ್ಲಿ ಐವತ್ತಾರು] ಅಕ್ಷರಗಳಿರುವವು. ಶ್ಯೇನವೆಂಬ ಪಕ್ಷಿಯು ಈ ಸೂಕ್ತಕ್ಕೆ ದೇವತೆಯು. ಅಥವಾ ಇಂದ್ರನೂ ದೇವತೆಯಾಗಬಹುದು ಅನುಕ್ರಮಣಿಕೆಯಲ್ಲಿ—**ಗರ್ಭೇ ನು ಪಂಚಾಂತ್ಯಾ ಶಕ್ವರೀ** ಎಂದು ಹೇಳಿರುವುದು ಶ್ಯೇನವೆಂಬ ಇಷ್ಟಿಯಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಪರನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದಿನ ಸೂಕ್ತದ ವಿನಿಯೋಗದಲ್ಲಿಯೇ ಹೇಳಲಾಗಿದೆ

ಸೂಕ್ತ—೨೭

ಮಂಡಲ—೪ ॥ ಅನುವಾಕ—೩ ॥ ಸೂಕ್ತ—೨೭ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ– ೧೬ ॥

ಸೂಕ್ತದಲ್ಲಿರುವ ಋಕ್ಕಂಖ್ಯೆ—೫ ॥
ಋಷಿಃ—ವಾಮದೇವಃ ।
ದೇವತಾ – ೧-೪ ಶ್ಯೇನಃ । ೫ ಶ್ಯೇನ ಇಂದ್ರೋ ವಾ ॥
ಛಂದಃ – ೧-೪ ತ್ರಿಷ್ಟುಪ್ । ೫ ಶಕ್ವರೀ ॥

॥ ಸಂಹಿತಾಪಾಠ ॥

ಗರ್ಭೇ॑ ನು ಸನ್ನ್ವೇ॑ಷಾಮವೇದಮ॒ಹಂ ದೇ॒ವಾನಾಂ॑ ಜನಿ॒ಮಾನಿ॒ ವಿಶ್ವಾ॑ ।
ಶ॒ತಂ ಮಾ॒ ಪುರ॒ ಆಯ॑ಸೀ॒ರ॒ರ॒ಕ್ಷ॒ನ್ನ॒ಧ॒ ಶ್ಯೇ॒ನೋ ಜ॒ವ॒ಸಾ ನಿ॒ರ॒ದೀ॒ಯ॒ಂ ॥ ೧ ॥

॥ ಪದಪಾಠಃ ॥

ಗರ್ಭೇ॑ । ನು । ಸನ್ । ಅ॒ನು॒ । ಏ॒ಷಾ॒ಂ । ಅ॒ವೇ॒ದ॒ಂ । ಅ॒ಹಂ । ದೇ॒ವಾನಾಂ॑ । ಜ॒ನಿ॒ಮಾನಿ॒ । ವಿಶ್ವಾ॑ ।
ಶ॒ತಂ । ಮಾ॒ । ಪುರ॑ಃ । ಆಯ॑ಸೀಃ । ಅ॒ರ॒ಕ್ಷ॒ನ್ । ಅ॒ಧ॒ । ಶ್ಯೇ॒ನಃ । ಜ॒ವ॒ಸಾ । ನಿ॒ಃ । ಅ॒ದೀ॒ಯ॒ಂ ॥ ೧ ॥

॥ ಸಾಯಣಭಾಷ್ಯಂ ॥

ಅತ್ರೈಷ ಶ್ಲೋಕಃ ಪಠ್ಯತೇ । ಶ್ಯೇನಭಾವಂ ಸಮಾಸ್ಥಾಯ ಗರ್ಭಾದ್ಯೋಗೇನ ನಿಃಸೃತಃ । ಋಷಿರ್ಗರ್ಭೇ ಶಯಾನಃ ಸನ್ ಬ್ರೂತೇ ಗರ್ಭೇ ನು ಸನ್ನಿತಿ । ಗರ್ಭೇ ನು ಗರ್ಭ ಏವ ಸನ್ ವಿದ್ಯಮಾನೋಽಹಂ ವಾಮದೇವ ಏಷಾಮಿಂದ್ರಾದೀನಾಂ ದೇವಾನಾಂ ವಿಶ್ವಾ ವಿಶ್ವಾನಿ ಸರ್ವಾಣಿ ಜನಿಮಾನಿ ಜನ್ಮಾನ್ಯನ್ವವೇದಂ । ಅನುಪೂರ್ವೇಣಾಜ್ಞಾಸಿಷಂ । ಪರಮಾತ್ಮನಃ ಸಕಾಶಾತ್ಸರ್ವೇ ದೇವಾ ಜಾತಾ ಇತ್ಯನೇದಿಷಮಿತ್ಯರ್ಥಃ । ಇತಃ ಪೂರ್ವಂ ಶತಂ ಬಹೂನ್ಯಾಯಸೀರಯೋಽಮಯಾನ್ಯಭೇದ್ಯಾನಿ ಪುರಃ ಶರೀರಾಣಿ ಮಾ ಮಾಮರಕ್ಷನ್ । ಅಪಾಲಯನ್ । ಯಥಾಹಂ ಶರೀರಾದ್ವ್ಯತಿರಿಕ್ತಮಾತ್ಮಾನಂ ನ ಜಾನೀಯಾಂ ತಥಾ ಮಾಮರಕ್ಷನ್ನಿತ್ಯರ್ಥಃ । ಅಧಾಧುನಾ ಶ್ಯೇನಃ ಶ್ಯೇನವಪ್ಸ್ತಿತೋಽಹಂ ಜವಸಾ ವೇಗೇನ ನಿರದೀಯಂ । ಶರೀರಾನ್ನಿರಗಮಂ । ಆನಾವರಣಮಾತ್ಮಾನಂ ಜಾನನ್ನಿರ್ಗತೋಽಸ್ಮೀತ್ಯರ್ಥಃ । ಪುರುಷೇ ಹ ವಾ ಅಯಮಾದಿತ ಇತಿ ಖಂಡೇ ಗರ್ಭ ಏವೈತಚ್ಛಯಾನೋ ವಾಮದೇವ ಏವಮುವಾಚೇತ್ಯಾದಿನಾ । ಐ. ಆ. ೨-೫-೧ । ಅಯಮರ್ಥಃ ಸಮ್ಯಕ್ ಪ್ರತಿಪಾದಿತಃ ॥

॥ ಪ್ರತಿಪದಾರ್ಥ ॥

ಗರ್ಭೇ ನು ಸನ್—ಗರ್ಭದಲ್ಲಿರುವಾಗಲೇ । **ಅಹಂ**—ವಾಮದೇವಾಖ್ಯನಾದ ನಾನು । **ಏಷಾಂ ದೇವಾನಾಂ**—ಈ ಇಂದ್ರಾದಿ ದೇವತೆಗಳ । **ವಿಶ್ವಾ**—ಸಮಸ್ತವಾದ । **ಜನಿಮಾನಿ**—ಉತ್ಪತ್ತಿಸ್ವರೂಪಗಳನ್ನೂ । **ಅನು ಅವೇದಂ**—ಪೂರ್ಣವಾಗಿ ತಿಳಿದೆನು (ಇದಕ್ಕೆ ಮೊದಲು) । **ಶತಂ**—ಅನೇಕವಾದ । **ಅಯಸೀಃ**—ಕಬ್ಬಿಣದಂತೆ ಕಠಿಣಸ್ವರೂಪವುಳ್ಳ । **ಪುರಃ**—ಶರೀರಗಳು । **ಮಾ**—ನನ್ನನ್ನು । **ಅರಕ್ಷನ್**—ರಕ್ಷಿಸಿದವು (ಆತ್ಮಸಾಕ್ಷಾತ್ಕಾರಕ್ಕೆ ಅವಕಾಶಕೊಡದೇ ತಡೆದಿದ್ದವು)। **ಅಧ**—ಈಗ । **ಶ್ಯೇನಃ**—ಶ್ಯೇನರೂಪವನ್ನು ಧರಿಸಿ ನಾನು । **ಜವಸಾ**—ಬಹಳ ವೇಗದಿಂದ । **ನಿರದೀಯಂ**—ಶರೀರವನ್ನು ಭೇದಿಸಿಕೊಂಡು ಹೊರಕ್ಕೆ ಬಂದಿದ್ದೇನೆ.

॥ ಭಾವಾರ್ಥ ॥

ವಾಮದೇವಾಖ್ಯನಾದ ನಾನು ಗರ್ಭದಲ್ಲಿರುವಾಗಲೇ, ಇಂದ್ರಾದಿ ದೇವತೆಗಳ ಸಮಸ್ತವಾದ ಉತ್ಪತ್ತಿಸ್ವರೂಪಗಳನ್ನೂ ಅರಿತೆನು ಇದಕ್ಕೆ ಮೊದಲು ಕಬ್ಬಿಣದ ಸಲಾಕೆಗಳಂತೆ ಕಠಿಣವಾದ ಅನೇಕ ಶರೀರಗಳು ನನ್ನನ್ನು ತಡೆದು ಆತ್ಮಸಾಕ್ಷಾತ್ಕಾರಕ್ಕೆ ಅವಕಾಶ ಕೊಡದಂತೆ ಪ್ರತಿಬಂಧಿಸಿದ್ದವು ಶ್ಯೇನರೂಪವನ್ನು ಧರಿಸಿ ನಾನು ಈಗ ಬಹಳ ವೇಗದಿಂದ ತಾಯಿಯ ಶರೀರವನ್ನು ಭೇದಿಸಿಕೊಂಡು ಹೊರಕ್ಕೆ ಬಂದಿದ್ದೇನೆ.

English Translation

Being still in the germ, I have known all the births of these divinities in their order: a hundred bodies of iron confined me, but as a hawk I came forth with speed.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ವಾಮದೇವ ಋಷಿಯು ತಾನು ತಾಯಿಯ ಗರ್ಭವಾಸದಲ್ಲಿರುವಾಗಲೇ ದೇವತೆಗಳ ಉತ್ಪತ್ತಿಕ್ರಮ ಮೊದಲಾದ ಸಮಸ್ತ ವಿಷಯಗಳನ್ನು ತಿಳಿದು ಸರ್ವಜ್ಞನಾಗಿರುವೆನು ಎಂದು ಹೇಳಿಕೊಂಡಿದಾನೆ ಈ ಎರಡು ಋಕ್ಕುಗಳ ಮುಖ್ಯಾಭಿಪ್ರಾಯವನ್ನೂ ರಹಸ್ಯಾರ್ಥವನ್ನೂ ಈ ಮಂಡಲದ ಪೀಠಿಕೆಯಲ್ಲಿ ವಿವರಿಸಿದೇವೆ (ಭಾಗ ೧೭ ಪೇಜು 659) ಈ ವಿಷಯವನ್ನೂ ವಾಮದೇವಋಷಿಯ ವೈಶಿಷ್ಟ್ಯವನ್ನೂ ಅಲ್ಲಿ ನೋಡಿ ತಿಳಿಯಬಹುದು

॥ ಸಂಹಿತಾಪಾಠಃ ॥

ನ ಘಾ ಸ ಮಾಮಪ ಜೋಷಂ ಜಭಾರಾಭೀಮಾಸ ತ್ವಕ್ಷಸಾ ವೀರ್ಯೇಣ ।
ಈರ್ಮಾ ಪುರಂಧಿರಜಹಾದರಾತೀರುತ ವಾತಾಁ ಅತರಚ್ಛಶುವಾನಃ ॥ ೨ ॥

॥ ಪದಪಾಠಃ ॥

ನ । ಘ । ಸಃ । ಮಾಂ । ಅಪ । ಜೋಷಂ । ಜಭಾರ । ಅಭಿ । ಈಂ । ಆಸ । ತ್ವಕ್ಷಸಾ । ವೀರ್ಯೇಣ ।
ಈರ್ಮಾ । ಪುರಂ॰ಧಿಃ । ಅಜಹಾತ್ । ಅರಾತೀಃ । ಉತ । ವಾತಾನ್ । ಅತರತ್ । ಶಶುವಾನಃ ॥ ೨ ॥

॥ ಸಾಯಣಭಾಷ್ಯಂ ॥

ಸ ಗರ್ಭೋ ಮಾಂ ವಾಮದೇವಂ ಜೋಷಂ ಪರ್ಯಾಪ್ತಂ ನ ಘ ನೈವಾಪ ಜಭಾರ । ಅಪಜಹಾರ । ಗರ್ಭೇ॰ಪಿ ವಸತೋ ಮೇ ಮೋಹೋ ನಾಭೂದಿತ್ಯರ್ಥಃ । ಅಹಂ ತು ಈಮಿದಂ ಗರ್ಭಸ್ಥಂ ದುಃಖಂ ತ್ವಕ್ಷಸಾ ತೀಕ್ಷ್ಣೇನ ವೀರ್ಯೇಣ ಜ್ಞಾನಸಾಮರ್ಥ್ಯೇನಾಭ್ಯಸ । ಅಭ್ಯಭವಂ । ಈರ್ಮಾ ಸರ್ವಸ್ಯ ಪ್ರೇರಕಃ ಪುರಂಧಿಃ ಪುರಾಂ ಧಾರಕಃ ಪರಮಾತ್ಮಾರಾತೀರ್ಗರ್ಭಸಂಶ್ರಿತಾನ್ ಶತ್ರೂನಜಹಾತ್ । ಅತ್ಯಜತ್ । ಜಘಾನ । ಉತಾಪಿ ಚ ಶೂಶುವಾನೋ ವರ್ಧಮಾನಃ ಪರಿಪೂರ್ಣಃ ಪರಮಾತ್ಮಾ ವಾತಾನ್ ಗರ್ಭಕ್ಲೇಶಕರಾನ್ವಾಯೂನತರತ್ । ಅತಾರೀತ್ ॥

॥ ಪ್ರತಿಪದಾರ್ಥ ॥

ಸಃ—ಆ ಗರ್ಭವು । **ಮಾಂ**—ವಾಮದೇವಾಖ್ಯನಾದ ನನ್ನನ್ನು । **ಜೋಷಂ**—ಪೂರ್ಣವಾಗಿ । **ನ ಘ ಅಪ ಜಭಾರ**—ಅಪಹರಿಸಿಲ್ಲ (ನಾನು ಗರ್ಭಸ್ಥವಾದ ಮೋಹವನ್ನೂ, ಅಜ್ಞಾನವನ್ನೂ ಹೊಂದಲಿಲ್ಲ) । **ಈಂ**—ಗರ್ಭಸ್ಥವಾದ ದುಃಖವನ್ನು । **ತ್ವಕ್ಷಸಾ**—ತೀಕ್ಷ್ಣವಾದುದೂ । **ವೀರ್ಯೇಣ**—ಜ್ಞಾನರೂಪವಾದುದೂ ಆದ

सामर्थ्यदिंद । अभि अस—जयिसिदेनु । ईयमान—जगत्प्रेरकनाद । पुरंधिः—परमात्मनु । अराशीः—गर्भस्थवाद शत्रुगळन्नु । अजिहात्—नाशमाडिदनु । उत—मत्तु । शूशुवानः—पूर्णवागि बेळेद परमात्मनु । वातान्—क्लेशदायकगळाद वातगळन्नु । अतरत्—दाटिदनु.

। भावार्थ ।

अयोरूपवाद शरीरगळु गर्भस्थवाद नन्नन्नु प्रतिबंधिसिद्दरू सह नानु अज्ञानदिंदलू, मोहदिंदलू आवृतनागलिल्ल. गर्भस्थवाद दुःखवन्नु तीक्ष्णवादुदू, ज्ञानरूपवादुदू आद सामर्थ्यदिंद जयिसिदेनु. जगत्प्रेरकनू परिपूर्णनू आद परमात्मनु गर्भस्थवाद शत्रुगळन्नु नाशमाडिदनु मत्तु क्लेशदायकगळाद गर्भस्थ वायुगळन्नु दाटि बंदनु

English Translation.

That embryo did not beguile me into satisfaction, but by the keen energy (of divine wisdom), I triumphed over it : the impeller of all, the sustainer of many, abandoned the foes (of knowledge), and, expanding, passed beyond the winds (of worldly troubles).

। संहितापाठः ।

अव यच्छ्येनो अस्वनीदध द्योर्वि यदेति वात ऊहुः पुरंधिं ।
सृजद्यदस्मा अव ह क्षिपज्ज्यां कृशानुरस्ता मनसा भुरण्यन् ॥

। पदपाठः ।

अव । यत् । श्येनः । अस्वनीत् । अध । द्योः । वि । यत् । एति । वा । अतः । ऊहुः ।
पुरंऽधिं ।
सृजत् । यत् । अस्मै । अव । ह । क्षिपत् । ज्याम् । कृशानुः । अस्ता । मनसा । भुरण्यन् ॥

॥ ಸಾಯಣಭಾಷ್ಯಂ ॥

ಅಥ ತದಾನೀಂ ಸೋಮಾಹರಣಕಾಲೇ ಯದ್ಯದಾ ಶ್ಯೇನೋ ದ್ಯೋದ್ಯುಲೋಕಾದವಾಸ್ಯ-ನೀತ್ ಅವಾಜುಖುಂ ಶಬ್ದಮಕರೋತ್। ಯದಿ ವಾ ಯದಾ ಚ। ವೇತಿ ಚಾರ್ಥೇ। ಯದ್ಯಂ ಪುರಂಧಿಂ ಸೋಮಮತೋಽಸ್ಮಾಚ್ಛ್ಯೇನಾದ್ಯೋತಕಃ। ಸೋಮಪಾಲಾ ವಿಕ್ಷಿಪ್ತವಂತಃ। ಯದ್ಯದಾಸ್ತ ಶರಾಣಾಂ ಕ್ಷೇಪ್ತಾ ಮನಸಾ ಮನೋವೇಗೇನ ಭುರಣ್ಯನ್ ಗಂತುಮಿಚ್ಛನ್ ಕೃಶಾನುರೇತನ್ನಾಮಕಃ ಸೋಮಪಾಲೋ ಜ್ಯಾಂ ಧನುಷಃ ಕೋಟೌ ಮೌರ್ವೀಂ ಕ್ಷಿಪದ್ಧ। ಚಿಕ್ಷೇಪ ಖಲು। ಅಸ್ಮೈ ಶ್ಯೇನಾಯ ಶರಮವಾಸೃಜತ್। ತ್ಯಕ್ತವಾನ್। ತಥಾ ಚ ಬ್ರಾಹ್ಮಣಂ। ತಸ್ಯಾ ಅನುವಿಸೃಜ್ಯ ಕೃಶಾನುಃ ಸೋಮಪಾಲಃ ಸವ್ಯಸ್ಯ ಪದೋ ನಖಮಚ್ಛಿದದಿತ್ಯಾದಿ। ಐ. ಬ್ರಾ. ೩-೨೬। ಯದಾ ಸೋಮಪಾಲಾ ಇತ್ಥಮಿತ್ಥಂ ಚೆಕ್ರುಸ್ತದಾ ಶ್ಯೇನಃ ಸೋಮಮಾಜಹಾರೇತ್ಯೃಚೋತ್ತರಯಾ ಸಂಬಂಧಃ॥

॥ ಪ್ರತಿಪದಾರ್ಥ ॥

ಅಧ—ಸೋಮಾಹರಣಕಾಲದಲ್ಲಿ। **ಯತ್**—ಯಾವಾಗ। **ಶ್ಯೇನಃ**—ಶ್ಯೇನಪಕ್ಷಿಯು। **ದ್ಯೋಃ**—ದ್ಯುಲೋಕದಿಂದ। **ಅವ ಅಸ್ವನೀತ್**—ಕೆಳಕ್ಕೆ ಇಳಿದು ಬರುವ ಶಬ್ದವನ್ನು ಮಾಡಿತೋ। **ಯದಿ ವಾ**—ಯಾವಾಗತಾನೇ। **ಯತ್ ಪುರಂಧಿಂ**—ಯಾವ ಅದೇ ಸೋಮವನ್ನು। **ಅತಃ**—ಈ ಶ್ಯೇನದಿಂದ। **ವಿ ಊಹುಃ**—ಅಪಹೃತವಾದುದನ್ನಾಗಿ ತಿಳಿದರೋ। **ಯತ್**—ಯಾವಾಗ। **ಅಸ್ತಾ**—ಶರಗಳನ್ನು ಬಿಡಲು। **ಮನಸಾ**—ಮನೋವೇಗದಿಂದ। **ಭುರಣ್ಯನ್**—ಅಟ್ಟಿಸಿಕೊಂಡು ಹೋಗಲಿಚ್ಛಿಸಿ। **ಕೃಶಾನುಃ**—ಕೃಶಾನುವೆಂಬ ಸೋಮಪಾಲಕನು। **ಜ್ಯಾಂ**—ಧನುಸ್ಸಿನ ಹೆದೆಯನ್ನು। **ಕ್ಷಿಪತ್ ಹ**—ಧನುಸ್ಸಿನಲ್ಲಿ ಸೇರಿಸಿದನೋ (ಆಗ)। **ಅಸ್ಮೈ**—ಶ್ಯೇನವನ್ನು ಲಕ್ಷಿಸಿ। **ಅವ ಅಸೃಜತ್**—ಬಾಣವನ್ನು ಬಿಟ್ಟನು

॥ ಭಾವಾರ್ಥ ॥

ಸೋಮಾಹರಣಕಾಲದಲ್ಲಿ ದ್ಯುಲೋಕದಿಂದ ಇಳಿದುಬರುತ್ತಿರುವ ಶ್ಯೇನವು ಶಬ್ದಮಾಡಿದಾಗಲೇ ಸೋಮಪಾಲಕರಿಗೆ ಸೋಮವು ಅಪಹೃತವಾಯಿತೆಂದು ತಿಳಿಯಿತು ಆಗ ಇದನ್ನಟ್ಟಿಸಿಕೊಂಡು ಕೃಶಾನುವೆಂಬ ಸೋಮಪಾಲಕನು ಮನೋವೇಗದಿಂದ ಓಡಿಬರುತ್ತಾ ತನ್ನ ಧನುಸ್ಸಿನಲ್ಲಿ ಹೆದೆಯನ್ನು ಸೇರಿಸಿದನು. ಮತ್ತು ಶ್ಯೇನವನ್ನು ಲಕ್ಷಿಸಿ ಬಾಣವನ್ನು ಬಿಟ್ಟನು

English Translation

When the hawk screamed (wita exultation) on his descent from heaven, and (the guardians of the Soma) perceived that the Soma was (carried away) by it, then, the archer Krishanu, pursuing with the speed of thought, and stringing his bow, let fly an arrow against it

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ, ಮುಂದಿನ ಋಕ್ಕಿನಲ್ಲಿಯೂ ಶ್ಯೇನಪಕ್ಷಿಯು ಸ್ವರ್ಗದಲ್ಲಿದ್ದ ಸೋಮವನ್ನು ಭೂಮಿಗೆ ತಂದ ವಿಷಯವೂ, ಅದನ್ನು ತರುವ ಕಾಲದಲ್ಲಿ ಸೋಮಪಾಲಕರಾದ ಕೃಶಾನುವೇ ಮೊದಲಾದವರು ಶ್ಯೇನಪಕ್ಷಿಯನ್ನು

ಎದುರಿಸಿ ಬಾಣವನ್ನು ಬಿಟ್ಟು ಅದರ ರೆಕ್ಕೆಯನ್ನು ಕತ್ತರಿಸಿದ ವಿಷಯವೂ ಹೇಳಲ್ಪಟ್ಟಿರುವುದು ಶ್ಯೇನಪಕ್ಷಿಯು ಸೋಮವನ್ನು ತಂದ ವಿಧಾನವನ್ನು ನಾವು ಹಿಂದೆಯೇ ವಿವರಿಸಿದೇವೆ. ಆದರೆ ಆ ಕಾಲದಲ್ಲಿ ಕೃಶಾನು ಮೊದಲಾದವರ ಪ್ರತಿಭಟನೆಯನ್ನು ಪರಿಹರಿಸಿದ ವಿಷಯವನ್ನು ವಿವರಿಸಿಲ್ಲ ಆದ್ದರಿಂದ ಆ ವಿಷಯವನ್ನು ಐತರೇಯಬ್ರಾಹ್ಮಣದಲ್ಲಿರುವಂತೆ ಸೂಕ್ಷ್ಮವಾಗಿ ಇಲ್ಲಿ ವಿವರಿಸಲಾಗುವುದು—

ಸೋಮಾಹರಣೋಪಾಖ್ಯಾನ

ಸೋಮೋ ವೈ ರಾಜಾಮುಷ್ಮಿಂಲ್ಲೋಕ ಆಸೀತ್ತಂ ದೇವಾಶ್ಚ ಋಷಯಶ್ಚಾಭ್ಯಧ್ಯಾಯನ್ ಕಥಮಯಮಸ್ಮಾತ್ಸೋಮೋ ರಾಜಾಗಚ್ಛೇದಿತಿ ತೇಽಬ್ರುವಂಶ್ಛಂದಾಂಸಿ ಯೂಯಂ ನ ಇಮಂ ಸೋಮಂ ರಾಜಾನಮಾಹರತೇತಿ ತಥೇತಿ ತೇ ಸುಪರ್ಣಾ ಭೂತ್ವೋದಪತಂಸ್ತೇ ಯತ್ಸುಪರ್ಣಾ ಭೂತ್ವೋದಪತಂಸ್ತದೇತತ್ಸೌಪರ್ಣಮಿತ್ಯಾಖ್ಯಾನವಿದ ಆಚಕ್ಷತೇ ।

(ಐ. ಬ್ರಾ. ೧೩-೩೫)

ಪೂರ್ವದಲ್ಲಿ ಸೋಮರಾಜನು (ಸೋಮಲತೆಯು, ಗೌಣವಾರ್ಥವಾಗಿ ಸೋಮಲತೆಯನ್ನು ಸೋಮರಾಜನೆಂದು ಕರೆಯುವ ರೂಢಿ ಇದೆ) ಎಂದರೆ ಸೋಮಲತೆಯು ಸ್ವರ್ಗಲೋಕದಲ್ಲಿದ್ದಿತು. ಈ ಲೋಕದಲ್ಲಿರಲಿಲ್ಲ ಇದನ್ನು ತಿಳಿದು ದೇವತೆಗಳೂ ಋಷಿಗಳೂ ಈ ಸೋಮವನ್ನು ಇಲ್ಲಿಗೆ ತರುವ ಬಗೆ ಹೇಗೆ ಎಂದು ಆಲೋಚಿಸಿದರು. ಬಳಿಕ ಅವರು ಈ ವಿಚಾರವನ್ನು ವಿಮರ್ಶೆ-ಮಾಡಿ ಸೋಮವನ್ನು ಸ್ವರ್ಗದಿಂದ ಭೂಮಿಗೆ ತರುವ ಶಕ್ತಿಯು ಛಂದಸ್ಸುಗಳಿಗೆ ಇರುವುದೆಂದು ತಿಳಿದು ಛಂದಸ್ಸುಗಳನ್ನು ಕುರಿತು—ಎಲೈ ಛಂದಸ್ಸುಗಳೇ, ನಮಗೋಸ್ಕರ ಎಂದರೆ ನಮ್ಮ ಯಜ್ಞದಲ್ಲಿ ಉಪಯೋಗಿಸುವುದಕ್ಕೋಸ್ಕರ ಸ್ವರ್ಗದಲ್ಲಿರುವ ಸೋಮವನ್ನು ಭೂಮಿಗೆ ತರಬೇಕೆಂದು ಪ್ರಾರ್ಥಿಸಿದರು. ಅವರ ಪ್ರಾರ್ಥನೆಯನ್ನಂಗೀಕರಿಸಿ ಛಂದಸ್ಸುಗಳು ಲೋಕದಲ್ಲಿ ಪ್ರಸಿದ್ಧವಾಗಿರುವ ಕೆಲವು ಪಕ್ಷಿಗಳ ರೂಪಗಳನ್ನು ಧರಿಸಿ ಸ್ವರ್ಗಲೋಕಕ್ಕೆ ಹಾರಿಹೋದವು. ರೆಕ್ಕೆಗಳಿಂದ ಕೂಡಿದ ಪಕ್ಷಿಗಳಿಗೆ ಸುಪರ್ಣವೆಂದು ಹೆಸರಿರುವುದರಿಂದಲೂ ಈ ಪಕ್ಷಿಗಳು ಸೋಮಾಹರಣದಲ್ಲಿ ಪ್ರವೃತ್ತಿಸಿದ್ದರಿಂದಲೂ ಈ ಸೋಮಾಹರಣವೆಂಬ ಉಪಾಖ್ಯಾನಕ್ಕೆ ಸೌಪರ್ಣಾಖ್ಯಾನವೆಂದು ಕರೆಯುವುದು ಪುರಾಣಾದಿಗಳಲ್ಲಿ ಪ್ರಸಿದ್ಧವಾಗಿದೆ

ಛಂದಾಂಸಿ ವೈ ತತ್ಸೋಮಂ ರಾಜಾನಮಬ್ರುವಂಸ್ತಾನಿ ಹ ತರ್ಹಿ ಚತುರಕ್ಷರಾಣಿ ಚತುರಕ್ಷರಾಣ್ಯೇವ ಛಂದಾಂಸ್ಯಾಸನ್ತಾ ಜಗತೀ ಚತುರಕ್ಷರಾ ಪ್ರಥಮೋದಪತತ್ತಾ ಪತಿತ್ವಾರ್ಧಮಧ್ವನೋ ಗತ್ವಾಶ್ರಾಮ್ಯತ್ತಾ ಪರಾಸ್ಯ ತ್ರೀಣ್ಯಕ್ಷರಾಣ್ಯೇಕಾಕ್ಷರಾ ಭೂತ್ವಾ ದೀಕ್ಷಾಂ ಚ ತಪಶ್ಚ ಹರಂತೀ ಪುನರಭ್ಯವಾಪತತ್ತತ್ಸ್ಯಾತ್ತಸ್ಯ ವಿತ್ತಾ ದೀಕ್ಷಾ ವಿತ್ತಂ ತಪೋ ಯಸ್ಯ ಪಶವಃ ಸಂತಿ ಜಾಗತಾ ಹಿ ಪಶವೋ ಜಗತೀ ಹಿ ತಾನಾಹರತ್ ॥

(ಐ. ಬ್ರಾ ೧೩-೩೫)

ಬಳಿಕ ಗಾಯತ್ರಿಯೇ ಮೊದಲಾದ ಛಂದಸ್ಸುಗಳು ಪಕ್ಷಿರೂಪಗಳನ್ನು ಧರಿಸಿ ಸ್ವರ್ಗಲೋಕಕ್ಕೆ ಹಾರಿಹೋಗಲು ಸಿದ್ಧವಾದವು. ಆ ಕಾಲದಲ್ಲಿ ಗಾಯತ್ರಿಯೇ ಮೊದಲಾದ ಎಲ್ಲಾ ಛಂದಸ್ಸುಗಳಿಗೂ (ಪ್ರತಿಪಾದದಲ್ಲಿಯೂ) ನಾಲ್ಕು ಅಕ್ಷರಗಳು ಮಾತ್ರ ಇದ್ದುವು. ಯಾವ ಛಂದಸ್ಸಿಗೂ ನಾಲ್ಕು ಅಕ್ಷರಗಳಿಗಿಂತ ಹೆಚ್ಚಾಗಿರಲಿಲ್ಲ ಮೊದಲು ಜಗತೀ

ಛಂದಸ್ಸು ತಾನು ಸೋಮವನ್ನು ತರುತ್ತೇನೆಂದು ಹೇಳಿ ಸೋಮವಿರುವ ಸ್ವರ್ಗವನ್ನು ಕುರಿತು ಹಾರಿಹೋಯಿತು. ಅರ್ಧದಾರಿ ಹಾರಿಹೋಗುವಷ್ಟರಲ್ಲಿ ಅವ. ಆಯಾಸದಿಂದ ಬಳಲಿ ಮುಂದಕ್ಕೆ ಹಾರಿಹೋಗಲು ಶಕ್ತಿಯಿಲ್ಲದೆ ಹಿಂತಿರುಗ ಬೇಕಾಯಿತು. ಅಷ್ಟು ದೂರ ಹೋದ ಆಯಾಸದಿಂದ ಜಗತೀಛಂದಸ್ಸಿನಲ್ಲಿದ್ದ ನಾಲ್ಕು ಅಕ್ಷರಗಳಲ್ಲಿ ಮೂರು ಅಕ್ಷರ ಗಳನ್ನು ಕಳೆದುಕೊಂಡಿತು ಉಳಿದ ಒಂದೆ ಅಕ್ಷರದಿಂದ ಹಿಂತಿರುಗಬೇಕಾಯಿತು ಈ ರೀತಿ ಸೋಮವನ್ನು ತರಲು ಶಕ್ತಿಯಿಲ್ಲದೆ ಹಿಂತಿರುಗಿ ಬರುವಾಗ ತನ್ನ ಜತೆಯಲ್ಲಿ ಸೋಮಯಾಗಸಂಬಂಧವಾದ ದೀಕ್ಷೆಯನ್ನೂ ಎಂದರೆ ದೀಕ್ಷಣೀಯೇಷ್ಟಿರೂಪವಾದ ದೀಕ್ಷಾವಿಧಿಯನ್ನೂ ಕ್ಷೀರಪಾನಾದಿರೂಪವಾದ ತಪಸ್ಸನ್ನೂ ತಂದಿತು ಆದ್ದರಿಂದ ಜಗತೀಛಂದಸ್ಸಿನ ಋಕ್ಕುಗಳಿಂದ ದೀಕ್ಷೆಯನ್ನು ಕೈಗೊಳ್ಳುವರು ಜಗತೀಛಂದಸ್ಸಿಗೆ ಪಶುಸಂಪತ್ತನ್ನು ವೃದ್ಧಿ ಪಡಿಸುವ ಶಕ್ತಿ ಇರುವುದು ಆದ್ದರಿಂದ ಪಶುಸಂಪತ್ತುಳ್ಳ ಪುರುಷನಿಗೆ ದೀಕ್ಷೆಯೂ ಧನವೂ ಸುಲಭವಾಗಿ ದೊರೆಯು ವುದು ಜಗತೀಛಂದಸ್ಸು ಪಶುಗಳನ್ನು ತಂದದ್ದರಿಂದ ಜಗತೀಛಂದಸ್ಸಿಗೆ ಪಶುಗಳನ್ನು ಕೊಡುವ ಶಕ್ತಿ ಇರುವುದೆಂದು **ಸಾ ಪಶುಭಿಶ್ಚ ದೀಕ್ಷಯಾ ಚಾಗಚ್ಛತ್ತಸ್ಮಾಜ್ಜಗತೀಛಂದಸಾಂ ಪಶವ್ಯತಮಾ ತಸ್ಮಾತ್ಪಶುಮಂತಂ ದೀಕ್ಷೋ-ಪನಮತಿ** (ತೈ ಸಂ ೬-೧-೬-೫) ಎಂದು ಯಜುರ್ವೇದದಲ್ಲಿ ಹೇಳಿದೆ

ಅಥ ತ್ರಿಷ್ಟುಬುದಪತತ್ಸಾ ಪತಿತ್ವಾ ಭೂಯೋಽರ್ಧಾದಧ್ವನೋ ಗತ್ವಾಶ್ರಾಮ್ಯತ್ತಾ ಪರಾಸ್ಯೈಕ-ಮಕ್ಷರಂ ತ್ರ್ಯಕ್ಷರಾ ಭೂತ್ವಾ ದಕ್ಷಿಣಾ ಹರಂತೀ ಪುನರಭ್ಯವಾಪತತ್ತೆ ಸ್ಮಾನ್ಮಧ್ಯಂದಿನೇ ದಕ್ಷಿಣಾ ನೀಯಂತೇ ತ್ರಿಷ್ಟುಭೋ ಲೋಕೇ ತ್ರಿಷ್ಟುಭ್ಭಿ ತಾ ಆಹರತ್ ॥

(ಐ ಬ್ರಾ ೧೩-೨೫)

ಬಳಿಕ ತ್ರಿಷ್ಟುಪ್‌ಛಂದಸ್ಸು ತಾನು ಸೋಮನನ್ನು ತರುತ್ತೇನೆಂದು ಹೇಳಿ ಅಂತರಿಕ್ಷಕ್ಕೆ ನೆಗೆಯಿತು ಆದರೆ ಅರ್ಧ ದಾರಿಗಿಂತ ಸ್ವಲ್ಪ ದೂರ ಹೋಗುವುದರೊಳಗಾಗಿ ಆಯಾಸದಿಂದ ಬಳಲಿ, ತನ್ನಲ್ಲಿದ್ದ ನಾಲ್ಕು ಅಕ್ಷರಗಳಲ್ಲಿ ಒಂದನ್ನು ಅಲ್ಲಿಯೇ ಬಿಟ್ಟು ಉಳಿದ ಮೂರು ಅಕ್ಷರಗಳೊಡನೆ ಹಿಂತಿರುಗಿತು ಬರುವಾಗ ದಕ್ಷಿಣೆಯನ್ನು (ಯಜ್ಞದಲ್ಲಿ ಋತ್ವಿಗ್ಜನರಿಗೆ ಕೊಡುವ ದಕ್ಷಿಣಾರ್ಹವನ್ನು) ತನ್ನ ಜತೆಯಲ್ಲಿ ತಂದಿತು ಈ ರೀತಿ ತ್ರಿಷ್ಟುಪ್‌ಛಂದಸ್ಸು ದಕ್ಷಿಣೆಯನ್ನು ತಂದದ್ದರಿಂದಲೂ, ತ್ರಿಷ್ಟುಪ್‌ಛಂದಸ್ಸಿಗೂ ಮಾಧ್ಯಂದಿನಸವನಕ್ಕೂ ಸಂಬಂಧವಿರುವುದರಿಂದಲೂ, ಯಜ್ಞದಲ್ಲಿ ನೆರನೇರುವ ಮಾಧ್ಯಂದಿನಸವನಕಾಲದಲ್ಲಿ ಋತ್ವಿಗ್ಜನರಿಗೆ ದಕ್ಷಿಣೆಯನ್ನು (ಸಂಭಾವನೆ) ಕೊಡುವ ಪದ್ಧತಿ ಇರುವುದು

ತೇ ದೇವಾ ಅಬ್ರುವನ್ ಗಾಯತ್ರೀಂ ತ್ವಂ ನ ಇಮಂ ಸೋಮಂ ರಾಜಾನಮಾಹರೇತಿ ಸಾ ತಥೇತ್ಯಬ್ರವೀತ್ತಾಂ ವೈ ಮಾ ಸರ್ವೇಣ ಸ್ವಸ್ತ್ಯಯನೇನಾನುಮಂತ್ರಯಧ್ವಮಿತಿ ತಥೇತಿ ಸೋದಪತತ್ತಾಂ ದೇವಾಃ ಸರ್ವೇಣ ಸ್ವಸ್ತ್ಯಯನೇನಾನ್ವಮಂತ್ರಯಂತ ಪ್ರೇತಿ ಚೇತಿ ಚೇತ್ಯೇತದ್ವೈ ಸರ್ವಂ ಸ್ವಸ್ತ್ಯಯನಂ ಯದ್ವೈತಿ ಚೇತಿ ತದ್ಯೋಽಸ್ಯ ಪ್ರಿಯಃ ಸ್ಯಾತ್ತಮೇ-ತೇನಾನುಮಂತ್ರಯೇತ ಪ್ರೇತಿ ಚೇತಿ ಚೇತಿ ಸ್ವಸ್ತ್ಯೇವ ಗಚ್ಛತಿ ಸ್ವಸ್ತಿ ಪುನರಾಗಚ್ಛತಿ ॥

(ಐ ಬ್ರಾ ೧೩-೨೬)

ಜಗತೀ ಮತ್ತು ತ್ರಿಷ್ಟುಪ್‌ಛಂದಸ್ಸುಗಳು ಸೋಮವನ್ನು ತರಲು ಸಾಮರ್ಥ್ಯವಿಲ್ಲದೆ ಹಿಂತಿರುಗಿ ಬಂದದ್ದನ್ನು ದೇವತೆಗಳು ನೋಡಿ ಗಾಯತ್ರೀಛಂದಸ್ಸಿನ ಸವಿಾಪಕ್ಕೆ ಹೋಗಿ—ಎಲೈ ಗಾಯತ್ರಿಯೇ, ನನುಗಾಗಿ ನೀನು ಸ್ವರ್ಗದಿಂದ ಸೋಮ

ವನ್ನು ತರಬೇಕೆಂದು ಪ್ರಾರ್ಥಿಸಿದರು ಗಾಯತ್ರಿಯು ಹಾಗೆಯೇ ಆಗಲೆಂದೊಪ್ಪಿ ದೇವತೆಗಳನ್ನು ಕುರಿತು—ಎಲ್ಲೆ ದೇವತೆಗಳೇ, ನಿಮ್ಮ ಮಾತಿನಂತೆ ನಾನು ಸೋಮವನ್ನು ತರಲು ಸ್ವರ್ಗಕ್ಕೆ ಹೋಗುವೆನು. ಆದರೆ ನಾನು ಪ್ರಯಾಣ ಮಾಡುವ ಕಾಲದಲ್ಲಿಯೂ, ನಾನು ಕ್ಷೇಮವಾಗಿ ಹಿಂತಿರುಗಿ ಬರುವುದಕ್ಕಾಗಿಯೂ ನೀವು ಆಶೀರ್ವಾದರೂಪವಾದ ಸ್ವಸ್ತ್ಯಯನಮಂತ್ರಗಳನ್ನು ಜಪಿಸುತ್ತಾ ನಾನು ಕ್ಷೇಮವಾಗಿ ಹಿಂತಿರುಗಿ ಬರಬೇಕೆಂದು ನಾನು ಬರುವವರಿಗೂ ಪ್ರಾರ್ಥಿಸುತ್ತಿರಬೇಕು. ಎಂದು ಹೇಳಿ ಶ್ಯೇನಪಕ್ಷಿಯ ರೂಪವನ್ನು ಧರಿಸಿ ಅಂತರಿಕ್ಷ ಮಾರ್ಗವಾಗಿ ಹಾರಿಹೋಯಿತು. ದೇವತೆಗಳು ಹಾಗೆಯೇ ಆಗಲೆಂದು ಅದರ ಮಾತನ್ನಂಗೀಕರಿಸಿ, ಗಾಯತ್ರಿಯು ಕ್ಷೇಮವಾಗಿ ಹಿಂತಿರುಗಿ ಬರಲೆಂದು ಸ್ವಸ್ತ್ಯಯನಮಂತ್ರಗಳನ್ನೂ ಜಪಿಸುತ್ತಿದ್ದರು ಆ ಮಂತ್ರವು ಯಾವುದೆಂದರೆ **ಸ್ಯಾ ಚ ಚೆ** ಎಂದು, ಎಲ್ಲಿ **ಶ್ರೈ** ಎಂಬುದು ಒಂದು ಮಂತ್ರ, ಆ ಎಂಬುದು ಎರಡನೆಯ ಮಂತ್ರ ಇವೆರಡನ್ನೂ ಸೇರಿಸುವ ಸಮುಚ್ಚಯಾರ್ಥವನ್ನು ಸೂಚಿಸುವುದ ಕ್ಕಾಗಿ ಎರಡು ಚಕಾರಗಳಿರುವವು. ಕ್ಷೇಮವಾಗಿ ಸೋಮವಿದ್ದೆಡೆಗೆ ಹೋಗಿ ಅದನ್ನು ತೆಗೆದುಕೊಂಡು ಪುನಃ ಹಿಂದಕ್ಕೆ ಸುರಕ್ಷಿತವಾಗಿ ಬಾ ಎಂದು ಈ ಮಂತ್ರಗಳ ಅರ್ಥವು ಇದಕ್ಕಿಂತಲೂ ಉತ್ತಮವಾದ ಸ್ವಸ್ತ್ಯಯನಮಂತ್ರವಿರುವುದಿಲ್ಲ ಆದ್ದರಿಂದ ಲೋಕದಲ್ಲಿ ಸ್ನೇಹಿತರು, ಬಂಧುಗಳು ಮುಂತಾದವರು ಪ್ರಯಾಣಮಾಡಬೇಕಾದ ಸಂದರ್ಭದಲ್ಲಿ ಈ ಮಂತ್ರವನ್ನು ಪಠಿಸುವರು ಈ ಮಂತ್ರಪಠನಸಾಮರ್ಥ್ಯದಿಂದ ಪ್ರಯಾಣಮಾಡಿದವರು ಸುರಕ್ಷಿತವಾಗಿ ಹಿಂದಕ್ಕೆ ಬಂದು ಸೇರುವರು ಎಂದು ಪ್ರಸಿದ್ಧಿಯು.

ಸಾ ಪತಿತ್ವಾ ಸೋಮಪಾಲಾನ್ ಭೀಷಯಿತ್ವಾ ಪದಾ೭೭೦ ಚ ಮುಖೇನ ಚ ಸೋಮಂ ರಾಜಾನಂ ಸಮಗೃಭ್ಣಾದ್ಯಾನಿ ಚೇತರೇ ಛಂದಸೀ ಅಕ್ಷರಾಣ್ಯಜಹಿತಾಂ ತಾನಿ ಚೋಪಸಮಗೃಭ್ಣತ್ ॥

ಬಳಿಕ ಶ್ಯೇನಪಕ್ಷಿರೂಪದಲ್ಲಿದ್ದ ಗಾಯತ್ರಿಯು ಸ್ವರ್ಗಕ್ಕೆ ಹಾರಿಹೋಗಿ ಅಲ್ಲಿ ಸೋಮವನ್ನು ಕಾಯುತ್ತಿದ್ದ ಸ್ಯಾನ, ಭ್ರಾಜ ಮೊದಲಾದ ಸೋಮಪಾಲಕರನ್ನು ತನ್ನ ಕರ್ಕಶವಾದ ಧ್ವನಿಯಿಂದಲೂ, ತೀಕ್ಷ್ಣವಾದ ಕೊಕ್ಕೆ, ಉಗುರು ಮೊದಲಾದ ಆಯುಧಗಳಿಂದಲೂ ಹೆದರಿಸಿತು ಅದನ್ನು ನೋಡಿ ಸೋಮಪಾಲಕರು ಸ್ವಲ್ಪದೂರ ಓಡಿಹೋಗಲು ಆಗ ಶ್ಯೇನಪಕ್ಷಿಯು ಅಲ್ಲಿದ್ದ ಸೋಮವನ್ನು (ಸೋಮಲತೆಗಳನ್ನು) ತನ್ನ ಎರಡು ಕಾಲುಗಳಿಂದಲೂ, ಕೊಕ್ಕೆಸಿಂದಲೂ ಕಚ್ಚಿ ಹಿಡಿದುಕೊಂಡು ಹಿಂದಕ್ಕೆ ಎಂದರೆ ಭೂಮಿಗೆ ಹಾರಿಬರಲು ಪ್ರಯತ್ನಿಸಿತು. ಸ್ವರ್ಗದಲ್ಲಿ ಸೋಮವನ್ನು ರಕ್ಷಿಸುತ್ತಿದ್ದ ಸೋಮಪಾಲಕರು ಯಾರು? ಅವರ ಹೆಸರುಗಳೇನು? ಎಂಬ ವಿಷಯವನ್ನು--

ಸ್ಯಾನ ಭ್ರಾಜಾಂಶ್ಚಾರೇ ಬಂಭಾರೇ ಹಸ್ತ ಸುಹಸ್ತ ಕೃಶಾನವೇತೇ ವಃ ಸೋಮಕ್ರಯಣಾಸ್ತಾನ್ ರಕ್ಷಧ್ವಂ ಮಾ ವೋ ದಭನ್

(ತೈ. ಸಂ ೧-೨-೭-೧)

ಸ್ಯಾನ ಭ್ರಾಜೇತ್ಯಾಹೈತೇ ವಾ ಅಮುಷ್ಮಿನ್ ಲೋಕೇ ಸೋಮಮರಕ್ಷನ್

(ತೈ ಸಂ ೬-೧-೧೦-೫)

ಎಂಬ ಯಜುರ್ವೇದ ಮಂತ್ರಗಳಲ್ಲಿ ಹೇಳಿರುವುದು. ಎಂದರೆ—**ಸ್ಯಾನ, ಭ್ರಾಜ, ಅಂಶ್ಚಾರಿ, ಬಂಭಾರಿ, ಹಸ್ತ, ಸುಹಸ್ತ, ಕೃಶಾನು** ಎಂಬುವರು ಸೋಮಪಾಲಕರು. ಎಲ್ಲೆ ಸೋಮಪಾಲಕರೇ ನಿಮ್ಮ ಆಧೀನದಲ್ಲಿರುವ ಈ ಸೋಮ ವನ್ನು ಯಾರೂ ಅಪಹರಿಸದಂತೆ ಅದನ್ನು ಜಾಗರೂಕತೆಯಿಂದ ರಕ್ಷಿಸಿ, ಎಂದು ಮೊದಲನೆಯ ಮಂತ್ರದ ಅರ್ಥವು. ಸ್ಯಾನ, ಭ್ರಾಜ ಮೊದಲಾದ ಸೋಮರಕ್ಷಕರು ಸ್ವರ್ಗದಲ್ಲಿದ್ದ ಸೋಮವನ್ನು ರಕ್ಷಿಸುತ್ತಿದ್ದರು ಎಂದು ಎರಡನೆಯ ಮಂತ್ರದ

ಅರ್ಥವು. ಮೇಲೆ ಹೇಳಿದ ಸ್ವಾನ, ಭ್ರಾಜ ಮೊದಲಾದ ಸೋಮಪಾಲಕರ ರಕ್ಷಣೆಗೊಳಪಟ್ಟಿದ್ದ ಸೋಮವನ್ನು **ಶ್ಯೇನಪಕ್ಷಿಯು ಈರೀತಿ ಅಪಹರಿಸಿ ಭೂಮಿಗೆ ತರುವಾಗ ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸುಗಳು ಕಳೆದುಕೊಂಡಿದ್ದ** ನಾಲ್ಕು ಅಕ್ಷರಗಳನ್ನು ಹಿಂದಕ್ಕೆ ತಂದಿತು. ಈ ನಾಲ್ಕು ಅಕ್ಷರಗಳೂ, ಗಾಯತ್ರಿಗೆ ಪೂರ್ವದಲ್ಲಿದ್ದ ನಾಲ್ಕು ಅಕ್ಷರಗಳೂ ಸೇರಿ ಗಾಯತ್ರಿಯ ಪಾದಕ್ಕೆ ಎಂಟಕ್ಷರಗಳಾದವು

ತಸ್ಯಾ ಅನು ವಿಸೃಜ್ಯ ಕೃಶಾನುಃ ಸೋಮಪಾಲಃ ಸವ್ಯಸ್ಯ ಪದೋ ನಖಮಚ್ಛಿದತ್ತಚ್ಛಲ್ಯ-ಕೋ೨ಭವತ್ತಸ್ಮಾತ್ಸ ನಖಮಿವ ಯದ್ವಶಮಸ್ರವತ್ಸಾ ವಶಾಭವತ್ತಸ್ಮಾತ್ಸಾ ಹವಿರಿವಾಥ ಯಃ ಶಲ್ಯೋ ಯದನೀಕಮಾಸೀತ್ಸ ಸರ್ಪೋ೨ ನಿರ್ದಂಶ್ಯಭವತ್ಸಹಸಃ ಸ್ಪಜೋ ಯಾನಿ ಪರ್ಣಾನಿ ತೇ ಮಂಥಾವಲಾ ಯಾನಿ ಸ್ನಾವಾನಿ ತೇ ಗಂಡೂಪದಾ ಯತ್ತೇಜನಂ ಸೋ೨ನ್ಧಾಹಿಃ ಸೋ ಸಾ ತಥೇಷುರಭವತ್ ॥

(ಐ. ಬ್ರಾ ೧೩-೨೬)

ಸ್ವರ್ಗದಲ್ಲಿ ಸೋಮವನ್ನು ರಕ್ಷಿಸುತ್ತಿದ್ದ ಗಂಧರ್ವರು ಸ್ವಾನ, ಭ್ರಾಜ ಮೊದಲಾದ ಏಳುಮಂದಿ ಇವರಲ್ಲಿ ಕೃಶಾನು ಎಂಬುವನು ಏಳನೆಯವನು. ಈ ಕೃಶಾನುವು-- ಗಾಯತ್ರಿಯು ಶ್ಯೇನರೂಪದಿಂದ ಸೋಮವನ್ನು ಅಪಹರಿಸಿಕೊಂಡು ಹೋಗುತ್ತಿರುವುದನ್ನು ನೋಡಿ, ಅದನ್ನು ಅಟ್ಟಿಸಿಕೊಂಡು ಹೋಗಿ ಆದನ್ನು ಹಿಡಿಯಲು ಸಾಧ್ಯವಾಗದ್ದರಿಂದ ತನ್ನ ಕೈಲಿದ್ದ ಧನುಸ್ಸಿನಿಂದ ಒಂದು ಬಾಣವನ್ನು ಬಿಟ್ಟನು ಆದು ಆ ಶ್ಯೇನಪಕ್ಷಿಯ ಎಡಗಾಲಿನ ಉಗುರಿಗೆ ತಗಲಿ ಆದು ಕತ್ತರಿಸಿಹೋಯಿತು. ಕತ್ತರಿಸಿಹೋದ ಆ ನಖವು (ಉಗುರು) ಒಂದು ಕೋತಿಯ ಗಾತ್ರವಿರುವ ಒಂದು ಮುಳ್ಳು ಹಂದಿಯಾಗಿ (Porcupine) ಪರಿಣಮಿಸಿತು ಈ ಮುಳ್ಳುಹಂದಿಯ ಪೃಷ್ಠಾಗ್ರಭಾಗದಲ್ಲಿ ಪ್ರಾದೇಶಮಾತ್ರ ಪರಿಮಿತವಾದ ತೀಕ್ಷ್ಣಾಗ್ರಭಾಗವುಳ್ಳ ಮತ್ತು ಕಬ್ಬಿಣದ ಸಲಾಕೆಗಳಂತೆ ಕಠಿನವಾಗಿಯೂ ಮೊನುಚಾಗಿಯೂ ಇರುವ ಅನೇಕ ಮುಳ್ಳುಗಳಿರುವವು. ಇಂತಹ ಮೃಗಕ್ಕೆ ಶಲ್ಯ ಅಥವಾ ಶಲ್ಯಕ (ಮುಳ್ಳುಹಂದಿ) ಎಂದು ಹೆಸರು. ಈ ಮೃಗವು ಶ್ಯೇನಪಕ್ಷಿಯ ಕತ್ತರಿಸಿದ ನಖದಿಂದ ಉತ್ಪನ್ನವಾದಕಾರಣ ಇದರ ಮುಳ್ಳುಗಳು ಉಗುರಿನಂತೆ ಅತಿ ತೀಕ್ಷ್ಣವಾಗಿರುವವು. ಬಾಣದಿಂದ ಉಗುರು ಕತ್ತರಿಸಿ ಬೀಳುವಾಗ ಉಗುರಿನ ಸಮೀಪದಲ್ಲಿದ್ದ ದ್ರವರೂಪವಾದ ವಶಾ ಅಥವಾ ಮೇದಸ್ಸು ಸ್ರವಿಸುತ್ತಿದ್ದಿತು. ಈ ಮೇದಸ್ಸು ಅಜಾ, ಆವಿ (ಹೆಣ್ಣು ಆಡು) ಯಾಗಿ ಪರಿವರ್ತಿತವಾಯಿತು. ಶ್ಯೇನ ರೂಪದಲ್ಲಿದ್ದ ಗಾಯತ್ರಿಯಿಂದ ಈ ಆಜವು ಉತ್ಪನ್ನವಾದುದರಿಂದ ಇದು ದೇವತಾಯೋಗ್ಯವಾಗಿ ಯಜ್ಞಾದಿಗಳಲ್ಲಿ ಯೋಗ್ಯವಾದ ಹವಿಸ್ಸೆಂದು ನಿಶ್ಚಯಿಸಲ್ಪಟ್ಟಿತು ಯಜುರ್ವೇದಾದಿಗಳಲ್ಲಿ ಈ ವಿಷಯವು—**ವಿತಾಮೇವ ವಶಾ-ಮಾದಿತ್ಯೇಭ್ಯಃ ಕಾಮಾಯಾಲಭೇತ** ಇತ್ಯಾದಿ ಮಂತ್ರಗಳಿಂದ ನಿರ್ದೇಶಿಸಲ್ಪಟ್ಟಿರುವುದು. ಕೃಶಾನುವೆಂಬ ಗಂಧರ್ವನಿಂದ ಶ್ಯೇನಪಕ್ಷಿಯ ಮೇಲೆ ಬಿಟ್ಟ ಬಾಣವು ಅದರ ನಖವನ್ನು ಕತ್ತರಿಸುವಾಗ ಕಠಿಣವಾದ ನಖಕ್ಕೆ ತಗಲಿ, ಆ ಬಾಣದ ಮೊನುಚಾದ ತುದಿಯು ಮೊಡಾಯಿತು ಬಾಣದ ಶಲಾಕ ಅಥವಾ ಕಡ್ಡಿಯು ಕಚ್ಚಲು ಶಕ್ತಿಯಿಲ್ಲದ ಒಂದು ಸರ್ಪವಾಗಿ ಪರಿಣಮಿಸಿತು. ಇದಕ್ಕೆ ದುಂದುಭವೆಂದು ಹೆಸರು ಈ ದುಂದುಭವೆಂಬ ಸರ್ಪವು ಯಾವಾಗಲೂ ನೀರಿನಲ್ಲಿಯೇ ಸಂಚರಿಸುವ ಹಾವಾಗಿ ವಿಷವಿಲ್ಲದಿರುವುದರಿಂದ ಇದು ಯಾವ ಪ್ರಾಣಿಯನ್ನೂ ಕಚ್ಚಿ ಕೊಲ್ಲಲು ಸಮರ್ಥವಾಗಿರುವುದಿಲ್ಲ. ಬಾಣದ ಮೊನುಚಾಗಿರುವ ಲೋಹಮಯವಾದ (ಕಬ್ಬಿಣದ) ತುದಿಯು ತನ್ನ ಹರಿತವನ್ನು ಕಳೆದುಕೊಂಡು ಮೊಡಾಗಿ ಸ್ವಜವೆಂಬ ಎರಡು ಶಿರಸ್ಸುಗಳುಳ್ಳ ಹಾವಾಯಿತು. ಬಾಣವು ವೇಗವಾಗಿ ಹೋಗುವುದಕ್ಕಾಗಿ

ಅದರ ಬುಡದಲ್ಲಿ ಕಟ್ಟಿದ್ದ ಪಕ್ಷಿಯ ರೆಕ್ಕೆಗಳು ಆಲ ಮೊದಲಾದ ವೃಕ್ಷಗಳ ಬೀಳುಗಳಾದವು. ಆಲದ ಮರದ ಶಾಖೆಗಳಿಂದ ಅಧೋಮುಖವಾಗಿ ಬೀಳು ಬಿಟ್ಟು ಭೂಮಿಯನ್ನು ಸಂಸ್ಪರ್ಶಮಾಡಿ ಬೇರುಗಳಾಗುವ ಬೀಳು ಅಥವಾ ಜೋಲುಗಳಿಗೆ ಮಂಥಾವಲಾ ಎಂದು ಹೆಸರು. ಬಾಣದಲ್ಲಿ ಕಟ್ಟಿದ್ದ ರೆಕ್ಕೆಗಳೇ ಈ ಮಂಥಾವಲಗಳಾದವು. ಬಾಣಕ್ಕೆ ರೆಕ್ಕೆಗಳನ್ನು ಸೇರಿಸಿ ಕಟ್ಟಿದ್ದ ದಾರದಂತಿರುವ ಸ್ನಾಯುಗಳು (ನರಗಳು) ಗಂಡೂಪದವೆಂಬ ಕ್ರಿಮಿವಿಶೇಷಗಳಾದವು. ಆ ಬಾಣವನ್ನು ನಿರ್ಮಿಸುವುದಕ್ಕಾಗಿ ಉಪಯೋಗಿಸಿದ ಮರದ ಕಡ್ಡಿಯು ದೃಷ್ಟಿರಹಿತವಾದ, ಕಣ್ಣುಗಳಿಲ್ಲದ ಅಂಧಾಹಿಃ ಎಂಬ ಸರ್ಪವಾಯಿತು. ಕೃಶಾನುವೆಂಬ ಗಂಧರ್ವನಿಂದ ಬಿಟ್ಟ ಆ ಬಾಣವು ಮೇಲೆ ಹೇಳಿದ ಅನೇಕ ವಿಧ ಪ್ರಾಣಿಗಳಾದವು

ಸಾ ಯದ್ಪ್ರಕ್ಷಿಣೇನ ಪದಾ ಸಮಗೃಭ್ಣಾತ್ತತ್ಪ್ರಾತಃಸವನಮಭವತ್ತದ್ಗಾಯತ್ರೀ ಸ್ವಮಾಯತನಮಕುರುತ ತಸ್ಮಾತ್ತತ್ಸಮೃದ್ಧತಮಂ ಮನ್ಯಂತೇ ಸರ್ವೇಷಾಂ ಸವನಾನಾಮಗ್ರಿಯೋ ಮುಖ್ಯೋ ಭವತಿ ಶ್ರೇಷ್ಠತಾಮಶ್ನುತೇ ಯ ಏವಂ ವೇದಾಥ ಯತ್ಸವ್ಯೇನ ಪದಾ ಸಮಗೃಭ್ಣಾತ್ತನ್ಮಾಧ್ಯಂದಿನಂ ಸವನಮಭವತ್ತದ್ವಿಸ್ರಂಸತ ತದ್ವಿಸ್ರಸ್ತಂ ನಾನ್ಯಾಶ್ಚೋತ್ಪೂರ್ವಂ ಸವನಂ ತೇ ದೇವಾಃ ಪ್ರಾಜಿಜ್ಞಾಸಂತ ತಸ್ಮಿಂಸ್ತ್ರಿಷ್ಟುಭಂ ಛಂದಸಾಮದಧುರಿಂದ್ರಂ ದೇವತಾನಾಂ ತೇನ ತತ್ಸಮಾವದ್ವೀರ್ಯಮಭವತ್ಪೂರ್ವೇಣ ಸವನೇನೋಭಾಭ್ಯಾಂ ಸವನಾಭ್ಯಾಂ ಸಮಾವದ್ವೀರ್ಯಾಭ್ಯಾಂ ಸಮಾವಜ್ಜಾಯಾಭ್ಯಾಂ ರಾಧ್ನೋತಿ ಯ ಏವಂ ವೇದಾಥ ಯದ್ಬುಧ್ನೇನ ಸಮಗೃಭ್ಣಾತ್ತತ್ತೃತೀಯಸವನಮಭವತ್ ॥

ಶ್ಯೇನಪಕ್ಷಿಯು ಸ್ವರ್ಗದಿಂದ ಸೋಮವನ್ನು ತರುವಾಗ ಸೋಮಲತೆಗಳನ್ನು ತನ್ನ ಎರಡು ಕಾಲುಗಳಿಂದಲೂ, ಕೊಕ್ಕಿನಿಂದಲೂ ಕಚ್ಚಿಕೊಂಡು ತಂದಿತೆಂದು ಹಿಂದಯೇ ಹೇಳಿದೆಯಷ್ಟೆ ಆರೀತಿ ತರುತ್ತಿರುವಾಗ ಪಕ್ಷಿಯು ತನ್ನ ಬಲಗಾಲಿನಿಂದ ಹಿಡಿದುಕೊಂಡು ತಂದ ಸೋಮವು (ಅಥವಾ ಸೋಮಲತೆಯು) ಪ್ರಾತಃಸವನವಾಯಿತು. ಗಾಯತ್ರಿಯು ಅದನ್ನು ಎಂದರೆ ಪ್ರಾತಸ್ಸವನವನ್ನು ತನ್ನ ಸ್ವಕೀಯಸ್ಥಾನವನ್ನಾಗಿ ಮಾಡಿಕೊಂಡಿತು ಆದ್ದರಿಂದ ಸಮಸ್ತ ಸವನಗಳಲ್ಲಿಯೂ ಪ್ರಾತಃಸವನವೇ ಸರ್ವಶ್ರೇಷ್ಠವೆಂದು ಯಾಜ್ಞಿಕರ ಅಭಿಮತವು. ಆ ಪ್ರಾತಸ್ಸವನಕರ್ಮದಲ್ಲಿ ಮಂತ್ರಾದಿಗಳ ಪ್ರಯೋಗವೂ ವಿಶೇಷವಾಗಿರುವುದು ಆದುದರಿಂದ ಈ ವಿಷಯವನ್ನು ಬೆನ್ನಾಗಿ ತಿಳಿದುಕೊಂಡಿರುವ ಪುರುಷನು ತನ್ನ ಸಮಾನರಾದವರ ಮಧ್ಯದಲ್ಲಿ ಶ್ರೇಷ್ಠನೂ ಮುಖ್ಯನೂ ಆಗಿರುವನೆಂದು ಪರಿಗಣಿಸಲ್ಪಡುವನು. ಗಾಯತ್ರಿಯು ಎಡಗಾಲಿನಿಂದ ಹಿಡಿದುಕೊಂಡು ತಂದ ಸೋಮದ ಭಾಗವು ಮಾಧ್ಯಂದಿನಸವನವೆಂದು ಪ್ರಸಿದ್ಧವಾಯಿತು. ಎಡಗಾಲಿನಿಂದ ಸೋದುಲತೆಯನ್ನು ಹಿಡಿದುಕೊಂಡು ತರುವಾಗ ಬಲಗಾಲಿಗಿರುವಷ್ಟು ಶಕ್ತಿಯು ಎಡಗಾಲಿಗಿಲ್ಲದಿರುವುದರಿಂದ ಆ ಲತೆಗಳು ಕಾಲಿನಿಂದ ಆಗಾಗ ಸ್ವಲ್ಪ ಸ್ವಲ್ಪ ಜಾರುತ್ತಿದ್ದಿತು. ಈ ಕಾರಣದಿಂದ ಈ ಮಾಧ್ಯಂದಿನಸವನವು ಪ್ರಾತಃಸವನದಂತೆ ಶಕ್ತಿಸಾಮರ್ಥ್ಯಗಳಲ್ಲಿ ಸರಿಸಮನಾಗಲಿಲ್ಲ. ಇದನ್ನು ಕಂಡು ದೇವತೆಗಳು ವಿಚಾರವಿಮರ್ಶೆಮಾಡಿ ಮಾಧ್ಯಂದಿನಸವನಕರ್ಮದಲ್ಲಿ ಉಪಯೋಗಿಸುವ ಛಂದಸ್ಸುಗಳಿಗಾಗಿ ತ್ರಿಷ್ಟುಪ್‌ಛಂದಸ್ಸನ್ನೂ ದೇವತೆಗಳಲ್ಲಿ ಶ್ರೇಷ್ಠನಾದ ಇಂದ್ರನನ್ನೂ ಸ್ಥಾಪಿಸಿದರು. ದೇವತೆಗಳಲ್ಲಿ ಶ್ರೇಷ್ಠನಾದ ಇಂದ್ರನ ಮತ್ತು ಅವನಿಗೆ ಪ್ರಿಯವಾದ ತ್ರಿಷ್ಟುಪ್‌ಛಂದಸ್ಸಿನ ಸಾಹಚರ್ಯದಿಂದ ಮಾಧ್ಯಂದಿನಸವನವು ಶಕ್ತಿಸಾಮರ್ಥ್ಯಗಳಲ್ಲಿಯೂ, ಶ್ರೇಷ್ಠತೆಯಲ್ಲಿಯೂ ಪ್ರಾತಸ್ಸವನಕ್ಕೆ ಸರಿಸಮನಾದ ಸ್ಥಾನವನ್ನು ಪಡೆಯಿತು. ಪ್ರಾತಃಸವನ ಮತ್ತು ಮಾಧ್ಯಂದಿನಸವನಗಳ ಈ ವಿಧವಾದ ಸರಿಸಮಾನತೆ

ಯನ್ನೂ, ಶಕ್ತಿಸಾಮರ್ಥ್ಯಗಳನ್ನೂ, ಶ್ರೇಷ್ಠತೆಯನ್ನೂ ತಿಳಿದಿರುವ ಪುರುಷನು ಧನಾದಿಗಳಲ್ಲಿ ಸಮೃದ್ಧಿಯನ್ನೂ, ಶ್ರೇಯಸ್ಸನ್ನೂ ಪಡೆದು ಸುಖಿಸುವನು. ಬಳಿಕ ಶ್ಯೇನರೂಪದಿಂದಿದ್ದ ಆ ಗಾಯತ್ರಿಯು ತನ್ನ ಕೊಕ್ಕಿನಿಂದ ಕಚ್ಚಿತಂದ ಸೋಮದ ಭಾಗವು ತೃತೀಯಸವನವೆಂದು ಪ್ರಸಿದ್ಧವಾಯಿತು.

ತಸ್ಯ ಪತಂತೀ ರಸಮಧಯತ್ತ್ರಿದ್ಯೇತರಸಂ ನಾನ್ಯಾಸ್ಮೊನ್ಮೋತ್ಪೂರ್ವೇ ಸವನೇ ತೇ ದೇವಾಃ ಪ್ರಾಜಿಜ್ಞಾಸಂತ ತಪ್ಪಶುಷ್ಪಪಶ್ಯಂಸ್ತದ್ಯದಾಶಿರಮವನಯಂತ್ಯಾಜ್ಯೇನ ಪಶುನಾ ಚರಂತಿ ತೇನ ತಪ್ತಮಾವದ್ತೀರ್ಯಮಭವತ್ಪೂರ್ವಾಭ್ಯಾಂ ಸವನಾಭ್ಯಾಂ ಸರ್ವೈಃ ಸವನೈಃ ಸಮಾವದ್ತೀರ್ಯ್ಯಃ ಸಮಾವಜ್ಜಾಮಿಭೀ ರಾಧ್ನೋತಿ ಯ ಏವಂ ವೇದ ॥

(ಐ. ಬ್ರಾ ೧೩-೨೭)

ಗಾಯತ್ರಿಯು (ಶ್ಯೇನವು) ತನ್ನ ಕೊಕ್ಕಿನಿಂದ ಸೋಮಲತೆಯನ್ನು ಕಚ್ಚಿಕೊಂಡು ಬರುತ್ತಿರುವಾಗ ಆ ಲತೆಯಲ್ಲಿದ್ದ ರಸವನ್ನು ಸ್ವಲ್ಪ ಸ್ವಲ್ಪವಾಗಿ ಹೀರಿ ಕುಡಿಯುತ್ತಿದ್ದಿತು ಆದ್ದರಿಂದ ಎಂದರೆ ಕೊಕ್ಕಿನಿಂದ ತಂದ ಸೋಮಲತೆಗಳಲ್ಲಿ ರಸವು ಹೆಚ್ಚಾಗಿಲ್ಲದೆ ಕಮ್ಮಿಯಾಗಿದ್ದುದರಿಂದ ಈ ತೃತೀಯಸವನವು ಶಕ್ತಿಸಾಮರ್ಥ್ಯಾದಿಗಳಲ್ಲಿ ಪ್ರಾತಃಸವನ ಮಾಧ್ಯಂದಿನಸವನಗಳಿಗೆ ಸರಿಸಮನಾಗಲಿಲ್ಲ ಆದ್ದರಿಂದ ಈ ವಿಷಯವನ್ನು ಕಂಡ ದೇವತೆಗಳು ವಿಚಾರಮಾಡಿ ಇದಕ್ಕೆ ತಕ್ಕ ಸಾಧನೋಪಾಯವು ಪಶುಗಳಲ್ಲಿರುವುದೆಂದು ಕಂಡುಕೊಂಡರು ಪಶುಗಳಲ್ಲಿ ಹಾಲು, ಅದರಿಂದ ಲಬ್ಧವಾಗುವ ಆಜ್ಯ (ತುಪ್ಪ) ಮೊದಲಾದ ಹವಿರ್ದ್ರವ್ಯಗಳು ದೊರಕುವವು. ಕ್ಷೀರವನ್ನು ಅಥವಾ ಹಾಲನ್ನು ಲತೆಗಳಲ್ಲಿ ಕಮ್ಮಿಯಾಗಿರುವ ಸೋಮರಸಕ್ಕೆ ಬೆರಸಿದರೆ ಆ ರಸವು ಶಕ್ತಿಯುತವಾಗುವುದು ಆಜ್ಯದಿಂದಲೂ, ಪಶುಗಳ ಅವಯವಗಳಿಂದಲೂ ಹೋಮಾದಿಗಳನ್ನು ಮಾಡಿದರೆ ಸವನಕರ್ಮವು ಸಾಂಗವಾಗುವುದು ಆದುದರಿಂದ ಯಜ್ಞಕ್ರಮವನ್ನು ತಿಳಿದವರು ತೃತೀಯಸವನದಲ್ಲಿ ಉಪಯೋಗಿಸುವ ಋಜೀಷಕ್ಕೆ (ಪ್ರಾತಃಸವನ ಮಾಧ್ಯಂದಿನಸವನಗಳಲ್ಲಿ ರಸವನ್ನು ತೆಗೆದ ಬಳಿಕ ಉಳಿದಿರುವ ಸೋಮಲತೆಯ ಸಿಪ್ಪೆಗಳಿಗೆ ಋಜೀಷವೆಂದು ಹೇಳುವರು) ಹಾಲು ಮೊದಲಾದ ಆಶಿರ ದ್ರವ್ಯಗಳನ್ನು ಸೇರಿಸುವುದರಿಂದ, ಪಶುಗಳಿಂದ ಲಭಿಸತಕ್ಕ ಆಜ್ಯದಿಂದ ಮತ್ತು ಪಶುಗಳ ಹೃದಯಾದ್ಯಂಗಗಳಿಂದ ಹೋಮಗಳನ್ನು ಮಾಡುವುದರಿಂದಲೂ ತೃತೀಯಸವನಕರ್ಮವು ಪ್ರಾತಸ್ಸವನಮಾಧ್ಯಂದಿನಸವನಗಳಿಗೆ ಶಕ್ತಿ ಸಾಮರ್ಥ್ಯಾದಿಗಳಲ್ಲಿ ಸರಿಸಮನಾಗುವುದು ಎಂದು ತಿಳಿದು ಆದರಂತೆ ಆಚರಿಸುವರು ಈ ವಿಷಯವು ಶಾಖಾಂತರದಲ್ಲಿ ಈ ರೀತಿ ಹೇಳಲ್ಪಟ್ಟಿರುವುದು—

ಬ್ರಹ್ಮವಾದಿನೋ ವದಂತಿ ಕಸ್ಮಾತ್ಸತ್ಯಾದ್ಗಾಯತ್ರೀ ಕನಿಷ್ಠಾ ಛಂದಸಾಗ್ಂ ಸತೀ ಯಜ್ಞಮುಖಂ ಪರೀಯಾಯೀತಿ ಯದೇವಾದಃ ಸೋಮಮಾಹರತ್ತಸ್ಮಾದ್ಯಜ್ಞಮುಖಂ ಪರ್ಯ್ಯೈತ್ತಸ್ಮಾತ್ತೇಜಸ್ವಿನೀತಮಾ ಪದಾಭ್ಯಂ ದ್ವೇ ಸವನೇ ಸಮಗೃಹ್ಣನ್ಮುಖೇನೈಕಂ ಯೆನ್ಮುಖೇನ ಸಮಗೃಹ್ಣಾತ್ತದಧಯತ್ತಸ್ಮಾದ್ದ್ವೇ ಸವನೇ ಶುಕ್ರವತೀ ಪ್ರಾತಶ್ಸವನಂ ಚ ಮಾಧ್ಯಂದಿನಂ ಚ ತಸ್ಮಾತ್ತೃತೀಯಸವನ ಋಜೀಷಮಭಿಷುಣ್ವಂತಿ ಧೀತಮಿವ ಹಿ ಮನ್ಯಂತೇ ಆಶಿರಮವನಯತಿ ಸಶುಕ್ರತ್ವಾಯ ॥

(ತೈ. ಸಂ. ೬-೧-೬-೪)

ಎಂದು ತೈತ್ತಿರೀಯಸಂಹಿತೆಯಲ್ಲಿ ಇದೇ ಅಭಿಪ್ರಾಯವು ಉಕ್ತವಾಗಿದೆ. ಈ ವಿಷಯವನ್ನು ಎಂದರೆ ಪ್ರಾತಃಸವನ, ಮಾಧ್ಯಂದಿನಸವನ, ತೃತೀಯಸವನಗಳೆಂಬ ನೂರು ಸವನಗಳೂ ಶಕ್ತಿಸಾಮರ್ಥ್ಯಗಳಲ್ಲಿಯೂ, ಶ್ರೇಷ್ಠತೆಯಲ್ಲಿಯೂ ಸರಿಸಮನಾದ ಸ್ಥಾನವನ್ನು ಪಡೆದಿರುವವು ಎಂಬ ವಿಷಯವನ್ನು ಯಾವ ಪುರುಷನು ತಿಳಿಯುವನೋ ಅವನು ಸರ್ವ ಸಮೃದ್ಧಿಯುಕ್ತನಾಗಿ ಸುಖಿಸುವನು.

ತೇ ವಾ ಇಮೇ ಇತರೇ ಛಂದಸೀ ಗಾಯತ್ರೀಮಭ್ಯವದೇತಾಂ ವಿತ್ತಂ ನಾವಕ್ಷರಾಣ್ಯನುಪರ್ಯಾ ಗುರಿತಿ ನೇತ್ಯಬ್ರವೀದ್ಗಾಯತ್ರೀ ಯಥಾವಿತ್ತಮೇವ ನ ಇತಿ ತೇ ದೇವೇಷು ಪ್ರಶ್ನಮೈತಾಂ ತೇ ದೇವಾ ಅಬ್ರುವನ್ಯಥಾವಿತ್ತಮೇವ ವ ಇತಿ ತಸ್ಮಾದ್ಬಾಹ್ಮಣೇತರ್ಹಿ ವಿತ್ತಾಯಂ ವ್ಯಾಹುರ್ಯ-ಥಾವಿತ್ತಮೇವ ನ ಇತಿ ತತೋ ವಾ ಅಷ್ಟಾಪ್ಷರಾ ಗಾಯತ್ರ್ಯಭವತ್ತ್ರ್ಯಕ್ಷರಾ ತ್ರಿಷ್ಟುಬೇಕಾಕ್ಷರಾ ಜಗತೀ ॥

(ಐ. ಬ್ರಾ ೧೩-೩೮)

ಹಿಂದೆ ತ್ರಿಷ್ಟುಪ್ ಜಗತೀ ಛಂದಸ್ಸುಗಳು ಸೋಮವನ್ನು ತರುವುದಕ್ಕಾಗಿ ಸ್ವರ್ಗಕ್ಕೆ ಹಾರಿಹೋಗುವಾಗ ಸ್ವರ್ಗವನ್ನು ತಲಪದೆ ಅರ್ಧದಾರಿಯಲ್ಲಿಯೇ ಬಳಲಿ ಹಿಂತಿರುಗಬೇಕಾಯಿತೆಂದೂ, ಆ ಕಾರಣಕ್ಕಾಗಿ ಅವು ತಮ್ಮ ನಾಲ್ಕು ಅಕ್ಷರ ಗಳಲ್ಲಿ ಜಗತೀಛಂದಸ್ಸು ಮೂರು ಅಕ್ಷರಗಳನ್ನೂ, ತ್ರಿಷ್ಟುಪ್‌ಛಂದಸ್ಸು ಒಂದು ಅಕ್ಷರವನ್ನೂ ಕಳೆದುಕೊಂಡವೆಂದು ಹಿಂದೆಯೇ ಹೇಳಲಾಗಿದೆಯಷ್ಟೆ. ಗಾಯತ್ರಿಯು ಸೋಮವನ್ನು ತಂದಾಗ ತ್ರಿಷ್ಟುಬ್ಜಗತಿಗಳು ಕಳೆದುಕೊಂಡಿದ್ದ ನಾಲ್ಕು ಅಕ್ಷರಗಳನ್ನು ಹಿಂದಕ್ಕೆ ತಂದು ಆದನ್ನು ತನ್ನ ಸ್ವಕೀಯವಾದ ನಾಲ್ಕು ಅಕ್ಷರಗಳ ಜತೆಗೆ ಸೇರಿಸಿಕೊಂಡು, ತನಗೆ ಒಟ್ಟು ಎಂಟು ಅಕ್ಷರಗಳಾಗುವಂತೆ ಮಾಡಿಕೊಂಡಿತೆಂದೂ ಸಹ ಹಿಂದೆ ಹೇಳಿದೆ ಇದನ್ನು ಕಂಡು ತ್ರಿಷ್ಟುಬ್ಜಗ ತೀಛಂದಸ್ಸುಗಳು ಗಾಯತ್ರಿಯ ಸಮೀಪಕ್ಕೆ ಬಂದು ಎಲೈ ಗಾಯತ್ರಿಯೇ, ಸ್ವರ್ಗದಲ್ಲಿ ನಾವು ಬಿಟ್ಟಬಂದ ನಾಲ್ಕು ಅಕ್ಷರಗಳನ್ನು ನೀನು ಹಿಂದಕ್ಕೆ ತಂದದ್ದೇನೋ ಸರಿಹೋಯತು ಆದರೆ ಅವುಗಳನ್ನು ನಿನ್ನ ನಾಲ್ಕು ಅಕ್ಷರಗಳ ಜತೆಗೆ ಸೇರಿಸಿಕೊಂಡಿರುವುದು ಮಾತ್ರ ಸರಿಯಲ್ಲ ಆ ಅಕ್ಷರಗಳು ನಮಗೆ ಸೇರಿದ್ದಾದುದರಿಂದ ಅದನ್ನು ನಮಗೆ ನೀನು ಹಿಂದಕ್ಕೆ ಕೊಡಬೇಕು ಎಂದು ಕೇಳಿದವು. ಅವುಗಳ ಮಾತನ್ನು ಗಾಯತ್ರಿಯು ನಿರಾಕರಿಸುತ್ತಾ ಇಂತೆಂದಿತು—ನಮ್ಮ ವಶದಲ್ಲಿ ಯಾವ ಪದಾರ್ಥವಿರುವುದೋ ಎಂದರೆ, ಯಾವುದನ್ನು ನಾವು ಸಂಪಾದಿಸಿರುವೆವೋ ಅದು ನಮಗೇ ಸೇರಬೇ ಕಾದುದು ಧರ್ಮವು ಲೋಕವ್ಯವಹಾರದಲ್ಲಿಯೂ ಸಹ ಒಂದು ವಸ್ತುವು ಒಬ್ಬನ ಸ್ವಾಧೀನಾನುಭವದಲ್ಲಿದ್ದರೆ ಅದು ಅವನಿಗೇ ಸೇರಿರುವುದೆಂದು ನ್ಯಾಯವನ್ನು ತಿಳಿದವರು ಹೇಳುವರು. ಸ್ವರ್ಗಲೋಕಕ್ಕೆ ಹೋಗಿ ಸೋಮವನ್ನು ತರುವುದರಲ್ಲಿ ಕಾರ್ಯಸಿದ್ಧಿಯನ್ನು ಮಾಡಿಕೊಂಡು, ನೀವು ಕಳೆದುಕೊಂಡಿದ್ದ ಅಕ್ಷರಗಳನ್ನು ಹಿಂದಕ್ಕೆ ತಂದ ನನಗೆ ಮಾತ್ರ ಆ ಅಕ್ಷರಗಳು ಸೇರಬೇಕು ಅವುಗಳನ್ನು ನಿಮಗೆ ಕೊಡುವುದಕ್ಕಾಗುವುದಿಲ್ಲ ಎಂದಿತು. ಇವನ್ನು ಕೇಳಿ ಆ ತ್ರಿಷ್ಟುಬ್ಜಗತಿಗಳು ದೇವತೆಗಳ ಸಮೀಪಕ್ಕೆ ಹೋಗಿ ಅವರಲ್ಲಿ ತಮ್ಮ ದೂರನ್ನು ಹೇಳಿಕೊಂಡವು. ಅವರೂ ಸಹ ಲೋಕವ್ಯವಹಾರದಲ್ಲಿ ಬಳಕೆಯಲ್ಲಿರುವ ಎಂದರೆ, ಒಂದು ವಸ್ತುವು ಯಾರ ಸ್ವಾಧೀನದಲ್ಲಿರುವುದೋ ಅದು ಅವರಿಗೇ ಸೇರಿದ್ದು ಎಂಬ ನ್ಯಾಯವನ್ನೇ ಎತ್ತಿಹಿಡಿದು ಅದನ್ನು ಸಮರ್ಥಿಸಿಸುತ್ತಾ, ಗಾಯತ್ರಿಯು ಹೇಳುವ ನ್ಯಾಯವೇ ಸರಿ ಆ ಅಕ್ಷರಗಳನ್ನು ತಂದದ್ದರಿಂದ ಅವುಗಳು ಅದಕ್ಕೇ (ಗಾಯತ್ರಿಗೇ) ಸೇರಬೇಕು ಎಂದು ನುಡಿದರು ಹೇಗೆಂದರೆ— ಯುದ್ಧಾದಿಗಳಲ್ಲಿ ಸೋತು ಓಡಿಹೋಗುತ್ತಿರುವ ಶತ್ರುಸೇನೆಗಳು ಬಿಟ್ಟುಹೋದ ವಸ್ತುಗಳನ್ನು ಗೆದ್ದವರಲ್ಲಿ ಯಾರಿಗೆ ಯಾವುದು ಸಿಕ್ಕುವುದೋ ಅದು ಅವರದೇ ಎಂದು ಎಲ್ಲರೂ ಒಪ್ಪುವರು ಅದರಂತೆ ಇಲ್ಲಿಯೂ ಸಹ ನಡೆಯಬೇಕು

ಎಂದು ದೇವತೆಗಳು ನ್ಯಾಯವನ್ನು ಪ್ರತಿಪಾದಿಸಿದರು. ಆದ್ದರಿಂದ ಗಾಯತ್ರಿಗೆ ತನ್ನ ಸ್ವಂತ ನಾಲ್ಕು ಅಕ್ಷರಗಳ ಜತೆಗೆ ಸ್ವರ್ಗದಿಂದ ತಂದ ತ್ರಿಷ್ಟುಬ್ಜಗತಿಗಳ ನಾಲ್ಕು ಅಕ್ಷರಗಳೂ ಸೇರಿ ಒಟ್ಟು ಎಂಟಕ್ಷರಗಳಾದವು ತ್ರಿಷ್ಟುಪ್‌ಛಂದಸ್ಸಿಗೆ ಮೂರು ಅಕ್ಷರಗಳೇ ಉಳಿದವು. ಜಗತೀಛಂದಸ್ಸಿಗೆ ಒಂದು ಅಕ್ಷರ ಮಾತ್ರ ಉಳಿಯಿತು

ಸಾಷ್ಟಾಕ್ಷರಾ ಗಾಯತ್ರೀ ಪ್ರಾತಸ್ಸವನಮುದಯಚ್ಛನ್ನಾಶಕ್ನೋತ್ತ್ರಿಷ್ಟುಪ್ ತ್ರ್ಯಕ್ಷರಾ ಮಾಧ್ಯಂ-ದಿನಂ ಸವನಮುದ್ಯಂತುಂ ತಾಂ ಗಾಯತ್ರ್ಯಬ್ರವೀದಾಯಾನ್ಯಪಿ ಮೇ೭ತ್ರಾಸ್ತೀತಿ ಸಾ ತಥೇ-ತ್ಯಬ್ರವೀತ್ತ್ರಿಷ್ಟುಪ್ತಾಂ ವೈ ಮೈತ್ರೈರಕ್ಷಾಭಿರಕ್ಷರೈರುಪಸಂಧೇಹೀತಿ ತಥೇತಿ ತಾಮುಪಸಮಿದ-ಧಾದೇತದ್ವೈ ತದಾಗಾಯತ್ರ್ಯೈ ಮಧ್ಯಂದಿನೇ ಯನ್ನೈರುತ್ಯತೀಯಸ್ಯೋತ್ತರೇ ಪ್ರತಿಪದೋ ಯಶ್ಚಾನುಚರಃ ಸೈಕಾದಶಾಕ್ಷರಾ ಭೂತ್ವಾ ಮಾಧ್ಯಂದಿನಂ ಸವನಮುದಯಚ್ಛತ್ ॥

ಪ್ರಾತಃಸವನ, ಮಾಧ್ಯಂದಿನಸವನ, ತೃತೀಯಸವನ ಎಂಬ ಮೂರು ಸವನಗಳಿರುವುವು ಎಂಬುದನ್ನು ಹಿಂದೆಯೇ ವಿವರಿಸಿದೆ ಪ್ರಾತಸ್ಸವನದಲ್ಲಿ ನಡೆಯಬೇಕಾಗಿರುವ ಕಾರ್ಯಕಲಾಪಗಳನ್ನು ಗಾಯತ್ರೀಛಂದಸ್ಸಿನ ಮಂತ್ರಗಳಿಂದಲೂ, ಮಾಧ್ಯಂದಿನಸವನದ ಕಾರ್ಯಕಲಾಪಗಳನ್ನು ತ್ರಿಷ್ಟುಪ್ಛಂದಸ್ಸಿನ ಮಂತ್ರಗಳಿಂದಲೂ, ತೃತೀಯಸವನದ ಕಾರ್ಯ ಕಲಾಪಗಳನ್ನು ಜಗತೀಛಂದಸ್ಸಿನ ಮಂತ್ರಗಳಿಂದಲೂ ನೆರವೇರಿಸಬೇಕೆಂಬ ವಿಧಿ ಇರುವುದು

ಗಾಯತ್ರೀಛಂದಸ್ಸಿಗೆ ಎಂಟು ಅಕ್ಷರಗಳಾದುದರಿಂದ ಅದು ಪೂರ್ಣವಾದಂತಾಗಿ ಪ್ರಾತಸ್ಸವನದ ಕಾರ್ಯ ಕಲಾಪಗಳನ್ನು ನಿರ್ವಹಿಸಲು ಸಮರ್ಥವಾಯಿತು ಆದರೆ ತ್ರಿಷ್ಟುಪ್‌ಛಂದಸ್ಸು ಒಂದು ಅಕ್ಷರವನ್ನು ಕಳೆದುಕೊಂಡು ಮೂರೇ ಅಕ್ಷರಗಳುಳ್ಳದ್ದಾಗಿರುವುದರಿಂದ ಅದಕ್ಕೆ ಮಾಧ್ಯಂದಿನಸವನದ ಕಾರ್ಯಕಲಾಪಗಳನ್ನು ನಿರ್ವಹಿಸಲು ಸಾಮರ್ಥ್ಯವಿಲ್ಲವಾಯಿತು ಈ ರೀತಿ ಸಾಮರ್ಥ್ಯವಿಲ್ಲದಿದ್ದ ತ್ರಿಷ್ಟುಪ್‌ಛಂದಸ್ಸನ್ನು ನೋಡಿ ಗಾಯತ್ರಿಯು—ಎಲೈ ತ್ರಿಷ್ಟುಪ್‌ಛಂದಸ್ಸೇ, ನಿನಗೆ ಕಾರ್ಯನಿರ್ವಾಹಶಕ್ತಿ ಇಲ್ಲದ್ದರಿಂದ ನಾನು ಮಾಧ್ಯಂದಿನಸವನಕಾರ್ಯಕಲಾಪಗಳಲ್ಲಿ ನಿನಗೆ ಸಹಾಯಾರ್ಥವಾಗಿ ಬರುವೆನು ಆದರೆ ಆ ಸಹಾಯಕ್ಕೆ ಪ್ರತಿಫಲವಾಗಿ ಮಾಧ್ಯಂದಿನಸವನದಲ್ಲಿ ನನಗೂ ಒಂದು ಭಾಗವಿರಬೇಕು ಆದಕ್ಕೆ ನೀನು ಒಪ್ಪುವಿಯಾದರೆ ನಾನು ನಿನಗೆ ಸಹಾಯಮಾಡುವೆನು ಎಂದಿತು. ಇದನ್ನು ಕೇಳಿ ತ್ರಿಷ್ಟುಪ್‌ಛಂದಸ್ಸು ಹಾಗೆಯೇ ಆಗಲೆಂದೊಪ್ಪಿ, ಎಲೈ ಗಾಯತ್ರಿಯೇ, ಈಗ ನನ್ನಲ್ಲಿ ಮೂರು ಅಕ್ಷರಗಳು ಮಾತ್ರವಿರುವವು ಅವುಗಳ ಜತೆಗೆ ನಿನ್ನ ಎಂಟು ಅಕ್ಷರಗಳನ್ನು ಸೇರಿಸಿದರೆ ನನಗೆ ಹನ್ನೊಂದು ಅಕ್ಷರಗಳಾಗುವುದರಿಂದ ಕಾರ್ಯ ನಿರ್ವಹಣೆಮಾಡಲು ಶಕ್ತಿಯುಂಟಾಗುವುದು ಎಂದು ಹೇಳಿತು ಅದರಂತೆ ಗಾಯತ್ರಿಯು ತನ್ನ ಎಂಟು ಅಕ್ಷರಗಳನ್ನು ತ್ರಿಷ್ಟುಪ್‌ಛಂದಸ್ಸಿನ ಮೂರು ಅಕ್ಷರಗಳೊಡನೆ ಸೇರಿಸಿತು. ಈ ರೀತಿ ಮಾಡಿದ್ದರಿಂದ ತ್ರಿಷ್ಟುಪ್‌ಛಂದಸ್ಸೂ ಸಹ ಮಾಧ್ಯಂದಿನಸವನದಲ್ಲಿ ಕಾರ್ಯನಿರ್ವಾಹಣೆಯನ್ನು ಮಾಡಲು ಸಮರ್ಥವಾಯಿತು ಮಾಧ್ಯಂದಿನಸವನದಲ್ಲಿ ತನಗೂ ಒಂದು ಭಾಗವಿರಬೇಕೆಂದು ಗಾಯತ್ರಿಯು ಕೇಳಿದ್ದಕ್ಕೆ ತ್ರಿಷ್ಟುಪ್ ಹಾಗೆಯೇ ಆಗಲೆಂದು ಹೇಳಿರುವುದು ಸರಿಯಷ್ಟೆ ಮಾಧ್ಯಂದಿನಸವನದಲ್ಲಿ ಗಾಯತ್ರಿಯ ಭಾಗವು ಯಾವುದು ಎಂದರೆ—ಮಾಧ್ಯಂದಿನಸವನಕಾಲದಲ್ಲಿ ಪಠಿಸುವ ಮರುತ್ವತೀಯ ಶಸ್ತ್ರಮಂತ್ರಗಳ **ಕೊನೆಯ** ಭಾಗದಲ್ಲಿ **ಆ ತ್ವಾ ರಥಂ ಯಥೋತಯೇ** (ಋ. ಸಂ. ೮-೬೮-೧) ಎಂದು ಪ್ರಾರಂಭವಾಗುವ ತೃಚದಲ್ಲಿಯೂ (ತೃಚವೆಂದರೆ೩ ಋಕ್ಕುಗಳು) ಅದರ ಮುಂದಿನ **ವಿಶ್ವಾನರಸ್ಯ ವಸ್ಪತಿಃ** (ಋ ಸಂ. ೮-೬೮-೪) ಎಂಬ ತೃಚದಲ್ಲಿಯೂ ಎರಡೆರಡು ಋಕ್ಕುಗಳು ಗಾಯತ್ರೀಛಂದಸ್ಸುಗಳಾಗಿರುವವು ಎಂದರೆ, **ಆ ತ್ವಾ ರಥಂ ಯಥೋತಯೇ** ಎಂಬ ತೃಚದಲ್ಲಿ **ತುವಿಶುಷ್ಮ ತುವಿಕ್ರತೋ** ಮತ್ತು **ಯಸ್ಯ ತೇ ಮಹಿನಾ**

ಮಹಃ (ಋ. ಸಂ. ೬–೬೮–೨, ೩ನೆಯ ಋಕ್ಕುಗಳು) ಎಂಬ ಎರಡು ಋಕ್ಕುಗಳೂ, **ವಿಶ್ವಾನರಸ್ಯ ವಸ್ಪತಿಃ** ಎಂಬ ಎರಡನೆಯ ತೃಚದಲ್ಲಿ **ಅಭಿಷ್ಟಯೇ ಸದಾವೃಧಂ** ಮತ್ತು **ಪರೋಮಾತ್ರಮೃಚೀಷಮ** (ಋ. ಸಂ. ೮–೬೮–೫, ೬ನೆಯ ಋಕ್ಕುಗಳು) ಎಂಬ ಎರಡು ಋಕ್ಕುಗಳೂ ಸೇರಿ ಪ್ರತಿಪತ್ತೃಚದಲ್ಲಿ ೫ಽಲ್ಕು ಗಾಯತ್ರೀಛಂದಸ್ಸಿನ ಮಂತ್ರಗಳಿರುವವು. ಪ್ರತಿಪತ್ತೃಚವೆಂದರೆ— ಪ್ರಾರಂಭದಲ್ಲಿ ಪರಿಸುವ ಋಕ್ಕುಗಳು. ಇನ್ನು ಅನುಚರವೆಂಬ ಕೊನೆಯಲ್ಲಿ ಪರಿಸುವ ತೃಚದ ಮೊದಲನೆಯ ಋಕ್ಕಾದ **ಇದಂ ವಸೋ ಸುತಮಂಧಃ** ಎಂಬ ಮಂತ್ರವೂ ಗಾಯತ್ರೀಛಂದಸ್ಕವು. ಆದ್ದರಿಂದ ಪ್ರತಿಪತ್ತೃಚಗಳಲ್ಲಿರುವ ೪ ಗಾಯತ್ರೀಛಂದಸ್ಸಿನ ಋಕ್ಕುಗಳೂ, ಅನುಚರಸ್ತೃಚದಲ್ಲಿರುವ ೧ ಗಾಯತ್ರೀಛಂದಸ್ಸಿನ ಋಕ್ಕೂ ಸೇರಿ ಒಟ್ಟು ೫ ಗಾಯತ್ರೀಛಂದಸ್ಕವಾದ ಋಕ್ಕುಗಳು ಮಾಧ್ಯಂದಿನಸವನದಲ್ಲಿರುವವು. ಈ ೫ ಋಕ್ಕುಗಳೇ ಮಾಧ್ಯಂದಿನಸವನದಲ್ಲಿ ಗಾಯತ್ರಿಗೆ ಸಲ್ಲಬೇಕಾದ ಭಾಗವೆಂದು ನಿರ್ದಿಷ್ಟವಾಗಿರುವುದು.

ನಾಶಕ್ನೋಜ್ಜಗತ್ಯೇಕಾಕ್ಷರಾ ತೃತೀಯಸವನಮುದ್ಯಂತುಂ ತಾಂ ಗಾಯತ್ರ್ಯಬ್ರವೀದಾಯೋನ್ಯಪಿ ಮೇ೭ತ್ರಾಸ್ತ್ವಿತಿ ಸಾ ತಥೇತ್ಯಬ್ರವೀಜ್ಜಗತೀ ತಾಂ ವೈ ಮೈತ್ರೈರೇಕಾದಶಭಿರಕ್ಷರೈರುಪಸಂಧೇಹೀತಿ ತಥೇತಿ ತಾಮುಪಸಮದಧಾದೇತದ್ವೈ ತದ್ಗಾಯತ್ರ್ಯೈ ತೃತೀಯಸವನೇ ಯದ್ವೈಶ್ವದೇವಸ್ಯೋತ್ತರೇ ಪ್ರತಿಪದೋ ಯಶ್ಚಾನುಚರಃ ಸಾ ದ್ವಾದಶಾಕ್ಷರಾ ಭೂತ್ವಾ ತೃತೀಯಸವನಮುದಯಚ್ಛತ್ ॥

ಜಗತೀಛಂದಸ್ಸೂ ಸಹ ಮೂರುಅಕ್ಷರಗಳನ್ನು ಕಳೆದುಕೊಂಡು ಒಂದೇ ಅಕ್ಷರವುಳ್ಳದ್ದಾಗಿದ್ದಿತು ಆದ್ದರಿಂದ ಅದೂ ಸಹ ತೃತೀಯಸವನದ ಕಾರ್ಯಕಲಾಪಗಳನ್ನು ನಿರ್ವಹಿಸಲು ಅಸಮರ್ಥವಾಯಿತು. ಆಗಲೂ ಗಾಯತ್ರಿಯು ಜಗತಿಯನ್ನುದ್ದೇಶಿಸಿ--ಎಲೈ ಜಗತಿಯೇ, ತೃತೀಯಸವನದ ಕಾರ್ಯಕಲಾಪಗಳಲ್ಲಿ ನಾನು ನಿನಗೆ ಸಹಾಯಮಾಡುವೆನು ಆದರೆ ಅವರಲ್ಲಿ ನನಗೂ ಒಂದುಭಾಗವಿರಬೇಕೆಂದಿತು ಜಗತಿಯು ಅದಕ್ಕೊಪ್ಪಿ ಹಾಗೆಯೇಮಾಡೆಂದಿತು. ಎಂದರೆ ಗಾಯತ್ರಿಯ ಎಂಟು ಅಕ್ಷರಗಳೂ, ತ್ರಿಷ್ಟುಪಿನ ಮೂರು ಅಕ್ಷರಗಳು ಸೇರಿ ಹನ್ನೊಂದು ಅಕ್ಷರಗಳಾಗಿ ಮಾಧ್ಯಂದಿನ ಸವನದಲ್ಲಿ ಕಾರ್ಯವನ್ನು ನಿರ್ವಹಿಸಲು ಸಮರ್ಥವಾಯಿತಷ್ಟೆ. ಆ ಹನ್ನೊಂದಕ್ಷರಗಳೂ ಈಗ ತೃತೀಯಸವನದಲ್ಲಿ ಜಗತಿಯ ಒಂದು ಅಕ್ಷರಕ್ಕೆ ಸೇರಿ ಹನ್ನೆರಡಕ್ಷರಗಳಾಗಿ ತೃತೀಯಸವನದ ಕಾರ್ಯಕಲಾಪಗಳನ್ನು ನಿರ್ವಹಿಸಲು ಸಮರ್ಥವಾಯಿತು ಹೇಗೆಂದರೆ, ತೃತೀಯಸವನಕಾಲದಲ್ಲಿ ಪರಿಸುವ ವೈಶ್ವದೇವ ಶಸ್ತ್ರಮಂತ್ರಗಳ ಕೊನೆಯಲ್ಲಿ ಪ್ರತಿಪತ್ತೃಚಗಳಿಗಾಗಿ ಪರಿಸುವ ಋಕ್ಕುಗಳೂ, ಅನುಚರರೂಪವಾಗಿ ಪರಿಸುವ ಋಕ್ಕುಗಳೂ ಸಹ ಗಾಯತ್ರೀಛಂದಸ್ಸಿನ ಮಂತ್ರಗಳು. ಈರೀತಿ ಈ ಮಂತ್ರಗಳು ಒಟ್ಟು ಹನ್ನೆರಡು ಅಕ್ಷರಗಳುಳ್ಳ ಜಗತೀಛಂದಸ್ಕಗಳಾಗಿ ತೃತೀಯಸವನ ಕಾರ್ಯಗಳನ್ನು ನೆರವೇರಿಸಲು ಸಮರ್ಥವಾದವು ಎಂದಭಿಪ್ರಾಯವು.

ತತೋ ವಾ ಅಷ್ಟಾಕ್ಷರಾ ಗಾಯತ್ರ್ಯಭವದೇಕಾದಶಾಕ್ಷರಾ ತ್ರಿಷ್ಟುಬ್ದ್ವಾದಶಾಕ್ಷರಾ ಜಗತೀ । ಸರ್ವೈಶ್ಛಂದೋಭಿಃ ಸಮಾವದ್ವೀರ್ಯೈಃ ಸಮಾವಜ್ಞಾಮಿಭೀ ರಾಥ್ನೋತಿ ಯ ಏವಂ ವೇದ । ಏಕಂ ವೈ ಸತ್ತ್ರಂತ್ರೈಧಾಭವತ್ತತ್ಸ್ಯಾದಾಹುರ್ದಾತವ್ಯಮೇವಂ ವಿದುಷ ಇತ್ಯೇಕಂ ಹಿ ಸತ್ತ್ರಂತ್ರೈಧಾಭವತ್ ॥

(ಐ ಬ್ರಾ. ೧೩–೨೮).

ಆದ್ದರಿಂದ ಗಾಯತ್ರೀಛಂದಸ್ಸಿಗೆ ಎಂಟು ಅಕ್ಷರಗಳೂ, ತ್ರಿಷ್ಟುಪ್‌ಛಂದಸ್ಸಿಗೆ ಹನ್ನೊಂದಕ್ಷರಗಳೂ, ಜಗತೀಛಂದಸ್ಸಿಗೆ ಹನ್ನೆರಡು ಅಕ್ಷರಗಳೂ ಉಂಟಾದವು. ಈ ಮೂರು ಛಂದಸ್ಸುಗಳೂ ಇತರ ಸಮಸ್ತಛಂದಸ್ಸುಗಳಿಗೆ ಸರಿಸಮನಾದ ಸ್ಥಾನಮಾನಗಳನ್ನೂ ಶ್ರೇಷ್ಠತೆಯನ್ನೂ ಪಡೆದವು. ಈ ವಿಷಯವನ್ನು ತಿಳಿದ ಪುರುಷನು ಶ್ರೇಷ್ಠತೆಯನ್ನೂ ಗಣ್ಯಸ್ಥಾನವನ್ನೂ ಪಡೆಯುವನು. ಗಾಯತ್ರಿಯ ಸ್ವರೂಪವು ಪೂರ್ವದಲ್ಲಿ ನಾಲ್ಕು ಅಕ್ಷರಮಾತ್ರವಿದ್ದು ಅನಂತರ ಮತ್ತೆ ನಾಲ್ಕು ಅಕ್ಷರಗಳನ್ನು ಅಧಿಕವಾಗಿ ಸಂಪಾದನೆಮಾಡಿ ತ್ರಿಷ್ಟುಪ್ ಮತ್ತು ಜಗತೀಛಂದಸ್ಸುಗಳಲ್ಲಿಯೂ ಪ್ರವೇಶಮಾಡಿದ್ದರಿಂದ (ಎಂದರೆ ತನ್ನ ಎಂಟು ಅಕ್ಷರಗಳನ್ನು ತ್ರಿಷ್ಟುಪ್ ಮತ್ತು ಜಗತೀಛಂದಸ್ಸಿನ ಅಕ್ಷರಗಳೊಡನೆ ಬೆರೆತಿದ್ದರಿಂದ) ಅದರ ಸ್ವರೂಪವು ಎಂದರೆ ಅದರ ಮಹಿಮೆಯು ಮೂರರಷ್ಟು ಅಧಿಕವಾಯಿತು ಆದ್ದರಿಂದ ಈ ವಿಧವಾದ ಗಾಯತ್ರಿಯ ಮಹಿಮೆಯನ್ನು ತಿಳಿದ ಪುರುಷನಿಗೆ ಸುವರ್ಣಾದಿಗಳನ್ನು ದಾನವಾಗಿ ಕೊಡಬೇಕೆಂದು ಧರ್ಮರಹಸ್ಯವನ್ನು ತಿಳಿದ ಪ್ರಾಜ್ಞರು ಹೇಳುವರು.

ಸೋಮಾಹರಣೋಪಾಖ್ಯಾನವು (ಸೌಪರ್ಣಾಖ್ಯಾನವು) ಸಮಾಪ್ತವು.

। ಸಂಹಿತಾಪಾಠಃ ।

ಋಜಿಪ್ಯ ಈಮಿಂದ್ರಾವತೋ ನ ಭುಜ್ಯುಂ ಶ್ಯೇನೋ ಜಭಾರ ಬೃಹತೋ ಅಧಿ ಷ್ನೋಃ ।

ಅಂತಃ ಪತತ್ಪತತ್ರ್ಯಸ್ಯ ಪರ್ಣಮಧ ಯಾಮನಿ ಪ್ರಸಿತಸ್ಯ ತದ್ವೇಃ ॥ ೪ ॥

॥ ಪದಪಾಠಃ ॥

ಋಜಿಪ್ಯಃ । ಈಂ । ಇಂದ್ರವತಃ । ನ । ಭುಜ್ಯುಂ । ಶ್ಯೇನಃ । ಜಭಾರ । ಬೃಹತಃ । ಅಧಿ । ಷ್ನೋಃ ।

ಅಂತರಿತಿ । ಪತತ್ । ಪತತ್ರಿ । ಅಸ್ಯ । ಪರ್ಣಂ । ಅಧ । ಯಾಮನಿ । ಪ್ರಸಿತಸ್ಯ । ತತ್ । ವೇರಿತಿ ವೇಃ॥

। ಸಾಯಣಭಾಷ್ಯಂ ।

ಋಜಿಪ್ಯ ಋಜುಗಾಮಿನೌ ಶ್ಯೇನ ಇಂದ್ರವತ ಇಂದ್ರೋ ರಕ್ಷಕೋ ಯಸ್ಯ ತಸ್ಮಾದ್ಬೃಹತೋ ಮಹತೋಽಧಿ ಉಪರಿ ಷ್ನೋಃ ಸ್ಥಿತಾದ್ದ್ಯುಲೋಕಾದೀಮೇನಂ ಸೋಮಂ ಜಭಾರ । ಆಜಹಾರ । ತತ್ರ ದೃಷ್ಟಾಂತಃ । ಇಂದ್ರವತಃ । ಇಂದ್ರಃ ಸಮರ್ಥಃ । ತದ್ವತೋ ದೇಶಾದ್ಭುಜ್ಯುಂ ನ ಭುಜ್ಯುನಾಮಕಂ ರಾಜಾನಂ ಯಥಾಶ್ವಿನಾವಾಜಹ್ರತುಸ್ತದ್ವತ್ । ಅಧ ತದಾನೀಂ ಯಾಮನಿ ಯುದ್ಧೇ ಪ್ರಸಿತಸ್ಯ ಕೃಶಾನೋರಸ್ತ್ರೈರ್ಬದ್ಧಸ್ಯ ವೇಗವಂತುರಸ್ಯ ಶ್ಯೇನಸ್ಯಾಂತರ್ಮಧ್ಯೇ ಸ್ಥಿತಂ ಪತತ್ರಿ ಪತನಶೀಲಂ ತತ್ಪರ್ಣಂ ಪತತ್ । ಅಪತತ್ ॥

॥ ಪ್ರತಿಪದಾರ್ಥ ॥

ಋಜಿಪ್ಯಃ—ನೇರವಾಗಿ ಹಾರತಕ್ಕ । **ಶ್ಯೇನಃ**—ಗಿಡುಗವು । **ಇಂದ್ರವತಃ**—ಇಂದ್ರನಿಂದ ರಕ್ಷಿತವಾದುದೂ । **ಬೃಹತಃ**—ಮಹತ್ತಾದುದೂ । **ಅಧಿ ಸ್ನೋಃ**—ಅತ್ಯುನ್ನತವಾದ ಪ್ರದೇಶದಲ್ಲಿರತಕ್ಕದ್ದೂ ಆದ ಅಂತರಿಕ್ಷದಿಂದ । **ಈಂ**—ಈ ಸೋಮವನ್ನು । **ಭುಜ್ಯುಂ ನ**—(ಅಶ್ವಿನೀದೇವತೆಗಳು) ಭುಜ್ಯುವನ್ನು ಹೊತ್ತುಕೊಂಡು ಬಂದಂತೆ । **ಜಭಾರ**—ಹೊತ್ತುಕೊಂಡು ಬಂದಿತು । **ಅಧ**—ತತ್ಕಾಲದಲ್ಲಿ ಪ್ರಾಪ್ತವಾದ । **ಯಾಮನಿ**—ಯುದ್ಧದಲ್ಲಿ । **ಪ್ರಸಿತಸ್ಯ**—ಅಸ್ತ್ರದಿಂದ ಪ್ರಹತವಾದ । **ಅಸ್ಯ ವೇಃ**—ಈ ಶ್ಯೇನಪಕ್ಷಿಯ । **ಅಂತಃ**—ಮಧ್ಯಭಾಗವರ್ತಿಯಾದುದೂ । **ಪತಿತ್ರಿ**—ಪತನಶೀಲವಾದುದೂ ಆದ । **ತತ್ ಪರ್ಣಂ**—ಒಂದು ಗರಿಯು । **ಪತತ್**—ಕೆಳಕ್ಕೆ ಬಿದ್ದುಹೋಯಿತು.

॥ ಭಾವಾರ್ಥ ॥

ಅಶ್ವಿನೀದೇವತೆಗಳು ಭುಜ್ಯುವನ್ನು ಹೊತ್ತುಕೊಂಡು ಬಂದಂತೆ ಋಜುಗಾಮಿಯಾದ ಈ ಶ್ಯೇನವೂ ಸಹ ಇಂದ್ರರಕ್ಷಿತವಾದುದೂ, ಮಹತ್ತಾದುದೂ, ಅತ್ಯುನ್ನತವಾದ ಪ್ರದೇಶದಲ್ಲಿರತಕ್ಕದ್ದೂ ಆದ ಅಂತರಿಕ್ಷದಿಂದ ಸೋಮವನ್ನು ಹೊತ್ತುಕೊಂಡು ಬಂದಿತು ಆದರೆ ತತ್ಕಾಲದಲ್ಲಿ ಪ್ರಾಪ್ತವಾದ ಹೋರಾಟದಲ್ಲಿ ಅಸ್ತ್ರದಿಂದ ಪ್ರಹತವಾದ ಈ ಪಕ್ಷಿಯ ಮಧ್ಯಭಾಗದಿಂದ ಪತನಶೀಲವಾದ ಒಂದು ಗರಿಯು ಕೆಳಕ್ಕೆ ಬಿದ್ದುಹೋಯಿತು

English Translation.

The straight-flying hawk carried off the Soma from above the vast heaven, as (the Ashwins carried off) Bhujyu from the region of Indra, and a falling feather from the middle of the bird dropped from him wounded in the conflict.

॥ ಸಂಹಿತಾಪಾಠಃ ॥

ಅಧ॑ ಶ್ವೇತಂ ಕ॒ಲಶಂ ಗೋಭಿ॑ರಕ್ತ॒ಮಾಪಿ॑ಪ್ಯಾನಂ ಮ॒ಘವಾ॑ ಶು॒ಕ್ರಮಂ॑ಧಃ ।
ಅ॒ಧ್ವ॒ರ್ಯುಭಿಃ॑ ಪ್ರಯ॑ತಂ ಮ॒ಧ್ವೋ ಅಗ್ರ॒ಮಿಂದ್ರೋ॑ ಮ॒ದಾಯ॒ ಪ್ರತಿ॑
ಧ॒ತ್ಪಿ॒ಬ॒ದ್ಧ್ಯೈ॑ ಶೂರೋ॑ ಮ॒ದಾಯ॒ ಪ್ರತಿ॑ ಧ॒ತ್ಪಿ॒ಬ॒ದ್ಧ್ಯೈ ॥ ॥೫

॥ ಪದಪಾಠಃ ॥

ಅಧ॑ । ಶ್ವೇತಂ । ಕ॒ಲಶಂ । ಗೋಭಿಃ॑ । ಅ॒ಕ್ತ॒ಂ । ಆ॒ಪಿ॒ಪ್ಯಾನಂ । ಮ॒ಘವಾ॑ । ಶು॒ಕ್ರಂ । ಅಂ॒ಧಃ॒ ।
ಅ॒ಧ್ವ॒ರ್ಯುಭಿಃ॑ । ಪ್ರಯ॑ತಂ । ಮ॒ಧ್ವಃ । ಅಗ್ರಂ॑ । ಇಂದ್ರಃ॑ । ಮ॒ದಾಯ॑ । ಪ್ರತಿ॑ । ಧ॒ತ್ । ಪಿ॒ಬ॒ಧ್ಯೈ॑ ।
ಶೂರಃ॑ । ಮ॒ದಾಯ॑ । ಪ್ರತಿ॑ । ಧ॒ತ್ । ಪಿ॒ಬ॒ಧ್ಯೈ॑ ॥ ೫ ॥

॥ ಸಾಯಣಭಾಷ್ಯಂ ॥

ಅಥಾಧುನಾ ಶೂರೋ ವಿಕ್ರಾಂತೋ ಮಘವಾ ಧನವಾನಿಂದ್ರಃ ಶ್ವೇತಂ ಶುಭ್ರಂ ಕಲಶಂ ಕಲಶೇ ಪಾತ್ರೇ ಸ್ಥಿತಂ ಗೋಭಿರ್ಮಿಶ್ರೀಕೃತಂ ಪಯಸಾಕ್ತಂ ಸಿಕ್ತಮಾಪಿಪ್ಯಾನಮಾಪ್ಯಾಯಯಿತಂ ಶುಕ್ರಂ ಸಾರೋಪೇತಮಧ್ವರ್ಯುಭಿಃ ಪ್ರಯತಂ ದತ್ತಮಂಧಃ ಸೋಮಲಕ್ಷಣಮನ್ನಂ ಮಧ್ವೋ ಮಧುರಸ್ಯ ಸೋಮರಸಸ್ಯಾಗ್ರಮಗ್ರೇ ಮದಾಯ ಮದಾರ್ಥಂ ಪಿಬಧ್ಯೈ ಪಾತುಂ ಪ್ರತಿ ಧತ್ । ಪ್ರತಿದಧಾತು । ಪುನರುಕ್ತಿರಾದರಾರ್ಥಾ ॥

॥ ಪ್ರತಿಪದಾರ್ಥ ॥

ಅಥ—ಈಗ । **ಶೂರಃ**—ಪರಾಕ್ರಮಿಯೂ । **ಮಘವಾ**—ಧನವಂತನೂ ಆದ । **ಇಂದ್ರಃ**—ಇಂದ್ರನು । **ಶ್ವೇತಂ**—ಶುಭ್ರವಾದುದೂ । **ಕಲಶಂ**—ಕಲಶಪಾತ್ರೆಯಲ್ಲಿರುವುದೂ । **ಗೋಭಿಃ**—ಹಾಲಿನಿಂದ । **ಆಕ್ತಂ**—ಮಿಶ್ರಿತವಾದುದೂ । **ಆಪಿಪ್ಯಾನಂ**—ತೃಪ್ತಿದಾಯಕವಾದುದೂ । **ಶುಕ್ರಂ**—ಸಾರಭೂತವಾದುದೂ । **ಅಧ್ವರ್ಯುಭಿಃ**—ಅಧ್ವರ್ಯುಗಳಿಂದ । **ಪ್ರಯತಂ**—ಅರ್ಪಿತವಾದುದೂ ಆದ । **ಅಂಧಃ**—ಸೋಮರೂಪವಾದ ಅನ್ನವನ್ನು । **ಮದಾಯ**—ಹರ್ಷಲಾಭಕ್ಕಾಗಿ । **ಪಿಬಧ್ಯೈ**—ಪಾನಮಾಡುವುದಕ್ಕೆ । **ಪ್ರತಿ ಧತ್**—ಸ್ವೀಕರಿಸಲಿ । **ಮಧ್ವಃ**—ಮಧುರವಾದ ಸೋಮರಸದ । **ಅಗ್ರಂ**—ಮೇಲಿನಭಾಗವನ್ನು । **ಪ್ರತಿ ಧತ್**—ಸ್ವೀಕರಿಸಲಿ

॥ ಭಾವಾರ್ಥ ॥

ಪರಾಕ್ರಮಿಯೂ ಧನವಂತನೂ ಆದ ಇಂದ್ರನು, ಶುಭ್ರವಾದುದೂ, ಕಲಶಪಾತ್ರೆಯಲ್ಲಿಟ್ಟಿರುವುದೂ, ಪಯಸ್ಸಿನಿಂದ ಮಿಶ್ರಿತವಾದುದೂ, ತೃಪ್ತಿದಾಯಕವಾದುದೂ, ಸಾರಭೂತವಾದುದೂ, ಅಧ್ವರ್ಯುಗಳಿಂದ ಅರ್ಪಿತವಾದುದೂ ಆದ ಸೋಮರಸವನ್ನು ತನ್ನ ಹರ್ಷಾರ್ಥವಾಗಿ ಪಾನಮಾಡಲು ಸ್ವೀಕರಿಸಲಿ. ಮಧುರವಾದ ಸೋಮರಸದ ಅಗ್ರಭಾಗವನ್ನು ಪಾನಮಾಡಲಿ.

English Translation.

Now may Maghavan accept the pure nutritious (sacrificial) food in a white pitcher, mixed with milk and curds, offered by the priests; the upper part of the sweet (beverage) to drink for his exhilaration: may the hero accept (it) to drink for (his) exhilaration.

ಇಪ್ಪತ್ತೆಂಟನೆಯ ಸೂಕ್ತವು

ತ್ವಾ ಯುಜೇತಿ ಪಂಚರ್ಚಂ ಸಪ್ತಮಂ ಸೂಕ್ತಂ ವಾಮದೇವಸ್ಯಾರ್ಷಂ ತ್ರೈಷ್ಟುಭಮಿಂದ್ರಾ-ಸೋಮದೇವತಾಕಂ । ಅನುಕ್ರಾಂತಂ ಚ । ತ್ವಾ ಯುಜ್ಯೇಂದ್ರಾಸೋಮಮಿತಿ । ವಿನಿಯೋಗೋ ಲೈಂಗಿಕಃ ॥

ಅನುವಾದವು—**ತ್ವಾ ಯುಜಾ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಾಮದೇವನು ಋಷಿಯು, ಇಂದ್ರ ಮತ್ತು ಸೋಮ ಎಂಬುವರು ದೇವತೆಗಳು, ತ್ರಿಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ—**ತ್ವಾ ಯುಜೈಂದ್ರಾಸೋಮಯೋಃ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

ಸೂಕ್ತ—೨೮

ಮಂಡಲ—೪ ॥ ಅನುವಾಕ—೩ ॥ ಸೂಕ್ತ—೨೮ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ—೧೭ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥
ಋಷಿಃ—ವಾಮದೇವಃ ।
ದೇವತಾ—ಇಂದ್ರಾಸೋಮೌ ॥
ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ತ್ವಾ ಯುಜಾ ತವ ತತ್ಸೋಮ ಸಖ್ಯ ಇಂದ್ರೋ ಅಪೋ ಮನವೇ ಸಸ್ರು-
ತಸ್ಕಃ ।
ಅಹನ್ನಹಿಮರಿಣಾತ್ಸಪ್ತ ಸಿಂಧೂನಪಾವೃಣೋದಪಿಹಿತೇವ ಖಾನಿ ॥ ೧ ॥

॥ ಪದಪಾಠಃ ॥

ತ್ವಾ । ಯುಜಾ । ತವ । ತತ್ । ಸೋಮ । ಸಖ್ಯೇ । ಇಂದ್ರಃ । ಅಪಃ । ಮನವೇ । ಸಸ್ರುತಃ । ಕರಿತಿ ।
ಕಃ ।
ಅಹನ್ । ಅಹಿಂ । ಅರಿಣಾತ್ । ಸಪ್ತ । ಸಿಂಧೂನ್ । ಅಪ । ಅವೃಣೋತ್ । ಅಪಿಹಿತಾ ಇವ । ಖಾನಿ ॥

॥ ಸಾಯಣಭಾಷ್ಯಂ ॥

ಹೇ ಸೋಮ ತವ ತ್ವದೀಯೇ ತತ್ತಸ್ಮಿನ್ ಸಖ್ಯೇ ಸತಿ ತ್ವಾ ತ್ವಯಾ ಯುಜಾ ಸಹಾಯೇನೇಂದ್ರಃ ಸಸ್ರುತಃ ಸರಣಶೀಲಾ ಅಪೋ ವೃಷ್ಟಿಲಕ್ಷಣಾನ್ಯುದಕಾನಿ ಮನವೇ ಮನುಷ್ಯೇಭ್ಯಃ ಕಃ । ಅಕರೋತ್ । ಕಿಂಚ ಅಹಿಂ ವೃತ್ರಮಸುರಮಹನ್ । ಹತವಾನ್ । ಸಪ್ತ ಸರ್ಪಣಶೀಲಾಃ ಸಿಂಧೂನಪೋಽರಿಣಾತ್ । ಪ್ರೈರಯತ್ । ಅಪಿಹಿತೇವಾಪಿಹಿತಾನೀವ ವೃತ್ರೇಣ ತಿರೋಹಿತಾನಿ ಚ । ಅತ್ರೇವಶಬ್ದಶ್ಚಾರ್ಥೇ । ಖಾನಿ ಸ್ರೋತಸಾಂ ದ್ವಾರಾಣ್ಯಪಾವೃಣೋತ್ । ಉದ್ಘಾಟಿತವಾನ್ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮನೇ। **ತವ**—ನಿನ್ನ। **ತತ್ ಸಖ್ಯೇ**—ಸಖಿತ್ವವು ಇಂದ್ರನೊಡನಿರುವುದರಿಂದಲೇ। **ತ್ವಾ**—ನಿನ್ನೊಡನೆ! **ಯುಜಾ**—ಸೇರಿಕೊಂಡು (ನಿನ್ನ ಸಹಾಯದಿಂದ)। **ಇಂದ್ರಃ**—ಇಂದ್ರನು। **ಸಸ್ರುತಃ**—ಪ್ರವಹಿಸಲು ಯೋಗ್ಯವಾದ। **ಅಪಃ**—ಉದಕಗಳನ್ನು। **ಮನವೇ**—ಮಾನವರ ಹಿತಕ್ಕಾಗಿ। **ಕಃ**—ಪ್ರವಹಿಸುವಂತೆ ಮಾಡಿದನು। **ಅಹಿಂ**—ವೃತ್ರಾಸುರನನ್ನು। **ಅಹನ್**—ಕೊಂದನು। **ಸಪ್ತ ಸಿಂಧೂನ್**—ಸಪ್ತನದಿಗಳನ್ನೂ। **ಅರಿಣಾತ್**—ಪ್ರವಹಿಸುವಂತೆ ಪ್ರೇರಿಸಿದನು; **ಅಪಿಹಿತೇವ**—(ವೃತ್ರನಿಂದ) ಮುಚ್ಚಲ್ಪಟ್ಟಿದ್ದರೂ ಸಹ। **ಖಾನಿ**— ಪ್ರವಾಹರೂಪವಾಗಿ ಹರಿಯುವ ನದಿಗಳ ದ್ವಾರಗಳನ್ನು (ಮಾರ್ಗಗಳನ್ನು)। **ಅಸಾವೃಣೋತ್**—ತೆರೆದನು (ಉದಕಗಳು ಪ್ರವಹಿಸುವಂತೆ ಮಾಡಿದನು).

॥ ಭಾವಾರ್ಥ ॥

ಎಲೈ ಸೋಮನೇ, ಇಂದ್ರನೊಡನೆ ನಿನ್ನ ಸಖಿತ್ವವಿರುವುದರಿಂದಲೇ ಇಂದ್ರನು ನಿನ್ನೊಡನೆ ಸೇರಿ ನಿನ್ನ ಸಹಾಯದಿಂದ ಪ್ರವಾಹಯೋಗ್ಯವಾದ ಉದಕಗಳನ್ನು ಮಾನವರ ಹಿತಕ್ಕಾಗಿ ಪ್ರವಹಿಸುವಂತೆ ಮಾಡಿದನು. ವೃತ್ರಾಸುರನನ್ನು ಕೊಂದು, ಪ್ರವಾಹದ ಬಾಗಿಲುಗಳನ್ನು ಅವನು ಮುಚ್ಚಿದ್ದರೂ ಸಹ ಅವನ್ನು ತೆರೆದು ಸಪ್ತ ಮಹಾನದಿಗಳನ್ನೂ ಪ್ರವಹಿಸುವಂತೆ ಮಾಡಿದನು

English Translation.

Through that friendship, Soma, which has united you with your (friend) Indra, he has made the waters flow for man, he has slain Ahi, he has sent forth the seven rivers, and has opened the shut-up sources (of the stream)

॥ ಸಂಹಿತಾಪಾಠಃ ॥

ತ್ವಾ ಯುಜಾ ನಿ ಖಿದತ್ಸೂರ್ಯಸ್ಯೇಂದ್ರಶ್ಚಕ್ರಂ ಸಹಸಾ ಸದ್ಯ ಇಂದೋ ।
ಅಧಿ ಷ್ಣುನಾ ಬೃಹತಾ ವರ್ತಮಾನಂ ಮಹೋ ದ್ರುಹೋ ಅಪ ವಿಶ್ವಾಯು ಧಾಯಿ ॥ ೨ ॥

॥ ಪದಪಾಠಃ ॥

ತ್ವಾ । ಯುಜಾ । ನಿ । ಖಿದತ್ । ಸೂರ್ಯಸ್ಯ । ಇಂದ್ರಃ । ಚಕ್ರಂ । ಸಹಸಾ । ಸದ್ಯಃ । ಇಂದೋ ಇತಿ । ಅಧಿ । ಷ್ಣುನಾ । ಬೃಹತಾ । ವರ್ತಮಾನಂ । ಮಹಃ । ದ್ರುಹಃ । ಅಪ । ವಿಶ್ವಾಯು । ಧಾಯಿ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದೋ ಸೋಮ ಇಂದ್ರಃ ಸದ್ಯಃ ಸಪದಿ ತ್ವಾ ತ್ವಯಾ ಯುಜಾ ಸಹಾಯೇನ ಸೂರ್ಯಸ್ಯ ಪ್ರೇರಕಸ್ಯ ಸವಿತುಃ ಸಂಬಂಧಿನಃ ಪೂರ್ವಂ ದ್ವಿಚಕ್ರಸ್ಯ ರಥಸ್ಯೈಕಂ ಚಕ್ರಂ ಸಹಸಾಭಿಭಾವುಕೇನ ಬಲೇನ ನಿ ಖಿದತ್ । ಅಚ್ಛಿನತ್ । ಕೀದೃಶಂ । ಅಧಿ ಉಪರಿ ಸ್ನುನಾ ಸ್ಥಿತೇನ ಬೃಹತಾ ಮಹತಾಂತರಿಕ್ಷೇಣ ವರ್ತಮಾನಂ । ಕಿಂಚ ಮಹೋ ಮಹತಃ ಪ್ರಭೂತಸ್ಯ ದ್ರುಹೋ ದ್ರೋಗ್ಧುಃ ಸೂರ್ಯಸ್ಯ ಸಂಬಂಧಿ ವಿಶ್ವಾಯು ಸರ್ವತೋ ಗಂತೃ ಚಕ್ರಮುಪ ಧಾಯಿ । ಇಂದ್ರೇಣಾಪಾಹಾರಿ ॥

॥ ಪ್ರತಿಪದಾರ್ಥ ॥

ಇಂದೋ—ಎಲೈ ಸೋಮವೇ । **ಇಂದ್ರಃ**—ಇಂದ್ರನು । **ಸದ್ಯಃ**—ಒಡನೆಯೇ । **ತ್ವಾ**—ನಿನ್ನ । **ಯುಜಾ**—ಸಹಾಯದಿಂದ । **ಸೂರ್ಯಸ್ಯ**—ಸೂರ್ಯನ । **ಅಧಿ ಸ್ನುನಾ**—ಅತ್ಯುನ್ನತಪ್ರದೇಶದಲ್ಲಿರುವುದೂ । **ಬೃಹತಾ**—ಮಹತ್ಸ್ವರೂಪವುಳ್ಳದ್ದೂ ಆದ ಅಂತರಿಕ್ಷದಲ್ಲಿ । **ವರ್ತಮಾನಂ**—ಇರತಕ್ಕ । **ಚಕ್ರಂ**—ಸೂರ್ಯರಥದ ಚಕ್ರವನ್ನು । **ಸಹಸಾ**—ಬಲಾತ್ಕಾರದಿಂದ । **ನಿ ಖಿದತ್**—ಕಿತ್ತುಕೊಂಡನು । **ಮಹಃ**—ಮಹತ್ಸ್ವರೂಪವುಳ್ಳ । **ದ್ರುಹಃ**—ಸೂರ್ಯಸಂಬಂಧಿಯೂ । **ವಿಶ್ವಾಯು**—ಸರ್ವತ್ರ ಸಂಚರಿಸುವುದೂ ಆದ ಆ ಚಕ್ರವು। **ಉಪ ಧಾಯಿ**—ಅಪಹರಿಸಲ್ಪಟ್ಟಿತು

॥ ಭಾವಾರ್ಥ ॥

ಎಲೈ ಸೋಮನೇ, ನಿನ್ನ ಸಹಾಯದಿಂದಲೇ ಇಂದ್ರನು ಅತ್ಯುನ್ನತಪ್ರದೇಶದಲ್ಲಿರುವುದೂ, ಮಹತ್ಸ್ವರೂಪವುಳ್ಳದ್ದೂ ಆದ ಅಂತರಿಕ್ಷದಲ್ಲಿರತಕ್ಕ ಸೂರ್ಯಚಕ್ರವನ್ನು ಬಲಾತ್ಕಾರದಿಂದ ಕಿತ್ತುಕೊಂಡನು. ಸೂರ್ಯಸಂಬಂಧಿಯೂ, ಸರ್ವತ್ರ ಸಂಚರಿಸುವುದೂ ಆದ ಆ ಸೂರ್ಯಚಕ್ರವು ಅಪಹರಿಸಲ್ಪಟ್ಟಿತು.

English Translation.

With you, Soma, for his ally, Indra has quickly taken off by force the wheel of the chariot of the sun, abiding above with the vast and stationary (firmament): the everywhere-going wheel (of the car) of the great oppressor has been taken away.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಇಂದ್ರನು ಸೋಮದೇವತೆಯ ಸಹಾಯದಿಂದ ಅಂತರಿಕ್ಷದಲ್ಲಿರತಕ್ಕ ಸೂರ್ಯರಥದ ಚಕ್ರವನ್ನು ಬಲಾತ್ಕಾರದಿಂದ ಅಪಹರಿಸಿದನೆಂದು ಹೇಳಿದೆ.

ಯತ್ರೋತ ಬಾಧಿತೇಭ್ಯಕ್ತಂ ಕುತ್ಸಾಯ ಯುಧ್ಯತೇ ।
ಮುಷಾಯ ಇಂದ್ರ ಸೂರ್ಯಂ ॥

(ಋ. ಸಂ. ೪-೩೦-೪)

ಎಂಬ ಋಕ್ಕಿನಲ್ಲಿ ಅಸುರರೊಡನೆ ಯುದ್ಧಮಾಡುತ್ತಿದ್ದು ಅವರಿಂದ ಹಿಂಸೆಗೆ ಒಳಗಾದ ಕುತ್ಸ ಎಂಬ ರಾಜರ್ಷಿಗೆ ಸಹಾಯಮಾಡುವ ಉದ್ದಿಶ್ಯದಿಂದ ಇಂದ್ರನು ಸೂರ್ಯರಥದ ಚಕ್ರವನ್ನು ಅಪಹರಿಸಿ ಕುತ್ಸನಿಗೆ ಯುದ್ಧದಲ್ಲಿ ಸಹಾಯ ಮಾಡಿದನೆಂದು ಹೇಳಿದೆ ಇಂದ್ರನು ಸೂರ್ಯನ ರಥಚಕ್ರವನ್ನು ಉಪಯೋಗಿಸಿ ಶತ್ರುವನ್ನು ಜಯಿಸಿದ ವಿಷಯದಲ್ಲಿ ಒಂದು ಕಥೆ ಇದೆ—

ಕೇಚನ ಅಸುರಾಃ ಇಂದ್ರಸ್ಯ ವಜ್ರಾಯುಧೇನ ಅಸ್ಮಾಕಂ ವಧೋ ಮಾ ಭೂದಿತಿ ಬ್ರಹ್ಮಣಾ ವರಂ ಲಬ್ಧಾ ಇಂದ್ರಮಗಣಯ್ಯ ಉದ್ಯತ್ತಾಃ ಸ್ಥಿತಾಃ । ತಾನ್ ಹಂತುಮಿಂದ್ರಃ ಸೂರ್ಯರಥಸ್ಯ ಚಕ್ರಂ ಆದಾಯ ಅವಧೀತ್ ।

ಕೆಲವು ಅಸುರರು ಇಂದ್ರನ ವಜ್ರಾಯುಧದಿಂದ ತಮಗೆ ಮರಣಭಯವುಂಟಾಗದಂತೆ ಬ್ರಹ್ಮನಿಂದ ವರವನ್ನು ಪಡೆದು, ಇಂದ್ರನನ್ನು ಲಕ್ಷ್ಯಮಾಡದೆ ದುರ್ಮಾರ್ಗದಿಂದ ವರ್ತಿಸುತ್ತಿದ್ದರು ಆಗ ಇಂದ್ರನು ಸೂರ್ಯನ ರಥದ ಚಕ್ರವನ್ನೇ ಆಯುಧವನ್ನಾಗಿ ಮಾಡಿಕೊಂಡು ಅವರೆಲ್ಲರನ್ನೂ ಸಂಹರಿಸಿದನು ಎಂಬ ಇತಿಹಾಸವಿದೆ ಇದನ್ನೇ ಈ ಋಕ್ಕಿನಲ್ಲಿ ವಿವರಿಸಲಾಗಿದೆ

॥ ಸಂಹಿತಾಪಾಠಃ ॥

ಅಹನ್ನಿಂದ್ರೋ ಅದಹದಗ್ನಿರಿಂದೋ ಪುರಾ ದಸ್ಯೂನ್ಮಧ್ಯಂದಿನಾದಭೀಕೇ ।
ದುರ್ಗೇ ದುರೋಣೇ ಕ್ರತ್ವಾ ನ ಯಾತಾಂ ಪುರೂ ಸಹಸ್ರಾ ಶರ್ವಾ ನಿ ಬರ್ಹೀತ್ ॥ ೩ ॥

॥ ಪದಪಾಠಃ ॥

ಅಹನ್ । ಇಂದ್ರಃ । ಅದಹತ್ । ಅಗ್ನಿಃ । ಇಂದೋ ಇತಿ । ಪುರಾ । ದಸ್ಯೂನ್ । ಮಧ್ಯಂದಿನಾತ್ । ಅಭೀಕೇ ।
ದುರ್ಗೇ । ದುರೋಣೇ । ಕ್ರತ್ವಾ । ನ । ಯಾತಾಂ । ಪುರು । ಸಹಸ್ರಾ । ಶರ್ವಾ । ನಿ । ಬರ್ಹೀತ್ ॥ ೩ ॥

॥ ಸಾಯಣಭಾಷ್ಯಂ ॥

ಹೇ ಇಂದೋ ಸೋಮ ಅಭೀಕೇ ಸಂಗ್ರಾಮೇ ದಸ್ಯೂನ್ ಶತ್ರೂನಿಂದ್ರೋಽಹನ್ । ಅವಧೀತ್ । ಅಗ್ನಿಃ ಕಾಂಶ್ಚಿಚ್ಛತ್ರೂನದಹತ್ । ದದಾಹ । ಕೀದೃಶಾವಿಂದ್ರಾಗ್ನೀ । ಮಧ್ಯಂದಿನಾನ್ಮಧ್ಯಾಹ್ನಾತ್ಪುರಾ ಪುರಸ್ತಾತ್ಪೂರ್ವಾಹ್ಣೇ ತವ ಪಾನಾಲ್ಲಬ್ಧಬಲಾವಿತಿ ಶೇಷಃ । ಯಾತಾಂ ಗಚ್ಛತಾಮಸುರಾಣಾಂ ಪುರು ಪುರೂಣಿ ಬಹೂನಿ ಸರ್ವಾ ಸರ್ವಾಣಿ ನಿರವಶೇಷಾಣಿ ಸಹಸ್ರಾ ಸಹಸ್ರಾಣ್ಯಪರಿಮಿತಾನಿ ನಿ ಬರ್ಹೀತ್ ।

ನೈಬರ್ಹೀತ್ । ಇಂದ್ರೋ೭ವಧೀತ್ । ತತ್ರ ದೃಷ್ಟ್ವಾಂತಃ । ದುರೋಣೇ ದುರವನೇ ರಕ್ಷಿತುಮತಕ್ಯೇ ದುರ್ಗೇ ದುರವಗಾಹೇ ದೇಶೇ ಕೃತ್ವಾ ನ ಕರ್ಮಣಾ ಸ್ವಕೀಯಂ ಕಾರ್ಯಮುದ್ದಿಶ್ಯ ಗಚ್ಛತಃ ಪಥಿಕಾ-ನೈಥಾ ಧನಲೋಲುಪಶ್ಚೋರೋ ಹಂತಿ ತದ್ವತ್ ॥

॥ ಪ್ರತಿಪದಾರ್ಥ ॥

ಇಂದೋ—ಎಲೈ ಸೋಮವೇ, । **ಮಧ್ಯಂದಿನಾತ್**—ಮಧ್ಯಾಹ್ನಕಾಲಕ್ಕಿಂತಲೂ । **ಪುರಾ**—ಮೊದಲೇನೆ (ನಿನ್ನನ್ನು ಪಾನಮಾಡಿದ) । **ಇಂದ್ರಃ**—ಇಂದ್ರನು । **ಅಭೀಕೇ**—ಯುದ್ಧದಲ್ಲಿ । **ದಸ್ಯೂನ್**—ಶತ್ರುಗಳನ್ನು । **ಅಹನ್**—ಕೊಂದನು । **ಅಗ್ನಿಃ**—ಅಗ್ನಿಯೂ ಸಹ (ಅದೇ ರೀತಿ) । **ಅದಹತ್**—ದಹಿಸಿ ನಾಶಮಾಡಿದನು । **ದುರೋಣೇ**—ರಕ್ಷಿಸಲಸಾಧ್ಯವಾದುದೂ । **ದುರ್ಗೇ**—ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದುದೂ ಆದ ದುರ್ಗಪ್ರದೇಶದಲ್ಲಿ । **ಕೃತ್ವಾ ನ**—ತಮ್ಮ ಕಾರ್ಯವನ್ನುದ್ದೇಶಿಸಿ ಹೋಗುತ್ತಿರುವ ಪ್ರಯಾಣಿಕರನ್ನು ಚೋರರು ಹೊಡೆದು ಹಿಂಸಿಸುವಂತೆ । **ಯಾತಾಂ**—ಸಂಚರಿಸುತ್ತಿರುವ ಅಸುರರ । **ಪುರು ಸಹಸ್ರಾ**—ಅನೇಕ ಸಹಸ್ರ ಸಂಖ್ಯೆಯುಳ್ಳ ಶತ್ರುಗಳನ್ನು । **ಶರ್ವಾ**—ನಿಶ್ಶೇಷವಾಗಿ । **ನಿ ಬರ್ಹೀತ್**—ಇಂದ್ರನು ನಾಶಮಾಡಿದನು

॥ ಭಾವಾರ್ಥ ॥

ಎಲೈ ಸೋಮವೇ, ಮಧ್ಯಾಹ್ನಕಾಲಕ್ಕಿಂತಲೂ ಮೊದಲೇ ನಿನ್ನನ್ನು ಪಾನಮಾಡಿದ ಇಂದ್ರನು ಸಂಗ್ರಾಮದಲ್ಲಿ ಶತ್ರುಗಳನ್ನು ಕೊಂದನು ಅಗ್ನಿಯೂ ಸಹ ನಿನ್ನ ಸಹಾಯದಿಂದಲೇ ಶತ್ರುಗಳನ್ನೆಲ್ಲಾ ನಾಶಮಾಡಿದನು ರಕ್ಷಿಸಲಸಾಧ್ಯವಾದುದೂ, ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದುದೂ ಆದ ಗಹನವಾದ ದುರ್ಗಪ್ರದೇಶದಲ್ಲಿ ಸ್ವಕಾರ್ಯಕ್ಕಾಗಿ ಹೋಗುತ್ತಿರುವ ಪ್ರಯಾಣಿಕರನ್ನು ಚೋರರು ಹೊಡೆದು ಹಿಂಸಿಸುವಂತೆ ಸಂಚರಿಸುತ್ತಿರುವ ಸಹಸ್ರಾರು ಅಸುರರನ್ನೂ ಇಂದ್ರನು ನಿಶ್ಶೇಷವಾಗಿ ನಾಶಮಾಡಿದನು.

English Translation.

Indra has slain the Dasyus, Soma, in battle: Agni has consumed them before the noon: he (Indra) has destroyed the whole of many thousands, as (robbers are the destroyers of those) going upon (their own) business, in a difficult and dangerous (place).

॥ ಸಂಹಿತಾಪಾಠಃ ॥

ವಿಶ್ವಸ್ಮಾತ್ಸೀಮಧಮಾ ಇಂದ್ರ ದಸ್ಯೂನ್ವಿಶೋ ದಾಸೀರಕೃಣೋರಪ್ರಶಸ್ತಾಃ ।
ಅಬಾಧೇಥಾಮಮೃಣತಂ ನಿ ಶತ್ರೂನವಿಂದೇಥಾಮಪಚಿತಿಂ ವಧತ್ರೈಃ ॥೪॥

॥ पदपाठः ॥

विश्वस्मात् । सीम् । अधमान् । इन्द्र । दस्यून् । विशः । दासीः । अकृणोः । अप्रशस्ताः ।

अबाधेथाम् । अमृणतम् । नि । शत्रून् । अविन्देथाम् । अपचितिम् । वधत्रैः ॥ ४ ॥

॥ सायणभाष्यं ॥

हे इन्द्र त्वं सीमेनान्दस्यून्विश्वस्मात्कुत्सवर्मादुग्णादधमान् हीनानकृणोः । अकरोः । किंच दासीः कर्महीना विशो मानुषीः प्रजा अप्रशस्ता गर्हिता अकृणोः । हे इन्द्रासोमौ युवानौ शत्रूनबाधेथाम् । न्यमृणतम् । नितरां हिंसितवन्तौ । अपि च वधत्रैस्तेषां शत्रूणां प्रहारैरुपचितिं पूजां जनेभ्योऽविन्देथाम् । अलभेथाम् ॥

॥ प्रतिपदार्थ ॥

इन्द्र—ಎಲೈ ಇಂದ್ರನೇ । सीम् दस्यून्—ಈ ಶತ್ರುಗಳನ್ನು (ದಸ್ಯುಗಳನ್ನು) । विश्वस्मात्—ಸಮಸ್ತಸದ್ಗುಣಗಳಿಂದಲೂ । अधमान्—ಭ್ರಷ್ಟರಾಗುವಂತೆ । अकृणोः—ಮಾಡಿದೆ । दासीः—ಕರ್ಮಹೀನರಾದ । विशः—ಮಾನವಪ್ರಜೆಗಳನ್ನು । अप्रशस्ताः—ನಿಂದಾಯೋಗ್ಯರನ್ನಾಗಿ ಮಾಡಿದೆ (ಎಲೈ ಇಂದ್ರ ಮತ್ತು ಸೋಮರೇ) । शत्रून्—ಶತ್ರುಗಳನ್ನು । अबाधेथाम्—ಹಿಂಸಿಸಿರಿ । नि अमृणतम्—ಪೂರ್ಣವಾಗಿ ನಾಶಪಡಿಸಿರಿ । वधत्रैः—ಶತ್ರುನಾಶದಿಂದ (ಉಪಕೃತರಾದ ಜನಗಳ) । अपचितिम्—ಕೃತಜ್ಞತಾಪೂರ್ವಕವಾದ ಪೂಜೆಯನ್ನು । अविन्देथाम्—ಪಡೆಯಿರಿ.

॥ भावार्थ ॥

ಎಲೈ ಇಂದ್ರನೇ, ನೀನು ಈ ದಸ್ಯುಗಳನ್ನು ಸಮಸ್ತ ಸದ್ಗುಣಗಳಿಂದಲೂ ಭ್ರಷ್ಟರಾಗುವಂತೆ ಮಾಡಿದೆ ಕರ್ಮಹೀನರಾದ ಮಾನವಪ್ರಜೆಗಳನ್ನು ನಿಂದಾಯೋಗ್ಯರನ್ನಾಗಿ ಮಾಡಿದೆ ಎಲೈ ಇಂದ್ರಾಸೋಮರೇ, ಶತ್ರುಗಳನ್ನು ಪೂರ್ಣವಾಗಿ ಹಿಂಸಿಸಿ ನಾಶಪಡಿಸಿರಿ ಶತ್ರುನಾಶದಿಂದ ಉಪಕೃತರಾದ ಜನಗಳ ಕೃತಜ್ಞತಾಪೂರ್ವಕವಾದ ಪೂಜೆಯನ್ನು ಸ್ವೀಕರಿಸಿರಿ.

English Translation

Indra, you have made these Dasyus devoid of all (good qualities), you have made the servile races abject may you, (Soma and Indra), repel (and) destroy (your) enemies accept (our) homage for their destruction.

॥ संहितापाठः ॥

एवा सत्यं मघवाना युवं तदिन्द्रश्च सोमोर्वमश्व्यं गोः ।
अदर्दृतमपिहितान्यश्ना रिरिचथुः क्ष्मश्चित्तृदानाः ॥ ५ ॥

॥ पदपाठः ॥

एव । सत्यं । मघवानाः । युवं । तत् । इन्द्रः । च । सोमः । ऊर्वं । अश्व्यं । गोः ।
अ । अदर्दृतं । अपिऽहितानि । अश्ना । रिरिचथुः । क्ष्मः । चित् । तृदानाः ॥ ५ ॥

॥ सायणभाष्यं ॥

हे सोम त्वं चेन्द्रश्चेति युवामुभावूर्वं महान्तमश्व्यमश्वसमूहं गोरर्गवां समूहं चादर्दृतं । आदरयतं । अपिहितानि पणिभिराच्छादितानि गवां वृन्दानि क्ष्माश्चित् पणीनां भूमिमाश्चाश्ना शनपरेण बलेन रिरिचथुः । रेचितवन्तौ । हे मघवानौ धनवन्तावित्यन्द्रासोमौ तत्कृदानाः शत्रूणां हिंसकौ युवं युवामेवैवमुक्तप्रकारेण यत्कृतवन्तौ तत्सर्वं सत्यमेव ॥

॥ प्रतिपदार्थ ॥

मघवानाः—धनवंतरू । तत्कृदानाः—शत्रुहिंसकरू आद । सोम इन्द्रश्च—ऐलै सोमु मत्तु इंद्ररे । युवं—नीविब्बरू सह । अपिहितानि—पणिगळिंद बच्चिडल्पट्टद्दू । ऊर्वं—महत्तादुदू आद । अश्व्यं—अश्वसमूहगळन्नू । गोः—गोवुगळ समूहगळन्नू । आदर्दृतं—बिडिसि हंचिदिरि एंबुदू । क्ष्माश्च—पणिगळ भूमिगळन्नू सह । अश्ना—निम्म बलदिंद । रिरिचथुः—बिडिसि निम्म वशमाडिकोंडिरि एंबुदू । एव तत्—इवेल्लवू । सत्यं—सत्यवे आगिदे.

॥ भावार्थ ॥

धनवंतरू. शत्रुहिंसकरू आद ऐलै सोमु मत्तु इंद्ररे, नीविब्बरू सह पणिगळिंद बच्चिडल्पट्टद्दू, महत्तादुदू आद अश्वसमूहगळन्नू, गोवुगळ समूहवन्नू बिडिसि हंचिदिरि एंबुदू, पणिगळ भूमिगळन्नू निम्म बलदिंद बिडिसि निम्म वशमाडिकोंडिरि एंबुदू इवेल्लवू सत्यवे आगिदे. इदरल्लि अतिशयोक्तियेनू इल्ल

English Translation.

Possessors of wealth, destroyers of foes, Indra and Soma, it is indeed true that you have distributed great numbers of horses, and of the cattle which has been concealed, and the land which you had recovered by your strength.

ಇಪ್ಪತ್ತೊಂಭತ್ತನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಆ ನಃ ಸ್ತುತ ಇತಿ ಪಂಚರ್ಚಮಷ್ಟಮಂ ಸೂಕ್ತಂ ವಾಮದೇವಸ್ಯಾರ್ಷಂ ತ್ರೈಷ್ಟುಭಮೈಂದ್ರಂ। ಆ ನಃ ಸ್ತುತ ಇತ್ಯನುಕ್ರಮಣಿಕಾ । ವಿನಿಯೋಗೋ ಲೈಂಗಿಕಃ ॥

ಅನುವಾದವು—**ಆ ನಃ ಸ್ತುತಃ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಾಮದೇವನು ಋಷಿಯು, ಇಂದ್ರನು ದೇವತೆಯು, ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಆ ನಃ ಸ್ತುತಃ** ಎಂದು ಮೊದಲಾಗಿ ಹೇಳಿರುವುದು. ವಿನಿಯೋಗವು ಲೈಂಗಿಕವು

ಸೂಕ್ತ—೨೯

ಮಂಡಲ—೪ ॥ ಅನುವಾಕ—೩ ॥ ಸೂಕ್ತ—೨೯ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ—೧೮ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥
॥ ಋಷಿಃ—ವಾಮದೇವಃ ॥
॥ ದೇವತಾ—ಇಂದ್ರಃ ॥
। ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಆ ನಃ ಸ್ತುತ ಉಪ ವಾಜೇಭಿರೂತೀ ಇಂದ್ರ ಯಾಹಿ ಹರಿಭಿರ್ಮಂದಸಾನಃ।
ತಿರಶ್ಚಿದರ್ಯಃ ಸವನಾ ಪುರೂಣ್ಯಾಂಗೂಷೇಭಿರ್ಗೃಣಾನಃ ಸತ್ಯರಾಧಾಃ॥೧॥

॥ ಪದಪಾಠಃ ॥

ಆ । ನಃ । ಸ್ತುತಃ । ಉಪ । ವಾಜೇಭಿಃ । ಊತೀ । ಇಂದ್ರ । ಯಾಹಿ । ಹರಿಭಿಃ । ಮಂದಸಾನಃ ।
ತಿರಃ । ಚಿತ್ । ಅರ್ಯಃ । ಸವನಾ । ಪುರೂಣಿ । ಆಂಗೂಷೇಭಿಃ । ಗೃಣಾನಃ । ಸತ್ಯರಾಧಾಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಸ್ತುತಸ್ತ್ವಂ ವಾಜೇಭಿರ್ವಾಜೈರನ್ನೈಃ ಸಹ ತಿರಶ್ಚಿತ್ ಪ್ರಾಪ್ತಾನಿ । ತಿರಃ ಸತ ಇತಿ ಪ್ರಾಪ್ತಸ್ಯ । ನಿ. ೩-೨೦ । ಇತಿ ಯಾಸ್ಕಃ । ಪುರೂಣಿ ಪೂರ್ಣಾನಿ ಸವನಾ ಸವನಾನಿ ನೋಽಸ್ಮದೀಯಾನ್ಯಜ್ಞಾನುಪ ಪ್ರಕ್ಷ್ಯತೀ ಊತ್ಯೈ ನೋಽಸ್ಮಾಕಂ ರಕ್ಷಣಾರ್ಥಂ ಹರಿಭಿರಶ್ವೈರಾ ಯಾಹಿ । ಆಗಚ್ಛ । ಕೀದೃಶಃ । ಮಂದಸಾನೋ ಮೋದಮಾನೋಽರ್ಯಃ ಸ್ವಾಮ್ಯಂಗೂಪೇಭಿಃ ಸ್ತೋತೃಭ್ಯೋ ಗೃಣಾನಃ ಸ್ತೂಯಮಾನಃ ಸತ್ಯರಾಧಾಃ ಸತ್ಯಧನಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಮಂದಸಾನಃ**—ಹರ್ಷಗೊಂಡವನೂ । **ಅರ್ಯಃ**—ಸ್ವಾಮಿಯೂ । **ಅಂಗೂಪೇಭಿಃ**—ಸ್ತೋತ್ರಗಳಿಂದ । **ಗೃಣಾನಃ**—ಸ್ತುತಿಸಲ್ಪಡುವವನೂ । **ಸತ್ಯರಾಧಾಃ**—ಸತ್ಯಾತ್ಮಕವಾದ ಧನವುಳ್ಳವನೂ । **ಸ್ತುತಃ**—ಸ್ತೋತೃಗಳಿಂದ ಸ್ತುತನಾದವನೂ ಆದ ನೀನು । **ವಾಜೇಭಿಃ**—ಅನ್ನಗಳೊಡನೆ । **ತಿರಶ್ಚಿತ್**—ಪ್ರಾಪ್ತವಾದವೂ । **ಪುರೂಣಿ**—ಅನೇಕಸಂಖ್ಯಾಕವಾದವೂ ಆದ । **ನಃ**—ನಮ್ಮ । **ಸವನಾ ಉಪ**—ಯಜ್ಞಗಳನ್ನು ಕುರಿತು । **ಊತೀ**—ನಮ್ಮ ರಕ್ಷಣೆಗಾಗಿ । **ಹರಿಭಿಃ**—ಅಶ್ವಗಳೊಡನೆ । **ಆ ಯಾಹಿ**—ದಯಮಾಡು

॥ ಭಾವಾರ್ಥ ॥

ಎಲೈ ಇಂದ್ರನೇ, ಸೋಮವಾನದಿಂದ ಹರ್ಷಗೊಂಡವನೂ, ಸಕಲರಿಗೂ ಸ್ವಾಮಿಯೂ, ಸ್ತೋತ್ರಗಳಿಂದ ಸ್ತುತಿಸಲ್ಪಡುವವನೂ, ಸತ್ಯಾತ್ಮಕವಾದ ಧನವುಳ್ಳವನೂ, ಸ್ತೋತೃಗಳಿಂದ ಸ್ತುತನಾದವನೂ ಆದ ನೀನು ಅನ್ನಗಳೊಡನೆ ಪ್ರಾಪ್ತವಾದವೂ, ಅನೇಕಸಂಖ್ಯಾಕವಾದವೂ ಆದ ನಮ್ಮ ಯಜ್ಞಗಳಿಗಭಿಮುಖವಾಗಿ ಅಶ್ವಗಳೊಡನೆ ನಮ್ಮ ರಕ್ಷಣೆಗಾಗಿ ದಯಮಾಡು

English Translation

Honoured with accepted (sacrificial) viands, come, Indra, exulting, with your steeds, to our many rites for our protection, you who are the lord, glorified by hymns, whose wealth is truth.

॥ ಸಂಹಿತಾಪಾಠ ॥

ಆ ಹಿ ಷ್ಮಾ ಯಾತಿ ನರ್ಯಶ್ಚಿಕಿತ್ವಾನ್ಸ್ತೂಯಮಾನಃ ಸ್ತೋತೃಭಿರುಪ ಯಜ್ಞಂ ।

ಸ್ವಶ್ವೋ ಯೋ ಅಭೀರುರ್ಮನ್ಯಮಾನಃ ಸುಷ್ವಾಣೇಭಿರ್ಮದತಿ ಸಂ ಹ ವೀರೈಃ ॥ ೨ ॥

॥ ಪದಪಾಠಃ ॥

ಆ । ಹಿ । ಸ್ಮ । ಯಾತಿ । ನರ್ಯಃ । ಚಿಕಿತ್ವಾನ್ । ಹೂಯಮಾನಃ । ಸೋತೃಭ್ಯಃ । ಉಪ । ಯಜ್ಞಂ ।
ಸುಽಅಶ್ವಃ । ಯಃ । ಅಭೀರುಃ । ಮನ್ಯಮಾನಃ । ಸುಸ್ವಾನೇಭಿಃ । ಮದತಿ । ಸಂ । ಹ । ವೀರೈಃ ॥ ೨ ॥

। ಸಾಯಣಭಾಷ್ಯಂ ।

ನರ್ಯೋ ನೃಭ್ಯೋ ಹಿತಶ್ಚಿಕಿತ್ವಾನ್ ಸರ್ವಂ ಜಾನನ್ ಸೋತೃಭಿಃ ಸೋಮಮಭಿಷುಣ್ವದ್ಭಿರ್ಋತ್ವಿಗ್ಭಿರ್ಹೂಯಮಾನ ಆಹೂಯಮಾನ ಇಂದ್ರೋಽಸ್ಮದೀಯಂ ಯಜ್ಞಮುಪ ಪ್ರತಿ ಆ ಯಾತಿ । ಆಗಚ್ಛತು । ಹಿ ಸ್ಮೇತಿ ಪೂರಣೌ । ಸ್ವಶ್ವಃ ಶೋಭನಾಶ್ವೋಽಪೇತೋಽಭೀರುರ್ನಿರ್ಭಯಶ್ಚೀಲಃ ಸುಸ್ವಾನೇಭಿಃ ಸುನ್ವದ್ಭಿರ್ಯಜಮಾನೈರ್ಮನ್ಯಮಾನಃ ಸ್ತ್ರೂಯಮಾನೋ ಯ ಇಂದ್ರೋ ವೀರೈಃ ಶೂರೈರ್ಮರುದ್ಭಿಃ ಸಹ ಸಂ ಮದತಿ ಹ ಸಹ ಮಾದ್ಯತ್ಯೇವ । ಸ ಇಂದ್ರ ಆಗಚ್ಛತ್ವಿತಿ ಪೂರ್ವೇಣ ಸಂಬಂಧಃ ॥

। ಪ್ರತಿಪದಾರ್ಥ ।

ಸ್ವಶ್ವಃ—ಶ್ರೇಷ್ಠವಾದ ಅಶ್ವಗಳಿಂದ ಕೂಡಿದವನೂ । **ಅಭೀರುಃ**—ಭಯರಹಿತನೂ । **ಸುಸ್ವಾನೇಭಿಃ**—ಶ್ರೇಷ್ಠವಾದ ಸೋಮವನ್ನು ಹಿಂಡುವವರಿಂದ । **ಮನ್ಯಮಾನಃ**—ಸ್ತುತಿಸಲ್ಪಡುವವನೂ । **ನರ್ಯಃ**—ಮಾನವರಿಗೆ ಹಿತಕಾರಿಯೂ । **ಚಿಕಿತ್ವಾನ್**—ಸರ್ವಜ್ಞನೂ ಮತ್ತು । **ಯಃ**—ಯಾರು । **ವೀರೈಃ**—ಶೂರರಾದ ಮರುತ್ತುಗಳೊಂದಿಗೆ । **ಸಂ ಮದತಿ ಹ**—ಹರ್ಷಯುಕ್ತನಾಗಿರುವನೋ ಅಂತಹವನೂ ಆದ ಇಂದ್ರನು । **ಸೋತೃಭಿಃ**—ಸೋಮವನ್ನು ಹಿಂಡುವ ಋತ್ವಿಕ್ಕುಗಳಿಂದ । **ಹೂಯಮಾನಃ**—ಪ್ರಾರ್ಥಿಸಿ ಕರೆಯಲ್ಪಡುವವನಾಗಿ । **ಯಜ್ಞಂ ಉಪ**—ನಮ್ಮ ಯಜ್ಞಕ್ಕೆ ಅಭಿಮುಖನಾಗಿ । **ಆ ಯಾತಿ**—ದಯಮಾಡಲಿ

। ಭಾವಾರ್ಥ ।

ಶ್ರೇಷ್ಠವಾದ ಅಶ್ವಗಳಿಂದ ಕೂಡಿದವನೂ, ಭಯರಹಿತನೂ, ಶ್ರೇಷ್ಠವಾದ ಸೋಮವನ್ನು ಹಿಂಡುವವರಿಂದ ಸ್ತುತಿಸಲ್ಪಡುವವನೂ, ಮಾನವರಿಗೆ ಹಿತಕಾರಿಯೂ, ಸರ್ವಜ್ಞನೂ, ಶೂರರಾದ ಮರುತ್ತುಗಳೊಡನೆ ಹರ್ಷಚಿತ್ತನಾಗಿರುವವನೂ ಆದ ಇಂದ್ರನು ಸೋಮವನ್ನು ಹಿಂಡುವ ಋತ್ವಿಕ್ಕುಗಳಿಂದ ಪ್ರಾರ್ಥಿತನಾಗಿ ನಮ್ಮ ಯಜ್ಞಕ್ಕೆ ಅಭಿಮುಖನಾಗಿ ದಯಮಾಡಲಿ.

English Translation·

May Indra, the friend of man, the omniscient, come to the sacrifice when invoked by the offerers of libations, he who is possessed of good horses, who is fearless, honoured by the effusers of libations, who rejoices with the heroes (the Maruts).

॥ ಸಂಹಿತಾಪಾಠಃ ॥

ಶ್ರವಯೇದಸ್ಯ ಕರ್ಣಾ ವಾಜಯಧ್ಯೈ ಜುಷ್ಟ್ವಾಮನು ಪ್ರ ದಿಶಂ ಮಂದ-
ಯಧ್ಯೈ ॥
ಉದ್ವವೃಷ್ವಾಣೋ ರಾಧಸೇ ತುವಿಷ್ಮಾನ್ಕರನ್ನ ಇಂದ್ರಃ ಸುತೀರ್ಥಾಭಯಂ
ಚ ॥೩॥

॥ ಪದಪಾಠಃ ॥

ಶ್ರವಯೈ । ಇತ್ । ಅಸ್ಯ । ಕರ್ಣಾ । ವಾಜಯೆಧ್ಯೈ । ಜುಷ್ಟ್ವಾಂ । ಅನು । ಪ್ರ । ದಿಶಂ । ಮಂದ-
ಯೆಧ್ಯೈ ।
ಉತ್ಽವವೃಷ್ವಾಣಃ । ರಾಧಸೇ । ತುವಿಷ್ಮಾನ್ । ಕರತ್ । ನಃ । ಇಂದ್ರಃ । ಸುಽತೀರ್ಥಾ । ಅಭಯಂ ।
ಚ ॥೩॥

॥ ಸಾಯಣಭಾಷ್ಯಂ ॥

ಹೇ ಸ್ತೋತಸ್ತ್ವಮಸ್ಯೇಂದ್ರಸ್ಯ ಸಂಬಂಧಿನೌ ಕರ್ಣಾ ಕರ್ಣೌ ವಾಜಯಧ್ಯಾ ಇಂದ್ರಂ ಬಲಿನಂ ಕರ್ತುಂ ಜುಷ್ಟ್ವಾಮನು ದಿಶಂ ಸೇವಿತಾಸು ಸರ್ವಾಸು ದಿಕ್ಷು ಪ್ರ ಮಂದಯೆಧ್ಯೈ ಪ್ರಕರ್ಷೇಣೇಂದ್ರಂ ಮಾದಯಿತುಂ ಚ ಶ್ರವಯೈ । ಸ್ತೋತ್ರಾಣಿ ಶ್ರಾವಯ । ಇದಿತಿ ಪೂರಣಃ । ಉದ್ವವೃಷ್ವಾಣಃ ಸೋಮೇನೋತ್ಸಿಚ್ಯಮಾನಸ್ತುವಿಷ್ಮಾನ್ಬಲವಾನಿಂದ್ರೋ ನೋಽಸ್ಮಾಕಂ ರಾಧಸೇ ಧನಾರ್ಥಂ ಸುತೀರ್ಥಾ ಶೋಭನಾನಿ ತೀರ್ಥಾನ್ಯಭಯಂ ಚ ಭಯರಾಹಿತ್ಯಂ ಚ ಕರತ್ । ಕರೋತು ॥

॥ ಪ್ರತಿಪದಾರ್ಥ ॥

(ಎಲೈ ಸ್ತೋತೃವೇ) । **ಅಸ್ಯ**—ಈ ಇಂದ್ರನ । **ಕರ್ಣಾ**—ಕಿವಿಗಳನ್ನು । **ವಾಜಯೆಧ್ಯೈ**—(ಸ್ತುತಿಶ್ರವಣಮಾಡಲು) ಶಕ್ತಿಯುತವನ್ನಾಗಿ ಮಾಡುವುದಕ್ಕೂ । **ಜುಷ್ಟ್ವಾಂ ಅನು ದಿಶಂ**—ಅವನನ್ನು ಸೇವಿಸುವ ಸಕಲ ದಿಕ್ಕುಗಳಲ್ಲಿಯೂ । **ಪ್ರ ಮಂದಯೆಧ್ಯೈ**—ಪೂರ್ಣವಾಗಿ ಹರ್ಷಗೊಳಿಸುವುದಕ್ಕೂ । **ಶ್ರವಯೈ**—ಅವನನ್ನು ಸ್ತುತಿಸಿ ನಿನ್ನ ಸ್ತುತಿಯನ್ನು ಅವನು ಕೇಳುವಂತೆ ಮಾಡು । **ಉದ್ವವೃಷ್ವಾಣಃ**—ಸೋಮದಿಂದ ತೊಯ್ಯಲ್ಪಟ್ಟವನೂ । **ತುವಿಷ್ಮಾನ್**—ಶಕ್ತಿವಂತನೂ ಆದ । **ಇಂದ್ರಃ**—ಇಂದ್ರನು । **ಸುತೀರ್ಥಾ**—ಪವಿತ್ರಪ್ರದೇಶಗಳನ್ನು । **ನಃ**—ನಮಗೆ । **ರಾಧಸೇ**—ಧನಸಂಪತ್ಪ್ರದವಾಗುವಂತೆಯೂ । **ಅಭಯಂ ಚ**—ಭಯರಹಿತವಾಗಿರುವಂತೆಯೂ । **ಕರತ್**—ಉಂಟುಮಾಡಲಿ

॥ ಭಾವಾರ್ಥ ॥

ಎಲೈ ಸ್ತೋತೃವೇ, ಇಂದ್ರನ ಕಿವಿಗಳನ್ನು ಶ್ರುತಿಶ್ರವಣಮಾಡಲು ಶಕ್ತಿಯುತವನ್ನಾಗಿ ಮಾಡುವುದಕ್ಕೂ, ಅವನನ್ನು ಸೇವಿಸುವ ಸಕಲ ದಿಕ್ಕುಗಳಲ್ಲಿಯೂ ಪೂರ್ಣವಾಗಿ ಹರ್ಷಗೊಳಿಸುವುದಕ್ಕೂ ಸ್ತುತಿಸಿ, ಅವನು ನಿನ್ನ

ಸ್ತುತಿಯನ್ನು ಕೇಳುವಂತೆ ಮಾಡು. ಸೋಮದಿಂದ ತೊಯ್ಯಲ್ಪಟ್ಟವನೂ, ಶಕ್ತಿವಂತನೂ ಆದ ಇಂದ್ರನು ಪವಿತ್ರ ಪ್ರದೇಶಗಳನ್ನು ನಮಗೆ ಧನಸಂಪತ್ಪ್ರದವಾಗುವಂತೆಯೂ ಮತ್ತು ಭಯರಹಿತವಾಗಿರುವಂತೆಯೂ ಮಾಡಲಿ.

English Translation.

Let (his worshipper) cause his ears to listen so as to invigorate him (by praise), and to give him pleasure in every acceptable place, and being well moistened with the Soma juice, may the vigorous Indra render the holy places (conducive) to our wealth, and free from danger.

। ಸಂಹಿತಾಪಾಠಃ ।

ಅಚ್ಛಾ ಯೋ ಗಂತಾ ನಾಧಮಾನಮೂತೀ ಇತ್ಥಾ ವಿಪ್ರಂ ಹವಮಾನಂ ಗೃಣಂತಂ ।
ಉಪ ತ್ಮನಿ ದಧಾನೋ ಧುರ್ಯಾಶೂನ್ತ್ಸಹಸ್ರಾಣಿ ಶತಾನಿ ವಜ್ರಬಾಹುಃ॥

। ಪದಪಾಠಃ ।

ಅಚ್ಛ । ಯಃ । ಗಂತಾ । ನಾಧಮಾನಂ । ಊತೀ । ಇತ್ಥಾ । ವಿಪ್ರಂ । ಹವಮಾನಂ । ಗೃಣಂತಂ ।
ಉಪ । ತ್ಮನಿ । ದಧಾನಃ । ಧುರಿ । ಆಶೂನ್ । ಸಹಸ್ರಾಣಿ । ಶತಾನಿ । ವಜ್ರಬಾಹುಃ ॥ ೪ ॥

। ಸಾಯಣಭಾಷ್ಯಂ ।

ವಜ್ರಬಾಹುರ್ವಜ್ರಹಸ್ತೋ ಯ ಇಂದ್ರಸ್ತ್ಮನ್ಯಾತ್ಮನಿ ಸ್ಥಿತಾನಾತ್ಮವಶ್ಯಾನ್ ಸಹಸ್ರಾಣಿ ಸಹಸ್ರಸಂಖ್ಯಾಕಾನ್ ಶತಾನಿ ಶತಸಂಖ್ಯಾಕಾನಾಶೂನ್ ಶೀಘ್ರಗಾಮಿನೋಽಶ್ವಾನ್ಧುರಿ ರಥವಹನಪ್ರದೇಶ ಉಪ ದಧಾನಃ ಸಂಸ್ಥಾಪಯನ್ನೂತೀ ರಕ್ಷಣಾರ್ಥಂ ನಾಧಮಾನಂ ಯಾಚಮಾನಂ ವಿಪ್ರಂ ಮೇಧಾವಿನಂ ಹವಮಾನಮಾಹ್ವಯಂತಮಿತ್ಥೇತ್ಥಮನೇನ ಪ್ರಕಾರೇಣ ಗೃಣಂತಂ ಸ್ತುವಂತಂ ಯಜಮಾನಮಚ್ಛಾಭಿಮುಖ್ಯೇನ ಗಂತಾ ಗಮನಶೀಲಃ । ಭವತೀತಿ ಶೇಷಃ । ಸ ಇಂದ್ರಃ ಸುತೀರ್ಥಾನ್ಯಭಯಂ ಚ ಕರೋತ್ವಿತಿ ಪೂರ್ವೇಣ ಸಂಬಂಧಃ ॥

॥ प्रतिपदार्थः ॥

वज्रबाहुः—वज्रायुधवन्नु कैय्यल्लि हिडिदिरुव। **यः**—यावा इन्द्रनु। **इत्था**—तन्न धीनदल्लियेय इरत्तक्कवू (अथवा स्वयं प्रेरितनागियेय्)। **सहस्राणि**—सहस्रारु संख्येयुळ्ळवू। **शतानि**—शतसंख्याकवुळ्ळवू। **अशून्**—वेगगामिगळू आद अश्वगळन्नु। **धुरि**—रथद मुंभागदल्लि। **उप दधानः**—सेरिसि। **ऊतीः**—रक्षणार्थवागि। **नाधमानं**—प्रार्थिसुत्तिरुववनू। **विप्रं**—मेधावियू। **हवमानं**—सहायक्कागि करेयुत्तिरुववनू। **इत्था**—इन्द्रन गुणवर्णनदोंदिगे। **गृणंतं अच्छ**—स्तुतिसुववनू आद यजमाननिगभिमुखनागि हॊरडुवनो (आ इन्द्रनु अभयवन्नु नीडुवुमाडुववनागलि).

॥ भावार्थः ॥

वज्रधारियाद यावा इन्द्रनु तन्न धीनदल्लियेय इरत्तक्कवू सहस्रारु संख्याकवू वेगगामिगळू आद अश्वगळन्नु रथद मुंभागदल्लि सेरिसि, रक्षणार्थवागि प्रार्थिसुत्तिरुववनू, मेधावियू, सहायक्कागि करेयुत्तिरुववनू, इन्द्रन नाना गुणगळन्नू प्रशंसिसि स्तुतिसुववनू आद यजमाननिगभिमुखनागि हॊरडुवनो आदे इन्द्रनु अभयवन्नु नीडु माडलि.

English Translation.

(That Indra), who repaires to the suppliant for (his) protection, to the sage in this manner invoking and praising him, he who, armed with the thuderbolt, places, of his own accord, hundred and thousands of swift-going (horses) in the shafts (of their cars).

॥ संहितापाठः ॥

त्वेतासो मघवन्निंद्र विप्रा वयं ते स्याम सूरयो गृणंतः ।

भेजानासो बृहद्दिवस्य रायो ऽकायस्य दावने पुरुक्षोः ॥

॥ ಪದಪಾಠಃ ॥

त्वाऽऊतासः । मघऽवन् । इन्द्र । विप्राः । वयम् । ते । स्याम । सूरयः । गृणन्तः ।

भेजानासः । बृहत्ऽदिवस्य । रायः । आऽकाय्यस्य । दावने । पुरुऽक्षोः ॥ ७ ॥

॥ सायणभाष्यम् ॥

हे मघवन्धनवन्निन्द्र त्वोतासस्त्वया रक्षिता वयं मेधाविनो गृणन्तस्त्वां स्तुवन्तः सूरयः स्तोतारोऽतो वयं बृहद्दिवस्य महद्दीप्तेरत्यर्थमाकाय्यस्य आ समन्तात्कमनीयस्य पुरुक्षोर्बह्वन्नस्य बहुधनस्य वा तवेदमीयस्य रायो धनस्य दावने दानाय निमित्तीभूते सति भेजानासस्त्वां भजमानाः स्याम । भवेमेत्यर्थः ॥

॥ ಕನ್ನಡಾರ್ಥ ॥

मघवन्—ಧನವಂತನಾದ। **इन्द्र**—ಇಂದ್ರನೇ। **त्वोतासः**—ನಿನ್ನಿಂದ ರಕ್ಷಿತರಾದವರೂ। **विप्राः**—ಮೇಧಾವಿಗಳೂ। **गृणन्तः**—ನಿನ್ನನ್ನು ಸ್ತುತಿಸುವವರೂ। **सूरयः**—ಸ್ತೋತೃಗಳೂ ಆದ। **वयं**—ನಾವು। **बृहद्दिवस्य**—ಅತಿಶಯವಾಗಿ ಪ್ರಕಾಶಿಸುವನನ್ನೂ। **आकाय्यस्य**—ಸರ್ವತ್ರ ಸ್ತುತಿಸಲ್ಪಡುವನನ್ನೂ। **पुरुक्षोः**—ಪ್ರಭೂತವಾದ ಅನ್ನವುಳ್ಳವನೂ ಆದ। **ते**—ನಿನ್ನ **रायः**—ಧನದ। **दावने**—ದಾನವನ್ನು ಪಡೆಯಲು। **भेजानासः**—ನಿನ್ನನ್ನು ಭಜಿಸುವವರಾಗಿ। **स्याम**—ಇರುವಂತಾಗಲಿ

॥ ಭಾವಾರ್ಥ ॥

ಧನವಂತನಾದ ಇಂದ್ರನೇ, ನಿನ್ನಿಂದ ರಕ್ಷಿತರಾದವರೂ, ಮೇಧಾವಿಗಳೂ, ನಿನ್ನನ್ನು ಸ್ತುತಿಸುವವರೂ, ಸ್ತೋತೃಗಳೂ ಆದ ನಾವು ಅತಿಶಯವಾಗಿ ಪ್ರಕಾಶಿಸುವವನೂ, ಸರ್ವತ್ರ ಸ್ತುತಿಸಲ್ಪಡುವನನ್ನೂ, ಪ್ರಭೂತವಾದ ಅನ್ನವುಳ್ಳವನೂ ಆದ ನಿನ್ನ ಧನದ ದಾನವನ್ನು ಪಡೆಯಲು ನಿನ್ನನ್ನು ಸ್ತುತಿಸುತ್ತಾ ಇರುವಂತೆ ಅನುಗ್ರಹಿಸು

English Translation.

Opulent Indra, may we, who are protected by you, who are intelligent, devout, and offerers of praise, be participant with you for the sake of distributing brilliant wealth, and abundant food, entitled to (our) commendation.

ಮೂವತ್ತನೆಯ ಸೂಕ್ತವು.

। ಸಾಯಣಭಾಷ್ಯಂ ।

ನಕಿರಿಂದ್ರೇತಿ ಚತುರ್ವಿಂಶತ್ಯೃಚಂ ನವಮಂ ಸೂಕ್ತಂ ವಾಮದೇವಸ್ಯಾರ್ಷಂ ಗಾಯತ್ರಂ। ಅಷ್ಟಮಾ ಚತುರ್ವಿಂಶೀ ಚ ದ್ವೇ ಅನುಷ್ಟುಭೌ। ಇಂದ್ರೋ ದೇವತಾ। ದಿವಶ್ಚಿದ್ಧ್ಯೇತ್ಯಯಂ ತೃಚ ಉಷೋದೇವತಾಕ ಇಂದ್ರದೇವತಾಕಶ್ಚ। ತಥಾ ಚಾನುಕ್ರಾಂತಂ। ನಕಿಶ್ಚತುರ್ವಿಂಶತಿರ್ದಿವಶ್ಚಿತ್ತೃಚ ಉಷಸ್ಯಶ್ಚ ಗಾಯತ್ರಂ ಹ್ಯಷ್ಟಮ್ಯಂತ್ಯೇ ಚಾನುಷ್ಟುಭಾವಿತಿ॥ ಅತಿರಾತ್ರೇ ತೃತೀಯೇ ಪರ್ಯಾಯೇ ಮೈತ್ರಾವರುಣಶಸ್ತ್ರ ಉಕ್ತಮಾವರ್ಜನಮಿದಂ ಸೂಕ್ತಂ ತಥಾ ಚ ಸೂತ್ರಿತಂ। ನಕಿರಿಂದ್ರ ತ್ವದುತ್ತರ ಇತ್ಯುಕ್ತಮಾಮುದ್ಧರೇತ್। ಆ. ೬-೪। ಇತಿ॥

ಅನುವಾದವು—**ನಕಿರಿಂದ್ರ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಇಪ್ಪತ್ತನಾಲ್ಕು ಋಕ್ಕುಗಳಿರುವುವು. ಈ ಸೂಕ್ತಕ್ಕೆ ವಾಮದೇವನು ಋಷಿಯು, ಗಾಯತ್ರೀಛಂದಸ್ಸು, ಆದರೆ ಎಂಟನೆಯ ಮತ್ತು ಇಪ್ಪತ್ತನಾಲ್ಕನೆಯ ಋಕ್ಕುಗಳು ಅನುಷ್ಟುಪ್‌ಛಂದಸ್ಸುವು. ಇಂದ್ರನು ದೇವತೆಯು. **ದಿವಶ್ಚಿದ್ಧ್ಯಾ** ಎಂಬ ತೃಚವು (ಈ ಸೂಕ್ತದ ೯-೧೧ ಎಂಬ ಮೂರು ಋಕ್ಕುಗಳು) ಉಷೋದೇವತಾಕವೂ ಮತ್ತು ಇಂದ್ರದೇವತಾಕವೂ ಆಗಿದೆ. ಅನುಕ್ರಮಣಿಕೆಯಲ್ಲಿ—**ನಕಿಶ್ಚತುರ್ವಿಂಶತಿರ್ದಿವಶ್ಚಿತ್ತೃಚ ಉಷಸ್ಯಶ್ಚ ಗಾಯತ್ರಂ ಹ್ಯಷ್ಟಮ್ಯಂತ್ಯೇ ಚಾನುಷ್ಟುಭೌ** ಎಂದು ಹೇಳಿರುವುದು ಅತಿರಾತ್ರವೆಂಬ ಯಾಗದ ತೃತೀಯಪರ್ಯಾಯದಲ್ಲಿ ಮೈತ್ರಾವರುಣಶಸ್ತ್ರಮಂತ್ರಪರನಕ್ಕಾಗಿ ಈ ಸೂಕ್ತದ ಕೊನೆಯ ಋಕ್ಕನ್ನು ಬಿಟ್ಟು ಉಳಿದ ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ನಕಿರಿಂದ್ರ ತ್ವದುತ್ತರ ಇತ್ಯುಕ್ತಮಾಮುದ್ಧರೇತ್** ಎಂಬ ಸೂತ್ರದಿಂದ (ಆ. ೬-೪) ವಿವೃತವಾಗಿರುವುದು.

ಸೂಕ್ತ ೩೦

ಮಂಡಲ—೪ ॥ ಅನುವಾಕ—೩ ॥ ಸೂಕ್ತ—೩೦ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ—೧೯, ೨೦, ೨೧, ೨೨, ೨೩ ॥

। ಸೂಕ್ತದಲ್ಲಿರುವ ಋಕ್ಸಂಖ್ಯೆ—೨೪ ।
। ಋಷಿಃ—ವಾಮದೇವಃ ॥
। ದೇವತಾ—೧-೪, ೧೨-೨೪, ಇಂದ್ರಃ ॥ ೯-೧೧. ಇಂದ್ರ ಉಷಾಶ್ಚ ।
॥ ಛಂದಃ—೧-೭, ೯-೨೩, ಗಾಯತ್ರೀ। ೮, ೨೪ ಅನುಷ್ಟುಪ್ ।

। ಸಂಹಿತಾಪಾಠಃ ॥

ನ॑ಕಿರಿಂದ್ರ ತ್ವದುತ್ತ॑ರೋ ನ ಜ್ಯಾ॑ಯಾಁ ಅಸ್ತಿ ವೃತ್ರಹನ್ ।
ನ॑ಕೀ॒ರೇವಾ ಯಥಾ॑ ತ್ವಂ ॥ ೧ ॥

॥ ಪದಪಾಠಃ ॥

ನಕಿಃ । ಇಂದ್ರ । ತ್ವತ್ । ಉತ್ತರಃ । ನ । ಜ್ಯಾಯಾನ್ । ಅಸ್ತಿ । ವೃತ್ರಹನ್ ।

ನಕಿಃ । ಏವ । ಯಥಾ । ತ್ವಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ವೃತ್ರಹನ್ನಿಂದ್ರ॥ವೃತ್ರಸ್ಯ ನಾಶಕೇಂದ್ರ । ಲೋಕ ಏಕೋ೨ಪೀತಿ ಶೇಷಃ । ತ್ವತ್ತ್ವತ್ತ ಉತ್ತರ ಉತ್ಕೃಷ್ಟತರೋ ನಕಿರಸ್ತಿ । ನ ಭವತಿ । ತ್ವತ್ತೋ ಜ್ಯಾಯಾನ್ ಪ್ರಶಸ್ಯತರ ಏಕೋ೨ಪಿ ನಾಸ್ತಿ । ಹೇ ಇಂದ್ರ ತ್ವಂ ಲೋಕೇ ಯಥಾ ಪ್ರಸಿದ್ಧೋ ಭವಸಿ ತಥಾವಿಧ ಏಕೋ೨ಪಿ ನಕಿರೇವಾಸ್ತಿ । ನೈವ ಭವತಿ । ಕಶ್ಚಿದಪಿ ಲೋಕ ಇಂದ್ರಸದೃಶೋ ನಾಸ್ತೀತ್ಯರ್ಥಃ ॥

॥ ಪ್ರತಿಪದಾರ್ಥ ॥

ವೃತ್ರಹನ್—ವೃತ್ರಹಂತಕನಾದ । **ಇಂದ್ರ**—ಎಲೈ ಇಂದ್ರನೇ । **ತ್ವತ್**—ನಿನಗಿಂತಲೂ । **ಉತ್ತರಃ**—ಹೆಚ್ಚು ಉತ್ಕೃಷ್ಟನಾದವನು । **ನಕಿಃ ಅಸ್ತಿ**—ಯಾರೂ ಇಲ್ಲ । **ಜ್ಯಾಯಾನ್**—ನಿನಗಿಂತಲೂ ಹೆಚ್ಚು ಪ್ರಶಸ್ಯನು । **ನ (ಅಸ್ತಿ)**—ಇಲ್ಲ । **ತ್ವಂ**—ನೀನು । **ಯಥಾ**—ಯಾವ ಗುಣಗಳಿಂದ ಪ್ರಸಿದ್ಧನಾಗಿದ್ದೀಯೋ । (ಹಾಗೆ ಪ್ರಸಿದ್ಧ ಗುಣಗಳಿಂದ ಕೂಡಿದವನೂ, ನಿನ್ನನ್ನು ಬಿಟ್ಟರೆ) **ನಕಿಃ ಏವ**—ಖಂಡಿತವಾಗಿಯೂ ಬೇರೊಬ್ಬನಿಲ್ಲ.

॥ ಭಾವಾರ್ಥ ॥

ವೃತ್ರಹಂತಕನಾದ ಎಲೈ ಇಂದ್ರನೇ, ನಿನಗಿಂತಲೂ ಹೆಚ್ಚು ಉತ್ಕೃಷ್ಟನಾದವನು ಯಾರೂ ಇಲ್ಲ. ನಿನಗಿಂತಲೂ ಹೆಚ್ಚು ಸ್ತುತಿಪಾತ್ರನೂ ಯಾರೂ ಇಲ್ಲ. ಯಾವ ಸದ್ಗುಣಗಳಿಂದ ನೀನು ಪ್ರಸಿದ್ಧನಾಗಿದ್ದೀಯೋ ಅಂತಹ ಸದ್ಗುಣಗಳಿಂದ ಕೂಡಿದವನೂ ಸಹ ನಿನ್ನನ್ನು ಬಿಟ್ಟರೆ ಬೇರೊಬ್ಬನಿಲ್ಲ

English Translation.

There is no one, Indra, superior to you, no one more excellent (than you), slayer of Vritra there is no one, verily, such as you are.

॥ ಸಂಹಿತಾಪಾಠಃ ॥

ಸತ್ರಾ ತೇ ಅನು ಕೃಷ್ಟಯೋ ವಿಶ್ವಾ ಚಕ್ರೇವ ವಾವೃತುಃ

ಸತ್ರಾ ಮಹಾಁ ಅಸಿ ಶ್ರುತಃ ॥ ೨ ॥

॥ पदपाठः ॥

स॒त्या । ते॒ । अनु॑ । कृ॒ष्टयः॑ । विश्वा॑ । च॒क्रा॒ऽइ॒व । व॒र्व॒तुः॒ ।
स॒त्या । म॒हान् । असि॑ । शु॒ऽतः॒ ॥ ७ ॥

॥ सायणभाष्यं ॥

हे इन्द्र कृष्टयः प्रजास्ते त्वामनु लक्षीकृत्य सत्या सत्यमेव वर्वृतुः । वर्तन्ते । तत्र दृष्टान्तः । विश्वा विश्वानि व्याप्तानि चक्रेव चक्राणीव । यथा चक्राणि शकटमनुवर्तन्ते तद्वत्। हे इन्द्र महांस्त्वं सत्या सत्यमेव शुतोः विशुतोऽसि। गुणैः प्रख्यातो भवसि ॥

॥ प्रतिपदार्थ ॥

इन्द्र—(ಎಲೈ ಇಂದ್ರನೇ) । विश्वा—ಸಮಸ್ತವಾದ । चक्रेव—ಚಕ್ರಗಳೂ (ಬಂಡಿಯನ್ನೇ ಆಶ್ರಯಿಸಿರುವಂತೆ) । कृष्टयः—ಸಕಲ ಪ್ರಜೆಗಳೂ ಸಹ । ते अनु—ನಿನ್ನನ್ನೇ ನಿರೀಕ್ಷಿಸುತ್ತಾ। सत्या—ಖಂಡಿತವಾಗಿಯೂ । वर्वृतुः—ನಿನ್ನನ್ನೇ ಆಶ್ರಯಿಸಿದ್ದಾರೆ । (ಎಲ್ಲ ಇಂದ್ರನೇ) (त्वं—ನೀನು) । महान्—ಮಹದ್ಗುಣಗಳುಳ್ಳವನೂ । शुतः—ಪ್ರಸಿದ್ಧನೂ । असि—ಆಗಿದ್ದೀಯೆಂಬುದು । सत्या—ಸತ್ಯವೇ ಆಗಿದ

॥ ಭಾವಾರ್ಥ ॥

ಎಲೈ ಇಂದ್ರನೇ, ಸಮಸ್ತವಾದ ಚಕ್ರಗಳೂ ಬಂಡಿಯನ್ನೇ ಆಶ್ರಯಿಸಿರುವಂತ, ಸಕಲ ಪ್ರಜೆಗಳೂ ಸಪ ನಿನ್ನನ್ನೇ ನಿರೀಕ್ಷಿಸುತ್ತಾ ಖಂಡಿತವಾಗಿಯೂ ನಿನ್ನನ್ನೇ ಆಶ್ರಯಿಸಿದ್ದಾರೆ ಎಲೈ ಇಂದ್ರನೇ, ನೀನು ಸತ್ಯವಾಗಿಯೂ ಮಹದ್ಗುಣಗಳುಳ್ಳವನೂ ಪ್ರಸಿದ್ಧನೂ ಆಗಿದ್ದೀಯೆ.

English Translation.

Verily men are attached to you as are all the wheels (to the body of the waggon). in truth you are great and renowned.

॥ संहितापाठः ॥

विश्वे॑ च॒नेदना त्वा॑ दे॒वास॒ इन्द्र॑ युयुयु॒धुः॑
यदहा॑ न॒क्तमा॒तिरः॑ ॥ ८ ॥

। ಪದಪಾಠಃ ।

ವಿಶ್ವೇ । ಚನ । ಇತ್ । ಅನಾ । ತ್ವಾ । ದೇವಾಸಃ । ಇಂದ್ರ । ಯುಯುಧುಃ ।
ಯತ್ । ಅಹಾ । ನಕ್ತಂ । ಅ । ತಿರಃ ॥ ೩ ॥

। ಸಾಯಣಭಾಷ್ಯಂ ।

ಹೇ ಇಂದ್ರ ವಿಶ್ವೇ ಚನೇತ್ಸರ್ವ ಏವ ದೇವಾಸೋಽಸುರಾನ್ವಿಜಿಗೀಷವೋ ದೇವಾ ಅನಾ ಪ್ರಾಣರೂಪೇಣ ಬಲೇನ ತ್ವಾ ತ್ವಾಂ ಸಹಾಯಂ ಲಬ್ಧ್ವಾ ಯುಯುಧುಃ । ಅಸುರೈಃ ಸಹ ಯುದ್ಧಂ ಚಕ್ರುಃ । ಯದ್ಯಸ್ಮಾತ್ತ್ವಾರಣಾದಹಾ ಅಹಃಸು ನಕ್ತಂ ರಾತ್ರಿಷು ಚಾತಿರಃ । ಅ ಸಮಂತಾತ್ ಶತ್ರೂನವಧೀಃ । ಅತಃ ಕಾರಣಾದ್ಯುಯುಧುರಿತಿ ಪೂರ್ವೇಣ ಸಂಬಂಧಃ ॥

। ಪ್ರತಿಪದಾರ್ಥ ।

ಇಂದ್ರ—ಎಲೈ ಇಂದ್ರನೇ । **ಯತ್**—ಯಾವ ನಿನ್ನ ಪ್ರಭಾವದಿಂದ । **ಅಹಾ**—ಅಹಸ್ಸುಗಳಲ್ಲಿಯೂ **ನಕ್ತಂ**—ರಾತ್ರಿಕಾಲಗಳಲ್ಲಿಯೂ । **ಅ ತಿರಃ**—(ಶತ್ರುಗಳನ್ನು) ಪೂರ್ಣವಾಗಿ ನಾಶಮಾಡಿದೆಯೋ (ಆದುದರಿಂದಲೇ) **ವಿಶ್ವೇ ಚನ ಇತ್**—ಸಮಸ್ತವಾದ । **ದೇವಾಸಃ**—ದೇವತೆಗಳೂ ಸಹ । **ತ್ವಾ**—ನಿನ್ನನ್ನೇ । **ಅನಾ**—ಪ್ರಾಣರೂಪವಾದ ಸಹಾಯವನ್ನಾಗಿ ಹೊಂದಿ । **ಯುಯುಧುಃ**—ಶತ್ರುಗಳೊಡನೆ ಯುದ್ಧಮಾಡಿದರು.

। ಭಾವಾರ್ಥ ।

ಎಲೈ ಇಂದ್ರನೇ, ಯಾವ ನಿನ್ನ ಪ್ರಭಾವದಿಂದ ನೀನು ಅಹೋರಾತ್ರಗಳಲ್ಲೆಲ್ಲಾ ಎಡಬಿಡದೆ ಹೋರಾಡಿ ಶತ್ರುಗಳನ್ನು ನಾಶಮಾಡಿದೆಯೋ, ಆ ಮಹತ್ವವಿರುವುದರಿಂದಲೇ ಸಮಸ್ತವಾದ ದೇವತೆಗಳೂ ಸಹ ನಿನ್ನನ್ನೇ ತಮ್ಮ ಪ್ರಾಣರೂಪವಾದ ಸಹಾಯವನ್ನಾಗಿ ಹೊಂದಿ ಶತ್ರುಗಳೊಡನೆ ಯುದ್ಧಮಾಡಿದರು.

English Translation.

Verily all the gods, with you (for) their strength, have warred (with the Asuras), wherefore you have destroyed them by day and by night.

। ಸಂಹಿತಾಪಾಠಃ ।

ಯತ್ರೋತ ಬಾಧಿತೇಭ್ಯಶ್ಚಕ್ರಂ ಕುತ್ಸಾಯ ಯುಧ್ಯತೇ ।
ಮುಷ್ಣಾಯ ಇಂದ್ರ ಸೂರ್ಯಂ ॥ ೪ ॥

॥ पदपाठः ॥

यत्रे । उत । ब्राधितेभ्यः । चक्रं । कुत्साय । युध्यते ।

मुषायः । इन्द्र । सूर्यं ॥ ५ ॥

॥ सायणभाष्यं ॥

यत्रे यस्मिन्युद्धे उताऽपि च हे इन्द्र त्वं बाधितेभ्यः कुत्सेसहायेभ्यो युध्यते युद्धं कुर्वते कुत्साय च सूर्यं सूर्यसंबन्धि चक्रं मुषायः । अमुष्णाः । अपहृतवानसीत्यर्थः । तस्मिन्युद्धे स्वावः शचीभिरेतेशमिति परेण संबन्धः ॥

॥ प्रतिपदार्थ ॥

इन्द्र—ಎಲೈ ಇಂದ್ರನೇ । उत—ಮತ್ತು । यत्रे—ಯಾವ ಯುದ್ಧದಲ್ಲಿ । युध्यते—ಯುದ್ಧವನ್ನು ಮಾಡುತ್ತಿದ್ದ । कुत्साय—ಕುತ್ಸನಿಗಾಗಿಯೂ । बाधितेभ्यः—(ಶತ್ರುಗಳಿಂದ) ಹಿಂಸಿತರಾದ ಕುತ್ಸನ ಅನುಯಾಯಿಗಳಿಗಾಗಿಯೂ । सूर्यं—ಸೂರ್ಯಸಂಬಂಧಿಯಾದ । चक्रं—ಚಕ್ರವನ್ನು । मुषायः—ಅಪಹರಿಸಿದೆಯೋ (ಆ ಯುದ್ಧದಲ್ಲಿ ಅವನನ್ನು ರಕ್ಷಿಸಿದೆ).

॥ भावार्थ ॥

ಎಲೈ ಇಂದ್ರನೇ, ಯುದ್ಧವನ್ನು ಮಾಡಿ ಶತ್ರುಗಳಿಂದ ಹಿಂಸಿತರಾದ ಕುತ್ಸನ ಅನುಯಾಯಿಗಳಿಗಾಗಿಯೂ, ಕುತ್ಸನಿಗೆ ಸಹಾಯಮಾಡಬೇಕೆಂಬುದ್ದಿಶ್ಯದಿಂದಲೂ ನೀನು ಸೂರ್ಯಸಂಬಂಧಿಯಾದ ಚಕ್ರವನ್ನು ಅಪಹರಿಸಿದೆಯೋ ಆ ಯುದ್ಧದಲ್ಲಿ ನೀನು ಅವನನ್ನು ರಕ್ಷಿಸಿದೆ.

English Translation.

In which (contests), for the sake of Kutsa and his allies you have stolen, Indra, the (wheel of the car) of the sun.

॥ संहितापाठः ॥

यत्रे॑ दे॒वाँ अ॑मुष्णा॒यतो॑ विश्वा॒ अयु॑ध्य॒ एक॒ इत् ।

त्वमिं॑द्र व॒नूँर॑हन् ॥ ५ ॥

। पदपाठः ।

यत्रा । देवान् । युक्षायतः । विश्वान् । अयुध्यः । एकः । इत् ।

त्वं । इन्द्र । वनून् । अहन् ॥ ५ ॥

॥ सायणभाष्यं ॥

हे इन्द्र त्वमेक इदसहाय एव यत्र यस्मिन् संग्रामे देवानिन्द्रादीन्युक्षायतो बाधमानानस्त्रिश्वान् सर्वान्स्वाक्षसादीनयुध्यः । युद्धमकरोः । तत्रा वनून् हिंसकानहन् । अवधीः ॥

॥ प्रतिपदार्थ ॥

इन्द्र—ಎಲೈ ಇಂದ್ರನೇ । त्वं—ನೀನು । एक इत्—ಇತರರ ಸಹಾಯವೇನೂ ಇಲ್ಲದೇ ನೀನೊಬ್ಬನೇ । यत्र—ಯಾವ ಯುದ್ಧದಲ್ಲಿ । देवान्—ದೇವತೆಗಳನ್ನು । युक्षायतः—ಹಿಂಸಿಸುತ್ತಿದ್ದ । विश्वान्—ಸಮಸ್ತ ಅಸುರರನ್ನೂ । अयुध्यः—ಎದುರಿಸಿ ಯುದ್ಧಮಾಡಿದೆಯೋ (ಮತ್ತು) । वनून्—ಹಿಂಸಕರಾದ ಅವರನ್ನು । अहन्—ಕೊಂದೆಯೋ (ಆ ಯುದ್ಧದಲ್ಲಿ ಕುತ್ಸನನ್ನು ರಕ್ಷಿಸಿದೆ).

॥ भावार्थ ॥

ಎಲೈ ಇಂದ್ರನೇ, ನೀನು ಇತರ ಯಾವ ದೇವತೆಗಳ ಅಥವಾ ಮಾನವರ ಸಹಾಯವನ್ನೂ ಅಪೇಕ್ಷಿಸದೇ ನೀನೊಬ್ಬನೇ ಯಾವ ಯುದ್ಧದಲ್ಲಿ ದೇವಮಾನವಾದಿಗಳನ್ನು ಹಿಂಸಿಸುತ್ತಿದ್ದ ಸಮಸ್ತ ಅಸುರರನ್ನೂ ಎದುರಿಸಿ ಯುದ್ಧ ಮಾಡಿ ಹಿಂಸಕರಾದ ಅವರನ್ನೆಲ್ಲಾ ಕೊಂದೆಯೋ ಆ ಯುದ್ದದಲ್ಲಿ ಕುತ್ಸನನ್ನು ಸಂರಕ್ಷಿಸಿದೆ

English Translation.

In which (contests), you singly indeed have warred with all those opposing the gods . you, Indra, have slain the malignant.

। संहितापाठः ।

यत्रोत मर्त्यायु कमरिणा इन्द्र सूर्यं ॥

प्रावः शचीभिरेतशं ॥ ६ ॥

॥ पदपाठः ॥

यत्रा । उत । मर्त्यायै । कम् । अरिणाः । इन्द्र । सूर्यम् ।

प्र । अवः । शचीभिः । एतशम् ॥ ६ ॥

॥ सायणभाष्यम् ॥

यत्र यस्मिन् संग्रामे उताऽपि च हे इन्द्र त्वं मर्त्यायै मनुष्यायैतशाख्यायै ऋषयेऽरिणाः । अहिंसीः । कमिति पूरणः । तदानीं शचीभिर्यज्ञैः कर्मभिरेतशमेतत्संज्ञकमृषिं प्रावः । प्रकर्षेणारक्षः ॥

॥ प्रतिपदार्थ ॥

उत—मत್ತು । **यत्र**—ಯಾವ ಯುದ್ಧದಲ್ಲಿ । **इन्द्र**—ಎಲೈ ಇಂದ್ರನೇ । **मर्त्यायै**—ಮಾನವನೂ ಏತಶನೆಂಬ ಹೆಸರುಳ್ಳವನೂ ಆದ ಋಷಿಗಾಗಿ । **सूर्यम्**—ಸೂರ್ಯನನ್ನು । **अरिणाः**—ಹಿಂಸಿಸಿದೆಯೋ (ಆ ಯುದ್ಧದಲ್ಲಿ) । **शचीभिः**—ನಿನ್ನ ಯುದ್ಧಕರ್ಮಗಳಿಂದ । **एतशम्**—ಏತಶನೆಂಬ ಋಷಿಯನ್ನು । **प्रावः**—ಪೂರ್ಣವಾಗಿ ರಕ್ಷಿಸಿದೆ

॥ भावार्थ ॥

ಎಲೈ ಇಂದ್ರನೇ, ನೀನು ಯಾವ ಯುದ್ಧದಲ್ಲಿ ಮಾನವನಾದ ಏತಶನೆಂಬ ಋಷಿಗಾಗಿ ಸೂರ್ಯನನ್ನು ಹಿಂಸಿಸಿದೆಯೋ, ಆ ಯುದ್ಧದಲ್ಲಿ ನಿನ್ನ ಯುದ್ಧಕರ್ಮಗಳಿಂದ ಏತಶನನ್ನು ಪೂರ್ಣವಾಗಿ ರಕ್ಷಿಸಿದೆ.

English Translation.

In which (contests), Indra, you have, for the sake of a mortal, discomfited the sun, and have protected Etasa by (your) exploits.

॥ ವಿಶೇಷವಿಷಯಗಳು ॥

ಇಂದ್ರನು ಏತಶನೆಂಬ ಋಷಿಯನ್ನು ರಕ್ಷಿಸಿದ ವಿಷಯದಲ್ಲಿ—

स्यूतशं सूर्ये तपस्यानं सौवश्ये सुष्विमावदिन्द्रः ।

(ಋ. ಸಂ ೧-೬೧-೧೫)

ಎಂಬ ಋಕ್ಕಿನಲ್ಲಿ— ಹಿಂದೆ ಸ್ವಶ್ವನೆಂಬ ರಾಜನು ಪುತ್ರಾಭಿಲಾಷೆಯಿಂದ ಸೂರ್ಯನನ್ನು ಕುರಿತು ತಪಸ್ಸುಮಾಡಿದನು. ಅವನ ತಪಸ್ಸಿಗೆ ಮೆಚ್ಚಿ ಸೂರ್ಯನೇ ಆ ರಾಜನ ಮಗನಾಗಿ ಹುಟ್ಟಿದನು. ಅವನಿಗೂ ಏತಶನೆಂಬ ಮಹರ್ಷಿಗೂ ಘೋರವಾದ ಯುದ್ಧವಾಯಿತು. ಆ ಯುದ್ಧದಲ್ಲಿ ಏತಶನು ಸೋಲುವಹಾಗಾಗಲು ಅವನು ಇಂದ್ರನಿಗೆ ಸೋಮರಸ

ವನ್ನರ್ಪಿಸಿ ಸ್ತೋತ್ರಮಾಡಿದನು ಇಂದ್ರನು ಅವನ ಸ್ತುತಿಗೆ ಮೆಚ್ಚಿ ಅವನನ್ನು ಸೂರ್ಯ (ಸೂರ್ಯಪುತ್ರ) ನಿಂದ ರಕ್ಷಣೆಮಾಡಿದನು ಎಂದು ಹೇಳಿದೆ ಏತತ್ ಶಬ್ದಕ್ಕೆ ಸೂರ್ಯಾಶ್ವವೆಂದೂ ಹೆಸರು. ಈ ವಿಷಯವಾದ ವಿವರಣೆಯನ್ನು ಋ ಸಂ ಭಾಗ ೯, ಪೇಜು 593 ರಲ್ಲಿ ನೋಡಿ

॥ ಸಂಹಿತಾಪಾಠಃ ॥

ಕಿನೂದುತಾಸಿ ವೃತ್ರಹನ್ಮಘವನ್ನಸ್ಯಮುತ್ತನುಃ ।

ಅತ್ರಾಪ ದಾನುಮಾತಿರಃ ॥ ೭ ॥

॥ ಪದಪಾಠಃ ॥

ಕಿಂ । ಅತ್ । ಉತ । ಅಸಿ । ವೃತ್ರಹನ್ । ಮಘವನ್ । ಮನ್ಯುಮತ್ತಮಃ ।

ಅತ್ರ । ಅಪ । ದಾನುಂ । ಅ । ಆತಿರಃ ॥ ೭ ॥

॥ ಸಾಯಣಭಾಷ್ಯಂ ।

ಹೇ ವೃತ್ರಹನ್ವೃತ್ರಾಣಾಮಾವರಕಾಣಾಂ ತಮಸಾಂ ಹಂತರ್ಮಘವನ್ಧನವನ್ನಿಂದ್ರ ತ್ವಮಾಡನಂತರಮೇವ ಉತಾಪಿ ಚ । ಕಿಮಿತಿಪ್ರಶ್ನೇ । ಮನ್ಯುಮತ್ತಮೋಽಸಿ । ಅತ್ಯಂತಂ ಕ್ರೋಧವಾನ್ ಭವಸಿ। ಅತ್ರಾಸ್ಮಿನ್ನಂತರಿಕ್ಷೇಽಹೈವ ದಾನುಂ ದನೋಃ ಪುತ್ರಂ ವೃತ್ರನಾತಿರಃ । ಆ ಸನುಂತಾದಹಿಂಸೀಃ ॥

॥ ಪ್ರತಿಪದಾರ್ಥ ॥

ಉತ—ಮತ್ತು । **ವೃತ್ರಹನ್**—ವೃತ್ರಹಂತಕನೂ । **ಮಘವನ್**—ಧನವಂತನೂ ಆದ ಎಲೈ ಇಂದ್ರನೇ। **ಅತ್**—ಆ ಒಡನೆಯೇ । **ಕಿಂ**—ಯಾವ ಉದ್ದಿಶ್ಯದಿಂದ । **ಮನ್ಯುಮತ್ತಮಃ**—ಅತ್ಯಂತ ಕ್ರೋಧಯುಕ್ತನಾಗಿ । **ಅಸಿ**—ಆಗುತ್ತೀಯೋ । **ಅತ್ರ ಅಪ**—ಆ ಅಂತರಿಕ್ಷದಲ್ಲಿಯೇ । **ದಾನುಂ**—ದನುಪುತ್ರನಾದ ವೃತ್ರನನ್ನು । **ಆ ತಿರಃ**—ಪೂರ್ಣವಾಗಿ ಹಿಂಸಿಸಿದೆ.

॥ ಭಾವಾರ್ಥ ॥

ವೃತ್ರಹಂತಕನೂ, ಧನವಂತನೂ ಆದ ಎಲೈ ಇಂದ್ರನೇ, ನೀನು ಯಾವ ಉದ್ದಿಶ್ಯದಿಂದ ಎಲ್ಲಿ ಅತ್ಯಂತ ಕ್ರೋಧಯುಕ್ತನಾಗಿ ಆಗುತ್ತೀಯೋ ಅದೇ ಅಂತರಿಕ್ಷದಲ್ಲಿಯೇ ದನುಪುತ್ರನಾದ ವೃತ್ರನನ್ನು ಪೂರ್ಣವಾಗಿ ಹಿಂಸಿಸಿದೆ.

English Translation.

Wherefore, slayer of Vritra, opulent Indra, have you thereupon become most incensed, and, in conseqence, have slain the son of Danu (Vritra) in this firmament.

॥ विशेषविषयगळु ॥

दानुं—दनु ಎಂಬುವಳು ಒಬ್ಬ ಅಸುರಸ್ತ್ರೀ. ಅವಳ ಪುತ್ರನಿಗೆ ದಾನುವೆಂದು ಹೆಸರು. ಇಲ್ಲಿ ವೃತ್ರನೆಂದು ಅರ್ಥವಿವರಣೆ ಮಾಡಿದಾರೆ.

॥ संहितापाठः ॥

ए॒तद्धे॑दु॒त वी॒र्य॑ṁ गṁइन्द्र॒ चे॑कर्त॒ पौंस्य॑ं ।

स्त्रि॒यं॑ यद्दु॒र्हणा॑यु॒वं॑ वधी॑र्दु॒हि॒तर॑ं दि॒वः ॥ ९ ॥

॥ पदपाठः ॥

ए॒तत् । ह॒ । इत् । उ॒त । वी॒र्य॑ं । इ॒न्द्र॒ । चे॒क॒र्त॒ । पौंस्य॑ं ।

स्त्रि॒यं॑ । यत् । दु॒ः॒हणा॑युवं । वधीः॑ । दु॒हि॒तर॑ं । दि॒वः ॥ ९ ॥

॥ सायणभाष्यं ॥

हे इन्द्र उताऽपि च यदद्यस्त्वमेतदुपलक्षितं पौंस्यं बलं वीर्यं सामर्थ्यमेतं चेकर्थ । कृतवानसि । झेदिति पूरणौ । किंच दुर्हणायुवं दुष्टं हननमिच्छंतीं दिवो दुहितरं द्युलोकसंकाशादुत्पन्नां स्त्रियमुषसं वधीः । अवधीः ॥

॥ प्रतिपदार्थ ॥

उत—ಮತ್ತು । **इन्द्र**—ಎಲೈ ಇಂದ್ರನೇ । **यत्**—ಯಾವ ನೀನು । **एतत्**—ಈ ರೀತಿ ನಿರ್ದಿಷ್ಟವಾದುದೂ । **पौंस्यं**—ಪುರುಷಲಕ್ಷಣವಾದುದೂ ಆದ । **वीर्यं**—ಸಾಮರ್ಥ್ಯವನ್ನು । **चेकर्थ**—ಪ್ರಕಟಿಸಿದೆಯೋ (ಆಗ) । **दुर्हणायुवं**—ದುಷ್ಟವಾದ ರೀತಿಯಲ್ಲಿ ಹಿಂಸಿಸಲು ಉದ್ಯುಕ್ತಳಾದವಳೂ । **दिवः**—ಅಂತರಿಕ್ಷದ । **दुहितरं**—ಪುತ್ರಿಯೂ ಆದ । **स्त्रियं**—ಸ್ತ್ರೀಯನ್ನು । **वधीः**—ಕೊಂದಿರುವೆ

॥ ಭಾವಾರ್ಥ ॥

ಎಲೈ ಇಂದ್ರನೇ, ಮೇಲೆ ವರ್ಣಿತವಾದಂತೆ ನಿರ್ದಿಷ್ಟವಾದುದೂ, ಪುರುಷಲಕ್ಷಣವುಳ್ಳದ್ದೂ ಆದ ಸಾಮರ್ಥ್ಯವನ್ನು ಯಾವಾಗ ಪ್ರಕಟಿಸಿದೆಯೋ, ಆಗ ದುಷ್ಟವಾದ ರೀತಿಯಲ್ಲಿ ಹಿಂಸಿಸಲು ಉದ್ಯುಕ್ತಳಾದವಳೂ, ಅಂತರಿಕ್ಷದ ಪುತ್ರಿಯೂ ಆದ ಸ್ತ್ರೀಯನ್ನು ಕೊಂದಿರುವೆ.

English Translation.

Inasmvch, Indra, as you have displayed such manly prowess, you have slain the woman, the daughter of the sky, when meditating mischief.

॥ ವಿಶೇಷವಿಷಯಗಳು ॥

ದಿವಃ ದುಹಿತರಂ ಸ್ತ್ರಿಯಂ—ಇಲ್ಲಿ ಸ್ತ್ರೀ ಎಂದರೆ ವೃತ್ರಾಸುರನ ಮಾತೆಯಾದ ದನು ಎಂಬ ಅಸುರ ಸ್ತ್ರೀಯು. ಅಥವಾ ದಿವೋ ದುಹಿತರಂ ಎಂಬ ಶಬ್ದಕ್ಕೆ ಅಂತರಿಕ್ಷದ (ಸ್ವರ್ಗದ) ಪುತ್ರಿಯಾದ ಉಷಸ್ಸೆಂದೂ ಅರ್ಥವು. ಈ ವಿಷಯವು ಮುಂದಿನ ಋಕ್ಕುಗಳಲ್ಲಿ ಹೇಳಿರುವ ವಿಷಯಗಳಿಂದ ಸಮರ್ಥಿತವಾಗಿರುವುದು

॥ ಸಂಹಿತಾಪಾಠಃ ॥

दिवश्चिद्धा दुहितरं महान्महीयमानाम् ।
उषासमिन्द्र सं पिणक् ॥ ९ ॥

॥ ಪದಪಾಠಃ ॥

दिवः । चित् । ह । दुहितरम् । महान् । महीयमानाम् ।
उषसम् । इन्द्र । सम् । पिणक् ॥ ९ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಮಹಾಂಸ್ತ್ವಂ ದಿವೋ ದುಹಿತರಂ ದ್ಯುಲೋಕಸ್ಯ ಪುತ್ರೀಂ ಮಹೀಯಮಾನಾಂ ಪೂಜ್ಯಮಾನಾಮುಷಸಮುಷೋದೇವೀಂ ಸಂ ಪಿಣಕ್ ಚಿದ್ಧ । ಸಂಪಿಷ್ವವಾನಸಿ ಖಲು ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಮಹಾನ್**—ಮಹತ್ಸ್ವರೂಪವುಳ್ಳ ನೀನು । **ದಿವಃ**—ದ್ಯುಲೋಕದ । **ದುಹಿತರಂ**—ಪುತ್ರಿಯೂ । **ಮಹೀಯಮಾನಾಂ**—ಪೂಜ್ಯತೆಯನ್ನು ಹೊಂದಿದವಳೂ ಆದ । **ಉಷಸಂ**—ಉಷೋದೇವಿಯನ್ನು । **ಸಂ ಪಿಣಕ್ ಚಿತ್**—ಪೂರ್ಣವಾಗಿ ಹಿಂಡಿ ಹಿಂಸಿಸಿರುವೆ

॥ ಭಾವಾರ್ಥ ॥

ಎಲೈ ಇಂದ್ರನೇ, ಮಹತ್ಸ್ವರೂಪವುಳ್ಳ ನೀನು ದ್ಯುಲೋಕದ ಪುತ್ರಿಯೂ ಪೂಜ್ಯತೆಯನ್ನು ಹೊಂದಿದವಳೂ ಆದ ಉಷೋದೇವಿಯನ್ನು ಪೂರ್ಣವಾಗಿ ಹಿಂಸಿಸಿರುವೆ

English Translation.

You, Indra, who are mighty, have enriched the glorious dawn, the daughter of heaven.

॥ ಸಂಹಿತಾಪಾಠಃ ॥

ಅಪೋಷಾ ಅನಸಃ ಸರತ್ಸಂಪಿಷ್ಟಾದಹ ಬಿಭ್ಯುಷೀ ।
ನಿ ಯತ್ಸೀಂ ಶಿಶ್ನಥದ್ವೃಷಾ ॥ ೧೦ ॥

॥ ಪದಪಾಠಃ ॥

ಅಪ । ಉಷಾಃ । ಅನಸಃ । ಸರತ್ । ಸಂ॒ಪಿಷ್ಟಾತ್ । ಅಹ । ಬಿಭ್ಯುಷೀ ।
ನಿ । ಯತ್ । ಸೀಂ । ಶಿಶ್ನಥತ್ । ವೃಷಾ ॥ ೧೦ ॥

॥ ಸಾಯಣಭಾಷ್ಯಂ ॥

ವೃಷಾ ಕಾಮಾನಾಂ ವರ್ಷಿತೇಂದ್ರೋ ಯದ್ಯದಾ ಸೀಮೇತದುಷಃಸಂಬಂಧಿ ಶಕಟಂ ನಿ ಶಿಶ್ನಥತ್ । ನ್ಯವಧೀತ್ । ತದೋಷಾ ಉಷೋದೇವತಾ ಬಿಭ್ಯುಷೀಂದ್ರಸಕಾಶಾದ್ಭೀತಾ ಸತೀ ಸಂಪಿಷ್ಟಾದಿಂದ್ರೇಣ ಸಂಚೂರ್ಣಿತಾದನಸಃ ಶಕಟಾದಪ ಸರತ್ । ಅಪಾಸರತ್ । ಅಪಜಗಾಮ। ಅಹೇತಿ ಪೂರಣಃ ॥

॥ ಪ್ರತಿಪದಾರ್ಥ ॥

ವೃಷಾ—ಕಾಮವರ್ಷಕನಾದ ಇಂದ್ರನು । ಯತ್—ಯಾವಾಗ । ಸೀಂ—ಉಷಸ್ಸಿನ ಈ ರಥವನ್ನು । ನಿ ಶಿಶ್ನಥತ್—ಪೂರ್ಣವಾಗಿ ನಾಶಮಾಡಿದನೋ (ಆಗ) । ಉಷಾಃ—ಉಷೋದೇವಿಯು । ಬಿಭ್ಯುಷೀ—ಬಹಳವಾಗಿ ಹೆದರಿದವಳಾಗಿ । ಸಂಪಿಷ್ಟಾತ್—ಇಂದ್ರನಿಂದ ಪುಡಿಮಾಡಲ್ಪಟ್ಟ । ಅನಸಃ—ಬಂಡಿಯಿಂದ । ಅಪ ಸರತ್—ಇಳಿದುಹೋದಳು.

॥ ಭಾವಾರ್ಥ ॥

ಕಾಮವರ್ಷಕನಾದ ಇಂದ್ರನು, ಉಷಸ್ಸಿನ ರಥವನ್ನು ಪೂರ್ಣವಾಗಿ ನಾಶಮಾಡಿದೊಡನೆಯೇ, ಉಷೋದೇವಿಯು ಬಹಳವಾಗಿ ಹೆದರಿ, ಇಂದ್ರನಿಂದ ಪುಡಿಮಾಡಲ್ಪಟ್ಟ ಬಂಡಿಯಿಂದ ಇಳಿದುಹೋದಳು.

English Translation

The terrified Ushas descended from the broken waggon when the (showerer of benefits) had smashed it.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ, ಮುಂದಿನ ಮತ್ತು ಹಿಂದಿನ ಋಕ್ಕಿನಲ್ಲಿಯೂ ಇಂದ್ರನು ಉಷೋದೇವಿಯ ರಥವನ್ನು ಪುಡಿಪುಡಿಮಾಡಿದನೆಂಬ ವರ್ಣನೆ ಇದೆ ಈ ವಿಷಯವನ್ನು ನಾವು ಹಿಂದೆಯೇ ವಿವರಿಸಿದೇವೆ.

॥ ಸಂಹಿತಾಪಾಠಃ ॥

ಏತದಸ್ಯಾ ಅನಃ ಶಯೇ ಸುಸಂಪಿಷ್ಟಂ ವಿಪಾಶ್ಯಾ ।
ಸಸಾರ ಸೀಂ ಪರಾವತಃ ॥ ೧೧ ॥

॥ ಪದಪಾಠಃ ॥

ಏತತ್ । ಅಸ್ಯಾಃ । ಅನಃ । ಶಯೇ । ಸು॒ಸಂಪಿಷ್ಟಂ । ವಿ॒ಪಾಶಿ । ಆ ।
ಸಸಾರ । ಸೀಂ । ಪರಾ॒ವತಃ ॥ ೧೧ ॥

॥ ಸಾಯಣಭಾಷ್ಯಂ ॥

ಸುಸಂಪಿಷ್ಟಮಿಂದ್ರೇಣ ಸುಷ್ಠು ಸಂಚೂರ್ಣಿತಮಸ್ಯಾ ಉಷಸಃ ಸಂಬಂಧ್ಯೇತದನಃ ಶಕಟಂ ವಿಪಾಶಿ । ವಿಪಾಡಾಖ್ಯಾ ನದೀ । ತಸ್ಯಾಂ ತತ್ತೀರ ಆ ಶಯೇ । ಆ ಸಮಂತಾಚ್ಛೇತೇ । ಅಶೇತ । ಸೀಮಿಯಮುಷೋದೇವತಾ ಶಕಟೇ ಭಗ್ನೇ ಸತಿ ಪರಾವತೋ ದೂರದೇಶಾತ್ಸಸಾರ । ಅಪಸಸಾರ ॥

॥ ಪ್ರತಿಪದಾರ್ಥ ॥

ಸು ಸಂಪಿಷ್ಟಂ—ಪೂರ್ಣವಾಗಿ ನಾಶಮಾಡಲ್ಪಟ್ಟುದೂ । **ಅಸ್ಯಾಃ**—ಉಷಸ್ಸಿಗೆ ಸೇರಿದುದೂ ಆದ । **ಏತತ್ ಅನಃ**—ಈ ಬಂಡಿಯು (ರಥವು) । **ವಿಪಾಶಿ**—ವಿಪಾಟ್ ಎಂಬ ನದಿಯ ದಡದ ಮೇಲೆ । **ಆ ಶಯೇ**—

ಉರುಳಿ ಬಿದ್ದಿತೋ। **ಸೀಂ**—ಆ ಒಡನೆಯೇ (ಉಷೋದೇವತೆಯು)। **ಪರಾವತಃ**—ಬಹಳ ದೂರಪ್ರದೇಶದಿಂದ (ಬಹಳ ದೂರಪ್ರದೇಶಕ್ಕೆ)। **ಸಸಾರ**—ಹೊರಟುಹೋದಳು.

॥ ಭಾವಾರ್ಥ ॥

ಉಷಸ್ಸಿನ ರಥವು ಇಂದ್ರನಿಂದ ಪೂರ್ಣವಾಗಿ ನಾಶಮಾಡಲ್ಪಟ್ಟ ವಿಪಾಟ್ ಎಂಬ ನದಿಯ ದಡದ ಮೇಲೆ ಉರುಳಿ ಬಿದ್ದೋಡನೆಯೇ, ಉಷೋದೇವಿಯು ಬಹಳ ದೂರದೇಶಕ್ಕೆ ಹೊರಟುಹೋದಳು.

English Translation.

Then her shattered waggon reposed (on the bank) of the Vipash (river), and she departed from afar.

॥ संहितापाठः ॥

उ॒त सिन्धुं॑ विबा॒ल्यं॑ वितस्था॒नामधि॑ क्ष॒मि ।
प॒रि ष्मा॒ इन्द्र॑ मा॒यया॑ ॥ ०७ ॥

॥ पदपाठः ॥

उ॒त । सिन्धु॑म् । वि॒ऽबा॒ल्य॑म् । वि॒ऽत॒स्था॒नाम् । अधि॑ । क्ष॒मि ।
प॒रि । स्था॒ः । इन्द्र॑ । मा॒यया॑ ॥ ०७ ॥

॥ सायणभाष्यं ॥

हे इन्द्र उताऽपि च विबाल्यं विगतबाल्यावस्थां संपूर्णजलां वितस्थानां वितिष्ठमानानां सिन्धुं नदीमधि क्षमि क्षमायां मायया प्रज्ञया परि स्थाः। परेर्स्थाः। सर्वतः स्थापनं कृतवानसि ॥

॥ प्रतिपदार्थ ॥

ಉತ—ಮತ್ತು। **ಇಂದ್ರ**—ಇಂದ್ರನೇ। **ವಿಬಾಲ್ಯಂ**—ಬಾಲ್ಯಾವಸ್ಥೆಯನ್ನು ದಾಟಿದುದೂ (ಪೂರ್ಣ ಪ್ರವಾಹವುಳ್ಳದ್ದೂ)। **ವಿತಸ್ಥಾನಾಂ**—(ಅಸುರರಿಂದ) ತಡೆದು ನಿಲ್ಲಿಸಲ್ಪಟ್ಟದ್ದೂ ಆದ। **ಸಿಂಧುಂ**—ಸಿಂಧೂನದಿಯನ್ನು। **ಅಧಿ ಕ್ಷಮಿ**—ಭೂಮಿಯ ಮೇಲೆ। **ಮಾಯಯಾ**—ನಿನ್ನ ಪ್ರಜ್ಞಾಬಲದಿಂದ। **ಪರಿ ಷ್ಮಾಃ**—ಸುತ್ತಲೂ ಹರಡಿ ಪ್ರವಹಿಸುವಂತೆ ಮಾಡಿರುವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ನಿನ್ನ ಪ್ರಜ್ಞಾಬಲದಿಂದ ಪೂರ್ಣಪ್ರವಾಹವುಳ್ಳದ್ದೂ, ಅಸುರರಿಂದ ತಡೆದು ನಿಲ್ಲಿಸಲ್ಪಟ್ಟದ್ದೂ ಆದ ಸಿಂಧೂನದಿಯನ್ನು ಭೂಮಿಯ ಮೇಲೆ ಸುತ್ತಲೂ ಹರಡಿ ಪ್ರವಹಿಸುವಂತೆ ಮಾಡಿರುವೆ

English Translation.

You have spread abroad upon the earth, by your contrivance, the swollen Sindhu when arrested (on its course)

॥ ಸಂಹಿತಾಪಾಠಃ ॥

ಉತ ಶುಷ್ಣಸ್ಯ ಧೃಷ್ಣುಯಾ ಪ್ರ ಮೃಕ್ಷೋ ಅಭಿ ವೇದನಂ ।
ಪುರೋ ಯದಸ್ಯ ಸಂಪಿಣಕ್ ॥ ೧೩ ॥

॥ ಪದಪಾಠಃ ॥

ಉತ । ಶುಷ್ಣಸ್ಯ । ಧೃಷ್ಣುಯಾ । ಪ್ರ । ಮೃಕ್ಷಃ । ಅಭಿ । ವೇದನಂ ।
ಪುರಃ । ಯತ್ । ಅಸ್ಯ । ಸಂಪಿಣಕ್ ॥ ೧೩ ॥

॥ ಸಾಯಣಭಾಷ್ಯಂ ॥

ಉತಾಪಿ ಚ ಹೇ ಇಂದ್ರ ಧೃಷ್ಣುಯಾ ಧೃಷ್ಣುಃ ಧರ್ಷಕಸ್ತ್ವಂ ಶುಷ್ಣಸ್ಯ ಶುಷ್ಣನಾಮ್ನೋಽಸುರಸ್ಯ ಸಂಬಂಧಿ ವೇದನಂ ವಿತ್ತಮಭಿ ಅಭಿತಃ ಸರ್ವತಃ ಪ್ರ ಮೃಕ್ಷಃ । ಪ್ರಕರ್ಷೇಣಾಪಾಧಥಾಃ । ಯದ್ಯದಾಸ್ಯ ಶುಷ್ಣಸ್ಯ ಪುರಃ ಪುರಾಣಿ ನಗರಾಣಿ ಸಂಪಿಣಕ್ । ಸಂಪಿಷ್ಟವಾನಸಿ । ತದಾ ಪ್ರ ಮೃಕ್ಷ ಇತಿ ಸಂಬಂಧಃ ॥

॥ ಪ್ರತಿಪದಾರ್ಥ ॥

ಉತ—ಮತ್ತು (ಎಲೈ ಇಂದ್ರನೇ) । **ಧೃಷ್ಣುಯಾ**—ಶತ್ರುಧರ್ಷಕನಾದ ನೀನು । **ಯತ್**—ಯಾವಾಗ । **ಅಸ್ಯ**—ಈ ಶುಷ್ಣನ । **ಪುರಃ**—ಪಟ್ಟಣಗಳನ್ನು । **ಸಂ ಪಿಣಕ್**—ಪೂರ್ಣವಾಗಿ ನಾಶಮಾಡಿದೆಯೋ (ಆಗ) । **ಶುಷ್ಣಸ್ಯ**—ಶುಷ್ಣನೆಂಬ ಅಸುರನ । **ವೇದನಂ**—ಧನವನ್ನು । **ಅಭಿ**—ಪೂರ್ಣವಾಗಿ । **ಪ್ರ ಮೃಕ್ಷಃ**—(ಅಪಹರಿಸಿದ್ದೀಯೇ) ನಾಶಪಡಿಸಿದ್ದೀಯೆ.

॥ ಭಾವಾರ್ಥ ।

ಎಲೈ ಇಂದ್ರನೇ, ಶತ್ರುಧರ್ಷಕನಾದ ನೀನು ಶುಷ್ಣನೆಂಬ ಅಸುರನ ಪಟ್ಟಣಗಳನ್ನು ಯಾವಾಗ ಪೂರ್ಣವಾಗಿ ನಾಶಮಾಡಿದೆಯೋ ಆಗ ಆ ಅಸುರನ ಧನವನ್ನೂ ಸಹ ಪೂರ್ಣವಾಗಿ ನಾಶಮಾಡಿದೆ. (ನೀನೂ ಅಪಹರಿಸಿದೆ).

English Translation.

By valour you have carried off the wealth of Shushna, when you had demolished his cities.

॥ ವಿಶೇಷವಿಷಯಗಳು ॥

ಶುಷ್ಣ—ಇವನ ಹೆಸರು ಸುಮಾರು ೪೦ ಸಲ ಬರುತ್ತದೆ. ಕುತ್ಸನ ಮುಖ್ಯ ಶತ್ರು. ಈ ಕುತ್ಸನಿಗೋಸ್ಕರ ಅಥವಾ ಕುತ್ಸನ ಜೊತೆಯಲ್ಲಿ, ಇಂದ್ರನು ಶುಷ್ಣನನ್ನು ನಿರ್ಮೂಲಮಾಡುತ್ತಾನೆ. (೪-೧೬-೧೨, ೫-೨೯-೯, ಇತ್ಯಾದಿ). ಅವನಿಗೆ ಕೊಂಬುಗಳಿಗೆ (೧-೩೩-೧೨). ಮೊಟ್ಟಿಗಳಿವೆ (೬-೪೦-೧೦, ೧೧). ಎಂದರೆ ಮೊಟ್ಟಿಗಳಿಂದಾದ ಮರಿಗಳು (೧೦-೧೨-೧೧ ನ್ನು ಹೋಲಿಸಿ), ಇದರಿಂದ ಶುಷ್ಣನೂ ಒಂದು ಸರ್ಪವೆನ್ನಬಹುದು. ಬುಸುಗುಟ್ಟುತ್ತಾನೆ (ಶ್ವಸನಃ ೧-೫೪-೫) ಆರುಸಲ ಇವನಿಗೆ ಅಶುಷ (ನುಂಗುವ) ಎಂಬ (ಅಗ್ನಿಯ) ವಿಶೇಷಣವು ಉಪಯೋಗಿಸಲ್ಪಟ್ಟಿದೆ. ಅವನಿಗೆ ಬಲವಾದ ಕೋಟೆಗಳು (೧-೫೧-೧೧) ಅಥವಾ ಕೋಟೆ (೪-೩೦-೧೩) ಇದೆ, ಇವು ಚಲಿಸುವ ಕೋಟೆಗಳು (೮-೧-೨೮). ಇಂದ್ರನು ಶುಷ್ಣನ ಕೋಟೆಗಳನ್ನು ನಾಶಮಾಡಿ ನೀರುಗಳನ್ನು ಬಿಡುಗಡೆ ಮಾಡುತ್ತಾನೆ (೧-೫೧-೧೧). ಶುಷ್ಣನನ್ನು ಬಡಿದು ಜಲಧಿಯನ್ನು ಸಂಪಾದಿಸುತ್ತಾನೆ (ವಾಲ ೩-೮) ಅಥವಾ ಶುಷ್ಣನ ವಂಶವನ್ನು ನಿರ್ಮೂಲಮಾಡಿ, ಸ್ವರ್ಗೀಯೋದಕವನ್ನು (ಸ್ವರ್ವತೀಃ) ಗಳಿಸುತ್ತಾನೆ (೮-೪೦-೧೦). ನಾಲ್ಕುಸಲ ಶುಷ್ಣಗೆ 'ಕುಯವ' (ಕೆಟ್ಟ ಧಾನ್ಯವನ್ನು ಂಟುಮಾಡುವವನು) ಎಂಬ ವಿಶೇಷಣವಿದೆ. ಕುಯವ ಎಂಬುದೇ ಎರಡು ಸಲ ಪ್ರಾಯಶಃ ಶುಷ್ಣನಿಗೆ ಬದಲಾಗಿ ಉಪಯೋಗಿಸಿರುವಂತೆ ಇದೆ (೧-೧೦೩-೮, ೧-೧೦೪-೩) ಇಂದ್ರ ಶುಷ್ಣರ ಯುದ್ಧದ ಪರಿಮಾಣವು ಜಲವಿಮೋಚನೆ ಮಾತ್ರವಲ್ಲ. ಗೋವುಗಳ ಅಥವಾ ಸೂರ್ಯನ ಪ್ರಾಪ್ತಿಯೂ ಆಗಬಹುದು (೮-೮೫-೧೭). ಇಂದ್ರನೊಡನೆ ಯುದ್ಧಮಾಡುವಾಗ, ಶುಷ್ಣನು ಅಂಧಕಾರದಲ್ಲಿ ಓಡಾಡುತ್ತಾನೆ. ಹಿಮದ ಮಗ ಮತ್ತು ದಾನವವೆನ್ನಿಸಿ ಕೊಳ್ಳುತ್ತಾನೆ (೫-೩೨-೪). ಶುಷ್ಣನು ಅಮೃತವನ್ನು ತನ್ನಲ್ಲಿ ಇಟ್ಟುಕೊಂಡಿರುವ ದಾನವನು (ಕಾರಕ).

ಮೇಲೆ ಹೇಳಿದ ವಾಕ್ಯಗಳಿಂದ ಶುಷ್ಣನು ಅನಾವೃಷ್ಟಿಕಾರಕನೆನ್ನಬಹುದು. ಶುಷ್ಣ ಪದದ ಮೂಲವಾದ ಶುಷ್ ಧಾತುವಿಗೆ ಬುಸುಗುಟ್ಟು ಅಥವಾ ಒಣಗಿಸು ಎಂದರ್ಥ. ಇದು ಅನಾವೃಷ್ಟಿಕಾರಕನೆಂಬುದನ್ನು ಸಮರ್ಥಿಸುತ್ತದೆ

॥ ಸಂಹಿತಾಪಾಠಃ ॥

ಉತ ದಾಸಂ ಕೌಲಿತರಂ ಬೃಹತಃ ಪರ್ವತಾದಧಿ ।
ಅವಾಹನ್ನಿಂದ್ರ ಶಂಬರಂ ॥ ೧೪ ॥

॥ ಪದಪಾಠಃ ॥

ಉತ । ದಾಸಂ । ಕೌಲಿತರಂ । ಬೃಹತಃ । ಪರ್ವತಾತ್ । ಅಧಿ ।
ಅವ । ಅಹನ್ । ಇಂದ್ರ । ಶಂಬರಂ ॥ ೧೪ ॥

॥ ಸಾಯಣಭಾಷ್ಯಂ ॥

ಉತಾಪಿ ಚ ಹೇ ಇಂದ್ರ ತ್ವಂ ದಾಸಮುಪಕ್ಷಪಯಿತಾರಂ ಕೌಲಿತರಂ ಕುಲಿತರನಾಮ್ನೋಽಪತ್ಯಂ ಶಂಬರಮಸುರಂ ಬೃಹತೋ ಮಹತಃ ಪರ್ವತಾದದ್ರೇರಧ್ಯುಪರಿ ಅವ ಅವಾಚೀನಂ ಕೃತ್ವಾಹನ್ । ಹತವಾನಸಿ ॥

॥ ಪ್ರತಿಪದಾರ್ಥ ॥

ಉತ—ಮತ್ತು । **ಇಂದ್ರ**—ಇಂದ್ರನೇ । **ದಾಸಂ**—ಹಿಂಸಕನೂ । **ಕೌಲಿತರಂ**—ಕುಲಿತರನ ಪುತ್ರನೂ ಆದ । **ಶಂಬರಂ**—ಶಂಬರಾಸುರನನ್ನು । **ಬೃಹತಃ**—ಮಹತ್ತಾದ (ಅತ್ಯುನ್ನತವಾದ) । **ಪರ್ವತಾತ್ ಅಧಿ**—ಪರ್ವತದ ಮೇಲ್ಭಾಗದಿಂದ । **ಅವ**—ತಲೆಕೆಳಗಾಗಿ ಮಾಡಿ ತಳ್ಳಿ । **ಅಹನ್**—ಕೊಂದಿರುವೆ

॥ ಭಾವಾರ್ಥ ॥

ಎಲೈ ಇಂದ್ರನೇ, ಹಿಂಸಕನೂ, ಕುಲಿತರನ ಪುತ್ರನೂ ಆದ ಶಂಬರಾಸುರನನ್ನು ನೀನು ಅತ್ಯುನ್ನತವಾದ ಪರ್ವತದ ಮೇಲ್ಭಾಗದಿಂದ ತಲೆಕೆಳಗಾಗಿ ಮಾಡಿ ಕೆಳಕ್ಕೆ ತಳ್ಳಿ ಕೊಂದಿರುವೆ

English Translation.

You have slain the slave Shambara, the son of Kulitara, hurling him from off the huge mountain.

॥ ವಿಶೇಷವಿಷಯಗಳು ॥

ಶಂಬರಃ—ಈ ಹೆಸರು ಸುಮಾರು ಇಪ್ಪತ್ತುಸಲ ಬರುತ್ತದೆ ಇತರ ಪಿಶಾಚಿಗಳೊಡನೆಯೇ ಶಂಬರನು ಪ್ರಸಕ್ತನಾಗಿರುವುದು. ಆದರಲ್ಲಿಯೂ ಹೆಚ್ಚಾಗಿ ಶುಷ್ಣ, ಪಿಪ್ರು (೧-೧೦೧-೨, ೧-೧೦೩-೪), ೨-೧೯-೬, ೬-೧೪-೪) ಮತ್ತು ವರ್ಚಿಗಳೊಡನೆ, ಅಹಿ ಮತ್ತು ಶಂಬರನ ಮೇಲೆ ಯುದ್ಧಮಾಡುವಾಗ ಮರುತರು ಇಂದ್ರನಿಗೆ ಸಹಾಯಮಾಡಿದರು (೩-೪೭-೪), ಶಂಬರನನ್ನು ಭೇದಿಸಿದಾಗ, ಇಂದ್ರನು ಆಕಾಶವನ್ನೇ ನಡುಗಿಸಿದನು (೧-೫೪-೪) ಪರ್ವತದ ಮೇಲೆ ವಾಸಿಸುತ್ತಿದ್ದ ಶಂಬರನನ್ನು ಹುಡುಕಿ (೨-೧೨-೧೧), ಪರ್ವತದಿಂದ ಕೆಳಕ್ಕುರುಳಿಸಿದನು (೧-೧೩೦-೭, ೬-೨೬-೫). ಕುಲಿತರನ ಪುತ್ರನಾದ ಶಂಬರನೆಂಬ ದಾಸನನ್ನು ಇ-ದ್ರನು ದೊಡ್ಡ ಪರ್ವತದಿಂದ ಉರುಳಿಸಿದನು. (೪-೩೪-೧೪) ತಾನೊಬ್ಬ ಸಣ್ಣದೇವತೆಯೆಂದು ತಿಳಿದುಕೊಂಡಿದ್ದು, ಶಂಬರನನ್ನು ಹೊಡೆದು, ಉನ್ನತಪ್ರದೇಶದಿಂದ

ಬೀಳಿಸಿದನು (೭-೧೪-೨೦). ತೊಂಭತ್ತು (೧-೧೩೦-೭), ಸಾಧಾರಣವಾಗಿ ತೊಂಭತೊಂಭತ್ತು (೨-೧೯-೬, ಇತ್ಯಾದಿ) ಅಥವಾ ನೂರು (೨-೧೪-೬, ಇತ್ಯಾದಿ) ದುರ್ಗಗಳು ಅವನ ಅಧೀನದಲ್ಲಿವೆ. ಒಂದುಸಲ, ನಪುಂಸಕಾಂತವಾದ ಈ ಪದಕ್ಕೆ ಶಂಬರನ ಕೋಟೆಗಳು ಎಂದರ್ಥವಿದೆ. ಇವುಗಳನ್ನು ಬೃಹಸ್ಪತಿಯು ಭೇದಿಸಿ, ನಿಧಿಗಳಿಂದ ಯುಕ್ತವಾಗಿದ್ದ ಪರ್ವತ ಪ್ರದೇಶವನ್ನು ಪ್ರವೇಶಿಸದನು (೨-೨೪-೨). ಅತಿಥಿಗ್ವ (೧-೫೧-೬), ಸಾಧಾರಣವಾಗಿ ದಿವೋದಾಸ (೨-೧೯-೬, ಇತ್ಯಾದಿ), ಒಂದೊಂದುಸಲ ಇಬ್ಬರೂ (೧-೧೩೦-೭, ೪-೨೬-೩), ಇವರುಗಳಿಗೋಸ್ಕರ, ಇಂದ್ರನು ಶಂಬರನನ್ನು ಧ್ವಂಸಮಾಡುತ್ತಾನೆ. ಶಂಬರ ಮತ್ತು ದಿವೋದಾಸ ಎಂಬ ಎರಡೂ ಒಬ್ಬನ ಹೆಸರಿರಬಹುದೆಂದು ಕೆಲವರು ಅಭಿಪ್ರಾಯಪಡುತ್ತಾರೆ.

ಸಂಹಿತಾಪಾಠಃ

ಉತ ದಾಸಸ್ಯ ವರ್ಚಿನಃ ಸಹಸ್ರಾಣಿ ಶತಾವಧೀಃ ।
ಅಧಿ ಪಂಚ ಪ್ರಧೀನಿವ ॥ ೧೫ ॥

ಪದಪಾಠಃ

ಉತ । ದಾಸಸ್ಯ । ವರ್ಚಿನಃ । ಸಹಸ್ರಾಣಿ । ಶತಾ । ಅವಧೀಃ ।
ಅಧಿ । ಪಂಚ । ಪ್ರಧೀನ್ । ಇವ ॥ ೧೫ ॥

ಸಾಯಣಭಾಷ್ಯಂ

ಉತಾಪಿ ಚ ಹೇ ಇಂದ್ರ ತ್ವಂ ಪ್ರಧೀನಿವ ಚಕ್ರಸ್ಯ ಪರಿತಃ ಸ್ಥಿತಾನ್ ತಂಕೊನಿವ ಹಿಂಸಕಾನ್ಪಂಚ ಶತಾ ಪಂಚಶತಾನಿ ಪಂಚಶತಸಂಖ್ಯಾಕಾನ್ ಸಹಸ್ರಾಣಿ ಸಹಸ್ರಸಂಖ್ಯಾಕಾನ್ದಾಸಸ್ಯ ಲೋಕಾನಾಮುಪಕ್ಷಪಯಿತುರ್ವರ್ಚಿನೋ ವರ್ಚಿನಾಮಕಸ್ಯಾಸುರಸ್ಯ ಸಂಬಂಧಿನೋಽನುಚರಾನ್ಪುರುಷಾನಧ್ಯಧಿಕಮವಧೀಃ । ಹತವಾನಸಿ ॥

ಪ್ರತಿಪದಾರ್ಥ

ಉತ—ಮತ್ತು । (ಇಂದ್ರ—ಇಂದ್ರನೇ) । ಪ್ರಧೀನಿವ—ಚಕ್ರದ ಸುತ್ತುವಲೆಯವು ಚಕ್ರವನ್ನು ಸುತ್ತಿರುವಂತೆ ತಮ್ಮ ನಾಯಕನನ್ನು ಸುತ್ತಿ ನಿಂತಿರುವವರೂ । ಪಂಚ ಶತಾ—ಪಂಚಶತ (ಐನೂರು) ಸಂಖ್ಯೆಯುಳ್ಳವರೂ । ಸಹಸ್ರಾಣಿ—ಸಹಸ್ರ ಸಂಖ್ಯೆಯುಳ್ಳವರೂ ಆದ । ದಾಸಸ್ಯ—ಲೋಕನಾಶಕನಾದ । ವರ್ಚಿನಃ—ವರ್ಚಿಯೆಂಬ ಹೆಸರುಳ್ಳ ಅಸುರನ ಅನುಚರರನ್ನು । ಅಧಿ—ಪೂರ್ಣವಾಗಿ । ಅವಧೀಃ—ಕೊಂದಿದ್ದೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಚಕ್ರದ ಸುತ್ತುವಲಯವು ಚಕ್ರವನ್ನು ಸುತ್ತಿರುವಂತೆ ತಮ್ಮ ನಾಯಕನನ್ನು ಸುತ್ತಿ ನಿಂತಿರುವವರೂ, ಐನೂರು ಮತ್ತು ಸಾವಿರಾರು ಸಂಖ್ಯೆಯುಳ್ಳವರೂ ಆದ ಲೋಕಕಂಟಕನಾದ ವರ್ಚಿಯೆಂಬ ಹೆಸರುಳ್ಳ ಅಸುರನ ಅನುಚರರನ್ನು ಪೂರ್ಣವಾಗಿ ಕೊಂದಿದ್ದೀಯೆ.

English Translation

You have slain the five hundreds and thousands (of the followers) of the slave Varchin, (surrounding) him like the fellies (round the spokes of a wheel).

॥ ವಿಶೇಷವಿಷಯಗಳು ॥

ವರ್ಚಿನಃ—ಈ ವರ್ಚಿ ಎಂಬುವನು ಇಂದ್ರನಿಗೆ ಶತ್ರುವಾದ ಒಬ್ಬ ಅಸುರನು ಇವನಿಗೆ ವ್ಯಂಸನೆಂದೂ ಕೆಲವು ಕಡೆ ಹೇಳಿದೆ. ಶಂಬರನೆಂಬ ಅಸುರನ ಜತೆಯಲ್ಲಿಯೂ ಇವನ ಹೆಸರು ಅಲ್ಲಲ್ಲಿ ಸೂಚಿತವಾಗಿದೆ. ಋ ಸಂ. ೨-೧೯-೬, ೪-೪೭-೨೧, ೭-೯೯-೫, ೬-೪೭-೨೧, ಇತ್ಯಾದಿ ಋಕ್ಕುಗಳಲ್ಲಿ ಇವನ ವಿಷಯವು ಪ್ರಸ್ತಾಪಿಸಲ್ಪಟ್ಟಿದೆ.

॥ ಸಂಹಿತಾಪಾಠಃ ॥

ಉತ ತ್ಯಂ ಪುತ್ರಮಗ್ರುವಃ ಪರಾವೃಕ್ತಂ ಶತಕ್ರತುಃ ।
ಉಕ್ಥೇಷ್ವಿಂದ್ರ ಆಭಜತ್ ॥ ೧೬ ॥

॥ ಪದಪಾಠಃ ॥

ಉತ । ತ್ಯಂ । ಪುತ್ರಂ । ಅಗ್ರುವಃ । ಪರಾವೃಕ್ತಂ । ಶತಕ್ರತುಃ ।
ಉಕ್ಥೇಷು । ಇಂದ್ರಃ । ಆ । ಅಭಜತ್ ॥ ೬ ॥

॥ ಸಾಯಣಭಾಷ್ಯಂ ॥

ಉತಾಪಿ ಚ ಶತಕ್ರತುಃ ಶತಕರ್ಮೇಂದ್ರಸ್ತ್ಯಂ ತಂ ಪ್ರಸಿದ್ಧಮಗ್ರುವ ಏತನಾಮ್ನ್ಯಃ ಪುತ್ರಂ ಪರಾವೃಕ್ತಮೇತನ್ನಾಮಕಮುಕ್ಥೇಷು ಸ್ತೋತ್ರೇಷ್ವಾಭಜತ್ । ಭಾಗಿನಂ ಕೃತವಾನ್ । ಆಯಮರ್ಥೋ ವಮ್ರೀಭಿಃ ಪುತ್ರಮಗ್ರುವಃ । ಋಗ್ವೇ. ೪-೧೯-೯ । ಇತೀಸ್ಯಾಮೃಚಿ ಪ್ರತಿಪಾದಿತ ಇತಿ ॥

॥ प्रतिपदार्थ ॥

उत—ಮತ್ತು । **शतक्रतुः**—ಅನೇಕ ಕರ್ಮಕರ್ತನಾದ । **इन्द्रः**—ಇಂದ್ರನು । **त्यं**—ಪ್ರಸಿದ್ಧನಾದವನೂ । **अग्रुवः**—ಅಗ್ರೂ ಎಂಬ ಹೆಸರುಳ್ಳ ಸ್ತ್ರೀಯ । **पुत्रं**—ಪುತ್ರನೂ ಆದ । **परावृक्तं**—ಪರಾವೃಜನನ್ನು । **ऊर्क्षेषु**—ತನ್ನನ್ನು ಸ್ತೋತ್ರಿಸಿದ ಸ್ತೋತ್ರಗಳಲ್ಲಿ । **अभजत्**—ಭಾಗಿಯಾಗುವಂತೆ ಮಾಡಿದನು.

ಭಾವಾರ್ಥ ॥

ಅನೇಕ ಕರ್ಮಕರ್ತನಾದ ಇಂದ್ರನು ಅಗ್ರೂ ಎಂಬ ಹೆಸರುಳ್ಳ ಸ್ತ್ರೀಯ ಪುತ್ರನೂ ಪ್ರಸಿದ್ಧನೂ ಆದ ಪರಾವೃಜನನ್ನು ತನ್ನನ್ನು ಸ್ತೋತ್ರಿಸಿದ ಸ್ತೋತ್ರಗಳಲ್ಲಿ ಭಾಗಿಯಾಗುವಂತೆ ಮಾಡಿದನು

English Translation.

You, Indra, are Shatakratu, you have made Paravrij, the son of Aggru, participant in sacred hymns

॥ ವಿಶೇಷವಿಷಯಗಳು ॥

ಇಂದ್ರನು ಪರಾವೃಕ್ತನನ್ನು ಸ್ತುತಿಗೆ ಭಾಗಿಯಾಗುವಂತೆ ಮಾಡಿದನು ಎಂಬುದೇ ಈ ಮಂತ್ರದ ತಾತ್ಪರ್ಯ ಪರಾವೃಕ್ತನು **ಅಗ್ರೂ** ಎಂಬುವಳ ಪುತ್ರನೆಂದು ಮಂತ್ರವು ತಿಳಿಸುತ್ತದೆ **"वमिभिः पुत्रमग्रुवः, इत्यस्यां ऋचि अयमर्धः प्रतिपादितः"**, ಋ ಸಂ ೪-೧೯-೯ನೇ ಮಂತ್ರದಲ್ಲಿ ಈ ಅರ್ಧವು ಪ್ರತಿಪಾದಿತವಾಗಿದೆಯೆಂದು ಭಾಷ್ಯಕಾರರು ತಿಳಿಸಿದ್ದಾರೆ "ಅಗ್ರೂ ಎಂಬುವಳ ಪುತ್ರನ ದೇಹವನ್ನು **वमिभ्रा** ಎಂಬ ಇರುವೆಗಳು ಕಿತ್ತು ತಿನ್ನುತ್ತಿದ್ದವು ಇಂದ್ರನು ಅವನನ್ನು ಅವುಗಳ ಹುತ್ತದಿಂದ ಹೊರಕ್ಕೆ ತಂದನು. ಇರುವೆಗಳು ತಿಂದಿದ್ದ ಅವನ ಶಿಥಿಲವಾದ ಅವಯವಗಳನ್ನೆಲ್ಲಾ ಇಂದ್ರನು ಸರಿಪಡಿಸಿದನು" ಎಂಬುದೇ ಆ ಮಂತ್ರದ ತಾತ್ಪರ್ಯ ಆದರೆ, **अग्रुपुत्रस्य** ಪದದಲ್ಲಿ ಹೇಳಿಲ್ಲ ಪ್ರಕೃತವಾದ ಮಂತ್ರದಲ್ಲಿ ಪರಾವೃಕ್ತನು ಅಗ್ರೂವಿನ ಪುತ್ರನೆಂದು ತಿಳಿಸಿದೆ. ಆದರೆ ಇದು ಒಬ್ಬ ವ್ಯಕ್ತಿಯ ಹೆಸರನ್ನು ಸೂಚಿಸುವುದೇ, ಇದು ಅಂಕಿತನಾಮವೇ ಅಥವಾ ಈ ಪದಕ್ಕೆ ಬೇರೆ ಅರ್ಥವಿದೆಯೇ ಎಂಬುದು ಸಂಶಯಾಸ್ಪದವಾದ ವಿಷಯವಾಗಿದೆ ಸ್ತ್ರಕೃತಪದಲ್ಲಿ **अग्रुवः पुत्रं** ಎಂಬುದಕ್ಕೆ ಅರ್ಥವೇಸಿರಬಹುದು ಎಂಬುದನ್ನು ನಿಷ್ಕರ್ಷಿಸಬೇಕು

अग्रुवः ಎಂಬ ಪದವು ಋಕ್ಸಂಹಿತೆಯಲ್ಲಿ ಒಂಭತ್ತು ಸನ್ನಿವೇಶಗಳಲ್ಲಿ ಪ್ರಯೋಗಿಸಲ್ಪಟ್ಟಿದೆ ಅವುಗಳಲ್ಲಿ ಎರಡು ಕಡೆಗಳಲ್ಲಿ ಮಾತ್ರ ಸಾಯಣರು ಈ ಪದವು ಅಂಕಿತನಾಮವೆಂದು ತಿಳಿಸಿದ್ದಾರೆ. ಉಳಿದೆಡೆಗಳಲ್ಲೆಲ್ಲ, ಬೇರೆ ಬೇರೆ ಸನ್ನಿವೇಶಗಳಲ್ಲಿ ಈ ಪದಕ್ಕೆ ಅರ್ಥವನ್ನು ಈ ರೀತಿ ಹೇಳಿದೆ.

ಋ ಸಂ	೧-೧೪೦- ೮.	**तमग्रुवः केशिनीः**—ಅಂಗುಲಿಗಳಂತಿರುವ ಜ್ವಾಲೆಗಳು.
,,	೧-೧೯೧-೧೪	**सप्त स्वसारो अग्रुवः— सुरगंगाद्याः सप्त नद्यः**
,,	೩- ೨೯-೧೩	**दश स्वसारो अग्रुवः—दशाङ्गुलयः**
,,	೪- ೧೯- ೭	**प्राग्रुवो नभन्यः—अग्रगामिनीः नदीः**

,, ೪- ೧೯- ೯. **ವಮ್ರ್ಯಾಭಿಃ ಪುತ್ರಮಗ್ರುವಃ—ಅಗ್ರೂ ನಾಮ ಕಾಚಿತ್। ತಸ್ಯಾಃ ಪುತ್ರಂ**

,, ೪- ೩೦-೧೬ **ಪುತ್ರಮಗ್ರುವಃ ಪರಾವೃಕ್ತಂ—ಏತನ್ಮಾ ಮ್ಯಾಃ ಪುತ್ರಂ**

,, ೭- ೨- ೫. **ಸಮಗ್ರುವೋ ನ ಸಮನೇಷು—ನದ್ಯಃ**

,, ೯- ೧- ೪ **ತವಿಷಾಂ ಹಿನ್ವಂತ್ಯಗ್ರುವಃ—ಅಂಗುಲಯಃ**

,, ೯- ೬೬- ೯. **ಮೃಜಂತಿ ತ್ವಾ ಸಮಗ್ರುವಃ—ಅಂಗುಲಯಃ**

ಹೀಗೆ, ೪-೧೯-೯, ಮತ್ತು ೪-೩೦-೧೬. ಈ ಎರಡು ಸನ್ನಿವೇಶಗಳಲ್ಲಿ ಬಿಟ್ಟು ಉಳಿದ ಸ್ಥಳಗಳಲ್ಲೆಲ್ಲಾ **ಅಗ್ರಗಾಮಿ** ಸ್ವಭಾವವಿರುವುದರಿಂದ **ಅಗ್ರುವಃ** ಎಂಬ ಹೆಸರು ಎಂದು ನಿರ್ವಚನವನ್ನು ತಿಳಿಸಿದೆ. ಈ ಸ್ವಭಾವವು **ಅಂಗುಲ** ಮತ್ತು **ನದೀ** ಎರಡಕ್ಕೂ ಇರುವುದು. ಯಜ್ಞಕಾರ್ಯಗಳಲ್ಲಿ ಹವಿಸ್ಸನ್ನರ್ಪಿಸಲು ಮುಂದಾಗಿ ಹೋಗಿ ಕಾರ್ಯತತ್ಪರವಾಗಿರುವುದರಿಂದ ಅಂಗುಲಿಗಳು **ಅಗ್ರುವ**ಗಳಾಗುವುವು ನಿಮ್ನ ಪ್ರದೇಶದಲ್ಲಿ ಮುಂದಾಗಿ ಹೋಗಿ ಹರಿಯುವುದರಿಂದ ನದಿಗಳೂ **ಅಗ್ರುವ**ಗಳಾಗುವುವು ಇದು ಆಯಾ ಸನ್ನಿವೇಶಗಳಲ್ಲಿ ಸಾಯಣರು ಹೇಳಿರುವ ವಿವರಣೆ. ಇದಲ್ಲದೇ, **'ವೇತ್ಯಗ್ರುರ್ಜನಿವಾನ್'** ಎಂಬಲ್ಲಿ **ಅಗ್ರು** ಶಬ್ದವು ಸೂರ್ಯನಿಗೆ ವಿಶೇಷಣವಾಗಿದೆ. ಆದರೆ, ಸದ್ಯಃ ಆ ಪದದ ವಿವರಣೆಯು ಅಪ್ರಕೃತ

ಮೇಲೆ ಹೇಳಿರುವ ಎರಡು ಕಡೆಗಳಲ್ಲಿ ಸಾಯಣರ ವಾಕ್ಯಗಳಲ್ಲಲ್ಲದೇ, ಸಂಹಿತೆಗಳಲ್ಲಾಗಲಿ, ಬ್ರಾಹ್ಮಣಾದಿಗಳಲ್ಲಾಗಲಿ **ಅಗ್ರೂ** ಎಂಬ ಹೆಸರಿನ ವ್ಯಕ್ತಿಯ ವಿಷಯವಾಗಲಿ, ನಿರ್ದೇಶವಾಗಲಿ ಇರುವುದಿಲ್ಲ ಆದುದರಿಂದ **ಅಗ್ರುವಃ ಪುತ್ರಂ ಪರಾವೃಕ್ತಂ** ಎಂಬ ವಾಕ್ಯದಲ್ಲಿ **ಅಗ್ರೂ** ಎಂಬುವಳ ಪುತ್ರ ಎಂಬರ್ಥವಲ್ಲದೇ ಬೇರೆ ಯಾವುದಾದರೂ ಅರ್ಥವು ಸಾಧ್ಯವಾಗಬಹುದೇ ಎಂಬ ವಿಷಯವನ್ನು ಶ್ರುತಿವಾಕ್ಯಗಳ ಆಧಾರದ ಮೇಲೆ ಪರಿಶೀಲಿಸಬಹುದು ಈ ಸಂದರ್ಭದಲ್ಲಿ ಮುಖ್ಯವಾಗಿ **ಅಗ್ರುವಃ, ಪರಾವೃಕ್ತಂ** ಎಂಬ ಪದಗಳಿಗೂ ಮತ್ತು ಸಾಯಣರು ಉದ್ಧರಿಸಿರುವ ಋ ಸಂ ೪-೧೯-೯ ನೇ ಮಂತ್ರದ **ವಮ್ರ್ಯೀ** ಎಂಬ ಪದಕ್ಕೂ ತಾತ್ಪರ್ಯವೇನಿರಬಹುದನ್ನು ವಿವರಿಸಬೇಕಾಗಿರುತ್ತದೆ

ಪರಾ ಎಂಬ ಉಪಸರ್ಗದೊಡನೆ ಕೂಡಿರುವ **ವೃಜ್** ಧಾತುವಿಗೆ ಪರಿತ್ಯಜಿಸು, ದೂರ ತಳ್ಳು, ಅಥವಾ ಹಿಂತಿರುಗಿಸು ಇತ್ಯಾದ್ಯರ್ಥಗಳಾಗುತ್ತವೆ. ಉದಾಹರಣೆಗೆ—

ಸ ಈಂ ವೃಷಾ ನ ಧೇನವಮಸ್ಯದಾಜೌ ಸ್ಮದಾ ಪರೈದಪ ದಭ್ರಚೇತಾಃ।
ಸರತ್ಪದಾ ನ ದಕ್ಷಿಣಾ ಪರಾವೃಜ್ ನ ತಾ ನು ಮೇ ಪೃಶನ್ಯೋ ಜಗೃಭ್ರೇ ॥

(ಋ. ಸಂ. ೧೦-೬೧-೮)

ಎಂಬಲ್ಲಿ ದಕ್ಷಿಣಾರ್ಥವಾಗಿ ದತ್ತವಾದ ಗೋವುಗಳನ್ನು ಪರಿತ್ಯಜಿಸಿ (ಅಥವಾ ಹಿಂತಿರುಗಿಸಿ) ಒಂದು ಹೆಜ್ಜೆಯನ್ನು ಮುಂದಿಡಲಿಲ್ಲ ಎಂದು ನಾಭಾನೇದಿಷ್ಠನ ವಾಕ್ಯವಿದೆ ಈ ಸನ್ನಿವೇಶದಲ್ಲಿ **ಪರಾವೃಜ್** ಎಂಬ ಪದಕ್ಕೆ **ಪರಾವರ್ಜಯಿತಾ ಸನ್** ಎಂದು ಯಾವ ರೀತಿ ಅರ್ಥಮಾಡಿದೆಯೋ ಅದೇ ರೀತಿ ಪ್ರಕೃತವಾದ ಮಂತ್ರದಲ್ಲಿಯೂ ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕು ಇದೇ ರೀತಿ **ಪರಾವೃಜ** ಶಬ್ದದ ಪ್ರಯೋಗವಿರುವ ಸಂದರ್ಭಗಳಲ್ಲೂ ಸಹ ಈ ಅರ್ಥವೇ ಸಹಜವಾಗಿರುತ್ತದೆ ಉದಾಹರಣೆಗೆ—

ಯಾಭಿಃ ಶುಚೀರ್ಭಿರ್ಯಷಣಾ ಪರಾವೃಜಂ ಪ್ರಾಂಧಂ ಶ್ರೋಣಂ ಚಕ್ಷಸ ಏತವೇ ಕೃಧಿಃ ॥

(ಋ. ಸಂ. ೧-೧೧೨-೮)

ಎಂಬಲ್ಲಿ ಅಶ್ವಿನೀದೇವತೆಗಳು ಕುಂಟನಾಗಿದ್ದ ಪರಾವೃಜನೆಂಬ ಋಷಿಯನ್ನು ನೇರವಾಗಿ ನಡೆಯುವಂತೆ ಮಾಡಿದರು ಎಂಬ ವರ್ಣನೆಯಿದೆ ಈ ಋಕ್ಕಿನ ವಿಶೇಷವಿಷಯದಲ್ಲಿ **ಪರಾವೃಜ** ಶಬ್ದಕ್ಕೆ ಸಾಯಣರ ಅರ್ಥವನ್ನು ವಿವರಿಸಿ ನಂತರ ಸ್ಕಂದಸ್ವಾಮಿಗಳ ವಿವರಣೆಯು ಸಾಯಣರ ವಿವರಣೆಗೆ ವ್ಯತ್ಯಸ್ತವಾಗಿದೆಯೆಂದೂ ತೋರಿಸಿದೆ ಪ್ರಕೃತ ಈ ವಿವರಣೆಯು ಅವಶ್ಯವಾಗಿರುವುದರಿಂದ ಸೂಕ್ಷ್ಮವಾಗಿ ಆ ಎರಡು ವಿವರಣೆಗಳನ್ನೂ ಪರಿಶೀಲಿಸಲಾಗುತ್ತದೆ.

" ಪರಾವೃಜಂ—ವೃಜೀ ವರ್ಜನೇ । ಪರಾವೃಣಕ್ತಿ ತಪಸಾ ಪಾಪಂ ವಿನಾಶಯತೀತಿ ಪರಾವೃಕ್ "

ತನ್ನ ತಪೋಮಹಿಮೆಯಿಂದ ಪಾಪವನ್ನು ದೂರಮಾಡುವುದರಿಂದ ಈ ಋಷಿಗೆ ಪರಾವೃಜನೆಂದು ಹೆಸರು ಎಂದು ಸಾಯಣರು ತಿಳಿಸಿದ್ದಾರೆ. ಆದರೆ ಸ್ಕಂದಸ್ವಾಮಿಗಳು **ಪರಾವರ್ಜಿತಂ** ಪರಿತ್ಯಜಿಸಲ್ಪಟ್ಟವನು ಎಂದರ್ಥಮಾಡಿದ್ದಾರೆ. ಇದು ಅಂಕಿತನಾಮವೆಂದು ತಿಳಿಸಿಲ್ಲ ಇದೇ ಅರ್ಥವನ್ನೇ ಆಂಗ್ಲವ್ಯಾಖ್ಯಾಕಾರರೂ ಅನುಸರಿಸಿದ್ದಾರೆ. ಉದಾಹರಣೆಗೆ- Macdonell and Keith ಎಂಬುವರು ಸಿದ್ಧಪಡಿಸಿರುವ Vedic Index ಎಂಬ ಗ್ರಂಥದಲ್ಲಿ ಈ ಪದದ ವಿವರಣೆಯನ್ನು ಈರೀತಿ ತಿಳಿಸಿದ್ದಾರೆ.

" Paravraj is a term found in four passages of the Reg-Veda, (೧-೧೧೨-೮, ೨-೧೩-೧೩, ೨-೫೬, ೧೦-೬೦-೪), in all of which, it refers to a person in a forlorn Condition, while one of them also speaks of him as going south. Sayana's View that the Word is a proper name is most unlikely, while Grassman's explanation of it as cripple is still less probable Roth's interpratation of it as " **exile** " seems clearly right in the passage "

ಮೇಲೆ ತಿಳಿಸಿರುವ ನಾಲ್ಕು ಸನ್ನಿವೇಶಗಳಲ್ಲಿ ಪರಾವೃಜಶಬ್ದದ ಪ್ರಯೋಗವಿದೆ. ಅವುಗಳಲ್ಲೆಲ್ಲಾ ಸಾಯಣರು ಹೇಳುವಂತೆ ಅಂಕಿತನಾಮವೆಂದು ಹೇಳುವುದು ಸರಿಯಲ್ಲ ಪರಿತ್ಯಕ್ತನಾದ ಪುರುಷನೆಂದು ಹೇಳಬಹುದೇ ಹೊರತು ಪರಾವೃಜನೆಂಬ ಹೆಸರಿನ ವ್ಯಕ್ತಿಯೆಂದು ಹೇಳಿದರೆ ತಪ್ಪಾಗಬಹುದು ಆದುದರಿಂದ, ಆ ಸಂದರ್ಭಗಳಲ್ಲೆಲ್ಲಾ " ಪರಿತ್ಯಾಗ " ಅಥವಾ " ಪ್ರದೇಶತ್ಯಾಗ " ಎಂದರ್ಥವು ಸಹಜವಾಗಿರುತ್ತದೆಂದು ಹೇಳಿದರೆ ತಪ್ಪಾಗಲಾರದೆಂದಭಿಪ್ರಾಯವಿದೆ. ಇತರ ಶ್ರುತಿವಾಕ್ಯಗಳೂ ಸಹ ಈ ಅರ್ಥವನ್ನೇ ಸಮರ್ಥಿಸುತ್ತವೆ ಮೇಲಿನ ವಾಕ್ಯಗಳಲ್ಲಿ ಉದಾಹರಿಸಿರುವ ಸನ್ನಿವೇಶಗಳೇ ಈ ಅರ್ಥವನ್ನು ವಿಶದಪಡಿಸುವುವು ಉಪಲಬ್ಧವಾಗಿರುವ ಸ್ಕಂದಸ್ವಾಮಿ ಭಾಷ್ಯದಲ್ಲಿ ಹೇಳಿರುವ ಅರ್ಥವೇ ಮುಂದೆಯೂ ಹೇಳಲ್ಪಟ್ಟಿದೆಯೆಂದು ಧಾರಾಳವಾಗಿ ಹೇಳಬಹುದು ಮುಂದಿನ ಭಾಗಗಳಿಗೂ ಆ ಭಾಷ್ಯದ ಸಹಾಯವಿದ್ದಿದ್ದರೆ ಅನೇಕ ಸಂದಿಗ್ಧಸನ್ನಿವೇಶಗಳಿಗೆ ವಿಶದವಾದ ತಾತ್ಪರ್ಯವನ್ನು ಹೇಳಬಹುದಾಗಿದ್ದಿತು ಆದುದರಿಂದ, **ಪರಾವೃಜ್** ಎಂಬುದಕ್ಕೆ **ಪರಿತ್ಯಕ್ತ** ಎಂಬರ್ಥವನ್ನು ಹೇಳಿದರೆ ಆಗ ಪ್ರಕೃತವಾದ ಮಂತ್ರದ ತಾತ್ಪರ್ಯವೇನೆಂಬುದನ್ನು ಪರಿಶೀಲಿಸಬೇಕಾಗುತ್ತದೆ. ಮತ್ತು ಈ ಪರಾವೃಕ್ತನು ಅಗ್ರುವಿನ ಪುತ್ರನೆಂದ ರೇಸರ್ಥ ಎಂಬಂಶವನ್ನು ತಿಳಿಯಬೇಕಾಗುತ್ತದೆ. ಇದನ್ನು ತಿಳಿಯಲು ಇಂದ್ರನಿಗೂ ಪರಾವೃಕ್ತನಿಗೂ ಸಂಬಂಧವನ್ನು ತಿಳಿಸುವ ಎರಡು ಸಂದರ್ಭಗಳನ್ನು ಪರಿಶೀಲಿಸಬೇಕು ಮೊದಲನೆಯದಾಗಿ, **ಮಖದ** (ಯಜ್ಞದ) ಶಿರಶ್ಛೇದನ, ಎರಡನೆಯದಾಗಿ **ಅಗ್ನಿಯ** ಪರಾವೃಕ್ತತ್ವ.

ಇವುಗಳಲ್ಲಿ ಮೊದಲನೆಯದಾದ **ಮುಖದ** ಶಿರಶ್ಛೇದನದ ಸನ್ನಿವೇಶವು ವಮ್ರಿರೂಪನಾದ ಇಂದ್ರನೇ **ಈ** ಪರಾವೃಕ್ತನನ್ನು ವಮ್ರಿಗಳ ಹಿಂಸೆಯಿಂದ ಬಿಡಿಸಿದನು ಎಂಬ ಸಂದರ್ಭವನ್ನು ತಿಳಿಸುತ್ತದೆ ಮತ್ತು ಇಂದ್ರನು ಯಾವ ಮುಖದ ಶಿರವನ್ನು ಛೇದಿಸಿದನೋ ಅದೇ ಸೂರ್ಯಾತ್ಮಕವಾಯಿತು ಪುನಃ ಅದೇ ಸೂರ್ಯನನ್ನು ಇಂದ್ರನೇ ಕರೆತಂದು ಯಜ್ಞಭಾಗಿಯಾಗುವಂತೆ ಮಾಡುತ್ತಾನೆ ಎಂಬಲ್ಲಿ **ಈ** ಎರಡಂಶಗಳೂ ಸೂಚಿತವಾಗಿವೆ

ತ್ವಂ ಮುಖಸ್ಯ ದೋಧತಃ ಶಿರೋ೭ವ ತ್ವಚೋ ಭರಃ ।
ಅಗಚ್ಛೋ ಸೋಮಿನೋ ಗೃಹಂ ॥

(ಋ. ಸಂ. ೧೦-೧೭೧-೨)

ಎಲೈ ಇಂದ್ರನೇ, ದೇವತೆಗಳಿಂದ ಭೀತಿಗೊಂಡುದೂ ಅವರಿಂದ ದೂರವಾಗಿ ಪಲಾಯನಮಾಡಿದುದೂ ಆದ ಯಜ್ಞದ ಶಿರವನ್ನು ನೀನು ಅದರ ಚರ್ಮದಿಂದ ಬೇರೆಮಾಡಿ ತಂದೆ ಎಂಬಲ್ಲಿ ಮುಖದ ಶಿರಶ್ಛೇದನವೂ, **ಪುನಃ** ಮುಖದ ಅದೇ ಶಿರಸ್ಸನ್ನು ಇಂದ್ರನು ವಾಪಸ್ಸು ತಂದುದೂ ಸೂಚಿತವಾಗಿದೆ. **ಈ** ಮುಖದ ಶಿರಸ್ಸೇ ಸೂರ್ಯನು, ಆ ಸೂರ್ಯನನ್ನೇ ಪುನಃ ಇಂದ್ರನು ಕರೆತಂದು ಯಜ್ಞಭಾಗಿಯಾಗುವಂತೆ ಮಾಡಿದನು.

ತ್ವಂ ತ್ಯಮಿಂದ್ರ ಸೂರ್ಯಂ ಪಶ್ಚಾ ಸಂತಂ ಪುರಸ್ಕೃಧಿ ।
ದೇವಾನಾಂ ಚಿತ್ತಿರೋ ವಶಂ ॥

(ಋ ಸಂ ೧೦-೧೭೧-೪)

ಎಲೈ ಇಂದ್ರನೇ, ದೇವತೆಗಳಿಂದಲೂ ಮರೆಯಾಗಿ ಹೋಗಿ ಯಾರ ಅರಿವಿಗೂ ತಿಳಿಯದಿದ್ದ ಸೂರ್ಯನನ್ನು ಕರೆತಂದು ನಮ್ಮ ಪೂಜಾರ್ಹನನ್ನಾಗಿ ಮಾಡು ಎಂದಿರುವ ಪ್ರಾರ್ಥನೆಯಲ್ಲಿ ಮರೆಯಾಗಿರುವ ಎಂದರೆ **ಪರಾವೃತ್ತನಾದ** ಸೂರ್ಯನನ್ನು ಹಿಂದಕ್ಕೆ ಕರೆತರಲು ಇಂದ್ರನೇ ಸಮರ್ಥನೆಂಬಂಶವು **ತಿಳಿಸಲ್ಪಟ್ಟಿದೆ.** ಆದರೆ ಮೇಲೆ ಯಾವ **ಮುಖದ** ಶಿರಶ್ಛೇದನವಾಯಿತೋ ಅದೇ ಮುಖದ ಶಿರಸ್ಸೇ ಸೂರ್ಯರೂಪದಲ್ಲಿ (ಅಥವಾ ಅಗ್ನ್ಯಾತ್ಮಕವಾದ ಸೂರ್ಯರೂಪದಲ್ಲಿ) ಪರಾವೃಕ್ತವಾಯಿತು ಎಂಬುದು ಹೇಗೆ? **ಈ** ಪರಾವೃಕ್ತನು ಅಗ್ರುವಿನ ಪುತ್ರನು ಎಂಬುದು ಹೇಗೆ? ಇವು ಮುಖ್ಯವಾಗಿ ಅರಿಯಬೇಕಾದ ಅಂಶ.

ಮೇಲೆ ಸೂಚಿತವಾದ ಮುಖದ ಶಿರಶ್ಛೇದನದ ಸನ್ನಿವೇಶವು ಪಂಚವಿಂಶಬ್ರಾಹ್ಮಣ (೭-೫-೬), ತೈತ್ತಿರೀಯಾರಣ್ಯಕ (೫-೧-೧-೫), ಶತಪಥಬ್ರಾಹ್ಮಣ (೧೪-೧-೨-೧೭) ಇತ್ಯಾದಿ ಸ್ಥಳಗಳಲ್ಲಿ ವರ್ಣಿತವಾಗಿದೆ ಇದರ ವಿವರವನ್ನು ಹಿಂದೆ ತಿಳಿಸಿದೆ (ಋಗ್ವೇದಸಂಹಿತಾ ಭಾಗ ೧೨, ಪುಟ 486-489) ಮತ್ತು ಇದೇ ಸಂದರ್ಭದಲ್ಲಿ **ಪ್ರವರ್ಗ್ಯ, ಘರ್ಮ** ಎಂಬ ಹೆಸರುಗಳ ಪ್ರಸಿದ್ಧವೂ, ಪೂಜ್ಯವೂ ಆದ ಕ್ರಮವನ್ನೂ ವಿವರಿಸಿ ತಿಳಿಸಿದೆ ಸೋಮಾತ್ಮಕನೂ, ಮುಖಾತ್ಮಕನೂ ಆದ ಯಾವ ವಿಷ್ಣುವಿನ ಶಿರಸ್ಸು ಛಿನ್ನವಾಯಿತೋ, ಯಾವುದು ಪ್ರವರ್ಗ್ಯವೆಂದು ಪ್ರಸಿದ್ಧವಾಯಿತೋ ಅದೇ ಆದಿತ್ಯನಲ್ಲದೇ ಬೇರೆಯಲ್ಲ

" ಸಂವತ್ಸರ ಏಷ ಯ ಏಷ ತಪತ್ಯೇಷ ಉ ಪ್ರವರ್ಗ್ಯಃ "

(ಶ. ಬ್ರಾ ೧೪-೧-೨-೧೪)

ಅಂತರಿಕ್ಷದಲ್ಲಿ ಪ್ರಕಾಶಿಸುವ ಸೂರ್ಯನೇ ಪ್ರವರ್ಗ್ಯವು. ಪ್ರವರ್ಗ್ಯರೂಪವಾದ ಈ ಸೂರ್ಯನೇ ಪರಾವೃಕ್ತನಾದವನು. ಪರಾವೃಕ್ತನಾದ ಈ ಸೂರ್ಯರೂಪದ ಪ್ರವರ್ಗ್ಯವನ್ನೇ ಅಶ್ವಿನೀದೇವತೆಗಳು ಪುನಃ ಸಂಪಾದಿಸಿದರು. ಆ ವಿಷಯವನ್ನೇ ಋ. ಸಂ. ೧-೧೧೭-೮ ನೇ ಮಂತ್ರದಲ್ಲಿ **"ಯೋಭಿಃ ಕಣೀಭಿರ್ವೃಷಣಾ ಪರಾವೃಜಂ"** ಎಂಬ ವಾಕ್ಯದಿಂದ ಅಶ್ವಿನೀದೇವತೆಗಳು **ಪರಾವೃಜನನ್ನು** ಹಿಂತಿರುಗಿಸಿ ಪೂಜಾರ್ಹನನ್ನಾಗಿ ಮಾಡಿದ ವಿಷಯವು ತಿಳಿಸಿದೆ. ಸೂರ್ಯರೂಪನಾದ ಈ ಪ್ರವರ್ಗ್ಯವು **ಪರಾವೃಕ್ತ**ವಾದುದು ಹೇಗೆ ಆದನ್ನು ಅಶ್ವಿನೀದೇವತೆಗಳು ಪುನಃ ಸಂಪಾದಿಸಿದುದು ಹೇಗೆ ಎಂಬ ವಿಷಯವನ್ನೂ ಸಹ ಹಿಂದೆ (ಋಗ್ವೇದಸಂಹಿತಾ, ಭಾಗ ೧೨, ಪುಟ 486-487) ತಿಳಿಸಿದೆ. **"ಯಜ್ಞೋ ವೈ ದೇವೇಭ್ಯ ಉದಕ್ರಾಮತ್"** (ಐ. ಬ್ರಾ ೧-೧೪) ಇತ್ಯಾದಿಯಾಗಿ ಐತರೇಯ ಬ್ರಾಹ್ಮಣದಲ್ಲಿ ವರ್ಣಿತವಾಗಿರುವಂತೆ, ಯಜ್ಞಶಿರಸ್ಸಾದ ಪ್ರವರ್ಗ್ಯದ **ಪರಾವೃಕ್ತತ್ವವು** ದೇವತೆಗಳಿಗೆ ಶ್ರೇಯಸ್ಕರವಾಗಿಲ್ಲ ಎಂದು ಯಾವ ರೀತಿ ತಿಳಿಸಿದೆಯೋ, ಅದೇ ರೀತಿ ಅಗ್ನಿಯ **ಪರಾವೃಕ್ತತ್ವವೂ** ಸಹ ದೇವತೆಗಳಿಗೆ ಶ್ರೇಯಸ್ಕರವಾಗಲಿಲ್ಲ. ಆಗ ದೇವತೆಗಳು ಮರೆಯಾದ ಅಗ್ನಿಯನ್ನು ಪ್ರಾರ್ಥಿಸಲು ಇಂದ್ರನನ್ನು ದೂತನನ್ನಾಗಿ ಕಳುಹಿಸಿದರು. ಇಂದ್ರನು **ಅಗ್ರ್ಯ** ಪುತ್ರನಾದ **ಅಗ್ನಿ**ಯನ್ನೂ ಹಿಂದಕ್ಕೆ ಕರೆತಂದು ಅವನು ಪುನಃ ಯಜ್ಞದಲ್ಲಿ ಭಾಗಿಯಾಗುವಂತೆ ಮಾಡಿದನು ಎಂದಿರುವ ವಿಷಯನೇ ಪ್ರಕೃತವಾದ ಋಕ್ಕಿನಲ್ಲಿಯೂ ವರ್ಣಿತವಾಗಿರಬಹುದು

> **ಅಗ್ನೇಸ್ತ್ರಯೋ ಜ್ಯಾಯಾಗ್ಂಸೋ ಭ್ರಾತರ ಆಸನ್ತೇ ದೇವೇಭ್ಯೋ ಹವ್ಯಂ ವಹಂತಃ ಪ್ರಾಮಿಯಂತ ಸೋ೬ಗ್ನಿರಬಿಭೇದಿತ್ಥಂ ವಾವ ಸ್ಯ ಆರ್ತಿಮಾರಿಷ್ಯತೀತಿ ಸ ನಿಲಾಯತ ಸೋ೬ಪಃ ಪ್ರಾವಿಶತ್ ।**
>
> (ತೈ. ಸಂ ೩-೬-೬-೧)

ಅಗ್ನಿಯ ಮೂರು ಜನ ಭ್ರಾತೃಗಳೂ ದೇವತೆಗಳಿಗೆ ಹವಿಸ್ಸನ್ನು ವಹಿಸುವ ವೇಳೆಯಲ್ಲಿ ಶ್ರಾಂತರಾಗಿ ನಿಷ್ಪ್ರಾಣರಾದರು ಅಗ್ನಿಯು ತನಗೂ ಅದೇ ಅವಸ್ಥೆಯು ಪ್ರಾಪ್ತವಾಗಬಹುದೆಂದು ಭೀತಿಗೊಂಡು ನೀರಿನಲ್ಲಿ ಅವಿತುಕೊಂಡು ಮರೆಯಾದನು. ಅದೇ ಅಗ್ನಿಯ **ಪರಾವೃಕ್ತತ್ವ** ಪುನಃ ಇವನು ಹಿಂತಿರುಗಿ ಯಜ್ಞದಲ್ಲಿ ಭಾಗವಹಿಸಲು ಇವನನ್ನು ದೇವತೆಗಳು **"ಮಹತ್ತದುಲ್ಪಂ ಸ್ಥವಿರಂ"** ಎಂಬ ಸೂಕ್ತದಿಂದ (ಋ. ಸಂ. ೧೦-೫೧) ಪ್ರಾರ್ಥಿಸಿದ್ದಾರೆ ಈ ಅಗ್ನಿಯು **ಅಗ್ರ್ಯವಃ ಪುತ್ರ**ನಾದುದು ಹೇಗೆಂದರೆ, ಇವನು ಉದಕಜನಿತನಾದುದರಿಂದ **ಅಪಾಂನಪಾತ್** ಎಂಬ ಹೆಸರಿನಿಂದ ಪ್ರಸಿದ್ಧನಾದನು. **ಆಪ ಏವೇದಮಗ್ರ ಆಸುಃ** (ಬೃ. ಉ. ೫-೫-೧) ಸಕಲ ತತ್ತ್ವಗಳಿಗಿಂತಲೂ ಅಗ್ರವಾಗಿದ್ದುದರಿಂದ ನೀರಿಗೆ **ಅಗ್ರ್ಯ** ಎಂಬ ಹೆಸರಿರಲು ಸಹಜವಾಗಿದೆ. ಅಥವಾ ಸಹಜವಾಗಿ ಪ್ರವಹಿಸುವ ಪ್ರವೃತ್ತಿಯಿರುವುದರಿಂದಲೇ ನದಿಗಳಿಗೆ **ಅಗ್ರ್ಯ** ಎಂಬ ಹೆಸರಿರುವುದು ಋಕ್ಸಂಹಿತೆಯಲ್ಲಿ ಪ್ರಸಿದ್ಧವಾಗಿದೆ (ಋ ಸಂ. ೪-೧೯-೭ ಇತ್ಯಾದಿ). ಅಗ್ನಿಯು ಇಂತಹ **ಅಗ್ರ್ಯ**ವಿನ ಪುತ್ರನು ಮತ್ತು **ಅಗ್ನಿಯೇ ಅಗ್ರ್ಯ**ವೆಂದೂ ಕರೆಯಲ್ಪಡುವ ವಿಷಯವನ್ನೂ ಸಹ ಹಿಂದೆ ತಿಳಿಸಿದೆ (ಶ. ಬ್ರಾ. ೬-೧-೧-೧೧)

ಈ ರೀತಿ, ಸ್ಥಳಾಂತರದಲ್ಲಿ ಮರೆಯಾಗುವುದರಿಂದಾಗಲಿ, ಅಥವಾ ಮೇಲೆ ತಿಳಿಸಿರುವಂತೆ ಶಿರಶ್ಛೇದನಾದಿಗಳಿಂದ ಮುಖ್ಯಾಂಗಗಳು (ಮುಖ್ಯ ತತ್ತ್ವವು) ಮರೆಯಾಗುವುದರಿಂದಾಗಲಿ **ಪರಾವೃಕ್ತತ್ವವು** ಪ್ರಾಪ್ತವಾಗಬಹುದು. **ಶೀರ್ಷಾ ಪರಾ ವರ್ತ್** (ಋ. ಸಂ. ೧೦-೮೯) ಇತ್ಯಾದಿ ಪ್ರಯೋಗಗಳು ಈ ಅರ್ಥವನ್ನು ಸಮರ್ಥಿಸುತ್ತವೆ. ಶಿರಶ್ಛೃತವಾದುದು, ಪರಿತ್ಯಕ್ತವಾದುದು, ಎಂಬರ್ಥಗಳಲ್ಲಿಯೂ ಸಹ ಈ ಪದದ ಪ್ರಯೋಗವಿರುತ್ತದೆ. ಪರಿತ್ಯಕ್ತ

ವಾದ ವ್ಯಕ್ತಿಯನ್ನು ಇಂದ್ರನು ಪುನಃ ಪೂಜ್ಯನಾಗುವಂತೆ ಮಾಡಿದನು, ಎಂಬ ವರ್ಣನವೂ ಅನೇಕ ಕಡೆಗಳಲ್ಲಿರುತ್ತದೆ. ಉದಾಹರಣೆಗೆ—

ಅರಮಯಃ ಸರಪಸಸ್ತರಾಯ ಕಂ ತುರ್ವೀತಯೇ ಚ ವಯ್ಯಾಯ ಚ ಸ್ತುತಿಂ ।
ನೀಚಾ ಸಂತಮುದನಯಃ ಪರಾವೃಜಂ ಪ್ರಾಂಧಂ ಶ್ರೋಣಂ ಶ್ರವಯನ್ತ್ಸ್ಯುಕ್ಥಃ ॥
(ಋ. ಸಂ ೨-೧೩-೧೨)

ಎಂಬಲ್ಲಿ ಅಂಧನೂ, ಶ್ರೋಣನೂ (ಕುಂಟನೂ) ಆದ ಪರಾವೃಜನು ಇಂದ್ರನಿಂದ ಸಹಾಯವನ್ನು ಪಡೆದನೆಂದಿದೆ. ಇವನು ಯಾರು? ಎಂಬುದೇ ಪ್ರಶ್ನೆ. ಸಾಯಣನು ಪರಾವೃಜನೆಂಬ ಋಷಿಯೆಂದಿದ್ದಾರೆ ಇದು ಅಂಕಿತನಾಮ ವಾಗಿರಲು ಕಾರಣವಿಲ್ಲವೆಂದು ಮೇಲೆ ತಿಳಿಸಿದೆ. ಆದರೆ ಇಲ್ಲಿ ಪರಾವೃಜಶಬ್ದಕ್ಕೆ ಅರ್ಥವೇನು? **ಅಂಧ, ಶ್ರೋಣ,** ಎಂಬ ಶಬ್ದಗಳಿಗೆ ಅರ್ಥವೇನು? ಎಂಬ ಪ್ರಶ್ನೆಯು ಸಹಜವಾಗಿದೆ **ಈ** ಸಂದರ್ಭದಲ್ಲಿ **ಪರಾವೃಜ, ವಶ** ಇತ್ಯಾದಿಯಾಗಿ ಅಪ್ತ್ಯದೇವತೆಗಳಿಂದ ಯಾರು ಯಾರು ರಕ್ಷಿತರಾದರೆಂದು ಹೇಳಿದೆಯೋ ಅವರೆಲ್ಲರೂ ಇಂದ್ರನಿಂದಲೂ ರಕ್ಷಿತರೆಂದು ಪ್ರಸಿದ್ಧವಾಗಿದೆ ಮೇಲೆ ೧-೧೧೩-೮ ರಲ್ಲಿ ಅಪ್ತ್ಯದೇವತೆಗಳು ಪರಾವೃಜನನ್ನು ರಕ್ಷಿಸಿದಂತೆಯೇ, ೧-೧೧೭-೧೦ ರಲ್ಲಿ **ವಶ**ನೆಂಬುವನನ್ನು ರಕ್ಷಿಸಿದರೆಂದಿದೆ ಅದೇ **ವಶನು** ಇಂದ್ರರಕ್ಷಿತನೂ ಆಗಿದ್ದಾನೆ **" ಮದಂತೀಂದ್ರೋಪಾಃ ॥**

ಪ್ರತೀಚೀ ವಶಮಶ್ವ್ಯಂ " (ಋ ಸಂ ೮-೪೬-೩೨, ೩೩) ಎಂಬಲ್ಲಿ **ವಶ**ಶಬ್ದವು **ಸೂರ್ಯಸಿದ್ಧೀಶಕ** ವಾದ ಪದವಾಗಿದೆ ೧-೧೧೨-೧೦ ರಲ್ಲೂ **ಆದೇ** ರೀತಿ ಅರ್ಥಮಾಡಬಹುದು ಆದರೆ **ಈ ವಶ**ಶಬ್ದಸೂಚಿತವಾದ **ಆದಿತ್ಯನೇ ಪರಾವೃಜ**ಶಬ್ದವಾಚ್ಯನೂ ಆದರೆ, ಅವನಿಗೆ ಅಂಧತ್ವವೂ, ಶ್ರೋಣತ್ವವೂ ಹೇಗೆ? **ತಮಸಾ ಅಪಗೂಳ್ಹೇಮ್, ಗುಹಾ ಹಿತಂ** ಇತ್ಯಾದಿ ವಿಶೇಷಣಗಳು ಆದಿತ್ಯನ ಅಂಧತ್ವನನ್ನು ಸೂಚಿಸುತ್ತವೆ ಅದೇ ರೀತಿ **ಅಸಾದ್** ಎಂಬ ವಿಶೇಷಣವು ಸೋಮ, ಸೂರ್ಯ, ಅಗ್ನಿ **ಈ** ದೇವತೆಗಳ ಸ್ವರೂಪವನ್ನು ನಿರ್ದಿಸುತ್ತದೆ. ಈ ಮೂರು ದೇವತೆಗಳೂ ಮಖಾತ್ಮಕಗಳು ಮಖವೇ ವಿಷ್ಣುವು ಆದುದರಿಂದ ಸೋಮ, ಅಗ್ನಿ, ಸೂರ್ಯ ಮತ್ತು ವಿಷ್ಣು ಈ ದೇವತೆಗಳೆಲ್ಲಾ ಒಂದಲ್ಲ ಒಂದು ವಿಧದಲ್ಲಿ ಪರಾವೃಕ್ತರಾದನರು ಇವರನ್ನು ಇಂದ್ರನು ಯಜ್ಞಭಾಗಿಗಳಾಗಿ ಮಾಡುವ ಪ್ರಯತ್ನವನ್ನು ಅನೇಕ ಸಂದರ್ಭಗಳಲ್ಲಿ ನಡೆಸಿದ್ದಾನೆ **ಉದಾಹರಣೆಗೆ**—

ನಿಧೀಯಮಾನಮಪಗೂಳ್ಹಮಪ್ಸು ಪ್ರ ಮೇ ದೇವಾನಾಂ ವ್ರತಪಾ ಉವಾಚ ।
ಇಂದ್ರೋ ವಿದ್ವಾ ಅನು ಹಿ ತ್ವಾ ಚಚಕ್ಷ ತೇನಾಪಮಗ್ನೇ ಅನುಶಿಷ್ಟ ಆಗಾಂ ॥
(ಋ ಸಂ ೧೦-೫೧-೬)

ಇತ್ಯಾದಿ ಋಕ್ಕುಗಳಲ್ಲಿ ಮೇಲಿನ ಅಂಶವು ಸೂಚಿತವಾಗಿದೆ ಉದಾಹೃತವಾಗಿರುವ **ಈ** ಮಂತ್ರದಲ್ಲೂ ಮೇಲೆ ತಿಳಿಸಿರುವ ತೆರವು ಮಂತ್ರಗಳಲ್ಲೂ ಪರಾಙ್ಮುಖನಾಗಿ ಓಡಿಹೋಗಿ ಅವಿತುಕೊಂಡ ಅಗ್ನಿಯನ್ನು ನಿರ್ದೇಶಿಸಿರಬಹುದು. ಅವನೇ ಅಗ್ರೂಪುತ್ರನಾಗಬಹುದು ಅಗ್ರಗಾಮಿಯಾದ ಉದಕದ ಪುತ್ರನೆಂದಾಗಲಿ, ಅಥವಾ ಕರ್ಮತತ್ಪರವಾದ ಅಂಗುಲಿಗಳ ಪುತ್ರನೆಂದಾಗಲಿ ಆಗಬಹುದು ಅಥವಾ ಈ ಪರಾವೃಕ್ತನು ಸೂರ್ಯನಾಗಬಹುದು, ಎಂದು ಉದ್ಧೃತ ವಾದ ಶ್ರುತಿವಾಕ್ಯಗಳ ಆಧಾರದ ಮೇಲೆ ಊಹಿಸಿ ಹೇಳಬಹುದೇ ಹೊರತು **ಇದಮಿತ್ಥಂ** ಎಂದು ನಿಷ್ಕೃಷ್ಟವಾಗಿ ಹೇಳುವುದ. ಸುಲಭಸಾಧ್ಯವಲ್ಲ

। संहितापाठः ।

उत त्या तुर्वशायदू अस्नातारा शचीपतिः ।
इन्द्रो विद्वाँ अपारयत् ॥ ८२ ॥

। पदपाठः ॥

उत । त्या । तुर्वशायदू इति । अस्नातारा । शचीऽपतिः ।
इन्द्रः । विद्वान् अपारयत् ॥ ८२ ॥

। सायणभाष्यं ।

उतापि च अस्नातारास्नातारौ ययातिशापादनभिषिक्तौ त्या त्यौ तौ प्रसिद्धौ तुर्वशायदू तुर्वशनामानं यदुनामकं च राजानौ शचीपतिः कर्मणां पालकः। यद्वा । शचीन्द्रस्य भार्या । तस्याः पतिर्भर्ता विद्वान् सकलमपि जानन्निन्द्रोऽपारयत् । अभिषेकार्हावकरोत् ॥

। प्रतिपदार्थ ॥

उत—मत्तु । अस्नातारा—(ययाति शापदिंद) पट्टाभिषेकरहितरादवरू । त्या—प्रसिद्धरू आद । तुर्वशायदू—तुर्वश मत्तु यदु एंब हेसरुळ्ळ राजरन्नु । शचीपतिः—कर्मपालकनू । विद्वान्—सकलवन्नू तिळिदवनू आद । इन्द्रः—इन्द्रनु । अपारयत्—अवरन्नु अभिषेकार्हरन्नागि माडिदनु.

। भावार्थ ।

ययाति शापदिंद अभिषेकक्के अनर्हरादवरू, प्रसिद्धरू आद तुर्वश मत्तु यदु एंब हेसरुळ्ळ राजरन्नु कर्मपालकनू, सकलवन्नू तिळिदवनू आद इन्द्रनु अवरन्नु अभिषेकार्हरन्नागि माडिदनु.

English Translation.

The lord of acts, the wise Indra, has borne across (their difficulties), Turvasas and Yadu, when denied inauguration.

। विशेषविषयगळु ।

तुर्वशायदू—यदु इत्यादीनि पंचमनुष्यनामानि । यदु, तुर्वश, द्रुह्य, अनु मत्तु पूरु इवु ऐदू मनुष्यनामगळु. अवुगळल्लि यदुवेंब गुंपिनवरु यावागलू

ಇತರರಿಗೆ ಅಹಿಂಸಕರಾಗಿದ್ದವರು, ಯದುಷು, ನಿಯತೇಷು, ಪರೇಷಾಂ ಅಹಿಂಸಕೇಷು | ಎಂದು ಸಾಯಣರು ವಿವರಿಸಿದ್ದಾರೆ ಇದು ಒಂದು ವ್ಯಕ್ತಿಯ ಹೆಸರೂ ಆಗಬಹುದು, ಅಥವಾ ಒಂದು ಗುಂಪಿನ ಹೆಸರೂ ಆಗಬಹುದು ಯದುವೆಂಬ ರಾಜನ ಹೆಸರು ಪ್ರಸಿದ್ಧವಾಗಿರುವಂತೆಯೇ ಯದುವೆಂಬ ಒಂದು ಗುಂಪಿನ ಹೆಸರೂ ಪ್ರಸಿದ್ಧವಾಗಿದೆ

ತುರ್ವಶೇಷು—**ತುರ್ವಶ** ಎಂಬ ಹೆಸರೂ ಸಹ ವ್ಯಕ್ತಿನಾಮವಾಗಿಯೂ ಸಂಘನಾಮವಾಗಿಯೂ ಪ್ರಸಿದ್ಧವಾಗಿದೆ ಇಲ್ಲಿ ಸಾಯಣರು **ಹಿಂಸಕೇಷು ಮನುಷ್ಯೇಷು** ಹಿಂಸಕರಾದ ಮಾನವರ ಗುಂಪಿನಲ್ಲಿ ಎಂದ **ತುರ್ವಶರ** ಸ್ವಭಾವವನ್ನು ಹೇಳಿದ್ದಾರೆ **ಯದು** ಮತ್ತು **ತುರ್ವಶ** ಎಂಬ ಎರಡು ವ್ಯಕ್ತಿಗಳ ಹೆಸರು ಬರುವ ಕಡೆಗಳಲ್ಲೆಲ್ಲಾ ಅವರಿಬ್ಬರೂ ರಾಜರ್ಷಿಗಳೆಂದೂ ಇಂದ್ರಾಗ್ನಿಗಳ ಅನುಗ್ರಹಕ್ಕೆ ಪಾತ್ರರಾದವರೆಂದೂ ತಿಳಿಯುತ್ತದೆ **ಯದುಷು, ತುರ್ವಶೇಷು** ಎಂದು ಬಹುವಚನಗಳಲ್ಲಿ **ಈ** ಎರಡು ಹೆಸರುಗಳೂ ಜೊತೆಯಲ್ಲಿ ಬಂದಿರುವುದು ಋಕ್ಸಂಹಿತೆಯಲ್ಲೆಲ್ಲಾ ಇದೊಂದೇ ಸ್ಥಳದಲ್ಲಿ ಎಂದು ಹೇಳಬಹುದು.

ಅಗ್ನಿನಾ ತುರ್ವಶಂ ಯದುಂ ಪರಾವತ ಉಗ್ರಾದೇವಂ ಹವಾಮಹೇ ।

(ಋ ಸಂ ೧-೩೬-೧೪)

ತ್ವಮಾವಿಥ ನರ್ಯಂ ತುರ್ವಶಂ ಯದುಂ ತ್ವಂ ತುರ್ವೀತಿಂ ವಯ್ಯಂ ಶತಕ್ರತೋ ।

(ಋ ಸಂ. ೧-೫೪-೬)

ಇತ್ಯಾದಿ ಋಕ್ಕುಗಳಲ್ಲಿ ಇಬ್ಬರು ರಾಜರ್ಷಿಗಳೂ ಅಗ್ನಿಯ ಮತ್ತು ಇಂದ್ರನ ರಕ್ಷಣೆಯನ್ನು ಪಡೆದುದು ಹೇಳಲ್ಪಟ್ಟಿದೆ. ತುರ್ವಶನ ಮುಖ್ಯವಾದ ಸಾಹಸಕೃತ್ಯವು ಸುದಾಸನೊಂದಿಗೆ ಯುದ್ಧಮಾಡಿದುದು.

ಪುರೋಳಾ ಇತ್ತುರ್ವಶೋ ಯಕ್ಷುರಾಸೀದ್ರಾಯೇ ಮತ್ಸ್ಯಾಸೋ ನಿಶಿತಾ ಅಪಿವ ।
ಶ್ಲುಷ್ಟಿಂ ಚಕ್ರುರ್ಭೃಗವೋ ದ್ರುಹ್ಯವಶ್ಚ ಸಖಾ ಸಖಾಯಮತರದ್ವಿಷೂಚೋಃ ॥

(ಋ ಸಂ ೭-೧೮-೬)

ಎಂಬ ಋಕ್ಕಿನಲ್ಲಿ **ತರ್ವಶನ** ಯುದ್ಧವು ವರ್ಣಿತವಾಗಿದೆ ಆದರೆ ತುರ್ವಶನು ಇಲ್ಲಿ ಇಂದ್ರನಿಂದ ಸಹಾಯವನ್ನು ಪಡೆದನೇ ಅಥವಾ ನಿಗ್ರಹವನ್ನು ಪಡೆದನೇ ಎಂಬುದೇ ವಿಶದವಾಗಿಲ್ಲ. ಸಾಯಣರು ಎರಡುವಿಧವಾದ ಅರ್ಥವನ್ನೂ ಹೇಳಿದ್ದಾರೆ ಮೊದಲನೆಯದಾಗಿ ತುರ್ವಶನು ಇಂದ್ರನ ಸಖನಾದ ಸುದಾಸನೊಂದಿಗೆ ಯುದ್ಧಕ್ಕೆ ಹೋದಾಗ ಇಂದ್ರನು ತುರ್ವಶನನ್ನ ನಿಗ್ರಹಿಸಿ ತನ್ನ ಸ್ನೇಹಿತನನ್ನು ರಕ್ಷಿಸಿದನು ಎಂದೂ, ಎರಡನೆಯದಾಗಿ ತುರ್ವಶನಿಗೂ ಅವನ ವಿರೋಧಿಗಳಿಗೂ ಯುದ್ಧವು ಸಂಭವಿಸಿದ ಕಾಲದಲ್ಲಿ ಇಂದ್ರನು ಸಖನಾದ ತುರ್ವಶನಿಗೆ ಸಹಾಯಮಾಡಿದನೆಂದೂ ಹೇಳಿದೆ. ಆದ್ದರಿಂದ ಈ ಋಕ್ಕಿನ ತಾತ್ಪರ್ಯವು ವಿಶದವಾಗಿಲ್ಲ. ಇದೇ ರೀತಿ ಯದು ಮತ್ತು ತುರ್ವಶ ಇಬ್ಬರೂ ಸಹ ಇಂದ್ರನಿಂದ ಪರಾಜಯವನ್ನು ಪಡೆದುದಾಗಿ,

ಪುರಃ ಸದ್ಯ ಇತ್ಥಾ ಧಿಯೇ ದಿವೋದಾಸಾಯ ಶಂಬರಂ ।
ಅಧ ತ್ಯಂ ತುರ್ವಶಂ ಯದುಂ ॥

(ಋ. ಸಂ. ೯-೬೧-೩)

ಎಂಬ ಋಕ್ಕಿನಲ್ಲಿ ಹೇಳಿದೆ ಇದರಿಂದ ಇಂದ್ರನು ತನ್ನ ಸಖನಾದ **ದಿವೋದಾಸನಿಗಾಗಿ** ಯದುವನ್ನೂ **ತುರ್ವಶನನ್ನೂ** ನಿಗ್ರಹಿಸಿದುದಾಗಿ ತಿಳಿಯುತ್ತದೆ. ಆದರೆ,

ಪ್ರಯತ್ಸಮುದ್ರಮತಿ ಶೂರ ಪರ್ಷಿ ಪಾರಯಾ ತುರ್ವಶಂ ಯದುಂ ಸ್ವಸ್ತಿ ।

(ಋ. ಸಂ. ೧–೧೭೪–೯)

ಉತ ತ್ಯಾ ತುರ್ವಶಾಯದೂ ಅಸ್ನಾತಾರಾ ಶಚೀಪತಿಃ ।
ಇಂದ್ರೋ ವಿದ್ವಾಁ ಅಪಾರಯತ್ ।

(ಋ. ಸಂ. ೪–೩೦–೧೭)

ತ್ವಮಪೋ ಯದವೇ ತುರ್ವಶಾಯಾರಮಯಃ ಸುದುಘಾಃ ಪಾರ ಇಂದ್ರ ।

(ಋ ಸಂ. ೫–೩೧–೮)

ಮಹತ್ತೇ ವೃಷ್ಣೋ ಅಭಿಚಕ್ಷ್ಯಂ ಕೃತಂ ಪಶ್ಯೇಮ ತುರ್ವಶಂ ಯದುಂ ।

(ಋ. ಸಂ. ೮–೪–೭)

ಇತ್ಯಾದ್ಯನೇಕ ಋಕ್ಕುಗಳಲ್ಲಿ **ಯದು** ಮತ್ತು **ತುರ್ವಶ**ರಿಬ್ಬರೂ ಇಂದ್ರನಿಂದ ಸಾಕ್ಷಾತ್ತಾಗಿ ಸಹಾಯವನ್ನು ಪಡೆದ ವಿಷಯವು ಹೇಳಿದೆ

ಬಹುವಚನದಲ್ಲಿ **ಈ** ಹೆಸರುಗಳು ಬಂದಾಗೆಲ್ಲಾ ಇವೆರಡೂ ಬೇರೆ ಬೇರೆ ಸಂತತಿಯೆಂದೂ ಮತ್ತು ಎರಡು ಗುಂಪುಗಳಿಗೂ ನಿಕಟವಾದ ಸಂಬಂಧವಿತ್ತೆಂದೂ ತಿಳಿಯುತ್ತದೆ.

ತ್ರಿಂಶಚ್ಛತಂ ವರ್ಮಿಣ ಇಂದ್ರ ಸಾಕಂ ಯವ್ಯಾವತ್ಯಾಂ ಪುರುಹೂತ ಶ್ರವಸ್ಯಾ ।
ವೃಚೀವಂತಃ ಶರವೇ ಪತ್ಯಮಾನಾಃ ಪಾತ್ರಾ ಭಿಂದಾನಾ ನ್ಯರ್ಬುದಾನ್ಯಯನ್ ॥
ಯಸ್ಯ ಗಾವಾವರುಷಾ ಸೂಯವಸ್ಯೂ ಅಂತರೂ ಷು ಚರತೋ ರೇರಿಹಾಣಾ ।
ಸ ಸೃಂಜಯಾಯ ತುರ್ವಶಂ ಪರಾದಾದ್ವೃಚೀವತೋ ದೈವತಾತಾಯ ಶಿಕ್ಷನ್ ॥

(ಋ. ಸಂ. ೬–೨೭–೬, ೭)

ಎಂಬ ಋಕ್ಕುಗಳಲ್ಲಿ ಕಾಣುವ ಸನ್ನಿವೇಶಗಳಿಂದ ವೃಚೀವತ್ಸಂತತಿಯೂ ತುರ್ವಶ ಸಂತತಿಯೂ ಸಹ ಒಂದೇ ವಂಶದ ಎರಡು ಹೆಸರುಗಳೆಂದು Zimmer ಎಂಬ ಪಂಡಿತನು ಅಭಿಪ್ರಾಯಪಟ್ಟಿರುತ್ತಾನೆ. ಆದರೆ ಇಲ್ಲಿ ಆ ಎರಡು ಹೆಸರುಗಳೂ ಒಂದೇ ವಂಶದ ಹೆಸರುಗಳೆಂದು ತಾದಾತ್ಮ್ಯವನ್ನು ಸೂಚಿಸುವುದಿಲ್ಲ. ಆದುದರಿಂದ ಅವೆರಡೂ ಸಮೀಪ ಸಂಬಂಧವುಳ್ಳ ಬೇರೆ ಬೇರೆ ಹೆಸರುಗಳೆಂದು ಹೇಳಬಹುದು. ಮತ್ತು

ಶೋಣಃ ಸಾತ್ರಾ ಸಹ ಈಜೇ ಪಾಂಚಾಲೋ ರಾಜಾ ತೆದೇತೆದ್ಗಾಥಯಾಭಿಗೀತಂ ಸಾತ್ರಾಸಹೇ ಯಜಮಾನೇಽಶ್ವಮೇಧೇನ ತೌರ್ವಶಾಃ ।

(ಶ. ಬ್ರಾ. ೧೩–೫–೪–೧೬)

ಎಂಬ ಬ್ರಾಹ್ಮಣವಾಕ್ಯದಿಂದ ತುರ್ವಶರು ಪಾಂಚಾಲರ ಸಖರೆಂದೂ ಅವರ ಯಾಗಕಾಲದಲ್ಲಿ ಸಹಾಯಮಾಡಿದರೆಂದೂ ತಿಳಿಯುತ್ತದೆ. ತುರ್ವಶರ ಯುದ್ಧವನ್ನು ವರ್ಣಿಸುವಾಗ **ಪರುಷ್ಣೀ** ನದಿಯನ್ನು ದಾಟಿದರೆಂದು (ಋ. ಸಂ. ೭–೧೮)

ಸೂಚಿಸಿದೆ. ಆದರೆ ಯಾವ ದಿಕ್ಕಿನಿಂದ ಎನ್ನುವುದು ಸರಿಯಾಗಿ ತಿಳಿಯುವುದಿಲ್ಲ ಇತರ ಆಧಾರಗಳಿಂದ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ದಾಟಿದರೆಂದು ಹೇಳಬಹುದು. ಯದುಗಳಿಗೂ ಇವರಿಗೂ ಇರತಕ್ಕ ಸಂಬಂಧವಾವುದೆಂಬುದನ್ನೂ ಸರಿಯಾಗಿ ಹೇಳಲು ಆಗುವುದಿಲ್ಲ.

॥ ಸಂಹಿತಾಪಾಠಃ ॥

ಉತ ತ್ಯಾ ಸದ್ಯ ಆರ್ಯಾ ಸರಯೋರಿಂದ್ರ ಪಾರತಃ ।
ಅರ್ಣಾಚಿತ್ರರಥಾವಧೀಃ ॥ ೧೪ ॥

॥ ಪದಪಾಠಃ ॥

ಉತ । ತ್ಯಾ । ಸದ್ಯಃ । ಆರ್ಯಾ । ಸರಯೋಃ । ಇಂದ್ರ । ಪಾರತಃ ।
ಅರ್ಣಾಚಿತ್ರರಥಾ । ಅವಧೀಃ ॥ ೧೪ ॥

॥ ಸಾಯಣಭಾಷ್ಯಂ ॥

ಉತಾಪಿ ಚ ಸದ್ಯಃ ಸಪದಿ ಹೇ ಇಂದ್ರ ತ್ವಂ ತ್ಯಾ ತ್ಯೌ ತಾವಾರ್ಯಾರ್ಯಾವಾರ್ಯತ್ವಾಭಿಮಾನಿನೌ ಸಂತಾವಪಿ । ಇಂದ್ರೋವಿಷಯೇಭಕ್ತಿಶ್ರದ್ಧಾರಹಿತಾವಿತ್ಯರ್ಥಃ । ಸರಯೋಃ ಸರಯ್ವಾ ನದ್ಯಾಃ ಪಾರತಃ ಪಾರೇ ತೀರೇ ವಸಂತಾವರ್ಣಾಚಿತ್ರರಥಾ ಅರ್ಣನಾಮಕಂ ಚಿತ್ರರಥನಾಮಕಂ ಚ ರಾಜಾನಾವವಧೀಃ । ಅಹಿಂಸೀಃ ॥

॥ ಪ್ರತಿಪದಾರ್ಥ ॥

ಉತ—ಮತ್ತು । **ಇಂದ್ರ**—ಎಲೈ ಇಂದ್ರನೇ । **ತ್ಯಾ**—ಪ್ರಸಿದ್ಧರೂ । **ಆರ್ಯಾ**—ಆರ್ಯರ ಗುಂಪಿಗೆ ಸೇರಿದರೂ ನಿನ್ನನ್ನು ಆರಾಧಿಸದಿದ್ದವರೂ । **ಸರಯೋಃ**—ಸರಯೂ ನದಿಯ । **ಪಾರತಃ**—ದಡದಲ್ಲಿ ವಾಸಿಸುತ್ತಿದ್ದವರೂ ಆದ । **ಅರ್ಣಾಚಿತ್ರರಥಾ**—ಅರ್ಣ ಮತ್ತು ಚಿತ್ರರಥ ಎಂಬ ಹೆಸರುಳ್ಳ ರಾಜರನ್ನು । **ಸದ್ಯಃ**—ನೀನು ಸಂಕಲ್ಪಿಸಿದೊಡನೆಯೇ । **ಅವಧೀಃ**—ಕೊಂದಿದ್ದೀಯೆ

॥ ಭಾವಾರ್ಥ ॥

ಎಲೈ ಇಂದ್ರನೇ, ಆರ್ಯರ ಗುಂಪಿಗೆ ಸೇರಿದ್ದರೂ ಸಹ ನಿನ್ನನ್ನು ಆರಾಧಿಸದಿದ್ದವರೂ, ಸರಯೂ ನದಿಯ ದಡದಲ್ಲಿ ವಾಸಿಸುತ್ತಿದ್ದವರೂ, ಪ್ರಸಿದ್ಧರೂ ಆದ ಅರ್ಣ ಮತ್ತು ಚಿತ್ರರಥ ಎಂಬ ಹೆಸರುಳ್ಳ ರಾಜರನ್ನು ನೀನು ಸಂಕಲ್ಪಿಸಿದೊಡನೇ ನಾಶಮಾಡಿದೆ.

English Translation.

You have slain at once those two Aryas, Arna and Chitraratha, (dwelling) on the opposite (bank) of the Sarayu.

॥ ವಿಶೇಷವಿಷಯಗಳು ॥

ಅರ್ಣಾಚಿತ್ರರಥಾ—ಚಿತ್ರರಥ ಮತ್ತು ಅರ್ಣ ಎಂಬುವರು ಆರ್ಯವಂಶದ ರಾಜರು. ಇವರು **ತುರ್ವಶ** ಮತ್ತು ಯದು ಎಂಬುವರೊಡನೆ ಸರಯೂ ನದೀ ದಡದ ಮೇಲೆ ಯುದ್ಧಮಾಡುತ್ತಿರುವಾಗ ಇಂದ್ರನು ತುರ್ವಶ ಮತ್ತು ಯದುಗಳ ಪಕ್ಷವನ್ನು ವಹಿಸಿ ಅರ್ಣ ಮತ್ತು ಚಿತ್ರರಥರನ್ನು ಸೋಲಿಸಿದನೆಂದು ಹೇಳಿದೆ.

॥ ಸಂಹಿತಾಪಾಠಃ ॥

ಅನು ದ್ವಾ ಜಹಿತಾ ನಯೋ೭ಂಧಂ ಶ್ರೋಣಂ ಚ ವೃತ್ರಹನ್ ।
ನ ತತ್ತೇ ಸುಮ್ನಮಷ್ಟವೇ ॥ ೧೯ ॥

॥ ಪದಪಾಠಃ ॥

ಅನು । ದ್ವಾ । ಜಹಿತಾ । ನಯಃ । ಅಂಧಂ । ಶ್ರೋಣಂ । ಚ । ವೃತ್ರಹನ್ ।
ನ । ತತ್ । ತೇ । ಸುಮ್ನಂ । ಅಷ್ಟವೇ ॥ ೧೯ ॥

॥ ಸಾಯಣಭಾಷ್ಯಂ ॥

ಹೇ ವೃತ್ರಹನ್ ವೃತ್ರಸ್ಯ ಹಿಂಸಕೇಂದ್ರ ತ್ವಂ ಜಹಿತಾ ಜಹಿತೌ ಸರ್ವೈರ್ಬಂಧುಭಿಸ್ತ್ಯಕ್ತಾವಂಧಂ ಚಕ್ಷುರ್ಹೀನಮೇಕಂ ಶ್ರೋಣಂ ಚ ಪಂಗುಮಪರಂ ಚ ದ್ವಾ ಏತೌ ದ್ವಾವನು ನಯಃ । ಅಂಧಪಂಗುತ್ವ ಪರಿಹಾರೇಣಾನುನೀತವಾನಸಿ । ಹೇ ಇಂದ್ರ ತೇ ತ್ವಯಾ ದತ್ತಂ ತತ್ಸುಮ್ನಂ ಸುಖಮಷ್ಟವೇ ವ್ಯಾಪ್ತುಂ ಕೋ೭ಪಿ ನ ಪ್ರಭವತೀತಿ ಶೇಷಃ ॥

॥ ಪ್ರತಿಪದಾರ್ಥ ॥

ವೃತ್ರಹನ್—ಮೃತ್ರಹಂತಕನಾದ ಇಂದ್ರನೇ । **ಜಹಿತಾ**—ಬಂಧುಗಳಿಂದ ತ್ಯಜಿಸಲ್ಪಟ್ಟವರೂ । **ಅಂಧಂ**—ಕಣ್ಣಿಲ್ಲದ ಕುರುಡನಾದವನೊಬ್ಬನೂ । **ಶ್ರೋಣಂ ಚ**—ಕಾಲಿಲ್ಲದ ಕುಂಟನಾದವನೊಬ್ಬನೂ ಆದ । **ದ್ವಾ**—ಈ ಇಬ್ಬರನ್ನೂ । **ಅನುನಯಃ**—ಅನುಗ್ರಹಿಸಿದೆ (ಕುರುಡನಿಗೆ ಕಣ್ಣನ್ನೂ ಕುಂಟನಿಗೆ ಕಾಲನ್ನೂ ಬರಮಾಡಿದೆ) । (ಇಂದ್ರ—ಎಲೈ ಇಂದ್ರನೇ) । **ತೇ**—ನಿನ್ನಿಂದ ದತ್ತವಾದ । **ತತ್ ಸುಮ್ನಂ**—ಆ ಸುಖವನ್ನು । **ಅಷ್ಟವೇ**—ಅತಿಕ್ರಮಿಸಲು । **ನ**—ಇನ್ನಾವುದರಿಂದಲೂ ಸಾಧ್ಯವಿಲ್ಲ.

। ಭಾವಾರ್ಥ ।

ವೃತ್ರಹಂತಕನಾದ ಇಂದ್ರನೇ, ಕಣ್ಣಿಲ್ಲದ ಕುರುಡನೊಬ್ಬನೂ, ಕಾಲಿಲ್ಲದ ಕುಂಟನೊಬ್ಬನೂ ಸಹ ಬಂಧುಗಳಿಂದ ತ್ಯಜಿಸಲ್ಪಟ್ಟಾಗ ನೀನು ಆ ಇಬ್ಬರನ್ನೂ ಅನುಗ್ರಹಿಸಿ ಕುರುಡನಿಗೆ ಕಣ್ಣನ್ನೂ ಕುಂಟನಿಗೆ ಕಾಲನ್ನೂ ಬರಮಾಡಿದೆ. ಮತ್ತು ನಿನ್ನಿಂದ ದತ್ತವಾದ ಆ ಸುಖವನ್ನ ತಿಕ್ರಮಿಸಲು ಇನ್ನಾವ ವಿಧವಾದ ಸುಖದಿಂದಲೂ ಸಾಧ್ಯವಿಲ್ಲ.

English Translation.

Slayer of Vritra, you have restored the (one who was) blind, the (other who was) lame, both abandoned (by their kin) : (it is not possible) to exceeed the happiness that is given by you.

। ಸಂಹಿತಾಪಾಠಃ ॥

ಶತಮಶ್ಮನ್ಮಯೀನಾಂ ಪುರಾಮಿಂದ್ರೋ ವ್ಯಾಸ್ಯತ್ ।
ದಿವೋದಾಸಾಯ ದಾಶುಷೇ ॥ ೨೦ ॥

। ಪದಪಾಠಃ ॥

ಶತಂ । ಅಶ್ಮನ್ಮಯೀನಾಂ । ಪುರಾಂ । ಇಂದ್ರಃ । ವಿ । ಅಸ್ಯತ್ ।
ದಿವಃದಾಸಾಯ । ದಾಶುಷೇ ॥ ೨೦ ॥

। ಸಾಯಣಭಾಷ್ಯಂ ।

ಇಂದ್ರೋಽಶ್ಮನ್ಮಯೀನಾಂ ಪಾಷಾಣೈರ್ನಿರ್ಮಿತಾನಾಂ ಪುರಾಂ ಶಂಬರಸ್ಯ ಸಂಬಂಧಿನಾಂ ನಗರಾಣಾಂ ಶತಂ ಶತಸಂಖ್ಯಾಕಂ ದಿವೋದಾಸಾಯೈತನ್ನಾಮಕಾಯ ದಾಶುಷೇ ಹವಿರ್ದತ್ತವತೇ ಯಜಮಾನಾಯ ವ್ಯಾಸ್ಯತ್ । ವ್ಯಕ್ಷಿಪತ್ ॥

। ಪ್ರತಿಪದಾರ್ಥ ।

ಇಂದ್ರಃ—ಇಂದ್ರನು । **ಶತಂ**—ನೂರಾರು ಸಂಖ್ಯೆಗಳುಳ್ಳವೂ । **ಅಶ್ಮನ್ಮಯೀನಾಂ**—ಬಂಡೆಗಳಿಂದ ನಿರ್ಮಿತವಾದವೂ ಆದ । **ಪುರಾಂ**—ಶಂಬರಾಸುರನ ಪಟ್ಟಣಗಳನ್ನು । **ದಾಶುಷೇ**—ಹವಿಸ್ಸನ್ನರ್ಪಿಸತಕ್ಕ । **ದಿವೋದಾಸಾಯ**—ದಿವೋದಾಸನೆಂಬ ಯಜ್ಞಕರ್ತನಿಗಾಗಿ । **ವ್ಯಾಸ್ಯತ್**—ಉರುಳಿಸಿದನು

॥ ಭಾವಾರ್ಥ ॥

ನೂರಾರು ಸಂಖ್ಯೆಯುಳ್ಳವೂ, ಬಂಡೆಗಳಿಂದ ನಿರ್ಮಿತವಾದವೂ ಆದ ಶಂಬರಾಸುರನ ಪಟ್ಟಣಗಳನ್ನು ಇಂದ್ರನು ಉರುಳಿಸಿ ಹವಿಸ್ಸನ್ನರ್ಪಿಸತಕ್ಕ ದಿವೋದಾಸನೆಂಬ ಯಜ್ಞಕರ್ತನಿಗೆ ಸಹಾಯಮಾಡಿದನು.

English Translation·

Indra has overturned a hundred stone-built cities for Divodas, the donor of oblations.

॥ ಸಂಹಿತಾಪಾಠಃ ॥

ಅಸ್ವಾಪಯದ್ದಭೀತಯೇ ಸಹಸ್ರಾ ತ್ರಿಂಶತಂ ಹಥೈಃ ।
ದಾಸಾನಾಮಿಂದ್ರೋ ಮಾಯಯಾ ॥ ೨೧ ॥

॥ ಪದಪಾಠಃ ॥

ಅಸ್ವಾಪಯತ್ । ದಭೀತಯೇ । ಸಹಸ್ರಾ । ತ್ರಿಂಶತಂ । ಹಥೈಃ ।
ದಾಸಾನಾಂ । ಇಂದ್ರಃ । ಮಾಯಯಾ ॥ ೨೧ ॥

॥ ಸಾಯಣಭಾಷ್ಯಂ ॥

ಇಂದ್ರೋ ಮಾಯಯಾ ಸ್ವಕೀಯಯಾ ಶಕ್ತ್ಯಾ ದಾಸಾನಾಂ ಲೋಕಾನಾಮುಪಕ್ಷಪಯಿತೃಣಾಂ ರಾಕ್ಷಸಾದೀನಾಂ ತ್ರಿಂಶತಂ ತ್ರಿಂಶತ್ಸಂಖ್ಯಾಕಾನಿ ಸಹಸ್ರಾ ಸಹಸ್ರಾಣಿ ದಭೀತಯೇ ದಭೀತಿನಾಮಕಸ್ಯಾರ್ಥಾಯ ಹಥೈರ್ಹನನಸಾಧನೈರಾಯುಧೈರಸ್ವಾಪಯತ್ । ಅವಧೀತ್ ॥

॥ ಪ್ರತಿಪದಾರ್ಥ ॥

ಇಂದ್ರಃ—ಇಂದ್ರನು । **ಮಾಯಯಾ**—ತನ್ನ ಪ್ರಜ್ಞಾರೂಪವಾದ ಶಕ್ತಿಯಿಂದ । **ದಾಸಾನಾಂ**—ಲೋಕನಾಶಕರಾದ ರಾಕ್ಷಸರ । **ತ್ರಿಂಶತಂ ಸಹಸ್ರಾ**—ಮುವತ್ತು ಸಹಸ್ರ ಸಂಖ್ಯೆಯನ್ನೂ । **ದಭೀತಯೇ**—ದಭೀತಿಯೆಂಬ ಆರ್ಯನಿಗೆ ಸಹಾಯಮಾಡಲು । **ಹಥೈಃ**—ಹನನಸಾಧನವಾದವೂ, ಹರಿತವಾದವೂ ಆದ ಆಯುಧಗಳಿಂದ । **ಅಸ್ವಾಪಯತ್**—ನಾಶಪಡಿಸಿದನು.

॥ ಭಾವಾರ್ಥ ॥

ಇಂದ್ರನು ತನ್ನ ಪ್ರಜ್ಞಾರೂಪವಾದ ಶಕ್ತಿಯಿಂದ ಲೋಕನಾಶಕರಾದ ಮುವತ್ತು ಸಹಸ್ರ ಸಂಖ್ಯೆಯ ರಾಕ್ಷಸರನ್ನು ದಭೀತಿಯೆಂಬ ಆರ್ಯನಿಗೆ ಸಹಾಯಮಾಡಲು ಹನನಸಾಧನವೂ, ಹರಿತವಾದವೂ ಆದ ಆಯುಧಗಳಿಂದ ನಾಶಪಡಿಸಿದನು

English Translation.

He put to sleep, by delusion, with his destructive (weapons), thirty thousand of the servile (races) for the sake of Dabhiti.

॥ ವಿಶೇಷವಿಷಯಗಳು ॥

ದಭೀತಿಂ—ದಭೀತಿಯು ಯೋಧನೆಂದು ಕೆಲವು ಕಡೆಯೂ ಋಷಿಯೆಂದು ಕೆಲವೆಡೆಯೂ ಹೇಳಿದೆ.

ಇಂದ್ರೋ ಧುನಿಂ ಚ ಚುಮುರಿಂ ಚ ದಂಭಯೇಞ್ಛ್ರದ್ಧಾಮನಸ್ಯಾ ಶೃಣುತೇ ದಭೀತಯೇ ।
(ಋ ಸಂ. ೧೦-೧೧೩-೯)

ಸ್ಪಶೇನಾಭ್ಯಾಸ್ಯಾ ಚುಮುರಿಂ ಧುನಿಂ ಚ ಜಘಂಥ ದಸ್ಯುಂ ಪ್ರ ದಭೀತಿಮಾವಃ ।
(ಋ. ಸಂ ೨-೧೫-೯)

ಎಂಬ ಋಕ್ಕುಗಳಲ್ಲಿ **ದಭೀತಿಯೆನ್ನು** ರಾಜರ್ಷಿಯೆಂದೂ ಅವನಿಗಾಗಿ ಇಂದ್ರನು ಚುಮುರಿ ಮತ್ತು ಧುನಿಗಳನ್ನು ಜಯಿಸಿದುದಾಗಿಯೂ ಹೇಳಿದೆ ಅವನು ಇಂದ್ರನಿಗೆ ಸೋಮರಸವನ್ನು ಹಿಂಡಿ ಅರ್ಪಿಸಿದುದಕ್ಕೆ ಇಂದ್ರನ ಅನುಗ್ರಹವನ್ನು ಪಡೆದನೆಂದು ಗೊತ್ತಾಗುತ್ತದೆ

ಅಸ್ವಾಪಯದ್ದಭೀತಯೇ ಸಹಸ್ರಾ ತ್ರಿಂಶತಂ ಹಥೈಃ । ದಾಸಾನಾಮಿಂದ್ರೋ ಮಾಯಯಾ ।
(ಋ ಸಂ. ೪-೩೦-೧೧)

ಆರಜ್ಜೌ ದಸ್ಯೂನ್ತ್ಸಮುನಬ್ದಭೀತಯೇ ಸುಪ್ರಾವ್ಯೋ ಅಭವಃ ಸಾಸ್ಯಕ್ಥ್ಯಃ ।
(ಋ. ಸಂ ೨-೧೫-೯)

ಎಂಬ ಋಕ್ಕುಗಳಿಂದ ಇಂದ್ರನು **ದಭೀತಿಗಾಗಿ** ಮೂವತ್ತು ಸಹಸ್ರ ದಾಸರುಗಳನ್ನು ನಿದ್ರಾವಶರನ್ನಾಗಿ ಮಾಡಿದುದೂ, ದಸ್ಯುಗಳನ್ನೆಲ್ಲಾ ಹಗ್ಗವಿಲ್ಲದೇ ಬಂಧಿಸಿದುದೂ ವರ್ಣಿತವಾಗಿದೆ.

॥ ಸಂಹಿತಾಪಾಠಃ ॥

ಸ ಘೇದುತಾಸಿ ವೃತ್ರಹನ್ತ್ಸಮಾನ ಇಂದ್ರ ಗೋಪತಿಃ ।

ಯಸ್ತಾ ವಿಶ್ವಾನಿ ಚಿಚ್ಯುಷೇ ॥ ೨೨ ॥

॥ पदपाठः ॥

सः । ह्व । इत् । ऊत । असि । वृत्रऽहन् । समानः । इन्द्र । गोऽपतिः ।
यः । तान् । विश्वानि । चिच्युषे ॥ ३३ ॥

॥ सायणभाष्यं ॥

ऊतापि च हे इन्द्र यस्त्वं तान् तानि विश्वानि समस्तान् शत्रून् चिच्युषे । प्रक्षयं गमयसि । हे वृत्रहन् वृत्राणां शत्रूणां हिंसकेन्द्र गोपतिर्गवां पालकः स त्वं समानः सर्वेषां यजमानानां समः सन् प्रख्यातोऽसि । घेदिति पूरणौ ॥

॥ प्रतिपदार्थ ॥

वृत्रहन्—वृत्रहंतकनाद । **इंद्र**--इंद्रनೇ । **गोपतिः**—गोವುಗಳಿಗೆ ಪಾಲಕನಾದ । **यः**—ಯಾವ ನೀನು । **तान्**—ಹಿಂದೆ ಹೇಳಿದ । **विश्वानि**—ಸಮಸ್ತ ಅಸುರರನ್ನು । **चिच्युषे**—ಕೆಳಕ್ಕೆ ಉರುಳಿಸಿದೆಯೋ । **सः**—ಅಂತಹ ನೀನು । **समानः**—ಸಕಲ ಯಜಮಾನರಲ್ಲಿಯೂ ಸಮಾನವಾದ ಪ್ರೀತಿ ಯುಳ್ಳವನಾಗಿ । **असि**--ಆಗಿದ್ದೀಯೆ

॥ भावार्थ ॥

ವೃತ್ರಹಂತಕನಾದ ಎಲೈ ಇಂದ್ರನೇ, ಗೋಪಾಲಕನಾದ ಯಾವ ನೀನು ಮೇಲೆ ನಿರ್ದೇಶಿಸಿದ ಸಮಸ್ತ ಅಸುರರನ್ನು ಕೆಳಕ್ಕೆ ಉರುಳಿಸಿ ನಾಶಮಾಡಿದೆಯೋ ಅದೇ ನೀನು ಸಕಲ ಯಜಮಾನರಲ್ಲಿಯೂ ಸಮಾನವಾದ ಪ್ರೀತಿಯುಳ್ಳವನಾಗಿದ್ದೀಯೆ

English Translation.

Slayer of Vritra, you are the same (to all your worshippers) the lord of cattle, who cast down all these (your enemies).

॥ संहितापाठः ॥

ऊत नूनं यदिन्द्रियं करिष्या इन्द्र सौंस्यं ।
अद्या नकिष्टदा मिनत् ॥ ३४ ॥

॥ ಪದಪಾಠಃ ॥

ಉತ । ನೂನಂ । ಯತ್ । ಇಂದ್ರಿಯಂ । ಕರಿಷ್ಯಾಃ । ಇಂದ್ರ । ಪೌಂಸ್ಯಂ ।

ಅದ್ಯ । ನಕಿಃ । ತತ್ । ಆ । ಮಿನತ್ ॥ ೨೩ ॥

॥ ಸಾಯಣಭಾಷ್ಯಂ ॥

ಉತಾಪಿ ಚ ಹೇ ಇಂದ್ರ ಯತ್ಪೌಂಸ್ಯಂ ಶ್ವದೀಯಂ ಬಲಮಿಂದ್ರಿಯಂ ಸಾಮರ್ಥ್ಯೋಪೇತಂ ನೂನಂ ಕರಿಷ್ಯಾಃ । ಕೃತವಾನಸಿ ಖಲು । ಅದ್ಯಾದ್ಯತನಃ ಕಶ್ಚಿತ್ತದ್ಬಲಂ ನಕಿರಾ ಮಿನತ್ । ನ ಹಿಂಸ್ಯಾತ್ ॥

॥ ಪ್ರತಿಪದಾರ್ಥ ॥

ಉತ—ಮತ್ತು । ಇಂದ್ರ—ಎಲೈ ಇಂದ್ರನೇ । ಯತ್—ಯಾವ ನಿನ್ನ । ಪೌಂಸ್ಯಂ—ಪುರುಷ ಲಕ್ಷಣವನ್ನು ಸೂಚಿಸುವ । ಇಂದ್ರಿಯಂ—ಸಾಮರ್ಥ್ಯವನ್ನು । ನೂನಂ—ನಿಶ್ಚಯವಾಗಿಯೂ । ಕರಿಷ್ಯಾಃ—ಪ್ರಕಟಿಸಿದೆಯೋ । ತತ್—ಆ ಸಾಮರ್ಥ್ಯವನ್ನು । ಅದ್ಯ—ಈಗಿನ ಕಾಲದವರಲ್ಲಿ । ನಕಿಃ—ಯಾರೂ ಕೂಡ । ಆ ಮಿನತ್—ಹಿಂಸಿಸಲಾರರು

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಯಾವ ನಿನ್ನ ಪುರುಷಲಕ್ಷಣವನ್ನು ತೋರಿಸುವ ಸಾಮರ್ಥ್ಯವನ್ನು ಪ್ರಕಟಿಸಿದೆಯೋ ಅದನ್ನು ಪ್ರತಿಭಟಿಸುವವರು ಈಗಿನ ಕಾಲದಲ್ಲಿ ಯಾರೂ ಇಲ್ಲ

English Translation.

When, indeed, Indra, you excite your vigorous manhood, there is no one at the present time who may resist it.

॥ ಸಂಹಿತಾಪಾಠಃ ॥

ವಾಮಂವಾಮಂ ತ ಆದುರೇ ದೇವೋ ದದಾತ್ವರ್ಯಮಾ ।

ವಾಮಂ ಪೂಷಾ ವಾಮಂ ಭಗೋ ವಾಮಂ ದೇವಃ ಕರೂಳತೀ ॥೨೪॥

॥ पदपाठः ॥

वामंऽवामं । त्वे । अऽदुरे । देवः । ददातु । अर्यमा ।

वामं । पूषा । वामं । भगः । वामं । देवः । करूळतीं ॥ ३५ ॥

॥ सायणभाष्यं ॥

हे अदुरे शत्रूणामादारयितरिन्द्र त्वे तव वामं वामं यद्यद्धनंनीयं धनमस्ति लोकेत्वद्वामं वस्वर्यमारीणां नियंमयितृणामस्मदीयो देवो ददातु । प्रयच्छतु । तथा करूळतीं कृत्तदंतः पूषा पोषकोदेवो वामं धनं ददातु । भगोऽपि धनं ददातु । नसु करूळतीत्यनेन तत्संनिहितत्वाद्भगस्यैव विशेषणं युक्तं । वामं वनंनीयं भवतीत्यादि निरुक्तं । ६-३८ । अत्र द्रष्टव्यं ॥

॥ प्रतिपदार्थ ॥

अदुरे—शत्रुगळन्नु सीळे नाशपडिसतक्क एलै इंद्रनें । त्वे—निनगे संबंधिसिदुदू । वामंवामं—सकलरिगू पूज्यवादुदू आद यावा यावा धनविदेयो अदन्नु । अर्यमा—अर्यमनेंब । देवः—देवनु । ददातु—(नमगे) हंचिकोडलि । करूळतीं—दंतरहित वाद । पूषा देवः—पूषदेवनु । वामं—पूज्यवाद आ धनवन्नु (हंचिकोडलि) । भगः—भगनेंब देवनू सह । वामं—आदृतवाद आ धनवन्नु (नमगे हंचलि)

॥ भावार्थ ॥

शत्रुगळन्नु सीळे नाशपडिसतक्क एलै इंद्रनें, सकलरिगू पूज्यनाद निन्न यावा यावा धन विदेयो आ धनवन्नु शत्रुवन्नु नियमिसि दंडिसतक्क अर्यमनू, कृत्तदंतनाद पूषनू, भगनू सह नमगेल्लरिगू हंचिकोडलि.

English Translation.

Destroyer of foes, may the devine Aryaman distribute your precious wealth ; (may) Pushan (bestow it), (may) Bhaga (bestow it), may the toothless deity bestow the desired wealth.

ಮೂವತ್ತೊಂದನೆಯ ಸೂಕ್ತವು

। ಸಾಯಣಭಾಷ್ಯಂ ।

ಕಯಾ ನ ಇತಿ ಪಂಚದಶರ್ಚಂ ದಶಮಂ ಸೂಕ್ತಂ ವಾಮದೇವಸ್ಯಾರ್ಷಮೈಂದ್ರಂ ಗಾಯತ್ರಂ । ಅಭೀ ಷು ಣ ಇತ್ಯೇಷಾ ಪಾದನಿಚೃನ್ನಾಮ ಗಾಯತ್ರೀ ತ್ರಯಃ ಸಪ್ತಕಾಃ ಪಾದನಿಚೃದಿತಿ ತಲ್ಲಕ್ಷಣಯುಕ್ತತ್ವಾತ್ । ತಥಾ ಚಾನುಕ್ರಮಣಿಕಾ । ಕಯಾ ಪಂಚೋನಾಭೀ ಷು ಪಾದನಿಚೃದಿತಿ ॥ ಸೂಕ್ತವಿನಿಯೋಗೋ ಲೈಂಗಿಕಃ । ಅಗ್ನಿಷ್ಟೋಮೇ ಚಾತುರ್ವಿಂಶಿಕೇಽಹನಿ ಚ ಮಾಧ್ಯಂದಿನೇ ಸವನೇ ಮೈತ್ರಾವರುಣಸ್ಯ ಕಯಾ ನ ಇತ್ಯಾದ್ಯಸ್ತೃಚಃ ಸ್ತೋತ್ರಿಯಃ । ಸೂತ್ರಿತಂ ಚ । ಹೋತ್ರಕಾಣಾಂ ಕಯಾ ನಶ್ಚಿತ್ರ ಆ ಭುವತ್ । ಆ. ೭-೪ । ಇತಿ ॥ ವರುಣಪ್ರಘಾಸೇಷು ಕಾಯಸ್ಯ ಹವಿಷೋಽನುವಾಕ್ಯಾ ಕಯಾ ನ ಇತ್ಯೇಷಾ । ತಥಾ ಚ ಸೂತ್ರಿತಂ । ಕಯಾ ನಶ್ಚಿತ್ರ ಆ ಭುವದ್ಧಿರಣ್ಯಗರ್ಭಃ ಸಮವರ್ತತಾಗ್ರೇ ॥ ಆ. ೨-೧೭ । ಇತಿ ॥

ಅನುವಾದವು—**ಕಯಾ ನ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಹದಿನೈದು ಋಕ್ಕುಗಳಿರುವವು ಈ ಸೂಕ್ತಕ್ಕೆ ವಾಮದೇವನು ಋಷಿಯು, ಇಂದ್ರನು ದೇವತೆಯು, ಗಾಯತ್ರೀ ಛಂದಸ್ಸು **ಅಭೀ ಷು ಣಃ** ಎಂಬ ಋಕ್ಕು (ಈ ಸೂಕ್ತದ ಮೂರನೆಯ ಋಕ್ಕು) ಪಾದನಿಚೃತ್ ಎಂಬ ಗಾಯತ್ರೀಛಂದಸ್ಸಿನ ಪ್ರಭೇದವು **ತ್ರಯಃ ಸಪ್ತಕಾಃ ಪಾದನಿಚೃತ್** (ಅನು. ೪-೪) ಎಂದರೆ ಏಳೇಳು ಅಕ್ಷರಗಳ ಮೂರು ಪಾದಗಳಿರುವ ಋಕ್ಕಿಗೆ ಪಾದನಿಚೃತ್ ಎಂದು ಅನುಕ್ರಮಣಿಕೆಯಲ್ಲಿ ಈ ಛಂದಸ್ಸಿನ ಲಕ್ಷಣವನ್ನು ಹೇಳಿರುವುದು ಈ ಸೂಕ್ತದ ವಿಷಯವಾಗಿ ಅನುಕ್ರಮಣಿಕೆಯಲ್ಲಿ - **ಕಯಾ ಪಂಚೋನಾಭೀ ಷು ಪಾದನಿಚೃತ್** ಎಂದು ಹೇಳಿರುವುದು ಸೂಕ್ತವಿನಿಯೋಗವು ಲೈಂಗಿಕವು. ಅಗ್ನಿಷ್ಟೋಮಯಾಗದಲ್ಲಿಯೂ ಚಾತುರ್ವಿಂಶಕವೆಂಬ ಯಾಗದಲ್ಲಿಯೂ ಮಾಧ್ಯಂದಿನಸವನಕಾಲದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪರಿಸಬೇಕಾದ ಸ್ತೋತ್ರಿಯ ತೃಚಕ್ಕಾಗಿ **ಕಯಾ ನಃ** ಎಂದು ಮೊದಲಾಗುವ ಈ ಸೂಕ್ತದ ಮೂರು ಋಕ್ಕುಗಳ ವಿನಿಯೋಗವಿರುವುದೆಂದು **ಆಶ್ವಲಾಯನ** ಶ್ರೌತಸೂತ್ರದ **ಹೋತ್ರಕಾಣಾಂ ಕಯಾ ನಶ್ಚಿತ್ರ ಆ ಭುವತ್** ಎಂಬ ಸೂತ್ರದಿಂದ (ಆ ೭-೪) ವಿವೃತವಾಗಿರುವುದು ವರುಣಪ್ರಘಾಸವೆಂಬ ಇಷ್ಟಿಯಲ್ಲಿಯೂ ಸಹ ಹವಿಸ್ಸನ್ನು ಹೋಮಮಾಡುವಾಗ **ಕಯಾ ನಃ** ಎಂಬ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಕಯಾ ನಶ್ಚಿತ್ರ ಆ ಭುವದ್ಧಿರಣ್ಯಗರ್ಭಃ ಸಮವರ್ತತಾಗ್ರೇ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ. ೨-೧೭)

ಸೂಕ್ತ—೩೧

ಮಂಡಲ—೪ ॥ ಅನುವಾಕ—೩ ॥ ಸೂಕ್ತ—೩೧ ॥

ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ– ೨೪, ೨೫, ೨೬ ॥

ಸೂಕ್ತದಲ್ಲಿರುವ ಋಕ್ಕಂಖ್ಯೆ—೧೫ ॥

ಋಷಿಃ—ವಾಮದೇವಃ ।

ದೇವತಾ—ಇಂದ್ರಃ ।

ಛಂದಃ—೧, ೨, ೪–೧೫ ಗಾಯತ್ರೀ । ೩ ಪಾದನಿಚೃತ್ ॥

॥ संहितापाठः ॥

कयॉ नश्चित्र आ भुवदूती सदावृधः सखा ।

कयॉ शचिष्ठयॉ वृता ॥ ८ ॥

॥ पदपाठः ॥

कयॉ । नः । चित्रः । आ । भुवत् । ऊतीः । सदाऽवृधः । सखा ।

कयॉ । शचिष्ठयॉ । वृता । ८ ॥

॥ सायणभाष्यं ॥

सदावृधः सदा वर्धमानश्चित्रश्चायनीयः पूजनीयः सखा मित्रभूतश इंद्रः कयोतीः ऊत्या तर्पणेन नोऽस्मान् भुवत् । अभिमुख्येन भवेत् । शचिष्ठया प्रज्ञावत्तमया प्रज्ञासहितमनुष्मीयेमानेन कया वृता केन वर्तनेन कर्मणा चाभिमुखो भवेत् ॥

॥ प्रतिपदार्थ ॥

सदावृधः—सर्वदा वृद्धियन्नु हॊंदुत्तिरुवनू । चित्रः—पूज्यनू । सखा—मित्रभूतनू आद इंद्रनु । कयॉ—यावव विधवाद । ऊतीः—तृप्तिगळिंद । नः—नम्मन्नु । आ भुवत्—एदुरुगॊंडु बरुत्तानॆ । शचिष्ठयॉ—प्रज्ञॆयॊडगूडिद । कयॉ—यावव विधवाद । वृता—कर्मदिंद (नम्म अभिमुखनागि बरुवनु ?)

॥ भावार्थ ॥

सर्वदा वृद्धियन्नु हॊंदुत्तिरुवनू, पूज्यनू, मित्रभूतनू आद इंद्रनु यावव विधवाद तृप्तिगळिंद नम्म अभिमुखवागि बरुत्तानॆ? प्रज्ञापूर्वकवाद यावव कर्मदिंद नम्म अभिमुखनागि बरुत्तानॆ?

English Translation.

By what means may he who is ever augmenting, who is wonderful who is our friend, be present with us, by what most effective rite ?

॥ संहितापाठः ॥

कस्त्वा सत्यो मदानां मंहिष्ठो मत्सदंधसः ।
दृळ्हा चिदारुजे वसु ॥ ३ ॥

॥ पदपाठः ॥

कः । त्वा । सत्यः । मदानाम् । मंहिष्ठः । मत्सत् । अंधसः ।
दृळ्हा । चित् । आऽरुजे । वसु ॥ ३ ॥

॥ सायणभाष्यं ॥

मंहिष्ठः पूजनीयेषु सत्यः सत्यभूतो मदानां मादयित्र्याणां मध्ये कोमदकरोऽन्धसः सोमस्य रसो दृळ्हा चित् दृढान्यपि वसु वसूनि शत्रूणां धनान्या-रुज आ समन्ताद्भंक्तुं हे इन्द्र त्वा त्वां मत्सत् । मादयेत् ॥

॥ प्रतिपदार्थ ॥

मदानाम्—मदकारकगळाद रसगळल्लि । मंहिष्ठः—अत्यंतपूज्यवादुदू । सत्यः—सत्यात्मकवादुदू आद । कः अंधसः—यावा सोमरसवु । दृळ्हा चित्—अत्यंत दृढवागि द्दरू सह । वसु—शत्रुधनगळन्नु । आरुजे—पूर्णवागि नाशमाडुवुदक्के । त्वा—निन्नन्नु । मत्सत्—हुरिदुंबिसबल्लदु ?

॥ भावार्थ ॥

ऐश्वै इंद्रनेः, निनगे मदकारकगळाद रसगळल्लि अत्यंत पूज्यवादुदू, सत्यात्मकवादुदू आद यावा सोमरसवु अत्यंत दृढवागिद्दरू सह शत्रुधनगळन्नु पूर्णवागि नाशमाडुवुदक्के निन्नन्नु हुरिदुंबिसबल्लदु ?

English Translation.

What genuine and most esteemed of the exhilarating juice of the (sacrificial) beverage may inspirit you to demolish the substantial treasures (of the foe).

॥ संहितापाठः ॥

अभी षु णः सखीनामविता जरितॄणां ।

शतं भवास्यूतिभिः ॥ ३ ॥

॥ पदपाठः ॥

अभि । सु । नः । सखीनाम् । अविता । जरितॄणाम् ।

शतम् । भवासि । ऊतिऽभिः ॥ ३ ॥

॥ सायणभाष्यं ॥

हे इन्द्र त्वं सखीनां समानख्यातीनां जरित्ॄणां स्तोत्ॄणामविता रक्षिता त्वं शतं शतेन बह्वीभिरूतिभिः रक्षाभिः सह नोऽस्माकं सु सुष्ठ्वभि भवासि । अभिमुखो भव ॥

॥ प्रतिपदार्थ ॥

(इन्द्र—ಎಲೈ ಇಂದ್ರನೇ) । सखीनाम्—ನಿನ್ನ ಮಿತ್ರಭೂತರಾದ । जरित्ॄणाम्—ಸ್ತೋತೃಗಳಿಗೆ । अविता—ರಕ್ಷಕನಾದ ನೀನು । शतं—ಅನೇಕ ವಿಧವಾದ । ऊतिभिः—ರಕ್ಷಣೆಗಳೊಂದಿಗೆ । नः—ನಮಗೆ । सु—ಅತಿಶಯವಾಗಿ । अभि भवासि—ಅಭಿಮುಖನಾಗು.

॥ भावार्थ ॥

ಎಲೈ ಇಂದ್ರನೇ, ನೀನು ನಿನ್ನ ಮಿತ್ರಭೂತರಾದ ಸ್ತೋತೃಗಳಿಗೆ ಪೂರ್ಣವಾದ ರಕ್ಷಕನು. ನಾವೂ ಸಹ ನಿನ್ನನ್ನು ಸ್ತುತಿಸುವುದರಿಂದ ನಿನ್ನ ಮಿತ್ರರು. ಆದುದರಿಂದ ಅನೇಕವಿಧವಾದ ರಕ್ಷಣೆಗಳೊಂದಿಗೆ ನಮ್ಮ ಅಭಿಮುಖನಾಗು

English Translation.

The protector of us your friends and praisers, be present with a hundred protections.

॥ संहितापाठः ॥

अभी न आ ववृत्स्व चक्रं न वृत्तमर्वतः ।

नियुद्भिश्चर्षणीनाम् ॥ ४ ॥

॥ पदपाठः ॥

अभि । नः । अ । वर्तत्स्व । चक्रं । न । वृत्तं । अर्वतः ।

नियुत्ऽभिः । चर्षणीनां ॥ ४ ॥

॥ सायणभाष्यं ॥

हे इन्द्र त्वं वृत्तं चक्रं न वर्तमानं चक्रमिवार्वत उपगंतॄन्नोऽस्मान् चर्षणीनामस्मदीयानां मनुष्याणां नियुद्भिः स्तुतिभिरभ्या वर्तस्व । अभ्यावर्तस्व ॥

॥ प्रतिपदार्थ ॥

(इन्द्र—ऐश्वर्यवान् इन्द्रनामक देव) । चर्षणीनां—मानवर । नियुद्भिः—स्तुतिगळिंद (हर्षितनागि) । वृत्तं—सुत्तुत्तिरुव । चक्रं न—चक्रदंते । अर्वतः—निन्नन्ने सहायकक्कागि मरे होगुव । नः—नम्मन्नु । अभि—एदुरुकोंडु । आ वर्तत्स्व—हिंतिरुगि बा.

॥ भावार्थ ॥

ऐश्वर्यवान् इन्द्रनामक देवनें, मानवर स्तुतिगळिंद हर्षितनागि बरुवनु, सुत्तुत्तलिरुव चक्रदंते, निन्नन्ने सहायार्थवागि मरेहोगुव नम्मन्नु एदुरुकोंडु हिंतिरुगि बा

English Translation.

(Induced) by the praises of men, return like a revolving wheel to us, dependent (upon your favour).

॥ संहितापाठः ॥

प्रवता हि क्रतूनामा हा पदेव गच्छसि ।

अभक्षि सूर्यो न सचा ॥ ५ ॥

॥ पदपाठः ॥

प्रऽवता । हि । क्रतूनां । आ । ह । पदाऽइव । गच्छसि ।

अभक्षि । सूर्यः । न । सचा ॥ ५ ॥

॥ सायणभाष्यं ॥

हे इन्द्र त्वं कृतूनां कर्मणां यजमानानां संबन्धिनः प्रवता प्रवतः प्रवणान्देशान्प्रदेव पदानि स्वकीयानि स्थानानीवा गच्छसि हि । आगतो भवसि ऋलु । हेति पूरणः । हे इन्द्र त्वामहं सूर्यो सूर्येण सचा सहाभक्षि । भजे ॥

॥ प्रतिपदार्थ ॥

(इन्द्र—ऐलै इन्द्रनै) । **कृतूनां**—कर्मकर्तरराद यजमानरिगै सेरिद । **प्रवता**—अधोः भागद प्रदेशगळिगै । **पदेव**—निन्न स्वतंत्रप्रदेशगळे एंदु तिळिदु । **आ गच्छसि हि**—नीनु बरुत्तीयल्लवे (ऐलै इन्द्रनै) । **सूर्यो सचा**—सूर्यनोंदिगे । **अभक्षि**—निन्नन्नु पूजिसुत्तेने.

॥ भावार्थ ॥

ऐलै इन्द्रनै, कर्मकर्तरराद यजनानरिगै सेरिद अधोः भागद यज्ञप्रदेशगळिगे नीनु, अवु निन्न स्वंत प्रदेशगळे एंदु तिळिदु बरुवुदु ऋण्डित. आ कालदल्लि सूर्यनोंदिगे सेरिसि निन्नन्नु पूजिसुत्तेनै.

English Translation.

Come in a downward (direction) to sacred rites, as if to your own station · I glorify you together with the sun.

॥ संहितापाठः ॥

सं यत्ते इन्द्र मन्यवः सं चक्राणि दधन्विरे ।
अध त्वे अध सूर्ये ॥ ६ ॥

॥ पदपाठः ॥

सं । यत् । ते । इन्द्र । मन्यवः । सं । चक्राणि । दधन्विरे ।
अध । त्वे इति । अध । सूर्ये ॥ ६ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತ್ವದರ್ಥಂ ಮನ್ಯವಃ ಸ್ತುತಯೋ ಯದ್ಯದಾ ಸಂ ದಧನ್ತಿರೇ । ಅಸ್ಮಾಭಿರನು-ಮನ್ಯಂತೇ। ಚಕ್ರಾಣಿ ಚಂಕ್ರಮಣಾನಿ ಕರ್ಮಾಣಿ ಚ ಸಂ ದಧನ್ತಿರೇ ಅಥ ತದಾನೀಂ ತಾಃ ಸ್ತುತಯಸ್ತಾನಿ ಕರ್ಮಾಣಿ ಚ ತ್ವೇ ತ್ವಯಿ ಭವಂತಿ । ಅಥ ತದನಂತರಂ ಸೂರ್ಯೇ ಚ ಭವಂತಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ತೇ**—ನಿನ್ನನ್ನು ದ್ದೇಶಿಸಿದ । **ಮನ್ಯವಃ**—ಸ್ತುತಿಗಳು । **ಯತ್**—ಯಾವಾಗ । **ಸಂ ದಧನ್ತಿರೇ**—ನಮ್ಮಿಂದ ಪರಿಸಲ್ಪಡುವೋ (ಮತ್ತು) । **ಚಕ್ರಾಣಿ**—ಯಾಗಾದಿ ಕರ್ಮಗಳೂ । **ಸಂ (ದಧನ್ತಿರೇ)**—ಆಚರಿಸಲ್ಪಡುವುವೋ । **ಅಥ**—ಆ ಒಡನೆಯೇ (ಆ ಸ್ತುತಿಗಳೂ ಮತ್ತು ಕರ್ಮಗಳೂ) । **ತ್ವೇ**—ನಿನ್ನಲ್ಲೇ ಅರ್ಪಿತವಾಗುತ್ತವೆ । **ಅಥ**—ಅನಂತರ । **ಸೂರ್ಯೇ**—ಸೂರ್ಯನಲ್ಲಿ ಅರ್ಪಿತವಾಗುತ್ತವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ನಾವು ಯಾವಾಗ ಸ್ತುತಿಗಳನ್ನು ಪರಿಸುವೆವೋ ಮತ್ತು ಯಾಗಾದಿ ಕರ್ಮಗಳನ್ನಾಚರಿಸುವೆವೋ ಆಗ ಆ ಸ್ತುತಿಗಳೂ, ಕರ್ಮಗಳೂ ಸಹ ಮೊದಲು ನಿನ್ನಲ್ಲಿ ಅರ್ಪಿತವಾಗಿ ಅನಂತರ ಸೂರ್ಯನಲ್ಲಿ ಅರ್ಪಿತವಾಗುತ್ತವೆ

English Translation

When your praises, and these sacred rites Indra, are addressed to you, thay first belong to you, and next to Surya

॥ ಸಂಹಿತಾಪಾಠಃ ॥

ಉತ ಸ್ಮಾ ಹಿ ತ್ವಾಮೂಹುರಿನ್ಮಘವಾನಂ ಶಚೀಪತೇ ।

ದಾತಾರಮವಿದೀಧಯುಂ ॥ ೬ ॥

॥ ಪದಪಾಠಃ ॥

ಉತ । ಸ್ಮ । ಹಿ । ತ್ವಾಂ । ಊಹುಃ । ಇತ್ । ಮಘವಾನಂ । ಶಚೀಪತೇ ।

ದಾತಾರಂ । ಅವಿದೀಧಯುಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ಶಚೀಪತೇ ಕರ್ಮಪಾಲಕೇಂದ್ರ ಉತಾಪಿ ಚ ಮಘವಾನಂ ಧನವಂತಂ ದಾತಾರಂ ಸ್ತೋತೃಭ್ಯೋಽಭೀಷ್ಟಪ್ರದಂ ತ್ವಾ ತ್ವಾಮವಿದೀಧಯುಂ। ವಿದೀಧಯುರದೀಪ್ಯಮಾನಃ। ನ ವಿದೀಧಯುರವಿದೀಧಯುಃ। ತಂ ದೀಪ್ಯಮಾನಮಾಹುಃ ಸ್ಮ। ಪ್ರವದಂತಿ ಖಲು। ಹೀದಿತಿ ದ್ವಯಂ ಪೂರಣಾರ್ಥಂ ॥

॥ ಪ್ರತಿಪದಾರ್ಥ ॥

ಉತ—ಮತ್ತು। **ಶಚೀಪತೇ**—ಕರ್ಮಪಾಲಕನಾದ ಇಂದ್ರನೇ। **ಮಘವಾನಂ**—ಧನವಂತನಾದ। **ತ್ವಾಂ**—ನಿನ್ನನ್ನು। **ದಾತಾರಂ**—ದಾತೃವೆಂದೂ। **ಅವಿದೀಧಯುಂ**—ಪ್ರಕಾಶಮಾನನೆಂದೂ। **ಆಹುಃ ಸ್ಮ**—ಕರೆಯುತ್ತಾರಲ್ಲವೇ?

॥ ಭಾವಾರ್ಥ ॥

ಕರ್ಮಪಾಲಕನಾದ ಎಲೈ ಇಂದ್ರನೇ, ಧನವಂತನಾದ ನಿನ್ನನ್ನು ದಾತೃವೆಂದೂ ಪ್ರಕಾಶಮಾನನೆಂದೂ ನಿನ್ನ ಸ್ತೋತೃಗಳು ನಿನ್ನನ್ನು ಕರೆಯುತ್ತಾರೆ, ಇದು ಖಂಡಿತ.

English Translation.

Lord of holy acts, they call you Maghvan, the munificent, the respiendent.

॥ ಸಂಹಿತಾಪಾಠಃ ॥

ಉತ ಸ್ಮಾ ಸದ್ಯ ಇತ್ಪರಿ ಶಶಮಾನಾಯ ಸುನ್ವತೇ।
ಪುರೂ ಚಿನ್ಮಂಹಸೇ ವಸು ॥ ೪ ॥

॥ ಪದಪಾಠಃ ॥

ಉತ। ಸ್ಮ। ಸದ್ಯಃ। ಇತ್। ಪರಿ। ಶಶಮಾನಾಯ। ಸುನ್ವತೇ।
ಪುರು। ಚಿತ್। ಮಂಹಸೇ। ವಸು ॥ ೪ ॥

॥ सायणभाष्यं ॥

उतापि च हे इंद्र त्वं सद्य इत्सद्य एव शश्वमानायं स्तुतिं कुर्वतेः । शश्वमानः शंसमानः । नि. ६-७ । इति यास्केनोक्तत्वात् । सुन्वते सोमाभिषवं कुर्वते यजमानाय पुरु बित्पुरूणि बहून्यपि वसु वसूनि धनानि परि परितोः मंदसे स्म । प्रयच्छसि ऋलु ॥

॥ प्रतिपदार्थ ॥

उत—मत्तु । (इंद्र—एलै इंद्रनें) । **शश्वमानायै**—निन्नन्नु स्तुतिसुवनू । **सुन्वते**—निनगागि सोमवन्नु हिंडुवनन्नू आद यजमानंगे । **सद्य इत्**—नीनु संकल्पिसि दोडनेयें । **पुरु बित्**—अनेकवाद । **वसु**—धनगळन्नु । **परि**—सुत्तलू (अनेक प्रकारवागि) । **मंदसे स्म**—कोडुत्तीयल्लवे ?

॥ भावार्थ ॥

एलै इंद्रनें, निन्नन्नु स्तुतिसुवनू, निनगागि सोमवन्नु हिंडुवनन्नू आद यजमानंगे नीनु संकल्पिसिदोडनेयें अनेक रूपवाद धनगळन्नु अनेकप्रकारवागि कोडुत्तीयेंबुदु खंडित.

English Translation.

And verily you give promptly abundant wealth to him who praises you and offers you libations

॥ संहितापाठः ॥

नहि ष्मा ते शतं चन राधो वरंत आमुरः ।

न दत्यान्ना नि करिष्यतः ॥ ९ ॥

॥ पदपाठः ॥

नहि । स्म । ते । शतं । चन । राधः । वरंते । आऽमुरः ।

न । दत्यान्ना । नि । करिष्यतः ॥ ९ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಅಮುರೋ ಬಾಧಕಾ ರಾಕ್ಷಸಾದಯಸ್ತೇ ತ್ವದೀಯಂ ಶತಂ ಚೆನ ಶತಪರಿಮಿತಮಪಿ ರಾಧೋ ಧನಂ ನಹಿ ವರಂತೇ ಸ್ಮ । ನ ವಾರಯಂತಿ ಖಲು । ಕಿಂಚ ಶತ್ರೂಣಾಂ ಹಿಂಸನಂ ಕರಿಷ್ಯತಸ್ತವ ಜ್ಯೋತ್ಸ್ನಾನಿ ಬಲಾನಿ ನ ವಾರಯಂತಿ ॥

॥ ಪ್ರತಿಪದಾರ್ಥ ॥

(ಇಂದ್ರ—ಎಲೈ ಇಂದ್ರನೇ) । **ಅಮುರಃ**—ಹಿಂಸಕರಾದ ರಾಕ್ಷಸರು । **ತೇ**—ನಿನ್ನ । **ಶತಂ ಚೆನ**—ಅನೇಕವಿಧವಾದ । **ರಾಧಃ**—ಧನವನ್ನು । **ನಹಿ ವರಂತೇ**—ಖಂಡಿತ ತಡೆಗಟ್ಟಲಾರರು (ನಾಶಪಡಿಸಲಾರರು)। **ಕರಿಷ್ಯತಃ**—(ಶತ್ರುಗಳಿಗೆ) ಹಿಂಸೆಯನ್ನುಂಟುಮಾಡುವ । **ಜ್ಯೋತ್ಸ್ನಾನಿ**—ನಿನ್ನ ಶಕ್ತಿಗಳನ್ನು । **ನ**—ಖಂಡಿತ ತಡೆಯಲಾರರು.

॥ ಭಾವಾರ್ಥ ॥

ಎಲೈ ಇಂದ್ರನೇ, ಹಿಂಸಕರಾದ ರಾಕ್ಷಸರು ನಿನ್ನ ಅನೇಕವಿಧವಾದ ಧನವನ್ನು ಖಂಡಿತ ತಡೆಗಟ್ಟಲಾರರು, ಎಂದರೆ ನಾಶಪಡಿಸಲಾರರು. ಅವರಿಗೆ ಹಿಂಸಾಕಾರಿಗಳಾದ ನಿನ್ನ ಶಕ್ತಿಗಳನ್ನೂ ಸಹ ತಡೆಯಲಾರರು

English Translation.

Adversaries diminish not your hundred-fold opulence, nor resist the energies of you opposing (them).

॥ ಸಂಹಿತಾಪಾಠಃ ॥

ಅಸ್ಮೈ ಅವಂತು ತೇ ಶತಮಸ್ಮಾನ್ತ್ಸಹಸ್ರಮೂತಯಃ ।
ಅಸ್ಮಾನ್ವಿಶ್ವಾ ಅಭಿಷ್ಟಯಃ ॥ ೧೦ ॥

॥ ಪದಪಾಠಃ ॥

ಅಸ್ಮಾನ್ । ಅವಂತು । ತೇ । ಶತಂ । ಅಸ್ಮಾನ್ । ಸಹಸ್ರಂ । ಊತಯಃ ।
ಅಸ್ಮಾನ್ । ವಿಶ್ವಾಃ । ಅಭಿಷ್ಟಯಃ ॥ ೧೦ ॥

॥ सायणभाष्यं ॥

हे इंद्र ते त्वदीयाः शतं शतसंख्याका ऊतयो रक्षा अस्मानवंतु । रक्षंतु । सहस्रं सहस्रसंख्याकास्त्वदीया रक्षा अस्मानवंतु । विश्वाः सर्वाण्यभिप्वय-स्त्वदीयान्यभिगमनान्यस्मानवंतु ॥

॥ प्रतिपदार्थ ॥

(इंद्र)—ಎಲೈ ಇಂದ್ರನೇ) । **ते**—ನಿನ್ನ । **शतं**—ಶತಸಂಖ್ಯಾಕವಾದ । **ऊतयः**—ರಕ್ಷಣೆಗಳು । **अस्मान्**—ನಮ್ಮನ್ನು । **अवंतु**—ರಕ್ಷಿಸಲಿ । **सहस्रं**—ಸಹಸ್ರಸಂಖ್ಯಾಕವಾದ ರಕ್ಷಣೆಗಳು । **अस्मान्**—ನಮ್ಮನ್ನು ರಕ್ಷಿಸಲಿ । **विश्वाः**—ಸಮಸ್ತವಾದ । **अभिप्वयः**—ನಿನ್ನ ಉದ್ದೇಶಗಳೆಲ್ಲಾ । **अस्मान्**—ನಮ್ಮನ್ನು ರಕ್ಷಿಸಲಿ.

॥ भावार्थ ॥

ಎಲೈ ಇಂದ್ರನೇ, ನಿನ್ನ ನೂರಾರು ರಕ್ಷಣೆಗಳು ನಮ್ಮನ್ನು ರಕ್ಷಿಸಲಿ ನಿನ್ನ ರಕ್ಷಣಾಕ್ರಮಗಳು ಇನ್ನೂ ಅಪಾರವಾಗಿವೆ. ಅಂತಹ ಸಹಸ್ರಾರು ರಕ್ಷಣೆಗಳೂ ನಮ್ಮನ್ನು ರಕ್ಷಿಸಲಿ ನಿನ್ನ ಸಕಲ ಉದ್ದೇಶಗಳೂ ನಮಗೆ ರಕ್ಷಕವಾಗಿಯೇ ಇರಲಿ.

English Translation.

May your hundred, your thousand, protections preserve us, may all (your) desires (be for our defence).

॥ संहितापाठः ॥

अस्मॅ इहा वृणीष्व सख्यॅय स्वस्तयॅ ।
मुहो रायॅ दिवित्मतॅ ॥ ८८ ॥

॥ पदपाठः ॥

अस्मान् । इह । वृणीष्व । सख्याय । स्वस्तये ।
मुहः । रायॅ । दिवित्मतॅ ॥ ८८ ॥

॥ सायणभाष्यं ॥

हे इंद्र त्वमिहास्मिन्यज्ञेऽस्मान्यजमानान् सख्याय सखित्वाय स्वस्तयेऽविनाशाय च महो महते दिवित्मते दीप्तिमते राये धनाय च वृणीष्व । संभजस्व ॥

॥ प्रतिपदार्थ ॥

(इंद्र—ಎಲೈ ಇಂದ್ರನೇ) । **इह**—ಈ ಯಜ್ಞದಲ್ಲಿ । **सख्याय**—ನಿನ್ನೊಡನೆ ಸಖಿತ್ವವನ್ನು ಸಂಪಾದಿಸುವುದಕ್ಕೂ । **स्वस्तयीं**—ನಮ್ಮ ಕಲ್ಯಾಣಕ್ಕಾಗಿಯೂ । **महः**—ಮಹತ್ತಾದುದೂ । **दिवित्मतीं**—ಕಾಂತಿಯುತವಾದುದೂ ಆದ । **रायीं**—ಧನಕ್ಕಾಗಿಯೂ । **अस्मान्**—ಯಜಮಾನರಾದ ನಮ್ಮನ್ನು । **वृणीष्व**—ಸೇವಿಸು (ಸತ್ಕರಿಸು).

॥ भावार्थ ॥

ಎಲೈ ಇಂದ್ರನೇ, ನಿನ್ನೊಡನೆ ಸಖಿತ್ವವನ್ನು ಹೊಂದಿರುವುದಕ್ಕೂ, ನಮಗೆ ಕಲ್ಯಾಣವುಂಟಾಗುವುದಕ್ಕೂ, ಮತ್ತು ನಮಗೆ ಮಹತ್ತಾದುದೂ ಕಾಂತಿಯುತವಾದುದೂ ಆದ ಧನಲಾಭಕ್ಕಾಗಿಯೂ ಯಜಮಾನರಾದ ನಮ್ಮನ್ನು ಈ ಯಜ್ಞದಲ್ಲಿ ಸತ್ಕರಿಸು.

English Translation.

Select us, Indra, on this occasion, for your friendship, for (our) welfare, for vast and splendid riches

॥ संहितापाठः ॥

अस्माँ अविड्धि विश्वहेंद्र रायो परीणसा ।

अस्मान्विश्वाभिरूतिभिः ॥ ८७ ॥

॥ पदपाठः ॥

अस्मान् । अविड्धि । विश्वहा । इंद्र । रायो । परीणसा ।

अस्मान् । विश्वाभिः । ऊतिऽभिः ॥ ८७ ॥

॥ सायणभाष्यं ॥

हे इंद्र त्वं विश्वहा सर्वेष्वहःसु परीणसा महता रायो धनेनास्मान्यजमानानविड्धि । रक्ष । किंच विश्वाभिः सर्वाभिरूतिभिः रक्षाभिरस्मानविड्धि ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ವಿಶ್ವಹಾ**—ಸಕಲದಿನಗಳಲ್ಲಿಯೂ । **ಪರೀಣಸಾ**—ಪ್ರಭೂತವಾದ । **ರಾಯಾ**—ಧನದಿಂದ । **ಅಸ್ಮಾನ್**—ಯಜಮಾನರಾದ ನಮ್ಮನ್ನು । **ಆವಿಢಿ**—ರಕ್ಷಿಸು । **ವಿಶ್ವಾಭಿಃ**—ಸಮಸ್ತವಾದ । **ಊತಿಭಿಃ**—ರಕ್ಷಣೆಗಳಿಂದಲೂ । **ಅಸ್ಮಾನ್**—ನಮ್ಮನ್ನು (ರಕ್ಷಿಸು).

॥ ಭಾವಾರ್ಥ ॥

ಎಲೈ ಇಂದ್ರನೇ, ಯಜಮಾನರಾದ ನಮ್ಮನ್ನು ಪ್ರಭೂತವಾದ ಧನದಾನದಿಂದ ಸಕಲದಿನಗಳಲ್ಲಿಯೂ ರಕ್ಷಿಸು. ಮತ್ತು ಸಮಸ್ತವಾದ ರಕ್ಷಣೆಗಳಿಂದಲೂ ರಕ್ಷಿಸು

English Translation.

Favour us, Indra, daily with infinite riches, (protect) us with all protections

॥ ಸಂಹಿತಾ ಪಾಠಃ ॥

ಅಸ್ಮಭ್ಯಂ ತಾಁ ಅಪಾ ವೃಧಿ ವ್ರಜಾಁ ಅಸ್ತೇವ ಗೋಮತಃ ।
ನವಾಭಿರಿಂದ್ರೋತಿಭಿಃ ॥ ೧೩ ॥

॥ ಪದಪಾಠಃ ॥

ಅಸ್ಮಭ್ಯಂ । ತಾನ್ । ಅಪ । ವೃಧಿ । ವ್ರಜಾನ್ । ಅಸ್ತಾ೨ಇವ । ಗೋ೨ಮತಃ ।
ನವಾಭಿಃ । ಇಂದ್ರ । ಊತಿ೨ಭಿಃ ॥ ೧೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ನವಾಭಿರ್ನೂತನಾಭಿರೂತಿಭೀ ರಕ್ಷಾಭಿರಸ್ತೇವ ಕ್ಷೇಪ್ತಾ ಶೂರ ಇವ ಗೋಮತೋ ಗೋಭಿರ್ಯುಕ್ತಾನ್ ತಾನ್ ಪ್ರಸಿದ್ಧಾನ್ವ್ರಜಾನ್ ಗೋನಿವಾಸಾನಸ್ಮಭ್ಯಮಪಾ ವೃಧಿ । ಉದ್ಘಾಟಯ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ನವಾಭಿಃ**—ನೂತನಗಳಾದ । **ಊತಿಭಿಃ**—ರಕ್ಷಣೆಗಳೊಂದಿಗೆ । **ಅಸ್ತೇವ**—ಶೂರನಂತೆ । **ಗೋಮತಃ**—ಗೋವುಗಳಿಂದ ಕೂಡಿದುದೂ । **ತಾನ್**—ಪ್ರಸಿದ್ಧವಾದವೂ ಆದ । **ವ್ರಜಾನ್**—ಗೋವಿನ ಕೊಟ್ಟಿಗೆಗಳನ್ನು । **ಅಸ್ಮಭ್ಯಂ**—ನಮಗಾಗಿ **ಅಪಾ ವೃಧಿ**—ತೆರೆಯುವವನಾಗು

। ಭಾವಾರ್ಥ ।

ಎಲೈ ಇಂದ್ರನೇ, ಶೂರನಾದ ನೀನು ನಿನ್ನ ನೂತನವಾದ ರಕ್ಷಣೆಗಳೊಡನೆ ನಮಗಾಗಿ ಗೋವಿನಿಂದ ತುಂಬಿದ ಗೋವ್ರಜಗಳನ್ನೂ ತೆರೆ. (ಒದಗಿಸಿಕೊಡು)

English Translation.

With fresh protections, Indra, like a warrior, open for us those pastures filled with cattle.

॥ ಸಂಹಿತಾಪಾಠಃ ॥

ಅಸ್ಮಾಕಂ ಧೃಷ್ಣ್ವಾ ರಥೋ ದ್ಯುಮಾಁ ಇಂದ್ರಾನಪಚ್ಯುತಃ ।
ಗವ್ಯುರಶ್ವಯುರೀಯತೇ ॥ ೧೪ ॥

॥ ಪದಪಾಠಃ ॥

ಅಸ್ಮಾಕಂ । ಧೃಷ್ಣ್ವಾ । ರಥಃ । ದ್ಯುಮಾನ್ । ಇಂದ್ರ । ಅನಪಚ್ಯುತಃ ।
ಗವ್ಯುಃ । ಅಶ್ವಯುಃ । ಈಯತೇ ॥ ೧೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಧೃಷ್ಣ್ವಾ ಧೃಷ್ಣುಃ ಶತ್ರೂಣಾಂ ಧರ್ಷಕೋ ದ್ಯುಮಾನ್ದೀಪ್ತಿಮಾನನಪಚ್ಯುತೋ ವಿನಾಶರಹಿತೋ ಗವ್ಯುರ್ಗೋಮಾನಶ್ವಯುರಶ್ವವಾನಸ್ಮಾಕಮಸ್ಮತ್ಸಂಬಂಧೀ ರಥ ಈಯತೇ । ಸರ್ವತ್ರ ಗಚ್ಛತು । ತೇನ ರಥೇನಾಸ್ಮಾನ್ರಕ್ಷೇತ್ಯರ್ಥಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಅಸ್ಮಾಕಂ—ನಮ್ಮ । ಧೃಷ್ಣ್ವಾ—ಶತ್ರುಧರ್ಷಕವಾದುದೂ । ದ್ಯುಮಾನ್—ಕಾಂತಿಯುತವಾದುದೂ । ಅನಪಚ್ಯುತಃ—ನಾಶರಹಿತವಾದುದೂ । ಗವ್ಯುಃ—ಗೋವುಗಳಿಂದ ತುಂಬಿದುದೂ । ಅಶ್ವಯುಃ—ಅಶ್ವಗಳುಳ್ಳದ್ದೂ ಆದ । ರಥಃ—ರಥವು । ಈಯತೇ—ಸರ್ವತ್ರ ಸಂಚರಿಸಲಿ.

। ಭಾವಾರ್ಥ ।

ಎಲೈ ಇಂದ್ರನೇ, ನಮ್ಮ ಶತ್ರುನಾಶಕವಾದುದೂ, ಕಾಂತಿಯುತವಾದುದೂ, ನಾಶರಹಿತವಾದುದೂ, ಗೋವುಗಳಿಂದ ತುಂಬಿದುದೂ, ಅಶ್ವಗಳುಳ್ಳದ್ದೂ ಆದ ರಥವು ಸರ್ವತ್ರ ಸಂಚರಿಸಲಿ.

English Translation.

May our chariot, Indra, foe-repelling, brilliant, unfailing, proceed (everywhere), possessing us of cattle and of horses.

॥ ಸಂಹಿತಾಪಾಠಃ ॥

ಅಸ್ಮಾಕಮುತ್ತಮಂ ಕೃಧಿ ಶ್ರವೋ ದೇವೇಷು ಸೂರ್ಯ ।
ವರ್ಷಿಷ್ಠಂ ದ್ಯಾಮಿವೋಪರಿ ॥ ೧೫ ॥

॥ ಪದಪಾಠಃ ॥

ಅಸ್ಮಾಕಂ । ಉತ್ತಮಂ । ಕೃಧಿ । ಶ್ರವಃ । ದೇವೇಷು । ಸೂರ್ಯ ।
ವರ್ಷಿಷ್ಠಂ । ದ್ಯಾಂ । ಇವ । ಉಪರಿ ॥ ೧೫ ॥

॥ ಸಾಯಣಭಾಷ್ಯಂ ॥

ಅಸ್ಮಾಕಮುತ್ತಮಂ ಕೃಧೀತ್ಯನಯಾದಿತ್ಯಂ ದೃಷ್ಟ್ವಾ ರಥಾದವರೋಹೇತ್। ತಥಾ ಚ ಸೂತ್ರಿತಂ। ಅಸ್ಮಾಕಮುತ್ತಮಂ ಕೃಧೀತ್ಯಾದಿತ್ಯಮಿಷ್ಟ್ವಾಮಾಣೋ ಜಪಿತ್ವಾವರೋಹೇತ್ । ಆ ಗೃ. ೨-೬-೧೨ । ಇತಿ ॥

ಹೇ ಸೂರ್ಯ ಸರ್ವಸ್ಯ ಪ್ರೇರಕೇಂದ್ರ ಹೇ ಆದಿತ್ಯ ವಾ ತ್ವಂ ದೇವೇಷು ದ್ಯೋತಮಾನೇಷು ವಹ್ನ್ಯಾದಿಷು ಮಧ್ಯೇಽಸ್ಮಾಕಮಸ್ಮತ್ಸಂಬಂಧಿ ಶ್ರವೋ ಯಶ ಉತ್ತಮಮುತ್ಕೃಷ್ಟಂ ಕೃಧಿ । ಕುರು । ತತ್ರ ದೃಷ್ಟ್ವಾಂತಃ । ವರ್ಷಿಷ್ಠಮತಿಶಯೇನ ಪ್ರವೃದ್ಧಂ ಸೇಚನಸಮರ್ಥಂ ವಾ ದ್ಯಾಮಿವ ದ್ಯುಲೋಕಂ ಯಥಾ ಸರ್ವೇಷಾಂ ಲೋಕಾನಾಮುಪರಿ ಸ್ಥಿತಮುತ್ಕೃಷ್ಟಮಕರೋಸ್ತದ್ವತ್ ॥

॥ ಪ್ರತಿಪದಾರ್ಥ ॥

ಸೂರ್ಯ—ಎಲೈ ಸೂರ್ಯನೇ । **ವರ್ಷಿಷ್ಠಂ**—ಅತಿಶಯವಾಗಿ ವೃಷ್ಟಿಯನ್ನು ಸುರಿಸುವ । **ದ್ಯಾಂ ಇವ ಉಪರಿ**—ದ್ಯುಲೋಕವನ್ನು ಎಲ್ಲಾ ಲೋಕಗಳಿಗಿಂತಲೂ ಉನ್ನತಪ್ರದೇಶದಲ್ಲಿಟ್ಟಿರುವಂತೆ । **ಅಸ್ಮಾಕಂ**—ನಮ್ಮ । **ಶ್ರವಃ**—ಕೀರ್ತಿಯನ್ನು । **ದೇವೇಷು**—ದೇವತೆಗಳಲ್ಲಿ । **ಉತ್ತಮಂ**—ಅತ್ಯುತ್ತಮವಾದುದನ್ನಾಗಿ । **ಕೃಧಿ**—ಮಾಡು.

॥ ಭಾವಾರ್ಥ ॥

ಎಲೈ ಸೂರ್ಯನೇ. ಅತಿಶಯವಾಗಿ ವೃಷ್ಟಿಯನ್ನು ಸುರಿಸುವ ದ್ಯುಲೋಕವನ್ನು ಎಲ್ಲಾ ಲೋಕಗಳಿಗಿಂತಲೂ ಉನ್ನತಪ್ರದೇಶದಲ್ಲಿಟ್ಟಿರುವಂತೆ, ನಮ್ಮ ಕೀರ್ತಿಯನ್ನೂ ಸಹ ದೇವತೆಗಳಲ್ಲಿ ಹರಡಿ ಅತ್ಯುತ್ಕೃಷ್ಟವಾಗಿರುವಂತೆ ಮಾಡು.

English Translation

Surya, make our fame exalted among the gods, as (you have placed) the sky, the shedder of most copious rain, above (all other regions)



ಮೂವತ್ತೆರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಆ ತೂ ನ ಇಂದ್ರೇತಿ ಚತುರ್ದಿಂಶತ್ಯೃಚಮೇಕಾದಶಂ ಸೂಕ್ತಂ ವಾಮದೇವಸ್ಯಾರ್ಷಂ ಗಾಯತ್ರ್ಯೆಂದ್ರಂ । ಅಂತ್ಯೇ ಕನೀನಕೇವೇತ್ಯಾದಿಕೇ ದ್ವೇ ಇಂದ್ರಸ್ಯಾಶ್ವದೇವತಾಕೇ । ತಥಾ ಚಾನುಕ್ರಾಂತಂ । ಆ ತೂ ನಶ್ಚತುರ್ದಿಂಶತಿರಂತ್ಯಾಭ್ಯಾಮಿಂದ್ರಾಶ್ವೌ ಸ್ತುತಾವಿತಿ । ಗತೋ ವಿನಿಯೋಗಃ ॥

ಅನುವಾದವು—ಆ ತೂ ನ ಇಂದ್ರೆ ಎಂಬ ಈ ಸೂಕ್ತವು ಮೂವತ್ತೆರಡನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು ಇದರಲ್ಲಿ ಇಪ್ಪತ್ತನಾಲ್ಕು ಋಕ್ಕುಗಳಿರುವವು ಈ ಸೂಕ್ತಕ್ಕೆ ವಾಮದೇವನು ಋಷಿಯು, ಇಂದ್ರನು ದೇವತೆಯು, ಗಾಯತ್ರೀಛಂದಸ್ಸು **ಕನೀನಕೇವ** ಎಂಬ ಈ ಸೂಕ್ತದ ಕೊನೆಯ ಎರಡು ಋಕ್ಕುಗಳಿಗೆ ಇಂದ್ರನ ಅಶ್ವಗಳು ದೇವತೆಗಳು ಅನುಕ್ರಮಣಿಕೆಯಲ್ಲಿ—**ಆ ತೂ ನಶ್ಚತುರ್ದಿಂಶತಿರಂತ್ಯಾಭ್ಯಾಮಿಂದ್ರಾಶ್ವೌ ಸ್ತುತೌ** ಎಂದು ಹೇಳಿರುವುದು ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೩೨

ಮಂಡಲ—೪ ॥ ಅನುವಾಕ—೩ ॥ ಸೂಕ್ತ—೩೨ ॥
ಅಷ್ಟಕ—೩ ॥ ಅಧ್ಯಾಯ—೬ ॥ ವರ್ಗ—೩೭, ೩೮, ೩೯, ೪೦ ॥
॥ ಸೂಕ್ತದಲ್ಲಿರುವ ಋಕ್ಕುಂಬ್ಕಿ—೨೪ ॥
॥ ಋಷಿಃ—ವಾಮದೇವಃ ॥
॥ ದೇವತಾ—೧-೨೨, ಇಂದ್ರಃ । ೨೩-೨೪ ಇಂದ್ರಾಶ್ವೌ ॥
। ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಆ ತೂ ನ ಇಂದ್ರ ವೃತ್ರಹನ್ನಸ್ಮಾಕಮೂರ್ಧಮಾ ಗಹಿ ।

ಮಹಾನ್ಮಹೀಭಿರೂತಿಭಿಃ ॥ ೧ ॥

॥ ಪದಪಾಠಃ ॥

ಆ । ತು । ನಃ । ಇಂದ್ರ । ವೃತ್ರಹನ್ । ಅಸ್ಮಾಕಂ । ಅರ್ಧಂ । ಆ । ಗಹಿ ।

ಮಹಾನ್ । ಮಹೀಭಿಃ । ಊತಿಭಿಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ವೃತ್ರಹನ್ ವೃತ್ರಾಣಾಂ ಶತ್ರೂಣಾಂ ಹಿಂಸಕೇಂದ್ರ ತ್ವಂ ನೋಽಸ್ಮಾನ್ಪ್ರತಿ ತು ಕ್ಷಿಪ್ರಮಾಗಚ್ಛ। ಹೇ ಇಂದ್ರ ಮಹಾನ್ಪ್ರಭೂತಸ್ತ್ವಂ ಮಹೀಭಿರ್ಮಹತೀಭಿರೂತಿಭೀ ರಕ್ಷಾಭಿಃ ಸಹಾಸ್ಮಾಕಮರ್ಧಂ ಸಮೀಪಮಾ ಗಹಿ । ಆಗಚ್ಛ ॥

॥ ಪ್ರತಿಪದಾರ್ಥ ॥

ವೃತ್ರಹನ್—ವೃತ್ರಹಂತಕನಾದ । **ಇಂದ್ರ**—ಎಲೈ ಇಂದ್ರನೇ । **ನಃ**—ನಮಗೆ ಅಭಿಮುಖನಾಗಿ । **ತು**—ಶೀಘ್ರವಾಗಿ । **ಆ ಗಹಿ**—ದಯಮಾಡು । **ಮಹಾನ್**—ಮಹತ್ಸ್ವರೂಪವುಳ್ಳ ನೀನು । **ಮಹೀಭಿಃ**—ಪ್ರಭೂತಗಳಾದ (ಅಥವಾ ಮಹಿಮೆಯುಳ್ಳ) । **ಊತಿಭಿಃ**—ರಕ್ಷಣೆಗಳೊಂದಿಗೆ । **ಅಸ್ಮಾಕಮರ್ಧಂ**—ನಮ್ಮ ಸಮೀಪಕ್ಕೆ । **ಆ (ಗಹಿ)**—ದಯಮಾಡು.

॥ ಭಾವಾರ್ಥಃ ॥

ವೃತ್ರಹಂತಕನಾದ ಎಲೈ ಇಂದ್ರನೇ, ಶೀಘ್ರವಾಗಿ ನನಗೆ ಅಭಿಮುಖನಾಗಿ ಬಾ ಮಹತ್ಸ್ವರೂಪವುಳ್ಳ ನೀನು ಮಹಿಮೆಯಿಂದ ಕೂಡಿದ ನಿನ್ನ ಪ್ರಭೂತರಕ್ಷಣೆಗಳೊಂದಿಗೆ ನಮ್ಮ ಸಮೀಪಕ್ಕೆ ದಯಮಾಡು

English Translation.

Indra, slayer of Vritra, come to us quickly you who are mighty, (come) with mighty protections

॥ ಸಂಹಿತಾಪಾಠಃ ॥

ಭೂಮಿಶ್ಚಿದ್ಧ್ವಾಸಿ ತೂತುಜೀರಾ ಚಿತ್ರ ಚಿತ್ರಿಣೇಷ್ವಾ ।

ಚಿತ್ರಂ ಕೃಣೋಷ್ಯೂತಯೇ ॥ ೨ ॥

॥ पदपाठः ॥

भृमिः । चित् । असि । तूतुजिः । अ । चित्र । चित्रिणीषु । अ ।

चित्रं । कृणोषि । ऊतये ॥ ३ ॥

॥ सायणभाष्यं ॥

हे चित्र चायनीय पूजनीयेन्द्र त्वं भृमिश्चित् भ्रमणशीलोऽपि तूतुजिर्भवसि । अस्मदभीष्टप्रदाता च भवसि । अकारश्चार्थे । चित्रिणीषु चित्रकर्मयुक्तास्वस्मद्प्रासासु प्रजासु चित्रं चायनीयं धनमूतये रक्षणाय अ कृणोषि । अ समन्ताकृरोषि । घेत्ति पूरणः ॥

॥ प्रतिपदार्थ ॥

चित्र—पूज्यनाद इंद्रनेे । (नीनु) भृमिश्चित्—सर्वत्र संचरिसुव स्वभावविुळ्ळवनादरू सह । तूतुजिः असि—नम्म इष्टार्थगळन्नु नेरवेरिसि कोडुववनागिद्दीयि । चित्रिणीषु—नानाविधवाद कर्मयुक्तराद प्रजेगळल्लि । चित्रं—आकर्षकवाद धनवन्नु । ऊतये—रक्षणार्थवागि । अ कृणोषि—तुंबिकोडुत्तीयि.

॥ भावार्थ ॥

पूज्यनाद इंद्रनेे, नीनु सर्वत्र संचरिसुव स्वभावविुळ्ळवनादरू सह नम्म इष्टार्थगळन्नु नेरवेरिसिकोडुवनागिद्दीयि. निन्नन्नु पूजिसलु नानाविधवाद कर्मगळल्लि उद्युक्तराद प्रजेगळिगे रक्षणार्थवागि आकर्षकवाद धनवन्नु तुंबिकोडुत्तीयि.

English Translation.

Wonderful Indra, wanderer at times (through space), you are verily the granter of (our) desires, and do what is marvellous for the protection (of those who are engaged) in wondrous works.

॥ संहितापाठः ॥

द्दभ्रेभिश्चिच्छ्रेयांसं हंसि व्राधंतमोजसा ।

सम्पिष्योर्त्वे सचा ॥ ४ ॥

। ಪದಪಾಠಃ ।

ದಭ್ರೇಭಿಃ । ಚಿತ್ । ಶಶೀಯಾಂಸಂ । ಹಂಸಿ । ವ್ರಾಧಂತಂ । ಓಜಸಾ ।

ಸಖಿಭಿಃ । ಯೇ । ತ್ವೇ ಇತಿ । ಸಚಾ ।

। ಸಾಯಣಭಾಷ್ಯಂ ।

ಹೇ ಇಂದ್ರ ತ್ವಂ ದಭ್ರೇಭಿಶ್ಚಿದಲ್ಪೈರಪಿ ಸಖಿಭಿರ್ಯಜಮಾನೈಃ ಸಹ ಶಶೀಯಾಂಸಂ ॥ ಶಶ ಪ್ಲುತಗತೌ ॥ ಉತ್ಪ್ಲವಮಾನಂ 'ವ್ರಾಧಂತಂ ಮಹಾಂತಮಪಿ ಶತ್ರುಮೋಜಸಾ ಬಲೇನ ಹಂಸಿ । ನಾಶಯಸಿ । ಯೇ ಯಜಮಾನಾಸ್ತ್ವೇ ತ್ವಯಿ ಸಚಾ ಸಂಗತಾಃ । ತೈರಿತಿ ಪೂರ್ವೇಣ ಸಂಬಂಧಃ ॥

। ಪ್ರತಿಪದಾರ್ಥ ।

(ಇಂದ್ರ—ಇಂದ್ರನೇ) । **ಯೇ**—ಯಾವ ಯಜಮಾನರು । **ತ್ವೇ**—ನಿನ್ನಲ್ಲಿ । **ಸಚಾ**—ಕೂಡಿಕೊಂಡಿದ್ದಾರೋ ಅಂತಹವರು । **ದಭ್ರೇಭಿಶ್ಚಿತ್**—ಅಲ್ಪರಾಗಿದ್ದರೂ ಸಹ । **ಸಖಿಭಿಃ**—ಅಂತಹ ಮಿತ್ರಭೂತರಾದ ಯಜಮಾನರೊಡನೆ ಸೇರಿಕೊಂಡು । **ಶಶೀಯಾಂಸಂ**—ಹಾರುವಂತೆ ಓಡಿಹೋಗುವವನೂ । **ವ್ರಾಧಂತಂ**—ಮಹಚ್ಛಕ್ತಿಯುಳ್ಳವನೂ ಆದ ಶತ್ರುವನ್ನೂ ಸಹ । **ಓಜಸಾ**—ನಿನ್ನ ಶಕ್ತಿಯಿಂದ । **ಹಂಸಿ**—ನಾಶಮಾಡುತ್ತೀಯೆ.

। ಭಾವಾರ್ಥ ।

ಎಲೈ ಇಂದ್ರನೇ, ಯಾವ ಯಜಮಾನರು ನಿನ್ನಲ್ಲಿ ಕೂಡಿಕೊಂಡಿದ್ದಾರೋ ಅಂತಹವರು ಅಲ್ಪರಾಗಿದ್ದರೂ ಸಹ ಅಂತಹ ನಿನ್ನ ಮಿತ್ರಭೂತವಾದ ಯಜಮಾನರೊಡನೆ ಸೇರಿಕೊಂಡು ನೀನು ಹಾರುವಂತೆ ಓಡಿಹೋಗುವವನೂ, ಮಹಚ್ಛಕ್ತಿಯುಳ್ಳವನೂ ಆದ ಶತ್ರುವನ್ನು ನಿನ್ನ ಶಕ್ತಿಯಿಂದ ನಾಶಮಾಡುತ್ತೀಯೆ.

English Translation.

You destroy by your might the fierce assailing foe, associated with the humble friends who are along with you.

। ಸಂಹಿತಾಪಾಠಃ ।

ವಯಮಿಂದ್ರ ತ್ವೇ ಸಚಾ ವಯಂ ತ್ವಾಭಿ ನೋನುಮಃ ।

ಅಸ್ಮಾಅಸ್ಮಾ ಇದುದವ ॥ ೪ ॥

॥ पदपाठः ॥

वयं । इन्द्र । त्वे इति । सचा । वयं । त्वा । अभि । नोनुमः ।

अस्मान्२अस्मान् । इत् । उत् । अव ॥ ४ ॥

॥ सायणभाष्यं ॥

हे इन्द्र वयं यजमानास्त्वे त्वयि सचा संगताः स्मः । वयं त्वा त्वामभि नोनुमः । अतिशयेनाभिष्टुमः । हे इन्द्र त्वमस्मान्नस्मान्नित् सर्वानस्मानेवोदव । उत्कर्षेण रक्ष ॥

॥ प्रतिपदार्थ ॥

इन्द्र—ಎಲೈ ಇಂದ್ರನೇ । वयं—ಯಜಮಾನರಾದ ನಾವು । त्वे—ನಿನ್ನಲ್ಲಿ । सचा—ಕೂಡಿ ಕೊಂಡಿರುವೆವು । वयं—ನಾವು । त्वा—ನಿನ್ನನ್ನು । अभि—ಅತಿಶಯವಾಗಿ । नोनुमः—ಸ್ತುತಿಸುತ್ತೇನೆ । अस्मान्नस्मान् इत्—ನಮ್ಮೆಲ್ಲರನ್ನು ಮಾತ್ರವೆ । उत् अव—ಪೂರ್ಣವಾಗಿ ರಕ್ಷಿಸು.

॥ भावार्थ ॥

ಎಲೈ ಇಂದ್ರನೇ, ಯಜಮಾನರಾದ ನಾವು ನಿನ್ನನ್ನು ಸೇರಿ ಕೂಡಿಕೊಂಡಿರುವೆವು ಮತ್ತು ನಿನ್ನನ್ನು ಅತಿಶಯವಾಗಿ ಸ್ತುತಿಸುತ್ತೇನೆ ನೀನು ನಮ್ಮೆಲ್ಲರನ್ನು ಮಾತ್ರವೇ ಪೂರ್ಣವಾಗಿ ರಕ್ಷಿಸು.

English Translation.

We, Indra, are along with you, we zealously glorify you: do verily protect us all.

॥ संहितापाठः ॥

स नश्चित्राभिरद्रिवोऽनवद्याभिरूतिभिः ।

अनाधृष्याभिरा गहि ॥ ५ ॥

॥ पदपाठः ॥

सः । नः । चित्राभिः । अद्रिऽवः । अनवद्याभिः । ऊतिऽभिः ।

अनाधृष्याभिः । आ गहि ॥ ५ ॥

॥ ಸಾಯಣಭಾಷ್ಯಂ ॥

ಹೇ ಆದ್ರಿವೋ ವಜ್ರವನ್ನಿಂದ್ರ ಸ ತ್ವಂ ಚಿತ್ರಾಭಿಶ್ಚಾಯನೀಯಾಭಿರನವದ್ಯಾಭಿರನಿಂದಿತಾಭಿರನಾಧೃಷ್ಟಾಭಿಃ ಶತ್ರುಭಿರಪ್ರಧರ್ಷಿತೈರೂತಿಭೀ ರಕ್ಷಣೈಃ ಸಹಿತಃ ಸನ್ನೋಽಸ್ಮಾನಾ ಗಹಿ । ಆಗಚ್ಛ ॥

॥ ಪ್ರತಿಪದಾರ್ಥ ॥

ಆದ್ರಿವಃ—ವಜ್ರಾಯುಧವನ್ನು ಹಿಡಿದಿರುವ ಎಲೈ ಇಂದ್ರನೇ.। **ಸಃ**—ಪ್ರಸಿದ್ಧನಾದ ನೀನು। **ಚಿತ್ರಾಭಿಃ**—ಆಕರ್ಷಕವಾದವೂ। **ಅನವದ್ಯಾಭಿಃ**—ನಿಂದಾರಹಿತವಾದವೂ। **ಅನಾಧೃಷ್ಟಾಭಿಃ**—ಶತ್ರುಗಳಿಂದ ಅಪ್ರತಿಹತವಾದವೂ ಆದ। **ಊತಿಭಿಃ**—ನಿನ್ನ ರಕ್ಷಣೆಗಳೊಡನೆ ಕೂಡಿಕೊಂಡು। **ನಃ**—ನಮಗಭಿಮುಖನಾಗಿ। **ಆ ಗಹಿ**—ದಯಮಾಡು.

॥ ಭಾವಾರ್ಥ ॥

ವಜ್ರಾಯುಧವನ್ನು ಹಿಡಿದಿರುವ ಎಲೈ ಇಂದ್ರನೇ, ಪ್ರಸಿದ್ಧನಾದ ನೀನು ಆಕರ್ಷಕವಾದವೂ, ನಿಂದಾರಹಿತವಾದವೂ, ಶತ್ರುಗಳಿಂದ ಅಪ್ರತಿಹತವಾದವೂ ಆದ ನಿನ್ನ ರಕ್ಷಣೆಗಳೊಡನೆ ಕೂಡಿಕೊಂಡು ನಮಗಭಿಮುಖನಾಗಿ ದಯಮಾಡು.

English Translation

Wielder of the thunderbolt, come to us with wondrous, irreproachable, irresistible protections.

॥ ಸಂಹಿತಾಪಾಠಃ ॥

ಭೂಯಾಮೋ ಷು ತ್ವಾವತಃ ಸಖಾಯ ಇಂದ್ರ ಗೋಮತಃ ।
ಯುಜೋ ವಾಜಾಯ ಘೃಷ್ವಯೇ ॥ ೬ ॥

॥ ಪದಪಾಠಃ ॥

ಭೂಯಾಮೋ ಇತಿ । ಷು । ತ್ವಾವತಃ । ಸಖಾಯಃ । ಇಂದ್ರ । ಗೋಽಮತಃ ।
ಯುಜಃ । ವಾಜಾಯ । ಘೃಷ್ವಯೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಾವತಸ್ತ್ವತ್ಸದೃಶಸ್ಯ ಗೋಮತೋ ಗೋಭಿರ್ಯುಕ್ತಸ್ಯ ದೇವಸ್ಯ ಸಂಬಂಧಿನಃ ಸಖಾಯಃ ಸ್ತೋತಾರೋ ವಯಂ ಘೃಷ್ವಯೇ ಮಹತೇ ವಾಜಾಯಾನ್ನಾಯ ಯುಜಃ ಸಂಯುಕ್ತಾಃ ಷು ಷಷ್ಠು ಭೂಯಾಮೋ । ಭವಾಮೈವ ॥

॥ ಪ್ರತಿಪದಾರ್ಥ ॥

ಇಂದ್ರೆ—ಇಂದ್ರನೇ । **ತ್ವಾವತಃ**—ನಿನಗೆ ಸದೃಶನಾದವನೂ । **ಗೋಮತಃ**–ಗೋವುಗಳಿಂದ ಕೂಡಿದವನೂ ಆದ ದೇವತೆಗೆ । **ಸಖಾಯಃ**—ಸ್ನೇಹಿತರಾಗಿ । **ಶ್ಚಸ್ವಯೇ**—ಮಹತ್ತಾದ । **ವಾಜಾಯ**—ಅನ್ನಕ್ಕಾಗಿ । **ಯುಜಃ**--ನಾವೆಲ್ಲರೂ ಒಟ್ಟಿಗೆ ಸೇರಿ । **ಸು**—ಒಳ್ಳೆಯ ಸ್ಥಿತಿಯಲ್ಲಿ । **ಭೂಯಾಮೋ**—ಇರುವಂತಾಗಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ಮಹತ್ತಾದ ಅನ್ನಕ್ಕಾಗಿ ನಾವೆಲ್ಲರೂ ಒಟ್ಟಿಗೆ ಸೇರಿ, ನಿನಗೆ ಸದೃಶನಾದವನೂ, ಗೋವುಗಳಿಂದ ಕೂಡಿದವನೂ ಆದ ದೇವತೆಗೆ ಸ್ನೇಹಿತರಾಗಿ ಆ ಕಾರಣದಿಂದಲೇ ನಾವೆಲ್ಲರೂ ಒಳ್ಳೆಯ ಸ್ಥಿತಿಯಲ್ಲಿರುವಂತಾಗಲಿ.

English Translation·

May we, Indra, be the friends of one like you, possessed of cattle, allied (to him) for (the sake of) abundant food.

॥ ಸಂಹಿತಾಪಾಠಃ ॥

ತ್ವಂ ಹ್ಯೇಕ ಈಶಿಷ ಇಂದ್ರ ವಾಜಸ್ಯ ಗೋಮತಃ ।
ಸ ನೋ ಯಂಧಿ ಮಹೀಮಿಷಂ ॥ ೭ ॥

॥ ಪದಪಾಠಃ ॥

ತ್ವಂ । ಹಿ । ಏಕಃ । ಈಶಿಷೇ । ಇಂದ್ರ । ವಾಜಸ್ಯ । ಗೋಽಮತಃ ।
ಸಃ । ನಃ । ಯಂಧಿ । ಮಹೀಂ । ಇಷಂ ॥ ೭ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಹಿ ಯಸ್ಮಾತ್ಕಾರಣಾತ್ತ್ವಮೇಕ ಏವ ಗೋಮತೋ ಗೋಭಿರ್ಯುಕ್ತಸ್ಯ ವಾಜಸ್ಯಾನ್ನಸ್ಯೇಶಿಷೇ । ಪ್ರಭವಸಿ । ಅತಃ ಕಾರಣಾತ್ಸ ತ್ವಂ ನೋಽಸ್ಮಭ್ಯಂ ಮಹೀಂ ಮಹತೀಮಿಷಮನ್ನಂ ಯಂಧಿ । ಪ್ರಯಚ್ಛ ॥

॥ ಪ್ರತಿಪದಾರ್ಥ ॥

ಇಂದ್ರೆ—ಇಂದ್ರನೇ । **ಹಿ**—ಯಾವ ಕಾರಣದಿಂದ । **ತ್ವಂ**—ನೀನು । **ಏಕಃ**—ಒಬ್ಬನೇ । **ಗೋಮತಃ**—ಗೋವುಗಳಿಂದ ಕೂಡಿದ । **ವಾಜಸ್ಯ**—ಅನ್ನಕ್ಕೆ । **ಈಶಿಷೇ**—ಪ್ರಭುವಾಗಿದ್ದೀಯೋ (ಆದುದರಿಂದಲೇ) । **ಸಃ**—ಅಂತಹ ನೀನು । **ನಃ**—ನಮಗೆ । **ಮಹೀಂ**—ಪ್ರಭೂತವಾದ । **ಇಷಂ**—ಅನ್ನವನ್ನು । **ಯಂಧಿ**—ಒದಗಿಸಿಕೊಡು.

॥ ಭಾವಾರ್ಥ ॥

ಎಲೈ ಇಂದ್ರನೇ, ಗೋವುಗಳಿಂದೊಡಗೂಡಿದ ಅನ್ನಕ್ಕೆ ನೀನೊಬ್ಬನೇ ಪ್ರಭುವಾಗಿದ್ದೀಯೆ. ಆದುದರಿಂದ ನಮಗೆ ಪ್ರಭೂತವಾದ ಅನ್ನವನ್ನು ಕೊಡಲು ನೀನೇ ಸಮರ್ಥನು.

English Translation.

For you alone, Indra, are lord over food combained with cattle, therefore grant us ample food.

॥ ಸಂಹಿತಾಪಾಠಃ ॥

ನ ತ್ವಾ ವರಂತೇ ಅನ್ಯಥಾ ಯದ್ದಿತ್ಸಸಿ ಸ್ತುತೋ ಮಘಂ ।
ಸ್ತ್ರೋತೃಭ್ಯ ಇಂದ್ರ ಗಿರ್ವಣಃ ॥ ೮ ॥

॥ ಪದಪಾಠಃ ॥

ನ । ತ್ವಾ । ವರಂತೇ । ಅನ್ಯಥಾ । ಯತ್ । ದಿತ್ಸಸಿ । ಸ್ತುತಃ । ಮಘಂ ।
ಸ್ತ್ರೋತೃಭ್ಯಃ । ಇಂದ್ರ । ಗಿರ್ವಣಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಗಿರ್ವಣೋ ಗಿರಾಂ ಸಂಭಕ್ತಃ ಸ್ತುತೋಽಸ್ಮಾಭಿಃ ಸಂಸ್ತುತೋ ಯದ್ಯದಾ ಸ್ತ್ರೋತೃಭ್ಯೋಽಸ್ಮಭ್ಯಂ ಮಘಂ ಧನಂ ದಿತ್ಸಸಿ । ದಾತುಮಿಚ್ಛಸಿ । ತದಾ ತ್ವಾ ತ್ವಾಮನ್ಯಥಾ ಪ್ರಕಾರಾಂತರೇಣ ನ ವರಂತೇ । ನ ನಿವಾರಯಂತಿ । ಕಿಂತು ಸರ್ವೇಽಪ್ಯನುಕೂಲಾ ಏವ ಭವಂತಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಗಿರ್ವಣಃ—ಸ್ತುತಿಗೆ ಪಾತ್ರನೂ । ಸ್ತುತಃ—ನಮ್ಮಿಂದ ಸ್ತುತಿಸಲ್ಪಡುವವನೂ ಆದ ನೀನು । ಯತ್—ಯಾವಾಗ । ಸ್ತ್ರೋತೃಭ್ಯಃ—ಸ್ತ್ರೋತೃಗಳಾದ ನಮಗೆ । ಮಘಂ—ಧನವನ್ನು । ದಿತ್ಸಸಿ—ಕೊಡಲಿಚ್ಛಿಸುತ್ತೀಯೋ ಆಗ । ತ್ವಾ—ನಿನ್ನನ್ನು । ಅನ್ಯಥಾ—ಬೇರೆ ವಿಧದಲ್ಲಿ । ನ ವರಂತೇ—ಯಾರೂ ತಡೆಯುವುದಿಲ್ಲ.

॥ ಭಾವಾರ್ಥ ॥

ಎಲೈ ಇಂದ್ರನೇ, ಸ್ತುತಿಗೆ ಪಾತ್ರನೂ, ನಮ್ಮಿಂದ ಸ್ತುತಿಸಲ್ಪಡುವವನೂ ಆದ ನೀನು ಸ್ತೋತೃಗಳಾದ ನಮಗೆ ಯಾವಾಗ ಧನವನ್ನು ಕೊಡಲಿಚ್ಛಿಸುತ್ತೀಯೋ, ಆಗ ನಿನ್ನನ್ನು ಬೇರೆ ವಿಧದಲ್ಲಿ ಯಾರೂ ತಡೆಯುವುದಿಲ್ಲ.

English Translation.

None change your purpose, Indra, object of laudation, when, being praised, you desire to bestow wealth upon the praisers.

॥ ಸಂಹಿತಾಪಾಠಃ ॥

ಅಭಿ ತ್ವಾ ಗೋತಮಾ ಗಿರಾನೂಷತ ಪ್ರ ದಾವನೇ ॥
ಇಂದ್ರ ವಾಜಾಯ ಘೃಷ್ವಯೇ ॥ ೯ ॥

॥ ಪದಪಾಠಃ ॥

ಅಭಿ । ತ್ವಾ । ಗೋತಮಾಃ । ಗಿರಾ । ಅನೂಷತ । ಪ್ರ । ದಾವನೇ ।
ಇಂದ್ರ । ವಾಜಾಯ । ಘೃಷ್ವಯೇ ॥ ೯ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಾ ತ್ವಾಮಭಿ ಲಕ್ಷೀಕೃತ್ಯ ಗೋತಮಾ ಏತನ್ನಾಮಕಾ ಋಷಯೋ ಗಿರಾ ಸ್ತುತಿರೂಪಯಾ ವಾಚಾ ದಾವನೇ ಧನದಾನಾರ್ಥಂ ಪ್ರಾನೂಷತ । ಪ್ರಕರ್ಷೇಣ ಸ್ತುವಂತಿ । ಘೃಷ್ವಯೇ ಮಹತೇ ವಾಜಾಯಾನ್ನಾಯ ಪ್ರಸ್ತುವಂತಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ತ್ವಾ**—ನಿನ್ನನ್ನು । **ಅಭಿ**— ಉದ್ದೇಶಿಸಿ । **ಗೋತಮಾಃ**—ಗೋತಮರೆಂದು ಹೆಸರುಳ್ಳ ಋಷಿಗಳು (ನಾವು) । **ಗಿರಾ**—ಸ್ತುತಿರೂಪವಾದ ವಾಕ್ಯಿನಿಂದ । **ದಾವನೇ**—ಧನವನ್ನು ಕೊಡುವುದ ಕ್ಕಾಗಿ । **ಪ್ರ ಅನೂಷತ**—ಪೂರ್ಣವಾಗಿ ಸ್ತುತಿಸುತ್ತಾರೆ । **ಘೃಷ್ವಯೇ**—ಮಹತ್ತಾದ । **ವಾಜಾಯ**—ಅನ್ನ ಕ್ಕಾಗಿಯೂ ಸಹ (ನಿನ್ನನ್ನು ಸ್ತುತಿಸುತ್ತಾರೆ)

॥ ಭಾವಾರ್ಥ ॥

ಎಲೈ ಇಂದ್ರನೇ, ಗೋತಮರೆಂದು ಪ್ರಖ್ಯಾತರಾದ ಋಷಿಗಳು (ನಾವು) ನಿನ್ನಿಂದ ಧನವನ್ನು ಪಡೆಯುವುದ ಕ್ಕಾಗಿ ನಿನ್ನನ್ನು ಪೂರ್ಣವಾಗಿ ಸ್ತುತಿಸುತ್ತಾರೆ ಮತ್ತು ಮಹತ್ತಾದ ಅನ್ನವನ್ನು ಪಡೆಯುವುದಕ್ಕಾಗಿಯೂ ಸ್ತುತಿಸುತ್ತಾರೆ.

English Translation.

The Gotamas glorify you, Indra, with praise, that you may grant wealth, and for the sake of abundant food

॥ ಸಂಹಿತಾಪಾಠಃ ॥

ಪ್ರ ತೇ ವೋಚಾಮ ವೀರ್ಯಾ ಯಾ ಮಂದಸಾನ ಆರುಜಃ ।
ಪುರೋ ದಾಸೀರಭೀತ್ಯ ॥ ೧೦ ॥

॥ ಪದಪಾಠಃ ॥

ಪ್ರ । ತೇ । ವೋಚಾಮ । ವೀರ್ಯಾ । ಯಾಃ । ಮಂದಸಾನಃ । ಆ । ಆರುಜಃ ।
ಪುರಃ । ದಾಸೀಃ । ಅಭಿ॒ಇತ್ಯ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಮಂದಸಾನಃ ಸೋಮೇನ ಮೋದಮಾನಸ್ತ್ವಂ ದಾಸೀಃ ಕ್ಷೇಪ್ತ್ರೀರಸುರಸ್ಯ ಸ್ವಭೂತಾ ಯಾಃ ಪುರೋ ಯಾನಿ ನಗರಾಣ್ಯಭೀತ್ಯಾಭಿಗಮ್ಯಾರುಜಃ । ಆ ಸಮಂತಾದಭಾಂಕ್ಷೀಃ । ಹೇ ಇಂದ್ರ ತೇ ತ್ವದೀಯಾನಿ ತತ್ರತ್ಯಾನಿ ವೀರ್ಯಾ ವೀರ್ಯಾಣಿ ವಯಂ ಸ್ತೋತಾರಃ ಪ್ರ ವೋಚಾಮ । ಪ್ರಕರ್ಷೇಣ ವದಾಮ ॥

॥ ಪ್ರತಿಪದಾರ್ಥ ॥

(ಇಂದ್ರ--ಎಲೈ ಇಂದ್ರನೇ) । **ಮಂದಸಾನಃ**—ಸೋಮಪಾನದಿಂದ ಹರ್ಷಿತನಾದ ನೀನು । **ದಾಸೀಃ**—ಕಂಟಕರಾದ ಅಸುರರಿಗೆ ಸೇರಿದ । **ಯಾಃ**—ಯಾವ । **ಪುರಃ**—ಪಟ್ಟಣಗಳನ್ನು । **ಅಭೀತ್ಯ**—ಎದುರಿಸಿ ಹೋಗಿ । **ಆ ಆರುಜಃ**—ಅವುಗಳನ್ನು ಪೂರ್ಣವಾಗಿ ನಾಶಮಾಡಿದೆಯೋ । **ತೇ**—ಅಂತಹ ನಿನ್ನ । **ವೀರ್ಯಾ**—ಸಾಹಸಕರ್ಮಗಳನ್ನು । **ಪ್ರ ವೋಚಾಮ**—ನಾವು ಪೂರ್ಣವಾಗಿ ವರ್ಣಿಸಿ ಸ್ತುತಿಸುತ್ತೇವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಸೋಮಪಾನದಿಂದ ಹರ್ಷಿತನಾದ ನೀನು ಕಂಟಕರಾದ ಅಸುರರಿಗೆ ಸೇರಿದ ಯಾವ ಪಟ್ಟಣಗಳನ್ನು ಎದುರಿಸಿ ಹೋಗಿ ಅವುಗಳನ್ನು ಪೂರ್ಣವಾಗಿ ನಾಶಮಾಡಿದೆಯೋ, ಅಂತಹ ನಿನ್ನ ವೀರ್ಯಕರ್ಮಗಳನ್ನು ನಾವು ಪೂರ್ಣವಾಗಿ ವರ್ಣಿಸುತ್ತಾ ಸ್ತುತಿಸುತ್ತೇವೆ

English Translation.

We proclaim your prowess, whereby exhilarated (by the Soma), and having gone against them, you have demolished the servile cities.

॥ ಸಂಹಿತಾಪಾಠಃ ॥

ತಾ ತೇ ಗೃಣಂತಿ ವೇಧಸೋ ಯಾನಿ ಚಕರ್ಥ ಪೌಂಸ್ಯಾ ।
ಸುತೇಷ್ವಿಂದ್ರ ಗಿರ್ವಣಃ ॥ ೧೧ ॥

॥ ಪದಪಾಠಃ ॥

ತಾ । ತೇ । ಗೃಣಂತಿ । ವೇಧಸಃ । ಯಾನಿ । ಚಕರ್ಥ । ಪೌಂಸ್ಯಾ ।
ಸುತೇಷು । ಇಂದ್ರ । ಗಿರ್ವಣಃ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಗಿರ್ವಣೋ ಗಿರಾಂ ಸ್ತುತಿರೂಪಾಣಾಂ ವಾಚಾಂ ಸಂಭಕ್ತ್ರ ತ್ವಂ ಯಾನಿ ಪೌಂಸ್ಯಾ ಪೌಂಸ್ಯಾನಿ ಬಲಾನಿ ಚಕರ್ಥ । ಕೃತವಾನಸಿ । ಹೇ ಇಂದ್ರ ವೇಧಸಃ ಪ್ರಾಜ್ಞಾಃ ಸುತೇಷ್ವಭಿಷುತೇಷು ಸೋಮೇಷು ತೇ ತ್ವದೀಯಾನಿ ತಾ ತಾನಿ ಬಲಾನಿ ಗೃಣಂತಿ । ಕೀರ್ತಯಂತಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಗಿರ್ವಣಃ**—ಸ್ತುತಿಗೆ ಪಾತ್ರನಾದ ನೀನು । **ಯಾನಿ**—ಯಾವ ಯಾವ । **ಪೌಂಸ್ಯಾ**—ಪುರುಷಲಕ್ಷಣವನ್ನು ಸೂಚಿಸುವ ವೀರ್ಯಕರ್ಮಗಳನ್ನು । **ಚಕರ್ಥ**—ಮಾಡಿದ್ದೀಯೋ । **ತೇ**—ಅಂತಹ । **ತಾ**—ನಿನ್ನ ವೀರ್ಯಕರ್ಮಗಳನ್ನು । **ವೇಧಸಃ**—ಪ್ರಾಜ್ಞರು । **ಸುತೇಷು**—ಸೋಮವನ್ನು ಹಿಂಡಿ ಅರ್ಪಿಸುವ ಕಾಲದಲ್ಲಿ । **ಗೃಣಂತಿ**—ಸ್ತುತಿಸುತ್ತಾರೆ

॥ ಭಾವಾರ್ಥ ॥

ಎಲೈ ಇಂದ್ರನೇ, ಸ್ತುತಿಗೆ ಪಾತ್ರನಾದ ನೀನು ಯಾವ ಯಾವ ಪುರುಷಲಕ್ಷಣವನ್ನು ಸೂಚಿಸುವ ವೀರ್ಯಕರ್ಮಗಳನ್ನು ಮಾಡಿದ್ದಿಯೋ, ಅಂತಹ ನಿನ್ನ ವೀರ್ಯಕರ್ಮಗಳನ್ನು ಪ್ರಾಜ್ಞರು ಸೋಮವನ್ನು ಹಿಂಡಿ ನಿನಗೆ ಅರ್ಪಿಸುವ ಕಾಲದಲ್ಲಿ ಸ್ತುತಿಸುತ್ತಾರೆ

English Translation.

The pious celebrate your manly exploits, Indra, object of laudation when the juices (of the Soma) are effused

॥ ಸಂಹಿತಾಪಾಠಃ ॥

ಅವೀವೃಧಂತ ಗೋತಮಾ ಇಂದ್ರ ತ್ವೇ ಸ್ತೋಮವಾಹಸಃ ।
ಏಷು ಧಾ ವೀರವದ್ಯಶಃ ॥ ೧೨ ॥

॥ ಪದಪಾಠಃ ॥

ಅವೀವೃಧಂತ । ಗೋತಮಾಃ । ಇಂದ್ರ । ತ್ವೇ ಇತಿ । ಸ್ತೋಮವಾಹಸಃ ॥
ಆ । ಏಷು । ಧಾಃ । ವೀರವತ್ । ಯಶಃ ॥ ೧೨ ॥

॥ ಸಾಯಣಭಾಷ್ಯಂ ॥

ಸ್ತೋಮವಾಹಸಃ ಸ್ತೋಮಾನಾಂ ಸ್ತೋತ್ರಾಣಾಂ ವೋಢಾರೋ ಗೋತಮಾ ಋಷಯೋ ಹೇ ಇಂದ್ರ ತ್ವೇ ತ್ವಾಮವೀವೃಧಂತ । ಸ್ತೋತ್ರೈರ್ವರ್ಧಯಂತಿ । ತ್ವಮೇಷು ಗೋತಮೇಷು ವೀರವತ್ಪುತ್ರ-ಪೌತ್ರಾದಿಯುಕ್ತಂ ಯಶೋಽನ್ನಮಾ ಧಾಃ । ನಿಧೇಹಿ ॥

॥ ಪ್ರತಿಪದಾರ್ಥ ॥

ಇಂದ್ರ—ಇಂದ್ರನೇ । **ಸ್ತೋಮವಾಹಸಃ**—ಸ್ತುತಿಗಳನ್ನು ನಿರ್ಮಿಸಿ ಅರ್ಪಿಸತಕ್ಕ । **ಗೋತಮಾಃ**—ಗೋತಮ ಋಷಿಗಳು । **ತ್ವೇ**—ನಿನ್ನನ್ನು । **ಅವೀವೃಧಂತ**—ಅನೇಕ ವಿಧದಲ್ಲಿ ಸ್ತುತಿಸುತ್ತಾನೆ । **ಏಷು**—ಈ ಗೋತಮರಲ್ಲಿ । **ವೀರವತ್**—ಬಲಶಾಲಿಗಳಾದ ಪುತ್ರಪೌತ್ರಾದಿಗಳಿಂದ ಕೂಡಿದ । **ಯಶಃ**—ಅನ್ನವನ್ನು । **ಆ ಧಾಃ**—ತುಂಬಿಕೊಡು

॥ ಭಾವಾರ್ಥ ॥

ಎಲೈ ಇಂದ್ರನೇ, ಸ್ತುತಿಗಳನ್ನು ನಿರ್ಮಿಸಿ ಅರ್ಪಿಸತಕ್ಕ ಗೋಮತಋಷಿಗಳು ನಿನ್ನನ್ನು ಅನೇಕ ವಿಧದಲ್ಲಿ ಸ್ತುತಿಸುತ್ತಾರೆ ಈ ಗೋತಮರಲ್ಲಿ ವೀರ್ಯವಂತರಾದ ಪುತ್ರಪೌತ್ರಾದಿಗಳನ್ನೂ, ಅನ್ನವನ್ನೂ ಒದಗಿಸಿಕೊಡು.

English Translation.

The Gotamas, offerers of praise, exalt you, Indra, bestow upon them food and posterity.

॥ ಸಂಹಿತಾಪಾಠಃ ॥

ಯಚ್ಚಿದ್ಧಿ ಶಶ್ವತಾಮಸೀಂದ್ರ ಸಾಧಾರಣಸ್ತ್ವಂ ।
ತಂ ತ್ವಾ ವಯಂ ಹವಾಮಹೇ ॥ ೧೩ ॥

॥ ಪದಪಾಠಃ ॥

ಯತ್ । ಚಿತ್ । ಹಿ । ಶಶ್ವತಾಂ । ಅಸಿ । ಇಂದ್ರ । ಸಾಧಾರಣಃ । ತ್ವಂ ।
ತಂ । ತ್ವಾ । ವಯಂ । ಹವಾಮಹೇ ॥ ೧೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಯಚ್ಚಿದ್ಧಿ ಯದ್ಯಪಿ ಖಲು ಶಶ್ವತಾಂ ಬಹೂನಾಂ ಸರ್ವೇಷಾಂ ಯಜಮಾನಾನಾಂ ಸಾಧಾರಣೋಽಸಿ । ಸಾಮಾನ್ಯೋ ಭವಸಿ । ತಥಾಪಿ ತಮೇವ ತ್ವಾ ತ್ವಾಂ ವಯಂ ಸ್ತೋತಾರೋ ಹವಾಮಹೇ । ಆಹ್ವಯಾಮಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಯಚ್ಚಿದ್ಧಿ—ಒಂದುವೇಳೆ । ತ್ವಂ—ನೀನು । ಶಶ್ವತಾಂ—ಅನೇಕ ಯಜಮಾನರಿಗೆ । ಸಾಧಾರಣಃ—ಒಂದೇರೀತಿಯಲ್ಲಿ ಆರಾಧ್ಯನಾಗಿದ್ದರೂ ಸಹ । ತಂ ತ್ವಾ—ಎಲ್ಲರಿಗೂ ಬೇಕಾದ ನಿನ್ನನ್ನು । ವಯಂ—ನಾವು । ಹವಾಮಹೇ—(ನಮಗೆ ಸಹಾಯಮಾಡಲೆಂದು ಮಾತ್ರ) ಪ್ರಾರ್ಥಿಸಿ ಕರೆಯುತ್ತೇವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಸಕಲ ಯಜಮಾನರಿಗೂ ಬೇಕಾದವನು. ಎಲ್ಲರಿಗೂ ಪೂಜ್ಯನು. ಹಾಗಿದ್ದರೂ ಸಹ ನೀನು ನಮಗೆ ಮಾತ್ರ ಸಹಾಯಮಾಡಬೇಕೆಂದು ನಾವು ನಿನ್ನನ್ನು ಪೂಜಿಸಿ ಕರೆಯುತ್ತೇವೆ.

English Translation.

Although, Indra, you are the common property of (all) worshippers we invoke you (such) as you are (for ourselves).

॥ ಸಂಹಿತಾಪಾಠಃ ॥

ಅರ್ವಾಚೀನೋ ವಸೋ ಭವಾಸ್ಮೇ ಸು ಮತ್ಸ್ವಾಂಧಸಃ ।

ಸೋಮಾನಾಮಿಂದ್ರ ಸೋಮಪಾಃ ॥ ೧೪ ॥

॥ ಪದಪಾಠಃ ॥

ಅರ್ವಾಚೀನಃ । ವಸೋ ಇತಿ । ಭವ । ಅಸ್ಮೇ ಇತಿ । ಸು । ಮತ್ಸ್ವ । ಅಂಧಸಃ ।

ಸೋಮಾನಾಂ । ಇಂದ್ರ । ಸೋಮಪಾಃ ॥ ೧೪ ॥

॥ ಸಾಯಣಭಾಷ್ಯಂ ॥

ಹೇ ವಸೋ ಯಜ್ಞನಿವಾಸಕೇಂದ್ರ ತ್ವಮಸ್ಮೇ ಅಸ್ಮಾಸು ಯಜಮಾನೇಷ್ವರ್ವಾಚೀನೋಽಭಿಮುಖೋ ಭವ । ತಥಾ ಹೇ ಸೋಮಪಾಃ ಸೋಮಾನಾಂ ಪಾತರಿಂದ್ರ ತ್ವಂ ಸೋಮಾನಾಮಂಧಸೋಽನ್ನೇನ ಸು ಸುಷ್ಠು ಮತ್ಸ್ವ । ಮಾದ್ಯ ॥

॥ ಪ್ರತಿಪದಾರ್ಥ ॥

ವಸೋ—ಯಜ್ಞಸ್ಥಾನವನ್ನು ಕಲ್ಪಿಸಿಕೊಡತಕ್ಕ ಎಲೈ ಇಂದ್ರನೇ । **ಅಸ್ಮೇ**—ಯಜಮಾನರಾದ ನಮ್ಮಲ್ಲಿ । **ಅರ್ವಾಚೀನಃ**—ನಮಗೆ ಅಭಿಮುಖನಾಗಿ । **ಭವ**—ಆಗಿರು । **ಸೋಮಪಾಃ**—ಸೋಮರಸವನ್ನು ಪಾನಮಾಡತಕ್ಕ । **ಇಂದ್ರ**—ಇಂದ್ರನೇ । **ಸೋಮಾನಾಂ**—ಸೋಮಗಳ । **ಅಂಧಸಃ**—ರಸರೂಪವಾದ ಅನ್ನಗಳ ಪಾನದಿಂದ । **ಸು**—ಅಧಿಕವಾಗಿ । **ಮತ್ಸ್ವ**—ಹರ್ಷಿತನಾಗು.

॥ ಭಾವಾರ್ಥ ॥

ಯಜ್ಞಸ್ಥಾನವನ್ನು ಕಲ್ಪಿಸಿಕೊಡತಕ್ಕ ಎಲೈ ಇಂದ್ರನೇ, ಯಜಮಾನರಾದ ನಮ್ಮಲ್ಲಿಯೇ ನಮಗಭಿಮುಖನಾಗಿರು. ಸೋಮಪಾನಮಾಡತಕ್ಕ ಇಂದ್ರನೇ, ಸೋಮಗಳ ರಸರೂಪವಾದ ಅನ್ನಗಳ ಪಾನದಿಂದ ಅಧಿಕವಾಗಿ ಹರ್ಷಿತನಾಗು

English Translation

Giver of dwellings, be present with us, drinker of the Soma, be exilarated by the beverage of the juices

॥ ಸಂಹಿತಾಪಾಠಃ ॥

ಅಸ್ಮಾಕಂ ತ್ವಾ ಮತೀನಾಮಾ ಸ್ತೋಮ ಇಂದ್ರ ಯಚ್ಛತು ।
ಅರ್ವಾಗಾ ವರ್ತಯಾ ಹರೀ ॥ ೧೫ ॥

॥ ಪದಪಾಠಃ ॥

ಅಸ್ಮಾಕಂ । ತ್ವಾ । ಮತೀನಾಂ । ಆ । ಸ್ತೋಮಃ । ಇಂದ್ರ । ಯಚ್ಛತು ।
ಅರ್ವಾಕ್ । ಆ । ವರ್ತಯ । ಹರೀ ಇತಿ ॥ ೧೫ ॥

॥ ಸಾಯಣಭಾಷ್ಯಂ ॥

ಮತೀನಾಂ ಸ್ತೋತೄಣಾಂ ॥ ಮನ್ಯತೇಃ ಕರ್ತರಿ ಕ್ತಿಚ್ ॥ ಅಸ್ಮಾಕಂ ಸಂಬಂಧಿ ಸ್ತೋಮಃ ಸ್ತೋತ್ರಂ ಹೇ ಇಂದ್ರ ತ್ವಾ ತ್ವಾಮಾ ಯಚ್ಛತು । ಅಸ್ಮಾಸು ನಿಯಚ್ಛತು । ತ್ವಮಪಿ ಹರೀ ತ್ವದೀಯಾವಶ್ವಾವರ್ವಾಗಸ್ಮದಭಿಮುಖಂ ಯಥಾ ಭವತಿ ತಥಾ ಆ ವರ್ತಯ । ಪರಿವರ್ತನಂ ಕುರು ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಮತೀನಾಂ—ಸ್ತೋತೃಗಳಾದ । ಅಸ್ಮಾಕಂ—ನಮ್ಮ । ಸ್ತೋಮಂ—ಸ್ತುತಿಯು । ತ್ವಾ—ನಿನ್ನನ್ನು । ಆ ಯಚ್ಛತು—ನಮ್ಮಲ್ಲೇ ಇರಿಸಲಿ । (ಎಲೈ ಇಂದ್ರನೇ) ಹರೀ—ಹರಿನಾಮಕಗಳಾದ ನಿನ್ನ ಅಶ್ವಗಳನ್ನು । ಅರ್ವಾಕ್—ನಮಗೆ ಅಭಿಮುಖಗಳಾಗುವಂತೆ । ಆ ವರ್ತಯ—ತಿರಿಗಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ಸ್ತುತಿಕರ್ತರಾದ ನಮ್ಮ ಸ್ತೋತ್ರವು ನಿನ್ನನ್ನು ಯಾವಾಗಲೂ ನಮ್ಮಲ್ಲೇ ಇರಿಸಲಿ. ಹರಿನಾಮಕಗಳಾದ ನಿನ್ನ ಅಶ್ವಗಳನ್ನು ನಮಗೆ ಅಭಿಮುಖಗಳಾಗುವಂತೆ ತಿರುಗಿಸು.

English Translation.

May the praise (of us) who are devoted (to you) Indra, give you to us: guide your horses towards us.

॥ ಸಂಹಿತಾಪಾಠಃ ॥

ಪುರೋಳಾಶಂ ಚ ನೋ ಘಸೋ ಜೋಷಯಾಸೇ ಗಿರಶ್ಚ ನಃ ।
ವಧೂಯುರಿವ ಯೋಷಣಾಂ ॥ ೧೬ ॥

॥ ಪದಪಾಠಃ ॥

ಪುರೋಳಾಶಂ । ಚ । ನಃ । ಘಸಃ । ಜೋಷಯಾಸೇ । ಗಿರಃ । ಚ । ನಃ ।
ವಧೂಯುಃ ಇವ । ಯೋಷಣಾಂ ॥ ೧೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ನೋಽಸ್ಮದೀಯಂ ಪುರೋಳಾಶಂ ಚ ಪುರೋಡಾಶರೂಪಮನ್ನಂ ಚ ಘಸಃ । ಅದ್ಧಿ । ತಥಾ ನೋಽಸ್ಮದೀಯಾ ಗಿರಶ್ಚ ಸ್ತುತಿರೂಪಾ ವಾಚಶ್ಚ ಜೋಷಯಾಸೇ । ಸೇವಸ್ವ । ತತ್ರ ದೃಷ್ಟಾಂತಃ । ವಧೂಯುರಿವ । ಸ್ತ್ರೀಕಾಮೋ ಯಥಾ ಯೋಷಣಾಂ ಸ್ತ್ರೀಣಾಂ ಗಿರಃ ಸೇವತೇ ತದ್ವತ್ ॥

॥ ಪ್ರತಿಪದಾರ್ಥ ॥

(ಇಂದ್ರ— ಎಲೈ ಇಂದ್ರನೇ) । ನಃ—ನಮ್ಮಿಂದ ಅರ್ಪಿತವಾದ । ಪುರೋಳಾಶಂ ಚ—ಪುರೋಡಾಶ ರೂಪವಾದ ಅನ್ನವನ್ನೂ ಸಹ । ಘಸಃ—ಭುಜಿಸು । ಯೋಷಣಾಂ—ಸ್ತ್ರೀಯ ಮಾತುಗಳನ್ನು । ವಧೂಯುಃ ಇವ—ಸ್ತ್ರೀಕಾಮನಾದ ಪುರುಷನು ಯಾವ ರೀತಿ ಆದರದಿಂದ ಕೇಳುತ್ತಾನೋ ಆ ರೀತಿಯಲ್ಲಿ । ಗಿರಶ್ಚ—ನಮ್ಮ ಸ್ತುತಿವಾಕ್ಯಗಳನ್ನೂ ಸಹ । ಜೋಷಯಾಸೇ—ಆದರದಿಂದ ಸೇವಿಸು.

॥ ಭಾವಾರ್ಥ ॥

ಎಲ್ಲೆ ಇಂದ್ರನೇ, ನಮ್ಮಿಂದ ಅರ್ಪಿತವಾದ ಪುರೋಡಾಶರೂಪವಾದ ಅನ್ನವನ್ನು ಭುಜಿಸು ಸ್ತ್ರೀಕಾಮನಾದ ಪುರುಷನು ಸ್ತ್ರೀಯ ಮಾತುಗಳನ್ನು ಆದರಿಸಿ ಕೇಳುವಂತೆ ನೀನೂ ಸಹ ನಮ್ಮ ಸ್ತುತಿವಾಕ್ಯಗಳನ್ನು ಆದರಿಸಿ ಸೇವಿಸು.

English Translation.

Eat (Indra) our cakes and butter, be pleased by our praise as a libertine (by the caresses) of a woman.

॥ ಸಂಹಿತಾಪಾಠಃ ॥

ಸಹಸ್ರಂ ವ್ಯತೀನಾಂ ಯುಕ್ತಾನಾಮಿಂದ್ರಮೀಮಹೇ ।
ಶತಂ ಸೋಮಸ್ಯ ಖಾರ್ಯಃ ॥ ೧೭ ॥

॥ ಪದಪಾಠಃ ॥

ಸಹಸ್ರಂ । ವ್ಯತೀನಾಂ । ಯುಕ್ತಾನಾಂ । ಇಂದ್ರಂ । ಈಮಹೇ ।
ಶತಂ । ಸೋಮಸ್ಯ । ಖಾರ್ಯಃ ॥ ೧೭ ॥

॥ ಸಾಯಣಭಾಷ್ಯಂ ॥

ವಯಂ ಸ್ತೋತಾರ ಇಂದ್ರಂ ಪರಮೈಶ್ವರ್ಯಯುಕ್ತಂ ಯುಕ್ತಾನಾಂ ಶಿಕ್ಷಿತಾನಾಂ ವ್ಯತೀನಾಂ ಗಮನವತಾಮಶ್ವಾನಾಂ ಸಹಸ್ರಂ ಸಹಸ್ರಸಂಖ್ಯಾಕಮೀಮಹೇ । ಯಾಚಾಮಹೇ । ತಥಾ ಸೋಮಸ್ಯಾಭಿಷುತಸೋಮಸ್ಯ ಶತಂ ಶತಸಂಖ್ಯಾಕಾಃ ಖಾರ್ಯಃ ಖಾರೀರೀಮಹೇ । ಅತ್ರ ಮಾನವಿಶೇಷವಾಚಿನಾ ಖಾರೀಶಬ್ದೇನ ದ್ರೋಣಕಲಶ ಉಪಲಕ್ಷ್ಯತೇ । ಆಪರಿಮಿತದ್ರೋಣಕಲಶಾನ್ ಬಹೂನ್ಯಜ್ಞಾನ್ಯಾಚಾಮ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

ಇಂದ್ರಂ—ಇಂದ್ರನನ್ನು । **ಯುಕ್ತಾನಾಂ**—ಶಿಕ್ಷಿತವಾದವೂ । **ವ್ಯತೀನಾಂ**—ಶೀಘ್ರವಾಗಿ ಸಂಚರಿಸತಕ್ಕವೂ ಆದ ಅಶ್ವಗಳ । **ಸಹಸ್ರಂ**—ಸಹಸ್ರ ಸಂಖ್ಯೆಯನ್ನು । **ಈಮಹೇ**—ಯಾಚಿಸುತ್ತೇವೆ । **ಸೋಮಸ್ಯ**—ಹಿಂಡಿದ ಸೋಮವನ್ನು ತುಂಬಿರುವ । **ಶತಂ**—ಶತಸಂಖ್ಯಾಕವಾದ । **ಖಾರ್ಯಃ**—ದ್ರೋಣಕಲಶಗಳನ್ನೂ ಯಾಚಿಸುತ್ತೇವೆ

॥ ಭಾವಾರ್ಥ ॥

ಸುಶಿಕ್ಷಿತವಾದವೂ, ಶೀಘ್ರವಾಗಿ ಸಂಚರಿಸತಕ್ಕವೂ ಆದ ಸಹಸ್ರ ಅಶ್ವಗಳಿಗಾಗಿ ನಾವು ಇಂದ್ರನನ್ನು ಯಾಚಿಸುತ್ತೇವೆ ಸೋಮರಸವನ್ನು ತುಂಬಿರುವ ನೂರು ದ್ರೋಣಕಲಶಗಳಿಗಾಗಿಯೂ ನಾವು ಅವನನ್ನು ಯಾಚಿಸುತ್ತೇವೆ

English Translation.

We solicit, Indra for a thousand well-trained, swift-going horses, for a hundred jars of Soma juice.

॥ ಸಂಹಿತಾಪಾಠಃ ॥

ಸಹಸ್ರಾ ತೇ ಶತಾ ವಯಂ ಗವಾಮಾ ಚ್ಯಾವಯಾಮಸಿ ।

ಅಸ್ಮತ್ರಾ ರಾಧ ಏತು ತೇ ॥ ೧೪ ॥

॥ ಪದಪಾಠಃ ॥

ಸಹಸ್ರಾ । ತೇ । ಶತಾ । ವಯಂ । ಗವಾಂ । ಆ । ಚ್ಯವಯಾಮಸಿ ।

ಅಸ್ಮತ್ರಾ । ರಾಧಃ । ಏತು । ತೇ ॥ ೧೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತ್ವದೀಯಾನಿ ಗವಾಂ ಸಹಸ್ರಾ ಸಹಸ್ರಸಂಖ್ಯಾಕಾನಿ ಶತಾ ಶತಸಂಖ್ಯಾಕಾನಿ ಚಾ ಚ್ಯಾವಯಾಮಸಿ । ಆಚ್ಯಾವಯಾಮಃ । ಅಸ್ಮದಭಿಮುಖಂ ಕುರ್ಮಃ । ತಥಾಸ್ಮತ್ರಾ ಅಸ್ಮಾಸು ತ್ವದೀಯಂ ರಾಧೋ ಧನಂ ತೇ ತ್ವತ್ತ ಏತು । ಆಗಚ್ಛತು ॥

॥ ಪ್ರತಿಪದಾರ್ಥ ॥

(**ಇಂದ್ರ**—ಎಲೈ ಇಂದ್ರನೇ) । **ತೇ**—ನಿನಗೆ ಸೇರಿದ । **ಗವಾಂ**—ಗೋವುಗಳ । **ಸಹಸ್ರಾ**—ಸಹಸ್ರ ಸಂಖ್ಯೆಯನ್ನೂ । **ಶತಾ**—ಶತಸಂಖ್ಯೆಯನ್ನೂ । **ಆ ಚ್ಯಾವಯಾಮಸಿ**—ನಿನ್ನಿಂದ ತಿರುಗಿಸಿ ನಮ್ಮ ಅಭಿಮುಖ ವಾಗಿ ಬರುವಂತೆ ಮಾಡುತ್ತೇವೆ । **ಅಸ್ಮತ್ರಾ**—ನಮ್ಮಲ್ಲಿ । **ರಾಧಃ**—(ನಿನ್ನ) ಧನವು । **ತೇ**—ನಿನ್ನಿಂದ **ಏತು**—ಬಂದಿರಲಿ

॥ ಭಾವಾರ್ಥ ॥

ಎಲೈ ಇಂದ್ರನೇ, ನಿನಗೆ ಸೇರಿದ ನೂರಾರು ಮತ್ತು ಸಾವಿರಾರು ಗೋವುಗಳೂ ಸಹ ನಮ್ಮಲ್ಲಿಗೆ ಬಂದಿರು ವಂತೆ ಮಾಡುತ್ತೇವೆ. ನಿನ್ನ ಧನವೆಲ್ಲವೂ ನಮ್ಮಲ್ಲೇ ಬಂದಿರಲಿ

English Translation.

We seek to bring down from you thousands and hundreds of cattle; may riches come to us from you.

॥ ಸಂಹಿತಾಪಾಠಃ ॥

ದಶ ಕೇ ಕಲಶಾನಾಂ ಹಿರಣ್ಯಾನಾಮಧೀಮಹಿ ।
ಭೂರಿದಾ ಅಸಿ ವೃತ್ರಹನ್ ॥ ೧೯ ॥

॥ ಪದಪಾಠಃ ॥

ದಶ । ತೇ । ಕಲಶಾನಾಂ । ಹಿರಣ್ಯಾನಾಂ । ಅಧೀಮಹಿ ।
ಭೂರಿದಾಃ । ಅಸಿ । ವೃತ್ರಹನ್ ॥ ೧೯ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತ್ವತ್ತಃ ಕಲಶಾನಾಂ ಕುಂಭಾನಾಂ । ಕುಂಭಪರಿಮಿತಾನಾಮಿತಿ ಯಾವತ್ । ಹಿರಣ್ಯಾನಾಂ ಹಿತರಮಣೀಯಾನಾಂ ಧನಾನಾಂ ದಶ ದಶಸಂಖ್ಯಾಕಾನ್ಯಧೀಮಹಿ । ಧಾರಯಾಮಃ । ಹೇ ವೃತ್ರಹನ್ವೃತ್ರಾಣಾಂ ಶತ್ರೂಣಾಂ ಹಿಂಸಕೇಂದ್ರ ತ್ವಂ ಭೂರಿದಾ ಅಸಿ । ಬಹುಪ್ರದೋ ಭವಸಿ ॥

॥ ಪ್ರತಿಪದಾರ್ಥ ॥

ಇಂದ್ರಃ—(ಎಲೈ ಇಂದ್ರನೇ) । **ತೇ**—ನಿನ್ನಿಂದ । **ಹಿರಣ್ಯಾನಾಂ**—ಸುವರ್ಣರೂಪವಾದ ಧನಗಳಿಂದ ತುಂಬಿದ । **ಕಲಶಾನಾಂ**—ಕುಂಭಗಳ । **ದಶ**—ದಶ (ಹತ್ತು) ಸಂಖ್ಯೆಯನ್ನು । **ಅಧೀಮಹಿ**—ಹೊಂದುತ್ತೇನೆ । **ವೃತ್ರಹನ್**—ಶತ್ರುಹಿಂಸಕನಾದ ಎಲೈ ಇಂದ್ರನೇ । **ಭೂರಿದಾಃ**—(ನೀನು) ಉದಾರಿಯಾದ ದಾತೃವಾಗಿ । **ಅಸಿ**—ಆಗಿದ್ದೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಸುವರ್ಣರೂಪವಾದ ಧನಗಳಿಂದ ತುಂಬಿದವೂ ದಶಸಂಖ್ಯಾಕವೂ ಆದ ಕುಂಭಗಳನ್ನು ನಿನ್ನಿಂದ ಹೊಂದುತ್ತೇನೆ. ಶತ್ರುಹಿಂಸಕನಾದ ಎಲೈ ಇಂದ್ರನೇ, ನೀನು ಅತ್ಯುದಾರಿಯಾದ ದಾತೃವಾಗಿದ್ದೀಯೇ

English Translation.

May we obtain from you, ten golden ewers, for you, slayer of Vritra, are a bountiful giver.

॥ ಸಂಹಿತಾಪಾಠಃ ॥

ಭೂರಿದಾ ಭೂರಿ ದೇಹಿ ನೋ ಮಾ ದಭ್ರಂ ಭೂರ್ಯಾ ಭರ ।

ಭೂರಿ ಘೇದಿಂದ್ರ ದಿತ್ಸಸಿ ॥ ೨೦ ॥

॥ ಪದಪಾಠಃ ॥

ಭೂರಿ॒ದಾಃ । ಭೂರಿ । ದೇ॒ಹಿ । ನ॒ಃ । ಮಾ । ದ॒ಭ್ರಂ । ಭೂರಿ॑ । ಆ । ಭ॒ರ॒ ।

ಭೂರಿ॑ । ಘ॒ । ಇತ್ । ಇಂ॒ದ್ರ॒ । ದಿ॒ತ್ಸ॒ಸಿ ॥ ೨೦ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಭೂರಿದಾ ಬಹುಪ್ರದಸ್ತ್ವಂ ಭೂರಿ ಬಹು ಧನಂ ನೋಽಸ್ಮಭ್ಯಂ ದೇಹಿ । ಪ್ರಯಚ್ಛ । ಕಿಂತು ದಭ್ರಮಲ್ಪಂ ಧನಂ ಮಾ ಪ್ರಯಚ್ಛ । ಭೂರಿ ಬಹುಲಂ ಧನಮಸ್ಮಭ್ಯಮಾ ಭರ । ಆಹರ । ಕಿಂಚ ಭೂರೀತ್ ಅದಭ್ರಮೇವ ಧನಂ ದಿತ್ಸಸಿ ಘ । ಅಸ್ಮಭ್ಯಂ ದಾತುಮಿಚ್ಛಸಿ ಖಲು ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಭೂರಿದಾಃ**— ಉದಾರವಾಗಿ ಕೊಡತಕ್ಕ ನೀನು । **ಭೂರಿ**—ಅಧಿಕವಾದ ಧನವನ್ನು । **ನಃ**—ನಮಗೆ । **ದೇಹಿ**—ಕೊಡು । **ದಭ್ರಂ**—ಅಲ್ಪವಾದ ಧನವನ್ನು । **ಮಾ (ಪ್ರಯಚ್ಛ)**—ಕೊಡಬೇಡ । **ಭೂರಿ**—ಅಧಿಕವಾದ ಧನವನ್ನು । **ಆ ಭರ**—ನಮಗಾಗಿ ತೆಗದುಕೊಂಡು ಬಾ । **ಭೂರಿ ಇತಿ**—ಅಧಿಕವಾದ ಧನವನ್ನೇ । **ದಿತ್ಸಸಿ ಘ**—ನೀನು ಕೊಡುವವನೆಂದು ಪ್ರಸಿದ್ಧನಾಗಿದ್ದೀಯಲ್ಲವೇ ?

॥ ಭಾವಾರ್ಥ ॥

ಎಲೈ ಇಂದ್ರನೇ, ಉದಾರಿಯಾದ ನೀನು ನಮಗೆ ಅಧಿಕವಾದ ಧನವನ್ನು ಕೊಡು ಅಲ್ಪವಾದ ಧನವನ್ನು ಕೊಡಬೇಡ ನಮಗಾಗಿ ಅಧಿಕವಾದ ಧನವನ್ನು ತೆಗೆದುಕೊಂಡು ಬಾ ಅಧಿಕವಾಗಿಯೇ ಧನವನ್ನು ಕೊಡುವವನೆಂದು ನೀನು ಪ್ರಸಿದ್ಧನಾಗಿದ್ದೀಯೆ

English Translation

A bountiful giver are you, Indra give bountifully to us, (give) not little, bring much, for verily you desire to give much

॥ ಸಂಹಿತಾಪಾಠಃ ॥

ಭೂರಿದಾ ಹ್ಯಸಿ ಶ್ರುತಃ ಪುರುತ್ರಾ ಶೂರ ವೃತ್ರಹನ್ ।
ಆ ನೋ ಭಜಸ್ವ ರಾಧಸಿ ॥ ೨೧ ॥

॥ ಪದಪಾಠಃ ॥

ಭೂರಿದಾಃ । ಹಿ । ಅಸಿ । ಶ್ರುತಃ । ಪುರುತ್ರಾ । ಶೂರ । ವೃತ್ರಹನ್ ।
ಆ । ನಃ । ಭಜಸ್ವ । ರಾಧಸಿ ॥ ೨೧ ॥

॥ ಸಾಯಣಭಾಷ್ಯಂ ॥

ಹೇ ವೃತ್ರಹನ್ವೃತ್ರಸ್ಯ ಹಿಂಸಕ ಶೂರ ವಿಕ್ರಾಂತೇಂದ್ರ ಭೂರಿದಾ ಬಹುಪ್ರದಸ್ತ್ವಂ ಪುರುತ್ರಾ ಪುರುಷು ಬಹುಷು ಯಜಮಾನೇಷು ಶ್ರುತೋಽಸಿ ಹಿ । ವಿಖ್ಯಾತೋ ಭವಸಿ ಖಲು । ರಾಧಸಿ ಧನೇ ನೋಽಸ್ಮಾನಾ ಭಜಸ್ವ । ಆ ಸಮಂತಾದ್ಭಾಗಿನಃ ಕುರು ॥

॥ ಪ್ರತಿಪದಾರ್ಥ ॥

ವೃತ್ರಹನ್—ವೃತ್ರಹಂತಕನೂ । **ಶೂರ**—ಪರಾಕ್ರಮಿಯೂ ಆದ ಇಂದ್ರನೇ । **ಭೂರಿದಾಃ**—ನೀನು ಉದಾರಿಯಾದ ದಾನಿಯೆಂದು । **ಪುರುತ್ರಾ**—ಅನೇಕ ಯಜಮಾನರಲ್ಲಿ । **ಶ್ರುತಃ**—ಪ್ರಸಿದ್ಧನಾಗಿ । **ಅಸಿ ಹಿ**—ಇದ್ದೀಯಲ್ಲನೇ । **ರಾಧಸಿ**—ಧನದಲ್ಲಿ । **ನಃ**—ನಮ್ಮನ್ನು । **ಆ ಭಜಸ್ವ**—ಪಾತ್ರರಾಗಿ ಸೇವಿಸುವಂತೆ ಮಾಡು

॥ ಭಾವಾರ್ಥ ॥

ವೃತ್ರಹಂತಕನೂ, ಪರಾಕ್ರಮಿಯೂ ಆದ ಇಂದ್ರನೇ, ನೀನು ಉದಾರಿಯೆಂದು ಅನೇಕ ಯಜಮಾನರಲ್ಲಿ ಪ್ರಸಿದ್ಧನಾಗಿ ಇದ್ದೀಯೆ ನಮ್ಮನ್ನೂ ನಿನ್ನ ಧನಕ್ಕೆ ಪಾತ್ರರನ್ನಾಗಿ ಮಾಡಿ ನಾವೂ ಆದನ್ನು ಸೇವಿಸುವಂತೆ ಮಾಡು

English Translation·

Verily you are renowned amongst many as a bountiful giver, hero, slayer of Vritra, make us sharers in wealth.

॥ ಸಂಹಿತಾಪಾಠ· ॥

ಪ್ರ ತೇ ಬಭ್ರೂ ವಿಚಕ್ಷಣ ಶಂಸಾಮಿ ಗೋಷಣೋ ನಪಾತ್ ।
ಮಾ ಭ್ಯಾಂ ಗಾ ಅನು ಶಿಶ್ರಥಃ ॥ ೨೨ ॥

॥ पदपाठः ॥

प्र । त्वे । बभ्रू इति । विऽचक्षण । शंसामि । गोऽसनः । नसात् ।
मा । आभ्यां । गाः । अनु । शिश्रथः ॥ ३१ ॥

॥ सायणभाष्यं ॥

हे विचक्षण प्राज्ञेन्द्र तेऽत्वदीयौ बभ्रू बभ्रुवर्णावश्वौ प्र शंसामि । प्रकर्षेण स्तौमि । हे गोसनोः गवां सनितर्हे नसात् न सातयितः स्तोत्रन्यविनाशयितः । किंतु पालयितरित्यर्थः । हे इन्द्र त्वमाभ्यां त्वदीयाभ्यामश्वाभ्यां गा अनु अस्मदीया गा लक्षीकृत्य मा शिश्रथः । विनश्वा मा कार्षीः । गावोऽश्वदर्शनाद्विश्लिष्यंते । तन्मा भूदित्यर्थः ॥

॥ प्रतिपदार्थ ॥

विचक्षण—प्राज्ञनाद ಎಲೈ ಇಂದ್ರನೇ । तेे—ನಿನ್ನ । बभ्रू—ಹೊಂಬಣ್ಣದ ಅಶ್ವಗಳನ್ನು । प्र शंसामि—ಅತಿಶಯವಾಗಿ ಸ್ತುತಿಸುತ್ತೇನೆ । गोसनः—ಗೋವುಗಳನ್ನು ಕೊಡುವವನೂ । नसात्—ಸ್ತೋತೃಗಳನ್ನು ಹಿಂಸಿಸದಿರುವವನೂ ಆದ ಇಂದ್ರನೇ । आभ्यां—ನಿನ್ನ ಎರಡು ಅಶ್ವಗಳಿಂದ । गाः अनु—ನಮ್ಮ ಗೋವುಗಳ ಎದುರು ಬಂದು । मा शिश्रथः—ಅವುಗಳನ್ನು ಬೆದರಿಸಬೇಡ

॥ भावार्थ ॥

ಪ್ರಾಜ್ಞನಾದ ಎಲೈಇಂದ್ರನೇ, ನಿನ್ನ ಹೊಂಬಣ್ಣದ ಅಶ್ವಗಳನ್ನು ನಾನು ಅತಿಶಯವಾಗಿ ಸ್ತುತಿಸುತ್ತೇನೆ. ಗೋವುಗಳನ್ನು ಕೊಡುವವನೂ, ಸ್ತೋತೃಗಳನ್ನು ಹಿಂಸಿಸದಿರುವವನೂ ಆದ ಇಂದ್ರನೇ, ನಿನ್ನ ಎರಡು ಅಶ್ವಗಳಿಂದ ಕೂಡಿ ನಮ್ಮ ಗೋವುಗಳಿಗೆ ಎದುರುಬಂದು ಬೆದರಿಸಬೇಡ

English Translation

Wise Indra, I praise your brown (horses), bestower of cows you (are) not regardless (of your worshippers). with those two steeds terrify not our cattle

॥ संहितापाठः ॥

कनीनकेव विद्रधे नवे दुरुपदे अर्भके ।
बभ्रू यामेषु शोभेते ॥ ३२ ॥

॥ ಪದಪಾಠಃ ॥

ಕನೀನಕಾ೨ಇವ । ವಿದ್ರಧೇ । ನವೇ । ದ್ರು೨ಪದೇ । ಅರ್ಭಕೇ ।

ಬಭ್ರೂ ಇತಿ । ಯಾಮೇಷು । ಶೋಭೇತೇ ಇತಿ ॥ ೨೩ ॥

॥ ಸಾಯಣಭಾಷ್ಯಂ ॥

ವಿದ್ರಧೇ ವಿದೃಧೇ ವ್ಯೂಢೇ ನವೇ ನವಜಾತೇ೨ರ್ಭಕೇ೨ಲ್ಪಕೇ ದ್ರುಪದೇ ದ್ರುಮಾಖ್ಯಸ್ಯಾನೇ ಸ್ಥಿತೇ ಕನೀನಕೇವ ಕಮನೀಯೇ ಶಾಲಭಂಜಿಕೇ ಇವ ಹೇ ಇಂದ್ರ ಬಭ್ರೂ ಬಭ್ರುವರ್ಣೌ ಶ್ವದೀಯಾವಶ್ವೌ ಯಾಮೇಷು ಯಜ್ಞೇಷು ಶೋಭೇತೇ । ಕಾಂತಿಯುಕ್ತೌ ಭವತಃ ॥ ಕನೀನಕೇ ಕನ್ಯಕೇ । ಕನ್ಯಾ ಕಮನೀಯಾ ಭವತಿ ಕ್ವೇಯಂ ನೇತವ್ಯೇತಿ ವಾ ಕಮನೇನಾನೀಯತ ಇತಿ ವಾ ಕನತೇರ್ವಾ ಸ್ಯಾತ್ಕಾಂತಿಕರ್ಮಣ ಇತ್ಯಾದಿ ನಿರುಕ್ತಂ । ೪-೧೫ ॥

॥ ಪ್ರತಿಪದಾರ್ಥ ॥

ವಿದ್ರಧೇ—ಕೌಶಲ್ಯದಿಂದ ರಚಿಸಿದುದೂ । **ನವೇ**—ನೂತನವಾದುದೂ । **ಅರ್ಭಕೇ**—ಚಿಕ್ಕದಾಗಿರುವುದೂ ಆದ । **ದ್ರುಪದೇ**—ರಂಗಭೂಮಿಯಲ್ಲಿ ನಿಂತಿರುವ । **ಕನೀನಕೇವ**—ಆಕರ್ಷಕವಾದ ಗೊಂಬೆಗಳಂತೆ । **ಬಭ್ರೂ**—ಹೊಂಬಣ್ಣವುಳ್ಳ ನಿನ್ನ ಅಶ್ವಗಳೆರಡೂ । **ಯಾಮೇಷು**—ಯಜ್ಞಸ್ಥಾನಗಳಲ್ಲಿ । **ಶೋಭೇತೇ**—ಪ್ರಕಾಶಿಸುತ್ತವೆ.

॥ ಭಾವಾರ್ಥ ॥

ಕೌಶಲ್ಯದಿಂದ ರಚಿಸಿದುದೂ, ನೂತನವಾದುದೂ, ಚಿಕ್ಕದಾಗಿರುವುದೂ ಆದ ರಂಗಭೂಮಿಯಲ್ಲಿ ನಿಂತಿರುವ ಆಕರ್ಷಕವಾದ ಗೊಂಬೆಗಳಂತೆ ಹೊಂಬಣ್ಣವುಳ್ಳ ನಿನ್ನ ಅಶ್ವಗಳೆರಡೂ ಯಜ್ಞಸ್ಥಾನಗಳಲ್ಲಿ ಪ್ರಕಾಶಿಸುತ್ತವೆ

English Translation.

Like two puppets on an arranged, new and slender stage, your two brown (steeds) are brilliant at sacrifices.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ಇಂದ್ರನ ಕುದುರೆಗಳನ್ನು ಸ್ತುತಿಸಲಾಗಿದೆ. ಅನೇಕ ಋಕ್ಕುಗಳಲ್ಲಿ ಸಂದರ್ಭ ಬಂದಾಗ ಒಂದೆರಡು ವಿಶೇಷಣಶಬ್ದಗಳಿಂದ ಇಂದ್ರನ ಅಶ್ವಗಳನ್ನು ಸ್ತುತಿಸಲಾಗಿದೆಯೇ ವಿನಹಾ ಪ್ರತ್ಯೇಕವಾಗಿ ಎಂದರೆ ಮಂತ್ರದ ಪ್ರತಿಪಾದ್ಯದೇವತೆಯನ್ನಾಗಿ ಎಲ್ಲಿಯೂ ಈ ರೀತಿ ಸ್ತುತಿಸಿಲ್ಲ ಇಂದ್ರನ ಅಶ್ವಗಳು ಎರಡು. ಅವುಗಳಿಗೆಹರೀ ಎಂದು ಹೆಸರು. ಯಾಸ್ಕರು ನಿರುಕ್ತದಲ್ಲಿ ದೇವತೆಗಳ ವಿವಿಧ ವಾಹನಗಳನ್ನು ವಿವರಿಸುವಾಗ—

ಹರೀ ಇಂದ್ರಸ್ಯ । ರೋಹಿತೋಽಗ್ನೇಃ । ಹರಿತ ಆದಿತ್ಯಸ್ಯ । ರಾಸಭಾವಶ್ವಿನೋಃ । ಅಜಾಃ ಪೂಷ್ಣಃ । ಪೃಷತ್ಯೋ ಮರುತಾಂ । ಅರುಷ್ಯೋ ಗಾವ ಉಷಸಃ । ಶ್ಯಾವಾಃ ಸವಿತುಃ । ವಿಶ್ವರೂಪಾ ಬೃಹಸ್ಪತೇಃ । ನಿಯುತೋ ವಾಯೋಃ ॥

(ನಿ ೨-೨೮)

ಎಂದು ನಿರ್ವಚನವನ್ನು ಹೇಳಿದಾರೆ. ಎಂದರೆ—ಇಂದ್ರನಿಗೆ **ಹರೀ** ಎಂಬ ಹೆಸರಿನ ಎರಡು ಕುದುರೆಗಳು **ವಾಹನ**ಗಳು, ಅಗ್ನಿಗೆ **ರೋಹಿತ**ನೆಂಬ ಕೆಂಪುಬಣ್ಣದ ಕುದುರೆಯು, ಆದಿತ್ಯನಿಗೆ **ಹರಿತ** ಎಂಬ ಹೆಸರಿನ ಹಸರು ಕುದುರೆಗಳು, ಅಶ್ವಿನೀದೇವತೆಗಳಿಗೆ **ರಾಸಭೌ** ಎಂದರೆ ಎರಡು ಕತ್ತೆಗಳು, ಪೂಷನೆಂಬ ದೇವತೆಗೆ **ಅಜಾಃ** ಎಂಬ ಹೆಣ್ಣು ಆಡುಗಳು, ಮರುದ್ದೇವತೆಗಳಿಗೆ **ಪೃಷತ್ಯಃ** ಎಂಬ ಬಿಳೀ ಚುಕ್ಕೆಗಳಿರುವ ಜಿಂಕೆಗಳು, ಉಷೋ ದೇವತೆಗೆ **ಅರುಷ್ಯೋ ಗಾವಃ** ಎಂಬ ಕೆಂಪುವರ್ಣದ ಗೋವುಗಳು; ಸವಿತೃದೇವತೆಗೆ **ಶ್ಯಾವಾಃ** ಎಂಬ ಮಾಸಲು ಕೆಂಪುಬಣ್ಣದ ಕುದುರೆಗಳು, ಬೃಹಸ್ಪತಿಗೆ **ವಿಶ್ವರೂಪಾ** ಎಂಬ ನಾನಾವಿಧರೂಪಗಳುಳ್ಳ ಕುದುರೆಗಳು, ವಾಯುವಿಗೆ ವೇಗವಾದ ಗಮನವುಳ್ಳ **ನಿಯುತಃ** ಎಂಬ ಕುದುರೆಗಳೇ ವಾಹನಗಳು ಎಂದು ಹೇಳಿದಾರೆ

ಈ ಋಕ್ಕಿನಲ್ಲಿ ಇಂದ್ರನ ಕುದುರೆಗಳು ಬಭ್ರು (ಹೊಂಬಣ್ಣ Brown) ಬಣ್ಣವುಳ್ಳವುಗಳೆಂದು ಅವುಗಳ ವರ್ಣವನ್ನು ವಿವರಿಸಿದೆ ಮತ್ತು ನಾಟಕಾಭಿನಯಕ್ಕಾಗಿ ರಚಿಸಿರುವ ರಂಗಭೂಮಿಯಲ್ಲಿ ನೋಡುವುದಕ್ಕೆ ರಮ್ಯವಾದ ಗೊಂಬೆಗಳಂತೆ ಇಂದ್ರನ ಅಶ್ವಗಳು ಯಜ್ಞಭೂಮಿಯಲ್ಲಿ ಪ್ರಕಾಶಿಸುತ್ತಿವೆ ಎಂದು ದೃಷ್ಟಾಂತಮೂಲಕವಾಗಿ ಇಲ್ಲಿ ವರ್ಣಿಸಿದೆ

ಕನೀನಕೇವ—ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿ ಕನೀನಿಕೇ ಎಂಬ ಶಬ್ದದ ವಿವರಣೆಯನ್ನು ಈ ರೀತಿ ಕೊಟ್ಟಿದಾರೆ—

ಕನೀನಕೇ ಕನ್ಯಕೇ । ಕನ್ಯಾ ಕಮನೀಯಾ ಭವತಿ । ಕ್ವೇಯಂ ನೇತವ್ಯೇತಿ ವಾ ಕಮನೇನಾನೀಯತ ಇತಿ ವಾ । ಕನತೇರ್ವಾ ಸ್ಯಾತ್ಕಾಂತಿಕರ್ಮಣಃ । ಕನ್ಯೋರಧಿಷ್ಠಾನಪ್ರವಚನಾನಿ ಸಪ್ತಮ್ಯಾ ಏಕವಚನಾನೀತಿ ಶಾಕಪೂಣಿಃ ॥

(ನಿ ೪-೧೫)

ಎಂದರೆ **ಕನೀನಿಕೇ** ಎಂಬ ಶಬ್ದಕ್ಕೆ **ಕನ್ಯಕೇ** ಎಂದರ್ಥವು ಕನ್ಯಕಾ ಅಥವಾ ಕನ್ಯಾ ಎಂದರೆ **ಕಮನೀಯಾ**—ಎಲ್ಲರಿಂದಲೂ ಅಪೇಕ್ಷಿಸಲ್ಪಡುವವಳಾದ್ದರಿಂದ ಕನ್ಯೆಗೆ **ಕನ್ಯಾ** ಅಥವಾ **ಕಮನೀಯಾ** ಎಂದು ಹಸರು ಅಥವಾ ತಂದೆಯು ಇನಳಿಗೆ ಮದುವೆ ಮಾಡುವಾಗ **ಈ** ಕನ್ಯೆಯು **ಕ್ವೇಯಂ ನೇತವ್ಯೇತಿ ವಾ** ಎಂದರೆ ಎಲ್ಲಿಗೆ (ಯಾರಿಂದ) ಮದುವೆಯಾದ ಮೇಲೆ ಕರೆದೊಯ್ಯಲ್ಪಡುತ್ತಾಳೆ ಎಂದು ಯೋಚಿಸುವುದರಿಂದ ಕನ್ಯೆಯೆಂದು ಹೆಸರು ಎಂದೂ ಕನ್ಯಾಶಬ್ದದ ನಿಷ್ಪತ್ತಿಯು ಏತೆಂದರೆ **ಕನ**ತಿಧಾತುವಿಗೆ ಕಾಂತಿಕರ್ಮದಲ್ಲಿ ಎಂದರೆ ಅಪೇಕ್ಷಿಸು, ಪ್ರಾರ್ಥಿಸು ಎಂಬ ಅರ್ಥದಲ್ಲಿ ಪ್ರಯೋಗವಿರುವುದರಿಂದ ಕನ್ಯಾ ಎಂದರೆ **ಈ** ಸ್ತ್ರೀಯನ್ನು ವಿವಾಹಮಾಡಿಕೊಳ್ಳುವುದಕ್ಕಾಗಿ ಅನೇಕರು ಅಪೇಕ್ಷಿಸುವರು ಅಥವಾ ಪ್ರಾರ್ಥಿಸುವರು ಎಂದು ಕನ್ಯಾ ಶಬ್ದದ ಅರ್ಥವಿವರಣೆಯು **ಈ** ಋಕ್ಕಿನಲ್ಲಿರುವ **ವಿದ್ಮಶೇ,**

ನವೇ ದ್ರುಪದೇ ಅರ್ಭಕೇ ಎಂಬ ನಾಲ್ಕು ಪದಗಳೂ ಸಪ್ತಮಿಾ ವಿಭಕ್ತಿಯ ಏಕವಚನದಲ್ಲಿದ್ದು ಕನೀನಿಕೇ ಎಂಬ ಶಬ್ದಕ್ಕೆ (ಕನ್ಯಾಶಬ್ದಕ್ಕೆ) ವಿಶೇಷಣಪದಗಳಾಗಿ ಪ್ರಯುಕ್ತವಾಗಿರುವುದೆಂದು **ಶಾಕಪೂಣಿ**ಯೆಂಬ ಆಚಾರ್ಯರು ಅಭಿಪ್ರಾಯ ಪಡುವರು. ಮತ್ತು ಯಾಸ್ಕರು **ಈ** ನಾಲ್ಕು ಪದಗಳನ್ನು ವಿವರಿಸುವಾಗ—

ವಿದ್ಧ್ಯೋದಾರುಸಾದ್ವೋಃ । ದಾರು ದೃಣಾತೇರ್ವಾ ದ್ರೂಣಾತೇರ್ವಾ । ತಸ್ಮಾದೇವ ದ್ರು । ನವೇ ನವಜಾತೇ । ಅರ್ಭಕೇ ಅವೃದ್ಧೇ ತೇ ಯಥಾ ತದಧಿಷ್ಠಾನೇಷು ಶೋಭೇತೇ ವಿವಂ ಬಭ್ರೂ ಯಾಮೇಷು ಶೋಭೇತೇ ಬಭ್ರ್ವೋರಶ್ವಯೋಃ ಸಂಸ್ತವಃ ॥

(ನಿ ೪-೧೫)

ವಿದ್ರಧೇ ಎಂಬ ಶಬ್ದಕ್ಕೆ ವಿದ್ಧೇ–ಕತ್ತರಿಸಲ್ಪಟ್ಟ ಎಂದರ್ಥವು. ಮರದಿಂದ ಗೊಂಬೆ ಮೊದಲಾದ ವಸ್ತುಗಳನ್ನು ನಿರ್ಮಿಸುವಾಗ ಮರವನ್ನು ಕತ್ತರಿಸಿ ಅಥವಾ ಕೆತ್ತಿ ಮಾಡುವರು ಇಲ್ಲಿ ಕನೀನಿಕೆ ಎಂಬ ಮರದ ಬೊಂಬೆಗಳನ್ನು ಮರದಿಂದ ಕೆತ್ತಿ ಮಾಡಿರುವುದನ್ನು ಸೂಚಿಸುವುದಕ್ಕಾಗಿ ವಿದ್ರಧೇ ಎಂಬ ಶಬ್ದದ ಪ್ರಯೋಗವಿರುವುದು **ದ್ರುಪದೇ** ಎಂಬ ಶಬ್ದಕ್ಕೆ ದ್ರುಮಮಯೇ–ಮರದಿಂದ ನಿರ್ಮಿತವಾದ ಎಂದರ್ಥವು. ದ್ರು ಅಥವಾ ದ್ರುಮವೆಂದರೆ ದಾರು–– ಒಣಗಿದ ಮರ ಈ ದ್ರು ಎಂಬ ಶಬ್ದವು **ದೃಣಾತೇರ್ವಾ**—ಕತ್ತರಿಸು, ಕೆತ್ತು ಎಂಬರ್ಥವುಳ್ಳ ದೃಣಾತಿಧಾತುವಿನಿಂದಾಗಲಿ, **ದ್ರೂಣಾತೇರ್ವಾ**—ಕಡಿ, ಹಿಂಸಿಸು ಎಂಬರ್ಥವುಳ್ಳ ದ್ರೂಣಾತಿಧಾತುವಿನಿಂದಾಗಲಿ ನಿಷ್ಪನ್ನವಾಗಬಹುದೆಂದು ವಿವರಿಸಿದ್ದಾರೆ ಎಂದರ ವೃಕ್ಷದಿಂದ ವಸ್ತುಗಳನ್ನು ನಿರ್ಮಿಸುವಾಗ ವೃಕ್ಷವನ್ನು ಕಡಿದು (ಹಿಂಸಿಸಿ) ಅದನ್ನು ಒಣಗಿಸಿ ಮರವನ್ನಾಗಿ (ದಾರು) ಮಾಡಿ ಅನಂತರ ಅದನ್ನು ಬೇಕಾದ ಆಳತೆಗೆ ಕತ್ತರಿಸಿ, ಕೆತ್ತಿ, ನಯವಾಗಿಸಿ ಬೊಂಬೆ ಮೊದಲಾದ ವಸ್ತುಗಳನ್ನು ನಿರ್ಮಿಸುವರು ಆ ವಿಷಯವನ್ನೇ ಇಲ್ಲಿ **ವಿದ್ರಧೇ ದ್ರುಪದೇ** ಎಂಬ ಶಬ್ದಗಳಿಂದ ವಿವರಿಸಿದೆ. **ನವೇ** ಎಂಬ ಶಬ್ದಕ್ಕೆ **ನವಜಾತೇ**–ಹೊಸದಾಗಿ ಹುಟ್ಟಿದ ಅಥವಾ ಹೊಸದಾಗಿ ಕತ್ತರಿಸಿ ತಂದ (ಮರ ಅಥವಾ ವೃಕ್ಷ) ಎಂದರ್ಥವು. **ಅರ್ಭಕೇ** ಎಂದರೆ **ಅವೃದ್ಧೇ**–ವೃದ್ಧಿ ಯಾಗದಿರುವ, ದೊಡ್ಡದಲ್ಲದ, ಚಿಕ್ಕದಾದ ಎಂದರ್ಥವು, ಬೊಂಬೆ ಮೊದಲಾದ ವಸ್ತುಗಳಿಗಾಗಿ ಉಪಯೋಗಿಸುವ ಮರದ ತುಂಡು ದೊಡ್ಡದಾಗಿರಬೇಕಾಗಿಲ್ಲ, ಚಿಕ್ಕದಾಗಿರಬೇಕು. ಇಂತಹ ಮರವೆಂದು ಸೂಚಿಸುವುದಕ್ಕಾಗಿ ಇಲ್ಲಿ **ನವೇ ಅರ್ಭಕೇ** ಎಂಬ ಶಬ್ದಗಳ ಪ್ರಯೋಗವಿದೆ ಮುಖ್ಯಾಭಿಪ್ರಾಯವೇನೆಂದರೆ—ಹೊಸದಾಗಿ ಕತ್ತರಿಸಿ ತಂದ ಮರದಲ್ಲಿ ಮಾಡಿದ ಬೊಂಬೆಗಳು ರಂಗಭೂಮಿಯಲ್ಲಿ ಯಾವ ರೀತಿ ಮನೋಹರವಾಗಿ ಪ್ರಕಾಶಿಸುತ್ತಾ ನೋಡುತ್ತಿರುವ ಜನರಿಗೆ ಆನಂದವನ್ನುಂಟುಮಾಡುವುವೋ ಅದರಂತೆ ಬಭ್ರುವರ್ಣವುಳ್ಳ (Brown) ಇಂದ್ರನ ಕುದುರೆಗಳು **ಯಾಮೇಷು** ಎಂದರೆ ಯುದ್ಧಭೂಮಿಯಲ್ಲಾಗಲಿ, ಕುದುರೆಗಳನ್ನು ಕಟ್ಟುವ ಲಾಯದಲ್ಲಾಗಲಿ, ಇಂದ್ರನು ಹೋಗುವ ಯಜ್ಞಭೂಮಿಯಲ್ಲಾಗಲಿ ಬಂದು ನಿಂತಿರುವಾಗ ಮನೋಹರವಾದ ಬೊಂಬೆಗಳಂತೆ ಬೆಳಗುತ್ತಿರುವವು ಎಂದು ಋಷಿಯು ಬೊಂಬೆಗಳ ದೃಷ್ಟಾಂತವನ್ನು ಕೊಟ್ಟು ಇಂದ್ರನ ಕುದುರೆಗಳನ್ನು ಸ್ತುತಿಸಿದ್ದಾನೆ.

॥ संहितापाठः ॥

अरं॑ मे॒ ऊस्र्यायाम्ने॑ऽरमनु॑स्र्यायाम्ने ।

बभ्रू॒ यामे॑ष्व॒स्रिधा॑ ॥ ३४ ॥

॥ पदपाठः ॥

अर॑म् । मे॒ । ऊस्र्य॑याम्ने । अर॑म् । अनु॑स्र्यायाम्ने ।

बभ्रू॒ इति॑ । यामे॑षु । अस्रिधा॑ ॥ ३४ ॥

॥ सायणभाष्यं ॥

हे इंद्र अस्रिधास्रिधावहिंसकौ बभ्रू बभ्रुवर्णौ श्वेदीयावश्वौ यामेषु गमनेषु प्राप्तेषु सत्सूस्र्यायाम्ने । ऊस्र्याभ्यामनडुद्भ्यां युक्तेन रथेन यातीत्यूस्र्यायामा । तस्मै मे मह्यमरमलं पर्याप्तकारिणौ भवतां । अनुस्र्यायाम्ने पश्चाद्यायामेव गच्छते मह्यमरं पर्याप्तकारिणौ भवतां ॥

॥ प्रतिपदार्थ ॥

अस्रिधा—अहिंसात्मकवादवू । **बभ्रू**—ಹೊಂಬಣ್ಣವುಳ್ಳವೂ ಆದ ನಿನ್ನ ಅಶ್ವಗಳು । **यामेषु**—ಯಜ್ಞಕಾಲಗಳಲ್ಲಿ । **ऊस्र्यायाम्ने**—ಎತ್ತಿನ ಗಾಡಿಯಲ್ಲಿ ಹೋಗತಕ್ಕ । **मे**—ನನಗೆ । **अरं**—ಪರ್ಯಾಪ್ತವಾಗಿವೆ । **अनुस्र्यायाम्ने**—ಅದಿಲ್ಲದೇ ಕಾಲುನಡಿಗೆಯಲ್ಲಿಯೇ ಹೋದರೂ ಸಹ । **अरं**—ನನಗೆ ಸಾಕಾಗಿವೆ

॥ भावार्थ ॥

ಅಹಿಂಸಾತ್ಮಕವೂ, ಹೊಂಬಣ್ಣವುಳ್ಳವೂ ಆದ ನಿನ್ನ ಅಶ್ವಗಳಿಗಭಿಮುಖನಾಗಿ ಯಜ್ಞಕಾಲಗಳಲ್ಲಿ ಹೋಗತಕ್ಕ ನನಗೆ, ನಾನು ಎತ್ತಿನ ಗಾಡಿಯಲ್ಲಿ ಹೋಗಲಿ ಅಥವಾ ಅದಿಲ್ಲದೇ ಕಾಲುನಡಿಗೆಯಲ್ಲಿ ಹೋಗಲಿ, ಆ ಎರಡು ಅಶ್ವಗಳೇ ನನಗೆ ತೃಪ್ತಿಕಾರಕವಾಗಿವೆ

English Translation.

You two innocuous brown (steeds) are sufficient at sacrifices for me, whether going (to them) in (a waggon drawn by) oxen, or going without (such) a conveyance·

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜ ಪರಮೇಶ್ವರ ವೈದಿಕಮಾರ್ಗಪ್ರವರ್ತಕ ಶ್ರೀವೀರಬುಕ್ಕಭೂಪಾಲ
ಸಾಮ್ರಾಜ್ಯಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ
ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ತೃತೀಯಾಷ್ಟಕೇ
ಷಷ್ಠೋಽಧ್ಯಾಯಃ ಸಮಾಪ್ತಃ ॥

॥ ಓಂ ತತ್ಸತ್ ।

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ದ್ವಿತೀಯಾಷ್ಟಕದಲ್ಲಿ
ಆರನೆಯ ಅಧ್ಯಾಯವು ಸಮಾಪ್ತವಾದುದು.

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತುತೇ ॥

॥ ಶುಭಂ ಭೂಯಾತ್ ॥

॥ ಮಂಗಳಂ ॥

॥ ಶ್ರೀಃ ॥

॥ ಶ್ರೀ ಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಮುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

ಸಾಯಣಭಾಷ್ಯಸಹಿತಾ

ಋಗ್ವೇದಸಂಹಿತಾ

(ಕರ್ನಾಟಕ ಭಾಷಾರ್ಥಾನುವಾದ ವಿವರಣೆ ಸಹಿತವಾಗಿ)

॥ ತೃತೀಯಾಷ್ಟಕೇ ಸಪ್ತಮೋಽಧ್ಯಾಯಃ ॥

ಮೂರನೆಯ ಅಷ್ಟಕದಲ್ಲಿ ಏಳನೆಯ ಅಧ್ಯಾಯವು

॥ ಚತುರ್ಥಂ ಮಂಡಲಂ ॥

ನಾಲ್ಕನೆಯ ಮಂಡಲದಲ್ಲಿ ಮೂವತ್ತಮೂರನೆಯ ಸೂಕ್ತವು.

ಪೀಠಿಕೆ

ಈ ಸೂಕ್ತಕ್ಕೂ ಮುಂದಿನ ನಾಲ್ಕು ಸೂಕ್ತಗಳಿಗೂ ಋಭುಗಳು ದೇವತೆಯು. ಇವರ ವಿಷಯವಾದ ಪೂರ್ವೇತಿಹಾಸವನ್ನೂ, ಇವರು ಮಾಡಿದ ಸಾಹಸಕಾರ್ಯಗಳನ್ನೂ, ಇವರು ತಮ್ಮ ಕೆಲಸಕಾರ್ಯಗಳಲ್ಲಿ ತೋರಿಸಿರುವ ಬುದ್ಧಿಕುಶಲತೆಯನ್ನು ತಿಳಿಯಬೇಕಾದುದು ಅವಶ್ಯಕವು

ಋಭುಗಳೆಂಬುವರು ಪೂರ್ವದಲ್ಲಿ ಮನುಷ್ಯರಾಗಿದ್ದು ತಮ್ಮ ಉತ್ತಮವಾದ ನಡವಳಿಕೆಗಳಿಂದಲೂ, ಸತ್ಕರ್ಮಾನುಷ್ಠಾನದಿಂದಲೂ ದೇವತ್ವವನ್ನು ಪಡೆದರೆಂದು ಋಗ್ವೇದದಲ್ಲಿ ಅನೇಕ ಕಡೆ ಹೇಳಲ್ಪಟ್ಟಿರುವುದು. ಪೂರ್ವದಲ್ಲಿ

ಅಂಗಿರಾಋಷಿಗೆ ನೀತಿಮಂಜರಿ ಎಂಬ ಓರ್ವ ಪುತ್ರನಿದ್ದನು. ಇವನ ವಂಶದಲ್ಲಿ ಸುಧನ್ವಾ ಎಂಬ ಋಷಿಗೆ ಋಭು, ವಿಭು, ವಾಜ ಎಂಬ ಮೂವರು ಪುತ್ರರಿದ್ದರು. ಇವರು ಸತ್ಕರ್ಮಾನುಷ್ಠಾನ, ದೇವತೆಗಳಿಗೆ ಸಹಾಯಮಾಡುವುದು ಮೊದಲಾದ ಒಳ್ಳೆಯ ಕೆಲಸಗಳಿಂದ ದೇವತೆಗಳ ಜನ್ಮವನ್ನು ಪಡೆದರು ಅಥವಾ ದೇವತೆಗಳಾದರು ಎಂದು ಪ್ರತೀತಿ ಇದೆ. ಈ ಋಭು ಮೊದಲಾದ ಸುಧನ್ವನ ಮೂವರು ಪುತ್ರರಿಗೂ ಋಭುಗಳೆಂದು ಹೇಳುವ ರೂಢಿಯಿದೆ. ಹಿರಿಯವನ ಹೆಸರಿನಿಂದಲೇ ಈ ಮೂವರು ಪುತ್ರರೂ ಕರೆಯಲ್ಪಡುವರು ಇವರು ತ್ವಷ್ಟೃವಿನ ಶಿಷ್ಯರಾದುದರಿಂದ ಇವರನ್ನು ದೇವಶಿಲ್ಪಿಗಳೆಂದೂ ಹೇಳುವರು ಇವರು ಇಂದ್ರನೇ ಮೊದಲಾದ ದೇವತೆಗಳಿಗೆ ಬೇಕಾದ ಸಲಕರಣೆಗಳನ್ನು ಎಂದರೆ ಇಂದ್ರನ ರಥವನ್ನೂ, ಅಗ್ನಿಯ ಚಮಸ ಪಾತ್ರೆಯನ್ನೂ ಮಾಡಿಕೊಟ್ಟರೆಂದು ಅಲ್ಲಲ್ಲಿ ಹೇಳಿದೆ ಈ ಸೂಕ್ತಗಳಲ್ಲಿ ಇವರು ಮಾಡಿದ ಕೆಲವು ಕೆಲಸಗಳ ವಿವರಣೆ ಇರುವುದು ಇವರಿಗೆ ಅದ್ಭುತವಾದ ಶಕ್ತಿಯಿರುವುದೆಂದೂ ಇವರು ಎಂತಹ ಕೆಲಸಗಳನ್ನಾದರೂ ಮಾಡಲು ಸಮರ್ಥರೆಂದೂ ಅಲ್ಲಲ್ಲಿ ವರ್ಣನೆಗಳಿವೆ. ದೇವತೆಗಳಿಗಿರುವ ಶಕ್ತಿಸಾಮರ್ಥ್ಯಗಳೇ ಇವರಿಗೂ ಇರುವುದರಿಂದ ಇವರನ್ನು ದೇವತೆಗಳ ಗುಂಪಿಗೆ ಸೇರಿದವರೆಂದು ಭಾವಿಸಿ ಋಷಿಗಳು ಇವರನ್ನೂ ಇವರು ಮಾಡಿರುವ ಕಾರ್ಯಗಳನ್ನೂ ವಿಧವಿಧವಾಗಿ ವರ್ಣಿಸಿರುವರು. ಇವರು ಸೂರ್ಯವಂಡಲದಲ್ಲಿ ವಾಸವಾಗಿದ್ದು ಸೂರ್ಯರಶ್ಮಿಗಳ ಮೂಲಕ ಕಾರ್ಯಗಳನ್ನು ಮಾಡುವರೆಂದು ಪ್ರತೀತಿ ಇರುವುದು

ಋಭುಶಬ್ದಕ್ಕೆ ಯಾಸ್ಕರು ಮೂರು ವಿಭವಾದ ನಿಷ್ಪತ್ತಿಯನ್ನು ಹೇಳಿರುವರು—

(೧) **ಋಭವ ಉರು ಭಾಂತೀತಿ ವಾ** । ಉರು-ಬಹಳವಾಗಿ ಭಾಂತಿ-ಪ್ರಕಾಶಿಸುವವರು. ಆದ್ದರಿಂದ ಇವರಿಗೆ ಋಭುಗಳೆಂದು ಹೆಸರು-ಇಲ್ಲಿ ಉರು ಶಬ್ದದ ಅಂತ್ಯಾಕ್ಷರವಾದ ರುಕಾರವನ್ನೂ **ಭಾಂತಿ** ಶಬ್ದದ ಆದ್ಯಕ್ಷರವನ್ನೂ ಸೇರಿಸಿ ರುಭು ಅಥವಾ ಋಭು ಎಂದು ಶಬ್ದವಾಗಿರುವುದಾಗಿ ಕೆಲವರ ಅಭಿಪ್ರಾಯವು. ಅಹಃ+ರಾತ್ರಿಃ=ಹೋರಾತ್ರ ಎಂಬಂತೆ

(೨) **ಋತೇನ ಭಾಂತೀತಿ ವಾ** । ಋತೇನ-ಎಂದರೆ ಸತ್ಯದಿಂದ ಅಥವಾ ಯಜ್ಞದಿಂದ ಪ್ರಕಾಶಿಸುವವರಾದ್ದರಿಂದ ಇವರಿಗೆ ಋಭುಗಳೆಂಬ ಹೆಸರು.

(೩) **ಋತೇನ ಭವಂತೀತಿ ವಾ** । ಋತೇನ ಎಂದರೆ ಸತ್ವದಿಂದ (ಸಾಮರ್ಥ್ಯದಿಂದ) ಇರುವವರಾದ್ದರಿಂದ ಎಂದರೆ ಸಾಮರ್ಥ್ಯವುಳ್ಳವರಾದ್ದರಿಂದ ಇವರಿಗೆ ಋಭುಗಳೆಂದು ಹೆಸರು ಋತೇನ ಎಂಬ ಶಬ್ದದ ಆದ್ಯಕ್ಷರವಾದ ಋಕಾರವೂ ಭವಂತಿಶಬ್ದದ ಆದ್ಯಕ್ಷರವಾದ ಭಕಾರವೂ ಸೇರಿ ಋಭು ವೆಂದು ಆಗಿರುವುದೆಂದು ಕೆಲವರು ಹೇಳುವರು

ಈ ಋಭುಗಳು ಹಿಂದೆ ಮನುಷ್ಯರಾಗಿದ್ದು ಅನಂತರ ದೇವತ್ವವನ್ನು ಪಡೆದ ವಿಷಯವನ್ನು ಈ ಋಕ್ಕು ವಿಶದವಾಗಿ ತಿಳಿಸುವುದು—

ವಿಷ್ಟ್ವೀ ಶಮಿ ತರಣಿಶ್ಚೇನ ವಾಘತೋ ಮರ್ತಾಸಃ ಸಂತೋ ಅಮೃತತ್ವಮಾನಶುಃ ।
ಸೌಧನ್ವನಾ ಋಭವಃ ಸೂರಚಕ್ಷಸಃ ಸಂವತ್ಸರೇ ಸಮಪೃಚ್ಯಂತ ಧೀತಿಭಿಃ ॥

(ಋ. ಸಂ. ೧-೧೧೦-೪)

ಇದಕ್ಕೆ ಯಾಸ್ಕರ ನಿರುಕ್ತವು—

ಕೃತ್ವಾ ಕರ್ಮಾಣಿ ಕ್ಷಿಪ್ರತ್ವೇನ ವೋಢಾರೋ ಮೇಧಾವಿನೋ ವಾ ಮರ್ತಾಸಃ ಸಂತೋ ಅಮೃತತ್ವಮಾನಶಿರೇ ಋಭವಃ ಸೂರಖ್ಯಾನಾ ವಾ, ಸೂರಪ್ರಜ್ಞಾ ವಾ, ಸಂವತ್ಸರೇ ಸಮಪೃಚ್ಯಂತ ಧೀತಿಭಿಃ ಕರ್ಮಭಿಃ ॥

ಮುಖ್ಯಾಭಿಪ್ರಾಯವೇನೆಂದರೆ—ಸುಧನ್ವನ ಪುತ್ರರಾದ ಈ ಋಭುಗಳು ಹಿಂದೆ ಮನುಷ್ಯರಾಗಿದ್ದರು. ಆವರು ಸೂರ್ಯನಿಗೆ ಸಮಾನವಾದ ತಮ್ಮ ಪ್ರಜ್ಞೆ ಅಥವಾ ಬುದ್ಧಿಶಕ್ತಿಯಿಂದ ಬೇಗನೆ ಎಂದರೆ ಒಂದೇ ಸಂವತ್ಸರದಲ್ಲಿ ಸರ್ವ ಯಜ್ಞಗಳನ್ನೂ ಮಾಡಿ **ಅಮೃತತ್ವಂ** ಎಂದರೆ ದೇವತ್ವವನ್ನು (ಮರಣರಹಿತತ್ವವನ್ನು) ಪಡೆದರು

ಋಭುಶಬ್ದಕ್ಕೆ ಯಾಸ್ಕರು ಮತ್ತೊಂದರ್ಥವನ್ನೂ ಹೇಳಿರುವರು—

ಆದಿತ್ಯರಶ್ಮಯೋಽಪ್ಯೃಭವ ಉಚ್ಯಂತೇ—ಸೂರ್ಯನ ರಶ್ಮಿಗಳಿಗೂ ಋಭವಃ ಎಂದು ಹೇಳುವರು. ಉದಾಹರಣೆಗಾಗಿ—

ಉದ್ವತ್ಸ್ವಮಾ ಅಕೃಣೋತನಾ ತೃಣಂ ನಿವತ್ಸ್ವಪಃ ಸ್ವಪಸ್ಯಯಾ ನರಃ ।
ಅಗೋ ಹ್ಯಸ್ಯ ಯದಪಸಸ್ತನಾ ಗೃಹೇ ತದದ್ಯೇದಮೃಭವೋ ನಾನು ಗಚ್ಛಥ ॥

(ಋ. ಸಂ. ೧-೧೬೧-೧೧)

ಈ ಋಕ್ಕಿಗೆ ಯಾಸ್ಕರು—**ಅಗೋಹ್ಯ ಆದಿತ್ಯೋಽಗೂಹನೀಯಸ್ತಸ್ಯ ಯದಪ್ಸಪಥ ಗೃಹೇ ಯಾವತ್ತತ್ರ ಭವಥ ನ ತಾವದಿಹ ಭವಥೇತಿ** । ಎಂದು ನಿಘುಕ್ತವನ್ನು ಹೇಳಿರುವರು ಭಾಷ್ಯಕಾರರೂ ಸಹ ಈ ಋಕ್ಕಿನ ಅರ್ಥ ವಿವರಣೆ ಮಾಡುವಾಗ ಋಭವಃ ಎಂಬ ಶಬ್ದಕ್ಕೆ—**ಋಭವಃ ಉರು ಪ್ರಭೂತಂ ಭಾಸಮಾನಾಃ ಋತೇನಾದಿತ್ಯೇನ ಭಾಸಮಾನಾ ವಾ ಋತೇನೋದಕೇನೋದಕಾರ್ಥಮುಪ್ತ್ವಾ ವಾ**—ಎಂದು ಅರ್ಥಮಾಡಿರುವರು.

ಋ. ಸಂ ೧-೧೧೦-೨ನೆಯ ಋಕ್ಕಿನಲ್ಲಿ **ಯಜ್ಞದಲ್ಲಿ ಹವಿಸ್ಸನ್ನು** ಅರ್ಪಿಸಿದ ಅಥವಾ ಅತಿಥ್ಯವನ್ನು ನೀಡಿದ ಸವಿತೃವಿನ ಮನೆಗೆ ಋಭುಗಳು ಹೋದರು ಎಂದು ಪೂರ್ವದ **ಇತಿಹಾಸದ** ಸಂದರ್ಭವು ಸೂಚಿಸಿದೆ ಈ ಇತಿಹಾಸ ವನ್ನು ಸ್ಕಂದಸ್ವಾಮಿಗಳು ಒಂದು ವಿಧವಾಗಿಯೂ, ಸಾಯಣರು ಇನ್ನೊಂದು ವಿಧವಾಗಿಯೂ ವಿವರಿಸಿದ್ದಾರೆ ಈ ಸಂದರ್ಭದಲ್ಲಿ,

ಅತ್ರೇತಿಹಾಸಮಾಚಕ್ಷತೇ । ಋಭವೋ ಯಜ್ಞಿಯತ್ವಂ ಪ್ರಾರ್ಥಯಮಾನಾಃ ಪ್ರಜಾಪತೇಃ ಸಕಾಶಮುಗಮನ್ । ಅಥ ಪ್ರಜಾಪತಿಃ ಸವಿತಾರಮಾಹೂಯಾವೋಚತ್ । ಏತೇಽಪಿ ಯಜ್ಞಿಯಾ ಭವಂತ್ವಿತಿ । ತಥೇತಿ ಸವಿತಾ ಪ್ರತಿಪದ್ಯ ತಾನ್ ಸ್ವಗೃಹಂ ನೀತ್ವಾ ದ್ವಾದಶ ದಿನಾನ್ಯಾತಿಥ್ಯಮೇಷಾಮಕಾರ್ಷೀದಿತಿ । ತದೇತದ್ವಾಮದೇವೋ ವಕ್ಷ್ಯತಿ ।

ಋಭುಗಳು ಯಜ್ಞದಲ್ಲಿ ಭಾಗವಹಿಸಿ ಹವಿಸ್ಸನ್ನು ಸ್ವೀಕರಿಸಲು ಅಹ ತೆಯನ್ನು ಪಡಯಬೇಕೆಂದು ಇಚ್ಛಿಸಿ ಪ್ರಜಾ ಪತಿಯ ಸಮೀಪಕ್ಕೆ ಹೋದರು ಆಗ ಪ್ರಜಾಪತಿಯು ಸವಿತೃವನ್ನು ಕರೆದು ಇವರೂ ಸಹ ಯಜ್ಞಾರ್ಹರಾಗಲಿ (ಇದಕ್ಕೆ ಸಹಾಯಮಾಡು) ಎಂದು ಹೇಳಿದ ನಂತರ ಸವಿತೃವು ಹಾಗೇ ಆಗಲೆಂದು ಒಪ್ಪಿಕೊಂಡು ತನ್ನ ಮನೆಗೆ

ಕರೆದುಕೊಂಡು ಹೋಗಿ ಹನ್ನೆರಡು ದಿನಗಳು ಅವರಿಗೆ ಅತಿಥಿಸತ್ಕಾರವನ್ನು ನೆರವೇರಿಸಿದನು ಎಂದು ಸ್ಕಂದಸ್ವಾಮಿಗಳು ಕಥೆಯನ್ನು ಸಂಕ್ಷೇಪವಾಗಿ ಹೇಳಿ, ಈ ಕಥಾಸಂದರ್ಭವನ್ನು ಸೂಚಿಸತಕ್ಕ,

ದ್ವಾದಶ ದ್ಯೂನ್ಯದಗೋಹ್ಯಸ್ಯಾತಿಥ್ಯೇ ರಣನ್ನೃಭವಃ ಸಸಂತಃ ।
ಸುಕ್ಷೇತ್ರಾಕೃಣ್ವನ್ನನಯಂತ ಸಿಂಧೂನ್ಸ್ವಾತಿಷ್ಮನ್ನೋಷಧೀರ್ನಿಮ್ನಮಾಪಃ ॥

(ಋ. ಸಂ. ೪-೩೩-೭)

ಎಂಬ ಋಕ್ಕನ್ನು ದಾಹರಿಸಿದ್ದಾರೆ. ಇದೇ ಸಂದರ್ಭದಲ್ಲಿ ಸಾಯಣರು **ಋಭುಗಳು ಸವಿತೃವಿನ** ಮನೆಗೆ ಹೋಗಲು ಒದಗಿದ ಕಾರಣಗಳನ್ನು ತಿಳಿಸತಕ್ಕ ಅಂಶವನ್ನು ಸೂಚಿಸಿದ್ದಾರೆ.

ದಾಶುಷಃ ಪ್ರಾತಃಸವನಾದಿಷ್ವಗ್ನ್ಯಾದಿಭಿರಪಸಾರಿತೇಭ್ಯ ಋಭುಭ್ಯಃ ಸೋಮಪಾನಂ ದತ್ತವತಃ ಸವಿತುಃ ಗೃಹಂ ನಿವಾಸಸ್ಥಾನಂ ತೃತೀಯಸವನಾಖ್ಯಮಗಚ್ಛತ ಪ್ರಾಪ್ತಾಃ ॥

ಪ್ರಾತಃಸವನಾದಿಗಳಲ್ಲಿ ಅಗ್ನ್ಯಾದಿದೇವತೆಗಳಿಂದ ತಿರಸ್ಕರಿಸಲ್ಪಟ್ಟು ಹೊರಕ್ಕೆ ಕಳುಹಲ್ಪಟ್ಟ ಋಭುಗಳಾದ ನಿಮಗೆ ಸೋಮಪಾನವನ್ನು ಅರ್ಪಿಸಿದ ಸವಿತೃವಿನ ತೃತೀಯಸವನರೂಪವಾದ ಯಜ್ಞಗೃಹವನ್ನು ಪ್ರವೇಶಿಸಿರಿ ಎಂದು ಅಗ್ನ್ಯಾದಿಗಳಿಂದ ಸಂಭವಿಸಿದ ತಿರಸ್ಕಾರದ ವಿಷಯವನ್ನೂ ಹೇಳಿದ್ದಾರೆ. ಈ ವಿಷಯವು ಐತರೇಯಬ್ರಾಹ್ಮಣದಲ್ಲಿ ವಿಶದವಾಗಿ ಉಕ್ತವಾಗಿದೆ

ಋಭವೋ ವೈ ದೇವೇಷು ತಪಸಾ ಸೋಽಪೀಥಮಭ್ಯಜಯಂಸ್ತೇಭ್ಯಃ ಪ್ರಾತಃಸವನೇ ವಾಚಿ ಕಲ್ಪಯಿಷಂಸ್ತಾನಗ್ನಿರ್ವಸುಭಿಃ ಪ್ರಾತಃಸವನಾದನುದತ ತೇಭ್ಯೋ ಮಾಧ್ಯಂದಿನೇ ಸವನೇ ವಾಚಿ ಕಲ್ಪಯಿಷಂಸ್ತಾನಿಂದ್ರೋ ರುದ್ರೈರ್ಮಾಧ್ಯಂದಿನಾತ್ಸವನಾದನುದತ ತೇಭ್ಯಸ್ತೃತೀಯಸವನೇ ವಾಚಿ ಕಲ್ಪಯಿಷಂಸ್ತಾನ್ವಿಶ್ವೇ ದೇವಾ ಅನೋನುದ್ಯಂತ ನೇಹ ಷಾಸ್ಯಂತಿ ನೇಹೇತಿ ಸ ಪ್ರಜಾಪತಿರಬ್ರವೀತ್ಸವಿತಾರಂ ತವ ವಾ ಇಮೇಽಂತೇವಾಸಾಸ್ತ್ವಮೇನೈಭಿಃ ಸಂಪಿಬಸ್ವೇತಿ ಸ ತಥೇತ್ಯಬ್ರವೀತ್ಸವಿತಾ ತಾನ್ವೈ ತ್ವಮುಭಯತಃ ಪರಿಪಿಬೇತಿ ತಾನ್ಪ್ರಜಾಪತಿರುಭಯತಃ ಪರ್ಯಪಿಬತ್ ।

(ಐ. ಬ್ರಾ. ೧೩-೩೦)

ಋಭುಗಳು ತಮ್ಮ ತಪಃಸಾಧನೆಯಿಂದಲೂ, ಉತ್ಕಟವಾದ ಇಚ್ಛೆಯಿಂದಲೂ ದೇವತೆಗಳ ನಡುವೆ ಸೋಮಪಾನವನ್ನು ಸಂಪಾದಿಸಿದರು ಮೊದಲು ಪ್ರಾತಃಸವನದಲ್ಲಿ ಅದನ್ನು ಹೊಂದಲು ಇಚ್ಛಿಸಿದಾಗ ಅಗ್ನಿಯು ವಸುಗಳೊಂದಿಗೆ ಸೇರಿಕೊಂಡು ಅವರನ್ನು ತಿರಸ್ಕರಿಸಿ ಅಟ್ಟಿಬಿಟ್ಟನು. ಆಗ ಮಾಧ್ಯಂದಿನಸವನದಲ್ಲಿ ಅದನ್ನು ಪಡೆಯಲಿಚ್ಛಿಸಿದಾಗ ಇಂದ್ರನು ರುದ್ರರೊಂದಿಗೆ ಸೇರಿಕೊಂಡು ಅವರನ್ನು ಅಟ್ಟಿಬಿಟ್ಟನು. ಪುನಃ ತೃತೀಯಸವನದಲ್ಲಿ ಅದನ್ನು ಪಡೆಯಲಿಚ್ಛಿಸಿದಾಗ ವಿಶ್ವೇದೇವತೆಗಳು 'ನೀವು ಇಲ್ಲಿ ಖಂಡಿತ ಸೋಮಪಾನಮಾಡಲರ್ಹರಲ್ಲ, ನೀವು ಮಾಡಕೂಡದು' ಎಂದು ಕಠಿಣವಾದ ಮಾತಿನಿಂದ ಅಲ್ಲಿಯೂ ತಿರಸ್ಕರಿಸಿದರು ಆಗ ಪ್ರಜಾಪತಿಯು ಸವಿತೃವನ್ನು ಕುರಿತು 'ಈ ಋಭುಗಳು ನಿನ್ನ ಶಿಷ್ಯರು ನೀನು ಇವರೊಂದಿಗೆ ಸೋಮಪಾನವನ್ನು ಮಾಡು' ಎಂದನು. ಅನಂತರ ಸವಿತೃವು ಒಪ್ಪಿಕೊಂಡನು.

ಪ್ರಜಾಪತಿಯೂ ಸಹ ಅವರ ಅಕ್ಕಪಕ್ಕದಲ್ಲೇ ಸೋಮರಸವನ್ನು ಪಾನಮಾಡಿದನು, ಎಂಬುದಾಗಿ ಐತರೇಯ ಬ್ರಾಹ್ಮಣದಲ್ಲಿ ವಿಸ್ತಾರವಾಗಿ ಹೇಳಿರುವ ಸನ್ನಿವೇಶವನ್ನು ಸಾಯಣರು ಸೂಕ್ಷ್ಮವಾಗಿ ಹೇಳಿದ್ದಾರೆ

ಋಭುಗಳ ಕಲಾಕೌಶಲ್ಯದ ವಿಷಯದಲ್ಲಿ ಕೆಲವು ಉದಾಹರಣೆಗಳನ್ನು ಕೊಡಬಹುದು—ತ್ವಷ್ಟೃವಿನಿಂದ ನಿರ್ಮಿತವಾದಾಗ ಒಂದೇ ಆಗಿ ಇದ್ದ ಚಮಸಪಾತ್ರೆಯನ್ನು ನಾಲ್ಕುಪಾತ್ರಗಳನ್ನಾಗಿ ಮಾಡಿದಿರಿ ಎಂದು ಋಭುಗಳ ಕಲಾಕೌಶಲ್ಯವನ್ನು ಶ್ಲಾಘಿಸಿದೆ

ಉತ ತ್ಯಂ ಚಮಸಂ ನವಂ ತ್ವಷ್ಟುರ್ದೇವಸ್ಯ ನಿಷ್ಕೃತಂ ।
ಅಕರ್ತ ಚತುರಃ ಪುನಃ ॥

(ಋ ಸಂ ೧-೨೦-೭)

ಎಂಬ ಋಕ್ಕಿನಲ್ಲಿ ಹೇಳಿರುವಂತೆಯೂ ಮತ್ತು ಇದೇ ವಿವರವನ್ನು ಮುಂದೆಯೂ,

ಜ್ಯೇಷ್ಠ ಆಹ ಚಮಸಾ ದ್ವಾ ಕರೇತಿ ಕನೀಯಾನ್ತ್ರೀನ್ಕೃಣವಾಮೇತ್ಯಾಹ ।
ಕನಿಷ್ಠ ಆಹ ಚತುರಸ್ಕರೇತಿ ತ್ವಷ್ಟ ಋಭವಸ್ತ್ವನಯದ್ವಚೋ ವಃ ॥

(ಋ. ಸಂ ೪-೩೫-೫)

ಇತ್ಯಾದಿ ಋಕ್ಕುಗಳಲ್ಲಿ ಹೇಳುವಂತೆಯೂ ಸಹ ಒಂದಾದ ಪಾತ್ರೆಯನ್ನು ತಮ್ಮ ಕಲಾಕೌಶಲ್ಯದಿಂದ ನಾಲ್ಕನ್ನಾಗಿ ಮಾಡಿದ ವಿಷಯವು ಪ್ರಸಿದ್ಧವಾಗಿದೆ ಈ ಕಾರ್ಯದಲ್ಲೂ ಸಹ ತ್ವಷ್ಟೃವಿನ ನಿರ್ಲಕ್ಷಣದಿಂದ ಇವರಿಗೆ ಈ ಶಕ್ತಿಯು ಬಂದಿತೆಂದೂ, ಇವರು ತ್ವಷ್ಟೃವಿನ ಶಿಷ್ಯರಾಗಿದ್ದರೆಂಬುದೂ ಬೃಹದ್ದೇವತೆಯಲ್ಲಿ ಉಕ್ತವಾಗಿದೆ

ಸುಧನ್ವನ ಆಂಗಿರಸಸ್ಯಾಸನ್ಪುತ್ರಾಸ್ತ್ರಯಃ ಪುರಾ ।
ಋಭುರ್ವಿಭ್ವಾ ಚ ವಾಜಶ್ಚ ಶಿಷ್ಯಾಸ್ತ್ವಷ್ಟುಶ್ಚ ತೇಽಭವನ್ ॥
ಶಿಕ್ಷಯಾಮಾಸ ತಾಂಸ್ತ್ವಷ್ಟಾ ತ್ವಾಷ್ಟ್ರಂ ಯತ್ಕರ್ಮ ಕಿಂಚನ ।
ಪರಿನಿಷ್ಠಿತಕರ್ಮಾಣೋ ವಿಶ್ವೇದೇವಾ ಉಪಾಹ್ವಯನ್ ॥
ವಿಶ್ವೇಷಾಂ ತೇ ತತಶ್ಚಕ್ರುರ್ವಾಹನಾನ್ಯಾಯುಧಾನಿ ತು ।
ಧೇನುಂ ಸಬರ್ದುಘಾಂ ಚಕ್ರುರಮೃತಂ ಸಬರುಚ್ಯತೇ ॥
ಬೃಹಸ್ಪತೇರಥಾಶ್ವಿಭ್ಯಾಂ ರಥಂ ದಿವ್ಯಂ ತ್ರಿವಂಧುರಂ ।
ಇಂದ್ರಾಯ ಚ ಹರೀ ದೇವಪ್ರಹೀತೇನಾಗ್ನಿನಾಪಿ ಯತ್ ॥
ಏಕಂ ಚಮಸಮಿತ್ಯುಕ್ತೇ ಜ್ಯೇಷ್ಠ ಆಹೇತ್ಯಥೋ ದಿವಿ ।
ಉಕ್ತ್ವಾ ತತಶ್ಚತುಷ್ಕಮಸಾನ್ ಯಥೋಕ್ತಂ ತೇನ ಹರ್ಷಿತಾಃ ॥
ತ್ವಷ್ಟಾ ಚ ಸವಿತಾ ಚೈವ ದೇವದೇವಃ ಪ್ರಜಾಪತಿಃ ।
ಸರ್ವಾನ್ದೇವಾನ್ ಸಮಾಮಂತ್ರ್ಯ ಅಮೃತತ್ವಂ ವದುಶ್ಚ ತೇ ।
ತೇಷಾಮಾದ್ಯಾಂತ್ಯಯೋರ್ನಾಮ್ನಾ ದೃಶ್ಯತೇ ಬಹುವತ್ ಸ್ತವಃ ।
ತೃತೀಯಸವನೇ ತೇಷಾಂ ತೈಸ್ತು ಭಾಗಃ ಪ್ರಕಲ್ಪಿತಃ ॥
ಆಪಿಬತ್ಸೋಮಮಿಂದ್ರಶ್ಚ ತೈಸ್ತತ್ರ ಸವನೇ ಸಹ ॥

(ಬೃ. ದೇ ೩-೮೩ ರಿಂದ ೮೯)

ಪೂರ್ವದಲ್ಲಿ ಸುಧನ್ವಪುತ್ರರಾದ ಋಭು, ವಿಭ್ವ, ವಾಜ ಎಂಬ ಮೂವರೂ ಸಹ ತ್ವಷ್ಟೃವಿನ ಶಿಷ್ಯರಾದರು. ಸಕಲ ಕಲಾಕುಶಲನಾದ ತ್ವಷ್ಟೃವು ಅವರಿಗೂ ಸಹ ಎಲ್ಲಾ ಕಲೆಗಳನ್ನೂ ಕಲಿಸಿದನು. ಆಗ ಕಲೆಗಳಲ್ಲಿ ನಿಪುಣರಾದ ವಿಶ್ವೇದೇವತೆಗಳು ಅವರನ್ನು ಪ್ರತಿಭಟನಾದೃಷ್ಟಿಯಿಂದ ಎದುರಿಸಿದರು. ಆಗ ಇವರು ಸಕಲದೇವತೆಗಳಿಗೂ ಸಹ ಆಯುಧಗಳನ್ನೂ, ವಾಹನಗಳನ್ನೂ ನಿರ್ಮಿಸಿಕೊಟ್ಟರು. ಅನಂತರ ಅಮೃತದಾಯಿಯಾದ ಧೇನುವನ್ನು ಸೃಷ್ಟಿಸಿದರು. ಬೃಹಸ್ಪತಿ ಮತ್ತು ಅಶ್ವಿನಿದೇವತೆಗಳಿಗೆ, ಆಸನತ್ರಯಗಳುಳ್ಳ ರಥಗಳನ್ನೂ, ಇಂದ್ರನಿಗೆ ಅಶ್ವಗಳನ್ನೂ ಮತ್ತು ದೇವತೆಗಳಿಂದ ದೂತನಾಗಿ ಕಳುಹಲ್ಪಟ್ಟ ಅಗ್ನಿಗೆ ಯಥೋಕ್ತವಾದುದನ್ನೂ, ಎಂದರೆ,

ಕಿಮು ಶ್ರೇಷ್ಠಃ ಕಿಂ ಯವಿಷ್ಠೋ ನ ಆಜಗನ್ನಿಮಾಯತೇ ದೂತ್ಯಂ ೧ ಕದ್ಯದೂಚಿಮ।
ಸ ನಿಂದಿಮ ಚಮಸಂ ಯೋ ಮಹಾಕುಲೋಽಗ್ನೇ ಭ್ರಾತರ್ದ್ರುಣ ಇದ್ಭೂತಿಮೂದಿಮ ॥
ಏಕಂ ಚಮಸಂ ಚತುರಃ ಕೃಣೋತನ ತದ್ವೋ ದೇವಾ ಅಬ್ರುವನ್ತದ್ವ ಆಗಮಂ।
ಸೌಧನ್ವನಾ ಯದ್ಯೇವಾ ಕರಿಷ್ಯಥ ಸಾಕಂ ದೇವೈರ್ಯಜ್ಞಿಯಾಸೋ ಭವಿಷ್ಯಥ ॥
ಅಗ್ನಿಂ ದೂತಂ ಪ್ರತಿ ಯದಬ್ರವೀತನಾಶ್ವಃ ಕರ್ತ್ವೋ ರಥ ಉತೇಹ ಕರ್ತ್ವಃ।
ಧೇನುಃ ಕರ್ತ್ವಾ ಯುವಶಾ ಕರ್ತ್ವಾ ದ್ವಾ ತಾನಿ ಭ್ರಾತರನು ವಃ ಕೃತ್ವ್ಯೇಮಸಿ ॥

(ಋ ಸಂ ೧-೧೬೧-೧ ರಿಂದ ೩)

ಎಂಬ ಋಕ್ಕುಗಳಲ್ಲಿ ವರ್ಣಿಸಿರುವಂತೆ ಅಗ್ನಿಯು ದೇವದೂತನಾಗಿ ಸುಧನ್ವಪುತ್ರರಲ್ಲಿಗೆ ಹೋಗಿ ಒಂದೇ ಆಗಿರುವ ಚಮಸಪಾತ್ರೆಯನ್ನು ನಾಲ್ಕನ್ನಾಗಿ ಮಾಡಿ ದೇವತೆಗಳಿಗೆ ಸಹಾಯಮಾಡಿದರೆ ಆಗ ಅವರ ಜೊತೆಯಲ್ಲಿ ಸೋಮರಸ ಪಾನಕ್ಕೆ ಅರ್ಹತೆಯನ್ನು ಅವರು ಪಡೆಯುವರೆಂದು ಹೇಳಿದಾಗ ಅವರು ನಿಮಗೆ ಇಂದೊಂದು ಕೆಲಸಮಾತ್ರವಲ್ಲದೇ ಅಶ್ವನಿರ್ಮಾಣವಾಗಲಿ, ರಥನಿರ್ಮಾಣವಾಗಲಿ ಅಥವಾ ಧೇನುನಿರ್ಮಾಣವಾಗಲಿ ಅಥವಾ ವೃದ್ಧರಾದ ಮಾತಾಪಿತೃಗಳನ್ನು ಯುವಕರನ್ನಾಗಿ ಮಾಡುವುದಾಗಲಿ ಇವೆಲ್ಲಾ ನಿಮ್ಮಿಂದ ಸಾಧ್ಯವಾಗಿದ್ದು, ಅದರಂತೆಯೇ ಈಗಲೂ ಸಹ ನಿಮಗೆ ಅಪೇಕ್ಷಿತವಾದುದನ್ನೆಲ್ಲಾ ಮಾಡಿಕೊಡುವೆವು ಎಂದು ಅದನ್ನು ಮಾಡಿಕೊಟ್ಟರು ಎಂಬ ವಿಷಯವನ್ನು ಇಲ್ಲಿ ಸೂಚಿಸಿದೆಯಾದ್ದರಿಂದ ಅಂತಹ ಕುಶಲಕಾರ್ಯದಿಂದ ಅಗ್ನಿಗೆ ಸಹಾಯವನ್ನು ಮಾಡಿದರು ಆಗ ತೃಷ್ಟೃವೂ ಸವಿತೃವೂ, ದೇವದೇವನಾದ ಪ್ರಜಾಪತಿಯೂ ಸಕಲ ದೇವತೆಗಳನ್ನೂ ಕರೆದು ಋಭುಗಳಿಗೆ ಅಮೃತತ್ವವು ಲಭಿಸುವಂತೆ ಅನುಗ್ರಹಿಸಿದರು. ಆಗ (ಅವರನ್ನು ಮೊದಲು ತಿರಸ್ಕರಿಸಿದ್ದ) ಇಂದ್ರನೂ ಸಹ ಅವರೊಂದಿಗೆ ಸೋಮರಸವನ್ನು ಪಾನಮಾಡಿದನು ಎಂಬ ಕಥೆಯು ಬೃಹದ್ದೇವತೆಯಲ್ಲಿ ಉಕ್ತವಾಗಿದೆ

ಸಾಯಣಭಾಷ್ಯದಲ್ಲಿ ಹೇಳಿರುವ ಕಥೆಯು ಈ ರೀತಿಯಿದೆ—**ಪುರಾ ಕಸ್ಯಚಿದೃಷೇರ್ಧೇನುರ್ಮೃತಾ। ಸ ಋಷಿಸ್ತಸ್ಯಾ ಧೇನೋರ್ವತ್ಸಂ ದೈಷ್ಟ್ವಾ ಋಭುಂ ತುಷ್ಟಾವ। ಋಭವಸ್ತತ್ಸದೈ ಶೀಮನ್ಯಾಂ ಧೇನುಂ ಕೃತ್ವಾ ತದೀಯೇನ ಚರ್ಮಣಾ ಸಂವೀಯ ತೇನ ವತ್ಸೇನ ಸಮಯೋಜಯನ್ನಿತಿ**। ಹಿಂದೆ ಒಬ್ಬ ಋಷಿಯ ಧೇನುವು ಮೃತವಾದಾಗ ಅದರ ಸಣ್ಣ ಕರುವಿನ ಮೇಲಿನ ಕನಿಕರದಿಂದ ಅದಕ್ಕೆ ಸಹಾಯಮಾಡಬೇಕೆಂದು ಋಭುಗಳನ್ನು ಪ್ರಾರ್ಥಿಸಿದನು ಆಗ ಋಭುಗಳು ಬೇರೆ ಹಸುವನ್ನು ಸೃಷ್ಟಿಸಿ ಅದಕ್ಕೆ ಸತ್ತ ಹಸುವಿನ ಚರ್ಮವನ್ನು ಹೊದ್ದಿಸಿ ಆ ಕರುವಿನೊಂದಿಗೆ ಸೇರುವಂತೆ ಮಾಡಿದರು. ಇದು ಇವರ ಮಹಿಮೆಯು. ಸ್ಕಂದ ಸ್ವಾಮಿಗಳ ವಿವರಣೆಯಂತೆ,

ಆಶ್ರೌತಿಹಾಸಮಾಚಕ್ಷತೇ । ಋಷೇಃ ಕಸ್ಯಚಿದಗ್ನಿಹೋತ್ರಧೇನುಸ್ತರುಣವತ್ಸಾ ಮುಮೋರ । ತಸ್ಯಾಂ ವಿಕರ್ತಿತಾಯಾಂ ಆರುದತಾ ವತ್ಸೇನ ಉದ್ವೇಜಿತಃ ಋಭೂನ್ ಸ್ವಪಿತರೌ ವೃದ್ಧೌ ಪುನರ್ಯುವಾನೌ ಕುರ್ವತೋ ದದರ್ಶ । ತಾನುವಾಚ । ಮಾಮಸ್ಯಾಗ್ನಿಹೋತ್ರಧೇನುಂ ಮೃತಾಂ ಪುನರ್ಜೀವಯತೇತಿ । ತಸ್ಯ ಸ್ವಮಾಹಾತ್ಮ್ಯೇನ ತಸ್ಯಾಶ್ಚರ್ಮಣಃ ತಾಮೇವ ಗಾಂ ಆಶೇಷಾವಯೇವೋಪೇತಾಂ ಚಕ್ರುಃ ಇತಿ । ತದೇತದಿಹೋಚ್ಯತೇ ನಿಷ್ಟರ್ಮಣ ಇತಿ ।

ಒಬ್ಬ ಋಷಿಯ ಅಗ್ನಿಹೋತ್ರಧೇನುವು ಎಳೆಯ ಕರುವನ್ನು ಬಿಟ್ಟು ಸತ್ತುಹೋಯಿತು. ಅದನ್ನು ಕುಯ್ಯುವಾಗ ಆ ಎಳೆಯ ಕರುವಿನ ಆರ್ತನಾದವನ್ನು ಕೇಳಿ ಕನಿಕರದಿಂದ ಋಷಿಯು ಋಭುಗಳನ್ನು ಜ್ಞಾಪಿಸಿಕೊಂಡನು ಅವರು ತನ್ನ ವೃದ್ಧರಾದ ಮಾತಾಪಿತೃಗಳನ್ನು ಪುನಃ ವಯಸ್ಕರನ್ನಾಗಿ ಮಾಡುತ್ತಿದ್ದರು ಅವರ ಆ ಶಕ್ತಿಯನ್ನು ನೋಡಿ ಮೃತವಾದ ತನ್ನ ಅಗ್ನಿಹೋತ್ರಧೇನುವನ್ನೂ ಬದುಕಿಸಬೇಕೆಂದು ಕೇಳಿಕೊಂಡನು ಅವರು ಸತ್ತುಹೋಗಿದ್ದ ಆ ಹಸುವನ್ನು ಅದೇ ವಿಕರ್ತಿತವಾದ ಚರ್ಮದ ಹೊದ್ದಿಕೆಯಿಂದ ಪೂರ್ಣವಾದ ಅವಯವಗಳುಳ್ಳದ್ದನ್ನಾಗಿ ಮಾಡಿ ಆ ಹಸುವನ್ನು ಬದುಕಿಸಿದರು ಎಂದು ಹೇಳಿದೆ ಸಾಯಣರು ಹೇಳುವುದಕ್ಕೂ ಇದಕ್ಕೂ ಇರುವ ಮುಖ್ಯವ್ಯತ್ಯಾಸವು ಏನೆಂದರೆ, ಅವರು **ಅನ್ಯಾಂ ಧೇನುಂ ಕೃತ್ವಾ** ಎಂದಿದ್ದಾರೆ ಸ್ಕಂದಸ್ವಾಮಿಯು **ತಾಮೇವ ಗಾಂ ಆಶೇಷಾವಯವೋಪೇತಾಂ ಚಕ್ರುಃ** ಎಂದು ಹೇಳಿದಾರೆ

ಋಭು ಎಂಬ ಪದವು ಪ್ರಾಯಶಃ ರಭ್ (ಹಿಡಿದಿಕೋ) ಧಾತುವಿನಿಂದ ನಿಷ್ಪನ್ನವಾಗಿದೆ (೨-೩-೮೯ನ್ನು ಹೋಲಿಸಿ), ಆದುದರಿಂದಲೇ ಆ ಪದಕ್ಕೆ 'ಸಮಯಕ್ಕೆ ಒದಗುವ' 'ಕೈಚಳಕವುಳ್ಳ' ಎಂದು ಅರ್ಥವಾಗಿದೆ. ಈ ಋಭುಪದವು ಇದೇ ಅರ್ಥದಲ್ಲಿ ವಿಶೇಷಣವಾಗಿ ಇಂದ್ರ ಅಗ್ನಿ ಮತ್ತು ಆದಿತ್ಯರುಗಳಿಗೆ ಅನೇಕ ಸಲ ಉಪಯೋಗಿಸಲ್ಪಟ್ಟಿದೆ. ವಾಜ ಎಂಬ ಪದಕ್ಕೆ ಸಮರ್ಥ ಎಂತಲೂ ನಿಷ್ಣಾ ಎಂಬುದಕ್ಕೆ ಪ್ರಸಿದ್ಧವಾದ ಎಂತಲೂ ಅರ್ಥವಾಗುತ್ತದೆ. ಆದುದರಿಂದ ಋಭು ಮೊದಲಾದ ಪದಗಳು, ಅವರುಗಳ ಕೌಶಲ್ಯವನ್ನೂ ಸೂಚಿಸುವ ಅನ್ವರ್ಥನಾಮಕಗಳಾಗಿವೆ

ಇವರು ಮೊದಲು ದೇವತೆಗಳಾಗಿರಲಿಲ್ಲವೆಂಬುದು ಸ್ಪಷ್ಟವಾದ ವಿಷಯ ಆದರೆ ದೇವತೆಗಳಾಗುವ ಮುಂಚೆ ಅವರ ಸ್ವಭಾವವೇನು ಎಂಬುದು ಸ್ಪಷ್ಟವಾಗಿಲ್ಲ ಸೌಧನ್ವರು ಎಂದು ಹೇಳಿದಾಗಲೂ ಅವರು ಯಾರೆಂಬುದು ಗೊತ್ತಾಗುವುದಿಲ್ಲ ಸುಧನ್ವಾನ್ ಎಂಬುದು ರುದ್ರ ಮತ್ತು ಮರುತರಿಗೆ ಅನ್ವಯಿಸುವಂತೆ ಎರಡೇ ಸಲ ಋಗ್ವೇದದಲ್ಲಿ ಪ್ರಯೋಗಿಸಲ್ಪಟ್ಟಿರುವುದು ಅನೇಕ ಕಡೆ ಹೇಳಿರುವಂತೆ, ದ್ಯಾವಾಭೂಮಿಗಳು ಅವರ ಮಾತಾಪಿತೃಗಳಿರಬಹುದು ಮರೆಮಾಡಲಸಾಧ್ಯವಾದ ಸವಿತೃವಿನ ಮನೆಯಲ್ಲಿದ್ದುದರಿಂದ ಅವರಿಗೆ ಭೂಮಿಯನ್ನು ಫಲವತ್ತಾಗಿ ಮಾಡುವ ಶಕ್ತಿಯಿದೆಯೆಂದು ಹೇಳಿರಬಹುದು ಅನೇಕ ವಿದ್ವಾಂಸರು, ಈ ಮೂವರೂ ಮೂರು ಋತುಗಳ ಅಭಿಮಾನಿಗಳೆಂದೂ, ಅವರು ಹನ್ನೆರಡು ದಿನಗಳು ಸಿದ್ರಿಸಿದರೆಂಬುದು ಮಕರಸಂಕ್ರಾಂತಿ ಕಾಲದಲ್ಲಿ ಋತುಗಳು ಹನ್ನೆರಡು ದಿವಸ ಚಲಿಸದೇ ಇರುವುದಕ್ಕೆ ಅನ್ವಯಿಸುತ್ತದೆಯೆಂತಲೂ, ಬಟ್ಟಲೆಂಬುದು ಚಂದ್ರನೆಂತಲೂ, ಅದು ನಾಲ್ಕು ಆಯಿತೆಂಬುದು ಚಂದ್ರನ ನಾಲ್ಕು ರೂಪಗಳೆಂತಲೂ ಅಭಿಪ್ರಾಯಪಡುತ್ತಾರೆ ಒಟ್ಟಿನಲ್ಲಿ ಇವರು ಭೂಮಿ ಅಥವಾ ವಾಯುಮಂಡಲದಲ್ಲಿರುವ ಅಪ್ರಾಕೃತವ್ಯಕ್ತಿಗಳೆಂದೂ, ಅವರ ಕೌಶಲ್ಯವು ಅವರ ವಿಷಯವಾಗಿ ಅನೇಕ ಸಾಹಸಕರ್ಮಗಳ ಕಥೆಗಳು ಹೊರಡುವಂತೆ ಮಾಡಿತೆಂದೂ ಹೇಳಬಹುದು. ಆದರೆ ಋಗ್ವೇದವೊಂದನ್ನೇ ಆಧಾರವಾಗಿಟ್ಟುಕೊಳ್ಳುವುದಾದರೆ ಯಾವ ನಿಶ್ಚಿತ ಅಭಿಪ್ರಾಯಕ್ಕೂ ಅವಕಾಶವಿಲ್ಲ

ಮೂವತ್ತ್ಮೂರನೆಯ ಸೂಕ್ತವು.

ಚತುರ್ಥೇ೨ನುವಾಕೇ ತ್ರಯೋದಶ ಸೂಕ್ತಾನಿ। ತತ್ರ ಪ್ರ ಋಭುಭ್ಯ ಇತ್ಯೇಕಾದಶರ್ಚಂ ಪ್ರಥಮಂ ಸೂಕ್ತಂ ವಾಮದೇವಸ್ಯಾರ್ಷಂ ತ್ರೈಷ್ಟುಭಂ। ತುಹ್ಯಾದಿಪರಿಧಾಷಯೇದಮಾದಿಸೂಕ್ತಪಂಚಕಮೃಭುದೇವತಾಕಂ। ಅತ್ರಾನುಕ್ರಮಣಿಕಾ। ಪ್ರ ಋಭುಭ್ಯ ಏಕಾದಶಾರ್ಭವಂ ವಾ ಇತಿ॥ ವ್ಯೂಢೇ ದಶರಾತ್ರೇ ಚತುರ್ಥೇ೨ಹನಿ ವೈಶ್ವದೇವಶಸ್ತ್ರ ಆರ್ಭವನಿವಿದ್ಧಾನೀಯಮಿದಂ। ತಥಾ ಚ ಸೂತ್ರಿತಂ। ಪ್ರ ಋಭುಭ್ಯ ಪ್ರ ಶುಕ್ರೈತ್ವಿತಿ ವೈಶ್ವದೇವಂ। ಆ. ೮-೪। ಇತಿ॥

ಅನುವಾದವು:—ನಾಲ್ಕನೆಯ ಮಂಡಲದ ನಾಲ್ಕನೆಯ ಅನುವಾಕದಲ್ಲಿ ಹದಿಮೂರು ಸೂಕ್ತಗಳಿರುವವು ಅವುಗಳಲ್ಲಿ—**ಪ್ರ ಋಭುಭ್ಯಃ** ಎಂಬ ಈ ಸೂಕ್ತವು ಮೊದಲನೆಯದು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು ಈ ಸೂಕ್ತಕ್ಕೆ ವಾಮದೇವನು ಋಷಿಯು, ಈ ಸೂಕ್ತದಿಂದ ಪ್ರಾರಂಭಿಸಿ ಐದು ಸೂಕ್ತಗಳೂ ಋಭುದೇವತಾಕವು ಅನುಕ್ರಮಣಿಕೆಯಲ್ಲಿ—**ಪ್ರ ಋಭುಭ್ಯ ಏಕಾದಶಾರ್ಭವಂ ವಾ** ಎಂದು ಹೇಳಿರುವುದು. ತ್ರಿಷ್ಟುಪ್‌ಛಂದಸ್ಸು. ವ್ಯೂಢವೆಂಬ ಹತ್ತು ದಿನಗಳವರೆಗೆ ಮಾಡುವ ಯಾಗವಿಶೇಷದಲ್ಲಿ ನಾಲ್ಕನೆಯ ದಿವಸ ವೈಶ್ವದೇವಶಸ್ತ್ರಮಂತ್ರಪಠನ ಮಾಡುವಾಗ ಈ ಸೂಕ್ತವು ಆರ್ಭವನಿವಿದ್ಧಾನೀಯ ಸೂಕ್ತವನ್ನಾಗಿ ಪರಿಶಬೇಕೆಂದು ಆಶ್ವಲಾಯನ ಶ್ರೌತಸೂತ್ರದ – **ಪ್ರ ಋಭುಭ್ಯಃ ಪ್ರ ಶುಕ್ರೈತ್ವಿತಿ ವೈಶ್ವದೇವಂ** ಎಂಬ ಸೂತ್ರದಿಂದ (ಆ ೮-೪) ವಿವೃತವಾಗಿರುವುದು

ಸೂಕ್ತ—೩೩

ಮಂಡಲ—೪ ॥ ಅನುವಾಕ—೪ ॥ ಸೂಕ್ತ—೩೩ ॥
ಅಷ್ಟಕ—೩ ॥ ಅಧ್ಯಾಯ—೭ ॥ ವರ್ಗ—೧, ೨, ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
॥ ಋಷಿಃ—ವಾಮದೇವಃ ॥
॥ ದೇವತಾ—ಋಭವಃ ॥
। ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಪ್ರ ಋ॒ಭು॒ಭ್ಯೋ॑ ದೂ॒ತಮಿ॒ವ ವಾಚ॑ಮಿಷ್ಯ ಉ॒ಪಸ್ತಿ॑ರೇ॒ ಶ್ವೈ॒ತರೀಂ॑ ಧೇ॒ನು-
ಮಿ॒ಳೇ ।
ಯೇ ವಾ॒ತಜೂ॑ತಾಸ್ತ॒ರ॒ಣಿ॒ಭಿ॒ರೇ॒ವೈಃ ಪರಿ॒ ದ್ಯಾಂ ಸ॒ದ್ಯೋ ಅ॒ಪಸೋ॑
ಬ॒ಭೂ॒ವುಃ ॥ ೧ ॥

॥ ಪದಪಾಠಃ ॥

ಪ್ರ । ಋಭುಭ್ಯಃ । ದೂತಂ ಇವ । ವಾಚಂ । ಇಷ್ಯೇ । ಉಪಸ್ತಿರೇ । ಶ್ವೈತರೀಂ । ಧೇನುಂ । ಈಳೇ ।

ಯೇ । ವಾತಜೂತಾಃ । ತರಣಿಭಿಃ । ಏವೈಃ । ಪರಿ । ದ್ಯಾಂ । ಸದ್ಯಃ । ಅಪಸಃ । ಬಭೂವುಃ॥೧॥

॥ ಸಾಯಣಭಾಷ್ಯಂ ॥

ತತ್ರ ಋಭೂಣಾಂ ಪೂರ್ವಂ ಮನುಷ್ಯಾಣಾಮೇವ ಸತಾಂ ತಪಸಾ ದೇವತ್ವಪ್ರಾಪ್ತಿರಾರ್ಭವಂ ಶಂಸತ್ಯೃಭವೋ ವೈ ದೇವೇಭ್ಯಃ । ಐ. ಬ್ರಾಂ. ೩–೩೦ । ಇತ್ಯತ್ರ ಬ್ರಾಹ್ಮಣೇ ಸ್ಪಷ್ಟಮಾಮ್ನಾತಾ । ಕೇಚನ ಋಭವೋ ನಾಮ ಸೂರ್ಯರಶ್ಮಯ ಇತ್ಯಾಚಕ್ಷತೇ । ಅಹಂ ಯಜಮಾನ ಋಭುಭ್ಯ ಉರುಭಾಸಮಾನೇಭ್ಯ ಏತನ್ನಾಮಕೇಭ್ಯೋ ದೇವೇಭ್ಯೋ ವಾಚಂ ಸ್ತುತಿರೂಪಾಂ ಪ್ರೇಷ್ಯೇ । ಪ್ರೇರಯಾಮಿ । ಕಿಮಿವ । ದೂತಮಿವ । ಯಥಾ ದೂತಂ ಸ್ವಕಾರ್ಯಂ ಪ್ರತಿ ಪ್ರೇಷಯಂತಿ ತದ್ವತ್ । ಕಿಂಚ ಉಪಸ್ತಿರೇ ಸೋಮೋಪಸ್ತರಣಾಯ ಶ್ವೈತರೀಂ ಪಯೋಯುಕ್ತಾಂ ಶ್ವೇತವರಾಂ ವಾ ಧೇನುಮಿಳೇ । ಯಾಚಾಮ್ಯೃಭೂನ್ । ಯೇ ಋಭವೋ ವಾತಜೂತಾ ವಾತಸಮಾನಗತಯೋಽಪಸೋ ಜಗದುಪಕಾರಿಕರ್ಮಾಣಃ ಸಂತಸ್ತರಣಿಭಿಸ್ತಾರಕೈರೇವೈರ್ಗಮನಶೀಲೈರಶ್ವೈರ್ದ್ಯಾಮಂತರಿಕ್ಷಂ ಸದ್ಯಸ್ತದಾನೀಮೇವ ಪರಿ ಬಭೂವುಃ । ಪರಿಭವಂತಿ । ಸರ್ವತೋ ವ್ಯಾಪ್ನುವಂತಿ । ಅಥ ರಶ್ಮಯ ಏವ ಋಭವ ಇತ್ಯುಕ್ತ್ವಾದಾದಿತ್ಯಂ ವಾ ರಶ್ಮಯಃ ಪರಿತೋ ವ್ಯಾಪ್ನುವಂತಿ ॥

॥ ಪ್ರತಿಪದಾರ್ಥ ॥

ಋಭುಭ್ಯಃ—ಪ್ರಕಾಶಮಾನರಾದ ಋಭುಗಳನ್ನುದ್ದೇಶಿಸಿ । **ದೂತಮಿವ**—ದೂತನನ್ನು ಕಳುಹಿಸುವಂತೆ । **ವಾಚಂ**—ಸ್ತುತಿರೂಪವಾದ ವಾಕ್ಯನ್ನು । **ಪ್ರ ಇಷ್ಯೇ**—ಅರ್ಪಿಸಿ ಕಳುಹುತ್ತೇನೆ । **ಉಪಸ್ತಿರೇ**—ಸೋಮಮಿಶ್ರಣಾರ್ಥವಾಗಿ । **ಶ್ವೈತರೀಂ**—ಪಯಸ್ಸಿನಿಂದ ಯುಕ್ತವಾದ । **ಧೇನುಂ**—ಧೇನುವನ್ನು । **ಈಳೇ**—ಯಾಚಿಸುತ್ತೇನೆ । **ಯೇ**—ಯಾವ ಅದೇ ಋಭುಗಳು । **ವಾತಜೂತಾಃ**—ವಾಯುವಿಗೆ ಸಮಾನವಾದ ಗತಿಯುಳ್ಳವರಾಗಿಯೂ । **ಅಪಸಃ**—ಜಗತ್ತಿಗೆ ಉಪಕಾರಕವಾದ ಕರ್ಮವುಳ್ಳವರಾಗಿಯೂ । **ತರಣಿಭಿಃ**—ರಕ್ಷಕಗಳಾದವೂ । **ಏವೈಃ**—ಗಮನಶೀಲವಾದವೂ ಆದ ಅಶ್ವಗಳೊಡನೆ । **ದ್ಯಾಂ**—ಅಂತರಿಕ್ಷವನ್ನು । **ಸದ್ಯಃ**—ಒಡನೆಯೇ । **ಪರಿ ಬಭೂವುಃ**—ಸರ್ವತ್ರ ವ್ಯಾಪಿಸುತ್ತಾರೆ.

॥ ಭಾವಾರ್ಥ ॥

ಪ್ರಕಾಶಮಾನರಾದ ಋಭುಗಳನ್ನುದ್ದೇಶಿಸಿ ದೂತನನ್ನು ಕಳುಹುವಂತೆ ಯಜಮಾನನಾದ ನಾನು ಸ್ತುತಿರೂಪವಾದ ವಾಕ್ಯನ್ನರ್ಪಿಸಿ ಕಳುಹುತ್ತೇನೆ. ಸೋಮಮಿಶ್ರಣಾರ್ಥವಾಗಿ ಪಯಸ್ಸಿನಿಂದ ಯುಕ್ತವಾದ ಧೇನುವನ್ನು ಯಾಚಿಸುತ್ತೇನೆ. ಯಾವ ಅದೇ ಋಭುಗಳು ವಾಯುವಿಗೆ ಸಮಾನವಾದ ಗತಿಯುಳ್ಳವರಾಗಿಯೂ, ಜಗತ್ತಿಗೆ

ಉಪಕಾರಕವಾದ ಕರ್ಮವುಳ್ಳವರಾಗಿಯೂ ಸಹ ರಕ್ಷಕವಾದುವೂ ಗಮನಶೀಲವಾದವೂ ಆದ ಅಶ್ವಗಳೊಡನೆ ಒಡನೆಯೇ ಅಂತರಿಕ್ಷದಲ್ಲಿ ಸರ್ವತ್ರ ವ್ಯಾಪಿಸುತ್ತಾರೆ.

English Translation.

I send my prayer as a messenger to the Ribhus, I solicit (of them) the milch cow, the yielder of the white milk, for the dilution (of the Soma libation), for they, as swift as the wind, the doers of good works, were borne quickly across the firmament by rapid steeds.

॥ ಸಂಹಿತಾಪಾಠಃ ॥

ಯದಾರಮಕ್ರನ್ನೃಭವಃ ಪಿತೃಭ್ಯಾಂ ಪರಿವಿಷ್ಟೀ ವೇಷಣಾ ದಂಸನಾಭಿಃ ।
ಆದಿದ್ದೇವಾನಾಮುಪ ಸಖ್ಯಮಾಯನ್ಧೀರಾಸಃ ಪುಷ್ಟಿಮವಹನ್ಮನಾಯೈ ॥

॥ ಪದಪಾಠಃ ॥

ಯದಾ । ಅರಂ । ಅಕ್ರನ್ । ಋಭವಃ । ಪಿತೃಭ್ಯಾಂ । ಪರಿವಿಷ್ಟೀ । ವೇಷಣಾ । ದಂಸನಾಭಿಃ ।
ಆತ್ । ಇತ್ । ದೇವಾನಾಂ । ಉಪ । ಸಖ್ಯಂ । ಆಯನ್ । ಧೀರಾಸಃ । ಪುಷ್ಟಿಂ । ಅವಹನ್ ।
ಮನಾಯೈ ॥ ೨ ॥

॥ ಸಾಯಣಭಾಷ್ಯಂ ॥

ಯದಾ ಯಸ್ಮಿನ್ಕಾಲ ಋಭವಃ ಪಿತೃಭ್ಯಾಂ ಮಾತಾಪಿತೃಭ್ಯಾಂ ಪರಿವಿಷ್ಟೀ ಪರಿವೇಷಣೇನ ಪರಿಚರ್ಯಯಾ ವೇಷಣಾ ವೇಷಣೇನ ವ್ಯಾಪ್ತ್ಯಾ । ಯದ್ವಾ । ವೇಷೇಣ ಜರದ್ರೂಪಯೋರ್ಯುವತ್ವಕರಣೇನ ದಂಸನಾಭಿರನ್ಯೈಶ್ಚ ಮಸನಿರ್ಮಾಣಾದಿಕರ್ಮಭಿರರಮತ್ಯರ್ಥಮಕ್ರನ್ ಆದಿದನಂತರಮೇವ ದೇವಾನಾಮಿಂದ್ರಾದೀನಾಂ ಸಖ್ಯಂ ಸಖಿತ್ವಂ ಸಮಾನಶ್ಯಾನತ್ವಂ ದೇವತಾತ್ವಮುಪಾಯನ್। ಅಗಮ್ಮನ್। ಯುವಶಾ ಕರ್ತ್ರಾ । ಋಗ್ವೇ. ೧-೧೬೧-೩ । ಇತಿ ದೇವತ್ವಪ್ರಾಪ್ತೇರೇಕಾಂತತ್ವೇನ ದೇವೈರುಕ್ತತ್ವಾದಿತಿ ಭಾವಃ । ಕಿಂಚ ಧೀರಾಸೋ ಧೀರಾ ಬುದ್ಧಿಮಂತಸ್ತೇಷಾಂ ಪುಷ್ಟಿಂ ಗವಾದಿವಿಷಯಾಂ ಮನಾಯೈ ಮತಿಕೃತೇ ಯಜಮಾನಾಯಾವಹನ್ । ವಹಂತಿ । ಧಾರಯಂತಿ । ಯದ್ವಾ । ಸವಿಷಯಾಂ ಪುಷ್ಟಿಂ ಮನಾಯೈ ಮನಸೇ ಪ್ರೀತ್ಯೈ ಮನಸ್ಯತ್ಯಾಯಾವಹನ್ ॥

॥ ಪ್ರತಿಪದಾರ್ಥ ॥

ಯದಾ—ಯಾವಾಗ । **ಋಭವಃ**—ಋಭುಗಳು । **ಪಿತೃಭ್ಯಾಂ**—ತಮ್ಮ ಮಾತಾಪಿತೃಗಳಿಗೆ । **ವೇಷಣಾ**—ಶಕ್ತಿಯುತವಾದ ಯೌವ್ವನವನ್ನುಂಟುಮಾಡುವುದರಿಂದಲೂ । **ದಂಸನಾಭಿಃ**—ಇತರ ಅಲೌಕಿಕವಾದ ಕರ್ಮಗಳಿಂದಲೂ । **ಪರಿವಿಷ್ಟೀ**—ಉಪಚರಿಸುತ್ತಾ । **ಅರಂ ಅಕ್ರನ್**—ಸಿದ್ಧಿಯನ್ನು ಪಡೆದರೋ । **ಆದಿತ್**—ಆ ಒಡನೆಯೇ । **ದೇವಾನಾಂ**—ಇಂದ್ರಾದಿದೇವತೆಗಳ । **ಸಖ್ಯಂ**—ಸಖಿತ್ವವನ್ನು । **ಉಪ ಅಯನ್**—ಪಡೆದರು । **ಧೀರಾಸಃ**—ಪ್ರಾಜ್ಞರಾದ ಇವರು । **ಪುಷ್ಟಿಂ**—ಗವಾದಿರೂಪವಾದ ಸಂಪತ್ಪುಷ್ಟಿಯನ್ನು । **ಮನಾಯ್ಯೈ**—ಸ್ತುತಿಕರ್ತನಾದ ಯಜಮಾನನಿಗೆ । **ಅವಹನ್**– ಒದಗಿಸಿಕೊಡುತ್ತಾರೆ

ಭಾವಾರ್ಥ ॥

ಋಭುಗಳು ತಮ್ಮ ಅಸಾಧಾರಣವಾದ ಕರ್ಮಗಳಿಂದಲೂ ವ್ಯಾಪಕವಾದುದೂ, ಶಕ್ತಿಯುತವಾದುದೂ ಆದ ಯೌವನ ಪ್ರಾಪ್ತಿಯಿಂದಲೂ ತಮ್ಮ ಮಾತಾಪಿತೃಗಳನ್ನು ಪಚರಿಸುತ್ತಾ ಯಾವಾಗ ಸಿದ್ಧಿಯನ್ನು ಪಡೆದರೋ, ಆ ಒಡನೆಯೇ, ಇಂದ್ರಾದಿದೇವತೆಗಳ ಸಖಿತ್ವವನ್ನು ಪಡೆದರು ಪ್ರಾಜ್ಞರಾದ ಇವರು ಗವಾದಿರೂಪವಾದ ಸಂಪತ್ಪುಷ್ಟಿಯನ್ನು ಸ್ತುತಿಕರ್ತನಾದ ಯಜಮಾನನಿಗೆ ಒದಗಿಸಿಕೊಡುತ್ತಾರೆ.

English Translation

When the Ribhus, by honouring their parents w th renovated (youth), and by other works, had achieved enough, they thereupon proceeded to the society of the gods, and considerate, they bring nourshment to the devout (worshipper)

॥ ಸಂಹಿತಾಪಾಠಃ ॥

ಪುನರ್ಯೇ ಚಕ್ರುಃ ಪಿತರಾ ಯುವಾನಾ ಸನಾ ಯೂಪೇವ ಜರಣಾ ಶಯಾನಾ ।

ತೇ ವಾಜೋ ವಿಭ್ವಾ ಋಭುರಿಂದ್ರವಂತೋ ಮಧುಷ್ಪರಸೋ ನೋಽವಂತು ಯಜ್ಞಂ ॥ ೩ ॥

॥ पदपाठः ॥

पुनः । येऽ । चक्र्युः । पितरा । युवाना । सना । युऽपस्याऽइव । जरणा । शयाना ।
शे । वाजः । विऽभ्वा । ऋभुः । इन्द्र्यवंतः । मधुऽपेरसः । नः । अवंतु ।
यज्ञं ॥ ३ ॥

॥ सायणभाष्यं ॥

ये ऋभवः पितरा मातापितरौ यूपेव भिन्नस्थाणू इव जरणा जीर्णौ शयाना शयानौ पुनः सना सदा युवाना युवानौ चक्र्युः । नित्यतरुणावकुर्वन् । शे वाजोऽविभ्वा ऋभुश्च एतन्नामकास्त्रयः सुधन्वन आंगिरसस्य पुत्रा ऋभव इन्द्र्यवंतोऽनुग्राहकेणेंद्रेण सदृशंतोः मधुपेरसोः मधुरस्य सोमरसस्य भक्षयितारोः मनोहररूपा वा नोऽस्मदीयं यज्ञमवंतु । रक्षंतु गच्छंतु वा ॥

॥ प्रतिपदार्थ ॥

येऽ—ಯಾವ ಋಭುಗಳು । **यूपेव**—ಕತ್ತರಿಸಲ್ಪಟ್ಟ ತುಂಡುಮರಗಳಂತೆ । **जरणा**—ಶಿಥಿಲಾಂಗರೂ । **शयाना**—ಒಂಜೇ ಕಡೆ ಬಿದ್ದಿದ್ದವರೂ ಆದ । **पितरा**—ತಮ್ಮ ಮಾತಾಪಿತೃಗಳನ್ನು । **पुनः**—ತಿರುಗಿಯೂ । **सना**—ಶಾಶ್ವತವಾಗಿ । **युवा ना**—ಯುವಕರಾಗುವಂತೆ । **चक्र्युः**—ಮಾಡಿದರೋ । **शे**—ಅಂತಹ । **वाजः, विभ्वा, ऋभुः**—ವಾಜ, ವಿಭ್ವ ಮತ್ತು ಋಭು ಎಂಬ ಮೂವರು ಋಭುಗಳೂ । **इन्द्र्यवंतः**—ಇಂದ್ರನೊಡಗೂಡಿಕೊಂಡು । **मधुऽपेरसः**—ಮಧುರವಾದ ಸೋಮರಸವನ್ನು ಪಾನಮಾಡುವವರಾಗಿ । **नः**—ನಮ್ಮ । **यज्ञं**—ಯಜ್ಞವನ್ನು । **अवंतु**--ರಕ್ಷಿಸಲಿ

॥ भावार्थ ॥

ಕತ್ತರಿಸಲ್ಪಟ್ಟ ತುಂಡುಮರಗಳಂತೆ ಒಂದೇ ಕಡೆ ಬಿದ್ದಿದ್ದವರೂ, ಶಿಥಿಲಾಂಗರೂ ಆದ ತಮ್ಮ ಮಾತಾಪಿತೃಗಳನ್ನು ಪುನಃ ಶಾಶ್ವತವಾಗಿ ಯುವಕರಾಗುವಂತೆ ಯಾವ ಋಭುಗಳು ಮಾಡಿದರೋ ಆದೇ ವಾಜ, ವಿಭು, ಋಭು ಎಂಬ ಮೂವರು ಋಭುಗಳೂ ಸಹ ಇಂದ್ರನೊಡಗೂಡಿಕೊಂಡು ಮಧುರವಾದ ಸೋಮರಸವನ್ನು ಪಾನಮಾಡುವವರಾಗಿ ನಮ್ಮ ಯಜ್ಞವನ್ನು ರಕ್ಷಿಸಲಿ.

English Translation.

May they who rendered their decrepid and dropsy parents, when, like two dry posts, again perpetually young, Vaja, Vibhwan, and Ribhu associated with Indra, drinkers of the Soma juice, protect our sacrifice.

॥ संहितापाठः ॥

यत्संवत्सꣳवत्सरो गामरक्षन्यत्संवत्सꣳवत्सरो मा अपिंशन्।
यत्संवत्सꣳवत्सरन्नाभरꣳसो अस्याꣳस्ताभिः शमीभिरमृतत्वमाशुः ॥४॥

॥ पदपाठः ॥

यत् । सꣳवत्सꣳ । ऋभवः । गाम् । अरक्षन् । यत् । सꣳवत्सꣳ । ऋभवः । माः ।
अपिंशन् ।
यत् । सꣳवत्सꣳ । अभरन् । भासः । अस्याः । ताभिः । शमीभिः । अमृतꣳत्वꣳ ।
आशुः ॥ ४ ॥

॥ सायणभाष्यं ॥

संवत्सं । संवसंति भूतान्यस्मिन्निति संवत्सः संवत्सरः । संवत्सरपर्यंतमृभवो गां मृतामरक्षन्नपालयन् । स्वसामर्थ्यादिति यत् यदेतत्कर्मास्ति । तथा संवत्सं संवत्सरमृभवो मास्तस्या एव गोर्मांसमपिंशन् अवयवानकुर्वन्निति यत् । किंच संवत्सं संवत्सरपर्यंतमस्या भासोऽभरन् दीप्तिरवयवशोभा अकुर्वन्निति यत् ताभिः शमीभिर्मायाया गोर्नवीकरणविषयैः कर्मभिरमृतत्वमाशुः । देवत्वं प्राप्ताः । धेनुः कर्त्रेतीति देवत्वप्राप्तिसाधनत्वेन देवैः प्रतिश्रुतत्वात् । यदद्य । अत्र संवत्समित्येतदृत्वृत्वेन सहेति व्याख्येयं ॥

॥ प्रतिपदार्थ ॥

ऋभवः—ಋಭುಗಳು । **संवत्सं**—ಒಂದು ಸಂವತ್ಸರ ಪರ್ಯಂತ । **गाम्**—ಮೃತವಾದ ಗೋವನ್ನು । **अरक्षन्**—ಜೀವಂತವಾಗಿರುವಂತೆ ಮಾಡಿದರು ಎಂಬ । **यत्**—ಯಾವ ಕರ್ಮವಿದೆಯೋ । **संवत्सं**—ಒಂದು ಸಂವತ್ಸರ ಪರ್ಯಂತ । **ऋभवः**—ಋಭುಗಳು । **माः**—ಆ ಗೋವಿನ ಮಾಂಸವನ್ನು । **अपिंशन्**—ಅವಯವಗಳಲ್ಲಿ ತುಂಬಿ ಪುಷ್ಟವಾಗಿರುವಂತೆ ಮಾಡಿದರು ಎಂಬ । **यत्**—ಯಾವ ಕರ್ಮವಿದೆಯೋ । **संवत्सं**—ಒಂದು ಸಂವತ್ಸರ ಪರ್ಯಂತ । **अस्याः**—ಈ ಗೋವಿನ । **भासः**—ಕಾಂತಿಯುತವಾದ ಸೌಂದರ್ಯವನ್ನು । **अभरन्**—ರಕ್ಷಿಸಿದರು ಎಂಬ । **यत्**—ಯಾವ ಕರ್ಮವಿದೆಯೋ । **ताभिः**—ಇಂತಹ । **शमीभिः**—ಸಕಲವಾದ ಅಲೌಕಿಕಕರ್ಮಗಳಿಂದಲೂ । **अमृतत्वं**—ದೇವತ್ವವನ್ನು । **आशुः**—ಹೊಂದಿದರು.

॥ ಭಾವಾರ್ಥ ॥

ಋಭುಗಳು ಒಂದು ಸಂವತ್ಸರ ಪರ್ಯಂತ ಮೃತವಾದ ಗೋವಿಗೆ ಜೀವವನ್ನುಂಟುಮಾಡಿ ಅದು ಜೀವಿಸಿರುವಂತೆ ಮಾಡಿದರು ಅದರ ಅವಯವಗಳಲ್ಲಿ ಮಾಂಸವನ್ನು ತುಂಬಿ ಒಂದು ಸಂವತ್ಸರಕಾಲ ಅದು ಪುಷ್ಟವಾಗಿರುವಂತೆ ಮಾಡಿದರು. ಒಂದು ಸಂವತ್ಸರಕಾಲ ಅದರ ಕಾಂತಿಯುತವಾದ ಸೌಂದರ್ಯವನ್ನು ರಕ್ಷಿಸಿದರು. ಇತ್ಯಾದಿ ಇವರ ಅಸಾಧಾರಣವಾದ ಯಾವ ಯಾವ ಕರ್ಮಗಳಿವೆಯೋ ಅವುಗಳ ಪ್ರಭಾವದಿಂದ ದೇವತ್ವವನ್ನು ಪಡೆದರು (ವತ್ಸ ಶಬ್ದಕ್ಕೆ ಕರುವೆಂದೂ ಅರ್ಥಮಾಡಬಹುದು.)

English Translation.

Inasmuch as for a year the Ribhus preserved the (dead) cow, inasmuch as for a year they invested it with flesh, inasmuch as for a year they continued its beauty, they obtaied by their (these) acts immortality.

॥ ಸಂಹಿತಾಪಾಠಃ ॥

ಜ್ಯೇಷ್ಠ ಆಹ ಚಮಸಾ ದ್ವಾ ಕರೇತಿ ಕನೀಯಾನ್ತ್ರೀನ್ ಕೃಣವಾಮೇತ್ಯಾಹ।
ಕನಿಷ್ಠ ಆಹ ಚತುರಸ್ಕರೇತಿ ತ್ವಷ್ಟ ಋಭವಸ್ತತ್ಪನಯದ್ವಚೋ ವಃ ॥ ೫ ॥

॥ ಪದಪಾಠಃ ॥

ಜ್ಯೇಷ್ಠಃ । ಆಹ । ಚಮಸಾ । ದ್ವಾ । ಕರ । ಇತಿ । ಕನೀಯಾನ್ । ತ್ರೀನ್ । ಕೃಣವಾಮ । ಇತಿ । ಆಹ ।
ಕನಿಷ್ಠಃ । ಆಹ । ಚತುರಃ । ಕರ । ಇತಿ । ತ್ವಷ್ಟಾ । ಋಭವಃ । ತತ್ । ಪನಯತ್ । ವಚಃ । ವಃ ॥ ೫ ॥

॥ ಸಾಯಣಭಾಷ್ಯಂ ॥

ಏಕಂ ಚಮಸಂ ಚತುರಸ್ಕೃಣೋತೇತಿ । ಋಗ್ವೇ ೧-೧೬೧-೨ । ಇತಿ ಯದಾ ದೇವದೂತೋಽಗ್ನಿರ್ಭೂಯಾಹ ದೇವತ್ವಸ್ಯಾಪ್ತ್ಯರ್ಥೇನ ತದಾ ತೇಷು ಮಧ್ಯೇ ದೇವತ್ವಸ್ಯಾಪ್ತ್ಯರ್ಥ ಏಕೋ ಜ್ಯೇಷ್ಠ ಋಭುರಿತರಾವಾಹ । ಕಿಮಿತಿ । ಉಚ್ಯತೇ । ಚಮಸಾ ದ್ವಾ ಕರೇತಿ । ಏಕಮೇವ ಸಂತಂ ದ್ವೌ ಕೃಣವಾಮೇತಿ । ಕನೀಯಾನ್ ತದನಂತರೋ ವಿಭ್ವಾ ತ್ರೀನ್ ಕೃಣವಾಮ ಕರವಾಮೇತ್ಯಾಹ । ತದವರಃ ಕನಿಷ್ಠೋ

ವಾಜಶ್ಚತುರಃ ಕರ ಚತುರ್ಧಾ ಕರವಾಮೇತ್ಯಾಹ । ತದೇವ ಚತುಷ್ಕರಣರೂಪಂ ಹೇ ಋಭವಸ್ತ್ವಷ್ಟಾ ಯುಷ್ಮದ್ಗುರುಃ ವೋ ವಚಃ ಯುಷ್ಮದ್ವಚನಂ ಪನಯತ್ । ಅಸ್ತೌತ್ । ಅಂಗೀಚಕಾರೇತ್ಯರ್ಥಃ ॥

। ಪ್ರತಿಪದಾರ್ಥ ।

ಜ್ಯೇಷ್ಠಃ—ಮೂವರಲ್ಲಿ ದೊಡ್ಡವನು । **ಚಮಸಾ**—ಚಮಸಪಾತ್ರೆಯನ್ನು । **ದ್ವಾ ಕರ ಇತಿ**—ಎರಡಾಗಿ ಮಾಡೋಣ ಎಂದು । **ಆಹ**—ಹೇಳಿದನು । **ಕನೀಯಾನ್**—ಅವನಿಗಿಂತಲೂ ಚಿಕ್ಕವನು (ಎರಡನೆಯವನು) । **ತ್ರೀನ್**—ಮೂರು ಭಾಗವಾಗಿ । **ಕೃಣವಾಮ**—ಮಾಡೋಣ । **ಇತ್ಯಾಹ**—ಎಂಬುದಾಗಿ ಹೇಳಿದನು । **ಕನಿಷ್ಠಃ**—ಎಲ್ಲರಿಗಿಂತಲೂ ಚಿಕ್ಕವನು । **ಚತುರಃ**—ನಾಲ್ಕು ಭಾಗಗಳನ್ನಾಗಿ । **ಕರ ಇತ್ಯಾಹ**—ಮಾಡೋಣ ಎಂದು ಹೇಳಿದನು । **ಋಭವಃ**—ಎಲೈ ಋಭುಗಳೇ । **ತ್ವಷ್ಟಾ**—ತ್ವಷ್ಟೃವು । **ವಃ**—ನಿಮ್ಮ । **ತತ್ ವಚಃ**—ಕುಶಲತೆಯನ್ನು ಕೋರುವ ಈ ಮಾತುಗಳನ್ನು । **ಪನಯತ್**—ಪ್ರಶಂಸಿಸಿದ್ದಾನೆ.

॥ ಭಾವಾರ್ಥ ॥

ಒಂದಾಗಿದ್ದ ಚಮಸಪಾತ್ರೆಯನ್ನು ಎರಡಾಗಿ ಮಾಡೋಣ ಎಂದು ಮೂರು ಋಭುಗಳಲ್ಲಿ ಎಲ್ಲರಿಗಿಂತಲೂ ದೊಡ್ಡವನು ಹೇಳಿದನು ಮೂರು ಭಾಗವಾಗಿ ಮಾಡೋಣ ಎಂದು ಎರಡನೆಯವನು ಹೇಳಿದನು ನಾಲ್ಕು ಭಾಗಗಳನ್ನಾಗಿ ಮಾಡೋಣ ಎಂದು ಕನಿಷ್ಠನು ಹೇಳಿದನು. ಎಲೈ ಋಭುಗಳೇ, ನಿಮ್ಮೆಲ್ಲರ ಕುಶಲತೆಯನ್ನು ತೋರಿಸುವ ನಿಮ್ಮ ಈ ಮಾತುಗಳನ್ನು ತ್ವಷ್ಟೃವು ಪ್ರಶಂಸಿಸಿದ್ದಾನೆ.

English Translation

The eldest said, let us make two ladles, the youngest said, let us make three : O Rubhus, Twashtri, has applauded your proposal.

॥ ಸಂಹಿತಾಪಾಠಃ ॥

ಸತ್ಯಮೂಚುರ್ನರ ಏವಾ ಹಿ ಚಕ್ರುರನು ಸ್ವಧಾಮೃಭವೋ ಜಗ್ಮುರೇತಾಂ।
ವಿಭ್ರಾಜಮಾನಾಂಶ್ಚಮಸಾಁ ಅಹೇವಾವೇನತ್ತ್ವಷ್ಟಾ ಚತುರೋ ದದೃಶ್ವಾನ್॥

॥ ಪದಪಾಠಃ ॥

ಸತ್ಯಂ । ಊಚುಃ । ನರಃ । ಏವ । ಹಿ । ಚಕ್ರುಃ । ಅನು । ಸ್ವಧಾಂ । ಋಭವಃ । ಜಗ್ಮುಃ । ಏತಾಂ ।

ವಿಭ್ರಾಜಮಾನಾನ್ । ಚಮಸಾನ್ । ಅಹಾ ಇವ । ಅವೇನತ್ । ತ್ವಷ್ಟಾ । ಚತುರಃ । ದದೃಶ್ವಾನ್ ॥

॥ सायणभाष्यं ॥

नरो मनुष्यरूपा ऋभवः सत्यमूचुः । सत्यमेवाब्रुवन् । हि यस्मादेते एवैवं चक्र्युः । चक्रुरेऽकुर्वन् । यथोक्तं तथैव कृतत्वादित्यभिप्रायः । अनु चतुर्धाकरणानंतरमेतां तृतीयसवनगतां स्वधां सोमाख्यममृतमृभवो जगमुः । एकं चमसं चतुरस्कृतेन सार्धं देवैर्यज्ञियासो भविष्यथेति कृतत्वात् । अथ त्वष्टा देवो विभ्राजमानानहेवाहानीव दीप्यमानान्कृमसान्कृतुरो ददृशान्वृष्ण्वान् सन्नेनेत् । अकामयत । अंगीचकारेत्यर्थः ॥

॥ प्रतिपदार्थ ॥

नरः—मनुष्यरूपरादा ऋभुगळु । **सत्यं**—सत्यवाक्यन्नु । **ऊचुः**—ऽऽळिदरु । **हि**—यावा क्रियाशक्तियिंद । **एव**—मेलॆ ऽऽळिदंते । **चक्र्युः**—ऒदगिद्द चमस पात्रॆयन्नु नाल्कु भागगळागुवंते माडिदरो । **अनु**—आ ऒडनॆयॆ । **एतां**—तृतीयसवनगतवाद । **स्वधां**—सोमरूपवाद आमृतवन्नु । **ऋभवः**—ऋभुगळु । **जगमुः**—पडॆदरु । **कृण्वा**—त्वष्टृवु । **अहेव**—अहस्सिनंते । **विभ्राजमानान्**—प्रकाशिसुत्तिद्द । **चतुरः चमसान्**—नाल्कु पात्रॆगळन्नू । **ददृशान्**—नोडुत्ता । **अनेनत्**—तृप्तियन्नु व्यक्तपडिसिदनु.

॥ भावार्थ ॥

Leaders (of rites), conveyers of sacrifices, Indra and Vayu, give to us for the offerer (of the oblation), those Niyuts which are your (steeds), and are desired of many.

ನಲವತ್ತೆಂಟನೆಯ ಸೂಕ್ತವು

। ಸಾಯಣಭಾಷ್ಯಂ ।

ವಿಹಿ ಹೋತ್ರಾ ಇತಿ ಪಂಚರ್ಚಂ ತೃತೀಯಂ ಸೂಕ್ತಂ ವಾಮದೇವ್ಯಂ ವಾಯವ್ಯಂ । ಅತ್ರಾನುಕ್ರಮಣಿಕಾ । ವಿಹಿ ಪಂಚ ವಾಯವ್ಯಮಿತಿ ॥ ಸೂಕ್ತವಿನಿಯೋಗೋ ಲೈಂಗಿಕಃ ॥ ಅದ್ಯಾ ದಶರಾತ್ರೇ ಚತುರ್ಥೇ೭ಹನಿ ಪ್ರಯುಗಶಸ್ತ್ರೇ ವಾಯವ್ಯತೃಚಸ್ಯ ದ್ವಿತೀಯಾ । ತಥಾ ಚ ಸೂತ್ರಿತಂ । ವಿಹಿ ಹೋತ್ರಾ ಅವೀತಾ ವಾಯೋ ಶತಂ ಹರೀಣಾಂ । ಅ. ೭-೧೧ । ಇತಿ ॥

ಅನುವಾದವು—**ವಿಹಿ ಹೋತ್ರಾಃ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಾಮದೇವನು ಋಷಿಯು, ವಾಯುವು ದೇವತೆಯು, ಅನುಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ವಿಹಿ ಪಂಚ ವಾಯವ್ಯಂ** ಎಂದು ಹೇಳಿರುವುದು. ಸೂಕ್ತವಿನಿಯೋಗವು ಲೈಂಗಿಕವು, ಈ ಸೂಕ್ತದ ಮೊದಲನೆಯ ಋಕ್ಕನ್ನು ದಶರಾತ್ರವೆಂಬ ಯಾಗದ ನಾಲ್ಕನೆಯ ದಿವಸ ಪ್ರಯುಗಶಸ್ತ್ರಮಂತ್ರ ಪರನಕಾಲದಲ್ಲಿ ವಾಯುದೇವತಾಕವಾದ ತೃಚದಲ್ಲಿ (ಮೂರು ಋಕ್ಕುಗಳಲ್ಲಿ) ಎರಡನೆಯ ಋಕ್ಕನ್ನಾಗಿ ಪರಿಸ ಬೇಕೆಂದು ಆಶ್ವಲಾಯನಶ್ರೌತಸೂತ್ರದ—**ವಿಹಿ ಹೋತ್ರಾ ಅವೀತಾ ವಾಯೋ ಶತಂ ಹರೀಣಾಂ** ಎಂಬ ಸೂತ್ರದಿಂದ (ಅ ೭-೧೧) ವಿವೃತವಾಗಿರುವುದು.

ಸೂಕ್ತ—೪೮

ಮಂಡಲ—೪ ॥ ಅನುವಾಕ—೫ ॥ ಸೂಕ್ತ—೪೮ ॥
ಆಷ್ಟಕ—೩ ॥ ಅಧ್ಯಾಯ—೭ ॥ ವರ್ಗ—೨೪ ॥
। ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ।
। ಋಷಿಃ—ವಾಮದೇವಃ ।
। ದೇವತಾ—ವಾಯುಃ ।
। ಛಂದಃ—ಅನುಷ್ಟುಪ್ ।

॥ ಸಂಹಿತಾಪಾಠಃ ॥

ವಿಹಿ ಹೋತ್ರಾ ಅವೀತಾ ವಿಪೋ ನ ರಾಯೋ ಅರ್ಯಃ ।
ವಾಯವಾ ಚಂದ್ರೇಣ ರಥೇನ ಯಾಹಿ ಸುತಸ್ಯ ಪೀತಯೇ ॥ ೧ ॥

॥ ಪದಪಾಠಃ ॥

ವಿಹಿ । ಹೋತ್ರಾಃ । ಅವೀತಾಃ । ವಿಪಃ । ನ । ರಾಯಃ । ಅರ್ಯಃ ।
ವಾಯೋ ಇತಿ । ಆ । ಚಂದ್ರೇಣ । ರಥೇನ । ಯಾಹಿ । ಸುತಸ್ಯ । ಪೀತಯೇ ॥ ೧ ॥

॥ ಸಾಯಣಭಾಷ್ಯಂ ॥

ಹೇ ವಾಯೋ ವಿಹಿ । ವೀಹಿ । ಭಕ್ಷಯ । ಹೋತ್ರಾ ಹೋಮಸಾಧಿಕಾಃ ಸೋಮಾಹುತೀರವೀತಾ ಅನ್ಯೈಃ ಪೂರ್ವಮಭಕ್ಷಿತಾ ವಿಪೋ ನ ಶತ್ರೂಣಾಂ ವೇಪಯಿತಾ ರಾಜೇವ । ಕಿಂಚಾರ್ಯಃ ಸ್ತೋತುರ್ಮಮ ರಾಯೋ ಧನಾನಿ ಸಂಪಾದಯೇತಿ ಶೇಷಃ । ಹೇ ವಾಯೋ ಚಂದ್ರೇಣಾಹ್ಲಾದಕೇನ ರಥೇನಾಯಾಹಿ ಸುತಸ್ಯ ಸೋಮಸ್ಯ ಪೀತಯೇ ಪಾನಾಯ ॥

॥ ಪ್ರತಿಪದಾರ್ಥ ॥

ವಾಯೋ—ಎಲೈ ವಾಯುವೇ । **ಅವೀತಾಃ**—ಇತರರಿಂದ ಪರಿಗ್ರಹಿಸಲ್ಪಡದೇ ಶುದ್ಧವಾಗಿರುವ । **ಹೋತ್ರಾಃ**—ಸೋಮಾಹುತಿಗಳನ್ನು । **ವಿಪೋ ನ**—ಶತ್ರುಗಳನ್ನು ಭಯಪಡಿಸುವ ಶಕ್ತಿಯುಳ್ಳ ರಾಜನಂತೆ । **ವೀಹಿ**—ಭಕ್ಷಿಸು । **ಅರ್ಯಃ**—ಸ್ತೋತೃವಾದ ನನಗೆ । **ರಾಯಃ**—ಧನಗಳನ್ನು ಕೊಡು । **ಚಂದ್ರೇಣ**—ಆಹ್ಲಾದಕಾರಕವಾದ । **ರಥೇನ**—ರಥದೊಡನೆ । **ಸುತಸ್ಯ**—ಸೋಮರಸದ । **ಪೀತಯೇ**—ಪಾನಕ್ಕಾಗಿ । **ಆ ಯಾಹಿ**—ದಯಮಾಡು.

॥ ಭಾವಾರ್ಥ ॥

ಎಲೈ ವಾಯುವೇ, ಇತರರಿಂದ ಪರಿಗ್ರಹಿಸಲ್ಪಡದೇ ಶುದ್ಧವಾಗಿರುವ ಸೋಮಾಹುತಿಗಳನ್ನು ಶತ್ರುಭೀಕರನಾದ ರಾಜನಂತೆ ಭಕ್ಷಿಸು. ಸ್ತೋತೃವಾದ ನನಗೆ ಧನಗಳನ್ನು ಕೊಡು: ಆಹ್ಲಾದಕಾರಕವಾದ ರಥದೊಡನೆ ಸೋಮರಸದ ಪಾನಕ್ಕಾಗಿ ದಯಮಾಡು.

English Translation.

Drink, Vayu, the oblations yet untasted, like (a prince) the terr ifier of foes, (bestow) upon the worshipper wealth: come with your brilliant car to drink the Soma juice

॥ संहितापाठः ॥

नियुर्वानो अशस्तीर्नियुत्वाँ इन्द्रसारथिः ।
वायवा चन्द्रेण रथेन याहि सुतस्य पीतये ॥ ३ ॥

॥ पदपाठः ॥

निःऽयुर्वानः । अशस्तीः । नियुत्वान् । इन्द्रऽसारथिः ।
वायोऽइति । अ । चन्द्रेण । रथेन । याहि । सुतस्य । पीतये ॥ ३ ॥

॥ सायणभाष्यं ॥

हे वायोऽत्वमशस्तीरभिशस्तीर्निर्यूर्वानो निःशेषेण नियोजयन्नियुत्वान्नियुक्तैरश्वैर्वानिन्द्रसारथिरिन्द्रसहायः सन् आ याहि ॥

॥ प्रतिपदार्थ ॥

वायोः—ಎಲೈ ವಾಯುವೇ । **अशस्तीः**—ಅಮಂಗಳಗಳನ್ನು । **नियूर्वानः**—ತಡೆಗಟ್ಟುವವನಾಗಿಯೂ । **नियुत्वान्**—ನಿಯುನ್ನಾಮಕಗಳಾದ ಅಶ್ವಗಳುಳ್ಳವನಾಗಿಯೂ । **इन्द्रसारथिः**—ಇಂದ್ರನೇ ಸಾರಥಿಯಾಗಿ ಉಳ್ಳವನೂ ಆಗಿ । **चन्द्रेण**—ಆಹ್ಲಾದಕಾರಕವಾದ । **रथेन**—ರಥದೊಡನೆ । **सुतस्य**—ಹಿಂಡಿರುವ ಸೋಮದ । **पीतये**—ಪಾನಕ್ಕಾಗಿ । **आ याहि**—ದಯಮಾಡು

॥ भावार्थ ॥

ಎಲೈ ವಾಯುವೇ, ಅಮಂಗಳಗಳನ್ನು ತಡೆಗಟ್ಟುವವನೂ, ನಿಯುನ್ನಾಮಕಗಳಾದ ಅಶ್ವಗಳುಳ್ಳವನೂ, ಇಂದ್ರಸಾರಥಿಯಾದವನೂ ಆದ ನೀನು ಆಹ್ಲಾದಕಾರಕವಾದ ನಿನ್ನ ರಥದೊಡವೆ ಹಿಂಡಿರುವ ಸೋಮದ ಪಾನಕ್ಕಾಗಿ ದಯಮಾಡು.

English Translation.

Vayu, who are the represser of calumnies, who are drawn by the Niyuts, and have Indra for you charioteer, come with your brilliant car to drink the Soma juice.

। ಸಂಹಿತಾಪಾಠಃ ।

ಅನು ಕೃಷ್ಣೇ ವಸುಧಿತೀ ಯೇಮಾತೇ ವಿಶ್ವಪೇಶಸಾ ।

ವಾಯವಾ ಚಂದ್ರೇಣ ರಥೇನ ಯಾಹಿ ಸುತಸ್ಯ ಪೀತಯೇ ॥ ೩ ॥

। ಪದಪಾಠಃ ।

ಅನು । ಕೃಷ್ಣೇ ಇತಿ । ವಸುಧಿತೀ ಇತಿ ವಸು೩ಧಿತೀ । ಯೇಮಾತೇ ಇತಿ । ವಿಶ್ವ೩ಪೇಶಸಾ ।

ವಾಯೋ ಇತಿ । ಆ । ಚಂದ್ರೇಣ । ರಥೇನ । ಯಾಹಿ । ಸುತಸ್ಯ । ಪೀತಯೇ ॥ ೩ ॥

। ಸಾಯಣಭಾಷ್ಯಂ ॥

ಕೃಷ್ಣೇ ಕೃಷ್ಣವರ್ಣೇ ವಸುಧಿತೀ ವಸೂನಾಂ ಧಾತ್ರ್ಯೌ ವಿಶ್ವಪೇಶಸಾ ವಿಶ್ವರೂಪೇ ದ್ಯಾವಾ-ಪೃಥಿವ್ಯೌ ತ್ವಾಮನು ಯೇಮಾತೇ । ಅನುಗಚ್ಛತಃ ॥

। ಪ್ರತಿಪದಾರ್ಥ ॥

ವಾಯೋ—ಎಲೈ ವಾಯುವೇ । **ಕೃಷ್ಣೇ**—ಗಭೀರವಾದ ವರ್ಣವುಳ್ಳವೂ । **ವಸುಧಿತೀ**—ಸಂಪತ್ತ್ವೋಪಕಗಳೂ । **ವಿಶ್ವಪೇಶಸಾ**—ನಾನಾವಿಧವಾದ ರೂಪವುಳ್ಳವೂ ಆದ ದ್ಯಾವಾಪೃಥಿವಿಗಳು । **ಅನು ಯೇಮಾತೇ**—ನಿನ್ನನ್ನೇ ಸೇವಿಸುತ್ತವೆ । **ಚಂದ್ರೇಣ**—ಆಹ್ಲಾದಕಾರಕವಾದ । **ರಥೇನ**—ರಥದೊಡನೆ । **ಸುತಸ್ಯ**—ಹಿಂಡಿರುವ ಸೋಮದ । **ಪೀತಯೇ**—ಪಾನಕ್ಕಾಗಿ । **ಆ ಯಾಹಿ**—ದಯಮಾಡು.

। ಭಾವಾರ್ಥ ।

ಎಲೈ ವಾಯುವೇ, ಗಭೀರವಾದ ಕೃಷ್ಣವರ್ಣವುಳ್ಳವೂ, ಸಂಪತ್ತ್ವೋಪಕವೂ, ನಾನಾವಿಧವಾದ ರೂಪವುಳ್ಳವೂ ಆದ ದ್ಯಾವಾಪೃಥಿವಿಗಳು ನಿನ್ನನ್ನೇ ಸೇವಿಸುತ್ತವೆ. ಆಹ್ಲಾದಕಾರಕವಾದ ನಿನ್ನ ರಥದೊಡನೆ ಹಿಂಡಿರುವ ಸೋಮಪಾನಕ್ಕಾಗಿ ದಯಮಾಡು

English Translation.

The dark nurses of wealth, the universal forms (heaven and earth), attend upon you, come Vayu with your brilliant car to drink the Soma juice.

॥ ಸಂಹಿತಾಪಾಠಃ ॥

ವಹಂತು ತ್ವಾ ಮನೋಯುಜೋ ಯುಕ್ತಾಸೋ ನವತಿರ್ನವ ।
ವಾಯವಾ ಚಂದ್ರೇಣ ರಥೇನ ಯಾಹಿ ಸುತಸ್ಯ ಪೀತಯೇ ॥ ೪ ॥

॥ ಪದಪಾಠಃ ॥

ವಹಂತು । ತ್ವಾ । ಮನಃಯುಜಃ । ಯುಕ್ತಾಸಃ । ನವತಿಃ । ನವ ।
ವಾಯೋ ಇತಿ । ಆ । ಚಂದ್ರೇಣ । ರಥೇನ । ಯಾಹಿ । ಸುತಸ್ಯ । ಪೀತಯೇ ॥ ೪ ॥

॥ ಸಾಯಣಭಾಷ್ಯಂ ॥

ಹೇ ವಾಯೋ ತ್ವಾ ತ್ವಾಂ ಮನೋಯುಜೋ ಮನಃಸಮಾನಗತಯೋ ಯುಕ್ತಾಸಃ ಪರಸ್ಪರಸಂಯುಕ್ತಾ ನವತಿರ್ನವ ನವೋತ್ತರನವತಿಸಂಖ್ಯಾಕಾ ಅಶ್ವಾ ವಹಂತು । ಧಾರಯಂತು ॥

॥ ಪ್ರತಿಪದಾರ್ಥ ॥

ವಾಯೋ—ಎಲೈ ವಾಯುವೇ । **ಮನೋಯುಜಃ**—ಮನೋವೇಗದಂತೆ ವೇಗವುಳ್ಳವೂ । **ಯುಕ್ತಾಸಃ**—ಒಂದಕ್ಕೊಂದಕ್ಕೆ ಹೊಂದಿಕೊಂಡಿರುವುವೂ । **ನವತಿರ್ನವ**—ತೊಂಭತ್ತೊಂಭತ್ತು ಸಂಖ್ಯೆಯುಳ್ಳವೂ ಆದ ಅಶ್ವಗಳು । **ವಹಂತು**—ನಿನ್ನನ್ನು ವಹಿಸಲಿ । **ಚಂದ್ರೇಣ**—ಆಹ್ಲಾದಕಾರಕವಾದ । **ರಥೇನ**—ರಥದೊಡನೆ । **ಸುತಸ್ಯ**—ಹಿಂಡಿರುವ ಸೋಮದ । **ಪೀತಯೇ**—ಪಾನಕ್ಕಾಗಿ । **ಆ ಯಾಹಿ**—ದಯಮಾಡು.

॥ ಭಾವಾರ್ಥ ॥

ಎಲೈ ವಾಯುವೇ, ಮನೋವೇಗದಂತೆ ವೇಗವುಳ್ಳವೂ, ಒಂದಕ್ಕೊಂದಕ್ಕೆ ಹೊಂದಿಕೊಂಡಿರುವುವೂ, ತೊಂಭತ್ತೊಂಭತ್ತು ಸಂಖ್ಯೆಯುಳ್ಳವೂ ಆದ ಅಶ್ವಗಳು ನಿನ್ನನ್ನು ವಹಿಸಲಿ ಆಹ್ಲಾದಕಾರಕವಾದ ರಥದೊಡನೆ, ಹಿಂಡಿರುವ ಸೋಮಪಾನಕ್ಕಾಗಿ ದಯಮಾಡು.

English Translation.

May the ninety-nine steeds harnessed together, that are as swift as thought, convey you: come, Vayu, with your brilliant car, to drink the Soma juice.

। ಸಂಹಿತಾಪಾಠಃ ।

ವಾಯೋ ಶತಂ ಹರೀಣಾಂ ಯುವಸ್ವ ಪೋಷ್ಯಾಣಾಂ ।

ಉತ ವಾ ತೇ ಸಹಸ್ರಿಣೋ ರಥ ಆ ಯಾತು ಪಾಜಸಾ ॥ ೫ ॥

। ಪದಪಾಠಃ ।

ವಾಯೋ ಇತಿ । ಶತಂ । ಹರೀಣಾಂ । ಯುವಸ್ವ । ಪೋಷ್ಯಾಣಾಂ ।

ಉತ । ವಾ । ತೇ । ಸಹಸ್ರಿಣಃ । ರಥಃ । ಆ । ಯಾತು । ಪಾಜಸಾ ॥ ೫ ॥

। ಸಾಯಣಭಾಷ್ಯಂ ।

ವಾಯೋ ಶತಮಿತಿ ಪಂಚಮಿಾ ಪೂರ್ವೋಕ್ತ ಏವ ಕೈಚೇ ಕೈತೀಯಾ । ಸೂಕ್ರಂ ಪೂರ್ವಮೇವೋಕ್ತಂ ॥

ಹೇ ವಾಯೋ ತ್ವಂ ಪೋಷ್ಯಾಣಾಂ ಪೋಷಣೇಯಾನಾಂ ಹರೀಣಾಂ ಶತಂ ಯುವಸ್ವ । ಯೋಜಯ ರಥೇ । ಉತ ವಾ ಅಥವಾ ತೇ ಸಹಸ್ರಿಣಃ ಸಹಸ್ರಸಂಖ್ಯಾಪೂರಕಾ ಅಶ್ವಾಃ । ತೈರ್ಯುಕ್ತೋ ರಥಃ ಪಾಜಸಾ ಬಲೇನಾ ಯಾತು । ಆಗಚ್ಛತು ॥

। ಪ್ರತಿಪದಾರ್ಥ ।

ವಾಯೋ—ಎಲೈ ವಾಯುವೇ । **ಪೋಷ್ಯಾಣಾಂ**—ಪೋಷಿಸಲು ಯೋಗ್ಯವಾದ । **ಹರೀಣಾಂ**—ಅಶ್ವಗಳ । **ಶತಂ**—ನೂರನ್ನು । **ಯುವಸ್ವ**—ರಥಕ್ಕೆ ಯೋಜಿಸು । **ಉತ ವಾ**—ಮತ್ತು (ಅಥವಾ) । **ಸಹಸ್ರಿಣಃ**—ಸಹಸ್ರಸಂಖ್ಯಾತವಾದ ಅಶ್ವಗಳೊಡನೆ ಕೂಡಿದ । **ತೇ**—ನಿನ್ನ । **ರಥಃ**—ರಥವು । **ಪಾಜಸಾ**—ತನ್ನ ಶಕ್ತಿಯೊಡನೆ । **ಆ ಯಾತು**—ದಯಮಾಡಲಿ.

। ಭಾವಾರ್ಥ ।

ಎಲೈ ವಾಯುವೇ, ಪೋಷಿಸಲು ಯೋಗ್ಯವಾದ (ಅಥವಾ ಪುಷ್ಟವಾದ) ನೂರು ಅಶ್ವಗಳನ್ನು ನಿನ್ನ ರಥಕ್ಕೆ ಯೋಜಿಸು. ಅಥವಾ ಸಹಸ್ರಸಂಖ್ಯಕವಾದ ಅಶ್ವಗಳೊಡನೆ ಕೂಡಿದ ನಿನ್ನ ರಥವು ತನ್ನ ಶಕ್ತಿಯೊಡನೆ ದಯಮಾಡಲಿ.

English Translation.

Harness, Vayu, a hundred plump steeds, or even a thousand, and let your chariot come with rapidity (hither).

। ವಿಶೇಷವಿಷಯಗಳು ।

ವಾಯೋ ಶತಂ ಹರೀಣಾಂ ಎಂಬ ಈ ಋಕ್ಕನ್ನು ಈ ಸೂಕ್ತದ ವಿನಿಯೋಗದಲ್ಲಿ (ಪುಟ 483) ಹೇಳಿರುವ ತೃಚದಲ್ಲಿ ಮೂರನೆಯ ಋಕ್ಕನ್ನಾಗಿ ಉಪಯೋಗಿಸಬೇಕೆಂದು ಇದರ ವಿನಿಯೋಗವನ್ನು ಅಲ್ಲಿಯೇ ಹೇಳಲಾಗಿದೆ.

ನಲವತ್ತೊಂಭತ್ತನೆಯ ಸೂಕ್ತವು

। ಸಾಯಣಭಾಷ್ಯಂ ।

ಇದಂ ವಾಮಾಸ್ಯ ಇತಿ ಷಡೃಚಂ ಚತುರ್ಥಂ ಸೂಕ್ತಂ ವಾಮದೇವಸ್ಯಾರ್ಷಂ ಗಾಯತ್ರ್ಯ-ಮೈಂದ್ರಾಬಾರ್ಹಸ್ಪತ್ಯಂ। ಅತ್ರಾನುಕ್ರಮಣಿಕಾ। ಇದಂ ವಾಂ ಷಳೈಂದ್ರಾಬಾರ್ಹಸ್ಪತ್ಯಂ ಗಾಯತ್ರಮಿತಿ। ಸೂಕ್ತವಿನಿಯೋಗೋ ಲೈಂಗಿಕಃ ॥

ಅನುವಾದವು—**ಇದಂ ವಾಮಾಸ್ಯೇ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವುವು ಈ ಸೂಕ್ತಕ್ಕೆ ವಾಮದೇವನು ಋಷಿಯು, ಇಂದ್ರ ಮತ್ತು ಬೃಹಸ್ಪತಿಯು ದೇವತೆಗಳು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ **ಇದಂ ವಾಂ ಷಳೈಂದ್ರಾಬಾರ್ಹಸ್ಪತ್ಯಂ ಗಾಯತ್ರಂ** ಎಂದು ಹೇಳಿರುವುದು ಸೂಕ್ತವಿನಿಯೋಗವು ಲೈಂಗಿಕವು.

ಸೂಕ್ತ—೪೯

ಮಂಡಲ—೪ ॥ ಅನುವಾಕ—೫ ॥ ಸೂಕ್ತ—೪೯ ॥
ಅಷ್ಟಕ—೩ ॥ ಅಧ್ಯಾಯ—೭ ॥ ವರ್ಗ—೨೫ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ವಾಮದೇವಃ ।
ದೇವತಾ—ಇಂದ್ರಾಬೃಹಸ್ಪತೀ ।
ಛಂದಃ—ಗಾಯತ್ರೀ ।

। ಸಂಹಿತಾಪಾಠಃ ।.

ಇದಂ ವಾಮಾಸ್ಯೇ ಹವಿಃ ಪ್ರಿಯಮಿಂದ್ರಾಬೃಹಸ್ಪತೀ ।
ಉಕ್ಥಂ ಮದಶ್ಚ ಶಸ್ಯತೇ ॥ ೧ ॥

। पदपाठः ।

इदं । वां । आस्ये । हविः । प्रियं । इन्द्राबृहस्पतीइति ।

उक्थं । मदः । च । शस्यते ॥ ८ ॥

। सायणभाष्यं ।

हे इन्द्राबृहस्पतीइति वामस्य इदं प्रियं हविः सोमरूपं प्रक्षिपामीति शेषः। उक्थं शस्त्रं च मदो मदजनकं शस्यते ॥

। प्रतिपदार्थ ।

इन्द्राबृहस्पतीइति—ಎಲೈ ಇಂದ್ರ ಮತ್ತು ಬೃಹಸ್ಪತಿಗಳೇ । वां—ನಿಮ್ಮ । आस्ये—ಮುಖದಲ್ಲಿ । इदं—ಇಲ್ಲಿ ಸಿದ್ಧವಾಗಿರುವುದೂ । प्रियं—ಪ್ರೀತಿಕಾರಕವಾದುದೂ ಆದ । हविः—ಸೋಮರೂಪವಾದ ಹವಿಸ್ಸನ್ನು (ಅರ್ಪಿಸುತ್ತೇನೆ) । मदः—ಹರ್ಷಕಾರಕವಾದ । उक्थं च—ಶಸ್ತ್ರಮಂತ್ರವೂ ಸಹ । शस्यते—ಪರಿಸಿ ಅರ್ಪಿತವಾಗುತ್ತದೆ.

। भावार्थ ।

ಎಲೈ ಇಂದ್ರಾಬೃಹಸ್ಪತಿಗಳೇ, ಇಲ್ಲಿ ಸಿದ್ಧವಾಗಿರುವುದೂ, ನಿಮಗೆ ಅತ್ಯಂತ ಪ್ರಿಯವಾದುದೂ ಆದ ಸೋಮ ರೂಪವಾದ ಹವಿಸ್ಸನ್ನು ನಿಮ್ಮ ಮುಖದಲ್ಲಿ ಅರ್ಪಿಸುತ್ತೇನೆ. ಮತ್ತು ಹರ್ಷಕಾರಕವಾದ ಶಸ್ತ್ರಮಂತ್ರವನ್ನೂ ಪರಿಸಿ ನಿಮಗೆ ಅರ್ಪಿಸುತ್ತೇನೆ.

English Translation.

(I present) the agreeable oblation to your mouths, Indra and Brihaspati, and the hymn and the exhilarating beverage are offered.

। संहितापाठः ॥

अयं वां परि षिच्यते सोम इन्द्राबृहस्पतीइति ।

चारुर्मदाय पीतये ॥ ९ ॥

। पदपाठः ।

अयं । वां । परि । षिच्यते । सोमः । इन्द्राबृहस्पतीइति ।

चारुः । मदाय । पीतये ॥ ९ ॥

॥ सायणभाष्यं ॥

हे इन्द्राबृहस्पतीइ वामास्ये चारुः शोभनोऽयंइ सोमः परि षिच्यतेइ । परितोइ दीयतेइ । मदायइ हर्षायइ पीतयेइ पानायइ च ॥

॥ प्रतिपदार्थ ॥

इन्द्राबृहस्पती—ಎಲೈ ಇಂದ್ರಾಬೃಹಸ್ಪತಿಗಳೇ । **वां**—ನಿಮ್ಮ । (**अस्ये**—ಮುಖದಲ್ಲಿ) । **चारु**—ಹಿತಕರವಾದ । **अयं सोमः**—ಈ ಸೋಮರಸವು । **पीतये**—ನಿಮ್ಮ ಪಾನಕ್ಕಾಗಿಯೂ । **मदाय**—ನಿಮಗೆ ಹರ್ಷವುಂಟಾಗುವುದಕ್ಕಾಗಿಯೂ । **परि षिच्यते**—ಸುತ್ತಲೂ ಅರ್ಪಿತವಾಗುತ್ತದೆ.

॥ भावार्थ ॥

ಎಲೈ ಇಂದ್ರಾಬೃಹಸ್ಪತಿಗಳೇ, ನಿಮ್ಮ ಮುಖದಲ್ಲಿ ಹಿತಕರವಾದ ಈ ಸೋಮವು ನಿಮ್ಮ ಪಾನಕ್ಕೂ ಆದರಿಂದ ನಿಮಗೆ ಹರ್ಷಲಾಭಕ್ಕೂ ಸುತ್ತಲೂ ಅರ್ಪಿತವಾಗುತ್ತದೆ.

English Translation.

The delicious Soma is effused, Indra and Brihaspati, for you, for (your) drinking and exhilaration.

॥ संहितापाठः ॥

आ । न इन्द्राबृहस्पती गृहमिन्द्रश्च गच्छतं ।
सोमपा सोमपीतये ॥ ५ ॥

॥ पदपाठः ॥

आ । नः । इन्द्राबृहस्पती इति । गृहं । इन्द्रः । च । गच्छतं ।
सोमऽपा । सोमऽपीतये ॥ ५ ॥

॥ सायणभाष्यं ॥

ऐन्द्राबार्हस्पत्याया मिष्वा प्रधानस्या न इन्द्रेति कृतीयानुवाक्योक्तस्तृतीया याज्या । सूक्तिकं च । आ न इन्द्राबृहस्पती अस्ये इन्द्राबृहस्पती । अ. ३-८८ । इति ॥

हे इन्द्राबृहस्पतीऽ। अथ विविक्ष्योऽच्यते। हे बृहस्पतेऽ त्वं चेन्द्रेश्च सोमपा सोमपौ युवां सोमपीतयेऽ सोमपानायऽ नोऽ गृहमस्माद्यागसंबन्धाय गच्छेतं॥

॥ प्रतिपदार्थ ॥

इन्द्राबृहस्पतीऽ—ಎಲೈ ಇಂದ್ರಾಬೃಹಸ್ಪತಿಗಳೇ। **इन्द्रेश्च**—(ಎಲೈ ಬೃಹಸ್ಪತಿಯೇ, ನೀನೂ) ಇಂದ್ರನೂ। **सोमपा**—ಸೋಮವನ್ನು ಪಾನಮಾಡುವವರಾಗಿ। **सोमपीतयेऽ**—ಸೋಮಪಾನಕ್ಕಾಗಿ। **नःऽ**—ನಮ್ಮ। **गृहं**—ಗೃಹಕ್ಕೆ। **अ गच्छेतं**—ದಯಮಾಡಿ.

॥ भावार्थ ॥

ಎಲೈ ಇಂದ್ರಾಬೃಹಸ್ಪತಿಗಳೇ, ಸೋಮಪಾನವನ್ನು ಮಾಡುವವರಾದ ನೀವಿಬ್ಬರೂ ಸಹ ನಮ್ಮ ಗೃಹಕ್ಕೆ ಸೋಮಪಾನಕ್ಕಾಗಿ ದಯಮಾಡಿ.

English Translation.

Indra and Brihaspati, come to our dwelling, drinkers of Soma, to drink the Soma juice.

॥ ವಿಶೇಷವಿಷಯಗಳು ॥

ಇಂದ್ರಾಬೃಹಸ್ಪತಿಗಳನ್ನುದ್ದೇಶಿಸಿ ಮಾಡುವ ಐಂದ್ರಾಬಾರ್ಹಸ್ಪತ್ಯವೆಂಬ ಇಷ್ಟಿಯಲ್ಲಿ ಪ್ರಧಾನಹೋಮ ಮಾಡುವಾಗ **अ न इन्द्रा** ಎಂಬ ಈ ಋಕ್ಕನ್ನು ಪುರೋನುವಾಕ್ಯಾಮಂತ್ರವನ್ನಾಗಿಯೂ ಮುಂದಿನ **अस्मे इन्द्राबृहस्पती** ಎಂಬ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿಯೂ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **अ न इन्द्राबृहस्पती अस्मे इन्द्राबृहस्पती** ಎಂಬ ಸೂತ್ರದಿಂದ (ಆ ೨-೧೧) ವಿವೃತವಾಗಿರುವುದು

॥ संहितापाठः ॥

अस्मे इन्द्राबृहस्पती रयिं धत्तं शतग्विनं।
अश्वावंतं सहस्रिणं ॥ ४ ॥

॥ पदपाठः ॥

अस्मे इति। इन्द्राबृहस्पती इति। रयिं। धत्तं। शतऽग्विनं।
अश्वऽवंतं। सहस्रिणं ॥ ४ ॥

॥ सायणभाष्यं ॥

अस्या विनियोगः पूर्वमंत्रेण सहोक्तः । हे इंद्राबृहस्पती अस्मे अस्मभ्यं रयिं धनं धत्तं । कीदृशं रयिं । शतग्विनं शतसंख्याकाभिर्गोभिर्युक्तमश्वावंत-मश्ववंतं सहस्रिणं सहस्रसंख्यायुक्तं ॥

॥ प्रतिपदार्थ ॥

इंद्राबृहस्पती—ಎಲೈ ಇಂದ್ರಾಬೃಹಸ್ಪತಿಗಳೇ । शतग्विनं—ನೂರು ಗೋವುಗಳಿಂದ ಕೂಡಿದುದೂ । सहस्रिणं—ಸಹಸ್ರ ಸಂಖ್ಯಾಕವಾದ । अश्ववंतं—ಅಶ್ವಗಳೊಡನೆ ಕೂಡಿದುದೂ ಆದ । रयिं—ಧನವನ್ನು । अस्मे—ನಮಗೆ । दत्तं—ಕೊಡಿರಿ

॥ भावार्थ ॥

ಎಲೈ ಇಂದ್ರಾಬೃಹಸ್ಪತಿಗಳೇ, ನೂರು ಗೋವುಗಳಿಂದ ಕೂಡಿದುದೂ, ಸಹಸ್ರ ಅಶ್ವಗಳೊಡನೆ ಕೂಡಿದುದೂ ಆದ ಧನವನ್ನು ನಮಗೆ ಕೊಡಿರಿ.

English Translation.

Grant to us, Indra and Brihaspati, riches comprising a hundred (cattle), a thousend horses.

॥ संहितापाठः ॥

इंद्राबृहस्पतीऽ वयं सुतेऽ गीर्भिर्हवामहेऽ ।
अस्य सोमस्य पीतयेऽ ॥ ५ ॥

॥ पदपाठः ॥

इंद्राबृहस्पती इति । वयं । सुतेऽ । गीःऽभिः । हवामहे ।
अस्य । सोमस्य । पीतयेऽ ॥ ५ ॥

सुतेऽ सोमेऽभिसुतेऽ गीर्भिः स्तुतिभिः । शिष्यं गतेऽ ॥

॥ प्रतिपदार्थः ॥

इन्द्राबृहस्पतीऽ—ऐलै इन्द्राबृहस्पतिगळे। **सुतेऽ**—(निमगागि) सोमरसवु हिंडि सिद्धरागिरुवाग। **वयं**—नावु। **अस्य सोमस्य**—ई सोमद। **पीतयेऽ**—पानक्काग। **गीर्भिः**—स्तुतिवाक्यगळिंद। **हवामहेऽ**—प्रार्थिसि करेयुत्तेनै.

॥ भावार्थः ॥

ऐलै इन्द्राबृहस्पतिगळे, निमगागि ई सोमवन्नु हिंडि सिद्धपडिसिद्देनै. इदर पानक्के निम्मन्नु स्तुतिवाक्यगळिंद प्रार्थिसि करेयुत्तेनै.

English Translation.

Indra and Brishaspati, we invoke you with praisas, when the libation is effused, to drink of this Soma juice.

॥ संहितापाठः ॥

सोऽमंमिंद्राबृहस्पतीऽ पिबतं दाशुषोऽ गृहे।
मादयेऽथांऽ तदोकसा ॥ ६ ॥

॥ पदपाठः ॥

सोऽमं। इंद्राबृहस्पतीऽ इति। पिबतं। दाशुषः। गृहे।
मादयेऽथां। तत्ऽओकसा ॥ ६ ॥

॥ सायणभाष्यं ॥

हे इंद्राबृहस्पतीऽ युवां दाशुषोऽ हविर्दातुर्यजमानस्य गृहे तदोकसा। तदेव यजमानगृहमोकोऽ निवासस्थानं ययोस्तौ। तादृशौ संतौ सोमं पिबतं। पीत्वा च मादयेऽथामिति ॥ ३३ ॥

॥ प्रतिपदार्थ ॥

इंद्राबृहस्पतीऽ—ऐलै इन्द्राबृहस्पतिगळे। **दाशुषः**—हविर्दातनाद यजमानन। **गृहे**—गृहदल्लि। **तदोकसा**—अदे गृहवन्नेऽ निम्म निवासस्थानवन्नागि माडिकोंडवरागि। **सोमं**—सोमरसवन्नु। **पिबतं**—पानमाडिरि। (मत्तु) **मादयेऽथां**—हर्षपडिरि.

। ಭಾವಾರ್ಥ ॥

ಎಲೈ ಇಂದ್ರಾಬೃಹಸ್ಪತಿಗಳೇ, ಹವಿರ್ದಾತನಾದ ಯಜಮಾನನ ಗೃಹದಲ್ಲಿ, ನೀವು ಅದೇ ಗೃಹವನ್ನೇ ನಿಮ್ಮ ನಿವಾಸಸ್ಥಾನವನ್ನಾಗಿ ಮಾಡಿಕೊಂಡು ಅಲ್ಲಿ ಅರ್ಪಿತವಾದ ಸೋಮವನ್ನು ಪಾನಮಾಡಿರಿ ಮತ್ತು ತತ್ಫಲವಾದ ಹರ್ಷವನ್ನು ವ್ಯಕ್ತಪಡಿಸಿ.

English Translation.

Drink, Indra and Brihaspati, the Soma, in the dwelling of the donor, and be exhilarated in his abode.

ಐವತ್ತನೆಯ ಸೂಕ್ತವು

ಪೀಠಿಕೆ.

ಈ ಸೂಕ್ತದ ೧-೯ ಋಕ್ಕುಗಳಲ್ಲಿ ಬೃಹಸ್ಪತಿಯನ್ನು ಸ್ತುತಿಸಲಾಗಿದೆ. ಬೃಹಸ್ಪತಿದೇವತಾ ವಿಷಯವಾಗಿ ಇಲ್ಲಿ ಸೂಕ್ಷ್ಮವಾಗಿ ವಿವರಣೆಯನ್ನು ಕೊಟ್ಟಿರುವೆವು

ಯಾಸ್ಕರು ತಮ್ಮ ನಿರುಕ್ತದಲ್ಲಿ ಬೃಹಸ್ಪತಿಶಬ್ದದ ನಿರ್ವಚನವನ್ನು ವಿವರಿಸುತ್ತಾ—

ಬೃಹಸ್ಪತಿಃ ಬೃಹತಃ ಪಾತಾ ವಾ ಪಾಲಯಿತಾ ವಾ ।

(ನಿ. ೧೦-೧೧)

ಎಂದು ಹೇಳಿದ್ದಾರೆ ಇದಕ್ಕೆ ವ್ಯಾಖ್ಯಾನಕಾರರಾದ ದುರ್ಗಾಚಾರ್ಯರು—**ಬೃಹಸ್ಪತಿಃ ಕಸ್ಮಾತ್? "ಬೃಹತಃ ಪಾತಾ ವಾ ಪಾಲಯಿತಾ ವಾ" ಬೃಹತಃ ಮಹತೋಽಸ್ಯ ಜಗತಃ ಉದಕಸ್ಯ ವಾ ಪಾತಾ ರಕ್ಷಿತಾ, ಪಾಲಯಿತಾ ಅಪಿ ರಕ್ಷಿಕೈವ ಧಾತ್ವನ್ಯತ್ವೇಮರ್ಥೈಕತ್ವಂ ॥** ಎಂದರೆ ದೊಡ್ಡದಾದ ಜಗತ್ತಿನ ಅಥವಾ ಉದಕದ ಸಂರಕ್ಷಕನು, ಕಾಪಾಡುವವನು. ಪತಿಶಬ್ದದ ಅರ್ಥವನ್ನು ಸೂಚಿಸುವುದಕ್ಕೆ ಪಾತಾ, ಪಾಲಯಿತಾ ಎಂಬ ಬೇರೆ ಬೇರೆ ಧಾತುಗಳಿಂದ ನಿಷ್ಪನ್ನವಾದ ಶಬ್ದಗಳಿದ್ದರೂ ಅರ್ಥವು ಮಾತ್ರ ಒಂದೇ ಆಗಿರುವುದೆಂದು ಹೇಳಿರುವರು. ಸಾಯಣರು ಅನೇಕ ಸಂದರ್ಭಗಳಲ್ಲಿ ಬೃಹತಃ ಪಾತಾ ಎಂಬುದನ್ನು ವಿವರಿಸುವಾಗ ಬೃಹತಃ ಎಂಬ ಶಬ್ದಕ್ಕೆ ಬೃಹತಃ ಯಜ್ಞಾಖ್ಯಕರ್ಮಣಃ ಅಥವಾ ವೃಷ್ಟ್ಯಾಖ್ಯಕರ್ಮಣಃ ಎಂದರೆ ಯಜ್ಞರೂಪವಾದ ಕರ್ಮದ ಅಥವಾ ವೃಷ್ಟಿಪ್ರದಾನ ರೂಪವಾದ ಕರ್ಮದ ಎಂದು ಅರ್ಥವನ್ನು ಹೇಳಿರುವರು. ಬೃಹಸ್ಪತಿಯು ದೇವತೆಗಳಿಗೆ ಪುರೋಹಿತನಾಗಿ ಯಜ್ಞಕರ್ಮವನ್ನು ನೆರವೇರಿಸುವುದರಿಂದಲೂ, ಮನುಷ್ಯರಿಗೆ ಅವಶ್ಯಕವಾದ ವೃಷ್ಟಿಯನ್ನುಂಟುಮಾಡುವುದರಿಂದಲೂ ಈ ಎರಡು ವಿಧವಾದ ವಿಶೇಷಣಗಳೂ ಸಹಜವಾಗಿರುವುವು. ಬೃಹಸ್ಪತಿಯ ಪುರೋಹಿತತ್ವವನ್ನೂ ವೃಷ್ಟಿಪ್ರದಾನವನ್ನೂ ವರ್ಣಿಸುವ,

युध्देवाऽऽसीः शंतनवे पुरोहितोऽहोत्राय वृतः कृपयन्नदीधेः ।
देवश्रुतं वृष्टिवनिं शरारणोः बृहस्पतिर्वाचमस्मा अयच्छत् ॥

(ऋ. सं. ८०-४८-३)

ಎಂಬ ಋಕ್ಕನ್ನು ಯಾಸ್ಕರು ಉದಾಹರಣೆಗಾಗಿ ಕೊಟ್ಟಿರುವರು. ಈ ಋಕ್ಕಿನ ನಿರ್ವಚನದಲ್ಲಿ **बृहस्पतिर्ब्रह्मा-सीत् सोऽस्मै वाचमयच्छत्**—ಎಂದರೆ ಬೃಹಸ್ಪತಿಯು ಶಂತನುವೆಂಬ ರಾಜನು ಮಾಡಿದ ಯಜ್ಞದಲ್ಲಿ ಬ್ರಹ್ಮನೆಂಬ ಪುರೋಹಿತನಾಗಿ ವಾಕ್ಯರೂಪವಾದ ಮಂತ್ರವನ್ನು ಉಪದೇಶಿಸಿದನೆಂದೂ ಆ ಮಂತ್ರದಿಂದ ಯಜಮಾನನು ಸ್ತುತಿಸಲಾಗಿ ವೃಷ್ಟಿ ಉಂಟಾಯಿತೆಂದೂ ವರ್ಣಿತವಾಗಿದೆ. ಇದಲ್ಲದೆ ಯಜುರ್ವೇದಾದಿಗಳಲ್ಲಿ—

बृहस्पतिर्देवानां पुरोहित आसीच्छण्डामर्कावसुराणाम् ।

(तै. सं. ६-५-८०-८)

ಬೃಹಸ್ಪತಿಯು ದೇವತೆಗಳಿಗೆ ಪುರೋಹಿತನಾಗಿದ್ದನು. ಶಂಡಾಮರ್ಕರೆಂಬುವರು ಅಸುರರಿಗೆ ಪುರೋಹಿತರಾಗಿದ್ದರು ಎಂದು ಹೇಳಿದೆ.

ब्रह्म वै देवानां बृहस्पतिर्ब्रह्मणैवैनमभिचरति ।

(तै. सं. ३-३-९-८)

तस्मै विशः स्वयमेवा नमन्तेयस्मिन् ब्रह्मा राजनि पूर्व इति ।

(ऋ सं ५-४८-५)

अवस्यवे यो वरिवः कृणोति ब्रह्मणे राजा तमवन्ति देवाः ॥

(ऋ सं. ५-४०-९)

सोमं राजानमवसेऽग्निं गीर्भिर्हवामहे ।
आदित्यान्विष्णुं सूर्यं ब्रह्माणं च बृहस्पतिं ॥

(ऋ. सं. ८०-८५८-३)

ಇತ್ಯಾದಿ ಋಕ್ಕುಗಳಲ್ಲಿ ಬೃಹಸ್ಪತಿಯು ಋತ್ವಿಜನು ಎಂದು ವರ್ಣನೆ ಇದೆ

ಋಗ್ವೇದದಲ್ಲಿ ಬೃಹಸ್ಪತಿಗೆ ಪ್ರಾಮುಖ್ಯವಾದ ಸ್ಥಾನವೇ ಇದೆ. ಹನ್ನೊಂದು ಸೂಕ್ತಗಳಲ್ಲಿ ಸ್ತುತನಾಗಿರುವುದಲ್ಲದೆ ಎರಡು ಸೂಕ್ತಗಳಲ್ಲಿ (ಋ ಸಂ. ೪-೫೯, ೬-೭೩) ಇಂದ್ರನ ಜತೆಯಲ್ಲಿ ದ್ವಂದ್ವದೇವತೆಯಾಗಿಯೂ ಸ್ತುತನಾಗಿದ್ದಾನೆ. ಬೃಹಸ್ಪತಿ ಶಬ್ದವು ಋಗ್ವೇದದಲ್ಲಿ ಸುಮಾರು ೧೫೦ ಸಲ ಪರಿತವಾಗಿದೆ ಅನೇಕ ಸಂದರ್ಭಗಳಲ್ಲಿ ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿದೇವತೆಗಳು ಒಂದೇ ಮಂತ್ರದಲ್ಲಿ ಪರಸ್ಪರ ವಿನಿಮಯವಾಗಿ ಸ್ತುತರಾಗಿದಾರೆ ಆದರೂ ಬೃಹಸ್ಪತಿಯೇ ಬೇರೆ ಬ್ರಹ್ಮಣಸ್ಪತಿಯೇ ಬೇರೆ ದೇವತೆಗಳು.

ಕೆಲವು ಪಾಶ್ಚಾತ್ಯಪಂಡಿತರೂ, ಆಧುನಿಕ ವಿದ್ವಾಂಸರಲ್ಲಿ ಕೆಲವರೂ ಸಹ ಋ. ಸಂ. ೨-೨೩ ನೆಯ ಸೂಕ್ತದಲ್ಲಿ ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಗಳು ಪರಸ್ಪರ ವಿನಿಮಯವಾಗಿ ಸ್ತುತಿಸಲ್ಪಟ್ಟಿರುವುದರಿಂದ ಇಬ್ಬರೂ ಒಂದೇ ದೇವತೆಯೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಆದರೆ ಯಾಸ್ಕರು, ಶೌನಕರು, ಸಾಯಣರು ಮೊದಲಾದ

ಪುರಾತನ ವೇದಭಾಷ್ಯಕಾರರು ಬೃಹಸ್ಪತಿಯೇ ಬೇರೆ ಬ್ರಹ್ಮಣಸ್ಪತಿಯೇ ಬೇರೆ ಎಂದು ಸ್ಪಷ್ಟವಾಗಿ ಹೇಳಿರುವರು. ಮೇಲೆ ಹೇಳಿದ ಋ. ಸಂ. ೨-೨೩ ನೆಯ ಸೂಕ್ತದಲ್ಲಿರುವ ೧೯ ಋಕ್ಕುಗಳಲ್ಲಿ ೧, ೫, ೯, ೧೧, ೧೭, ೧೯ ಎಂಬ ೬ ಋಕ್ಕುಗಳು ಮಾತ್ರ ಬೃಹಸ್ಪತಿಯನ್ನು ಸ್ತುತಿಸುತ್ತವೆ ಉಳಿದ ೧೩ ಋಕ್ಕುಗಳು ಬ್ರಹ್ಮಣಸ್ಪತಿಯ ಪರವಾಗಿವೆ. ಯಾಸ್ಕರೂ ಸಹ ಬೃಹಸ್ಪತಿಶಬ್ದಕ್ಕೂ ಬ್ರಹ್ಮಣಸ್ಪತಿಶಬ್ದಕ್ಕೂ ಬೇರೆ ಬೇರೆ ನಿರ್ವಚನವನ್ನು ಹೇಳಿದಾರೆ ಆದುದರಿಂದ ಬೃಹಸ್ಪತಿಯೇ ಬೇರೆ ಬ್ರಹ್ಮಣಸ್ಪತಿಯೇ ಬೇರೆ.

ಇತರ ದೇವತೆಗಳಿಗಿಂತ ತೀರಾ ಭಿನ್ನವಾದ ವೈಶಿಷ್ಟ್ಯವು ಬೃಹಸ್ಪತಿಗೆ ಇದೆ. ಇತರ ದೇವತೆಗಳೆಲ್ಲಾ ಪ್ರಕೃತಿ ಅಥವಾ ಪ್ರಕೃತಿ ಶಕ್ತಿಯ ರೂಪವಿಶೇಷಗಳಾದರೆ ಬೃಹಸ್ಪತಿಯು ಮಾನವನ ನೈತಿಕ ಮತ್ತು ಧಾರ್ಮಿಕ ಜೀವನ ಕ್ಷೇತ್ರಕ್ಕೆ ಸಂಬಂಧಿಸಿದಂತಿದೆ. ಸ್ತುತಿ, ಸ್ತೋತ್ರ ಅಥವಾ ಪ್ರಾರ್ಥನೆಗೆ ರಕ್ಷಕನಾದ ಈ ದೇವತೆಯು ದೇವತೆಗಳ ಮನಸ್ಸಿನ ನಿರ್ಧಾರ, ಸಂಕಲ್ಪ ಅಥವಾ ಶಕ್ತಿಯ ಮೇಲೆ ತನ್ನ ಪ್ರಭಾವವನ್ನು ಬೀರುವನೆಂಬುದಕ್ಕೆ ಋಗ್ವೇದದಲ್ಲಿ ಅನೇಕ ಉದಾಹರಣೆಗಳಿವೆ. ಋಗ್ವೇದ ೧೦ ನೇ ಮಂಡಲದ ೯೫ ನೆಯ ಸೂಕ್ತದಲ್ಲಿ ದೇವಾಪಿ ಮತ್ತು ಶಂತನು ಎಂಬ ಕುರುವಂಶದ ರಾಜಪುತ್ರರ ವಿಷಯಕವಾದ ಒಂದು ಇತಿಹಾಸವರ್ಣನೆ ಇದೆ. ಆದರಲ್ಲಿ ಬೃಹಸ್ಪತಿಯ ಪಾತ್ರವು ಬಹು ಮುಖ್ಯವಾದುದೆಂಬುದನ್ನು ನಿರುಕ್ತಕಾರರು ಈ ರೀತಿ ವರ್ಣಿಸಿದ್ದಾರೆ.

ಅತ್ರೇತಿಹಾಸಮಾಚಕ್ಷತೇ। ದೇವಾಪಿಶ್ಚಾರ್ಷ್ಟಿಷೇಣಃ ಶಂತನುಶ್ಚ ಕೌರವೌ ಭ್ರಾತರೌ ಬಭೂವತುಃ। ಸ ಶಂತನುಃ ಕನೀಯಾನಭಿಷೇಚಯಾಂಚಕ್ರೇ । ದೇವಾಪಿಸ್ತ್ವಪಃ ಪ್ರತಿಪೇದೇ । ತತಃ ಶಂತನೋ ರಾಜ್ಯೇ ದ್ವಾದಶ ವರ್ಷಾಣಿ ದೇವೋ ನ ವವರ್ಷ । ತಮೂಚುರ್ಬ್ರಾಹ್ಮಣಾ ಅಧರ್ಮಸ್ತ್ವಯಾ ಚರಿತೋ ಜ್ಯೇಷ್ಠಂ ಭ್ರಾತರಮಂತರಿತ್ಯಭಿಷೇಚಿತಂ ತಸ್ಮಾತ್ತ್ವೇ ದೇವೋ ನ ವರ್ಷತೀತಿ । ಸ ಶಂತನುರ್ದೇವಾಪಿಂ ಶಿಶಿಕ್ಷ ರಾಜ್ಯೇನ। ತಮುವಾಚ ದೇವಾಪಿಃ ಪುರೋಹಿತಸ್ತ್ವೇಽಸಾನಿ ಯಾಜಯಾನಿ ಚ ತ್ವೇತಿ ॥

(ನಿ ೨-೧೧)

ಪೂರ್ವಕಾಲದಲ್ಲಿ ಕುರುವಂಶದಲ್ಲಿ ಋಷ್ಟಿಷೇಣನೆಂಬ ರಾಜನಿಗೆ ದೇವಾಪಿ, ಶಂತನು ಎಂಬ ಈರ್ವರು ಪುತ್ರರಿದ್ದರು ಅವರಲ್ಲಿ ದೇವಾಪಿಯೆಂಬುವನು ಹಿರಿಯನು , ಶಂತನು ಎಂಬುವನು ಕಿರಿಯನು ಇವರ ತಂದೆಯಾದ ಋಷಿಷ್ಟೇಣನು ಮೃತನಾದ ಬಳಿಕ ಅವನ ಹಿರಿಯ ಮಗನಾದ ದೇವಾಪಿ ಎಂಬುವನು ರಾಜನಾಗಬೇಕೆಂದು ಇಚ್ಛಿಸಿದನು ಆದರೆ ಇವನ ತಮ್ಮನಾದ ಶಂತನುವು ಅದಕ್ಕೆ ಅವಕಾಶ ಕೊಡದೆ ತಾನೇ ರಾಜ್ಯಕ್ಕೆ ಬೊರೆಯಾಗಬೇಕೆಂದು ಬಯಸಿ ಅಣ್ಣನಾದ ದೇವಾಪಿಯನ್ನು ಓಡಿಸಿ ತಾನೇ ರಾಜ್ಯವಾಳಲು ಮೊದಲು ಮಾಡಿದನು ಅಣ್ಣನಾದ ದೇವಾಪಿಯು ವ್ಯಾಕುಲವುಳ್ಳವನಾಗಿ ಕಾಡಿಗೆ ಓಡಿ ಹೋಗಿ ತಪಸ್ಸನ್ನು ಮಾಡುತ್ತಾ ಕಾಲಕಳೆಯುತ್ತಿದ್ದನು ಹೀಗಿರಲು ಇವನ ದೇಶದಲ್ಲಿ ೧೨ ವರ್ಷಗಳವರಿಗೆ ಮಳೆಯೇ ಬರದೆ ಮಹಾ ಕ್ಷಾಮವು ಪ್ರಾಪ್ತವಾಯಿತು ಆಗ ರಾಜನಾದ ಶಂತನುವು ಇದಕ್ಕೆ ಏನು ಮಾಡಬೇಕೆಂದು ಆಲೋಚಿಸಿ ಬ್ರಾಹ್ಮಣರ ಸಲಹೆಯನ್ನು ಕೇಳಿದರು. ಆದಕ್ಕೆ ಬ್ರಾಹ್ಮಣರು ರಾಜನನ್ನು ಕುರಿತು ಧರ್ಮಶಾಸ್ತ್ರಪ್ರಕಾರ ರಾಜನ ಹಿರಿಯ ಮಗನೇ ರಾಜ್ಯಕ್ಕೆ ಅಧಿಕಾರಿಯು. ಆದುದರಿಂದ ರಾಜ್ಯಭಾರವನ್ನು ನಿನ್ನ ಅಣ್ಣನಾದ ದೇವಾಪಿಯೇ ಮಾಡಬೇಕಾಗಿದ್ದಿತು. ಆದರೆ ನೀನು ಆದಕ್ಕವಕಾಶ ಕೊಡದೆ ಅವನನ್ನು ಓಡಿಸಿ

ರಾಜ್ಯವನ್ನು ಆಕ್ರಮಿಸಿರುವೆ. ಹೀಗೆ ನೀನು ಅಧರ್ಮವನ್ನು ಆಚರಿಸುತ್ತಿರುವುದರಿಂದ ವೃಷ್ಟಿದೇವನು ನಿನ್ನ ರಾಜ್ಯದಲ್ಲಿ ಮಳೆಗೆರೆಯುವುದಿಲ್ಲ ಎಂದು ಹೇಳಿದರು ಶಂತನುರಾಜನು ತಾನು ಮಾಡಿದ ಅನ್ಯಾಯಕ್ಕೆ ಪಶ್ಚಾತ್ತಾಪ ಪಟ್ಟು ವನದಲ್ಲಿ ತಪಸ್ಸುಮಾಡುತ್ತಿದ್ದ ತನ್ನ ಅಣ್ಣನಾದ ದೇವಾಪಿಯನ್ನು ಕರೆಸಿ ಅವನಿಗೆ ರಾಜ್ಯವನ್ನು ಒಪ್ಪಿಸಿದನು. ಆದರೆ ದೇವಾಪಿಯು ರಾಜ್ಯವು ತನಗೆ ಬೇಡವೆಂದೂ ತಾನು ವನದಲ್ಲಿ ತಪಸ್ಸನ್ನು ಮಾಡುತ್ತಾ ನಿವೃತ್ತಿಮಾರ್ಗವನ್ನು ಆಶ್ರಯಿಸುವೆನೆಂದೂ ಹೇಳಿ, ರಾಜ್ಯದಲ್ಲಿ ಉಂಟಾಗಿರುವ ಅನಾವೃಷ್ಟಿಪರಿಹಾರಾರ್ಥವಾಗಿ ಶಂತನುವು ಯಜ್ಞ ಮಾಡಬೇಕೆಂದೂ ಆದರಲ್ಲಿ ತಾನು ಪೌರೋಹಿತ್ಯವನ್ನು ವಹಿಸಿ ವೃಷ್ಟಿಯಾಗಲು ಸಹಾಯ ಮಾಡುವೆನೆಂದೂ ಹೇಳಿದನು. ಅದಕ್ಕೆ ರಾಜನು ಒಪ್ಪಲು ದೇವಾಪಿಯು ಅವನ ಯಜ್ಞದಲ್ಲಿ ಹೋತೃವೆಂಬ ಋತ್ವಿಜನ ಪಾತ್ರವನ್ನು ವಹಿಸಿದನು. ಬೃಹಸ್ಪತಿಯು ಬ್ರಹ್ಮನೆಂದು ಋತ್ವಿಜನಾದನು. ವೃಷ್ಟಿನರ್ವಣಕ್ಯಾಗಿ ಮಾಡುತ್ತಿರುವ ಆ ಯಜ್ಞದಲ್ಲಿ ಹೋತೃವಾದ ದೇವಾಪಿಯು ಬ್ರಹ್ಮನಾದ ಬೃಹಸ್ಪತಿಯನ್ನು ಕುರಿತು ಎಲೈ ಬೃಹಸ್ಪತಿಯೇ, ನಿನಗೆ ದೇವತೆಗಳ ಮನಸ್ಸಿನ ಮೇಲೆ ಬಹಳವಾದ ಪ್ರಭಾವವಿರುವುದು. ಆದುದರಿಂದ ಅವರನ್ನು ಒಲಿಸಿಕೊಳ್ಳುವ ಮಂತ್ರಗಳನ್ನು ನನಗೆ ತಿಳಿಸಬೇಕು. ಎಂದು ಪ್ರಾರ್ಥಿಸಲಾಗಿ ಬೃಹಸ್ಪತಿಯು ಹಾಗೇ ಆಗಲೆಂದು ವೃಷ್ಟಿವರ್ಷಣಕ್ಕೆ ಬೇಕಾದ ದೇವತೆಗಳ ಪ್ರಾರ್ಥನೆ ಗಳನ್ನೊಳಗೊಂಡ ಮಂತ್ರಗಳನ್ನು ಹೋತೃವಾದ ದೇವಾಪಿಗೆ ಹೇಳಿಕೊಟ್ಟನು. ಆ ಮಂತ್ರಗಳಿಂದ ದೇವತೆ ಗಳನ್ನುದ್ದೇಶಿಸಿ ಹೋಮಮಾಡಲು ಯಥೇಚ್ಛವಾಗಿ ವೃಷ್ಟಿಯಾಯಿತು ಎಂದು ಹೇಳಿದೆ ಆದುದರಿಂದ ಈ ಸೂಕ್ತಕ್ಕೆ ವೃಷ್ಟಿಕಾಮ ಸೂಕ್ತವೆಂದೂ ಹೆಸರು. ಈ ವಿಷಯವು ಕೆಲವು ವ್ಯತ್ಯಾಸಗಳೊಡನೆ ವಿಷ್ಣುಪುರಾಣ ೪-೨೦-೭, ಮಹಾಭಾರತ ಆದಿಪರ್ವ, ಭಾಗವತಪುರಾಣ ೯-೨೨-೧೪ ರಿಂದ ೧೭, ಇತ್ಯಾದಿ ಪುರಾಣಗ್ರಂಥಗಳಲ್ಲಿಯೂ ಉಕ್ತವಾಗಿದೆ.

ಋ. ಸಂ. ೧೦ನೆಯ ಮಂಡಲದಲ್ಲಿ ೧೦೮ನೆಯ ಸೂಕ್ತದಲ್ಲಿ ಮತ್ತೊಂದು ಉಪಾಖ್ಯಾನವಿರುವುದು. ಪಣಿಗಳೆಂಬ ಅಸುರರು ದೇವತೆಗಳ ಗೋವುಗಳನ್ನು (ಉದಕವಿಶಿಷ್ಟಗಳಾದ ಮೇಘಗಳನ್ನು) ಅಪಹರಿಸಿ ಅಭೇದ್ಯವಾದ ಒಂದು ದುರ್ಗದಲ್ಲಿ ಬಚ್ಚಿಟ್ಟಿದ್ದರು. ಅದನ್ನು ಹುಡುಕುವಂತೆ ಇಂದ್ರನು ದೇವಶುನಿಯಾದ ಸರಮೆಯನ್ನು ಕಳುಹಿಸಿ ದನು. ಆ ಸರಮೆಯು ಪಣಿಗಳಲ್ಲಿಗೆ ಬಂದು ಅವರೊಡನೆ ವಾಗ್ವಾದವನ್ನು ಬೆಳೆಸಿ ಅಪಹರಿಸಿದ್ದ ಗೋವುಗಳನ್ನು ಹಿಂದಕ್ಕೆ ಕೊಡುವಂತೆ ಕೇಳಲು ಆ ಪಣಿಗಳು-ಇಂದ್ರನ ಶಕ್ತಿಯೆಷ್ಟರದು? ತಾವು ಮಹಾವೀರರು ಮತ್ತು ತಮ್ಮ ಆಯುಧಗಳು ತುಂಬಾ ಹರಿತವಾದವು. ಆದ್ದರಿಂದ ತಮ್ಮನ್ನು ಗೆಲ್ಲಲು ದೇವತೆಗಳಿಂದ ಸಾಧ್ಯವಿಲ್ಲವೆಂದೂ, ಗೋವುಗಳನ್ನು ಇಟ್ಟಿರುವ ಸ್ಥಳವನ್ನು ತಿಳಿಯಲು ದೇವತೆಗಳಿಗೂ ಸಾಧ್ಯವಿಲ್ಲವೆಂದೂ, ಆದುದರಿಂದ ಸರಮೆಯು ದೇವತೆಗಳ ಪಕ್ಷವನ್ನು ಬಿಟ್ಟು ತಮ್ಮ ಗುಂಪಿಗೇ ಸೇರಿದಲ್ಲಿ ಬೇಕಾದ ಐಶ್ವರ್ಯಾದಿಗಳನ್ನು ಕೊಡುವುವೆಂದೂ, ನಾನಾವಿಧವಾಗಿ ಪ್ರೇರಿಸಿದರೂ ಸರಮೆಯು ಅದಕ್ಕೊಪ್ಪದೆ ಅಲ್ಲಿಂದ ಹಿಂತಿರುಗಿ ಆ ವಿಷಯವನ್ನೆಲ್ಲಾ ದೇವತೆಗಳಿಗೆ ತಿಳಿಸಿದಳು ಆಗ ಬೃಹಸ್ಪತಿಯು ತನ್ನ ಸಾಮರ್ಥ್ಯದಿಂದ ಆ ಗೋವುಗಳನ್ನು ಬಚ್ಚಿಟ್ಟಿದ್ದ ಸ್ಥಳವನ್ನು ಪತ್ತೆಮಾಡಿದನು. ಬಳಿಕ ದೇವತೆಗಳು ಅವರನ್ನು ನಿಗ್ರಹಿಸಿ ಗೋವುಗಳನ್ನು ಹಿಂದಕ್ಕೆ ತಂದರು ಎಂಬ ಉಪಾಖ್ಯಾನವಿದೆ.

ಇಂತಹ ಅನೇಕ ಸಾಹಸಕಾರ್ಯಗಳಲ್ಲಿ ಬೃಹಸ್ಪತಿಯ ಪಾತ್ರವು ಬಹಳ ಮುಖ್ಯವಾಗಿದೆ. ಅದರಲ್ಲಿಯೂ ಮಾನವರಿಗೆ ವೃಷ್ಟಿಬೇಕಾದಲ್ಲಿ ಸಹಾಯಮಾಡಲು ಬೃಹಸ್ಪತಿಯ ಸಹಾಯವು ಅವಶ್ಯಕವಾಗಿದೆ. ಈ ವಿಧವಾದ ಪ್ರಾರ್ಥನೆಯೇ ಬೃಹಸ್ಪತಿದೇವತಾಕವಾದ ಸೂಕ್ತಗಳಲ್ಲಿ ವಿಶೇಷವಾಗಿ ಕಂಡುಬರುವುದು.

ಋಗ್ವೇದದಲ್ಲಿ ವರ್ಣಿಸಿರುವಂತೆ ಬೃಹಸ್ಪತಿಯ ಗುಣಗಳು, ಕಾರ್ಯಸಾಧನೆಗಳು ಯಾವ ರೀತಿ ಇವೆ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸೋಣ. ಬೃಹಸ್ಪತಿಯು ದ್ಯಾವಾಪೃಥಿವಿಗಳಿಂದ ಜನಿಸಿದವನು ಮತ್ತು ಅವರ ಮಹತ್ವದಿಂದಲೇ ಅವನ ಪೋಷಣೆಯಾಗಿದೆ. (ಋ. ಸಂ ೭–೯೭–೮) ಆದರೆ ಅವನನ್ನು ತ್ವಷ್ಟೃವು ಉತ್ಪತ್ತಿ ಮಾಡಿದನೆಂದು ಒಂದು ಕಡೆ (೨–೨೩–೧೭) ಹೇಳಿದೆ ಅವನಿಗೆ ದೇವತೆಗಳ ಜನಕನೆಂದು ಹೆಸರಿದೆ (೨–೨೬–೩), ಕರ್ಮಾರನ ಸುತ್ತಿಗೆಯ ಏಟಿನಿಂದ ಅಗ್ನಿ ಕಣಗಳು ಹಾರುವಂತೆ ದೇವತೆಗಳು ಇವನಿಂದ ಉತ್ಪನ್ನರಾದರು (೧೦–೭೨–೮) ಎಂದೂ ಹೇಳಿದೆ.

ಅವನಿಗೆ ಬ್ರಹ್ಮ (ಬ್ರಹ್ಮ ಎಂಬ ಋತ್ವಿಜ) ನೆಂದು ಹೆಸರಿದೆ. (೧೦–೧೪೧–೩) ಋತ್ವಿಜರೊಡನೆ ಇವನಿಗೆ ಸಂಬಂಧವಿದೆ (೭–೧೦–೪ ; ೧೦–೧೪–೩) ಅಂಗೀರಸನೆಂತಲೂ ಹೆಸರಿದೆ. (೪–೪೦–೧. ೪–೭೩–೧, ೧೦–೪೭–೬) ಸ್ತುತಿವಾಕ್ಯಗಳನ್ನು ರಚಿಸುವವನು, ಉಚ್ಚರಿಸುವವನು, ಅವುಗಳಿಗೆ ಅಧಿಪತಿ, ಪ್ರೇರಕ (೨–೨೩–೧, ೨, ೧–೪೦–೫, ೧೦–೯೮–೭), ಮಂತ್ರದಿಂದಲೇ ತನ್ನ ಉದ್ದೇಶಗಳನ್ನೆಲ್ಲಾ ಸಾಧಿಸುತ್ತಾನೆ (೨–೨೪–೩), ಯಜ್ಞವೆಂಬ ದೇದೀಪ್ಯಮಾನವಾದ ರಥವನ್ನೇರಿಕೊಂಡು ದೇವತೆಗಳ ಮತ್ತು ಸ್ತೋತೃಗಳ ಶತ್ರುಗಳನ್ನು ಜಯಿಸಲು ಹೊರಡುತ್ತಾನೆ. (೨–೨೩–೩), ಇವನು ಶ್ರದ್ಧಾಳುಗಳ ಪೋಷಕ ಮತ್ತು ರಕ್ಷಕನು, ಅವರಿಗೆ ಮಾರ್ಗದರ್ಶಕನಾಗಿದಾನೆ, ಅವರನ್ನು ವಿಪತ್ತುಗಳಿಂದ ಪಾರುಮಾಡುತ್ತಾನೆ (೨–೨೩–೪). ಅವರಿಗೆ ಸಂಪದಾದಿಗಳನ್ನು ಅನುಗ್ರಹಿಸುತ್ತಾನೆ (೨–೨೩–೯) ದೇವತೆಗಳಿಗೆಲ್ಲಾ ಪಿತೃವೆನಿಸಿಕೊಂಡಿದಾನೆ, ದಿವ್ಯವಾದ ಸಮಸ್ತ ಗುಣಗಳಿಂದ ಕೂಡಿದಾನೆ (೩–೬೨–೪, ೪–೫೦–೬) ವಿಶ್ವರೂಪನು, ಎಲ್ಲರೂ ಅಪೇಕ್ಷಿಸುವ ವಸ್ತುಗಳೆಲ್ಲವೂ ಇವನಲ್ಲಿವೆ (೭–೧೦–೪, ೭–೯೭–೪), ಸುವರ್ಣಮಯವಾದ ಈಟಿಯನ್ನು ಧರಿಸಿದಾನೆ (೭–೯೭–೭) ಇಂದ್ರನೊಡನೆ ಸೇರಿ ಇವನೂ ಸೈನ್ಯಗಳಿಗೆ ನಾಯಕನಾಗಿದಾನೆ (೧೦–೧೦೩–೮) ಆಯುಸ್ಸನ್ನು ವೃದ್ಧಿಮಾಡುವವನು (೧೨–೧೦೦–೫), ಸಸ್ಯಗಳು ಇವನಿಂದ ಉದ್ಭೂತವಾದವು, (೧೦–೯೭–೧೫ ಮತ್ತು ೧೯), ಕಪಿಲವರ್ಣದ ಅಶ್ವಗಳೇ ಅವನ ವಾಹನವೆಂದು ಹೇಳಿದೆ (ನಿ ೨–೨೮)

ರಾಕ್ಷಸರಿಂದ ಭಾವಿಯಲ್ಲಿ ಎಸೆಯಲ್ಪಟ್ಟು, ಸಹಾಯಕ್ಕಾಗಿ ದೇವತೆಗಳನ್ನು ಕರೆಯುತ್ತಿದ್ದ ತ್ರಿತನ ಆರ್ತನಾದವನ್ನು ಕೇಳಿ, ಆ ಅಪಾಯಕರವಾದ ಅವಸ್ಥೆಯಿಂದ ಬೃಹಸ್ಪತಿಯು ಅವನನ್ನು ಬಿಡುಗಡೆಮಾಡಿದನೆಂದೂ (೧–೧೦೫–೧೭), ಇಂದ್ರನೊಡನೆ ಸೇರಿ ಬೃಹಸ್ಪತಿಯು ಅಂಧಕಾರಾವೃತವಾಗಿದ್ದ ಉದಕವನ್ನು ಪುನಃ ಪ್ರವಹಿಸುವಂತೆ ಮಾಡಿದನೆಂದೂ (೨–೨೩–೧೯, ೧–೫೬–೫) ಹೇಳಿದೆ

ಮಧುಭರಿತವಾದ ಕೂಪದ ಶಿಲಾದ್ವಾರವನ್ನು ಬೃಹಸ್ಪತಿಯು ತನ್ನ ಸಾಮರ್ಥ್ಯದಿಂದ ಒಡೆದನು ದೇವತೆಗಳು ಆ ಮಧುವನ್ನು ಪಾನಮಾಡಿ ಯಥೇಚ್ಛವಾಗಿ ಮಳೆಗೆರೆದರು (೨–೨೪–೩, ೪), ಬೃಹಸ್ಪತಿಯು ಬೆಂಕಿ ಕಾರುತ್ತಿರುವ ಕಿರಣಗಳಿಂದ ವಲನ ದುರ್ಗಗಳನ್ನು ಭೇದಿಸಿದಾಗ ಗೋಸಮೂಹಗಳು ಗೋಚರವಾದವು, ಮೊಟ್ಟೆಯನ್ನು ಒಡೆಯುವಂತೆ ಗೋವುಗಳನ್ನು ಹೊರಕ್ಕೆ ಅಟ್ಟಿದನು, ಶಿಲೆಯಿಂದ ಆವೃತವಾದ (ನೀರು) ಮಧುವನ್ನು ಕಂಡು ತನ್ನ ಸಿಂಹನಾದದಿಂದಲೇ ಸೀಳಿ ಅದನ್ನು ಹೊರಕ್ಕೆ ಬರಮಾಡಿದನು (೧೦–೬೮–೪ರಿಂದ ೯) ಬೃಹಸ್ಪತಿಯು ಹಸುಗಳನ್ನು ಬಂಡೆಗಳಿಂದ ಹೊರಕ್ಕೆ ತಂದನು, ವಲನ ಗೋವುಗಳನ್ನು ಹಿಡಿದು ತನ್ನ ವಶಪಡಿಸಿಕೊಂಡನು (೧೦–೬೮–೮).

ಬೃಹಸ್ಪತಿಯು ದೇವಶ್ವವಿಶಿಷ್ಟನು (೨-೨೩-೨), ಎಲ್ಲಾ ದೇವತೆಗಳಿಗೂ ಸ್ವಕೀಯನು (೩-೬೨-೪, ೪-೫೦-೬), ಮತ್ತು ದೇವತೆಗಳಲ್ಲೆಲ್ಲಾ ಹೆಚ್ಚು ದೇವತ್ವವುಳ್ಳವನು; ದೇವತೆಯ ರೂಪದಿಂದ ಎಲ್ಲಾ ದೇವತೆಗಳನ್ನೂ ಎಲ್ಲಾ ಪದಾರ್ಥಗಳನ್ನೂ ತನ್ನಲ್ಲಿ ಸೇರಿಸಿಕೊಳ್ಳುತ್ತಾನೆ (೨-೨೪-೧೧, ೪-೬೧-೧೪). ಭೂಮಿಯ ಎರಡು ಕೊನೆಗಳನ್ನು ಸಮರ್ಥನಾದ ಇವನು ದೂರವಾಗಿ ಇಟ್ಟಿರುತ್ತಾನೆ. (೪-೫೦-೧): ಸೂರ್ಯಚಂದ್ರರು ಒಬ್ಬರಾದ ಮೇಲೊಬ್ಬರು ಉದಯಿಸುವುದೂ ಅವನ ಅನುಕರಣೀಯವಾದ ಕೃತ್ಯವೇ ಆಗಿದೆ (೧೦-೬೪-೧೦). ತೈತ್ತಿರೀಯ ಸಂಹಿತೆಯಲ್ಲಿ (ಯಜುರ್ವೇದದಲ್ಲಿ) ಬೃಹಸ್ಪತಿಗೂ ಕೆಲವು ನಕ್ಷತ್ರಗಳಿಗೂ ಸಂಬಂಧವು ಉಕ್ತವಾಗಿದೆ. ಬೃಹಸ್ಪತಿಯು ಪುಷ್ಯ ನಕ್ಷತ್ರದ ದೇವತೆ (ತೈ. ಸಂ ೪-೪-೧೦-೧), ಪುರಾಣಾದಿಗಳಲ್ಲಿ ಬೃಹಸ್ಪತಿಯನ್ನು ವಾಚಸ್ಪತಿಯೆಂದೂ ಬೃಹಸ್ಪತಿ ಗ್ರಹಾಭಿಮಾನಿದೇವತೆಯೆಂದೂ ವರ್ಣಿಸಿದೆ.

॥ ಸಾಯಣಭಾಷ್ಯಂ ॥

ಯೆಸ್ತ್ರಸ್ತಂಭೇತ್ಯೇಕಾದಶರ್ಚಂ ಪಂಚಮಂ ಸೂಕ್ತಂ ವಾಮದೇವಸ್ಯಾರ್ಷಂ ತ್ರೈಷ್ಟುಭಂ। ದಶಮೀ ಜಗತೀ। ದಶಮ್ಯೇಕಾದಶ್ಯಾವಿಂದ್ರಾಬೃಹಸ್ಪತಿದೇವತಾಕೇ ಶಿಷ್ಟಾನವ ಬಾರ್ಹಸ್ಪತ್ಯಃ। ಅಕ್ರಾನುಕ್ರಮಣಿಕಾ। ಯೆಸ್ತ್ರಸ್ತಂಭೈಕಾದಶ ಬಾರ್ಹಸ್ಪತ್ಯಮಂತ್ಯೇ ಐಂದ್ರ್ಯೌ ಚೋಪಾಂತ್ಯಾ ಜಗತೀ॥ ಆಭಿಪ್ಲವಿಕೇಷೂಕ್ಥೇಷು ತೃತೀಯಸವನೇ ಬ್ರಾಹ್ಮಣಾಚ್ಛಂಸಿನಃ ಸ್ತೋಮವೃದ್ಧಾವಿದಂ ಸೂಕ್ತಮಾವಾಪಾರ್ಥಂ। ತಥಾ ಚ ಸೂತ್ರಂ। ಯೆಸ್ತ್ರಸ್ತಂಭ ಯೋ ಅದ್ರಿಭಿತ್। ಆ. ೭-೯। ಇತಿ॥ ಆದ್ಯೇ ಬೃಹಸ್ಪತಿಸವನೇ ಮರುತ್ವತೀಯನಿಷ್ಕೇವಲ್ಯಯೋಃ ಸೂಕ್ತಮುಖೀಯೇ। ಸೂತ್ರಿತಂ ಚ। ಯೆಸ್ತ್ರಸ್ತಂಭ ಧುನೇತಯ ಇತಿ ಸೂಕ್ತಮುಖೀಯೇ। ಆ. ೯-೫। ಇತಿ॥

ಅನುವಾದವು— **ಯೆಸ್ತ್ರಸ್ತಂಭ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು ಈ ಸೂಕ್ತಕ್ಕೆ ವಾಮದೇವನು ಋಷಿಯು, ಈ ಸೂಕ್ತದ ಹತ್ತು ಮತ್ತು ಹನ್ನೊಂದನೆಯ ಋಕ್ಕುಗಳು ಇಂದ್ರಾಬೃಹಸ್ಪತಿದೇವತಾಕವು ಉಳಿದ ಒಂಭತ್ತು ಋಕ್ಕುಗಳು ಬೃಹಸ್ಪತಿದೇವತಾಕವು, ಹತ್ತನೆಯ ಋಕ್ಕು ಜಗತೀಛಂದಸ್ಕವು ಉಳಿದ ಋಕ್ಕುಗಳು ತ್ರಿಷ್ಟುಪ್ಛಂದಸ್ಕವು. ಅನುಕ್ರಮಣಿಕೆಯಲ್ಲಿ— **ಯೆಸ್ತ್ರಸ್ತಂಭೈಕಾದಶ ಬಾರ್ಹಸ್ಪತ್ಯಮಂತ್ಯೇ ಐಂದ್ರ್ಯೌ ಚೋಪಾಂತ್ಯಾ ಜಗತೀ** ಎಂದು ಹೇಳಿರುವುದು. ಆಭಿಪ್ಲವಸಂಬಂಧವಾದ ಉಕ್ಥಯಾಗದಲ್ಲಿ ತೃತೀಯಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು **ಸ್ತೋಮ** ವೃದ್ಧಿಗಾಗಿ ಪರಿಸುವ ಸೂಕ್ತಗಳಲ್ಲಿ ಈ ಸೂಕ್ತವನ್ನು ಆವಾಪಾರ್ಥವಾಗಿ (ಹೆಚ್ಚಿಸುವುದಕ್ಕಾಗಿ) ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಯೆಸ್ತ್ರಸ್ತಂಭ ಯೋ ಅದ್ರಿಭಿತ್** ಎಂಬ ಸೂತ್ರದಿಂದ (ಆ. ೭-೯) ವಿವೃತವಾಗಿರುವುದು. ಮತ್ತು ಈ ಸೂಕ್ತದ ಮೊದಲನೆಯ ಎರಡು ಋಕ್ಕುಗಳನ್ನು ಬೃಹಸ್ಪತಿಸವನನೆಂಬ ಯಾಗದಲ್ಲಿ ಪರಿಸುವ ಮರುತ್ವತೀಯ ನಿಷ್ಕೇವಲ್ಯಶಸ್ತ್ರಮಂತ್ರಗಳ ಪ್ರಾರಂಭದಲ್ಲಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಯೆಸ್ತ್ರಸ್ತಂಭ ಧುನೇತಯ ಇತಿ ಸೂಕ್ತಮುಖೀಯೇ** ಎಂಬ ಸೂತ್ರದಿಂದ (ಆ. ೯-೫) ವಿವೃತವಾಗಿರುವುದು

ಸೂಕ್ತ—೫೦

ಮಂಡಲ—೪ ॥ ಅನುವಾಕ—೫ ॥ ಸೂಕ್ತ—೫೦ ॥
ಅಷ್ಟಕ—೩ ॥ ಅಧ್ಯಾಯ—೭ ॥ ವರ್ಗ—೨೬, ೨೭ ॥

॥ ಸೂಕ್ತವಲ್ಲಿರುವ ಋಕ್ಸಂಖ್ಯೆ—೧೧ ॥
॥ ಋಷಿಃ—ವಾಮದೇವಃ ॥
॥ ದೇವತಾ—೧-೯, ಬೃಹಸ್ಪತಿಃ । ೧೦-೧೧. ಇಂದ್ರಾಬೃಹಸ್ಪತೀ ॥
॥ ಛಂದಃ—೧-೯, ೧೧. ತ್ರಿಷ್ಟುಪ್ । ೧೦. ಜಗತೀ ॥

॥ ಸಂಹಿತಾಪಾಠಃ ॥

ಯಸ್ತಸ್ತಂಭ ಸಹಸಾ ವಿ ಜ್ಮೋ ಅಂತಾನ್ಬೃಹಸ್ಪತಿಸ್ತ್ರಿಷಧಸ್ಥೋ ರವೇಣ ।
ತಂ ಪ್ರತ್ನಾಸ ಋಷಯೋ ದೀಧ್ಯಾನಾಃ ಪುರೋ ವಿಪ್ರಾ ದಧಿರೇ ಮಂದ್ರ-
ಜಿಹ್ವಂ ॥ ೧ ॥

॥ ಪದಪಾಠಃ ॥

ಯಃ । ತಸ್ತಂಭ । ಸಹಸಾ । ವಿ । ಜ್ಮಃ । ಅಂತಾನ್ । ಬೃಹಸ್ಪತಿಃ । ತ್ರಿಷಧಸ್ಥಃ । ರವೇಣ ।
ತಂ । ಪ್ರತ್ನಾಸಃ । ಋಷಯಃ । ದೀಧ್ಯಾನಾಃ । ಪುರಃ । ವಿಪ್ರಾಃ । ದಧಿರೇ । ಮಂದ್ರಜಿಹ್ವಂ ॥ ೧ ॥

॥ ಸಾಯಣಭಾಷ್ಯಂ ॥

ಯೋ ಬೃಹಸ್ಪತಿರ್ಬೃಹತೋ ದೇವಸ್ಯ॥ ಯಜ್ಞಸ್ಯ ವಾ ಸಾಲಯಿತಾ ದೇವಃ ಸಹಸಾಬಲೇನ ಜ್ಮಃ ಪೃಥಿವ್ಯಾ ಅಂತಾನ್ । ದಶ ದಿಶ ಇತ್ಯರ್ಥಃ । ತಾನ್ವಿ ತಸ್ತಂಭ । ವಿವಿಧಂ ಸ್ತಂಭಿತವಾನ್ । ನಿಯಮಿತವಾನ್ । ತ್ರಿಷಧಸ್ಥಸ್ತ್ರಿಷು ಸ್ಥಾನೇಷು ವರ್ತಮಾನೋ ರವೇಣೈವಂ ಶಿಷ್ಟತೇತ್ಯನೇನ ಶಬ್ದೇನ ತಂ ದೇವಂ ಪ್ರತ್ನಾಸಃ ಪುರಾಣಾ ಋಷಯೋಽತೀಂದ್ರಿಯದ್ರಷ್ಟಾರೋ ದೀಧ್ಯಾನಾ ದೀಪ್ಯಮಾನಾ ವಿಪ್ರಾ ಮೇಧಾವಿನೋ ಯಜಮಾನಾದಯಃ ಪುರೋ ದಧಿರೇ । ಪುರಸ್ತಾತ್ಸ್ಥಾಪಿತವಂತಃ ಸ್ತುತ್ಯಾದಿನಾ । ಮಂದ್ರಜಿಹ್ವಂ ಮಾದನಜಿಹ್ವಂ ಮೋದನಜಿಹ್ವಂ ॥

॥ ಪ್ರತಿಪದಾರ್ಥಃ ॥

ಯಃ—ಯಾವ । **ಬೃಹಸ್ಪತಿಃ**—ಬೃಹಸ್ಪತಿಯು । **ಸಹಸಾ**--ತನ್ನ ಬಲದಿಂದ । **ಜ್ಮಃ**—ಪೃಥಿವಿಯ । **ಅಂತಾನ್**—ಕೊನೆಗಳನ್ನು (ಹತ್ತು ದಿಕ್ಕುಗಳನ್ನೂ) । **ವಿ ತಸ್ತಂಭ**— ವಿಶೇಷರೀತಿಯಿಂದ ನಿಯಮಿಸಿ ನಿಲ್ಲಿಸಿದನೋ (ಮತ್ತು) । **ರವೇಣ**—ತನ್ನ ವಿಶೇಷರೀತಿಯ ಶಬ್ದದಿಂದ । **ತ್ರಿಷಧಸ್ಥಃ**—ಮೂರು ಲೋಕಗಳಲ್ಲೂ ವ್ಯಾಪಿಸಿದ್ದಾನೋ । **ತಂ**—ಅಂತಹ । **ಮಂದ್ರಜಿಹ್ವಂ**—ಸಂತೋಷಕಾರಕವಾದ ಜಿಹ್ವೆಯುಳ್ಳ

बृहस्पतियन्नु । **प्रैत्नासः**—पुरातनरू । **दीध्यानाः**—प्रकाशमानरू । **विप्राः**—मेधावि गळू आद । **ऋषयः**—ऋषिगळु । **पुरः**—तम्म मुंदुगडे । **दधिरे**—(स्तुतिगळिंद) स्थापिसिद्दारे.

॥ भावार्थ ॥

तन्न स्वशक्तियिंद पृथिविय अंतगळन्नु एंदरे हत्तु दिक्कुगळन्नू विशेषरीतियिंद नियमिसि निल्लिसिदवनू, तन्न विशेषरीतिय शब्ददिंद मूरु लोकगळल्लू व्याप्तिसिदवनू, संतोष कारकवाद जिह्वेयुळ्ळवनू आद बृहस्पतियन्नु पुरातनरू, प्रकाशमानरू, मेधाविगळू आद ऋषिगळु तम्म स्तुतिगळिंद तम्मेदुरिगे स्थापिसिद्दारे.

English Translation.

The ancient sages, illustrious, intelligent, have placed before (them) the pleasing-tongued Brihaspati, who propped up by (his) strength the ends of the earth, and who adides with noise in the three regions.

॥ संहितापाठः ॥

धुनेऽतयः सुप्रकेतं मदंतोऽ बृहस्पतेऽअभि योऽ नस्तत्रस्रे ।
पृषंतं सृप्रमदब्धमूर्वं बृहस्पतेऽ रक्षतादस्य योऽनिं ॥ ३ ॥

॥ पदपाठः ॥

धुनऽइतयः । सुऽप्रकेतं । मदंतः । बृहस्पतेऽ । अभि । योऽ । नः । ततस्रे ।
पृषंतं । सृप्रं । अदब्धं । ऊर्वं । बृहस्पतेऽ । रक्षतात् । अस्य । योऽनिं ॥ ३ ॥

॥ सायणभाष्यं ॥

हे बृहस्पतेऽ धुनेऽतयः । धुना शत्रूणां कंपयित्रीतिर्गतिर्येषां तेऽ । तादृशाः सुप्रकेतं शोभनप्रज्ञं त्वां मदंतोऽ मादयंतोऽ नोऽस्मत्संबंधिनोऽ यं ऋत्विजोऽभि ततस्रे आत्मानमुपक्षिपंति स्तुवंति वा आसृष्टानां योऽनिं कारणं यज्ञं यजमानं वा मां रक्षतात् । रक्ष । योऽनिर्विशेषमृकेऽ । पृषंतं फलानि सिंचंतं सृप्रं सर्पणस्वभावमदब्धमहिंसितमूर्वमुरुं ॥

। ಪ್ರತಿಪದಾರ್ಥ ।

ಬೃಹಸ್ಪತೇ—ಎಲೈ ಬೃಹಸ್ಪತಿಯೇ । **ಧುನೇತಯಃ**—ಶತ್ರುವಿಗೆ ಭಯವನ್ನುಂಟುಮಾಡುವವರೂ । **ಸುಪ್ರಕೇತಂ**—ಶ್ರೇಷ್ಠಪ್ರಜ್ಞಾನಾದ ನಿನ್ನನ್ನು । **ಮದಂತಃ**— ಹರ್ಷಪಡಿಸುವವರೂ ಆದ । **ಯೇ**—ಯಾವ ಋತ್ವಿಕ್ಕುಗಳು । **ನಃ**—ನಮಗಾಗಿ । **ಅಭಿ ತತಸ್ರೇ**—ನಿನ್ನನ್ನು ಆಪಾರವಾಗಿ ಸ್ತುತಿಸಿದರೋ ಅಂತಹ ಋತ್ವಿಕ್ಕುಗಳ (ಅಥವಾ ಯಜಮಾನರ) । **ಪೃಷಂತಂ**—ಫಲಪ್ರದವಾದುದೂ । **ಸೃಪ್ರಂ**—ಮುಂದುವರಿಯುವ ಸ್ವರೂಪವುಳ್ಳದ್ದೂ । **ಅದಬ್ಧಂ**—ಅಹಿಂಸಿತವಾದುದೂ । **ಊರ್ವಂ**—ವಿಸ್ತೃತವಾದುದೂ ಆದ । **ಅಸ್ಯ ಯೋನಿಂ**—ಈ ಯಜ್ಞವನ್ನು **ರಕ್ಷತಾತ್**—ಕಾಪಾಡು.

। ಭಾವಾರ್ಥ ।

ಎಲೈ ಬೃಹಸ್ಪತಿಯೇ, ಶತ್ರುಭೀಕರರೂ, ಶ್ರೇಷ್ಠಪ್ರಜ್ಞಾನಾದ ನಿನ್ನನ್ನು ಪಚರಿಸಿ ನಿನಗೆ ಸಂತೋಷವನ್ನುಂಟು ಮಾಡುವವರೂ ಆದ ಯಾವ ಋತ್ವಿಕ್ಕುಗಳು ನಮಗಾಗಿ ನಿನ್ನನ್ನು ಆಪಾರವಾಗಿ ಸ್ತುತಿಸಿದರೋ ಅಂತಹ ಋತ್ವಿಕ್ಕುಗಳಿಂದ ನಿರವೇರಲ್ಪಟ್ಟ ಫಲಪ್ರದವಾದುದೂ, ನಿರ್ವಿಘ್ನವಾಗಿ ಮುಂದುವರೆಯುವ ಸ್ವರೂಪವುಳ್ಳದ್ದೂ, ಅಹಿಂಸಿತವಾದುದೂ, ವಿಸ್ತೃತವಾದುದೂ ಆದ ಈ ಯಜ್ಞವನ್ನು ಕಾಪಾಡು.

English Translation.

Brihaspathi, protect the fruit-yielding, progressive, uninjured, ample sacrifice of this (your worshipper, at which) they who are the terrifiers, (of foes), the delighters of you who are possessed of great wisdom, glorify (you) in our behalf.

। ಸಂಹಿತಾಪಾಠಃ ।

ಬೃಹಸ್ಪತೇ ಯಾ ಪರಮಾ ಪರಾವದತ ಆ ತ ಋತಸ್ಪೃಶೋ ನಿ ಷೇದುಃ ।
ತುಭ್ಯಂ ಖಾತಾ ಅವತಾ ಅದ್ರಿದುಗ್ಧಾ ಮಧ್ವಃ ಶ್ಚೋತಂತ್ಯಭಿತೋ ವಿರಪ್ಶಂ ॥

। ಪದಪಾಠಃ ।

ಬೃಹಸ್ಪತೇ । ಯಾಃ । ಪರಮಾಃ । ಪರಾವತ್ । ಆತಃ । ಆ । ತೇ । ಋತಸ್ಪೃಶಃ । ನಿ । ಸೇದುಃ ।
ತುಭ್ಯಂ । ಖಾತಾಃ । ಅವತಾಃ । ಅದ್ರಿದುಗ್ಧಾಃ । ಮಧ್ವಃ । ಶ್ಚೋತಂತಿ । ಅಭಿತಃ । ವಿರಪ್ಶಂ ॥ ೩ ॥

॥ सायणभाष्यम् ॥

बृहस्पतेऽ योऽत्यादिकेऽ द्वे बार्हस्पत्येऽ दशौ वसाप्रीरोडाशयोरनुवाक्येऽ । बृहस्पतेऽ योऽ परमा परावदिति द्वे । अ. ४-६ । इति हि सूत्रितम् ॥

हे बृहस्पतेऽ योऽ प्रसिद्धा परमोत्कृष्टा परावदत्यन्तं दूरभूता वसतिः स्वर्गाख्यास्ति । यद्वा लिंगव्यत्ययः । परमं स्थानमस्ति । अतोऽस्माद्देशादा । अ इत्यर्वागर्थेऽ । अधस्तात्ते तव संबन्धिने यतस्पृशोऽ यज्ञं स्पृशंतोऽश्वा नि षेदुः । निषण्णा भवंति । तुभ्यं भ्राता अवतानः । उप्तोप्तेपमैषा । यथा भ्रातः कृपा अभितः श्लोतंति तद्वदद्रिदुग्धा ग्रावभिरभिसुताः सोमा विरप्शं विशेषेण शब्देन स्तोत्रं यथा भवति तथा मधोऽ मधुररसं श्लोतंति । स्रवंति ॥

॥ प्रतिपदार्थ ॥

बृहस्पतेऽ—ಎಲೈ ಬೃಹಸ್ಪತಿಯೇ । योऽ—ಯಾವ ಪ್ರಸಿದ್ಧವಾದುದೂ । परमाऽ—ಅತ್ಯುತ್ಕೃಷ್ಟವಾದುದೂ । परावत्ऽ—ದೂರಸ್ಥಿತವಾದುದೂ ಆದ ಸ್ವರ್ಗರೂಪವಾದ ವಸತಿಯಿದೆಯೋ । अतऽ आ—ಅಲ್ಲಿಂದ ಇಳಿದು ಬಂದಿರುವುವೂ । यतस्पृशःऽ—ಯಜ್ಞವನ್ನು ಸ್ಪರ್ಶಿಸುವುವೂ ಆದ । तेऽ—ನಿನ್ನ ಅಶ್ವಗಳು । नि षेदुःऽ—(ಯಜ್ಞಸ್ಥಾನದಲ್ಲಿ ಬಂದು) ಕುಳಿತಿವೆ । भ्राताऽ—ಅಗೆಯಲ್ಪಟ್ಟ । अवतानःऽ—ಭಾವಿಗಳಂತೆ । तुभ्यंऽ—ನಿನಗಾಗಿ । अद्रिदुग्धाःऽ—ಹಿಂಡುವ ಕಲ್ಲುಗಳಿಂದ ಜಜ್ಜಿ ಹಿಂಡಲ್ಪಟ್ಟ । मधवःऽ—ಸೋಮರಸಗಳು । अभितःऽ—ಸುತ್ತಲೂ । विरप्शंऽ—ನಾನಾವಿಧವಾಗಿ ಸ್ತುತ್ಯಾತ್ಮಕವಾದ ಶಬ್ದವನ್ನು ಮಾಡಿಕೊಂಡು । श्लोतंतिऽ—ಪ್ರವಹಿಸುತ್ತವೆ.

॥ भावार्थ ॥

ಎಲೈ ಬೃಹಸ್ಪತಿಯೇ, ಯಾವ ಪ್ರಸಿದ್ಧವಾದುದೂ, ಅತುತ್ಕೃಷ್ಟವಾದುದೂ, ದೂರಸ್ಥಿತವಾದುದೂ ಆದ ಸ್ವರ್ಗಾಖ್ಯವಾದ ವಸತಿಯಿದೆಯೋ ಅಲ್ಲಿಂದ ಇಳಿದು ಬಂದಿರುವುವೂ ಯಜ್ಞವನ್ನು ಸ್ಪರ್ಶಿಸುವುವೂ ಆದ ನಿನ್ನ ಅಶ್ವಗಳು ಯಜ್ಞಸ್ಥಾನದಲ್ಲಿ ಬಂದು ಕುಳಿತಿವೆ. ಹೊಸದಾಗಿ ಅಗೆದ ಭಾವಿಯಿಂದ ಬುಗ್ಗೆಯ ರೂಪದಲ್ಲಿ ಉದಕವು ಪ್ರವಹಿಸುವಂತೆ, ನಿನಗಾಗಿ ಕಲ್ಲುಗಳಿಂದ ಜಜ್ಜಿ ಹಿಂಡಲ್ಪಟ್ಟ ಸೋಮರಸಗಳು ಸುತ್ತಲೂ ನಾನಾವಿಧವಾಗಿ ಸ್ತುತ್ಯಾತ್ಮಕವಾದ ಶಬ್ದವನ್ನು ಮಾಡಿಕೊಂಡು ಪ್ರವಹಿಸುತ್ತವೆ

English Translation.

Those (steeds), Brihaspati, which had come from that distant (region), the best (of all), have sat down in connection with the ceremony, and to you the Some juices expressed by the stones flow copiously, (accompanied) by the sounds of praise, like deep wells that supply water.

॥ ವಿಶೇಷವಿಷಯಗಳು ॥

ಬೃಹಸ್ಪತೇ ಯಾ ಎಂಬ ಈ ಋಕ್ಕನ್ನೂ, ಇದರ ಮುಂದಿನ ಋಕ್ಕನ್ನೂ ಬೃಹಸ್ಪತಿಸಂಬಂಧವಾದ ಪಶುಯಾಗದಲ್ಲಿ **ವಪಾ** ಮತ್ತು ಪುರೋಡಾಶಗಳನ್ನು ಹೋಮಮಾಡುವಾಗ ಅನುವಾಕ್ಯಾನುಯಂತ್ರಗಳನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಬೃಹಸ್ಪತೇ ಯಾ ಪರಮಾ ಪರಾವದಿತಿ ದ್ವೇ** ಎಂಬ ಸೂತ್ರದಿಂದ (೮ ೩–೭) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಬೃಹಸ್ಪತಿಃ ಪ್ರಥಮಂ ಜಾಯಮಾನೋ ಮಹೋ ಜ್ಯೋತಿಷಃ ಪರಮೇ ವ್ಯೋಮನ್ ।
ಸಪ್ತಾಸ್ಯಸ್ತುವಿಜಾತೋ ರವೇಣ ವಿ ಸಪ್ತರಶ್ಮಿರಧಮತ್ತಮಾಂಸಿ ॥ ೪ ॥

॥ ಪದಪಾಠಃ ॥

ಬೃಹಸ್ಪತಿಃ । ಪ್ರಥಮಂ । ಜಾಯಮಾನಃ । ಮಹಃ । ಜ್ಯೋತಿಷಃ । ಪರಮೇ । ವ್ಯೋಮನ್ ।
ಸಪ್ತಾಽಅಸ್ಯಃ । ತುವಿಽಜಾತಃ । ರವೇಣ । ವಿ । ಸಪ್ತಽರಶ್ಮಿಃ । ಅಧಮತ್ । ತಮಾಂಸಿ ॥ ೪ ॥

॥ ಸಾಯಣಭಾಷ್ಯಂ ॥

ಅಯಂ ಬೃಹಸ್ಪತಿರ್ಮಂತ್ರಾಭಿಮಾನೀ ದೇವೋ ಮಹೋ ಮಹತೋ ಜ್ಯೋತಿಷೋ ದೀಪ್ತಿಸ್ಯಾದಿತ್ಯಸ್ಯ ಪರಮೇ ನಿರತಿಶಯೇ ವ್ಯೋಮನ್ ವ್ಯೋಮನಿ ಪ್ರಥಮಂ ಜಾಯಮಾನಃ ಪ್ರಾದುರ್ಭವನ್ ಸಪ್ತಾಸ್ಯಃ ಸಪ್ತಚ್ಛಂದೋಮಯಮುಖಸ್ತುವಿಜಾತೋ ಬಹುಪ್ರಕಾರಂ ಸಂಭೂತೋ ರವೇಣ ಶಬ್ದೇನ ಸಪ್ತರಶ್ಮಿಃ ಸರ್ಪಣಸ್ವಭಾವತೇಜೋಯುಕ್ತಸ್ತಮಾಂಸಿ ವ್ಯಧಮತ್ । ಧಮತಿರ್ಗತಿಕರ್ಮೇತಿ ನಿರುಕ್ತಂ । ೬–೨ । ವಿವಿಧಂ ಗಚ್ಛತಿ । ನಾಶಯತೀತ್ಯರ್ಥಃ ॥

। ಪ್ರತಿಪದಾರ್ಥ ।

ಬೃಹಸ್ಪತಿಃ—ಬೃಹಸ್ಪತಿಯು । **ಮಹಃ**—ಮಹತ್ತಾದುದೂ । **ಜ್ಯೋತಿಷಃ**—ಪ್ರಕಾಶಾತ್ಮಕವಾದುದೂ ಆದ ಆದಿತ್ಯನ । **ಪರಮೇ**—ಉತ್ಕೃಷ್ಟವಾದ । **ವ್ಯೋಮನ್**—ಅಂತರಿಕ್ಷದಲ್ಲಿ । **ಪ್ರಥಮಂ**—ಮೊದಲು । **ಜಾಯಮಾನಃ**—ಉತ್ಪನ್ನನಾಗಿ । **ಸಪ್ತಾಸ್ಯಃ**—ಸಪ್ತಚ್ಛಂದೋರೂಪವಾದ ಮುಖವುಳ್ಳವನಾಗಿಯೂ । **ತುವಿಜಾತಃ**—ಅನೇಕ ಪ್ರಕಾರದಲ್ಲಿ ಉತ್ಪನ್ನನಾಗಿಯೂ । **ರವೇಣ**—ಶಬ್ದಮಿಶ್ರಿತನಾಗಿಯೂ । **ಸಪ್ತರಶ್ಮಿಃ**—ಸಪ್ತರಶ್ಮಿಯುಕ್ತನಾಗಿಯೂ ಇದ್ದು । **ತಮಾಂಸಿ**—ಕಗ್ಗತ್ತಲೆಗಳನ್ನು । **ವ್ಯಧಮತ್**—ನಾಶಪಡಿಸಿದನು.

॥ ಭಾವಾರ್ಥ ॥

ಬೃಹಸ್ಪತಿಯು, ಮಹತ್ತಾದುದೂ, ಪ್ರಕಾಶಾತ್ಮಕವಾದುದೂ ಆದ ಆದಿತ್ಯನ ಉತ್ಕೃಷ್ಟವಾದ ಆಂತರಿಕ್ಷದಲ್ಲಿ ಮೊದಲು ಉತ್ಪನ್ನನಾಗಿ, ಸಪ್ತಚ್ಛಂದೋರೂಪವಾದ ಮುಖವುಳ್ಳವನಾಗಿಯೂ, ಅನೇಕಪ್ರಕಾರದಲ್ಲಿ ಉತ್ಪನ್ನನಾಗಿಯೂ, ಶಬ್ದಮಿತ್ರನಾಗಿಯೂ, ಸಪ್ತರಶ್ಮಿಯುಕ್ತನಾಗಿಯೂ ಇದ್ದು ಕಗ್ಗತ್ತಲೆಗಳನ್ನು ನಾಶಪಡಿಸಿದನು.

English Translation.

Brihaspati, when first being born in the highest heaven of supreme light, seven-mouthed, multiform, (comdined) with sound, and seven-rayed, has subdued the darkness.

॥ ಸಂಹಿತಾಪಾಠಃ ॥

ಸ ಸುಷ್ಟುಭಾ ಸ ಉಕ್ಥತಾ ಗಣೇನ ವಲಂ ರುರೋಜ ಫಲಿಗಂ ರವೇಣ ।
ಬೃಹಸ್ಪತಿರುಸ್ರಿಯಾ ಹವ್ಯಸೂದಃ ಕನಿಕ್ರದದ್ವಾವಶತೀರುದಾಜತ್ ॥ ೫॥

॥ ಪದಪಾಠಃ ॥

ಸಃ । ಸುಽಸ್ತುಭಾ । ಸಃ । ಉಕ್ಥತಾ । ಗಣೇನ । ವಲಂ । ರುರೋಜ । ಫಲಿಽಗಂ । ರವೇಣ ।
ಬೃಹಸ್ಪತಿಃ । ಉಸ್ರಿಯಾಃ । ಹವ್ಯಽಸೂದಃ । ಕನಿಕ್ರದತ್ । ವಾವಶತೀಃ । ಉತ್ । ಅಜತ್ ॥ ೫ ॥

॥ ಸಾಯಣಭಾಷ್ಯಂ ॥

ಸ ಬೃಹಸ್ಪತಿಃ ಸುಷ್ಟುಭಾ ಶೋಭನಸ್ತುತಿಮತೇರ್ಯುತಾ ದೀಪ್ತಿಮತಾ ಗಣೇನಾಂಗಿರಸಾಂ ರವೇಣ ಶಬ್ದೇನ ಚ ಸಹ ಫಲಿಗಂ ॥ ಇಷಲಾ ವಿಶರಣೇ ॥ ಫಲಿರ್ಭೇದನಃ । ತೇನ ಗಚ್ಛತೀತಿ ಫಲಿಗಂ । ವಲಂ ವಲನಾಮಾನಮಸುರಂ ರುರೋಜ। ಬಭಂಜ । ದ್ವಿತೀಯಃ ಸಕಬ್ದಃ ಪೂರಣಃ। ಸ ಏವ ದೇವ ಉಸ್ರಿಯಾ ಭೋಗಾನಾಮುತ್ಸಾವಿಣೇರ್ಹವ್ಯಸೂದಃ ಕ್ಷೀರಾದಿಹವಿಷ್ಪೇರಿಕಾ ವಾವಶತೀರ್ವಾವಶ್ಯಮಾನಾ ಗಾ ಕನಿಕ್ರದತ್ ಶಬ್ದಂ ಕುರ್ವನ್ನುದಾಜತ್ । ಉದ್ಗಾಟಯತಿ ಸ್ಮ ॥

॥ ಪ್ರತಿಪದಾರ್ಥ ॥

ಸಃ—ಆದೇ ಪ್ರಸಿದ್ಧನಾದ । ಬೃಹಸ್ಪತಿಃ—ಬೃಹಸ್ಪತಿಯು । ಸುಷ್ಟುಭಾ—ಶ್ರೇಷ್ಠವಾದ ಸ್ತುತಿಗಳುಳ್ಳದ್ದೂ । ಉಕ್ಥತಾ—ಪ್ರಕಾಶಮಾನವಾದುದೂ ಆದ। ಗಣೇನ—(ಅಂಗಿರಸ್ಸುಗಳ) ಸಂಘದಿಂದಲೂ । ರವೇಣ—ಶಬ್ದದಿಂದಲೂ ಕೂಡಿಕೊಂಡು । ಫಲಿಗಂ—ದುಷ್ಟಬುದ್ಧಿಯುಳ್ಳ । ವಲಂ—ವಲನೆಂಬ ಅಸುರನನ್ನು ।

ರುರೋಜ—ಸೀಳಿಹಾಕಿದನು । **ಸಃ**—ಆದೇ ಬೃಹಸ್ಪತಿಯು । **ಉಸ್ರಿಯಾಃ**—ವರಪ್ರದವಾದವೂ । **ಹವ್ಯಸೂದಃ**—ಹವಿಸ್ಸಿಗೆ ಸಾಧನವಾದ ಕ್ಷೀರಾದಿಗಳನ್ನು ಕರೆಯುವುವೂ । **ವಾವಶತೀಃ**—ಶಬ್ದಮಾಡುತ್ತಿದ್ದವೂ ಆದ ಗೋವುಗಳನ್ನು । **ಕನಿಕ್ರದತ್**—ತಾನೂ ಶಬ್ದಮಾಡುತ್ತಾ । **ಉದಾಜತ್**—ಸ್ವತಂತ್ರವಾಗಿ ಓಡಾಡುವಂತೆ ಬಿಡಿಸಿದನು

॥ ಪಾನಾರ್ಥ ॥

ಲೋಕಪ್ರಸಿದ್ಧನಾದ ಬೃಹಸ್ಪತಿಯು ಶ್ರೇಷ್ಠವಾದ ಸ್ತುತಿಗಳುಳ್ಳದ್ದೂ, ಪ್ರಕಾಶಮಾನವಾದುದೂ ಆದ ಅಂಗಿರಸ್ಸುಗಳ ಸಂಘದೊಡನೆ ಕೂಡಿ ಶಬ್ದಮಾಡುತ್ತಾ, (ಮಂತ್ರಪಠನಮಾಡುತ್ತಾ) ದುಷ್ಟಬುದ್ಧಿಯುಳ್ಳ ವಲನೆಂಬ ಅಸುರನನ್ನು ಸೀಳಿಹಾಕಿದನು ಆದೇ ಬೃಹಸ್ಪತಿಯು, ವರಪ್ರದವಾದವೂ, ಹವಿಸ್ಸಿಗೆ ಸಾಧನವಾದ ಕ್ಷೀರಾದಿಗಳನ್ನು ಕರೆಯುವುವೂ, ಶಬ್ದಮಾಡುತ್ತಿದ್ದವೂ ಆದ ಗೋವುಗಳನ್ನು, ಅವುಗಳಂತೆಯೇ ಶಬ್ದಮಾಡುತ್ತಾ ಬಿಡಿಸಿ ಅವುಗಳನ್ನು ಸ್ವತಂತ್ರವಾಗಿ ಓಡಾಡುವಂತೆ ಮಾಡಿದನು

English Translation.

(Aided) by the praised and brilliant troop (of the Angirasas), he destroyed with sound the mischievous Vala · Brisahpati, shouting aloud, set free the boon-bestowing, oblation-supplying cows.

॥ ಸಂಹಿತಾಪಾಠಃ ॥

ಏವಾ ಪಿತ್ರೇ ವಿಶ್ವದೇವಾಯ ವೃಷ್ಣೇ ಯಜ್ಞೈರ್ವಿಧೇಮ ನಮಸಾ ಹವಿರ್ಭಿಃ।
ಬೃಹಸ್ಪತೇ ಸುಪ್ರಜಾ ವೀರವಂತೋ ವಯಂ ಸ್ಯಾಮ ಪತಯೋ ರಯೀಣಾಂ॥

॥ ಪದಪಾಠಃ ॥

ಏವ । ಪಿತ್ರೇ । ವಿಶ್ವದೇವಾಯ । ವೃಷ್ಣೇ । ಯಜ್ಞೈಃ । ವಿಧೇಮ । ನಮಸಾ । ಹವಿಃಭಿಃ ।
ಬೃಹಸ್ಪತೇ । ಸುಪ್ರಜಾಃ । ವೀರವಂತಃ । ವಯಂ । ಸ್ಯಾಮ । ಪತಯಃ । ರಯೀಣಾಂ ॥ ೬ ॥

॥ ಸಾಯಣಭಾಷ್ಯಂ ॥

ಏವಾ ಪಿತ್ರ ಇತಿ ಬಾರ್ಹಸ್ಪತ್ಯೇ ಪಶೌ ಹವಿಷೋ ಯಾಜ್ಯಾ । ಏವಾ ಪಿತ್ರೇ ವಿಶ್ವದೇವಾಯ ವೃಷ್ಣೇ ವಿಶ್ವೇ ಅದ್ಯ ಮರುತೋ ವಿಶ್ವ ಊತೀ । ಆ. ೩-೭ । ಇತಿ ಸೂತ್ರಿತತ್ವಾತ್ ॥ ಅಗ್ನಿಷ್ಟೋಮೇ ವೈಶ್ವದೇವಶಸ್ತ್ರ ಏಷೈವ ಧಾಯ್ಯಾ । ತಥಾ ಚ ಸೂತ್ರಂ । ಏವಾ ಪಿತ್ರೇ ವಿಶ್ವದೇವಾಯ ವೃಷ್ಣ ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ । ಆ. ೫-೧೮ । ಇತಿ ॥

ಪಿತ್ರೇ ಪಾಲಕಾಯ ವಿಶ್ವದೇವಾಯ ಸರ್ವದೇವತಾರೂಪಾಯ। ದೇವಾನಾಂ ಮಂತ್ರಪ್ರತಿಪಾದ್ಯತ್ವಾದಸ್ಯ ಚ ಮಂತ್ರಾಭಿಮಾನಿತ್ವಾದ್ವೈಶ್ವದೇವತ್ವಂ। ಯದ್ವಾ । ಅತ್ರ ದೇವಶಬ್ದಃ ಸ್ತುತ್ಯರ್ಥಃ। ಸರ್ವೇಭ್ಯಃ ಸ್ತುತ್ಯಾಯ ವೃಷ್ಣೇ ವರ್ಷಕಾಯ ಬೃಹಸ್ಪತಯೇ ದೇವಾಯೈವಮುಕ್ತಪ್ರಕಾರೇಣ ಯೆಜ್ಞೈಸ್ತತ್ಸಾಧನೈರ್ಹವಿರ್ಭಿರಾಜ್ಯಚರ್ವಾದಿಲಕ್ಷಣೈರ್ನಮಸಾ ಸ್ತುತ್ಯಾ ಚ ವಿಧೇಮ। ಪರಿಚರೇಮ। ಹೇ ಬೃಹಸ್ಪತೇ ಸುಪ್ರಜಾಃ ಶೋಭನಪುತ್ರಾ ವೀರವಂತೋ ವೀರ್ಯೋಪೇತಾ ವಯಂ ರಯೀಣಾಂ ಧನಾನಾಂ ಪತಯಃ ಸ್ಯಾಮ॥

॥ ಪ್ರತಿಪದಾರ್ಥ ॥

ಪಿತ್ರೇ—ಪಾಲಕನೂ। **ವಿಶ್ವದೇವಾಯ**—ಸರ್ವದೇವತಾತ್ಮನೂ। **ವೃಷ್ಣೇ**—ಕಾಮವರ್ಷಕನೂ ಆದ ಬೃಹಸ್ಪತಿಯನ್ನುದ್ದೇಶಿಸಿ। **ಏವ**—ವಿಧ್ಯುಕ್ತಪ್ರಕಾರವಾಗಿ। **ಯೆಜ್ಞೈಃ**—ಯಜ್ಞಸಾಧನಗಳಾದ। **ಹವಿರ್ಭಿಃ**—ಹವಿಸ್ಸುಗಳಿಂದಲೂ। **ನಮಸಾ**—ಸ್ತುತಿಯಿಂದಲೂ। **ವಿಧೇಮ**—ಪೂಜಿಸೋಣ। **ಬೃಹಸ್ಪತೇ**—ಎಲೈ ಬೃಹಸ್ಪತಿಯೇ। **ವಯಂ**—ನಾವು। **ಸುಪ್ರಜಾಃ**—ಶ್ರೇಷ್ಠವಾದ ಪುತ್ರವಂತರಾಗುವಂತೆಯೂ। **ವೀರವಂತಃ**—ವೀರ್ಯದಿಂದ ಕೂಡಿದವರಾಗಿಯೂ ಆಗಿ। **ರಯೀಣಾಂ**—ಧನಕ್ಕೆ। **ಪತಯಃ**—ಒಡೆಯರಾಗಿ। **ಸ್ಯಾಮ**—ಆಗುವಂತಾಗಲಿ.

॥ ಭಾವಾರ್ಥ ॥

ವಿಶ್ವಪಾಲಕನೂ, ಸರ್ವದೇವತಾತ್ಮನೂ, ಕಾಮವರ್ಷಕನೂ ಆದ ಬೃಹಸ್ಪತಿಯನ್ನುದ್ದೇಶಿಸಿ, ವಿಧ್ಯುಕ್ತ ಪ್ರಕಾರವಾಗಿ, ಯಜ್ಞಸಾಧಕಗಳಾದ ಹವಿಸ್ಸುಗಳಿಂದಲೂ, ಸ್ತುತಿಯಿಂದಲೂ ಪೂಜಿಸೋಣ. ಎಲೈ ಬೃಹಸ್ಪತಿಯೇ, ನಾವು ಶ್ರೇಷ್ಠರಾದ ಪುತ್ರವಂತರಾಗುವಂತೆಯೂ, ವೀರ್ಯದಿಂದ ಕೂಡಿದವರಾಗುವಂತೆಯೂ ಆಗಿ ಧನಾಧೀಶರಾಗುವಂತೆಯೂ ಅನುಗ್ರಹಿಸು.

English Translation.

Thus may we offer worship with sacrifices, with oblations, with praise, to the paternal, uvniversal deity, the showerer (of benefits) ; and may we, Brihaspati, become possessed of riches, and be blessed with excellent progeny and valiant descendants.

॥ ವಿಶೇಷವಿಷಯಗಳು ॥

ಏವಾ ಪಿತ್ರೇ ಎಂಬ ಈ ಋಕ್ಕನ್ನು ಬೃಹಸ್ಪತಿಸಂಬಂಧವಾದ ಪಶುಯಾಗದಲ್ಲಿ ಹವಿಸ್ಸನ್ನು ಹೋಮ ಮಾಡುವಾ ಯಾಜ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಏವಾ ಪಿತ್ರೇ ವಿಶ್ವದೇವಾಯ ವೃಷ್ಣೇ ವಿಶ್ವೇ ಅದ್ಯ ಮರುತೋ ವಿಶ್ವ ಊತೀ** ಎಂಬ ಸೂತ್ರದಿಂದ (ಆ ೩-೭) ವಿನಿಯೋಗವಾಗಿರುವುದು. ಮತ್ತು ಇದೇ ಋಕ್ಕನ್ನು ಅಗ್ನಿಷ್ಟೋಮಯಾಗದಲ್ಲಿ ವೈಶ್ವದೇವಶಸ್ತ್ರಮಂತ್ರಪರನಮಾಡುವಾಗ ಧಾಯ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಏವಾ ಪಿತ್ರೇ ವಿಶ್ವದೇವಾಯ ವೃಷ್ಣ ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ** ಎಂಬ ಸೂತ್ರದಿಂದ (ಆ. ೫-೧೮) ವಿನಿಯೋಗವಾಗಿರುವುದು.

॥ संहितापाठः ॥

स इद्राजा प्रतिजन्यानि विश्वा शुष्मेण तस्थावभि वीर्येण ।
बृहस्पतिं यः सुभृतं बिभर्ति वल्गूयति वंदते पूर्वभाजं॥६

॥ पदपाठः ॥

सः । इत् । राजा । प्रतिऽजन्यानि । विश्वा । शुष्मेण । तस्थौ । अभि । वीर्येण ।
बृहस्पतिं । यः । सुऽभृतं । बिभर्ति । वल्गुऽयति । वदंते । पूर्वऽभाजं ॥ ६ ॥

॥ सायणभाष्यं ॥

इदमाद्यं यजुष्कृत्यं पुरोहितप्रशंसेति ब्राह्मणं ॥ ऐ. ब्राम. ७-३६ । अथवा सूक्तस्य ऋग्द्वयेवर्जितस्य बार्हस्पत्यत्वाद्बृहस्पतेरेव स्तुतिः । स इत्स एव राजा मूर्धाभिषिक्तोऽन्यो वा राजमानः प्रतिजन्यानि । जन्यं युद्धं प्रति बलानीत्यर्थः। प्रत्यर्थिजनसंबंधानि वा तानि विश्वा सर्वाणि शुष्मेण बलेन वीर्येण शरीरसामर्थ्येन वाभि अभिगम्याक्रम्य तस्थौ । तिष्ठति । स इत्युक्तं क इत्याह । योऽसौ बृहस्पतिं बृहतां महतां पालयितारं देवमुक्तलक्षणं पुरोहितं वा सुभृतं सुष्ठु हविःसंस्तोत्रादिनान्नाच्छादनादिना वा बिभर्ति भरति । वल्गूयति स्तौति । वंदते नमस्करोति च पूर्वभाजमितरेभ्यः प्रथममंभक्तारं कृत्वा । एवं यः करोति स एव तस्थाविति ॥

॥ प्रतिपदार्थ ॥

यः—ಯಾವ ರಾಜನು । **बृहस्पतिं**—ಬೃಹಸ್ಪತಿಯನ್ನು । **पूर्वभाजं**—ಇತರ ತೇವತೆಗಳಿಗಿಂತ ಮೊದಲೇ ಹವಿಸ್ಸನ್ನು ಸ್ವೀಕರಿಸುವಂತೆ ಮಾಡಿ । **सुभृतं**—ಶ್ರೇಷ್ಠವಾದ ಹವಿರಾದಿಗಳಿಂದ । **बिभर्ति**—ಭರಿಸುವವನೋ । **वल्गूयति**—ಸ್ತುತಿಸುವನೋ । **वंदते**—ನಮಸ್ಕರಿಸುತ್ತಾನೆಯೋ । **स इत् राजा**—ಆ ರಾಜನು ಮಾತ್ರ । **विश्वा**—ಸಮಸ್ತವಾದ । **प्रतिजन्यानि**—ಶತ್ರುಸೈನ್ಯಗಳನ್ನೂ ಸಹ । **शुष्मेण**—ತನ್ನ ಶಕ್ತಿಯಿಂದಲೂ । **वीर्येण**—ವೀರ್ಯದಿಂದಲೂ । **अभि तस्थौ**—ಆಕ್ರಮಿಸಿ ವಿಜಯಿಯಾಗುತ್ತಾನೆ.

॥ भावार्थ ॥

ಯಾವ ರಾಜನು ಯಜ್ಞಕಾಲಗಳಲ್ಲಿ ಬೃಹಸ್ಪತಿಗೇ ಹವಿಃ ಸ್ವೀಕಾರದ ಪ್ರಥಮಸ್ಥಾನವನ್ನು ಕಲ್ಪಿಸಿ ಅವನನ್ನು ಶ್ರೇಷ್ಠವಾದ ಹವಿರ್ಧಾನಾದಿಗಳಿಂದಲೂ, ಸ್ತುತಿಗಳಿಂದೂ, ನಮಸ್ಕಾರಗಳಿಂದಲೂ, ಪೂಜಿಸುವನೋ, ಆ ರಾಜನು ಮಾತ್ರ ಸಮಸ್ತ ಶತ್ರು ಸೈನ್ಯಗಳನ್ನೂ ತನ್ನ ಶಕ್ತಿಯಿಂದಲೂ, ವೀರ್ಯದಿಂದಲೂ ಆಕ್ರಮಿಸಿ ವಿಜಯಿಯಾಗುತ್ತಾನೆ.

English Translation.

That prince overcomes by his strength and prowess all hostile people, who cherishes liberally Brihaspati, and glorifies and honours him as the first sharer (of the offering).

॥ ವಿಶೇಷವಿಷಯಗಳು ॥

ಭಾಷ್ಯಕಾರರು ಈ ಋಕ್ಕು ಮುಂದಿನ ಎರಡು ಋಕ್ಕುಗಳೂ ಸಹ—**ಇದಮಾದ್ಯೈಕ್ರಯಂ ಪುರೋಹಿತಪ್ರಶಂಸಾ ಇತಿ ಬ್ರಾಹ್ಮಣಂ ಐ. ಬ್ರಾ. ೪-೩೬। ಅಥವಾ ಋಗ್ದ್ವಯೇವರ್ಜಿತಸ್ಯ ಬಾರ್ಹಸ್ಪತ್ಯತ್ವಾತ್ ಬೃಹಸ್ಪತೇರೇವ ಸ್ತುತಿಃ।** ಎಂದು ಪುರೋಹಿತಪ್ರಶಂಸೆಯನ್ನೊಳಗೊಂಡಿರುವುದು, ಅಥವಾ ಈ ಸೂಕ್ತದಲ್ಲಿ ಇಂದ್ರಾಬೃಹಸ್ಪತಿದೇವತಾಕವಾದ ಕೊನೆಯ ಎರಡು ಋಕ್ಕುಗಳನ್ನು ಬಿಟ್ಟು ಉಳಿದ ಒಂಭತ್ತು ಋಕ್ಕುಗಳೂ ಬೃಹಸ್ಪತಿಯ ಸ್ತುತಿಯೇ ಆಗಿರುವುದು ಎಂದು ಹೇಳಿದಾರೆ. ಮತ್ತು—

ಬೃಹಸ್ಪತಿರ್ದೇವಾನಾಂ ಪುರೋಹಿತ ಆಸೀಚ್ಛಂಡಾಮರ್ಕಾವಸುರಾಣಾಂ।

(ತೈ. ಸಂ. ೬-೪-೧೦-೧)

ಎಂದು ತೈತ್ತಿರೀಯ ಸಂಹಿತೆಯಲ್ಲಿ ಹೇಳಿದೆ. ಎಂದರೆ ಬೃಹಸ್ಪತಿಯು ದೇವತೆಗಳ ಪುರೋಹಿತನೆಂದೂ, ಶಂಡಾಮರ್ಕರೆಂಬುವದು ಅಸುರರ ಪುರೋಹಿತರೆಂದೂ ಪ್ರಸಿದ್ಧಿಯು. ಆದುದರಿಂದ ಇಲ್ಲಿ ಪುರೋಹಿತನೆಂದರೇನು? ಅವನ ಕರ್ತವ್ಯವೇನು? ಅವನ ಸ್ಥಾನಮಾನಗಳೇನು? ಇವೇ ಮೊದಲಾದ ವಿಷಯಗಳನ್ನು ಐತರೇಯಬ್ರಾಹ್ಮಣದಲ್ಲಿ ಹೇಳಿರುವಂತೆಯೇ ಇಲ್ಲಿ ವಿವರಿಸಲಾಗಿದೆ—

ಪುರೋಹಿತನ ಸ್ಥಾನಮಾನಗಳು

ತದಸ್ಯೇತದೃಷಿಣೋಕ್ತಂ—ಸ ಇದ್ರಾಜಾ ಪ್ರತಿಜನ್ಯಾನಿ ವಿಶ್ವಾ ತಸ್ಮಾವಭಿ ವೀರ್ಯೇಣೇತಿ ಸಪತ್ನಾ ವೈ ದ್ವಿಷಂತೋ ಭ್ರಾತೃವ್ಯಾ ಜನ್ಯಾನಿ ತಾನೇವ ತಚ್ಛಮ್ಸ್ಯೇಣ ವೀರ್ಯೇಣಾಧಿತಿಷ್ಠತಿ।

(ಐ. ಬ್ರಾ. ೪೦-೩೬)

ಪುರೋಹಿತನಿಗೆ ಇರುವ ಶಕ್ತಿಸಾಮರ್ಥ್ಯಗಳನ್ನೂ, ಆವನ ಮಹಿಮೆಯನ್ನೂ ಮಂತ್ರದ್ರಷ್ಟೃವಾದ ವಾಮದೇವ ಋಷಿಯು—**ಸ ಇದ್ರಾಜಾ ಪ್ರತಿಜನ್ಯಾನಿ** ಎಂದು ಮೊದಲಾಗುವ (ಋ. ಸಂ. ೪-೫೦-೭, ೮, ೯ನೇ ಋಕ್ಕುಗಳು) ಮೂರು ಋಕ್ಕುಗಳಲ್ಲಿ ವರ್ಣಿಸಿದ್ದಾನೆ ಆ ಮೂರು ಮಂತ್ರಗಳಲ್ಲಿ ಮೊದಲನೆಯ ಋಕ್ಕಿನ ಪೂರ್ವಾರ್ಧವು—**ಸ ಇದ್ರಾಜಾ ಪ್ರತಿಜನ್ಯಾನಿ ವಿಶ್ವಾ ತುಸ್ಮೇಣ ತಸ್ಥಾವಭಿ ವೀರ್ಯೇಣ** ಎಂದಿರುವುದು. ಇದಕ್ಕೆ—ಪುರೋಹಿತಯುಕ್ತನಾದ (ಆ) ರಾಜನೇ ತನ್ನ ಸಾಮರ್ಥ್ಯದಿಂದ ತನ್ನ ಸಮಸ್ತಶತ್ರುಗಳನ್ನು ಸೋಲಿಸುವನು ಎಂದರ್ಥವು. ಇಲ್ಲಿ **ಸಪತ್ನಾ** ಎಂದರೆ ದ್ವೇಷಿಸುವ ಶತ್ರುಗಳು ಇವರನ್ನು **ಭ್ರಾತೃವ್ಯಾ** ಅಥವಾ **ಜನ್ಯಾನಿ** ಎಂಬ ಶಬ್ದದಿಂದ ಇಲ್ಲಿ ವಿವರಿಸಿದೆ. ಶತ್ರುಗಳೆಂದರೆ ತನ್ನನ್ನು ದ್ವೇಷಿಸುವ ಅಥವಾ ತಾನು ದ್ವೇಷಿಸುವ, ತನಗೆ ಹಿತವನ್ನು ಬಯಸದಿರುವ, ಅಪಕಾರ ಅಥವಾ ಕೆಡುಕನ್ನೇ ಮಾಡುವ ಜನರು. ಇಂತಹ ಶತ್ರುಗಳನ್ನು ಪುರೋಹಿತಯುಕ್ತನಾದ ರಾಜನು ಸೋಲಿಸುವನು ಎಂದಭಿಪ್ರಾಯವು.

ಬೃಹಸ್ಪತಿಂ ಯೋಃ ಸುಭೃತಂ ಬಿಭರ್ತೀತಿ ಬೃಹಸ್ಪತಿರ್ಹ ವೈ ದೇವಾನಾಂ ಪುರೋಹಿತಸ್ತಮನ್ವಸ್ಯೇ ಮನುಷ್ಯರಾಜ್ಞಾಂ ಪುರೋಹಿತಾ ಬೃಹಸ್ಪತಿಂ ಯೋಃ ಸುಭೃತಂ ಬಿಭರ್ತೀತಿ ಯದಾಹ ಪುರೋಹಿತಂ ಯೋಃ ಸುಭೃತಂ ಬಿಭರ್ತೀತ್ಯೇವ ತದಾಹ । ವಲ್ಗೂಯತಿ ವಂದತೇ ಪೂರ್ವಭಾಜಮಿತ್ಯಪಚಿತಿಮೇವಾಸ್ಮಾ ಏತದಾಹ ।

ಈ ಋಕ್ಕಿನ ಮೂರನೆಯ ಪಾದವನ್ನು ವಿವರಿಸುವರು—ಬೃಹಸ್ಪತಿಂ ಯೋಃ ಸುಭೃತಂ ಬಿಭರ್ತಿ ಎಂದು ಮೂರನೆಯ ಪಾದವಿರುವುದು. ಬೃಹಸ್ಪತಿಗೆ ಸಮಾನನಾದ ಪುರೋಹಿತನನ್ನು ತನ್ನಲ್ಲಿಟ್ಟುಕೊಂಡು ಪೋಷಿಸುವ ರಾಜನು ಶತ್ರುಗಳನ್ನು ಜಯಿಸುವನು ಎಂದು ಹಿಂದೆ ಹೇಳಿದ ವಾಕ್ಯಕ್ಕೆ ಸಮನ್ವಯವು. ಬೃಹಸ್ಪತಿಯು ದೇವತೆಗಳ ಪುರೋಹಿತನು. ಅಂತಹ ಬೃಹಸ್ಪತಿಯನ್ನು ಅನುಸರಿಸುತ್ತಾ ಮನುಷ್ಯ ಪುರೋಹಿತರೂ ಕೂಡ ರಾಜನ ಸಮೀಪ ವರ್ತಿಯಾಗಿರುವರು. ಆದುದರಿಂದ ಪುರೋಹಿತರ ವಿಷಯವನ್ನು ಪ್ರಸ್ತಾಪಮಾಡುವಾಗ ಅವರನ್ನು ಬೃಹಸ್ಪತಿ ಶಬ್ದದಿಂದಲೇ ಕರೆಯುವುದು ಸಾಮಾನ್ಯವಾಗಿದೆ. ಇನ್ನು ನಾಲ್ಕನೆಯ ಪಾದದ ಅರ್ಧವನ್ನು ವಿವರಿಸುವರು. ರಾಜನು ತನ್ನ ಪುರೋಹಿತನಿಗೆ ಅಗ್ರಸ್ಥಾನವನ್ನು ಎಂದರೆ ಶ್ರೇಷ್ಠವಾದ ಸ್ಥಾನಮಾನಗಳನ್ನು ಕಲ್ಪಿಸುವನು. ಅವನನ್ನು ಪೂಜಿಸುವನು, ಮತ್ತು ನಮಸ್ಕರಿಸುವನು

ಸ ಇತ್ಕೃಣೋತಿ ಸುಧಿತ ಓಕಸಿ ಸ್ವ ಇತಿ ಗೃಹಾ ವಾ ಓಕಃ ಸ್ವೇಷ್ವೇವ ತದ್ಗೃಹೇಷು ಸುಹಿತೋ ವಸತಿ । ತಸ್ಮಾ ಇಳಾ ಪಿನ್ವತೇ ವಿಶ್ವದಾನೀಮಿತ್ಯನ್ನಂ ವಾ ಇಳಾನ್ನಮೇವಾಸ್ಮಾ ಏತದೂರ್ಜಸ್ವ ಚೈಶ್ವದ್ಭವತಿ। ತಸ್ಮೈ ವಿಶಃ ಸ್ವಯಮೇವಾನಮಂತ ಇತಿ ರಾಷ್ಟ್ರಾಣಿ ವೈ ವಿಶೋ ರಾಷ್ಟ್ರಾಣ್ಯೇವೈನಂ ತತ್ಸ್ವಯಮುಪನಮಂತಿ । ಯಸ್ಮಿನ್ಯಜ್ಞಾ ರಾಜನಿ ಪೂರ್ವ ಏತೀತಿ ಪುರೋಹಿತಮೇವೈತದಾಹ ॥

ಎರಡನೆಯ ಋಕ್ಕಿನ ಅರ್ಥವನ್ನು ವಿವರಿಸುವರು. ರಾಜನಿಂದ ಪೂಜಿತನಾದ ಪುರೋಹಿತನು ಸುಪ್ರೀತನಾಗಿ ಸುಸಜ್ಜಿತವಾದ ತನ್ನ ಗೃಹದಲ್ಲಿ ವಾಸಮಾಡುತ್ತಾನೆ ಓಕಃಶಬ್ದಕ್ಕೆ ಗೃಹವೆಂದರ್ಥವು ಇಂತಹ ಪುರೋಹಿತನಿಂದ ಯುಕ್ತನಾದ ರಾಜನಿಗೆ ಸರ್ವಕಾಲದಲ್ಲಿಯೂ ಅನ್ನಸಮೃದ್ಧಿಯುಂಟಾಗುವುದು. ಇಲ್ಲಿ ಇಳಾ ಶಬ್ದಕ್ಕೆ ಅನ್ನವೆಂದರ್ಥವು ಊರ್ಜವೆಂದರೆ ರಸವು ಆ ರಾಜನಿಗೆ ಅನ್ನಸಮೃದ್ಧಿಯೂ ಕ್ಷೀರಾದಿ ರಸಸಮೃದ್ಧಿಯೂ ಸರ್ವದಾ ಉಂಟಾಗುವುದು ಅಂತಹ ರಾಜನನ್ನು ಅವನ ಪ್ರಜೆಗಳು (ಇತರರ ನಿರ್ಬಂಧವಿಲ್ಲದೆ) ತಾವೇ ತಮ್ಮ ಸ್ವಯಿಚ್ಛೆಯಿಂದ ಎಂದರೆ ಸಂತೋಷದಿಂದ ನಮಸ್ಕರಿಸಿ ಗೌರವಿಸುವರು ಈ ಪಾದದಲ್ಲಿರುವ ವಿಟ್ ಶಬ್ದಕ್ಕೆ ರಾಷ್ಟ್ರದ ಪ್ರಜೆಗಳು ಅಥವಾ ಪ್ರಜೆಗಳಿಂದ ಕೂಡಿದ ರಾಷ್ಟ್ರವೆಲ್ಲಾ ಎಂದರ್ಥವು. ಯಾವ ರಾಜನ ಸಮೀಪದಲ್ಲಿ ಬ್ರಾಹ್ಮಣನಾದ ಪುರೋಹಿತನು ಇದ್ದುಕೊಂಡು ಅವನಿಗೆ ಸದುಪದೇಶವನ್ನು ಮಾಡುತ್ತಿರುವನೋ ಅಂತಹ ರಾಜನಿಗೆ ದೇಶದಲ್ಲಿ ಅಥವಾ ರಾಷ್ಟ್ರದಲ್ಲಿ ಅತ್ಯುನ್ನತಸ್ಥಾನವಿರುವುದು ಅವನ. ಸಕಲರಿಂದಲೂ ಗೌರವಿಸಲ್ಪಡುವನು.

ಅಪ್ರತೀತೋ ಜಯತಿ ಸಂ ಧನಾನೀತಿ ರಾಷ್ಟ್ರಾಣಿ ವೈ ಧನಾನಿ ತಾನ್ಯಪ್ರತೀತೋ ಜಯತಿ । ಪ್ರತಿಜನ್ಯಾನ್ಯುತ ಯಾ ಸಜನ್ಯೇತಿ ಸಪತ್ನಾ ವೈ ದ್ವಿಷಂತೋ ಭ್ರಾತೃವ್ಯಾ ಜನ್ಯಾನಿ ತಾನಪ್ರತೀತೋ ಜಯತಿ । ಅವಸ್ಯವೇ ಯೋ ವರಿವಃ ಕೃಣೋತೀತಿ ಯದಾಹಾವಸೀಯಸೇ ಯೋ೭ವಸೀಯಃ ಕರೋತೀತ್ಯೇವ ತದಾಹ । ಬ್ರಹ್ಮಣೇ ರಾಜಾ ತಮವಂತಿ ದೇವಾ ಇತಿ ಪುರೋಹಿತಮೇವೈತದಭಿವದತಿ । (ಐ. ಬ್ರಾ. ೪೦-೩೬)

ಮೂರನೆಯ ಋಕ್ಕಿನ ಅರ್ಥವನ್ನು ವಿವರಿಸುವರು—ಪುರೋಹಿತಯುಕ್ತನಾದ ರಾಜನು ಧನಸಮೃದ್ಧವಾದ ಶತ್ರುಗಳ ರಾಷ್ಟ್ರವನ್ನು ಯಾವ ಪ್ರತಿಭಟನೆಯೂ ಇಲ್ಲದೆ ಸುಲಭವಾಗಿ ಜಯಿಸಿ ವಶಪಡಿಸಿಕೊಳ್ಳುವನು **ಅಸ್ಪೃತೀತೇಃ** ಎಂಬ ಶಬ್ದಕ್ಕೆ ಪ್ರತಿಕೂಲರಾದ ಶತ್ರುಗಳಿಂದ ರಹಿತವಾದ, ನಿರ್ಬಾಧಿತವಾದ ಎಂದರ್ಥವು. ಈ ಪಾದದಲ್ಲಿರುವ ಧನಶಬ್ದಕ್ಕೆ ರಾಷ್ಟ್ರಗಳು ಎಂದರ್ಥವು. ಅಂತಹ ಶತ್ರುರಾಷ್ಟ್ರಗಳನ್ನು ಯಾವ ಪ್ರತಿಭಟನೆಯೂ ಇಲ್ಲದೆ ಜಯಿಸುವನು ಎಂದಭಿಪ್ರಾಯವು. **ಜನ್ಯಾನಿ** ಎಂದರೆ ಶತ್ರುಗಳು. **ಸಜನ್ಯಾ** ಎಂದರೆ ಸೇನೆಗಳಿಂದ ಸಹಿತರಾದ ಶತ್ರುಗಳು ಎಂದರ್ಥವು. ಇಂತಹ ಶತ್ರುಗಳನ್ನು ಸುಲಭವಾಗಿ ರಾಜನು ಜಯಿಸುವನು. ಉತ್ತರಾರ್ಧದ ಅರ್ಥವನ್ನು ವಿವರಿಸುವರು. ಯಾವ ರಾಜನು ಧನರಹಿತನಾದ ಎಂದರೆ ದರಿದ್ರನಾದ ತನ್ನ ಬ್ರಾಹ್ಮಣಪುರೋಹಿತನಿಗೆ ಧನಾದಿಗಳನ್ನು ಕೊಟ್ಟು ಗೌರವಿಸುವನೋ ಅಂತಹ ರಾಜನನ್ನು ದೇವತೆಗಳು ಸರ್ವದಾ ರಕ್ಷಿಸುವರು. ಇಲ್ಲಿ **ಬ್ರಹ್ಮಣೇ** ಎಂಬ ಶಬ್ದವು ಪುರೋಹಿತನಿಗೆ ಎಂಬರ್ಥವನ್ನು ಸೂಚಿಸುವುದು.

ಐತರೇಯ ಬ್ರಾಹ್ಮಣದಲ್ಲಿ ಪುರೋಹಿತನಿಗೂ, ರಾಜನಿಗೂ ಇರಬೇಕಾದ ಸಂಬಂಧ, ಪುರೋಹಿತನ ಕರ್ತವ್ಯಗಳು ಮೊದಲಾದ ವಿಷಯಗಳು ಉಕ್ತವಾಗಿದೆ. ಅದನ್ನೇ ಇಲ್ಲಿ ವಿವರಿಸಲಾಗಿರುವುದು—

(ರಾಜನು ಪುರೋಹಿತನನ್ನು ನೇಮಿಸಿಕೊಳ್ಳುವ ಆವಶ್ಯಕತೆ—ಆಹವನೀಯಾದ್ಯಗ್ನಿಗಳನ್ನು ಕೃಪ್ತಿಪಡಿಸುವ ಬಗೆ—
ಐದು ವಿಧವಾದ ಕೆಡಕುಗಳಿಂದ ಪಾರಾಗುವ ಬಗೆ)

ಅಥಾತಃ ಪುರೋಧಾಯಾ ಏವ । ನ ಹ ವಾ ಅಪುರೋಹಿತಸ್ಯ ರಾಜ್ಞೋ ದೇವಾ ಅನ್ನಮದಂತಿ ತಸ್ಮಾದ್ರಾಜಾ ಯಕ್ಷ್ಯಮಾಣೋ ಬ್ರಾಹ್ಮಣಂ ಪುರೋ ದಧೀತ ದೇವಾ ಮೇಽನ್ನಮದನ್ನಿತಿ ।

(ಐ. ಬ್ರಾ. ೪೦-೩೪)

ಈಗ ಪೌರೋಹಿತ್ಯದ ವಿಧಿಗಳನ್ನೂ, ಕಾರ್ಯಕಲಾಪಗಳನ್ನೂ ವಿವರಿಸಲಾಗುವುದು. ಪುರೋಹಿತನನ್ನು ನೇಮಿಸಿಕೊಳ್ಳದೆ ರಾಜನು ತಾನೇ ಯಜ್ಞಾದಿಗಳನ್ನು ಮಾಡಿದಲ್ಲಿ ಅಂತಹ ಯಜ್ಞದಲ್ಲಿ ದೇವತೆಗಳು ಆ ರಾಜನ ಹವಿಸ್ಸನ್ನು (ಅನ್ನವನ್ನು) ಸ್ವೀಕರಿಸುವುದಿಲ್ಲ ಆದುದರಿಂದ ರಾಜನಾದವನು ವೇದಾಧ್ಯಯನಸಂಪನ್ನನೂ, ಸತ್ಕುಲಪ್ರಸೂತನೂ, ನಿಯಮಾಚಾರಸಂಪನ್ನನೂ ಆದ ಓರ್ವ ಬ್ರಾಹ್ಮಣನನ್ನು ತನಗೆ ಪುರೋಹಿತನಾಗಿರುವಂತೆ ನಿಯಮಿಸಿಕೊಳ್ಳಬೇಕು. ಆ ಪುರೋಹಿತನ ಸಹಾಯದಿಂದ ಯಜ್ಞಯಾಗಾದಿಗಳನ್ನು ಮಾಡಿ ದೇವತೆಗಳನ್ನು ತೃಪ್ತಿಪಡಿಸಬೇಕು. ಏಕೆಂದರೆ, ಪ್ರಜಾಪರಿಪಾಲನೆಮಾಡುವಾಗ ಪ್ರಜೆಗಳು ಸುಖದಿಂದಿರುವುದಕ್ಕಾಗಿಯೂ, ಕಾಲಕಾಲದಲ್ಲಿ ವೃಷ್ಟಿಯಾಗುವುದಕ್ಕಾಗಿಯೂ, ರಾಜ್ಯದಲ್ಲಿ ರೋಗರುಜಿನಾದಿಗಳೂ, ಕ್ಷಾಮ ಮೊದಲಾದ ಈತಿಬಾಧೆಗಳೂ ಇಲ್ಲದಿರುವುದಕ್ಕಾಗಿಯೂ ಯಜ್ಞಯಾಗಾದಿಗಳನ್ನು ರಾಜನು ಅವಶ್ಯಕವಾಗಿ ಮಾಡಬೇಕು ಈ ಕಾರ್ಯಕ್ಕಾಗಿ ಪುರೋಹಿತನು ಅವಶ್ಯಕವಾಗಿರುವುದರಿಂದ ರಾಜನಾದವನು ಪುರೋಹಿತನನ್ನು ನೇಮಿಸಿಕೊಳ್ಳಬೇಕು.

ಅಗ್ನೀನ್ವಾ ಏಷ ಸ್ವರ್ಗ್ಯಾನ್ರಾಜೋದ್ಧರತೇ ಯತ್ಪುರೋಹಿತಂ । ತಸ್ಯ ಪುರೋಹಿತ ಏವಾಹವನೀಯೋ ಭವತಿ ಜಾಯಾ ಗಾರ್ಹಪತ್ಯಃ ಪುತ್ರೋಽನ್ವಾಹಾರ್ಯಪಚನಃ ಸ ಯತ್ಪುರೋಹಿತಾಯೈ ಕರೋತ್ಯಾಹವನೀಯ ಏವ ತಜ್ಜುಹೋತ್ಯಥ ಯಜ್ಜಾಯಾಯೈ ಕರೋತಿ ಗಾರ್ಹಪತ್ಯ ಏವ ತಜ್ಜುಹೋತ್ಯಥ ಯತ್ಪುತ್ರಾಯ ಕರೋತ್ಯನ್ವಾಹಾರ್ಯಪಚನ ಏವ ತಜ್ಜುಹೋತಿ ತ ಏನಂ ಶಾಂತತನವೋಽಭಿಹುತಾ ಅಭಿಪ್ರೀತಾಃ ಸ್ವರ್ಗಂ ಲೋಕಮಭಿವಹಂತಿ ಕ್ಷತ್ರಂ ಚ ಬಲಂ ಚ ರಾಷ್ಟ್ರಂ ಚ ವಿಶಂ ಚ ।

ರಾಜನು ಪುರೋಹಿತನನ್ನು ನೇಮಿಸಿಕೊಳ್ಳುವುದರಿಂದ ತನಗೆ ಸ್ವರ್ಗವನ್ನು ಒದಗಿಸಿಕೊಡುವ ಅಗ್ನಿಯನ್ನೇ ತನ್ನಲ್ಲಿಟ್ಟು ಕೊಂಡಂತಾಗುವುದು. **ಅಗ್ನೇಯೋ ನೈ ಬ್ರಾಹ್ಮಣಃ** (ತೈ. ಬ್ರಾ. ೨-೭-೩-೧) ಬ್ರಾಹ್ಮಣನು ಅಗ್ನಿಸ್ವರೂಪನು ಎಂದು ಶ್ರುತಿವಾಕ್ಯವೇ ಇರುವುದು. ರಾಜನಿಗೆ ಪುರೋಹಿತನೇ ಆಹವನೀಯವೆಂಬ ಅಗ್ನಿಸ್ಥಾನೀಯನು ಎಂದರೆ ಅವನನ್ನು ಆವಹನೀಯಾಗ್ನಿಯೆಂದೇ ಭಾವಿಸಬೇಕು ಆ ಪುರೋಹಿತನ ಪತ್ನಿಯು ಗಾರ್ಹಪತ್ಯಾಗ್ನಿಯು, ಪುತ್ರನು ದಕ್ಷಿಣಾಗ್ನಿಯು. ಆದುದರಿಂದ ರಾಜನು—ಪುರೋಹಿತ, ಅವನ ಪತ್ನಿ, ಪುತ್ರ ಇವರುಗಳಿಗೆ ಅವರು ಅಪೇಕ್ಷಿಸುವ ಧನಾದಿಗಳನ್ನು ಕೊಟ್ಟರೆ ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿ ಎಂಬ ಅಗ್ನಿತ್ರಯಗಳಲ್ಲಿ ಹೋಮಮಾಡಿ ಅಗ್ನಿಯನ್ನು ತೃಪ್ತಿಗೊಳಿಸಿದಂತಾಗುವುದು ಇದಲ್ಲದೆ ಪುರೋಹಿತನ ಮೂಲಕ ರಾಜನು ಹೋಮಾದಿಗಳನ್ನು ಮಾಡಿದರೆ ಮೇಲೆ ಹೇಳಿದ ಆಹವನೀಯಾದ್ಯಗ್ನಿಗಳು ತಮ್ಮ ಉಗ್ರರೂಪವನ್ನು ಬಿಟ್ಟು ರಾಜನ ವಿಷಯದಲ್ಲಿ ಸೌಮ್ಯರೂಪದಿಂದಿರುತ್ತಾ ರಾಜನ ಸಮಸ್ತ ಅಭೀಷ್ಟಗಳನ್ನು ನೆರವೇರಿಸುವುದಲ್ಲದೆ ಆ ರಾಜನಿಗೆ ಸ್ವರ್ಗಾದಿಲೋಕಪ್ರಾಪ್ತಿಯನ್ನೂ, ಮಾನಸೋತ್ಸಾಹರೂಪವಾದ ಶೌರ್ಯವನ್ನೂ, ಶರೀರಸಂಬಧವಾದ ಬಲವನ್ನೂ (ಪರಾಕ್ರಮವನ್ನೂ) ದೇಶವನ್ನೂ ಪ್ರಜೆಗಳನ್ನು ಒದಗಿಸಿಕೊಟ್ಟು ಪ್ರೀತಿಯಿಂದ ರಾಜನನ್ನು ಸಂರಕ್ಷಿಸುವರು.

ತ ಏವೈನಮಶಾಂತತನವೋ೭ನಭಿಹುತಾ ಅನಭಿಪ್ರೀತಾಃ ಸ್ವರ್ಗಾಲ್ಲೋಕಾನ್ನುದಂತೇ ಕ್ಷತ್ರಾಚ್ಚೇ ಬಲಾಚ್ಚೇ ರಾಷ್ಟ್ರಾಚ್ಚೇ ವಿಶಶ್ಚ ।

ಒಂದು ವೇಳೆ ರಾಜನು ಪುರೋಹಿತನನ್ನು ನೇಮಿಸಿಕೊಳ್ಳದೆ, ಅವನ ಮೂಲಕ ಯಜ್ಞಯಾಗಾದಿಗಳನ್ನು ಮಾಡದೇ ಇದ್ದಲ್ಲಿ ಆಗ ಆಹವನೀಯಾದ್ಯಗ್ನಿಗಳು ರಾಜನ ವಿಷಯದಲ್ಲಿ ಅಸಮಾಧಾನಗೊಂಡು ಅವನಿಗೆ ಕೆಡಕನ್ನುಂಟು ಮಾಡುವರು ಆ ರಾಜನಿಗೆ ಸ್ವರ್ಗಪ್ರಾಪ್ತಿ, ಮನೋಧೈರ್ಯ, ಬಲ, ಪರಾಕ್ರಮ, ರಾಷ್ಟ್ರ, ಪ್ರಜೆಗಳು ಯಾವವೂ ಇಲ್ಲದಂತೆ ಮಾಡುವರು

ಅಗ್ನಿರ್ವಾ ಏಷ ವೈಶ್ವಾನರಃ ಪಂಚಮೇನಿರ್ಯತ್ಪುರೋಹಿತಸ್ತಸ್ಯ ವಾಚ್ಯೈವೈಕಾ ಮೇನಿರ್ಭವತಿ ಪಾದಯೋರೇಕಾ ಕ್ಷಚ್ಯೇಕಾ ಹೃದಯೇ ಏಕೋಪಸ್ಥ ಏಕಾ ತಾಭಿರ್ವ್ಯಲಂತೀಭಿರ್ದೀಪ್ಯಮಾನಾಭಿರುಪೋದೇತಿ ರಾಜಾನಂ ಸ ಯದಾಹ ಕ್ವ ಭಗವೋ೭ವಾಸ್ಮೀಸ್ಯೃಣಾನಸ್ಯಾ ಆಹರತೇತಿ ತೇನಾಸ್ಯ ತಾಂ ಶಮಯತಿ ಯಾಸ್ಯ ವಾಚಿ ಮೇನಿರ್ಭವತ್ಯಥ ಯದಸ್ಯಾ ಉದಕಮಾನಯಂತಿ ಪಾದ್ಯಂ ತೇನಾಸ್ಯ ತಾಂ ಶಮಯತಿ ಯಾಸ್ಯ ಪಾದಯೋರ್ಮೇನಿರ್ಭವತ್ಯಥ ಯದೇನಮಲಂಕುರ್ವಂತಿ ತೇನಾಸ್ಯ ತಾಂ ಶಮಯತಿ ಯಾಸ್ಯ ಕ್ಷಚಿ ಮೇನಿರ್ಭವತ್ಯಥ ಯದೇನಂ ತರ್ಪಯಂತಿ ತೇನಾಸ್ಯ ತಾಂ ಶಮಯತಿ ಯಾಸ್ಯ ಹೃದಯೇ ಮೇನಿರ್ಭವತ್ಯಥ ಯದಸ್ಯಾನಾರುದ್ಧೋ ವೇಶ್ಮಸು ವಸತಿ ತೇನಾಸ್ಯ ತಾಂ ಶಮಯತಿ ಯಾಸ್ಯೋಪಸ್ಥೇ ಮೇನಿರ್ಭವತಿ । ಸ ಏನಂ ಶಾಂತತನುರಭಿಹುತೋ೭ಭಿಪ್ರೀತಃ ಸ್ವರ್ಗಂ ಲೋಕಮಭಿವಹತಿ ಕ್ಷತ್ರಂ ಚ ಬಲಂ ಚ ರಾಷ್ಟ್ರಂ ಚ ವಿಶಂ ಚ ಸ ಏವೈನಮಶಾಂತತನುರನಭಿಹುತೋ೭ನಭಿಪ್ರೀತಃ ಸ್ವರ್ಗಾಲ್ಲೋಕಾನ್ನುದತೇ ಕ್ಷತ್ರಾಚ್ಚೇ ಬಲಾಚ್ಚೇ ರಾಷ್ಟ್ರಾಚ್ಚೇ ವಿಶಶ್ಚ ॥ (ಐ ಬ್ರಾ. ೪೦-೩೪)

ಈ ಪುರೋಹಿತನ ಪ್ರಭಾವವನ್ನು ಪ್ರಕಾರಾಂತರವಾಗಿ ವರ್ಣಿಸುವರು. ಇಲ್ಲಿ ಉಪಯೋಗಿಸಿರುವ ಮೇನಿಶಬ್ದಕ್ಕೆ ಕೋಪದಿಂದ ಕೆಡಕನ್ನುಂಟುಮಾಡಬೇಕೆಂಬ ಮನೋಭಾವವು ಎಂದರ್ಥವು. ಅಗ್ನಿಯ ಜ್ವಾಲೆಗಳು ಯಾವರೀತಿ

ಸ್ಪರ್ಶಮಾಡಿದವರನ್ನು ಸುಡುವವೋ ಅದರಂತೆ ಎಂದಭಿಪ್ರಾಯವು. ಆದ್ದರಿಂದ ಪುರೋಹಿತನಾದವನು ವೈಶ್ವಾನರ ನೆಂಬ ಅಗ್ನಿಗೆ ಸಮಾನನಾದವನು. ಇವನಲ್ಲಿ ಐದು ವಿಧವಾದ ಮೇನಿಗಳಿರುವವು ಎಂದರೆ, ಐದು ವಿಧವಾದ ಕೆಡಕನ್ನುಂಟುಮಾಡುವ ಶಕ್ತಿಸಾಮರ್ಥ್ಯಗಳಿರುವವು. ಅವುಗಳು ಯಾವುವೆಂದರೆ, ವಾಕ್ (ಮಾತು), ಪಾದಗಳು, ಚರ್ಮ, ಹೃದಯ, ಉಪಸ್ಥೆ ಎಂಬ ಸ್ಥಾನಗಳು. ಇವುಗಳಲ್ಲಿ ಕೆಡಕನ್ನುಂಟುಮಾಡುವ ಶಕ್ತಿಸಾಮರ್ಥ್ಯಗಳಿರುವವು. ಇವುಗಳನ್ನು ಪರಿಹರಿಸಿ ಪುರೋಹಿತನನ್ನು ಶಾಂತನನ್ನಾಗಿ ಮಾಡುವ ಕ್ರಮವು ಹೇಗೆಂದರೆ, ಪುರೋಹಿತನು ರಾಜನ ಬಳಿಗೆ ಬಂದಾಗ ರಾಜನು ಆ ಪುರೋಹಿತನನ್ನು ಆದರದಿಂದ ಸ್ವಾಗತಿಸಿ ಸತ್ಕರಿಸಿ, ಎಲೈ ಪುರೋಹಿತನೇ, ಇದುವರೆಗೂ ನೀನು ಎಲ್ಲಿ ಇದ್ದೆ ? ಎಲ್ಲಿಂದ ದಯಮಾಡಿಸಿರುವೆ ? ಎಂದು ಹಿತೋಕ್ತಿಗಳನ್ನು ನುಡಿದು ಸೇವಕರನ್ನು ಕುರಿತು ಎಲೈ ಪರಿಚಾರಕರೇ, ಪುರೋಹಿತರು ಕುಳಿತುಕೊಳ್ಳುವುದಕ್ಕಾಗಿ ಉತ್ತಮವಾದ ತೃಣನಿರ್ಮಿತವಾದ ಉತ್ತಮ ಕುಶಾಸನವನ್ನು ಬೇಗನೆ ತೆಗೆದುಕೊಂಡು ಬನ್ನಿ ಎಂದು ಹೇಳಬೇಕು. ಹೀಗೆ ಹೇಳುವುದರಿಂದ ಪುರೋಹಿತನಲ್ಲಿರುವ ವಾಕ್ಸಂಬಂಧವಾದ ಮೇನಿಯು (ಕೆಡಕನ್ನುಂಟುಮಾಡುವ ಶಕ್ತಿಯು) ಪರಿಹಾರವಾಗಿ ರಾಜನ ವಿಷಯದಲ್ಲಿ ಸಮಾಧಾನಗೊಂಡು ಅನುಗ್ರಹವನ್ನುಂಟುಮಾಡುವುದು ಆ ಪುರೋಹಿತನನ್ನು ಸತ್ಕರಿಸುವುದಕ್ಕಾಗಿ ಎಂದರೆ ಪಾದಪ್ರಕ್ಷಾಳನೆಗಾಗಿ ಉದಕವನ್ನು ತಂದು ಉಪಚರಿಸುವುದರಿಂದ ಪಾದಗಳಲ್ಲಿರುವ ಮೇನಿಯು ಶಮನವಾಗುವುದು. ವಸ್ತ್ರಗಂಧಾದಿಗಳಿಂದ ಉಪಚರಿಸಿದರೆ ತ್ವಕ್ಸಂಬಂಧವಾದ (ಚರ್ಮದಲ್ಲಿರುವ) ಮೇನಿಯು ಶಾಂತವಾಗುವುದು ಆ ಪುರೋಹಿತನಿಗೆ ಇಷ್ಟವಾದ ಧನಾದಿಗಳನ್ನು ಕೊಡುವುದರಿಂದ ಹೃದಯಗತವಾದ ಮೇನಿಯು ಶಾಂತವಾಗುವುದು ಆ ರಾಜನು ಪುರೋಹಿತನನ್ನು ಕುರಿತು—ಸ್ವಾಮಿ, ಈ ರಾಜಗೃಹವೇ ತಮ್ಮದು. ಇಲ್ಲಿ ನಿಮಗೆ ಸರ್ವಸ್ವಾತಂತ್ರ್ಯವೂ ಇರುವುದು. ನಿಮಗೆ ಇಷ್ಟ ಬಂದಂತೆ ವರ್ತಿಸುತ್ತಾ ಇಲ್ಲಿ ಸುಖವಾಗಿರಬಹುದು. ಯಾರೂ ನಿಮಗೆ ಯಾವವಿಧವಾದ ತೊಂದರೆಯನ್ನೂ ಉಂಟುಮಾಡುವುದಿಲ್ಲ. ಎಂದು ಮೊದಲಾದ ಉಪಚಾರೋಕ್ತಿಯನ್ನು ಹೇಳುವುದರಿಂದ ಉಪಸ್ಥಾಸಂಬಂಧವಾದ ಮೇನಿಯು ಪರಿಹಾರವಾಗುವುದು. ಆದ್ದರಿಂದ ಗೃಹಕ್ಕೆ ಬಂದ ಪುರೋಹಿತನ ವಿಷಯದಲ್ಲಿ ಈ ವಿಧವಾದ ಉಪಚಾರಗಳನ್ನು ಮಾಡಬೇಕು. ವಿಧ್ಯುಕ್ತವಾಗಿ ಉಪಚಾರಮಾಡಿದಲ್ಲಿ ಅಗ್ನಿಯು ಅಥವಾ ಪುರೋಹಿತನು ರಾಜನ ವಿಷಯದಲ್ಲಿ ಸೌಮ್ಯಸ್ವಭಾವವುಳ್ಳವನಾಗಿ ಅವನು ಮಾಡುವ ಹೋಮಾದಿಗಳಿಂದ ಅವನಿಗೆ ಸ್ವರ್ಗಾದಿ ಇಷ್ಟಾರ್ಥಗಳನ್ನು ಸಾಧಿಸಿಕೊಡುವನು. ಹಾಗಿಲ್ಲದೆ ಮನೆಗೆ ಬಂದ ಪುರೋಹಿತನನ್ನು ತಿರಸ್ಕಾರಭಾವದಿಂದ ಅನಾದರಣೆಮಾಡಿದಲ್ಲಿ ಆ ರಾಜನಿಗೆ ಸ್ವರ್ಗಾದಿಪ್ರಾಪ್ತಿಯಾಗಲಿ, ವೀರ್ಯ, ಪರಾಕ್ರಮ, ಬಲ, ರಾಷ್ಟ್ರ, ಪ್ರಜೆಗಳು ಮುಂತಾದ ಯಾವ ಸುಖಸಂಪತ್ತುಗಳೂ ಲಭಿಸುವುದಿಲ್ಲ.

[ಪುರೋಹಿತನನ್ನು ನೇಮಿಸಿಕೊಂಡು ಅವನ ಸಹಾಯದಿಂದ ಯಜ್ಞಯಾಗಾದಿಗಳನ್ನು ಮಾಡುವ ರಾಜನನ್ನು ಅಗ್ನಿಯು ರಕ್ಷಿಸುವನು]

ಅಗ್ನಿರ್ವಾ ಏಷ ವೈಶ್ವಾನರಃ ಪಂಚವಿಧೋ ಯರ್ತ್ಪರೋಹಿತಸ್ತಾಭೀ ರಾಜಾನಂ ಪರಿಗೃಹ್ಯ ತಿಷ್ಠತಿ ಸಮುದ್ರ ಇವ ಭೂಮಿಂ ।

(ಐ. ಬ್ರಾ. ೪೦–೩೫)

ರಾಜನು ನೇಮಿಸಿಕೊಳ್ಳುವ ಪುರೋಹಿತನಾದ ಬ್ರಾಹ್ಮಣನು ಐದು ವಿಧವಾದ ಮೇನಿಗಳಿಂದ ಯುಕ್ತನಾಗಿ ಎಂದರೆ ನಿಗ್ರಹಾನುಗ್ರಹಶಕ್ತಿಗಳುಳ್ಳ ವೈಶ್ವಾನರಾಗ್ನಿಸ್ವರೂಪವಾಗಿಯೇ ಇರುವನು. ಆದರೆ ಆ ಪುರೋಹಿತನು ಕೆಡಕು ಮಾಡುವ ತನ್ನ ಶಕ್ತಿಸಾಮರ್ಥ್ಯಗಳನ್ನು ರಾಜನ ವಿಷಯದಲ್ಲಿ ಉಪಯೋಗಿಸದೆ ಶಾಂತಸ್ವಭಾವವುಳ್ಳವನಾಗಿ

ರಾಜನನ್ನು ಸರ್ವವಿಧದಲ್ಲಿಯೂ ಸಂರಕ್ಷಿಸುತ್ತಿರುವನು. ಭೂಮಿಯು ಸುತ್ತಲೂ ಸಮುದ್ರದಿಂದ ಸುತ್ತುವರೆಯಲ್ಪಟ್ಟು ಹೇಗೆ ಸುರಕ್ಷಿತವಾಗಿರುವುದೋ ಅದರಂತೆ ಪುರೋಹಿತಸಹಿತನಾದ ರಾಜನು ಶತ್ರುಬಾಧೆ ಮೊದಲಾದುವುಗಳಿಂದ ತೊಂದರೆಯಿಲ್ಲದೆ ಸುರಕ್ಷಿತನಾಗಿರುವನು.

ಅಯುವಮಾರ್ಯಸ್ಯ ರಾಷ್ಟ್ರಂ ಭವತಿ ನೈನಂ ಪುರಾಯುಷಃ ಪ್ರಾಣೋ ಜಹಾತ್ಯಜರಸಂ ಜೀವತಿ ಸರ್ವಮಾಯುರೇತಿ ನ ಪುನರ್ಮ್ರಿಯತೇ ಯಸ್ಯೈವಂ ವಿದ್ವಾನ್ಬ್ರಾಹ್ಮಣೋ ರಾಷ್ಟ್ರಗೋಪಃ ಪುರೋಹಿತಃ ।

ಇಂತಹ ರಾಜನ, ಎಂದರೆ, ವೇದಶಾಸ್ತ್ರಗಳನ್ನು ಚೆನ್ನಾಗಿ ತಿಳಿದು ಧರ್ಮಾಧರ್ಮಗಳನ್ನು ವಿವೇಚಿಸಿ ಜೋಧಿಸಲು ಶಕ್ತನಾಗಿರುವವನೂ, ರಾಜ್ಯಕ್ಕೆ ಅಪಾಯವಾಗದಂತೆ ರಾಜ್ಯಪರಿಪಾಲನೆ ಮಾಡುವುದರಲ್ಲಿ ಕಾಲೋಚಿತವಾದ ಉಪದೇಶಾದಿಗಳಿಂದ ರಾಜನಿಗೆ ಸಹಾಯಕನೂ ಆದ ಬ್ರಾಹ್ಮಣಪುರೋಹಿತನನ್ನು ಪಡೆದಿರುವ ರಾಜನ ರಾಜ್ಯವು ಯಾವಾಗಲೂ ಸುರಕ್ಷಿತವಾಗಿರುವುದು. ರಾಜ್ಯದಲ್ಲಿ ಅಶಾಂತಿಯು ತಲೆದೋರುವುದಿಲ್ಲ. ಪ್ರಜೆಗಳು ಸುಖದಿಂದಿದ್ದು ರಾಜ್ಯವು ಈತಿಬಾಧೆರಹಿತವಾಗಿರುವುದು. ಅವನ ರಾಜ್ಯದಲ್ಲಿ ಯುವಕರು ಮೃತ್ಯುವಶರಾಗುವುದಿಲ್ಲ. ಎಂದರೆ ನೂರುವರ್ಷ ಪೂರ್ತಿಯಾಗುವವರೆಗೂ ಯಾರಿಗೂ ಅಪಮೃತ್ಯುಭಯವಿಲ್ಲ. ರಾಜನಿಗೂ ಸಹ ಅಪಮೃತ್ಯುಭಯವಿಲ್ಲದೆ ದೀರ್ಘಾಯುಸ್ಸನ್ನು ಪಡೆದು ಜೀವಿಸುವನು. ವೃದ್ಧನಾಗುವವರೆಗೂ ರೋಗಾದಿರಹಿತನಾಗಿ ಸುಖದಿಂದ ಜೀವಿಸುವನು ತನಗೆ ನಿರ್ದಿಷ್ಟವಾಗಿರುವ ಪರ್ಯಂತರ ಎಂದರೆ ನೂರು ವರ್ಷಗಳವರೆಗೆ ಜೀವಿಸಿರುವನು. ಆ ರಾಜನು ಪುರೋಹಿತನಿಂದ ತತ್ತ್ವೋಪದೇಶವನ್ನು ಪಡೆಯುವುದರಿಂದ ಮರಣಾನಂತರ ಸದ್ಗತಿಯನ್ನು ಪಡೆಯುವುದಲ್ಲದೆ ಪುನರ್ಜನ್ಮದ ಮತ್ತು ಪುನರ್ಮರಣದ ಭಯವು ಅವನಿಗಿರುವುದಿಲ್ಲ

ಕ್ಷತ್ರೇಣ ಕ್ಷತ್ರಂ ಜಯತಿ ಬಲೇನ ಬಲಮಶ್ನುತೇ ಯಸ್ಯೈವಂ ವಿದ್ವಾನ್ಬ್ರಾಹ್ಮಣೋ ರಾಷ್ಟ್ರ-ಗೋಪಃ ಪುರೋಹಿತಃ । ತಸ್ಮೈ ವಿಶಃ ಸಂಜಾನತೇ ಸಂಮುಖಾ ಏಕಮನಸೋ ಯಸ್ಯೈವಂ ವಿದ್ವಾನ್ಬ್ರಾಹ್ಮಣೋ ರಾಷ್ಟ್ರಗೋಪಃ ಪುರೋಹಿತಃ ॥

(ಐ. ಬ್ರಾ. ೪೦-೨೫)

ಇಂತಹ ಉತ್ತಮಪುರೋಹಿತನಿಂದ ಯುಕ್ತನಾದ ರಾಜನು ಉತ್ತಮನಾದ ಪುತ್ರನನ್ನು ಪಡೆದು ತನ್ನ ಶೌರ್ಯ ಪರಾಕ್ರಮಗಳಿಂದ ಶತ್ರುರಾಜನನ್ನು ನಿಗ್ರಹಿಸುವನು. ಪರಕೀಯ ಸೈನ್ಯಬಲವನ್ನು ತನ್ನ ಸ್ವಸೈನ್ಯಬಲದಿಂದ ಸೋಲಿಸುವನು. ಈ ರಾಜನ ರಾಜ್ಯದಲ್ಲಿ ಪ್ರಜೆಗಳು ಏಕಮನಸ್ಕರಾಗಿ ಎಂದರೆ ಪರಸ್ಪರ ಸಹಕಾರದಿಂದ ವರ್ತಿಸುತ್ತಾ ರಾಜನ ಆಜ್ಞಾನುವರ್ತಿಗಳಾಗಿರುವರು.

[ಪುರೋಹಿತನ ಯೋಗ್ಯತೆ ಇತ್ಯಾದಿ—ಮೂರು ವಿಧ ಪುರೋಹಿತರು—ಪುರೋಹಿತಸ್ಥಾನಕ್ಕೆ ಇರುವ ಅರ್ಹತೆ—ಯಾವ ಮಾತ್ರಕರಣದಿಂದ ಮತ್ತು ಯಾವ ಕರ್ಮದಿಂದ ರಾಜನು ಪುರೋಹಿತನನ್ನು ನೇಮಿಸಿಕೊಳ್ಳುವನು ಇತ್ಯಾದಿ.]

ಯೋ ಹ ವೈ ತ್ರೀನ್ಪುರೋಹಿತಾಂಸ್ತ್ರೀನ್ಪುರೋಧಾತ್ಯನ್ವೇದ ಸ ಬ್ರಾಹ್ಮಣಃ ಪುರೋಹಿತಃ ಸ ವದೇತ ಪುರೋಧಾಯಾ ಅಗ್ನಿರ್ವಾವ ಪುರೋಹಿತಃ ಪೃಥಿವೀ ಪುರೋಧಾತಾ ವಾಯುರ್ವಾವ ಪುರೋಹಿತೋಽನ್ತರಿಕ್ಷಂ ಪುರೋಧಾತಾದಿತ್ಯೋ ವಾವ ಪುರೋಹಿತೋ ದ್ಯೌಃ ಪುರೋಧಾತೈಷ ಹ ವೈ ಪುರೋಹಿತೋ ಯ ಏವಂ ವೇದಾಥ ಸ ತಿರೋಹಿತೋ ಯ ಏವಂ ವೇದ ।

(ಐ. ಬ್ರಾ. ೪೦-೨೭)

ರಾಜನಾದವನು ತನ್ನ ಹಿತೋಪದೇಶಾರ್ಥವಾಗಿ ನೇಮಿಸಿಕೊಳ್ಳುವ ಬ್ರಾಹ್ಮಣನಿಗೆ ಪುರೋಹಿತನೆಂದು ಹೆಸರು. ಅಂತಹ ಪುರೋಹಿತನನ್ನು ನೇಮಿಸುವ ರಾಜನಿಗೆ ಪುರೋಧಾತಾ ಎಂದು ಹೆಸರು ಎಂದರೆ ಪುರೋಹಿತನು ಮತ್ತು ಪುರೋಹಿತನನ್ನು ನೇಮಿಸುವವನು ಎಂದು ಎರಡು ವಿಧ. ದೇವತೆಗಳಲ್ಲಿ ಮೂರು ಮಂದಿ ಪುರೋಹಿತರೂ ಅವರನ್ನು ನೇಮಿಸುವ ಮೂರು ಮಂದಿ ಪುರೋಧಾತೃಗಳೂ ಇರುವರು. ಈ ವಿಧವಾದ ಅರ್ಥವನ್ನು ತಿಳಿದಿರುವ ಬ್ರಾಹ್ಮಣನೇ ಪುರೋಹಿತನಾಗಲು ಯೋಗ್ಯನು. ಆ ಬ್ರಾಹ್ಮಣನು ಪೌರೋಹಿತ್ಯವನ್ನು ಮಾಡುವುದಕ್ಕಾಗಿ— **ಅಗ್ನಿರ್ವಾವ ಪುರೋಹಿತಃ ಪೃಥಿವೀ ಪುರೋಧಾತಾ । ವಾಯುರ್ವಾವ ಪುರೋಹಿತಃ ಅಂತರಿಕ್ಷಂ ಪುರೋಧಾತಾ । ಆದಿತ್ಯೋ ವಾವ ಪುರೋಹಿತಃ ದ್ಯೌಃ ಪುರೋಧಾತಾ** ಎಂಬ ಮಂತ್ರವನ್ನು ಪರಿಸಬೇಕು ಎಂದರೆ, ದೇವತೆಗಳಲ್ಲಿ ಅಗ್ನಿಯು ಪುರೋಹಿತನು, ಪೃಥಿವಿಯು ಪುರೋಧಾತೃವು (ಪುರೋಹಿತನನ್ನು ನೇಮಿಸಿಕೊಳ್ಳುವ ವ್ಯಕ್ತಿಯು), ವಾಯುವು ಪುರೋಹಿತನು, ಅಂತರಿಕ್ಷವು ಪುರೋಧಾತೃವು, ಆದಿತ್ಯನು ಪುರೋಹಿತನು, ದ್ಯೌಃ (ಸ್ವರ್ಗವು) ಪುರೋಧಾತೃವು ಎಂದು ಈ ಮಂತ್ರದ ಅರ್ಥವು. ಈ ಮಂತ್ರಾರ್ಥವನ್ನು ಚೆನ್ನಾಗಿ ತಿಳಿದವನು ಪೌರೋಹಿತ್ಯ ಮಾಡಲು ಅರ್ಹನು ಇದನ್ನು ತಿಳಿಯದ ಪುರುಷನು ಪುರೋಹಿತಪದವಿಗೆ ಅರ್ಹನಲ್ಲ.

ತಸ್ಯ ರಾಜಾ ಮಿತ್ರಂ ಭವತಿ ದ್ವಿಷಂತಮಪಬಾಧತೇ ಯಸ್ಯೈವಂ ವಿದ್ವಾನ್ಬ್ರಾಹ್ಮಣೋ ರಾಷ್ಟ್ರ-ಗೋಪಃ ಪುರೋಹಿತಃ ।

ಮೇಲೆ ಹೇಳಿದ ಗುಣಗಳಿಂದ ಯುಕ್ತನಾದ ಪುರೋಹಿತನನ್ನು ಪಡೆದಿರುವ ರಾಜನು ಇತರ ದೇಶಗಳ ರಾಜರೊಡನೆ ಸ್ನೇಹದಿಂದಿರುವನು. ಆ ರಾಜರೂ ಈ ರಾಜನೊಡನೆ ಸ್ನೇಹವನ್ನೂ ಬಂಧತ್ವವನ್ನೂ ಪಡೆಯಲಿಚ್ಛಿಸುವರು. ಹಾಗೆಯೇ ತನಗೆ ಶತ್ರುವಾದ ರಾಜನನ್ನು ಪುರೋಹಿತಸಹಿತನಾದ ರಾಜನು ಸೋಲಿಸುವನು. ಆದ್ದರಿಂದ ಸಮಸ್ತವನ್ನೂ ತಿಳಿದ ಬ್ರಾಹ್ಮಣಪುರೋಹಿತನು ರಾಷ್ಟ್ರದ ರಕ್ಷಣೆಗೂ ಅಭಿವೃದ್ಧಿಗೂ ಅವಶ್ಯಕನು.

ಕ್ಷತ್ರೇಣ ಕ್ಷತ್ರಂ ಜಯತಿ ಬಲೇನ ಬಲಮುಶ್ನತೇ ಯಸ್ಯೈವಂ ವಿದ್ವಾನ್ಬ್ರಾಹ್ಮಣೋ ರಾಷ್ಟ್ರಗೋಪಃ ಪುರೋಹಿತಸ್ತಸ್ಮೈ ವಿಶಃ ಸಂಜಾನತೇ ಸಂಮುಖಾ ಏಕಮನಸೋ ಯಸ್ಯೈವಂ ವಿದ್ವಾನ್ಬ್ರಾಹ್ಮಣೋ ರಾಷ್ಟ್ರಗೋಪಃ ಪುರೋಹಿತಃ ।

ಇಂತಹ ಉತ್ತಮಜ್ಞಾನಿಯಾದ ಬ್ರಾಹ್ಮಣಪುರೋಹಿತನಿಂದ ಯುಕ್ತನಾದ ರಾಜನು ಶ್ರೀಷ್ಯನಾದ ಮತ್ತು ಪರಾಕ್ರಮವುಳ್ಳ ಪುತ್ರನನ್ನು ಪಡೆದು ತನ್ನ ಶೌರ್ಯಪರಾಕ್ರಮಗಳಿಂದ ಶತ್ರುರಾಜನನ್ನು ನಿಗ್ರಹಿಸುವನು. ಪರಕೀಯ ಸೈನ್ಯ ಬಲವನ್ನು ತನ್ನ ಸ್ವಸೈನ್ಯಬಲದಿಂದ ಸೋಲಿಸುವನು ಈ ರಾಜನ ರಾಜ್ಯದಲ್ಲಿ ಪ್ರಜೆಗಳು ಏಕಮನಸ್ಕರಾಗಿ ಎಂದರೆ ರಾಜನೂ ಪ್ರಜೆಗಳೂ ಪರಸ್ಪರ ಸಹಕಾರದಿಂದ ವರ್ತಿಸುತ್ತಾ ರಾಜನ ಆಜ್ಞಾನುವರ್ತಿಗಳಾಗಿ ಸುಖದಿಂದಿರುವರು.

[ರಾಜನು ಪಠಿಸುವ ಪುರೋಹಿತವರಣಮಂತ್ರ ಇತ್ಯಾದಿ.]

ಭೂರ್ಭ.ರ್ಭವಃ ಸ್ವರೋಮಿತ್ಯೋಽಹಮಸ್ಮಿ ಸ ತ್ವಂ ಸ ತ್ವಮಸ್ಯೋಽಹಂ ದ್ಯೌರಹಂ ಪೃಥಿವೀ ತ್ವಂ ಸಾಮಾಹಮೃಕ್ತ್ವಂ ತಾವೇಹ ಸಂವಹಾವಹೈ । ಪುರಾಣ್ಯಸ್ಮನ್ಮಹಾಭಯಾತ್ । ತನೂರಸಿ ತನ್ವಂ ಮೇ ಪಾಹಿ ।

ಈ ಮಂತ್ರವನ್ನು ಪುರೋಹಿತನನ್ನು ವರಣಮಾಡುವಾಗ (ನೇಮಿಸುವಾಗ) ಪಠಿಸಬೇಕಾಗಿರುವುದು. **ಭೂಃ ಭುವಃ ಸ್ವಃ** ಎಂಬ ಶಬ್ದಗಳು ಪೃಥಿವೀ, ಅಂತರಿಕ್ಷ, ಸ್ವರ್ಗ ಎಂಬ ಲೋಕಗಳ ಅಭಿಮಾನಿದೇವತೆಗಳನ್ನು ಸೂಚಿಸುವವು. ಓಂ ಎಂಬ ಪ್ರಣವವು ಪರಮಾತ್ಮನನ್ನು ನಿರ್ದೇಶಿಸುವುದು. ಈ ದೇವತೆಗಳೆಲ್ಲಾ ನನ್ನನ್ನು ಅನುಗ್ರಹಿಸಲಿ ಎಂದಭಿಪ್ರಾಯವು. ಪುರೋಹಿತನಾದ ನಾನು ದ್ಯು (ಸ್ವರ್ಗ) ಲೋಕಸ್ವರೂಪನು, ನೀನು ಭೂಲೋಕಸ್ವರೂಪನಾಗಿರುವೆ. ಮತ್ತು ನೀನು ಭೂಲೋಕಸ್ವರೂಪನಾಗಿರುವೆ, ನಾನು ಸ್ವರ್ಗಲೋಕಸ್ವರೂಪನಾಗಿರೆ (ವಿಷಯವನ್ನು ಒತ್ತಿ ಹೇಳುವುದಕ್ಕಾಗಿ ಈ ವಾಕ್ಯವು ಎಡಾವರ್ತಿ ಪಠಿತವಾಗಿದೆ. ಅದರಂತೆಯೇ ನಾನು ಸಾಮವೇದಸ್ವರೂಪನು, ನೀನು ಋಗ್ವೇದಸ್ವರೂಪನು ನಾವಿಬ್ಬರೂ ಈ ರಾಷ್ಟ್ರವನ್ನೂ (ದೇಶವನ್ನೂ) ಈ ದೇಶದ ಗ್ರಾಮಗಳನ್ನೂ ರಕ್ಷಿಸುವ ಕಾರ್ಯದಲ್ಲಿ ಆಸಕ್ತರಾಗೋಣ ಎಂದರೆ ರಾಜ್ಯಭಾರನಿರ್ವಹಣಕಾರ್ಯದಲ್ಲಿ ಪರಸ್ಪರ ಸಹಾಯಮಾಡೋಣ. ನೀನು (ಪುರೋಹಿತ) ನನ್ನ (ರಾಜ) ಶರೀರವಾಗಿರುವೆ. ಆದುದರಿಂದ ನೀನು ನನ್ನ ಶರೀರವನ್ನು ಈ ಲೋಕ ಮತ್ತು ಪರಲೋಕಸಂಬಂಧವಾದ ಭಯಾದಿಗಳಿಂದ ರಕ್ಷಿಸಿ ಕಾಪಾಡು. ಇದು ರಾಜನು ಪಠಿಸುವ ಮಂತ್ರವು. ಈ ರೀತಿ ರಾಜನು ಪುರೋಹಿತನನ್ನು ಉದ್ದೇಶಿಸಿ ಹೇಳಿದ ಮೇಲೆ ಪುರೋಹಿತನು ರಾಜನು ತನಗೆ ಕುಳಿತುಕೊಳ್ಳುವುದಕ್ಕಾಗಿ ಸಿದ್ಧಪಡಿಸಿರುವ ಆಸನವನ್ನು ಅಭಿಮಂತ್ರಿಸುವ ಮಂತ್ರವನ್ನು ಪಠಿಸುವನು.

ಯಾ ಓಷಧೀಃ ಸೋಮರಾಜ್ಞೀರ್ಬಹ್ವೀಃ ಶತವಿಚಕ್ಷಣಾಃ ।
ತಾಮಹ್ಯಮಸ್ಮಿನ್ನಾಸನೇ೨ಭ್ಯೈದ್ರಂ ಶರ್ಮ ಯಚ್ಛತ ॥

ಪುರೋಹಿತನು ಕುಳಿತುಕೊಳ್ಳುವುದಕ್ಕಾಗಿ ನಿರ್ಮಿಸಿರುವ ಆಸನವನ್ನು ತೃಣ, ಕುಶ, ದರ್ಭೆ, ಕಾಸ್ಯ ಮೊದಲಾದ ಸಸ್ಯವರ್ಗದ ಪದಾರ್ಥಗಳಿಂದ ರಚಿತವಾಗಿರುವುದರಿಂದ ಸಸ್ಯವರ್ಗ ಎಂದರೆ ಓಷಧಿವನಸ್ಪತಿಗಳನ್ನು ಈ ಮಂತ್ರದಲ್ಲಿ ಸ್ತುತಿಸಲಾಗಿದೆ ಈ ಆಸನಕ್ಕಾಗಿ ಉಪಯೋಗಿಸಲ್ಪಟ್ಟಿರುವ ಓಷಧಿಗಳಿಗೆ (ತೃಣ, ದರ್ಭೆ ಮೊದಲಾದವುಗಳಿಗೆ) ಸೋಮನು ದೇವತೆಯು, ಈ ಓಷಧಿವನಸ್ಪತಿಗಳೆಲ್ಲಾ ಸೋಮದೇವತೆಯ ಅಧೀನಕ್ಕೊಳಪಟ್ಟಿರುವುದು. ಇವುಗಳು ನಾನಾಜಾತಿಗೆ ಸೇರಿದ ಸಸ್ಯಗಳು, ಅನೇಕ ಶಾಖೆ (ಕೊಂಬೆ) ಗಳಿಂದ ಸಹಿತವಾದವು. ಈ ಆಸನ ನಿರ್ಮಾಣದಲ್ಲಿ ಉಪಯೋಗಿಸಿರುವ ಇಂತಹ ಓಷಧಿಗಳು ಪುರೋಹಿತನಾದ ನನಗೆ ಯಾವ ಬಾಧೆಯೂ ಇಲ್ಲದೆ ಸುಖವನ್ನುಂಟುಮಾಡಲಿ. ಮುಳ್ಳು ಮುಂತಾದ ಹಿಂಸೆಗಳಿಲ್ಲದಂತೆಯೂ ಮೆತ್ತಗಿರುವಂತೆಯೂ ಆಗಿ ಸುಖವನ್ನುಂಟುಮಾಡಲಿ. ಎಂದು ಈ ಮಂತ್ರದ ಮುಖ್ಯಾಭಿಪ್ರಾಯವು ಈ ರೀತಿ ಆಸನವನ್ನು ಅಭಿಮಂತ್ರಿಸುವ ಮಂತ್ರವನ್ನು ಉಚ್ಚರಿಸಿ ಆಸನದಲ್ಲಿ ಕುಳಿತುಕೊಳ್ಳುವಾಗ ಮುಂದಿನ ಮಂತ್ರವನ್ನು ಪಠಿಸುವನು.

ಯಾ ಓಷಧೀಃ ಸೋಮರಾಜ್ಞೀರ್ವಿಷ್ಠಿತಾಃ ಪೃಥಿವೀಮನು ।
ತಾ ಮಹ್ಯಮಸ್ಮಿನ್ನಾಸನೇ೨ಭ್ಯೈದ್ರಂ ಶರ್ಮ ಯಚ್ಛತ ॥

ಸೋಮರಾಜನ ಅಧಿಕಾರಕ್ಕೊಳಪಟ್ಟು ಯಾವ ಓಷಧಿಗಳಿರುವವೋ ಅವುಗಳಿಂದ ನಿರ್ಮಿತವಾದ ಈ ಆಸನವನ್ನು ಭೂಮಿಯ ಮೇಲೆ ಹಾಸಿ ಕುಳಿತುಕೊಳ್ಳುವುದಕ್ಕಾಗಿ ಸಿದ್ಧಪಡಿಸಲಾಗಿದೆ. ನಾನು ಈ ಆಸನದಲ್ಲಿ ಕುಳಿತುಕೊಂಡಾಗ ಈ ಓಷಧಿಗಳು ನನಗೆ ಅವಿಚ್ಛಿನ್ನವಾದ ಸುಖವನ್ನುಂಟುಮಾಡಲಿ ಎಂದು ಮಂತ್ರಾಭಿಪ್ರಾಯವು.

ಅಸ್ಮಿನ್ರಾಷ್ಟ್ರೇ ಶ್ರಿಯಮಾನೇತಯೋಮ್ಯಕೋ ದೇವೀಃ ಪ್ರತಿಪಶ್ಯಾಮ್ಯಾಪಃ ।

ಪುರೋಹಿತನ ಪಾದಪ್ರಕ್ಷಾಳನಾರ್ಥವಾಗಿ ತಂದು ಸಿದ್ಧವಾಗಿರುವ ಉದಕವನ್ನು ನೋಡಿ ಪುರೋಹಿತನು ಈ ಮಂತ್ರವನ್ನು ಪಠಿಸುವನು ಎಲೈ ಉದಕಾಭಿಮಾನಿದೇವತೆಗಳೇ, ಈಗ ನಾನು ಈ ದೇಶದ ರಾಜನಿಗೆ ಪುರೋಹಿತನಾಗಿರುವೆನು. ಈ ರಾಷ್ಟ್ರವು ಧನಧಾನ್ಯಾದಿಸಂಪತ್ತುಗಳಿಂದ ಕೂಡಿ ಸುಖದಿಂದಿರುವುದಕ್ಕಾಗಿಯೂ ಅದರ ಶ್ರೇಯೋಭಿವೃದ್ಧಿಗಾಗಿಯೂ ಸತತವೂ ಪ್ರಯತ್ನಿಸುವೆನು. ಆದುದರಿಂದ ನನಗೆ ಈ ಕಾರ್ಯದಲ್ಲಿ ಸಹಾಯಭೂತವಾದ ಈ ಉದಕಗಳನ್ನು (ಉದಕಾಭಿಮಾನಿದೇವತೆಗಳಾದ ನಿಮ್ಮನ್ನು) ನೋಡುವೆನು.

ದಕ್ಷಿಣಂ ಪಾದಮವನೇನಿಜೇ೬ಸ್ಮಿನ್ರಾಷ್ಟ್ರ ಇಂದ್ರಿಯಂ ದಧಾಮಿ । ಸವ್ಯಂ ಪಾದಮವನೇನಿಜೇ೬ಸ್ಮಿನ್ರಾಷ್ಟ್ರ ಇಂದ್ರಿಯಂ ವರ್ಧಯಾಮಿ । ಪೂರ್ವಮನ್ಯಮಪರಃ ನ್ಯಂ ಪಾದಾವವನೇನಿಜೇ । ದೇವಾ ರಾಷ್ಟ್ರಸ್ಯ ಗುಪ್ತ್ಯಾ ಅಭಯಸ್ಯಾವರುಧ್ಯೈ । ಅಪಃ ಪಾದಾವನೇಜನೀರ್ವಿಷಂತಂ ನಿರ್ದಹಂತು ಮೇ ॥

(ಐ. ಬ್ರಾ. ೪೦-೨೭)

ನೀರಿನಿಂದ ಪುರೋಹಿನು ಪಾದಪ್ರಕ್ಷಾಳನಮಾಡುವಾಗ (ಕಾಲುಗಳನ್ನು ತೊಳೆದುಕೊಳ್ಳುವಾಗ) ಮೇಲೆ ಹೇಳಿದ ಮಂತ್ರವನ್ನು ಪಠಿಸುವನು ಎಲೈ ಉದಕಗಳೇ ನಾನು ಮೊದಲು ನನ್ನ ಬಲಗಾಲನ್ನು ತೊಳೆದುಕೊಳ್ಳುವೆನು. ಅದರಿಂದ ರಾಷ್ಟ್ರದ ಜನಗಳ ಮತ್ತು ಪ್ರಾಣಿಗಳ ಇಂದ್ರಿಯಾದಿಗಳ (ಶರೀರಾವಯವಗಳ) ಪಟುತ್ವವನ್ನೂ ಧನವನ್ನೂ ಒದಗಿಸಿಕೊಡುವೆನು. ಅನಂತರ ಎಡಗಾಲನ್ನು ತೊಳೆದುಕೊಳ್ಳುವೆನು. ಆದರಿಂದ ಪ್ರಾಣಿಗಳ ಇಂದ್ರಿಯಪಾಲನವನ್ನೂ ಧನವನ್ನೂ ಅಭಿವೃದ್ಧಿಪಡಿಸುವೆನು ನಾನು ಈ ರೀತಿ ಕಾಲುಗಳನ್ನು ತೊಳೆದುಕೊಂಡದ್ದರಿಂದ ದೇವತೆಗಳು ಪ್ರೀತರಾಗಿ ಈ ರಾಷ್ಟ್ರವನ್ನು ಕಳ್ಳರ ಭಯವೇ ಮೊದಲಾದ ಬಾಧೆಗಳಿಂದ ರಕ್ಷಿಸಿ ಕಾಪಾಡಲಿ. ಮತ್ತೂ ನನ್ನ ಪಾದಪ್ರಕ್ಷಾಳನೆಗಾಗಿ ಉಪಯೋಗಿಸಿದ ಈ ಉದಕಗಳು ನನ್ನ ಶತ್ರುಗಳನ್ನು ನಿಶ್ಶೇಷವಾಗಿ ನಾಶಮಾಡಲಿ ಎಂದು ಈ ಮಂತ್ರಾಭಿಪ್ರಾಯವು.

। ಸಂಹಿತಾಪಾಠಃ ।

ಸ ಇತ್ಕ್ಷೇತಿ ಸುಧಿತ ಓಕಸಿ ಸ್ವೇ ತಸ್ಮಾ ಇಳಾ ಪಿನ್ವತೇ ವಿಶ್ವದಾನೀಂ ।
ತಸ್ಮೈ ವಿಶಃ ಸ್ವಯಮೇವಾ ನಮಂತೇ ಯಸ್ಮಿನ್ಬ್ರಹ್ಮಾ ರಾಜನಿ ಪೂರ್ವ ಏತಿ ॥ ೪ ॥

। ಪದಪಾಠಃ ।

ಸಃ । ಇತ್ । ಕ್ಷೇತಿ । ಸುಽಧಿತಃ । ಓಕಸಿ । ಸ್ವೇ । ತಸ್ಮೈ । ಇಳಾ । ಪಿನ್ವತೇ । ವಿಶ್ವಽದಾನೀಂ ।
ತಸ್ಮೈ । ವಿಶಃ । ಸ್ವಯಂ । ಏವ । ನಮಂತೇ । ಯಸ್ಮಿನ್ । ಬ್ರಹ್ಮಾ । ರಾಜನಿ । ಪೂರ್ವಃ । ಏತಿ ॥ ೪ ॥

॥ ಸಾಯಣಭಾಷ್ಯಂ ॥

ಸ ಇತ್ಸ ಏವ ಕ್ಷೇತಿ । ನಿವಸತಿ । ಸುಧಿತಃ ಸುಷ್ಠು ತೃಪ್ತಃ ಸನ್ ಸ್ವೇ ಸ್ವಕೀಯ ಏವಾಕಸಿ ಕವನೇ । ಸ ಏವ ಸಮ್ಯದ್ಧೋ ನಿರ್ಬಾಧಃ ಸನ್ ಸುಖೇನಾಸ್ತೇ । ತಸ್ಮಾ ಇಳಾ ಭೂಮಿರ್ವಿಶ್ವದಾನೀಂ ಸರ್ವಕಾಲಂ ಪಿನ್ವತೇ । ವರ್ಧತೇ ಫಲೈಃ । ತಸ್ಮೈ ವಿಶಃ ಪ್ರಜಾಃ ಸ್ವಯಮೇವ ನಮಂತೇ । ಪ್ರಣತಾ ಭವಂತಿ । ದಂಡನಮಂತರೇಣ ಸ್ವಯಮೇವ ದತ್ತಕರಾ ಭವಂತಿ । ಯಸ್ಮಿನ್ರಾಜನಿ ಬ್ರಹ್ಮಾ ಪೂರ್ವಃ ಪ್ರಥಮಃ ಪೂಜ್ಯಃ ಸನ್ನೇತಿ । ಗಚ್ಛತಿ । ವರ್ತತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

ಯಸ್ಮಿನ್ ರಾಜನಿ—ಯಾವ ರಾಜನಲ್ಲಿಗೆ । **ಬ್ರಹ್ಮಾ**—ಬ್ರಹ್ಮನು (ಬ್ರಹ್ಮಶಕ್ತಿಯುಳ್ಳ ಬ್ರಾಹ್ಮಣನು) । **ಪೂರ್ವಃ**—ಪ್ರಥಮ ಪೂಜ್ಯಸ್ಥಾನವನ್ನಲಂಕರಿಸಿ । **ಏತಿ**—ಹೋಗಿ ಸೇರುವನೋ । **ಸ ಇತ್**—ಆದೇ ರಾಜನು । **ಸುಧಿತಃ**—ಅತ್ಯಂತ ಶ್ರೇಷ್ಠವಾದ ತೃಪ್ತಿಯನ್ನು ಹೊಂದಿ । **ಸ್ವೇ ಓಕಸಿ**—ತನ್ನ ಸ್ವಂತ ನಿವಾಸಸ್ಥಾನದಲ್ಲಿ । **ಕ್ಷೇತಿ**—ಸುಖವಾಗಿ ವಾಸಮಾಡುತ್ತಾನೆ । **ತಸ್ಮೈ**—ಆ ರಾಜನಿಗೆ । **ಇಳಾ**—ಭೂಮಿಯು । **ವಿಶ್ವದಾನೀಂ**—ಸರ್ವಕಾಲವೂ । **ಪಿನ್ವತೇ**—ಫಲಗಳಿಂದ ವೃದ್ಧಿಯನ್ನು ಹೊಂದುತ್ತವೆ । **ತಸ್ಮೈ**—ಆ ರಾಜನಿಗೆ । **ವಿಶಃ**—ಸಕಲ ಪ್ರಜೆಗಳೂ । **ಸ್ವಯಮೇವ**--ಸ್ವಪ್ರೇರಣೆಯಿಂದಲೇ । **ನಮಂತೇ**—ನಮಸ್ಕಾರಮಾಡುತ್ತಾರೆ.

॥ ಭಾವಾರ್ಥ ॥

ಯಾವ ಕ್ಷತ್ರಿಯನಲ್ಲಿಗೆ ಬ್ರಹ್ಮನು ಪ್ರಥಮಪೂಜ್ಯಸ್ಥಾನವನ್ನ ಲಂಕರಿಸಿ ಹೋಗಿ ಸೇರುವನೋ, ಆದೇ ರಾಜನು ಅತ್ಯಂತ ಶ್ರೇಷ್ಠವಾದ ತೃಪ್ತಿಯನ್ನು ಹೊಂದಿ ತನ್ನ ಸ್ವಂತ ನಿವಾಸಸ್ಥಾನದಲ್ಲಿ ಸುಖವಾಗಿ ವಾಸಮಾಡುತ್ತಾನೆ. ಆ ರಾಜನಿಗೆ ಭೂಮಿಯು ಸರ್ವದಾ ಸಸ್ಯಸಂಪತ್ತುಗಳಿಂದ ಕೂಡಿ ಉತ್ತಮವಾದ ಫಲವನ್ನು ಕೊಡುತ್ತದೆ. ಆದೇ ರಾಜನಿಗೆ ಸಕಲ ಪ್ರಜೆಗಳೂ ಸಹ ಸ್ವಸಂತೋಷದಿಂದಲೇ ಪ್ರೇರಿತರಾಗಿ ನಮಸ್ಕಾರವನ್ನ ಪಿಸುವರು.

English Translation.

Verily he abides prosperous in his own abode , for him the earth bears fruit at all seasons , to him (his) subjects willingly pay homage, the Brahmana first, (duly reverenced), repairs,

॥ ಸಂಹಿತಾಪಾಠಃ ॥

ಅಪ್ರತೀತೋ ಜಯತಿ ಸಂ ಧನಾನಿ ಪ್ರತಿಜನ್ಯಾನ್ಯುತ ಯಾ ಸಜನ್ಯಾ ।
ಅವಸ್ಯವೇ ಯೋ ವರಿವಃ ಕೃಣೋತಿ ಬ್ರಹ್ಮಣೇ ರಾಜಾ ತಮವಂತಿ ದೇವಾಃ ॥

॥ ಪದಪಾಠಃ ॥

ಅಪ್ರತಿ॒ಽಇತಃ । ಜಯೆತಿ । ಸಂ । ಧನಾನಿ । ಪ್ರತಿ॒ಽಜನ್ಯಾನಿ । ಉತ । ಯಾ । ಸ್ವಜನ್ಯಾ ।

ಅವಸ್ಯವೇ । ಯಃ । ವರಿವಃ । ಕೃಣೋತಿ । ಬ್ರಹ್ಮಣೇ । ರಾಜಾ । ತಂ । ಅವಂತಿ । ದೇವಾಃ ॥ ೯ ॥

॥ ಸಾಯಣಭಾಷ್ಯಂ ॥

ಸ ಏವಾಪ್ರತೀತೋಽನ್ಯೈರಪ್ರತಿಗತಃ ಸನ್ ಯಾನಿ ಧನಾನಿ ಪ್ರತಿಜನ್ಯಾನಿ ಪ್ರತಿಸ್ಪರ್ಧಿ-ಜನಸಂಬಂಧೀನಿ ಉತಾಪಿ ಚ ಸಜನ್ಯಾ ಜನಸಂಬಂಧೀನಿ ಧನಾನಿ ಸಂ ಜಯತಿ । ಯೋ ರಾಜಾವಸ್ಯವೇ॒ಽವಸೀಯತೇ ಧನರಹಿತಾಯ ರಕ್ಷಣಮಿಚ್ಛತೇ ಬ್ರಹ್ಮಣೇ ಬ್ರಾಹ್ಮಣಾಯ ವಾ ಪ್ರೀಣನಮಿಚ್ಛತೇ ಬೃಹಸ್ಪತಯೇ ವಾ ವರಿವೋ ಧನಂ ಕೃಣೋತಿ । ಕರೋತಿ । ದದಾತಿ । ಸ ಉಕ್ತಪ್ರಕಾರೇಣ ಮಹಾನ್ಭವತಿ । ತಮೇವ ದೇವಾ ಅವಂತಿ । ರಕ್ಷಂತಿ ॥

॥ ಪ್ರತಿಪದಾರ್ಥಃ ॥

ಯಃ ರಾಜಾ—ಯಾವ ರಾಜನು । **ಅವಸ್ಯವೇ**—ಅವನ ರಕ್ಷಣೆಯನ್ನಪೇಕ್ಷಿಸಿದ । **ಬ್ರಹ್ಮಣೇ**—ಬ್ರಹ್ಮಶಕ್ತಿಯುಳ್ಳ ಬ್ರಾಹ್ಮಣನಿಗೆ । **ವರಿವಃ**—ಧನವನ್ನು । **ಕೃಣೋತಿ**—ಅರ್ಪಿಸುವನೋ (ಅದೇ ರಾಜನು) । **ಅಪ್ರತೀತಃ**—ಶತ್ರುಗಳಿಂದ ಅಪ್ರತಿಹತನಾಗಿ । **ಪ್ರತಿಜನ್ಯಾನಿ**—ಶತ್ರುಜನಗಳಿಗೆ ಸೇರಿದುದೂ । **ಉತ**—ಮತ್ತು । **ಯಾ**—ಯಾವುದು । **ಸಜನ್ಯಾ**—ತನ್ನ ಸ್ವಂತಜನರಿಗೆ ಸೇರಿದುದೋ ಅದೂ ಆದ । **ಧನಾನಿ**—ಸಕಲ ಧನಗಳನ್ನೂ । **ಸಂ ಜಯತಿ**—ತನ್ನ ಸಂಪತ್ತನ್ನಾಗಿಯೇ ಮಾಡಿಕೊಳ್ಳುತ್ತಾನೆ । **ತಂ**—ಆ ರಾಜನನ್ನು । **ದೇವಾಃ**—ದೇವತೆಗಳು । **ಅವಂತಿ**—ರಕ್ಷಿಸುತ್ತಾರೆ.

॥ ಭಾವಾರ್ಥ ॥

ಯಾವ ರಾಜನು ಅವನ ರಕ್ಷಣೆಯನ್ನಪೇಕ್ಷಿಸಿದ ಬ್ರಹ್ಮಶಕ್ತಿಯುಳ್ಳ ಬ್ರಾಹ್ಮಣನಿಗೆ ಧನವನ್ನರ್ಪಿಸುವನೋ, ಆ ರಾಜನೇ ಶತ್ರುಗಳಿಂದ ಅಪ್ರತಿಹತನಾಗಿ ಶತ್ರುಜನಗಳಿಗೆ ಸೇರಿದುದೂ ಮತ್ತು ತನ್ನ ಸ್ವಂತ ಜನಗಳಿಗೆ ಸೇರಿದುದೂ ಆದ ಸಕಲ ಸಂಪತ್ತನ್ನೂ ತನ್ನ ಪ್ರಭುತ್ವದಲ್ಲೇ ಇಟ್ಟುಕೊಳ್ಳುತ್ತಾನೆ. ಆ ರಾಜನನ್ನು ಸಕಲ ದೇವತೆಗಳೂ ರಕ್ಷಿಸುತ್ತಾರೆ.

English Translation.

Unopposed he is the master of the riches of hostile people, and of his own subjects : the Raja who bestows riches upon the Brahmana seeking his protection, him the gods protect.

॥ संहितापाठः ॥

इन्द्रश्च सोमं पिबतं बृहस्पतेऽस्मिन्यज्ञे मन्दसाना वृषण्वसू ।
आ वां विशन्त्विन्दवः स्वाभुवोऽस्मे रयिं सर्ववीरं नि यच्छतं ॥ ८० ॥

॥ पदपाठः ॥

इन्द्रः । च । सोमं । पिबतं । बृहस्पते । आस्मिन् । यज्ञे । मन्दसाना । वृषण्वसू इति वृषण्ऽवसू ।
आ । वां । विशंतु । इन्दवः । स्वऽआभुवः । अस्मे इति । रयिं । सर्वऽवीरं । नि । यच्छतं ॥ ८० ॥

॥ सायणभाष्यं ॥

इन्द्रश्च सोममिति दशर्चं तृतीयेऽसवने ब्राह्मणाच्छंसिनः प्रैषस्थितयाज्या । सूत्रितं च । इन्द्रश्च सोमं पिबतं बृहस्पत आ वो वहंतु सप्तयो रघुष्यदः । आ. ७-७ । इति ॥

हे बृहस्पतेऽयमिन्द्रश्च सोमं पिबतं । कीदृशौ युवां । अस्मिन्यज्ञे मंदसाना हृष्यंतौ वृषण्वसू वर्षितृधनौ । यजमानेभ्यो दीयमानधनावित्यर्थः । वां युवां स्वाभुवः सुष्ठु सर्वतो भवंतः । कृत्स्नशरीरव्यापनसमर्था इत्यर्थः । ताद्दृशा इंदवः सोमा विशंतु । युवयोः शरीरं प्रविशंतु । अस्मे अस्मभ्यं रयिं धनं सर्ववीरं सर्वपुत्राद्युपेतं नि यच्छतं । दत्तं ॥

॥ प्रतिपदार्थः ॥

बृहस्पतेऽ—ಎಲೈ ಬೃಹಸ್ಪತಿಯೇ । (ತ್ವಂ—ನೀನೂ) । इन्द्रश्च—ಇಂದ್ರನೂ । मंदसाना—ಹರ್ಷಗೊಂಡವರಾಗಿಯೂ । वृषण्वसू—ಇಷ್ಟಾರ್ಥಪ್ರದರಾಗಿಯೂ ಆಗಿ । अस्मिन् यज्ञे—ಈ ಯಜ್ಞದಲ್ಲಿ । सोमं—ಸೋಮರಸವನ್ನು । पिबतं—ಪಾನಮಾಡಿರಿ । स्वाभुवः—ಸರ್ವತ್ರ ಪ್ರಸರಿಸುವ ಶಕ್ತಿಯುಳ್ಳ । इंदवः—ಸೋಮರಸಗಳು । वां—ನಿಮ್ಮ ಶರೀರಗಳನ್ನು । आ विशंतु—ಪ್ರವೇಶಿಸಲಿ ।

ಅಸ್ಮೇ—ನಮಗೆ । **ಸರ್ವವೀರಂ**—ಸಕಲ ವೀರಪುತ್ರಾದಿಗಳಿಂದ ಕೂಡಿದ । **ರಯಿಂ**—ಧನವನ್ನು । **ನಿ ಯಚ್ಛತಂ**—ಒದಗಿಸಿಕೊಡಿರಿ.

॥ ಭಾವಾರ್ಥ ॥

ಎಲೈ ಬೃಹಸ್ಪತಿಯೇ, ನೀನೂ ಇಂದ್ರನೂ ಸಹ ಒಟ್ಟಿಗೆ ಹರ್ಷಗೊಂಡವರಾಗಿಯೂ, ಇಷ್ಟಾರ್ಥಪ್ರದರಾಗಿಯೂ ಆಗಿ ಈ ಯಜ್ಞದಲ್ಲಿ ಸೋಮರಸವನ್ನು ಪಾನಮಾಡಿರಿ. ಸರ್ವತ್ರ ಪ್ರಸರಿಸುವ ಶಕ್ತಿಯುಳ್ಳ ಸೋಮರಸಗಳು ನಿಮ್ಮ ಶರೀರಗಳನ್ನು ಪೂರ್ಣವಾಗಿ ಪ್ರವೇಶಿಸಲಿ. ನಮಗೆ ಸಕಲ ವೀರಪುತ್ರಾದಿಗಳಿಂದ ಕೂಡಿದ ಧನವನ್ನು ಒದಗಿಸಿಕೊಡಿರಿ.

English Translation.

Brihaspati, you and Indra, both exulting and showering riches, drink the Soma at this sacrifice . may the all-pervading drops enter you : bestow upon us riches comprising all male descendants

॥ ವಿಶೇಷವಿಷಯಗಳು ॥

ಇಂದ್ರೇಶ್ಚ ಸೋಮಂ ಎಂಬ ಈ ಹತ್ತನೆಯ ಋಕ್ಕನ್ನು ತೃತೀಯ ಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಪ್ರಸ್ಥಿತಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಇಂದ್ರೇಶ್ಚ ಸೋಮಂ ಪಿಬತಂ ಬೃಹಸ್ಪತೇ ಆ ವೋ ವಹಂತು ಸಪ್ತಯೋ ರಘುಷ್ಯದಃ** ಎಂಬ ಸೂತ್ರದಿಂದ (ಅ. ೫-೫) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಬೃಹಸ್ಪತ ಇಂದ್ರ ವರ್ಧತಂ ನಃ ಸಚಾ ಸಾ ವಾಂ ಸುಮತಿರ್ಭೂತ್ವಸ್ಮೇ ।
ಅವಿಷ್ಟಂ ಧಿಯೋ ಜಿಗೃತಂ ಪುರಂಧೀರ್ಜಜಸ್ತಮರ್ಯೋ ವನುಷಾಮರಾತೀಃ ॥ ೧೧ ॥

॥ ಪದಪಾಠಃ ॥

ಬೃಹಸ್ಪತೇ । ಇಂದ್ರ । ವರ್ಧತಂ । ನಃ । ಸಚಾ । ಸಾ । ವಾಂ । ಸುಽಮತಿಃ । ಭೂತು । ಅಸ್ಮೇ ಇತಿ ।
ಅವಿಷ್ಟಂ । ಧಿಯಃ । ಜಿಗೃತಂ । ಪುರಂಽಧೀಃ । ಜಜಸ್ತಂ । ಅರ್ಯಃ । ವನುಷಾಂ । ಅರಾತೀಃ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಬೃಹಸ್ಪತೇ ಹೇ ಇಂದ್ರ ಯುವಾಂ ನೋಽಸ್ಮಾನ್ಸವರ್ಧತಂ । ವರ್ಧಯತಂ । ಪ್ರವೃದ್ಧಾನ್ಕುರುತಂ । ಸಾ ಸುಮತಿರ್ಯುವಯೋರನುಗ್ರಹಬುದ್ಧಿರಸ್ಮೇ ಅಸ್ಮಾಸು ಸಚಾ ಸಹ ಭೂತು । ಭವತು । ಧಿಯಃ ಕರ್ಮಾಣ್ಯವಿಷ್ಟಂ । ರಕ್ಷತಂ । ಪಾರಂ ನಯತಂ । ಪುರಂಧೀಃ ಪುರಂ ಶರೀರಂ ಧೀಯತೇ ಸ್ಥಾಪ್ಯತೇ ಯಾಭಿರ್ಮತಿಭಿಸ್ತ್ವಾಃ ಸ್ತುತೀರ್ಜಿಗೃತಂ । ಪ್ರಬುಧ್ಯತಂ । ವನುಷಾಂ ಸಂಭಕ್ತ್ವಾಮಾಮಸ್ಮಾಕಮಯೋ ಗಂತ್ರೀರರಾತೀಃ । ಶತ್ರೂನಿತ್ಯರ್ಥಃ । ಜಜಸ್ತಂ । ಯುಧ್ಯತಂ । ಕ್ಷಪಯತಮಿತ್ಯರ್ಥಃ ॥ ಛಂದಸ್ಯರಾತಿಶಬ್ದಃ ಸ್ತ್ರೀಲಿಂಗಃ ॥ ಏವಂ ಸ್ತುತಿಂ ನಿಗಮಯ್ಯಾಭೀಷ್ಟಂ ಪ್ರಾರ್ಥಿತವಾನ್ ॥

॥ ಪ್ರತಿಪದಾರ್ಥ ॥

ಬೃಹಸ್ಪತೇ—ಎಲೈ ಬೃಹಸ್ಪತಿಯೇ । **ಇಂದ್ರ**—ಎಲೈ ಇಂದ್ರನೇ । **ನಃ**—ನಮ್ಮನ್ನು । **ವರ್ಧತಂ**—ಪ್ರವೃದ್ಧರನ್ನಾಗಿ ಮಾಡಿರಿ । **ವಃ ಸಾ ಸುಮತಿಃ**—ನಿಮ್ಮ ಪ್ರಸಿದ್ಧವಾದ ಅನುಗ್ರಹಬುದ್ಧಿಯು । **ಅಸ್ಮೇ**—ನಮ್ಮಲ್ಲಿ । **ಸಚಾ ಭೂತು**—ಹೊಂದಿಕೊಂಡಿರಲಿ । **ಧಿಯಃ**—ನಮ್ಮ ಕರ್ಮಗಳನ್ನು । **ಅವಿಷ್ಟಂ**—ರಕ್ಷಿಸಿರಿ । **ಪುರಂಧೀಃ**—ನಮ್ಮ ಸ್ತುತಿಗಳನ್ನು । **ಜಿಗೃತಂ**—ಚೆನ್ನಾಗಿ ಅರಿತು (ಶ್ಲಾಘಿಸಿರಿ) । **ವನುಷಾಂ**—ಹವಿರ್ದಾತರಾದ ನಮ್ಮ ಮೇಲೆ । **ಅರ್ಯಃ**—ಎದುರುಬೀಳುವ । **ಅರಾತೀಃ**—ಶತ್ರುಗಳನ್ನು । **ಜಜಸ್ತಂ**—ಎದುರಿಸಿ ನಾಶಮಾಡಿರಿ.

॥ ಭಾವಾರ್ಥ ॥

ಎಲೈ ಬೃಹಸ್ಪತಿಯೇ, ಮತ್ತು ಎಲೈ ಇಂದ್ರನೇ, ನಮ್ಮನ್ನು ಪ್ರವೃದ್ಧರನ್ನಾಗಿ ಮಾಡಿರಿ. ನಿಮ್ಮ ಪ್ರಸಿದ್ಧವಾದ ಅನುಗ್ರಹ ಬುದ್ಧಿಯು ನಮ್ಮಲ್ಲಿ ಹೊಂದಿಕೊಂಡಿರಲಿ ನಮ್ಮ ಕರ್ಮಗಳನ್ನು ರಕ್ಷಿಸಿರಿ. ನಮ್ಮ ಸ್ತುತಿಗಳನ್ನು ಚೆನ್ನಾಗಿ ಅರಿತು ಶ್ಲಾಘಿಸಿರಿ. ಹವಿರ್ದಾತರಾದ ನಮ್ಮ ಮೇಲೆ ಎದುರು ಬೀಳುವ ಶತ್ರುಗಳನ್ನು ಎದುರಿಸಿ ನಾಶಮಾಡಿರಿ.

English Translation

Brihaspati, Indra, elevate us; may the favourable disposition of you both be combined for us; protect our rites; be awake to our laudations, confound the arrogant (foes) of us, who are the donors (of oblations).

॥ ವಿಶೇಷವಿಷಯಗಳು ॥

ಸುಮತಿಃ—ಒಳ್ಳೆಯ ಬುದ್ಧಿಯು ಎಂದರೆ ಯಜ್ಞಮಾಡುತ್ತಿರುವ ಅಥವಾ ಸ್ತುತಿಸುತ್ತಿರುವ ಯಜಮಾನರಾದ ನಮ್ಮ ವಿಷಯದಲ್ಲಿ ಅನುಗ್ರಹಮಾಡಬೇಕೆಂಬ ಸದ್ಬುದ್ಧಿಯು ಇಂದ್ರಾಬೃಹಸ್ಪತಿಗಳಾದ ನಿಮಗೆ ಉಂಟಾಗಿರಲಿ ಎಂದಭಿಪ್ರಾಯವು.

ಪುರಂಧೀಃ—ಪುರಂ ಶರೀರಂ ಧೀಯತೇ ಸ್ಥಾಪ್ಯತೇ ಯೈರಭಿರ್ಮತಿಭಿಸ್ತ್ವಾಃ **ಸ್ತುತೀಃ** । ನಮ್ಮ ಶರೀರದಲ್ಲಿದ್ದು ನಮಗೆ ಉತ್ತೇಜನವನ್ನುಂಟುಮಾಡುವ ಒದ್ದಿಯಿಂದ ನಾವು ಪ್ರೇರಿತರಾಗಿ ದೇವತೆಗಳನ್ನು ಸ್ತುತಿಸುವ ಸ್ತೋತ್ರ ಅಥವಾ ವಾಕ್ಯವು. ಅಥವಾ **ಪುರಂಧೀರ್ಬಹುಧೀಃ** ಬಹಳ (ಉತ್ತಮವಾದ) ಬುದ್ಧಿಯಿಂದ ರಚಿತವಾದ ಸ್ತುತಿ ಎಂದು ಅರ್ಥವು.

ಅರಾತೀಃ—ಛಂದಸ್ಸಿನಲ್ಲಿ ಎಂದರೆ ವೇದಮಂತ್ರಗಳಲ್ಲಿ—ಅದರಲ್ಲಿಯೂ ಋಗ್ವೇದ ಮಂತ್ರಗಳಲ್ಲಿ—ಅರಾತಿ ಶಬ್ದವು (ಸಾಧಾರಣವಾಗಿ ಪುಲ್ಲಿಂಗಶಬ್ದವಾಗಿದ್ದರೂ) ಸ್ತ್ರೀಲಿಂಗದಲ್ಲಿ ಉಪಯೋಗಿಸುವುದೇ ರೂಢಿಯಾಗಿದೆ. ಎಂದರೆ ಇಲ್ಲಿ ಅರಾತೀನ್ ಎಂಬುವುದಕ್ಕೆ ಬದಲಾಗಿ ಅರಾತೀಃ (ದ್ವಿತೀಯಾ ಬಹುವಚನ) ಎಂಬ ಶಬ್ದದ ಪ್ರಯೋಗವಿದೆ.

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥
ಶ್ರೀಮತ್ಸಾಯಣಮಂತ್ರೀಶೋ ದಾಶತಯ್ಯಾಸ್ತೃತೀಯಕೇ ।
ಆಪ್ಯಕೇ ಸಪ್ತಮಾಧ್ಯಾಯಂ ವ್ಯಾಕಾರ್ಷೀದತಿಪೇಶಲಂ ॥

ಇತಿ ಶ್ರೀಮದ್ರಾಜಾಧಿರಾಜ ಪರಮೇಶ್ವರವೈದಿಕಮಾರ್ಗಪ್ರವರ್ತಕ ಶ್ರೀವೀರಬುಕ್ಕಭೂಪಾಲ
ಸಾಮ್ರಾಜ್ಯಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ
ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ತೃತೀಯಾಷ್ಟಕೇ
ಸಪ್ತಮೋಽಧ್ಯಾಯಃ ಸಮಾಪ್ತಃ ॥

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ತೃತೀಯಾಷ್ಟಕದಲ್ಲಿ
ಏಳನೆಯ ಅಧ್ಯಾಯವು ಸಮಾಪ್ತವಾದುದು.

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತುತೇ ॥

॥ ಶುಭಂ ಭೂಯಾತ್ ॥

॥ ಮಂಗಳಂ ॥

॥ ಶ್ರೀಃ ॥

॥ ಶ್ರೀ ಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

ಸಾಯಣಭಾಷ್ಯಸಹಿತಾ

ಋಗ್ವೇದಸಂಹಿತಾ

ತೃತೀಯಾಷ್ಟಕೇಽಷ್ಟಮೋಽಧ್ಯಾಯಃ

ಮೂರನೆಯ ಅಷ್ಟಕದಲ್ಲಿ ಎಂಟನೆಯ ಅಧ್ಯಾಯವು.

ಚತುರ್ಥಮಂಡಲದ ಸೂಕ್ತಗಳು ೫೧—೫೮

ಮತ್ತು

ಪಂಚಮಂಡಲದ ಸೂಕ್ತಗಳು ೧—೪

ಐವತ್ತೊಂದನೆಯ ಸೂಕ್ತವು.

ಪೀಠಿಕೆ

ಈ ಸೂಕ್ತಕ್ಕೂ ಮುಂದಿನ ಸೂಕ್ತಕ್ಕೂ ಉಷಸ್ಸೇ ದೇವತೆಯು. ಉಷೋದೇವತೆಯ ವಿಷಯದಲ್ಲಿ— ಯಾಸ್ಕಮಹರ್ಷಿಗಳು— **ಉಷಾಃ ಕಸ್ಮಾದುಚ್ಛತೀತಿ ಸತ್ಯಾ ರಾತ್ರೇರಪರಃ ಕಾಲಃ ॥** (ನಿ. ೨-೧೯) ಎಂದು ಹೇಳಿದಾರೆ. ಎಂದರೆ ಉಷೋದೇವತೆಯು ಯಾರು? ಅದರ ಸ್ವರೂಪವೇನು? ಅದಕ್ಕೆ ಈ ಹೆಸರು ಬರಲು ಕಾರಣವೇನು? ಎಂದು ಮೊದಲಾದ ವಿಷಯ ವಿಮರ್ಶೆಮಾಡುತ್ತಾ **ಉಷಃ ಕಸ್ಮಾತ್ । ಉಚ್ಛತೀತಿ ಸತ್ಯಾಃ । ಉಚ್ಛೀ ವಿವಾಸೇ । ವಿವಾಸಯತಿ ಹೀಯಂ ತಮಾಂಸಿ ತಸ್ಮಾದುಚ್ಛತೀತ್ಯೇ-**

वमस्या एतस्मिन्नर्वाणि सत्याः कर्तरि कारके उषा इत्येतदभिधानं भवति। का पुनरियमुषा इति। रात्रेरपरःकालः स उषा इत्युच्यते॥ एंदरे हॊरदूडु एंबर्थवुळ्ळ उच्छी-विवासे एंब धातुविनिंद ई उषशब्दद निष्पत्तियागिदेयेंदु विवरिसुत्तारे. एनन्नु हॊर दूडुवुदु एंदरे कत्तलेयन्नु एंदर्थवु. कत्तलेयन्नु हॊरदूडि बेळकन्नु प्रसरिसुवुदरिंद ई देवतेगे **उषाः** एंदु हेसरु. **आ** कालवु यावुदु एंदरे रात्रिय कॊनेय भागवु. रात्रियु मुगिदु सूर्योदयवागुवुदक्के मुंचितवागि कत्तलॆ इल्लद मत्तु बेळकागिरुव कालक्के उषः कालवेंदु हेसरु एंदु अर्थविवरणेमाडिरुवरु.

रात्रियु कळेदनंतर उषःकालवागुवुदरिंद उषःकालवु रात्रियिंद हुट्टिद्दिंदु हेळुव रूढि इरुवुदु. इदन्नु समर्थनेमाडुवुदक्कागि यास्करु—

इदं श्रेष्ठं ज्योतिषां ज्योतिरागाच्चित्रः प्रकेतो अजनिष्ट विभ्वा।
यथा प्रसूता सवितुः सवायैव रात्र्युषसे योनिमारैक्॥

(ऋ. सं. ८-८८३-८)

एंब ऋक्कन्नु उदहरिसिरुवरु. मत्तु ई क्रमवन्ननुसरिसि उषःकालवादनंतर सूर्योदयवागुवुदरिंद उषस्सिनिंद सूर्यनु उत्पन्ननागुवनेंदु हेळुव विषयदल्लियू यास्करु—

रुशद्वत्सा रुशतीः श्वेत्याागादारैगु कृष्णा सदनान्यस्याः।
समानबंधू अमृते अनूचीः द्यावा वर्णं चरते आमिनाने॥

(ऋ. सं. ८-८८३-३)

एंब ऋक्कन्नु विषयसमर्थनेगागि उदाहरिसिरुवरु (नि. ४-३०).

ई उषोदेवतेय स्वरूपवन्नु ऋषिगळु विधविधवागि वर्णनेमाडिरुवरु. ई वर्णनेगळु सारवागि नानाविध विशेषणगळन्नु उपयोगिसिरुवरु अवुगळल्लि मुख्यवाद हदिनारु शब्दगळु उषोदेवतेगे अन्वयिसुवुवु. अवुगळन्नु यास्करु ई रीति हेळिरुवरु (नि. ४-८४).

विभावरीः—विशेषप्रभावयुक्ता। विशिष्टप्रकाशयुक्ता। बहळ प्रकाशमानवाद—Resplendent. ई शब्दवु ऋ सं ८-३०-३३, ८-४४-८, ८-४४-८८, ८-६३-८४, ४-५३-६, ५-६४-४, ५-६४-८८, ४-४६-८४ एंब ऋक्कुगळल्लि परितवागिरुवुदु

सूनरीः—सुष्ठु नेत्रीः। सुंदरवाद—Beautiful. ई शब्दवु ऋ. सं. ८-४४ ८०, ८-४४-५; ८-४४-४, ४-५३-८, ६-४८-८ एंब ऋक्कुगळल्लि परितवागिरुवुदु.

भासतीः—तेजस्वतीः। विशिष्टप्रकाशनयुक्ता। हॊळेयुत्तिरुव—Shining. ई शब्दवु ऋ. सं. ८-६३-६, ८-७८३-४ एंब ऋक्कुगळल्लि परितवागिरुवुदु.

ಓದತೀ—ಉಂದೀ ಕ್ಲೇದನೇ। ಉನತ್ತಿ ಸರ್ವಂ ನೀಹಾರೇಣೇತ್ಯೋದತೀ। ಹರಿಯುತ್ತಿರುವ, ಚಿಮ್ಮುತ್ತಿರುವ, ಪ್ರಸರಿಸುತ್ತಿರುವ, ಮಂಜಿನಿಂದ ಎಲ್ಲವನ್ನೂ ನೆನೆಯಿಸುವ—flowing, gushing & c— ಈ ಶಬ್ದವು ಋ. ಸಂ ೧-೪೬-೬, ೮-೬೯-೨ ರಲ್ಲಿ ಮಾತ್ರವಿರುವುದು.

ಚಿತ್ರಮಘಾ—ವಿಚಿತ್ರಧನಾ। ವಿವಿಧರಶ್ಮ್ಯಾಖ್ಯಧನಾ ವಾ ॥ ವಿಧವಿಧವಾದ ಅಥವಾ ಪ್ರಕಾಶಮಾನವಾದ ಐಶ್ವರ್ಯವುಳ್ಳ—possessed of brilliant riches. ಈ ಶಬ್ದವು ಋ. ಸಂ ೭-೭೫-೫, ೭-೭೭-೩, ೮-೫೮-೩ ರಲ್ಲಿ ಪಠಿತವಾಗಿರುವುದು.

ಅರ್ಜುನೀ—ಶುಭ್ರವರ್ಣಾ। ಬೆಳ್ಳಗಿರುವ—the white. ಈ ಶಬ್ದವು ಋ ಸಂ. ೧-೪೯-೩, ೫-೮೪-೨ ಎಂಬ ಋಕ್ಕುಗಳಲ್ಲಿರುವುದು.

ವಾಜಿನೀ—ಅಥವಾ **ವಾಜಿನೀವತೀ—ವಾಜೋಽನ್ನಮಸ್ಯಾ ಅಸ್ತೀತಿ। ಬಹ್ವನ್ನಾ।** ಅನ್ನಯುಕ್ತವಾದ ಅಥವಾ ಅನ್ನವನ್ನು ತಂದುಕೊಡುವ—the bringer of food. ಈ ಶಬ್ದಗಳು ಋ ಸಂ ೩-೬-೧, ೩-೬೦-೧, ೬-೬೧-೬ ಮತ್ತು ಋ. ಸಂ. ೧-೩-೧೦, ೬-೬೨-೪, ೭-೭೫-೫, ೭-೯೬-೩, ೧೦-೭೫-೮, ೧-೪೮-೬, ೧-೪೯-೧೬, ೧-೯೨-೧೬, ೧-೯೨-೧೫, ೨-೪೧-೧೮, ೪-೪೧-೩, ೮-೨೪-೮೮ ಎಂಬ ಋಕ್ಕುಗಳಲ್ಲಿರುವುದು

ಸುಮ್ನಾವರೀ—ಸುಮ್ನಮಿತಿ ಸುಖನಾಮ। ತದ್ವತೀ। ಸಂತೋಷವನ್ನುಂಟುಮಾಡುವ—the giver of joy. ಈ ಶಬ್ದವು ಋ. ಸಂ. ೧-೧೧೩-೧೨ ನೆಯ ಋಕ್ಕಿನಲ್ಲಿ ಮಾತ್ರವಿರುವುದು

ಆಹನಾ, ದ್ಯೋತನಾ—ಕೃತ್ಸ್ನಂ ಜಗದ್ದ್ಯೋತನಶೀಲಾ। ಪ್ರಕಾಶಮಾನವಾದ—Bright, ಈ ಶಬ್ದಗಳು ಋ ಸಂ. ೧-೧೨೩-೪ ಮತ್ತು ಋ ಸಂ. ೧-೧೨೩-೪ ರಲ್ಲಿ ಮಾತ್ರವಿರುವುದು.

ಶ್ವೇತ್ಯಾ—ಶ್ವೇತವರ್ಣೋಪಾ। ಶ್ವೇತಾ ವರ್ಣೇ। ಶುಭ್ರವರ್ಣವುಳ್ಳ—the fair-colured. ಈ ಶಬ್ದವು ಋ. ಸಂ. ೧-೧೧೩-೨, ೧೦-೭೫-೬ ರಲ್ಲಿರುವುದು.

ಅರುಷೀ—ಆರೋಚಮಾನಾ। ರಕ್ತವರ್ಣಾ ವಾ। ಕೆಂಪುವರ್ಣವುಳ್ಳ, ಸ್ವಲ್ಪ ಕೆಂಪಾದ ಛಾಯೆಯುಳ್ಳ—the ruddy. ಈ ಶಬ್ದವು ಋ ಸಂ. ೩-೫೫-೧೧, ೪-೫೨-೨, ೮-೬೮-೪ ಇತ್ಯಾದಿ ಋಕ್ಕುಗಳಲ್ಲಿ ಪಠಿತವಾಗಿರುವುದು.

ಸೂನೃತಾ, ಸೂನೃತಾವತೀ, ಸೂನೃತಾವರೀ—ಪ್ರಿಯಸತ್ಯರೂಪಾ। ಪ್ರಿಯಸತ್ಯಾತ್ಮಿಕಾ ವಾಕ್ ತಾದೃಶ್ಯಾ ವಾಚಾ ಯುಕ್ತಾ। ಪ್ರಿಯವಾದ ಮತ್ತು ಹಿತವಾದ ಮಾತುಗಳನ್ನಾಡುವ—the utterer of pleasent or sacred voices. ಈ ಶಬ್ದಗಳು ಋ. ಸಂ ೧-೮-೮ · ೧-೩೮-೫, ೧-೪೩-೩ ಇತ್ಯಾದಿ ಋಕ್ಕುಗಳಲ್ಲಿಯೂ ಋ ಸಂ. ೧-೯೨-೧೪, ೧-೨೨-೩, ೭-೮೧-೬, ಮತ್ತು ಋ. ಸಂ ೪-೫೨-೪ ಎಂಬ ಋಕ್ಕುಗಳಲ್ಲಿಯೂ ಪಠಿತವಾಗಿರುವುದು.

ಈ ಶಬ್ದಗಳು ಸಾಧಾರಣವಾಗಿ ಉಷೋದೇವತೆಯ ಪರವಾಗಿಯೇ ಉಪಯೋಗಿಸಲ್ಪಟ್ಟಿರುವುದಾದರೂ ಕೆಲವು ಸಂದರ್ಭಗಳಲ್ಲಿ ಇತರ ದೇವತೆಗಳ ಪರವಾಗಿಯೂ ಉಪಯುಕ್ತವಾಗಿರುವುದು.

ಯಾಸ್ಕರು ಮೇಲೆ ಉದಾಹರಿಸಿರುವ ಈ ಋಕ್ಕಿಗೆ ಈ ರೀತಿ ನಿರ್ವಚನವನ್ನು ಹೇಳಿರುವರು—

ಇದಂ ಶ್ರೇಷ್ಠಂ ಜ್ಯೋತಿಷಾಂ ಜ್ಯೋತಿರಾಗಮತ್ । ಚಿತ್ರಂ ಪ್ರಕೇತನಂ ಪ್ರಜ್ಞಾತತಮಮಹರ್ವಿದ್ಯ ವಿಭೂತತಮಂ ಯಥಾ ಪ್ರಸೂತಾ ಸವಿತುಃ ಪ್ರಸವಾಯ ರಾತ್ರಿರಾದಿತ್ಯಸ್ಯ । ಏವಂ ರಾತ್ರ್ಯುಷಸೇ ಯೋನಿಮರಿಚತ್ ಸ್ಥಾನಂ । ಸ್ತ್ರೀಯೋನಿರಭಿಯುತೇ ಏನಾಂ ಗರ್ಭಃ ॥

(ನಿ. ೨-೧೯)

ರಾತ್ರೇರಪರಃ ಕಾಲ ಉಷ ಇತ್ಯುಚ್ಯತೇ ಎಂಬ ವಚನಾನುಸಾರವಾಗಿ ರಾತ್ರಿಯ ಕೊನೆಯ ಭಾಗವು ಎಂದರೆ ಸೂರ್ಯೋದಯಕ್ಕೆ ಮುಂಚಿತವಾದ ಕಾಲವು ಉಷಃಕಾಲವೆನಿಸುವುದು ಈ ಉಷಃಕಾಲದ ತೇಜಸ್ಸು ಎಂದರೆ ಬೆಳಕು ಎಲ್ಲಾ ಬೆಳಕುಗಳಿಗಿಂತಲೂ ಶ್ರೇಷ್ಠವಾದದ್ದು. ಪ್ರಪಂಚದಲ್ಲಿ ಸೂರ್ಯಚಂದ್ರನಕ್ಷತ್ರಗಳು ಪ್ರಕಾಶಯುತವಾದವು. ಇವುಗಳಲ್ಲಿ ಸೂರ್ಯನ ಬೆಳಕು ಬಹಳ ತೀಕ್ಷ್ಣವಾಗಿರುವುದು. ನಕ್ಷತ್ರಗಳ ಬೆಳಕು ನಕ್ಷತ್ರಗಳನ್ನು ಮಾತ್ರವೇ ಪ್ರಕಾಶಗೊಳಿಸುತ್ತಾ ಇತರ ಪದಾರ್ಥಗಳನ್ನು ಪ್ರಕಾಶಪಡಿಸುವುದಿಲ್ಲ ಎಂದರೆ ನಕ್ಷತ್ರಗಳ ಬೆಳಕಿನಿಂದ ಇತರ ವಸ್ತುಗಳನ್ನು ನೋಡಲು ಸಾಧ್ಯವಾಗುವುದಿಲ್ಲ. ಚಂದ್ರನ ಬೆಳಕು ಶೀತಳವಾಗಿದ್ದರೂ ಹೆಚ್ಚು ಪ್ರಕಾಶವಿಲ್ಲದ್ದರಿಂದ ಪದಾರ್ಥಗಳು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಆದರೆ ಉಷಃಕಾಲದ ಬೆಳಕು ಸೂರ್ಯನ ಬೆಳಕಿನಂತೆ ತೀಕ್ಷ್ಣವೂ ಅಲ್ಲ, ಚಂದ್ರನ ಪ್ರಕಾಶದಂದೆ ಶೀತಳವೂ ಅಲ್ಲ, ಅಸ್ಪಷ್ಟವೂ ಅಲ್ಲ. ಎಲ್ಲಾ ವಸ್ತುವನ್ನೂ ಬಹಳ ಚೆನ್ನಾಗಿ ಪ್ರಕಾಶಪಡಿಸುವ ಸಾಮರ್ಥ್ಯವುಳ್ಳದ್ದಾಗಿರುವುದು. ಆದುದರಿಂದಲೇ ಈ ಉಷಃಕಾಲದ ಪ್ರಕಾಶವು ಸೂರ್ಯಚಂದ್ರನಕ್ಷತ್ರಾದಿಗಳ ಪ್ರಕಾಶಕ್ಕಿಂತಲೂ ಅತ್ಯಂತ ಶ್ರೇಷ್ಠವಾದುದೆಂದು ಇಲ್ಲಿ ಹೇಳಿರುವುದು. ಇದಲ್ಲದೆ ಈ ಉಷಃಕಾಲದ ಪ್ರಕಾಶವು ಎಲ್ಲಾ ಪ್ರದೇಶಗಳಲ್ಲಿಯೂ ಏಕಕಾಲದಲ್ಲಿ ಹರಡಿ ಮನಸ್ಸಿಗೆ ಬಹು ಆಹ್ಲಾದಕರವಾಗಿರುವುದು. ಇಂತಹ ಉಷಃಕಾಲದ ಉದಯವು ಈಗ ಪ್ರಾಪ್ತವಾಗಿರುವುದು. ಇದು ಈ ಋಕ್ಕಿನ ಪೂರ್ವಾರ್ಧದ ಅನುವಾದವು

ಪ್ರಪಂಚದಲ್ಲಿ ಸೂರ್ಯನು ಮುಳುಗಿದ ನಂತರ ರಾತ್ರಿಯು ಉಂಟಾಗುವುದು. ರಾತ್ರಿಯು ಕಳೆದನಂತರ ಉಷಃಕಾಲವೂ, ಉಷಃಕಾಲಾನಂತರ ಸೂರ್ಯೋದಯವೂ ಉಂಟಾಗುವುದು. ಈ ರೀತಿ ಒಂದಾಗುತ್ತಲೊಂದು ಕ್ರಮವಾಗಿ ಪ್ರಾಪ್ತವಾಗುವುದರಿಂದ ಒಂದರ ಉತ್ಪತ್ತಿಗೆ ಒಂದು ಕಾರಣವೆಂದು ಹೇಳಲ್ಪಡುವುದು ಹೇಗೆಂದರೆ ಸೂರ್ಯನು ಅಸ್ತನಾದನಂತರ ರಾತ್ರಿಯು ಉಂಟಾಗುವುದರಿಂದ ರಾತ್ರಿಯು ಉತ್ಪತ್ತಿಗೆ ಸೂರ್ಯನು ಕಾರಣನು ಎಂದರೆ ಸೂರ್ಯನಿಂದ ರಾತ್ರಿಯು ಉತ್ಪತ್ತಿಯುಂಟಾಗುವುದು. ಅದರಂತೆಯೇ ರಾತ್ರಿಯಿಂದ ಉಷಃಕಾಲದ ಉತ್ಪತ್ತಿಯಾಗುವುದು. ಉಷಃಕಾಲದಿಂದ ಸೂರ್ಯನ ಉದಯವಾಗುವುದು. ಈ ಅಭಿಪ್ರಾಯವನ್ನೇ ಈ ಋಕ್ಕಿನಲ್ಲಿ— ರಾತ್ರಿಯು ಸೂರ್ಯನಿಂದ ಹೇಗೆ ಉತ್ಪನ್ನವಾಯಿತೋ ಹಾಗೆ ರಾತ್ರಿಯಿಂದ ಉಷಃಕಾಲವು ಆವಿರ್ಭವಿಸಿತು ಎಂದ ವರ್ಣಿಸಿರುವುದು.

ಪ್ರಕೇತಃ—ಕಿತ ಜ್ಞಾನೇ । ಅಂಧಕಾರಾವೃತಸ್ಯ ಸರ್ವಸ್ಯ ಪದಾರ್ಥಸ್ಯ ಪ್ರಜ್ಞಾಪಕಃ । ಕತ್ತಲೆಯಿಂದ ಕಾಣಿಸದಿರುವ ಪದಾರ್ಥಗಳನ್ನು ತನ್ನ ಬೆಳಕಿನಿಂದ ಕಾಣುವಂತೆ ಮಾಡುವ.

ವಿಭೂತತಮಂ—ವ್ಯಾಪ್ತಃ । ವ್ಯಾಪ್ತವಾದ, {ಆವರಿಸಿರುವ.

ಸವಾಯ—ಉತ್ಪತ್ತ್ಯೆ । ಹುಟ್ಟುವುದಕ್ಕೆ, ಉದಯಿಸುವುದಕ್ಕೆ

ಯೋನಿಃ—ಉತ್ಪತ್ತಿಸ್ಥಾನವು, ಕಾರಣಭೂತವಾದುದು.

ಐವತ್ತೊಂದನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಅಥಾಷ್ಟಮಂ ವ್ಯಾಖ್ಯಾತುಮಾರಭತೇ । ಇದಮು ತ್ಯದಿತ್ಯೇಕಾದಶರ್ಚಂ ಪಞ್ಚಮಂ ಸೂಕ್ತಂ ವಾಮದೇವಸ್ಯಾರ್ಷಂ ತ್ರೈಷ್ಟುಭಮುಷೋದೇವತಾಕಂ । ಇದಮುಷಸ್ಯಂ ತ್ವಿತ್ಯನುಕ್ರಾಂತಂ ॥ ಪ್ರಾತರನುವಾಕ ಉಷಸ್ಯೇ ಕೃತಾ ತ್ರೈಷ್ಟುಭೇ ಛಂದಸ್ಯಾಶ್ವಿನಶಸ್ತ್ರ ಇದಂ ಸೂಕ್ತಂ । ಸೂತ್ರಿತಂ ಚ । ಉಷೋ ವಾಜೇನೇದಮು ತ್ಯತ್ । ಆ. ೪-೧೪ । ಇತಿ ॥

ಅನುವಾದವು—ಈಗ ಮೂರನೆಯ ಅಷ್ಟಕದ ಎಂಟನೆಯ ಅಧ್ಯಾಯದ ವ್ಯಾಖ್ಯಾನವನ್ನು ಪ್ರಾರಂಭಿಸುವೆವು. **ಇದಮು ತ್ಯತ್** ಎಂಬ ಈ ಸೂಕ್ತವು ನಾಲ್ಕನೆಯ ಮಂಡಲದ ಐದನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು ಈ ಸೂಕ್ತಕ್ಕೆ ವಾಮದೇವನು ಋಷಿಯು, ಉಷಸ್ಸು ದೇವತೆಯು, ತ್ರಿಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ **ಇದಮುಷಸ್ಯಂ ತು** ಎಂದು ಹೇಳಿರುವುದು. ಪ್ರಾತರನುವಾಕಮಂತ್ರ ಪರನಕಾಲದಲ್ಲಿ ಉಷಸ್ಯಕ್ರತುಸಂಬಂಧವಾದ ತ್ರಿಷ್ಟುಪ್‌ಛಂದಸ್ಸಿನ ಮಂತ್ರಗಳಿಗಾಗಿಯೂ ಆಶ್ವಿನಶಸ್ತ್ರಮಂತ್ರ ಪರನ ಕ್ಕಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಉಷೋ ವಾಜೇನೇದಮು ತ್ಯತ್** ಎಂಬ ಸೂತ್ರದಿಂದ (ಆ. ೪-೧೪) ವಿವೃತವಾಗಿರುವುದು.

ಸೂಕ್ತ—೫೧

ಮಂಡಲ—೪ ॥ ಅನುವಾಕ—೫ ॥ ಸೂಕ್ತ—೫೧ ॥
ಅಷ್ಟಕ—೩ ॥ ಅಧ್ಯಾಯ—೮ ॥ ವರ್ಗ—೧, ೨ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—ವಾಮದೇವಃ ।
ದೇವತಾ—ಉಷಾಃ ।
ಛಂದಃ—ತ್ರಿಷ್ಟುಪ್ ।

॥ ಸಂಹಿತಾಪಾಠಃ ॥

ಇದಮು ತ್ಯತ್ಪ್ರುತನಂ ಪುರಸ್ತಾಜ್ಜ್ಯೋತಿಸ್ತನುಷೋ ವಯುನಾವದ-
ಸ್ಥಾತ್ ।
ನೂನಂ ದಿವೋ ದುಹಿತರೋ ವಿಭಾತೀರ್ಗಾತುಂ ಕೃಣವನ್ನುಷಸೋ
ಜನಾಯ ॥ ೧ ॥

॥ ಪದಪಾಠಃ ॥

ಇದಂ । ಊಂ ಇತಿ । ತ್ಯತ್ । ಪುರುತಮಂ । ಪುರಸ್ತಾತ್ । ಜ್ಯೋತಿಃ । ತಮಸಃ । ವಯುನಾವತ್ । ಅಸ್ಥಾತ್ ।

ನೂನಂ । ದಿವಃ । ದುಹಿತರಃ । ವಿಭಾತೀಃ । ಗಾತುಂ । ಕೃಣವನ್ । ಉಷಸಃ । ಜನಾಯೈ ॥ ೧ ॥

॥ ಸಾಯಣಭಾಷ್ಯಂ ॥

ಇದಮು ಪುರತೋ ದೃಶ್ಯಮಾನಮಿದಂ ತ್ಯತ್ತದಸ್ಮಾಭಿಃ ಸ್ತುತ್ಯಂ ಸರ್ವಪ್ರಸಿದ್ಧಂ ಪುರುತಮಮತ್ಯಂತಪ್ರಭೂತಂ ಜ್ಯೋತಿಸ್ತೇಜೋ ವಯುನಾವತ್ । ವೇತೇಃ ಕಾಂತಿಕರ್ಮಣ ಇದಂ ॥ ಪ್ರಕೃಷ್ಟಕಾಂತಿಮತ್ । ಅಥವಾ ವಯುನಮಿತಿ ಪ್ರಜ್ಞಾನಾಮ । ಪ್ರಜ್ಞೋಪೇತಂ । ಸರ್ವಸ್ಯ ಪ್ರಜ್ಞಾಪಕಮಿತ್ಯರ್ಥಃ । ಕೀದೃಕ್ ತೇಜಃ । ಪುರಸ್ತಾತ್ ಪೂರ್ವಸ್ಯಾಂ ದಿಶಿ ತಮಸೋಽಂಧಕಾರಾದಸ್ಥಾತ್ । ಉದತಿಷ್ಠತ್ । ಏವಂ ಸತಿ ನೂನಂ ಸತ್ಯಂ ದಿವ ಆದಿತ್ಯಸ್ಯ ದುಹಿತರೋ ದುಹಿತೃಸ್ಥಾನೀಯಾ ವಿಭಾತೀರ್ವಿಭಾನಂ ಕುರ್ವತೀರುಷಸೋ ಜನಾಯ ಯಜಮಾನಾನಾಂ ಗಾತುಂ ಗಮನಂ ಗಮನಾದಿವ್ಯಾಪಾರಸಾಮರ್ಥ್ಯಂ ಕೃಣವನ್ । ಅಕುರ್ವನ್ ॥

॥ ಪ್ರತಿಪದಾರ್ಥ ॥

ಪುರಸ್ತಾತ್—ಪೂರ್ವದಿಕ್ಕಿನಲ್ಲಿ । **ತಮಸಃ**—ಅಂಧಕಾರಮಧ್ಯದಿಂದ । **ಅಸ್ಥಾತ್**—ಉದಯಿಸಿದುದೂ । **ಇದಮು**—ಮುಂದೆ ಕಾಣುತ್ತಿರುವುದೂ । **ತ್ಯತ್**—ಲೋಕಪ್ರಸಿದ್ಧವಾದುದೂ । **ಪುರುತಮಂ**—ಅತ್ಯಂತ ಪ್ರಭೂತವಾದುದೂ ಆದ । **ಜ್ಯೋತಿಃ**—(ಉಷಸ್ಸಿನ) ತೇಜಸ್ಸು । **ವಯುನಾವತ್**—(ಲೋಕಕ್ಕೆಲ್ಲಾ) ಚೈತನ್ಯದಾಯಿಯಾಗಿರುತ್ತದೆ । **ನೂನಂ**—ಖಂಡಿತವಾಗಿಯೂ । **ದಿವಃ**—ಆದಿತ್ಯನ । **ದುಹಿತರಃ**—ಪುತ್ರೀರೂಪರಾದವರೂ । **ವಿಭಾತೀಃ**—ಪ್ರಭಾಯುತರೂ ಆದ । **ಉಷಸಃ**—ಉಷಸ್ಸುಗಳು । **ಜನಾಯೈ**—ಯಜ್ಞಕರ್ತರ । **ಗಂತುಂ**—ಗಮನಾದಿ ವ್ಯಾಪಾರಸಾಮರ್ಥ್ಯವನ್ನು । **ಕೃಣವನ್**—ಉಂಟುಮಾಡುತ್ತಾರೆ.

॥ ಭಾವಾರ್ಥ ॥

ಪೂರ್ವದಿಕ್ಕಿನಲ್ಲಿ ಅಂಧಕಾರಮಧ್ಯದಿಂದ ಉದಯಿಸಿದುದೂ, ಮುಂದೆ ಕಾಣುತ್ತಿರುವುದೂ, ಲೋಕಪ್ರಸಿದ್ಧವಾದುದೂ, ಅತ್ಯಂತಪ್ರಸಿದ್ಧವಾದುದೂ ಆದ ಉಷಸ್ಸಿನ ತೇಜಸ್ಸು ಲೋಕಕ್ಕೆಲ್ಲಾ ಚೈತನ್ಯದಾಯಿಯಾಗಿರುತ್ತದೆ. ಆದಿತ್ಯನ ಪುತ್ರೀರೂಪರಾದವರೂ, ಪ್ರಭಾಯುತರೂ ಆದ ಉಷಸ್ಸುಗಳು ಖಂಡಿತವಾಗಿಯೂ ಯಜ್ಞಕರ್ತರಿಗೆ ಗಮನಾದಿವ್ಯಾಪಾರಸಾಮರ್ಥ್ಯವನ್ನುಂಟುಮಾಡಲಿ.

English Translation.

This widely-spread and sense-bestowing light has sprung up in the ast from out of the darkness. verily the brilliant Dawns, the daughters of heaven, are giving to man (the faculty to act).

। संहितापाठ ।

अस्थुरु चित्रा उषसः पुरस्तान्मिता इव स्वरवोऽध्वरेषु ।

व्यू व्रजस्य तमसो द्वारोच्छन्तीरव्रञ्छुचयः पावकाः ॥ ७ ॥

। पदपाठः ।

अस्थुः । ऊं इति । चित्राः । उषसः । पुरस्तात् । मिताः । इव । स्वरवः । अध्वरेषु ।

वि । ऊं इति । व्रजस्य । तमसः । द्वारा । उच्छन्तीः । अव्रन् । शुचयः । पावकाः ॥ ७ ॥

। सायणभाष्यं ।

चित्राश्चायनीया उषसः पुरस्तात्पूर्वस्यां दिश्यस्थुः । तिष्ठन्ति । व्याप्ता इत्यर्थः । तत्र दृष्टान्तः । अध्वरेषु मिताः ज्ञाताः स्वरवो यूपा इव । ते यथा वेद्याः पुरतो भासन्ते तद्वत् । यद्यपि स्वरुशब्दोऽयं यूपविशेषवचनः तथापि तत्सदृशमुपलक्षणमात्रमेतत् । यद्वा

English Translation.

The many-limbed Dawns rise up in the east, like the pillars planted at sacrifices (round the alter), radiant and purifying, they are manifested, opening the gates of the obstructing gloom.

॥ ಸಂಹಿತಾಪಾಠಃ ॥

ಉಚ್ಛಂತೀರದ್ಯ ಚಿತಯಂತ ಭೋಜಾನ್ರಾಧ್ಹೋದೇಯಾಯೋಷಸೋ ಮಘೋನೀಃ ।
ಅಚಿತ್ರೇ ಅಂತಃ ಪಣಯಃ ಸಸಂತ್ವ್ಅಬುಧ್ಯಮಾನಾಸ್ತಮಸೋ ವಿಮಧ್ಯೇ ॥೩॥

॥ ಪದಪಾಠಃ ॥

ಉಚ್ಛಂತೀಃ । ಅದ್ಯ । ಚಿತಯಂತ । ಭೋಜಾನ್ । ರಾಧ್ಹಃ೬ದೇಯಾಯ । ಉಷಸಃ । ಮಘೋನೀಃ ।
ಅಚಿತ್ರೇ । ಅಂತರಿತಿ । ಪಣಯಃ । ಸಸಂತು । ಅಬುಧ್ಯಮಾನಾಃ । ತಮಸಃ । ವಿ೬ಮಧ್ಯೇ ॥ ೩ ॥

॥ ಸಾಯಣಭಾಷ್ಯಂ ॥

ಅದ್ಯಾಸ್ಮಿನ್ದಿನ ಉಚ್ಛಂತೀಸ್ತಮೋ ವಿವಾಸಯಂತ್ಯೋ ಮಘೋನೀರ್ಧನವತ್ಯ ಉಷಸೋ ಭೋಜಾನ್ ಭೋಜಯಿತ್ರ್ಯನ್ಯಜಮಾನಾನ್ ತೇಷಾಂ ರಾಧೋದೇಯಾಯ ಸೋಮಾದಿಧನದಾನಾಯ ಚಿತಯಂತ । ಪ್ರಜ್ಞಾಪಯಂತಿ । ಅಚಿತ್ರೇ೬ಚಾಯನೀಯೇ ತಮಸೋ ವಿಮಧ್ಯೇ । ಅತ್ಯಂತಗಾಢಾಂಧ-ಕಾರ ಇತ್ಯರ್ಥಃ । ತತ್ರ ಪಣಯೋ ವಣಿಜ ಇವಾದಾತಾರೋ೬ಬುಧ್ಯಮಾನಾಃ ಸಸಂತು । ಸ್ವಪಂತು ॥

॥ ಪ್ರತಿಪದಾರ್ಥ ॥

ಅದ್ಯ—ಈ ಯಾಗದ ದಿನ । **ಉಚ್ಛಂತೀಃ**—ಕಗ್ಗತ್ತಲೆಯನ್ನು ನಾಶಪಡಿಸುವವರೂ । **ಮಘೋನೀಃ**—ಧನವಂತರೂ ಆದ । **ಉಷಸಃ**—ಉಷಸ್ಸುಗಳು । **ಭೋಜಾನ್**—ದೇವತೆಗಳಿಗೆ ಆಹಾರವನ್ನರ್ಪಿಸುವ ಯಜಮಾನರನ್ನು । **ರಾಧೋದೇಯಾಯ**—ಸೋಮಾದಿ ಧನವನ್ನರ್ಪಿಸುವುದಕ್ಕಾಗಿ । **ಚಿತಯಂತ**—ಎಚ್ಚರಗೊಳಿಸುತ್ತಾರೆ । **ಪಣಯಃ**—ಕರ್ತವ್ಯಜ್ಞಾನವಿಲ್ಲದ ಲೋಭಿಗಳು । **ಅಚಿತ್ರೇ**—ಜುಗುಪ್ಸಿತವಾದ । **ತಮಸಃ**—ಕಗ್ಗತ್ತಲೆಯ । **ವಿಮಧ್ಯೇ**—ಮಧ್ಯಭಾಗದಲ್ಲಿ । **ಅಬುಧ್ಯಮಾನಾಃ**—ಪ್ರಜ್ಞಾಶೂನ್ಯರಾಗಿ । **ಸಸಂತು**—ಆಲಸ್ಯದಿಂದ ಮಲಗಿ ನಿದ್ರೆಮಾಡಲಿ.

। ಭಾವಾರ್ಥ ।

ಕಗ್ಗತ್ತಲೆಯನ್ನು ನಾಶಪಡಿಸುವವರೂ, ಧನವಂತರೂ ಆದ ಉಷಸ್ಸುಗಳು ಈ ಯಾಗದ ದಿನ ದೇವತೆಗಳಿಗೆ ಆಹಾರವನ್ನರ್ಪಿಸುವ ಯಜಮಾನರನ್ನು ಸೋಮಾದಿಧನವನ್ನರ್ಪಿಸುವುದಕ್ಕಾಗಿ ಎಚ್ಚರಗೊಳಿಸುತ್ತಾನೆ. ಕರ್ತವ್ಯ ಜ್ಞಾನವಿಲ್ಲದ ಲೋಭಿಗಳು ಜುಗುಪ್ಸಿತವಾದ ಕಗ್ಗತ್ತಲೆಯ ಮಧ್ಯಭಾಗದಲ್ಲಿ ಪ್ರಜ್ಞಾಶೂನ್ಯರಾಗಿ ಆಲಸ್ಯದಿಂದ ಮಲಗಿ ನಿದ್ರೆಮಾಡಲಿ

English Translation.

The gloom-dispelling, affluent Dawns animate the pious worshippers to offer (sacrificial) treasure : may the churlish (traffickers) sleep on unawakened, in the unlovely depth of darkness.



॥ ಸಂಹಿತಾಪಾಠಃ ॥

ಕುವಿತ್ಸ ದೇವೀಃ ಸನಯೋ ನವೋ ವಾ ಯಾಮೋ ಬಭೂಯಾದುಷಸೋ ವೋ ಅದ್ಯ ।

ಯೇನಾ ನವಗ್ವೇ ಅಂಗಿರೇ ದಶಗ್ವೇ ಸಪ್ತಾಸ್ಯೇ ರೇವತೀ ರೇವದೂಷ ॥ ೪ ॥

॥ ಪದಪಾಠಃ ॥

ಕುವಿತ್ । ಸಃ । ದೇವೀಃ । ಸನಯಃ । ನವಃ । ವಾ । ಯಾಮಃ । ಬಭೂಯಾತ್ । ಉಷಸಃ । ವಃ । ಅದ್ಯ ।

ಯೇನ । ನವಗ್ವೇ । ಅಂಗಿರೇ । ದಶಗ್ವೇ । ಸಪ್ತಾಸ್ಯೇ । ರೇವತೀಃ । ರೇವತ್ । ಊಷ ॥ ೪ ॥

॥ ಸಾಯಣಭಾಷ್ಯಂ ॥

ಹೇ ದೇವೀರ್ದ್ಯೋತಮಾನಾ ಉಷಸೋ ವೋ ಯುಷ್ಮಾನ್ ಸನಯಃ ಪುರಾಣೋ ನವೋ ವಾ ಯಾಮೋ ಗಮನಸಾಧನಃ ಸ ರಥೋಽದ್ಯಾಸ್ಮಿನ್ಯಾಗದಿನೇ ಕುವಿದ್ಬಹುವಾರಂ ಬಭೂಯಾತ್ । ಭವೇತ್ । ಗಚ್ಛೇದಿತ್ಯರ್ಥಃ । ಯೇನ ರಥೇನ ಹೇ ರೇವತೀರ್ಧನವತ್ಯೋ ಯೂಯಂ ನವಗ್ವೇ ದಶಗ್ವೇ ಸಪ್ತಾಸ್ಯೇ ಸಪ್ತಚ್ಛಂದೋಯುಕ್ತಮುಖೇಽಂಗಿರೇಽಂಗಿರೋಗಣೇ । ತೌ ದ್ವೌ ತತ್ರ ಯೇಽಪ್ಯಂಗಿರಸ್ತೇಷಾಂ ಗಣೇ । ತಥಾನ್ಯತ್ರ ನವಗ್ವೇ ನು ದಶಗ್ವೇ ಆಂಗಿರಸ್ತಮಃ । ಋಗ್ವೇ. ೧೦-೬೨-೬ । ಇತಿ । ರೇವದ್ಧನವದ್ಯಥಾ ಭವತಿ ತಥೋಷ । ವಿಭಾತಂ ಕೃತವತ್ಯಃ ॥ ವಸೇರ್ವ್ಯಚ್ಛನೇಕರ್ಮಣೋ ಲಿಙ್ಯಮ-ಬಹುವಚನಸ್ಯೇದಂ ರೂಪಂ ॥

॥ ಪ್ರತಿಪದಾರ್ಥ ॥

ದೇವೀಃ—ಪ್ರಕಾಶಮಾನರಾದ । **ಉಷಸಃ**—ಎಲೈ ಉಷಸ್ಸುಗಳೇ । **ಯೇನ**—ಯಾವ ರಥದಿಂದ ಬಂದು । **ರೇವತೀಃ**—ಧನವತಿಯರಾದ ನೀವು । **ನವಗ್ವೇ**—ನವಗ್ವನಾಮದಿಂದ ಪ್ರಸಿದ್ಧರೂ । **ದಶಗ್ವೇ**—ದಶಗ್ವನಾಮದಿಂದ ಪ್ರಸಿದ್ಧರೂ । **ಸಪ್ತಾಸ್ಯೇ**—ಸಪ್ತಚ್ಛಂದೋರೂಪವಾದ ಮುಖವುಳ್ಳವರೂ ಆದ । **ಅಂಗಿರೇ**—ಅಂಗಿರಸ್ಸುಗಳ ಸಮೂಹದಲ್ಲಿ । **ರೇವತ್**—ಧನಯುಕ್ತರಾಗುವಂತೆ । **ಊಷ**—ಪ್ರಕಾಶವನ್ನುಂಟುಮಾಡುತ್ತೀರೋ ಅಂತಹ । **ಸನಯಃ**—ಪುರಾತನವಾದುದಾಗಲಿ । **ನವ್ಯೋ ವಾ**—ಅಥವಾ ನೂತನವಾದುದಾಗಲಿ । **ಯಾಮಃ**—ಗಮನಸಾಧನವಾದ । **ಸಃ**—ರಥವು । **ಅದ್ಯ**—ಈ ಯಾಗ ದಿನದಲ್ಲಿ । **ಕುವಿತ್**—ಅನೇಕವೇಳೆ । **ವಃ**—ನಿಮ್ಮನ್ನು ಇಲ್ಲಿಗೆ ಕರೆತರಲು । **ಬಭೂಯಾತ್**—ನಿಮ್ಮಲ್ಲಿಗೆ ಬರಲಿ.

॥ ಭಾವಾರ್ಥ ॥

ಪ್ರಕಾಶಮಾನರಾದ ಎಲೈ ಉಷಸ್ಸುಗಳೇ, ಯಾವ ರಥದಿಂದ ಧನವತಿಯರಾದ ನೀವು ಬಂದು ನವಗ್ವನಾಮದಿಂದ ಪ್ರಸಿದ್ಧರೂ, ದಶಗ್ವನಾಮದಿಂದ ಪ್ರಸಿದ್ಧರೂ ಸಪ್ತಚ್ಛಂದೋರೂಪವಾದ ಮುಖವುಳ್ಳವರೂ ಆದ ಅಂಗೀರಸ್ಸುಗಳ ಸಮೂಹದಲ್ಲಿ ಧನಯುಕ್ತರಾಗುವಂತೆ ಪ್ರಕಾಶಿಸುತ್ತೀರೋ ಅಂತಹ ರಥವು ನಿಮ್ಮನ್ನು ಈ ಯಾಗದಿನದಲ್ಲಿ ಇಲ್ಲಿಗೆ ಕರೆತರಲು ಪುರಾತನವಾದುದಾಗಲಿ ಅಥವಾ ನೂತನವಾದುದಾಗಲಿ ನಿಮ್ಮಲ್ಲಿಗೆ ಅನೇಕವೇಳೆ ಬರಲಿ.

English Translation.

Divine Dawns, may your chariot, whether old or new, be frequent at this day's (worship), wherewith affluent Dawns, possessing riches, (you shine) upon the seven-mouthed (troop of the) Angirasas, the observers of the nine or ten days' rite.

॥ ವಿಶೇಷವಿಷಯಗಳು ॥

ನವಗ್ವೇ, ದಶಗ್ವೇ— **ನವಭಿರ್ಮಾಸೈರ್ಗಚ್ಛಂತೀತಿ ನವಗ್ವಾ । ದಶಭಿರ್ಮಾಸೈರ್ಗಚ್ಛಂತೀತಿ ದಶಗ್ವಾಃ । ಅಂಗಿರಸಾಂ ಸತ್ರಮಾಸೀನಾನಾಂ ಮಧ್ಯೇ ಯೇ ನವಭಿರ್ಮಾಸೈರವಾಪ್ತಫಲಾ ಉತ್ಥಿತಾಸ್ತೇಷಾಂ ನವಗ್ವಾ ಇತಿ ಸಂಜ್ಞಾ । ದಶಭಿರ್ಮಾಸೈರ್ದಶಗ್ವಾ ಇತಿ ಚ ॥** ಅಂಗಿರಾಋಷಿಯ ವಂಶದಲ್ಲಿ ಕೆಲವರು ಸಂವತ್ಸರಕಾಲಮಾಡುವ ಸತ್ರಯಾಗದಲ್ಲಿ ಒಂಭತ್ತುತಿಂಗಳಲ್ಲಿಯೇ ಯಜ್ಞಾನುಷ್ಠಾನದಿಂದ ಸಿದ್ಧಿಯನ್ನು ಪಡೆದಿರುವರು. ಆವರನ್ನು **ಅಂಗಿರಸ್ತಮಾ ನವಗ್ವಾಃ** ಒಂಭತ್ತು ತಿಂಗಳಲ್ಲಿಯೇ ಇಷ್ಟಸಿದ್ಧಿಯನ್ನು ಪಡೆದ ಅಂಗಿರಾಋಷಿ ವಂಶಶ್ರರಲ್ಲಿ ಶ್ರೇಷ್ಠರಾದವರು ಎಂದೂ, ಹತ್ತುತಿಂಗಳಲ್ಲಿ ಇಷ್ಟಸಿದ್ಧಿಯನ್ನು ಪಡೆದ ಅಂಗಿರಾ ಋಷಿವಂಶಶ್ರರನ್ನು **ದಶಗ್ವಾಃ** ಎಂದೂ ಹೇಳುವ ರೂಢಿ ಇದೆ. ಈ ವಿಷಯದಲ್ಲಿ ಪಾಶ್ಚಾತ್ಯ ಪಂಡಿತರು ಈ ಶಬ್ದದ ಅರ್ಥವಿವರಣೆ ಮಾಡುವಾಗ— The term Navagva is applied to a man generally an Angiras, in the highest degree (Angirastama-ಅಂಗಿರಸ್ತಮ) who appears as a mystic race of olden times coupled with, and conceived probably as related to the Angir-

ases they are often associated with the Dasagvas (ದಶಗ್ವ) ಈ ಶಬ್ದಪ್ರಯೋಗವು ಋಗ್ವೇದದ ಅನೇಕ ಋಕ್ಕುಗಳಲ್ಲಿರುವುವು ಕೆಲವು ಉದಾಹರಣೆಗಳನ್ನು ಕೊಡುವೆವು.

ಯೇನಾ ನವಗ್ವೋ ದಧ್ಯಙ್ಙಪೋಣುತೇ ಯೇನ ವಿಪ್ರಾಸ ಆಪಿರೇ ।

(ಋ. ಸಂ. ೯–೧೦–೪೪)

ನವಗ್ವೋ ನು ದಶಗ್ವೋ ಆಂಗಿರಸ್ತಮಃ ಸಚಾ ದೇವೇಷು ಮಂಹತೇ ।

(ಋ. ಸಂ ೧೦–೬೨–೬)

ಸಖಾ ಹ ಯತ್ರ ಸಖಿಭಿರ್ನವಗ್ವೈರಭಿಜ್ಞ್ವಾ ಸತ್ವಭಿರ್ಗಾ ಅನುಗ್ಮನ್ ।

(ಋ. ಸಂ. ೩–೩೯–೫)

ಆಂಗಿರಸೋ ನಃ ಪಿತರೋ ನವಗ್ವಾ ಅಥರ್ವಾಣೋ ಭೃಗವಃ ಸೋಮ್ಯಾಸಃ ॥

(ಋ. ಸಂ. ೧೦–೧೪–೬)

ಸ ಸುಷ್ಟುಭಾ ಸ ಸ್ಟುಭಾ ಸಪ್ತ ವಿಪ್ರೈಃ ಸ್ವರೇಣಾದ್ರಿಂ ಸ್ವರ್ಯೋ ನವಗ್ವೈಃ ।
ಸರಣ್ಯುಭಿಃ ಫಲಗಮಿಂದ್ರ ಶಕ್ರ ವಲಂ ರವೇಣ ದರಯೋ ದಶಗ್ವೈಃ ॥

(ಋ. ಸಂ. ೧–೬೨–೪)

ಇತ್ಯಾದಿ ಅನೇಕ ಋಗ್ವೇದದ ಋಕ್ಕುಗಳಲ್ಲಿಯೂ, ಅಥರ್ವವೇದ ಸಂ ೧೪–೧–೫೬, ೧೮–೩–೨೨ ಮೊದಲಾದ ಮಂತ್ರಗಳಲ್ಲಿಯೂ ಈ ಶಬ್ದಗಳ ಪ್ರಯೋಗವಿದೆ ಇವುಗಳಲ್ಲಿ ಎರಡನೆಯ ಉದಾಹರಣೆಯಲ್ಲಿ ಹೇಳಿರುವ ನವಗ್ವ ಮತ್ತು ದಶಗ್ವ ಎಂಬ ಪ್ರಖ್ಯಾತಿ ನಾಮವನ್ನು ಪಡೆದ ಆಂಗಿರಾಋಷಿವಂಶದಲ್ಲಿ ಶ್ರೀಪ್ಯನಾಪವನು ದೇವತೆಗಳಿಂದಲೂ ಗೌರವಿಸಲ್ಪಡುತ್ತಾನೆ ಎಂಬುದು ಗಮನಾರ್ಹವಾಗಿದೆ.

॥ ಸಂಹಿತಾಪಾಠಃ ॥

ಯೂಯಂ ಹಿ ದೇವೀರ್ಯತಯುಗ್ಭಿರಶ್ವೈಃ ಪರಿಪ್ರಯಾಥ ಭುವನಾನಿ ಸದ್ಯಃ ।
ಪ್ರಬೋಧಯಂತೀರುಷಸಃ ಸಸಂತಂ ದ್ವಿಪಾಚ್ಚತುಷ್ಪಾಚ್ಚರಥಾಯ ಜೀವಂ ॥

॥ ಪದಪಾಠಃ ॥

ಯೂಯಂ । ಹಿ । ದೇವೀಃ । ಯತಯುಗ್ಭಿಃ । ಅಶ್ವೈಃ । ಪರಿಪ್ರಯಾಥ । ಭುವನಾನಿ । ಸದ್ಯಃ ।
ಪ್ರಬೋಧಯಂತೀಃ । ಉಷಸಃ । ಸಸಂತಂ । ದ್ವಿಪಾತ್ । ಚತುಷ್ಪಾತ್ । ಚರಥಾಯ । ಜೀವಂ ॥೫॥

॥ ಸಾಯಣಭಾಷ್ಯಂ ॥

ಹೇ ದೇವೀರ್ದ್ಯೋತಮಾನಾ ಉಷಸೋ ಯೂಯಂ ಹಿ ಖಲು ಯುತೆಯುಗ್ಭಿರ್ಯಜ್ಞ-ಗಾಮಿಭಿರಶ್ವೈರ್ಭುವನಾನಿ ಸದ್ಯಃ ಪರಿಪ್ರಯಾಥ । ಪರಿತಃ ಪ್ರಕೃಷ್ಟಂ ಗಚ್ಛಥ । ಕಿಂ ಕುರ್ವತ್ಯಃ । ಸಸಂತಂ ಸ್ವಪಂತಂ ದ್ವಿಪಾಚ್ಚತುಷ್ಪಾನ್ಮನುಷ್ಯಗವಾದಿಲಕ್ಷಣಂ ಜೀವಂ ಚರಥಾಯ ಚರಣಾಯ ಗಮನಾದಿವ್ಯವಹಾರಾಯ ಪ್ರಬೋಧಯಂತೀಃ ಪ್ರಬೋಧಯಂತ್ಯಃ ಸತ್ಯಃ ಪರಿಪ್ರಯಾಥ ॥

॥ ಪ್ರತಿಪದಾರ್ಥ ॥

ದೇವೀಃ—ಪ್ರಕಾಶಮಾನರಾದ । **ಉಷಸಃ**—ಎಲೈ ಉಷಸ್ಸುಗಳೇ । **ಯೂಯಂ ಹಿ**—ನೀವುಗಳು । **ಸಸಂತಂ**—ನಿದ್ರೆಮಾಡುತ್ತಿರುವ । **ದ್ವಿಪಾತ್**—ಎರಡು ಕಾಲುಗಳುಳ್ಳವೂ । **ಚತುಷ್ಪಾತ್**—ನಾಲ್ಕು ಕಾಲುಗಳುಳ್ಳವೂ ಆದ । **ಜೀವಂ**—ಪ್ರಾಣಿಗಳನ್ನು । **ಚರಥಾಯ**—ಅವುಗಳ ಗಮನಾದಿ ವ್ಯಾಪಾರಕ್ಕಾಗಿ । **ಪ್ರಬೋಧಯಂತೀಃ**—ಎಚ್ಚರಗೊಳಿಸುತ್ತಾ । **ಯುತೆಯುಗ್ಭಿಃ**—ಯಜ್ಞಗಾಮಿಗಳಾದ । **ಅಶ್ವೈಃ**—ಅಶ್ವಗಳೊಡನೆ । **ಭುವನಾನಿ**—ಪ್ರಪಂಚಗಳನ್ನೆಲ್ಲಾ । **ಸದ್ಯಃ**—ಶೀಘ್ರವಾಗಿ । **ಪರಿಪ್ರಯಾಥ**—ಸಂಚರಿಸಿರಿ.

॥ ಭಾವಾರ್ಥ ॥

ಪ್ರಕಾಶಮಾನರಾದ ಎಲೈ ಉಷಸ್ಸುಗಳೇ, ನೀವುಗಳು ನಿದ್ರೆಮಾಡುತ್ತಿರುವ ಎರಡುಕಾಲುಗಳುಳ್ಳವೂ, ನಾಲ್ಕು ಕಾಲುಗಳುಳ್ಳವೂ ಆದ ಪ್ರಾಣಿಗಳನ್ನು ಅವುಗಳ ಗಮನಾದಿ ವ್ಯಾಪಾರಕ್ಕಾಗಿ ಎಚ್ಚರಗೊಳಿಸುತ್ತಾ, ಯಜ್ಞಗಾಮಿಗಳಾದ ಆಶ್ವಗಳೊಡನೆ ಪ್ರಪಂಚಗಳನ್ನೆಲ್ಲಾ ಶೀಘ್ರವಾಗಿ ಸಂಚರಿಸಿರಿ

English Translation.

Divine Dawns, with horses that frequent sacrifices you quickly travel round the regions (of space) awake the sleeping being, weather biped or quadruped, to pursue (his functions).

॥ ಸಂಹಿತಾಪಾಠಃ ॥

ಕ್ವ ಸ್ವಿದಾಸಾಂ ಕತಮಾ ಪುರಾಣೀ ಯಯಾ ವಿಧಾನಾ ವಿದಧುರ್ಭೂಷಣಾಂ।
ಶುಭಂ ಯಚ್ಛುಭ್ರಾ ಉಷಸಶ್ಚರಂತಿ ನ ವಿ ಜ್ಞಾಯಂತೇ ಸದೃಶೀರಜುರ್ಯಾಃ ॥ ೬ ॥

॥ ಪದಪಾಠಃ ॥

ಕ್ವ । ಸ್ವಿತ್ । ಆಸಾಂ । ಕತಮಾ । ಪುರಾಣೀ । ಯಯಾ । ವಿಧಾನಾ । ವಿದಧುಃ । ಭೂಷಣಾಂ ।
ಶುಭಂ । ಯತ್ । ಶುಭ್ರಾಃ । ಉಷಸಃ । ಚರಂತಿ । ನ । ವಿ । ಜ್ಞಾಯಂತೇ । ಸದೃಶೀಃ । ಅಜುರ್ಯಾಃ ॥

॥ ಸಾಯಣಭಾಷ್ಯಂ ॥

ಅಸಾಮುಷಸಾಂ ಮಧ್ಯೇ ಕ್ವ ಸ್ವಿದಭೂದದ್ಯ ಕತಮಾ ಪುರಾಣೀ ಪುರಾತನೀ । ಯಯೋಶ್ ಋಭೂಣಾಂ ಸಂಬಂಧೀನಿ ವಿಧಾನಾ ಚಮಸಾದಿನಿರ್ಮಾಣಾನಿ ವಿದಧುಃ । ಅಕುರ್ವನ್ನೃಭವಃ । ಯದ್ಯಾಶ್ಚೋಷಸಃ ಶುಭ್ರಾ ದೀಪ್ತಾಃ ಶುಭಂ ಚರಂತಿ । ಶೋಭಾಂ ದೀಪ್ತಿಂ ಕುರ್ವಂತಿ । ತಾ ಅಜುರ್ಯಾ ಅಶೀರ್ಣಾ ನಿತ್ಯನೂತನಾ ನ ವಿ ಜ್ಞಾಯಂತೇ । ಯತಃ ಸದೃಶೀಃ ಸದೃಶ್ಯಃ ಸರ್ವೇಷ್ವಪಿ ದಿವಸೇಷ್ವೇಕ-ರೂಪಾ ಅತೋಽದ್ಯತನ್ಯ ಏತಾ ಏತಾಃ ಪುರಾಣ್ಯ ಇತಿ ನ ಜ್ಞಾಯಂತೇ ಉಷಾಸಾದೃಶ್ಯಂ ಸದೃಶೀರದ್ಯ ಸದೃಶೀರಿದು ಶ್ವಃ । ಋಗ್ವೇ ೧-೧೨೩-೪ । ಇತ್ಯತ್ರ ಪ್ರತಿಪಾದಿತಂ ॥

॥ ಪ್ರತಿಪದಾರ್ಥ ॥

ಯೆಯೋಃ—ಯಾವ ಪುರಾತನಳಾದ ಉಷಸ್ಸಿನ ಸಹಾಯದಿಂದ । **ಋಭೂಣಾಂ**—ಋಭುಗಳ । ವಿಧಾನಾ—ಚಮಸಾದಿ ನಿರ್ಮಾಣಕಾರ್ಯಗಳು । ವಿದಧುಃ—ನೆರವೇರಿದವೋ (ಅಂತಹ) । **ಪುರಾಣೀ**—ಪುರಾತನಗಳಾದ ಉಷಸ್ಸು । **ಆಸಾಂ**—ಈ ಅಸಂಖ್ಯಾತವಾದ ಉಷಸ್ಸುಗಳ ನಡುವೆ । **ಕತಮಾ**—ಯಾರು ? **ಕ್ವ ಸ್ವಿತ್**—ಅವಳ ಸ್ಥಾನವೆಲ್ಲಿ । **ಯತ್**—ಯಾವ । **ಉಷಸಃ**—ಉಷಸ್ಸುಗಳು । **ಶುಭ್ರಾಃ**—ಪ್ರಕಾಶ ಮಾನರಾಗಿಯೂ । **ಶುಭಂ**—ಮಂಗಳಾತ್ಮಕರಾಗಿಯೂ । **ಚರಂತಿ**—ಸಂಚರಿಸುತ್ತಾರೆಯೋ (ಅವರು) । **ಅಜುರ್ಯಾಃ**—ಜರಾರಹಿತರಾಗಿಯೂ । **ಸದೃಶೀಃ**—ಒಂದೇರೂಪವುಳ್ಳವರಾಗಿಯೂ ಇರುವುದರಿಂದ । **ನ ವಿ ಜ್ಞಾಯಂತೇ**—ವೈಯುಕ್ತಿಕವಾದ ಭೇದದಿಂದ ಅರಿಯಲ್ಪಡಲಾರರು.

॥ ಭಾವಾರ್ಥ ॥

ಯಾವ ಪುರಾತನಗಳಾದ ಉಷಸ್ಸಿನ ಸಹಾಯದಿಂದ ಋಭುಗಳ ಚಮಸಾದಿ ನಿರ್ಮಾಣಕಾರ್ಯಗಳು ನೆರವೇರಿದವೋ ಅಂತಹ ಪುರಾತನಗಳಾದ ಉಷಸ್ಸು ಈ ಅಸಂಖ್ಯಾತವಾದ ಉಷಸ್ಸುಗಳ್ನನಡುವೆ ಯಾರು? ಅವಳ ಸ್ಥಾನವೆಲ್ಲಿ ? ಯಾವ ಉಷಸ್ಸುಗಳು ಪ್ರಕಾಶಮಾನರಾಗಿಯೂ ಮಂಗಳಾತ್ಮಕರಾಗಿಯೂ ಸಂಚರಿಸುತ್ತಾರೆಯೋ ಜರಾರಹಿತರಾಗಿಯೂ, ಒಂದೇ ರೂಪವುಳ್ಳವರಾಗಿಯೂ ಇರುವುದರಿಂದ ವೈಯುಕ್ತಿಕವಾದ ಭೇದದಿಂದ ಅರಿಯ ಲ್ಪಡಲಾರರು.

English Translation.

Where is that ancient one of those (Dawns), through whom the works of the Ribhus were accomplished? for as the bright Dawns happily proceed, they are not distinguished, being alike and undecaying.

॥ ವಿಶೇಷವಿಷಯಗಳು ॥

ಸದೃಶೀರದ್ಯ ಸದೃಶೀರಿದು ಶ್ವಃ—**ಅಸ್ಮಿನ್ನಹನಿ ಪರಸ್ಪರಂ ಸದೃಶ್ಯಃ । ಪರಸ್ಮಿನ್ನಹನ್ಯಪಿ ಪರಸ್ಪರಂ ಸದೃಶ್ಯ ಏವ । ಅನ್ಯತನ್ಯೋಽಪಿ ಶ್ವಸ್ತನೀಭಿಃ ಸದೃಶ್ಯಃ ಶ್ವಸ್ತನ್ಯಶ್ಚ ಅದ್ಯತನೀಭಿಃ । ಏವಮಹರಂತರೇಣ**

ಸಾದೃಶ್ಯಂ । ಇಲ್ಲಿ ದಿನಗಳಿಗೆ ಪರಸ್ಪರವಾಗಿ ಹೋಲಿಕೆಯನ್ನು ವರ್ಣಿಸಿದೆ. ಇವತ್ತಿನ ಅಹಸ್ಸಿಗೆ (ದಿನಕ್ಕೆ) ನಾಳೆಯ ದಿನವು ಸಮನಾಗಿರುತ್ತದೆ. ನಾಳೆಯ ದಿನಕ್ಕೆ ಇವತ್ತಿನ ದಿನವು ಸಮಾನವು. ನಿನ್ನೆಯ ದಿನಕ್ಕೆ ಇವತ್ತಿನ ದಿನವೂ, ನಾಳೆಯ ದಿನವು ಇವತ್ತಿಗೂ ಸಮಾನವೆಂದು ಪರಸ್ಪರವಾದ ಸಾದೃಶ್ಯವನ್ನು ಇಲ್ಲಿ ವಿವರಿಸಿದೆ ಸೂರ್ಯನ ಗತಿವಿಶೇಷದಿಂದ ಉಂಟಾಗಿರುವ ಪ್ರಕಾಶನ ಸಮಾನ ಧರ್ಮವನ್ನು ನಿಮಿತ್ತಮಾಡಿಕೊಂಡು ಬೇರೆಯ ದಿನಗಳಿಗೂ ಸಾದೃಶ್ಯವನ್ನು ಹೇಳಬಹುದಾಗಿರುತ್ತದೆ ಎಂದು ಅರ್ಥ. ಹೀಗೆ ಇರುವ ಸಾದೃಶ್ಯವನ್ನು ಸಾಯಣರು ವಿವರಿಸಿರುವರು.

ನಕ್ಷತ್ರಗಳು ಕಾಣದಂತೆ ಇರುವಾಗ ಸೂರ್ಯನು ಉದಯವನ್ನು ಹೊಂದುವವರೆಗಿನ ಕಾಲವು ಇಪ್ಪತ್ತೊಂದು ಘಳಿಗೆಗಳಿಂದ ಇಪ್ಪತ್ತಾರು ಘಳಿಗೆಗಳವರೆಗಿನ ಕಾಲವು ಎಂತಲೂ ಆದನ್ನು ರಾತ್ರಿಯ ಕೊನೆಯ ಭಾಗದಲ್ಲಿ ಪ್ರಾಪ್ತವಾಗುವ ಉಷಃಕಾಲವೆಂತಲೂ ವ್ಯವಹಾರಮಾಡುತ್ತಾರೆ ಸೂರ್ಯನು ಪ್ರತಿದಿನದಲ್ಲಿಯೂ ಐದು ಸಾವಿರದ ಐನತ್ತೊಂಭತ್ತು ಯೋಜನಗಳನ್ನು ಮೇರುವಿನ ಸುತ್ತಲೂ ಪ್ರದಕ್ಷಿಣೆಯನ್ನು ಮಾಡುವ ಕ್ರಮದಿಂದ ಸುತ್ತುತ್ತಿರುವನು ಸೂರ್ಯನು ಉದಯಿಸುವುದಕ್ಕೆ ಮುಂಚಿತವಾಗಿ (ಉದಯವನ್ನು ಹೊಂದುವ ಪ್ರದೇಶವಾದ ಲಂಕಾನಗರವೇ ಮೊದಲಾದ ಪ್ರದೇಶಕ್ಕೆ ಸೂರ್ಯನು ಬರುವ ವೇಳೆಗೆ ಮುಂಚಿತವಾಗಿ) ಅವನ ಮುಂದುಗಡೆಯಲ್ಲಿ ಉಷಸ್ಸು ಮೂವತ್ತು ಯೋಜನಗಳನ್ನು ಬಂದಿರುತ್ತದೆ. ಇದರಿಂದ ಸೂರ್ಯನು ಇರುವ ಪ್ರದೇಶದ ಮುಂದುಗಡೆಯಲ್ಲಿ ಮೂವತ್ತು ಯೋಜನಗಳ ದೂರದಲ್ಲಿ ಸೂರ್ಯನ ಉದಯವು ಆದಹಾಗೆ ಕಾಣುತ್ತದೆ. ಈ ಪ್ರಕಾರವಾದ ಸನ್ನಿವೇಶವು ಎಲ್ಲಾ ಪ್ರದೇಶಗಳಲ್ಲಿಯೂ ಸಂಭವಿಸುವುದಾಗಿರುತ್ತದೆ

ಹೀಗೆಯೇ ಉಷಸ್ಸೂ ಕೂಡ ತಾನು ಇರುವ ಪ್ರದೇಶದ ಮುಂದುಗಡೆಯಲ್ಲಿ ಮೂವತ್ತು ಯೋಜನಗಳ ದೂರದಲ್ಲಿರುವ ಪ್ರದೇಶದಲ್ಲಿ ಉದಯವನ್ನು ಹೊಂದಿರುತ್ತದೆ. ಲಂಕಾನಗರವೇ ಮೊದಲಾದ ಎಲ್ಲಾ ಪ್ರದೇಶಗಳಲ್ಲಿಯೂ ಇರುವವರೆಲ್ಲರಿಗೂ ಉಷಸ್ಸಿನ ಉದಯವು ಒಂದೇ ವಿಧವಾಗಿ ಗೋಚರವಾಗುತ್ತದೆ ಎಂದು ತಿಳಿಯಬೇಕು

ಹೀಗೆ ಇರುವಾಗ ಒಂದು ಪ್ರದೇಶದಲ್ಲಿ ಉಷಸ್ಸಿನ ಪ್ರಕಾಶವು ಕಂಡುಬರುವಂತೆಯೇ ಇತರ ಎಲ್ಲಾ ಪ್ರದೇಶಗಳಲ್ಲಿಯೂ ಒಂದೇಕಾಲದಲ್ಲಿ ಒಂದೇ ಸಮನಾದ ಉಷಸ್ಸಿನ ಪ್ರಕಾಶವು ಎಲ್ಲರಿಗೂ ಗೋಚರವಾಗುತ್ತದೆ. ಇದರಿಂದ ಉಷಃಕಾಲವನ್ನು ಪ್ರಾರಂಭಮಾಡಿಕೊಂಡು ದಿನಗಳನ್ನು ಬೇರೆಬೇರೆಯಾಗಿರುವಂತೆ ವ್ಯವಹಾರಮಾಡುವ ಕಾರಣದಿಂದಲೂ, ಆಯಾಯ ಪ್ರದೇಶಗಳು ಬೇರೆಬೇರೆಯಾಗಿರುವುದರಿಂದಲೂ ಒಂದೇ ಉಷಸ್ಸನ್ನು ಬೇರೆಬೇರೆಯಾಗಿ ಇರುವುದೆಂದು ತಿಳಿದು ಉಷಸ್ಸಿನ ಅನೇಕತ್ವವನ್ನೂ ಅವುಗಳಿಗೆ ಪರಸ್ಪರವಾದ ಸಾದೃಶ್ಯವನ್ನೂ (ಹೋಲಿಕೆಯನ್ನೂ) ಇಲ್ಲಿ ವಿವರಿಸಿರುತ್ತದೆ.

ಆಯಾಯ ಪ್ರದೇಶಗಳ ವಿವಕ್ಷೆಯಿಲ್ಲದಿರುವಾಗ ಉಷಸ್ಸು ತನ್ನ ಸ್ವಭಾವದಿಂದ ಪರಿಶುದ್ಧವಾಗಿ ಉದಯವನ್ನು ಹೊಂದುವುದರಿಂದಲೂ, ಆಯಾಯ ಪದಾರ್ಥಗಳೆಲ್ಲವನ್ನೂ ಪರಿಶುದ್ಧವನ್ನಾಗಿ ಮಾಡುವ (ಅಧಿಕವಾದ) ನಿರತಿಶಯವಾದ ಪರಿಶುದ್ಧತೆಯು ಉಷಸ್ಸಿನಲ್ಲಿರುವುದರಿಂದಲೂ, ಉಷಸ್ಸಿನ ಶುಚಿತ್ವ ವಿಷಯದಲ್ಲಿ ಹೆಚ್ಚು ವಿವರಿಸಬೇಕಾದುದಿಲ್ಲ.

॥ संहितापाठः ॥

तां घ्वा ताँ भद्रा उषसः पुरासुरभिष्टिद्युम्ना ऋतजातसत्याः।
यास्वीजानः शशमान उक्थैः स्तुवञ्छंसन्द्रविणं सद्य आप ॥

॥ पदपाठः ॥

ताः । घ्व । ताः । भद्राः । उषसः । पुरा । आसुः । अभिष्टिऽद्युम्नाः । ऋतजातऽसत्याः ।
यासु । ईजानः । शशमानः । उक्थैः । स्तुवन् । शंसन् । द्रविणं । सद्यः । आप ॥ ६ ॥

॥ सायणभाष्यं ॥

ता घ्व । घेति प्रसिद्धौ । ताः ऋलूपकारिण्यस्ता भद्राः कल्याण्यः स्तुत्या वा उषसः पुरा पूर्वमासुः । अभवन् । अभिष्टिद्युम्नाः अभिगमनमात्रेण द्युम्नं धनं यासां ताः । ऋतजातसत्याः । ऋतार्थं यज्ञार्थं जाताश्च ताः सत्याः सत्यफलाश्च तादृश्यः । यासूषसःस्वीजानोऽयागं कुर्वाण उक्थैः शस्त्रैः शशमानः शंसमानः स्तुवन् सामभिः स्तोत्रं निष्पादयन् शंसन् शस्त्राणि कुर्वन् द्रविणं धनं सद्य आप । प्राप्नोति । ता भद्रा इति संबंधः ॥

॥ प्रतिपदार्थ ॥

ईजानः—यज्ञ कर्तनु । **यासु**—यावं उषस्सुगळल्लि । **उक्थैः**—शस्त्रमंत्रगळिंद । **शशमानः**—प्रशंसिसुत्तलू । **स्तुवन्**—स्तुतियन्नु संपादिसुत्तलू । **शंसन्**—स्तोत्रगळन्नु निर्मिसुत्तलू । **द्रविणं**—धनवन्नु । **सद्यः**—ओडनेयिंदे । **आप**—हॊंदुत्तान्नेयो । **ता घ**—ई उषस्सुगळे (उपकारिगळागुत्तारे) । **ताः भद्राः**—अवरे कल्याणात्मरागि आगुत्तारे । **पुरा**—हिंदेयो । **अभिष्टिद्युम्नाः**—आगमनकालदल्लियो धनसंपत्तिनिंद कूडिदवरू । **ऋतजातसत्याः**—यज्ञार्थवागि उत्पन्नरादवरू मत्तु सत्यफलवुळ्ळवरू । **आसन्**—आदरु.

॥ भावार्थः ॥

यज्ञकर्तनु यावं उषस्सुगळन्नु शस्त्रमंत्रगळिंद प्रशंसिसुत्तलू, अवरिगागि स्तुतियन्नु संपादिसुत्तलू शस्त्रमंत्रगळन्नु निर्मिसुत्तलू अवरिंद ओडनेयिंदे धनवन्नु कॊंदुत्तान्नेयो, ई उषस्सुगळे जगदुपकारिगळु. अवरे कल्याणात्मरू कल्याणकारकरू आगिद्दारे. अवरु आरंभ कालदिंदलेयो, तम्म आगमन कालदल्लियेयो धनसंपत्तिनिंद कूडिदवरू, यज्ञार्थवागि उत्पन्नरादवरू, मत्तु सत्यफलवुळ्ळवरू आदरु.

English Translation.

Verily those auspicious Dawns have been of old, rich with desired blessings, truthful (bestowers) of the results of sacrifice, at which the sacrificer, adoring with (silent) praise, glorifying (with hymns), has quickly obtained wealth.

॥ ಸಂಹಿತಾಪಾಠಃ ॥

ತಾ ಆ ಚರಂತಿ ಸಮನಾ ಪುರಸ್ತಾತ್ಸಮಾನತಃ ಸಮನಾ ಪಪ್ರಥಾನಾಃ ।
ಋತಸ್ಯ ದೇವೀಃ ಸದಸೋ ಬುಧಾನಾ ಗವಾಂ ನ ಸರ್ಗಾ ಉಷಸೋ ಜರಂತೇ ॥ ೪ ॥

॥ ಪದಪಾಠಃ ॥

ತಾಃ । ಆ । ಚರಂತಿ । ಸಮನಾ । ಪುರಸ್ತಾತ್ । ಸಮಾನತಃ । ಸಮನಾ । ಪಪ್ರಥಾನಾಃ ।
ಋತಸ್ಯ । ದೇವೀಃ । ಸದಸಃ । ಬುಧಾನಾಃ । ಗವಾಂ । ನ । ಸರ್ಗಾಃ । ಉಷಸಃ । ಜರಂತೇ ॥ ೪ ॥

॥ ಸಾಯಣಭಾಷ್ಯಂ ॥

ತಾ ಉಷಸ ಆ ಸರ್ವತಶ್ಚರಂತಿ । ಸಮನಾ ಸರ್ವತಃ ಸಮಾನಾಃ ಪುರಸ್ತಾತ್ಪೂರ್ವಸ್ಯಾಂ ದಿಶಿ ಸಮಾನತಃ ಸಮಾನಾದ್ದೇಶಾದಂತರಿಕ್ಷಾತ್ಸಮನಾ ಸರ್ವತಃ ಪಪ್ರಥಾನಾಃ ಪ್ರಥಮಾನಾ ಋತಸ್ಯ ಯಜ್ಞಸ್ಯ ಸದಸಃ ಸದಃ । ತತ್ರತ್ಯಮ್ಯರ್ಷಿಸ್ಥವಿರಾದಿಕಮಿತ್ಯರ್ಥಃ । ಬುಧಾನಾ ಬೋಧಯಂತ್ಯಃ ॥ ಅಂತರ್ಭಾವಿತಣ್ಯರ್ಥೋ೭ಯಂ ॥ ಏವಂ ಮಹಾನುಭಾವಾ ಉಷಸೋ ಜರಂತೇ । ಸ್ತೂಯಂತೇ । ಗವಾಂ ಸರ್ಗಾ ನ ಉದಕಾನಾಂ ಸೃಷ್ಟಯ ಇವ । ಗವಾಂ ಸರ್ಗಾ ನ ರಶ್ಮಯಃ । ಋಗ್ವೇ. ೪-೫೨-೫ । ಇತಿ ಹಿ ಶ್ರುತಂ । ತಾ ಯಥಾ ಸರ್ವತ್ರ ಪ್ರಸಂಗಾದುಪಕಾರಕತ್ವಾಚ್ಚ ಸ್ತೂಯಂತೇ ತದ್ವತ್ ॥

॥ ಪ್ರತಿಪದಾರ್ಥ ॥

ಸಮಾನತಃ—ಅಂತರಿಕ್ಷಾಖ್ಯವಾದ ಸಮಾನಪ್ರದೇಶದಲ್ಲಿ। ಪುರಸ್ತಾತ್—ಪೂರ್ವದಿಕ್ಕಿನಲ್ಲಿ। ಸಮನಾ—ಒಂದೇ ವಿಧವಾಗಿ। ಪಪ್ರಥಾನಾಃ—ಪ್ರಸಿದ್ಧರಾದವರೂ। ಸಮನಾ—ಒಂದೇ ವಿಧವಾದ ರೂಪವುಳ್ಳವರೂ ಆದ। ತಾಃ—ಆ ಉಷಸ್ಸುಗಳು। ಆ ಚರಂತಿ—ಸರ್ವತ್ರ ಪ್ರಸರಿಸುತ್ತಾರೆ। ಋತಸ್ಯ—ಯಜ್ಞದ। ಸದಸಃ—

ಪರಿಷತ್ತನ್ನು ಎಂದರೆ ಋತ್ವಿಗಾದಿಗಳನ್ನು । **ಬುಧಾನಾಃ**—ಅವಂವರ ಕರ್ಮನಿರ್ವಹಣಕ್ಕಾಗಿ ಎಚ್ಚರಿಸುತ್ತಾ । **ದೇವೀಃ**—ದೇವತಾತ್ಮರಾದ । **ಉಷಸಃ**—ಉಷಸ್ಸುಗಳು । **ಸರ್ಗಾಃ**—ಉದಕಸೃಷ್ಟಿಗೆ ಕಾರಣಗಳಾದ । **ಗವಾಂ ನ**—ರಶ್ಮಿಗಳಂತೆ । **ಜರಂತೇ**—ಸ್ತುತಿಸಲ್ಪಡುತ್ತಾರೆ.

॥ ೪ ಪಾರ್ಶ್ವ ॥

ಆಂತರಿಕ್ಷಾತ್ಮ್ಯವಾದ ಸಮಾನಪ್ರದೇಶದಲ್ಲಿ ಪೂರ್ವದಿಕ್ಕಿನಲ್ಲಿ ಒಂದೇ ರೀತಿಯಾಗಿ ಪ್ರಸಿದ್ಧರಾದವರೂ, ಒಂದೇ ವಿಧವಾದ ರೂಪವುಳ್ಳವರೂ ಆದ ಉಷಸ್ಸುಗಳು ಸರ್ವತ್ರ ಪ್ರಸರಿಸುತ್ತಾರೆ. ಯಜ್ಞದ ಸದಸ್ಸನ್ನು ಎಂದರೆ ಋತ್ವಿಗಾದಿಗಳನ್ನು ಅವರವರ ಕರ್ಮನಿರ್ವಹಣಕ್ಕಾಗಿ ಎಚ್ಚರಿಸುತ್ತಾ, ದೇವತಾತ್ಮರಾದ ಉಷಸ್ಸುಗಳು ಉದಕಸೃಷ್ಟಿಗೆ ಕಾರಣಗಳಾದ ರಶ್ಮಿಗಳಂತೆ ಸ್ತುತಿಸಲ್ಪಡುತ್ತಾರೆ

English Translation.

They spread around of similar form, (coming) from the east, (coming) from the same region alike renowned . the divine Dawns, arousing the assembly of the sacrifice, are glorified like the (rays) creative of the waters.

। ಸಂಹಿತಾಪಾಠಃ ।

ತಾ ಇನ್ನ್ವೇ॑ವ ಸಮನಾ ಸಮಾನೀರಮಿತವರ್ಣಾ ಉಷಸಶ್ಚರಂತಿ ।
ಗೂಹಂತೀರಭ್ವಮಸಿತಂ ರುಶದ್ಭಿಃ ಶುಕ್ರಾಸ್ತನೂಭಿಃ ಶುಚಯೋ ರುಚಾನಾಃ॥

॥ ಪದಪಾಠಃ ॥

ತಾಃ । ಇತ್ । ನು । ಏವ । ಸಮನಾ । ಸಮಾನೀಃ । ಅಮಿತವರ್ಣಾಃ । ಉಷಸಃ । ಚರಂತಿ ।
ಗೂಹಂತೀಃ । ಅಭ್ವಂ । ಅಸಿತಂ । ರುಶತ್ಭಿಃ । ಶುಕ್ರಾಃ । ತನೂಭಿಃ । ಶುಚಯಃ । ರುಚಾನಾಃ ॥೯॥

। ಸಾಯಣಭಾಷ್ಯಂ ॥

ತಾ ಏವೋಷಸಃ । ಇದಿತಿ ಪೂರಣಃ । ನು ಅದ್ಯ ಸಮನಾ ಸಮಾನಾಃ । ಏಕಧೇತ್ಯರ್ಥಃ । ಸಮಾನೀರೇಕರೂಪಾ ಅಮಿತವರ್ಣಾ ಅಹಿಂಸಿತವರ್ಣಾ ಅಪರಿಮಿತವರ್ಣಾ ವಾ ಉಷಸಶ್ಚರಂತಿ ಸರ್ವತಃ । ಕಿಂ ಕುರ್ವತ್ಯಃ । ಅಭ್ವಂ । ಮಹನ್ನಾಮೈತತ್ । ಅತಿಮಹದಸಿತಂ ಕೃಷ್ಣಂ ರೂಪಂ ಗೂಹಂತೀರ್ಗೋಪಯಂತ್ಯೋ ರುಶದ್ಭಿಃ ರೋಚಮಾನೈಸ್ತನೂಭಿಃ ಸ್ವಶರೀರೈಃ ಶುಕ್ರಾ ದೀಪ್ತಾಃ ಶುಚಯಃ ಶುದ್ಧಾ ರುಚಾನಾ ರೋಚಮಾನಾ ರೋಚಯಂತ್ಯೋ ವಾ ॥

॥ ಪ್ರತಿಪದಾರ್ಥ ॥

ತಾ ಏವ ಉಷಸಃ—ಪ್ರಸಿದ್ಧರಾದ ಅದೇ ಉಷಸ್ಸುಗಳು । **ನು**—ಈಗ । **ಸಮನಾ**—ಒಂದೇ ವಿಧವಾಗಿಯೂ । **ಸಮಾನೀಃ**—ಒಂದೇ ರೂಪವುಳ್ಳವರಾಗಿಯೂ । **ಅಮಿತವರ್ಣಾಃ**—ಅಪರಿಮಿತವಾದ ವರ್ಣವುಳ್ಳವರಾಗಿಯೂ । **ರುಶದ್ಭಿಃ**—ಪ್ರಕಾಶಮಾನಗಳಾದ । **ತನೂಭಿಃ**—ತಮ್ಮ ಶರೀರಗಳಿಂದ । **ಶುಕ್ರಾಃ**—ಪ್ರಕಾಶಮಾನರಾಗಿಯೂ । **ಶುಚಯಃ**—ಶುದ್ಧರಾಗಿಯೂ । **ರುಚಾನಾಃ**—ಆಕರ್ಷಕರಾಗಿಯೂ ಇದ್ದು । **ಅಭ್ಭಂ**—ಮಹತ್ತಾದ । **ಅಸಿತಂ**—ಕಗ್ಗತ್ತಲೆಯನ್ನು । **ಗೂಹಂತೀಃ**—ಮರೆಮಾಡುತ್ತಾ । **ಚರಂತಿ**—ಸುತ್ತಲೂ ಸಂಚರಿಸುತ್ತಾರೆ.

॥ ಭಾವಾರ್ಥ ॥

ಪ್ರಸಿದ್ಧರಾದ ಅದೇ ಉಷಸ್ಸುಗಳು ಒಂದೇ ವಿಧವಾಗಿಯೂ, ಒಂದೇ ರೂಪವುಳ್ಳವರಾಗಿಯೂ, ಅಪರಿಮಿತವಾದ ವರ್ಣವುಳ್ಳವರಾಗಿಯೂ, ಆರೋಚಕಗಳಾದ ತಮ್ಮ ಶರೀರಗಳಿಂದ ಪ್ರಕಾಶಮಾನರಾಗಿಯೂ, ಶುದ್ಧರಾಗಿಯೂ, ಆಕರ್ಷಕರಾಗಿಯೂ ಇದ್ದು ಮಹತ್ತಾದ ಕಗ್ಗತ್ತಲೆಯನ್ನು ಮರೆಮಾಡುತ್ತಾ ಸುತ್ತಲೂ ಸಂಚರಿಸುತ್ತಾರೆ.

English Translation.

Those Dawns proceed verily all alike, of similar form, of infinate hues, pure, bright, illumining, concealing by their radiant persons the very great gloom

॥ ಸಂಹಿತಾಪಾಠಃ ॥

ರಯಿಂ ದಿವೋ ದುಹಿತರೋ ವಿಭಾತೀಃ ಪ್ರಜಾವಂತಂ ಯಚ್ಛತಾಸ್ಮಾಸು ದೇವೀಃ ।
ಸ್ಯೋನಾದಾ ವಃ ಪ್ರತಿಬುಧ್ಯಮಾನಾಃ ಸುವೀರ್ಯಸ್ಯ ಪತಯಃ ಸ್ಯಾಮ ॥

॥ ಪದಪಾಠಃ ॥

ರಯಿಂ । ದಿವಃ । ದುಹಿತರಃ । ವಿಭಾತೀಃ । ಪ್ರಜಾವಂತಂ । ಯಚ್ಛತ । ಅಸ್ಮಾಸು । ದೇವೀಃ ।
ಸ್ಯೋನಾತ್ । ಆ । ವಃ । ಪ್ರತಿಬುಧ್ಯಮಾನಾಃ । ಸುವೀರ್ಯಸ್ಯ । ಪತಯಃ । ಸ್ಯಾಮ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ದಿವೋ ದುಹಿತರೋ ದ್ಯೋತಮಾನಸ್ಯಾದಿತ್ಯಸ್ಯ ದುಹಿತೃಸ್ಥಾನೀಯಾ ವಿಭಾತೀರ್ವಿಭಾತ್ಯೋ ವಿಶೇಷೇಣ ಭಾನಂ ಕುರ್ವತ್ಯೋಽಸ್ಮಾಸು ಪ್ರಜಾವಂತಂ ರಯಿಂ ಪುತ್ರಾದ್ಯುಪೇತಂ ಧನಂ ಯಚ್ಛತ ।

ತ್ತ । ಹೇ ದೇವೀರ್ದೇವ್ಯಃ ಸ್ಯೋನಾತ್ಸುಖಾನ್ನಿಮಿತ್ತಭೂತಾದ್ವೋ ಯುಷ್ಮಾನ್ ಪ್ರತಿಬುಧ್ಯಮಾನಾಃ
ತಿಬೋಧಯಂತೋ ವಯಂ ಸುವೀರ್ಯಸ್ಯ ಪತಯಃ ಸ್ಯಾಮ । ಪುತ್ರಾದಿಸಹಿತಸ್ಯ ಧನಸ್ಯ ಪಾಲಕಾ
ವೇಮ ॥

॥ ಪ್ರತಿಪದಾರ್ಥ ॥

ದಿವಃ—ಪ್ರಕಾಶಮಾನನಾದ ಆದಿತ್ಯನಿಗೆ । **ದುಹಿತರಃ**—ಪುತ್ರೀರೂಪರೂ । **ವಿಭಾತೀಃ**—ವಿಶೇಷ
ೀತಿಯಿಂದ ಕಂಗೊಳಿಸುವವರೂ ಆದ ಎಲೈ ಉಷಸ್ಸುಗಳೇ । **ಅಸ್ಮಾಸು**—ನಮ್ಮಲ್ಲಿ । **ಪ್ರಜಾವಂತಂ**—ಪುತ್ರಾದಿ
ಂದ ತುಂಬಿದ । **ರಯಿಂ**—ಧನವನ್ನು । **ಯಚ್ಛತ**—ಒದಗಿಸಿಕೊಡಿರಿ । **ದೇವೀಃ**—ದೇವತಾತ್ಮರಾದ
ಉಷಸ್ಸುಗಳೇ । **ಸ್ಯೋನಾತ್**—ಸುಖದ ನಿಮಿತ್ತವಾಗಿ । **ವಃ**—ನಿಮ್ಮನ್ನು । **ಪ್ರತಿಬುಧ್ಯಮಾನಾಃ**—ಎಚ್ಚರ
ಗೊಳ್ಳಿಸುವ ನಾವು । **ಸುವೀರ್ಯಸ್ಯ**—ಶಕ್ತಿಯುತವಾದ ಪುತ್ರಾದಿ ಧನಕ್ಕೆ । **ಪತಯಃ**—ಒಡೆಯರಾಗಿ ।
ಸ್ಯಾಮ—ಆಗುವಂತಾಗಲಿ

॥ ಭಾವಾರ್ಥ ॥

ಪ್ರಕಾಶಮಾನನಾದ ಆದಿತ್ಯನಿಗೆ ಪುತ್ರೀರೂಪರೂ, ವಿಶೇಷರೀತಿಯಿಂದ ಕಂಗೊಳಿಸುವವರೂ ಆದ
ಉಷಸ್ಸುಗಳೇ, ನಮಗೆ ಸತ್ಪುತ್ರಾದಿಗಳಿಂದ ತುಂಬಿದ ಧನವನ್ನು ಒದಗಿಸಿಕೊಡಿರಿ. ದೇವತಾತ್ಮರಾದ ಉಷಸ್ಸುಗಳೇ,
ಸುಖದ ನಿಮಿತ್ತವಾಗಿ ನಿಮ್ಮನ್ನು ಎಚ್ಚರಗೊಳ್ಳಿಸುವ ನಾವು ಶಕ್ತಿಯುತವಾದ ಪುತ್ರಾದಿ ಧನಕ್ಕೆ ಒಡೆಯರಾಗಿ
ಆಗುವಂತಾಗಲಿ

English Translation.

Divine, resplendent daughters of heaven, bestow upon us wealth, comprehending progeny · awaking you for our benifit, may we be the lords of excellent decendants.

॥ ಸಂಹಿತಾಪಾಠಃ ॥

ತದ್ವೋ ದಿವೋ ದುಹಿತರೋ ವಿಭಾತೀರುಪ ಬ್ರುವ ಉಷಸೋ ಯಜ್ಞ-
ಕೇತುಃ ।
ವಯಂ ಸ್ಯಾಮ ಯಶಸೋ ಜನೇಷು ತದ್ದ್ಯೌಶ್ಚ ಧತ್ತಾಂ ಪೃಥಿವೀ ಚ
ದೇವೀ ॥ ೧೧ ॥

॥ ಪದಪಾಠಃ ॥

ತತ್ । ವಃ । ದಿವಃ । ದುಹಿತರಃ । ವಿಭಾತೀಃ । ಉಷಃ । ಬ್ರುವೇ । ಉಷಸಃ । ಯಜ್ಞಕೇತುಃ ।

ವಯಂ । ಸ್ಯಾಮ । ಯಶಸಃ । ಜನೇಷು । ತತ್ । ದ್ಯೌಃ । ಚ । ಧತ್ತಾಂ । ಪೃಥಿವೀ । ಚ । ದೇವೀ ॥೧೧॥

॥ ಸಾಯಣಭಾಷ್ಯಂ ॥

ತದ್ಯೋ ದಿವ ಇತಿ ವೈಷ್ಣವ್ಯಯೋಂ ಜಪೇತ್ ॥

ಹೇ ದಿವೋ ದುಹಿತರೋ ಹೇ ಉಷಸೋ ವಿಭಾತೀರ್ವೋ ಯುಷ್ಮಾನ್ ತದುತ್ತರಾರ್ಧಪ್ರಥಮಪಾದೇನ ವಕ್ಷ್ಯಮಾಣಂ ಫಲಂ ಯಜ್ಞಕೇತುಃ । ಯಜ್ಞ ಏವ ಕೇತುಃ ಪ್ರಜ್ಞಾಪಕೋ ಯಸ್ಯ ತಾದೃಶೋಽಹಮುಷಶ ಬ್ರುವೇ । ಉಷೇತ್ಯ ಬ್ರವೀಮಿ । ಅಥ ಬಹುವದುಚ್ಯತೇ । ವಯಂ ಸ್ತುವಂತೋ ಜನೇಷ್ವಸ್ಮತ್ಸಮಾನೇಷು ಮಧ್ಯೇ ಯಶಸಃ ಕೀರ್ತೇರನ್ನಸ್ಯ ವಾ ಸ್ವಾಮಿನಃ ಸ್ಯಾಮ । ತದ್ಯಜ್ಞೋ ದ್ಯೌಃ ಪೃಥಿವೀ ಚ ದೇವೀ ಧತ್ತಾಂ ಧಾರಯತಾಂ ॥

॥ ಪ್ರತಿಪದಾರ್ಥ ॥

ದಿವಃ—ದ್ಯುಲೋಕಸಂಬಂಧಿಯಾದ ಆದಿತ್ಯನ । **ದುಹಿತರಃ**—ಪುತ್ರಿಯರಾದ । **ಉಷಸಃ**—ಎಲೈ ಉಷಸ್ಸುಗಳೇ । **ಯಜ್ಞಕೇತುಃ**—ಯಜ್ಞವೇ ಪ್ರಜ್ಞಾಪಕವಾಗಿ ಉಳ್ಳ ನಾನು । **ವಿಭಾತೀಃ**—ಪ್ರಕಾಶಮಾನರಾದ । **ವಃ**—ನಿಮ್ಮನ್ನು । **ತತ್**—ನನ್ನ ಉದ್ದಿಶ್ಯವನ್ನು ಕುರಿತು । **ಉಷ ಬ್ರುವೇ**—ನಿಮ್ಮನ್ನು ಸಮೀಪಿಸಿ ಪ್ರಾರ್ಥಿಸಿ ಕೇಳುತ್ತೇನೆ । **ವಯಂ**—ಸ್ತೋತೃಗಳಾದ ನಾವು । **ಜನೇಷು**—ನಮ್ಮ ಸಮಾನರಾದ ಜನರ ನಡುವೆ । **ಯಶಸಃ**—ಕೀರ್ತಿಗೆ ಅಥವಾ ಅನ್ನಕ್ಕೆ ಒಡೆಯರಾಗಿ । **ಸ್ಯಾಮ**—ಆಗುವಂತಾಗಲಿ । **ತತ್**—ನಮ್ಮ ಆ ಅನ್ನವನ್ನು । **ದ್ಯೌಃ**—ದ್ಯುಲೋಕವೂ । **ದೇವೀ**—ದೇವತಾತ್ಮಳಾದ । **ಪೃಥಿವೀ ಚ**—ಪೃಥಿವಿಯೂ ಸಹ । **ಧತ್ತಾಂ**—ಧರಿಸಲಿ.

॥ ಭಾವಾರ್ಥ ॥

ದ್ಯುಲೋಕಸಂಬಂಧಿಯಾದ ಆದಿತ್ಯನ ಪುತ್ರಿಯರಾದ ಉಷಸ್ಸುಗಳೇ, ಯಜ್ಞವೇ ಪ್ರಜ್ಞಾಪಕವಾಗಿ ಉಳ್ಳ ನಾನು ಪ್ರಕಾಶಮಾನರಾದ ನಿಮ್ಮಲ್ಲಿ ನನ್ನ ಉದ್ದಿಶ್ಯವನ್ನು ಕುರಿತು ನಿಮ್ಮನ್ನು ಸಮೀಪಿಸಿ ಪ್ರಾರ್ಥಿಸಿ ಕೇಳುತ್ತೇನೆ ಸ್ತೋತೃಗಳಾದ ನಾವು ನಮಗೆ ಸಮಾನರಾದ ಜನರ ನಡುವೆ ಅನ್ನಸಂಪತ್ತಿಗೆಲ್ಲ ಒಡೆಯರಾಗಿ ಆಗುವಂತಾಗಲಿ ನಮ್ಮ ಆ ಅನ್ನಸಂಪತ್ತನ್ನು ದ್ಯುಲೋಕವೂ ದೇವತಾತ್ಮಗಳಾದ ಪೃಥಿವಿಯೂ ಸಹ ಧರಿಸಲಿ.

English Translation.

Daughters of heaven, resplendent Dawns, I address you (as) the announcer of the sacrifice : may we be (the possessors) of celebrity amongst men, and may heaven and the divine earth perpetuate (it).

ಐವತ್ತೈರಡನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಪ್ರತಿ ಷ್ಯೇತಿ ಸಪ್ತರ್ಚಂ ಸಪ್ತಮಂ ಸೂಕ್ತಂ ಗಾಯತ್ರಮುಷೋದೇವತಾಕಂ । ಪ್ರತಿ ಷ್ಯಾ ಸಪ್ತ ಗಾಯತ್ರಮಿತ್ಯನುಕ್ರಮಣಿಕಾ ॥ ಪ್ರಾತರನುವಾಕ ಉಷಸ್ಯೇ ಕ್ರತೌ ಗಾಯತ್ರೇ ಛಂದಸ್ಯಾಶ್ವಿನಶಸ್ತ್ರೇ ಚೇದಂ ಶಸ್ಯಂ । ಆಥೋಷಸ್ಯಃ ಪ್ರತಿ ಷ್ಯಾ ಸೂನರೀ । ಆ. ೪-೧೪ । ಇತಿ ಹಿ ಸೂತ್ರಿತಂ ॥

ಅನುವಾದವು—**ಪ್ರತಿ ಷ್ಯಾ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಾಮದೇವನು ಋಷಿಯು , ಉಷಸ್ಸು ದೇವತೆಯು , ಗಾಯತ್ರೀ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಪ್ರತಿ ಷ್ಯಾ ಸಪ್ತ ಗಾಯತ್ರಂ** ಎಂದು ಹೇಳಿರುವುದು. ಪ್ರಾತರನುವಾಕಮಂತ್ರಪಠನ ಕಾಲದಲ್ಲಿ ಉಷಸ್ಯಕ್ರತುಸಂಬಂಧವಾದ ಗಾಯತ್ರೀ ಛಂದಸ್ಸಿನ ಋಕ್ಕುಗಳಿಗಾಗಿಯೂ ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ—**ಆಥೋಷಸ್ಯಃ ಪ್ರತಿ ಷ್ಯಾ ಸೂನರೀ** ಎಂಬ ಸೂತ್ರದಿಂದ (ಆ ೪-೧೪) ವಿವೃತವಾಗಿರುವುದು

ಸೂಕ್ತ—೫೨

ಮಂಡಲ—೪ ॥ ಅನುವಾಕ—೫ ॥ ಸೂಕ್ತ—೫೨ ॥
ಅಷ್ಟಕ—೩ ॥ ಅಧ್ಯಾಯ—೮ ॥ ವರ್ಗ—೩ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
॥ ಋಷಿಃ—ವಾಮದೇವಃ ॥
॥ ದೇವತಾ—ಉಷಾಃ ॥
॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪ್ರತಿ ಷ್ಯಾ ಸೂನರೀ ಜನೀ ವ್ಯಚ್ಛಂತೀ ಪರಿ ಸ್ವಸುಃ ।
ದಿವೋ ಅದರ್ಶಿ ದುಹಿತಾ ॥ ೧ ॥

॥ ಪದಪಾಠಃ ॥

ಪ್ರತಿ । ಸ್ಯಾ । ಸೂನರೀ । ಜನೀ । ವ್ಯಉಚ್ಛಂತೀ । ಪರಿ । ಸ್ವಸುಃ ।
ದಿವಃ । ಅದರ್ಶಿ । ದುಹಿತಾ ॥ ೧ ॥

॥ ಸಾಯಣಭಾಷ್ಯಂ ॥

ಸ್ಯಾ ಸಾ ಸಂಸ್ತುಯಮಾನಾ ಸೂನರೀ ಸುಷ್ಠು ಪ್ರಾಣಿನಾಂ ನೇತ್ರೀ ಜನೀ ಜನಯಿತ್ರೀ ಫಲಾನಾಂ ಸ್ವಸುಃ ಸಸ್ಯಸ್ಥಾನೀಯಾಯಾ ರಾತ್ರೇಃ ಪರಿ ಉಪರಿಭಾಗೇ ರಾತ್ರಿಪರ್ಯವಸಾನಕಾಲೇ ವ್ಯುಚ್ಛಂತೀ ತಮೋ ವಿನಾಶಯಂತೀ । ಸ್ವಸಾ ಸ್ವಸ್ರೇ ಜ್ಯಾಯಸ್ಯೈ । ಋಗ್ವೇ. ೧-೧೨೪-೪ । ಇತ್ಯುಕ್ತಂ । ದಿವೋ ದ್ಯೋತಮಾನಸ್ಯಾದಿತ್ಯಸ್ಯ ದುಹಿತೋಷಾಃ ಪತ್ಯದರ್ಶಿ । ಪ್ರತಿದೃಶ್ಯತೇ ಸರ್ವೈಃ ॥

॥ ಪ್ರತಿಪದಾರ್ಥ ॥

ದಿವಃ—ಪ್ರಕಾಶಮಾನನಾದ ಆದಿತ್ಯನ । **ದುಹಿತಾ**—ದುಹಿತೃರೂಪಳೂ । **ಸ್ಯಾ**—ಪ್ರಶಸ್ಯಳೂ । **ಸೂನರೀ**—ಪ್ರಾಣಿಗಳಿಗೆ ಶ್ರೇಷ್ಠವಾದ ನೇತ್ರಿಯೂ । **ಜನೀ**—ಫಲಗಳಿಗೆ ಉತ್ಪಾದಕಳೂ ಆದ ಉಷೋದೇವಿಯು । **ಸ್ವಸುಃ**—ತನ್ನ ಸಹೋದರಿಯಾದ ರಾತ್ರಿಯ । **ಪರಿ**—ಕೊನೆಯ ಭಾಗದಲ್ಲಿ । **ವ್ಯುಚ್ಛಂತೀ**—ತಮಸ್ಸನ್ನು ನಾಶಪಡಿಸುತ್ತಾ । **ಪ್ರತಿ ಅದರ್ಶಿ**—ಎಲ್ಲರಿಂದಲೂ ನೋಡಲ್ಪಡುತ್ತಾಳೆ.

॥ ಭಾವಾರ್ಥ ॥

ಪ್ರಕಾಶಮಾನನಾದ ಆದಿತ್ಯನ ದುಹಿತೃರೂಪಳೂ, ಪ್ರಶಸ್ಯಳೂ, ಪ್ರಾಣಿಗಳಿಗೆ ಶ್ರೇಷ್ಠವಾದ ನೇತ್ರಿಯೂ, ಫಲಗಳಿಗೆ ಉತ್ಪಾದಕಳೂ ಆದ ಉಷೋದೇವಿಯು ತನ್ನ ಸಹೋದರಿಯಾದ ರಾತ್ರಿಯ ಕೊನೆಯ ಭಾಗದಲ್ಲಿ ತಮಸ್ಸನ್ನು ನಾಶಪಡಿಸುತ್ತಾ ಎಲ್ಲರಿಗೂ ಗೋಚರಳಾಗುತ್ತಾಳೆ

English Translation.

The daughter of heaven has been seen, the kind conductress (of men), the parent (of benefits), shedding radiance upon (the departure of her) sister night.

॥ ಸಂಹಿತಾಪಾಠಃ ॥

ಅಶ್ವೇ॑ವ ಚಿತ್ರಾರು॒ಷೀ ಮಾ॒ತಾ ಗವಾ॑ಮೃತಾವ॒ರೀ ।
ಸಖಾ॑ಭೂದ॒ಶ್ವಿ॒ನೋರು॒ಷಾಃ ॥ ೨ ॥

॥ ಪದಪಾಠಃ ॥

ಅಶ್ವಾ॑ಇವ । ಚಿತ್ರಾ । ಅರು॑ಷೀ । ಮಾ॒ತಾ । ಗವಾ॑ಂ । ಋ॒ತ॒ವ॒ರೀ ।
ಸಖಾ॑ । ಅ॒ಭೂ॒ತ್ । ಅ॒ಶ್ವಿ॒ನೋಃ । ಉ॒ಷಾಃ ॥ ೨ ॥

। ಸಾಯಣಭಾಷ್ಯಂ ।

अश्वेव चित्रा रुशदेयरुषी अरोचमाना गवां रश्मीनां मातेर्म्यश्री यतावरी यज्ञवत्युषा अश्विनोः सखा समानख्याना सह स्तुयमानाभूत्। भवति। अश्विनोरुषसा सह स्तुयमानत्वात्सदृक्षं परस्परं ॥

। ಪ್ರತಿಪದಾರ್ಥ ।

ಅಶ್ವೇವ—ಒಳ್ಳೆಯ ಜಾತ್ಯಶ್ವದಂತೆ । **ಚಿತ್ರಾ**—ಆಕರ್ಷಕಳೂ । **ಅರುಷೀ**—ಹೊಂಬಣ್ಣವುಳ್ಳವಳೂ । **ಗವಾಂ**—ರಶ್ಮಿಗಳ । **ಮಾತಾ**—ನಿರ್ಮಾತ್ರಿಯೂ (ಜನನಿಯೂ) । **ಯತಾವರೀ**—ಯಜ್ಞವತಿಯೂ ಆದ । **ಉಷಾಃ**—ಉಷೋದೇವಿಯು । **ಅಶ್ವಿನೋಃ**—ಅಶ್ವಿನೀದೇವತೆಗಳಿಗೆ । **ಸಖಾ**—ಸಮಾನವಾದ ಪೂಜ್ಯತೆಯುಳ್ಳವಳಾಗಿ । **ಅಭೂತ್**—ಆಗುತ್ತಾಳೆ.

। ಭಾವಾರ್ಥ ।

ಒಳ್ಳೆಯ ಜಾತ್ಯಶ್ವದಂತೆ ಆಕರ್ಷಕಳೂ, ಹೊಂಬಣ್ಣವುಳ್ಳವಳೂ, ರಶ್ಮಿಗಳ ಜನನಿಯೂ, ಯಜ್ಞವತಿಯೂ ಆದ ಉಷೋದೇವಿಯು ಅಶ್ವಿನೀದೇವತೆಗಳಿಗೆ ಸಮಾನವಾದ ಪೂಜ್ಯತೆಯುಳ್ಳವಳಾಗಿ ಆಗುತ್ತಾಳೆ. ಎಂದರೆ, ಯಜ್ಞದಲ್ಲಿ ಅವರೊಂದಿಗೆ ಭಾಗವನ್ನು ವಹಿಸುತ್ತಾಳೆ.

English Translation

Like a beautiful mare, the radiant mother of the rays of light, the object of sacrifice, (she) is friend of the Aswins.

। ಸಂಹಿತಾಪಾಠಃ ।

ಉತ ಸಖಾಸ್ಯಶ್ವಿನೋರುತ ಮಾತಾ ಗವಾನಸಿ ।
ಉತೋಷೋ ವಸ್ವ ಈಶಿಷೇ ॥ ೩ ॥

। ಪದಪಾಠಃ ।

ಉತ । ಸಖಾ । ಅಸಿ । ಅಶ್ವಿನೋಃ । ಉತ । ಮಾತಾ । ಗವಾಂ । ಅಸಿ ।
ಉತ । ಉಷಃ । ವಸ್ವಃ । ಈಶಿಷೇ ॥ ೩ ॥

॥ ಸಾಯಣಭಾಷ್ಯಂ ॥

ಉತಾಸಿ ಜಾಶ್ವಿನೋಃ ಸಖಾಸಿ । ಉತಾಸಿ ಚ ಗವಾಂ ರಶ್ಮೀನಾಂ ಮಾತಾಸಿ । ಉತಾಸಿ ಚ ಹೇ ಉಷೋ ವಸ್ನೋ ಧನಸ್ಯೇಶಿಷೇ । ಈಶ್ವರಾ ಭವಸಿ ॥

॥ ಪ್ರತಿಪದಾರ್ಥ ॥

ಉಷಃ—ಎಲೈ ಉಷೋದೇವಿಯೇ । **ಆಶ್ವಿನೋಃ**—ಆಶ್ವಿನೀದೇವತೆಗಳಿಗೆ । **ಸಖಾ**—ಸಖಿಭೂತಳಾಗಿ । **ಅಸಿ**—ಆಗಿದ್ದೀಯೆ । **ಉತ**—ಮತ್ತು । **ಗವಾಂ**—ರಶ್ಮಿಗಳಿಗೆ । **ಮಾತಾ**—ಜನನಿಯಾಗಿ । **ಅಸಿ**—ಆಗಿದ್ದೀಯೆ । **ಉತ**—ಮತ್ತು । **ವಸ್ನಃ**—ಧನಕ್ಕೆ । **ಈಶಿಷೇ**—ಒಡೆಯಳಾಗಿದ್ದೀಯೆ.

॥ ಭಾವಾರ್ಥ ॥

ಎಲೈ ಉಷೋದೇವಿಯೇ, ನೀನು ಆಶ್ವಿನೀ ದೇವತೆಗಳಿಗೆ ಸಖಿಭೂತಳಾಗಿದ್ದೀಯೆ. ರಶ್ಮಿಗಳಿಗೆ ಜನನಿಯಾಗಿಯೂ, ಧನಕ್ಕೆ ಒಡೆಯಳಾಗಿಯೂ ಆಗಿದ್ದೀಯೆ.

English Translation.

You are the friend of the Aswins : you are the mother of the rays of light · you, Ushas, rule over riches.

॥ ಸಂಹಿತಾಪಾಠಃ ॥

ಯೂವಯದ್ದ್ವೇಷಸಂ ತ್ವಾ ಚಿಕಿತ್ವಿತೋನೃತಾವರಿ ।
ಪ್ರತಿಸ್ತೋಮೈರಭುತ್ಸ್ಮಹಿ ॥ ೪ ॥

॥ ಪದಪಾಠಃ ॥

ಯವಯತ್ ದ್ವೇಷಸಂ । ತ್ವಾ । ಚಿಕಿತ್ವಿತ್ । ಸೂನೃತಾವರಿ ।
ಪ್ರತಿ । ಸ್ತೋಮೈಃ । ಅಭುತ್ । ಸ್ಮಹಿ ॥ ೪ ॥

॥ ಸಾಯಣಭಾಷ್ಯಂ ॥

ಯೋವಯದ್ದ್ವೇಷಸಂ । ಯವಯಿಂತೋ ವಿಯುಜ್ಯಮಾನಾ ದ್ವೇಷಾಂಸಿ ದ್ವೇಷ್ಟಾರೋ ಯಸ್ಯಾಸ್ತಾದೃಶೀ । ಪೃಥಕ್ಕೃಯಂತೇ ದ್ವೇಷಾಂಸ್ಯನಯೇತಿ ವಾ । ರಾತ್ರೌ ಹನನಾಯೋದ್ಯುಕ್ತಾ ದ್ವೇಷಿಣ ಉಷಃಕಾಲೇ ಹಿ ಪಲಾಯಂತೇ । ತಾದೃಶೀಂ ಚಿಕಿತ್ವಿತ್ ಜ್ಞಾಪಯಂತೀಂ ತ್ವಾ ತ್ವಾಂ

ಸೂನೃತಾವರಿ। ಸೂನೃತೇತಿ ವಾಙ್ನಾಮ। ತದ್ವತಿ ದೇವಿ ಸ್ತೋಮೈಃ ಸ್ತುತಿಭಿಃ ಪ್ರತ್ಯಭುತ್ಸ್ಮಹಿ। ಪ್ರತಿಬೋಧಯಾಮಃ। ಸ್ತುಮ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

ಸೂನೃತಾವರಿ—ಸತ್ಯವಾಕ್ಕುಳ್ಳ ಉಷೋದೇವಿಯೇ! **ಯಾವಯದ್ದ್ವೇಷಸಂ**—ದ್ವೇಷಿಸುವ ಶತ್ರುಗಳನ್ನು ಓಡಿಸುವವಳೂ। **ಚಿಕಿತ್ವಿತ್**—ಲೋಕಕ್ಕೆಲ್ಲಾ ಪ್ರಜ್ಞಾಪಕಳೂ ಆದ। **ತ್ವಾ**—ನಿನ್ನನ್ನು। **ಸ್ತೋಮೈಃ**—ಸ್ತುತಿಗಳಿಂದ। **ಪ್ರತಿ ಅಭುತ್ಸ್ಮಹಿ**—ಎಚ್ಚರಗೊಳಿಸುತ್ತೇವೆ.

॥ ಭಾವಾರ್ಥ ॥

ಸತ್ಯವಾಕ್ಕುಳ್ಳ ಉಷೋದೇವಿಯೇ, ರಾತ್ರಿಕಾಲದ ಕತ್ತಲೆಯಲ್ಲಿ ಹಿಂಸಿಸಲು ಬಂದ ಶತ್ರುಗಳನ್ನು ನೀನು ಆವಿರ್ಭೂತಳಾಗಿ ಹೊಡದೋಡಿಸುವವಳೂ, ಲೋಕಕ್ಕೆಲ್ಲಾ ಪ್ರಜ್ಞಾಪಕಳೂ ಆದ ನಿನ್ನನ್ನು ಸ್ತುತಿಸಿ ಸ್ತೋತೃಗಳಾದ ನಮ್ಮ ಕಡೆ ಗಮನಕೊಡುವಂತೆ ಎಚ್ಚರಿಸುತ್ತೇವೆ.

English Translation.

With praises we awaken you, you are endowed with truth, you, the baffler of animosities, the restorer of consciousness.

॥ ಸಂಹಿತಾಪಾಠಃ ॥

ಪ್ರತಿ ಭದ್ರಾ ಅದೃಕ್ಷತ ಗವಾಂ ಸರ್ಗಾ ನ ರಶ್ಮಯಃ।
ಓಷಾ ಅಸ್ಯಾ ಉರು ಜ್ರಯಃ ॥ ೫ ॥

॥ ಪದಪಾಠಃ ॥

ಪ್ರತಿ। ಭದ್ರಾಃ। ಅದೃಕ್ಷತ। ಗವಾಂ। ಸರ್ಗಾಃ। ನ। ರಶ್ಮಯಃ।
ಅ। ಉಷಾಃ। ಅಸ್ಯಾಃ। ಉರು। ಜ್ರಯಃ ॥ ೫ ॥

॥ ಸಾಯಣಭಾಷ್ಯಂ ॥

ಭದ್ರಾಃ ಸ್ತುತ್ಯಾ ರಶ್ಮಯಃ ಪ್ರತ್ಯದೃಕ್ಷತ। ಪ್ರತಿದೃಶ್ಯಂತೇ। ಗವಾಮುದಕಾನಾಂ ಸರ್ಗಾ ನ ವರ್ಷಧಾರಾ ಇವೇಯಮುಷಾ ಉರು ಜ್ರಯೋ ಮಹತ್ತೇಜ ಆಸ್ಯಾಃ। ಆಪೂರಯೇತ್ ॥

॥ प्रतिपदार्थः ॥

भद्राः—मंगलकारकगळाद । रश्मयेः—रश्मिगळु । गवां—उदकगळ । सगार इ—धारेगळंते । प्रति अदृक्षत—एल्लरिगू गोचरवागुत्तवे । उषाः—उषोदेवियु । उरु—प्रभूतवाद । ज्योतिः—तेजस्सन्नु । आ अप्राः—हरडि व्याप्तिसुवंते माडिद्दाळे.

॥ भावार्थः ॥

मंगलकारकगळाद रश्मिगळु, उदकगळ धारेगळंते एल्लरिगू गोचरवागुत्तवे. उषोदेवियु तन्न प्रभूतवाद तेजस्सन्नु जगत्तिगेल्ला हरडि व्याप्तिसुवंते माडिद्दाळे.

English Translation

The auspicious rays are visible like showers of rain, the dawn has filled (the world) with ample light.

॥ संहितापाठः ॥

आ॒प॒प्रु॒षी॒ वि॒भा॒व॒रि॒ वि आ॒व॒ ज्यो॒ति॒षा॒ तम॑ः ।
उ॒षो॒ अनु॑ स्व॒धाम॑व ॥ ६ ॥

॥ पदपाठः ॥

आ॒ऽप॒प्रु॒षी॒ । वि॒भा॒ऽव॒रि॒ । वि । आ॒व॒ । ज्यो॒ति॒षा । तम॑ः ।
उ॒षः । अनु॑ । स्व॒धाम् । अ॒व॒ ॥ ६ ॥

॥ सायणभाष्यं ॥

हे विभावरि विभावत्युषस्त्वमापप्रुष्यापूरयंत्यी तेजसा जगत् ज्योतिषा तेजसा तमोऽन्धकारं व्यावः । व्यावयसोः । किंच अनु पश्चात् स्वधां हविर्लक्षणमन्नमव । रक्ष ॥

॥ प्रतिपदार्थः ॥

विभावरि—प्रभायुतळाद । उषः—ऎलै उषोदेवियळे । आपप्रुषी—निन्न तेजस्सिनिंद जगत्तन्नेल्ला व्याप्तिसुववळागि । ज्योतिषा—इदे तेजस्सिनिंद । तमः—अंधकारवन्नु । व्यावः—ओडिसिद्दीयॆ । अनु—तदनंतर । स्वधां—हविस्सिन रूपद अन्नवन्नु । अव—रक्षिसु.

॥ ಭಾವಾರ್ಥ ॥

ಪ್ರಭಾಯುತಳಾದ ಎಲೈ ಉಷೋದೇವಿಯೇ, ನಿನ್ನ ತೇಜಸ್ಸಿನಿಂದ ಜಗತ್ತನ್ನೆಲ್ಲಾ ವ್ಯಾಪಿಸುವವಳಾಗಿ ಅದೇ ತೇಜಸ್ಸಿನಿಂದ ಅಂಧಕಾರವನ್ನು ಓಡಿಸಿದ್ದೀಯೆ. ತದನಂತರ ಹವಿಸ್ಸಿನ ರೂಪದ ಅನ್ನವನ್ನು ರಕ್ಷಿಸು.

English Translation.

ಪಸ್ತ್ಯಾಽಯಂ ಸರ್ವೈರ್ಗಂತವ್ಯಾಮದಿತಿಮದೀನಾಂ ದೇವಮಾತರಂ ತಾಂ ದೇವೀಂ ಸಿಂಧುಂ ಸ್ಯಂದನಶೀಲಾಂ ನದ್ಯಭಿಮಾನಿದೇವೀಂ ಸ್ವಸ್ತಿಂ ಸುಖನಿವಾಸಾನುಕೂಲತನ್ನಿಮಿತ್ತಾಂ ದೇವೀಂ ಸಖ್ಯಾಯಾನುಕೂಲ್ಯಾಯೋಕ್ಥೈರ್ಮಂತ್ರೈರಿಳೇ । ಸ್ತೌಮಿ । ಉಭೇ ಅಹನೀ ದ್ಯಾವಾಪೃಥಿವ್ಯೌ ಯಥಾ ನೋಽಸ್ಮಾನ್ನಿಪಾತಃ ನಿತರಾಂ ಪಾತಃ ತಥಾ ಸ್ತೌಮಿ । ಉಷಾಸಾನಕ್ತಾ ಹೋರಾತ್ರಾಭಿಮಾನಿದೇವತೇ ಅದಬ್ಧೇ ಅದಂಭನೀಯೇ ಕರತಾಂ । ಕುರುತಾಂ । ಅಭಿಮತಮಿತಿ ಶೇಷಃ ॥

॥ ಪ್ರತಿಪದಾರ್ಥ ॥

ಪಸ್ತ್ಯಾಽಯಂ—ಪೂಜ್ಯಳಾದ । ಅದಿತಿಂ—ಅದಿತಿಯನ್ನೂ । ಸಿಂಧುಂ—ನದ್ಯಭಿಮಾನಿದೇವತೆಯನ್ನೂ । ದೇವೀಂ—ದೇವತಾತ್ಮಳೂ । ಸ್ವಸ್ತಿಂ—ಸುಖಕಾರಕಳೂ ಆದ ಸ್ವಸ್ತಿ ಎಂಬದೇವಿಯನ್ನೂ । ಸಖ್ಯಾಯ—ಅವರ ಸ್ನೇಹಕ್ಕಾಗಿ । ಉಕ್ಥ್ಯೈಃ—ಮಂತ್ರಗಳಿಂದ । ಇಳೇ—ಸ್ತುತಿಸುತ್ತೇನೆ । ಉಭೇ ಅಹನೀ-ದ್ಯಾವಾಪೃಥಿವಿಗಳಿಬ್ಬರೂ ।

यथा—यावत रीतियल्लि। **नः**—नम्मन्नु। **निपातः**—पूर्णवागि रक्षिसुवरो (आ रीतियल्लि स्तुतिसुत्तेनॆ। **अदब्धे**—नाशरहितरादा। **उषासानक्ता**—अहोरात्रदेवतॆगळु! **करताम्**—(नम्म इष्टार्थसिद्धियन्नु) उंटुमाडलि.

॥ भावार्थ ॥

पूज्यळाद आदितियन्नू, नद्यभिमानिदेवियन्नू, देवतात्मळू सुखकारकळू आद स्वस्ति देवियन्नू आवर सख्यक्कागि मंत्रगळिंद अतिशयवागि स्तुतिसुत्तेनॆ. द्यावापृथिविगळिब्बरू नम्मन्नु यावत रीति रक्षिसुवरो आ रीति अवरन्नु स्तुतिसुत्तेनॆ. नाशरहितरादा अहोरात्र देवतॆगळु नम्म इष्टार्थसिद्धियन्नुंटुमाडलि.

English Translation.

I adore the venerated Aditi, the Sindhu and the divine Swasti for their friendship (I praise you) both, Day and Night, that you may protect us unimpeded, night and morning do (what we desire).

॥ संहितापाठः ॥

व्यर्यमा वरुणश्चेति पन्थामिषस्पतिः सुवितं गातुमग्निः ।
इन्द्राविष्णू नृवदु षु स्तवाना शर्म नो यन्तमवद्व-
द्वरूथं ॥ ४ ॥

॥ पदपाठः ॥

वि । अर्यमा । वरुणः । चेति । पन्थाम् । इषः । पतिः । सुवितं । गातुं । अग्निः ।
इन्द्राविष्णू इति । नृवत् । ऊं इति । सु । स्तवाना । शर्म । नः । यन्तं । अवद्वत् ।
वरूथं ॥ ४ ॥

॥ ಸಾಯಣಭಾಷ್ಯಂ ॥

ಅರ್ಯಮಾ ದೇವೋಽಸ್ಮಾಕಂ ಪಂಥಾಂ ಯಜ್ಞಾದಿಮಾರ್ಗಂ ವಿ ವೇತಿ । ಜ್ಞಾಪಯತಿ । ತಥಾ ವರುಣೋ ವಿ ವೇತಿ । ಇಷೋಽನ್ನಸ್ಯ ಹವಿರ್ಲಕ್ಷಣಸ್ಯ ಪತಿಃ ಪಾಲಕೋಽಗ್ನಿಃ ಸುವಿತಂ ಸುಖಕರಂ ಗಾತುಂ ಗಮನಂ ಮಾರ್ಗಂ ವಾ ಸ್ವರ್ಗಾದೇರ್ವಿ ವೇತಿ । ಇಂದ್ರಾವಿಷ್ಣೂ ಸು ಸುಷ್ಟು ಸ್ತವಾನಾ ಸ್ತೂಯಮಾನೌ ನೃವನ್ನನುಷ್ಯವನ್ನನುಷ್ಯೋಪೇತಂ ವರೂಥಂ ವರಣೀಯಮಮವದ್ಬಲೋಪೇತಂ ಶರ್ಮ ಗೃಹಂ ಸುಖಂ ವಾ ನೋಽಸ್ಮಾಕಂ ಯಂತಂ । ಯಚ್ಛತಂ ॥

॥ ಪ್ರತಿಪದಾರ್ಥ ॥

ಅರ್ಯಮಾ—ಅರ್ಯಮನೂ । **ವರುಣಃ**—ವರುಣನೂ । **ಪಂಥಾಂ**—ಶ್ರೇಷ್ಠವಾದ ಮಾರ್ಗವನ್ನು । **ವಿ ವೇತಿ**—ತಿಳಿಸುತ್ತಾರೆ । **ಇಷಃ**—ಅನ್ನಕ್ಕೆ । **ಪತಿಃ**—ಪಾಲಕನಾದ । **ಅಗ್ನಿಃ**—ಅಗ್ನಿಯು । **ಸುವಿತಂ**—ಸುಖಕಾರಕವಾದ । **ಗಾತುಂ**—ಮಾರ್ಗವನ್ನು (ತಿಳಿಸುತ್ತಾನೆ) । **ಇಂದ್ರಾವಿಷ್ಣೂ**—ಇಂದ್ರಾವಿಷ್ಣುಗಳು । **ಸು**—ಶ್ರೇಷ್ಠವಾಗಿ । **ಸ್ತವಾನಾ**—ಸ್ತುತಿಸಲ್ಪಟ್ಟವರಾಗಿ । **ನೃವತ್**—ಪುತ್ರಾದಿಗಳಿಂದ ಕೂಡಿದುದೂ । **ವರೂಥಂ**—ಆದರಣೀಯವಾದುದೂ । **ಅಮವತ್**—ಶಕ್ತಿಯುತವಾದುದೂ ಆದ । **ಶರ್ಮ**—ಸುಖವನ್ನು । **ನಃ**—ನನಗೆ । **ಯಂತಂ**—ಕೊಡಲಿ.

॥ ಭಾವಾರ್ಥ ॥

ಅರ್ಯಮನೂ, ವರುಣನೂ ನನಗೆ ಉತ್ತಮವಾದ ಕರ್ಮಮಾರ್ಗವನ್ನು ತಿಳಿಸುತ್ತಾರೆ. ಅನ್ನಪಾಲಕನಾದ ಅಗ್ನಿಯು ಸುಖಕಾರಕನಾದ ಮಾರ್ಗವನ್ನು ತಿಳಿಸುತ್ತಾರೆ ಇಂದ್ರಾವಿಷ್ಣುಗಳು ಉತ್ತಮವಾಗಿ ಸ್ತುತಿಸಲ್ಪಟ್ಟು ಪುತ್ರಾದಿಗಳಿಂದ ಕೂಡಿದೂದೂ, ಆದರಣೀಯವಾದುದೂ, ಶಕ್ತಿಯುತವಾದುದೂ ಆದ ಸುಖವನ್ನು ನನಗೆ ಉಂಟುಮಾಡಲಿ.

English Translation.

Aryaman and Varuna, instruct us in the path (of worship) : Agni the lord of food, points out the way to happiness : Indra and Vishnu, being glorified, bestow upon us desirable prosperity comprehending descendants and strength.

॥ ಸಂಹಿತಾಪಾಠಃ ॥

ಆ ಪರ್ವತಸ್ಯ ಮರುತಾಮವಾಂಸಿ ದೇವಸ್ಯ ತ್ರಾತುರವ್ರಿ ಭಗಸ್ಯ ।

ಪಾತ್ಪತಿರ್ನ್ಯಾದಂಹಸೋ ನೋ ಮಿತ್ರೋ ಮಿತ್ರಿಯಾದುತ ನ ಉರುಷ್ಯೇತ್ ॥ ೫ ॥

। पदपाठः ।

आ । पर्वतस्य । मरुताम् । अवांसि । देवस्य । त्रातुः । अवि । भगस्य ।

पात् । पतिः । जन्यात् । अंहसः । नः । मित्रः । मित्रियात् । उत । नः । उरुष्येत् ॥

॥ सायणभाष्यं ॥

पर्वतस्येंद्रसख्यस्यैतन्नामकस्य देवस्य मरुतां च त्रातुः रक्षकस्य भगस्य देवस्य चावांसि रक्षणान्यावि। अवृणे। किंच पतिर्वरुणोः देवो जन्याज्जनसंबंधादंहसः पापात् नोऽस्मान्पात्। पातु। रक्षतु । उताऽपि च मित्रश्च मित्रियात् मित्रभावेन न उरुष्येत् । रक्षतु ॥

॥ प्रतिपदार्थ ॥

देवस्य—देवतात्मनाद । **पर्वतस्य**—पर्वतदेवनिंदलू । **मरुतां (च)**—मरुत्तुगळिंदलू । **त्रातुः**—रक्षकनाद । **भगस्य**—भगनिंदलू । **अवांसि**—रक्षणेगळन्नु । **आ अवि**—नानु अपेक्षिसि प्रार्थिसुत्तेनॆ । **पतिः**—पालकनाद वरुणनु । **जन्यात्**—पुरुषदोषदिंद उत्पन्नवाद । **अंहसः**—पापदिंद । **नः**—नम्मन्नु । **पात्**—रक्षिसलि । **उत**—मत्तु । **मित्रः**—मित्रनू । **मित्रियात्**—सुहृद्भावदिंद । **नः**—नम्मन्नु । **उरुष्येत्**—रक्षिसलि.

। भावार्थ ।

देवतात्मरादा पर्वत, मरुत्तुगळु, रक्षकनाद भग इवरेल्लर रक्षणेगळन्नू अपेक्षिसि नानु प्रार्थिसुत्तेनॆ. पालकनाद वरुणनु पुरुषदोषदिंद उत्पन्नवाद पापदिंद नम्मन्नु रक्षिसलि. मित्रनू सह अदे सुहृद्भावदिंद नम्मन्नु रक्षिसलि

English Translation.

I have recourse to the protection of Parvata, of the Maruts, and of the divine protector, Bhaga . may the lord (Varuna) presrve us from human wretchedness, and may Mitra defend us with a friendly regard.

॥ ಸಂಹಿತಾಪಾಠಃ ॥

ನೂ ರೋದಸೀ ಅಹಿನಾ ಬುಧ್ನ್ಯೇನ ಸ್ತುವೀತ ದೇವೀ ಅಪ್ಯೇಭಿರಿಷ್ಟೈಃ ।
ಸಮುದ್ರಂ ನ ಸಂಚರಣೇ ಸನಿಷ್ಯವೋ ಘರ್ಮಸ್ವರಸೋ ನದ್ಯೋ೨ ಅಪ ವ್ರನ್ ॥ ೬ ॥

॥ ಪದಪಾಠಃ ॥

ನು । ರೋದಸೀ ಇತಿ । ಅಹಿನಾ । ಬುಧ್ನ್ಯೇನ । ಸ್ತುವೀತ । ದೇವೀ ಇತಿ । ಅಪ್ಯೇಭಿಃ । ಇಷ್ಟೈಃ ।
ಸಮುದ್ರಂ । ನ । ಸಂಽಚರಣೇ । ಸನಿಷ್ಯವಃ । ಘರ್ಮಽಸ್ವರಸಃ । ನದ್ಯಃ । ಅಪ । ವ್ರನ್ ॥ ೬ ॥

॥ ಸಾಯಣಭಾಷ್ಯಂ ॥

ಹೇ ರೋದಸೀ ದ್ಯಾವಾಪೃಥಿವ್ಯೌ ಯುವಾಮಹಿನಾ ಬುಧ್ನ್ಯೇನಾಹಿರ್ಬುಧ್ನ್ಯನಾಮಕೇನ ದೇವೇನ ಸಹ ನು ಕ್ಷಿಪ್ರಮಪ್ಯೇಭಿರಾಪನೀಯೈರಿಷ್ಟೈಃ ಕಾಮ್ಯೈರ್ನಿಮಿತ್ತಭೂತೈಃ ಸ್ತುವೀತ । ಸ್ತುವೇ । ಸನಿಷ್ಯವೋ ಧನಾನಾಂ ಸಂಭಕ್ತುಮಿಚ್ಛಂತಃ ಸಂಚರಣೇ ಸಂಚಾರಾಯ ಸಮುದ್ರಮಧ್ಯಗಮನಾಯ ಸಮುದ್ರಮಿವ । ತಂ ಯಥಾ ಸ್ತುವಂತಿ ತದ್ವತ್ । ಯಸ್ಮಾದೇತೇ ದೇವಾ ಘರ್ಮಸ್ವರಸೋ ದೀಪ್ತಧ್ವನಯೋ ನದ್ಯೋ ನದೀರಪ ವ್ರನ್ । ಅಪವೃಣ್ವಂತೀತಿ ಪರೋಕ್ಷ ಇವ । ಅಥವಾ ಶೇ ದೇವಾ ನದೀರಪವೃಣ್ವಂತ್ಯಿತ್ಯಾಶೀಃ । ತಸ್ಮಾತ್ ಸ್ತುವ ಇತಿ ಸಂಬಂಧಃ ॥

॥ ಪ್ರತಿಪದಾರ್ಥ ॥

ದೇವೀ—ದೇವತಾತ್ಮರಾದ । **ರೋದಸೀ**—ಎಲೈ ದ್ಯಾವಾಪೃಥಿಗಳೇ । **ಸನಿಷ್ಯವಃ**—ಧನಾಪೇಕ್ಷಿಗಳು। **ಸಂಚರಣೇ**—ಸಂಚಾರಾರ್ಥವಾಗಿ (ಸಹಾಯಮಾಡಲು)। **ಘರ್ಮಸ್ವರಸಃ**—ಪ್ರಕಾಶಕವಾದ ಶಬ್ದಗಳಿಂದ ಕೂಡಿದ। **ನದ್ಯಃ**—ನದಿಗಳು । **ಅಪವ್ರನ್**—(ಎಲ್ಲಿ) ಅಂತರ್ಹಿತವಾಗುವುವೋ ಅಂತಹ । **ಸಮುದ್ರಂ ನ**—ಸಮುದ್ರವನ್ನು ಪ್ರಾರ್ಥಿಸುವಂತೆ । **ಅಹಿನಾ ಬುಧ್ನ್ಯೇನ**—ಅಹಿರ್ಬುಧ್ನ್ಯದೇವನೊಡನೆ ಕೂಡಿದ ನಿಮ್ಮನ್ನು । **ನು**—ಶೀಘ್ರವಾಗಿ । **ಆಪ್ಯೇಭಿಃ**—ಅಪೇಕ್ಷಿತವಾದ । **ಇಷ್ಟೈಃ**—ಇಷ್ಟಾರ್ಥಗಳ ಸಿದ್ಧಿಗಾಗಿ । **ಸ್ತುವೀತ**—ಪ್ರಾರ್ಥಿಸುತ್ತೇನೆ.

ಭಾವಾರ್ಥ ।

ದೇವತಾತ್ಮರಾದ ಎಲೈ ದ್ಯಾವಾಪೃಥಿವಿಗಳೇ, ಧನಾಪೇಕ್ಷಿಗಳು ತಮ್ಮ ಸಂಚಾರಕ್ಕೆ ಸಹಾಯವಾಗಲು ಪ್ರಕಾಶಕವಾದ ಶಬ್ದಗಳಿಂದ ಕೂಡಿದ ನದಿಗಳು ಎಲ್ಲಿ ಅಂತರ್ಹಿತವಾಗುವುವೋ ಅಂತಹ ಸಮುದ್ರವನ್ನು ಪ್ರಾರ್ಥಿಸುವಂತೆ, ಅಹಿರ್ಬುಧ್ನ್ಯದೇವನೊಡನೆ ಕೂಡಿದ ನಿಮ್ಮನ್ನು ಅಪೇಕ್ಷಿತವಾದ ಇಷ್ಟಾರ್ಥಗಳ ಶೀಘ್ರವಾದ ಸಿದ್ಧಿಗಾಗಿ ಪ್ರಾರ್ಥಿಸುತ್ತೇನೆ.

English Translation.

Divine Heaven and Earth, I praise you together with Ahibudhnya for those (good things that are) desired. as those desirous of acquiring (riches) praise the ocean on traversing it (in which) the sounding rivers disappear.

॥ ಸಂಹಿತಾಪಾಠಃ ॥

ದೇವೈರ್ನೋ ದೇವ್ಯದಿತಿರ್ನಿ ಪಾತು ದೇವಸ್ತ್ರಾತಾ ತ್ರಾಯತಾಮಪ್ರ-
ಯುಚ್ಛನ್ ।
ನಹಿ ಮಿತ್ರಸ್ಯ ವರುಣಸ್ಯ ಧಾಸಿಮರ್ಹಾಮಸಿ ಪ್ರಮಿಯಂ ಸಾನ್ವಗ್ನೇಃ ॥ ೭ ॥

॥ ಪದಪಾಠಃ ॥

ದೇವೈಃ । ನಃ । ದೇವೀ । ಅದಿತಿಃ । ನಿ । ಪಾತು । ದೇವಃ । ತ್ರಾತಾ । ತ್ರಾಯತಾಂ । ಅಪ್ರಯುಚ್ಛನ್ ॥
ನಹಿ । ಮಿತ್ರಸ್ಯ । ವರುಣಸ್ಯ । ಧಾಸಿಂ । ಅರ್ಹಾಮಸಿ । ಪ್ರಮಿಯಂ । ಸಾನು । ಅಗ್ನೇಃ ॥ ೭ ॥

॥ ಸಾಯಣಭಾಷ್ಯಂ ॥

ಅತಿತಿರ್ದೇವ್ಯದಿನಾ ದೇವಮಾತಾ ದೇವೈರನ್ಯೈರ್ಮಿತ್ರಾದಿಭಿಃ ಸಹ ನೋಽಸ್ಮಾನ್ನಿ ಪಾತು । ಪಾಲಯತು । ತಥಾ ತ್ರಾತಾ ಪಾಲಕೋ ದೇವಃ । ಇಂದ್ರ ಇತ್ಯರ್ಥಃ। ಸೋಽಪ್ಯಪ್ರಯುಚ್ಛನ್ ಅಪ್ರಮಾದ್ಯನ್ ತ್ರಾಯತಾಂ । ವಯಂ ಚ ಮಿತ್ರಸ್ಯ ವರುಣಸ್ಯಾಗ್ನೇಶ್ಚ ಸಾನು ಸಮುಚ್ಛ್ರಿತಂ ಧಾಸಿಮನ್ನಂ ಸೋಮಾದಿಲಕ್ಷಣಂ ಪ್ರಮಿಯಂ ಹಿಂಸಿತುಂ ನಹ್ಯರ್ಹಾಮಸಿ । ಅರ್ಹಾಮಃ । ಸಮರ್ಥಾ ಭವಾಮಃ । ಕಿಂತ್ವನುಷ್ಠಾನೇಸ ಸಂವರ್ಧಿತುಮರ್ಹಾಮ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

ದೇವೀ—ದೇವಮಾತೆಯಾದ । **ಅದಿತಿಃ**—ಅದಿತಿಯು । **ದೇವೈಃ**—ಮಿತ್ರಾದಿಸಕಲದೇವತೆಗಳೊಡನೆಯೂ ಕೂಡಿ । **ನಃ**—ನಮ್ಮನ್ನು । **ನಿ ಪಾತು**—ಪೂರ್ಣವಾಗಿ ರಕ್ಷಿಸಲಿ । **ತ್ರಾತಾ**—ಪಾಲಕನಾದ । **ದೇವಃ**—ಇಂದ್ರದೇವನು । **ಅಪ್ರಯುಚ್ಛನ್**—ಬೇರೆ ಯಾವಗಮನವೂ ಇಲ್ಲದೇ । **ತ್ರಾಯತಾಂ**—ರಕ್ಷಿಸಲಿ ।

ಮಿತ್ರಸ್ಯ—ಮಿತ್ರನಿಗೂ। **ವರುಣಸ್ಯ**—ವರುಣನಿಗೂ। **ಅಗ್ನೇಃ**—ಅಗ್ನಿಗೂ। **ಸಾನು**—ಉತ್ಕೃಷ್ಟರೀತಿಯಿಂದ ಅರ್ಪಿತವಾಗತಕ್ಕ। **ಧಾಸಿಂ**—ಅನ್ನವನ್ನು। **ಪ್ರಮಿಯೇಂ**—ನಿರೋಧಿಸಲು। **ನಹಿ ಅರ್ಹಾಮಸಿ**—ನಾವು ಶಕ್ತರಲ್ಲ (ನಾವು ತಡೆಯುವುದಿಲ್ಲ).

। ಭಾವಾರ್ಥ ।

ದೇವಮಾತೆಯಾದ ಅದಿತಿಯು ಮಿತ್ರಾದಿಸಕಲದೇವತೆಗಳೊಡನೆಯೂ, ಕೂಡಿ ನಮ್ಮನ್ನು ಪೂರ್ಣವಾಗಿ ರಕ್ಷಿಸಲಿ. ಪಾಲಕನಾದ ಇಂದ್ರದೇವನು ಬೇರೆ ಯಾವ ಗಮನವೂ ಇಲ್ಲದೇ ರಕ್ಷಿಸಲಿ. ಮಿತ್ರನಿಗೂ, ವರುಣನಿಗೂ, ಅಗ್ನಿಗೂ, ಉತ್ಕೃಷ್ಟರೀತಿಯಿಂದ ಅರ್ಪಿತವಾಗತಕ್ಕ ಅನ್ನವನ್ನು ನಿರೋಧಿಸಲು ನಾವು ಶಕ್ತರಲ್ಲ.

English Translation.

May the divine Aditi, with the gods, preserve us: may the ever-attentive protecting (deity, Indra,) protect us· we are not able to withhold the elevated (sacrificial) food of Mitra, of Varuna, of Agni.

। ವಿಶೇಷವಿಷಯಗಳು ।

ಅದಿತಿ—ನಿಷ್ಟ್ಯಗ್ರೀ ಮತ್ತು **ಉಷಸ್ಸು ಈ** ಎರಡು ದೇವತೆಗಳನ್ನು ಬಿಟ್ಟರೆ ದೇವಮಾತೆಯೆಂದು ಸಾಕ್ಷಾತ್ತಾಗಿನಿರ್ದಿಷ್ಟವಾಗಿರುವವರಲ್ಲಿ **ಅದಿತಿಯೇ** ಪ್ರಥಮ ದೇವತೆಯೆಂದು ತಿಳಿದುಬರುತ್ತದೆ

1. ಅದಿತಿಯ ಸ್ವರೂಪವನ್ನು ವರ್ಣಿಸುವ ವಿಶೇಷಗಳು.

ಅದಿತಿಯನ್ನು ಉದ್ದೇಶಿಸಿದ ಪ್ರತ್ಯೇಕವಾದ ಸೂಕ್ತವಾವುದೂ ಇಲ್ಲದಿದ್ದರೂ ಸಹ, ಅನೇಕ ಸೂಕ್ತಗಳಲ್ಲಿ ಅಂತರ್ಗತವಾಗಿರುವ ಮಂತ್ರಗಳಿಂದ ಅದಿತಿಯು ಪ್ರಶಂಸಿತಳೂ, ಪ್ರಾರ್ಥಿತಳೂ ಆಗಿದ್ದಾಳೆ ಪುತ್ರಾದಿಗಳನ್ನೂ, ಪಶ್ವಾದಿಸಂಪತ್ತುಗಳನ್ನೂ ಅನುಗ್ರಹಿಸಿಕೊಡಬೇಕೆಂದು ಪ್ರಾರ್ಥಿತಳಾಗಿದ್ದಾಳೆ ಅವಳ ರಕ್ಷಣೆಯೂ, ಕ್ಷಮೆಯೂ ಅನೇಕ ಕಡೆಗಳಲ್ಲಿ ಬೇಡಲ್ಪಟ್ಟದೆ (೧-೪೩-೨) ವರುಣನಿಗೂ, ಇನ್ನೂ ಇತರ ಕೆಲವು ದೇವತೆಗಳಿಗೂ ಮಾತೃವೆಂದೂ ವರ್ಣಿತಳಾಗಿದ್ದಾಳೆ. ನಿಘಂಟುವಿನಲ್ಲಿ **ಅದಿತಿ** ಪದವನ್ನು, (1) **ಪೃಥ್ವೀ**ನಾಮಗಳಲ್ಲಿಯೂ, (2) **ವಾಙ್ನಾ**ಮಗಳಲ್ಲಿಯೂ, (3) **ಗೋ**ನಾಮಗಳಲ್ಲಿಯೂ, (4) **ದ್ಯಾವಾಪೃಥಿವೀ**ನಾಮಗಳಲ್ಲಿಯೂ ಸೇರಿಸಿ ಪರಿಸಿದೆ (ನಿ. ೧-೧, ೧-೧೧, ೨-೧೧, ೩-೩೦) ನಿರುಕ್ತದ ೪-೨೨ನೇ ಪ್ರಕರಣದಲ್ಲಿ ಅದಿತಿಯನ್ನು **ಅದೀನಾ ದೇವಮಾತಾ,** ಮಹಾತ್ಮಳಾದ ದೇವಮಾತೆಯೆಂದು ವರ್ಣಿಸಿದೆ

ಋಕ್ಸಂಹಿತೆಯಲ್ಲಿ (೧-೧೧೩-೧೯) ದೇವಮಾತೆಯಾದ ಉಷಸ್ಸೇ ಅದಿತಿಯ ಅನೇಕವೆಂದು ವರ್ಣಿಸಿದೆ (ಸಾಯಣರು ಕೊಂಚ ವ್ಯತ್ಯಸ್ತವಾದ ಅರ್ಥವನ್ನು ಹೇಳಿದ್ದಾರೆ)· ಇಲ್ಲಿ ಅದಿತಿಯ ಮುಖವೆಂದು ಸ್ಥೂಲವಾದ ಅರ್ಥ· ಅವಳ ರೂಪಾಂತರವೆಂದು ಹೇಳಿದರೂ ಹೇಳಬಹುದು. ನಿರುಕ್ತದ ಬೇರೆ ಭಾಗದಲ್ಲಿ (೧೧-೨೨) ದೇವತೆಗಳ ವರ್ಗೀಕರಣವನ್ನು (ಹಿಂದೆ ತೋರಿಸಿದಂತೆ) ಅನುಸರಿಸಿ ಅಂತರಿಕ್ಷಸ್ಥರಾದ ದೇವತೆಗಳ ವಿಷಯವನ್ನು ವಿವರಿಸುವಾಗ ಸ್ತ್ರೀದೇವತೆಗಳಲ್ಲಿ **ಅದಿತಿಗೆ** ಅಗ್ರಸ್ಥಾನವನ್ನು ಕೊಟ್ಟದೆ.

"ಅಥಾತೋ ಮಧ್ಯಸ್ಥಾನಾಃ ಸ್ತ್ರಿಯಃ । ತಾಸಾಂ ಅದಿತಿಃ ಪ್ರಥಮಾಗಾಮಿನೀ ಭವತಿ"
(ನಿ. ೧೧-೨೨)

ಮಧ್ಯಮಲೋಕದ ಸ್ತ್ರೀದೇವತೆಗಳಲ್ಲಿ ಅದಿತಿಯು ಪ್ರಥಮಸ್ಥಾನವನ್ನಾಕ್ರಮಿಸುತ್ತಾಳೆ

ಋಕ್ಸಂಹಿತೆಯಲ್ಲಿ ೪-೫೫-೩, ೪-೫೫-೭, ೫-೫೧-೧೧, ೬-೫೦-೧, ೭-೩೮-೪, ೭-೪೦-೨, ೮-೫೫-೧೦, ೮-೨೭-೫, ೮-೫೬-೧೦. ಇತ್ಯಾದಿ ಋಕ್ಕುಗಳಲ್ಲಿ ಅದಿತಿಯನ್ನು **ದೇವಿ**ಯೆಂದೂ, ೨-೪೦-೬, ೭-೪೦-೪, ೧೦-೬೨-೧೪ ನೇ ಮಂತ್ರಗಳಲ್ಲಿ **ದೇವೀ ಅದಿತಿರನರ್ವಾ;** ಅಪ್ರತಿಹತವಾದ ಶಕ್ತಿಯುಳ್ಳವಳೂ, ದೇವತಾತ್ಮಳೂ ಆದ ಅದಿತಿಯೆಂದೂ, ೧-೧೩೬-೩ ರಲ್ಲಿ ಪ್ರಥಾಯುತಳೂ, ಕ್ಷಿತಿಯನ್ನು ಧರಿಸುವವಳೆಂದೂ, ದ್ಯುಲೋಕಸ್ಥಳೆಂದೂ (**ಚೋದಿತಿಷ್ಮತೀಮದಿತಿಂ**... .. .. ..) ವರ್ಣಿಸಿದೆ ಇದಲ್ಲದೇ, **ಉರುವ್ಯಚಾಃ**, ಅತ್ಯಂತ ವಿಸ್ತೃತವಾಗಿ ವ್ಯಾಪಿಸಿರುವವಳು, (೫-೪೬-೬), **ವಿಶ್ವಜನ್ಯಾಂ;** ಸಕಲಮಾನವರಿಗೂ ಪ್ರಿಯ ಸಖಳು (೭-೧೦-೪), ಇತ್ಯಾದಿ ವಿಶೇಷಣಗಳು ಗಮನಾರ್ಹವಾದವಾಗಿವೆ ಇಂತಹ ಉತ್ತಮುಳೂ, ಲೋಕೋಪಕಾರಿಣಿಯೂ ಆದ ಅದಿತಿಯನ್ನು ಸ್ತುತಿಸುತ್ತಾ,

"ಪ್ರಾತಃಕಾಲದಲ್ಲಿಯೂ, ಮಧ್ಯಾಹ್ನದಲ್ಲಿಯೂ, ಸಾಯಂಕಾಲದಲ್ಲಿಯೂ ಸಹ ನಾನು ಅದಿತಿಯನ್ನು ಅನುಸ್ಯೂತವಾಗಿ ಪ್ರಾರ್ಥಿಸಿ ಕರೆಯುತ್ತೇನೆ" ಎಂದು ಋಷಿಯು ಪ್ರಶಂಸಿಸಿ ಪ್ರಾರ್ಥಿಸುತ್ತಾನೆ (೫-೬೯-೩) ೧-೧೪೫-೩ ನೇ ಮಂತ್ರದಲ್ಲಿ ಅದೇ ಅದಿತಿಯ ಶುದ್ಧವಾದುದೂ, ಕ್ಷಯರಹಿತವಾದುದೂ, ದಿವ್ಯವಾದುದೂ ಅತ್ಯಂತ ಪೂಜ್ಯವಾದುದೂ ಆದ ಧನದಾನವು ಯಾಚಿತವಾಗಿದೆ. ೧-೧೬೬-೧೨ ರಲ್ಲಿ ಮರುತ್ತುಗಳನ್ನು ಪ್ರಶಂಸಿಸುವಾಗ, ಅವರಿಂದ ದತ್ತವಾಗತಕ್ಕ ಅನುಗ್ರಹವು ಅದಿತಿಗಳ ದಾನಕ್ಕೆ ಸಮನಾಗಿದೆಯೆಂದು ಅದಿತಿಯ ಪ್ರಶಂಸೆಯಿದೆ ೪-೫೫-೩ ರಲ್ಲಿ ಸತ್ಪ್ಯನೆಂಬುದು ಅದಿತಿಯ ವಿಶೇಷಗುಣವನ್ನು ಸೂಚಿಸುವ ವಿಶೇಷಣವಾಗಿದೆ ಸಕಲರಿಗೂ ಆಶ್ರಯದಾತಳಾದ ಗೃಹದೇವತೆಯೆಂಬುದು ಇದರಿಂದ ತಿಳಿಯುತ್ತದೆ. ವಾಜಸನೇಯಸಂಹಿತೆಯಲ್ಲಿ ಅದಿತಿಯ ಮಹದ್ಗುಣಗಳನ್ನು ಈ ರೀತಿ ಸ್ತುತಿಸಿದೆ—

ಮಹೀಮೂ ಷು ಮಾತರಂ ಸುವ್ರತಾನಾಂ .....**ಅದಿತಿಂ ಸುಪ್ರಣೀತಿಂ ।**
(ತೈ ಸಂ. ೧-೫-೧೧-೫ ಮತ್ತು ವಾ ಸಂ. ೨೧-೫)

ಭಕ್ತರಿಗೆ ಆಶ್ರಯದಾತಳಾದ ಮಾತೆಯ ಸ್ವರೂಪಳೂ, ಯಜ್ಞಕ್ಕೆ ನೇತ್ರಿಯೂ, ಅತ್ಯತಿಶಯವಾದ ಶಕ್ತಿಯುಳ್ಳವಳೂ ಜರಾರಹಿತಳೂ, ಅತ್ಯಂತ ವಿಸ್ತೃತವಾಗಿ ವ್ಯಾಪಿಸಿಇರುವವಳೂ, ರಕ್ಷಕಳೂ, ಕುಶಲತೆಯಿಂದ ಎಲ್ಲರಿಗೂ ಮಾರ್ಗವನ್ನು ತೋರಿಸಿ ಎಲ್ಲರನ್ನೂ ಸತ್ಪಥದಲ್ಲಿ ಕೊಂಡೊಯ್ಯುವವಳೂ ಆದ ಅದಿತಿಯನ್ನು ನಾವು ಪ್ರಾರ್ಥಿಸಿ ಕರೆಯೋಣ ಎಂದು ಅವಳ ಮಹತ್ವವನ್ನು ವರ್ಣಿಸಿದೆ

2 ಅದಿತಿಯ ಮೂಲರೂಪದ ವಿಷಯದಲ್ಲಿ Roth ಮತ್ತು Max-Muller ಎಂಬುವರು ತಿಳಿಸಿರುವ ಅಭಿಪ್ರಾಯಗಳು :—

ಅದಿತಿಯೆಂಬುದು, ನಿಯಮಿತವಾದ ಸೀಮಾಪ್ರದೇಶಗಳುಳ್ಳ ಪೃಥ್ವಿಗಿಂತಲೂ ಅಧಿಕವಾದ ಮಹತ್ವವನ್ನು ಹೊಂದಿರುವುದೂ, ಮಾನಾತೀತವಾದ ವಿಸ್ತೃತಿಯನ್ನು ಹೊಂದಿರುವುದೂ ಆದ ಅಂತರಿಕ್ಷದ ಅನಂತತ್ವವನ್ನು ವರ್ಣಿಸಲು ಅನಂತ ಎಂಬರ್ಥವನ್ನು ಕೊಡುವ ಪರ್ಯಾಯಪದವಾಗಿದೆಯೆಂದು Roth ಎಂಬ ಪಂಡಿತನ ಅಭಿಪ್ರಾಯ

ವಾಗಿರುತ್ತೆ. ಇದೇ ಪಂಡಿತನು ನಿರುಕ್ತವಾಕ್ಯವನ್ನು ವಿವರಿಸುವಾಗಲೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ಅದಿತಿ ಎಂಬ ಪದಕ್ಕೆ ಅಲಂಘ್ಯ, ಅನತಿಕ್ರಮಣೀಯ, ಅಕ್ಷಯ, ಪ್ರಮಾಣಾತೀತ ಎಂಬರ್ಥವು ಸಹಜವಾಗಿದೆ. " ಅನಂತತ್ವ" ವನ್ನು ಪ್ರತಿಬಿಂಬಿಸುವ ದೇವತಾವಿಶೇಷಳಾಗಿದ್ದಾಳೆ. ಈ ರೂಪದಲ್ಲಿಯೇ ಇವಳು ಪೂಜಿತಳಾಗಿದ್ದಾಳೆ. ಅಲೌಕಿಕವಾದ ದಿವ್ಯತೇಜಸ್ಸು ಯಾವರೀತಿ ಅಪಾರ್ಥಿವವೂ, ನಿತ್ಯವೂ ಆದ ತತ್ತ್ವವೆಂದು ಪರಿಗಣಿತವಾಗಿರುವುದೋ ಅದರಂತೆಯೇ ತೇಜೋರೂಪರಾದ **ವರುಣ, ಮಿತ್ರ, ಅರ್ಯಮಾ,** ಭಗ ಇತ್ಯಾದಿ ಆದಿತ್ಯರೂ ಸಹ ಅದಿತಿರೂಪವಾದ ಈ ನಿತ್ಯತತ್ತ್ವದ ಪುತ್ರರೆಂದೇ ಪರಿಗಣಿತರಾಗಿದ್ದಾರೆ. " ಮಾನಾತೀತವಾದುದೂ, ಲೌಕಿಕಗೋಚರಕ್ಕೆ ಅತೀತವಾದುದೂ ಆದ ನಿತ್ಯತತ್ತ್ವವನ್ನು ಪ್ರತಿಬಿಂಬಿಸುವುದರಿಂದಲೇ ವೈದಿಕಸಾಹಿತ್ಯದಲ್ಲಿ ಈ ದೇವತೆಯ ನಿರ್ದಿಷ್ಟವಾದ ರೂಪಾದಿಗಳು ವರ್ಣಿತವಾಗಿ ಇರಲು ಸಾಧ್ಯವಾಗಿಲ್ಲ. ಆದಿತ್ಯರನ್ನು ಧಾರಣಮಾಡತಕ್ಕದ್ದೂ, ಆದಿತ್ಯರಿಂದಲೇ ಧರಿಸಲ್ಪಡತಕ್ಕದ್ದೂ, ಆದ ಈ ನಿತ್ಯತತ್ತ್ವವು ಆದಿತ್ಯರಿಗೆಲ್ಲಾ ಆಶ್ರಯರೂಪವಾಗಿದೆ. ಇದೇ ದಿವ್ಯಜ್ಯೋತಿಯು ಅವರೆಲ್ಲರ ಸಾರಭೂತವೂ ಆಗಿದೆ " ಎಂದು ಇದೇ ಪಂಡಿತನು ತನ್ನ ಅಭಿಪ್ರಾಯವನ್ನು ತಿಳಿಸಿದ್ದಾನೆ.

(Journal of the German Oriental Society Vol. 6. p. 68)

" **'ಅನಂತ'** ಎಂಬ ತತ್ತ್ವವನ್ನು ಪ್ರತಿಬಿಂಬಿಸುವ **ಅದಿತಿ** ದೇವತೆಯು ಋಷಿಗಳಿಂದ ದೃಷ್ಟವಾಗಿರುವ ದೇವತೆಗಳಲ್ಲೆಲ್ಲಾ ಅತ್ಯಂತ ಪ್ರಾಚೀನಳು. ಆದರೆ, ಕೇವಲ ಮಾನಸಿಕವಾದ ಭಾವಕಲ್ಪನೆಯಲ್ಲೇ ಅಮೂರ್ತರೂಪದಲ್ಲಿ ಚಿಂತಿತಳಾಗಿರತಕ್ಕ ತತ್ತ್ವವಾಗಿರದೇ, ಮೂರ್ತರೂಪದ ವಿಶ್ವತ್ವವನ್ನು ಒಳಗೊಂಡ ದೇವತೆಯಾಗಿದ್ದಾಳೆ. ಮಾನುಷಪ್ರತ್ಯಕ್ಷಕ್ಕೆ ಗೋಚರಳಾಗತಕ್ಕವಳೂ, ಅನಂತವಾದ ವಿಸ್ತೃತಿಯುಳ್ಳವಳೂ, ಪೃಥ್ವಿನಿಂತಲೂ ಮಿಗಿಲಾದವಳೂ, ಅಂತರಿಕ್ಷಾದಿ ಲೋಕಗಳಿಗೂ ಅತೀತಳೂ ಆಗಿದ್ದಾಳೆ ಈ ಅನಂತತ್ವವನ್ನು ಪ್ರತಿಬಿಂಬಿಸುವುದರಿಂದಲೇ ಅದಿತಿಯು ಅನೇಕ ವಿಧವಾದ ವಿಶೇಷಣಗಳಿಂದ ವರ್ಣಿತಳಾಗಿದ್ದಾಳೆ ".

(Translation of the Rig-veda. I-230)

3. ಅದಿತಿಯು ಆದಿತ್ಯರ ಮಾತೆ ಎಂದು ವರ್ಣಿಸಿರುವ ಪ್ರಕರಣಗಳು :—

ಕೆಳಗೆ ಉದಾಹೃತವಾಗಿರುವ ವಾಕ್ಯಗಳಿಂದ ಅದಿತಿಯು, ವರುಣಾದಿ ದೇವತೆಗಳಿಗೆ ಮಾತೃವೆಂಬುದು ತಿಳಿಯುತ್ತದೆ. ಋಕ್ಸಂಹಿತಾವಾಕ್ಯಗಳೇ ಅಲ್ಲದೇ ಇತರ ಶ್ರುತಿಗಳೂ ಈ ಅಂಶವನ್ನು ತಿಳಿಸುತ್ತವೆ.

" ಸಂಪತ್ತುಗಳಿಗೆಲ್ಲಾ ಪ್ರಭುಗಳಾದ ಮಿತ್ರಾವರುಣರು ತಮ್ಮ ದಿವ್ಯಶಕ್ತಿಯನ್ನು ಪ್ರಕಾಶಪಡಿಸಲೆಂದು, ಜಗನ್ಮಾತೆಯೂ, ಮಹತ್ಸ್ವರೂಪವುಳ್ಳವಳೂ, ಪೂಜ್ಯಳೂ ಆದ **ಅದಿತಿ**ಯು ಮಿತ್ರಾವರುಣರನ್ನು ಹಡೆದಳು "

(೮-೨೫-೩)

" ಸಂಪದ್ಯುಕ್ತನಾದ ಮಿತ್ರನಿಗೂ, ಅರ್ಯಮನಿಗೂ, ಪವಿತ್ರಾತ್ಮನಾದ ವರುಣನಿಗೂ ಮಾತೆಯಾದ ಅದಿತಿಯು ನಮಗೆ ರಕ್ಷಣೆಯನ್ನು ನೀಡಲಿ.

(cf ೧೦-೩೬-೩, ೧೦-೧೩೨-೬, ಅ ವೇ ೫-೧-೯) (೮-೪೭-೯)

೨-೩೭-೭ರಲ್ಲಿ **'ರಾಜಪುತ್ರಾ'** ಎಂದರೆ ಜಗತ್ಪ್ರಭುಗಳಾದ ವರುಣಾದ್ಯಾದಿತ್ಯರೇ ಪುತ್ರಳಾಗಿ ಉಳ್ಳವಳು ಎಂದೂ, ೩-೪-೧೧ರಲ್ಲು **"ಸುಪುತ್ರಾ"** ಉತ್ತಮವಾದ ಪುತ್ರರುಳ್ಳವಳು ಎಂದೂ. ೮-೫೬-೧೧ರಲ್ಲು **ಉಗ್ರಪುತ್ರಾ** ಅತಿ

ಸ್ರಬಲವಾದ ಶಕ್ತಿಯುತರಾದ ಪುತ್ರರುಳ್ಳವಳು ಎಂದೂ; ಅಥರ್ವವೇದದ ೩-೮-೨ ಮತ್ತು ೧೧-೧-೧೧ನೇ ಮಂತ್ರಗಳಲ್ಲಿ **ಶೂರಪುತ್ರಾ** ಎಂದೂ ನಿರ್ದಿಷ್ಟಳಾಗಿದ್ದಾಳೆ. ಆ. ವೇ. ೮-೯-೨೧ನೇ ಮಂತ್ರದಲ್ಲಿ **" ಅಷ್ಟಯೋನೀರದಿತಿರಷ್ಟಪುತ್ರಾ "** ಅದಿತಿಯು ಅಷ್ಟಯೋನಿಯುಳ್ಳವಳು ಮತ್ತು ಅಷ್ಟ ಪುತ್ರರುಳ್ಳವಳು ಎಂದು ಸ್ತುತಳಾಗಿದ್ದಾಳೆ. ಇದೇ ಅಥರ್ವವೇದದ ೮-೯೦-೧೫ನೇ ಮಂತ್ರದಲ್ಲಿ ಆದಿತ್ಯರಿಗೂ, ಅದಿತಿಗೂ ಇರುವ ಸಂಬಂಧವನ್ನು ಕೊಂಚ ವ್ಯತ್ಯಸ್ತವಾಗಿ ತಿಳಿಸಿದೆ

" ಮಾತಾ ರುದ್ರಾಣಾಂ ದುಹಿತಾ ವಸೂನಾಂ ಸ್ವಸಾದಿತ್ಯಾನಾಂ ....ಅದಿತಿಂ ವಧಿಷ್ಟ " ಅದಿಯು ವಸುಗಳಿಗೆ ದುಹಿತೆಯೂ, ರುದ್ರರಿಗೆ ಮಾತೆಯೂ, ಆದಿತ್ಯರಿಗೆ ಸಹೋದರಿಯೂ ಆಗಿದ್ದಾಳೆಂದು ವರ್ಣಿಸಿದೆ. ಸಾಮವೇದದಲ್ಲಿ ಅದಿತಿಯ ಭ್ರಾತೃಗಳೂ, ಪುತ್ರರೂ ಸಹ ಪ್ರತ್ಯೇಕವಾಗಿ ಕೆಳಗೆ ಉದಾಹೃತವಾಗಿರುವ ವಾಕ್ಯದಲ್ಲಿ ತಿಳಿಸಿರುವಂತೆ ನಿರ್ದಿಷ್ಟರಾಗಿದ್ದಾರೆ

" ತ್ವಷ್ಟಾ ನೋ ದೈವ್ಯಂ ವಚಃ . .... . ತ್ರಾಮಣಂ ವಚಃ "

(ಸಾ ವೇ. ೧-೨೯೯)

ತ್ವಷ್ಟೃವೂ, ಪರ್ಜನ್ಯನೂ, ಬ್ರಹ್ಮಣಸ್ಪತಿಯೂ ನಮಗೆ ಆಶೀರ್ವಚನಗಳನ್ನು ಪರಿಸಲಿ ಅದಿತಿಯೂ ಸಹ ಅವಳ ಪುತ್ರರೊಡನೆಯೂ ಭ್ರಾತೃಗಳೊಡನೆಯೂ (**ಪುತ್ರೈರ್ಭ್ರಾತೃಭಿಃ**) ನಮಗೆ ರಕ್ಷಣಾವಾಕ್ಯಗಳನ್ನು ಪರಿಸಲಿ.

4. ಅದಿತಿಗೂ ಅಂತರಿಕ್ಷಕ್ಕೂ ತಾದಾತ್ಮ್ಯಭಾವವಿದೆಯೆ ?

೧೦-೬೩-೨ ನೇ ಋಕ್ಕಿನಲ್ಲಿ, ಉದಕ ಮತ್ತು ಪೃಥ್ವಿಗಳೊಡನೆ ಅದಿತಿಯೂ ದೇವಯೋನಿಯೆಂದು ವರ್ಣಿತಳಾಗಿದ್ದಾಳೆ ಆ ಮಂತ್ರದ ಅರ್ಥವೇನೆಂದರೆ, " ಎಲೈ ದೇವತೆಗಳೇ, ನಿಮ್ಮ ನಾಮಗಳೆಲ್ಲವೂ ಪವಿತ್ರವಾದುವು ಮತ್ತು ಸ್ತೂಜ್ಯವಾಮವು ಅದಿತಿಯ ಗರ್ಭದಲ್ಲಿ ಉತ್ಪನ್ನರಾದವರೂ, ಪೃಥ್ವಿಯ ಗರ್ಭದಲ್ಲಿ ಉತ್ಪನ್ನರಾದವರೂ ಮತ್ತು ಅಬ್ಬರೂ ಆದ ನೀವು ನಮ್ಮ ಪ್ರಾರ್ಥನೆಯನ್ನು ಕೇಳಿರಿ " ಎಂದಿದೆ

[ಈ ವಿಭಾಗವು ದೇವತೆಗಳಲ್ಲಿ ದ್ಯುಲೋಕಸ್ಥರು, ಅಂತರಿಕ್ಷಸ್ಥರು ಮತ್ತು ಪೃಥಿವೀಸ್ಥರು ಎಂಬ ಮೂರು ವಿಭಾಗಾತ್ಮಕವಾಗಿರುತ್ತದೆ (ಈ ವಿಭಾಗಕ್ರಮವನ್ನು ನಾವು ಹಿಂದೆ ೧-೧೩೯-೧೧ ನೇ ಮಂತ್ರವನ್ನು ಉದ್ಧರಿಸಿದಾಗ ವಿಮರ್ಶಿಸಿದೇವೆ). ಅಂತರಿಕ್ಷಸ್ಥರು ಎಂಬುದಕ್ಕೆ ಬದಲಾಗಿ ಉದಕದಿಂದ ಉತ್ಪನ್ನರಾದವರು ಎಂದು ಹೇಳಿರುವುದು ಒಂದು ವಿಶೇಷ. ಆದರೆ, ಈ ಸನ್ನಿವೇಶದಲ್ಲಿ ಮಾತ್ರವಲ್ಲದೇ, ೧೦-೪೯-೨ ರಲ್ಲೂ ಸಹ ಇದೇ ಪ್ರಯೋಗವಿರುತ್ತದೆ. " ದ್ಯುಲೋಕೋತ್ಪನ್ನೆರೂ, ಅಂತರಿಕ್ಷೋತ್ಪನ್ನರೂ ಮತ್ತು ಪೃಥಿವ್ಯುತ್ಪನ್ನರೂ ಆದ ಸಕಲ ದೇವತೆಗಳೂ ಸಹ ನನ್ನನ್ನೇ ಇಂದ್ರನೆಂದು ಸೃಂಜಿಸುತ್ತಾರೆ" ಎಂದು ಈ ವಿಭಾಗವಿದೆ (ಪ್ರಕೃತವಾದ ಈ ಎರಡು ಉದಾಹರಣೆಗಳಲ್ಲಿಯೂ ಸಹ **ಅಪ್** ಎಂಬ ಶಬ್ದಕ್ಕೆ ಅಂತರಿಕ್ಷವೆಂದೇ ಅರ್ಥವನ್ನು ಹೇಳಬಹುದು) ಇದರಂತೆಯೇ, ೧೦-೬೫ ೯, ೨-೩೮-೧೧, ೧೦-೪೫-೧, ಮತ್ತು ೭-೩೫-೧೧ ಈ ಋಕ್ಕುಗಳಲ್ಲಿಯೂ ಇದೇ ವಿಭಾಗಗಳೂ ನಿಷ್ಕೃಷ್ಟವಾಗಿವೆ. ಆದರೆ, ೬-೫೦-೧೧ ಮತ್ತು ೭-೩೫-೧೪ ನೇ ಮಂತ್ರಗಳಲ್ಲಿ ದಿವ್ಯಾಃ, ಪಾರ್ಥಿವಾಸಃ, ಗೋಜಾತಾಃ, ಆಪ್ಯಾಃ ಎಂಬ ನಾಲ್ಕು ವಿಭಾಗಗಳಾಗಿರುತ್ತವೆ.]

೧೦-೬೩-೨ ರಂತೆಯೇ, ೧೦-೬೩-೩ ನೆಯ ಋಕ್ಕಿನಲ್ಲಿಯೂ ಈ ಅಂಶವನ್ನು ಗಮನಿಸಬಹುದು. "ಯಾವ ಆದಿತ್ಯರಿಗೆ ಮಾತೆಯಾದ ಪೃಥ್ವಿಯು ಮಾಧುರ್ಯೋಪೇತವಾದ ಕ್ಷೀರವನ್ನೂ, ಅದಿತಿರೂಪಳಾದ ದ್ಯುಲೋಕಾಧಿ

ದೇವತೆಯು ಅಮೃತನನ್ನೂ ಕೊಡುವರೋ ಅಂತಹ ನೃಷ್ಟಿಶ್ರದರೂ ಸತ್ಕರ್ಮಕಾರಕರೂ ಆದ ಆದಿತ್ಯರಿಗೆ ಸ್ತುತಿಗಳನ್ನರ್ಪಿಸಿರಿ'' ಎಂದಿರುವಾಗ **ಅದಿತಿಃ** ಎಂಬ ಪದವು **ದ್ಯೌಃ** ಎಂಬುದಕ್ಕೆ ವಿಶೇಷಣವಾಗಿದೆ. ಅಲ್ಲದೇ, ೫-೫೯-೮ನೇ ಋಕ್ಕಿನಲ್ಲಿಯೂ ಸಹ '' **ಮಿಮಾತು ದ್ಯೌರದಿತಿರ್ವೀತಯೇ** '' ಎಂದು ಪ್ರಯೋಗವಿದೆ. ಇಲ್ಲಿ **ಅದಿತಿ** ಶಬ್ದಕ್ಕೆ ಸಾಯಣರೇ ನಿಷ್ಕೃಷ್ಟವಾದ ಅರ್ಥವನ್ನು ಹೇಳಿಲ್ಲ. **ದ್ಯೌಃ ಅಂತರಿಕ್ಷಂ; ಕೇದೃಶೀ। ಅದಿತಿಃ ಅದೀನಾ।** ದ್ಯೌಃ ಎಂದರೆ **ಅಂತರಿಕ್ಷ** ಮತ್ತು ಅದೀನಳಾದ ಅಂತರಿಕ್ಷನೆಂದು ಒಂದರ್ಥವನ್ನೂ, ಎರಡನೆಯದಾಗಿ, **ಅದಿತಿಃ-ಭೂಮಿಶ್ಚ** ಎಂದು **ಅದಿತಿ** ಶಬ್ದಕ್ಕೆ **ಭೂಮಿ** ಎಂಬ ಇನ್ನೊಂದರ್ಥವನ್ನೂ ಹೇಳಿದ್ದಾರೆ ಇಂತಹ ಸಂದರ್ಭಗಳು ಅದಿತಿಗೂ ಅಂತರಿಕ್ಷಕ್ಕೂ ತಾದಾತ್ಮ್ಯವನ್ನು ತೋರಿಸುತ್ತವೆ. ಆದರೆ,

'' **ದೇವಾँ ಆದಿತ್ಯಾँ ಅದಿತಿಂ ಹವಾಮಹೇ ಯೇ ಪಾರ್ಥಿವಾಸೋ ದಿವ್ಯಾಸೋ ಅಪ್ಸುಯೇ** ''
(೧೦-೬೫-೯)

ಎಂಬ **ಈ** ಮಂತ್ರದಲ್ಲಿ ಆದಿತ್ಯರು, ಅವರ ಮಾತೆಯಾದ ಅದಿತಿ ಇವರೆಲ್ಲದೇ ಪೃಥಿವ್ಯುತ್ಪನ್ನರೂ, ದ್ಯುಲೋಕೋತ್ಪನ್ನರೂ **ಆದ** ದೇವತೆಗಳು ಎಂದು ಬೇರೆ ಬೇರೆ ಹೇಳಿದೆ **ಅದಿತಿ** ಮತ್ತು **ದ್ಯುಲೋಕ** ಇವೆರಡೂ ಭಿನ್ನವೆಂದು **ಈ** ಸಂದರ್ಭದಲ್ಲಿ ತಿಳಿಸಿದೆ.

5. ಅದಿತಿಯು ಪೃಥ್ವಿಗಿಂತಲೂ ಬೇರೆಯಾದ ದೇವತೆ ಎಂಬುದಕ್ಕೆ ಆಧಾರಗಳು.

ಮೇಲೆ ಉದ್ಧರಿಸಿರುವ ಕೆಲವು ವಾಕ್ಯಗಳಲ್ಲಿ ಅದಿತಿಗೂ ಅಂತರಿಕ್ಷಕ್ಕೂ ತಾದಾತ್ಮ್ಯವನ್ನು ಹೇಳಿದ್ದರೂ ಸಹ, ಸಂಹಿತೆಯ ಉಳಿದ ಭಾಗಗಳಲ್ಲೂ ಸಹ ಇದೇ ತಾದಾತ್ಮ್ಯಸಂಬಂಧವನ್ನು ತೋರಿಸಿದೆಯೆಂದು ಹೇಳಲಾಗುವುದಿಲ್ಲ. ಒಂದೊಂದು ಸಲ ಪೃಥ್ವಿಯೂ, ಅದಿತಿಯೂ ಒಂದೇ ಎಂದು ತೋರಿಸುವ ಸನ್ನಿವೇಶಗಳೂ ಇವೆ ಆದರೆ ಇದಕ್ಕೆ ವ್ಯತ್ಯಸ್ತವಾದ ವರ್ಣನೆಗಳೂ ಇರುತ್ತವೆ ನಿರುಕ್ತಪಾರಗಳಂತೆ ಒಂದು ಸಲ ಪೃಥಿವಿಗೂ ಇನ್ನೊಂದು ಸಲ ದ್ಯಾವಾಪೃಥಿವಿಗಳಿಗೂ ಪರ್ಯಾಯಪದವಾಗಿರುತ್ತದೆಂದು ಮೇಲೆ ತಿಳಿಸಿದೆ. '' ಉತ್ತಮವಾದ ಕರ್ಮವನ್ನಾಚರಿಸುವ ಪುತ್ರರೊಡಗೂಡಿ ಅದಿತಿರೂಪಳಾದ ಪೃಥ್ವಿಯು ಅಗ್ನಿಯ ಅನುಗ್ರಹದಿಂದ ಸ್ಥಿತಳಾಗಿದ್ದಾಳೆ '' ಇತ್ಯಾದಿಯಾಗಿ (೧-೭೨-೯) ಒಂದೆರಡು ಸನ್ನಿವೇಶಗಳಲ್ಲಿ **ಅದಿತಿ** ಶಬ್ದವು ಪೃಥ್ವಿಗೆ ವಿಶೇಷಣವಾಗಿರುತ್ತದೆ (ಅ ವೇ ೧೩-೧-೩೮) ಆದರೆ, ಇತರ ಅನೇಕ ಸಂದರ್ಭಗಳಲ್ಲಿ ಪೃಥ್ವಿಗಿಂತಲೂ ಭಿನ್ನವಾದ ದೇವತೆಯೆಂಬುದು ನಿಷ್ಕೃಷ್ಟವಾಗಿ ತಿಳಿಯುತ್ತದೆ ಉದಾಹರಣೆಗೆ

'' ದ್ಯಾವಾಪೃಥಿವಿಗಳೂ, ಅಪ್ಪುಗಳೂ, ಸನಕ್ಷತ್ರನಾದ ಸೂರ್ಯನೂ ನಮ್ಮ ಪ್ರಾರ್ಥನೆಯನ್ನು ಕೇಳಲಿ '' ಎಂದು ೩-೫೪-೧೯ನೇ ಮಂತ್ರದಲ್ಲಿ ಪ್ರಾರ್ಥಿಸಿ ಪುನಃ ಅದಕ್ಕೆ ಮುಂದಿನ ಎಂದರೆ, ೩-೫೪-೨೦ನೇ ಋಕ್ಕಿನಲ್ಲಿ, '' ಆದಿತ್ಯರೊಡಗೂಡಿದ ಅದಿತಿಯು ನಮ್ಮ ಪ್ರಾರ್ಥನೆಯನ್ನು ಕೇಳಲಿ '' ಎಂದು ಪ್ರಾರ್ಥಿಸಿದೆ. ಆದುದರಿಂದ ಅದಿತಿಯು ಪೃಥಿವಿಗಿಂತಲೂ ಭಿನ್ನಳು ಎಂಬ ವಿಷಯದಲ್ಲಿ ಸಂಶಯವಿಲ್ಲ ಇನ್ನೂ ಕೆಲವು ಉದಾಹರಣೆಗಳನ್ನು ತೆಗೆದುಕೊಂಡರೆ,

'' ಇಂದ್ರನನ್ನೂ, ಅಗ್ನಿಯನ್ನೂ, ಮಿತ್ರನನ್ನೂ, ವರುಣನನ್ನೂ, ಅದಿತಿಯನ್ನೂ, ಅಂತರಿಕ್ಷವನ್ನೂ, ಪೃಥಿವಿಯನ್ನೂ, ದ್ಯುಲೋಕವನ್ನೂ, ಮರುತ್ತುಗಳನ್ನೂ, ಪರ್ವತಗಳನ್ನೂ, ಅಪ್ಪುಗಳನ್ನೂ ನಾನು **ಪ್ರಾರ್ಥಿಸಿ ಕರೆಯುತ್ತೇನೆ** '' (೫-೪೬-೩)

" ಪಿತೃರೂಪನಾದ ದ್ಯುಲೋಕವೇ, ಉಪಕಾರಕಳಾದ ಪೃಥ್ವಿಯೇ, ಭ್ರಾತೃರೂಪನಾದ ಅಗ್ನಿಯೇ, ವಸುಗಳೇ, ನಮಗೆ ಸುಖದಾಯಕರಾಗಿರಿ. ಎಲೈ ಆದಿತ್ಯರೇ, ಅದಿತಿದೇವಿಯೇ, ನಮಗೆ ಪೂರ್ಣವಾದ ರಕ್ಷಣೆಯನ್ನು ನೀಡಿರಿ " (೬-೫೧-೫)

" ಮಿತ್ರನೂ, ವರುಣನೂ, ಅದಿತಿಯೂ, ಸಾಗರಾಧಿದೇವತೆಯೂ, ಪೃಥ್ವಿಯೂ, ದ್ಯುಲೋಕವೂ ನಮಗೆ ಸಂತೋಷಕಾರಕವಾಗಲಿ " (೯-೯೭-೫೮)

" ಪ್ರಾಜ್ಞರೂ, ವಿವೇಕಿಗಳೂ ಆದ ದ್ಯಾವಾಪೃಥಿವಿಗಳು ನಮ್ಮನ್ನು ರಕ್ಷಿಸಲಿ ಮಿತ್ರಾವರುಣರ ಮಾತೆಯಾದ ಅದಿತಿಯೂ ನಮ್ಮನ್ನು ಆಪತ್ತುಗಳಿಂದ ರಕ್ಷಿಸಲಿ " (೧೦-೩೬-೨, ೩)

" ದ್ಯಾವಾಪೃಥಿವಿಗಳೂ, ಯಮನೂ, ಅದಿತಿಯೂ, ತ್ವಷ್ಟೃವೂ .. ....ವಿಷ್ಣುವೂ ನಮ್ಮ ಪೂಜೆಗೆ ಅರ್ಹರಾಗಿರುತ್ತಾರೆ " (೧೦-೬೬-೧೧)

" ಅತ್ಯುತ್ತಮವಾದ ರಕ್ಷಣೆಯನ್ನು ನೀಡತಕ್ಕ ಪೃಥ್ವಿಯನ್ನೂ. ಪಾಪರಹಿತವಾದ ದ್ಯುಲೋಕವನ್ನೂ, ಮಾರ್ಗದರ್ಶಕಳಾದ ಅದಿತಿಯನ್ನೂ .. ನಾವು ಆಶ್ರಯಿಸೋಣ " (೧೦-೬೩-೧೦)

ಇತ್ಯಾದಿ ವಾಕ್ಯಗಳಲ್ಲಿ ಪೃಥ್ವಿಗೂ ಅದಿತಿಗೂ ಇರತಕ್ಕ ಭಿನ್ನತೆಯು ಸ್ಪಷ್ಟವಾಗಿರುತ್ತದೆ. ಇದೇ ಅಭಿಪ್ರಾಯವನ್ನು ಸಮರ್ಥಿಸುವಂತೆ ವಾಜಸನೇಯ ಸಂಹಿತೆಯಲ್ಲಿಯೂ ಸಹ ಈ ರೀತಿ ಪ್ರಾರ್ಥನೆಯಿರುತ್ತದೆ.—" **ಪೃಥಿವೀ ಚಿಮೇ೭ದಿತಿಶ್ಚ ಮೇ** " .. ಪೃಥ್ವಿಯೂ, ಅದಿತಿಯೂ, ದಿತಿಯೂ.. .ನನ್ನನ್ನು ತೃಪ್ತಿಗೊಳಿಸಲಿ [ವಾ ಸಂ ೧೪-೩೨] ಎಂದಿದೆ ಅಥರ್ವವೇದದಲ್ಲಿಯೂ ಸಹ, **ಭೂಮಿರ್ಮಾತಾ ಅದಿತಿರ್ನೋ ಜನಿತ್ರಂ** .. " ಮಾತೃರೂಪಳಾದ ಪೃಥ್ವಿಯೂ, ಉತ್ಪತ್ತಿಹೇತುವಾದ ಅದಿತಿಯೂ ನಮ್ಮನ್ನು ರಕ್ಷಿಸಲಿ ಎಂದಿದೆ (ಅ. ವೇ ೬-೧೭೨-೨).

ಆದರೆ ಕೆಲವು ಬ್ರಾಹ್ಮಣವಾಕ್ಯಗಳಲ್ಲಿ ಅದಿತಿಗೂ, ಪೃಥಿವಿಗೂ ನಿಷ್ಪೃಷ್ಟವಾದ ತಾದಾತ್ಮ್ಯವನ್ನೇ ಹೇಳಿದೆ. ಉದಾಹರಣೆಗೆ :—

" **ಇಯಂ ವೈ ಪೃಥ್ವೀ ಅದಿತಿಃ ಸಾ ಇಯಂ ಪ್ರತಿಷ್ಠಾ** " (ಶ. ಬ್ರಾ. ೨-೨-೧-೧೯)

ಈ ಪೃಥ್ವಿಯೇ ಅದಿತಿಯು , ಇವಳೇ ಜಗತ್ತಿನ ಧಾರಕಳು.

" **ಇಯಂ ವೈ ಪೃಥ್ವೀ ಅದಿತಿಃ ಸಾ ಇಯಂ ದೇವಾನಾಂ ಪತ್ನೀ** " (ಶ. ಬ್ರಾ. ೫-೩-೧-೪)

ಈ ಪೃಥ್ವಿಯೇ ಅದಿತಿಯು ಅವಳೇ ಪೂಜ್ಯಳಾದ ದೇವಪತ್ನಿಯು. ಇತ್ಯಾದಿಯಾಗಿರತಕ್ಕ ಬ್ರಾಹ್ಮಣವಾಕ್ಯಗಳೂ ಇರುವುದರಿಂದ **ಅದಿತಿ** ಶಬ್ದಕ್ಕೆ ನಿಷ್ಪೃಷ್ಟವಾದ ಅರ್ಥವನ್ನು ಆಯಾ ಸಂದರ್ಭೋಚಿತವಾಗಿ ಮಾತ್ರ ಹೇಳಬೇಕು

ಅದಿತಿಯು ಅಂತರಿಕ್ಷಸ್ಥವಾದ ದೇವತೆಗಳಿಗೆಲ್ಲಾ ಮುಖ್ಯಳು ಎಂದು ಯಾಸ್ಕರು ಸೂಚಿಸಿರುವುದನ್ನು ಹಿಂದೆ ತಿಳಿಸಿದೆ ಆದರೆ ಅದೇ ಯಾಸ್ಕರು ಅದಿತಿಪುತ್ರರಾದ ಆದಿತ್ಯರನ್ನು ದ್ಯುಲೋಕಸ್ಥರಾದ ದೇವತೆಗಳೊಡನೆ ಸೇರಿಸಿ ಅವರ ಮಾತೆಯಾದ ಅದಿತಿಯನ್ನು ಮಾತ್ರ ಅಂತರಿಕ್ಷಸ್ಥರಾದ ದೇವತೆಗಳೊಡನೆ ಸೇರಿಸದಿರುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ ಆದರೆ, ಯಾಸ್ಕರು ನಿಷ್ಪೃಷ್ಟವಾದ ವರ್ಗೀಕರಣದಲ್ಲಿ ಪ್ರಯತ್ನಿಸಿದ್ದಾರೆಂದು ಹೇಳಲಾಗುವುದಿಲ್ಲ-

೬. ಅದಿತಿ ಮತ್ತು ದಿತಿ:—

" ಎಲೈ ಮಿತ್ರಾವರುಣರೇ, ಉಷಃಕಾಲದಲ್ಲಿ ನಿಮ್ಮ ಸುವರ್ಣನಿರ್ಮಿತವಾದ ರಥವನ್ನು ಹತ್ತಿ ಅದಿತಿಯನ್ನೂ ದಿತಿಯನ್ನೂ ವೀಕ್ಷಿಸಿರಿ " (ಋ. ಸಂ. ೫-೬೨-೪)

ಎಂಬ ಅರ್ಥವನ್ನು ಕೊಡುವ **'ಹಿರಣ್ಯರೂಪಂ'** ಎಂಬ ಮಂತ್ರದಲ್ಲಿ **ಅದಿತಿ**ಯು **ದಿತಿ**ಯೊಂದಿಗೆ ನಿರ್ದಿಷ್ಟ ಳಾಗಿದ್ದಾಳೆ. **ಅದಿತಿ—ದಿತಿ** ಈ ಎರಡು ಪದಗಳೂ ಸಹ ಒಂದಕ್ಕೊಂದಕ್ಕೆ ವ್ಯತ್ಯಾಸವನ್ನು ತೋರಿಸುವ ಅರ್ಥ ದಾಯಕವಾಗಿರುತ್ತದೆ. ಅಥವಾ ಒಂದರ ನ್ಯೂನತೆಯನ್ನು ಇನ್ನೊಂದು ಪೂರ್ಣಗೊಳಿಸುವುದಾಗಿರುತ್ತದೆ. ಈ ರೀತಿ ಒಂದರ್ಥದಲ್ಲಿ ಪರಸ್ಪರ ವಿರೋಧಸೂಚಕವೂ, ಇನ್ನೊಂದರ್ಥದಲ್ಲಿ ಪರಸ್ಪರ ಪರಿಪೂರಕವೂ ಆದ ಈ ಎರಡು ದೇವತೆಗಳ ಸಂಬಂಧವನ್ನೂ ಮತ್ತು ಭಿನ್ನತೆಯನ್ನೂ ಮೇಲಿನ ಮಂತ್ರವು ಸೂಚಿಸುತ್ತದೆ

[ಇದೇ ಪದಗಳು ವಾಜಸನೇಯಸಂಹಿತೆಯಲ್ಲಿಯೂ ಸಹ ಪ್ರಯುಕ್ತವಾಗಿವೆ [೧೦-೧೬]. ಇದಕ್ಕೆ ಭಾಷ್ಯ ಕಾರರು ಅಧಿದೈವಾರ್ಥದಲ್ಲಿ ತಾತ್ಪರ್ಯವನ್ನು ಹೇಳಿದ್ದಾರೆ. **ಅದಿತಿ** ಶಬ್ದಕ್ಕೆ ದಾರಿದ್ರ್ಯರಹಿತನೆಂದೂ (ಅದೀನ) ಮತ್ತು **ದಿತಿ** ಶಬ್ದಕ್ಕೆ ದರಿದ್ರನೆಂದೂ (ದೀನ) ಅರ್ಥಮಾಡಿದ್ದಾರೆ. ಎಂದರೆ ವಿಹಿತಾನುಷ್ಠಾತನಾದವನು ಅದಿತಿಯು, ನಾಸ್ತಿಕ ವರ್ತನೆಯುಳ್ಳವನು ದಿತಿಯು ಈ ರೀತಿಯ ವ್ಯತ್ಯಾಸವನ್ನು ತೋರಿಸಿದೆ]

ಸಾಯಣರು ಋ. ಸಂ. ೫-೬೨-೪ನೇ ಮಂತ್ರದ ಭಾಷ್ಯದಲ್ಲಿ **ಅದಿತಿ**ಯೆಂದರೆ ಅಖಂಡನೀಯವಾದ **ಭೂಮಿ** ಯೆಂದೂ, **ದಿತಿ**ಯೆಂದರೆ ಖಂಡನೀಯವಾದ ಎಂದರೆ ನೈಯಕ್ತಿಕವಾದ ಪ್ರಜಾದಿಗಳುಳ್ಳ **ಭೂಮಿ**ಯೆಂದೂ ಅರ್ಥ ಮಾಡಿದ್ದಾರೆ. Roth ಎಂಬ ಜರ್ಮನ್ ಪಂಡಿತನು **ಅದಿತಿ**ಶಬ್ದಕ್ಕೆ **ನಿತ್ಯ**ವೆಂದೂ, **ದಿತಿ** ಶಬ್ದಕ್ಕೆ **ಅನಿತ್ಯ**ವೆಂದೂ ಅರ್ಥಮಾಡಿದಾನೆ

(Journal of German Oriental Society. vol. VI p 71)

ಒಟ್ಟಿನಲ್ಲಿ ಎಲ್ಲಾ ಸನ್ನಿವೇಶಗಳನ್ನೂ ಪರಿಶೀಲಿಸಿದರೆ, ಅದಿತಿಯು ಅಂತರಿಕ್ಷವನ್ನೂ, ದಿತಿಯು ಪೃಥ್ವಿಯನ್ನೂ ಪ್ರತಿಬಿಂಬಿಸುವ ದೇವತೆಗಳೆನ್ನಬಹುದೆಂದು ತೋರುತ್ತದೆ ಪ್ರಕೃತಿಯ ಎಲ್ಲಾ ಅವಸ್ಥೆಗಳನ್ನೂ ಒಳಗೊಂಡಿರುವ ಪರಿಪೂರ್ಣಾವಸ್ಥೆಯನ್ನು ಈ ಎರಡು ತತ್ತ್ವಗಳೂ ಸೇರಿ ಪ್ರತಿಬಿಂಬಿಸುವುವು ಎಂದೂ ಹೇಳಬಹುದು

ಋ ಸಂ ೪-೨-೧೧ನೇ ಮಂತ್ರದಲ್ಲಿ ಪ್ರಯುಕ್ತವಾಗಿರುವ, **ದಿತಿ**ಶಬ್ದಕ್ಕೆ ಸಾಯಣರು **ಉದಾರಿಯಾದ ದಾನಿಯೆಂದೂ, ಅದಿತಿ** ಶಬ್ದಕ್ಕೆ ದಾನವಾಡದಿರುವ **ಲೋಭಿ**ಯೆಂದೂ ಅರ್ಥಮಾಡಿದ್ದಾರೆ **ದಿತಿಂ— ದಾತಾರಂ ; ಅದಿತಿಂ—ಅದಾತುಃ ಪಂಚಮ್ಯರ್ಥೇ ದ್ವಿತೀಯಾ** । ಎಂದು ವಿವರಿಸಿದೆ

ಅದಿತಿಯಿಲ್ಲದೇ, ಕೇವಲ **ದಿತಿ**ಪ್ರಯೋಗವಿರುವ ಸಂದರ್ಭಗಳೂ ಕೆಲವಿವೆ ಉದಾಹರಣೆಗೆ—

" ಅಗ್ನಿಯೇ, ಪೂಜ್ಯರಾದ ಸವಿತೃ ಮತ್ತು ಭಗದೇವತೆಗಳೇ, ನಮಗ ಸ್ರಖ್ಯಾತಿಯನ್ನೂ ಸಂತತಿಯನ್ನೂ ಅನುಗ್ರಹಿಸಿರಿ. **ದಿತಿ**ಯೂ ಸಹ ನನ್ನ ಅಪೇಕ್ಷಿತವಾದ ವಸ್ತುಗಳನ್ನು ಅನುಗ್ರಹಿಸಿ ಕೊಡುತ್ತಾಳೆ "
(೭-೧೫-೧೩)

ಎಂಬರ್ಥವನ್ನು ಕೊಡುವ **' ತ್ವಮಗ್ನೇ '** ಎಂಬ ಮಂತ್ರದಲ್ಲಿ **ದಿತಿ** ಶಬ್ದಕ್ಕೆ ಸಾಯಣರು **ದೇವಿ**ಯೆಂಬ ಅರ್ಥವನ್ನು ಮಾತ್ರ ಹೇಳಿದ್ದಾರೆ ಇಲ್ಲಿ **ದಿತಿ**ಯು **ಅದಿತಿ**ಯೊಡನೆ ಸೇರಿಲ್ಲ ಈ ಸಂದರ್ಭದಲ್ಲಿ ಆಂಗ್ಲ ಅಥವಾ ಜರ್ಮನ್

ಪಂಡಿತರು **ದಿತಿಶಬ್ದಕ್ಕೆ** ತಮ್ಮದೇ ಆದ ಅರ್ಥವನ್ನು ತಮ್ಮ ಕಲ್ಪನೆಗನುಸಾರವಾಗಿ ಸೇರಿಸಿದ್ದಾರೆ ಉದಾಹರಣೆಗೆ Roth ಎಂಬುವನು "ದಿತಿಯೆಂದರೆ ಔದಾರ್ಯವನ್ನಾಗಲಿ ಅಥವಾ ಸಂಪದ್ವೃದ್ಧಿಯನ್ನಾಗಲಿ ಪ್ರತಿಬಿಂಬಿಸುವ ದೇವತಾ ವಿಶೇಷ" ವೆಂದು ಹೇಳಿದ್ದಾನೆ. Max Muller ಎಂಬುವನು "ಈ ಸಂದರ್ಭದಲ್ಲಿ **ಅದಿತಿ** ಪದವೇ ದಿತಿಯಾಗಿ ಪಾರಭೇದದಿಂದ ಪರಿವರ್ತಿತವಾಗಿದೆ" ಯೆಂದೂ ತಿಳಿಸಿದ್ದಾನೆ. ಆ ವೇ ೧೫-೬-೭, ೧೫-೧೮-೪, ವಾ ಸಂ. ೧೪-೩೨ ಈ ಮಂತ್ರಗಳಲ್ಲಿ ದಿತಿ ಮತ್ತು ಅದಿತಿಯರು ಪ್ರತ್ಯೇಕ ದೇವತೆಗಳೆಂದು ನಿಷ್ಕೃಷ್ಟವಾಗಿ ತಿಳಿಸಿದೆ ಆ ವೇ. ೭-೭-೧೦ರಲ್ಲಿ ದಿತಿ ಪುತ್ರರಾರು ಮತ್ತು ಅದಿತಿ ಪುತ್ರರಾರು ಎಂಬುದನ್ನು ನಿರ್ದೇಶಿಸಿದೆ ಈ ದಿತಿಪುತ್ರರೇ ಮುಂದೆ ಪುರಾಣಾದಿಗಳಲ್ಲಿ ದೈತ್ಯರೆಂದೂ, ದೇವತೆಗಳ ಶತ್ರುಗಳೆಂದೂ ಪರಿಗಣಿತರಾಗಿದ್ದಾರೆ

7. ವಿಶ್ವಪ್ರಕೃತಿಯನ್ನು ಪ್ರತಿಬಿಂಬಿಸುವ ದೇವತಾತತ್ತ್ವವೇ ಅದಿತಿಯಾಗಿರಲು ಸಾಧ್ಯ.

ವಿಶ್ವವ್ಯಾಪಕವಾದ ಪ್ರಕೃತಿಯನ್ನೇ **ಅದಿತಿ**ಯು ಪ್ರತಿಬಿಂಬಿಸುತ್ತಾಳೆ ಎಂದು ತಿಳಿಸುವ ಮಂತ್ರಗಳೂ ಇರುತ್ತವೆ ದ್ಯುಲೋಕಸ್ಥವೂ, ಅಂತರಿಕ್ಷಸ್ಥವೂ ಆದ ಯಾವ ಸಕಲ ವಸ್ತುಗಳುಂಟೋ, ದೈವೀ ಮತ್ತು ಮಾನುಷ ಎಂಬ ಯಾವ ಯಾವ ಭೂತಗಳುಂಟೋ, ಭೂತ, ಭವಿಷ್ಯತ್ತು ಮತ್ತು ವರ್ತಮಾನಾದಿಗಳಿಗೆಲ್ಲಾ ಸೇರಿದ ಯಾವ ತತ್ತ್ವವಿಶೇಷವುಂಟೋ, ಅವೆಲ್ಲಕ್ಕೂ ಅದಿತಿಯೇ ಮೂಲಳು ಮತ್ತು ಅವಳೇ ಸರ್ವಾತ್ಮಳಾಗಿದ್ದಾಳೆ

"ಅದಿತಿರ್ದ್ಯೌರದಿತಿರಂತರಿಕ್ಷಂ.....ಅದಿತಿರ್ಜನಿತ್ವಂ"

(ಋ. ಸಂ ೧-೮೯-೧೦)

ಆಸಿಂಡಳಾದ ಅದಿತಿಯು ಸಕಲ ವಿಶ್ವಕ್ಕೂ ಜನ್ಮದಾತೆಯು ಅವಳೇ ಜಗಜ್ಜನನಿಯು, ಅವಳೇ ಜಗಜ್ಜನಕಳು. ಉತ್ಪನ್ನವಾದ ಸಕಲ ವಸ್ತುವೂ ಅವಳೇ ಅವಳೇ ಎಲ್ಲಕ್ಕೂ ಉತ್ಪತ್ತಿಸ್ಥಾನವು ವರ್ಣಾತ್ಮಕವಾದ ಮತ್ತು ನಿಷಾದದಿಂದ ಕೂಡಿದ ಐದುಜಾತಿಯ ಜನರೂ ಅವಳೇ ದೇವಗಂಧರ್ವಾದಿಗಳೂ ಅವಳೇ. ಅದಿತಿಯೇ ಸಕಲ ದೇವತೆಗಳು. ಅವಳೇ ಪ್ರಕಾಶಮಾನವಾದ ಸ್ವರ್ಗವು. ಅವಳೇ ಅಂತರಿಕ್ಷವು ಅವಳೇ ಸಕಲ ವಿಶ್ವವು- ಅವಳೇ ವಿಶ್ವ ನಿಯಾಮಕಳು.

ಸಾಯಣರು ಈ ವಾಕ್ಯಕ್ಕೆ ಭಾಷ್ಯವನ್ನು ಹೇಳುವಾಗ "ಇಲ್ಲಿ ಅದಿತಿಶಬ್ದಕ್ಕೆ ಪೃಥ್ವಿಯೆಂದಾಗಲಿ ಅಥವಾ ದೇವಮಾತೆಯೆಂದಾಗಲಿ ಅರ್ಥ" ಎಂದು ತಿಳಿಸಿ ಅವಳ ವಿಶ್ವವ್ಯಾಪಕತ್ವವನ್ನು ವಿವರಿಸಿದ್ದಾರೆ **ಅದಿತಿರದೀನಾ ಅಖಂಡನೀಯೋ ವಾ ಪೃಥ್ವೀ ದೇವಮಾತಾ ವಾ। ... ಏವಂ ಸಕಲಜಗದಾತ್ಮನಾ ಅದಿತಿಃ ಸ್ತೂಯತೇ** ನಿರುಕ್ತಕಾರರು ಈ ಪದದ ನಿರ್ವಚನವನ್ನು ತಿಳಿಸುತ್ತಾ **(ಅದಿತಿರದೀನಾ ದೇವಮಾತಾ)** ಮಹಾತ್ಮಳಾದ ದೇವಮಾತೆಯೆಂದರ್ಥಮಾಡಿದ್ದಾರೆ. (ನಿ ೪-೨೨) ಮೇಲೆ ಉದ್ಧೃತವಾಗಿರುವ ೧-೮೯-೧೦ನೇ ಮಂತ್ರದಲ್ಲಿ ಅವಳ ಮಾಹಾತ್ಮ್ಯವೂ ವಿವಿಧವಾದ ರೂಪಪ್ರಕಾಶನವೂ ವಿವೃತವಾಗಿದೆ

"ಸ್ವಯಂಭು ಬ್ರಹ್ಮ ಪರಮಂ ತಪೋ ಯತ್। ಸ ಏವ ಪುತ್ರಃ ಸ ಪಿತಾ ಸ ಮಾತಾ" ಸ್ವಯಂಭುವಾದ ಪರಬ್ರಹ್ಮನೇ ಪರಮಪವಿತ್ರವಾದ ತಪಸ್ಸು. ಆತನೇ ಪುತ್ರನು, ಆತನೇ ಮಾತೃವು, ಪಿತೃವು ಇತ್ಯಾದಿಯಾಗಿ ಯಾವ ರೀತಿ ಬ್ರಹ್ಮನಿಗೆ ಸರ್ವಾತ್ಮತ್ವವೂ ವಿಶ್ವವ್ಯಾಪಕತ್ವವೂ ವರ್ಣಿತವಾಗಿದೆಯೋ (ತೈ ಬ್ರಾ. ೩-೧೨-೩-೧) ಅದೇ ರೀತಿಯಲ್ಲಿ ಈ ಮಂತ್ರದಲ್ಲಿ ಅದಿತಿಯು ವರ್ಣಿತಳಾಗಿದ್ದಾಳೆ.

ಅದಿತಿತತ್ತ್ವದ ಮಾಹಾತ್ಮ್ಯವನ್ನರಿಯಲು ಇನ್ನೊಂದು ಬಹು ಮುಖ್ಯವಾದ ಸನ್ನಿವೇಶವನ್ನು ಪರಿಶೀಲಿಸ ಬಹುದು ಆ ಮಂತ್ರದ ತಾತ್ಪರ್ಯವು ಈ ರೀತಿಯಲ್ಲಿದೆ—

" ದೇವತೆಗಳಲ್ಲಿ ಯಾರು ಶ್ರೇಷ್ಠರು? ಯಾವ ದೇವನನ್ನು ನೆನೆದರೆ ನನ್ನ ಈ ಕಷ್ಟವು ಪರಿಹಾರವಾಗುತ್ತದೆ? ನನ್ನ ತಂದೆಯನ್ನೂ ತಾಯಿಯನ್ನೂ ಯಾವಾಗ ನೋಡುವೆನು ? (೧-೨ -೧)

ಐತರೇಯ ಬ್ರಾಹ್ಮಣದಲ್ಲಿ ಇದೇ ೧-೨೪-೧ ಮತ್ತು ೧-೨೪-೨ ನೇ ಮಂತ್ರಗಳನ್ನು ಉದ್ಧರಿಸಿ ಈ ಮಂತ್ರ ಗಳು ಶುನಃಶೇಫನಿಂದ ಪರಿತವಾದವೆಂದು ತಿಳಿಸಿದೆ ಈ ಸನ್ನಿವೇಶಕ್ಕೂ ಶುನಃಶೇಫನಿಗೂ ನಿಕಟವಾದ ಸಂಬಂಧ ವಿದೆಯೇ ಇಲ್ಲವೇ ಎಂಬುದರ ವಿಷಯದಲ್ಲಿ ಕೆಲವು ಪಂಡಿತರಲ್ಲಿ ಅಭಿಪ್ರಾಯಭೇದವಿದೆ ಅದು ಇಲ್ಲಿ ಅಷ್ಟು ಮುಖ್ಯವಲ್ಲ ಯಾರು ಈ ಮಂತ್ರವನ್ನು ಪರಿಸಿದ್ದರೂ ಆಪತ್ತಿನಲ್ಲಿ ಸಿಕ್ಕಿರುವ ಪುರುಷನು ಆಪತ್ತಿನಿಂದ ಪಾರಾಗಬೇಕೆಂಬ ಬಯಕೆ ಯಿಂದ ಪರಿಸತಕ್ಕ ಮಂತ್ರವಾಗಿದೆ.

೪. ಅದಿತಿಯು ಪಾಪವನ್ನು ಕ್ಷಮಿಸಕ್ಕ ದೇವತೆ :—

Benfey ಎಂಬ ಪಂಡಿತನು ಇದೇ ಮೇಲೆ ಉದ್ಧರಿಸಿದ ೧-೨೪-೧ ಮತ್ತು ೧-೨೪-೨ ನೇ ಮಂತ್ರಗಳಲ್ಲಿ **ಅದಿತಿ** ಶಬ್ದಕ್ಕೆ ಅರ್ಥವನ್ನು ಹೇಳುವಾಗ ಈ ಪದಕ್ಕೆ ಪಾಪರಾಹಿತ್ಯವೆಂಬರ್ಥವನ್ನು ತಿಳಿಸಿದ್ದಾನೆ (Orient and Occident I 33) ಈತನು ಹೇಳಿರುವ ತಾತ್ಪರ್ಯವು ಒಂದು ದೃಷ್ಟಿಯಿಂದ ಸಮಂಜಸವಾಗಿದೆ. **ಅದಿತಿಯು** ಪಾಪನಾಶಕಳು ಎಂಬುದು ಮಾತ್ರ ಪ್ರಸಿದ್ಧವಾದ ವಿಷಯವಾಗಿದೆ ಪಾಪರಹಿತಳು ಎಂಬುದೂ **ಅನಾಗಸ** ಇತ್ಯಾದಿ ವಿಶೇಷಣಗಳಿಂದ ವಿವೃತವಾಗಿದೆ. ಆದುದರಿಂದಲೇ ಅವಳನ್ನು ನಿರ್ದೇಶಿಸಿದ ಪ್ರಾರ್ಥನೆಯೂ ಈ ರೀತಿಯಿರುತ್ತದೆ.

" ಎಲೈ ವರುಣನೇ, ನನ್ನ ಶಿರೋಭಾಗದಲ್ಲಿರುವುದೂ, ಅಧಃಪ್ರದೇಶದಲ್ಲಿರುವುದೂ ಆದ ಎಲ್ಲಾ ಬಂಧನ ಗಳನ್ನೂ ಬಿಡಿಸು ನಾವು ಅದಿತಿಯ ವಿಷಯದಲ್ಲಿ ಪಾಪರಹಿತರಾಗಿರೋಣ " (೧-೨೪-೧೫)

ಹೀಗೆಯೇ ಅದಿತಿಯ ಅನುಗ್ರಹದಿಂದ ಲಭಿಸತಕ್ಕ ಪಾಪರಾಹಿತ್ಯವೂ ಆತ್ಮಶುದ್ಧಿಯೂ ವಿವೃತವಾಗಿರುವ ಕೆಲವು ವಾಕ್ಯಗಳನ್ನು ಕೆಳಗೆ ಉದ್ಧರಿಸಿದೆ

" ಅದಿತಿಯು ನಮ್ಮನ್ನು ಪಾಪರಹಿತರನ್ನಾಗಿ ಮಾಡಲಿ " (೧-೧೬೬-೩೨)

" ಎಲೈ ಅದಿತಿಯೇ, ಮಿತ್ರಾವರುಣರೇ, ನಿಮ್ಮ ವಿಷಯದಲ್ಲಿ ನಾವೇನಾದರೂ ಪಾಪವನ್ನಾಚರಿಸಿದ್ದರೆ, ದಯವಿಟ್ಟು ಅದನ್ನು ಕ್ಷಮಿಸಿ ನಮ್ಮನ್ನು ಅನುಗ್ರಹಿಸಿರಿ " (೨-೨೭-೧೪)

" ಎಲೈ ಅಗ್ನಿಯೇ, ಮಾನವರಿಗೆ ಸಹಜವಾದ ಅವಿವೇಕದಿಂದ ನಾವು ಯಾವ ತಪ್ಪನ್ನು ಮಾಡಿದ್ದರೂ ಸಹ, ನಮಗೆ ಅದಿತಿಯ ಅನುಗ್ರಹವು ಲಭಿಸುವುದಕ್ಕಾಗಿ ನಮ್ಮನ್ನು ಪಾಪರಹಿತರನ್ನಾಗಿ ಮಾಡು "
(೪-೧೨-೪).

" ದೇವತಾತ್ಮನಾದ ಸವಿತೃವಿನ ಸಹಾಯದಿಂದ ನಾವು ಅದಿತಿಯ ವಿಷಯದಲ್ಲಿ ಯಾವ ವಾಪವನ್ನೂ ಆಚರಿಸದೇ ಇರುವಂತಾಗಲಿ. " (೫-೮೨-೬).

" ಅದಿತಿಯ ಸಂಕಲ್ಪಿತವಾದ ನಿಯಮವನ್ನು ನಾವು ಪೂರ್ಣವಾಗಿ ಪಾಲಿಸುತ್ತಾ ಪ್ರಾಣನಲ್ಲಿ ಯಾವ ಪಾಪವನ್ನೂ ಆಚರಿಸದಿರೋಣ　ವರುಣನು ಪಾಪಿಷ್ಠರನ್ನೂ ರಕ್ಷಿಸುವ ಸ್ವಭಾವವುಳ್ಳವನು " (೪ ೮೭-೭)

" ಎಲೈ ಅಗ್ನಿಯೇ, ನಾವು ಯಾವ ಪಾಪವನ್ನು ಮಾಡಿದ್ದರೂ, ನಮ್ಮಲ್ಲಿ ದಯೆಯಿಂದ ಅದನ್ನು ಕ್ಷಮಿಸು. ಆತ್ಮನುನೂ, ಅದಿತಿಯೂ ಆ ಪಾಪವನ್ನು ನಾಶಮಾಡಲಿ " (೪-೯೩-೭)

" ಮಿತ್ರನು ನನ್ನ ಪ್ರಾರ್ಥನೆಯನ್ನು ಕೇಳಲಿ. ಅದಿತಿಯೂ, ದೇವತಾತ್ಮನಾದ ಸವಿತೃವೂ ನಮ್ಮನ್ನು ವರುಣನ ಮುಂದೆ ಪಾಪರಹಿತನೆಂದು ತಿಳಿಸಲಿ " (೧೦-೧೩೭-೪)

ಇದಲ್ಲದೆ—

" ಅನಾಗಾಸ್ತ್ವೇ ಅದಿತಿತ್ವೇ ತುರಾಸ ಇಮಂ ಯಜ್ಞಂ ದಧತು ಶ್ರೋಷಮಾಣಾಃ ।

(ಋ ಸಂ ೭-೫೧-೧)

ಎಂಬ ಮಂತ್ರದಲ್ಲಿ **ಅದಿತಿತ್ವ** ಮತ್ತು **ಅನಾಗಾಸ್ತ್ವ** ಎಂಬ ಎರಡು ಪದಗಳೂ ಒಟ್ಟಿಗೆ ಪ್ರಯುಕ್ತವಾಗಿವೆ. " ಮಹಾತ್ಮರಾದ ದೇವತೆಗಳು, ನಮ್ಮ ಪ್ರಾರ್ಥನೆಯನ್ನು ಆಲಿಸಿ, ನಮ್ಮ ಯಜ್ಞಕರ್ಮಗಳನ್ನು ಪಾಪರಹಿತನನ್ನಾಗಿಯೂ, ಅಭ್ಯುದಯಕಾರಕಗಳನ್ನಾಗಿಯೂ ಮಾಡಲಿ " ಎಂಬ ಈ ಪ್ರಾರ್ಥನೆಯಿದೆ ಆದರೆ, ಇಲ್ಲಿ ಇನ್ನೊಂದಂಶವನ್ನು ಗಮನಿಸಬೇಕು ಈ ಎರಡು ಪದಗಳ ಪ್ರಯೋಗವೂ ಒಟ್ಟಿಗಿದ್ದರೂ ಸಹ ಎರಡಕ್ಕೂ ಸಮಾನಾರ್ಥವಿರಬೇಕೆಂಬ ನಿಯಮವಿಲ್ಲ **ಅದಿತಿ** ಶಬ್ದಕ್ಕೆ ಬೇರೆ ವಿಧವಾದ ನಿರ್ವಚನವನ್ನು ತೋರಿಸುತ್ತಾ ಶತಪಥಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿದೆ

" **ಸ ಯದ್ಯದೇವಾಸೃಜತ ತತ್ತದತ್ತುಮಧ್ರಿಯತ । ಸರ್ವಂ ವಾ ಅತ್ತೀತಿ ತದದಿತೇರದಿತಿತ್ವಂ । ಸರ್ವಸ್ಯೈತಸ್ಯಾತ್ತಾ ಭವತಿ । ಸರ್ವಮಸ್ಯಾಂತಂ ಭವತಿ ಯ ಏವಮೇತದದಿತೇರದಿತಿತ್ವಂ ವೇದ** " (ಶ ಬ್ರಾ. ೧೦-೬-೫-೫, ಬೃ. ಉ. ೧-೨-೫)

ಬ್ರಹ್ಮನು ಯಾವ ಯಾವ ಪದಾರ್ಥಗಳನ್ನು ನಿರ್ಮಿಸಿದನೋ ಅವುಗಳೆಲ್ಲವನ್ನೂ ಪುನಃ ಭಕ್ಷಿಸತೊಡಗಿದನು. ಈ ಭಕ್ಷಣಕಾರ್ಯವಿದ್ದುದರಿಂದಲೇ **ಅದಿತಿ** (ನೃತ್ಯು) ನಾಮಸಿದ್ಧೇಶವಾಯಿತು. ಈ ತತ್ತ್ವವನ್ನರಿತವನು ತಾನೂ **ಅದಿತಿ** ಸ್ವರೂಪವನ್ನು ಹೊಂದುವನು ಎಂಬುದಾಗಿ **ಅದಿತಿ**ಯ ನಾಮಸಿರ್ವಚನವನ್ನು ತಿಳಿಸಿ ಈ ದೇವತೆಯ ವಿಶ್ವನಿಯಾಮಕತ್ವವನ್ನೂ ತಿಳಿಸಿದೆ ಪರಬ್ರಹ್ಮನೂ ಈ ಕಾರಣದಿಂದ ಈ ನಾಮನಿರ್ದಿಷ್ಟನಾಗಿದ್ದಾನೆ

ಅಲ್ಲದೇ, "**ವಿಶ್ವೇಷಾಮದಿತಿರ್ಯಜ್ಞಿಯಾನಾಂ**" ; (೪-೧-೨೦) ; "**ಅಮೂರಃ ಕವಿರದಿತಿರ್ವಿವಸ್ವಾನ್**" ೭-೯-೩) ಇತ್ಯಾದಿ ಸ್ಥಳಗಳಲ್ಲಿ **ಅದಿತಿ** ಶಬ್ದವು **ಅಗ್ನಿ**ಗೆ ವಿಶೇಷಣವಾಗಿದೆ ೯-೮೯-೫ರಲ್ಲಿ **ಅರ್ಯಮನಿಗೆ** ವಿಶೇಷಣವಾಗಿದೆ ಯಾಸ್ಕರು ನಿರುಕ್ತದಲ್ಲಿ " **ಅಗ್ನಿರಪ್ಯದಿತಿರುಚ್ಯತೇ**" (ನಿ ೧೧-೨೩), ಅಗ್ನಿಯೂ **ಅದಿತಿ** ಶಬ್ದವಾಚ್ಯನು ಎಂದು ತಿಳಿಸಿದ್ದಾರೆ. ಮತ್ತು ತಮ್ಮ ತಾದಾತ್ಮ್ಯಬೋಧಕವಾದ ವಾಕ್ಯವನ್ನು ಸಮರ್ಥಿಸಲು,

"**ಯಸ್ಮೈ ತ್ವಂ ಸುದ್ರವಿಣೋ ದದಾಶೋಽನಾಗಾಸ್ತ್ವಮದಿತೇ ಸರ್ವತಾತಾ**"

(ಋ. ಸಂ. ೧-೯೪-೧೫)

ಎಂಬ ವಾಕ್ಯವನ್ನು ದಾಹರಿಸಿ ಅಲ್ಲಿ ಅಗ್ನಿಶಬ್ದಕ್ಕೆ ವಿಶೇಷಣವಾಗಿ ಅದಿತಿಶಬ್ದದ ಪ್ರಯೋಗವಿರುವುದನ್ನು ತಿಳಿಸಿದ್ದಾರೆ. ಅಖಂಡನೀಯನಾದ ಎಂದರೆ ಪೂರ್ಣನಾದ ಅಗ್ನಿಯೆಂದರ್ಥವೆಂದು ಸಾಯಣರು ವಿವರಿಸಿದ್ದಾರೆ.

ಈ ರೀತಿ ಪಾಪನಾಶಕಳೂ, ಪಾಪಗಳನ್ನು ಕ್ಷಮಿಸುವವಳೂ ಆದ ಅದಿತಿಯ ರಕ್ಷಣೆಯನ್ನು ಬೇಡಿ ಕ್ಷಮೆಯನ್ನು ಯಾಚಿಸುವ ಅರ್ಥವನ್ನು ಕೊಡತಕ್ಕ ವಾಕ್ಯಗಳೆಲ್ಲವೂ ಸಹ ಅದಿತಿಯ ಅನಂತಶಕ್ತಿಯನ್ನು ವರ್ಣಿಸುವುದಾಗಿವೆ. ಈ ವಿಶೇಷಣಗಳೂ ಮತ್ತು ವರ್ಣನೆಗಳೂ ಅದಿತಿಯೇ ವಿಶ್ವನಿಯಮನ ಶಕ್ತಿಯುಳ್ಳವಳೆಂದು ತಿಳಿಸುತ್ತವೆ ಈ ನಿಯಮನಗಳು ಕೇವಲ ಭೌತಿಕಶಕ್ತಿಯ ಪ್ರದರ್ಶನವಾಗಿರದೆ, ಆಧ್ಯಾತ್ಮಿಕನೀತಿನಿಯಮಗಳುಳ್ಳವು ಎಂದೂ ತಿಳಿಯುತ್ತದೆ. ಈ ಅಂಶವನ್ನು ಅದಿತಿಗೂ, ಋತಪಾಲಕನಾದ ವರುಣನಿಗೂ ಇರುವ ನಿಕಟಸಂಬಂಧವೂ ನಿಶದವಾಗಿ ತಿಳಿಸುತ್ತದೆ. ಇದರಂತೆಯೇ, ಸವಿತೃ, ಸೂರ್ಯ, ಉಷಸ್ಸು, ದ್ಯಾವಾಪೃಥಿವಿಗಳು ಇತ್ಯಾದಿ ದೇವತೆಗಳೂ ಪ್ರಾರ್ಥಿತರಾಗಿದ್ದಾರೆ. (೪-೫೪-೩, ೧೦-೩೫-೨, ೩, ೩-೫೪-೧೯ ಇತ್ಯಾದಿ).

9. ವಿಶ್ವನಿಯಾಮಕಳಾದ ಅದಿತಿಯೂ ಸಹ ಇತರ ಶಕ್ತಿಗಳಿಂದ ನಿಯಂತ್ರಿತಳಾದವಳು ಎಂದು ವರ್ಣಿಸುವ ಕೆಲವು ಪ್ರಕರಣಗಳು:—

ವಿಶ್ವಪ್ರಭುಗಳೆಂದೆನ್ನಿಸಿಕೊಂಡ ವರುಣಾದಿ ದೇವತೆಗಳಿಗೂ, ಮಾತೆಯೆಂದು ವರ್ಣಿತಳಾದ ಅದಿತಿಯೂ ಸಹ ಕೆಲವು ನೇಳೆ ಇತರ ಶಕ್ತಿಗಳ ನಿಯಮನಕ್ಕೆ ಅಧೀನಳಾಗಿರಬೇಕೆಂಬ ವರ್ಣನೆಗಳೂ ಕೆಲವಿವೆ ಉದಾಹರಣೆಗೆ:—

ಅದಿತಿಯು ತನ್ನ ಪುತ್ರರಾದ ವರುಣ, ಮಿತ್ರ, ಅರ್ಯಮ ಇತ್ಯಾದಿ ದೇವತೆಗಳೊಡನೆ ಕೂಡಿಕೊಂಡು ಸವಿತೃವನ್ನು ಸ್ತುತಿಸುತ್ತಲೂ, ಸವಿತೃವಿನ ಸಹಾಯವನ್ನು ಪ್ರಾರ್ಥಿಸುತ್ತಲೂ ಇರತಕ್ಕ ವರ್ಣನೆಯು ೭-೩೮-೪ ನೇ ಮಂತ್ರದಲ್ಲಿರುವುದು ೪-೨೨-೧೪ರಲ್ಲು ಅದಿತಿಯು ಇಂದ್ರನನ್ನು ಸ್ತುತಿಸಲು ಒಂದು ಸ್ತುತಿರೂಪವಾದ ಕೃತಿಯನ್ನು ನಿರ್ಮಿಸಿದಳು ಎಂದು ತಿಳಿಸಿದೆ **(ಅದಿತಿಃ ಸ್ತೋಮಮಿಂದ್ರಾಯ ಜೀಜನತ್)**

10. ಋಕ್ಸಂಹಿತೆಯ ೧೦ ನೇ ಮಂಡಲದ ೭೨ ನೇ ಸೂಕ್ತದಲ್ಲಿ ವರ್ಣಿತವಾಗಿರುವಂತೆ ವಿಶ್ವಸೃಷ್ಟಿಯ ಕ್ರಮ:—ಅದಿತಿ, ದಕ್ಷ, ಆದಿತ್ಯರು ಮತ್ತು ಇತರ ದೇವತೆಗಳ ಉತ್ಪತ್ತಿಸ್ವರೂಪ:—

ಋಕ್ಸಂಹಿತೆಯಲ್ಲಿ ಹತ್ತನೇ ಮಂಡಲದ ೭೨ ನೇ ಸೂಕ್ತವು ಸಂಹಿತೆಯ ಇತರ ಸೂಕ್ತಗಳಷ್ಟು ಪ್ರಾಚೀನವಾದುದಲ್ಲ ಎಂದು ಕೆಲವು ಪಂಡಿತರ ಮತವಾಗಿದೆ ಆದರೆ ಇದಕ್ಕೆ ಸರಿಯಾದ ಆಧಾರವನ್ನು ಕೊಡಲಾಗುವುದಿಲ್ಲ. ಆದರೆ ಈ ಸೂಕ್ತವು ಪ್ರಾಚೀನನೇ ಅಥವಾ ಅರ್ವಾಚೀನನೇ ಎಂಬ ವಿಷಯದ ವಿಮರ್ಶವು ಸದ್ಯಃ ಅಪ್ರಕೃತ, ಪ್ರಕೃತದಲ್ಲಿ ಉಪಯುಕ್ತವಾದುದು, ಈ ಸೂಕ್ತದಲ್ಲಿ ವಿವರಿಸಿರುವ ವಿಶ್ವಸೃಷ್ಟಿಯ ವರ್ಣನಾಕ್ರಮ. ಆದರ ವಿವರವು ಈ ರೀತಿಯಿದೆ.

(೧) ಪ್ರಶಂಸಾತ್ಮಕವಾದ ಈ ಸೂಕ್ತಮಂತ್ರಗಳಿಂದ ನಾವು ದೇವತೆಗಳ ಉತ್ಪತ್ತಿಕ್ರಮವನ್ನು ವರ್ಣಿಸುವೆವು. ಈ ಸ್ತುತಿರೂಪವಾದ ಮಂತ್ರಗಳ ಸಹಾಯದಿಂದ ಉತ್ತರಯುಗಕ್ಕೆ ಸೇರಿದ ನಾವು ಪೂರ್ವಯುಗದ ದೇವತೆಗಳ ಉತ್ಪತ್ತಿ ಮತ್ತು ಸ್ವರೂಪಗಳನ್ನರಿಯಲು ಸಾಧ್ಯವಾಗುವುದು.

(೨) ಕರ್ಮಾರನು ತಿದಿಯನ್ನು ಒತ್ತಿ ಒಳಗಿರುವ ಅಂತಃಶಕ್ತಿಯನ್ನು ಹೊರಕ್ಕೆ ಬರಮಾಡಿ-ವಂತೆ, ಬ್ರಹ್ಮಣಸ್ಪತಿಯು ತಲ್ಲೀನವಾದ ಈ ದೇವತೆಗಳನ್ನು ಸೃಷ್ಟಿರೂಪದಲ್ಲಿ ಹೊರಗೆ ಆವಿರ್ಭೂತರಾಗುವಂತೆ ಮಾಡಿದನು ದೇವತೆಗಳ ಅತ್ಯಂತ ಪ್ರಾಚೀನವಾದ ಯುಗದಲ್ಲಿ ಅಸತ್ತಿನಿಂದ ಸತ್ತು ಪ್ರಾದುರ್ಭೂತವಾಯಿತು.

(೩) ಆದಿಯಲ್ಲಿ ಅಸತ್ತಿನಿಂದ ಸತ್ತಿನ ಆವಿರ್ಭಾವವುಂಟಾಯಿತು ಆದರಿಂದ ದಿಗ್ದೇಶಗಳ ಪ್ರಕಾಶನವಾಯಿತು. ಅನಂತರ ಉತ್ತಾನಪಾದನಿಂದ .. .

(೪) ಉತ್ತಾನಪಾದನಿಂದ ಪೃಥ್ವಿಯೂ, ಪೃಥ್ವಿಯಿಂದ ದಿಗ್ದೇಶಗಳೂ ಉತ್ಪನ್ನವಾದವು ದಕ್ಷನಿಂದ ಅದಿತಿಯೂ ಅದಿತಿಯಿಂದ ದಕ್ಷನೂ ಉತ್ಪನ್ನರಾದರು.

(೫) ಎಲೈ ದಕ್ಷನೇ, ಅದಿತಿಯು ನಿನ್ನಿಂದ ಉತ್ಪನ್ನಳಾದಳು. ಅವಳೇ ನಿನ್ನ ಪುತ್ರಿಯು ಅನಂತರ, ಅವಳಿಂದ ಕಲ್ಯಾಣಾತ್ಮಕರೂ ಮತ್ತು ಅಮರ್ತ್ಯರೂ ಆದ ದೇವತೆಗಳು ಜನಿಸಿದರು.

(೬) ಎಲೈ ದೇವತೆಗಳೇ, ನೀವು ಯಾವಾಗ ಚಲಿಸಿದಿರೋ, ಅಂತರಿಕ್ಷದ ಉದಕಗಳನ್ನು ಯಾವಾಗ ಪ್ರಕ್ಷುಬ್ಧವಾಗುವಂತೆ ಮಾಡಿದಿರೋ, ಆ ಒಡನೆಯೇ ನರ್ತನಕಾರರ ದೇಹದಿಂದ ಹೊರಕ್ಕೆ ಹೊರಡುವಂತೆ ಅವರ ದೇಹದಿಂದ ರೇಣುಗಳು ಹೊರಕ್ಕೆ ಬಂದವು

(೭) ಎಲೈ ದೇವತೆಗಳೇ, ಶ್ರಮಸಹಿಷ್ಣುಗಳಾದ ಮಾನವರಂತೆ ಯಾವಾಗ ನೀವು ವಿಶ್ವವನ್ನು ವ್ಯಾಪಿಸಿ ಅಲಂಕರಿಸಿ ರಚಿಸಿದಿರೋ, ಆಗಲೇ ನೀವು ಅಂತರಿಕ್ಷರೂಪದ ಸಮುದ್ರದಲ್ಲಿ ಅಂತರ್ಗತನಾದ ಸೂರ್ಯನನ್ನು ಹೊರಕ್ಕೆ ಬರಮಾಡಿ ಪ್ರಕಾಶಿಸುವಂತೆ ಮಾಡಿದಿರಿ

(೮) ತನ್ನ ದೇಹೋತ್ಪನ್ನರಾದ ಅಷ್ಟಪುತ್ರರಲ್ಲಿ, ಏಳು ಜನರೊಡನೆ ಮಾತ್ರ ಅದಿತಿಯು ದೇವತೆಗಳನ್ನು ಸವಿಾಪಿಸಿದಳು ಎಂಟನೆಯವನಾದ ಮಾರ್ತಾಂಡನನ್ನು ಹಿಂದೆಯೇ ಬಿಟ್ಟಳು.

(೯) ಪೂರ್ವಯುಗಕ್ಕೆ ಸೇರಿದ ದೇವತೆಗಳನ್ನು ಅದಿತಿಯು ಸಪ್ತಪುತ್ರರೊಂದಿಗೆ ಹೋಗಿ ಸೇರಿದಳು. ಎಂಟನೆಯವನಾದ ಮಾರ್ತಾಂಡನನ್ನು ಪುನಃ ಹಡೆದಳು ಅವನ ಉತ್ಪತ್ತಿಗಾಗಿಯೂ ಮತ್ತು ಮರಣಕ್ಕಾಗಿಯೂ ಅವನಿಗೆ ಜನ್ಮವನ್ನು ಕೊಟ್ಟಳು

ಇಲ್ಲಿ ೭ನೇ ಋಕ್ಕಿನಲ್ಲಿ ಪ್ರಯೋಗಿಸಿರುವ **ಯತಯಃ** ಎಂಬ ಪದದ ತಾತ್ಪರ್ಯವೇನೆಂದು ವಿಮರ್ಶಿಸುವುದು ಪ್ರಕೃತವಾಗಿದೆ ೧೧-೭೫-೭ನೇ ಋಕ್ಕಿನಲ್ಲಿ ಯಾವ ವಿಶ್ವರಚನೆಯ ವರ್ಣನೆಯಿದೆಯೋ ಆ ರಚನೆಗೂ, ೮-೩-೯ ಮತ್ತು ೮-೬-೧೮ನೇ ಮಂತ್ರಗಳಲ್ಲಿ ವರ್ಣಿತರಾಗಿರುವ ಭೃಗುಗಳಿಗೂ ಕೆಲವೆಡೆಗಳಲ್ಲಿ [ಸಂಬಂಧವನ್ನು ತಿಳಿಸಿದೆ. ಪ್ರಕೃತವಾದ ಮಂತ್ರದಲ್ಲಿ **ಯತಯಃ** ಎಂಬ ಪದವು ಆ ಭೃಗುಗಳನ್ನು ನಿರ್ದೇಶಿಸುತ್ತದೆ ಎಂಬುದಾಗಿ ಬೋಟ್ಲಿಂಕ್ ಮತ್ತು Roth ಎಂಬ ಪಂಡಿತರು ಅಭಿಪ್ರಾಯಪಡುತ್ತಾರೆ. ಋ ಸಂ, ೭-೧೩-೧೧ರಲ್ಲಿ ಇದೇ ಪದವು ಅಗ್ನಿಗೆ ವಿಶೇಷಣವಾಗಿರುತ್ತದೆ. **(ವೈಶ್ವಾನರಾಯ ಯತಯೇ ಮತೀನಾಂ)** ೮-೬-೧೮ರಲ್ಲಿ **"ಯೇ ಇಂದ್ರೆ ಯತಯಸ್ತ್ವಾ ಭೃಗವೋ ಯೇ ಚ....."** ಎಂಬಲ್ಲಿ **ಯತಯಃ** ಎಂ ಬದಕ್ಕೆ ಒಂದು ಗುಂಪಿನ ಯಜಮಾನ ಸಂತತಿಯವರು ಎಂದಾದರೂ ಅರ್ಥಮಾಡಬಹುದು

ಋಕ್ಸಂಹಿತೆಯಲ್ಲಿ ಅಂತರ್ಗತವಾಗದಿರತಕ್ಕ ಕೆಲವು ಸಾಮಮಂತ್ರಗಳಿವೆ. ಅವುಗಳೊಂದರಲ್ಲಿ **ಯತಿ** ಮತ್ತು **ಭೃಗು** ಈ ಎರಡು ಪದಗಳ ಪ್ರಯೋಗವೂ ಇರುತ್ತವೆ. (ಸಾ. ವೇ. ೨-೩೦೪). **''ಇಂದ್ರಸ್ತುರಾಷಾಣ್ಮೈ-ತ್ರೋ ನ ಜಘಾನ ವೃತ್ರಂ ಯತಿರ್ನ।''** ಹಿಂದೆ ಮಿತ್ರನೂ, **ಯತಿಯೂ** ಕೊಂದಂತೆಯೇ, ಈಗಲೂ ಇಂದ್ರನು ವೃತ್ರನನ್ನು ಕೊಂದನೆಂದೂ, **''ಬಿಭೇದ ಬಲಂ ಭೃಗುರ್ನ''** ಭೃಗುವು ಕೊಂದಂತೆ ಬಲನನ್ನು ಕೊಂದನೆಂದೂ ಈ ಮಂತ್ರದ ತಾತ್ಪರ್ಯವಿರುತ್ತದೆ. ಇದಲ್ಲದೇ, ಐತರೇಯಬ್ರಾಹ್ಮಣದಲ್ಲಿ (೭-೩೮) ಇಂದ್ರನು **ಯತಿ**ಗಳನ್ನು ತ್ಯಾಗಮಾಡಿ ಅವರು ತೋಳಗಳಿಗೆ ಆಹುತಿಗಳಾಗುವಂತೆ ಮಾಡಿದನು ಎಂದಿದೆ

೮ನೇ ಮಂತ್ರದ ತಾತ್ಪರ್ಯವು ಅಥರ್ವವೇದದ **''ಅಷ್ಟಯೋನೀರದಿತಿರಷ್ಟಪುತ್ರಾ''** (ಅ. ವೇ. ೪-೯-೨೧) ಎಂಬ ವಾಕ್ಯದ ತಾತ್ಪರ್ಯವನ್ನು ಕೊಡುವುದಾಗಿದೆ ಇದೇ ಅಭಿಪ್ರಾಯವನ್ನು ತೈತ್ತಿರೀಯಾರಣ್ಯಕದಲ್ಲೂ ತಿಳಿಸುತ್ತಾ **''ಅಷ್ಟಯೋನೀಮಷ್ಟಪುತ್ರಾಂ। ಅಷ್ಟಪತ್ನೀಮಿಮಾಂ ಮಹೀಂ॥''** (ತೈ. ಆ ೧-೧೩-೧) ಪೃಥ್ವಿಗೆ ಎಂಟು ಜನ್ಮವೂ. ಎಂಟು ಪುತ್ರರೂ, ಎಂಟು ಪತಿಗಳೂ ಇರುವುದಾಗಿ ತಿಳಿಸಿದೆ.

೭೨ನೇ ಸೂಕ್ತದ ೮ ಮತ್ತು ೯ನೆಯ ಮಂತ್ರಗಳು ತೈತ್ತಿರೀಯಾರಣ್ಯಕದಲ್ಲೂ ಉದ್ಧೃತವಾಗಿವೆ. **''ಪರಾ ಮಾರ್ತಾಂಡಮಾಸ್ಯತ್''** ಎಂದು ಸಂಹಿತಾಪಾಠಕ್ಕೆ ಬದಲಾಗಿ, ಅಲ್ಲಿ **''ಪರಾ ಮಾರ್ತಾಂಡಮಾಭರತ್''** ಎಂಬ ಪಾರಬೇಧವಿರುತ್ತದೆ. ಇದಕ್ಕೆ ಭಾಷ್ಯಕಾರರು ಅರ್ಥವನ್ನು ವಿವರಿಸುತ್ತಾ ಈ ರೀತಿ ತಿಳಿಸಿದ್ದಾರೆ. **''ಮಾರ್ತಾಂಡಾಖ್ಯಂ ಅಸ್ಯಮಂ ಪುತ್ರಂ 'ಪರಾ ಭರತ್' ಪರಿ ತ್ಯಕ್ತವತೀ ಇತಿ ಯತ್ ತತ್ ಮೃತ್ಯವೇ ಮೃತ್ಯುನಿಮಿತ್ತಂ''** ಮಾರ್ತಾಂಡನು ಉತ್ಪನ್ನವಾದೊಡನೆಯೇ ಅಂಡವು ಮರಣಹೊಂದಿತೆಂದು ತಾತ್ಪರ್ಯ. ಮೇಲಿನ ೮ನೇ ಮಂತ್ರಕ್ಕೆ ವಿವರಣೆಯನ್ನೀಯುತ್ತಾ ಶತಪಥಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿದೆ.

> **''ಅಷ್ಟೌ ಹ ವೈ ಪುತ್ರಾ ಅದಿತೇಃ।.ತಯಾಂಸ್ತ್ರೀನೇತದ್ದೇವಾ ಆದಿತ್ಯಾ ಇತ್ಯಾಚಕ್ಷತೇ ಸಪ್ತ ಹೈವ ತೇ೨ವಿಕೃತಗ್ಂ ಹಾಷ್ಟಮಂ ಜನಯಾಂಚಕಾರ ಮಾರ್ತಾಂಡಗ್ಂ ಸಂದೇಘೋ ಹೈವಾಸ ಯಾವಾನೇವೋರ್ಧ್ವಸ್ತಾವಾನ್ತಿರ್ಯಙ್ ಪುರುಷಸಮ್ಮಿತ ಇತ್ಯು ಹೈಕ ಆಹುಃ''**
>
> (ಶ ಬ್ರಾ. ೩-೧-೩-೩)

ಅದಿತಿಗೆ ಎಂಟು ಜನ ಪುತ್ರರು ಆದರೆ ಅವರಲ್ಲಿ ಏಳು ದೇವತೆಗಳನ್ನು ಮಾತ್ರ ಮಾನವರು ಆದಿತ್ಯರೆಂದು ಕರೆಯುತ್ತಾರೆ. ಏತಕ್ಕೆಂದರೆ ಎಂಟನೆಯ ಮಾರ್ತಾಂಡನು ಹಸ್ತಪಾದಾದಿರಹಿತನಾಗಿ ಯಾವ ವಿಶೇಷಗುಣವೂ ಇಲ್ಲದೆ ಕೇವಲ ಮಾರ್ದವ ಗುಣದಿಂದ ಮಾತ್ರ ಯುಕ್ತನಾಗಿಯೂ, ನಿರ್ವಿಕಲ್ಪಕನಾಗಿಯೂ, ಎಷ್ಟು ಉನ್ನತವಾಗಿದ್ದನೋ ಅಷ್ಟೇ ದೀರ್ಘವಾಗಿಯು ಬೆಳೆದು ಉತ್ಪನ್ನನಾದನು. ಕೇವಲ ಮಾನವನ ಶರೀರದಷ್ಟು ಪ್ರಮಾಣವುಳ್ಳವನಾಗಿ ಮಾತ್ರವಾದನು ಎಂದು ಕೆಲವರ ಅಭಿಪ್ರಾಯ.

> **ತ್ಸಉ ಹೈತ ಊಚುಃ। ದೇವಾ ಆದಿತ್ಯಾ ಯೆಜಸ್ಯಾನನ್ವಜನಿಮಾ ಶದಮುಯೀವ ಭೂದ್ಧಂ-ತೇಮಂ ವಿಕರವಾಮೇತಿ ತಂ ವಿಚಕ್ರುರ್ಯಥಾಯಂ ಪುರುಷೋ ವಿಕೃತಸ್ತಸ್ಯ ಯಾನಿ ಮಾಗ್ಂಸಾನಿ ಸಂಸ್ಕೃತ್ಯ ಸನ್ಯಾಸುಸ್ತತೋ ಹಸ್ತೀ ಸಮಭವತ್ತಸ್ಮಾದಾಹುರ್ನ ಹಸ್ತಿನಂ ಪ್ರತಿಗೃಹ್ಣೀಯಾತ್ಪುರುಷಾಚಾನೋ ಹಿ ಹಸ್ತೀತಿ ಯಮು ಹ ತದ್ವಿಚಕ್ರುಃ ಸ ವಿವಸ್ವಾನಾ-ದಿತ್ಯಸ್ತಸ್ಯೇಮಾಃ ಪ್ರಜಾಃ॥** (ಶ ಬ್ರಾ ೩-೧-೩-೪)

ಈ ರೀತಿಯಾದ ವಿಕಲ್ಪರಹಿತನಾದ ಮಾರ್ತಾಂಡನನ್ನು ನೋಡಿ ಆದಿತ್ಯರು ಭೀತಿಗೊಂಡರು. " ಈ ಮಾರ್ತಾಂಡನು ನಮ್ಮ ರೂಪವನ್ನು ಹೋಲದಿದ್ದರೆ ಆಗ ನಮಗೆ ಮೃತ್ಯುವು ಸನ್ನಿಹತವಾದಂತೆಯೇ ಆದುದರಿಂದ ನಾವು ಇವನನ್ನು ರೂಪವನ್ನು ಹೊಂದುವಂತೆ ಮಾಡಬೇಕು " ಎಂದು ಅವನನ್ನು ಪುರುಷಾಕಾರನನ್ನಾಗಿ ಪರಿವರ್ತಿಸಿದರು. ಅವನಿಗೆ ತಮ್ಮ ರೂಪವನ್ನುಂಟುಮಾಡಲು ಅವನ ಶರೀರವನ್ನು ಕತ್ತರಿಸಿ ಸರಿಪಡಿಸಿದಾಗ ಹೊರಕ್ಕೆ ತೆಗೆದ ಮಾಂಸವನ್ನು ಎಸೆದಾಗ ಅದರಿಂದ ಗಜವು ಉತ್ಪನ್ನವಾಯಿತು. ನಾಮರೂಪಾದಿ ವಿಶೇಷಗುಣಗಳಿಂದ ಕೂಡಿದ ಈ ಹೊಸ ವ್ಯಕ್ತಿಯನ್ನು **ವಿವಸ್ವಾನ್** ಎಂದು ಕರೆದರು ಈ ವಿವಸ್ವಂತನೇ ಸಕಲ ಭೂತಗಳ ಉತ್ಪತ್ತಿಗೂ ಕಾರಣನಾದನು

ಇದೇ ವಾಕ್ಯವು ತೈತ್ತಿರೀಯ ಸಂಹಿತೆಯಲ್ಲಿಯೂ ಉದಾಹೃತವಾಗಿ, ಅಲ್ಲಿ ಆದಿತಿಯ ಈ ಎರಡನೆಯ ಗರ್ಭವು ಅಂಡರೂಪದಲ್ಲಿ ಪರಿಣಮಿಸಿತು ಎಂದು ತಿಳಿಸಿದೆ (ತೈ ಸಂ. ೬-೫-೬-೧)

ಯಾಸ್ಕರು ಮೇಲಿನ ೧೦-೭೨-೪ ನೇ ಮಂತ್ರದ ತಾತ್ಪರ್ಯವನ್ನು ವಿವರಿಸುತ್ತಾ ನಿರುಕ್ತವಾಕ್ಯಗಳಲ್ಲಿ ಈ ರೀತಿ ತಿಳಿಸಿದ್ದಾರೆ

" ಆದಿತ್ಯೋ ದಕ್ಷ ಇತ್ಯಾಹುಃ । ಆದಿತ್ಯಮಧ್ಯೇ ಚ ಸ್ತುತಃ । ಅದಿತಿಃ ದಾಕ್ಷಾಯಣೀ । ಅದಿತೇರ್ದಕ್ಷಸ್ಯೋ ಅಜಾಯತ ದಕ್ಷಾದ್ವದಿತಿಃ ಪರಿ (೧೦-೭೨-೪) ಇತಿ। ಕತ್ಕಥಂ ಉಪಪದ್ಯೇತ। ಸಮಾನಜನ್ಮಾನೌ ಸ್ಯಾತಾಂ ಇತಿ । ಅಪಿ ವಾ ದೇವಧರ್ಮೇಣ ಇತರೇತರಜನ್ಮಾನೌ ಸ್ಯಾತಾಂ ॥ ಇತರೇತರಪ್ರಕೃತೀ ॥ (ನಿ ೧೧-೨೩)

ದಕ್ಷನು ಆದಿತಿಪುತ್ರರಲ್ಲೊಬ್ಬನೆಂದೂ, ಆದಿತ್ಯರ ಗುಂಪಿಗೆ ಸೇರಿದವನೆಂದೂ ಸ್ತುತನೂ ಪ್ರಖ್ಯಾತನೂ ಆಗಿದ್ದಾನೆ ಆದರೆ, " ದಕ್ಷನಿಂದ ಆದಿತಿಯು ಉತ್ಪನ್ನಳಾದಳು. ಆದಿತಿಯಿಂದ ದಕ್ಷನು ಉತ್ಪನ್ನನಾದನು " ಎಂಬ ವಾಕ್ಯವು ಆದಿತಿಯೂ ದಕ್ಷಪುತ್ರಿಯೆಂಬುದನ್ನು ತಿಳಿಸುತ್ತದೆ ಇದು ಹೇಗೆ ಸಾಧ್ಯವಾಗಬಲ್ಲದು ? ಅವರಿಬ್ಬರಿಗೂ ಒಂದೇ ಉತ್ಪತ್ತಿಸ್ಥಾನವಿರಬಹುದು ಅಥವಾ ದೇವತೆಗಳ ಸ್ವಾಭಾವಿಕವಾದ ಶಕ್ತಿಗನುಗುಣವಾಗಿ ಒಬ್ಬರಿಂದ ಇನ್ನೊಬ್ಬರು ಉತ್ಪನ್ನವಾಗಿಯೂ ಇರಬಹುದು ಮತ್ತು ಪರಸ್ಪರ ಮಾಹಾತ್ಮ್ಯಗಳನ್ನು ಒಬ್ಬರಿಂದಿನ್ನೊಬ್ಬರು ಪಡೆದಿರಬಹುದು. ಇದೇ ರೀತಿ ಪರಸ್ಪರ ಒಬ್ಬರ ಉತ್ಪತ್ತಿಗೆ ಇನ್ನೊಬ್ಬರು ಯೋನಿಯಾದರು ಎಂಬ ವಿಷಯವನ್ನು ತಿಳಿಸುವ ಬೇರೆ ಶ್ರುತಿವಾಕ್ಯವೂ ಇರುವುದು

" ತಸ್ಮಾದ್ವಿರಾಡಜಾಯತ ವಿರಾಜೋ ಅಧಿ ಪೂರುಷಃ " (೧೦-೯೦-೫)

ಪುರುಷನಿಂದ ವಿರಾಡುತ್ಪತ್ತಿಯು. ವಿರಾಟ್ಪುರುಷನಿಂದ ಪುರುಷನು ಉತ್ಪನ್ನನಾದನು ಎಂಬ ವಿಷಯವೂ ಸಹ ಪ್ರಸಿದ್ಧವಾಗಿದೆಯಾದುದರಿಂದ ದಕ್ಷ ಮತ್ತು ಆದಿತಿಗಳ ಉತ್ಪತ್ತಿಕ್ರಮವೂ ಇದೇ ರೀತಿ ಇದ್ದಿರಬಹುದು. ದಕ್ಷ ಮತ್ತು ಅದಿತಿಗಳ ಪರಸ್ಪರ ಸಂಬಂಧವನ್ನು ನಿರೂಪಿಸತಕ್ಕ ಬೇರೆ ವಾಕ್ಯಗಳನ್ನೂ ವರೀಲಿಸಬಹುದು **ಅಸಚ್ಚೇ ಸಚ್ಚೇ... ವೃಷಭಶ್ಚ ಧೇನುಃ "** (೧೦-೫-೭)

೧ "ಅವ್ಯಾಕೃತವಾದುದೂ ಪಾರಮಾರ್ಥಿಕವಾದ ಸತ್ಯವುಳ್ಳದ್ದೂ ಆದ ತತ್ತ್ವವು ದಕ್ಷನ ವೀರ್ಯದಲ್ಲಿಯೂ ಮತ್ತು ಅದಿತಿಯ ಗರ್ಭಗಳಲ್ಲಿಯೂ ಸ್ಥಿತವಾಗಿದ್ದು ಸಂಶಯ ಸ್ತ್ರೀಪುಂಸಕವಾದ ಎರಡು ತತ್ತ್ವಗಳನ್ನು ಒಳಗೊಂಡ ತತ್ತ್ವವಾಗಿ ಪರಿಣಮಿಸಿತು "

೨. " **ದಕ್ಷಸ್ಯ ವಾದಿತೇ ಜನ್ಮನಿ ..... ವಿಷುರೂಪೇಷು ಜನ್ಮಸು** "

(೧೦-೬೪-೫)

ಎಲೈ ಅದಿತಿಯೇ, ದಕ್ಷನ ಜನನವಾದೊಡನೆಯೂ ಮತ್ತು ಅವನ ಸಂಕಲ್ಪಾನುಸಾರವಾಗಿಯೂ ನೀನು ಮಿತ್ರಾವರುಣರೂಪರಾದ ಎರಡು ಪ್ರಭುಗಳನ್ನು ಪೋಷಿಸಿದೆ.

ಹೀಗೆ, ೧೦-೭೨-೪ ಮತ್ತು ೫ ನೇ ಮಂತ್ರಗಳು ದಕ್ಷನೇ ಅದಿತಿಯ ಪಿತೃ ಮತ್ತು ಪುತ್ರನೆಂದು ಒಟ್ಟಿಗೆ ಎರಡು ಸಂಬಂಧಗಳನ್ನೂ ತಿಳಿಸಿದ್ದರೂ, ೪-೨೭-೧ ಇತ್ಯಾದಿ ವಾಕ್ಯಗಳಲ್ಲಿ ದಕ್ಷನು ಅದಿತಿಪುತ್ರನೆಂದೂ, ಆದಿತ್ಯರಲ್ಲೊಬ್ಬನೆಂದೂ ಸ್ಪಷ್ಟವಾಗಿ ತಿಳಿಸುತ್ತದೆ. ಇದಲ್ಲದೇ, ಇನ್ನೂ ಕೆಲವೆಡೆಗಳಲ್ಲಿ ದೇವತೆಗಳಿಗೆ **ದಕ್ಷಪಿತೃ** ಎಂಬ ವಿಶೇಷಣ ವಿರುತ್ತದೆ ಉದಾಹರಣೆಗೆ—

೧. " **ಸುಜ್ಯೋತಿಷಃ ಸೂರ್ಯ ದಕ್ಷಪಿತೃನನಾಗಾಸ್ತ್ವೇ ಸುಮಹೋ ವೀಹಿ ದೇವಾನ್** "

(೬-೫೦-೨)

ಎಲೈ ಮಹಾತ್ಮನಾದ ಸೂರ್ಯನೇ, ದಕ್ಷನೇ ಪಿತೃವಾಗಿ ಉಳ್ಳ ದೇವತೆಗಳನ್ನು ಸಮೀಪಿಸು. (ಸಾಯಣರು ಇಲ್ಲಿ ಪಿತೃಶಬ್ದಕ್ಕೆ ಪಿತಾಮಹನೆಂದರ್ಥಮಾಡಿದ್ದಾರೆ. ಅದಿತಿಯು ದಕ್ಷಪುತ್ರಿಯಾದುದರಿಂದಲೂ, ದೇವತೆಗಳು ಅದಿತಿಪುತ್ರರಾದುದರಿಂದಲೂ, ದಕ್ಷನು ಈ ದೇವತೆಗಳಿಗೆ ಪಿತಾಮಹನು)

೨. " **ಯೌ ಧಾರಯಂತೆ ದೇವಾಃ ಸುದಕ್ಷಾ ದಕ್ಷಪಿತರಾ । ಅಸುರ್ಯಾಯ ಪ್ರಮಹಸಾ ॥** "

(೭-೬೬-೨)

ದಕ್ಷಪಿತೃಗಳಾದ ಮಿತ್ರಾವರುಣರು ತಮ್ಮ ದಿವ್ಯಪ್ರಭುತ್ವವನ್ನು ಸ್ಥಾಪಿಸಿದ್ದಾರೆ ಇತ್ಯಾದಿಯಾಗಿರುತ್ತದೆ. ಇದರಂತೆಯೇ ತೈತ್ತಿರೀಯಸಂಹಿತೆಯಲ್ಲಿಯೂ ಸಹ,

ಯೇ ದೇವಾ ಮನೋಜಾತಾ ಮನೋಯುಜಃ ಸುದಕ್ಷಾ ದಕ್ಷಪಿತಾರಸ್ತೇ ನಃ ಪಾಂತು ॥

(ತೈ ಸಂ ೧-೨-೩-೧)

ಮನೋಜಾತರೂ, ಮನೋಯುಜರೂ, ದಕ್ಷನನ್ನೇ ಪಿತೃವಾಗಿ ಉಳ್ಳವರೂ ಆದ ದೇವತೆಗಳು ನಮ್ಮನ್ನು ರಕ್ಷಿಸಲಿ.

ಮೇಲಿನ ಉದಾಹರಣೆಗಳಲ್ಲಿ **ದಕ್ಷ** ಪದವು ವೈಯಕ್ತಿಕವಾದ ಒಂದು ನಾಮನಿರ್ದೇಶವೆಂದು ನಿಷ್ಕೃಷ್ಟವಾಗಿ ಹೇಳುವಂತಿಲ್ಲ ೪-೫೫-೫ ರಲ್ಲಿ ಮಿತ್ರಾವರುಣರು ' ದಕ್ಷನ ಶಕ್ತಿಯುತರಾದ ಪುತ್ರರು ' (**ಸೂನೂ ದಕ್ಷಸ್ಯ ಸುಕ್ರತೂ**) ಎಂದು ವರ್ಣಿತರಾಗಿರವೇ, ' ಶಕ್ತಿಯ ಪೌತ್ರರು ' (**ನಸಾತಾ ಶವಸೋ ಮಹಃ**) ಎಂದೂ ಸಹ ವರ್ಣಿತರಾಗಿದ್ದಾರೆ ೬-೫೦-೨ ನೇ ಮಂತ್ರಕ್ಕೆ ಸಾಯಣರು ಅರ್ಥಮಾಡಿರುವ ಕ್ರಮವನ್ನು ಮೇಲೆ ತಿಳಿಸಿದೆ ಮೇಲೆ ಉದಾಹೃತರಾಗಿರುವ ೭-೬೬-೨ ನೇ ಋಕ್ಕಿನಲ್ಲಿ **ದಕ್ಷಪಿತಾರಾ** ಎಂಬುದಕ್ಕೆ **ಬಲಸ್ಯ ಪಾಲಕೌ** ಶಕ್ತಿಯ ರಕ್ಷಕರು ಎಂದರ್ಥಮಾಡಿದ್ದಾರೆ. **ಸಹಸಸ್ಪುತ್ರಃ, ಸಹಸಃಸೂನುಃ** ಇತ್ಯಾದಿ ವಿಶೇಷಣಗಳು ಕೆಲವೆಡೆಗಳಲ್ಲಿ **ಅಗ್ನಿ**ಪರವಾಗಿಯೂ (೪-೪೯-೨, ೪-೬೦-೧೧ ಇತ್ಯಾದಿ) ಕೆಲವೆಡೆಗಳಲ್ಲಿ **ಇಂದ್ರ**ಪರವಾಗಿಯೂ (೪-೭೯-೩ ಇತ್ಯಾದಿ) ಪ್ರಯುಕ್ತವಾಗಿವೆ

ಶತಪಥಬ್ರಾಹ್ಮಣದ ೨-೪-೪-೨ ನೇ ವಾಕ್ಯದಲ್ಲಿ ದಕ್ಷನಿಗೂ ಸೃಷ್ಟಿಕರ್ತನಾದ ಪ್ರಜಾಪತಿಗೂ ತಾದಾತ್ಮ್ಯವನ್ನು ತೋರಿಸಿದೆ. ೨-೪-೪-೬ ರಲ್ಲಿ ಪರ್ವತಪುತ್ರನಾದ ಒಂದು ವ್ಯಕ್ತಿಯ ಹೆಸರೆಂದು ತಿಳಿಸಿದೆ.

ಈ ವೈದಿಕವಾಕ್ಯಗಳ ಆಧಾರವನ್ನೇ ಅವಲಂಬಿಸಿಕೊಂಡು ಕಥೆಯನ್ನು ವಿಸ್ತರಿಸಿರುವ ವಿಷ್ಣುಪುರಾಣದಲ್ಲಿ ದಕ್ಷನ ವಿಷಯವು ಯಾವರೀತಿ ವರ್ಣಿತವಾಗಿದೆಯೆಂದು ಪರಿಶೀಲಿಸಿದರೆ ಸದ್ಯಃ ಅಪ್ರಕೃತವಾಗಲಾರದು. ಈ ವಿಷ್ಣುಪುರಾಣದ ಪ್ರಕಟನದಲ್ಲಿ ಮೂರು ಪಾರಪ್ರಭೇದಗಳು ಕಾಣುತ್ತವೆ. ಅವುಗಳನ್ನು ಒಂದೊಂದಾಗಿ ವಿಮರ್ಶಿಸಬಹುದು.

(೧) ಮೊದಲನೆಯ ಕ್ರಮದಲ್ಲಿ ಕಥೆಯ ವಿವರಣವು ಈರೀತಿಯಿದೆ —ದಕ್ಷನು ಬ್ರಹ್ಮನ ಮಾನಸಪುತ್ರರಲ್ಲಿ ಒಬ್ಬನು. ಪ್ರಸೂತಿಯೆಂಬುವಳನ್ನು ವಿವಾಹಮಾಡಿಕೊಳ್ಳುತ್ತಾನೆ ಅವಳಲ್ಲಿ ಇಪ್ಪತ್ತುನಾಲ್ಕು ಪುತ್ರಿಯರನ್ನು ಪಡೆಯುತ್ತಾನೆ ಆದರೆ ಇವರಲ್ಲಿ ಅದಿತಿಯೂ ಒಬ್ಬಳು ಎಂಬುದನ್ನು ಸೇರಿಸಿಲ್ಲ

(೨) ಎರಡನೆಯ ಪಾರಕ್ರಮದಲ್ಲಿ —ದಕ್ಷನ ಅರವತ್ತುಮಂದಿ ಪುತ್ರಿಯರಲ್ಲಿ ಅದಿತಿಯು ಒಬ್ಬಳೆಂದೂ. ಇವಳನ್ನು **ದಿತಿ, ದನು** ಮತ್ತು ಇನ್ನೂ ಹತ್ತುಮಂದಿಯರೊಂದಿಗೆ ಕಶ್ಯಪನಿಗೆ ವಿವಾಹಮಾಡಿಕೊಟ್ಟನೆಂದೂ, ಆಗ ಕಶ್ಯಪನಿಗೆ ಅದಿತಿಯಲ್ಲಿ ದ್ವಾದಶಾದಿತ್ಯರು ಉತ್ಪನ್ನರಾದರೆಂದೂ ತಿಳಿಸಿದೆ

(೩) ಮೂರನೆಯ ಪ್ರವಚನದ ರೀತಿಯಲ್ಲಿ,—ಅದಿತಿಯು ದಕ್ಷನ ಪುತ್ರಿಯೆಂದೂ, ವಿವಸ್ವಂತನ(ಸೂರ್ಯನ) **ಮಾತೆಯೆಂದೂ** ತಿಳಿಯುತ್ತದೆ. [ಇದೇ ಅದಿತಿಯು ಕಶ್ಯಪನ ಪತ್ನಿಯೆಂದೂ, ವಾಮನಾವತಾರವನ್ನಾಶ್ರಯಿಸಿದ ವಿಷ್ಣುವಿನ ಮಾತೆಯೆಂದೂ ರಾಮಾಯಣದ ಒಂದು ಸನ್ನಿವೇಶದಲ್ಲಿ (ಇಲ್ಲಿಯೂ ಪಾರಪ್ರಭೇದಗಳಿವೆ) ತಿಳಿಯುತ್ತದೆ] ವಾಜಸನೇಯಸಂಹಿತೆಯಲ್ಲೂ (೨೯-೬೦) ಮತ್ತು ತೈತ್ತಿರೀಯಸಂಹಿತೆಯಲ್ಲೂ (೭-೫-೧೪-೧) ಅದಿತಿಯನ್ನು ವಿಷ್ಣುಪತ್ನಿಯೆಂದು ತಿಳಿಸಿದೆ (**ಅದಿತ್ಯೈ ವಿಷ್ಣುಪತ್ನ್ಯೈ ಚರುಃ**) ತೈತ್ತಿರೀಯಸಂಹಿತೆಯಿಂದ ಉದ್ಧೃತವಾಗಿರುವ ಕೆಳಗಿನ ಮಂತ್ರದಲ್ಲೂ ಅದಿತಿಯ ಸ್ವರೂಪನಿರ್ಣಯವು ಈರೀತಿಯಿರುತ್ತದೆ

ವಿಷ್ಣೋಂಭೋ ದಿವೋ ಧರುಣಃ ಪೃಥಿವ್ಯಾ ಆಸ್ಯೇಶಾನಾ ಜಗತೋ ವಿಷ್ಣುಪತ್ನೀ। ವಿಶ್ವವ್ಯಚಾ ಇಷಯಂತೀ ಸುಭೂತಿಃ ಶಿವಾ ನೋ ಅಸ್ತು ಅದಿತಿರುಪಸ್ಥೇ ॥

ದ್ಯುಲೋಕಕ್ಕೆ ಅವಲಂಬನಪ್ರಾಯಳೂ, ಪೃಥ್ವಿಗೆ ಧಾರಕಳೂ, ವಿಶ್ವಕ್ಕೆಲ್ಲಾ ಒಡೆಯಳೂ, ವಿಷ್ಣುಪತ್ನಿಯೂ, ವಿಶ್ವವ್ಯಾಪಕಳೂ, ಶಕ್ತಿಯುತಳೂ ಆದ ಅದಿತಿಯು, ಅವಳ ಉತ್ಸಂಗವನ್ನೇ ಆಶ್ರಯಿಸಿರುವ ನನಗೆ ಕಲ್ಯಾಣವನ್ನುಂಟುಮಾಡಲಿ

ಈ ಎಲ್ಲಾ ಸನ್ನಿವೇಶಗಳಲ್ಲೂ ಸಹ ಅದಿತಿಯು ಜಗತ್ಸೃಷ್ಟಿಗೂ, ಜಗತ್ಪೋಷಣೆಗೂ ಪ್ರಧಾನಕಾರಣಳಾಗಿದ್ದಾಳೆ ಎಂಬಂಶಗಳು ವಿಶದವಾಗಿವೆ.

॥ संहितापाठः ॥

अग्निरीशे वसव्यस्याग्निर्महः सौभगस्य ।

तान्यस्मभ्यं रासते ॥ ८ ॥

॥ पदपाठः ॥

अग्निः । ईशे । वसव्यस्य । अग्निः । महः । सौभगस्य ॥

तानि । अस्मभ्यं । रासते ॥ ८ ॥

॥ सायणभाष्यं ॥

अग्निर्देवो वसव्यस्य धनसमूहस्येशे। ईष्टे दातुं। तथाग्निर्महो महतः सौभगस्य सुभगत्वस्याप्येशे । अतस्तानि धनानि सौभाग्यं चास्मभ्यं रासते । ददातु ॥

॥ प्रतिपदार्थ ॥

अग्निः—देवतात्मनाद अग्नियु । **वसव्यस्य**—धनसमूहक्कै । **ईशे**—ऒडेयनागिद्दानॆ । **अग्निः**—अग्नियु । **महः**—महत्त्वद । **सौभगस्य**—सौभाग्यक्कू (प्रभुवागिद्दानॆ) । **तानि**—अवुगळन्नॆल्ला । **अस्मभ्यं**—नमगॆ । **रासते**—कॊडलि.

॥ भावार्थ ॥

देवतात्मनाद अग्नियु धनसमूहक्कॆ ऒडेयनागिद्दानॆ. अग्नियु महत्त्वद सौभाग्यक्कू प्रभुवागिद्दानॆ. अग्नियु अवुगळन्नॆल्ला नमगॆ ऒदगिसलि.

English Translation.

Agni is lord over treasure Agni (is lord) over great good fortune : may he bestow them upon us.

॥ संहितापाठः ॥

उषो महोन्या वह सूनृते वार्या पुरु ।

अस्मभ्यं वाजिनीवति ॥ ९ ॥

॥ पदपाठः ॥

उषः । मघोनि । आ । वह । सूनृते । वार्या । पुरु ।

अस्मभ्यं । वाजिनीवति ॥ ९ ॥

॥ सायणभाष्यं ॥

हे उषो हे मघोनि धनवति हे सूनृते प्रियसत्यरूपवागभिमानिनि हे वाजिनीवत्यन्नवति देवि अस्मभ्यं वार्या वरणीयानि पुरु बहूनि धनान्या वह प्रापय ॥

॥ प्रतिपदार्थ ॥

मघोनि—धनवतियूं । **सूनृते**—सत्यवाक्यिनल्लि प्रीतियुळ्ळवळू । **वाजिनीवति** । अन्नवंतळू आद । **उषः**—ऎलै उषोदेवियीये । **अस्मभ्यं**—नमगे । **वार्या**—अपेक्षित गळादवू । **पुरु**—अधिकवादवू आद धनगळन्नु । **आ वह**—तंदॊदगिसु.

॥ भावार्थ ॥

धनवतियूं, सत्यवाक्यिनल्लि प्रीतियुळ्ळवळू, अन्नवंतळू आद उषोदेवियीये, नमगे अपेक्षितगळादवू, अधिकवादवू आद धनगळन्नु तंदॊदगिसु.

English Translation.

Opulent Ushas, truth-speaking, food-abounding, bestow upon us many good things.

॥ संहितापाठः ॥

तत्सु नः सविता भगो वरुणो मित्रो अर्यमा ।

इन्द्रो नो राधसा गमत् ॥ १० ॥

॥ पदपाठः ॥

तत् । सु । नः । सविता । भगः । वरुणः । मित्रः । अर्यमा ।

इन्द्रः । नः । राधसा । आ । गमत् ॥ १० ॥

॥ ಸಾಯಣಭಾಷ್ಯಂ ॥

ಯೇನ ರಾಧಸಾ ಧನೇನ ಸಹ ಸವಿತಾ ಭಗೋ ವರುಣೋ ಮಿತ್ರೋಽರ್ಯಮೇಂದ್ರಃ ಪ್ರತ್ಯೇಕಮಾ ಗಮತ್ । ಅಗಚ್ಛತಿ ಯಜ್ಞಂ। ತದ್ರಾಧೋ ಧನಂ ತೇ ದೇವಾ ನೋಽಸ್ಮಭ್ಯಂ ಸು ಸುಷ್ಠು ಪ್ರಯಚ್ಛಂತ್ವಿತಿ ಶೇಷಃ ॥

॥ ಪ್ರತಿಪದಾರ್ಥ ॥

ಸವಿತಾ—ಸವಿತೃವೂ । **ಭಗಃ**—ಭಗನೂ । **ವರುಣಃ**—ವರುಣನೂ । **ಮಿತ್ರಃ**—ಮಿತ್ರನೂ । **ಅರ್ಯಮಾ**—ಅರ್ಯಮನೂ । **ಇಂದ್ರಃ**—ಇಂದ್ರನೂ । **ರಾಧಸಾ**—ಧನಗಳೊಂದಿಗೆ । **ನಃ**—ನಮ್ಮ **ಈ** ಯಜ್ಞಕ್ಕೆ । **ಆ ಗಮತ್**—ದಯಮಾಡಲಿ । **ತತ್**—ಆಯಾ ದೇವತೆಯ ಸಂಬಂಧಿಯಾದ ಧನವನ್ನು । **ನಃ**—ನಮಗೆ । **ನು**—ಅತಿಶಯವಾಗಿ ಕೊಡಲಿ.

॥ ಭಾವಾರ್ಥ ॥

ಸವಿತೃವೂ, ಭಗನೂ, ವರುಣನೂ, ಮಿತ್ರನೂ, ಆರ್ಯಮನೂ ಮತ್ತು ಇಂದ್ರನೂ ಸಹ ತಮ್ಮ ಧನಗಳೊಂದಿಗೆ ನಮ್ಮ ಯಜ್ಞಕ್ಕೆ ದಯಮಾಡಲಿ. ಮತ್ತು ಆಯಾ ದೇವತೆಯು ತತ್ಸಂಬಂಧಿಯಾದ ಧನವನ್ನು ನಮಗೆ ಕೊಡಲಿ.

English Translation.

May Savitri, Bhaga, Varuna, Mitra, Aryaman, Indra, come to us with the wealth (that each bestows).

ಐವತ್ತಾರನೆಯ ಸೂಕ್ತವು

ಪೀಠಿಕೆ.

ದ್ಯಾವಾಪೃಥಿವಿಗಳು—ಅತಿಪ್ರಾಚೀನರೂ, ದೇವತೆಗಳಿಗೆಲ್ಲಾ ಮಾತಾಪಿತೃಗಳೆಂದು ಪ್ರಶಂಸಿತರಾಗಿರುವವರೂ ಆದ ದ್ಯಾವಾಪೃಥಿವಿಗಳ ಸ್ವರೂಪ ಮತ್ತು ಪ್ರಭಾವಗಳನ್ನು ಪರಿಶೀಲಿಸುವುದು ಉಚಿತವಾಗಿರುತ್ತದೆ. ಆದುದರಿಂದ ಈ ಭಾಗದಲ್ಲಿ ಅವರ ಮಹಿಮಾತಿಶಯಗಳನ್ನು ವರ್ಣಿಸುವ ವಾಕ್ಯಗಳನ್ನುದ್ಧರಿಸಿ ವಿವರಿಸಲಾಗುತ್ತದೆ

ದ್ಯಾವಾಪೃಥಿವಿಗಳು ಸಾಧಾರಣವಾಗಿ ಇತರ ದೇವತೆಗಳೊಂದಿಗೆ ಆಹೂತರೂ, ಪ್ರಾರ್ಥಿತರೂ, ಪೂಜಿತರೂ ಆಗಿ ಇತರ ದೇವತೆಗಳನ್ನುದ್ದೇಶಿಸಿದ ಅನೇಕ ಸೂಕ್ತಗಳಲ್ಲಿ ಅಂತರ್ಗತವಾದ ಮಂತ್ರಗಳಿಂದ ಪ್ರಶಂಸಿಸಲ್ಪಟ್ಟಿದ್ದಾರೆ. ಆದರೂ ಸಹ, ಇವರ ವೈಯಕ್ತಿಕ ಗುಣಗಳನ್ನು ಪ್ರಶಂಶಿಸುವುದಕ್ಕಾಗಿಯೇ ಕೆಲವು ಸೂಕ್ತಗಳು ನಿರ್ಮಿತವಾಗಿವೆ. (೧-೧೫೯, ೧-೧೬೦, ೧-೧೮೫, ೪-೫೬, ೬-೭೦, ೭-೫೩). ಉದಾಹರಣೆಗಾಗಿ ಇವರನ್ನು ಪ್ರಶಂಸಿಸತಕ್ಕ ಕೆಲವು ಮಂತ್ರಗಳ ಅರ್ಥಗಳನ್ನು ಇಲ್ಲಿ ವಿವರಿಸಿದೆ.

" ಯಜ್ಞವೃದ್ಧಿಗೆ ಕಾರಣರೂ, ಮಹತ್ಸ್ವರೂಪವುಳ್ಳವರೂ, ಯಜ್ಞಗಳಲ್ಲಿ ಪ್ರಶಂಸಿತರಾಗುವವರೂ ಆದ ದ್ಯಾವಾಪೃಥಿವಿಗಳನ್ನು ಹವಿರಾದ್ಯರ್ಪಣೆಗಳಿಗಾಗಿ ಸ್ತುತಿಸಿ ಪ್ರಾರ್ಥಿಸುತ್ತೇನೆ ದೇವಮಾತೆಗಳಾದ ದ್ಯಾವಾಪೃಥಿವಿಗಳು ಯಜಮಾನರಿಂದ ನೆರವೇರಿಸಲ್ಪಟ್ಟ ಶ್ರೇಷ್ಠವಾದ ಕರ್ಮಗಳಿಂದ ಕೂಡಿದವರಾಗಿ ತಮ್ಮ ಅನುಗ್ರಹಾತ್ಮಕವಾದ ಬುದ್ಧಿಯಿಂದ ಯಜಮಾನರ ಇಷ್ಟಾರ್ಥಗಳನ್ನು ನೆರವೇರಿಸುತ್ತಾರೆ " (೧-೧೫೯-೧)

" ಯಾವಾಗಲೂ ಕೆಡಕನ್ನು ಮಾಡದಿರುವುದೂ, ಸ್ವಾಯತ್ತವಾದ ಬಲವುಳ್ಳದ್ದೂ ಆದುದರಿಂದಲೇ ಮಹತ್ತಾದದ್ದೂ ಮತ್ತು ಅನುಗ್ರಹಾತ್ಮಕವಾದದ್ದೂ ಆದ ದ್ಯುಲೋಕಾಧಿದೇವತೆಯ ಮನಸ್ಸನ್ನೂ ಮತ್ತು ಅದೇ ಗುಣಗಳುಳ್ಳ ಪೃಥ್ವಿಯ ಮನಸ್ಸನ್ನೂ ಪ್ರಾರ್ಥನಾಪೂರ್ವಕವಾದ ಸ್ತುತಿಗಳಿಂದ ಪೂಜಿಸಿ ತೃಪ್ತಿಪಡಿಸುತ್ತೇನೆ ಜಗತ್ತಿಗೆಲ್ಲಾ ಮಾತಾಪಿತೃಗಳಾದ ದ್ಯಾವಾಪೃಥಿವಿಗಳು ಶ್ರೇಷ್ಠವಾದ ತಮ್ಮ ಸಾಮರ್ಥ್ಯದಿಂದ ಯಜಮಾನರೂಪರಾದ ಪ್ರಜೆಗಳ ಇಷ್ಟಾರ್ಥಗಳನ್ನು ಅತ್ಯಧಿಕವಾದ ವಿಸ್ತೃತಿಯುಳ್ಳದ್ದನ್ನಾಗಿಯೂ, ಶಾಶ್ವತವಾದುದನ್ನಾಗಿಯೂ ತಮ್ಮ ರಕ್ಷಣಾತ್ಮಕವಾದ ಸಹಾಯಗಳಿಂದ ಮಾಡುತ್ತಾರೆ " (೧-೧೫೯-೨)

ಅತ್ಯಂತ ವಿಸ್ತಾರವಾಗಿ ಹರಡಿರುವುದೂ, ಆದ್ದರಿಂದಲೇ ಮಹತ್ತಾದದೂ, ಒಂದಕ್ಕೊಂದಕ್ಕೆ ಅಂಟಿಕೊಳ್ಳದಿರುವುದೂ ಆದ ದ್ಯಾವಾಪೃಥಿವಿಗಳು ಸಕಲ ಲೋಕಗಳನ್ನೂ ಸುರಕ್ಷಿತವಾಗಿ ಕಾಪಾಡುತ್ತಾರೆ. ದೃಢವಾದ ಸಂಕಲ್ಪವುಳ್ಳ ದ್ಯಾವಾಪೃಥಿವಿಗಳು ಸಕಲ ಪ್ರಾಣಿಗಳ ಯೋಗಕ್ಷೇಮಕ್ಕಾಗಿಯೇ ಇರುವಂತಿದ್ದಾರೆ. ಪಿತೃಸ್ಥಾನದಲ್ಲಿರುವ ಅಂತರಿಕ್ಷವು ತನ್ನ ಪ್ರಶಸ್ತವಾದ ಪ್ರಭೆಯನ್ನು ಸುತ್ತಲೂ ಹರಡಿ ಸರ್ವತ್ರ ವ್ಯಾಪಿಸಿದೆ. (೧-೧೬೦-೨)

" ಪ್ರಸಿದ್ಧರಾದವರೂ, ಮಹತ್ತಾದವರೂ ಆದ ಎಲೈ ದ್ಯಾವಾಪೃಥಿವಿಗಳೇ, ನಮ್ಮಿಂದ ಸ್ತುತರಾದ ನೀವು ನಮಗೆ ಪ್ರಭೂತವಾದ ಅನ್ನವನ್ನೂ ಬಲವನ್ನೂ ಕೊಡಿರಿ. ಅದರಿಂದ ನಾವು ಪ್ರತಿದಿನವೂ ನಮ್ಮ ಸಂತತಿಯನ್ನು ಬೆಳೆಸುವಂತೆ ಅನುಗ್ರಹಿಸಿ ನಮಗೆ ಸ್ತುತ್ಯರ್ಹವಾದ ವೀರ್ಯವನ್ನು ವೃದ್ಧಿಪಡಿಸಿ " (೧-೧೬೦-೫)

ದ್ಯಾವಾಪೃಥಿವಿಗಳನ್ನು ಪ್ರಶಂಸಿತಕ್ಕ ಸಮಸ್ತ ಸೂಕ್ತಗಳಲ್ಲೂ ಸಹ ಅವರ ವಿಶೇಷಗುಣಗಳನ್ನು ತೋರಿಸುವ ಅನೇಕ ವಿಶೇಷಣಗಳು ಅವರ ಮಹತ್ವವನ್ನು ಕೊಂಡಾಡುತ್ತವೆ ಅವರ ಅಸಾಧಾರಣವಾದ ವಿಸ್ತೃತಿ (**ಉರುವ್ಯಚಸಾ**), ಗಭೀರತೆ (**ಗಭೀರೇ**), ಫಲೋತ್ಪತ್ತಿ ಸಾಮರ್ಥ್ಯ (**ಭೂರಿರೇತಸಾ**), ಸ್ಥೈರ್ಯ (**ಅಚರೇ**), ಇತ್ಯಾದಿಯಾದ ಭೌತಿಕವಾದ ಮಹದ್ಗುಣಗಳನ್ನು ವರ್ಣಿಸುವ ವಿಶೇಷಣಗಳಲ್ಲದೇ (೧-೧೬೦-೨), ೧-೧೪೫-೬, ೪-೫೬-೩, ೬-೭೦-೧, ೬-೭೦-೨), ಸತ್ಯಪಾಲಕರು, ಸತ್ಯವನ್ನು ವೃದ್ಧಿಮಾಡತಕ್ಕವರು (**ಋತಾವರೀ, ಋತಾವೃಧಾ**) ಉತ್ತಮವಾದ ಜ್ಞಾನವುಳ್ಳವರು, (**ಪ್ರಚೇತಸಾ**), ಜಗದುಪಕಾರಕರು (**ಅದ್ರುಹಾ**) ಇತ್ಯಾದಿ ವಿಶೇಷಣಗಳೂ ಹೇರಳವಾಗಿರುತ್ತವೆ (೧-೧೫೯-೧, ೧-೧೬೦-೧, ೪-೫೬-೨, ೬-೭೦-೬, ೧೦-೬೬-೨).

1. ದ್ಯಾವಾಪೃಥಿವಿಗಳು ವಿಶ್ವಕ್ಕೆಲ್ಲಾ ಪಿತೃಗಳು (ಮಾತಾಪಿತೃಗಳು) ಎಂದು ವರ್ಣಿಸಿರುವ ಶ್ರುತಿವಾಕ್ಯಗಳು

ದ್ಯಾವಾಪೃಥಿವಿಗಳಿಬ್ಬರೂ ಒಟ್ಟಿಗೆ ವಿಶ್ವಪಿತೃಗಳೆಂದೂ (**ಪಿತರಾ**;—೧-೧೫೯-೨, ೩-೩-೧೧, ೭-೫೩-೨, ೧೦-೬೫-೮), ಮಾತೃಗಳೆಂದೂ (**ಮಾತರಾ**;—೧-೧೫೯ ೩, ೯-೮೫-೧೨, ೧೦-೮೮-೭, ೧೦-೩೫-೩, ೧೦-೬೪-೧೪) ಮತ್ತು ಜನಕರೆಂದೂ (**ಜನಿತ್ರೀ**;—೧೦-೧೧೦-೯) ವರ್ಣಿತರಾಗಿದ್ದಾರೆ. ಕೆಲವೆಡೆ

ಗಳಲ್ಲಿ ದ್ಯುಲೋಕವು ಪಿತೃವೆಂದೂ, ಪೃಥ್ವಿಯು ಮಾತೃವೆಂದೂ ನಿರ್ದೇಶಿಸಲ್ಪಟ್ಟಿವೆ. (೧-೪೯-೪, ೧-೯೦-೭; ೧-೧೫೯-೨, ೧-೧೬೦-೨, ೧-೧೪೫-೧೧, ೪-೧-೧೦; ೫-೪೨-೧೬; ೫-೪೩-೨, ೫-೪೩-೧೫; ೬-೫೧-೫; ೬-೭೦-೬; ೬-೭೭-೨, ೪-೯೨-೨, ೧೮-೫೪-೩; ೧೦-೪೮-೧೫, ವಾ. ಸಂ. ೧೯-೪೭ ಅ. ವೇ. ೨-೨೪-೪; ೩-೨೩-೬ ೬-೪-೩, ೬-೧೨೦-೨, ೪-೭-೨; ೧೨-೧-೧೦ ಅಥರ್ವವೇದದಲ್ಲಿ ಇನ್ನೊಂದುಕಡೆ ಕೊಂಚ ವ್ಯತ್ಯಸ್ತವಾದ ವರ್ಣನವು ಕಂಡುಬರುತ್ತದೆ.

ಮಾತಾ ಭೂಮಿಃ ಪುತ್ರೋಽಹಂ ಪೃಥಿವ್ಯಾಃ । ಪರ್ಜನ್ಯಃ ಪಿತಾ ಸ ಉ ನಃ ಪಿಪರ್ತು ॥

(ಅ. ವೇ. ೧೨-೧-೧೨)

ಪೃಥ್ವಿಯು ನಮ್ಮ ಮಾತೆಯು. ನಾನು ಪೃಥ್ವಿಯ ಪುತ್ರನು. ಪರ್ಜನ್ಯನು ನಮ್ಮ ಪಿತೃವು. ಅದೇ ಪರ್ಜನ್ಯನು ನಮ್ಮನ್ನು ಪೂರ್ಣವಾಗಿ ಪೋಷಿಸಲಿ ಎಂದು ಸ್ತುತಿಸಿ ಪ್ರಾರ್ಥಿಸಿದೆ. ಅಥರ್ವವೇದದಿಂದ ಉದ್ಧೃತವಾಗಿರುವ ಇದೇ ಭಾಗದ ೪೨ ನೆಯ ಮಂತ್ರದಲ್ಲಿ ಈ ರೀತಿಯ ಪ್ರಶಂಸೆಯಿದೆ.

" ಭೂಮ್ಯೈ ಪರ್ಜನ್ಯಪತ್ನ್ಯೈ ನಮೋಽಸ್ತು ವರ್ಷಮೇದಸೇ "

ವೃಷ್ಟಿಯಿಂದ ತನ್ನ ಸಂಪತ್ತನ್ನು ಬೆಳಸಿಕೊಳ್ಳುವವಳೂ, ಪರ್ಜನ್ಯಶಕ್ತಿಯೂ ಆದ ಪೃಥಿವಿಗೆ ನಮಸ್ಕಾರವು ಎಂಬ ಈ ಸ್ತುತಿಯಲ್ಲಿ, ದ್ಯುಲೋಕದ ಸ್ಥಾನದಲ್ಲಿ ಪರ್ಜನ್ಯನು ಪೃಥಿವಿಯ ಪತಿಯೆಂದು ವರ್ಣಿತನಾಗಿದ್ದಾನೆ. **" ಜಾಯಾ ಭೂಮಿಃ ಪತಿರ್ದ್ಯೌರಮ ಮಿಥುನಂ ತಾ "** ಭೂಮಿಯೇ ಪತ್ನಿಯು, ಅಂತರಿಕ್ಷವೇ ಪತಿಯು ಎಂಬ ವರ್ಣನವು ತೈತ್ತಿರೀಯಾರಣ್ಯಕದಲ್ಲಿ ಉಕ್ತವಾಗಿದೆ.

ಐತರೇಯ ಬ್ರಾಹ್ಮಣದಲ್ಲಿ ದ್ಯಾವಾಪೃಥಿವಿಗಳ ದಾಂಪತ್ಯಸಂಬಂಧವು ಕೆಳಗೆ ವಿವಸಿರುವ ವಾಕ್ಯಗಳಿಂದ ಈ ರೀತಿ ವರ್ಣಿತವಾಗಿದೆ

" ಇಮೌ ವೈ ಲೋಕೌ ಸಹ ಆಸ್ತಾಂ । ತೌ ನ್ಯೈತಾಂ । ನ ಅವರ್ಪತ್ ನ ಸಮತಪತ್.... .... ನ ದ್ಯಾವಾ ಅಂತರಿಕ್ಷತ್ ನ ಅಂತರಿಕ್ಷಾದ್ಭೂಮಿಃ "

(ಐ. ಬ್ರಾ. ೪-೨೭)

ದ್ಯಾವಾಪೃಥಿವಿಗಳೆರಡೂ ಒಂದು ಕಾಲದಲ್ಲಿ ಐಕ್ಯವಾಗಿದ್ದವು. ನಂತರ ಒಂದಕ್ಕೊಂದು ಬೇರೆಯಾದವು. ಬೇರೆಯಾದೊಡನೆಯೇ ವೃಷ್ಟಿಪತನವಾಗಲಿ ಸೂರ್ಯಪ್ರಕಾಶವಾಗಲಿ ಸಂಭವಿಸಲಿಲ್ಲ ದೇವಮಾನವಾದಿ ಪಂಚಜನವೂ ಸಹ ಒಬ್ಬರಿಗೊಬ್ಬರು ಶಾಂತಿಪಾಲನವನ್ನು ಮಾಡಲು ಸಾಧ್ಯವಾಗಲಿಲ್ಲ ಆಗ ದೇವತೆಗಳು ಈ ಎರಡು ಲೋಕಗಳನ್ನೂ ಒಟ್ಟುಗೂಡಿಸಲು ಪ್ರಯತ್ನಿಸಿದರು ಅವರ ಪ್ರಯತ್ನವು ಸಫಲವಾಗಿ ಪುನಃ ದ್ಯಾವಾಪೃಥಿವಿಗಳು ಒಂದುಗೂಡಿದವು. ಎರಡಕ್ಕೂ ವಿಧ್ಯುಕ್ತವಾದ ವಿವಾಹವು ನಡೆಯಿತು " ಎಂದು ಈ ಪ್ರಕರಣದ ಕೊನೆಯಲ್ಲಿ "ದ್ಯುಲೋಕವು ಪೃಥ್ವಿಯನ್ನು ಸಮಾಪಿಸಿತು. ಆಗ ದ್ಯಾವಾಪೃಥಿವಿಗಳೆಂಬ ಐಕ್ಯಸೂಚಕವಾದ ಹೆಸರು ಪ್ರಸಿದ್ಧವಾಯಿತು ಅಂತರಿಕ್ಷದಿಂದ ದ್ಯುಲೋಕವಾಗಲಿ ಅಥವಾ ಪೃಥಿವಿಯಾಗಲಿ ಉತ್ಪನ್ನವಾಗಲಿಲ್ಲ.

ದ್ಯಾವಾಪೃಥಿವಿಗಳು ಕೇವಲ ಮಾನವರಿಗೆ ಮಾತ್ರ ಮಾತಾಪಿತೃಗಳಲ್ಲ **ದೇವಪುತ್ರೇ** ಎಂದು ಅನೇಕ ಶ್ರುತಿವಾಕ್ಯಗಳಲ್ಲಿ ನಿರ್ದಿಷ್ಟರಾಗಿರುವುದರಿಂದ ಅವರು ದೇವತೆಗಳಿಗೂ ಮಾತಾಪಿತೃಗಳೆಂದು ಪ್ರಸಿದ್ಧವಾದ ವಿಷಯ

ವಾಗಿದೆ. **ಈ** ವಿಶೇಷಣವು **ಅನೇಕಕಡೆಗಳಲ್ಲಿ** ಅವರ ದೇವಪಿತೃತ್ವವನ್ನು ಸ್ಥಿರಪಡಿಸುತ್ತದೆ. (ಉದಾಹರಣೆಗೆ .— ೧-೧೦೬-೩ , ೧-೧೫೯-೧ , ೧-೧೮೫-೪ , ೪-೫೬-೪ ; ೬-೫೩-೧ , ೧೦-೧೧-೯) ೬-೯೭-೪ರಲ್ಲಿ ಜನಿತ್ರಿಗಳಾದ ದ್ಯಾವಾಪೃಥಿವಿಗಳು (**ರೋದಸೀ**) ಬೃಹಸ್ಪತಿಯನ್ನು ಪೋಷಿಸಿದರು ಎಂದು ವರ್ಣಿತವಾಗಿದೆ ೩-೫೩-೭ ಮತ್ತು ೪-೨-೧೫ನೇ ಮಂತ್ರಗಳಲ್ಲಿ ಅಂಗಿರಸ್ಸುಗಳು **ದಿವಸ್ಪುತ್ರರೆಂದು** ನಿರ್ದಿಷ್ಟರಾಗಿದ್ದಾರೆ. ೧೦-೭ ೭ರಲ್ಲಿ ಇದೇ ದ್ಯಾವಾಪೃಥಿವಿಗಳು ತ್ವಷ್ಟೃವಿನೊಂದಿಗೂ ಮತ್ತು ಅಪ್ಪುಗಳೊಂದಿಗೂ ಸೇರಿ ಅಗ್ನಿಯನ್ನು ಉತ್ಪನ್ನವಾಗುವಂತೆ ಮಾಡಿದರು ಎಂದು ಸ್ತುತರಾಗಿದ್ದಾರೆ ಇದಲ್ಲದೆ, ಅನೇಕ ಪ್ರಕರಣಗಳಲ್ಲಿ ಅವರು ಭುವನಗಳನ್ನೆಲ್ಲಾ ನಿರ್ಮಿಸಿದರೆಂದೂ, ಸಕಲಭೂತಗಳನ್ನೂ ಧರಿಸಿ ಪೋಷಿಸುವರೆಂದೂ ಪ್ರಶಂಸಿತರಾಗಿದ್ದಾರೆ (೧-೧೫೦-೨, ೧-೧೬೦-೨, ೧-೧೮೫-೧) [೬-೫೦-೨ನೇ ಮಂತ್ರದಲ್ಲಿ ಮಾತ್ರ ಸಕಲ ಚರಾಚರಾತ್ಮಕವಾದ ಪ್ರಪಂಚಕ್ಕೂ ಅಪ್ಪೇ (ಉದಕ) ಮೂಲವೆಂದು ಉಚಿತವಾಗಿ ತಿಳಿಸಿದೆ].

೧೦-೬೩-೨ ನೇ ಮಂತ್ರದಲ್ಲಿ ದೇವತೆಗಳ ಉತ್ಪತ್ತಿಕ್ರಮವನ್ನು ಮೂರುಭಾಗವಾಗಿ ವಿಂಗಡಿಸಿ ಕೆಲವರು ಅಂತರಿಕ್ಷಸ್ಥಾನವಾದ ಅಪ್ಪುಗಳಿಂದ ಉತ್ಪನ್ನರಾದರೆಂದೂ, ಇನ್ನು ಕೆಲವರು ಪೃಥ್ವಿಯಿಂದ ಉತ್ಪನ್ನರಾದರೆಂದೂ ತಿಳಿಸಿದೆ ಇದರ ವಿವರಣೆಯನ್ನು ಮುಂದಿನ ಪ್ರಕರಣದಲ್ಲಿ ತಿಳಿಸಲಾಗುತ್ತದೆ.

2. ದ್ಯಾವಾಪೃಥಿವಿಗಳ ಉತ್ಪತ್ತಿಕ್ರಮವನ್ನು ವಿವರಿಸುವ ಪ್ರಕರಣಗಳು :—

ದೇವಮಾನವಾದಿ ಸಕಲ ಭೂತಗಳಿಗೂ ಜನಿತ್ರಿಗಳಾದ ದ್ಯಾವಾಪೃಥಿವಿಗಳೇ ಬೇರೆ ಮೂಲದಿಂದ ಉತ್ಪನ್ನವಾದವಾಗಿವೆ ಎಂದು ವರ್ಣಿತವಾಗಿರುವ ಪ್ರಕರಣಗಳೂ ಅನೇಕವಾಗಿವೆ "**ಈ** ದ್ಯಾವಾಪೃಥಿವಿಗಳನ್ನು ನಿರ್ಮಿಸಿದ ದೇವನು, ದೇವಶಿಲ್ಪಿಗಳಲ್ಲೆಲ್ಲಾ ಅತ್ಯಂತ ನಿಪುಣನಾಗಿರಬೇಕು" ಇತ್ಯಾದಿಯಾಗಿ ೧-೧೬೦-೪, ೪-೫೬-೩ ನೇ ಮಂತ್ರಗಳಲ್ಲಿ ಪ್ರಶಂಸಿಸಿದೆ

ಇಂತಹ ಮಾಹಾತ್ಮ್ಯದಿಂದ ಕೂಡಿದ ದ್ಯಾವಾಪೃಥಿವಿಗಳನ್ನು ನಿರ್ಮಿಸಿದವನು **ಕುಶಲಕರ್ಮಿಯೇ** ಸರಿ ಎಂದು ವರ್ಣಿತವಾಗಿರುವ ಸಂದರ್ಭಗಳನ್ನು ಪ್ರಶಂಸಾವಾಕ್ಯಗಳೆಂದೇ ಹೇಳಿದರೂ ಹೇಳಬಹುದು **ಪೂರ್ವಂ ಪುತ್ರಮಾಹಾ ತ್ಕ್ಯೇನ ಏತೇ ಪ್ರಶಸ್ಯ** " ಎಂಬ ಸಾಯಣರ **ವಾಕ್ಯವೂ ಈ** ತಾತ್ಪರ್ಯವನ್ನೇ ಸೂಚಿಸುತ್ತದೆ (೧-೧೬೦-೪ ಸಾ ಭಾ) ಆದರೂ ಸಹ, ಜಗಜ್ಜನನಿಯರಾದ ದ್ಯಾವಾಪೃಥಿವಿಗಳಿಗೂ ಮೂಲವಾದ ಇನ್ನೊಂದು ಪರವಸ್ತುವಿನ ವಿಷಯದಲ್ಲಿ ಋಷಿಯ ಶ್ರದ್ಧೆಯು ಇದರಿಂದ ವ್ಯಕ್ತವಾಗುತ್ತದೆ ೬-೩೦-೫ ಮತ್ತು ೮-೩೬-೪ ನೇ ಮಂತ್ರಗಳು ಇಂದ್ರನೇ ದ್ಯಾವಾಪೃಥಿವಿಗಳ ನಿರ್ಮಾಪಕನೆಂದು ತಿಳಿಸುತ್ತವೆ (**ಜನಿತಾ ದಿವ್ಯೋ ಜನಿತಾ ಪೃಥಿವ್ಯಾಃ**) " **ಇಂದ್ರೋ ಯೌ ಚಕ್ರೇ** " ಇಂದ್ರನು ಯಾವ ಪೃಥ್ವಿಯನ್ನು ತನ್ನ ಸಖಿಭೂತಳನ್ನಾಗಿ ಮಾಡಿ ನಿರ್ಮಿಸಿದನೋ ಆ ಪೃಥ್ವಿಯು ಅವಳ ಪುತ್ರಳಾದ ನನಗೆ ಕ್ಷೀರವನ್ನೊದಗಿಸಲಿ ಎಂದು ಅಥರ್ವವೇದದ ವಾಕ್ಯವಿದೆ (ಅ. ವೇ. ೧೨-೧-೧೦). ಇಂದ್ರನು ದ್ಯಾವಾಪೃಥಿವಿಗಳ ನಿರ್ಮಾಪಕನು ಎಂದು ವರ್ಣಿತವಾಗಿರುವ ವಾಕ್ಯಗಳಲ್ಲಿ ಕೆಲವನ್ನು **ಇಲ್ಲಿ** ಉದಹರಿಸಬಹುದು.

" ಇಂದ್ರನು ತನ್ನ ನಿರ್ಮಾಣಕೌಶಲದಿಂದ ದ್ಯಾವಾಪೃಥಿವಿಗಳನ್ನು **ಆಕರ್ಷಕ**ವಾಗಿರುವಂತೆ ನಿರ್ಮಿಸಿದ್ದಾನೆ"
(೧೦-೮೯-೬)

" ಎಲೈ ಇಂದ್ರನೇ, ನೀನು ನಿನ್ನ ಸ್ವಶರೀರದಿಂದಲೇ, ಜಗತ್ತಿಗೆ ಮಾತಾಪಿತೃಗಳಾದ ದ್ಯಾವಾಪೃಥಿವಿಗಳನ್ನು ನಿರ್ಮಿಸಿದೆ " (೧೦-೫೪-೪)

" ಇಂದ್ರನು ಪೃಥ್ವಿಯನ್ನೂ, ದ್ಯುಲೋಕವನ್ನೂ, ಅಂತರಿಕ್ಷವನ್ನೂ ಆಯಾ ಲೋಕನಿವಾಸಿಗಳಿಗೆ ವಿಭಾಗಿಸಿ ಕೊಟ್ಟನು " (೩-೫೪-೪)

" ಇಂದ್ರನು ಪೃಥ್ವಿಯನ್ನೂ, ದ್ಯುಲೋಕವನ್ನೂ, ಅಂತರಿಕ್ಷವನ್ನೂ ಸಹ ತನ್ನ ಸ್ವಶಕ್ತಿಯಿಂದಲೇ ಧರಿಸಿದ್ದಾನೆ". (೩-೩೨-೮ , ೩-೪೪-೩ , ೬-೧೭-೭ , ೧೦-೫೫-೧)

" ಎಲೈ ಇಂದ್ರನೇ, ನೀನು ಈ ದ್ಯಾವಾಪೃಥಿವಿಗಳನ್ನು ನಿನ್ನ ಮುಷ್ಟಿಯಿಂದ ಹಿಡಿದು ನಿಲ್ಲಿಸಿರುವೆ " (೩-೩೦-೫)

" ಇಂದ್ರನು ತನ್ನ ಮಹಿಮೆಯಿಂದ ಈ ದ್ಯಾವಾಪೃಥಿವಿಗಳನ್ನು ತನ್ನಿಷ್ಟ ಬಂದಂತೆ ಸಂಕೋಚಗೊಳಿಸುತ್ತಾನೆ. ಮತ್ತು ವಿಕಾಸಗೊಳಿಸುತ್ತಾನೆ " (೮-೬-೫)

" ದ್ಯಾವಾಪೃಥಿವಿಗಳೆರಡೂ ಇಂದ್ರನ ಅರ್ಧಕ್ಕೆ ಸಮ ಇಂದ್ರನು ಅವುಗಳನ್ನು ವಿಸ್ತರಿದ್ದಾನೆ " (೬-೩೦-೧)

" ರಥದ ಚಕ್ರವು ಅಶ್ವಗಳನ್ನು ಹಿಂಬಾಲಿಸುವಂತೆ ದ್ಯಾವಾಪೃಥಿವಿಗಳು ಇಂದ್ರನನ್ನೇ ಹಿಂಬಾಲಿಸುತ್ತವೆ " (೮-೬-೩೮)

" ಇಂದ್ರನಿಗೆ ದ್ಯಾವಾಪೃಥಿವಿಗಳೆರಡೂ ತಲೆಬಾಗುತ್ತವೆ " (೧-೧೩೧-೧)

" ದ್ಯಾವಾಪೃಥಿವಿಗಳು ಇಂದ್ರನಿಗೆ ಹೆದರಿ ಅವನ ಮುಂದೆ ನಡಗುತ್ತವೆ " (೫-೧೭-೩), (೪-೨೨-೩ , ೬-೧೭-೯ ; ೮-೮೬-೧೪)

" ಇಂದ್ರನ ಮಹತ್ವವನ್ನು ನೋಡಿ ದ್ಯಾವಾಪೃಥಿವಿಗಳು ಕ್ಷುಭಿತವಾಗುತ್ತವೆ " (೭-೨೩-೩)

" ಅವನ ಪ್ರಭುತ್ವಕ್ಕೆ ಮಣಿದು ಅವನ ಅಧೀನದಲ್ಲಿರುತ್ತವೆ " (೧೦-೮೯-೧೦)

" ಅವನ ಶಕ್ತಿಗೆ ತಲೆಬಾಗಿ ತಮ್ಮ ಗೌರವವನ್ನು ಸೂಚಿಸುತ್ತವೆ " (೮-೮೨-೧೬)

ಇವೇ ದ್ಯಾವಾಪೃಥಿವಿಗಳು, ಸೋಮಾದಿ ಇತರ ದೇವತೆಗಳಿಂದಲೂ ನಿರ್ಮಿತವಾದವು ಎಂಬ ವಿವರಣೆಯೂ ಅನೇಕ ಕಡೆಗಳಲ್ಲಿರುತ್ತವೆ. ಉದಾಹರಣೆಗೆ :—

" ಸೋಮ ಮತ್ತು ಪೂಷದೇವತೆಗಳು ದ್ಯಾವಾಪೃಥಿವಿಗಳನ್ನು ಉತ್ಪನ್ನಮಾಡಿದರು " (೨-೪೦-೧)

" ಸೋಮನು ರೋದಸಿಗಳನ್ನು ಜನಿಸುವಂತೆ ಮಾಡಿದನು " (೯-೯೮-೯ , ೯-೯೦-೧ , ೯-೯೬-೫)

" ಧಾತೃವು ಸೂರ್ಯಚಂದ್ರಮಸ್ಸುಗಳನ್ನು ನಿರ್ಮಿಸಿದಂತೆಯೇ, ದ್ಯುಲೋಕವನ್ನೂ, ಪೃಥ್ವಿಯನ್ನೂ ನಿರ್ಮಿಸಿದನು " (೧೦-೧೯೦-೩)

" ಹಿರಣ್ಯಗರ್ಭನು ದ್ಯುಲೋಕವನ್ನೂ, ಪೃಥಿವಿಯನ್ನೂ ಉತ್ಪನ್ನವಾಗುವಂತೆ ಮಾಡಿದನು " (೧೦-೧೨١-೯)

" ತಾವೇ ಜಗತ್ಪತಿಗಳಾದರೂ ಸಹ ದ್ಯಾವಾಪೃಥಿವಿಗಳು ತಮ್ಮ ರೂಪ ಮತ್ತು ವೈವಿಧ್ಯಗಳನ್ನು ತ್ವಷ್ಟೃವಿನಿಂದ ಪಡೆದರು " (೧೦-೧೧೦-೯)

" ಪರಮಪುರುಷನ ಶಿರಸ್ಸಿನಿಂದ ದ್ಯುಲೋಕವೂ, ಪಾದಗಳಿಂದ ಪೃಥಿವಿಯೂ ಆವಿರ್ಭೂತವಾದವು " (೧೦-೯೦-೧೪)

" ಮಿತ್ರನೂ, ಸವಿತೃವೂ ಈ ದ್ಯಾವಾಪೃಥಿವಿಗಳಿಗೆ ಧಾರಕರಾಗಿದ್ದಾರೆ " (೩-೫೯-೧ , ೪-೫೩-೩ , ೧೦-೧೪೯-೧)

" ಈ ದ್ಯಾವಾಪೃಥಿವಿಗಳು ವರುಣ, ಇಂದ್ರ ಸೋಮ, ಮತ್ತು ಹಿರಣ್ಯಗರ್ಭ ಇವರ ಧಾರಣೆಯಲ್ಲಿದ್ದಾರೆ" (೬-೭೦-೧ , ೭-೮೬-೧, ೮-೪೭-೩ , ೬-೭೨-೩ , ೯-೪೭-೩, ೧೦-೧೩೧-೫)

ಇತ್ಯಾದ್ಯನೇಕ ವಾಕ್ಯಗಳು ದ್ಯಾವಾಪೃಥಿವಿಗಳ ಉತ್ಪತ್ತಿಕ್ರಮವನ್ನು ಮತ್ತು ಇಂದ್ರಾದಿದೇವತೆಗಳಿಗೆ ಅಧೀನವಾಗಿರುವುದನ್ನೂ ತಿಳಿಸುತ್ತವೆ.

3. ದ್ಯಾವಾಪೃಥಿವಿಗಳ ಉತ್ಪತ್ತಿ ವಿಷಯದಲ್ಲಿ ಕೆಲವು ಕಲ್ಪನೆಗಳು :—

ಅನೇಕ ಸಂದರ್ಭಗಳಲ್ಲಿ ಸೂಕ್ತದ್ರಷ್ಟೃವಾದ ಋಷಿಯು ದ್ಯಾವಾಪೃಥಿವಿಗಳ ಉತ್ಪತ್ತಿ ಮತ್ತು ಸ್ವರೂಪಗಳನ್ನು ವರ್ಣಿಸುವಾಗ ತನ್ನ ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾನೆ

" ಈ ದ್ಯಾವಾಪೃಥಿವಿಗಳಲ್ಲಿ ಪೂರ್ವಭಾವಿಯಾದುದಾವುದು ? ಆನಂತರ ಉತ್ಪನ್ನವಾದುದು ಯಾವುದು ? ಅವುಗಳ ಉತ್ಪತ್ತಿಕ್ರಮವಾವುದು ? ಎಲೈ ಋಷಿಗಳೇ, ನಿಮ್ಮಲ್ಲಿ ಈ ವಿಷಯವು ಯಾರಿಗೆ ತಿಳಿದಿದೆ ?" ಎಂದು ಪ್ರಶ್ನಿಸಿದೆ (೧-೧೮೫-೧).

" ಇಯಂ ಪೃಥ್ವೀ ಭೂತಸ್ಯ ಪ್ರಥಮಜಾ " ಉತ್ಪನ್ನವಾದ ವಸ್ತುಗಳಲ್ಲೆಲ್ಲಾ ಈ ಪೃಥ್ವಿಯೇ ಪ್ರಥಮೋತ್ಪನ್ನವಾದುದು ಎಂದು ಶತಪಥಬ್ರಾಹ್ಮಣದ ವಾಕ್ಯವನ್ನು ಗಮನಿಸಬಹುದು (ಶ. ಬ್ರಾ ೧೪-೧-೨-೧೦).

" ಅಪ್ಪುಗಳಿಗೆ ದ್ಯಾವಾಪೃಥಿವಿಗಳ ಮೂಲಸ್ಥಾನವು ತಿಳಿದಿದೆ " (೭-೩೪-೨) ಎಂದು ಒಂದು ಸಂದರ್ಭದಲ್ಲಿ ಹೇಳಿದ್ದರೆ, ಇನ್ನೊಂದು ಸನ್ನಿವೇಶದಲ್ಲಿ ಬೇರೆ **ಋಷಿಯು** " ಅಹೋರಾತ್ರಗಳೂ, ಉಷಸ್ಸುಗಳೂ ಉದಯ ಮತ್ತು ಅಸ್ತಮಯಗಳನ್ನು ಹೊಂದಿ ಉತ್ಪತ್ತಿವಿನಾಶಗಳಿಗೆ ಪಾತ್ರವಾಗಿರುವಾಗ ಕ್ಷಯರಹಿತವೂ ಸ್ಥಿರವೂ ಆದ ಸ್ವರೂಪವುಳ್ಳ ಈ ದ್ಯಾವಾಪೃಥಿವಿಗಳನ್ನು ಯಾವ ವನದ ಮತ್ತು ಯಾವ ವೃಕ್ಷದ ಅವಯವಗಳಿಂದ ನಿರ್ಮಿಸಿದೆ" ಯೆಂದು ಪ್ರಶ್ನಿಸಿದ್ದಾನೆ (೧೦-೩೧-೭)

ಇದೇ ಪ್ರಶ್ನೆಯು ೧೦-೮೧-೪ ನೇ ಮಂತ್ರದಲ್ಲೂ ಪುನಃ ಪರಿತವಾಗಿದೆ ಇದಕ್ಕೆ ಉತ್ತರದಲ್ಲಿ ಇದೇ ಸೂಕ್ತದ ಎಂದರೆ ೧೦-೮೧ ನೇ ಸೂಕ್ತದ ೨ ಮತ್ತು ೩ ನೇ ಮಂತ್ರಗಳಲ್ಲಿ ಈ ರೀತಿ ತಿಳಿಸಿದೆ.

" ಈ ದ್ಯಾವಾಪೃಥಿವಿಗಳನ್ನು ವಿಶ್ವಕರ್ಮನು ನಿರ್ಮಿಸಿದನೆಂಬುದು ಸರಿ. ಆದರೆ, ವಿಶ್ವಚಕ್ಷುವಾದ ವಿಶ್ವಕರ್ಮನು ಯಾವ ಆಧಾರದಮೇಲೆ ಮತ್ತು ಯಾವ ಆವಲಂಬನವನ್ನು ಆಶ್ರಯಿಸಿ ಈ ಪೃಥ್ವಿಯನ್ನು ನಿರ್ಮಿಸಿದನು ಮತ್ತು ದ್ಯುಲೋಕವನ್ನು ಪ್ರಸರಿಸುವಂತೆ ಮಾಡಿದನು ? "

"ವಿಶ್ವವನ್ನೆಲ್ಲಾ ನೋಡಲು ಶಕ್ತಿಯುಳ್ಳ ಕಣ್ಣುಳ್ಳವನೂ, ವಿಶ್ವತೋಮುಖನೂ, ವಿಶ್ವಕ್ಕೆಲ್ಲಾ ಪ್ರಸರಿಸಿದ ಬಾಹುವುಳ್ಳವನೂ ಮತ್ತು ವಿಶ್ವಪಾಲಕನೂ ಆದ ಈ ದೇವನು ತಾನೊಬ್ಬನೇ ಈ ದ್ಯಾವಾಪೃಥಿವಿಗಳನ್ನು ನಿರ್ಮಿಸುವಾಗ ತನ್ನ ಬಾಹುಗಳನ್ನೂ ಪಕ್ಷಗಳನ್ನೂ ಬೀಸಿ ಹರಡುತ್ತಾನೆ." ಇದೇ ಪ್ರಶ್ನೆಗೆ ತೈತ್ತಿರೀಯಬ್ರಾಹ್ಮಣದಲ್ಲಿರುವ ಉತ್ತರವು ಈ ರೀತಿಯಿದೆ.

"ಬ್ರಹ್ಮ ವನಂ ಬ್ರಹ್ಮ ಸ ವೃಕ್ಷ ಆಸೀತ್...." ಈ ದ್ಯಾವಾಪೃಥಿವಿಗಳನ್ನು ನಿರ್ಮಿಸಲು ಮುಖ್ಯಸಾಧನವಾವುದೆಂದರೆ, ಬ್ರಹ್ಮನೇ ಆ ವನವು, ಬ್ರಹ್ಮನೇ ಆ ವೃಕ್ಷವು ಅವುಗಳಿಂದಲೇ ದ್ಯಾವಾಪೃಥಿವಿಗಳ ನಿರ್ಮಾಣವಾಗಿದೆ.

(ತೈ. ಬ್ರಾ. ೨-೮-೯-೬).

ಋ ಸಂ. ೧೦-೭೨ ನೇ ಸೂಕ್ತದಲ್ಲಿ ದ್ಯಾವಾಪೃಥಿವಿಗಳ ಉತ್ಪತ್ತಿಕ್ರಮವನ್ನು ಬೇರೆ ರೀತಿಯಲ್ಲಿ ವರ್ಣಿಸಿದೆ. ಅವನ್ನು ಮುಂದಿನ ಭಾಗದಲ್ಲಿ ವಿವರಿಸಲಾಗುವುದು. ಆದರೆ, ೧೦-೧೨೯-೧ ನೇ ಮಂತ್ರದಲ್ಲಿ ವಿಶ್ವಸೃಷ್ಟಿಯ ಸ್ವರೂಪವನ್ನು ವರ್ಣಿಸುತ್ತಾ, ಈರೀತಿ ತಿಳಿಸಿದೆ.

"ಸೃಷ್ಟಿಯ ಆದಿಯಲ್ಲಿ ಸತ್ತಾಗಲಿ, ಅಸತ್ತಾಗಲಿ ಇರಲಿಲ್ಲ. ಅಂತರಿಕ್ಷವಾಗಲಿ, ದ್ಯುಲೋಕವಾಗಲಿ, ಯಾವುದೂ ಇರಲಿಲ್ಲ" ಇದೇ ಭಾವವನ್ನೇ ತೈತ್ತಿರೀಯಬ್ರಾಹ್ಮಣದಲ್ಲೂ ವಿವರಿಸುತ್ತಾ, **"ಇದಂ ವೈ ಅಗ್ರೇ ನೈವ ಕಿಂಚನಾಸೀತ್ । ನ ದ್ಯೌರಾಸೀತ್ । ನ ಪೃಥಿವೀ ।. .....ಸ್ಯಾಂ ಇತಿ"** ಆರಂಭದಲ್ಲಿ ದ್ಯುಲೋಕವಾಗಲಿ, ಪೃಥ್ವಿಯಾಗಲಿ ಇರಲಿಲ್ಲ, ಅಂತರಿಕ್ಷವೂ ಇರಲಿಲ್ಲ. ಅಭಾವವೇ ವ್ಯಾಪ್ತವಾಗಿದ್ದು, 'ನಾನು ಭಾವರೂಪದಲ್ಲಿ ಪರಿಣಮಿಸಬೇಕು' ಎಂದು ಇಚ್ಛಿಸಿತು ಎಂದಿದೆ (ತೈ. ಬ್ರಾ ೨-೨-೯-೧).

॥ ಸಾಯಣಭಾಷ್ಯಂ ॥

ಮಹೀ ದ್ಯಾವಾಪೃಥಿವೀ ಇತಿ ಸಪ್ತರ್ಚಸ್ಯೇಕಾವಶಂ ಸೂಕ್ತಂ ವಾಮದೇವಸ್ಯಾರ್ಷಂ ದ್ಯಾವಾಪೃಥಿವ್ಯಂ । ಪೂರ್ವತ್ರ ತ್ರಿಗಾಯತ್ರ್ಯಂತಂ ತ್ರಿತ್ಯುಕ್ತ್ವಾತ್ರ್ಯಂಚಮ್ಯಾದ್ಯಾಸ್ತಿಸ್ರೋ ಗಾಯತ್ರ್ಯಃ ಶಿಷ್ಟಾಸ್ತ್ರಿಷ್ಟುಭಃ । ಮಹೀ ಸಪ್ತ ದ್ಯಾವಾಪೃಥಿವೀಯಮಿತ್ಯನುಕ್ರಮಣಿಕಾ ॥ ವ್ಯೂಢೇ ದಶರಾತ್ರೇ ಪಂಚಮೇಽಹನಿ ವೈಶ್ವದೇವಶಸ್ತ್ರ ಆದಿತಶ್ಚತುರ್ಥಚಂ ದ್ಯಾವ್ಯಾಪೃಥಿವ್ಯನಿವಿದ್ಧಾನೀಯಂ । ತಥಾ ಚ ಸೂತ್ರಿತಂ । ಮಹೀ ದ್ಯಾವಾಪೃಥಿವೀ ಇತಿ ಚತಸ್ರ ಋಭುರ್ವಿಭ್ವಾ । ಆ ೮-೮ । ಇತಿ ॥

ಅನುವಾದವು—**ಮಹೀ ದ್ಯಾವಾಪೃಥಿವೀ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು ಇದರಲ್ಲಿ ಏಳು ಋಕ್ಕುಗಳಿರುವುವು ಈ ಸೂಕ್ತಕ್ಕೆ ವಾಮದೇವನು ಋಷಿಯು. ದ್ಯಾವಾಪೃಥಿವಿಗಳು ದೇವತೆಯು ಹಿಂದೆ **ತ್ರಿಗಾಯತ್ರ್ಯಂತಂ ತು** ಎಂದು ಹೇಳಿರುವುದರಿಂದ ಈ ಸೂಕ್ತದ ಐದನೇ ಋಕ್ಕಿನಿಂದ ಮೂರು ಋಕ್ಕುಗಳು ಗಾಯತ್ರೀಛಂದಸ್ಸವು ಉಳಿದ ಋಕ್ಕುಗಳು ತ್ರಿಷ್ಟುಪ್‌ಛಂದಸ್ಸವು. ಅನುಕ್ರಮಣಿಕೆಯಲ್ಲಿ—**ಮಹೀ ಸಪ್ತ ದ್ಯಾವಾಪೃಥಿವೀಯಂ** ಎಂದು ಹೇಳಿರುವುದು. ವ್ಯೂಢ್ಹವೆಂಬ ದಶರಾತ್ರಯಾಗದಲ್ಲಿ ಐದನೆಯ ದಿವಸ **ವೈಶ್ವದೇವಶಸ್ತ್ರ**ಮಂತ್ರ ಪಠನಮಾಡುವಾಗ ಈ ಸೂಕ್ತದ ಮೊದಲನೆಯ ನಾಲ್ಕು ಋಕ್ಕುಗಳು ದ್ಯಾವಾಪೃಥಿವೀ ಸಂಬಂಧವಾದ ನಿವಿದ್ಧಾನೀಯಸೂಕ್ತಕ್ಕಾಗಿ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ—**ಮಹೀ ದ್ಯಾವಾಪೃಥಿವೀ ಇತಿ ಚತಸ್ರ ಋಭುರ್ವಿಭ್ವಾ** ಎಂಬ ಸೂತ್ರದಿಂದ (ಆ. ೮-೮) ವಿವೃತವಾಗಿರುವುದು.

ಸೂಕ್ತ—೫೬

ಮಂಡಲ—೪ ॥ ಅನುವಾಕ—೫ ॥ ಸೂಕ್ತ—೫೬ ॥
ಆಷ್ಟಕ—೩ ॥ ಅಧ್ಯಾಯ—೮ ॥ ವರ್ಗ—೮ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
॥ ಋಷಿಃ—ವಾಮದೇವಃ ॥
॥ ದೇವತಾ—ದ್ಯಾವಾಪೃಥಿವ್ಯೌ ॥
॥ ಛಂದಃ—೧-೪, ತ್ರಿಷ್ಟುಪ್ । ೫-೭, ಗಾಯತ್ರೀ ॥

॥ ಸಂಹಿತಾಪಾಠಃ ॥

ಮಹೀ ದ್ಯಾವಾಪೃಥಿವೀ ಇಹ ಜ್ಯೇಷ್ಠೇ ರುಚಾ ಭವತಾಂ ಶುಚಯದ್ಭಿರರ್ಕೈಃ।
ಯತ್ಸೀಂ ವರಿಷ್ಠೇ ಬೃಹತೀ ವಿಮಿನ್ವನ್ರುವದ್ಧೋಕ್ಷಾ ಪಪ್ರಥಾನೇಭಿರೇವೈಃ ॥

॥ ಪದಪಾಠಃ ॥

ಮಹೀ ಇತಿ । ದ್ಯಾವಾಪೃಥಿವೀ ಇತಿ । ಇಹ । ಜ್ಯೇಷ್ಠೇ ಇತಿ । ರುಚಾ । ಭವತಾಂ । ಶುಚಯತ್ಭಿಃ । ಅರ್ಕೈಃ ।
ಯತ್ । ಸೀಂ । ವರಿಷ್ಠೇ ಇತಿ । ಬೃಹತೀ ಇತಿ । ವಿಮಿನ್ವನ್ । ರುವತ್ । ಹ । ಉಕ್ಷಾ । ಪಪ್ರಥಾನೇಭಿಃ । ಏವೈಃ ॥ ೧ ॥

॥ ಸಾಯಣಭಾಷ್ಯಂ ॥

ಇಹ ಯಜ್ಞೇ ಮಹೀ ಮಹತ್ಯೌ ಜ್ಯೇಷ್ಠೇ ಪ್ರಶಸ್ಯೇ ದ್ಯಾವಾಪೃಥಿವೀ ದ್ಯಾವಾಪೃಥಿವ್ಯೌ ರುಚಾ ದೀಪ್ತ್ಯಾ ಯುಕ್ತೇ ಶುಚಯದ್ಭಿರ್ದೀಪಯದ್ಭಿರರ್ಕೈರ್ಮಂತ್ರೈಃ ಸೋಮಾದಿಹವಿರ್ಭಿರ್ವಾ ಯುಕ್ತೇ ಭವತಾಂ । ಯತ್ ಯಸ್ಮಾತ್ ಸೀಂ ಸರ್ವತೋ ವರಿಷ್ಠೇ ಉರುತರೇ ಬೃಹತೀ ಮಹತ್ಯೌ ದ್ಯಾವಾಪೃಥಿವ್ಯೌ ವಿಮಿನ್ವನ್ ಪರಿಛಿಂದನ್ ಸ್ಥಾಪಯನ್ ಉಕ್ಷಾ ಸೇಕ್ತಾ ಪರ್ಜನ್ಯಃ ಪಪ್ರಥಾನೇಭಿಃ ಪ್ರಥಮಾನೈರೇವೈರ್ಗಮನಶೀಲೈರ್ಮರುದ್ಭಿರ್ಮೇಘೈರ್ವಾ ಸಹ ರುವತ್ । ರೌತಿ । ಶಬ್ದಂ ಕರೋತಿ । ಹೇತಿ ಪೂರಣಃ । ತಸ್ಮಾದ್ರುಚಾ ಭವತಾಮಿತಿ ಸಂಬಂಧಃ ॥

॥ ಪ್ರತಿಪದಾರ್ಥ ॥

ಯತ್—ಯಾವ ಕಾರಣದಿಂದ । ಸೀಂ—ಸರ್ವತ್ರ । ವರಿಷ್ಠೇ—ವಿಸ್ತೃತವಾದವೂ । ಬೃಹತೀ—ಮಹತ್ತಾದವೂ ಆದ ದ್ಯಾವಾವೃಥಿವಿಗಳನ್ನು । ವಿಮಿನ್ವನ್—ಪ್ರತ್ಯೇಕಮಾಡಿ ಸ್ಥಾಪಿಸುತ್ತಾ । ಉಕ್ಷಾ—

वृष्टिसेचकनाद पर्जन्यनु। पप्रथानेभिः—प्रख्यातरादं। **विवेः**—मरुत्तुगळोडगूडि (अथवा मेघगळोडगूडि)। **रुवत्**—शब्दमाडुत्तानेयो (अदुदरिंद)। **महिः**—महत्स्वरूप वुळ्ळवरू। **ज्मेक्षे**—प्रशस्यरू आद। **द्यावापृथिवी**—द्यावापृथिविगळु। **रुचा**—कांतियुक्तरागियू। **शुचयद्भिः**—प्रकाशमानगळाद। **अर्कैः**—मंत्रगळिंद स्तुतरागियू। **इह**—ई यज्ञदल्लि। **भवतां**—आसीनरागिरलि.

॥ भावार्थ ॥

यावा उपकारबुद्धियिंद वृष्टिसेचकनाद पर्जन्यनु सर्वत्र विस्तृतवादवू, महत्त्वादवू आद द्यावापृथिविगळन्नु प्रत्येकमाडि स्थापिसुत्ता प्रख्यातरादा मरुत्तुगळोडनेयूं, मेघगळोडनेयूं कूडिकोंडु (वृष्ट्यर्थरागि) शब्दमाडुवनोऽ, आदे कारणदिंद महत्स्वरूप वुळ्ळवरू, प्रशस्यरू आद द्यावापृथिविगळु कांतियुक्तरागियू, प्रकाशमानगळाद मंत्रगळिंद स्तुतरागियू ई यज्ञदल्लि आसीनरागिरलि

English Translation.

Vast and most excellent Heaven and Earth, be present with splendour at this (sacrifice, attracted) by sanctifying hymns, since that the showerer sounds everywhere with (his) heralds the rapid (winds), passing through the two spacious and mighty (regions).

॥ संहितापाठः ॥

द्देवी द्देवेभिर्यजतेयजत्रैरमिनतीतस्थतुरुक्षमाणे ।
ऋतावरीअद्रुहादेवपुत्रेयज्ञस्यनेत्रीशुचयद्भिरर्कैः ॥

॥ पदपाठः ॥

द्देवीइति । द्देवेभिः । यजतेइति । यजत्रैः । अमिनतीइति । तस्थतुः । उक्षमाणेइति ।
ऋतावरीइत्यृतऽवरी । अद्रुहा । देवपुत्रेइति देवऽपुत्रे । यज्ञस्य । नेत्रीइति । शुचयद्भिः । अर्कैः ॥ २ ॥

॥ ಸಾಯಣಭಾಷ್ಯಂ ॥

ದೇವೀ ದೇವ್ಯೌ ಯಜತೇ ಯಜ್ಞಿಯೇ ಅಮಿನತೀ ಪ್ರಜಾ ಅಹಿಂಸತ್ಯಾವುಕ್ಷಮಾಣೇ ಸಿಂಚತ್ಯಾ-ತೃತಾವರೀ ಋತವತ್ಯಾವದ್ರುಹಾದ್ರೋಗ್ಧ್ರ್ಯಾ ದ್ರೋಹಮಕುರ್ವತ್ಯೌ ದೇವಪುತ್ರೇ ದೇವೋತ್ಪಾದಿಕ್ಯೌ ಯಜ್ಞಸ್ಯ ನೇತ್ರೀ ನಿರ್ವಾಹಯಿತ್ರ್ಯೌ ದ್ಯಾವಾಪೃಥಿವ್ಯೌ ದೇವೇಭಿರ್ದೇವೈರ್ಯಜತ್ರೈರ್ಯಜ್ಞಿಯೈಃ ಋಹಿತೇ ಶುಚಯದ್ಭಿಃ ಶೋಚಯದ್ಭಿರರ್ಕೈರ್ಮಂತ್ರೈರ್ಹವಿರ್ಭಿರ್ವಾ ಯುಕ್ತೇ ತಸ್ಥತುಃ । ತಿಷ್ಠತಃ । ಸ್ತುತಾಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

ದೇವೀ—ದೇವತಾತ್ಮರೂ । **ಯಜತೇ**—ಯಜ್ಞಾರ್ಹರೂ । **ಅಮಿನತೀ**—(ಕೃತಾವಿಷ್ಪರಾಗಿ) ಹಿಂಸಿಸದಿರುವವರೂ । **ಉಕ್ಷಮಾಣೇ**—ಇಷ್ಟಾರ್ಥಗಳನ್ನು ಸುರಿಸುವವರೂ । **ಋತಾವರೀ**—ಸತ್ಯಾತ್ಮರೂ । **ಅದ್ರುಹಾ**—ದ್ರೋಹ ಬುದ್ಧಿಯಿಲ್ಲದವರೂ । **ದೇವಪುತ್ರೇ**—ದೇವತೆಗಳೇ ಪುತ್ರರಾಗಿ ಉಳ್ಳವರೂ । **ಯಜ್ಞಸ್ಯ**—ಯಜ್ಞಕ್ಕೆ । **ನೇತ್ರೀ**—ನಿರ್ವಾಹಕರೂ ಆದ ದ್ಯಾವಾಪೃಥಿವಿಗಳು । **ಯಜತ್ರೈಃ**—ಯಜ್ಞಾರ್ಹರಾದ । **ದೇವೇಭಿಃ**—ದೇವತೆಗಳೊಡಗೂಡಿಯೂ । **ಶುಚಯದ್ಭಿಃ**—ಪ್ರಕಾಶಮಾನಗಳಾದ । **ಅರ್ಕೈಃ**—ಮಂತ್ರಗಳಿಂದ ಸ್ತುತರಾಗಿಯೂ । **ತಸ್ಥತುಃ**—ಈ ಯಜ್ಞಪ್ರದೇಶದಲ್ಲಿರಲಿ.

॥ ಭಾವಾರ್ಥ ॥

ದೇವತಾತ್ಮರೂ, ಯಜ್ಞಾರ್ಹರೂ, ಲೋಕದ ಪ್ರಜೆಗಳ ಮೇಲೆ ಕೃಪಾವಿಷ್ಟರಾಗಿ ಯಾರನ್ನೂ ಹಿಂಸಿಸದಿರುವನರೂ, ಇಷ್ಟಾರ್ಥಗಳನ್ನು ಸುರಿಸುವವರೂ, ಸತ್ಯಾತ್ಮರೂ, ದ್ರೋಹಬುದ್ಧಿಯಿಲ್ಲದಿರುವವರೂ, ದೇವತೆಗಳೇ ಪುತ್ರರಾಗಿ ಉಳ್ಳವರೂ, ಯಜ್ಞನಿರ್ವಾಹಕರೂ ಆದ ದ್ಯಾವಾಪೃಥಿವಿಗಳು ಯಜ್ಞಾರ್ಹರಾದ ದೇವತೆಗಳೊಡಗೂಡಿಯೂ ಪ್ರಕಾಶಮಾನಗಳಾದ ಮಂತ್ರಗಳಿಂದ ಸ್ತುತರಾಗಿಯೂ ಈ ಯಜ್ಞಪ್ರದೇಶದಲ್ಲಿರಲಿ

English Translation.

May the divine, adorable, benevolent, fertilizing, truthful, unoppressive Heaven and Earth, the leaders of sacrifice, whose sons are the gods, be present with the adorable gods, (attracted) by sanctifying hymns.

॥ ಸಂಹಿತಾಪಾಠಃ ॥

ಸ ಇತ್ಸ್ವಪಾ ಭುವನೇಷ್ವಾಸ ಯ ಇಮೇ ದ್ಯಾವಾಪೃಥಿವೀ ಜಜಾನ ।

ಊರ್ವೀ ಗಭೀರೇ ರಜಸೀ ಸುಮೇಕೇ ಅವಂಶೇ ಧೀರಃ ಶಚ್ಯಾ ಸಮೈರತ್ ॥೫॥

॥ पदपाठः ॥

सः । इत् । सुऽअपाः । भुवनेषु । अस । यः । इमे इति । द्यावापृथिवी इति ।
जजान ।
उर्वी इति । गभीरे इति । रजसी इति । सुमेके इति सुऽमेके । अवंशे । धीरः ।
शच्या । सं । इरत् ॥ ३ ॥

॥ सायणभाष्यं ॥

स इत्स एव स्वपाः शोभनकर्मा सन् भुवनेषूत्पन्नेषु स । अस्ते । यो इमे द्यावापृथिवी द्यावापृथिव्यौ जजान उत्पादितवान् । ये च प्रजापतिरुर्वी उर्व्यौ विस्तीर्णे गभीरे अविचलिते सुमेके शोभनरूपे अवंशे उत्पत्तिरहिते अनाधारे वान्तरिक्षे धीरो धीमान् शच्या कुशलकर्मणा संऽइरत् संयक् प्रेरितवान् । स एव स्वपा इति ॥

॥ प्रतिपदार्थ ॥

धीरः—स्थिरमतियुळ्ळ । यः—यावन प्रजाप्रतियु । इमे द्यावापृथिवी—ई द्यावापृथिविगळन्नु । जजान—उत्पन्नमाडिदनो (मत्तु) । उर्वी—विस्तृतवादवू । गभीरे—अगाधवादवू । सुमेके — सुंदरवाद रूपवुळ्ळवू । अवंशे — आधाररहित वादुवू अद अदे द्यावापृथिविगळन्नु । शच्या—तन्न कुशलकर्मदिंद । संऽइरत्—(अवुगळ वैयक्तिक कर्मगळिगागि) प्रेरिसिदनो । स इत्—अदे प्रजापतियु । स्वपाः—उत्तमवाद कर्मवुळ्ळवनागि । भुवनेषु—लोकगळल्लि । अस—सुस्थितनागिद्दानै.

॥ भावार्थ ॥

स्थिरमतियुळ्ळ यावन प्रजापतियु ई द्यावापृथिविगळन्नु उत्पन्नमाडिदनो, मत्तु विस्तृतवादवू, अगाधवादवू सुंदरवाद रूपवुळ्ळवू, आधाररहितवू अव अदे द्यावापृथिविगळन्नु तन्न कुशलकर्मदिंद अवुगळ वैयक्तिक कर्मगळिगागि प्रेरिसिदनो, अदे प्रजापतियु उत्तमवाद कर्मवुळ्ळवनागि लोकदल्लि सुस्थितनागिद्दानै.

English Translation.

Verily he was the doer of a good work in the regions, who generated these two, Heaven and Earth, and firm of purpose, gave an impulse by his deed to the two vast, immoveable, beautiful, unsupported worlds.

। ಸಂಹಿತಾಪಾಠಃ ।

ನೂ ರೋದಸೀ ಬೃಹದ್ಭಿರ್ನೋ ವರೂಥೈಃ ಪತ್ನೀವದ್ಭಿರಿಷಯಂತೀ ಸಜೋಷಾಃ ।
ಉರೂಚೀ ವಿಶ್ವೇ ಯಜತೇ ನಿ ಪಾತಂ ಧಿಯಾ ಸ್ಯಾಮ ರಥ್ಯಃ ಸದಾಸಾಃ ॥೪॥

। ಪದಪಾಠಃ ।

ನು । ರೋದಸೀ ಇತಿ । ಬೃಹತ್ಭಿಃ । ನಃ । ವರೂಥೈಃ । ಪತ್ನೀವತ್ಭಿಃ । ಇಷಯಂತೀ ಇತಿ । ಸ್ವಜೋಷಾಃ ।
ಉರೂಚೀ ಇತಿ । ವಿಶ್ವೇ ಇತಿ । ಯಜತೇ ಇತಿ । ನಿ । ಪಾತಂ । ಧಿಯಾ । ಸ್ಯಾಮ । ರಥ್ಯಃ । ಸದಾಸಾಃ ॥

। ಸಾಯಣಭಾಷ್ಯಂ ।

ಹೇ ರೋದಸೀ ದ್ಯಾವಾಪೃಥಿವ್ಯೌ ನು ಕ್ಷಿಪ್ರಂ ಪತ್ನೀವದ್ಭಿಃ ಪತ್ನೀಸಹಿತೈರ್ಬೃಹದ್ಭಿರ್ಮಹದ್ಭಿರ್ವರೂಥೈರ್ಗೃಹೈರ್ಧನೈರ್ವಾ ಸಹೇಷಯಂತೀ ಅಸ್ಮಾಕಮನ್ನಮಿಚ್ಛಂತ್ಯೌ ಸಜೋಷಾಃ ಪರಸ್ಪರಂ ಸಂಗತೇ ಉರೂಚೀ ಉರ್ವಂಚನೇ ವಿಶ್ವೇ ವ್ಯಾಪ್ತೇ ಯಜತೇ ಯಷ್ಟವ್ಯೇ ಸತ್ಯೌ ನೋಽಸ್ಮಾನ್ ನಿ ಪಾತಂ । ನಿತರಾಂ ರಕ್ಷತಂ । ಧಿಯೇತ್ಯಾದಿ ಗತಂ ॥

॥ ಪ್ರತಿಪದಾರ್ಥ ॥

ಸಜೋಷಾಃ—ಪರಸ್ಪರವಾಗಿ ಒಟ್ಟಗಿರುವುವೂ । **ಉರುಚೀ**— ವಿಸ್ತೃತವಾದವೂ । **ವಿಶ್ವೇ**—ವಿಶ್ವವ್ಯಾಪಕವಾದವೂ । **ಯಜತೇ**—ಯಜ್ಞಾರ್ಹವಾದವೂ ಆದ । **ರೋದಸೀ**—ದ್ಯಾವಾಪೃಥಿವಿಗಳು । **ನು**—ಕ್ಷಿಪ್ರವಾಗಿ । **ನಃ**—ನಮಗೆ । **ಪತ್ನೀವದ್ಭಿಃ**—ಪತ್ನಿಯರೊಡಗೂಡಿದುದೂ । **ಬೃಹದ್ಭಿಃ**—ಮಹತ್ತಾದುದೂ । **ವರೂಥೈಃ**—ಗೃಹಾದಿ ಧನಗಳಿಂದ ಕೂಡಿದುದೂ ಆದ । **ಇಷಯಂತೀ**—ಅನ್ನವನ್ನು ಆಶಂಸಿಸಿ ದಾನಮಾಡುವವರಾಗಿ । **ನಿ ಪಾತಂ**—(ನಮ್ಮನ್ನು) ಪೂರ್ಣವಾಗಿ ರಕ್ಷಿಸಲಿ । **(ವಯಂ—ನಾವು)** । **ಧಿಯಾ**—ನಮ್ಮ ಸತ್ಕರ್ಮಗಳಿಂದ । **ರಥ್ಯಃ**—ರಥವುಳ್ಳವರಾಗಿಯೂ । **ಸದಾಸಾಃ**—ಸೇವಕರಿಂದ ಕೂಡಿದವರಾಗಿಯೂ । **ಸ್ಯಾಮ**—ಇರುವಂತಾಗಲಿ

॥ ಭಾವಾರ್ಥ ॥

ಪರಸ್ಪರ ಒಟ್ಟಗೆ ಸೇರಿಕೊಂಡಿರುವುವೂ, ವಿಸ್ತೃತವಾದವೂ, ವಿಶ್ವವ್ಯಾಪಕವಾದವೂ, ಯಜ್ಞಾರ್ಹವಾದವೂ ಆದ ದ್ಯಾವಾಪೃಥಿವಿಗಳು ನಮಗೆ ಪತ್ನಿಯರೊಡಗೂಡಿದುದೂ, ಮಹತ್ತಾದುದೂ, ಗೃಹಾದಿ ಧನಗಳಿಂದ ಕೂಡಿದುದೂ

ದ ಅನ್ನವನ್ನು ಆಶಂಸಿಸಿ ರಕ್ಷಿಸಲಿ. ನಾವೂ ಸಹ ನಮ್ಮ ಸತ್ಕರ್ಮಗಳ ಫಲವಾಗಿ ಉತ್ತಮವಾದ ರಥವುಳ್ಳ ನರಾಗಿಯೂ, ಸೇವಕರಿಂದ ಕೂಡಿದವರಾಗಿಯೂ ಇರುವಂತಾಗಲಿ.

English Translation.

May Heaven and Earth, vast, universal, adorable, united in satisfaction, and disposed to give us food, protect us with our spacious dwellings, inhabited by our wives, and may we for our (pious) acts be possessed of chariots and slaves.

॥ संहितापाठः ॥

प्र वां महि द्यवी अभ्युपस्तुतिं भरामहे ।
शुचीे उप प्रशस्तयेे ॥ ५ ॥

॥ पदपाठः ॥

प्र । वां । महि । द्यवी इति । अभि । उपऽस्तुतिं । भरामहे ।
शुचीे इति । उप । प्रऽशस्तयेे ॥ ५ ॥

॥ सायणभाष्यं ॥

प्र वामित्यादिगायत्रस्य ऋचो वृद्धे दशरात्रे वैश्वदेवशस्त्रे द्यावापृथिव्यविद्धानीयस्त्वेन प्रक्षेप्यः । तथा चे सूत्रितं । प्र वां महि द्यवी इति शुचीे । आ. ७-८८ । इति ॥

हे द्यावापृथिव्यौ द्यवी द्योतमाने वां युवाभ्यामुपस्तुतिं स्तोत्रं महि महत्भूतमभि प्र भरामहे । प्रकर्षेण संपादयामः । शुचीे शुद्धे युवां प्रशस्तयेे प्रशंसितुमुद । उपसर्गश्रुतेरुचितक्रियाध्याहारः । उप गच्छामः इति शेषः ॥

॥ प्रतिपदार्थ ॥

द्यवी—प्रकाशमानरादा ಎಲೈ द्यावापृथिवीगಳೇ! वां—ನಿಮ್ಮನ್ನು ಉದ್ದೇಶಿಸಿ । उपस्तुतिं—ಸ್ತೋತ್ರವನ್ನು । महि—ಪ್ರಭೂತವಾಗಿಯೂ । अभि प्र भरामहे—ಅತಿಶಯವಾಗಿಯೂ ನಿರ್ಮಿಸುವೆವು । शुचीे—ಪವಿತ್ರರಾದ ನಿಮ್ಮನ್ನು । प्रशस्तयेे—ಸ್ತುತಿಸುವುದಕ್ಕಾಗಿ । उप (गच्छामः)—ಸಮೀಪಿಸುವೆವು.

॥ ಭಾವಾರ್ಥ ॥

ಪ್ರಕಾಶಮಾನರಾದ ಎಲೈ ದ್ಯಾವಾಪೃಥಿವಿಗಳೇ, ನಿಮ್ಮನ್ನುದ್ದೇಶಿಸಿ ಪ್ರಭೂತವಾದುದೂ ಅತಿಶಯವಾದುದೂ ಆದ ಸ್ತುತಿಯನ್ನು ನಿರ್ಮಿಸುತ್ತೇವೆ ಮತ್ತು ಪವಿತ್ರರಾದ ನಿಮ್ಮನ್ನು ಸ್ತುತಿಸಲು ನಿಮ್ಮನ್ನು ಸಮೀಪಿಸುತ್ತೇವೆ

English Translation.

We offer earnest praise to you both, resplendent (Heaven and Earth); we approach you who are pure, to offer adoration.

॥ ವಿಶೇಷವಿಷಯಗಳು ॥

ಪ್ರ ವಾಂ ಎಂದು ಮೊದಲಾಗುವ ಗಾಯತ್ರೀಛಂದಸ್ಸಿನ ಮುಂದಿನ ಮೂರು ಋಕ್ಕುಗಳನ್ನು ವ್ಯೂಢ್ಯವೆಂಬ ದಶರಾತ್ರಯಾಗವಲ್ಲಿ ವೈಶ್ವದೇವಶಸ್ತ್ರಮಂತ್ರಪರನಕಾಲದಲ್ಲಿ ದ್ಯಾವಾಪೃಥಿವೀಸಂಬಂಧವಾದ ನಿವಿದ್ಧಾನೀಯ ಸೂಕ್ತ ಕ್ಕಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪ್ರವಾಂ ಮಹಿ ದ್ಯವೀ ಇತಿ ತೃಚಾ** ಎಂಬ ಸೂತ ದಿಂದ (ಆ. ೮-೧೧) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಪುನಾನೇ ತನ್ವಾ ಮಿಥಃ ಸ್ವೇನ ದಕ್ಷೇಣ ರಾಜಥಃ ।
ಊಹ್ಯಾಥೇ ಸನಾದೃತಂ ॥ ೬ ॥

॥ ಪದಪಾಠಃ ॥

ಪುನಾನೇ ಇತಿ । ತನ್ವಾ । ಮಿಥಃ । ಸ್ವೇನ । ದಕ್ಷೇಣ । ರಾಜಥಃ ।
ಊಹ್ಯಾಥೇ ಇತಿ । ಸನಾತ್ । ಋತಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ದೇವ್ಯೌ ತನ್ವಾ ಸ್ವಕೀಯಯಾ ಮೂರ್ತ್ಯಾ ಸ್ವೇನ ದಕ್ಷೇಣ ಬಲೇನ ಚ ಮಿಥಃ ಪ್ರತ್ಯೇಕಂ ಪುನಾನೇ ಶೋಧಯಂತ್ಯೌ ಯಜ್ಞಂ ಯಜಮಾನಂ ವಾ ಯುವಾಂ ರಾಜಥಃ । ಯದ್ವಾ । ತನ್ವಾ ಸ್ವಸ್ವಶರೀರೈಕದೇಶೇನ ಮಿಥಃ ಪರಸ್ಪರಂ ಪುನಾನೇ ಶೋಧಯಂತ್ಯೌ । ದ್ಯೌಃ ಸ್ವೀಯೇನಾಸಾರೇಣ ಭುವಂ ಸಾ ಚ ಸ್ವಕೀಯೇನ ಕಾರ್ಶ್ಯೇನ ಚಂದ್ರಮಸಿ ಸ್ಥಿತೇನ ದಿವಮಿತಿ ವಿವೇಕಃ । ಸನಾತ್ಸದಾಕಾಲ-ಮೃತಂ ಯಜ್ಞಮೂಹ್ಯಾಥೇ । ವಹಥಃ ॥

॥ ಪ್ರತಿಪದಾರ್ಥ ॥

(ಎಲೈ ದ್ಯಾವಾಪೃಥಿವಿಗಳೇ) । **ತೆನ್ವಾ**—ನಿಮ್ಮ ಸ್ವರೂಪಮಾತ್ರದಿಂದಲೂ । **ಸ್ವೇನ**—ನಿಮ್ಮದೇ ಆದ । **ದಕ್ಷೇಣ**—ಬಲದಿಂದಲೂ । **ಮಿಥಃ**—ಪರಸ್ಪರವಾಗಿ । **ಪುನಾನೇ**—ಶುದ್ಧಿಕಾರಕರಾಗಿ । **ರಾಜಥಃ**—ನೀವು ಪ್ರಕಾಶಿಸುತ್ತಿದ್ದೀರಿ । **ಸನಾತ್**—ಸರ್ವಕಾಲದಲ್ಲಿಯೂ । **ಋತಂ**—ಯಜ್ಞವನ್ನು । **ಊಹ್ಯಾಥೇ**—ವಹಿಸುತ್ತಿದ್ದೀರಿ.

॥ ಭಾವಾರ್ಥ ॥

ಎಲೈ ದ್ಯಾವಾಪೃಥಿವಿಗಳೇ, ನಿಮ್ಮ ಸ್ವರೂಪದಿಂದಲೂ, ನಿಮ್ಮ ಸ್ವಬಲದಿಂದಲೂ, ನೀವು ಪರಸ್ಪರ ಶುದ್ಧಿಕಾರಕರಾಗಿ ಪ್ರಕಾಶಿಸುತ್ತಿದ್ದೀರಿ. ಮತ್ತು ಸರ್ವಕಾಲದಲ್ಲಿಯೂ ಯಜ್ಞವನ್ನು ವಹಿಸುತ್ತೀರಿ

English Translation

Mutually sanctifying (each other) of your own substance, you shine by your own power, and ever bear away the offering

॥ ಸಂಹಿತಾಪಾಠಃ ॥

ಮಹೀ ಮಿತ್ರಸ್ಯ ಸಾಧಥಸ್ತರಂತೀ ಪಿಪ್ರತೀ ಋತಂ ।
ಪರಿ ಯಜ್ಞಂ ನಿ ಷೇದಥುಃ ॥ ೬ ॥

॥ ಪದಪಾಠಃ ॥

ಮಹೀ ಇತಿ । ಮಿತ್ರಸ್ಯ । ಸಾಧಥಃ । ತರಂತೀ ಇತಿ । ಪಿಪ್ರತೀ ಇತಿ । ಋತಂ ।
ಪರಿ । ಯಜ್ಞಂ । ನಿ । ಸೇದಥುಃ ॥ ೬ ॥

॥ ಸಾಯಣಭಾಷ್ಯಂ ॥

ಮಹೀ ಮಹತ್ಯೌ ದ್ಯಾವಾಪೃಥಿವ್ಯೌ ಮಿತ್ರಸ್ಯ ಮಿತ್ರಭೂತಸ್ಯ ಸ್ತೋತುರಭಿಮತಂ ಸಾಧಥಃ । ಋತಮನ್ನಂ ತರಂತೀ ತಾರಯಂತ್ಯೌ ಪಿಪ್ರತೀ ಪೂರಯಂತ್ಯೌ ಯಜ್ಞಂ ಪರಿ ಪರಿತೋ ನಿ ಷೇದಥುಃ । ಆಶ್ರಯತಃ ॥

॥ ಪ್ರತಿಪದಾರ್ಥ ॥

ಮಹೀ—ಮಹತ್ಸ್ವರೂಪವುಳ್ಳ ದ್ಯಾವಾಪೃಥಿವಿಗಳೇ । **ಮಿತ್ರಸ್ಯ**—ನಿಮಗೆ ಮಿತ್ರಭೂತನಾದ ಯಜಮಾನನ (ಇಷ್ಟಾರ್ಥವನ್ನು) । **ಸಾಧಥಃ**—ಸಾಧಿಸಿಕೊಡುತ್ತೀರಿ । **ಋತಂ**—ಅನ್ನವನ್ನು । **ತರಂತೀ**—ಹಂಚುತ್ತಲೂ

ನಿಪೈತೀ—(ಯಜಮಾನನಲ್ಲಿ) ತುಂಬುತ್ತಲೂ । **ಯಜ್ಞಂ ಪರಿ**—ಯಜ್ಞದ ಸುತ್ತಲೂ । **ನಿಷೇದಥುಃ**—ಆಸೀನರಾಗಿದ್ದೀರಿ.

॥ ಭಾವಾರ್ಥ ॥

ಮಹತ್ಸ್ವರೂಪವುಳ್ಳ ಎಲೈ ದ್ಯಾವಾಪೃಥಿವಿಗಳೇ, ನಿನಗೆ ಮಿತ್ರಭೂತನಾದ ಯಜಮಾನನ ಇಷ್ಟಾರ್ಥಗಳನ್ನು ನೀವು ಸಾಧಿಸಿಕೊಡುತ್ತೀರಿ. ಮತ್ತು ಅವನಿಗೆ ಅನ್ನವನ್ನು ಹಂಚಿ ಅವನಲ್ಲಿ ಅನ್ನವನ್ನು ತುಂಬುತ್ತಾ ಯಜ್ಞದ ಸುತ್ತಲೂ ಆಸೀನರಾಗಿದ್ದೀರಿ.

English Translation.

Mighty (Heaven and Earth), you fulfil the desires of your friend: distributing food and giving sustenance, you have sat down at the sacrifice.

ಐವತ್ತೇಳನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಕ್ಷೇತ್ರಸ್ಯ ಪತಿನೇತ್ಯಷ್ಟರ್ಚಂ ದ್ವಾದಶಂ ಸೂಕ್ತಂ ವಾಮದೇವಸ್ಯಾರ್ಷಂ । ಅದ್ಯಾಚತುರ್ಥೀ-ಷಷ್ಠೀಸಪ್ತಮ್ಯೋಽನುಷ್ಟುಭಃ ಪಂಚಮೀ ಪುರಉಷ್ಣಿಕ್ । ಆದ್ಯಶ್ಚೇತ್ಪುರಉಷ್ಣಿಗಿತಿ ಹಿ ತಲ್ಲಕ್ಷಣಂ । ತಿಷ್ಠಾಸ್ತಿಸ್ರಸ್ತ್ರಿಷ್ಟುಭಃ। ಆದ್ಯಾಸ್ತಿಸ್ರಃ ಕ್ಷೇತ್ರಪತಿದೇವತಾಕಾಶ್ಚತುರ್ಥೀ ಶುನಾಖ್ಯದೇವತಾಕಾ ಪಂಚಮ್ಯ-ಷ್ಟಮ್ಯೌ ಶುನಾಸೀರದೇವತಾಕೇ। ಷಷ್ಠೀಸಪ್ತಮ್ಯೌ ಸೀತಾದೇವತಾಕೇ। ತಥಾ ಚಾನುಕ್ರಮಣಿಕಾ । ಕ್ಷೇತ್ರಸ್ಯಾಷ್ಟೌ ತಿಸ್ರಃ ಕ್ಷೈತ್ರಪತ್ಯಾಃ ಶುನಾಯ್ಯಿಕಾ ಪರಾ ಪುರಉಷ್ಣಿಕ್ ಸಾಂತ್ಯಾ ಚ ಶುನಾಸೀರಾಭ್ಯಾ-ಮುಪಾಂತ್ಯೇ ಸೀತಾಯೈ ತೇ ಅನುಷ್ಟುಭಾವಾದ್ಯಾ ಚ ಚತುರ್ಥೀ ಚೇತಿ ॥ ಕ್ಷೇತ್ರಸ್ಯ ಕರ್ಷಣೇऽನೇನ ಸೂಕ್ತೇನ ಪ್ರತ್ಯೃಚಂ ಜುಹುಯಾಜ್ಜಪೇದ್ವಾ । ತಥಾ ಚ ಸೂತ್ರಿತಂ । ಕ್ಷೇತ್ರಸ್ಯ ಪತಿನಾ ವಯಮಿತಿ ಪ್ರತ್ಯೃಚಂ ಜುಹುಯಾಜ್ಜಪೇದ್ವಾ। ಆ- ಗೃ ೨ ೧೧। ಇತಿ ॥ ಅಪ್ಸೋಽರ್ಯಾಮೇ ಹೋತುರತಿರಿಕ್ತೋಽಕ್ಷ್ಯ ಆಶ್ವಿನಶಸ್ತ್ರಾದೂರ್ಧ್ವಂ ಚತ್ವಾರ್ಯತಿರಿಕ್ತೋಽಕ್ಷ್ಯಾನಿ । ತತ್ರಾದ್ಯಾ ಪರಿಧಾನೀಯಾ । ಸೂತ್ರಿತಂ ಚ । ಕ್ಷೇತ್ರಸ್ಯ ಪತಿನಾ ವಯಮಿತಿ ಪರಿಧಾನೀಯಾ । ಆ. ೯-೧೧ । ಇತಿ ॥

ಅನುವಾದವು—**ಕ್ಷೇತ್ರಸ್ಯ ಪತಿನಾ** ಎಂಬ ಈ ಸೂಕ್ತವು ಐವತ್ತೆಳನೆಯ ಅನುವಾಕದಲ್ಲಿ ಪನ್ನೆಡನೆಯ ಸೂಕ್ತವು ಇದರಲ್ಲಿ ಎಂಟು ಋಕ್ಕುಗಳಿರುವುವು ಈ ಸೂಕ್ತಕ್ಕೆ ವಾಮದೇವನು ಋಷಿಯು, ಈ ಸೂಕ್ತದ ಮೊದಲನೆಯ, ನಾಲ್ಕನೆಯ, ಆರನೆಯ ಮತ್ತು ಏಳನೆಯ ಋಕ್ಕುಗಳು ಅನುಷ್ಟುಪ್ಛಂದಸ್ಸುವು, ಐದನೆಯ ಋಕ್ಕು ಪುರಉಷ್ಣಿಕ್ ಎಂಬ ಛಂದಸ್ಸಿನದು **ಆದ್ಯಶ್ಚೇತ್ಪುರಉಷ್ಣಿಕ್** ಎಂದು ಈ ಛಂದಸ್ಸಿನ ಲಕ್ಷಣವು ಎಂದರೆ ಉಷ್ಣಿಕ್ ಛಂದಸ್ಸಿಗೆ ಮೂರು ಪಾದಗಳಿದ್ದು ಮೊದಲು ಎರಡು ಪಾದಗಳಿಗೆ ಎಂಟೆಂಟು ಅಕ್ಷರಗಳೂ ನೂರನೆಯ ಪಾದಕ್ಕೆ ಹನ್ನೆರಡು ಅಕ್ಷರಗಳೂ ಇದ್ದರೆ ಉಷ್ಣಿಕ್ ಛಂದಸ್ಸೆನಿಸುವುದು. ಈ ಹನ್ನೆರಡಕ್ಷರದ ಪಾದವು ಮೊದಲನೇ ಪಾದವಾಗಿದ್ದಲ್ಲಿ ಆದಕ್ಕೆ

ಪುರಉಷ್ಣಿಕ್ ಎಂದು ಹೆಸರು. ಹನ್ನೆರಡಕ್ಷರದ ಪಾದವು ಮಧ್ಯದಲ್ಲಿದ್ದಲ್ಲಿ ಅದಕ್ಕೆ ಕಕುಪ್ ಎಂದು ಹೆಸರು ಎಂದು ಮೂರು ವಿಧವಾದ ಉಷ್ಣಿಕ್ ಛಂದಸ್ಸುಗಳ ಲಕ್ಷಣವಿರುವುದು. ಈ ಸೂಕ್ತದ ಉಳಿದ ಋಕ್ಕುಗಳು ಎಂದರೆ ೨, ೩, ೬ನೇ ಋಕ್ಕುಗಳು ತ್ರಿಷ್ಟುಪ್‌ಛಂದಸ್ಸುವು ಈ ಸೂಕ್ತದ ಮೊದಲನೆಯ ಮೂರು ಋಕ್ಕುಗಳು ಕ್ಷೇತ್ರಪತಿ ದೇವತಾಕವು, ನಾಲ್ಕನೆಯ ಋಕ್ಕು ಶುನಾಖ್ಯದೇವತಾಕವು, ಐದು ಮತ್ತು ಎಂಟನೆಯ ಋಕ್ಕುಗಳು ಶುನಾಸೀರಾ ಎಂಬ ದೇವತಾಕವು, ಆರು ಮತ್ತು ಏಳನೆಯ ಋಕ್ಕುಗಳು ಸೀತಾದೇವತಾಕವು. ಅನುಕ್ರಮಣಿಕೆಯಲ್ಲಿ—**ಕ್ಷೇತ್ರಸ್ಯಾಷ್ಟೌ ತಿಸ್ರಃ ಸ್ತ್ರೈತ್ರಪತ್ಯಾಃ ಶುನಾಯ್ಯೈಕಾ ಪರಾ ಪುರಉಷ್ಣಿಕ್ ಸಾಂತ್ಯಾ ಚ ಶುನಾಸೀರಾಭ್ಯಾಮುಪಾಂತ್ಯೇ ಸೀತಾಯ್ಯೈತೇ ಅನುಷ್ಟುಭಾವಾದ್ಯಾ ಚ ಚತುರ್ಥೀ ಚ** ಎಂದು ಹೇಳಿರುವುದು. ಭೂಮಿಯನ್ನು ಉಳುವಾಗ ಈ ಸೂಕ್ತದ ಪ್ರತಿ ಋಕ್ಕನ್ನೂ ಜಪಮಾಡಿ ಹೋಮಮಾಡಬೇಕೆಂದು ಆಶ್ವಲಾಯನ ಗೃಹ್ಯಸೂತ್ರದ—**ಕ್ಷೇತ್ರಸ್ಯ ಪತಿನಾ ವಯಮಿತಿ ಪ್ರತ್ಯೃಚಂ ಜುಹುಯಾಜ್ಜಪೇದ್ವಾ** ಎಂಬ ಸೂತ್ರದಿಂದ (ಆ. ಗೃ ೨-೧೦-೪) ವಿವೃತವಾಗಿರುವುದು. ಮತ್ತು ಆಪ್ತೋರ್ಯಾಮವೆಂಬ ಯಾಗದಲ್ಲಿ ಹೋತೃವು ಆಪ್ರಿನಶಸ್ತ್ರಮಂತ್ರಪರನಾನಂತರ ಪರಿಸುವ ನಾಲ್ಕು ಅತಿರಿಕ್ತೋಕ್ಥ್ಯನೆಂಬ ಮಂತ್ರಗಳಲ್ಲಿ ಈ ಸೂಕ್ತದ ಮೊದಲನೆಯ ಋಕ್ಕಾದ **ಕ್ಷೇತ್ರಸ್ಯ ಪತಿನಾ ವಯಂ** ಎಂಬ ಋಕ್ಕನ್ನು ಪರಿಧಾನೀಯಾ ಮಂತ್ರವನ್ನಾಗಿ (ಕೊನೆಯ ಮಂತ್ರವನ್ನಾಗಿ) ಪರಿಸಬೇಕೆಂದು ಆಶ್ವಲಾಯನಶ್ರೌತ ಸೂತ್ರದ—**ಕ್ಷೇತ್ರಸ್ಯ ಪತಿನಾ ವಯಮಿತಿ ಪರಿಧಾನೀಯಾ** ಎಂಬ ಸೂತ್ರದಿಂದ (ಆ ೯-೧೧) ವಿವೃತವಾಗಿರುವುದು.

ಸೂಕ್ತ—೫೭

ಮಂಡಲ—೪ ॥ ಅನುವಾಕ—೫ ॥ ಸೂಕ್ತ—೫೭ ॥
ಅಷ್ಟಕ—೩ ॥ ಅಧ್ಯಾಯ—೮ ॥ ವರ್ಗ—೯ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
॥ ಋಷಿಃ—ವಾಮದೇವಃ ॥
॥ ದೇವತಾ—೧-೩, ಕ್ಷೇತ್ರಪತಿಃ । ೪. ಶುನಃ । ೫, ೮. ಶುನಾಸೀರೌ । ೬, ೭. ಸೀತಾ ।
॥ ಛಂದಃ—೧, ೪, ೬, ೭ ಅನುಷ್ಟುಪ್ । ೨, ೩, ೮ ತ್ರಿಷ್ಟುಪ್ । ೫. ಪುರಉಷ್ಣಿಕ್ ॥

॥ ಸಂಹಿತಾಪಾಠಃ ॥

ಕ್ಷೇತ್ರ॑ಸ್ಯ ಪ॒ತಿನಾ॑ ವ॒ಯಂ ಹಿ॒ತೇನೇ॑ವ ಜಯಾಮಸಿ ।
ಗಾಮ॒ಶ್ವಂ ಪೋ॑ಷಯಿ॒ತ್ನ್ವ॑ ಸ ನೋ॑ ಮೃಳಾ॒ತೀದೃ॑ಶೇ ॥ ೧ ॥

॥ ಪದಪಾಠಃ ॥

ಕ್ಷೇತ್ರ॑ಸ್ಯ । ಪ॒ತಿನಾ॑ । ವ॒ಯಂ । ಹಿ॒ತೇನ॑ । ಇ॒ವ॒ । ಜ॒ಯಾ॒ಮ॒ಸಿ॒ ।
ಗಾಂ । ಅ॒ಶ್ವಂ । ಪೋ॒ಷ॒ಯಿ॒ತ್ನು । ಅ । ಸಃ । ನಃ॒ । ಮೃ॒ಳಾ॒ತಿ । ಈ॒ದೃ॒ಶೇ ॥ ೧ ॥

॥ ಸಾಯಣಭಾಷ್ಯಂ ॥

ವಯಂ ಯಜಮಾನಾಃ ಕ್ಷೇತ್ರಸ್ಯ ಪತಿನಾ ದೇವೇನ ॥ ರುದ್ರಂ ಕ್ಷೇತ್ರಪತಿಂ ಪ್ರಾಹುಃ ಕೇಚಿದ-ಗ್ನಿಮಥಾಪರೇ । ಸ್ವತಂತ್ರ ಏವ ವಾ ಕಶ್ಚಿತ್ಕ್ಷೇತ್ರಸ್ಯ ಪತಿರುಚ್ಯತೇ ॥ ಹಿತೇನೇವ । ಇವಶಬ್ದ ಏವಾರ್ಥೇ । ಸರ್ವಪ್ರಾಣಿಹಿತೇನೈವ ತೇನ । ಅಥವಾ ಮಿತ್ರೇಣೇವ । ಯಥಾ ಸಖ್ಯುಃ ಸಾಹಾಯ್ಯೇ ಸನ್ ಸ್ವಕಾರ್ಯಂ ಸಾಧಯತಿ ತದ್ವತ್ । ಜಯಾಮಸಿ । ಜಯಾಮಃ ಕ್ಷೇತ್ರಂ । ಸ ದೇವೋ ಗಾಮಶ್ವಂ ಚ ಪೋಷಯಿತ್ನು ಪೋಷಯಿತೃ ಗವಾಶ್ವಲಕ್ಷಣಂ ಧನಮಾ ಹರತ್ವಿತಿ ಶೇಷಃ । ಉಪಸರ್ಗಶ್ರುತೇರ್ಯೋಗ್ಯಕ್ರಿಯಾಧ್ಯಾ-ಹಾರಃ । ಸ ಏವ ದೇವೋ ನೋಽಸ್ಮಾನೀದೃಶ ಉಕ್ತಲಕ್ಷಣೇ ಧನೇ ದಾತವ್ಯೇ ಸತಿ ಮೃಳಾತಿ । ಸುಖಯತಿ । ಕ್ಷೇತ್ರಸ್ಯ ಪತಿನೇತ್ಯಾದಿನಿರುಕ್ತಂ । ೧೦–೧೫ । ಜಾನೀಯಾತ್ ॥

॥ ಪ್ರತಿಪದಾರ್ಥ ॥

ವಯಂ—ಯಜ್ಞಕರ್ತರಾದ ನಾವು । **ಹಿತೇನೇವ**—(ನಮಗೆ) ಮಿತ್ರಭೂತನಂತಿರುವ । **ಕ್ಷೇತ್ರಸ್ಯ ಪತಿನಾ**—ಕ್ಷೇತ್ರಪತಿದೇವನ ಸಹಾಯದಿಂದ । **ಜಯಾಮಸಿ**—ಜಯವನ್ನು ಪಡೆಯುತ್ತೇವೆ । **ಸಃ**—ಆದೇ ದೇವನು । **ಪೋಷಯಿತ್ನು**—ಪುಷ್ಟಿಕಾರಕವಾದ । **ಗಾಂ**—ಗೋವುಗಳನ್ನು । **ಅಶ್ವಂ**—ಅಶ್ವವನ್ನೂ । **ನಃ**—ನಮಗೆ । **ಆ (ಹರತು)**—ತಂದೊದಗಿಸಲಿ । **ಈದೃಶೇ**—ಈ ವಿಧವಾದ ದಾನಗಳಿಂದ । **ಮೃಳಾತಿ**—(ನಮ್ಮನ್ನು) ಸುಖಪಡಿಸುತ್ತಾನೆ

॥ ಭಾವಾರ್ಥ ॥

ಯಜ್ಞಕರ್ತರಾದ ನಾವು ನಮಗೆ ಮಿತ್ರಭೂತನಂತಿರುವ ಕ್ಷೇತ್ರಪತಿದೇವನ ಸಹಾಯದಿಂದ ಜಯವನ್ನು ಪಡೆಯುತ್ತೇವೆ ಆದೇ ದೇವನು ನಮಗೆ ಪುಷ್ಟಿಕಾರಕವಾದ ಗೋವುಗಳನ್ನೂ, ಅಶ್ವಗಳನ್ನೂ ತಂದೊದಗಿಸಲಿ ಈ ವಿಧವಾದ ದಾನಗಳಿಂದ ಅವನು ನಮ್ಮನ್ನು ಸುಖಪಡಿಸುತ್ತಾನೆ

English Translation

With the master of the field, our friend, we triumph may he bestow upon us cattle, horses, nourishment, for by such (gifts) he maks us happy

॥ ವಿಶೇಷವಿಷಯಗಳು ॥

ಪ್ರಕೃತವಾದ ಸೂಕ್ತದಲ್ಲಿ **ಕ್ಷೇತ್ರಪತಿ, ಶುನ, ಶುನಾಸೀರ, ಸೀತಾ** ಎಂಬ ನಾಲ್ಕು ದೇವತಾಕವಾದ ಪ್ರಶಂಸೆಯಿರುತ್ತದೆ ಈ ಸೂಕ್ತದಲ್ಲಿ ಒಟ್ಟು ೮ ಋಕ್ಕುಗಳಿವೆ ಮೊದಲನೆಯ ಮೂರೂ **ಕ್ಷೇತ್ರಪತಿ**ಯನ್ನು ದ್ದೇಶಿಸಿದವು ನಾಲ್ಕನೆಯದು **ಶುನ** ದೇವತಾಕವಾದುದು ಐದು ಮತ್ತು ಎಂಟನೆಯವು **ಶುನಾಸೀರ** ದೇವತಾಕವು ಆರು ಮತ್ತು ಏಳನೆಯವು, **ಸೀತಾ** ದೇವತಾಕವು

ಇವುಗಳಲ್ಲಿ ಮೊದಲನೆಯ ಮಂತ್ರವು **ಕ್ಷೇತ್ರಸ್ಯ ಪತಿನಾ ವಯಂ** ಎಂಬ ಆನುಪೂರ್ವಿಯೊಡನೆ ಪ್ರಾರಂಭವಾಗುತ್ತದೆ. ಈ ಮಂತ್ರಕ್ಕೆ ಭಾಷ್ಯವನ್ನು ಪ್ರಾರಂಭಿಸುವಾಗ ಸಾಯಣರು **ಕ್ಷೇತ್ರಸ್ಯ ಪತಿನಾ** ಎಂಬ ಶಬ್ದಗಳಿಗೆ

ಅರ್ಥವೇನು ? ಕ್ಷೇತ್ರಪತಿಯು ಯಾರು ? ಎಂಬ ವಿಷಯವನ್ನು ವಿವರಿಸಲು ಪ್ರಯತ್ನಿಸಿ ನಿಷ್ಕೃಷ್ಟವಾದ ಅರ್ಥವನ್ನು ಹೇಳುವುದಕ್ಕಾಗದೆ **" ರುದ್ರಂ ಕ್ಷೇತ್ರಪತಿಂ ಪ್ರಾಹುಃ ಕೇಚಿದಗ್ನಿಮಥಾಪರೇ । ಸ್ವತಂತ್ರ ಏವ ವಾ ಕಶ್ಚಿತ್ಕ್ಷೇತ್ರಸ್ಯ ಪತಿರುಚ್ಯತೇ "** ಕೆಲವರು ಕ್ಷೇತ್ರಪತಿಯೆಂದರೆ ರುದ್ರನೆಂದರ್ಥಮಾಡುತ್ತಾರೆ. ಇನ್ನು ಕೆಲವರು ಅಗ್ನಿಯೆಂದೇ ಅರ್ಥಮಾಡುತ್ತಾರೆ. ಅಥವಾ ಕ್ಷೇತ್ರಪತಿಯೆಂಬ ಸ್ವತಂತ್ರವಾದ ದೇವತೆಯನ್ನೇ ನಿರ್ದೇಶಿಸುವ ಪದವಿದು ಎಂದು ಹೇಳುವ ಮತವೂ ಇರುತ್ತದೆ. ಎಂಬುದಾಗಿ ಮತಾಂತರಗಳನ್ನು ತಿಳಿಸಿದ್ದಾರೆ. ಅಲ್ಲದೇ, **' ಕ್ಷೇತ್ರಸ್ಯ ಪತಿನಾ '** ನಿರುಕ್ತವಾಕ್ಯವನ್ನು ದಾಹರಿಸಿ ಆದರಲ್ಲಿ ಈ ಪದದ ವಿವರಣೆಯಿರುತ್ತದೆಂದು ಸೂಚಿಸಿದ್ದಾರೆ. ನಿರುಕ್ತಕಾರರು ಈ ಪದದ ಅರ್ಥವನ್ನು ವಿವರಿಸುತ್ತಾ ಈ ರೀತಿ ತಿಳಿಸಿದ್ದಾರೆ

ಕ್ಷೇತ್ರಸ್ಯ ಪತಿಃ । ಕ್ಷೇತ್ರಂ ಕ್ಷಿಯತೇಃ ನಿವಾಸಕರ್ಮಣಃ । ತಸ್ಯ ಪಾತಾ ವಾ ಪಾಲಯಿತಾ ವಾ । ತಸ್ಯೈಷಾ ಭವತಿ । (ನಿ ೧೦-೧೫)

ಕ್ಷೇತ್ರಶಬ್ದಕ್ಕೆ ವಾಸಸ್ಥಾನವೆಂದರ್ಥ. ಆದರ ಪಾಲಕನಾದುದರಿಂದ ಕ್ಷೇತ್ರಪತಿಯೆಂಬ ಹೆಸರು ಪ್ರಸಿದ್ಧವಾಗಿದೆಯೆಂದು ನಿರುಕ್ತಕಾರರು ಈ ಶಬ್ದದ ನಿರ್ವಚನವನ್ನು ತಿಳಿಸಿ ಪ್ರಕೃತವಾದ ಮಂತ್ರವನ್ನೇ ಉದಾಹರಿಸಿದ್ದಾರೆ.

ಕ್ಷೇತ್ರಸ್ಯ ಪತಿನಾ—ಕ್ಷೇತ್ರಪತಿ ಎಂಬ ದೇವತೆಯು ಯಾರು ಎಂಬ ವಿಷಯದಲ್ಲಿ ಭಾಷ್ಯಕಾರರು—

ರುದ್ರಂ ಕ್ಷೇತ್ರಪತಿಂ ಪ್ರಾಹುಃ ಕೇಚಿದಗ್ನಿಮಥಾಪರೇ ।
ಸ್ವತಂತ್ರ ಏವ ವಾ ಕಶ್ಚಿತ್ ಕ್ಷೇತ್ರಸ್ಯ ಪತಿರುಚ್ಯತೇ ॥

ಎಂದು ಹೇಳಿರುವರು. ಎಂದರೆ ಕೆಲವರು ರುದ್ರನನ್ನೇ ಕ್ಷೇತ್ರಪತಿಯೆಂದು ಹೇಳುವರು. ಕೆಲವರು ಅಗ್ನಿಯೆಂದೂ, ಮತ್ತೆ ಕೆಲವರು ಕ್ಷೇತ್ರಪತಿ ಎಂಬ ದೇವತೆಯು ಸ್ವತಂತ್ರವಾದ ಪ್ರತ್ಯೇಕದೇವತೆಯೆಂದೂ ಹೇಳುವರು ಉದಾಹರಣೆಗೆ ಯಾಸ್ಕರು ಈ ಋಕ್ಕಿಗೇ ನಿರ್ವಚನವನ್ನು ಹೇಳಿರುವರು—

ಕ್ಷೇತ್ರಸ್ಯ ಪತಿಃ । ಕ್ಷೇತ್ರಂ ಕ್ಷೀಯತೇರ್ನಿವಾಸಕರ್ಮಣಸ್ತಸ್ಯ ಪಾತಾ ವಾ ಪಾಲಯಿತಾ ವಾ ।
(ನಿ. ೧೦-೧೪)

ಕ್ಷಿ (ಕ್ಷಯ್) ವಾಸಮಾಡು ಎಂಬ ಧಾತುನಿಂದ ನಿಷ್ಪನ್ನವಾದ ಕ್ಷೇತ್ರಶಬ್ದಕ್ಕೆ ನಿವಾಸಸ್ಥಾನವೆಂದರ್ಥವು. ಆ ನಿವಾಸಸ್ಥಾನಕ್ಕೆ ಸ್ವಾಮಿ ಅಥವಾ ಅದನ್ನು ರಕ್ಷಿಸುವವನಿಗೆ ಕ್ಷೇತ್ರಪತಿ ಎಂದು ಹೆಸರು

ತಸ್ಯೈಷಾ ಭವತಿ ।
ಕ್ಷೇತ್ರಸ್ಯ ಪತಿನಾ ವಯಂ ಹಿತೇನೇವ ಜಯಾಮಸಿ ।
ಗಾಮಶ್ವಂ ಪೋಷಯಿತ್ನ್ವಿ ಸ ನೋ ಮೃಳಾತೀದೃಶೇ ॥
(ಋ. ಸಂ. ೪-೫೭-೧)

ಕ್ಷೇತ್ರಸ್ಯ ಪತಿನಾ ವಯಂ ಸುಹಿತೇನೇವ ಜಯಾಮೋ ಗಾಮಶ್ವಂ ಪುಷ್ಯಂ ಪೋಷಯಿತ್ನ್ವಾಹರೇತಿ । ಸ ನೋ ಮೃಳಾತೀದೃಶೇ । ಬಲೇನ ವಾ ಧನೇನ ವಾ । ಮೃಳತಿರ್ದಾನಕರ್ಮಾ ಪೂಜಾಕರ್ಮಾ ವಾ ।
(ನಿ. ೧೪-೧೫)

ನಮಗೆ ಪ್ರಿಯಪಾತ್ರನಾದ ಸ್ನೇಹಿತನಿಂದ ಪಡೆಯುವಂತೆ ಕ್ಷೇತ್ರಪತಿಯಿಂದ ನಾವು ಧನಾದಿಗಳನ್ನು ಪಡೆಯುವೆವು. ಎಲೈ ಪೋಷಕನಾದ ಕ್ಷೇತ್ರಪತಿಯೇ, ಪುಷ್ಟಿಯುತವಾದ ಗೋವನ್ನೂ, ಅಶ್ವವನ್ನೂ ನಮಗೆ ತಂದುಕೊಡು. ಅವನು ನಮಗೆ ಬಲವನ್ನೂ, ಧನವನ್ನೂ ಕೊಟ್ಟು ಈ ವಿಧವಾಗಿ ಸುಖವನ್ನುಂಟುಮಾಡುವನು. ಮೃಳತಿಧಾತುವಿಗೆ ದಾನ ಮಾಡುವುದು ಅಥವಾ ಪೂಜೆಮಾಡುವುದು ಎಂದರ್ಥವಿರುವುದು. ಈಗ ಇನ್ನೊಂದು ಉದಾಹರಣೆಯನ್ನು ಕೊಡುವರು—

ತಸ್ಯೈಷಾಪರಾ ಭವತಿ ।
ಕ್ಷೇತ್ರಸ್ಯ ಪತೇ ಮಧುಮಂತಮೂರ್ಮಿಂ ಧೇನುರಿವ ಪಯೋ ಅಸ್ಮಾಸು ಧುಕ್ಷ್ವ ।
ಮಧುಶ್ಚುತಂ ಘೃತಮಿವ ಸುಪೂತಮೃತಸ್ಯ ನಃ ಪತಯೋ ಮೃಳಯಂತು ॥

(ಋ ಸಂ. ೪-೫೭-೩)

ಕ್ಷೇತ್ರಸ್ಯ ಪತೇ ಮಧುಮಂತಮೂರ್ಮಿಂ ಧೇನುರಿವ ಪಯೋಽಸ್ಮಾಸು ಧುಕ್ಷ್ವೇತಿ ಮಧುಶ್ಚುತಂ ಘೃತಮಿವೋದಕಂ ಸುಪೂತಮೃತಸ್ಯ ನಃ ಪಾತಾರೋ ವಾ ಪಾಲಯಿತಾರೋ ವಾ ಮೃಳಯಂತು ಮೃಳಯತಿರುಪದೇಯಾಕರ್ಮಾ ಪೂಜಾಕರ್ಮಾ ವಾ ॥

(ನಿ ೧೦-೧೬)

ಎಲೈ ನಿವಾಸಸ್ಥಾನಗಳಿಗೆ ಅಧಿಪತಿಯಾದ ಕ್ಷೇತ್ರಪತಿಯೇ, ಹಸುವು ನಮಗೆ ಹಾಲನ್ನು ಕರೆದು ಒದಗಿಸಿಕೊಡುವಂತೆ ಜೇನುತುಪ್ಪದಂತೆ ಮಧುರವಾಗಿರುವುದೂ, ಘೃತದಂತೆ ಶುದ್ಧವಾಗಿರುವುದೂ ಆದ ಶ್ರೇಷ್ಠವಾದ ಉದಕವನ್ನು ನಮಗೆ ಒದಗಿಸಿಕೊಡು ನೀನು ಉದಕಕ್ಕೆ ಪಾಲಕನು ಇಲ್ಲಿ ಉಪಯೋಗಿಸಿರುವ ಮೃಳಯತಿ ಧಾತುವಿಗೆ ರಕ್ಷಿಸು ಅಥವಾ ಪೂಜಿಸು ಎಂಬರ್ಥವಿರುವುದು

ತದ್ಯತ್ಸಮಾನ್ಯಾಮೃಚಿ ಸಮಾನಾಭಿವ್ಯಾಹಾರಂ ಭವತಿ ತಜ್ಜಾಮಿ ಭವತೀತ್ಯೇಕಂ ಮಧುಮಂತಂ ಮಧುಶ್ಚುತಮಿತಿ ಯಥಾ । ಯದೇವ ಸಮಾನೇ ಪಾದೇ ಸಮಾನಾಭಿವ್ಯಾಹಾರಂ ಭವತಿ ತಜ್ಜಾಮಿ ಭವತೀತ್ಯಪರಂ–ಹಿರಣ್ಯರೂಪಃ ಸ ಹಿರಣ್ಯಸಂದೃಕ್ ಇತಿ ಯಥಾ । ಯಥಾ ಕಥಾ ಚ ವಿಶೇಷೋಽ ಜಾಮಿ ಭವತೀತ್ಯಪ–ಮಂಡೂಕಾ ಇವೋದಕಾನ್ಮಂಡೂಕಾ ಉದಕಾದಿವ ಇತಿ ಯಥಾ ॥

(ನಿ ೧೦-೧೬)

ಮೇಲಿನ ಉದಾಹರಣೆಯಲ್ಲಿ ಋಕ್ಕಿನ ಪೂರ್ವಾರ್ಧದಲ್ಲಿ **ಮಧುಮಂತಂ** ಎಂಬ ಶಬ್ದವಿರುವುದು ಉತ್ತರಾರ್ಧದಲ್ಲಿ **ಮಧುಶ್ಚುತಂ** ಎಂಬ ಶಬ್ದವಿರುವುದು ಈ ರೀತಿ ಸಮಾನಾರ್ಥವುಳ್ಳ (ಒಂದೇ ಅರ್ಥವುಳ್ಳ) ಎರಡುಶಬ್ದಗಳುಳ್ಳ ಋಕ್ಕಿಗೆ ಅಥವಾ ಮಂತ್ರಕ್ಕೆ ಜಾಮಿ (ಸಂಬಂಧ) ಎಂದು ಹೆಸರು ಎಂದು ಕೆಲವರು ಹೇಳುವರು ಮತ್ತೆ ಕೆಲವರು ಒಂದೇ ಪಾದದಲ್ಲಿ ಒಂದೇ ಅರ್ಥವುಳ್ಳ ಎರಡು ಶಬ್ದಗಳಿದ್ದರೆ ಅದು ಜಾಮಿಯೆಂದು ಹೇಳುವರು. **ಹಿರಣ್ಯರೂಪಃ ಸ ಹಿರಣ್ಯಸಂದೃಕ್** ಎಂಬ ಪಾದದಲ್ಲಿರುವಂತೆ ಮತ್ತೆ ಕೆಲವರು ಒಂದು ಋಕ್ಕಿನಲ್ಲಿ ಅಥವಾ ಒಂದು ಪಾದದಲ್ಲಿ ಸಮಾನಾರ್ಥವಿರುವ (ಒಂದೇ ಅರ್ಥವಿರುವ) ಬೇರೆಬೇರೆ ಶಬ್ದಗಳಿದ್ದರೂ ಅಥವಾ ಒಂದೇ ವಿಧವಾದ ಶಬ್ದಗಳ ಪುನರಾವರ್ತಿ ಇದ್ದರೂ ಅದು ಜಾಮಿಯಾಗುವುದಿಲ್ಲ ಎಂದರೆ ಸಮಾನಾರ್ಥವನ್ನು ಸೂಚಿಸುವುದಿಲ್ಲ ಹೇಗೆಂದರೆ—

ಮಂಡೂಕಾ ಇವೋದಕಾನ್ಮಂಡೂಕಾ ಉದಕಾದಿವ ಎಂಬ ಋಕ್ಕಿನಲ್ಲಿರುವಂತೆ ಇಲ್ಲಿ ಸಮಾನಾರ್ಥಶಬ್ದಗಳ ಪುನರಾವರ್ತಿ ಇದ್ದರೂ ಈ ಪುನರಾವರ್ತಿಯು (ಅಭ್ಯಾಸವು) ವಾಕ್ಯದ ಅಭಿಪ್ರಾಯವನ್ನು ಒತ್ತಿ ಹೇಳುವುದಕ್ಕಾಗಿ ಪ್ರಯುಕ್ತವಾಗಿರುವುದು ಎಂದು ಮತ್ತೆ ಕೆಲವರ ಮತವು.

' ಕ್ಷೇತ್ರಸ್ಯಪತಿ ' ಎಂಬ ದೇವತೆಯೂ ವಾಸ್ತೋಷ್ಪತಿಯ ಜಾತಿಗೆ ಸೇರಿದುದು ಈ ದೇವತೆ ಭೂರಕ್ಷಕ. ೪-೫೭ ನೆಯ ಸೂಕ್ತದ ಮೊದಲನೆಯ ಮೂರು ಮಂತ್ರಗಳಲ್ಲಿ ಈತನಿಂದ, ಗೋವುಗಳು, ಅಶ್ವಗಳು ಮತ್ತು ಭೂಮ್ಯಾಕಾಶಗಳು, ನೃಕ್ಷಗಳು, ನೀರು ಇವುಗಳಲ್ಲಿ ಪೂಷರ್ಯ ಮೊದಲಾದುವುಗಳು ಅಪೇಕ್ಷಿತವಾಗಿವೆ. ವಿಶ್ವೇದೇವತಾಕವಾದ ಸೂಕ್ತವೊಂದರಲ್ಲಿ (೭-೫೫-೧೦) ಸವಿತೃ, ಉಷೋದೇವಿಯರು, ಪರ್ಜನ್ಯ, ಇವರೊಡನೆ ಈತನೂ ಸಮೃದ್ಧಿದಾಯಕನಾಗಬೇಕೆಂದು ಪ್ರಾರ್ಥಿತನಾಗಿದಾನೆ ೧೦-೬೬-೧೩ರಲ್ಲಿ ಆರಾಧಕರು ಈತನನ್ನು ತಮ್ಮ ನೆರೆಯಲ್ಲಿರ ಬೇಕೆಂದು ಆಶಿಸಿದ್ದಾರೆ ಭೂಮಿಯನ್ನು ಉಳುವುದಕ್ಕೆ ಪ್ರಾರಂಭಿಸುವಾಗ ಈ ದೇವತೆಯನ್ನು ಪೂಜಿಸಬೇಕು ಅಥವಾ ದೇವತೆಯನ್ನು ದ್ವೇಶಿಸಿ ಹೋಮಮಾಡಬೇಕೆಂದು ಹೇಳಿದೆ. (ಆ. ಗೃ. ಸೂ. ೨-೧೦-೪, ಶಾಂ ಗೃ. ಸೂ. ೪-೧೩-೫) ವ್ಯವಸಾಯ ಸಂಬಂಧವಾದ ದೇವತೆಗಳನ್ನು ಸ್ತುತಿಸುವ ಸೂಕ್ತವೊಂದರಲ್ಲಿ (೪-೫೭-೬) ಸೀತಾ (ನೇಗಿಲುಗೆರೆ) ಎಂಬ ದೇವತೆಯಿಂದ ಉತ್ತಮವಾದ ಬೆಳೆಯು ಪ್ರಾರ್ಥಿತವಾಗಿದೆ ಪಾರಸ್ಕರ ಗೃಹ್ಯಸೂತ್ರದಲ್ಲಿ (ಪಾ ಗೃ ಸೂ ೨-೧೭-೯) ಇದೇ ಸೀತೆಯು ಇಂದ್ರನ ಪತ್ನಿಯೆಂದೂ ಮತ್ತು ಅವಳಿಗೆ ತಂದೆಯ ಹೆಸರಿನ ಆಧಾರದ ಮೇಲೆ ಸಾವಿತ್ರೀ ಎಂದು ಹೆಸರೆಂದೂ (ತೈ ಬ್ರಾ ೨-೩-೧೦-೧) ಹೇಳಿದೆ ಇದೇ ಪಾರಸ್ಕರ ಗೃಹ್ಯಸೂತ್ರದಲ್ಲಿ ಊರ್ವರಾ (ವ್ಯವಸಾಯಕ್ಕೆ ಅನ್ಯ ಕೂಲವಾಗಿರುವ ಜವಿಸಾನು) ಎಂಬೊಂದು ದೇವತೆ ಉಕ್ತವಾಗಿದೆ

ನಿರುಕ್ತಕಾರರ ನಿರ್ವಚನದಂತೆ ಕ್ಷೇತ್ರಪತಿಯು ಗೃಹಪತಿಯೂ ಆಗಬಹುದಾದುದರಿಂದ ಅಗ್ನಿಯೆಂದೂ ಅರ್ಥವಾಗಬಹುದು. ಆದರೆ ಕ್ಷೇತ್ರಶಬ್ದದ ಪ್ರಯೋಗವು ಕೃಷಿಸಂಬಂಧವಾಗಿಯೇ ಪ್ರಕೃತವಾದ ಮಂತ್ರದಲ್ಲಿರುವುದರಿಂದ **ಕ್ಷೇತ್ರಪತಿ**ಶಬ್ದವು ಪ್ರತ್ಯೇಕವಾದ ದೇವತೆಯೆಂದೇ ಅರ್ಥಮಾಡುವುದು ಉಚಿತವಾಗಿರುತ್ತದೆ ಕೆಲವೆಡೆಗಳಲ್ಲಿ ಸಾಯಣರ ಭಾಷ್ಯವೂ ಈ ಅರ್ಥವನ್ನೇ ಸಮರ್ಥಿಸುತ್ತದೆ ಉದಾಹರಣೆಗೆ,

ದೈವ್ಯಾ ಹೋತಾರಾ ಪ್ರಥಮಾ ಪುರೋಹಿತೇ ಋತಸ್ಯ ಪಂಥಾನಮನ್ವೇಮಿ ಸಾಧುಯಾ ।
ಕ್ಷೇತ್ರಸ್ಯ ಪತಿಂ ಪ್ರತಿವೇಶಮಿಮಾಮಹೇ ವಿಶ್ವಾನ್ದೇವಾಂ ಅಮೃತಾ ಆಪ್ರಯುಚ್ಛತಃ ॥

(ಋ ಸಂ ೧೦-೬೬-೧೩)

ದೇವತಾತ್ವರೂ, ಹೋತೃರೂಪರೂ ಆದ ಅಗ್ನ್ಯಾದಿತ್ಯರನ್ನೂ, ಯಜ್ಞಮಾರ್ಗವನ್ನೂ ಸಹ ನಾನು ಅನುಸರಿಸುತ್ತೇನೆ ಕ್ಷೇತ್ರಪತಿಯನ್ನೂ, ಪ್ರಮಾದರಹಿತರಾದ ಇತರ ಎಲ್ಲಾ ದೇವತೆಗಳನ್ನೂ ನಾನು ಧನಾರ್ಥವಾಗಿ ಪೂಜಿಸುತ್ತೇನೆ ಎಂಬರ್ಥವುಳ್ಳ ಈ ಮಂತ್ರದಲ್ಲಿ **ಕ್ಷೇತ್ರಸ್ಯ ಪತಿಂ** ಎಂಬುದಕ್ಕೆ ಸಾಯಣರು **ಧನಸ್ಯಮಾನಂ** ಎಂದು ವಿವರಿಸಿ ಇದು ಪ್ರತ್ಯೇಕವಾದ ದೇವತೆಯ ಹೆಸರೆಂದೇ ತಿಳಿಯಬೇಕು ಎಂದು ಹೇಳಿದ್ದಾರೆ ಇದರಂತೆಯೇ,

ಶಂ ನೋ ದೇವಃ ಸವಿತಾ ತ್ರಾಯಮಾಣಃ ಶಂ ನೋ ಭವಂತೂಷಸೋ ವಿಭಾತೀಃ ।
ಶಂ ನಃ ಪರ್ಜನ್ಯೋ ಭವತು ಪ್ರಜಾಭ್ಯಃ ಶಂ ನಃ ಕ್ಷೇತ್ರಸ್ಯ ಪತಿರಸ್ತು ಶಂಭುಃ ॥

(ಋ ಸಂ. ೭-೩೫-೧೦)

ಬ ಮಂತ್ರದಲ್ಲಿಯೂ **ಕ್ಷೇತ್ರಪತಿ** ಶಬ್ದಕ್ಕೆ ಇದೇ ಅರ್ಥವನ್ನು ಹೇಳಬೇಕು. ಈ ಮಂತ್ರದ ಹಿಂದಿನ ಮಂತ್ರದಲ್ಲಿ
ಗ್ನಿ, ಇಂದ್ರ, ಸೂರ್ಯ ಇತ್ಯಾದಿ ಇತರ ದೇವತೆಗಳ ನಾಮನಿರ್ದೇಶವು ಸ್ಪಷ್ಟವಾಗಿರುವುದರಿಂದ ಇದು ಬೇರೆ
ಪ್ರತ್ಯೇಕ) ದೇವತೆಯ ನಾಮವನ್ನು ತಿಳಿಸುವುದಾಗಿದೆಯೆಂದು ಹೇಳಬಹುದು.

ಬೃಹದ್ದೇವತಾಕಾರರು ಇದೇ ಕ್ಷೇತ್ರಪತಿಯು ಇಂದ್ರನ ವಿಭೂತಿವಿಶೇಷವೆಂದು ಒಂದು ಕಡೆಯೂ, ಅಗ್ನಿಯ
ಭೂತಿವಿಶೇಷನೆಂದು ಇನ್ನೊಂದು ಕಡೆಯೂ ತಿಳಿಸಿದ್ದಾರೆ.

ಇಂದ್ರಾಶ್ರಯಸ್ತು ಪರ್ಜನ್ಯೋ ರುದ್ರೋ ವಾಯುರ್ಬೃಹಸ್ಪತಿಃ ।
ವರುಣಃ ಕಶ್ಚ ಮೃತ್ಯುಶ್ಚ ದೇವಶ್ಚ ಬ್ರಹ್ಮಣಸ್ಪತಿಃ ॥
ಮನುಶ್ಚ ವಿಶ್ವಕರ್ಮಾ ಚ ಮಿತ್ರಃ ಕ್ಷೇತ್ರಪತಿರ್ಯಮಃ ।

(ಬೃ ದೇ ೮-೧೨೨, ೧೨೩)

ರ್ಜನ್ಯ, ರುದ್ರ, ವಾಯು, ಬೃಹಸ್ಪತಿ. ವರುಣ, ಕ, ಮೃತ್ಯು, ಬ್ರಹ್ಮಣಸ್ಪತಿ, ಮನ್ಯು, ವಿಶ್ವಕರ್ಮಾ, ಮಿತ್ರ,
ಕ್ಷೇತ್ರಪತಿ, ಯಮ, ತಾರ್ಕ್ಷ್ಯ ಇತ್ಯಾದಿ ಸಕಲದೇವತೆಗಳೂ ಇಂದ್ರಾಂತರ್ಗತರು ಎಂದು ಒಂದು ಕಡೆ ಹೇಳಿದೆ ಅಲ್ಲದೆ,

ಅನ್ನಂ ಕ್ಷಿತಿಭ್ಯೋ ವಿದಧತ್ ಯದೃತುಷ್ವವಿಶಕ್ಷ್ಮಿತೌ ।
ತೇನೈನಮಾಹ ಕ್ಷೇತ್ರಸ್ಯ ವಾಮದೇವಃ ಸ್ತುವನ್ಪತಿಂ ॥

(ಬೃಃ ದೇ. ೩-೪೧)

ತುಕಾಲಗಳಿಗನುಗುಣವಾಗಿ ಇದೇ ಅಗ್ನಿಯು ಪೃಥ್ವಿಯಲ್ಲಿ (ಕ್ಷಿತೌ) ಅಂತರ್ಗತನಾಗಿ, ಪೃಥ್ವಿಯ ಸಕಲ ಪ್ರದೇಶ
ಳಿಗೂ ಅನ್ನವನ್ನು ಹಂಚುವವನಾದುದರಿಂದ ವಾಮದೇವಋಷಿಯು ಇವನನ್ನು ಕ್ಷೇತ್ರಪತಿಯೆಂದು ಪ್ರಶಂಸಿಸಿದನು
ಂದು ತಿಳಿಸಿದ. ಈ ವಿವರಣವು **"ಕೇಚಿದಗ್ನಿಮಥಾಹುರೇ"** ಎಂದು ಸಾಯಣರು ತಿಳಿಸಿರುವ ಅರ್ಥಕ್ಕೆ
ಂಬಿಕೊಳ್ಳುತ್ತದೆ

ಶುನ, ಸೀರ, ಲಾಂಗಲ, ಫಾಲ, ಸೀತಾ ಇತ್ಯಾದಿ ಪದಗಳ ಪ್ರಯೋಗಗಳು ಕೃಷಿಯ ಸ್ವರೂಪವನ್ನೇ
ಗ್ರಣ್ಯವಾಗಿ ವರ್ಣಿಸುವುದರಿಂದ ಪ್ರಕೃತದಲ್ಲಿ ಕ್ಷೇತ್ರಪತಿಯೆಂಬುದಕ್ಕೆ ಕೃಷಿಗೆ ಉಪಯುಕ್ತವಾದ ಕ್ಷೇತ್ರಗಳಿಗೆ ಫಾಲಕ
ಂದ ದೇವತಾವಿಶೇಷನೆಂದೇ ಅರ್ಥಮಾಡುವುದು ಉಚಿತವಾಗಿರುತ್ತದೆ. **ಶುನ, ಸೀರ** ಎಂಬ ಪದಗಳಿಗೂ ಸಹ
ಗಿಲು, ಗುಳ ಇತ್ಯಾದಿಯಾಗಿ ಕೃಷಿಸಾಧನಗಳೆಂದೇ ಅರ್ಥಮಾಡಿದರೂ ತಪ್ಪಾಗಲಾರದು. ಆದರೆ, **ಶುನ, ಸೀರ**
ಂಬ ಪದಗಳ ಪ್ರತ್ಯೇಕವಾದ ಪ್ರಯೋಗವೂ, **ಶುನಾಸೀರಾ** ಎಂಬ ದ್ವಂದ್ವ ರೂಪದ ಪ್ರಯೋಗವೂ **ವಿಶೇಷ**
ಂಗಿರುವುದರಿಂದ ಆಯಾ ಸಂದರ್ಭಗಳಿಗನುಗುಣವಾಗಿ ಈ ಪದಗಳ ನಿಷ್ಕೃಷ್ಟವಾದ ತಾತ್ಪರ್ಯವೇನೆಂಬುದನ್ನು
ರಿತೀಲಿಸಬೇಕು

। संहितापाठः ।

क्षेत्रस्य पतेऽ मधुमन्तमूर्म्यं धेनुरिव पयोऽ अस्मासु धुक्ष्व ।
मधुश्चुतं घृतमिव सुपूतमृतस्य नः पतयो मृळयन्तु ॥

। पदपाठः ।

क्षेत्रस्य । पतेऽ । मधुऽमन्तं । ऊर्म्यं । धेनुःऽइव । पयः । अस्मासु । धुक्ष्व ।
मधुऽश्चुतं । घृतंऽइव । सुऽपूतं । ऋतस्य । नः । पतयः । मृळयन्तु ॥ ७ ॥

। सायणभाष्यं ।

अप्नोत्येर्ऊमेः मैत्रावरुणस्यातिरिक्तोक्थ्ये परिधानीया । सूत्रितं च । क्षेत्रस्य पते मधुमन्तमूर्म्यमिति परिधानीया । आ. ९-८८ । इति ॥

हे क्षेत्रस्य पते त्वं मधुमन्तं माधुर्योपेतमूर्म्यं प्रवृद्धमुदकं धेनुः पयः इव सा यथा दुग्धे तथास्मासु धुक्ष्व । मधुश्चुतं मधुस्रावि सुपूतं घृतमिवेत्युपमा । तादृशमुदकमित्यर्थः । ऋतस्य यज्ञस्योदकस्य वा पतयः स्वामिनो नोऽस्मान् मृळयन्तु । सुखयन्तु । यद्वा । ऋतस्यैकत्वं वर्णेन षष्ठ्यै । ऋतं मृळयन्तु । प्रयच्छन्तु । मृळतिरत्र दानकर्मा ॥

। प्रतिपदार्थ ।

क्षेत्रस्य पतेऽ—एलै क्षेत्रपतिदेवनेऽ । धेनुः—धेनुवु । पयः इव—क्षीरवन्नु करेयुवंते । मधुश्चुतं—मधुविन बिंदुगळंते रुचिकरवागिरुवुदू । घृतमिव—घृतदंते । सुपूतं—पवित्रवागिरुवुदू । मधुमन्तं—माधुर्योपेतवादुदू । ऊर्म्यं—प्रवृद्धवादुदू आद उदकवन्नु । अस्मासु—नमगागि । धुक्ष्व—करेदु सुरिसु । ऋतस्य—उदकक्के । पतयः—ओडेयरादा देवतेगळु । नः—नम्मन्नु । मृळयन्तु—सुखपडिसलि

। भावार्थ ।

एलै क्षेत्रपतिदेवनेऽ, क्षीरवन्नु धेनुवु करेयुवंते मधुविन बिंदुगळंते रुचिकरवादुदू, घृतदंते पवित्रवागिरुवुदू, माधुर्योपेतवादुदू प्रवृद्धवादुदू आद उदकवन्नु नमगागि करेदु सुरिसु. उदकपतिगळादा देवतेगळु नम्मन्नु सुखपडिसलि

English Translation.

Lord of the field, bestow upon us sweet abundant, (water), as the milch cow (yields her) milk, dropping like honey, bland as butter . may the lords of the water make us happy.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಯಾಸ್ಕರು ಬರೆದಿರುವ ನಿರ್ವಚನವನ್ನು ಒಂದನೇ ಋಕ್ಕಿನ ವಿಶೇಷವಿಷಯಗಳಲ್ಲಿಯೇ ವಿವರಿಸಲಾಗಿದೆ. **ಅಪ್ತ್ಯೋರ್ಯಾಮ**ವೆಂಬ ಯಾಗದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಅತಿರಿಕ್ತೋಕ್ಥ್ಯ ಮಂತ್ರಗಳನ್ನು ಪಠಿಸುವಾಗ ಈ ಋಕ್ಕನ್ನು ಪರಿಧಾನೀಯ (ಕೊನೆಯ) ಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ-**ಕ್ಷೇತ್ರಸ್ಯ ಪತೇ ಮಧುಮಂತಮೂರ್ಮಿಮಿತಿ ಪರಿಧಾನೀಯಾ** ಎಂಬ ಸೂತ್ರದಿಂದ (ಅ ೯–೧೧) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಮಧುಮತೀರೋಷಧೀರ್ದ್ಯಾವ ಆಪೋ ಮಧುಮನ್ನೋ ಭವತ್ವಂತರಿಕ್ಷಂ ।
ಕ್ಷೇತ್ರಸ್ಯ ಪತಿರ್ಮಧುಮಾನ್ನೋ ಅಸ್ತ್ವರಿಷ್ಯಂತೋ ಅನ್ವೇನಂ ಚರೇಮ ॥೩॥

॥ ಪದಪಾಠಃ ॥

ಮಧು꣡ಽಮತೀಃ । ಓಷ꣡ಧೀಃ । ದ್ಯಾ꣡ವಃ । ಆ꣡ಪಃ । ಮಧು꣡ಽಮತ್ । ನ꣡ಃ । ಭ꣡ವತು । ಅ꣡ಂತರಿ꣡ಕ್ಷಂ ।
ಕ್ಷೇ꣡ತ್ರಸ್ಯ । ಪ꣡ತಿಃ । ಮಧು꣡ಽಮಾನ್ । ನ꣡ಃ । অ꣡ಸ್ತು । অರಿ꣡ಷ್ಯಂತಃ । অನು꣡ । এ꣡ನಂ । চ꣡রೇಮ ॥ ೩ ॥

॥ ಸಾಯಣಭಾಷ್ಯಂ ॥

ಬ್ರಾಹ್ಮಣಾಚ್ಛಂಸಿನೋ೨ತಿರಿಕ್ತೋಕ್ಥ್ಯೇ ಪರಿಧಾನೀಯೈಷಾ । ಮಧುಮತೀರೋಷಧೀರ್ದ್ಯಾವ ಆಪ ಇತಿ ಪರಿಧಾನೀಯಾ । ಅ ೯–೧೧ । ಇತಿ ಸೂತ್ರಿತತ್ವಾತ್ ॥

ಓಷಧೀರೋಷಧ್ಯೋ ಪ್ರೀಹಿಪ್ರಿಯಂಗ್ವಾದಯೋ ನೋ೨ಸ್ಮಭ್ಯಂ ಮಧುಮತೀರ್ಮಧುಮತ್ಯೋ ಭವಂತು । ತಥಾ ದ್ಯಾವಃ । ತಿಸ್ರೋ ದಿವ ಇತ್ಯುಕ್ತತ್ವಾದ್ಬಹುವಚನಂ ಯುಕ್ತಂ । ತಥಾಪೋ೨ಂತರಿಕ್ಷಂ ಚ ನೋ ಮಧುಮದ್ಭವತು । ಕಿಂಚ ಕ್ಷೇತ್ರಸ್ಯ ಪತಿರಪಿ ಮಧುಮಾನ್ನೋ೨ಸ್ತು । ಅರಿಷ್ಯಂತೋ೨ನ್ಯೈರ-ಹಿಂಸ್ಯಂತೋ ವಯಮೇನಂ ಕ್ಷೇತ್ರಪತಿಮನು ಅನುಸೃತ್ಯ ಚರೇಮ । ಸಂಚರೇಮ ಸುಖೇನ ॥

॥ प्रतिपदार्थः ॥

ओषधीः—व्रीह्याद्योषधिगळु । **नः**—नमगे । **मधुमतीः**—माधुर्योपेतवागि । **भवतु**—आगिरलि । **द्यावः**—द्युलोकगळू । **अपः**—उदकगळू । **अन्तरिक्षं**—अन्तरिक्षवू । **मधुमत्**—माधुर्योपेतवाद सत्त्ववुळ्ळवागि (आगिरलि) । **क्षेत्रस्य पतिः**—क्षेत्रपतिदेवनू सह । **नः**—नमगे । **मधुमान्**—हितकारकनागि । **अस्तु**—आगिरलि । **अरिष्यन्तः**—शत्रुगळिंद अहिंसितरादं नावु । **वयं अनु**—ई क्षेत्रपतिय आज्ञानुसारवागि । **चरेम**—व्यवहरिसोण.

॥ भावार्थः ॥

व्रीहाद्योषधिगळु नमगे मधुर्योपेतवागिरलि. द्युलोकगळू, उदकगळू, अन्तरिक्षवू नम्म विषयदल्लि माधुर्योपेतवाद सत्त्ववुळ्ळवरागिरलि क्षेत्रपतिदेवनू सह नमगे हितकारक नागि आगिरलि. शत्रुगळिंद अहिंसितरादं नावु ई क्षेत्रपतिय आज्ञानुसारवागि व्यवहरिसोण.

English Translation.

May the herbs (of the field) be sweet for us, may the heavens, the waters, the firmament, be kind to us, may the lord of the field be gracious to us : let us, undeterred (by foes), have recourse to him.

॥ विशेषविषयगळु ॥

मेलॆ हेळिद अव्योर्यामयागदल्लि ब्राह्मणांच्छंसियु परिसबेकादं अतिरिक्तोक्त्यृमंत्रगळल्लि ई ऋक्कन्नु परिधानीय (कॊनेय) ऋक्कन्नागि परिसबेकॆंदु आश्वलायनश्रौतसूत्रद—**मधुमतीरोषधीर्द्यावं अप इति परिधानीयाः** ऎंब सूत्रदिंद (अ.४-८८) विवृतवागिरुवुदु.

॥ संहितापाठः ॥

शुनं वाहाः शुनं नरः शुनं कृषतु लाङ्गलं ।
शुनं वरत्राः बध्यन्तां शुनमष्ट्रामुदिङ्गय ॥ ४ ॥

॥ पदपाठः ॥

शुनं । वाहाः । शुनं । नरः । शुनं । कृषतु । लाङ्गलं ।
शुनं । वरत्राः । बध्यन्तां । शुनं । अष्ट्रां । उत् । इङ्गय ॥ ४ ॥

॥ ಸಾಯಣಭಾಷ್ಯಂ ॥

ವಾಹಾ ಬಲೀವರ್ದಾಃ ಶುನಂ । ಸುಖನಾಮೈತತ್ । ಸುಖಂ ಯಥಾ ಭವತಿ ತಥಾ ವಹಂತ್ವಿತಿ ಶೇಷಃ । ತಥಾ ನರೋ ನೇತಾರೋ ಮನುಷ್ಯಾಃ ಕರ್ಷಕಾಃ ಶುನಂ ಕುರ್ವಂತು । ತಥಾ ಲಾಂಗಲಮಪಿ ಶುನಂ ಕೃಷತು । ವರತ್ರಾ ವರಣೇನ ತ್ರಾಯಮಾಣಾಃ ಪ್ರಗ್ರಹಾಃ ಶುನಂ ಬಧ್ಯಂತಾಂ । ಅಷ್ಟ್ರಾಂ ಪ್ರತೋದಂ ಶುನಮುದಿಂಗಯ । ಪ್ರೇರಯ । ಶುನಾಖ್ಯೋ ವಾಯ್ವಿಂದ್ರಯೋರನ್ಯತಮಃ ಸುಖಕೃದ್ದೇವಃ । ತದನುಗ್ರಹಾದೇತತ್ಸರ್ವಂ ಭವತ್ವಿತಿ । ತಸ್ಯ ಶ್ರುತಿಸಾಮಾನ್ಯೇನ ಸ್ತುತಿಃ ॥

॥ ಪ್ರತಿಪದಾರ್ಥ ॥

ವಾಹಾಃ—ಭಾರಗಳನ್ನು ವಹಿಸುವ ವೃಷಭಗಳು । **ಶುನಂ**—ಸುಖವಾಗಿ (ಭಾರಗಳನ್ನು ವಹಿಸಲಿ) । **ನರಃ**—ಕೃಷಿಕಾರರಾದ ಮಾನವರು । **ಶುನಂ**—ಸುಖವಾಗಿ (ತಮ್ಮ ಕಾರ್ಯಗಳನ್ನು ಮಾಡಲಿ) । **ಲಾಂಗಲಂ**—ಉಳುವ ಸಾಧನವಾದ ನೇಗಿಲು । **ಶುನಂ**—ಸುಖವಾಗಿ । **ಕೃಷತು**—ಉಳುವಂತಾಗಲಿ । **ವರತ್ರಾಃ**—ಕಡಿವಾಣಗಳು (ಅಥವಾ ಮೂಗುದಾರಗಳು) । **ಶುನಂ**—ಸುಖವಾಗಿ । **ಬಧ್ಯಂತಾಂ**—ವೃಷಭಾದಿಗಳನ್ನು ಹಿಡಿದಿರಲಿ । **ಅಷ್ಟ್ರಾಂ**—ಭಾರವನ್ನು । **ಶುನಂ**—ಸುಖವಾಗಿರುವಂತೆ । **ಉದಿಂಗಯ**—ಹೊರಿಸು.

॥ ಭಾವಾರ್ಥ ॥

ಭಾರವನ್ನು ವಹಿಸುವ ವೃಷಭಾದಿಗಳು ಭಾರಗಳನ್ನು ಸುಖವಾಗಿ ವಹಿಸಲಿ ಕೃಷಿಕಾರರಾದ ಮಾನವರು ತಮ್ಮ ಕಾರ್ಯಗಳನ್ನು ಸುಖವಾಗಿ ಮಾಡಲಿ ಉಳುವ ಸಾಧನವಾದ ನೇಗಿಲು ಸುಖವಾಗಿ ಉಳುವಂತಾಗಲಿ. ಕಡಿವಾಣಗಳು ಅಥವಾ ಮೂಗುದಾರಗಳು ವೃಷಭಾದಿಗಳನ್ನು ಸುಖವಾಗಿ ಹಿಡಿದಿರಲಿ. ವೃಷಭಾದಿಗಳಿಗೆ ಭಾರವನ್ನು ಸುಲಭವಾಗಿ ಹೊರುವಂತೆ ಹೊರಿಸು

English Translation.

May the oxen (draw) happily, the men (labour) happily, the plough furrow happily, may the traces bind happily. wield the goad happily

॥ ವಿನಿಯೋಗಗಳು ॥

ಶುನಾಸೀರೀಯಸವನದಲ್ಲಿ ಶುನಾಸೀರದೇವತಾಕವಾದ ಹವಿಸ್ಸಿನ ಹೋಮದಲ್ಲಿ ಈ ಋಕ್ಕನ್ನು ಪುರೋನುವಾಕ್ಯಾಮಂತ್ರವನ್ನಾಗಿಯೂ ಈ ಸೂಕ್ತದ ಕೊನೆಯ ಋಕ್ಕಾದ **ಶುನಂ ನಃ ಫಾಲಾ** ಎಂಬ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿಯೂ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಶುನಾಸೀರಾವಿಮಾಂ ವಾಚಂ ಜುಷೇಥಾಂ ಶುನಂ ನಃ ಫಾಲಾಃ** ಎಂಬ ಸೂತ್ರದಿಂದ (ಆ ೩-೨೦) ವಿವೃತವಾಗಿರುವುದು.

ಶುನ ಮತ್ತು ಶುನಾಸೀರದೇವತೆಗಳು— ೪-೫೭-೪ ನೇ ಮಂತ್ರವು ಶುನದೇವತಾಕವಾದುದು. ಶುನ ಶಬ್ದಕ್ಕೆ ಸಾಯಣರು ಅರ್ಥವನ್ನು ಹೇಳುತ್ತಾ, **"ಶುನಾಖ್ಯೋ ವಾಯ್ವಿಂದ್ರಯೋರನ್ಯತಮಃ ಸುಖಕೃದ್ದೇವಃ । ತದನುಗ್ರಹಾದೇತತ್ಸರ್ವಂ ಭವತ್ವಿತಿ ತಸ್ಯ ಶ್ರುತಿಸಾಮಾನ್ಯೇನ ಸ್ತುತಿಃ ॥"** ವಾಯು ಅಥವಾ

ಇಂದ್ರೆ ಈ ಇಬ್ಬರಲ್ಲಿ ಒಬ್ಬರಿಗೆ **ಶುನ**ನೆಂಬ ಹೆಸರು ಅನ್ವರ್ಥವಾಗುತ್ತದೆ. ಅವರ ಅನುಗ್ರಹವಿದ್ದರೆ ಸಕಲವೂ ಸುಖಮಯವಾಗುವುದರಿಂದ ಅವರಿಬ್ಬರಲ್ಲಿ ಒಬ್ಬರಿಗೆ **ಶುನ**ನಾಮನಿರ್ದೇಶವು ಸಾರ್ಥಕವಾಗುತ್ತದೆ ಎಂದು ವಿವರಿಸಿದ್ದಾರೆ

ಪುನಃ ೫ನೇ ಮಂತ್ರದಲ್ಲಿ **ಶುನಾಸೀರ** ಶಬ್ದವನ್ನು ವಿವರಿಸುವಾಗ **ಈ** ರೀತಿ ತಿಳಿಸಿದ್ದಾರೆ. **'ದ್ಯುದೇವಃ ಶುನದೇವತಾ' ಇತಿ ಶೌನಕಃ। ಅತಃ ಶುನಃ ಇಂದ್ರಃ, 'ಶುನೋ ವಾಯುಃ ಶು ಏತ್ಯಂತರಿಕ್ಷೇ ಸೀರ ಆದಿತ್ಯಃ ಸರಣಾತ್'** (ನಿ ೯-೪೦) ದ್ಯುಲೋಕಸ್ಥನಾದ ಶುನದೇವತೆಯೇ ಇಂದ್ರನು, ಎಂದು ಶೌನಕರ ಅಭಿಪ್ರಾಯವನ್ನು ತಿಳಿಸಿ, ನಂತರ, ಅಂತರಿಕ್ಷಸಂಚಾರಿಯಾದ್ದರಿಂದ **ಶುನ** ದೇವತೆಯು ವಾಯುವೆಂದೂ, ಭ್ರಮಣಾತ್ಮಕನಾದುದರಿಂದ ಆದಿತ್ಯನಿಗೆ ಸೀರನೆಂಬ ನಾಮವು ಪ್ರಸಿದ್ಧವಾಗಿದೆಯೆಂದೂ ವಿವರಿಸುವ ನಿರುಕ್ತವಾಕ್ಯವನ್ನು ದಾಹರಿಸಿದ್ದಾರೆ ಮತ್ತು ೮ನೇ ಮಂತ್ರದಲ್ಲಿ ಪುನಃ **ಶುನಾಸೀರಾ**—**ಇಂದ್ರವಾಯೂ; ವಾಯ್ವಾದಿತ್ಯೌ ವಾ** ಶುನಾಸೀರರೆಂದರೆ ಇಂದ್ರ ಮತ್ತು ವಾಯುವಾಗಬಹುದು ಅಥವಾ ವಾಯು ಮತ್ತು ಆದಿತ್ಯರಾಗಬಹುದು ಎಂದು ವಿವರಿಸಿದ್ದಾರೆ

ಸಾಧಾರಣವಾಗಿ ನಿರುಕ್ತಮತವನ್ನೇ ಅನುಸರಿಸತಕ್ಕ ಬೃಹದ್ದೇವತಾಕಾರರು **ಶುನಾಸೀರ**ಶಬ್ದದ ನಿಷ್ಕೃಷ್ಟವಾದ ಅರ್ಥವನ್ನು ಹೇಳುವುದರಲ್ಲಿ ಮಾತ್ರ ಕೊಂಚ ವ್ಯತ್ಯಸ್ತವಾದ ಅಭಿಪ್ರಾಯವನ್ನು ಸೂಚಿಸಿ, ಇತರ ಮಹರ್ಷಿಗಳ ಮತವನ್ನೂ ಉದಾಹರಿಸಿ ಯಾಸ್ಕರಿಗೂ ತಮಗೂ ಇರುವ ವ್ಯತ್ಯಾಸವನ್ನೂ ತಿಳಿಸಿದ್ದಾರೆ

"ವಾಯುಃ ಶುನಃ ಸೂರ್ಯ ಏವಾತ್ರ ಸೀರಃ ಶುನಾಸೀರೌ ವಾಯುಸೂರ್ಯಾ ವದಂತಿ।
ಶುನಾಸೀರಂ ಯಾಸ್ಕ ಇಂದ್ರಂ ತು ಮೇನೇ ಸೂರ್ಯೇಂದ್ರೌ ತೌ ಮನ್ಯತೇ ಶಾಕಪೂಣಿಃ ॥"
(ಬೃಹದ್ದೇವತಾ ೫-೮)

ಶುನ, ಸೀರ ಎಂಬುವು ವಾಯು ಮತ್ತು ಸೂರ್ಯನಾಮನಿರ್ದೇಶಕಗಳಾದವು ಎಂದು ಹಿಂದಿನ ಋಷಿಗಳು ಹೇಳಿರುವುದರಿಂದ ಇಲ್ಲಿ **ಶುನ** ಶಬ್ದಕ್ಕೆ **ವಾಯು** ವೆಂದರ್ಥ ಎಂದರೆ, ವಾಯುಪರ್ಯಾಯನಾಮವಾಗಿದೆ ಶಾಕಪೂಣಿಯ ಮತದಲ್ಲಿ **ಶುನ** ಶಬ್ದವು ಸೂರ್ಯನನ್ನೂ, **ಸೀರ** ಶಬ್ದವು ಇಂದ್ರನನ್ನು ನಿರ್ದೇಶಿಸುವುವು. ಆದರೆ, ಯಾಸ್ಕರು ಮಾತ್ರ ಶುನಾಸೀರ ಶಬ್ದಕ್ಕೆ ಇಂದ್ರನೆಂದೇ ಅರ್ಥಮಾಡಿದ್ದಾರೆ.

[ಬೃಹದ್ದೇವತಾಕಾರರು ನಿರುಕ್ತಕಾರರ ಮತವನ್ನು ತಿಳಿಸುವುದರಲ್ಲಿ ಒಂದು ವಿಶೇಷಾಂಶವನ್ನು ಗಮನಿಸಬೇಕು. **"ವಾಯುಃ ಶುನಃ ಸೂರ್ಯ ಏವಾತ್ರ ಸೀರಃ ಶುನಾಸೀರೌ ವಾಯುಸೂರ್ಯೌ ವದಂತಿ"** ಎಂದು ಹೇಳಿರುವ ತಮ್ಮ ಮತವು ಯಾಸ್ಕರು ನಿರುಕ್ತದಲ್ಲಿ (ನಿ ೯-೪೦) ಹೇಳಿರುವ ಅಭಿಪ್ರಾಯದಂತೆಯೇ ಇದೆ ಆದರೆ, ಶುನಾಸೀರ ಶಬ್ದಕ್ಕೆ ಇಂದ್ರನೆಂದೇ ಯಾಸ್ಕರು ಅರ್ಥಮಾಡಿದ್ದಾರೆಂದು ತಿಳಿಸಿದ್ದಾರೆ. ಪ್ರಾಯಶಃ ಇವರ ಅಭಿಪ್ರಾಯ ವೇನೋ ಹೇಳಲಾಗುವುದಿಲ್ಲ ಯಾಸ್ಕರು ಶಾಕಪೂಣಿಯ ಮತವನ್ನು ಉದಾಹರಿಸಿಲ್ಲ]

ಶುನಾಸೀರೌ ಪಂಚಮ್ಯಾಂ ತು ಸ್ತುತೌ ತೌ ದ್ವೇ ತು ಸೀಮಾಯೈ ಷಷ್ಠೀ ಸಪ್ತಮೀ ಚ।
ಶುನಂ ನಃ ಫಾಲಾಃ ಕೃಷಿಂ ಸ್ತೌತಿ ಪಾದಃ ಶುನಂ ಕೀನಾಶಾಃ ಕೃಷಿಜೀವಾನ್ಮನುಷ್ಯಾನ್ ॥
(ಬೃ ದೇ. ೫-೯)

ಶುನ, ಸೀರ **ಈ** ಇಬ್ಬರು ದೇವತೆಗಳೂ ಋಕ್ಸಂಹಿತೆಯ ೫ ಮತ್ತು ೮ನೇ ಋಕ್ಕುಗಳಲ್ಲಿ ಪ್ರಶಂಸಿತರಾಗಿದ್ದಾರೆ ಆದು ಮತ್ತು ಏಳನೆಯವು **ಸೀತಾ** ನಾಮಕವಾದ ದೇವತೆಯನ್ನುದ್ದೇಶಿಸಿದುದಾಗಿದೆ **'ಶುನಂ ನಃ ಫಾಲಾಃ'** ಎಂಬ

ಪಾದವು ಕೃಷಿಯನ್ನು ಪ್ರಶಂಸಿಸುತ್ತದೆ (Praises Agriculture), ಕೃಷಿಯಿಂದ ಜೀವನವನ್ನು ನಡೆಸುವವರ ಕಲ್ಯಾಣಾಶಂಸೆಯು ಮುಂದಿನ ಭಾಗದಲ್ಲಿ ಉಕ್ತವಾಗಿದೆ.

ಯಾವ **ಶುನ** ಮತ್ತು **ಸೀರ** ದೇವತೆಗಳು ಇಂದ್ರ ಮತ್ತು ವಾಯುವೆಂದಾಗಲಿ, ಅಥವಾ ವಾಯು ಆದಿತ್ಯ ರೆಂದಾಗಲಿ ಮೇಲೆ ಹೇಳಿದೆಯೋ ಅದೇ ದೇವತೆಗಳು ಅಗ್ನಿಯಲ್ಲಿ ಅಂತರ್ಗತರಾಗಿರತಕ್ಕವರು ಎಂದೂ ಸಹ ಹಿಂದೆ ವರ್ಣಿತರಾಗಿದ್ದಾರೆ ಉದಾಹರಣೆಗೆ—

ಯೌ ಚ ದೇವೌ ಶುನಾಸೀರೌ ತೌ ಚಾಗ್ನೀ ಚೈತದಾಶ್ರಯೌ ।

ಶುನ ಮತ್ತು **ಸೀರಾ** ಈ ಇಬ್ಬರೂ ಅಗ್ನಿಯ ರೂಪಗಳೇ ಆಗಿ ಅಗ್ನಿಯಲ್ಲೇ ಅಂತರ್ಗತರಾಗಿದ್ದಾರೆ ಎಂದು ಬೃಹದ್ದೇವತೆಯಲ್ಲಿ ತಿಳಿಸಿದೆ ಈ ರೀತಿಯಲ್ಲಿ ಈ ದೇವತೆಗಳ ರೂಪಸಿಸ್ಕರ್ಷೆಯಿಲ್ಲದಿರುವುದರಿಂದ Max Muller ಎಂಬ ಪಂಡಿತನು ಈ ಸನ್ನಿವೇಶದಲ್ಲಿ ಈ ರೀತಿ ತಿಳಿಸಿದ್ದಾನೆ —

In Rig-Veda VII· 70-1, a horse is called **ಶುನಪೃಷ್ಠೋ ಅಶ್ವಃ**, meaninge evidently a horse having a plump back. But there are compounds in which **ಶುನ** would seem to have the meaning of a dog In 8-46-28, **ಶುನ-ಇಷಿತಂ** most likely means carried by dogs and in **ಶುನಾಸೀರೌ** we have a name of a couple of deities, the former of which is said to be **ಶುನ**, the latter, **ಸೀರ**· Yaska recognises in this **ಶುನ** a name of Vayu in **ಸೀರ** a name of the Sun Another anthority, **ಶೌನಕ** declares **ಶುನ** to be a name of Indra, **ಸೀರ**, a name of the Wind Asvalayana (**ಶ್ರೌ** ಸೂ. ೨-೨೦) declares that **ಶುನಾಸೀರೌ** may be meant for **ವಾಯು** or for **ಇಂದ್ರ** and **ಸೂರ್ಯ** together This shows, at all events, that the meaning of the two names was doubtful, even among early native theologians"

[Science of Language. II p 525]

ಋ. ಸಂ. ೭-೭೦-೧ರಲ್ಲಿ **ಶುನಪೃಷ್ಠಃ ಅಶ್ವಃ** ಎಂಬಲ್ಲಿ **ಶುನ** ಶಬ್ದಕ್ಕೆ ಪುಷ್ಟವಾದ ಎಂದರ್ಥ **ಶುನ** ಶಬ್ದಕ್ಕೆ **ಶ್ವಾ** ಎಂಬರ್ಥವಿರುವ ಪ್ರಯೋಗವೂ ಉಂಟು ಋ. ಸಂ ೮-೪೬-೨೮ರಲ್ಲಿ **ಶುನ ಇಷಿತಂ** ಎಂಬ ಪದಗಳಿಗ ಬಹುಶಃ ಶ್ವಾನದಿಂದ ಅಪಹರಿಸಲ್ಪಟ್ಟದು ಎಂದೇ ಅರ್ಥವಿರಬೇಕು. **(ಆಶ್ವೇಷಿತಂ, ರಜೇಷಿತಂ, ಶುನೇಷಿತಂ ; ಅಶ್ವ, ಗರ್ದಭ, ಶ್ವಾ** ಎಂಬರ್ಥವು. ಇಲ್ಲಿ **ಶುನ** ಶಬ್ದಕ್ಕೆ ಸಾಯಣರು ಅರ್ಥವನ್ನು ಹೇಳಿಲ್ಲ ಆದರೂ ಸಂದರ್ಭವು ಮೇಲಿನ ಅರ್ಥವನ್ನೇ ಸೂಚಿಸುತ್ತದೆ). **ಶುನಾಸೀರಾ** ಎಂಬಲ್ಲಿ ಯಾಸ್ಕರು ಒಂದು ವಿಧವಾಗಿಯೂ, ಶೌನಕರು ಇನ್ನೊಂದು ವಿಧವಾಗಿಯೂ ಅರ್ಥವಾಡುತ್ತಾರೆ. (ಹೇಗೆಂಬುದನ್ನು ಮೇಲೆ ತಿಳಿಸಿದೆ) ಆಶ್ವಲಾಯನರು (ಶ್ರೌ. ಸೂ ೨ ೨೦) **ಶುನಾಸೀರಾ** ಎಂಬುದಕ್ಕೆ ವಾಯುವೆಂದಾಗಲಿ, ಇಂದ್ರನೆಂದಾಗಲಿ, ಇಂದ್ರಾಸೂರ್ಯ ಎಂಬ ಇಬ್ಬರನ್ನೂ ಸೇರಿಸಿ ಯಾಗಲಿ ನಿರ್ದಿಷ್ಟವಾಗಬಹುದೆಂದು ವೈಕಲ್ಪಿಕವಾದ ಅರ್ಥಗಳನ್ನು ಹೇಳಿದ್ದಾರೆ. ಈ ಸನ್ನಿವೇಶಗಳಿಂದ,

ಪ್ರಾಚೀನರೂ, ವೈದಿಕ ಸಂಪ್ರದಾಯವನ್ನನುಸರಿಸುತ್ತಿದ್ದವರೂ ಆದ ದೊಡ್ಡ ಪಂಡಿತರುಗಳಿಗೂ ಈ ಪದಗಳ ನಿಷ್ಕೃಷ್ಟವಾದ ಅರ್ಥವು ತಿಳಿದಿರಲಿಲ್ಲವೆಂದು ಹೇಳಬಹುದು ಎಂದು ತನ್ನ ಗ್ರಂಥದಲ್ಲಿ ತಿಳಿಸಿದ್ದಾನೆ.

[ಸ್ತ್ರೀಲಿಂಗವಾಚಕವಾದ **ಸೀರಾ** ಶಬ್ದವು ೧೦೧೭೪-೯, ೪-೧೯-೪, ೧೦-೪೯-೯, ೧೦-೯೭-೭, ೧೦-೧೦೧-೩, ೪ ಈ ಮಂತ್ರಗಳಲ್ಲಿ ಪ್ರಯುಕ್ತವಾಗಿದೆ ಅಲ್ಲೆಲ್ಲಾ ನದಿಗಳೆಂದೇ ಹೆಸರು. ಕೆಲವೆಡೆಗಳಲ್ಲಿ ಏಕವಚನಾಂತವಾಗಿಯೂ, ಇನ್ನು ಕೆಲವೆಡೆ ಬಹುವಚನಾಂತವಾಗಿಯೂ ಪ್ರಯೋಗಿಸಲ್ಪಟ್ಟಿದೆ ಪುಲ್ಲಿಂಗದಲ್ಲಿ ಪ್ರಯೋಗಿಸಲ್ಪಟ್ಟಾಗ ಕೃಷಿಸಾಧನನೆಂದರ್ಥವಾಗುತ್ತದೆ (ನೇಗಿಲು) ಇದನ್ನು ಸಂದರ್ಭಾನುಸಾರವಾಗಿ ವಿವರಿಸಲಾಗುತ್ತದೆ]

ತೈತ್ತಿರೀಯಸಂಹಿತೆಯಲ್ಲಿ ಶುನಾಸೀರೀಯವಾದ ಹವಿಸ್ಸನ್ನು ಅರ್ಪಿಸುವ ಕಾಲದಲ್ಲಿ **"ಇಂದ್ರಾಯ ಶುನಾಸೀರಾಯ"** ಎಂಬ ಮಂತ್ರದಲ್ಲಿ ಇಂದ್ರನು ಜೇರೆ ಎಂಬುದು ನಿಷ್ಕೃಷ್ಟರಾಗಿ ತಿಳಿಸಲ್ಪಟ್ಟಿದೆ. ಇದೇ ಸನ್ನಿವೇಶಕ್ಕೆ ಭಾಷ್ಯಕಾರರು ಅರ್ಥವನ್ನು ವಿವರಿಸುವಾಗ ಈ ರೀತಿ ತಿಳಿಸಿದ್ದಾರೆ

ಶುನೋ ವಾಯುಃ ಸೀರ ಆದಿತ್ಯಃ । ತದ್ವಾನಿಂದ್ರ ಇಹೋಚ್ಯತೇ ಅಭೇದಾತ್ಮತ್ವಾತ್ । ಮತ್ವರ್ಥೀಯೋ ವಾ ಅತ್ರ ಲುಪ್ಯತೇ ॥(ತೈ ಸಂ. ಭಾ ೧-೮-೭-೧)

ಇಂದ್ರಾಯ ಶುನಾಸೀರಾಯ ಎಂಬುದಕ್ಕೆ ಶುನಾಸೀರರೊಡಗೂಡಿದ ಇಂದ್ರನನ್ನು ಉದ್ದೇಶಿಸಿ ಎಂದರ್ಥ. ಶುನಾಸೀರಾಯ ಎಂದರೆ ಶುನಾಸೀರವತೀ (ಇಂದ್ರಾಯ) ಎಂಬಲ್ಲಿ ಮತ್ವರ್ಥೀಯವಾದ ಪ್ರತ್ಯಯವು ಲುಪ್ತವಾಗಿದೆಯೆಂದು ವಿವರಿಸಿ ವಾಯ್ವಾದಿತ್ಯರೊಡಗೂಡಿದ ಇಂದ್ರನಿಗೆ ಎಂದು ತಾತ್ಪರ್ಯವೆಂದು ತಿಳಿಸಿದೆ ಆದುದರಿಂದ ಇಂದ್ರನು ಶುನಾಸೀರರಿಗಿಂತಲೂ ಭಿನ್ನನು ಎಂದು ಸ್ಪಷ್ಟವಾಯಿತು Keith ಎಂಬುವನು ಇದೇ ಭಾಗವನ್ನು ಪರಿವರ್ತಿಸುವ ಕಾಲದಲ್ಲಿ **ಶುನಾಸೀರ** ಎಂಬಲ್ಲಿ **ಶುನ** ಶಬ್ದಕ್ಕೆ ಗುಳ್ಳೆಂದೂ, **ಸೀರ** ಶಬ್ದಕ್ಕೆ ನೇಗಿಲು ಎಂದೂ ಅರ್ಥವೂ ಸಹ ಸಾಧ್ಯವಿರಬಹುದೆಂದು ತಿಳಿಸಿದ್ದಾನೆ. (ಇದರ ವಿವರಣೆಯನ್ನು Vedic Mythology ಎಂಬ ಗ್ರಂಥದಲ್ಲಿ Macdonell ಎಂಬ ಪಂಡಿತನು ಸೂಕ್ಷ್ಮವಾಗಿ ತಿಳಿಸಿದ್ದಾನೆ. ಅದರ ಸಾರಾಂಶವೂ ಸಹ ಮೇಲಿನ ವಿವರಣೆಗಳಂತೆಯೇ ಇರುತ್ತದೆ)

ಶುನಾಸೀರ ಶಬ್ದಕ್ಕೆ ಯಾವ ಅರ್ಥವಿದ್ದರೂ ಶುನಾಸೀರೀಯ ಹವಿರ್ಧಾನವು ಅತ್ಯಂತ ಪ್ರಸಿದ್ಧವಾದುದು ಮತ್ತು ಅದರ ಪ್ರಶಂಸೆಯನ್ನು ಅನೇಕ ಕಡೆಗಳಲ್ಲಿ ಹೇಳಿದೆ. ಶತಪಥಬ್ರಾಹ್ಮಣದಲ್ಲಿ ಇದೇ ಶುನಾಸೀರಿಯ ಹವಿರ್ಧಾನದ ಮಹತ್ವವನ್ನು ತಿಳಿಸಿ **ಶುನ** ಮತ್ತು **ಸೀರ** ಎಂಬ ಪದಗಳಿಗೆ ಅಲ್ಲಿಯ ನೈಶಿಷ್ಟ್ಯವನ್ನು ತಿಳಿಸುವ ಬೇರೆ ಅರ್ಥವನ್ನೂ ಹೇಳಿದೆ

ಅಥ ಯಸ್ಮಾಚ್ಛುನಾಸೀರ್ಯೇಣ ಯಜೇತ । ಯೋ ವೈ ದೇವಾನಾಗ್ಂ ಶ್ರೀರಾಸೀತ್ತಾಸಕಮೇಧ್ಯೈರೀಜಾನಾನಾಂ ವಿಜಿಗ್ಯಾನಾನಾಂ ತಚ್ಛುನಮಥ ಯಃ ಸಂವತ್ಸರಸ್ಯ ಪ್ರಜಿತಸ್ಯ ರಸ ಆಸೀತ್ತತ್ಸೀರಗ್ಂ ಸಾ ಯಾ ಚೈವ ದೇವಾನಾಗ್ಂ ಶ್ರೀರಾಸೀತ್ತಾಸಕಮೇಧ್ಯೈರೀಜಾನಾನಾಂ ವಿಜಿಗ್ಯಾನಾನಾಂ ಯ ಉ ಚ ಸಂವತ್ಸರಸ್ಯ ಪ್ರಜಿತಸ್ಯ ರಸ ಆಸೀತ್ತಮೇವೈತದುಭಯಂ ಪರಿಗೃಹ್ಯಾತ್ಮನ್ಕುರುತೇ ತಸ್ಮಾಚ್ಛುನಾಸೀರ್ಯೇಣ ಯಜತೇ ॥

(ಶ. ಬ್ರಾ ೨-೬-೩-೨)

[ಶುನಾಸೀರೀಯವು ಚಾತುರ್ಮಾಸ್ಯಾಂಗವು. ಈ ಚಾತುರ್ಮಾಸ್ಯಯಜ್ಞವನ್ನಾಚರಿಸಕ್ಕವನು ಪರಿಪೂರ್ಣತೆಯನ್ನು ಪಡೆಯುತ್ತಾನೆ ಇತ್ಯಾದಿಯಾಗಿ ಪ್ರಶಂಸಿಸಿ ನಂತರ ತದಂಗವಾದ ಶುನಾಸೀರೀಯ ವಿವರಣೆ ಮತ್ತು ಪ್ರಶಂಸೆ ಯಿರುತ್ತದೆ]

ಈ ಶುನಾಸೀರೀಯ ಹವಿರ್ಧಾನದ ನಿಮಿತ್ತವೇನು? ಇದರ ಆವಶ್ಯಕತೆಯೇನು? ಎಂದು ಪ್ರಶ್ನಿಸಿದರೆ ಅದಕ್ಕೆ ಸಮಾಧಾನವೇ ಈ ಶುನಾಸೀರೀಯದ ವಿವರಣೆ **ಸಾಕಮೇಧ** ಯಾಗದ ನಿರ್ವಹಣದಿಂದ ದೇವತೆಗಳು ಯಾವ ಅಭ್ಯುದಯವನ್ನು ಪಡೆದರೋ ಮತ್ತು ಯಾವ ಜಯಶ್ರೀಯನ್ನು ಹೊಂದಿದರೋ ಆ ಅಭ್ಯುದಯ ಮತ್ತು ಜಯರೂಪ ವಾದುದೇ ಈ ಶುನವು ಚಾತುರ್ಮಾಸ್ಯಾತ್ಮಕವಾದ ಯಾಗದಿಂದ ಯಾವ ಸಾಂವತ್ಸರಿಕವಾದ ಪರಿಪೂರ್ಣತೆ ಯುಂಟೋ, ಯಾವ ಪರಿಪೂರ್ಣತೆಯ ವಿಷಯವನ್ನು ಮೇಲೆ ತಿಳಿಸಿದೆಯೋ ಆ ಪರಿಪೂರ್ಣತೆಯ ರಸವೇ ಸೀರವು. ಯಾವ ಯಜಮಾನನು ಈ ಶುನಾಸೀರೀಯಾತ್ಮಕವಾದ ಕರ್ಮವನ್ನಾಚರಿಸುವನೋ ಆವನಿಗೆ ದೇವತೆಗಳಿಂದ ಲಬ್ಧವಾದ ಅಭ್ಯುದಯವೂ, ಅವರಿಂದಲೇ ಹೊಂದಲ್ಪಟ್ಟ ಸಾಂವತ್ಸರಿಕವಾದ ಪರಿಪೂರ್ಣತೆಯೂ ಲಭಿಸುತ್ತದೆ ಅದೇ ಶುನಾಸೀರೀಯದ ಆವಶ್ಯಕತೆಯು.

ಈ ಕರ್ಮದ ಕ್ರಮವೇನೆಂದರೆ —

ತಸ್ಯಾವೃತ್ । ನೋಪಕೀರಂತ್ಯುತ್ತರವೇದಿಂ ನ ಗೃಹ್ಣಂತಿ ಪೃಷದಾಜ್ಯಂ ನ ಮುಂಥಂತ್ಯಗ್ನಿಂ ಪಂಚ ಪ್ರಯಾಜಾ ಭವಂತಿ ತ್ರಯೋಽನುಯಾಜಾ ಏಕಗ್ಂ ಸಮಿಷ್ಟಯಜುಃ ॥

(ಶ ಬ್ರಾ ೨-೬-೩-೩)

ಇದರ ನಿರ್ಮಾಣಕ್ರಮವು ಕೊಂಚ ವ್ಯತ್ಯಸ್ತವಾಗುತ್ತದೆ ಇದರಲ್ಲಿ ಉತ್ತರವೇದಿಯ ನಿರ್ಮಾಣವಿಲ್ಲ ಪೃಷದಾಜ್ಯದ ಆವಶ್ಯಕತೆಯಿಲ್ಲ ಅಗ್ನಿಮಥನವಿಲ್ಲ ಐದು ಪ್ರಯಾಜಗಳೂ, ಮೂರುಅನೂಯಾಜಗಳೂ ಒಂದು ಸಮಿಷ್ಟಯಜುವೂ ವಿಹಿತವಾಗಿದೆ.

ಅಥೈತಾನ್ಯೇವ ಪಂಚ ಹವೀಗ್ಂಷಿ ಭವಂತಿ । ಏತೈರ್ವೈ ಹವಿರ್ಭಿಃ ಪ್ರಜಾಪತಿಃ ಪ್ರಜಾ ಅಸೃಜತೈತೈರುಭಯತೋ ವರುಣಪಾಶಾತ್ಪ್ರಜಾಃ ಪ್ರಾಮುಂಚದೇತೈರ್ವೈ ದೇವಾ ವೃತ್ರಮಘ್ನನ್ನೇತೈರ್ವೈವ ವ್ಯಜಯಂತ ಯೇಯಮೇಷಾಂ ವಿಜಿತಿಸ್ತಾಂ ತಥೋ ಏವೈಷ ಏತೈರ್ವಾ ಚೈವ ದೇವಾನಾಗ್ಂ ಶ್ರೀರಾಸೀತ್ತಾಸ್ಮಾಕಮೇಧೈರೀಜಾನಾನಾಂ ವಿಜಿಗ್ಯಾನಾನಾಂ ಯ ಉ ಚ ಸಂವತ್ಸರಸ್ಯ ಪ್ರಜಿತಸ್ಯ ರಸ ಆಸೀತ್ತಮೇವೈತದುಭಯಂ ಪರಿಗೃಹ್ಯಾತ್ಮನ್ ಕುರುತೇ ತಸ್ಮಾದ್ವಾ ಏತಾನಿ ಪಂಚ ಹವೀಗ್ಂಷಿ ಭವತಿ ॥

(೨-೬-೩-೪)

ಶುನಾಸೀರೀಯ ಸಂಬಂಧವಾಗಿ ಮೇಲೆ ತಿಳಿಸಿದಂತೆ ಪಂಚ ಹವಿಸ್ಸುಗಳು ಇರುತ್ತವೆ ಈ ಹವಿಸ್ಸುಗಳ ಪ್ರಭಾವ ದಿಂದಲೇ ಪ್ರಜಾಪತಿಯು ಪ್ರಜೆಗಳನ್ನೆಲ್ಲಾ ಸೃಷ್ಟಿಸಿದನು ಇವುಗಳ ಸಹಾಯದಿಂದಲೇ ವರುಣಪಾಶದಿಂದ ಎರಡು ಕಡೆಗಳಲ್ಲೂ ಬಂಧಿತವಾಗಿದ್ದ ಪ್ರಜೆಗಳನ್ನೆಲ್ಲಾ ಬಿಡಿಸಿದನು ಇವುಗಳ ಸಹಾಯದಿಂದಲೇ ದೇವತೆಗಳೂ ಸಹ ವೃತ್ರಾಸುರನ ಮೇಲೆ ಹೋರಾಡಿ ಜಯವನ್ನು ಗಳಿಸಿ ಸಂಪತ್ತನ್ನೂ ಹೊಂದಿದರು. ಆದುದರಿಂದ ಅದೇ ಜಯವೂ,

ಸಾಕಮೇಧದಿಂದ ದೇವತೆಗಳಿಗೆ ಲಭಿಸಿದ ಅದೇ ಸಂಪತ್ತೂ ಲಭಿಸಬೇಕೆಂದು ಯಾವ ಯಜಮಾನನು ಆಶಿಸುವನೊ ಅವನು ಇವುಗಳ ಸಹಾಯದಿಂದ ಅವೆಲ್ಲವನ್ನೂ ಹೊಂದುವನು. ಆ ನಿಮಿತ್ತವಾಗಿಯೇ, ಪಂಚ ಹವಿಸ್ಸುಗಳು ಯಥಾವಿಧಿಯಾಗಿ ಅರ್ಪಿತವಾಗಬೇಕು

ಅಥ ಶುನಾಸೀರ್ಯೋ ದ್ವಾದಶಕಪಾಲಃ ಪುರೋಡಾಶೋ ಭವತಿ । ಸ ಬಂಧುಃ ಶುನಾಸೀರ್ಯಸ್ಯೈ ಯಂ ಪೂರ್ವಮವೋಚಾಮ ॥ (ಶ. ಬ್ರಾ. ೨-೬-೩-೫)

ಅನಂತರ ದ್ವಾದಶಕಪಾಲಾತ್ಮಕವಾದ ಶುನಾಸೀರೀಯ ಪುರೋಡಾಶದ ಅರ್ಪಣೆಯು. ಈ ಪುರೋಡಾಶದ ಅರ್ಪಣೆಯ ಫಲವು ಮೇಲೆ ವಿವೃತವಾದಂತಿರುತ್ತದೆ.

ಅಥ ವಾಯವ್ಯಂ ಪಯೋ ಭವತಿ । ಪಯೋ ಹ ವೈ ಪ್ರಜಾ ಜಾತಾ ಅಭಿಸಂಜಾನತೇ ವಿಜಿಗ್ಯಾನಂ ಮಾ ಪ್ರಜಾಃ ಶ್ರಿಯೈ ಯಶಸೇಽನ್ನಾದ್ಯಾಯಾಭಿಸಂಜಾನಾನಾಂತಾ ಇ ತಸ್ಮಾತ್ಪಯೋ ಭವತಿ ॥ (ಶ. ಬ್ರಾ. ೨-೬-೩-೬)

ಅನಂತರ ವಾಯುವನ್ನುದ್ದೇಶಿಸಿ ಪಯಸ್ಸನ್ನರ್ಪಿಸತಕ್ಕದ್ದು. ಪ್ರಜೆಗಳು ಉತ್ಪನ್ನವಾದೊಡನೆಯೇ, ಅವರಿಗೆ ಪಯಸ್ಸೆ ಆಹಾರವು. "ನಾನು ಈ ಹವಿರಾದಿಗಳನ್ನು ಅರ್ಪಿಸುವುದರಿಂದ ಜಯವನ್ನೂ ಅಭ್ಯುದಯವನ್ನೂ ಪಡೆದಿರುವುದರಿಂ ಸಕಲ ಪ್ರಜೆಗಳೂ ನನ್ನಲ್ಲಿ ಅನುರಾಗವುಳ್ಳವರಾಗಿ ನನ್ನನ್ನೇ ಅನುಸರಿಸಲಿ" ಎಂದು ಇದನ್ನು ಅರ್ಪಿಸುವ ಯಜಮಾನನು ಶ್ರದ್ಧೆಯಿಂದ ಪಯಸ್ಸನ್ನು ಅರ್ಪಿಸುತ್ತಾನೆ

ಅಥ ಸೌರ್ಯ ಏಕಕಪಾಲಃ ಪುರೋಡಾಶೋ ಭವತಿ । ಏಷ ವೈ ಸೂರ್ಯೋ ಯ ಏಷ ತಪತ್ಯೇ ವಾ ಇದಗ್ಂ ಸರ್ವಮಭಿಗೋಪಾಯತಿ ಸಾಧುನಾ ತ್ವದಸಾಧುನಾ ತ್ವದೇಷ ಇದಗ್ಂ ಸರ್ವ ವಿದಧಾತಿ ಸಾಧೌ ತ್ವದಸಾಧೌ ತ್ವದೇಷ ಮಾ ವಿಜಿಗ್ಯಾನಂ ಪ್ರೀತಃ ಸಾಧುನಾ ತ್ವದಭಿಗೋಪಾಯತ್ಸಾಧೌ ತ್ವದ್ವಿದಧದಿತಿ ತಸ್ಮಾತ್ಸೌರ್ಯ ಏಕಕಪಾಲಃ ಪುರೋಡಾಶೋ ಭವತಿ ॥

(ಶ. ಬ್ರಾ ೨-೬-೩-೮)

ಅನಂತರ ಸೂರ್ಯೋದ್ದಿಷ್ಟವಾದುದೂ, ಏಕಕಪಾಲಾತ್ಮಕವಾದುದೂ ಆದ ಪುರೋಡಾಶದ ಅರ್ಪಣೆಯು ಅಂತರಿಕ್ಷದ ಪ್ರಕಾಶಿಸುವ ಸೂರ್ಯನೇ ಲೋಕದ ಪ್ರಭುವು. ಒಂದುಸಲ ಸದ್ರಾಜನ ಮೂಲಕವೂ, ಇನ್ನೊಂದು ಅಸಾಧುರಾಜ ಮೂಲಕವೂ ಈ ಲೋಕವನ್ನು ಆ ಸೂರ್ಯನೇ ರಕ್ಷಿಸುತ್ತಾನೆ. ಸಕಲ ಭೂತಗಳಿಗೂ ಅವುಗಳ ಯೋಗ್ಯತೆಗೆ ತಕ್ಕ ಸ್ಥಾನಗಳನ್ನು ಕಲ್ಪಿಸುತ್ತಾನೆ ಈ ಹವಿಸ್ಸನ್ನು ಅರ್ಪಿಸತಕ್ಕವನು "ನನಗೆ ಈ ಸೂರ್ಯನ ಅನುಗ್ರಹದಿಂದ ಸಕಲ ಜಯವೂ ಸಂಪತ್ತೂ ಉಂಟಾಗಲಿ" ಎಂದು ಪ್ರಾರ್ಥಿಸುತ್ತಾನೆ. ಆದುದರಿಂದಲೇ ಈ ಪುರೋಡಾಶದ ಅರ್ಪಣೆ ವಿಹಿತವಾಗಿದೆ.

ಸ ಯಮೈವ ಸಾಕಮೇಧೈರ್ಯಜತೇ । ತಚ್ಛುನಾಸೀರ್ಯೇಣ ಯಜೇತ । ಯದ್ವೈ ಶ್ರಿಃ ಸಂವತ್ಸರಸ್ಯ ಯಜತೇ ತೇನೈವ ಸಂವತ್ಸರಮಾಪ್ನೋತಿ ತಸ್ಮಾದ್ಯಯೈವ ಕದಾ ಚೈತೇನ ಯಜೇತ ॥

(ಶ. ಬ್ರಾ. ೨-೬-೩-೧೦)

ಸಾಕಮೇಧರೂಪವಾದ ಹವಿಸ್ಸನ್ನರ್ಪಿಸುವ ಕಾಲದಲ್ಲೇ ಶುನಾಸೀರೀಯವಾದ ಹವಿಸ್ಸನ್ನೂ ಅರ್ಪಿಸಬಹುದು. ಋತ್ವಾತ್ಮಕವಾದ ಯಾಗವನ್ನು ಸಂವತ್ಸರದಲ್ಲಿ ಮೂರು ಸಲ ಅರ್ಪಿಸುವುದರಿಂದ ಸಂವತ್ಸರದಂತೆ ಪರಿಪೂರ್ಣತೆಯನ್ನು ಹೊಂದುವುದರಿಂದ ಶುನಾಸೀರೀಯವನ್ನು ಯಾವಕಾಲದಲ್ಲಾದರೂ ಅರ್ಪಿಸಬಹುದು.

ಇತ್ಯಾದಿಯಾಗಿ ಇದರ ಪ್ರಭಾವವನ್ನು ವರ್ಣಿಸಿ, ನಂತರ ಈ ಕರ್ಮದ ವಿವರಣೆಯನ್ನು ಮುಂದೆ ತಿಳಿಸಿದೆ.

॥ ಸಂಹಿತಾಪಾಠಃ ॥

ಶುನಾಸೀರಾವಿಮಾಂ ವಾಚಂ ಜುಷೇಥಾಂ ಯದ್ದಿವಿ ಚಕ್ರಥುಃ ಪಯಃ ।
ತೇನೇಮಾಮುಪ ಸಿಂಚತಂ ॥ ೫ ॥

॥ ಪದಪಾಠಃ ॥

ಶುನಾಸೀರೌ । ಇಮಾಂ । ವಾಚಂ । ಜುಷೇಥಾಂ । ಯತ್ । ದಿವಿ । ಚಕ್ರಥುಃ । ಪಯಃ ।
ತೇನ । ಇಮಾಂ । ಉಪ । ಸಿಂಚತಂ ॥ ೫ ॥

॥ ಸಾಯಣಭಾಷ್ಯಂ ॥

ಶುನಾಸೀರೀಯೇ ಪರ್ವಣಿ ಶುನಾಸೀರದೇವತಾಕಸ್ಯ ಹವಿಷೋಽನುವಾಕ್ಯೈಷಾಂತ್ಯಾ ಯುಕ್ ಯೋಜ್ಯಾ । ಸೂತ್ರಿತಂ ಚ । ಶುನಾಸೀರಾವಿಮಾಂ ವಾಚಂ ಜುಷೇಥಾಂ ಶುನಂ ನಃ ಫಾಲಾಃ । ಆ ೨-೨೦ । ಇತಿ ॥

ದ್ಯುದೇವಃ ಶುನದೇವತೇತಿ ಶೌನಕಃ । ಆತಃ ಶುನ ಇಂದ್ರಃ ಸೀರೋ ವಾಯುಃ । ಶುನೋ ವಾಯುಃ ಶು ಏತ್ಯಂತರಿಕ್ಷೇ ಸೀರ ಆದಿತ್ಯಃ ಸರಣಾತ್ । ನಿ. ೯-೪೦ । ಇತಿ ಯಾಸ್ಕಃ । ಹೇ ಶುನಾಸೀರೌ ತೌ ಯುವಾಮಿಮಾಂ ವಕ್ಷ್ಯಮಾಣಾಂ ಮದೀಯಾಂ ವಾಚಂ ಜುಷೇಥಾಂ । ಯತ್ಪಯೋ ದಿವಿ ಚಕ್ರಥುಃ ತೇನೇಮಾಂ ಭೂಮಿಮುಪ ಸಿಂಚತಂ ॥

॥ ಪ್ರತಿಪದಾರ್ಥ ॥

ಶುನಾಸೀರೌ—ಎಲೈ ಶುನಾಸೀರದೇವತೆಗಳೇ । **ಇಮಾಂ**—ಈಗ ನಾನು ಪರಿಸುತ್ತಿರುವ । **ವಾಚಂ**—ಸ್ತುತಿರೂಪವಾದ ವಾಕ್ಯನ್ನು । **ಜುಷೇಥಾಂ**—ಸೇವಿಸಿರಿ । **ದಿವಿ**—ದ್ಯುಲೋಕದಲ್ಲಿ । **ಯತ್ ಪಯಃ**—ಯಾವ ಉದಕವನ್ನು । **ಚಕ್ರಥುಃ**—ನಿರ್ಮಿಸಿದಿರೋ । **ತೇನ**—ಅದರಿಂದಲೇ । **ಇಮಾಂ**—ಈ ಪೃಥ್ವಿಯನ್ನು । **ಉಪ ಸಿಂಚತಂ**—ತೋಯುವಂತೆ ಮಾಡಿರಿ

॥ ಭಾವಾರ್ಥ ॥

ಎಲೈ ಶುನಾಸೀರದೇವತೆಗಳೇ, ಈಗ ನಾನು ಪರಿಸುತ್ತಿರುವ ಸ್ತುತಿರೂಪವಾದ ವಾಕ್ಯನ್ನು ಸೇವಿಸಿರಿ. ದ್ಯುಲೋಕದಲ್ಲಿ ಯಾವ ಉದಕವನ್ನು ನಿರ್ಮಿಸಿದಿರೋ ಆದರಿಂದಲೇ ಈ ಪೃಥ್ವಿಯನ್ನೂ ತೋಯುವಂತೆ ಮಾಡಿರಿ

English Translation.

Suna and Sira be pleased by this our praise, and consequently sprinkle this (earth) with the water which you have created in heaven.

॥ ಸಂಹಿತಾಪಾಠಃ ॥

ಅರ್ವಾಚೀ ಸುಭಗೇ ಭವ ಸೀತೇ ವಂದಾಮಹೇ ತ್ವಾ ।

ಯಥಾ ನಃ ಸುಭಗಾಸಸಿ ಯಥಾ ನಃ ಸುಫಲಾಸಸಿ ॥ ೬ ॥

॥ ಪದಪಾಠಃ ॥

ಅರ್ವಾಚೀ । ಸುಭಗೇ । ಭವ । ಸೀತೇ । ವಂದಾಮಹೇ । ತ್ವಾ ।

ಯಥಾ । ನಃ । ಸುಭಗಾ । ಆಸಸಿ । ಯಥಾ । ನಃ । ಸುಫಲಾ । ಆಸಸಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ಸುಭಗೇ ಸೀತೇ ತ್ವಮರ್ವಾಚ್ಯರ್ವಾಗಂಚನಾ ಭವ । ತ್ವಾ ತ್ವಾಂ ವಂದಾಮಹೇ । ಸ್ತುವೀಮಹಿ । ಯಥಾ ನಃ ಸುಭಗಾಸಸಿ । ಶೋಭನಧನಾ ಭವಸಿ । ಯಥಾ ನಃ ಸುಫಲಾಸಸಿ ತಥಾ ವಂದಾಮಹೇ ॥

॥ ಪ್ರತಿಪದಾರ್ಥ ॥

ಸುಭಗೇ—ಮಂಗಳಾತ್ಮಳಾದ । **ಸೀತೇ**—ಎಲೈ ಸೀತೆಯೇ । **ಅರ್ವಾಚೀ**—ನಮಗಭಿಮುಖಳಾಗಿ । **ಭವ**—ಇರು । **ಯಥಾ**—ಯಾವ ರೀತಿಯಲ್ಲಿ । **ನಃ**—ನಮ್ಮ ವಿಷಯದಲ್ಲಿ । **ಸುಭಗಾಸಸಿ**—ಶೋಭನಾತ್ಮಕವಾದ ಧನವುಳ್ಳವಳಾಗುತ್ತೀಯೆ । **ಯಥಾ**—ಯಾವ ರೀರಿಯಲ್ಲಿ । **ನಃ**—ನಮಗೆ । **ಸುಫಲಾಸಸಿ**—ಉತ್ತಮವಾದ ಫಲಗಳುಳ್ಳವಳಾಗುವೆಯೋ (ಆ ರೀತಿಯಲ್ಲಿ) । **ತ್ವಾ**—ನಿನ್ನನ್ನು । **ವಂದಾಮಹೇ**—ಪೂಜಿಸುತ್ತೇವೆ.

॥ ಭಾವಾರ್ಥ ॥

ಮಂಗಳಾತ್ಮಳಾದ ಎಲೈ ಸೀತೆಯೇ, ಸೀನು ನಮಗಭಿಮುಖಳಾಗಿರು. ಯಾವ ರೀತಿ ನಮಗೆ ಶೋಭನಾತ್ಮಕವಾದ ಧನದಾತಳಾಗುತ್ತೀಯೋ, ಯಾವ ರೀತಿ ನಮಗೆ ಉತ್ತಮವಾದ ಫಲದಾತಳಾಗುವೆಯೋ ಆದೇ ರೀತಿಯಲ್ಲಿ ನಾವು ನಿನ್ನನ್ನು ಪೂಜಿಸುತ್ತೇವೆ.

English Translation.

Auspicious Sita, be present, we glorify you: that you may be propitious to us, that you may yield us abundant fruit.

‖ ವಿಶೇಷವಿಷಯಗಳು ‖

ಸೀತಾ—ಈ ಸೂಕ್ತದ ೬, ೭, ೮ನೇ ಋಕ್ಕುಗಳಿಗೆ ಸೀತಾ ಎಂಬುದು ದೇವತೆಯು. **ಶುನಾಸೀರ** ಎಂಬ ಪದಗಳಿಗೆ:ಯಥೋಚಿತವಾಗಿ ನೇಗಿಲು ಮತ್ತು ಗುಳ ಎಂದರ್ಥಮಾಡಿದರೆ, **ಸೀತಾ** ಶಬ್ದಕ್ಕೆ ನೇಗಿಲಿನಿಂದ ಉತ್ತ ಮಾರ್ಗ ಎಂದರ್ಥಮಾಡಬಹುದು **(ಸೀತಾ ಲಾಂಗಲಪದ್ಧತಿಃ)**

ಸೀತಾ ಪದವು ನಿಘಂಟುವಿನಲ್ಲಾಗಲಿ, ನಿರುಕ್ತದಲ್ಲಾಗಲಿ ವಿವೃತವಾಗಿಲ್ಲ ಬೃಹದ್ದೇವತಾಕಾರರು **ಸೀತೆ**ಯು ಪ್ರತ್ಯೇಕವಾದ ದೇವತಾವಿಶೇಷವೆಂದು ನಿರ್ದೇಶಿಸಿ ಇಂದ್ರಲೋಕಾಂತರ್ಗತವಾದ ಸ್ತ್ರೀದೇವತೆಗಳಲ್ಲೊಬ್ಬಳೆಂದು ತಿಳಿಸಿದ್ದಾರೆ.

ಪೃಥಿವ್ಯನುಮತಿರ್ಧೇನುಃ ಸೀತಾ ಲಾಕ್ಷಾ ತಥೈವ ಗೌಃ ।
ಗೌರೀ ಚ ರೋದಸೀ ಚೈವ ಇಂದ್ರಾಣ್ಯಾಶ್ಚೈವ ವೈ ಪತಿಃ ॥

(ಬೃ ದೇ ೧–೨೯)

ಪೃಥ್ವೀ, ಅನುಮತೀ, ಧೇನು, ಸೀತಾ, ಲಾಕ್ಷಾ, ಗೌಃ, ಗೌರೀ, ರೋದಸೀ ಇವರೆಲ್ಲರೂ ಇಂದ್ರಲೋಕಾಂತರ್ಗತವಾದ ದೇವತೆಗಳು ಸಾಯಣರು ೪-೫೭-೬ನೇ ಮಂತ್ರದಲ್ಲಿ **ಸೀತೇ** ಎಂಬ ಪದಕ್ಕೆ ಎಲೈ ದೇವಿಯೇ, ಎಂದರ್ಥನೀಡಿ ಅನಂತರ ೭ನೇ ಮಂತ್ರದ **ಸೀತಾಂ** ಎಂಬ ಪದಕ್ಕೆ **ಸೀತಾಧಾರಕಾಷ್ಮಂ** ಎಂದರ್ಥಮಾಡಿದ್ದಾರೆ. ಪ್ರಕೃತದಲ್ಲಿ ದೇವತಾವಿಶೇಷವೆಂದು ಹೇಳಬಹುದು ಅಂದರೆ, ಕೃಷಿಗೆ ಸಂಬಂಧಪಟ್ಟ ದೇವತೆಯೆಂದೇ ಅರ್ಥ ತೈತ್ತಿರೀಯ ಸಂಹಿತೆಯಲ್ಲಿ ಈ ಅರ್ಥದಲ್ಲಿಯೇ ಈ ದೇವತೆಯು ಉದ್ಧಿಷ್ಟವಾಗಿ ಸ್ತುತಳಾಗಿದ್ದಾಳೆ.

ಕೃಷಿಗೂ ತತ್ಫಲವಾದ ಸಂಪತ್ಸುಖಗಳಿಗೂ ಅಧಿದೇವತೆಗಳಾದ ಕ್ಷೇತ್ರಪತ್ಯಾದಿ ದೇವತೆಗಳ ಪ್ರಶಂಸೆಗಳೂ. ಅವರಿಂದ ಯಾಚಿಸಿದ ಪ್ರಾರ್ಥನೆಗಳೂ ಈ ಸೂಕ್ತದಲ್ಲಿ **ವರ್ಣಿತ**ವಾಗಿವೆ

ಕ್ಷೇತ್ರಗಳಿಗೆಲ್ಲಾ ಒಡೆಯನಾದ ಕ್ಷೇತ್ರಪತಿಯಲ್ಲಿ ಪಶು, ಅಶ್ವ ಮುಂತಾದ ಸಂಪತ್ತುಗಳನ್ನು ಬೇಡಿದೆ ಪೃಥಿವೀ, ಅಂತರಿಕ್ಷ ಮತ್ತು ಓಷಧಿಗಳು ಇವುಗಳನ್ನೆಲ್ಲಾ ವ್ಯಾಪಿಸುವ ಮಧುವನ್ನು ಪ್ರಾರ್ಥಿಸಿದೆ ಇದಲ್ಲದೇ ಬೇರೆ ಕಡೆಯಲ್ಲಿ (೭-೩೫-೧೦) ಸವಿತೃ, ಉಷಸ್ಸು ಮತ್ತು ಪರ್ಜನ್ಯ ಮುಂತಾವ ದೇವತೆಗಳೊಡನೆ ಸ್ತುತನಾಗಿದ್ದಾನೆ ಯಜಮಾನರು ಈ ದೇವತೆಯನ್ನು ಯಾವಾಗಲೂ ಸಮಾರಾಧನೆಯಲ್ಲಿ ಹೊಂದಿರಬೇಕು ಆರಿಸುತ್ತಾರೆ ಎಂಬ ಇಚ್ಛೆಯು ಸ್ಫುಟಿತವಾಗಿದೆ ಈ ದೇವತೆಯ ಪೂರ್ಣಸ್ವರೂಪವು ಗೃಹ್ಯಸೂತ್ರಾದಿಗಳಲ್ಲಿ ಪೂರ್ಣವಾಗಿ ವಿವೃತವಾಗಿದೆ (ಆ ಗೃ ಸೂ. ೨-೧೦-೪, ಪಾ. ಗೃ ಸೂ ೨-೧೦) ಭೂಮಿಯು ಕೃಷಿಗೆ ಸಿದ್ಧವಾಗಿ ಬೀಜಾದಿಗಳನ್ನು ನೆಡುವ ಕಾಲದಲ್ಲಿ ಈ ದೇವತೆಗೆ ಅರ್ಪಿತವಾಗತಕ್ಕ ಹವಿರಾದಿಗಳನ್ನು ನಿಸ್ಸಂದಿಗ್ಧವಾಗಿ ತಿಳಿಸಿದೆ

ಇದರಂತೆಯೇ **ಸೀತೆ**ಯನ್ನು ಪ್ರಶಂಸಿಸಿ ಇದೇ ನಿಘವಾದ ಫಲವನ್ನು ಪ್ರಾರ್ಥಿಸಿದ ಈ ದೇವತೆಯ ಸ್ವರೂಪವನ್ನು ಪಾರಸ್ಕರಗೃಹ್ಯಸೂತ್ರದಲ್ಲಿ ವಿಶದವಾಗಿ ವರ್ಣಿಸಿದೆ ಋ ಸಂ. ೪-೫೧-೩ನೇ ಮಂತ್ರದಲ್ಲಿ ಇಂದ್ರನನ್ನು **ಉರ್ವರಾಪತೇ** ಎಂದು ಸಂಬೋಧಿಸಿರುವ ಆಧಾರದ ಮೇಲೆ ಗೃಹ್ಯಸೂತ್ರಗಳಲ್ಲೂ ಸಹ **ಸೀತೆ**ಯನ್ನು ಇಂದ್ರಪತ್ನಿಯೆಂದು ನಿರ್ದೇಶಿಸಿದೆ. ಗೋಭಿಲಗೃಹ್ಯಸೂತ್ರದಲ್ಲಿ ಈ ದೇವಿಯ ನಾಲ್ಕು ವಿಭೂತಿವಿಶೇಷಗಳು ವರ್ಣಿತವಾಗಿವೆ **(೪-೪-೨೭). ಸೀತಾ, ಆಶಾ, ಅರಡಾ, ಅನೆಷಾ** ಎಂಬಿವೇ ಈ ನಾಲ್ಕು ರೂಪಗಳು. ಈ ದೇವತೆಗಳ ಪೂಜಾ

ಕಾಲಗಳೂ ನಾಲ್ಕು ಯಜ್ಞಕಾಲಗಳಿಗೆ ಸಂಬಂಧಪಟ್ಟವು. ಭೂಮಿಯನ್ನು ಉಳುವಾಗ, ಬೀಜವನ್ನು ಬಿತ್ತುವಾಗ, ಫಲವನ್ನು ಕೊಯ್ಯುವಾಗ ಮತ್ತು ಕಣಜಕ್ಕೆ ತುಂಬುವಾಗ ಯಾವ ಕರ್ಮಗಳುಂಟೋ ಆಯಾ ಕರ್ಮಕಾಲಕ್ಕೆ ಇವರೇ ಆರಾಧ್ಯದೇವತೆಗಳು. ಇನ್ನೊಂದು ಸೂತ್ರದಲ್ಲಿ (ಪಾರಸ್ಕರಗೃಹ್ಯಸೂತ್ರ ೨-೧೬-೧೩) ಇವರಲ್ಲದೇ, **ಯಜ್ಞಾತಮಾ, ಭೂತಿ** ಎಂಬ ದೇವತೆಗಳ ಹೆಸರುಗಳೂ ಸಂಕೀರ್ತಿತವಾಗಿವೆ. ಇವರುಗಳೆಲ್ಲಾ ಅನೇಕ ವಿಶೇಷಣಗಳಿಂದ ವರ್ಣಿತರಾಗಿದ್ದಾರೆ ಈ ನಾಮಗಳಲ್ಲೆಲ್ಲಾ **ಸೀತೆ**ಯೇ ಅತ್ಯಂತ ತೇಜಸ್ವಿನಿಯೂ ಸ್ಫೂರ್ತಿದಾಯಕಳೂ ಆದ ದೇವತೆಯಾಗಿದ್ದಾಳೆ. ಈ ಸೀತೆಯೇ ತೈತ್ತಿರೀಯ ಬ್ರಾಹ್ಮಣದಲ್ಲಿ **ಸಾವಿತ್ರಿ**ಯೆಂದೂ ನಿರ್ದಿಷ್ಟಳಾಗಿದ್ದಾಳೆ ಪ್ರಾಯಃ ಈ ದೇವತಾವಿಶೇಷದ ಮಹಿಮೆಯೇ ರಾಮಾಯಣದಲ್ಲೂ ಪ್ರಸಿದ್ಧವೂ ಪವಿತ್ರವೂ ಆದ ಸೀತಾದೇವಿಯ ರೂಪದಿಂದ ಪ್ರಶಂಸಿತವಾಗಿರಬಹುದು.

ತೈತ್ತಿರೀಯ ಬ್ರಾಹ್ಮಣದಲ್ಲಿ ಸೀತಾವಿಷಯದಲ್ಲಿ ಉಕ್ತವಾಗಿರುವ ಕಥಾಸನ್ನಿವೇಶ—

ಪ್ರಜಾಪತಿಸ್ಸೋಮಗ್ಂ ರಾಜಾನಮಸೃಜತ । ತಂ ತ್ರಯೋ ವೇದಾ ಆನ್ವಸೃಜ್ಯಂತ । ತಾನ್ ಹಸ್ತೇ೨ಕುರುತ । ಅಥ ಹ ಸೀತಾ ಸಾವಿತ್ರೀ । ಸೋಮಗ್ಂ ರಾಜಾನಂ ಚಕಮೇ । ಶ್ರದ್ಧಾಮು ಸ ಚಕಮೇ । ಸಾ ಹ ಪಿತರಂ ಪ್ರಜಾಪತಿಮುಪಸಸಾರ । ತಗ್ಂ ಹೋವಾಚ । ನಮಸ್ತೇ ಅಸ್ತು ಭಗವಃ । ಉಪ ತ್ವಾ೨ಯಾನಿ ॥

(ತೈ ಬ್ರಾ ೨-೩-೧೦-೧)

ಪ್ರಜಾಪತಿಯು ಸೋಮರಾಜನನ್ನು ಸೃಷ್ಟಿಸಿದನು. ಅನಂತರ ಮೂರು ವೇದಗಳೂ ಸೃಷ್ಟವಾದವು ಅವನು ಅವುಗಳನ್ನು ಕೈಯಿನಲ್ಲಿ ಹಿಡಿದುಕೊಂಡನು. ಆನಂತರ ಸವಿತೃವಿನ ದುಹಿತೆಯಾದ ಸೀತೆಯು ಸೋಮನನ್ನು ಪಡೆಯಬೇಕೆಂದಿಚ್ಛಿಸಿದಳು ಆದರೆ ಸೋಮನು ಶ್ರದ್ಧೆಯನ್ನಿಚ್ಛಿಸಿದನು ಆಗ ಅವಳು ತಂದೆಯನ್ನು ಸಮೀಪಿಸಿ ನಮಸ್ಕರಿಸಿ ತಾನು ಇಚ್ಛಿಸಿದ ವರನನ್ನು ತಾನು ಪಡೆಯಲಾರದುದರಿಂದ ತಂದೆಯ ಸಮೀಪದಲ್ಲಿಯೇ ಇರುವೆನೆಂದು ಹೇಳಿಕೊಂಡು ದುಃಖಿಸಿದಳು.

ಪ್ರ ತ್ವಾ ಹಿದ್ಯೇ । ಸೋಮಂ ವೈ ರಾಜಾನಂ ಕಾಮಯೇ । ಶ್ರದ್ಧಾಮು ಸ ಕಾಮಯತ ಇತಿ । ತಸ್ಯಾ ಉ ಹ ಸ್ಥಾಗರಮಲಂಕಾರಂ ಕಲ್ಪಯಿತ್ವಾ । .. ಪತ್ನಿಭಿಶ್ಚ ಮುಖೇ೨ಲಂಕೃತ್ಯ ॥

(ತೈ. ಬ್ರಾ. ೨-೩-೧೦-೨)

"ನಾನು ಸೋಮನನ್ನು ವರಿಸಬೇಕೆಂದಿಚ್ಛಿಸಿದೆನು ಆದರೆ ಅವನು ಶ್ರದ್ಧೆಯನ್ನು ಅಪೇಕ್ಷಿಸಿದ್ದಾನೆ ನನ್ನನ್ನು ತಿರಸ್ಕರಿಸಿದ್ದಾನೆ" ಎಂದು ಹೇಳಿಕೊಳ್ಳಲು ಪ್ರಜಾಪತಿಯು ಅವಳಿಗೆ ಸಕಲವಾದ ಅಲಂಕಾರಗಳನ್ನು ಮಾಡಿ ಪುನಃ ಸೋಮನಲ್ಲಿಗೆ ಕಳುಹಿಸಿದನು. ಆ ಕಾಲದಲ್ಲಿ,

ಅ೨ಸ್ಯಾರ್ಧಂ ವವ್ರಾಜ । ತಾಗ್ಂ ಹೋದೀಕ್ಷ್ಯೋವಾಚ । ಉಪ ಮಾ೨ವರ್ತಸ್ವೇತಿ । ತಗ್ಂ ಹೋವಾಚ । ಭೋಗಂ ತು ಮ ಆ ಚಕ್ಷ್ವ । ಏತನ್ಮ ಆಚಕ್ಷ್ವ । ಯತ್ತೇ ಪಾಣಾವಿತಿ । ತಸ್ಯಾ ಉ ಹ ತ್ರೀನ್‌ವೇದಾನ್ಪ್ರದದೌ । ತಸ್ಮಾದು ಹ ಸ್ತ್ರಿಯೋ ಭೋಗಮೈವ ಹಾರಯಂತೇ ॥

(ತೈ. ಬ್ರಾ. ೨-೩-೧೦-೩)

ಪತಿಯ ವಶೀಕರಣ ಸಾಮರ್ಥ್ಯೋಪೇತವಾದ ಅಲಂಕಾರಗಳಿಂದ ಕೂಡಿದ ಸೀತೆಯು ಬರುತ್ತಾ ಅರ್ಧದಾರಿಯಲ್ಲೇ ನಿಂತುಕೊಂಡಳು. ಈ ವಶೀಕರಣಸಾಧನದ ಪ್ರಭಾವದಿಂದ ಸೋಮನು ಹಿಂದಿನಂತೆ ತಿರಸ್ಕರಿಸದೇ, ಉತ್ಸುಕತೆಯಿಂದ ಅವಳನ್ನು ನೋಡಿ ಅರ್ಧದಾರಿಯಲ್ಲೇ ನಿಲ್ಲದೇ ಸಮೀಪಕ್ಕೆ ಬರಬೇಕೆಂದನು ಆಗ ಅವಳು ಸಂತುಷ್ಟಳಾಗಿ ತನ್ನ ಇಷ್ಟಾರ್ಥವನ್ನು ತಿಳಿಸಿದಳು. ಆಗ ಸೋಮನು ತೃಪ್ತನಾಗಿ ತನ್ನಲ್ಲಿದ್ದ ಮೂರು ವೇದಗಳನ್ನು ಅವಳಿಗೆ ಒಪ್ಪಿಸಿದನು. ಇಷ್ಟಾರ್ಥವನ್ನು ಗಳಿಸಲು ಸ್ತ್ರೀಯರು ಮಾಡತಕ್ಕ ಉಪಾಯವೇ ಈ ರೀತಿಯದು. ಇತ್ಯಾದಿಯಾಗಿ ಸೀತೆಯ ಸ್ವರೂಪವು ವರ್ಣಿತವಾಗಿದೆ. ಪೃಥ್ವಿಗೆ ಸಾಕ್ಷಾತ್ಸಂಬಂಧವನ್ನು ಹೊಂದಿದ ಈ ಸೀತೆಯು ವೈದಿಕವಾಕ್ಯಗಳಲ್ಲೆಲ್ಲಾ ಸ್ತುತಳಾಗಿದ್ದಾಳೆ.

॥ ಸಂಹಿತಾಪಾಠಃ ॥

ಇಂದ್ರ॑ಃ ಸೀ॒ತಾಂ ನಿ ಗೃ॒ಹ್ಣಾ॒ತು॒ ತಾಂ ಪೂ॒ಷಾನು॑ ಯಚ್ಛತು ।
ಸಾ ನ॒ಃ ಪ॒ಯ॒ಸ್ವ॒ತೀ ದು॒ಹಾ॒ಮು॒ತ್ತ॒ರಾ॒ಮು॒ತ್ತ॒ರಾಂ ಸ॒ಮಾಂ ॥ ೭ ॥

॥ ಪದಪಾಠಃ ॥

ಇಂದ್ರ॑ಃ । ಸೀ॒ತಾಂ । ನಿ । ಗೃ॒ಹ್ಣಾ॒ತು॒ । ತಾಂ । ಪೂ॒ಷಾ । ಅನು॑ । ಯ॒ಚ್ಛ॒ತು॒ ।
ಸಾ । ನ॒ಃ । ಪ॒ಯ॒ಸ್ವ॒ತೀ । ದು॒ಹಾ॒ಂ । ಉ॒ತ್ತ॒ರಾಂ॰ಉ॑ತ್ತ॒ರಾಂ । ಸ॒ಮಾಂ ॥ ೭ ॥

॥ ಸಾಯಣಭಾಷ್ಯಂ ॥

ಇಂದ್ರೋ॑ ದೇವಃ ಸೀತಾಂ ಸೀತಾಧಾರಕಾಷ್ಠಾಂ ನಿ ಗೃಹ್ಣಾತು । ತಾಂ ಸೀತಾಂ ಪೂಷಾ ದೇವೋ॰ನು ಯಚ್ಛತು । ನಿಯಮಯತ್ । ಸಾ ದ್ಯೌಃ ಪಯಸ್ವತ್ಯುದಕವತೀ ದುಹಾಂ । ದುಹ್ಯಾತ್ । ಕದೇತಿ ತದುಚ್ಯತೇ । ಉತ್ತರಾಮುತ್ತರಾಂ ಸಮಾಮುತ್ತರಮುತ್ತರಂ ಸಂವತ್ಸರಂ ॥

॥ ಪ್ರತಿಪದಾರ್ಥ ॥

ಇಂದ್ರಃ—ಇಂದ್ರದೇವನು । **ಸೀತಾಂ**—ಸೀತೆಯನ್ನು (ಉಳುವ ಸಾಧನ) । **ನಿ ಗೃಹ್ಣಾತು**—ಹಿಡಿದುಕೊಳ್ಳಲಿ । **ತಾಂ**—ಆದೇ ಸೀತೆಯನ್ನು । **ಪೂಷಾ**—ಪೂಷದೇವನು । **ಅನು ಯಚ್ಛತು**—ನಿಯಮಿಸಲಿ । **ಸಾ**—ಆ ದೇವತೆಯು । **ಪಯಸ್ವತೀ**—ಉದಕಯುಕ್ತಳಾಗಿ । **ಉತ್ತರಾಮುತ್ತರಾಂ ಸಮಾಂ**—ಪ್ರತಿಯೊಂದು ಸಂವತ್ಸರವೂ ಸಹ । **ನಃ**—ನಮಗಾಗಿ । **ದುಹಾಂ**—ವೃಷ್ಟಿಯನ್ನು ಕರೆಯಲಿ.

॥ ಭಾವಾರ್ಥ ॥

ಇಂದ್ರದೇವನು ಸೀತೆಯನ್ನು ಹಿಡಿದುಕೊಳ್ಳಲಿ. ಆದೇ ಸೀತೆಯನ್ನು ಪೂಷದೇವನು ನಿಯಮಿಸಲಿ. ಆ ದೇವತೆಯು ಉದಕಯುಕ್ತಳಾಗಿ ಪ್ರತಿಯೊಂದು ಸಂವತ್ಸರವೂ ಸಹ ನಮಗಾಗಿ ವೃಷ್ಟಿಯನ್ನು ಕರೆಯಲಿ.

English Translation.

May Indra take hold of Sita : may Pushan guide her , may she, well stored with water, yield it as milk, year after year.



। ಸಂಹಿತಾಪಾಠಃ ।

ಶುನಂ ನಃ ಫಾಲಾ ವಿ ಕೃಷಂತು ಭೂಮಿಂ ಶುನಂ ಕೀನಾಶಾ ಅಭಿ ಯಂತು ವಾಹೈಃ ।

ಶುನಂ ಪರ್ಜನ್ಯೋ ಮಧುನಾ ಪಯೋಭಿಃ ಶುನಾಸೀರಾ ಶುನಮುಸ್ಮಾಸು ಧತ್ತಂ ॥ ೪ ॥

। ಪದಪಾಠಃ ।

ಶುನಂ । ನಃ । ಫಾಲಾಃ । ವಿ । ಕೃಷಂತು । ಭೂಮಿಂ । ಶುನಂ । ಕೀನಾಶಾಃ । ಅಭಿ । ಯಂತು । ವಾಹೈಃ ।

ಶುನಂ । ಪರ್ಜನ್ಯಃ । ಮಧುನಾ । ಪಯಃಽಭಿಃ । ಶುನಾಸೀರಾ । ಶುನಂ । ಅಸ್ಮಾಸು । ಧತ್ತಂ ॥ ೪ ॥

। ಸಾಯಣಭಾಷ್ಯಂ ॥

ಅಸ್ಯಾ ಅಶ್ವವ್ಯಾ ವಿನಿಯೋಗಃ ಶುನಾಸೀರಾವಿಮಾಮಿತ್ಯಕ್ರೋಕ್ತಃ ॥

ನೋ ಭೂಮಿಂ ಫಾಲಾ ಭೂಮಿವಿದಾರಕಕಾಷ್ಠಾಃ ಶುನಂ ವಿ ಕೃಷಂತು । ಶುನಂ ಯಥಾ ಭವತಿ ತಥಾ। ಕೀನಾಶಾ ಬಲೀವರ್ದರಕ್ಷಕಾ ವಾಹೈರ್ಬಲೀವರ್ದೈರಭಿ ಯಂತು । ಅಭಿಗಚ್ಛಂತು । ಶುನಂ ಯಥಾ ಭವತಿ ತಥಾ । ಪರ್ಜನ್ಯೋ ಮಧುನಾ ಮಧುರೈಃ ಪಯೋಭಿರುದಕೈಃ ಸಿಂಚತು । ಹೇ ಶುನಾಸೀರಾ ಇಂದ್ರವಾಯೂ ವಾಯ್ವಾದಿತ್ಯೌ ವಾ ಶುನಂ ಸುಖಮುಸ್ಮಾಸು ಧತ್ತಂ । ಧಾರಯೇತಂ ॥

। ಪ್ರತಿಪದಾರ್ಥ ।

ನಃ—ನಮ್ಮ । ಭೂಮಿಂ—ಕ್ಷೇತ್ರವನ್ನು । ಫಾಲಾಃ—ನೇಗಿಲೇ ಮುಂತಾದ ಉಳುವ ಸಾಧನಗಳು । ಶುನಂ—ಸುಖವಾಗಿ । ವಿ ಕೃಷಂತು—ಉಳಲಿ । ಕೀನಾಶಾಃ—ರೈತರು । ವಾಹೈಃ—ವೃಷಭಗಳೊಡನೆ । ಶುನಂ—ಸುಖವಾಗಿ । ಅಭಿ ಯಂತು—ತಮ್ಮ ಕಾರ್ಯಗಳಿಗೆ ಹೋಗಲಿ । ಪರ್ಜನ್ಯಃ—ಪರ್ಜನ್ಯನು । ಶುನಂ—ಸುಖಕಾರಕವಾಗುವಂತೆ । ಮಧುನಾ—ಮಧುರವಾದ । ಪಯೋಭಿಃ—ಉದಕಗಳಿಂದ (ವರ್ಷಿಸಲಿ) ಶುನಾಸೀರಾ—ಎಲೈ ಶುನಾಸೀರ ದೇವತೆಗಳೇ । ಅಸ್ಮಾಸು—ನಮ್ಮಲ್ಲಿ । ಶುನಂ—ಸುಖವನ್ನು । ಧತ್ತಂ—ಒದಗಿಸಿ ಕೊಡಿರಿ.

॥ ಭಾವಾರ್ಥ ॥

ನೇಗಿಲೇ ಮುಂತಾದ ಉಳುವ ಸಾಧನಗಳು ಸುಖವಾಗಿ ಉಳಲಿ. ರೈತರು ವೃಷಭಗಳೊಡನೆ ಸುಖವಾಗಿ ತಮ್ಮ ಕಾರ್ಯಗಳಿಗೆ ಹೋಗಲಿ ಪರ್ಜನ್ಯನು ಮಧುರವಾದ ಉದಕಗಳಿಂದ ಸುಖಕಾರಕವಾಗಿರುವಂತೆ ವರ್ಷಿಸಲಿ. ಎಲೈ ಶುನಾಸೀರದೇವತೆಗಳೇ, ನಮಗೆ ಸುಖವನ್ನುಂಟುಮಾಡಿರಿ.

English Translation.

May the ploughshares break up our land happily, may the ploughman go happily with the oxen, may Parjanya (water the earth) with sweet showers happily · grant Shuna and Shira, prosperity to us

॥ ವಿಶೇಷವಿಷಯಗಳು ॥

ಈ ಋಕ್ಕಿನ ವಿನಿಯೋಗವನ್ನು ಈ ಸೂಕ್ತದ ನಾಲ್ಕನೆಯ ಋಕ್ಕಿನ ವಿಶೇಷವಿಷಯಗಳಲ್ಲಿಯೇ ಹೇಳಲಾಗಿದೆ.

ಐವತ್ತೆಂಟನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಸಮುದ್ರಾದೂರ್ಮಿರಿತ್ಯೇಕಾದಶರ್ಚಂ ತ್ರ್ಯೋದಶಂ ಸೂಕ್ತಂ । ಆಂತ್ಯಾ ಜಗತೀ ತಿಷ್ಟಾಸ್ತ್ರಿಷ್ಟುಭಃ । ಅಗ್ನಿಸೂರ್ಯಾಬ್ಗೋಘೃತಾನಾಮನ್ಯತಮೋ ದೇವತಾ । ವಾಮದೇವ ಋಷಿಃ । ಅತ್ರಾನುಕ್ರಮಣಿಕಾ । ಸಮುದ್ರಾದೂರ್ಮಿರೇಕಾದಶಾಗ್ನೇಯಂ ಜಗತ್ಯಂತಂ ಸೌರ್ಯಂ ವಾಪಂ ವಾ ಗವ್ಯಂ ವಾ ಘೃತಸ್ತುತಿರ್ವೇತಿ॥ ವಿಸುವತೀದಂ ಸೂಕ್ತಮಾಜ್ಯಂ । ತಥಾ ಚ ಸೂತ್ರಂ । ಸಮುದ್ರಾದೂರ್ಮಿರಿತ್ಯಾಜ್ಯಂ ತ್ಯಂ ಸುಮೇಷಂ । ಆ. ೮-೬ । ಇತಿ ॥ ವ್ಯೂಢೇ ದಶರಾತ್ರೇ ಸಪ್ತಮೇಽಹನೀದಮೇವ ಸೂಕ್ತಮಾಜ್ಯಂ । ಸೂತ್ರಿತಂ ಚ। ಅಥ ಥಂದೋಮಾಃ ಸಮುದ್ರಾದೂರ್ಮಿರಿತ್ಯಾಜ್ಯಂ । ಆ. ೮-೯ । ಇತಿ ॥

ಅನುವಾದವು—**ಸಮುದ್ರಾದೂರ್ಮಿಃ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಹದಿಮೂರನೆಯ ಸೂಕ್ತವು. ಇದರಲ್ಲಿ ಹದಿಮೂರು ಋಕ್ಕುಗಳಿರುವವು ಈ ಸೂಕ್ತಕ್ಕೆ ವಾಮದೇವನು ಋಷಿಯು, ಅಗ್ನಿಃ ಸೂರ್ಯ, ಆಸಃ ಗೌಃ ಘೃತ ಮೊದಲಾದವರು ದೇವತೆಗಳು, ಸೂಕ್ತದ ಕೊನೆಯ ಋಕ್ಕು ಜಗತೀಛಂದಸ್ಸುವು, ಉಳಿದ ಋಕ್ಕುಗಳು ತ್ರಿಷ್ಟುಪ್ಛಂದಸ್ಸುವು. ಅನುಕ್ರಮಣಿಕೆಯಲ್ಲಿ— **ಸಮುದ್ರಾದೂರ್ಮಿರೇಕಾದಶಾಗ್ನೇಯಂ ಜಗತ್ಯಂತಂ ಸೌರ್ಯಂ ವಾಪಂ ವಾ ಗವ್ಯಂ ವಾ ಘೃತಸ್ತುತಿರ್ವಾ** ಎಂದು ಹೇಳಿರುವುದು ಈ ಸೂಕ್ತವನ್ನು ಆಜ್ಯಶಸ್ತ್ರಮಂತ್ರಗಳಲ್ಲಿ ವಿಸುವತಿ ಎಂಬ ಸೂಕ್ತವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಸಮುದ್ರಾದೂರ್ಮಿರಿತ್ಯಾಜ್ಯಂ ತ್ಯಂ ಸುಮೇಷಂ** ಎಂಬ ಸೂತ್ರದಿಂದಲೂ (ಆ. ೮-೬) ವ್ಯೂಢವೆಂಬ ದಶರಾತ್ರಯಾಗದಲ್ಲಿ ಏಳನೆಯ ದಿವಸ ಈ ಸೂಕ್ತವನ್ನು ಆಜ್ಯಶಸ್ತ್ರಮಂತ್ರಗಳಿಗಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಅಥ ಥಂದೋಮಾಃ ಸಮುದ್ರಾದೂರ್ಮಿರಿತ್ಯಾಜ್ಯಂ** ಎಂಬ ಸೂತ್ರದಿಂದಲೂ (ಆ. ೮-೯) ವಿನ್ಯತವಾಗಿರುವುದು.

सूक्त—३५

मण्डल—४ ॥ अनुवाक—३ ॥ सूक्त—३५ ॥
अष्टक—३ ॥ अध्याय—४ ॥ वर्ग—१०, ११ ॥
॥ सूक्तदर्शिरुव ऋष्यंश्मे—११ ॥
॥ ऋषिः—वामदेवः ॥
॥ देवता—अग्निः सूर्योर्वा वापोर्वा गावोर्वा घृतं वा ॥
॥ छंदः—१-१०, त्रिष्टुप् । ११ जगती ॥

॥ संहितापाठः ॥

समुद्रादूर्मिर्मधुमाँ उदारदुपांशुना सममृतत्वमानट् ।
घृतस्य नाम गुह्यं यदस्ति जिह्वा देवानामुममृतस्य नाभिः ॥१॥

॥ पदपाठः ॥

समुद्रात् । ऊर्मिः । मधुऽमान् । उत् । आरत् । उपे । अंशुना । सं । अमृतऽत्वं । आनट् ।
घृतस्य । नाम । गुह्यं । यत् । अस्ति । जिह्वा । देवानां । अमृतस्य । नाभिः ॥ १ ॥

॥ सायणभाष्यं ॥

संमोदमानेऽस्मिन्यजमाना इति वा समुद्रोऽग्निः पार्थिवः अथवा समुद्र्यते संक्ल्पयते प्रजा अनेनेति समुद्रो वृष्टिः । तस्मादूर्मिरूर्मिवदुपर्यूर्ध्वं पर्यूर्ध्वो मधुमान्मधुर्योपेतश्च समूह उदारत् । उद्गच्छति । अथवा वैद्युतादूर्मिर्व्याप्तादकोदरसः उदारत् । उद्भवति । अथवा समुद्रात्सकाशादुद्भवनसाधनादादित्यादूर्मिरसः उदकलक्षण उदारत् । आदित्याज्जायतेऽयं वृष्टिरिति श्रुतेः । यद्वा समुद्रादुक्तव्युत्पत्त्यैरन्तरिक्षादूर्मिरुदकमुदारत् । अथवा समुद्रादुक्तलक्षणाद्द्यावापृथिवीरूपसंसर्गादूर्मिरुदकमुदारत् । उपांशुना क्षीरराजेन सह संगतः सन् । उपांशुना क्षीरराजेन सह संगतः सन् । एतद्घृतं क्षीरराज्जायतेऽयं तथापि तस्योत्पत्तिरेवमुपचर्यते । शिष्टं वाक्यमुगाद्यधिकरणवदेव सर्वत्रापि समानं । अंशुना दीप्त्यांशेन सममृतत्वं मोक्षमुपसमानट् । उपेति पूरणः । प्राप्नोति नरः । घृतस्य दीप्तस्य क्षीरद्रव्यरूपस्य वा गुह्यं नाम गोपनीयं नमनसाधनं यदस्ति तद्ब्रवीमि । तद्देवानां जिह्वास्वादकं जिह्वास्थानीयं भवति । तदेवामृतस्य नाभिर्बन्धकं भवति । तदुभयं घृतस्य नामेत्यर्थः । एवं सर्वमन्त्रेषु तत्तत्प्रक्षानुसारेण योज्यं ॥

॥ ಪ್ರತಿಪದಾರ್ಥ ॥

ಸಮುದ್ರಾತ್—ಅಂತರಿಕ್ಷಾಗ್ನಿಯಿಂದ । **ಊರ್ಮಿಃ**—ಅಲೆಗಳಂತೆ ಒಂದಾದಮೇಲೊಂದು । **ಮಧುಮಾನ್**—ಮಾಧುರ್ಯೋಪೇತವಾದ ಫಲಸಮೂಹಗಳು । **ಉದಾರತ್**—ಉದ್ಭವಿಸುತ್ತವೆ । **ಅಂಶುನಾ**—ಆದಿತ್ಯ ಕಿರಣದಿಂದ । **ಅಮೃತತ್ವಂ**—ಮರಣರಾಹಿತ್ಯವನ್ನು । **ಸಮಾನಟ್**—(ಮಾನವನು) ಪಡೆಯುತ್ತಾನೆ। **ಘೃತಸ್ಯ**—ಪ್ರಕಾಶಮಾನವಾದ ಘೃತತತ್ತ್ವಕ್ಕೆ । **ಗುಹ್ಯಂ**—ರಹಸ್ಯವಾದ । **ಯತ್ ನಾಮ** - ಯಾವ ಹೆಸರು । **ಅಸ್ತಿ**—ಇದೆಯೋ (ಅದು) । **ದೇವಾನಾಂ**—ದೇವತೆಗಳ । **ಜಿಹ್ವಾ**—ಜಿಹ್ವಾರೂಪವಾಗಿಯೂ । **ಅಮೃತಸ್ಯ**—ಅಮೃತಕ್ಕೆ । **ನಾಭಿಃ**—ನಾಭಿರೂಪವಾಗಿಯೂ ಇದೆ

॥ ಭಾವಾರ್ಥ ॥

ಅಂತರಿಕ್ಷಾಗ್ನಿಯಿಂದ ಮಾಧುರ್ಯೋಪೇತವಾದ ಫಲಸಮೂಹಗಳು (ಉದಕಗಳು) ಅಲೆಗಳಂತೆ ಒಂದಾದ ಮೇಲೊಂದು ಉದ್ಭವಿಸುತ್ತವೆ ಮಾನವನು ಆದಿತ್ಯಕಿರಣದಿಂದ ಮರಣರಾಹಿತ್ಯವನ್ನು ಪಡೆಯುತ್ತಾನೆ. ಪ್ರಕಾಶಮಾನವಾದ ಘೃತತತ್ತ್ವಕ್ಕೆ ಯಾವ ರಹಸ್ಯವಾದ ಹೆಸರಿದೆಯೋ ಅದೇ ದೇವತೆಗಳ ಜಿಹ್ವಾರೂಪವಾಗಿಯೂ, ಅಮೃತಕ್ಕೆ ನಾಭಿರೂಪವಾಗಿಯೂ ಇದೆ

English Translation.

The sweet water swells up from the firmament · by the (solar) ray (man) obtains immortality : that which is the secret name of clarified butter is the tongue of the gods, the nevel of ambrosia.

॥ ವಿಶೇಷವಿಷಯಗಳು ॥

(1) **ಸಮುದ್ರಾತ್ ಊರ್ಮಿಃ ಮಧುಮಾನ್ ಉದಾರತ್—ಸಂಮೋದಂತೇಽಸ್ಮಿನ್ಯಜಮಾನಾ ಇತಿ ವಾ ಸಮುದ್ರೋಽಗ್ನಿಃ ಪಾರ್ಥಿವಃ ।** ಈ ಯಜ್ಞಾಗ್ನಿಯ ವಿಷಯದಲ್ಲಿ ಯಜ್ಞಮಾಡುವ ಯಜಮಾನರು ಸಂತೋಷಪಡುತ್ತಾರಾದ್ದರಿಂದ ಸಮುದ್ರ ಎಂದರೆ ಪಾರ್ಥಿವಾಗ್ನಿಯು

(೨) **ಅಥವಾ ಸಮುದ್ರ್ಯವಂತ್ಯಾಪೋಽಸ್ಮಾದಿತಿ ವ್ಯುತ್ಪತ್ತ್ಯಾ ವೈದ್ಯುತೋಽಗ್ನಿಃ।** ಸಮುದ್ರವೆಂದರೆ ಅಂತರಿಕ್ಷವು (ನಿ ೨-೧೦) ಅಂತರಿಕ್ಷದಲ್ಲಿ ಇರುವ ಈ ಅಗ್ನಿಯಿಂದ (ಮಿಂಚು) ಉದಕಗಳು ವೃಷ್ಟಿರೂಪದಲ್ಲಿ ಸುರಿಯುವುದರಿಂದ ಸಮುದ್ರವೆಂದರೆ ವೈದ್ಯುತಾಗ್ನಿ (ಮಿಂಚು) ಎಂದೂ ಹೆಸರು ಇಂತಹ ವೈದ್ಯುತಾಗ್ನಿಯಿಂದ (ಊರ್ಮಿಃ ಅಲೆಗಳಂತೆ, ಒಂದರಮೇಲೊಂದರಂತೆ) ಮಾಧುರ್ಯೋಪೇತವಾದ ಫಲಸಮೂಹ ಅಥವಾ ಉದಕಗಳು ಉದ್ಭವಿಸುತ್ತವೆ. ಇಲ್ಲಿ ಪಾರ್ಥಿವಾಗ್ನಿಯಿಂದ ಯಜ್ಞಮಾಡುವ ಯಜಮಾನನಿಗೆ ಆಭೀಷ್ಟಫಲಗಳು ಅಲೆಗಳಂತೆ ಎಂದರೆ ಒಂದಾಗುತ್ತಲೊಂದು ಉಂಟಾಗುತ್ತವೆ ಎಂದರ್ಥವು, ವೈದ್ಯುತಾಗ್ನಿ ಪಕ್ಷದಲ್ಲಿ ಮಧುರವಾದ ವೃಷ್ಟ್ಯುದಕಗಳು ಅಲೆಅಲೆಯಾಗಿ ಎಂದರೆ ಧಾರಾಕಾರವಾಗಿ ಸುರಿಯುತ್ತವೆ ಎಂದಭಿಪ್ರಾಯವು.

(೩) **ಅಥವಾ ಸಮುದ್ರಾತ್ ಸಮುದ್ರ್ಯವಣಸಾಧನಾತ್ ಆದಿತ್ಯಾದೂರ್ಮಿರ್ ರಸ ಉದಕಲಕ್ಷಣ ಉದಾರತ್ । ಆದಿತ್ಯಾಜ್ಜಾಯತೇ ವೃಷ್ಟಿರಿತಿ ಶ್ರುತೇಃ ।** ಅಥವಾ ರಸನನ್ನು ಆಕರ್ಷಿಸುವ ಅಥವಾ ಹೀರುವ

ಸ್ವಭಾವವುಳ್ಳ ಆದಿತ್ಯನಿಗೂ ಸಮುದ್ರವೆಂದು ಹೆಸರು. ಇಲ್ಲಿ ರಸವೆಂದರೆ ಉದಕ ಅಥವಾ ದ್ರವರೂಪದಲ್ಲಿರುವ ಯಾವ ವಸ್ತುವಾದರೂ ಆಗಬಹುದು. ಜಲಾಶಯಗಳಿಂದ ಉದಕವನ್ನು ರಶ್ಮಿಗಳ ಮೂಲಕ ಆಕರ್ಷಿಸುವುದರಿಂದ ಆದಿತ್ಯನಿಗೆ ಸಮುದ್ರವೆಂದೂ ಹೆಸರು ಇಂತಹ ಆದಿತ್ಯನಿಂದ ಉದಕರೂಪವಾದ ವೃಷ್ಟಿಯು ಉಂಟಾಯಿತು.

(೪) ಯದ್ವಾ ಸಮುದ್ರಾದುಚ್ಯತ್ಯುಚ್ಚೈತ್ಯೇಃ ಅಂತರಿಕ್ಷಾದೂರ್ಮಿರುದಕಮುದಾರತ್ ಅಥವಾ ಸಮುದ್ರಶಬ್ದಕ್ಕೆ ಅಂತರಿಕ್ಷವೆಂದು ಹೆಸರಿರುವುದರಿಂದ ಉದಕವು (ವೃಷ್ಟಿರೂಪದಲ್ಲಿ) ಸುರಿಯಿತು ಎಂದೂ ಅರ್ಥವನ್ನೂ ಹೇಳಬಹುದು

(೫) ಅಥವಾ ಸಮುದ್ರಾದುಚ್ಯತ್ಯಲಕ್ಷಣಾತ್ ಗವಾಮೂಧಸಃ ಸಕಾಶಾತ್ ಊರ್ಮಿರುಜ್ಜ್ವಲಃ ಕ್ಷೀರರಸಃ। ಅಥವಾ ಸಮುದ್ರಶಬ್ದದ ನಿರ್ವಚನದಂತೆ **ಸಮುದ್ರಾತ್** ಎಂದರೆ ಗೋವಿನ ಕೆಚ್ಚಲಿನಿಂದ ಎಂದೂ ಅರ್ಥವಾಗಬಹುದು. ಗೋವಿನ ಕೆಚ್ಚಲಿನಿಂದ ಪ್ರಕಾಶಮಾನವಾದ ಎಂದರೆ ಉತ್ಕೃಷ್ಟವಾದ ಕ್ಷೀರರಸವು ಹೊರಡುವುದು ಎಂದೂ ಅರ್ಥವಾಗಬಹುದು. ಮತ್ತು ಹಾಲಿನಿಂದ **ಘೃತವು** (ತುಪ್ಪ) ಉತ್ಪತ್ತಿಯಾಗುವುದರಿಂದ ಹಸುವಿನ ಕೆಚ್ಚಲಿನಿಂದ ಘೃತವೂ ಉತ್ಪನ್ನವಾಗುತ್ತದೆ ಎಂದು ಹೇಳಬಹುದು. ವಸ್ತುತಾತ್ಪರ್ಯಸಾರಾಂಶವೇನೆಂದರೆ ಈ ಸೂಕ್ತದಲ್ಲಿ ಪ್ರತಿಪಾದಿತರಾಗಿರುವ ದೇವತೆಗಳು **ಅಗ್ನಿ, ಸೂರ್ಯ, ಅಪಃ, ಗಾವಃ** (ಗವ್ಯಂ), **ಘೃತ** ಎಂದು ಐದು ಮುಂದಿಗಳಲ್ಲಿ ಯಾರಾದರೂ ಆಗಬಹುದು ಎಂದರೆ ಈ ಸೂಕ್ತದಲ್ಲಿರುವ ವಿಷಯಗಳನ್ನು ಈ ಐದ್ನು ಮುಂದಿ ದೇವತೆಗಳಲ್ಲಿ ಯಾರ ಪರವಾಗಿಬೇಕಾದರೂ ಅನ್ವಯಿಸಿ ಅರ್ಥಮಾಡಬಹುದು ಆದ್ದರಿಂದ ಮೇಲೆ ಐದು ವಿಧವಾದ ಅರ್ಥಗಳನ್ನು ವಿವರಿಸಲಾಗಿದೆ ಮುಂದಿನ ವಾಕ್ಯಗಳಿಗೆ ಅಥವಾ ಋಕ್ಕುಗಳಿಗೆ ಎಲ್ಲರಿಗೂ ಹೊಂದಬಹುದಾದ ಸಮಾನಾರ್ಥವಿರುವುದರಿಂದ ಮುಖ್ಯಾರ್ಥವನ್ನು ಮಾತ್ರ ವಿವರಿಸಿದರೆ ಸಾಕಾಗಿರುತ್ತೆ.

ಈ ಋಕ್ಕಿನ ಮೊದಲನೆಯ ವಾಕ್ಯಕ್ಕೆ ಯಾಸ್ಕರು ನಿರ್ವಚನವನ್ನು ಹೇಳಿದಾರೆ—

ಸಮುದ್ರಾದೂರ್ಮಿರ್ಮಧುಮಾಁ ಉದಾರತ್। ಇತ್ಯಾದಿತ್ಯಮುಕ್ತಂ ಮನ್ಯಂತೇ। ಸಮುದ್ರಾದ್ವೇಷೋಽದ್ಧ್ಯ ಉದೇತಿ ಚ ಬ್ರಾಹ್ಮಣಂ॥

(ನಿ ೭-೧೪)

ಸಮುದ್ರಾದೂರ್ಮಿಃ ಎಂಬ ಈ ಋಕ್ಕಿನಲ್ಲಿರುವ ಸಮುದ್ರಶಬ್ದಕ್ಕೆ ಆದಿತ್ಯನೆಂದು ಕೆಲವರ ಅಭಿಮತವಿದೆ. ಆದಿತ್ಯನು ಪೂರ್ವಸಮುದ್ರದಿಂದ ಉದಯಿಸುತ್ತಾನೆ (ಏಳುತ್ತಾನೆ) ಎಂಬ ಬ್ರಾಹ್ಮಣವಾಕ್ಯವನ್ನು ಈ ವಿಷಯ ಸಮರ್ಥನೆಗಾಗಿ ಹೇಳುವರು ಇದಲ್ಲದೆ ಅಗ್ನಿಪರ್ಯಾಯವಾಗಿ ಅರ್ಥಮಾಡುವುದಾದರೆ ಆ ವಿಷಯದಲ್ಲಿಯೂ ಒಂದು ಬ್ರಾಹ್ಮಣ ವಾಕ್ಯವಿದೆ—

ಅಥಾಪಿ ಬ್ರಾಹ್ಮಣಂ ಭವತಿ। ಅಗ್ನಿಃ ಸರ್ವಾ ದೇವತಾ ಇತಿ।
ತಸ್ಯೋತ್ತರಾ ಭೂಯಸೀ ನಿರ್ವಚನಾಯ।
ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್।
ಏಕಂ ಸದ್ವಿಪ್ರಾ ಬಹುಧಾ ವದಂತ್ಯಗ್ನಿಂ ಯಮಂ ಮಾತರಿಶ್ವಾನಮಾಹುಃ॥

(ಋ. ಸಂ.೧-೧೬೪-೪೬)

ಇಮಮೇವಾಗ್ನಿಂ ಮಹಾಂತಮಾತ್ಮಾನಮೇಕಮಾತ್ಮಾನಂ ಬಹುಧಾ ಮೇಧಾವಿನೋ ವದಂತೀಂದ್ರಂ ಮಿತ್ರಂ ವರುಣಮಗ್ನಿಂ ದಿವ್ಯಂ ಚ ಗುರುತ್ಮಂತಂ ದಿವ್ಯೋ ದಿವಿಜೋ ಗುರುತ್ಮಾನ್ ಗರಣವಾನ್ ಗುರ್ವಾತ್ಮಾ ಮಹಾತ್ಮೇತಿ ವಾ। ಯಸ್ತು ಸೂಕ್ತಂ ಭಜತೇ ಯಸ್ಮೈ ಹವಿರ್ನಿರುಪ್ಯತೇ೨ಯಮೇವ ಸೋ೨ಗ್ನಿಃ। ನಿಪಾತಮೇವೈತೇ ಉತ್ತರೇ ಜ್ಯೋತಿಷೀ ಏತೇನ ನಾಮಧೇಯೇನ ಭಜೇತೇ

(ನಿ. ೭-೧೪)

ಅಗ್ನಿಯೇ ಸರ್ವದೇವತೆಗಳ ರೂಪದಿಂದ ಇದಾನೆ ಎಂದು ಮೇಲಿನ ಶ್ರುತಿವಾಕ್ಯದ ಅರ್ಥವು **ಇಂದ್ರಂ ಮಿತ್ರಂ** ಎಂಬ ಋಕ್ಕಿನಲ್ಲಿ ಅಗ್ನಿಯನ್ನು ಇಂದ್ರ, ಮಿತ್ರ ವರುಣ ಸುಪರ್ಣ, ಗರುತ್ಮಂತ, ಯಮ, ಮಾತರಿಶ್ವಾ ಎಂಬ ದೇವತೆಗಳೆಂದು ಮೇಧಾವಿಗಳಾದ ಪುರುಷರು ಹೇಳುವರು ಎಂಬರ್ಥವಿದೆ ಆದರೆ ಇಲ್ಲಿ ಅಗ್ನಿಯೇ ಈ ದೇವತೆಗಳು, ಈ ದೇವತೆಗಳೇ ಅಗ್ನಿಯು, ಇವರಲ್ಲಿ ಯಾರಿಗೂ ಭೇದವಿಲ್ಲ, ಅಗ್ನಿಗೂ ಈ ದೇವತೆಗಳಿಗೂ ತಾದಾತ್ಮ್ಯವನ್ನು ಹೇಳಿದೆ ಎಂದು ಭಾವಿಸಬಾರದು **ಅಗ್ನಿಃ ಸರ್ವಾಃ ದೇವತಾಃ** ಎಂದರೆ ಸರ್ವದೇವತೆಗಳಲ್ಲಿರುವ ಗುಣಗಳೂ ಅಗ್ನಿಯಲ್ಲಿರುವವು ಆದುದರಿಂದ ಅಗ್ನಿಯು ಸರ್ವದೇವತಾಸ್ವರೂಪನು ಎಂಬರ್ಥದಲ್ಲಿ **ಈ** ವಾಕ್ಯದ ಪ್ರಯೋಗ ವಿರುವುದು ಅಗ್ನಿಯಲ್ಲಿ ಒಂದು ನೈಶಿತ್ಯ್ಯವಿದ. ಅದು ಇತರ ದೇವತೆಗಳಲಿಲ್ಲ ಯಾವ ಸೂಕ್ತದಲ್ಲಿ ಅಗ್ನಿಯನ್ನು ಸ್ತುತಿಸಲಾಗಿರುವುದೋ ೪ ಸೂಕ್ತವು ಅಗ್ನಿದೇವತಾಕವು ಎಂದರೆ ಅಗ್ನಿಯನ್ನು ಸ್ತುತಿವಾಕ್ಯಗಳಿಂದ ಸ್ತುತಿಸುವುದೂ ಅಲ್ಲದೆ ಅಗ್ನಿಯಲ್ಲಿ ಹವಿಸ್ಸನ್ನು ಹೋಮಮಾಡುವರು ಆದ್ದರಿಂದ ಹೋಮನಿಷ್ಪಾದಕನಾದವನೇ ಅಗ್ನಿಯು. ಈ ಗುಣವೈಶಿಷ್ಟ್ಯವು ಇತರ ದೇವತೆಗಳಲ್ಲಿಲ್ಲ. ಇದಲ್ಲದೆ ಅಗ್ನಿಯು ಸ್ವರ್ಗದಲ್ಲಿ ಆದಿತ್ಯರೂಪದಿಂದಲೂ, ಅಂತರಿಕ್ಷದಲ್ಲಿ ವೈದ್ಯುತಾಗ್ನಿ (ಮಿಂಚು) ರೂಪದಿಂದಲೂ, ಭೂಮಿಯಲ್ಲಿ ಪಾರ್ಥಿವಾಗ್ನಿರೂಪದಿಂದಲೂ ಇರುವನೆಂದು ಹೇಳುವುದು ರೂಢಿಯಷ್ಟೆ. ಸ್ವರ್ಗದಲ್ಲಿರುವ ಆದಿತ್ಯನನ್ನೂ ಅಂತರಿಕ್ಷದಲ್ಲಿರುವ ವೈದ್ಯುತಾಗ್ನಿಯನ್ನೂ ಕೇವಲ ಹೆಸರಿಗೆ ಮಾತ್ರ ಅಗ್ನಿಯೆಂದು ವ್ಯವಹರಿಸುವರು ಪಾರ್ಥಿವಾಗ್ನಿಯೇ ನಿಜವಾದ ಅಗ್ನಿಯು ಎಂದರೆ ಅಗ್ನಿಯ ಮುಖ್ಯ (ನೈಜ) ಸ್ವರೂಪವು ಎಂದು ತಿಳಿಯಬೇಕು ಎಂದು ಅರ್ಥವಿವರಣೆಮಾಡಿರುವರು.

। ಸಂಹಿತಾಪಾಠಃ ।

ವಯಂ ನಾಮ ಪ್ರ ಬ್ರವಾಮಾ ಘೃತಸ್ಯಾಸ್ಮಿನ್ಯಜ್ಞೇ ಧಾರಯಾಮಾ ನಮೋಭಿಃ ।

ಉಪ ಬ್ರಹ್ಮಾ ಶೃಣವಚ್ಛಸ್ಯಮಾನಂ ಚತುಃಶೃಂಗೋ೨ವಮೀದ್ಗೌರ ಏತತ್ ॥

। ಪದಪಾಠಃ ।

ವಯೆಂ । ನಾಮ । ಪ್ರ । ಬ್ರವಾಮ । ಘೃತಸ್ಯ । ಅಸ್ಮಿನ್ । ಯಜ್ಞೇ । ಧಾರಯಾಮ । ನಮಃ೬ಭಿಃ ।

ಉಪ । ಬ್ರಹ್ಮಾ । ಶೃಣವತ್ । ಶಸ್ಯಮಾನಂ । ಚತುಃ೬ಶೃಂಗಃ । ಅವಮೀತ್ । ಗೌರಃ । ಏತತ್ ॥ ೨ ॥

। ಸಾಯಣಭಾಷ್ಯಂ ।

ವಯೆಂ ಯಜಮಾನಾ ಘೃತಸ್ಯ ನಾಮ ಪ್ರ ಬ್ರವಾಮ । ಸ್ತುಮಃ । ಅಸ್ಮಿನ್ಯಜ್ಞೇ ನಮೋಭಿರ್ನ-ಮಸ್ಕಾರೈರ್ಹವಿರ್ಭಿರ್ವಾ ಧಾರಯಾಮ ಚ । ಬ್ರಹ್ಮಾ ಪರಿವೃಢೋ ದೇವಃ ಶಸ್ಯಮಾನಂ ಸ್ತೂಯಮಾನ-ಮಿದಮುಪ ಶೃಣವತ್ । ಶೃಣುಯಾತ್ । ಚತುಃಶೃಂಗಃ । ಚತ್ವಾರಿ ಶೃಂಗಾಣಿ ದೇವಚತುಷ್ಪಯೋರೂಪಾಣಿ ಯಸ್ಯ ಸಃ । ಆದಿತ್ಯಾಗ್ನಿಪಕ್ಷ ಏವಂ । ಇತರೇಷ್ವಪಿ ಯಾಸ್ಕೋಕ್ತವ್ಯುತ್ಪತ್ತ್ಯಾ ಶೃಂಗಶಬ್ದೋ ವ್ಯಾಖ್ಯೇಯಃ । ಗೌರೋ೬ರುಣವರ್ಣಸ್ತಾದೃಶೋ ದೇವ ಏತತ್ಕರ್ಮ ಜಗದ್ಭಾವಮಿತ್ । ಉದ್ಗಿರತಿ । ನಿರ್ವಹತೀತ್ಯರ್ಥಃ ॥

। ಪ್ರತಿಪದಾರ್ಥ ।

ವಯೆಂ—ಯಜಮಾನರಾದ ನಾವು । **ಘೃತಸ್ಯ**—ಘೃತದ । **ನಾಮ**—ನಾಮಧೇಯವನ್ನು । **ಪ್ರಬ್ರವಾಮ**—ಸ್ತುತಿಸುತ್ತೇವೆ । **ಅಸ್ಮಿನ್ ಯೆಜ್ಞೇ**—ಈ ಯಜ್ಞದಲ್ಲಿ । **ನಮೋಭಿಃ**—ನಮಸ್ಕಾರಗಳೊಡನೆ । **ಧಾರಯಾಮ**—ಅದನ್ನು ಅರ್ಪಿಸುತ್ತೇನೆ । **ಚತುಃಶೃಂಗಃ**—ನಾಲ್ಕು ಶೃಂಗಗಳುಳ್ಳ (ನಾಲ್ಕು ವೇದಗಳನ್ನು ತಿಳಿದಿರುವ) । **ಬ್ರಹ್ಮಾ**—ಬ್ರಹ್ಮದೇವನು । **ಶಸ್ಯಮಾನಂ**—ಪರಿತವಾಗುತ್ತಿರುವ ಈ ಸ್ತೋತ್ರವನ್ನು । **ಉಪ ಶೃಣವತ್**—ಆಲಿಸಿ ಕೇಳಲಿ । **ಗೌರಃ**—ಅರುಣವರ್ಣಾತ್ಮಕನಾದ ದೇವನು । **ಏತತ್**—ಈ ಕರ್ಮವನ್ನು । **ಅವಮೀತ್**—ನಿರ್ವಹಿಸುತ್ತಾನೆ.

। ಭಾವಾರ್ಥ ।

ಯ ಜ್ಞಕರ್ತರಾದ ನಾವು ಘೃತದ ಪವಿತ್ರವಾದ ನಾಮಧೇಯವನ್ನು ಸ್ತುತಿಸುತ್ತೇವೆ ಮತ್ತು ಅದನ್ನು ಈ ಯಜ್ಞದಲ್ಲಿ ನಮಸ್ಕಾರಗಳೊಡನೆ ಅರ್ಪಿಸುತ್ತೇವೆ ನಾಲ್ಕು ಶೃಂಗಗಳುಳ್ಳ (ನಾಲ್ಕು ವೇದಗಳನ್ನು ತಿಳಿದಿರುವ) ಬ್ರಹ್ಮದೇವನು ಪರಿತವಾಗುತ್ತಿರುವ ಈ ಸ್ತುತಿಯನ್ನು ಆಲಿಸಿ ಕೇಳಲಿ ಅರುಣವರ್ಣಾತ್ಮಕನಾದ ದೇವನು ಈ ಕರ್ಮವನ್ನು ನಿರ್ವಹಿಸುತ್ತಾನೆ.

English Translation.

We celebrate the name of Ghrita at this sacrifice, we offer it with adoration : may the four-horned Brahma listen to its being glorified the fair-complexined deity perfects this rite

। ವಿಶೇಷವಿಷಯಗಳು ।

ಚತುಃಶೃಂಗಃ ಬ್ರಹ್ಮಾ—ಇಲ್ಲಿ ಚತುಃಶೃಂಗವೆಂದರೆ ನಾಲ್ಕು ವೇದಗಳು. ಬ್ರಹ್ಮವೆಂದರೆ ಋತ್ವಿಜನು. ನಾಲ್ಕು ವೇದಗಳನ್ನು ಚೆನ್ನಾಗಿ ತಿಳಿದಿರುವ ಬ್ರಹ್ಮನೆಂಬ ಋತ್ವಿಜನು ಎಂದರ್ಥವು. ಯಜ್ಞದಲ್ಲಿ ಮಂತ್ರ

ಕ್ರಿಯಾದಿಗಳು ಲೋಪವಿಲ್ಲದಂತೆ ಸಾಂಗವಾಗಿ ನಡೆಯುವುದಕ್ಕಾಗಿಯೂ, ಪ್ರಮಾದವಶದಿಂದ ಲೋಪದೋಷಗಳು ಸಂಭವಿಸಿದರೆ ಅವುಗಳನ್ನು ಪ್ರಾಯಶ್ಚಿತ್ತಾದಿಗಳಿಂದ ಪರಿಹರಿಸಿ ಯಜ್ಞವನ್ನು ವಿಧ್ಯುಕ್ತವಾಗಿ ಸಮಾಪ್ತಿಯಾಗುವಂತೆ ನೋಡಿಕೊಳ್ಳುವುದೇ ಈ ಬ್ರಹ್ಮನೆಂಬ ಋತ್ವಿಜನ ಕರ್ತವ್ಯವು

॥ संहितापाठः ॥

चत्वारि शृंगा त्रयो अस्य पादा द्वे शीर्षे सप्त हस्तासो अस्य ।
त्रिधा बद्धो वृषभो रोरवीति महो देवो मर्त्यां आ विवेश ॥ ४ ॥

॥ पदपाठः ॥

चत्वारि । शृंगा । त्रयः । अस्य । पादाः । द्वे इति । शीर्षे इति । सप्त । हस्तासः । अस्य ।
त्रिधा । बद्धः । वृषभः । रोरवीति । महः । देवः । मर्त्यान् । आ । विवेश ॥ ४ ॥

॥ सायणभाष्यं ॥

यद्यपि सूक्तस्याग्निसूर्यार्यादिपंचदेवताकत्वात्पंचधायं मंत्रो व्याख्येयस्तथापि निरुक्तादुक्तनीत्या यज्ञात्मकाग्नेः सूर्यस्य च प्रकाशकत्वेन तत्परतया व्याख्यायतेऽ। अस्य यज्ञात्मकस्याग्नेरध्वर्त्तारि शृंगा चत्वारो वेदाः शृंगस्थानीयाः। यद्यप्यस्यापस्तंबीन यज्ञं व्याख्यास्यामः स त्रिभिर्वैदैर्निधीयतेऽ। परिभा. ७-४। इत्युक्तं तथापास्यार्थवर्वणस्येतरानपेक्षयैवैकाग्निसाध्यानां कृत्स्नकर्मणामभिधायकत्वात्तत्तदपेक्षया चत्वारि शृंगेत्युक्तं। त्रयोऽस्य पादाः सवनानि त्रीण्यस्य पादाः। स्ववृत्तिसाधनत्वात्पादा इत्युच्यंतेऽ। द्वे शीर्षे बह्वृदनं प्रवर्गश्च । इष्विसोमसाधानेनेदमुक्तं । सप्त हस्तासः सप्त छंदांसि । हस्त आसुष्टानस्य मुख्यसाधनं । छंदांसि पि देवताप्रीणनस्य मुख्यसाधनमिति हस्तव्यवहारः । त्रिधा बद्धो मंत्रैकल्पब्राह्मणैस्त्रिप्रकारं बद्धः । बंधनमस्य तन्निष्पाद्यत्वं । वृषभः फलानां वर्षिता रोरवीति । भृशं शब्दायतेऽ। ऋग्यजुःसामोक्थैः शस्त्रयागस्तुतिरूपैर्होत्राद्युक्त्वादिभैर्ध्वनिभिरसौ रौति । एवं महो देवो मर्त्यानाविवेश । मर्त्यैर्यजमानैर्निष्पाद्यत्वात्तैर्वेश उपचर्यतेऽ॥ अत्र यास्कश्चत्वारि शृंगेति वेदा वा एत उक्ताः ।

೧೩-೭। ಇತ್ಯಾದಿನಾ ನಿರವೋಚತ್। ತದತ್ರಾನುಸಂಧೇಯಂ ॥ ಅಥ ಸೂರ್ಯಪಕ್ಷೇ ವ್ಯಾಖ್ಯಾಯತೇ। ಸ್ಯಾದಿತ್ಯಸ್ಯ ಚತ್ವಾರಿ ಶೃಂಗಾಣಿ ಚತುಸ್ರೋ ದಿಶಃ। ಏತಾಃ ಶ್ರಯಣಾರ್ಥತ್ವಾಚ್ಛೃಂಗಾಣೀತ್ಯುಪಚರ್ಯಂತೇ। ತ್ರಯೋ ಅಸ್ಯ ಪಾದಾಃ। ತ್ರಯೋ ವೇದಾಃ ಪಾದಸ್ಥಾನೀಯಾ ಭವಂತಿ ಗಮನಸಾಧನತ್ವಾತ್। ತಥಾ ಹ್ಯೃಗ್ಭಿಃ ಪೂರ್ವಾಹ್ಣೇ ದಿವಿ ದೇವ ಈಯತ ಇತ್ಯುಪಕ್ರಮ್ಯ ವೇದೈರಶೂನ್ಯಸ್ತ್ರಿಭಿರೇತಿ ಸೂರ್ಯಃ। ತೈ. ಬ್ರಾ. ೩-೧೨-೯-೧ । ಇತಿ ಹಿ ವೇದತ್ರಯೇಣ ಗತಿರಾಮ್ನಾತಾ । ದ್ವೇ ಶೀರ್ಷೇ। ಅಹಶ್ಚ ರಾತ್ರಿಶ್ಚೇತಿ ದ್ವೇ ಶಿರಸೀ। ಸಪ್ತ ಹಸ್ತಾಸೋ ಅಸ್ಯ। ಸಪ್ತ ರಶ್ಮಯಃ ಷಡ್ವಿಲಕ್ಷಣಾ ಋತವ ಏಕಃ ಸಾಧಾರಣ ಇತಿ ವಾ ಸಪ್ತ ಹಸ್ತಾ ಭವಂತಿ। ತ್ರಿಧಾ ಬದ್ಧಸ್ತ್ರಿಷು ಸ್ಥಾನೇಷು ಕ್ಷಿತ್ಯಾದಿಷ್ವಗ್ನ್ಯಾದ್ಯಾತ್ಮಕತ್ವೇನ ಸಂಬದ್ಧಃ। ಗ್ರೀಷ್ಮ ವರ್ಷಾಹೇಮಂತಾಖ್ಯೈಸ್ತ್ರಿಭಿಸ್ತ್ರೇಧಾ ಬದ್ಧೋ ವಾ। ವೃಷಭೋ ವರ್ಷಿತಾ ರೋರವೀತಿ। ಶಬ್ದಂ ಕರೋತಿ ವೃಷ್ಟ್ಯಾದಿದ್ವಾರಾ। ಸ ಮಹೋ ಮಹಾನ್ ದೇವೋ ಮರ್ತ್ಯಾನಾ ವಿವೇಶ ತನ್ನಿಯಂತೃತಯಾ। ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ। ಋಗ್ವೇ. ೧-೧೧೫-೧ । ಇತಿ ಹಿ ಶ್ರುತಂ॥ ಏವಂ ತ್ವಬಾದಿಪಕ್ಷೇಽಪಿ ಯೋಜ್ಯಂ। ಅಬ್ದಿಕಾಸ್ತು ಶಬ್ದಬ್ರಹ್ಮಪರತಯಾ ಚತ್ವಾರಿ ಶೃಂಗೇತಿ ಚತ್ವಾರಿ ಪದಜಾತಾನಿ ನಾಮಾಖ್ಯಾತೇ ತೋಪಸರ್ಗನಿಪಾತಾಶ್ಚೇತ್ಯಾದಿನಾ ವ್ಯಾಚಕ್ಷತೇ। ಅಪರೇ ತ್ವಪರಥಾ। ತತ್ಸರ್ವಮತ್ರ ದ್ರಷ್ಟವ್ಯಂ ॥

॥ ಪ್ರತಿಪದಾರ್ಥ ॥

ಅಸ್ಯ—ಯಜ್ಞಾತ್ಮನಾದ ಈ ಅಗ್ನಿಗೆ। **ಚತ್ವಾರಿ ಶೃಂಗಾಃ**—(ವೇದರೂಪಗಳಾದ) ನಾಲ್ಕು ಶೃಂಗಗಳಿವೆ। **ತ್ರಯಃ ಪಾದಾಃ**—(ಸವನತ್ರಯರೂಪವಾದ) ಮೂರು ಪಾದಗಳಿವೆ। **ದ್ವೇ ಶೀರ್ಷೇ**—(ಬ್ರಹ್ಮೌದನ ಮತ್ತು ಪ್ರವರ್ಗ್ಯರೂಪವಾದ) ಎರಡು ಶೀರ್ಷಗಳಿವೆ (ತಲೆಗಳು)। **ಅಸ್ಯ**—ಈ ದೇವನಿಗೆ। **ಸಪ್ತ ಹಸ್ತಾಸಃ**—ಸಪ್ತಚ್ಛಂದೋರೂಪಗಳಾದ) ಏಳು ಹಸ್ತಗಳಿವೆ। **ತ್ರಿಧಾ ಬದ್ಧಃ**—(ಮಂತ್ರ, ಬ್ರಾಹ್ಮಣ, ಕಲ್ಪ ಎಂಬ) ಮೂರು ಪ್ರಕಾರಗಳಿಂದ ಬದ್ಧನಾದವನೂ। **ವೃಷಭಃ**—ಕಾಮವರ್ಷಕನೂ ಆದ ಈ ದೇವನು। **ರೋರವೀತಿ**—ಅಧಿಕವಾಗಿ ಶಬ್ದವನ್ನು ಮಾಡುತ್ತಾನೆ। **ಮಹೋ ದೇವಃ**—ಮಹಾತ್ಮನಾದ ಈ ದೇವನು। **ಮರ್ತ್ಯಾನ್**—ಮಾನವರನ್ನೆಲ್ಲಾ। **ಆವಿವೇಶ**—ವ್ಯಾಪಿಸಿದ್ದಾನೆ

॥ ಭಾವಾರ್ಥ ॥

ಯಜ್ಞಾತ್ಮನಾದ ಈ ಅಗ್ನಿಗೆ ವೇದರೂಪಗಳಾದ ನಾಲ್ಕು ಶೃಂಗ (ಕೊಂಬು) ಗಳೂ, ಸವನತ್ರಯರೂಪವಾದ ಮೂರು ಪಾದಗಳೂ, ಬ್ರಹ್ಮೌದನ ಮತ್ತು ಪ್ರವರ್ಗ್ಯರೂಪಗಳಾದ ಎರಡು ಶೀರ್ಷಗಳೂ ಮತ್ತು ಸಪ್ತಚ್ಛಂದೋರೂಪಗಳಾದ ಏಳು ಹಸ್ತಗಳೂ ಇವೆ ಮಂತ್ರ, ಬ್ರಾಹ್ಮಣ ಮತ್ತು ಕಲ್ಪ ಎಂಬ ಮೂರು ಪ್ರಕಾರಗಳಿಂದ ಬದ್ಧನಾದವನೂ, ಕಾಮವರ್ಷಕನೂ ಆದ ಈ ದೇವನು ಅಧಿಕವಾಗಿ ಶಬ್ದವನ್ನು ಮಾಡುತ್ತಾನೆ ಮಹಾತ್ಮನಾದ ಈ ದೇವನು ಮಾನವರನ್ನೆಲ್ಲಾ ವ್ಯಾಪಿಸಿದ್ದಾನೆ.

English Translation.

Four are his horns ; three are his feet , his heads are two, his hands are seven . the triple-bound showerer (of benefits) roars aloud : the mighty deity has entered amongst men.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಭಾಷ್ಯಕಾರರು ವ್ಯಾಖ್ಯಾನ ಮಾಡುವಾಗ ಯಾಸ್ಕರು ಹೇಳಿರುವ ನಿರ್ವಚನವನ್ನೇ ಅನುಸರಿಸಿ ಅರ್ಥಮಾಡಿರುವರು ಈ ಸೂಕ್ತದ ಋಕ್ಕುಗಳಿಗೆಲ್ಲಾ ಹಿಂದೆ ಹೇಳಿದಂತೆ ಅಗ್ನಿ, ಸೂರ್ಯ ಮೊದಲಾದ ಐದು ದೇವತೆಗಳ ಪರವಾಗಿಯೂ ವ್ಯಾಖ್ಯಾನ ಮಾಡಬೇಕಾದುದು ಯುಕ್ತವಾಗಿದ್ದರೂ ನಿರುಕ್ತಕಾರರ ಮತದಂತೆ ಯಜ್ಞಾತ್ಮಕನಾದ ಅಗ್ನಿ ಮತ್ತು ಸೂರ್ಯನ ಪರವಾಗಿ ಎರಡು ವಿಧವಾಗಿ ಮಾತ್ರ ಅರ್ಥವಿವರಣೆ ಮಾಡುವೆವು. ಇತರ ದೇವತಾಪರವಾದ ಅರ್ಥವನ್ನು ಪಾಠಕರೇ ಊಹಿಸಿಕೊಳ್ಳಬಹುದು ಎಂದು ಹೇಳಿ ಮೊದಲು ಯಜ್ಞಾತ್ಮಕನಾದ ಅಗ್ನಿಯ ಪರವಾಗಿಯೂ, ಅನಂತರ ಸೂರ್ಯನ ಪರವಾಗಿಯೂ ಅರ್ಥವಿವರಣೆ ಮಾಡಿದಾರೆ. ಯಜ್ಞಾಗ್ನಿ ಪರವಾದ ಅರ್ಥವನ್ನು ನಾವು ಈ ಋಕ್ಕಿನ ಪ್ರತಿಪದಾರ್ಥ ಭಾಗದಲ್ಲಿ ವಿವರಿಸಿರುವುದಲ್ಲದೆ, ನಿರುಕ್ತವಚನವೂ ಅದೇ ರೀತಿ ಇರುವುದರಿಂದ ಮೊದಲು ಈ ಋಕ್ಕಿನ ನಿರ್ವಚನದ ಅರ್ಥವನ್ನು ವಿವರಿಸಿ ಅನಂತರ ಸೂರ್ಯಪರವಾದ ಅರ್ಥವನ್ನು ವಿವರಿಸುವೆವು.

ಚತ್ವಾರಿ ಶೃಂಗೇತಿ ವೇದಾ ವಾ ಏತ ಉಕ್ತಾಃ । ತ್ರಯೋ ಅಸ್ಯ ಪಾದಾ ಇತಿ ಸವನಾನಿ ತ್ರೀಣಿ । ದ್ವೇ ಶೀರ್ಷೇ ಪ್ರಾಯಣೀಯೋದಯನೀಯೇ । ಸಪ್ತ ಹಸ್ತಾಸಃ ಸಪ್ತ ಛಂದಾಂಸಿ । ತ್ರಿಧಾ ಬದ್ಧಸ್ತ್ರೇಧಾ ಬದ್ಧೋ ಮಂತ್ರಬ್ರಾಹ್ಮಣಕಲ್ಪೈಃ । ವೃಷಭೋ ರೋರವೀತಿ ರೋರವಣಮಸ್ಯ ಸವನಕ್ರಮೇಣ ಋಗ್ಭಿರ್ಯಜುರ್ಭಿಃ ಸಾಮಭಿರ್ಯದೇನಮೃಗ್ಭಿಃ ಶಂಸಂತಿ ಯಜುರ್ಭಿರ್ಯಜಂತಿ ಸಾಮಭಿಃ ಸ್ತುವಂತಿ ಮಹೋ ದೇವ ಇತ್ಯೇಷ ಹಿ ಮಹಾನ್ ದೇವೋ ಯದ್ಯಜ್ಞೋ ಮರ್ತ್ಯಾನ್ ಆವಿವೇಶೇತ್ಯೇಷ ಹಿ ಮನುಷ್ಯಾನಾವಿಶತಿ ಯಜನಾಯ ॥

(ನಿ. ೧೩-೭)

ಈ ನಿರ್ವಚನದ ವಿವರಣೆಯನ್ನು ಭಾಷ್ಯಕಾರರ ಅರ್ಥದೊಂದಿಗೆ ಸೇರಿಸಿ ವಿವರಿಸುತ್ತೇವೆ.

ಚತ್ವಾರಿ ಶೃಂಗಾಃ । ಈ ಯಜ್ಞಾತ್ಮಕನಾದ ಅಗ್ನಿಗೆ ನಾಲ್ಕು ಕೊಂಬುಗಳಿರುವವು. ಇಲ್ಲಿ ಕೊಂಬುಗಳೆಂದರೆ ವೇದಗಳು ನಾಲ್ಕು ಕೊಂಬುಗಳೆಂದರೆ—ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂಬ ನಾಲ್ಕು ವೇದಗಳೇ ನಾಲ್ಕು ಕೊಂಬುಗಳು.

ತ್ರಯೋ ಅಸ್ಯ ಪಾದಾಃ । ಯಜ್ಞಾಂಗಗಳಾದ ಎಂದರೆ ಯಜ್ಞದಲ್ಲಿ ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ನೆರವೇರಿಸಲ್ಪಡುವ ಪ್ರಾತಃಸ್ಸವನ, ಮಾಧ್ಯಂದಿನಸವನ, ತೃತೀಯಸವನವೆಂಬ ಮೂರು ಸವನ ಕರ್ಮಗಳು. ಸವನವೆಂದರೆ ದೇವತೆಗಳಿಗೆ ಸೋಮವನ್ನು ಅರ್ಪಿಸುವುದಕ್ಕಾಗಿಯೂ, ಋತ್ವಿಜರ್ಜನರು ಸೋಮಪಾನ ಮಾಡುವುದಕ್ಕಾಗಿಯೂ ಯಜ್ಞದಲ್ಲಿ ಸೋಮಲತೆಗಳನ್ನು (ಬಳ್ಳಿಗಳನ್ನು) ಕಂದು ಅವುಗಳನ್ನು ಕಲ್ಲುಗಳಿಂದ ಜಜ್ಜಿ ರಸವನ್ನು ಹಿಂಡಿ ತೆಗೆದು ಶೋಧಿಸಿ ಕಲಶಗಳಲ್ಲಿ ತುಂಬಿ ಮಂತ್ರಾದಿಗಳಿಂದ ಸಂಸ್ಕರಿಸುವರು. ಅನಂತರ ಆಯಾ ದೇವತೆಗಳನ್ನುದ್ದೇಶಿಸಿ ಅಗ್ನಿಯಲ್ಲಿ ಹೋಮಮಾಡಿ ಅನಂತರ ಪಾನವನ್ನು ಮಾಡುವರು. ಇದಕ್ಕೆ ಸವನ (ರಸವನ್ನು ಹಿಂಡಿ ತೆಗೆಯುವ) ಕರ್ಮವೆಂದು ಹೆಸರು. ಈ ಕರ್ಮವು ಯಜ್ಞದ ಸುತ್ಯಾದಿನದಲ್ಲಿ ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ ಎಂಬ ಮೂರು ಕಾಲಗಳಲ್ಲಿಯೂ ನಡೆಯುವುದು. ಈ ಕರ್ಮಗಳು ಯಜ್ಞಕ್ಕೆ ಮುಖ್ಯ ಸಾಧನವಾದ್ದರಿಂದ ಇಲ್ಲಿ ಈ ಕರ್ಮಗಳನ್ನು ಯಜ್ಞದ (ಅಥವಾ ಯಜ್ಞಾಗ್ನಿಯ) ಮೂರು ಪಾದಗಳೆಂದು ವರ್ಣಿಸಿದೆ

ದ್ವೇ ಶಿರ್ಷೇ—ಬ್ರಹ್ಮೌದನ ಮತ್ತು ಪ್ರವರ್ಗ್ಯ ಎಂಬ ಎರಡು ಕರ್ಮಗಳು. ಯಾಸ್ಕರು—ಪ್ರಾಯಣೀಯ ಮತ್ತು ಉದಯನೀಯ ಎಂಬ ಎರಡು ಕರ್ಮಗಳೆಂದು ವಿವರಿಸಿದ್ದಾರೆ ಎಂದರೆ ಯಜ್ಞಾದಲ್ಲಿ ಪ್ರಾಯಣೀಯೋಷ್ಟಿ ಎಂಬ ಕರ್ಮವನ್ನು ಪ್ರಾರಂಭದಲ್ಲಿಯೂ, ಉದಯನೀಯೇಷ್ಟಿಯನ್ನು ಕೊನೆಯಲ್ಲಿಯೂ ನೆರವೇರಿಸುವರು. ಈ ಎರಡು ಕರ್ಮಗಳನ್ನು ಇಲ್ಲಿ ಯಜ್ಞದ ಎರಡು ಶಿರಸ್ಸುಗಳೆಂದು ಹೇಳಿದೆ.

ಸಪ್ತ ಹಸ್ತಾಸೋ ಅಸ್ಯ—ಗಾಯತ್ರೀ, ಅನುಷ್ಟುಪ್, ತ್ರಿಷ್ಟುಪ್, ಬೃಹತೀ, ಉಷ್ಣಿಕ್, ಜಗತೀ, ಪಂಕ್ತಿಃ ಎಂಬ ಏಳು ವಿಧವಾದ ಛಂದಸ್ಸುಗಳೇ ಏಳು ಹಸ್ತಗಳು ಯಜ್ಞದಲ್ಲಿ ಪ್ರಾತರನುವಾಕ ಮತ್ತು ಶಸ್ತ್ರಮಂತ್ರ ಪಠನಮಾಡುವಾಗ ಆಯಾ ದೇವತೆಗಳನ್ನುದ್ದೇಶಿಸಿ ಪಠಿಸುವ ಮಂತ್ರಗಳಲ್ಲಿ ಈ ಏಳು ವಿಧವಾದ ಛಂದಸ್ಸಿನ ಋಕ್ಕು ಗಳಿಂದ ಕೂಡಿದ ಮಂತ್ರಗಳನ್ನೇ ಪಠಿಸಬೇಕೆಂಬ ನಿಯನುವಿದೆ. ಇಲ್ಲಿ ಆ ಏಳು ಛಂದಸ್ಸುಗಳೇ ಯಜ್ಞಾಗ್ನಿಯ ಏಳು ಹಸ್ತಗಳೆಂದು ವರ್ಣಿಸಿದೆ.

ತ್ರಿಧಾ ಬದ್ಧಃ— ಯಜ್ಞಕರ್ಮವು ಮಂತ್ರ, ಬ್ರಾಹ್ಮಣ, ಕಲ್ಪ ಎಂಬ ಮೂರುವಿಧವಾದ ಗ್ರಂಥಗಳಲ್ಲಿ ಹೇಳಿರುವ ನಿಯಮಗಳಿಗೆ ಒಳಪಟ್ಟು ನಡೆಯುವುದರಿಂದ ಈ ಯಜ್ಞವು ಮೂರುವಿಧ ನಿಯಮಗಳಿಗೆ ಬದ್ಧವಾಗಿರುವು ದೆಂದು ಇಲ್ಲಿ ಹೇಳಿದೆ.ಶ್ಚ ಮಂತ್ರವೆಂದರೆ, ಯಜ್ಞದ ಆಯಾ ಕರ್ಮದಲ್ಲಿ ಸಂದರ್ಭಾನುಸಾರವಾಗಿ ಹೋತೃ ಮೊದಲಾದ ಋತ್ವಿಜರಿಂದ ಪಠಿಸುವ ವೇದಮಂತ್ರಗಳು. ಮಂತ್ರದಲ್ಲಿ ಸೂಚಿತವಾಗಿರುವ ಅರ್ಥವು ಆಯಾ ಕರ್ಮವನ್ನು ಸ್ಪಷ್ಟ ಪಡಿಸುತ್ತದೆ. ಆದುದರಿಂದ ಪ್ರತಿ ಕರ್ಮದಲ್ಲಿಯೂ ಆ ಅರ್ಥವನ್ನು ಸೂಚಿಸುವ ಮಂತ್ರವನ್ನೇ ಪಠಿಸಬೇಕು ಎಂಬ ನಿಯಮವಿದೆ (ಇದಕ್ಕೆ ರೂಪಸಮೃದ್ಧಿ ಎಂದು ಐತರೇಯ ಬ್ರಾಹ್ಮಣದಲ್ಲಿ ವಿವರಣೆ ಇದೆ). ಬ್ರಾಹ್ಮಣವೆಂದರೆ, ಇಂತಹ ಕರ್ಮವನ್ನು ಈ ವಿಧವಾಗಿ ಇಂತಹ ಕಾಲದಲ್ಲಿ ಮಾಡಬೇಕ , ಈರೀತಿ ಮಾಡುವುದಕ್ಕೆ ಇಂತಹ ಕಾರಣವಿದೆ, ಈ ವಿಷಯದಲ್ಲಿ ಇಂತಹ ಪೂರ್ವೇತಿಹಾಸವಿದೆ. ಆದ್ದರಿಂದ ಕರ್ಮವನ್ನು ಈ ರೀತಿಯಾಗಿಯೇ ಮಾಡಬೇಕು ಎಂಬ ವಿಧಿಗಳೂ ವಿವರಣೆಗಳೂ ಇರುವವು. ಕಲ್ಪವೆಂದರೆ, ಶ್ರೌತಸೂತ್ರ ಮೊದಲಾದ ಸೂತ್ರಗಳು ಯಜ್ಞಾದಲ್ಲಿ ಯಾವ ಯಾವ ಕಾಲದಲ್ಲಿ ಯಾವ ಮಂತ್ರಗಳನ್ನು ಹೇಳಬೇಕು, ಕರ್ಮಗಳನ್ನು ಹೇಗೆ ಮಾಡಬೇಕು ಮೊದಲಾದ ವಿಷಯ ಗಳನ್ನು ಆಶ್ವಲಾಯನ, ಆಪಸ್ತಂಬ ಮೊದಲಾದ ಮಹರ್ಷಿಗಳು ಶ್ರೌತಾದಿ ಸೂತ್ರಗಳಲ್ಲಿ ಚೆನ್ನಾಗಿ ವಿವರಿಸಿರುವರು. ಯಜ್ಞಾದಿಗಳನ್ನು ಆದರಂತೆಯೇ ನಡೆಸಬೇಕು. ಆದುದರಿಂದ ಯಜ್ಞಕರ್ಮವು ಮಂತ್ರ, ಬ್ರಾಹ್ಮಣ, ಕಲ್ಪ ಎಂಬ ಮೂರುವಿಧ ನಿಯಮಗ್ರಂಥಗಳ ಸೂತ್ರಾದಿಗಳಿಗೆ ಒಳಪಟ್ಟಿರುವುದೆಂದು ಇಲ್ಲಿ ವಿವರಿಸಿದೆ

ವೃಷಭೋ ರೋರವೀತಿ—ವೃಷಭ ಶಬ್ದಕ್ಕೆ **ಫಲಾನಾಂ ವರ್ಷಿತಾ** ಅಭೀಷ್ಟಫಲಗಳನ್ನು ಸುರಿಸುವವನು ಎಂದರ್ಥವು. ಯಜ್ಞಮಾಡುವ ಯಜಮಾನನಿಗೆ ಯಜ್ಞವು ಅಭೀಷ್ಟ ಫಲಗಳನ್ನು ಯಥೇಚ್ಛವಾಗಿ ಒದಗಿಸಿಕೊಡು ವುದು. ಇಂತಹ ಯಜ್ಞವು ಶಬ್ದದಿಂದ ಎಂದರೆ ಮಂತ್ರಧ್ವನಿಗಳಿಂದ ಸಹಿತವಾಗಿದೆ ಎಂದರೆ, ಯಜ್ಞದಲ್ಲಿ ಋತ್ವಿಜರು ವೇದಮಂತ್ರಗಳನ್ನು ಉಚ್ಚಧ್ವನಿಯಿಂದ ಪಠಿಸುತ್ತಾರೆ ಎಂದಭಿಪ್ರಾಯವು. ಮೂರು ಸವನಕಾಲಗಳಲ್ಲಿಯೂ ಹೋತ್ರಾದಿ ಋತ್ವಿಕ್ಕುಗಳು ಮೂರು ವೇದದಗಳನ್ನು ಪಠಿಸುತ್ತಾರೆ. ಹೋತೃವರ್ಗದ ಋತ್ವಿಕ್ಕುಗಳು ಋಗ್ವೇದದ ಮಂತ್ರಗಳಿಂದ ದೇವತೆಗಳನ್ನು ಸ್ತೋತ್ರಮಾಡುತ್ತಾರೆ ಅಧ್ವರ್ಯುವರ್ಗದ ಋತ್ವಿಕ್ಕುಗಳು ಯಜುರ್ವೇದದ ಮಂತ್ರ ಗಳಿಂದ ಯಜ್ಞಾದಲ್ಲಿ ನಾನಾ ಕಾರ್ಯಕಲಾಪಗಳನ್ನು ನೆರವೇರಿಸುತ್ತಾರೆ. ಉದ್ಗಾತೃವರ್ಗದ ಋತ್ವಿಕ್ಕುಗಳು ದೇವತೆಗಳ ಪ್ರೀತ್ಯರ್ಥವಾಗಿ ಶ್ರಾವ್ಯವಾದ ಸಾಮಮಂತ್ರಗಳಿಂದ ಗಾನಮಾಡುತ್ತಾರೆ. ಈ ರೀತಿ ಮೂರು ವೇದಗಳ ಮಂತ್ರ

ಪಶನದಿಂದ ಯಜ್ಞವು ಮಧುರಧ್ವನಿಯುಕ್ತವಾಗಿರುವುದು. ಆದ್ದರಿಂದ ಯಜ್ಞವನ್ನು **ವೃಷಭೋ ರೋರವೀತಿ** ಎಂಬ ವಾಕ್ಯದಿಂದ ವರ್ಣಿಸಲಾಗಿದೆ.

ಮಹೋ ದೇವಃ ಮರ್ತ್ಯಾನ್ ಆವಿವೇಶ—ಮಹಾದೇವತೆಯಾದ ಯಜ್ಞವು ಯಜ್ಞಮಾಡುವ ಯಜಮಾನರಾದ ಋತ್ವಿಗ್ವರ್ಗವನ್ನು ಪ್ರವೇಶಿಸಿತು ಎಂದರೆ ವ್ಯಾಪಿಸಿತು ಎಂದರೆ ಮನುಷ್ಯ ಯಜಮಾನರು ಯಜ್ಞಾದಿಗಳನ್ನು ಋತ್ವಿಗ್ವರ್ಗನ ಸಹಿತರಾಗಿ ಆಚರಿಸುವುದರಿಂದ ಯಜ್ಞವು ಮನುಷ್ಯರನ್ನು ಪ್ರವೇಶಿಸಿತು ಎಂದು ಪ್ರಕಾರಾಂತರವಾಗಿ ವರ್ಣಿಸಿದೆ. ಇದು ಯಜ್ಞಾಗ್ನಿಪರವಾದ ಅರ್ಥವಿವರಣೆಯು. ಇನ್ನು ಸೂರ್ಯನ (ಆದಿತ್ಯನ) ಪರವಾದ ವಿವರಣೆಯನ್ನು ಹೇಳುತ್ತೇವೆ—

ಸೂರ್ಯನ ಪರವಾದ ಅರ್ಥವಿವರಣೆ

ಚತ್ವಾರಿ ಶೃಂಗಾಣಿ—**ಚತಸ್ರೋ ದಿಶಃ** । ನಾಲ್ಕು ದಿಕ್ಕುಗಳೇ ನಾಲ್ಕು ಕೊಂಬುಗಳು. ಈ ನಾಲ್ಕು ದಿಕ್ಕುಗಳೂ ನಾಲ್ಕು ವೇದಗಳೆಂದೂ ಶ್ರುತಿ ವಾಕ್ಯವಿದೆ—

ಋಚಾಂ ಪ್ರಾಚೀ ಮಹತೀ ದಿಗುಚ್ಯತೇ । ದಕ್ಷಿಣಾಮಾಹುರ್ಯಜುಷಾಮಸಾರಾಂ । ಅಥರ್ವಣಾಮಂಗಿರಸಾಂ ಪ್ರತೀಚೀ । ಸಾಮ್ನಾಮುದೀಚೀ ಮಹತೀ ದಿಗುಚ್ಯತೇ ॥

(ತೈ ಬ್ರಾ ೩-೧೨-೯-೧)

ಎಂದರೆ ಋಗ್ವೇದಕ್ಕೆ ಪೂರ್ವದಿಕ್ಕೆಂದೂ, ಯಜುರ್ವೇದಕ್ಕೆ ದಕ್ಷಿಣದಿಕ್ಕೆಂದೂ, ಅಥರ್ವವೇದಕ್ಕೆ ಪಶ್ಚಿಮದಿಕ್ಕೆಂದೂ, ಸಾಮವೇದಕ್ಕೆ ಉತ್ತರದಿಕ್ಕೆಂದೂ ಹೆಸರು

ತ್ರಯೋ ಅಸ್ಯ ಪಾದಾಃ—**ತ್ರಯೋ ವೇದಾಃ ಪಾದಸ್ಥಾನೀಯಾ ಭವಂತಿ ಗಮನಸಾಧನತ್ವಾತ್ । ತಥಾ ಹಿ—ಋಗ್ಭಿಃ ಪೂರ್ವಾಹ್ಣೇ ದಿವಿ ದೇವಾ ಈಯತೇ ಇತ್ಯುಪಕ್ರಮ್ಯ ವೇದೈರಶೂನ್ಯಸ್ತ್ರಿಭಿರೇತಿ ಸೂರ್ಯಃ** (ತೈ ಬ್ರಾ ೩-೧೨-೯-೧) ಇತಿ ಹಿ ವೇದತ್ರಯೇಣ ಗತಿರಾಮ್ನಾತಾ । ಸೂರ್ಯನಿಗೆ ಋಗ್ಯಜುಸ್ಸಾಮಗಳೆಂಬ ನೂರು ವೇದಗಳೇ ಮೂರು ಪಾದಗಳಂತಿರುವವು ಎಂದರೆ ಸೂರ್ಯನ ಗತಿಯು ಮೂರು ವೇದಗಳಿಂದ ಸಾಗುತ್ತಿರುವುದು ಎಂದಭಿಪ್ರಾಯವು ಈ ವಿಷಯದಲ್ಲಿ—

ಋಗ್ಭಿಃ ಪೂರ್ವಾಹ್ಣೇ ದಿವಿ ದೇವ ಈಯತೇ । ಯಜುರ್ವೇದೇ ತಿಷ್ಠತಿ ಮಧ್ಯೇ ಅಹ್ನಃ । ಸಾಮವೇದೇನಾಸ್ತಮಯೇ ಮಹೀಯತೇ । ವೇದೈರಶೂನ್ಯಸ್ತ್ರಿಭಿರೇತಿ ಸೂರ್ಯಃ ॥

(ತೈ ಬ್ರಾ ೩-೧೨-೯-೧)

ಎಂಬ ಶ್ರುತಿವಾಕ್ಯವಿದೆ ಎಂದರೆ ಸೂರ್ಯನು ಋಗ್ವೇದಮಂತ್ರಗಳ ಪ್ರಭಾವದಿಂದ ಪೂರ್ವಾಹ್ಣದಲ್ಲಿ ಅಥವಾ ಪ್ರಾತಃಕಾಲದಲ್ಲಿ ಉದಯಿಸಿ (ಪೂರ್ವದಿಕ್ಕಿನಲ್ಲಿ) ಬೆಳಗುವನು, ಯಜುರ್ವೇದದ ಮಂತ್ರಗಳ ಪ್ರಭಾವದಿಂದ ಮಧ್ಯಾಹ್ನ ಕಾಲದಲ್ಲಿ ಅಂತರಿಕ್ಷದ ಮಧ್ಯಭಾಗದಲ್ಲಿ (ನೆತ್ತಿಯ ಮೇಲೆ) ಇರುವನು ಸಾಮವೇದಮಂತ್ರ ಪ್ರಭಾವದಿಂದ ಸಾಯಂಕಾಲದಲ್ಲಿ ಪಶ್ಚಿಮದಿಕ್ಕಿನಲ್ಲಿ ಅಸ್ತಮಯನಾಗುವನು. ಈ ರೀತಿ ಸೂರ್ಯನು ಮೂರು ವೇದಗಳ ಮಂತ್ರಪ್ರಭಾವದಿಂದ ಸಂಚಾರಸಾಮರ್ಥ್ಯವುಳ್ಳವನಾಗುತ್ತಾನೆ ಎಂದಭಿಪ್ರಾಯವು. ಆದುದರಿಂದಲೇ ಸಂಚಾರಸಾಧನವಾದ ಈ ಮೂರು ವೇದಗಳೇ ಆದಿತ್ಯನಿಗೆ ಪಾದಸ್ಥಾನೀಯಗಳಾಗಿರುವುವು ಎಂದು ಹೇಳಿದೆ

ದ್ವೇ ಶೀರ್ಷೇ—ಅಹಶ್ಚ ರಾತ್ರಿಶ್ಚೇತಿ ದ್ವೇ ಶಿರಸೀ । ಹಗಲು ಮತ್ತು ರಾತ್ರಿ ಎಂಬ ಎರಡು ಕಾಲಗಳೇ ಸೂರ್ಯನಿಗೆ ಎರಡು ಶಿರಸ್ಸುಗಳು.

ಸಪ್ತ ಹಸ್ತಾಸೋ ಅಸ್ಯ ಸಪ್ತರಶ್ಮಯಃ ಸಡ್ವಿಲಕ್ಷಣಾ ಋತವಃ ಏಕಃ ಸಾಧಾರಣ ಇತಿ ವಾ ಸಪ್ತ ಹಸ್ತಾ ಭವಂತಿ । ಏಳು ವಿಧವಾದ ರಶ್ಮಿಗಳೇ ಸೂರ್ಯನ ಏಳು ಹಸ್ತಗಳು. ಅಥವಾ ಬಸಿಲು, ಚಳಿ ಮೊದಲಾದ ವಿವಿಧಗುಣಗಳಿಂದ ಕೂಡಿದ ಆರು ಋತುಗಳೂ ಎಲ್ಲಕ್ಕೂ ಸಾಮಾನ್ಯವಾದ ಒಂದು ಋತುವೂ ಸೇರಿ ಏಳು ಹಸ್ತಗಳಾಗ ಬಹುದು. ಅಥವಾ ಸೂರ್ಯನ ಏಳು ಕುದುರೆಗಳೇ ಏಳು ಹಸ್ತಗಳೆಂದು ಬೇಕಾದರೂ ಹೇಳಬಹುದು.

ತ್ರಿಧಾ ಬದ್ಧಸ್ತ್ರಿಷು ಸ್ಥಾನೇಷು ಕ್ಷಿತ್ಯಾದಿಷು ಅಗ್ನ್ಯಾದ್ಯಾತ್ಮಕತ್ವೇನ ಸಂಬಂಧಃ । ಗ್ರೀಷ್ಮವರ್ಷಾ ಹೇಮಂತಾಖ್ಯೈಸ್ತ್ರಿಭಿಸ್ತ್ರೇಧಾ ಬದ್ಧೋವಾ ॥ ಭೂಮಿ, ಅಂತರಿಕ್ಷ, ಸ್ವರ್ಗ ಎಂಬ ಮೂರು ಸ್ಥಾನಗಳಲ್ಲಿ ಇರುವವನಾದ್ದರಿಂದ ಸೂರ್ಯನು ಮೂರು ವಿಧವಾದ ಸಂಬಂಧವುಳ್ಳವನು ಅಥವಾ ಗ್ರೀಷ್ಮಋತು, ವರ್ಷಋತು, ಹೇಮಂತಋತು ಎಂಬ ಮೂರು ಮುಖ್ಯವಾದ ಋತುಧರ್ಮಗಳಿಗೆ ಕಾರಣನಾದ್ದರಿಂದ ಸೂರ್ಯನಿಗೆ ಮೂರುವಿಧವಾದ ಸಂಬಂಧವಿರುವುದು

ವೃಷಭೋ ವರ್ಷಿತಾ ರೋರವೀತಿ ಶಬ್ದಂ ಕರೋತಿ ವೃಷ್ಟ್ಯಾದಿದ್ವಾರಾ—ಸೂರ್ಯನು ತನ್ನ ರಶ್ಮಿಗಳ ಮೂಲಕ ಜಲಾಶಯಗಳ ರಸಾದಿಗಳನ್ನು ಆಕರ್ಷಿಸಿ (ಹೀರಿ) ಅವು ಮೇಘರೂಪದಲ್ಲಿ ವೃಷ್ಟಿಯನ್ನು ಸುರಿಸುವಂತೆ ಮಾಡುವವನಾದ್ದರಿಂದ ವೃಷಭ ಎಂದರೆ ವೃಷ್ಟಿಯನ್ನು ಸುರಿಸುವವನು ಎಂದು ಹೇಳಲ್ಪಡುವನು. ಮತ್ತು ವೃಷ್ಟಿಕಾಲದಲ್ಲಿ ಶಿಡಿಲು ಗುಡುಗು ಮೊದಲಾದ ಶಬ್ದಗಳಿರುವುದರಿಂದ ಶಬ್ದವನ್ನು ಮಾಡುತ್ತಿರುವನು (ಶಬ್ದಗಳಿಗೆ ಕಾರಣಭೂತನು) ಎಂದೂ ಹೇಳಲ್ಪಡುವನು

ಮಹೋ ದೇವೋ ಮರ್ತ್ಯಾನ್ ಆ ವಿವೇಶ—ಸ ಮಹಾನ್ ದೇವೋ ಮರ್ತ್ಯಾನಾಂ ನಿಯಂತೃತಯಾ ತಾನ್ ಪ್ರವಿಶತಿ । ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ (ಋ. ಸಂ. ೧-೧೧೫ ೧) **ಇತಿ ಹಿ ಶ್ರುತಂ।** ಇಂತಹ ಮಹಾಮಹಿಮನಾದ ಸೂರ್ಯನು ಸರ್ವಪ್ರಾಣಿಗಳ ಶರೀರದಲ್ಲಿಯೂ ಅಂತರಾತ್ಮನಾಗಿ, ಅವರನ್ನು ಪ್ರೇರಿಸುವುದಕ್ಕಾಗಿ ಪ್ರವೇಶಿಸುವನು. ಸೂರ್ಯನಿಂದಲೇ ಸಕಲಪ್ರಾಣಿಗಳೂ ಜೀವಿಸುವುವು. ಸೂರ್ಯನೇ ಸಕಲ ಚರಾಚರಾತ್ಮಕವಾದ ಪ್ರಾಣಿವರ್ಗಕ್ಕೆ ಪ್ರೇರಕನಾಗಿ ಅವುಗಳಲ್ಲಿ ಅಂತರಾತ್ಮಭಾವದಿಂದ ನೆಲಸಿರುವನು ಎಂಬ ವಿಷಯವನ್ನು **ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ** ಎಂಬ ಶ್ರುತಿವಾಕ್ಯವು ಸಮರ್ಥಿಸುವುದು.

ಈ ರೀತಿ ಸೂರ್ಯಪರವಾದ ಅರ್ಥವಿವರಣೆ ಇರುವುದು ಆಪಃ ಮೊದಲಾದ ಇತರ ದೇವತೆಗಳ ಪರವಾಗಿಯೂ ಇದೇ ರೀತಿ ಅರ್ಥವನ್ನು ಊಹಿಸಿಕೊಳ್ಳಬೇಕು ಶಬ್ದಶಾಸ್ತ್ರವಿಶಾರದರು (ನೈಯಾಕರಣರು) ಚತ್ವಾರಿ ಶೃಂಗಾ ಎಂಬ ಪದಗಳಿಗೆ ಶಬ್ದಬ್ರಹ್ಮಪರವಾಗಿ ನಾಮ, ಆಖ್ಯಾತ, ಉಪಸರ್ಗ, ನಿಪಾತ ಎಂಬ ನಾಲ್ಕು ವಿಧ ಶಬ್ದಗಳೆಂದು ಅಭಿಪ್ರಾಯಪಡುವರು ಇತರರು ಬೇರೆ ವಿಧವಾಗಿ ಹೇಳುವರು ಆದುದರಿಂದ ಆಯಾ ಸಂದರ್ಭಕ್ಕನುಸಾರವಾಗಿ ಅರ್ಥಮಾಡಬೇಕು

ಋ. ಸಂ. ಭಗ. ೧ ಪೇಜು 40 ರಲ್ಲಿ ಸಾಯಣಭಾಷ್ಯ ಭೂಮಿಕೆಯನ್ನು ವಿವರಿಸುವಾಗ ಭಾಷ್ಯಕಾರರು ಈ ಋಕ್ಕಿಗೆ ಸ್ವಲ್ಪ ವ್ಯತ್ಯಸ್ತವಾಗಿ ಅರ್ಥವನ್ನು ವಿವರಿಸಿರುವರು. ಅದನ್ನು ಅಲ್ಲಿ ನೋಡಿ ತಿಳಿಯಬಹುದು.

॥ संहितापाठः ॥

त्रिधा हितं पणिभिर्गुह्यमानं गवि देवासो घृतमन्वविन्दन्।
इन्द्र एकं सूर्य एकं जजान वेनादेकं स्वधया निष्ट-
तक्षुः ॥ ४ ॥

॥ पदपाठः ॥

त्रिधा । हितं । पणिऽभिः । गुह्यमानं । गवि । देवासः । घृतं । अनु । अविन्दन् ।
इन्द्रः । एकं । सूर्यः । एकं । जजान । वेनात् । एकं । स्वधया । निः । ततक्षुः ॥४॥

॥ सायणभाष्यं ॥

पणिभिरसुरैर्गवि गोषु त्रिधा क्षीरदधाज्यभेदेन त्रिप्रकारं हितं निहितं गुह्यमानं गोपितं घृतं दीप्तं रसरूपं वा द्रव्यं देवासो देवा अन्वविन्दन्। अलभन्त। तत्रेन्द्रः एकं क्षीरं जजान। उदपादयत्। सूर्य एकं जजान। वेनात्कान्तिमतोऽग्नेर्गर्भमनवतो वाऽपोनप्त्रेकं घृतं स्वधयान्नेन निमित्तेन द्रव्येण वा साधनेन निष्पतेक्षुः। निरपादयन् देवाः ॥

॥ प्रतिपदार्थ ॥

पणिभिः—असुरोंद्वारा। **गवि**—गोवुगळल्लि। **त्रिधा**—(क्षीर, दधि, आज्य, एंब) मूरु प्रकारवागि। **हितं**—इडल्पट्टुदु। **गुह्यमानं**—रहस्यवादुदू आद। **घृतं**—घृतवन्नु। **देवासः**—देवतेगळु। **अन्वविन्दन्**—पडेदरु (अवुगळल्लि)। **इन्द्रः**—इन्द्रनु। **एकं**—ऒंदु तत्त्ववन्नु। **जजान**—उत्पन्नमाडिदनु। **सूर्यः**—सूर्यनु। **एकं**—इन्नॊंदु तत्त्ववन्नु[(उत्पन्नमाडिदनु)। **वेनात्**—कान्तियुतनाद अग्नियिंद। **एकं**—मूरनेय तत्त्ववन्नु। **स्वधया**—स्वधान्निमित्तवागि। **निष्पतेक्षुः**—देवतेगळु उत्पन्नमाडिदरु.

॥ भावार्थ ॥

असुररिंद गोवुगळल्लि क्षीर, दधि, आज्य एंब मूरु प्रकारवागि इडल्पट्टुदू, रहस्यवादुदू आद घृतवन्नु देवतेगळु पडेदरु. इवुगळल्लि इन्द्रनु ऒंदन्नू सूर्यनु इन्नॊंदु तत्त्ववन्नू उत्पन्नमाडिदरु देवतेगळु कान्तियुतनाद अग्नियिंद मूरनेय तत्त्ववन्नु स्वधान्निमित्तवागि उत्पन्नमाडिदरु.

English Translation.

The gods discovered the Ghee concealed by the panis, placed threefold in the cow : Indra generated one (portion), Surya another, the (other gods) fabricated one from the resplendent (Agni), for the sake of the oblation.

॥ संहितापाठः ॥

एता अर्षन्ति हृदात्स्समुद्रा च्छतवृजा रिपुणा नावचक्षे ।
घृतस्य धारा अभि चाकशीमि हिरण्ययो वेतसो मध्य आसां ॥

॥ पदपाठः ॥

एताः । अर्षन्ति । हृदात् । समुद्रात् । शतऽवृजाः । रिपुणा । न । अवऽचक्षे ।
घृतस्य । धाराः । अभि । चाकशीमि । हिरण्ययः । वेतसः । मध्ये । आसां ॥ ५ ॥

॥ सायणभाष्यं ॥

एता आपो घृतधारा वार्षन्ति । अधः पतन्ति । शतवृजा आपरिमितगतयः सत्यो हृदात्हृदयंगमात्स्समुद्रादंतरिक्षाद्रिपुणा जलमोकःप्रतिबंधकारिणा शत्रुणा वृत्रेण नावचक्षे न अवदर्शनाय यथादृश्यं भवति तथार्षन्ति । ता घृतस्य धारा अभि चाकशीमि । अभिपश्यामि । कुत्रेति तदुच्यते । हिरण्ययो हिरण्मयो वेतसोऽप्सुंभवोऽग्निर्वैद्युत आसामासां मध्ये वर्तत इति शेषः । अत्र घृतस्य धारा अभि चाकशीमीत्यनेन चरमपादेन होमाधारोऽग्निर्वैद्युतोऽग्निरादित्यो वोक्तः ॥

॥ प्रतिपदार्थः ॥

हृदात्—हृदयंगमवाद । समुद्रात्—अंतरिक्षदिंद । एताः—ई उदकगळु । शतवृजाः—नूरारु गतिगळुळ्ळवागि । अर्षन्ति—प्रवहिसुत्तवे (ओदरे) । रिपुणा—प्रतिबंधकनाद वृत्रनिंद । न अवचक्षे—नोडल्पडुवुदिल्ल । घृतस्य—ई उदकद । धाराः—प्रवाहगळन्नु । अभि चाकशीमि—सुत्तलू नोडुत्तेनॆ । आसां—ई उदकप्रवाहगळ । मध्ये—मध्यदल्लि । हिरण्ययः—हिरण्यरूपनाद । वेतसः—वैद्युत्याग्नियु (स्थितनागिद्दानॆ).

॥ ಭಾವಾರ್ಥ ॥

ಹೃದಯಂಗಮವಾದ ಅಂತರಿಕ್ಷದಿಂದ ಉದಕಗಳು ನೂರಾರು ಗತಿಗಳುಳ್ಳವಾಗಿ ಪ್ರವಹಿಸುತ್ತವೆ. ಆದರೆ ಅವು ಪ್ರವಾಹಪ್ರತಿಬಂಧಕವಾದ ವೃತ್ರನಿಂದ ನೋಡಲ್ಪಡುವುದಿಲ್ಲ. ನಾನು ಈ ಉದಕಗಳನ್ನು ಸುತ್ತಲೂ ನೋಡುತ್ತೇನೆ. ಈ ಉದಕಪ್ರವಾಹಗಳ ಮಧ್ಯದಲ್ಲಿ ಹಿರಣ್ಯರೂಪನಾದ ವೈದ್ಯುತಾಗ್ನಿಯು ಸ್ಥಿತನಾಗಿದ್ದಾನೆ

English Translation.

These hundred-channelled showers fall from the heart-delighting firmament, unobserved by the hostile (cloud) . I look upon these showers of Ghi, (and behold) the golden Vetasa in the midst of them.

॥ ಸಂಹಿತಾಪಾಠಃ ॥

ಸಮ್ಯಕ್ಸ್ರವಂತಿ ಸರಿತೋ ನ ಧೇನಾ ಅಂತರ್ಹೃದಾ ಮನಸಾ ಪೂಯಮಾನಾಃ ।
ಏತೇ ಅರ್ಷಂತ್ಯೂರ್ಮಯೋ ಘೃತಸ್ಯ ಮೃಗಾಇವ ಕ್ಷಿಪಣೋರೀಷಮಾಣಾಃ ॥ ೬ ॥

॥ ಪದಪಾಠಃ ॥

ಸಮ್ಯಕ್ । ಸ್ರವಂತಿ । ಸರಿತಃ । ನ । ಧೇನಾಃ । ಅಂತಃ । ಹೃದಾ । ಮನಸಾ । ಪೂಯಮಾನಾಃ ।
ಏತೇ । ಅರ್ಷಂತಿ । ಊರ್ಮಯಃ । ಘೃತಸ್ಯ । ಮೃಗಾಃ । ಇವ । ಕ್ಷಿಪಣೋಃ । ಈಷಮಾಣಾಃ ॥ ೬ ॥

॥ ಸಾಯಣಭಾಷ್ಯಂ ॥

ಅಸ್ಯಾಗ್ನೇರುಪರಿ ಸಮ್ಯಕ್ ಸ್ರವಂತಿ । ಕ್ಷರಂತಿ । ಘೃತಸ್ಯ ಧಾರಾಃ । ಕಮಿವ । ಸರಿತೋ ನ ಧೇನಾಃ ಪ್ರೀಣಯಿತ್ರ್ಯೋ ನದ್ಯ ಇವ । ಅಂತರ್ಹೃದಾ ಮನಸಾ ಹೃದಯಮಧ್ಯಗತೇನ ಚಿತ್ತೇನ । ಭಾವನಾಸಚಿವೇನೇತಿ ಯಾವತ್ । ತೇನ ಪೂಯಮಾನಾಃ ಶುದ್ಧೀಕ್ರಿಯಾಃ । ತದೇವೋಚ್ಯತೇ । ಏತೇ ಘೃತಸ್ಯೋರ್ಮಯೋ ರಸಾ ಅರ್ಷಂತಿ । ಗಚ್ಛಂತಿ । ಜುಹ್ವಾಃ ಸಕಾಶಾದಗ್ನೇರುಪರಿ ಪತಂತಿ । ಕಮಿವ । ಕ್ಷಿಪಣೋಃ ಕ್ಷೇಪಕಾದ್ವ್ಯಾಧಾದೀಷಮಾಣಾಃ ಪಲಾಯಮಾನಾ ಮೃಗಾ ಇವ । ತೇ ಯಥಾ ಕಕ್ಷಂ ಪ್ರವಿಶಂತಿ ತದ್ವತ್ । ಅನೇನ ಶೈಘ್ರ್ಯಮುಕ್ತಂ ಭವತಿ ॥

॥ प्रतिपदार्थः ॥

घृतस्य—घृतद । **धितेः ऊर्मयः**—अलेगळंतिरुव ई धारेगळु । **अंतर्हृदा**—हृदयांतर्गतवाद (भक्तिपूर्वकवाद) । **मनसा**—मनस्सिनिंद । **पूयमानाः**— पवित्रितवागि माडल्पट्टु । **धेनाः**—तृप्तिकारकगळाद । **सरितः न**—प्रवाहगळंते । **सम्यक्**—पूर्णवागि । **स्रवंति**—प्रवहिसुत्तवे । **क्षिपतोः**—बेटिगारनिंद । **ईषमाणाः**—तप्पिसिकोंडु ओडुत्तिरुव । **मृगा इव**—मृगगळंते (मृगगळु वेगदिंद पोदेयल्लि प्रवेशिसुवंते) । **अर्षंति**—(अग्नियल्लि) प्रवेशिसुत्तवे.

॥ भावार्थः ॥

अलेगळंतिरुव ई घृतद धारेगळु हृदयांतर्गतवाद एंदरे भक्तिपूर्वकवाद मनस्सिनिंद पवित्रितवागि माडल्पट्टु तृप्तिकारकगळाद प्रवाहगळंते पूर्णवागि प्रवहिसुत्तवे. बेटिगारनिंद तप्पिसिकोंडु ओडुत्तिरुव मृगगळु वेगदिंद पोदेयल्लि प्रवेशिसुवंते इवु अग्नियल्लि प्रवेशिसुत्तवे.

English Translation.

They flow uninterruptedly like pleasing rivers, purified by the mind that is seated in the heart: these streams of Ghi descend (upon the fire), like deer flying from the hunter.

॥ संहितापाठः ॥

सिंधोरिव प्राध्वने शूघनासो वातप्रमियः पतयंति यह्वाः ।
घृतस्य धारा अरुषो न वाजी काष्ठा भिंदन्नूर्मिभिः पिन्वमानः ॥ ६ ॥

॥ पदपाठः ॥

सिंधोःइव । प्रऽअध्वने । शूघनासः । वातऽप्रमियः । पतयंति । यह्वाः ॥
घृतस्य । धाराः । अरुषः । न । वाजी । काष्ठाः । भिंदन् । ऊर्मिऽभिः । पिन्वमानः ॥ ६ ॥

॥ सायणभाष्यं ॥

सिंधोः स्यंदमानायाः नद्याः सकाशादिवोदकानीव प्राध्वनेः प्रवणवति देशे शुभ्रनाम अश्वगंत्र्यः । अश्व इति च शु इति च क्षिप्रनामनी भवत इति निरुक्तं । ६-८ । वातप्रमियो वायुवत्क्षिप्रवेगा यंहस्वो मंहतोः घृतस्य धाराः पतयंति । गच्छंत्यग्नेरुपरि । घृतमुदकमिति पक्षे सिंधोरिवेत्यत्रेवशब्दोऽनर्थकः । स्यंदनसाधनादंतरिक्षादुत्कृष्टाः घृतधाराः उदकधाराः पतयंति । गच्छंति भूमौ । किंच घृतसंस्त्र्यः कास्ष्माः मर्यादाभूतास्परिधीन्छिंदन्नूर्मिभिः रसैः पिन्वमानोः वर्धमानोः भवति। उदकमिति पक्षे कास्ष्माः क्रांतास्थिता दिशोः भिंदन्नूर्मिभिस्तरंगैः पिन्वमानोः भवति । तत्र दृष्टांतः । अरुषोः न वाजीः अरोचमानोः गर्वणः गमनशीलोऽश्व इव । स यथा भिंदन्पिन्वमानश्च भवति तद्वत् ॥

॥ प्रतिपदार्थ ॥

प्राध्वनेः—पर्वतद कणिवे प्रदेशदल्लि । शुभ्रनासः—वेगवागि हरियुव । सिंधोः इव—नदिय प्रवाहदंते । यंह्वाः—प्रभूतवाद प्रमाणवुळ्ळवू । वातप्रमियः—वायुविनंते वेगवुळ्ळवू आद । घृतस्य धाराः—घृतद धारेगळु । अरुषः—वेगगामियाद । वाजीः न—अश्वदंते । कास्ष्माः—कास्यगळन्नु (परिधिगळन्नु) । भिंदन्—भेदिसुत्तलू । ऊर्मिभिः—अलेगळ रूपद रसगळिंद । पिन्वमानः—वृद्धियन्नु हॊंदुत्तलू । पतयंति—अग्नियन्नु प्रवेशिसुत्तवे.

॥ भावार्थ ॥

पर्वतद कणिवेप्रदेशदल्लि केळभागक्के वेगवागि हरियुव नदिय प्रवाहदंते प्रभूतवाद प्रमाणवुळ्ळवू, वायुविनंते वेगवुळ्ळद्दू आद घृतद धारेगळु वेगगामियाद अश्वदंते परिधिगळन्नु भेदिसुत्तलू अलेगळ रूपद रसगळिंद वृद्धियन्नु हॊंदुत्तलू अग्नियन्नु प्रवेशिसुत्तवे.

English Translation.

The streams of Ghi fall copious, swift as the wind, and rapid as the waters of a river down a declivity, breaking through the confining banks, and hurrying on with their waves, like a high-spirited steed.

। संहितापाठः ।

अभि प्रवन्त समनेव योषाः कल्याण्यः स्मयमानासो अग्निं ।
घृतस्य धाराः समिधो नसन्त ता जुषाणो हर्यति जातवेदाः ॥ ९ ॥

। पदपाठः ।

अभि । प्रवन्त । समनाऽइव । योषाः । कल्याण्यः । स्मयमानासः । अग्निं ।
घृतस्य । धाराः । सम्ऽइधः । नसन्त । ताः । जुषाणः । हर्यति । जातऽवेदाः ॥ ९ ॥

। सायणभाष्यं ।

घृतस्य धारा अमुमग्निं समनेव समानमनस्या योषा योषितः पतिमिवाभि प्रवन्त । अभिनमयंति । निमग्नं कुर्वंति । कीदृश्यस्ताः । कल्याण्यो भद्ररूपाः स्मयमानासो हसंत्यः । किंच ताः समिधः समृद्धिं प्रकाशयित्र्यः सत्यो नसंत । व्याप्नुवंति । ता एव धारा जुषाणः प्रीयमाणः सेवमानो वायं जातवेदा हर्यति । कामयते । घृतशब्दस्योदकमिति पक्षेऽग्निर्जातवेदःशब्दाभ्यां वैद्युतोऽग्निरादित्यो वा गृह्यते । तं देवमुदकधारा अभि प्रवन्त नसंत च । स ताश्च हर्यति ॥

॥ प्रतिपदार्थ ॥

कल्याण्यः—मंगलस्वरूपवुळ्ळवरू । स्मयमानासः—हसन्नुम्मिगळू । समनाः—अनुरूपवाद मनस्सुळ्ळवरू आद । योषा इव—पत्नियरु पतियरन्नु सेरिकॊळ्ळुवंते । घृतस्य धाराः—घृतद धारॆगळु । अग्निं—अग्नियन्नु । अभि प्रवन्त—अलिसुवंते सेरिकॊळ्ळुत्तवे । समिधः—(अग्नियन्नु) प्रज्वलिसुवंते माडुत्ता । नसंत—व्याप्तिसुत्तवे । जातवेदाः—जातवेदोरूपनाद अग्नियु । ताः—आ धारॆगळन्नु । जुषाणः—सेवितसुत्ता । हर्यति—स्वीकरिसुत्तानॆ.

। भावार्थ ।

मंगळस्वरूपवुळ्ळवरू, हसन्नुम्मिगळू, अनुरूवाद मनस्सुळ्ळवरू आद पत्नियरु तम्म पतिगळन्नु आलंगिसुवंते घृतद धारॆगळु अग्नियन्नु आलंगिसुवंते सेरिकॊळ्ळुत्तवे. अग्नियन्नु प्रज्वलिसुवंते माडुत्ता व्याप्तिसुत्तवे. जातवेदोरूपनाद अग्नियु आ धारॆगळन्नु सेवितसुत्ता अवन्नु स्वीकरिसुत्तानॆ.

English Translation.

The streams of Ghi incline to Agni as devoted wives, auspicious and smiling, to a husband: they feed (the flame) like fuel, and Jatavedas, propitiated, accepts them.

। ವಿಶೇಷವಿಷಯಗಳು ।

ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿದಾರೆ—

ಅಭಿನಮಂತ ಸಮನಸ ಇವ ಯೋಷಾಃ। ಸಮನಂ ಸಮನನಾದ್ವಾ ಸಂಮಾನನಾದ್ವಾ। ಕಲ್ಯಾಣ್ಯಃ ಸ್ಮಯಮಾನಾಸೋ ಅಗ್ನಿಮಿತ್ಯೌಪಮಿಕಂ। ಘೃತಸ್ಯ ಧಾರಾ ಉದಕಸ್ಯ ಧಾರಾಃ ಸಮಿಧೋ ನಸಂತ। ನಸತಿರಾಪ್ನೋತಿಕರ್ಮಾ ವಾ ನಮತಿಕರ್ಮಾ ವಾ। ತಾ ಜುಷಾಣೋ ಹರ್ಯತಿ ಜಾತವೇದಾಃ। ಹರ್ಯತಿಃ ಪ್ರೇಪ್ಸಾಕರ್ಮಾ ವಿಹರಯತೀತಿ ॥

(ನಿ. ೭-೧೭)

ಒಬ್ಬ ಪುರುಷನಿಗೆ ಅನೇಕ ಪತ್ನಿಯರಿದ್ದರೆ ಅವರೆಲ್ಲರೂ ತಮ್ಮ ಒಬ್ಬನೇ ಆದ ಪತಿಯಲ್ಲಿ ಸಮನಾದ ಮನಸ್ಸನ್ನು (ಪ್ರೀತಿಯನ್ನು) ವ್ಯಕ್ತಪಡಿಸುವರು **ಸಮನಂ** ಎಂಬ ಶಬ್ದಕ್ಕೆ ಒಂದೇ ವಿಧವಾದ ಮನಸ್ಸುಳ್ಳವರು. ಏಕೆಂದರೆ ಎಲ್ಲರೂ ಒಂದೆಡೆಯಲ್ಲಿ ವಾಸಿಸುತ್ತಾ (ಉಚ್ಛ್ವಾಸನಿಃಶ್ವಾಸಗಳ ಮೂಲಕ) ಒಂದೇ ಸ್ಥಳದಲ್ಲಿರುವ ವಾಯುವನ್ನು ಸೇವಿಸುತ್ತಾ ಇರುವರೆಂದೂ ಅಥವಾ ಎಲ್ಲರೂ ಒಂದೇ ವಿಧವಾಗಿ (ಒಬ್ಬನೇ ಆದ ತಮ್ಮ ಪತಿಯ ವಿಷಯದಲ್ಲಿ) ಆಲೋಚಿಸುತ್ತಾ ಇರುವರೆಂದೂ ಅರ್ಥವಾಗುವುದು. ಎಂದರೆ ಒಬ್ಬನಲ್ಲಿಯೇ ನೆಟ್ಟ ಮನಸ್ಸುಳ್ಳ ಅನೇಕ ಸ್ತ್ರೀಯರು ಯಾವರೀತಿ ವರ್ತಿಸುವರೋ ಅದರಂತೆ **ಕಲ್ಯಾಣ್ಯಃ** ಎಂದರೆ ರೂಪಯೌವನಸಂಪನ್ನರಾದ, ಒಳ್ಳೆಯ ಗುಣಗಳುಳ್ಳ ಎಂದರ್ಥವು, **ಸ್ಮಯಮಾನಾಸಃ** ಎಂದರೆ ಮಂದಹಾಸಯುಕ್ತರಾದ ಎಂದರ್ಥವು ಇಲ್ಲಿ ಅಗ್ನಿ ವಿಷಯದಲ್ಲಿ ಒಂದು ಉಪಮಾನವನ್ನು ಸೂಚಿಸಲಾಗಿದೆ ಒಬ್ಬ ಪುರುಷನ ಅನೇಕ ಪತ್ನಿಯರು ತಮ್ಮ ಪತಿಯ ವಿಷಯದಲ್ಲಿ ಯಾವರೀತಿ ಒಂದೇ ಮನಸ್ಸುಳ್ಳವರಾಗಿರುವರೋ ಮತ್ತು ರೂಪಯೌವನಸಂಪನ್ನರೂ, ಒಳ್ಳೆಯ ಗುಣಗಳುಳ್ಳವರೂ, ಮಂದಹಾಸಯುಕ್ತರೂ (ಮುಗುಳುನಗೆಯಿಂದ ಕೂಡಿದವರೂ) ಆಗಿ ಯಾವ ರೀತಿ ತಮ್ಮ ಸ್ವಾಮಿಯಾದ ಪತಿಯನ್ನು ನಮ್ರರಾಗಿ ಸಮಿಾಪಿಸುವರೋ ಹಾಗೆಯೇ ಅಂತರಿಕ್ಷದಲ್ಲಿರುವ ಉದಕಧಾರೆಗಳು ವೈದ್ಯುತಾಗ್ನಿಯನ್ನು (ಅಥವಾ ಘೃತ ಎಂದರೆ ಆಜ್ಯಧಾರೆಗಳು ಹೋಮಕಾಲದಲ್ಲಿ ಪ್ರಾರ್ಥಿವಾಗ್ನಿ ಅಥವಾ ಯಜ್ಞಾಗ್ನಿಯನ್ನು) ಕೆಳಗಿಳಿದು ಬಂದು ಸಮಿಾಪಿಸುತ್ತವೆ. ಮತ್ತು ಆ ಅಗ್ನಿಯಲ್ಲಿ ಐಕ್ಯವಾಗುತ್ತವೆ. **ನಸತಿ** ಧಾತುವಿಗೆ ಹೊಂದುವುದು ಅಥವಾ ಬಗ್ಗುವುದು ಎಂಬರ್ಥವಿರುವುದು. ಈ ಉದಕಧಾರೆ ಅಥವಾ ಘೃತಧಾರೆಯಿಂದ ಸೇವಿಸಲ್ಪಟ್ಟ ಅಗ್ನಿಯು (ಮಧ್ಯಮಸ್ಥಾನನಾದ ವೈದ್ಯುತಾಗ್ನಿ ಅಥವಾ ಪಾರ್ಥಿವಾಗ್ನಿಯೂ) ಸಂತೋಷವನ್ನು (ತೃಪ್ತಿಯನ್ನು) ಪಡೆಯುತ್ತಾನೆ. **ಹರ್ಯತಿ** ಧಾತುವಿಗೆ ಪುನಃಪುನಃ ಹೊಂದಬೇಕೆಂದು ಆಪೇಕ್ಷಿಸುವುದು ಎಂದರ್ಥವು ಅಗ್ನಿಯು ಘೃತಧಾರೆಗಳನ್ನು ಮತ್ತೆ ಮತ್ತೆ ಬಯಸುವನೆಂದಭಿಪ್ರಾಯವು.

॥ संहितापाठः ॥

कन्याइव वहतुमेतवा उ अञ्ज्यञ्जानाऽभि चाकशीमि ।
यत्र सोमः सूयतेयत्र यज्ञोघृतस्य धारा अभि
तत्पवन्ते ॥ ९ ॥

॥ पदपाठः ॥

कन्याःऽइव । वहतुम् । एतवै । ऊम् इति । अञ्जि । अञ्जानाः । अभि । चाकशीमि ।
यत्र । सोमः । सूयतेः । यत्र । यज्ञः । घृतस्य । धाराः । अभि । तत् । पवन्ते ॥

॥ सायणभाष्यं ॥

कन्या इवानूढा बालिका इव । सा यथा वहतुमुद्वाहं स्वापुत्वमेतवा उ एतुं पतिं गंतुमञ्ज्यञ्जकैर्माभरणं तेजोवा व्यञ्जानाना व्यञ्जयंत्यै । एवंकुर्वत्यै कन्या इव स्वभर्तृभूतमाघृष्टरं वैद्युतं वाग्निमादित्यं वा वहतुमेतुमञ्जि व्यञ्जकं तदीयं रूपमञ्जाना व्यञ्जयंतीघृतस्य धारा अभि चाकशीमि । अभिपश्यामि । घृतेनोदकेन च द्यौमस्य वैद्युतस्य चाग्नेः प्रज्वलनं प्रसिद्धं । किंच ता धाराः सोमः सूयतेयत्र यत्र चेतरोयज्ञस्तायते तत्तं यज्ञमभिलक्ष्य पवन्ते । गच्छंति खलु ॥

॥ प्रतिपदार्थ ॥

वहतुं—विवाहार्थवागि । **एतवै**—हॊरडलु । **अञ्जि**—अंजन मत्तु आभरणादिगळिंद । **अञ्जानाः**—अलंकृतरागिरुव । **कन्या इव**—कन्येयरंते आकर्षकवागिरुव । **घृतस्य धाराः**—घृतद धारॆगळु । **यत्र**—एल्लि । **सोमः**—सोमवु । **सूयतेः**—हिंडल्पडुवुदो । **यत्र**—एल्लि । **यज्ञः**—यज्ञवु नॆरवेरुवुदो । **तत्**—आ यज्ञाग्नियन्नु । **अभि पवन्ते**—होगि सेरुत्तवॆ । **अभि चाकशीमि**—(इंतह धारॆगळन्नु) ध्यानिसुत्तॆनॆ.

॥ भावार्थ ॥

विवाहार्थवागि हॊरडलु अंजन मत्तु आभरणादिगळिंद आलंकृतरागिरुव कन्येयरंते आकर्षकवागिरुव घृतद धारॆगळु, एल्लि सोमवु हिंडल्पडुवुदो, एल्लि यज्ञवु नॆरवेरुवुदो अंतह यज्ञाग्नियन्नु होगि सेरुत्तवॆ. इंतह धारॆगळन्नु नानु ध्यानिसुत्तॆनॆ.

English Translation.

I contemplate these streams of Ghi as they flow from where the soma is effused, where the sacrifice (is solemnized), as maidens decorating themselves with unguents to go to the bridegroom.

॥ ಸಂಹಿತಾಪಾಠಃ ॥

ಅಭ್ಯರ್ಷತ ಸುಷ್ಟುತಿಂ ಗವ್ಯಮಾಜಿಮಸ್ಮಾಸು ಭದ್ರಾ ದ್ರವಿಣಾನಿ ಧತ್ತ ।
ಇಮಂ ಯಜ್ಞಂ ನಯತ ದೇವತಾ ನೋ ಘೃತಸ್ಯ ಧಾರಾ ಮಧುಮತ್ಪವಂತೇ॥

॥ ಪದಪಾಠಃ ॥

ಅಭಿ । ಅರ್ಷತ । ಸುಽಸ್ತುತಿಂ । ಗವ್ಯಂ । ಆಜಿಂ । ಅಸ್ಮಾಸು । ಭದ್ರಾ । ದ್ರವಿಣಾನಿ । ಧತ್ತ ।
ಇಮಂ । ಯಜ್ಞಂ । ನಯತ । ದೇವತಾ । ನಃ । ಘೃತಸ್ಯ । ಧಾರಾಃ । ಮಧುಽಮತ್ । ಪವಂತೇ ॥ ೧೦॥

॥ ಸಾಯಣಭಾಷ್ಯಂ ॥

ಹೇ ಮದೀಯಾ ಋತ್ವಿಜೋ ಗವ್ಯಂ ಗೋಸಮೂಹರೂಪಂ ಗೋಸಂಬಂಧಿನಂ ವಾಜಿಂ ಸಂಘಾತಮಭ್ಯರ್ಷತ । ಅಭಿಗಚ್ಛತ । ಅಭಿಗಮಯತ ವಾ ಸುಷ್ಟುತಿಂ ಶೋಭನಾಂ ಸ್ತುತಿಂ । ಅತ್ರ ಗೋಶಬ್ದೇನೋದಕಾನಿ ಗಾವೋ ವೋಚ್ಯಂತೇ । ತತ್ಸಂಘಾತೋಽಭಿಪ್ರೇತಃ । ಅಸ್ಮಾಸು ಯಜಮಾನೇಷು ಭದ್ರಾ ಸ್ತುತ್ಯಾನಿ ದ್ರವಿಣಾನಿ ಧತ್ತ । ಧಾರಯಂತ । ಸ್ತುತ್ಯಾ ಋಲು ಫಲಂ ಲಪ್ಸ್ಯತೇ । ಕಿಂಚ ನೋಽಸ್ಮದೀಯಮಿಮಂ ಯಜ್ಞಂ ದೇವತಾ ಆತ್ರ ಯಸ್ಮಿನ್ನೇವಾನ್ನೇಯತ । ಪ್ರಾಪಯತ । ಘೃತಸ್ಯ ಧಾರಾ ಮಧುಮದ್ಯಥಾ ತಥಾ ಪವಂತೇ । ಗಚ್ಛಂತಿ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **ಗವ್ಯಂ**—ಗೋವುಗಳ । **ಆಜಿಂ**—ಸಮೂಹಕ್ಕೆ (ಕಾರಣವಾದ) । **ಸುಷ್ಟುತಿಂ**—ಶ್ರೇಷ್ಠವಾದ ಸ್ತುತಿಯನ್ನು । **ಅಭ್ಯರ್ಷತ**—ಪರಿಸಿರಿ । **ಅಸ್ಮಾಸು**—ನಮ್ಮಲ್ಲಿ । **ಭದ್ರಾ**—ಪ್ರಶಸ್ಯವಾದ । **ದ್ರವಿಣಾನಿ**—ಧನಗಳನ್ನು । **ಧತ್ತ**—ತಂದೊದಗಿಸಿರಿ । **ನಃ**—ನಮ್ಮ । **ಇಮಂ ಯಜ್ಞಂ**—ಈ ಯಜ್ಞವನ್ನು । **ದೇವತಾ**—ಪೂಜ್ಯರಾದ ದೇವತೆಗಳಲ್ಲಿಗೆ । **ನಯತ**—ಸೇರಿಸಿರಿ । **ಘೃತಸ್ಯ**—ಘೃತದ । **ಧಾರಾಃ**—ಪ್ರವಾಹಗಳು । **ಮಧುಮತ್**—ಮಧುರ್ಯೋಪೇತವಾಗಿ । **ಪವಂತೇ**—(ಅಗ್ನಿಯನ್ನು) ಪ್ರವೇಶಿಸುತ್ತವೆ.

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ನಮಗೆ ಗೋಸಂಘಾತಕ್ಕೆ ಕಾರಣವಾದ ಸ್ತುತಿಯನ್ನು ಪರಿಸಿರಿ. ನಮಗೆ ಪ್ರಶಸ್ಯವಾದ ಧನಗಳನ್ನು ತಂದೊದಗಿಸಿರಿ. ನಮ್ಮ ಈ ಯಜ್ಞವನ್ನು ಪೂಜ್ಯರಾದ ದೇವತೆಗಳಲ್ಲಿಗೆ ಸೇರಿಸಿರಿ. ಘೃತದ ಪ್ರವಾಹಗಳು ಮಾಧುರ್ಯೋಪೇತವಾಗಿ ಅಗ್ನಿಯನ್ನು ಪ್ರವೇಶಿಸುತ್ತವೆ.

English Translation.

(Priests) address the pious praise, (the source) of herds of cattle: bestow upon us auspicious riches: convey this our sacrifice to the gods, (whereat) the streams of Ghi with sweetness descend.

॥ ಸಂಹಿತಾಪಾಠಃ ॥

ಧಾಮಂತೇ ವಿಶ್ವಂ ಭುವನಮಧಿ ಶ್ರಿತಮಂತಃ ಸಮುದ್ರೇ ಹೃದ್ಯಂತ-
ರಾಯುಷಿ ।
ಅಪಾವನೀಕೇ ಸಮಿಥೇ ಯ ಆಭೃತಸ್ತಮಶ್ಯಾಮ ಮಧುಮಂತಂ ತ
ಊರ್ಮಿಂ ॥ ೧೧ ॥

॥ ಪದಪಾಠಃ ॥

ಧಾಮನ್ । ತೇ । ವಿಶ್ವಂ । ಭುವನಂ । ಅಧಿ । ಶ್ರಿತಂ । ಅಂತರಿತಿ । ಸಮುದ್ರೇ । ಹೃದಿ । ಅಂತಃ । ಆಯುಷಿ ।
ಆದಾಂ । ಅನೀಕೇ । ಸಂಽಇಥೇ । ಯಃ । ಆಽಭೃತಃ । ತಂ । ಅಶ್ಯಾಮ । ಮಧುಽಮಂತಂ । ತೇ ।
ಊರ್ಮಿಂ ॥ ೧೧ ॥

॥ ಸಾಯಣಭಾಷ್ಯಂ ॥

ಧಾಮಂತ ಇತ್ಯೇಷೋತ್ತರಸೂಕ್ತಸ್ಯಾದ್ಯಾ ಜಾಧ್ಯಾಯೋತ್ಸರ್ಜನೋಪಾಕರಣಯೋರ್ವಿನಿಯುಕ್ತೇ । ಧಾಮನ್ತೇ ವಿಶ್ವಮಿತಿ ಪ್ರತೀಕಮುಕ್ತ್ವಾ ತದಂತೇ ದ್ಯೃಚಾಃ । ಆ. ಗೃ. ೩-೫ । ಇತಿ ಸೂತ್ರಿತತ್ವಾತ್ ॥

ತೇ ತ್ವದೀಯೇ ಧಾಮನ್ಧಾಮನಿ ತೇಜಃಸ್ಥಾನೇ ವಿಶ್ವಂ ಭುವನಮಧಿ ಶ್ರಿತಂ । ಅಂತಃ ಸಮುದ್ರೇ ವಡವಾಗ್ನಿಶ್ಚೇನ ಹೃದ್ಯಂತಃ ಸರ್ವಪ್ರಾಣಿನಾಂ ಹೃದಯೇ ವೈಶ್ವಾನರಶ್ಚೇನಾಯುಷ್ಯೇ ಸರ್ವಪ್ರಾಣ್ಯಾಹಾರಶ್ಚೇನ । ಯದ್ವಾ । ಆಯುಷೀತ್ಯೇತದ್ಭೃದ್ವಿಶೇಷಣಂ । ಜಠರಾಗ್ನಿನಾ ಖಲ್ವಾಯುರ್ಧಾರ್ಯತೇ ।

ಅಪಾಮನೀಕ ಉದಕಸಂಸ್ತ್ಯಾಯೇ ನೈದ್ಯುತಾಗ್ನಿತ್ವೇನ ಸಮಿಧೇ ಸಂಗ್ರಾಮೇ ಚ ಶೌರ್ಯಾಗ್ನಿರೂಪೇಣ। ಏವಂ ಸರ್ವೇಷು ಸ್ಥಾನೇಷು ವರ್ತಮಾನಂ ಧಾಮ । ತಸ್ಮಿನ್ಧಾಮನಿ ಯ ಊರ್ಮಿರ್ಘೃತರೂಪ ಉದಕರೂಪೋ ವಾ ರಸ ಆಭೃತಃ ಸ್ಥಾಪಿತಃ ತೇ ತ್ವದೀಯಂ ತಂ ರಸಂ ಮಧುಮಂತಂ ಮಾಧುರ್ಯೋಪೇತಮಶ್ಯಾಮ । ವ್ಯಾಪ್ನುಯಾಮ ॥

। ಪ್ರತಿಪದಾರ್ಥ ।

(ಎಲೈ ಅಗ್ನಿಯೇ) । **ಅಂತಃ ಸಮುದ್ರೇ**—ಸಮುದ್ರಮಧ್ಯದಲ್ಲಿ ಬಡಬಾಗ್ನಿರೂಪದಲ್ಲಿದ್ದರೂ । **ಹೃದ್ಯಂತಃ**—ಹೃದಯಾಂತರಾಳದಲ್ಲಿ ವೈಶ್ವಾನರ ರೂಪದಲ್ಲಿದ್ದರೂ । **ಆಯುಷಿ**—ಅನ್ನರೂಪದಲ್ಲಿ ಸಕಲರಿಗೂ ಆಯುಸ್ಸಿನಂತಿದ್ದರೂ । **ಅಪಾಮನೀಕೇ**—ಉದಕದಲ್ಲಿ ವೈದ್ಯುತಾಗ್ನಿರೂಪದಲ್ಲಿದ್ದರೂ । **ಸಮಿಧೇ**—ಯುದ್ಧರಂಗದಲ್ಲಿ ವೀರ್ಯಾಗ್ನಿರೂಪದಲ್ಲಿದ್ದರೂ । **ತೇ**—ನಿನ್ನ । **ಧಾಮನ್**—ತೇಜೋರೂಪವಾದ ಸ್ಥಾನದಲ್ಲಿ । **ವಿಶ್ವಂ ಭುವನಂ**—ಸಕಲ ಭುವನವೂ । **ಅಧಿ ಶ್ರಿತಂ**—ಆಶ್ರಯವನ್ನು ಪಡೆಯುತ್ತದೆ । **ತೇ**—ನಿನ್ನ । **ಯಃ**—ಯಾವ **ಘೃತರೂಪವಾದ ರಸವು । ಆಭೃತಃ**—ನಿನ್ನಲ್ಲಿ ಸ್ಥಾಪಿತವಾಗಿದೆಯೋ । **ತಂ**—ಅಂತಹುದೂ । **ಮಧುಮಂತಂ**—ಮಾಧುರ್ಯೋಪೇತವಾದುದೂ ಆದ । **ಊರ್ಮಿಂ**—ರಸವನ್ನು । **ಅಶ್ಯಾಮ**—ನಾವೂ ಹೊಂದುವಂತಾಗಲಿ.

। ಭಾವಾರ್ಥ ।

ಎಲೈ ಅಗ್ನಿಯೇ, ನೀನು ಸಮುದ್ರಮಧ್ಯದಲ್ಲಿ ಬಡಬಾಗ್ನಿರೂಪದಲ್ಲಿರಲಿ, ಹೃದಯಾಂತರಾಳದಲ್ಲಿ ವೈಶ್ವಾನರ ರೂಪದಲ್ಲಿರಲಿ, ಅನ್ನರೂಪದಲ್ಲಿ ಸಕಲರಿಗೂ ಜರರಾಗ್ನಿರೂಪದಲ್ಲಿರಲಿ, ಉದಕದಲ್ಲಿ ವೈದ್ಯುತಾಗ್ನಿರೂಪದಲ್ಲಿರಲಿ, ನಿನ್ನ ತೇಜೋರೂಪವಾದ ಸ್ಥಾನದಲ್ಲಿ ಸಕಲಭುವನವೂ ಆಶ್ರಯವನ್ನು ಪಡೆಯುತ್ತದೆ. ನಿನ್ನ ಯಾವ ಘೃತರೂಪವಾದ ರಸವು ನಿನ್ನಲ್ಲಿ ಸ್ಥಾಪಿತವಾಗಿದೆಯೋ, ಅಂತಹುದೂ, ಮಾಧುರ್ಯೋಪೇತವಾದುದೂ ಆದ ರಸವನ್ನು ನಾವೂ ಹೊಂದುವಂತಾಗಲಿ.

English Translation.

The whole world, (Agni), finds an asylum in your effulgence, whether it be in the ocean, in the heart (of man), in the life (of living beings), in the assemblage of the waters, or in warfare may we attain that sweet-flavoured wave which is established in your (essence).

। ವಿಶೇಷವಿಷಯಗಳು ।

ಧಾಮಂತೇ ಎಂಬ ಈ ಋಕ್ಕನ್ನೂ ಮುಂದಿನ ಸೂಕ್ತದ ಮೊದಲನೆಯ ಋಕ್ಕಾದ **ಆಜೋಧ್ಯಗ್ನಿಃ** ಎಂಬ ಋಕ್ಕನ್ನೂ ಅಧ್ಯಾಯೋತ್ಸರ್ಜನ ಮತ್ತು ಉಪಾಕರಣ ಹೋಮಗಳಲ್ಲಿ ಪ್ರತಿಮಂಡಲದ ಆದ್ಯಂತ ಋಕ್ಕುಗಳನ್ನು ಪ್ರಧಾನಾಹುತಿಯಾಗಿ ಉಪಯೋಗಿಸುವಾಗ ಪರಿಸಿ ಹೋಮ ಮಾಡಬೇಕೆಂದು ಆಶ್ವಲಾಯನಗೃಹ್ಯಸೂತ್ರದ—**ಧಾಮಂತೇ ಇತಿ ಪ್ರತೀಕಮುಕ್ತ್ವಾ ತದಂತೇ ದ್ವ್ಯೃಚಾಃ** ಎಂಬ ಸೂತ್ರದಿಂದ (ಆ ಗೃ. ೩-೫-೭) ವಿವೃತವಾಗಿರುವುದು.

ತೇ ಧಾಮನ್ ವಿಶ್ವಂ ಭುವನಂ ಅಧಿ ಶ್ರಿತಂ—ತ್ವದೀಯೇ ಧಾಮನಿ ತೇಜಃಸ್ಥಾನೇ ವಿಶ್ವಂ ಭುವನ ಅಧಿ ಶ್ರಿತಂ । ಎಲೈ ಅಗ್ನಿಯೇ, ನಿನ್ನ ಸ್ವಕೀಯವಾದ ಮತ್ತು ತೇಜೋವಿಶಿಷ್ಟವಾದ ಸ್ಥಾನದಲ್ಲಿ ಸಕಲ

ವಿಶ್ವವೂ ಎಂದರೆ ಪ್ರಪಂಚಗಳೆಲ್ಲವೂ ಸ್ಥಾಪಿತವಾಗಿವೆ. ಎಂದರೆ, ನೀನು ನಿನ್ನ ಅಸಾಧಾರಣವಾದ ತೇಜಸ್ಸಿನಿಂದ ಸಮಸ್ತ ವಿಶ್ವವನ್ನೂ ವ್ಯಾಪಿಸಿರುವೆ ಎಂದಭಿಪ್ರಾಯವು.

ಸಮುದ್ರೇ ಹೃದಿ ಅಂತಃ ಆಯುಷಿ—ಸಮಸ್ತ ವಿಶ್ವವನ್ನೂ ಅಗ್ನಿಯು ವ್ಯಾಪಿಸಿರುವನೆಂದು ಹಿಂದಿನ ವಾಕ್ಯದಲ್ಲಿ ಹೇಳಲಾಗಿದೆಯಷ್ಟೆ. ಅದು ಹೇಗೆ ಎಂಬುದನ್ನು ಇಲ್ಲಿ ವಿಶದವಾಗಿ ವಿವರಿಸುವರು. **ಸಮುದ್ರೇ ವಡವಾಗ್ನಿತ್ವೇನ। ಹೃದ್ಯಂತಃ ಸರ್ವಪ್ರಾಣಿನಾಂ ಹೃದಯೇ ವೈಶ್ವಾನರತ್ವೇನ। ಆಯುಷಿ ಅನ್ನೇ ಸರ್ವಪ್ರಾಣ್ಯಾಹಾರತ್ವೇನ ಯದ್ವಾ ಆಯುಷೀತ್ಯೇತತ್ ಹೃದ್ವಿಶೇಷಣಂ ಜಠರಾಗ್ನಿನಾ ಖಲ್ವಾಯುಃ ಧಾರ್ಯತೇ। ಅಪಾಮನೀಕೇ ಉದಕಸಂಸ್ತ್ಯಾಯೇ ವೈದ್ಯುತಾಗ್ನಿತ್ವೇನ। ಸಮಿಧೇ ಸಂಗ್ರಾಮೇ ಶೌರ್ಯಾಗ್ನಿತ್ವರೂಪೇಣ।** ಈ ಅಗ್ನಿಯು ನಾನಾ ರೂಪಗಳಿಂದ ನಾನಾ ಪ್ರದೇಶಗಳಲ್ಲಿ ವ್ಯಾಪಿಸಿರುವನು ಸಮುದ್ರದಲ್ಲಿ ವಡವಾಗ್ನಿರೂಪದಿಂದಿರುವನು, ಪ್ರಾಣಿಗಳ ಹೃದಯದಲ್ಲಿ ವೈಶ್ವಾನರಾಗ್ನಿರೂಪದಿಂದಿರುವನು ಅಥವಾ ಪ್ರಾಣಿಗಳ ಜಠರದಲ್ಲಿ ಅವುಗಳ ಆಹಾರಾದಿಗಳನ್ನು ಪಚನಮಾಡುತ್ತಾ ಜಾಠರಾಗ್ನಿರೂಪದಿಂದ ಇದ್ದು ಪ್ರಾಣಿಗಳ ಆಯುರ್ವೃದ್ಧಿಗೆ ಕಾರಣನಾಗಿರುವನು. ಮತ್ತು ಉದಕಗಳ ಸಮೂಹದಲ್ಲಿ (ಪೇಢೆಗಳಲ್ಲಿ) ವೈದ್ಯುತಾಗ್ನಿ (ಮಿಂಚು) ರೂಪದಿಂದ ಇರುವನು, ಯುದ್ಧಾದಿಗಳಲ್ಲಿ ಶೌರ್ಯಾಗ್ನಿರೂಪದಿಂದ ಇರುವನು. ಈ ರೀತಿ ಸರ್ವಸ್ಥಳಗಳಲ್ಲಿಯೂ ಅಗ್ನಿಯು ತನ್ನ ವಿಧವಿಧವಾದ ತೇಜಸ್ಸಿನಿಂದ ಎಲ್ಲವನ್ನೂ ವ್ಯಾಪಿಸಿರುವನು ಎಂದಭಿಪ್ರಾಯವು.

ಯ ಆಭೃತಸ್ತಮಶ್ಯಾಮ ಮಧುಮಂತಂ ತೇ ಊರ್ಮಿಂ—**ತಸ್ಮಿನ್ ಧಾಮನಿ ಯಃ ಊರ್ಮಿರ್ಘೃತರೂಪ ಉದಕರೂಪೋ ವಾ ರಸಃ ಸ್ಥಾಪಿತಃ ತ್ವದೀಯೆಂ ತಂ ರಸಂ ಮಾಧುರ್ಯೋಪೇತಂ ವ್ಯಾಪ್ನುಯಾಮ।** ಎಲೈ ಅಗ್ನಿಯೇ, ಸರ್ವಸ್ಥಳಗಳಲ್ಲಿಯೂ ವ್ಯಾಪಿಸಿರುವ ನಿನ್ನ ತೇಜೋರಾಶಿಯಲ್ಲಿ ಘೃತರೂಪವಾದ ಅಥವಾ ಉದಕರೂಪವಾದ ಯಾವ ರಸವು ಸ್ಥಾಪಿತವಾಗುವುದೋ ಅಂತಹ ಮಾಧುರ್ಯೋಪೇತವಾದ ರಸವನ್ನು (ಘೃತ ಅಥವಾ ಉದಕ) ನಾವು ಪಡೆಯುವಂತಾಗಲಿ ಇಲ್ಲಿ ರಸವು ಘೃತ ಅಥವಾ ಉದಕರೂಪವೆಂದು ಎರಡುವಿಧಗಳೆಂದು ತಿಳಿಸಿದೆ. ಪಾರ್ಥಿವಾಗ್ನಿ ಅಥವಾ ಯಜ್ಞಾಗ್ನಿಯಲ್ಲಿ ಸ್ಥಾಪಿತವಾಗುವ (ಸೇರುವ) ರಸವನ್ನು ಘೃತವೆಂದೂ, ವೈದ್ಯುತಾಗ್ನಿಯಲ್ಲಿ ಸ್ಥಾಪಿತವಾಗುವ ರಸವನ್ನು ಉದಕವೆಂದೂ ತಿಳಿಯಬೇಕ..

ಇತ್ಥಂ ಶ್ರೀಬುಕ್ಕಭೂಪಾಲಸಾಮ್ರಾಜ್ಯೈಕಧುರಂಧರಃ।
ವಿದ್ಯಾತೀರ್ಥಗುರೋರ್ದೈವ್ಯಾತ್ ಪ್ರಾಪ್ತಸಾರ್ವಜ್ಞ್ಯವೈಭವಃ॥
ಶ್ರೀಮತ್ಸಾಯಣಮಂತ್ರೀಶಃ ಸಕಲಾಗಮತತ್ತ್ವವಿತ್।
ದಾಶತಯ್ಯಾಂ ಮಾಧವೀಯೇ ವೇದಾರ್ಥಸ್ಯ ಪ್ರಕಾಶನೇ॥
ಚತುರ್ಥಂ ಮಂಡಲಂ ಸಮ್ಯಕ್ ವಾಮದೇವೇನ ವೀಕ್ಷಿತಂ।
ಅಷ್ಟೋತ್ತರೈಸ್ತು ಪಂಚಾಶತ್ಸೂಕ್ತೈಃ ಪಂಚ ಶತೈರಪಿ॥
ಏಕೋನಯಾ ನವತ್ಯಾ ಚ ಯುಕ್ತೈರ್ಮಂತ್ರೈಶ್ಚ ಸಂಮಿತಂ।
ವ್ಯಾಕಾರ್ಷೀತ್ಸಾಯಣೋಧಾರ್ಥಂ ಪಶ್ಯತೈತದ್ವಿಮತ್ಸರಾಃ॥

॥ ಇತಿ ಚತುರ್ಥಂ ಮಂಡಲಂ ಸಮಾಪ್ತಂ ॥

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜ ಪರಮೇಶ್ವರ ವೈದಿಕಮಾರ್ಗಪ್ರವರ್ತಕ ಶ್ರೀವೀರಬುಕ್ಕಭೂಪಾಲಸಾಮ್ರಾಜ್ಯ
ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶೇ
ಋಕ್ಸಂಹಿತಾಭಾಷ್ಯೇ ಚತುರ್ಥಂ ಮಂಡಲಂ ಸಮಾಪ್ತಂ

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯಲ್ಲಿ
ನಾಲ್ಕನೆಯ ಮಂಡಲವು ಸಮಾಪ್ತವಾದುದು.

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತುತೇ ॥

॥ ಶುಭಂ ಭೂಯಾತ್ ॥

॥ ಮಂಗಳಂ ॥

॥ ಶ್ರೀಃ ॥

॥ ಶ್ರೀ ಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯಾ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

ಸಾಯಣಭಾಷ್ಯಸಹಿತಾ

ಋಗ್ವೇದಸಂಹಿತಾ

॥ ಅಥ ಪಂಚಮಂ ಮಂಡಲಂ ॥

ಐದನೆಯ ಮಂಡಲವು.

ಪೀಠಿಕೆ

ಮಂಡಲದ್ರಷ್ಟೃವಾದ ಅತ್ರಿಋಷಿಯ ಪರಿಚಯ.

ಋಗ್ವೇದದ ಐದನೆಯ ಮಂಡಲಕ್ಕೆ ಅತ್ರಿಋಷಿಯು ದ್ರಷ್ಟೃವು ಎಂದು ನಿರ್ದಿಷ್ಟವಾಗಿದ್ದರೂ ಈ ಮಂಡಲದ ಸೂಕ್ತಗಳಿಗೆ ಇತರ ಋಷಿಗಳೂ ದ್ರಷ್ಟೃಗಳಾಗಿದಾರೆ. ಇವರೆಲ್ಲರೂ ಅತ್ರಿವಂಶದವರೇ ಎಂದು ಹೇಳಲು ಸಾಧ್ಯವಿರುವುದಿಲ್ಲ. ಸಾಯಣರು **ಪಂಚಮಮಂಡಲೇऽನುಕ್ತಗೋತ್ರಮಾತ್ರೇಯಂ ವಿದ್ಯಾದಿತಿ ಪರಿಭಾಷಿತತ್ವಾದಾತ್ರೇಯೌ ಬುಧಗವಿಷ್ಠಿರಾವೃಷೀ**—ಎಂದು ಹೇಳಿರುವಂತೆ ಐದನೆಯ ಮಂಡಲದಲ್ಲಿ ಸೂಕ್ತದ್ರಷ್ಟೃಗಳಾದ ಕೆಲವು ಋಷಿಗಳಿಗೆ ಇಂತಹ ಗೋತ್ರರವರೆಂದು ಹೇಳಿಲ್ಲವಾದರೆ ಅವರನ್ನು ಅತ್ರಿಗೋತ್ರೋದ್ಭವರೆಂದೇ ಪರಿಗಣಿಸಬೇಕು. ಈ ದೃಷ್ಟಿಯಿಂದ ಈ ಮಂಡಲದ ಮೊದಲನೆಯ ಸೂಕ್ತಕ್ಕೆ ದ್ರಷ್ಟೃಗಳಾದ ಬುಧ ಮತ್ತು ಗವಿಷ್ಠಿರ ಎಂಬ ಇಬ್ಬರು ಋಷಿಗಳೂ ಅತ್ರೇಯ ವಂಶೋತ್ಪನ್ನರೇ ಆಗಿರುವರೆಂದು ತಿಳಿಯಬೇಕು ಎಂದು ಹೇಳಿರುವರು. ಆದುದರಿಂದ ಈ ಮಂಡಲದ ಋಷಿಗಳೆಲ್ಲಾ

ಒಂದಲ್ಲ ಒಂದುವಿಧದಲ್ಲಿ ಅತ್ರಿಋಷಿಯ ವಂಶಕ್ಕೆ ಸಂಬಂಧಪಟ್ಟವರೇ ಆಗಿರಬೇಕು ಇದಲ್ಲದೆ ಈ ಮಂಡಲದ ಋಷಿಗಳಲ್ಲಿ ಅನೇಕರು ಇತರ ಮಂಡಲಗಳ ಅನೇಕ ಸೂಕ್ತಗಳಿಗೂ ದ್ರಷ್ಟೃಗಳಾಗಿದ್ದಾರೆ. ಕೆಳಗಿನ ಪಟ್ಟಿಯನ್ನು ಪರಿಶೀಲಿಸುವುದರಿಂದ ಈ ವಿಷಯವು ಚೆನ್ನಾಗಿ ವ್ಯಕ್ತಪಡುವುದು. ಮಂಡಲದ್ರಷ್ಟೃವೂ ಮುಖ್ಯಋಷಿಯೂ ಆದ **ಅತ್ರಿಃ ಅಥವಾ ಅತ್ರಿಃ ಭೌಮಃ** ಎಂಬ ಋಷಿಯು ಈ ಕೆಳಗೆ ಹೇಳಿರುವ ೧೩೧ ಮಂತ್ರಗಳಿಗೆ ದ್ರಷ್ಟೃವಾಗಿರುವನು.

ಋಷಿಯ ಹೆಸರು	ಮಂಡಲ	ಸೂಕ್ತ	ಸೂಕ್ತದಲ್ಲಿರುವ ಋಕ್ಸಂಖ್ಯೆ	ಒಟ್ಟು ಮಂತ್ರಗಳು
ಅತ್ರಿಃ ಅಥವಾ ಅತ್ರಿರ್ಭೌಮಃ	೫	೨೭	೬	೬
,,	,,	೩೭	೫	೫
,,	,,	೩೮	೯	೯
,,	,,	೩೯	೫	೫
,,	,,	೪೦	೫	೫
,,	,,	೪೧	೨೦	೨೦
,,	,,	೪೨	೧೪	೧೪
,,	,,	೪೩	೧೭	೧೭
,,	,,	೭೬	೫	೫
,,	,,	೭೭	೫	೫
,,	,,	೮೩	೧೦	೧೦
,,	,,	೮೪	೩	೩
,,	,,	೮೫	೮	೮
,,	,,	೮೬	೬	೬
,,	೯	೬೭	೩೨	೩ (೧೨-೧೪)
,,	,,	೮೬	೪೮	೫ (೪೧-೪೫)
,,	೧೦	೧೩೭	೭	೧ (೪)
ಒಟ್ಟು	೩	೧೭	—	೧೩೧

ಐದನೆಯ ಮಂಡಲದಲ್ಲಿರುವ ಇತರ (ಅತ್ರಿಯನ್ನು ಬಿಟ್ಟು) ಋಷಿಗಳು ಮತ್ತು ಅವರಿಂದ ದೃಷ್ಟವಾದ ಸೂಕ್ತ ಮತ್ತು ಋಕ್ಕುಗಳ ವಿವರಣೆ—

ನಂ.	ಋಷಿಗಳ ಹೆಸರು	ಮಂಡಲ	ಸೂಕ್ತ	ಒಟ್ಟು ಋಕ್ಸಂಖ್ಯೆ
1.	ಬುಧಃ (ಆತ್ರೇಯಃ)	೫	೧	೧೨
2.	ಗವಿಷ್ಠಿರಃ (ಆತ್ರೇಯಃ)	,,	,,	,, (ಒಟ್ಟು ೧೨)
3.	ಕುಮಾರಃ (ಆತ್ರೇಯಃ)	೫	೨	೧೨
4.	ವೃಶಃ (ಜಾನಃ)	,,	,,	,, (ಒಟ್ಟು ೧೨)
5.	ವಸುಸ್ರುತಃ (ಆತ್ರೇಯಃ)	೫	೩	೧೨
		,,	೪	೧೧
		,,	೫	೧೧

ನಂ.	ಋಷಿಗಳ ಹೆಸರು	ಮಂಡಲ	ಸೂಕ್ತ	ಒಟ್ಟು ಋಕ್ಸಂಖ್ಯೆ	
	ವಸುಶ್ರುತಃ (ಆತ್ರೇಯಃ)	,,	೬	೧೦	(ಒಟ್ಟು ೪೪)
6.	ಇಷಃ (ಆತ್ರೇಯಃ)	೫	೭	೧೦	
		,,	೮	೭	(೧೭)
7.	ಗಯಃ (ಆತ್ರೇಯಃ)	೫	೯	೭	
		,,	೧೦	೭	(೧೪)
8.	ಸುತಂಭರಃ (ಆತ್ರೇಯಃ)	೫	೧೧	೬	
		,,	೧೨	೬	
		,,	೧೩	೬	
		,,	೧೪	೬	(೩೪)
9.	ಧರುಣಃ (ಆಂಗಿರಸಃ)	೫	೧೫	೫	
10.	ಪೂರುಃ (ಆತ್ರೇಯಃ)	೫	೧೬	೫	
		,,	೧೭	೫	(೧೦)
11.	ದ್ವಿತಃ ಮೃಕ್ತವಾಹಾಃ (ಆತ್ರೇಯಃ)	೫	೧೮	೫	
12.	ವಿಶ್ರಿಃ (ಆತ್ರೇಯಃ)	೫	೧೯	೫	
13.	ಪ್ರಯಸ್ವಂತಃ (ಆತ್ರೇಯಾಃ)	೫	೨೦	೪	
14.	ಸಸಃ (ಆತ್ರೇಯಃ)	೫	೨೧	೪	
15.	ವಿಶ್ವಸಾಮಾ (ಆತ್ರೇಯಃ)	೫	೨೨	೪	
16.	ದ್ಯುಮ್ನಃ ವಿಚರ್ಷಣಿಃ (ಆತ್ರೇಯಃ)	೫	೨೩	೪	
17.	ಬಂಧುಃ (ಗೌಪಾಯನಃ)	೫	೨೪	೪	
18.	ಶ್ರುತಬಂಧುಃ ,,	೧೦	೫೭	೬	
19.	ವಿಪ್ರಬಂಧುಃ ,,	೧೦	೫೮	೧೨	
		೧೦	೫೯	೧೦	
		೧೦	೬೦	೧೨	(೪೪)
20.	ಸುಬಂಧುಃ (ಗೌಪಾಯನಃ ಲೌಪಾಯನೋ ವಾ)	೫	೨೪	೪	
21.	ವಸೂಯವಃ (ಆತ್ರೇಯಾಃ)	೫	೨೫	೯	
		೫	೨೬	೯	(೧೮)
22.	ತ್ರಯ್ಯರುಣಃ ತ್ರೈವೃಷ್ಣಃ (ಭಾರತಃ ರಾಜಾ)	೫	೨೭	೬	
		೯	೧೧೦	೧೨	(೧೮)
23.	ತ್ರಸದಸ್ಯುಃ ಪೌರುಕುತ್ಸಃ (ಭಾರತಃ ರಾಜಾ)	೫	೨೭	೬	
		೪	೪೨	೧೦	
		೯	೧೧೦	೧೨	(೩೪)
24.	ಅಶ್ವಮೇಧಃ (ಭಾರತಃ ರಾಜಾ)	೫	೨೭	೬	
25	ವಿಶ್ವವಾರಾ (ಆತ್ರೇಯೀ)	೫	೨೮	೬	
26.	ಗೌರಿವೀತಿಃ (ಶಾಕ್ತ್ಯಃ)	೫	೨೯	೧೫	
		೯	೧೦೪	೨	
		೧೦	೭೩	೧೧	

ನಂ.	ಋಷಿಗಳ ಹೆಸರು	ಮಂಡಲ	ಸೂಕ್ತ	ಒಟ್ಟು ಋಕ್ಸಂಖ್ಯೆ	
	ಗೌರಿವೀತಿಃ (ಶಾಕ್ತ್ಯಃ)	೧೦	೭೪	೬	(೩೪)
27.	ಬಭ್ರುಃ (ಆತ್ರೇಯಃ)	೫	೩೦	೧೫	
28.	ಅವಸ್ಯುಃ (ಆತ್ರೇಯಃ)	೫	೩೧	೧೩	
		,,	೭೫	೯	(೨೨)
29.	ಗಾತುಃ (ಆತ್ರೇಯಃ)	೫	೩೨	೧೨	
30.	ಸಂವರಣಃ (ಪ್ರಾಜಾಪತ್ಯಃ)	೫	೩೩	೧೦	
		,,	೩೪	೯	(೧೯)
31.	ಪ್ರಭೂವಸುಃ (ಆಂಗಿರಸಃ)	೫	೫೫	೮	
		,,	೩೬	೬	
		೯	೩೫	೬	
		,,	೩೬	೬	(೩೬)
32.	ಅವತ್ಸಾರಃ (ಕಾಶ್ಯಪಃ)	೫	೪೪	೧೫	
		೯	೫೩	೪	
		,,	೫೪	೪	
		,,	೫೫	೪	
		,,	೫೬	೪	
		,,	೫೭	೪	
		,,	೫೮	೪	
		,,	೫೯	೪	
		,,	೬೦	೪	(೪೭)
33.	ಸದಾಪೃಣಃ (ಆತ್ರೇಯಃ)	೫	೪೪	೧	(?)
		,,	೪೫	೧೧	(೧೨)
34.	ಪ್ರತಿಕ್ಷತ್ರಃ (ಆತ್ರೇಯಃ)	೫	೪೬	೮	
35.	ಪ್ರತಿರಥಃ (ಆತ್ರೇಯಃ)	೫	೪೭	೭	
36.	ಪ್ರತಿಭಾನುಃ (ಆತ್ರೇಯಃ)	೫	೪೮	೫	
37.	ಪ್ರತಿಪ್ರಭಃ (ಆತ್ರೇಯಃ)	೫	೪೯	೫	
38.	ಸ್ವಸ್ತಿ (ಆತ್ರೇಯಃ)	೫	೫೦	೫	
		,,	೫೧	೧೫	(೨೦)
39.	ಶ್ಯಾವಾಶ್ವಃ (ಆತ್ರೇಯಃ)	೫	೫೨	೧೭	
		,,	೫೩	೧೬	
		,,	೫೪	೧೫	
		,,	೫೫	೧೦	
		,,	೫೬	೯	
		,,	೫೭	೮	
		,,	೫೮	೮	
		,,	೫೯	೮	

ನಂ.	ಋಷಿಗಳ ಹೆಸರು	ಮಂಡಲ	ಸೂಕ್ತ	ಒಟ್ಟು ಋಕ್ಸಂಖ್ಯೆ	
	ಶ್ಯಾವಾಶ್ವಃ (ಆತ್ರೇಯಃ)	,,	೬೦	೮	
		,,	೬೧	೧೯	
		,,	೮೧	೫	
		,,	೮೩	೯	
		೮	೩೫	೩೪	
		,,	೩೬	೭	
		,,	೩೭	೭	
		,,	೩೮	೧೦	
		೯	೩೨	೬	(೧೮೬)
40.	ಶ್ರುತವಿತ್ (ಆತ್ರೇಯಃ)	೫	೪೪	೧	
		,,	೬೨	೯	(೯)
41.	ಅರ್ಚನಾನಾ (ಆತ್ರೇಯಃ)	೫	೬೩	೭	
		,,	೬೪	೭	
		೮	೪೨	೬	(೨೦)
42.	ರಾತಹವ್ಯಃ (ಆತ್ರೇಯಃ)	೫	೬೫	೬	
		,	೬೬	೬	(೧೨)
43.	ಯಜತಃ (ಆತ್ರೇಯಃ)	೫	೪೪	೩	(?)
		,,	೬೭	೫	
		,,	೬೮	೫	(೧೦)
44	ಉರುಚಕ್ರಿಃ (ಆತ್ರೇಯಃ)	೫	೬೯	೪	
		,,	೭೦	೪	(೮)
45.	ಬಾಹುವೃಕ್ತಃ (ಆತ್ರೇಯಃ)	೫	೪೪	೧	(?)
		,,	೭೧	೩	
		,,	೭೨	೩	(೬)
46.	ಪೌರಃ (ಆತ್ರೇಯಃ)	೫	೭೩	೧೦	
		,,	೭೪	೧೦	(೨೦)
47.	ಸಪ್ತವಧ್ರಿಃ (ಆತ್ರೇಯಃ)	೫	೭೮	೯	
		೮	೭೩	೧೮	(೨೭)
48.	ಸತ್ಯಶ್ರವಾಃ (ಆತ್ರೇಯಃ)	೫	೭೯	೧೦	
		,,	೮೦	೬	(೧೬)
49	ವಿವಯಾಮರುತ್ (ಆತ್ರೇಯಃ)	೫	೮೭	೯	

ಮಂಡಲದ್ರಷ್ಟೃವಾದ ಅತ್ರಿಋಷಿಯೂ ಸೇರಿ ಈ ಮಂಡಲದಲ್ಲಿ ೫೦ ಋಷಿಗಳಿರುವರು ಈ ಮಂಡಲದಲ್ಲಿ ೬ ಅನುವಾಕಗಳೂ ೮೭ ಸೂಕ್ತಗಳೂ, ಒಟ್ಟು ೭೨೭ ಋಕ್ಕುಗಳೂ ಇರುವವು.

ಮಂಡಲದ್ರಷ್ಟೃವಾದ ಅತ್ರಿಯಋಷಿಯ ಪರಿಚಯ

ಸ ಇದಂ ಸರ್ವಂ ಪಾಪ್ಮನೋಽತ್ರಾಯತ ಯದಿದಂ ಕಿಂಚ ಸ ಯದಿದಂ ಸರ್ವಂ ಪಾಪ್ಮನೋಽತ್ರಾಯತ ಯದಿದಂ ಕಿಂಚ ತಸ್ಮಾದತ್ರಯಃ (ಐ. ಆ ೨-೨-೧)

ಐತರೇಯಾರಣ್ಯಕದಲ್ಲಿ ವರ್ಣಿತವಾಗಿರುವಂತೆ, ಋಕ್ಸಂಹಿತೆಯ ಸೂಕ್ತದ್ರಷ್ಟೃಗಳಾದ ಶತರ್ಚಿಗಳು, ಗೃತ್ಸಮದ ಇತ್ಯಾದಿ ಋಷಿಗಳೆಲ್ಲರೂ ಸಹ ಆದಿತ್ಯರೂಪವಾದ ಪ್ರಾಣತತ್ತ್ವದ ವಿಭೂತಿವಿಶೇಷಗಳೆಂದು ಪ್ರಸಿದ್ಧರಾಗಿದ್ದಾರೆ. ಅವರಲ್ಲಿ **ಅತ್ರಿಯು** ಸಕಲ ಪಾಪಗಳಿಂದಲೂ ಪುರುಷನನ್ನು ರಕ್ಷಿಸಿ-ನವನಾದುದರಿಂದ **ಈ** ಹೆಸರಿನಿಂದ ಪ್ರಸಿದ್ಧನಾದನು ಎಂದು **ಅತ್ರಿ**ಶಬ್ದದ ನಿರ್ವಚನವೂ ಈ ಮಹರ್ಷಿಯ ಪ್ರಶಂಸೆಯೂ ಇರುತ್ತದೆ ಆದರೆ **ಈ** ನಿರ್ವಚನದಲ್ಲೂ ಮತ್ತು ಪ್ರಶಂಸೆಯಲ್ಲಿಯೂ ಸಹ **ಅತ್ರಿಯು** ಒಂದು ಆಧ್ಯಾತ್ಮಿಕವಾದ ತತ್ತ್ವವಿಶೇಷವೇ ಅಥವಾ ಮಾನವರೂಪದ ಪುರುಷ ವ್ಯಕ್ತಿಯೇ ಎಂಬ ಸಂಶಯಕ್ಕೆ ಅವಕಾಶವಿರುತ್ತದೆ. ಆದರೆ, ಪ್ರಕೃತದಲ್ಲಿ, ಜಗತ್ಪ್ರಸಿದ್ಧರಾದ ಸಪ್ತರ್ಷಿಗಳಲ್ಲಿ ಅತ್ರಿಯು ಒಬ್ಬನೆಂದೂ ಋಕ್ಸಂಹಿತೆಯ ಐದನೆಯ ಮಂಡಲದ ಕರ್ತೃತ್ವವು ಅವನಿಗೂ ಮತ್ತು ಅವನ ವಂಶೋತ್ಪನ್ನರಾದ ಋಷಿಗಳಿಗೂ ಸೇರಿದುದೆಂದು ನಾವು ನಿರ್ವಹಿಸಬಹುದಾಗಿದೆ. ಪ್ರಕೃತದಲ್ಲಿ ಐತಿಕಹಾಸವಾಗಿ ಪ್ರಸಿದ್ಧನಾದ **ಅತ್ರಿ** ಮಹರ್ಷಿಯ ಮಹತ್ತ್ವವೇನು? ಅವನ ಅಲೌಕಿಕವಾದ ಶಕ್ತಿಯ ವೈಶಿಷ್ಟ್ಯವೇನು ಎಂಬುದನ್ನು ಪರಿಶೀಲಿಸಿ, ಅನಂತರ, ಆಧ್ಯಾತ್ಮಿಕತತ್ತ್ವವನ್ನು ಪ್ರತಿಬಿಂಬಿಸತಕ್ಕ **ಅತ್ರಿ**ಯ ದಿವ್ಯಸ್ವರೂಪವು ಎಲ್ಲೆಲ್ಲಿ ಯಾವ ಯಾವ ರೀತಿ ವರ್ಣಿತವಾಗಿದೆ ಎಂಬುದನ್ನು ತಿಳಿಯಬಹುದು ಅತ್ರಿಯು ಪ್ರಜಾಪತಿಯ ಪುತ್ರನೆಂದು ಅನೇಕಕಡೆಗಳಲ್ಲಿ ತಿಳಿಸಿದೆ ಇವನ ಉತ್ಪತ್ತಿಕ್ರಮವನ್ನು ಬೃಹದ್ದೇವತೆಯ ವಾಕ್ಯಗಳು ಈ ರೀತಿ ವಿವರಿಸುತ್ತವೆ.

ತ್ರಿಸಾಂವತ್ಸರಿಕಂ ಸತ್ರಂ ಪ್ರಜಾಕಾಮಃ ಪ್ರಜಾಪತಿಃ ।
ಆಹರತ್ಸಹಿತಃ ಸಾಧ್ಯೈರ್ವಿಶ್ವೇದೇವೈಃ ಸಹೇತಿ ಚ ॥

ಪ್ರಜಾಪತಿಯು ಪುತ್ರಸಂತಾನವನ್ನು ಹೊಂದಬೇಕೆಂದಿಚ್ಛಿಸಿದನು ಅದಕ್ಕಾಗಿ ಮೂರು ಸಂವತ್ಸರಗಳ ಪರ್ಯಂತ ನೆರವೇರಿಸಲ್ಪಡತಕ್ಕ ಸತ್ರಯಾಗವನ್ನು ಆಚರಿಸಿದನು ಈ ಯಜ್ಞಕಾಲದಲ್ಲಿ ತನ್ನ ಸಹಾಯಕ್ಕಾಗಿ ಸಾಧ್ಯರನ್ನೂ ಮತ್ತು ವಿಶ್ವೇದೇವತೆಗಳನ್ನೂ ಹೊಂದಿದ್ದನು ಎಂಬ ವಿಷಯವು ಪ್ರಸಿದ್ಧವಾಗಿದೆ.

ತಸ್ಯ ವಾಗ್ದೀಕ್ಷಣೀಯಾಯಾಮಾಜಗಾಮ ಶರೀರಿಣೀ ।
ತಾಂ ದೃಷ್ಟ್ವಾ ಯುಗಪತ್ತಸ್ಯ ಕಸ್ಯಾಥ ವರುಣಸ್ಯ ಚ ॥

ಪ್ರಜಾಪತಿಯು ವಿಶ್ವೇದೇವತೆಗಳೊಡನೆಯೂ ಸಾಧ್ಯರೊಡನೆಯೂ ನೆರವೇರಿಸುತ್ತಿದ್ದ **ಈ** ದಕ್ಷಯಾಗಕ್ಕೆ **ವಾಗ್ದೇವಿಯು** ಮಾನುಷಶರೀರವನ್ನು ಹೊಂದಿ ಒಂದಳು ಅವಳ ದಿವ್ಯಸೌಂದರ್ಯವನ್ನು ನೋಡಿದೊಡನೆಯೇ ಪ್ರಜಾಪತಿಗೂ ಮತ್ತು ವರುಣನಿಗೂ ನುನ್ನೋನೈಕಲ್ಯವುಂಟಾಯಿತು ಮತ್ತು ಅವರ ಕಾಮವು ಉಲ್ಬಣವಾಯಿತು

ಶುಕ್ರಂ ಚಸ್ಕಂದ ತದ್ವಾಯುರಗ್ನೌ ಪ್ರಾಸ್ಯದ್ಯದೃಚ್ಛಯಾ ।
ತತೋಽರ್ಚಿಷ್ಯೋ ಭೃಗುರ್ಜಜ್ಞೇ ಅಂಗಾರೇಷ್ವಂಗಿರಾ ಋಷಿಃ ॥

ಪ್ರಜಾಪತಿಗೂ ವರುಣನಿಗೂ ಕಾಮವಿಕಾರವುಂಟಾದುದರಿಂದ ಅವರ ರೇತಸ್ಸು ಸ್ಖಲಿತವಾಗಿ ಪತಿತವಾಯಿತು. ವಾಯುವು ಅದನ್ನು ಹಿಡಿದು ತನ್ನ ಇಷ್ಟಬಂದಂತೆ ಅಗ್ನಿಯಲ್ಲಿ ಚದುರಿಸಿದನು. ಆಗ ಆ ರೇತಸ್ಸು ಅಗ್ನಿಯಲ್ಲಿ ಪ್ರವೇಶಿಸಿದೊಡನೆಯೇ, ಅಗ್ನಿಜ್ವಾಲೆಯಿಂದ ಭೃಗುವೂ, ಅಂಗಾರದಿಂದ (ಕೆಂಡದಿಂದ) ಆಂಗಿರಾಋಷಿಗಳೂ ಉತ್ಪನ್ನರಾದರು.

ಪ್ರಜಾಪತಿಂ ಸುತಾ ದೃಷ್ಟ್ವಾ ದೃಷ್ಟ್ವಾ ವಾಗಭ್ಯಭಾಷತ ।
ಅಭ್ಯಾಮೃಷಿಸ್ತೃತೀಯೋಽಪಿ ಭವೇದಜ್ರೈವ ಮೇ ಸುತಃ ॥

ಅಗ್ನಿಯಲ್ಲಿ ಪ್ರಕ್ಷಿಪ್ತವಾದ ರೇತಸ್ಸಿನಿಂದ ಭೃಗುವೂ, ಅಂಗಿರಸ್ಸೂ ಉತ್ಪನ್ನವಾದಾಗ ಅವರನ್ನು ವಾಗ್ದೇವಿಯು ವೀಕ್ಷಿಸಿ ತಳು ವಾಗ್ದೇವಿಯನ್ನು ಪ್ರಜಾಪತಿಯು ನೋಡಿದನು ಆಗ ವಾಗ್ದೇವಿಯು ಪ್ರಜಾಪತಿಯನ್ನು ಕುರಿತು ಭೃಗು, ತರುಣ ಈ ಇಬ್ಬರು ಪುತ್ರರಿಗಿಂತಲೂ ಮೂರನೆಯ ಪುತ್ರನನ್ನು ಹೊಂದಬೇಕೆಂಬ ಇಚ್ಛೆಯು ತನಗಿದೆಯೆಂದೂ ತದನ್ನು ಪ್ರಜಾಪತಿಯು ನೆರವೇರಿಸಿ ಕೊಡಬೇಕೆಂದೂ ಕೇಳಿಕೊಂಡಳು

ಪ್ರಜಾಪತಿಸ್ತಥೇತ್ಯುಕ್ತ್ವಾ ಪ್ರತ್ಯಭಾಷತ ಭಾರತೀಂ ।
ಋಷಿರತ್ರಿಸ್ತತೋ ಜಜ್ಞೇ ಸೂರ್ಯಾನಲಸಮದ್ಯುತಿಃ ॥

(ಬೃ ದೇ ೫, ೯೨—೧೦೧)

ವಾಗ್ದೇವಿಯಿಂದ ತೃತೀಯಪುತ್ರಾರ್ಥವಾಗಿ ಈ ರೀತಿ ಪ್ರಾರ್ಥಿತನಾದಾಗ ಪ್ರಜಾಪತಿಯು ಆಗಬಹುದೆಂದೊಪ್ಪಿ ಕೊಂಡನು. ಪುನಃ ಅವನ ಪ್ರಯತ್ನದಿಂದ **ಅತ್ರಿ**ಋಷಿಯು ಉತ್ಪನ್ನನಾದನು **ಈ** ಅತ್ರಿಮಹರ್ಷಿಯು ತನ್ನ ನಿವ್ಯಗುಣಗಳಿಂದ ಕೂಡಿದ್ದುದರಿಂದ ಇವನ ತೇಜಸ್ಸು ಸೂರ್ಯನ ಪ್ರಭೆಗೂ ಅಗ್ನಿಯ ಪ್ರಭೆಗೂ ಸಮಾನವಾದು ದಾಗಿದ್ದಿತು, ಎಂದು **ಆತ್ರಿ**ಋಷಿಯ ಉತ್ಪತ್ತಿಕ್ರಮವನ್ನೂ ಅವನ ಮಾಹಾತ್ಮ್ಯವನ್ನೂ ತಿಳಿಸಿದೆ. ಈ ವಿವರಣವು ವೈದಿಕ ವಾಕ್ಯಗಳಲ್ಲಿ ವರ್ಣಿತವಾಗಿರುವ ವಿಷಯವನ್ನೇ ಅನುಸರಿಸಿದೆ ಉದಾಹರಣೆಗೆ, ಶತಪಥಬ್ರಾಹ್ಮಣದಲ್ಲಿ ಇದೇ ಅಂಶವು ವರ್ಣಿತವಾಗಿದೆ ಆದರೆ ವಿವರಣೆಯಲ್ಲಿ ಸ್ವಲ್ಪ ವ್ಯತ್ಯಾಸವಿದೆ

ತದ್ಧೈತದ್ವೇವಾಃ । ರೇತಶ್ಚರ್ಮನ್ವಾ ಯಸ್ಮಿನ್ವಾ ಬಭ್ರುಸ್ತದ್ಧಸ್ಮ ಪೃಚ್ಛಂತ್ಯತ್ರೇವ ತ್ಯಾದಿತಿ ತತೋಽತ್ರಿಃ ಸಂಬಭೂವ ತಸ್ಮಾದಪ್ಯಾತ್ರೇಯ್ಯಾ ಯೋಷಿತ್ಸೈನಸ್ಯೈತಸ್ಯೈ ಹಿ ಯೋಷಾಯೈ ವಾಚೋ ದೇವತಾಯಾ ಏತೇ ಸಂಭೂತಾಃ ॥

(ಶ. ಬ್ರಾ ೧-೪-೫-೧೩)

ವಾಕ್ಕಿಗೂ ಮನಸ್ಸಿಗೂ ತಮ್ಮತಮ್ಮ ವೈಯಕ್ತಿಕವಾದ ವೈಶಿಷ್ಟ್ಯದ ವಿಷಯದಲ್ಲಿ ವಿವಾದವುಂಟಾದಾಗ ಪ್ರಜಾಪತಿಯು ಮನಸ್ಸಿನ ಪರವಾಗಿ ತನ್ನ ತೀರ್ಮಾನವನ್ನು ಕೊಟ್ಟನು ವಾಕ್ಕಿಗೆ ಅಸಮಾಧಾನವಾಯಿತು ಎಂದು ಹೇಳಿರುವ ಈ ಕಥೆಯಲ್ಲಿ ವಾಕ್ಕಿಗೂ ಪ್ರಜಾಪತಿಗೂ ಅನುರಾಗವುಂಟಾಯಿತು ಎಂದು ಹೇಳುವಂತಿಲ್ಲ. ತಪ್ಪುತ್ತನ್ನವಾದ ಆ ರೇತಸ್ಸಿನಿಂದ ಭೃಗುವಿನ ಮತ್ತು ಅಂಗಿರಸ್ಸಿನ ಉತ್ಪತ್ತಿಯನ್ನು ಆ ಸಂದರ್ಭದಲ್ಲಿ ತಿಳಿಸಿಲ್ಲ. ಆದರೂ ಅತ್ರಿಯು ಪ್ರಜಾಪತಿ ಪುತ್ರನೆಂದು ಮಾತ್ರ ತಿಳಿಸಿದೆ. ವಾಗ್ದೇವಿಯ ಪುತ್ರನೆಂದೂ ಸೂಚಿತವಾಗಿದೆ. **ಆತ್ರಿ**ಶಬ್ದದ ರೂಪನಿಷ್ಪತ್ತಿಯೂ ಉಕ್ತವಾಗಿದೆ. ದಿವ್ಯತೇಜಸ್ಸಿನಿಂದ ಸಂಭೂತನೆಂಬುದು ಮಾತ್ರ ವ್ಯಕ್ತವಾಗುತ್ತದೆ. ಈ ದಿವ್ಯತೇಜಸ್ಸಿನ ಮಹಿಮೆಯೂ ಅನೇಕ ಕಡೆಗಳಲ್ಲಿ ಪ್ರಶಂಸಿತವಾಗಿದೆ ಉದಾಹರಣೆಗೆ—

ಆತ್ರೇಯಾಯ ಹಿರಣ್ಯಂ ದದಾತಿ ಯತ್ರ ವಾ ಅದಃ ಪ್ರಾತರನುವಾಕಮನ್ವಾಹುಸ್ತದ್ಧ ಸ್ಮೈತತ್ಪುರಾ ತಂಗ್ ಸಂತ್ಯತ್ರಿರ್ವಾ ಋಷೀಣಾಗ್ಂ ಹೋತಾಸಾಹ್ಯೈತತ್ಸ ದೋಽಸುರತಮ-ಸಮಭಿಭುಭುವೇ ತ ಋಷಯೋಽತ್ರಿಮಬ್ರುವನ್ನೇಹಿ ಪ್ರತ್ಯಜ'ದಂ ತಮೋಽಪಜಹೇತಿ

ಸ ಏತತ್ತ್ರಯೋ೭ಸಾಹನ್ನಯಂ ವೈ ಜ್ಯೋತಿರ್ಯ ಇದಂ ತ್ರಯೋ೭ಸಾಬಧೀದಿತಿ ತಸ್ಮಾ ಏತಜ್ಜ್ಯೋತಿರ್ಹಿರಣ್ಯಂ ದಕ್ಷಿಣಾಮನಯಜ್ಜ್ಯೋತಿರ್ಹಿ ಹಿರಣ್ಯಂ ತದ್ವೈ ಸ ತತ್ತೇಜಸಾ ವೀರ್ಯೇಣರ್ಷಿಸ್ತತ್ರೋ೭ಪಜಘಾನಾಥೈಷ ಏತೇನೈವೈತಜ್ಜ್ಯೋತಿಷಾ ತ್ರಯೋ೭ಸಹಂತಿ ತಸ್ಮಾದಾತ್ರೇಯಾಯೈ ಹಿರಣ್ಯಂ ದಧಾತಿ ॥

(ಶ. ಬ್ರಾ. ೪-೩-೪-೩೧)

ಯಜ್ಞವೇದಿಯ ಮುಂಭಾಗದಲ್ಲಿ ಋತ್ವಿಕ್ಕುಗಳು ಒಂದುಸಲ ಪ್ರಾತರನುವಾಕವನ್ನು ಪಠಿಸುತ್ತಿದ್ದರು ಆ ಕಾಲದಲ್ಲಿ ಆ ಋತ್ವಿಕ್ಕುಗಳಲ್ಲಿ ಅತ್ರಿಋಷಿಯು ಹೋತೃವಾಗಿದ್ದನು. ಆ ಕಾಲದಲ್ಲಿ ಅಸುರರ ಶಕ್ತಿರೂಪವಾದ ಕಗ್ಗತ್ತಲೆಯು ಬಂದು ಸದಸ್ಸನ್ನೆಲ್ಲಾ ಆವರಿಸಿತು. ಆಗ ಋಷಿಗಳೆಲ್ಲರೂ ಸಹ ಅತ್ರಿಯನ್ನು ಕುರಿತು "ದಯವಿಟ್ಟು ಇಲ್ಲಿ ಬಾ, ಈ ಕಗ್ಗತ್ತಲೆಯನ್ನು ನಾಶಪಡಿಸು" ಎಂದು ಪ್ರಾರ್ಥಿಸಿಕೊಂಡರು ಅವನು ಒಡನಯೇ ಆ ಅಂಧಕಾರವನ್ನು ನಾಶ ಪಡಿಸಿದನು. ಆಗ ಋಷಿಗಳೆಲ್ಲರೂ ವಿಸ್ಮಿತರಾಗಿ, "ಇವನೇ ಜ್ಯೋತೀರೂಪನು" ಎಂದು ತಿಳಿದು ಅವನಿಗೆ ಹಿರಣ್ಯ ವನ್ನು ತಂದುಕೊಟ್ಟರು ಹಿರಣ್ಯವೇ ಜ್ಯೋತಿಯು. ಆ ಜ್ಯೋತಿಯ ಸಹಾಯದಿಂದ ಅತ್ರಿಯು ಅಸುರರಿಗೆ ಸಂಬಂಧಿಸಿದ ಕಗ್ಗತ್ತಲೆಯನ್ನು ನಾಶಮಾಡಿದನು ಆದುದರಿಂದ ಪ್ರಕೃತದಲ್ಲೂ ಸಹ ಆದೇ ಜ್ಯೋತಿಯಿಂದ ಕತ್ತಲನ್ನು ನಾಶಮಾಡುವನು. ಆದರ ಪ್ರತಿಫಲವಾಗಿ ಅತ್ರಿಗೋತ್ರೋತ್ಪನ್ನರಾದ ಋಷಿಗಳಿಗೆ ಸುವರ್ಣದಾನವನ್ನು ಮಾಡಿರಿ ಎಂದು ಅತ್ರಿಯ ಪ್ರಶಂಸೆಯಿದೆ ಇದೇ ದಿವ್ಯತೇಜಸ್ಸನ್ನು ಬೃಹದ್ದೇವತೆಯಲ್ಲೂ ಸಹ,

ಅಭ್ಯವಾದಯತಾಮತ್ರಿಂ ಮಹರ್ಷಿಂ ದೀಪ್ತತೇಜಸಂ ।

(ಬೃ ದೇ. ೫-೬೪)

ಆ ತಂದೆಮಕ್ಕಳಿಬ್ಬರೂ ದೇದೀಪ್ಯಮಾನವಾದ ಪ್ರಭೆಯುಳ್ಳವನೂ ಮಹರ್ಷಿಯೂ ಆದ ಅತ್ರಿಗೆ ನಮಸ್ಕರಿಸಿದರು ಎಂದು ಅತ್ರಿಯ ತೇಜೋಮಯವಾದ ಸ್ವರೂಪವನ್ನು ಪ್ರಶಂಸಿದೆ ಮೇಲೆ ಉದಾಹೃತವಾದ ಬೃಹದ್ದೇವತಾವಾಕ್ಯದಲ್ಲಿ **"ಸೂರ್ಯಾನಲಸಮದ್ಯುತಿಃ"** ಎಂಬ ವಿಶೇಷಣವು ಅತ್ರಿಯ ದಿವ್ಯಸ್ವರೂಪವನ್ನು ವಿವರಿಸುತ್ತದೆ ಈ ಋಷಿಯು ತನ್ನ ಜ್ಯೋತಿಯಿಂದ ಕೇವಲ ಮಾನವವ್ಯಕ್ತಿಗಳಿಗೆ ಪ್ರತಿಬಂಧಕವಾಗಿರುವ ಕತ್ತಲನ್ನು ಮಾತ್ರ ನಾಶಮಾಡದೆ, ದಿವ್ಯ ಲೋಕದಲ್ಲಿ ತೇಜಸ್ಸಿಗೇ ಆಧಾರವಾಗಿರುವ ಸೂರ್ಯನಿಗೂ ಸಹ ಸಹಾಯಮಾಡಿದನೆಂಬುದು ಗಮನಾರ್ಹವಾದ ವಿಷಯ ಮತ್ತು ಇವನ ಅತ್ಯಧಿಕವಾದ ಮಾಹಾತ್ಮ್ಯವನ್ನು ತಿಳಿಸುತ್ತದೆ. ಆದರೆ ಈ ಸನ್ನಿವೇಶಗಳಲ್ಲಿ ಇನ್ನೊಂದು ಸಂಶಯಕ್ಕೆ ಅವಕಾಶವಿರುತ್ತದೆ. ತಾನು ಕತ್ತಲಲ್ಲಿ ಬಿದ್ದಿದ್ದಾಗ,

ಯಾಭಿಃ ತುಚಂತಿಂ ಧನಸಾಂ ಸುಷಂಸದಂ ತಪ್ತಂ ಘರ್ಮನೋವ್ಯಾಂತಮತ್ರಯೇ ।

(ಋ ಸಂ. ೮-೧೧೨-೭)

ಯದ್ವಾಂ ದಂಸೋಭಿರಶ್ವಿನಾತ್ರಿರ್ನರಾವವರ್ತತಿ ।

(ಋ. ಸಂ. ೫-೭೩-೭)

ಯುವಮ್ಯಬೀಸಮುತ ತಪ್ತಮತ್ರಯೆ ಓಮನ್ವಂತಂ ಚಕ್ರಥುಃ ಸಪ್ತವಧ್ರಯೇ ॥

(ಋ. ಸಂ. ೧೦-೩೯-೯)

ಇತ್ಯಾದಿ ಸ್ಥಳಗಳಲ್ಲೆಲ್ಲಾ ಕಗ್ಗತ್ತಲೆಯಲ್ಲಿ ಬಿದ್ದಿದ್ದ ಅತ್ರಿಯನ್ನು ಅಶ್ವಿನೀದೇವತೆಗಳು ರಕ್ಷಿಸಿದ ವಿಷಯವು ತಿಳಿಸಲ್ಪಟ್ಟಿದೆ. ಆ ಕಥೆಯ ವಿವರಣೆಯೇನೆಂದರೆ, ಅಸುರರು ಒಂದು ಸಲ ಅತ್ರಿಯನ್ನು ಅಗ್ನಿಕೂಟದಲ್ಲಿ ತಳ್ಳಿಬಿಟ್ಟರು, ಅವನು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿದನು. ಅವರು ಬಂದು ವೃಷ್ಟ್ಯುದಕದಿಂದ ಅಗ್ನಿಶಮನವನ್ನು ಮಾಡಿ ಅವನನ್ನು ಮೇಲಕ್ಕೆತ್ತಿದರು. ಆನಂತರ ಅವನಿಗೆ ಅಸುರನನ್ನು ನಿರೋಧಿಸುವ ಶಕ್ತಿಯು ಬಂದಿತು ಎಂದಿದೆ. ಈ ರೀತಿ ತನ್ನ ರಕ್ಷಣೆಗೇ ಅತ್ರಿಯು ಇತರ ದೇವತಾಸಹಾಯವನ್ನ ಪೇಕ್ಷಿಸಿದ ಸಂದರ್ಭವಿದ್ದಾಗ ಅವನು ತನ್ನ ನೈಜಶಕ್ತಿಯಿಂದ ಅಸುರಾದಿಗಳನ್ನು ನಾಶಮಾಡಿ ದೇವತೆಗಳಿಗೂ ಇತರ ಋಷಿಗಳಿಗೂ ಸಹಾಯಮಾಡಿದನು ಎಂದು ಹೇಳುವುದು ಪರಸ್ಪರ ವಿರುದ್ಧವಲ್ಲವೇ ಎಂಬ ಒಂದು ಪ್ರಶ್ನೆಯು ಸಹಜವಾಗಿರುತ್ತದೆ ಆದರೆ ಇದಕ್ಕೆ ಸಮಾಧಾನವನ್ನು ಹೇಳುವುದು ಕಷ್ಟವಲ್ಲ ಮೇಲೆ ಉದಾಹೃತವಾಗಿರುವ ೧ ೧೧೨. ೭ನೇ ಮಂತ್ರದಲ್ಲಿ **ತಪ್ತಂ ಘರ್ಮಂ ಓಮ್ಯಾವಂತಂ** । ಎಂಬ ವಾಕ್ಯಕ್ಕೆ ಸಾಯಣರು ಯಾಸ್ಕನುತನನ್ನು ದ್ಧರಿಸಿ **" ಯಾಸ್ಕಪಕ್ಷೇ ತು ಅತ್ರಯೇ ಹವಿಷಾಮತ್ರೈರಗ್ನಯೇ ಹವಿರುತ್ಪತ್ಯರ್ಥಂ ಸೂರ್ಯಕಿರಣಸಂತಪ್ತಂ ಘರ್ಮಂ ನೈದಾಘಂ ಅಹಃ ಓಮ್ಯಾವಂತಂ ತೃಪ್ತಿಹೇತು-ವೃಷ್ಟ್ಯುದಕೋಪೇತಂ ಕೃತವಂತೌ ಇತಿ ಯೋಜ್ಯಂ "** ಎಂದರೆ, ಯಾಸ್ಕರ ಮತದಲ್ಲಿ ಅತ್ರಿ ಶಬ್ದಕ್ಕೆ ಹವಿಸ್ಸನ್ನು ಭಕ್ಷಿಸತಕ್ಕ ಅಗ್ನಿಯೆಂದರ್ಥ ಇಂತಹ ಅಗ್ನಿಗೆ ಸೂರ್ಯಕಿರಣಸಂತಪ್ತವಾದುದೂ, ಬೇಸಿಗೆಯ ಕಾಲಕ್ಕೆ ಸಂಬಂಧಿಸಿದುದೂ ಆದ ಆಹಸ್ಸನ್ನು ತೃಪ್ತಿಕರವಾದ ವೃಷ್ಟ್ಯುದಕದಿಂದ ಕೂಡಿದುದನ್ನಾಗಿ ಮಾಡಿದರು ಎಂದು ತಾತ್ಪರ್ಯ. ಅಗ್ನಿಗೂ, ಅತ್ರಿಗೂ ಇರುವ ತಾದಾತ್ಮ್ಯವನ್ನು ತಿಳಿಸುವ ವಿಶೇಷಣಗಳೂ ಸಹ ಈ ವಿಧವಾದ ಅರ್ಥಕ್ಕೆ ಸಹಾಯ ಮಾಡುತ್ತವೆ ಉದಾಹರಣೆಗೆ—

ಋಷಿಂ ನರಾವಂಹಸಃ ಪಾಂಚಜನ್ಯಮೃಬೀಸಾದತ್ರಿಂ ಮುಂಚಥೋ ಗಣೇನ ।

(ಋ ಸಂ ೧-೧೧೭-೩)

ಎಂಬಲ್ಲಿ **ಪಾಂಚಜನ್ಯ** ಶಬ್ದವು **ಅತ್ರಿಗೆ** ವಿಶೇಷಣವಾಗಿದೆ ಮತ್ತು.

ಅಗ್ನಿರ್ಯಷಿಃ ಪವಮಾನಃ ಪಾಂಚಜನ್ಯಃ ಪುರೋಹಿತಃ । ತಮೀಮಹೇ ಮಹಾಗಯಂ ॥

(ಋ. ಸಂ. ೯-೬೬-೨೦)

ಇತ್ಯಾದಿ ಸ್ಥಳಗಳಲ್ಲಿ ಇದೇ **ಪಾಂಚಜನ್ಯ**ವದವು ಋಷಿಯಾದ **ಅಗ್ನಿಗೆ** ವಿಶೇಷಣವಾಗಿದೆ ಎರಡೆರೆಗಳಲ್ಲೂ ಸಹ ಈ ವಿಶೇಷಣಪದಕ್ಕೆ ಒಂದೇ ವಿಧವಾದ ನಿರ್ವಚನವನ್ನೂ ವಿವರಣೆಯನ್ನೂ ಕೇಳಿದೆ ಇಂತಹ ಸಂದರ್ಭಗಳಲ್ಲಿ ಅಗ್ನಿಗೂ ಅತ್ರಿಗೂ ಅಭೇದಸೂಚಕವಾದ ವಿಶೇಷಣಗಳಿದ್ದು, ಕೇವಲ ಇಂತಹ ಸಾಧಾರಣ ಧರ್ಮಬೋಧಕವಾದ ವಿಶೇಷಣಗಳೇ ಅಲ್ಲದೇ, ಇನ್ನೂ ಅನೇಕ ಅಂಶಗಳಲ್ಲೂ ಅಗ್ನಿಗೂ ಅತ್ರಿಗೂ ತಾದಾತ್ಮ್ಯಬೋಧಕವಾದ ವರ್ಣನೆಗಳ ಆಧಾರದಮೇಲೆ ಅರ್ಥನನ್ನು ಕಲ್ಪಿಸುವುದು ಒಂದು ವಿಧ, ಇದಲ್ಲದೇ,

ಅಗ್ನಿರತ್ರಿಂ ಘರ್ಮ ಉರುಷ್ಯದಂತರಗ್ನಿರ್ನ್ಯಮೇಧಂ ಪ್ರಜಯೋರುಜತ್ಸಂ ॥

(ಋ ಸಂ. ೧೦-೮೦-೩)

ಇತ್ಯಾದಿ ಸಂದರ್ಭಗಳಲ್ಲಿ ಋಬೀಸದಲ್ಲಿ ಸ್ಥಿತನಾಗಿ ಸಂಕಟಪಡುತ್ತಿದ್ದ ಅತ್ರಿಯನ್ನು ಅಗ್ನಿಯು ರಕ್ಷಿಸಿದನು ಇತ್ಯಾದಿ ವರ್ಣನೆಗಳಿರುವ ಸ್ಥಳಗಳಲ್ಲಿ ಇಬ್ಬರಿಗೂ ಭೇದವು ಸೂಚಿತವಾಗಿದೆ. ಇಂತಹ ಸಂದರ್ಭಗಳೂ ಸಹ ಸಂಶಯಕ್ಕೆ ಅವಕಾಶವನ್ನುಂಟುಮಾಡುತ್ತವೆ. ಆದರೆ, ಇನ್ನೂ ಮುಂದೆ ಪರಿಶೀಲಿಸಿದರೆ, ಈ ಸಂಶಯವೂ ಪರಿಹಾರಗೊಳ್ಳುತ್ತದೆ.

ಐದನೆಯ ಮಂಡಲದ ನಲವತ್ತನೆಯ ಸೂಕ್ತವು ಅತ್ರಿಯ ದಿವ್ಯಸ್ವರೂಪವನ್ನು ವರ್ಣಿಸುವುದರಿಂದ ಪ್ರಕೃತದಲ್ಲಿ ಆ ಸೂಕ್ತದ ತಾತ್ಪರ್ಯವನ್ನು ತಿಳಿಯುವುದು ಅತ್ಯವಶ್ಯವಾಗಿರುತ್ತದೆ ಇಂದ್ರ ಮತ್ತು ಸೂರ್ಯರು ಈ ಸೂಕ್ತದಲ್ಲಿ ಪ್ರಶಂಸಿತವಾಗಿರುವ ಮುಖ್ಯದೇವತೆಗಳು. ಇವರ ಜತೆಯಲ್ಲಿ ಅತ್ರಿಯೂ ದೇವತಾದೃಷ್ಟಿಯಿಂದಲೇ ಪರಿಗಣಿತನಾಗಿ ಇಂದ್ರಾದಿಗಳಂತೆಯೇ ಸ್ತುತನಾಗಿದ್ದಾನೆ. ಅತ್ರಿಋಷಿಯ ಮಹಿಮೆಯನ್ನು ತೋರಿಸುವ ಈ ಸೂಕ್ತದ ಮುಖ್ಯಾಂಶವೇನೆಂದು ಅರಿಯಬೇಕು

स्वर्भानोरध यदिन्द्र मायाऽवो दिवो वर्तमाना अवाहन् ।
गूळ्हं सूर्यं तमसापव्रतेन तुरीयेण ब्रह्मणाविन्ददत्रिः ॥

(ಋ ಸಂ. ೫-೪೦-೬)

अत्रिः सूर्यस्य दिवि चक्षुराधात्स्वर्भानोरप मायाऽअधुक्षत् ।

(೫-೪೦-೯)

ಇತ್ಯಾದಿ ಋಕ್ಕುಗಳಲ್ಲಿ **ಅತ್ರಿಯ** ಅಲೌಕಿಕವಾದ ಶಕ್ತಿಯು ವರ್ಣಿತವಾಗಿದೆ ಸ್ವರ್ಭಾನುವು ಸೂರ್ಯನನ್ನು ಕ್ರಮಿಸಿ ಕತ್ತಲೆಯನ್ನುಂಟುಮಾಡಿದಾಗ ಅತ್ರಿಋಷಿಯು ಕತ್ತಲನ್ನು ನಾಶಮಾಡಿ ಸೂರ್ಯನನ್ನು ಪ್ರಕಾಶಿಸುವಂತೆ ಮಾಡಿದನು ಎಂದಿವೆ. ಈ ಮಹತ್ಕಾರ್ಯವು ಅತ್ರಿಗಳಿಗಲ್ಲದೆ ಇನ್ನಾರಿಗೂ ಸಾಧ್ಯವಾಗಿಲಿಲ್ಲ ಎಂಬುದು **"ಅತ್ರೆಯಸ್ತಮನ್ವವಿಂದನ್ನಹ್ಯನಿನ್ಯೇ ಅಶಕ್ನುವನ್"** (೫-೪೦-೯) ಎಂಬ ವಾಕ್ಯದಲ್ಲಿ ಸ್ಪಷ್ಟವಾಗಿದೆ ಈ ಸಂದರ್ಭದಲ್ಲಿ ಸ್ವರ್ಭಾನು ಶಬ್ದಕ್ಕೆ ಅರ್ಥವೇನು ಮತ್ತು ಅಸುರಾತ್ಮಕನಾದ ಸ್ವರ್ಭಾನುವು ಸೂರ್ಯನನ್ನು ಮರೆಮಾಡಿದುದು ಎಂಬುದರ ಅರ್ಥವೇನು ಎಂಬ ವಿಷಯಸನ್ನು ನಿಷ್ಕೃಷ್ಟವಾಗಿ ಆಯಾ ಮಂತ್ರದ ವಿಶೇಷ ವಿಷಯಗಳಲ್ಲಿ ತಿಳಿಸಲಾಗುವುದು ಪ್ರಕೃತದಲ್ಲಿ ಅತ್ರಿ ಮಹರ್ಷಿಯ ಮಹತ್ವವನ್ನು ವರ್ಣಿಸುವುದರಿಂದ ಈ ಸಂದರ್ಭವನ್ನು ಉದಾಹರಿಸಿದೆ. ಇದೇ ಅಂಶವನ್ನು **ಕೌಶೀತಕಿಬ್ರಾಹ್ಮಣದಲ್ಲೂ** ಸಹ ಉದಾಹರಿಸಿ ಅತ್ರಿ ಸ್ತುತಿಯನ್ನು ಮಾಡಿದೆ ಅಲ್ಲಿ ಈ ಸನ್ನಿವೇಶವ ಕಥಾರೂಪದಲ್ಲಿ ಉಕ್ತವಾಗಿದೆ

"ಸ್ವರ್ಭಾನುವೆಂಬ ಅಸುರನು ಸೂರ್ಯನನ್ನು ಕತ್ತಲಿನಿಂದ ಆಚ್ಛಾದಿಸಿದನು ಅತ್ರಿಗಳು ಈ ಕತ್ತಲೆಯನ್ನು ನಾಶಮಾಡಲಿಚ್ಛಿಸಿದರು. ಅವರು ಸಪ್ತದಶಸ್ತೋಮದ ಸಹಾಯದಿಂದ ವಿಷುವತ್ತಿಗೆ ಪೂರ್ವಭಾವಿಯಾಗಿ ತ್ರ್ಯಹೀನಾತ್ಮಕವಾದ ಯಾಗವನ್ನಾಚರಿಸಿದರು ಆಗ ಮುಂಭಾಗದಲ್ಲಿರುವ ಕತ್ತಲನ್ನು ನಾಶಮಾಡಲು ಸಾಧ್ಯವಾಯಿತು ಆ ಆ ಕತ್ತಲೆಯು ಆದಿತ್ಯನ ಹಿಂಭಾಗವನ್ನಾವರಿಸಿತು ಆಗಲೂ ಅದೇ ಯಾಗವನ್ನು ವಿಷುವದ್ಮಧ್ಯದಲ್ಲಿ ಆಚರಿಸಿದರು ಆಗ ಹಿ ಭಾಗದ ಕತ್ತಲು ನಾಶವಾಯಿತು ಆದುದರಿಂದ ಯಾರು ತ್ರ್ಯಹೀನಾತ್ಮಕವಾದ ಯಾಗವನ್ನು ಸಪ್ತದಸ್ತೋಮದ ಸಹಾಯದಿಂದ ವಿಷುವತ್ತಿನ ಎರಡು ಪಾರ್ಶ್ವಗಳಲ್ಲೂ ನೆರವೇರಿಸುವರೋ ಅವರು ಎರಡು ಲೋಕಗಳಲ್ಲಿರುವ ಕತ್ತಲನ್ನೂ ನಾಶಮಾಡುವರು ಅದೇ ಸ್ವರಸಾಮವೆಂದೂ ಪ್ರಸಿದ್ಧವಾಗಿದೆ ಇದರ ಸಹಾಯದಿಂದಲೇ ಅತ್ರಿಗಳು ಆದಿತ್ಯನನ್ನು ಕತ್ತಲಿನಿಂದ ಪಾರುಮಾಡಲು ಶಕ್ತರಾದರು. ಅತ್ರಿಗಳ ಈ ಮಾಹಾತ್ಮ್ಯವನ್ನೇ **"ಯಂ ವೈ ಸೂರ್ಯꣳ ಸ್ವರ್ಭಾನುಃ"** (ಋ ಸಂ ೫-೪೦-೯) ಎಂದ ಮಂತ್ರದಲ್ಲಿ ಪ್ರಶಂಸಿಸಿದೆ" ಎಂದು **ಕೌಷೀತಕಿಬ್ರಾಹ್ಮಣದಲ್ಲಿ** ಅತ್ರಿಗಳ ಪ್ರಶಂಸೆಯಿರುತ್ತದೆ. (**ಕೌ. ಬ್ರಾ. ೨೪-೩ ; ೪**)

ಅತ್ರಿಗೆ ಈ ಮಹಿಮೆಯು ಪ್ರಾಪ್ತವಾಗಲು ಸಾಧನವಾವುದು ಯಾವ ಕರ್ಮದಿಂದ ಈ ಸಿದ್ಧಿಯು ಲಭಿಸಿತು ಎಂಬುದನ್ನು ತೈತ್ತಿರೀಯಸಂಹಿತೆಯಲ್ಲಿ ಈ ರೀತಿ ತಿಳಿಸಿದೆ.

ಅತ್ರಿರಬಿಭೇದೌರ್ವಾಯೈ ಪ್ರಜಾಂ ಪುತ್ರಕಾಮಾಯ ಸ ರಿರಿಚಾನೋಽಮನ್ಯತ ನಿರ್ವೀರ್ಯಶ್ಶಿಥಿಲೋ ಯಾತಯಾಮಾನ ಸ ಏತಂ ಚತೂರಾತ್ರಮಪಶ್ಯತ್ತಮಾಹರತ್ತೇನಾಯಜತ ತತೋ ವೈ ತಸ್ಯ ಚತ್ವಾರೋ ವೀರಾ ಅಜಾಯಂತ ಸುಹೋತಾ ಸೂದ್ಗಾತಾ ಸ್ವಧ್ವರ್ಯುಸ್ಸುಸಭೇಯೋ ಯ ಏವಂ ವಿದ್ವಾಗ್ಂಶ್ಚತೂರಾತ್ರೇಣ ಯಜತ ಆಸ್ಯ ಚತ್ವಾರೋ ವೀರಾ ಜಾಯಂತೇ . ....॥

(ತೈ. ಸಂ ೭-೧-೮-೧)

ಔರ್ವ (ಊರ್ವಪುತ್ರ) ನಿಗೆ ಸಂತಾನೇಚ್ಛೆಯುಂಟಾಯಿತು ಆದರೆ ಅವನು ನಿರ್ವೀರ್ಯನಾಗಿಯೂ, ಶಿಥಿಲಪ್ರಾಯನಾಗಿಯೂ, ಜರಾಪೀಡಿತನಾಗಿಯೂ ಇದ್ದನು ಆಗ ಅತ್ರಿಯು ಚತೂರಾತ್ರಾತ್ಮಕವಾದ ಯಾಗವನ್ನು ಧ್ಯಾನಿಸಿ, ಅದರ ತತ್ತ್ವವನ್ನರ್ಥಮಾಡಿಕೊಂಡು ಅದನ್ನಾಚರಿಸಿದನು ಅದರ ಫಲವಾಗಿ ಔರ್ವನಿಗೆ ನಾಲ್ಕು ಪುತ್ರರು ಜನಿಸಿದರು. ಅವರಲ್ಲಿ ಒಬ್ಬನು ಉತ್ತಮವಾದ ಹೋತೃವಾಗಿಯೂ, ಇನ್ನೊಬ್ಬನು ಶ್ರೇಷ್ಠವಾದ ಉದ್ಗಾತೃವಾಗಿಯೂ, ಮೂರನೆಯವನು ಪ್ರಶಸ್ಯವಾದ ಅಧ್ವರ್ಯುವಾಗಿಯೂ, ನಾಲ್ಕನೆಯವನು ಪ್ರಜ್ಞಾಕುಶಲನಾಗಿ ಶ್ಲಾಘ್ಯನಾದ ಸದಸ್ಯನಾಗಿಯೂ ಆದರು. ಅತ್ರಿಯಂತೆ ಅವನನ್ನೇ ಅನುಸರಿಸಿ, ಯಾರು ಈ ಯಾಗವನ್ನು ಆಚರಿಸುವರೋ ಅವರಿಗೆ ಈ ಸಂಪತ್ತು ಲಭಿಸುವುದು

ಯ ಉದ್ಯಂತಸ್ಸ್ತೋಮಾಶ್ಶಸ್ಯಾಸ್ತ್ರಿಗ್ಂ ಶ್ರದ್ಧಾದೇವಂ ಯಜಮಾನಂ ಚತ್ವಾರಿ ವೀರ್ಯಾಣಿ ನೋಹಾನಮನ್ವೇಜ ಇಂದ್ರಿಯಂ ಬ್ರಹ್ಮವರ್ಚಸಮನ್ನಾದ್ಯಗ್ಂ ಸ ಏತಾಗ್ಂಶ್ಚತುರಶ್ಚತುಷ್ಪ್ಯೋಮಾನ್ಸ್ತೋಮಾನಪಶ್ಯತ್ತಾನಾಹರತ್ತ್ರಯಯಜತ ತೇಜ ಏವ ಪ್ರಥಮೇನಾವಾರುಂಧೇಂದ್ರಿಯಂ ದ್ವಿತೀಯೇನ ಬ್ರಹ್ಮವರ್ಚಸಂ ತೃತೀಯೇನಾನ್ನಾದ್ಯಂ ಚತುರ್ಥೇನ ಯ ಏವಂ ವಿದ್ವಾಗ್ಂಶ್ಚತುರಶ್ಚತುಷ್ಪ್ಯೋಮಾನ್ಸ್ತೋಮಾನಾಹರತಿ ತೈರ್ಯಜತೇ ತೇಜ ಏವ ಪ್ರಥಮೇನಾವರುಂಧ ಇಂದ್ರಿಯಂ ದ್ವಿತೀಯೇನ ಬ್ರಹ್ಮವರ್ಚಸಂ ತೃತೀಯೇನಾನ್ನಾದ್ಯಂ ಚತುರ್ಥೇನ ಯಾಸೋಮವಾತ್ರಿರ್ಭುದ್ಧಿಮಾಧ್ರೋರ್ತಾತ್ತಮೇವ ಯಜಮಾನ ಋಧ್ನೋತಿ ॥

(ತೈ ಸಂ ೭-೧-೮-೨)

ಸ್ತೋಮಗಳು ವೃದ್ಧಿಯನ್ನು ಹೊಂದುತ್ತಿದ್ದರೆ ಅದು ಪುರುಷನ ಅಭ್ಯುದಯಕ್ಕೆ ಕಾರಣಗಳಾಗುತ್ತವೆ ಆದರೆ, ಇವುಗಳ ಸಹಾಯವಿಲ್ಲದೇ, ಅತ್ರಿಯು ಕೇವಲ ಶ್ರದ್ಧಾದೇವನನ್ನೇ ಪೂಜಿಸುತ್ತಿದ್ದುದರಿಂದ, ಅವನು ತೇಜಸ್ಸನ್ನಾಗಲಿ, ವೀರ್ಯವನ್ನಾಗಲಿ, ಬ್ರಹ್ಮವರ್ಚಸ್ಸನ್ನಾಗಲಿ, ಅನ್ನಸಂಪತ್ತನ್ನಾಗಲಿ ಪಡೆಯಲಾಗಲಿಲ್ಲ ಅನಂತರ ಅವನು ಚತುಷ್ಟೋಮಾತ್ಮಕವಾದ ಸೋಮಾಹುತಿಗಳ ಸ್ವರೂಪವನ್ನು ಅರ್ಥಮಾಡಿಕೊಂಡು, ಈ ಸ್ತೋಮಗಳ ಸಹಾಯದಿಂದ ಯಜ್ಞಕರ್ಮವನ್ನಾಚರಿಸಿದನು ಆಗ ಅವನಿಗೆ ಮೊದಲನೆಯ ಸ್ತೋಮದಿಂದ ತೇಜಸ್ಸು, ಎರಡನೆಯದರಿಂದ ಇಂದ್ರಿಯ ವೀರ್ಯವೂ, ಮೂರನೆಯದರಿಂದ ಬ್ರಹ್ಮವರ್ಚಸ್ಸೂ, ಮತ್ತು ನಾಲ್ಕನೆಯದರಿಂದ ಅನ್ನಸಂಪತ್ತೂ ಲಭಿಸಿದವು. ಯಾವನು ಈ ರೀತಿ ಚತುಷ್ಟೋಮಾತ್ಮಕವಾದ ಸೋಮಾಹುತಿಯನ್ನರ್ಪಿಸುವನೋ ಅವನಿಗೆ ಈ ನಾಲ್ಕು ಸಿದ್ಧಿಗಳೂ ಲಭಿಸುವುವು ಎಂದು ಅತ್ರಿಯ ಮಹತ್ವವನ್ನು ಪ್ರಶಂಸಿಸಿದೆ.

ಇಂತಹ ಮಹತ್ತ್ವವುಳ್ಳ ಅತ್ರಿಯು ಸೂರ್ಯನನ್ನು ಕತ್ತಲಿನಿಂದ ಬಿಡಿಸಿದನು ಎಂಬುದಕ್ಕೂ ಶ್ರುತಿವಾಕ್ಯಗಳ ಆಧಾರದ ಮೇಲೆ ಈ ರೀತಿ ಅರ್ಥಮಾಡಿದರೆ ತಪ್ಪಾಗಲಾರದು. ಅತ್ರಿಯೇ ಅಗ್ನಿರೂಪನಾಗಿ ಅಥವಾ ಅತ್ರಿರೂಪನಾದ ಅಗ್ನಿಯೇ ಸೂರ್ಯನನ್ನು ತಮಸ್ಸಿನಿಂದ ಬಿಡುಗಡೆ ಮಾಡಿದನು ಎಂದು ಹೇಳುವುದಕ್ಕೆ ಅವಕಾಶವಿದೆ. ರಾತ್ರಿಯ ತಮಸ್ಸಿನಿಂದ ಆವೃತನಾದ ಸೂರ್ಯನನ್ನು ಪ್ರಾತಃಕಾಲದ ಅಗ್ನಿಯು ತನ್ನ ಪ್ರಾರ್ಥನೆಯಿಂದ ಬಿಡಿಸಿ ಸೂರ್ಯನನ್ನು ಪ್ರಕಾಶಿಸುವಂತೆ ಮಾಡಿದನು ಎಂದೂ ತಾತ್ಪರ್ಯವನ್ನು ಹೇಳಬಹುದು. ಆದರೆ, ಅಗ್ನಿಗೆ ಅತ್ರಿ ಯೆಂಬ ಪರ್ಯಾಯ ನಾಮವು ಹೇಗೆ ಸಾಧ್ಯ ಎಂದರೆ, ಅತ್ರಿಶಬ್ದದ ನಿರ್ವಚನವು ಅಗ್ನಿಯೇ ಅತ್ರಿಸ್ವರೂಪನೆಂಬುದನ್ನು ನಿಸ್ಸಂದೇಹವಾಗಿ ತಿಳಿಸುತ್ತದೆ.

" ಅತ್ರಿರ್ಹ ವೈ ನಾಮೈತದ್ಯದತ್ರಿರಿತಿ ; ಸರ್ವಸ್ಯಾತ್ತಾ ಭವತಿ ।

(ಬೃ. ಉ. ೨-೨-೪)

ಸರ್ವವನ್ನೂ ಭಕ್ಷಿಸುವುದರಿಂದ **ಅತ್ರಿ**ಶಬ್ದವು ಸರ್ವಭಕ್ಷಕನಿಗೆ ವಿಶೇಷಣಪದವಾಗಿರುತ್ತದೆಯೆಂದು **ಅತ್ರಿ**ಶಬ್ದದ ನಿರ್ವಚನವಿದೆ. ಆದರೆ, ಪ್ರಕೃತವಾದ ಈ ವಾಕ್ಯದಲ್ಲಿರುವ **ಅತ್ರಿ**ಶಬ್ದದ ನಿರ್ವಚನಕ್ಕೂ **ಅಗ್ನಿ**ಗೂ ಏನು ಸಂಬಂಧವೆಂದರೆ, ಇದು ಅಗ್ನಿಯ ಸ್ವರೂಪವಲ್ಲದೇ ಬೇರೆಯಲ್ಲ.

ಅಗ್ನಿಷ್ಟದ್ವಿಶ್ವಾದಗದಂ ಕೃಣೋತು ಸೋಮಕ್ಷಿ ಯೋ ಬ್ರಾಹ್ಮಣೌ ಆ ವಿವೇಶ ।

(ಋ ಸಂ. ೧೦-೧೬೬-೬)

ಯುವಾನಂ ವಿಶ್ಪತಿಂ ಕವಿಂ ವಿಶ್ವಾದಂ ಪುರುವೇಪಸಂ । ಅಗ್ನಿಂ ಶುಂಭಾಮಿ ಮನ್ಮಭಿಃ ।

(ಋ. ಸಂ. ೮-೪೪-೨೬)

ಇತ್ಯಾದಿ ಋಕ್ಕುಗಳಲ್ಲಿ ಅಗ್ನಿಯನ್ನು ವಿಶ್ವಾದನೆಂದು ವರ್ಣಿಸಿದೆ ಸರ್ವವನ್ನೂ ಭಕ್ಷಿಸುವವನೆಂದರ್ಥ. ಈ ಗುಣ ವಿರುವುದರಿಂದಲೇ ಅವನು **ಅತ್ರಿ**ಶಬ್ದದಿಂದ ನಿರ್ದಿಷ್ಟನಾಗಬಹುದು

" ವಾಗೇವಾತ್ರಿಃ ; ವಾಚಾ ಹ್ಯನ್ನಮದ್ಯತೇ " (ಬೃ. ಉ ೨ ೨-೪) ವಾಕ್ಕೇ ಅತ್ರಿಯು, ವಾಕ್ಕಿನಿಂದಲೇ ಅನ್ನವು ಭಕ್ಷಿಸಲ್ಪಡುತ್ತದೆ ಎಂದು ವಾಕ್ಕಿಗೂ, **ಅತ್ರಿಗೂ** ತಾದಾತ್ಮ್ಯಸಂಬಂಧವನ್ನು ಹೇಳಿರುವಂತೆ, **ಸೋಽಗ್ನಿಃ ಕೇಸ್ಮಿನ್ನೆತಿಷ್ಠಿತ ಇತಿ । ವಾಚೀತಿ** ॥ (ಬೃ. ಉ. ೩-೯ ೨೪) ಅಗ್ನಿಗೂ, ವಾಕ್ಕಿಗೂ ಇರುವ ತಾದಾತ್ಮ್ಯಸಂಬಂಧವನ್ನು ತಿಳಿಸಿದೆ. ಇಂತಹ ವಿಶ್ವಾದನೇ ಅತ್ರಿರೂಪನಾದ ಅಗ್ನಿಯು **ಅತ್ರಿ**ಶಬ್ದಕ್ಕೆಈ ಅರ್ಥವನ್ನು ಹೇಳಿದರೆ, ಆಗ **ಮಹರ್ಷಿಂ ದೀಪ್ತೇಜಸಂ, ಸೂರ್ಯಾನಲಸಮದ್ಯುತಿಃ** ಇತ್ಯಾದಿ ವಿಶೇಷಣಗಳ ಸಾರ್ಥಕ್ಯವು ಹೊಂದಿಕೊಳ್ಳುತ್ತದೆ ಅಲೌಕಿಕವಾದ ದಿವ್ಯಸ್ವರೂಪವುಳ್ಳದ್ದರಿಂದಲೇ ನಿರುಕ್ತಕಾರರೂ ಸಹ **ಅತ್ರಿ**ಶಬ್ದಕ್ಕೆ **ಅತ್ರಿಃ ನ ತ್ರಯಃ ।** (ನಿ. ೩-೧೭) **ನ ವಿದ್ಯೇಂತೇ ತ್ರೀಣಿ ಯಸ್ಯ ಸಃ ।** ದುಃಖತ್ರಯವು ಇಲ್ಲದಿರುವ ಮಹದ್ವ್ಯಕ್ತಿಯೆಂಬರ್ಥ ಮಾಡಿದ್ದಾರೆ. ಋಕ್ಸಂಹಿತೆಯಲ್ಲಿಯೂ ಅಗ್ನಿಯು **ಅತ್ರಿ**ಶಬ್ದನಿಂದ ನಿರ್ದಿಷ್ಟನಾಗಿದ್ದಾನೆ

ಅತ್ರಿಮನುಸ್ವಾರಾಜ್ಯಮಗ್ನಿಮುಕ್ಥಾನಿ ವಾವೃಧುಃ । ವಿಶ್ವಾ ಅಧಿ ಶ್ರಿಯೋ ದಧೇ ॥

(ಋ. ಸಂ. ೨-೮-೫)

ಅತ್ರಿರೂಪನಾದ ಅಗ್ನಿಯನ್ನುದ್ದೇಶಿಸಿ ಸ್ತೋತ್ರಗಳನ್ನರ್ಪಿಸುತ್ತಾರೆ ಇತ್ಯಾದಿಯಾಗಿ ಪ್ರಶಂಸಿಸಿದೆ.

ಈ ಎಲ್ಲಾ ಶ್ರುತಿವಾಕ್ಯಗಳೂ ಸಹ ಮೇಲೆ ವಿವರಿಸಿರುವ ಅತ್ರಿಯ ಉತ್ಪತ್ತಿಯ ವರ್ಣನೆಗೆ ನಿಷ್ಕೃಷ್ಟವಾದ ಅರ್ಥವನ್ನು ಹೊಂದಿಸುತ್ತವೆ. ವಾಕ್ಯನೊಂದಿಗೆ ಸಂಬಂಧವನ್ನು ಹೊಂದಿದ ಪ್ರಜಾಪತಿಯ ರೇತಸ್ಸು ಅಗ್ನಿಯಲ್ಲಿ ಪ್ರಕ್ಷಿಪ್ತವಾಗಿ ಆ ಅಗ್ನಿಯಿಂದ ಅತ್ರಿಯು ಉತ್ಪನ್ನನಾದನು ಎಂಬ ಕಥೆಯಲ್ಲಿ, ವಾಕ್ಕು, ಅಗ್ನಿ ಮತ್ತು ಅತ್ರಿ ಈ ಮೂರು ಸ್ವರೂಪಗಳ ಸಂಬಂಧವು ವ್ಯಕ್ತವಾಗುತ್ತದೆ. ಮೇಲೆ ಉದಾಹೃತವಾಗಿರುವ ೧೦-೪೯-೯ ನೇ ಮಂತ್ರದಲ್ಲಿ ಅತ್ರಿಗೂ, ಸಪ್ತವಧ್ರಿಗೂ ತಾದಾತ್ಮ್ಯವನ್ನು ತೋರಿಸಿದೆ. ಈ ಅಂಶವನ್ನು ಮುಂದೆ ಸಪ್ತವಧ್ರಿಯ ವಿಷಯವಾಗಿ ವಿವರಿಸುವಾಗ ತಿಳಿಸಲಾಗುತ್ತದೆ.

ಈ ರೀತಿ ಉತ್ಪನ್ನನಾದ ಅತ್ರಿಯು ಐತಿಹಾಸಿಕವಾಗಿಯೂ ಪ್ರಸಿದ್ಧಿಯನ್ನು ಪಡೆದು ಸೂಕ್ತದ್ರಷ್ಟೃವೆಂದು ಪ್ರಖ್ಯಾತನಾಗಿದ್ದಾನೆ. ಅತ್ರಿಕೃತವಾದ ಸೂಕ್ತಗಳನ್ನು ಪ್ರಶಂಸಿಸುತ್ತಾ ಬೃಹದ್ದೇವತೆಯಲ್ಲಿ ಈ ರೀತಿ ತಿಳಿಸಿದೆ.

ಅನಸ್ಸಂತೇತಿ ಸೂಕ್ತೇऽಸ್ಮಿನ್ ಆಗ್ನೇಯೇऽತ್ರಿರ್ಮಹಿಸ್ತ್ವಯಂ ।
ದಾನಶುಷ್ಟುಃ ಶಶಂಸೈತಾನ್ ರಾಜರ್ಷೀನಿತಿ ಕೇಚನ ॥

(ಬೃ. ದೇ ೫-೭೯)

'ಅನಸ್ಸಂತಾ' ಎಂಬ ಮಂತ್ರದಿಂದ ಪ್ರಾರಂಭವಾಗುವ ಸೂಕ್ತವು (ಋ. ಸಂ. ೫-೭೭) ಅಗ್ನಿ ಪ್ರಶಂಸಾತ್ಮಕವಾದುದು. ಈ ಸೂಕ್ತದಲ್ಲಿ **ತ್ರೈಯರುಣ, ತ್ರಸದಸ್ಯು** ಮತ್ತು **ಅಶ್ವಮೇಧ** ಎಂಬ ಮೂವರು ರಾಜರ್ಷಿಗಗಳ ಗುಣಕಥನವಿದೆ. ಈ ರಾಜರ್ಷಿಗಳಿಗೆ ಅಭ್ಯುದಯವನ್ನುಂಟುಮಾಡಬೇಕೆಂದು ಅತ್ರಿಯು ಅಗ್ನಿಯನ್ನು ಪ್ರಾರ್ಥಿಸುತ್ತಾನೆ. ಆದರೆ, ಇಲ್ಲಿ, ಈ ಸೂಕ್ತದ್ರಷ್ಟೃವಾದ ಋಷಿ ಯಾರು ಎಂಬ ವಿಷಯದಲ್ಲಿ ಸಂಶಯವುಂಟಾಗಿದೆ. ತ್ರೈಯರುಣ, ತ್ರಸದಸ್ಯು, ಅಶ್ವಮೇಧ ಇವರು ಮೂವರೂ ಋಷಿಗಳು ಎಂಬುದು ಒಂದು ಮತ. ಅತ್ರಿಯು ಆ ರಾಜರ್ಷಿಗಳಿಂದ ದತ್ತವಾದ ದಾನವನ್ನು ಪ್ರಶಂಸಿಸುತ್ತಾ, ಅವರನ್ನು ಅಗ್ನಿಯ ಮುಂದೆ ಪ್ರಶಂಸಿಸುತ್ತಾನೆಂದು ಇನ್ನೊಂದು ಮತ. ಈ ಎರಡರಲ್ಲಿ ಎರಡನೇ ಮತವೇ ಸಾಧುವೆಂದು ಕಾಣುತ್ತದೆ. ಈ ವಾಕ್ಯಗಳೆಲ್ಲವೂ ಪ್ರಥಮಪುರುಷದಲ್ಲಿ ಆ ರಾಜರ್ಷಿಗಳನ್ನು ನಿರ್ದೇಶಿಸಿದೆ, **"ಯೋ ಮೇ ಶತಾ ಚ ವಿಂಶತಿಂ ಚ ಗೋನಾಂ"** ನನಗೆ ಸಹಸ್ರಸಂಖ್ಯಾಕವೂ, ಶತಸಂಖ್ಯಾಕವೂ ಆದ ಗೋವುಗಳನ್ನು ದಾನಮಾಡಿದ ತ್ರೈಯರುಣ ಇತ್ಯಾದಿಗಳಿಗೆ ಸುಖವನ್ನುಂಟುಮಾಡು ಎಂದು ಪ್ರಾರ್ಥಿಸಿರುವುದರಿಂದ **ಅತ್ರಿಕೃತ** ವಾದ ಸೂಕ್ತವೇ ಇದು ಎಂದು ಹೇಳುವ ಮತವೇ ಸಾಧುವಾಗಿರುತ್ತದೆ ಈ ಮತವನ್ನನುಮೋದಿಸುವ ಅರ್ಥವನ್ನು ಮುಂದಿನ ವಾಕ್ಯಗಳೂ ತಿಳಿಸುತ್ತವೆ.

ಅಶೀರಧ್ನ್ಯೇಷಣಾಚ್ಚೈಭ್ಯೋ ಅಗ್ನಿಂ ಪ್ರತಿ ಚ ದೈಶ್ಯತೇ ।
ಅಯುತಂ ಚ ಗವಾಂ ತ್ರೈಣೇ ಶತಾನ್ಯಥ ಚ ವಿಂಶತಿಂ ॥
ಸೌವರ್ಣಂ ಶಕಟಂ ಗೋಭ್ಯಾಂ ತ್ರೈಯರುಣೋऽದಾನ್ನೃಪೋऽತ್ರಯೇ ।
ಅಶ್ವಮೇಧಃ ಶತಂ ಚೋಷ್ಟ್ರಾನ್ ತ್ರಸದಸ್ಯುರ್ಧನಂ ಬಹು ॥

(ಬೃಹದ್ದೇವತಾ ೫-೩೦-೩೧)

ಪ್ರಕೃತವಾದ ಮಂತ್ರಗಳಲ್ಲಿರುವ ಪ್ರಾರ್ಥನೆಗಳನ್ನು ಪರಿಶೀಲಿಸಿದರೆ, ಆ ರಾಜರ್ಷಿಗಳಿಂದ ಪ್ರಾರ್ಥಿತನಾದ ಅತ್ರಿಯು ಅವರ ಪರವಾಗಿ ಅಗ್ನಿಯನ್ನು ಪೂಜಿಸಿ ಅವರಿಗೆ ಅಭ್ಯುದಯವನ್ನುಂಟುಮಾಡಬೇಕೆಂದು ಅವರಿಗೋಸ್ಕರ ಪ್ರಾರ್ಥಿಸುವಂತೆ ತಿಳಿಯುವುದು ತ್ರೈಯರುಣನು ಅತ್ರಿಗೆ ಹತ್ತುಸಾವಿರದ ಮುನ್ನೂರಿಪ್ಪತ್ತು ಗೋವುಗಳನ್ನೂ, ಮತ್ತು

ವೃಷಭಗಳಿಂದ ಕೂಡಿದುದೂ, ಹಿರಣ್ಯಪೂರಿತವಾದುದೂ ಆದ ಶಕಟವನ್ನು ಕೊಟ್ಟನು. ಅಶ್ವಮೇಧನು ನೂರು ವೃಷಭಗಳನ್ನೂ, ತ್ರಸದಸ್ಯುವು ಪ್ರಭೂತವಾದ ಧನವನ್ನೂ ಕೊಟ್ಟನು ಎಂದಿರುವುದರಿಂದ ಮೇಲಿನ ಅರ್ಥವು ಹೊಂದಿಕೊಳ್ಳುತ್ತವೆ. ಇದಲ್ಲದೇ,

ರಾಜ್ಞಃ ಪ್ರತಿ ಚ ತತ್ಸೂಕ್ತಂ ಬಭಾಷ ಇತಿ ಕೇಚನ ।
ಆತ್ಮಾ ಹಿ ನಾತ್ಮನೇ ದದ್ಯಾತ್ ಅಗ್ರಹೀನ್ನೃಪತೇರ್ಯಷಿಃ ॥

(ಬೃ. ದೇ. ೫-೩೨)

ಇನ್ನು ಕೆಲವರ ಮತದಂತೆ, ಈ ಮಂತ್ರಗಳನ್ನು ಆ ರಾಜರ್ಷಿಗಳ ಪ್ರಶಂಸೆಗಾಗಿ ನಿರ್ಮಿಸಿದನೆಂದು ವಿವರಿಸಿದೆ. ತನಗೆ ತಾನೇ ಧನಗಳನ್ನು ಯಾರೂ ಕೊಟ್ಟುಕೊಳ್ಳುವುದಿಲ್ಲ. ಆ ರಾಜರ್ಷಿಗಳು ಅತ್ರಿಗೆ ದಾನಮಾಡಿದರು ಅದರ ಪ್ರತಿಯಾಗಿ ಇವನು ಅವರನ್ನು ಪ್ರಶಂಸಿಸಿದನು ಎಂದಿದೆ ಈ ಅಭಿಪ್ರಾಯವೂ ಮೇಲಿನ ಅಭಿಪ್ರಾಯವನ್ನೇ ಅನುಸರಿಸುತ್ತದೆ. ಒಂದುವೇಳೆ **ತ್ರೈಯರುಣ, ತ್ರಸದಸ್ಯು, ಅಶ್ವಮೇಧ** ಇವರೂ ಸಹ ತಾವು ರಾಜರ್ಷಿಗಳಾಗಿದ್ದರೂ ಸೂಕ್ತದ್ರಷ್ಟರೂ ಆದರು ಎಂದು ಹೇಳಬಹುದಾದರೆ, ಅವರ ವಿಷಯವನ್ನು ತಿಳಿಯುವುದು ಅವಶ್ಯವಾಗಿರುತ್ತದೆ ಈ ವಿಷಯವನ್ನು ೫-೩೭ ನೇ ಸೂಕ್ತದ ಪೀಠಿಕೆಯಲ್ಲಿ ವಿಮರ್ಶಿಸುವುದು ಉಚಿತವಾಗಿರುತ್ತದೆ

ಮೊದಲನೆಯ ಸೂಕ್ತವು

ಈ ಸೂಕ್ತದ್ರಷ್ಟೃಗಳಾದ ಬುಧ, ಗವಿಷ್ಠಿರ ಎಂಬ ಇಬ್ಬರು ಋಷಿಗಳ ಸೂಕ್ಷ್ಮಪರಿಚಯ

ಆಚೋಧಿ ದ್ವಾದಶ ಬುಧಗವಿಷ್ಠಿರೌ । ಐದನೆಯ ಮಂಡಲದಲ್ಲಿ ಪ್ರಥಮ ಸೂಕ್ತವು **ಆಚೋಧ್ಯಗ್ನಿಃ** ಎಂಬ ಮಂತ್ರದಿಂದ ವ್ಯಾರಂಭವಾಗಿ **ಈ** ಸೂಕ್ತದಲ್ಲಿ ಒಟ್ಟು ಹನ್ನೆರಡು ಋಕ್ಕುಗಳಿವೆ ಇವುಗಳಿಗೆ **ಬುಧ-ಗವಿಷ್ಠಿರರು** ಎಂಬ **ಆತ್ರಿ**ವಂಶೋತ್ಪನ್ನರಾದ ಋಷಿಗಳು ಕರ್ತೃಗಳು ಎಂದು ಅನುಕ್ರಮಣಿಕಾವಾಕ್ಯವಿದೆ. **ಬುಧ**ನೆಂಬ ಋಷಿಯಾಗಲಿ **ಗವಿಷ್ಠಿರ**ನೆಂಬ ಋಷಿಯಾಗಲಿ ಅಷ್ಟು ಪ್ರಸಿದ್ಧರಲ್ಲ ಆದರೆ, ಗವಿಷ್ಠಿರನ ವಿಷಯವು ಋಕ್ಸಂಹಿಯಲ್ಲಿಯೇ ಒಂದೆರಡು ಕಡೆಗಳಲ್ಲಿ ನಿರ್ದಿಷ್ಟವಾಗಿದೆ

ಅವೋಚಾಮ ಕವಯೇ ಮೇಧ್ಯಾಯ ವಚೋ ವಂದಾರು ವೃಷಭಾಯ ವೃಷ್ಣೇ ।
ಗವಿಷ್ಠಿರೋ ನಮಸಾ ಸ್ತೋಮಮಗ್ನೌ ದಿವೀವ ರುಕ್ಮಮುರುವ್ಯಚ್ಛಮಶ್ರೇತ್ ॥

(ಋ. ಸಂ. ೫-೧-೧೬)

ಮೇಧಾವಿಯೂ, ಪೂಜಾರ್ಹನೂ, ತರುಣನೂ ಆದ ಅಗ್ನಿಯನ್ನು ಉದ್ದೇಶಿಸಿ ವಂದನ ಶೀಲವಾದ ಸ್ತುತಿಯನ್ನು ಪಿಸೋಣ **ಗವಿಷ್ಠಿರ**ನಾಮಕನಾದ ಋಷಿಯು ನಮಸ್ಕಾರಪೂರ್ವಕವಾಗಿ ಸ್ತುತಿಯನ್ನು ಪಿಸುತ್ತಾನೆ ಎಂದು ಋಷಿಯು ತನ್ನ ಕೃತಿಯನ್ನು ತಾನೇ ಆರ್ಪಿಸುತ್ತ ತನ್ನ ನಾಮವನ್ನೂ ಜೊತೆಯಲ್ಲಿಯೇ ನಿರ್ದೇಶಿಸಿ ತನ್ನ ಭಕ್ತಿಯನ್ನು ಪ್ರಕಟಿಸಿದ್ದಾನೆ ಇವಲ್ಲದೇ,

ಅಗ್ನಿರತ್ರಿಂ ಭರದ್ವಾಜಂ ಗವಿಷ್ಠಿರಂ ಪ್ರಾವನ್ನೃಷಿಂ ಕಣ್ವಂ ತ್ರಸದಸ್ಯುಮಾಹವೇ ।
ಅಗ್ನಿಂ ವಸಿಷ್ಠೋ ಹವತೇ ಪುರೋಹಿತೋ ಮೃಳೀಕಾಯ ಪುರೋಹಿತಃ ॥

(ಋ ಸಂ. ೧೦-೧೫೭-೫)

ಎಂಬ ಈ ಮಂತ್ರವು ವಸಿಷ್ಠಪುತ್ರನಾದ ಮೃಳೀಕನಿಂದ ನಿರ್ಮಿತವಾದುದು. ಈ ಮಂತ್ರದಲ್ಲಿ ವಸಿಷ್ಠನು ಅಗ್ನಿಯನ್ನು ಪ್ರಾರ್ಥಿಸುವ ಬಗೆಯನ್ನು ಮೃಳೀಕನು ತಿಳಿಸುತ್ತಾನೆ. ಪೂಜ್ಯನಾದ ಅಗ್ನಿಯು ಅತ್ರಿಯನ್ನೂ, ಭರದ್ವಾಜನನ್ನೂ, ಗವಿಷ್ಠಿರನನ್ನೂ, ಕಣ್ವನನ್ನೂ, ತ್ರಸದಸ್ಯುವನ್ನೂ ಸಂಗ್ರಾಮದಲ್ಲಿ ರಕ್ಷಿಸಲಿ ಎಂದು ಪ್ರಾರ್ಥಿಸಿದೆ ಈ ರೀತಿ ವಸಿಷ್ಠಾದಿ ಋಷಿಗಳಿಗೂ, ಗವಿಷ್ಠಿರನಿಗೆ ಇರುವ ಸಂಬಂಧವು ಈ ಮಂತ್ರದಿಂದ ಸೂಚಿತವಾಗಿದೆ ಇದನ್ನು ಳಿದರೆ, ಅಥರ್ವನೇದದಲ್ಲಿ ಒಂದು ಸನ್ನಿವೇಶದಲ್ಲಿ ಮಾತ್ರ (೪-೨೯-೫) ಇವನ ಹೆಸರು ಪ್ರಶಂಸಿತವಾಗಿದೆ ಇಷ್ಟು ಆಧಾರವನ್ನು ಬಿಟ್ಟರೆ ಇವನ ವಿಷಯವನ್ನು ತಿಳಿಸುವ ಪ್ರಕರಣವಿನ್ನಾವುದೂ ಸದ್ಯಃ ಉಪಲಬ್ಧವಾಗಿಲ್ಲ.

ಅಗ್ನಿಃ

ಋಕ್ಸಂಹಿತೆಯಲ್ಲಿ ವರ್ಣಿತವಾಗಿರುವ ದೇವತೆಗಳಲ್ಲಿ ಅಗ್ನಿಯೇ ಅತ್ಯಂತ ಪ್ರಧಾನ ದೇವತೆ ಇಂದ್ರನ ಸ್ತುತಿವಾಕ್ಯಗಳನ್ನು ಬಿಟ್ಟರೆ, ಋಕ್ಸಂಹಿತೆಯಲ್ಲೆಲ್ಲಾ ಅಗ್ನಿಯನ್ನು ಪ್ರಶಂಸಿಸಿ ವರ್ಣಿಸುವ ಸೂಕ್ತಗಳೇ ಅತ್ಯಧಿಕವಾಗಿರುತ್ತವೆ ೮, ೯ ನೆಯ ಮಂಡಲಗಳನ್ನು ಬಿಟ್ಟರೆ ಉಳಿದ ಎಲ್ಲಾ ಮಂಡಲಗಳೂ ಅಗ್ನಿದೇವತಾಕವಾದ ಸೂಕ್ತದಿಂದಲೇ ಪ್ರಾರಂಭವಾಗುವವು ಆದುದರಿಂದ ಅಗ್ನಿದೇವತೆಯ ವಿಷಯವಾಗಿ ಅವಶ್ಯಕವಾಗಿ ತಿಳಿದುಕೊಳ್ಳಬೇಕಾದ ಕೆಲವು ಸಂಗತಿಗಳನ್ನು ಇಲ್ಲಿ ವಿವರಿಸಲಾಗಿದೆ

೧. ಅಗ್ನಿಯ ಕರ್ಮಗಳು

ಮಾನವನ ವ್ಯವಹಾರಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಯಜ್ಞಕರ್ಮಗಳೊಂದಿಗೆ ಸಾಕ್ಷಾತ್ಸಂಬಂಧವನ್ನು ಹೊಂದಿರುವುದರಿಂದಲೇ ಅಗ್ನಿಗೆ ಅತ್ಯಂತ ಪ್ರಧಾನವಾದುದೂ, ಪೂಜ್ಯವಾದುದೂ ಆದ ಸ್ಥಾನವಿರುತ್ತದೆ ಅಗ್ನಿಯ ಪ್ರಧಾನಗುಣವು ಅವನ ಅಮರ್ತ್ಯತ್ವ (೧-೪೪-೬, ೧-೫೮-೧, ೨-೧೦-೧, ೨ · ೩-೨-೧, ೩-೩-೧, ೩-೧೧-೨, ೩-೨೭-೫, ೩-೨೭-೭, ೬-೯-೪, ೭-೪-೪, ೮-೭೧-೧೧, ೧೦-೭೯-೧).

ಸ್ವಾಭಾವಿಕವಾಗಿ ಮರಣಧರ್ಮರಹಿತನಾದರೂ ಸಹ, ಅಗ್ನಿಯು ಮಾನವರಿಗೆಲ್ಲಾ ಅನುಕೂಲವಾಗಲೆಂದು ಮರ್ತ್ಯರಾದ ಮಾನವರ ಅನುಗ್ರಹಕ್ಕಾಗಿ ಇವರ ಅತಿಥಿಯಾಗಿ ಇವರೊಂದಿಗೆ ವೃದ್ಧಿಸ್ಥನಾಗಿರುತ್ತಾನೆ (೧-೪೪-೪, ೧-೫೮-೬, ೨-೪-೧, ೩-೨-೨, ೪-೧-೨೦, ೫-೧-೨, ೫-೪-೨, ೫-೮೪-೧, ೬-೨-೭, ೬-೮೫-೧, ೬-೧೫-೪, ೮-೪೩-೨, ೮-೭೭-೫, ೮೨-೧-೫, ೧೦-೯೧-೨: ೧೦-೯೨-೧)

ಅಮರ್ತ್ಯನೂ, ಮಾನವರಿಗೆ ಅನುಗ್ರಹಾತ್ಮಕನೂ ಆದ ಅಗ್ನಿಯು ಯಜಮಾನನ ಯಜ್ಞಗೃಹದಲ್ಲಿ ಶಾಶ್ವತನಾದ ಋತ್ವಿಕ್ಕಾಗಿರುತ್ತಾನೆ **ಪುರೋಹಿತ, ಋತ್ವಿಕ್, ಹೋತೃ, ಬ್ರಹ್ಮ** ಇತ್ಯಾದಿ ವಿಶೇಷಣಗಳಿಂದ ವರ್ಣಿತನಾಗಿದ್ದಾನೆ ಉಷೋದೇವಿಯೊಡನೆ ಪ್ರಬುದ್ಧನಾಗುವವನೆಂದು ಕೆಲವು ವಾಕ್ಯಗಳಲ್ಲಿಯೂ, ಉಷಸ್ಸಿಗಿಂತಲೂ ಪೂರ್ವಭಾವಿಯಾಗಿಯೇ ಆವಿರ್ಭೂತನಾಗುವನೆಂದು ಇನ್ನು ಕೆಲವು ವಾಕ್ಯಗಳಲ್ಲಿಯೂ ಸ್ತುತಿಸಿದೆ ೧-೧-೧ · ೧-೧೩-೧, ೧-೧೩-೧, ೪, ೧-೩೬-೭, ೧-೩೬-೩, ೫, ೧-೪೪-೪, ೧-೪೪-೫, ೧-೪೪-೭, ೧-೪೫-೨, ೧-೪೫-೧, ೬, ೧-೬೦-೪, ೧-೬೪-೪, ೭, ೧-೭೬-೨, ೪, ೧-೭೭-೧, ೧-೭೭-೨, ೧-೭೭-೫, ೧-೭೭-೭, ೧-೭೭೧-೧೨, ೧-೭೭೧-೧೩, ೧-೭೭೯-೪, ೫; ೨-೫-೧, ೨-೬-೬, ೨-೯-೧, ೩-೨-೯, ೩-೧೦-೨, ೬, ೩-೧೧-೧,

೩-೧೪-೧ , ೩-೯೯-೧ , ೪-೧-೪ , ೫-೧೧-೨ , ೫-೨೬-೭ , ೬-೧೫-೧, ೪, ೧೬ , ೬-೯೬-೧ ; ೬-೭-೫ , ೭-೯೦-೫ , ೭-೯೧-೧ ; ೭-೧೬-೫, ೧೨ , ೪-೪೪-೬ , ೪-೪೯-೧ , ೯-೬೬-೨೦ ; ೧೦-೧-೬ , ೧೦-೯೨-೨).

ದೇವಮಾನವಾದಿಗಳಿಂದೆಲ್ಲಾ ಪ್ರಾರ್ಥಿತನೂ, ನಿಯಮಿತನೂ ಆಗಿ ಸಕಲ ಯಜ್ಞಕರ್ಮಗಳನ್ನೂ ತನ್ನಲ್ಲೇ ಲೀನಮಾಡಿಕೊಳ್ಳುತ್ತಾನೆ. ತಾನೇ ನಿಜವಾದ ಕರ್ಮಕರ್ತನಾಗಿ, ಯಜಮಾನರು, ಅಧ್ವರ್ಯು, ಹೋತೃ, ಪೋತೃ ಇತ್ಯಾದಿ ಬೇರೆ ಬೇರೆ ಋತ್ವಿಕ್ಕುಗಳಿಗೆ ನಿಯಮಿಸತಕ್ಕ ಸಕಲವಾದ ಯಜ್ಞಕರ್ಮಗಳನ್ನು ತಾನೊಬ್ಬನೇ ನಿರ್ವಹಿಸಲು ಸಮರ್ಥನಾಗುತ್ತಾನೆ.

(೧-೯೪-೬, ೨-೧-೨, ೨-೫-೨, ೪-೯-೩, ೪, ೧೦-೨-೧) ಈ ನಿರ್ವಹಣಶಕ್ತಿಯಿರುವುದರಿಂದಲೇ, ಯಜಮಾನರಿಂದ ಈ ರೀತಿ ಪ್ರಾರ್ಥಿತನಾಗಿದ್ದಾನೆ "ಎಲೈ ಅಗ್ನಿಯೇ, ನೀನು ಹೋತೃಗಳಲ್ಲೆಲ್ಲಾ ಅತ್ಯುತ್ತಮನಾದ ಹೋತೃವಾಗಿದ್ದೀಯೆ. ನೀನು ನಿತ್ಯತರುಣನು. ದೇವತಾತ್ಮರಾದ ಇತರ ಋತ್ವಿಕ್ಕುಗಳೊಡನೆ ಸೇರಿ, ಋತುಕಾಲಾನುಗುಣವಾದ ಕರ್ಮಗಳನ್ನಾಚರಿಸುತ್ತಾ ಯಜ್ಞಕಾಮರಾದ ದೇವತೆಗಳನ್ನು ಪೂಜಿಸಿ ತೃಪ್ತಿಪಡಿಸು" ಇದೇ ವಿಧವಾಗಿ ಅಗ್ನಿಯ ಮಹದ್ಗುಣಗಳನ್ನು ವರ್ಣಿಸುವ ಇನ್ನೂ ಕೆಲವು ವಾಕ್ಯಗಳನ್ನು ವಿವರಿಸಿ ಕೆಳಗೆ ಉದಾಹರಿಸಲಾಗುತ್ತದೆ

"ಅಗ್ನಿಯು ಮೇಧಾವಿಯಾದ ಕವಿಯು, ಕವಿಗಳಲ್ಲೆಲ್ಲಾ ದಿವ್ಯರೂಪನು. **(ಅಸುರೋ ವಿಶ್ವಧೀತಾಂ)**"
(೩-೩-೪)

"ಇಂತಹ ವಿಪಶ್ಚಿತ್ತಾದ ಅಗ್ನಿಯು ಎಲ್ಲಾ ವಿಧವಾದ ಪೂಜಾಕರ್ಮಗಳನ್ನೂ ಅರಿತಿದ್ದಾನೆ. ಉತ್ತಮನಾದ ನೇತೃವು. ಸುಲಭವಾಗಿ ಸಿದ್ಧಿಯನ್ನು ತರತಕ್ಕವನು. ಸಕಲ ಕರ್ಮಗಳಿಗೂ ರಕ್ಷಕನು. ಭಕ್ತರಿಗೆ ಸುಲಭವಲ್ಲದ ಕರ್ಮಗಳಲ್ಲಿ ಸಹಾಯಮಾಡಿ ಕರ್ಮವನ್ನು ಸಾಂಗಗೊಳಿಸತಕ್ಕವನು."

"ಎಲೈ ಅಗ್ನಿಯೇ, ಯಾವ ಯಜ್ಞವನ್ನು ನೀನು ಸುತ್ತುವರಿದು ನೆರವೇರಿಯಂತೆ ಮಾಡುತ್ತೀಯೋ ಅದು ಖಂಡಿತ ದೇವತೆಗಳಲ್ಲಿ ಹೋಗಿ ಸೇರುತ್ತದೆ." (೧-೧-೪)

"ಎಲೈ ಅಗ್ನಿಯೇ, ನೀನು ಅಂಗಿರಾಋಷಿಗಳಲ್ಲಿ ಪ್ರಥಮನು ದೇವತೆಗಳಿಗೆಲ್ಲಾ ಕಲ್ಯಾಣಕಾರಕನಾದ ಸಖನು" (೧-೩೧-೧)

"ಎಲೈ ಅಗ್ನಿಯೇ, ನೀನೇ ಯಜ್ಞಕರ್ಮನಿರ್ವಹಣಕ್ಕೆಲ್ಲಾ ಪ್ರಧಾನವಾದ ಸಾಧನವು" (೩-೩-೩)

"ಎಲೈ ಆತ್ಯುತ್ತಮನಾದ ಋಷಿಯೇ, ನೀನು ಪ್ರಜ್ವಲಿತನಾಗಿದ್ದೀಯೆ. ಯಜ್ಞವನ್ನು ರಕ್ಷಿಸು"
(೩-೨೧-೩)

"ಯಜ್ಞಸಾಧನನಾದವನೂ, ಋಷಿರೂಪನೂ ಆದ ಅಗ್ನಿಯು ಯಜ್ಞವನ್ನು ವೃದ್ಧಿಗೊಳಿಸುತ್ತಾ ಮುಂಭಾಗದಲ್ಲಿ ನೇತೃರೂಪನಾಗಿದ್ದಾನೆ (೩-೨೭-೨, ೭)

"ಪ್ರಾಜ್ಞರಲ್ಲದವರ ನಡುವೆ ಇದ್ದು ಅವನೊಬ್ಬನೇ ಪ್ರಾಜ್ಞನಾದ ಕವಿಯು. ಆತ್ಯುತ್ತಮವಾದ ಜ್ಞಾನವುಳ್ಳವನು." (೭-೪-೪)

" ಎಲೈ ದೇವತೆಗಳೇ, ವಿಧಿವಿಹಿತವಾದ ಕರ್ಮಾಚರಣೆಯಲ್ಲಿ ನಾವು ಯಾವ ಲೋಪದೋಷಗಳನ್ನು ಮಾಡಿದರೂ ಸಹ, ಋತುಕಾಲನಿಯಮಗಳನ್ನರಿತವನೂ, ದೇವತೆಗಳಿಗೆ ಯಾವ ರೀತಿ ತೃಪ್ತಿಯನ್ನುಂಟುಮಾಡಬೇಕೆಂಬ ತಿಳಿವಳಿಕೆಯುಳ್ಳವನೂ ಆದ ಅಗ್ನಿಯು ನಮ್ಮ ಲೋಪದೋಷಗಳನ್ನೆಲ್ಲಾ ತಿದ್ದಿ ಸರಿಪಡಿಸುತ್ತಾನೆ " (೧೦-೨-೪)

" ಯಜ್ಞನಿರ್ವಹಣಕ್ಕೆ ಉಪಯುಕ್ತವಾದ ಅನೇಕ ವಿಷಯಗಳು ಮಂದಮತಿಗಳಾದ ನಮ್ಮ ತಿಳಿವಳಿಕೆಗೆ ಬಂದಿರುವುದೇ ಇಲ್ಲ ಆದರೂ ಸಹ ಅಗ್ನಿಯು ಸರ್ವಜ್ಞನಾದುದರಿಂದಲೂ, ಪೂಜ್ಯನಾದ ಋತ್ವಿಕ್ಕಾದುದರಿಂದಲೂ, ಈ ಮರ್ಮಗಳನ್ನೆಲ್ಲಾ ಅರಿತು, ಎಲ್ಲವನ್ನೂ ಸರಿಪಡಿಸಿ, ದೇವತೆಗಳನ್ನು ಸಕಾಲದಲ್ಲಿ ಪೂಜಿಸಿ ಅವರವರಿಗೆ ಉಪಯುಕ್ತವಾದ ಹವಿರಾದಿಗಳನ್ನರ್ಪಿಸಿ ಎಲ್ಲರಿಗೂ ತೃಪ್ತಿಯನ್ನುಂಟುಮಾಡುತ್ತಾನೆ "

(೧೦-೨-೫)

" ಯಮಾನರಾದ ಮಾನವರ ದೃಷ್ಟಿಗಳು ಸೂರ್ಯನ ಕಡೆ ಯಾವ ರೀತಿ ತಿರುಗುತ್ತವೆಯೋ, ಅದೇ ರೀತಿ ಅಗ್ನ್ಯಭಿಮುಖವಾಗಿಯೂ ತಿರುಗುತ್ತವೆ" (೧೦-೯೧-೩)

" ಅಗ್ನಿಯೇ ಸಕಲ ಯಜಮಾನರಿಗೂ ಪಿತೃವು, ಅವನೇ ಪ್ರಭುವು ಈಶ್ವರನು ಯಜ್ಞಕ್ಕೆ ಬಾಹ್ಯಾವಿರ್ಭಾವವನ್ನು ಹೊಂದಿದ ಧ್ವಜರೂಪನು ಸಕಲ ವೈದಿಕಕರ್ಮಗಳಿಗೂ ಅಧ್ಯಕ್ಷನು " (ಕೇತುಂ ಯಜ್ಞಾನಾಂ, ಪಿತಾ ಯಜ್ಞಾನಾಂ, ಸಮ್ರಾಜಂ,) ೩-೩-೩-೪, ೩-೧೦-೪, ೩-೧೧-೨, ೪-೩-೧, ೬-೨-೩, ೮-೪೩-೨೪, ೧೨-೧-೫, ೧೦-೬-೩,

" ಶೀಘ್ರಸಂಚಾರಿಯಾದ ಅಗ್ನಿಯು **(ರಘುಪತ್ವಃ)** ದೇವತೆಗಳಿಂದ ಪ್ರಾರ್ಥಿತನಾಗಿ, ಪೃಥಿವಿಯಿಂದ ಅಂತರಿಕ್ಷಕ್ಕೂ, ಅಂತರಿಕ್ಷದಿಂದ ಪೃಥಿವಿಗೂ ಸಂಚರಿಸುತ್ತಾ, ದೇವದೂತನೂ, ಮಾನವನಾದ ಯಜಮಾನದೂತನೂ ಆಗಿ, ದೇವಮಾನವಾದಿಗಳ ನಿತ್ಯಸಂಬಧವನ್ನು ಬೆಳೆಸುತ್ತಾನೆ. ಮಾನವರಿಂದ ಅರ್ಪಿತವಾದ ದಿವ್ಯವಾದ ಸ್ತುತಿಗಳನ್ನೂ ಹವಿರಾದಿಗಳನ್ನೂ ದೇವತೆಗಳಿಗೆ ಒಪ್ಪಿಸುತ್ತಾನೆ- ಅಪೇಕ್ಷಿತವಾದ ಕಾಲಗಳಲ್ಲೆಲ್ಲಾ ದೇವತೆಗಳನ್ನು ಸ್ವರ್ಗದಿಂದ ಪೃಥ್ವಿಯ ಯಜ್ಞಭೂಮಿಗೆ ಕರೆದುಕೊಂಡು ಬರುತ್ತಾನೆ." (೧೦-೧೦೦-೧೧, ೧೦-೧೫೦-೪)

ಅಗ್ನಿಯ ದೇವದೂತತ್ವವೂ, ಮಾನವದೂತತ್ವವೂ ತೈತ್ತಿರೀಯಸಂಹಿತೆಯಲ್ಲಿ ಈ ರೀತಿ ವರ್ಣಿತವಾಗಿದೆ.

" **ಅಗ್ನಿರ್ದೇವಾನಾಂ ದೂತ ಆಸೀದುಶನಾ ಕಾವ್ಯೋಽಸುರಾಣಾಂ** "

(ತೈ. ಸಂ ೩-೫-೮-೫)

ಅಗ್ನಿಯ ದೇವದೂತನಾಗಿಯೂ, ಕಾವ್ಯ ಉಶನಸ್ಸು ಅಸುರದೂತನಾಗಿಯೂ ಇದ್ದರು. ಇದೇ ದೂತತ್ವದಿಂದ ದೇವಮಾನವಾದಿಗಳ ಸಂಬಂಧವು ಯಾವ ರೀತಿ ಬೆಳೆಯಲು ಅವಕಾಶವಾಯಿತೆಂದು ತೈತ್ತಿರೀಯಬ್ರಾಹ್ಮಣದಲ್ಲಿ ಅಗ್ನಿಯ ಈ ಕಾರ್ಯವನ್ನು ಈ ರೀತಿ ಪ್ರಶಸಿಸಿದೆ.

" ಆ ತಂತುಮಗ್ನಿರ್ದೈವ್ಯಂ ತತಾನ । ತ್ವಂ ನಸ್ತಂತುರುತ ಸೇತುರಗ್ನೇ । ತ್ವಂ ಸಂಧಾ ಭವಸಿ ದೇವಯಾನೈಃ । ತ್ವಯೋ ಅಗ್ನೇ ಪೃಷ್ಠತು ವಯಮಾರುಹೇಮ । ಅಥ ದೇವೈಃ ಸಧಮಾದಂ ಮದೇಮ "

[ತೈ. ಬ್ರಾ. ೨-೪-೧-೬)

ಎಲೈ ಅಗ್ನಿಯೇ, ದೇವಮಾನವಾದಿಗಳಿರುವ ಸಂಬಂಧರೂಪವಾದ ತಂತುವನ್ನು ನೀನು ವಿಸ್ತರಿಸಿರುವೆ ನೀನೇ ನಮಗೆ ತಂತುಪ್ರಾಯನು. ಸ್ವರ್ಗಕ್ಕೆ ಹೋಗಲು ಮುಖ್ಯಸೇತುವೆಯು ದೇವಲೋಕಕ್ಕೆ ಹೋಗುವ ಮುಖ್ಯ ಮಾರ್ಗವು ನೀನೇ. ನಿನ್ನ ಅನುಗ್ರಹದಿಂದ ನಿನ್ನ ಪೂಜಕರಾದ ನಾವೂ ಸಹ ಸ್ವರ್ಗವನ್ನು ಸೇರಿ ಅಲ್ಲಿರುವ ದೇವತೆಗಳು ಯಾವ ಸುಖವನ್ನನುಭವಿಸುವರೋ ಅದೇ ಸುಖವನ್ನು ಅವರೊಡನೆ ನಾವೂ ಅನುಭವಿಸುವಂತಾಗಲಿ,

ಇದೇ ವಿಧವಾಗಿ ದೇವದೂತತ್ವವೂ, ಈ ದೌತ್ಯದಿಂದ ದೇವಮಾನವಾದಿಗಳ ಸಂಬಂಧಾಭಿವೃದ್ಧಿಗೆ ಸಾಧಕತ್ವವೂ ಪ್ರಶಂಸಿತವಾಗಿರುವ, ಸನ್ನಿವೇಶಗಳು ಋಕ್ಸಂಹಿತೆಯಲ್ಲಿ ಬಹಳ ಹೇರಳವಾಗಿವೆ ' **ಅಗ್ನಿಂ ದೂತಂ ವೃಣೀಮಹೇ** ' ಇತ್ಯಾದಿ ವಾಕ್ಯಗಳು ಅಗ್ನಿಯ ಸಹಾಯನನ್ನು ಪ್ರಶಂಸಿಸುವುವಾಗಿವೆ. ೧-೧೨-೧, ೨, ೪, ೮, ೧-೩೬-೩, ೪, ೪೫-೧, ೪, ೫: ೧-೪೪, ೨, ೩, ೫, ೯, ೧೩, ೨-೧೦-೬, ೩-೧೧-೨, ೪-೨೨-೩, ೫-೨೧-೩, ೭-೧೭-೬, ೮-೩೯-೧, ೯; ೧೦-೯೧-೧೧, ೧-೨೭-೪, ೧-೧೪೮-೧, ೩-೫-೨, ೩-೧೭-೪, ೪-೭-೮, ೬-೧೫-೮ರಿಂದ ೧೦, ೮-೧೯-೨೧; ೮-೪೪-೩, ೧೦-೧೨೨-೭, ೧-೫೮-೧, ೨-೬-೬, ೩-೬-೫, ೩-೧೧-೧-೫, ೪-೮-೨, ೬-೭-೧೪, ೭-೧೧-೪, ೭-೧೫-೪, ೮-೨೧-೪, ೮-೧೦-೪, ೮-೨೪-೪, ೮-೪೪-೪, ೮-೪೮-೪, ೮-೪೮-೪, ೮-೪೮

ಸೋಮಾದಿಗಳನ್ನು ಪಾನಮಾಡುವ ಜಿಹ್ವೆಯೇ ಇವನೆಂದೂ ಪ್ರಶಂಸಿತನಾಗಿದ್ದಾನೆ. (ಆಸ್ಯಂ ತ್ವಾಂ ಜಿಹ್ವಾಂ) (೨-೧-೧೩ ; ೨-೧-೧೪) ಇನ್ನು ಕೆಲವೆಡೆಗಳಲ್ಲಿ ಅವನೇ ಸಕಲ ಹವಿಸ್ಸುಗಳನ್ನೂ ಭಕ್ಷಿಸಬೇಕೆಂದೂ ಪ್ರಾರ್ಥಿತನಾಗಿದ್ದಾನೆ ಮತ್ತು ಯಜ್ಞದಲ್ಲಿ ಅರ್ಪಿತವಾದ ಸೋಮವನ್ನು ಪಾನಮಾಡುವುದಕ್ಕೆ ಸಾಕ್ಷಾತ್ತಾಗಿ ಆಹೂತನಾಗಿದ್ದಾನೆ.

(೩-೨೧-೧, ೩-೨೮-೧ ರಿಂದ ೬, ೮-೧೪-೧೦, ೧-೧೯-೯)

ಯಜ್ಞದಲ್ಲಿ ಪ್ರಾಧಾನ್ಯವನ್ನು ವಹಿಸಿ ದೇವತೆಗಳಿಗೆ ಸಹಾಯಮಾಡಬೇಕೆಂದು ಅಗ್ನಿಯು ಪ್ರಾರ್ಥಿತನಾದಾಗ ಅಗ್ನಿಗೂ ಇತರ ದೇವತೆಗಳಿಗೂ ನಡೆದ ಒಂದು ಸಂಭಾಷಣೆಯು ಅಗ್ನಿಯ ಪ್ರಾಶಸ್ತ್ಯವನ್ನೂ ಅತಿಶಯವಾದ ಶಕ್ತಿಯನ್ನೂ ತಿಳಿಸುತ್ತದೆ ಆ ಸಂಭಾಷಣೆಯು ಈ ರೀತಿಯಲ್ಲಿರುತ್ತದೆ. (೧೦-೫೧)

ದೇವತೆಗಳು :—ಎಲೈ ಅಗ್ನಿಯೇ, ನೀನು ಮರೆಮಾಡಿಕೊಂಡು ಯಾವ ಆವರಣದಿಂದಿಗೆ ನೀರಿನಲ್ಲಿ ಅಂತರ್ಗತನಾಗಿದ್ದೀಯೋ, ಆ ಆವರಣವು ಬಹಳ ಸ್ಥೂಲವಾದುದೂ, ಪೂರ್ಣವಾಗಿ ಮುಚ್ಚತಕ್ಕದ್ದಾಗಿಯೂ ಇದೆ. ಆದರೆ, ಎಲೈ ಜಾತವೇದಸ್ಸೇ, ಒಬ್ಬ ದೇವನು ಮಾತ್ರ ನಿನ್ನ ಅನೇಕ ವಿಧವಾದ ಸ್ವರೂಪಗಳನ್ನೂ ಪೂರ್ಣವಾಗಿ ಅರಿತವನಾಗಿದ್ದಾನೆ

ಅಗ್ನಿ :—ನಿಮ್ಮಲ್ಲಿ ನನ್ನ ಸ್ವರೂಪಗಳನ್ನು ಅರಿತಿರುವವನಾರು ? ನನ್ನ ರೂಪನೈವಿಧ್ಯವನ್ನೆಲ್ಲಾ ಪೂರ್ಣವಾಗಿ ಅರಿತಿರುವ ದೇವನಾರು ? ಎಲೈ ಮಿತ್ರಾವರುಣರೇ, ದೇವತೆಗಳಿಗೆ ಹವಿಸ್ಸನ್ನು ವಹಿಸಲು ಸಾಧನವಾದವೂ, ದೀಪ್ತಿಯುತವಾದವೂ ಆದ ನನ್ನ ಸ್ವರೂಪಗಳನ್ನು ನಿಮ್ಮಲ್ಲಿ ತಿಳಿದಿರುವವನೊಬ್ಬನು ಇದ್ದಪಕ್ಷದಲ್ಲಿ ಅವೆಲ್ಲವೂ ಎಲ್ಲಿ ಅಡಗಿಕೊಂಡಿವೆ ಎಂಬುದನ್ನು ತಿಳಿಸುವಿರಾ ?

ದೇವತೆಗಳು .—ಎಲೈ ಅಗ್ನಿಯೇ, ನಾನಾ ರೂಪಗಳನ್ನು ಧರಿಸಿ ನೀರಿನಲ್ಲಿಯೂ, ಓಷಧಿಗಳಲ್ಲಿಯೂ ಅಂತರ್ಗತನಾದ ನಿನ್ನನ್ನು ಪಡೆಯಲು ನಾವು ನಿನ್ನನ್ನು ಹುಡುಕಿದೆವು ಆಗ ಯಮನು ಮಾತ್ರ ಪೃಥಿವ್ಯಾದಿ ಹತ್ತು ಸ್ಥಾನಗಳಲ್ಲೂ ಅಡಗಿಕೊಂಡಿರುವ ನಿನ್ನ ಮಹಜ್ಜ್ವಾಲೆಗಳನ್ನು ಕಂಡುಕೊಂಡನು

ಅಗ್ನಿ :—ಎಲೈ ವರುಣನೇ, ದೇವತೆಗಳು ನನಗೆ ಎಲ್ಲಿ ಹವಿರ್ವಹನ ಕರ್ಮವನ್ನು ಪುನಃ ಎಲ್ಲಿ ವಹಿಸುವರೋ ಎಂಬ ಭಯದಿಂದ ನಾನು ಇಲ್ಲಿಗೆ ಬಂದು ಮರೆಯಾಗಿದ್ದೇನೆ. ಆದುದರಿಂದಲೇ, ನಾನು ಬೇರೆಬೇರೆ ರೂಪಗಳಿಂದ ಉದಕಾಂರ್ಗತನಾಗಿ ಮರೆಯಾಗಿದ್ದೇನೆ ಪುನಃ ಆ ಕಾರ್ಯದ ಭಾರವನ್ನು ವಹಿಸಲು ನನಗಿಷ್ಟವಿಲ್ಲ ಎಂಬುದನ್ನು ಮಾತ್ರ ಹೇಳಬಲ್ಲೆ

ದೇವತೆಗಳು :—ಎಲೈ ಅಗ್ನಿಯೇ, ಭಕ್ತನಾದ ಮನುವು ನಿನಗೆ ಪೂಜೆಯನ್ನರ್ಪಿಸಿ ಯಜ್ಞವನ್ನು ನಿರ್ವಹಿಸಬೇಕೆಂದು ಕಾದಿದ್ದಾನೆ ನೀನು ನಿನ್ನನ್ನಲಂಕರಿಸಿಕೊಂಡು ಉದಕಾರ್ಂಗತನಾಗಿದ್ದೀಯೆ ದೇವತೆಗಳು ಸಂಚರಿಸತಕ್ಕ ಮಾರ್ಗಗಳನ್ನು ಸುರಕ್ಷಿತಗಳನ್ನಾಗಿ ಮಾಡು ಮತ್ತು ಅರ್ಪಿತವಾದ ಹವಿಸ್ಸುಗಳನ್ನು ದೇವತೆಗಳಿಗೆ ತೆಗೆದುಕೊಂಡು ಹೋಗು

ಅಗ್ನಿ :—ಎಲೈ ವರುಣನೇ, ಇದೇ ಹವಿರ್ವಹನಕರ್ತವ್ಯವನ್ನು ನನ್ನ ಹಿರಿಯ ಸಹೋದರರು ನೆರವೇರಿಸಲು ಒಪ್ಪಿಕೊಂಡರು. ಆದರೆ, ಆ ಕರ್ತವ್ಯನಿರ್ವಹಣಕಾಲದಲ್ಲಿ ಅವರು ಮೃತಿಗೊಂಡರು ಆ ಕಾರಣದಿಂದಲೇ ನಾನು

ಬೆದರಿ ಇಲ್ಲಿಗೆ ಓಡಿಬಂದೆನು. ಧನ್ವಿಯ ಬಿಲ್ಲುಬಾಣಗಳನ್ನು ನೋಡಿದೊಡನೆಯೇ ಗೌರಮೃಗವು ಬೆದರಿ ಓಡುವಂತೆ ನಾನೂ ನಡಗುತ್ತಾ ಓಡಿಬಂದೆನು. (ಈ ಸಂದರ್ಭವನ್ನು ಹಿಂದೆ ತಿಳಿಸಿದೆ).

ದೇವತೆಗಳು :—ಎಲೈ ಅಗ್ನಿಯೇ, ನೀನು ಆ ಭೀತಿಯನ್ನಿಡಬೇಕಾಗಿಲ್ಲ. ನಿನಗೆ ಕ್ಷಯರಹಿತವಾದ ಆಯುಸ್ಸನ್ನು ನಾವು ಕೊಡುತ್ತೇವೆ. ಆದರ ಸಹಾಯದಿಂದ ನೀನು ಮೃತ್ಯುವನ್ನು ತಪ್ಪಿಸಿಕೊಳ್ಳುತ್ತೀಯೆ. ಶ್ರೀಷ್ಠವಾದ ಉತ್ಪನ್ನವುಳ್ಳ ಎಲೈ ಅಗ್ನಿಯೇ, ನೀನು ನಮ್ಮಲ್ಲಿ ಅನುಗ್ರಹಬುದ್ಧಿಯುಳ್ಳವನಾಗಿ ದೇವತೆಗಳ ಹವಿಸ್ಸನ್ನು ವಹಿಸಿ ಅವರಿಗೆ ಹಂಚುವ ಭಾರವನ್ನು ಪುನಃ ವಹಿಸು.

ಅಗ್ನಿ :—ಎಲೈ ದೇವತೆಗಳೇ, ವೀರ್ಯವತ್ತಾದ ಪ್ರಯಾಜ ಮತ್ತು ಅನುಯಾಜರೂಪಗಳಾದ ಹವಿಸ್ಸುಗಳನ್ನು ನನಗಾಗಿಯೇ ಪ್ರತ್ಯೇಕವಾಗಿ ಉದ್ದೇಶಿಸಿ ಇಟ್ಟುಬಿಡಿ ಉದಕಗಳ ಸಾರವನ್ನೂ (ಘೃತ) ಓಷಧಿಗಳ ಸಾರವನ್ನೂ ನನಗೆ ಅರ್ಪಿಸಿರಿ. ಅಗ್ನಿರೂಪನಾದ ನನ್ನ ಆಯುಸ್ಸು ದೀರ್ಘಕಾಲವಿರತಕ್ಕದ್ದಾಗಲಿ.

ದೇವತೆಗಳು :—ಎಲೈ ಅಗ್ನಿಯೇ, ಪ್ರಯಾಜಾನುಯಾಜರೂಪವಾದ ಹವಿಸ್ಸುಗಳನ್ನು ಪ್ರತ್ಯೇಕವಾಗಿ ನಿನ್ನನ್ನುದ್ದೇಶಿಸಿಯೇ ಇಡುತ್ತೇವೆ. ಹವಿಸ್ಸುಗಳಲ್ಲಿ ವೀರ್ಯವತ್ತಾದ ಭಾಗಗಳೆಲ್ಲವೂ ನಿನ್ನ ದಾಗಿಯೇ ಇರಲಿ. ಎಲೈ ಅಗ್ನಿಯೇ, ಈ ಯಜ್ಞವೂ ನಿನಗೇ ಅರ್ಪಿತವಾಗಲಿ. ನಾಲ್ಕು ದಿಕ್ಕುಗಳೂ ನಮ್ರತೆಯಿಂದ ನಿನ್ನ ಮುಂದೆ ತಲೆಬಾಗಿ ನಿನಗೆ ನಮಸ್ಕಾರಮಾಡಲಿ ಎಂಬುದಾಗಿ ೧೦-೫೧ ನೇ ಸೂಕ್ತದ ಸಂಭಾಷಣೆಯ ವಿವರಣೆಯಿರುತ್ತದೆ. ಇದಾದನಂತರವೇ ಮುಂದಿನ ಸೂಕ್ತದಲ್ಲಿ ಅಗ್ನಿಯು ತಾನೇ ಯಜ್ಞಕ್ಕೆಲ್ಲಾ ಪ್ರಭುವೆಂದು ಪ್ರಕಟಿಸಿಕೊಳ್ಳುತ್ತಾನೆ. ಅಲ್ಲದೇ, ದೇವತೆಗಳಿಗೆ ತನ್ನ ಸಹಕಾರವನ್ನು ನೀಡುವುದಾಗಿಯೂ ತಕ್ಕ ಭರವಸೆಯನ್ನು ಕೊಡುತ್ತಾನೆ. ತಾನು ಯಾವ ರೀತಿ ಅವರಿಗೆ ಸಹಾಯಮಾಡಬಹುದೆಂದೂ ತಿಳಿಸಬೇಕಾಗಿ ಕೇಳಿಕೊಳ್ಳುತ್ತಾನೆ (೧೦-೫೨-೧, ೨)

ಈ ಸಂದರ್ಭವನ್ನು ಸ್ವಲ್ಪ ವ್ಯತ್ಯಸ್ತವಾದ ವಿವರಣೆಯಿಂದ ತೈತ್ತಿರೀಯಸಂಹಿತೆಯಲ್ಲಿ ಈ ರೀತಿ ತಿಳಿಸಿದೆ—

ಅಗ್ನೇಸ್ತ್ರಯೋ ಜ್ಯಾಯಾಂಸೋ ಭ್ರಾತರ ಆಸನ್ ತೇ ದೇವೇಭ್ಯೋ ಹವ್ಯಂ ವಹಂತಃ ಪ್ರಾಮಿಮಾಯಂತ ಸೋಽಗ್ನಿರಬಿಭೇದಿತ್ಥಂ ವಾವ ಸ್ಯ ಆರ್ತಿಮಾರಿಷ್ಯತೀತಿ ಸ ನಿಲಾಯತ ಸೋಽಪಃ ಪ್ರಾವಿಶತ್ತಂ ದೇವತಾಃ ಪ್ರೈಷಮೈಚ್ಛನ್ತಂ ಮತ್ಸ್ಯಃ ಪ್ರಾಬ್ರವೀತ್ಕಮಶಪದ್ಧಿಯಾಧಿಯೋ ತ್ವಾ ವಧ್ಯಾಸುರ್ಯೋ ನೋ ಸ್ಯಾವೋಚ ಇತಿ ತಸ್ಮಾನ್ಮತ್ಸ್ಯಂ ಧಿಯಾಧಿಯೋ ಘ್ನಂತಿ ॥

(ತೈ. ಸಂ. ೨-೬-೬-೨)

ಅಗ್ನಿಗೆ ಮೂರು ಜನ ಹಿರಿಯ ಸಹೋದರರಿದ್ದರು. ಅವರೆಲ್ಲರೂ ಸಹ ದೇವತೆಗಳಿಗೆ ಹವಿಸ್ಸನ್ನು ವಹಿಸುವ ಕಾರ್ಯದಲ್ಲಿ ಶ್ರಮವಹಿಸಿ ಆದರಿಂದಲೇ ಮೃತರಾದರು. ಅಗ್ನಿಯು ಇದನ್ನು ನೋಡಿ, ತಾನು ಆ ಕಾರ್ಯಭಾರವನ್ನು ವಹಿಸಿದರೆ ತನಗೂ ಅದೇ ಗತಿಯು ಪ್ರಾಪ್ತವಾಗಬಹುದೆಂಬ ಭೀತಿಯಿಂದ ಆ ಪ್ರದೇಶದಿಂದ ಮರೆಯಾಗಿ ನೀರಿನಲ್ಲಿ ಹೋಗಿ ಅವಿತುಕೊಂಡನು. ದೇವತೆಗಳು ಆಗ ಅವನನ್ನು ಹುಡುಕುತ್ತಿದ್ದರು ಆಗ ಒಂದು ಮತ್ಸ್ಯವು ಅವರಿಗೆ ಅಗ್ನಿಯಿರುವ ಪ್ರದೇಶವನ್ನು ತೋರಿಸಿಕೊಟ್ಟಿತು. ಅಗ್ನಿಗೆ ಇದರಿಂದ ಕೋಪವುಂಟಾಗಿ ಅವನು ಮತ್ಸ್ಯಗಳನ್ನೆಲ್ಲಾ ಒಟ್ಟಗೆ ಸೇರಿಸಿ "ಯಾವ ಕಾಲದಲ್ಲಿ ಮಾನವನು ನಿಮ್ಮನ್ನು ಹಿಡಿಯಲಿಚ್ಛಿಸುವನೋ, ಆ ಕಾಲಗಳಲ್ಲೆಲ್ಲಾ ನಿಮ್ಮನ್ನು ನಾಶಪಡಿಸಲಿ" ಎಂದು ಶಪಿಸಿದನು. ಆ ಶಾಪದ ಫಲವಾಗಿಯೇ ಮಾನವರು ಮತ್ಸ್ಯವನ್ನು ನಾಶಪಡಿಸುವರು.

''ಕಸ್ತ್ವೋ ಹಿ ತಮಸ್ವವಿಂದೆನ್ತ್ಮಬ್ರುವನ್ನುಪ ನ ಆ ವರ್ತಸ್ಯ ಹವ್ಯಂ ನೋ ವಹೇತಿ ಸೋಽಬ್ರವೀದ್ವರಂ ವೃಣೈ ಯದೇವ ಗೃಹೀತಸ್ಯಾಹುತಸ್ಯ ಬಹಿಃ ಪರಿಧಿ ಸ್ಕನ್ದಾತ್ತನ್ಮೇ ಭ್ರಾತೃಣಾಂ ಭಾಗಧೇಯಮಸದಿತಿ ॥　　(ತೈ. ಸಂ. ೩-೬-೬-೨)

ದೇವತೆಗಳು ಆ ಮತ್ಸ್ಯದ ಸಹಾಯದಿಂದ ಅಗ್ನಿಯನ್ನು ಸಮೀಪಿಸಿ ''ನಮ್ಮಲ್ಲಿಗೆ ಬಂದು ಯಜ್ಞದ ಹವಿಸ್ಸುಗಳನ್ನು ನಮಗೆ ವಹಿಸಿ ಉಪಕಾರವನ್ನು ಮಾಡು'' ಎಂದು ಪ್ರಾರ್ಥಿಸಿದರು. ಆಗ ಅಗ್ನಿಯು ''ಹಾಗೆಯೇ ಆಗಲಿ'' ಎಂದು ಒಪ್ಪಿಕೊಂಡು ''ನಾನು ಈ ಶ್ರಮದ ಪ್ರತಿಫಲವಾಗಿ ನಿಮ್ಮಿಂದ ಒಂದು ವರವನ್ನು ಬೇಡುತ್ತೇನೆ ''ಯಜ್ಞಾಗ್ನಿಯಲ್ಲಿ ಹವಿಸ್ಸನ್ನು ಅರ್ಪಿಸುವಾಗ ಯಜ್ಞಪರಿಧಿಯಿಂದ ಹೊರಕ್ಕೆ ಬೀಳುವ ಹವಿಸ್ಸಿನ ಯಾವಯಾವ ಭಾಗ ವಿರುತ್ತದೋ ಅವೆಲ್ಲವೂ, ನಿಮಗಾಗಿ ಮೃತರಾದ ನಮ್ಮ ಸಹೋದರರಿಗೆ ಸೇರತಕ್ಕದ್ದು'' ಎಂದು ಕೇಳಿಕೊಂಡನು. ದೇವತೆಗಳು ಅದಕ್ಕೊಪ್ಪಿಕೊಂಡಮೇಲೆ ಅಗ್ನಿಯು ಹವಿರ್ವಹನಕಾರ್ಯವನ್ನು ಆಂಗೀಕರಿಸಿದನು.

ಅಗ್ನಿಯೇ ಸಕಲ ಪ್ರಜೆಗಳಿಗೂ ಪ್ರಭುವೂ, ರಕ್ಷಕನೂ ಮತ್ತು ನೇತೃವೂ ಆಗಿದ್ದಾನೆ **(ವಿಶ್ಪತಿಃ । ವಿಶಾಂ ಗೋಪಾಃ । ವಿಶಾಂ ಪುರ ಏತಾ)**

(೧-೧೨-೨, ೧-೩೬-೭, ೧-೩೧-೧೧, ೧-೯೬-೪, ೨-೧-೮, ೩-೧೧-೫) ಮಾನವರಿಗೆಲ್ಲಾ ಸಾರ್ವಭೌಮನು **(ರಾಜಾ ಕೃಷ್ಟೀನಾಂ ಅಸಿ ಮಾನುಷಾಣಾಂ)** (೧-೫೯-೫, ೨-೧-೮, ೩-೪-೧, ೬-೭-೧, ೮-೨ ೧, ೮-೪೩-೨೪)

"ಇದೇ ಅಗ್ನಿಯು ಪ್ರತಿಯೊಂದು ಗೃಹದಲ್ಲಿಯೂ ವಾಸಮಾಡುತ್ತಿರುವುದರಿಂದ ಅವನೇ ಎಲ್ಲಾ ಮನೆಗಳಿಗೂ ಒಡೆಯನು ಮತ್ತು ಪಾಲಕನು" **(ದಮೇ ದಮೇ ಕವಿರ್ಗೃಹಪತಿರ್ಯುವಾ)** (೧-೧೨-೭, ೧-೩೬-೫, ೧-೬೦-೪, ೫-೮-೨, ೭-೧೫-೨).

ಪ್ರತಿಯೊಂದು ಗೃಹದಲ್ಲಿಯೂ ಈ ಅಗ್ನಿಯು ಪ್ರಭಾಯುತನಾದ ಅತಿಥಿಯಾಗಿ ಇದ್ದಾನೆ. ಪ್ರತಿಯೊಂದು ವನ ವೃಕ್ಷದಲ್ಲಿಯೂ ಪಕ್ಷಿಯಂತೆ ಆಶ್ರಯಿಸಿದ್ದಾನೆ. ಮಾನವರಿಗೆ ಸಖನಾಗಿದ್ದು ಯಾವನನ್ನೂ ತಿರಸ್ಕರಿಸುವುದಿಲ್ಲ. ಪ್ರಜೆಗಳಿಗೆಲ್ಲಾ ದಶಾಯಾಲಿಯಾಗಿದ್ದು ಪ್ರತಿಯೊಂದು ಸಂಸಾರದಲ್ಲಿಯೂ ಕ್ಷೇಮಕಾರಿಯಾಗಿ ವಾಸಿಸುತ್ತಿದ್ದಾನೆ. (೧೦-೯೧-೨)

ಈ ಅಗ್ನಿಯೇ ಮಾನವರಿಗೆಲ್ಲಾ ಪಿತೃವು, ಇವನೇ ಮಾತೃವು, ಭ್ರಾತೃವು ಇವನೇ ಎಲ್ಲರಿಗೂ ಪುತ್ರನು, ಬಂಧು ಮತ್ತು ಸಖನೂ ಸಹ ಇವನೇ ಆಗಿದ್ದಾನೆ (೧-೩೬-೩, ೧-೩೧-೧೦, ೧೪, ೧೬, ೧-೭೫-೪, ೧-೧೬೧-೧, ೩-೧-೯, ೬-೧-೫, ೫-೪-೨; ೮-೪೩-೧೬, ೮-೬೪-೧೬, ೧೦-೭-೩)

ಕೆಲವು ಯಜಮಾನರು ಅಗ್ನಿಗೂ ತಮಗೂ ವಂಶಪಾರಂಪರ್ಯವಾದ ಬಂಧುತ್ವವೂ ಸಖಿತ್ವವೂ ಇರುವುದೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. **(ಸಖ್ಯಾ ಪಿತ್ರ್ಯಾಣಿ)** (೧-೭೧-೧೦)

ಅಸುರರನ್ನೂ, ಯಜಮಾನರಿಗೆ ಕೆಡಕನ್ನುಂಟುಮಾಡತಕ್ಕ ಇತರ ದುಷ್ಟಶಕ್ತಿಗಳನ್ನೂ ಅಗ್ನಿಯು ದೂರಕ್ಕೆ ಓಡಿಸಿ ನಾಶಪಡಿಸುತ್ತಾನೆ. **(ಅಗ್ನೀ ರಕ್ಷಾಂಸಿ ಸೇಧತಿ)** (೫-೧೫-೧, ೭-೧೫-೧; ೭-೧೫-೧೦; ೮-೬೩-೫; ೮-೪೩-೩೬, ೧೧-೪೭-೧; ೧೦-೧೪೭-೫)

ಅಗ್ನಿಯು ಪ್ರತ್ಯಕ್ಷನಾಗಿ ಯಜ್ಞಕ್ಕೆ ತೊಂದರೆಯನ್ನುಂಟುಮಾಡತಕ್ಕ ಸಕಲ ರಾಕ್ಷಸರನ್ನೂ ಯಾತುಧಾನರನ್ನೂ ತನ್ನ ಅಯೋಮಯವಾದ ದಂತಗಳಿಂದ ಅಗಿಯುವಂತೆಯೂ, ಮತ್ತು ತನ್ನ ಅತ್ಯುಗ್ರವಾದ ಕ್ರೋಧವನ್ನು ಪ್ರಕಟಿಸಿ ಅವರನ್ನೆಲ್ಲಾ ಒಟ್ಟಿಗೆ ದಹಿಸುವಂತೆಯೂ ಪ್ರಾರ್ಥಿತನಾಗಿದ್ದಾನೆ. (೧೦-೮೭-೫, ೫, ೯, ೧೪)

ಅಗ್ನಿಯ ಉತ್ಪತ್ತಿ ಮತ್ತು ಮೂರು ಸ್ಥಾನಗಳು.

ಅಗ್ನಿಯ ಉತ್ಪತ್ತಿಯ ವಿಷಯದಲ್ಲಿ ಋಕ್ಸಂಹಿತಾವಾಕ್ಯಗಳಲ್ಲಿ ನಾನಾವಿಧವಾದ ವರ್ಣನೆಗಳಿರುತ್ತವೆ. ಆದರೆ ಅವೆಲ್ಲವೂ ಪರಸ್ಪರ ಒಂದಕ್ಕೊಂದು ವಿರುದ್ಧವೆಂದು ಹೇಳುವಂತಿಲ್ಲ. ಕೆಲವು ಸಮಯಗಳಲ್ಲಿ ಇವನ ದಿವ್ಯಲೋಕದ ಉತ್ಪತ್ತಿಯು ವರ್ಣಿತವಾಗಿದೆ ಇನ್ನು ಕೆಲವು ಸಂದರ್ಭಗಳಲ್ಲಿ ಮಾನವರ ಕರಣಗಳಿಂದ (ಅರಣಿ ಮೊದಲಾದ ಸಾಧನಗಳಿಂದ) ಉತ್ಪನ್ನವಾಗುವ ಅಂಶವು ವರ್ಣಿತವಾಗಿದೆ.

"ಅವ್ಯಾಕೃತನೂ, ಸ್ವರೂಪತಃ ಸದಾತ್ಮಕನೂ ಆದ ಅಗ್ನಿಯು ದಕ್ಷನ ವೀರ್ಯದಲ್ಲಿಯೂ, ಅದಿತಿಯ ಗರ್ಭದಲ್ಲಿಯೂ ಉತ್ಪನ್ನನಾಗಿ ಇದ್ದಾನೆ." (೧೦-೫-೭)

"ಈ ಅಗ್ನಿಯು ದ್ಯುಲೋಕದಿಂದ ಕರೆತರಲ್ಪಟ್ಟಿದ್ದಾನೆ. ಇವನನ್ನು ಮಾತರಿಶ್ವನು ಬಹುದೂರದಿಂದ ಕರೆತಂದಿದ್ದಾನೆ."

ಆ ಅನ್ಯಂ ದಿವೋ ಮಾತರಿಶ್ವಾ ಜಭಾರ (೧-೬೦-೧, ೧-೯೩-೬, ೧-೧೪೩-೨, ೩-೫-೧೦, ೩-೯-೫, ೬-೮-೪).

ಈ ಮಾತರಿಶ್ವನಾರೆಂಬುದರಲ್ಲಿ ಸಂಶಯಕ್ಕೆ ಅವಕಾಶವಾಗಿರುತ್ತದೆ ಅಗ್ನಿಯೇ ಮಾತರಿಶ್ವನೆಂಬುವ ಮತವೂ ಉಂಟು ಈ ಮತದಂತೆ, ಮಾತರಿಶ್ವನ ಸ್ವರೂಪವಿವರಣೆಯಿಂದ **ಅಗ್ನಿಯ** ಸ್ವರೂಪವರ್ಣನವೇ ಆದಂತಾಗುವುದರಿಂದ ಪ್ರಕೃತದಲ್ಲಿ ಈ ವಿಷಯವನ್ನು ತಿಳಿಸಲಾಗುತ್ತದೆ ಈ ಪದವು ಎಲ್ಲಾ ಕಡೆಗಳಲ್ಲಿಯೂ **ವಾಯು** ಪರ್ಯಾಯ ಪದವಾಗಿಯೇ ಇರಬೇಕೆಂಬ ನಿಯಮವಿಲ್ಲ ಉದಾಹರಣೆಗೆ —

ಸ ಮಾತರಿಶ್ವಾ ಪುರುವಾರಪುಷ್ಟಿರ್ವಿದದ್ಗಾತುಂ ತನಯಾಯ ಸ್ವರ್ವಿತ್ ।
(ಋ ಸಂ ೧-೯೬-೪)

ಮಾತರಿಶ್ವಾ ಯದಮಿಮೀತ ಮಾತರಿ ವಾತಸ್ಯ ಸರ್ಗೋ ಅಭವತ್ಸರೀಮಣಿ ।
(ಋ. ಸಂ. ೩-೨೯-೧೧)

ಇತ್ಯಾದಿ ವಾಕ್ಯಗಳಲ್ಲಿ **ಮಾತರಿಶ್ವ**ಶಬ್ದಕ್ಕೆ **ಅಗ್ನಿ**ಯೆಂದೇ ನಿಷ್ಕೃಷ್ಟವಾದ ಅರ್ಥವನ್ನು ಹೇಳಬೇಕು ಆದರೆ, ಈ ಪದದ ಪ್ರಯೋಗವಿರುವೆಡೆಗಳೆಲ್ಲಾ ಅಗ್ನಿಯೆಂಬ ಅರ್ಥವನ್ನು ಹೇಳುವುದೂ ಸಾಧ್ಯವಿಲ್ಲವೆಂಬುದೂ ನಿಷ್ಕೃಷ್ಟವಾದ ವಿಷಯ

ದ್ವಿಜನ್ಮಾನಂ ರಯಿಮಿವ ಪ್ರಶಸ್ತಂ ರಾತಿಂ ಭರದ್ಭೃಗವೇ ಮಾತರಿಶ್ವಾ ।
(ಋ ಸಂ ೧-೬೦-೧)

ಇತ್ಯಾದಿ ವಾಕ್ಯಗಳಲ್ಲಿ ಅಗ್ನಿಗೂ, ಮಾತರಿಶ್ವನಿಗೂ ಖಚಿತವಾದ ಭೇದವು ತಿಳಿಯುತ್ತದೆ ಮಾತರಿಶ್ವನು ಭೃಗುವಿಗಾಗಿ ಅಗ್ನಿಯನ್ನು ತಂದನು ಎಂಬುದೂ ಸ್ಪಷ್ಟವಾಗಿದೆ. ಹೀಗೆಯೇ, **ಅನ್ಯಂ ದಿವೋ ಮಾತರಿಶ್ವಾ ಜಭಾರ**, ಎಂದು ಮೇಲೆ

ಉದ್ಧೃತವಾಗಿರುವ ವಾಕ್ಯವನ್ನನುಸರಿಸಿ ಹೇಳಿರುವ ವಾಕ್ಯಗಳೂ ಹೀರಳವಾಗಿವೆ ಹೀಗೆ ಅಗ್ನಿಭಿನ್ನನಾದ ಮಾತರಿಶ್ವನ ಸ್ವರೂಪವೇನು ಎಂಬುದನ್ನು ಆ ಸಂದರ್ಭವೊದಗಿದಾಗ ವಿವರಿಸಲಾಗುವುದು ೧-೬೦-೧ ರಲ್ಲಿ ಅಗ್ನಿಯನ್ನು ಮಾತರಿಶ್ವನು ತಂದುದಾಗಿಯೂ, ಸೋಮವನ್ನು ಶ್ಯೇನನು ತಂದುದಾಗಿಯೂ ತಿಳಿಸಿದೆ ಋ. ಸಂ ೬-೧೫-೪ ರಲ್ಲಿ ಅಗ್ನಿಯನ್ನೇ ಶ್ಯೇನವೆಂದು ಕರೆದಿದೆ **(ದಿವಃ ಶ್ಯೇನಾಯ)**

ಇನ್ನೊಂದು ಸಂದರ್ಭದಲ್ಲಿ ಶಿಲೆಗಳ ಮಧ್ಯೇ ಅಂತರ್ಗತನಾಗಿದ್ದ ಅಗ್ನಿಯನ್ನು ಇಂದ್ರನು ಉತ್ಪನ್ನವಾಗುವಂತೆ ಮಾಡಿದನು ಎಂದು ತಿಳಿಸಿದೆ. (೨-೧೨-೩)

೧೦-೪೫-೪ ರಲ್ಲು **" ದ್ಯೌರ್ಜನಯತ್ಸುರೇತಾಃ "** ಈ ಅಗ್ನಿಯನ್ನು ದ್ಯೌಃ ಉತ್ಪನ್ನಮಾಡಿದನು ಎಂದಿದೆ. ಇಲ್ಲಿ **ದ್ಯೌಃ** ಎಂದರೆ ಪ್ರಾಣನೆಂದಾದರೂ ಆಗಬಹುದು. ಆದಿತ್ಯನೆಂದಾದರೂ ಆಗಬಹುದು ಆದಿತ್ಯನೂ ಅಗ್ನಿಯ ಸೃಷ್ಟಿಗೆ ಕಾರಣನು ಎಂದೂ ಅರ್ಥವಾಗುತ್ತದೆ **ದ್ಯುಲೋಕದ** ಪುತ್ರನೆಂದೂ ವರ್ಣಿತನಾಗಿದ್ದಾನೆ. **(ದಿವಃ ಸೂನುರಸಿ** ೩-೨-೨) ಅದರಂತೆಯೇ ಪೃಥಿವಿಯ ಪುತ್ರನೂ ಆಗಿದ್ದಾನೆ (೩-೨-೨, ೩-೨೫-೧).

'' ಯಂ ತ್ವಾ ದ್ಯಾವಾಪೃಥಿವೀ ಯಂ ತ್ವಾಪಸ್ತ್ವಷ್ಟಾ ಯಂ ತ್ವಾ ಸು ಜನಿಮಾ ಜಜಾನ ''

(೧೦-೨-೭)

ಎಂಬಲ್ಲಿ ಅಗ್ನಿಯ ಉತ್ಪತ್ತಿಗೆ ಕಾರಣರಾರಾರೆಂದು ಸ್ಪಷ್ಟವಾಗಿ ತಿಳಿಸಿದೆ (೧೦-೧೪೦-೨, ೩-೩-೧)

ಉದಕದಿಂದ ಅಗ್ನಿಯು ಉತ್ಪನ್ನನಾದನು ಎಂಬ ವರ್ಣನೆಯೂ ಕೆಲವೆಡೆಗಳಲ್ಲಿನೆ.

(೧೦-೨-೭, ೧೦-೯೧-೬)

ಹಿರಣ್ಯವರ್ಣಾಃ ಶುಚಯಃ.....। ಯಾ ಅಗ್ನಿಂ ಗರ್ಭಂ ದಧಿರೇ ಸುವರ್ಣಾಸ್ತಾ ನ ಆಪಃ ಶಗ್ಂ ಸ್ಯೋನಾ ಭವಂತು ॥ (ಆ. ವೇ ೯-೩೩-೧)

ಯಾವ ಉದಕಗಳು ಅಗ್ನಿಯನ್ನು ತಮ್ಮ ಗರ್ಭರೂಪವಾಗಿ ಧರಿಸಿದವೋ ಆ ಆಪ್ಯಗಳು ನಮಗೆಸನ್ಮಂಗಳಕಾರಕಗಳಾಗಲಿ, ಎಂಬ ಆಥರ್ವವೇದದ ವಾಕ್ಯವೂ ಈ ಅಭಿಪ್ರಾಯವನ್ನು ತಿಳಿಸುತ್ತವೆ ಉಷಸ್ಸಿನಿಂದ ಆವಿರ್ಭೂತನಾದವನು ಎಂದು ತಿಳಿಸುವ ವಾಕ್ಯಗಳೂ ಸಹ ಇರುತ್ತವೆ ಹಾಗೆಯೇ, ಇವನ ಉತ್ಪತ್ತಿ ಮತ್ತು ಸ್ವರೂಪ ಇವುಗಳನ್ನು ವರ್ಣಿಸುವ ಕೆಲವು ಸಂದರ್ಭಗಳನ್ನು ಉದಾಹರಿಸಲಾಗುತ್ತದೆ.

" ಪ್ರಸಿದ್ಧವಾದವೂ ಪ್ರಭಾಯುತವಾದವೂ ಆದ ಉಷಸ್ಸುಗಳು ಸೂರ್ಯನನ್ನೂ, ಅಗ್ನಿಯನ್ನೂ ಉತ್ಪನ್ನವಾಗುವಂತೆ ಮಾಡಿದವು " (೭-೭೮-೩)

" ಎಲೈ ಇಂದ್ರಾ ವಿಷ್ಣುಗಳೇ, ನೀವು ಯಜಮಾನನಿಗೋಸ್ಕರ ವಿಸ್ತೃತವಾದ ಸ್ವರ್ಗವನ್ನೂ. ಸೂರ್ಯನನ್ನೂ, ಉಷಸ್ಸನ್ನೂ, ಅಗ್ನಿಯನ್ನೂ ಉತ್ಪನ್ನವಾಗುವಂತೆ ಮಾಡಿದಿರಿ " (೭-೯೯-೪) ಕ್ರಾಂತದರ್ಶಿಯೂ, ಸಮಾಜನೂ, ಅತಿಥಿಯೂ ತಮಗೆಲ್ಲಾ ಮುಖಪ್ರಾಯನೂ ಆದ ಅಗ್ನಿಯನ್ನು ದೇವತೆಗಳು ಉತ್ಪನ್ನವಾಗುವಂತೆ ಮಾಡಿದರು. (೬-೭-೧, ೨ ; ೮-೯೧-೧೭ , ೧೦-೪೬-೯) ಈ ಅಗ್ನ್ಯುತ್ಪತ್ತಿಯ ಪ್ರಯೋಜನವೇನು ? ಸ್ವರೂಪವೇನು ? ಎಂದರೆ, " ವೈಶ್ವಾನರರೂಪನಾದ ಎಲೈ ಅಗ್ನಿಯೇ, ದ್ಯುಲೋಕಕ್ಕೆ ಶಿರೋರೂಪನಾಗಿಯೂ, ಪೃಥಿವಿಗೆ ನಾಭಿರೂಪನಾಗಿಯೂ, ದ್ಯಾವಾಪೃಥಿವಿಗಳಿಗೆಲ್ಲಾ ಪ್ರಭುವಾಗಿಯೂ ಇರುವ ನಿನ್ನನ್ನು ಆರ್ಯನಾದ ಮನುವಿಗೆ ಜ್ಯೋತಿರೂಪವಾಗಿರುವಂತೆ ದೇವತೆಗಳು ಸೃಷ್ಟಿಮಾಡಿದರು " (೧-೫೯-೨)

" ಅದೇ ಮನುವಿಗೆ ಅನುಗ್ರಹಿಸುವುದಕ್ಕಾಗಿ ದೇವತೆಗಳು ನಿನ್ನನ್ನು ದೃಢವಾಗಿ ಥರಿಸಿದ್ದಾರೆ "
(೧-೩೬-೧೨, ೭-೪-೩, ೬-೧೬-೧; ೮-೭೩-೨)

ಮೇಲೆ ಹೇಳಿದಂತೆ, ದೇವತೆಗಳಿಂದ ಉತ್ಪನ್ನನಾದುದರಿಂದ ಅಗ್ನಿಯು ದೇವತೆಗಳ ಪುತ್ರನೆಂದಾಯಿತು. ಆದರೆ, ಅದೇ ದೇವತೆಗಳಿಗೆ ಪಿತೃವೆಂದೂ ಕೆಲವೆಡೆಗಳಲ್ಲಿ ವರ್ಣಿತನಾಗಿದ್ದಾನೆ. " ದೇವತೆಗಳಿಗೆಲ್ಲಾ ಪುತ್ರನಾಗಿದ್ದರೂ ಸಹ ಅವರಿಗೂ ಇತರ ಲೋಕಗಳಿಗೂ ಪಿತೃವಾಗಿದ್ದೀಯೆ. (೧-೬೯-೧)

ಇಂತಹ ದಿವ್ಯವಾದ ಉತ್ಪತ್ತಿಯುಳ್ಳ ಅಗ್ನಿಯ ಸ್ಥಾನಗಳು ಮೂರು, ಈ ಮೂರು ಅವನ ಮೂರು ವಿಧವಾದ ಆವಿರ್ಭಾವವನ್ನು ತೋರಿಸುತ್ತವೆ. ದ್ಯುಲೋಕದಲ್ಲಿ ಆದಿತ್ಯರೂಪದಿಂದಲೂ, ಅಂತರಿಕ್ಷದಲ್ಲಿ ವಿದ್ಯುದ್ರೂಪದಿಂದಲೂ, ಮತ್ತು ಪೃಥ್ವಿಯಲ್ಲಿ ಅಗ್ನಿರೂಪದಿಂದಲೂ ಆವಿರ್ಭೂತನಾಗಿದ್ದಾನೆ. ಇದೇ ಅಂಶವನ್ನು ಸಂಹಿತಾವಾಕ್ಯಗಳಲ್ಲಿ ಈ ರೀತಿ ವರ್ಣಿಸಿದೆ ಈ ವರ್ಣನೆಗಳಲ್ಲಿ, ಸೂರ್ಯಾಗ್ನಿಗಳು ಒಂದೇ ತತ್ತ್ವದ ಪ್ರಭೇದವಿಶೇಷಗಳೆಂದೂ ತಿಳಿಯುತ್ತದೆ.

" ಅಗ್ನಿಯು ರಾತ್ರಿಕಾಲದಲ್ಲಿ ಪೃಥ್ವಿಗೆ ಶಿರೋರೂಪನಾಗಿದ್ದಾನೆ ಅನಂತರ ಅಹಸ್ಸಿನಲ್ಲಿ ಸೂರ್ಯರೂಪದಲ್ಲಿ ಉದಯಿಸುತ್ತಾನೆ" (೧೦ ೮೮-೬)

ಇದೇ ಋಕ್ಸಂಹಿತಾ ವಾಕ್ಯದಲ್ಲಿ ಹೇಳಿರುವ ಈ ಅಭಿಪ್ರಾಯವನ್ನು ಐತರೇಯಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿದೆ

" ಆದಿತ್ಯೋ ವಾ ಅಸ್ತಂಯನ್ನಗ್ನಿಮನುಪ್ರವಿಶತ್ಯಿ'ಸೋ೭ಂತರ್ಧೀಯತೇ ... .
ಅಗ್ನಿರ್ವಾ ಉದ್ಯನ್ನಾಯುಮನುಪ್ರವಿಶತಿ ಸೋ೭ಂತರ್ಧೀಯತೇ.. ವಾಯೋರಗ್ನಿರ್ಜಾಯತೇ
ಪ್ರಾಣಾದ್ಧಿ ... . ಅಗ್ನೇರ್ವಾ ಆದಿತ್ಯೋ ಜಾಯತೇ ॥

(ಐ ಬ್ರಾ. ೪೦-೩೮)

ಅಸ್ತಮಯಕಾಲದಲ್ಲಿ ಸೂರ್ಯನು ಅಗ್ನಿಯನ್ನು ಪ್ರವೇಶಿಸಿ ಅವನಲ್ಲಿ ಅಂತರ್ಧಾನನಾಗುತ್ತಾನೆ ಅಗ್ನಿಯು ಊರ್ಧ್ವ ಮುಖನಾಗಿ ಎದ್ದು ವಾಯುವನ್ನು ಪ್ರವೇಶಿಸಿ ಅವನಲ್ಲಿ ಅಂತರ್ಧಾನನಾಗುತ್ತಾನೆ ಪುನಃ ಅದೇ ವಾಯುವಿನಿಂದ ಉತ್ಪನ್ನನಾಗುತ್ತಾನೆ. ಸೂರ್ಯನು ಇದೇ ಅಗ್ನಿಯಿಂದ ಉತ್ಪನ್ನನಾಗುತ್ತಾನೆ.

" ದೇವತೆಗಳು ಪ್ರಥಮತಃ ' **ಇದಂ ದ್ಯಾವಾಪೃಥಿವೀ** ' ಇತ್ಯಾದಿ ಸೂಕ್ತಗಳನ್ನು ನಿರ್ಮಿಸಿದರು. ಅನಂತರ ಅಗ್ನ್ಯುತ್ಪತ್ತಿಯಾಯಿತು. ಅಗ್ನಿತೃಪ್ತಿಗಾಗಿ ಹವಿಸ್ಸುಗಳನ್ನು ಕಲ್ಪಿಸಿದರು. ಈ ಅಗ್ನಿಯೇ ಅವರ ಯಜ್ಞಪಾಲಕನು. ದ್ಯಾವಾಪೃಥಿವಿಗಳೂ, ಆಪ್ಸುಗಳೂ (ಉದಕಗಳು) ಪೂರ್ಣವಾಗಿ ಅಗ್ನಿಯ ಮಹಿಮೆಯನ್ನು ರಿತವು. (೧೦-೪೮-೪)

" ದೇವತೆಗಳು ತಮ್ಮ ಅಲೌಕಿಕವಾದ ಶಕ್ತಿಯ ಸಹಾಯದಿಂದಲೂ ಸ್ತುತಿರೂಪವಾದ ಸಾಧನದಿಂದಲೂ ದ್ಯಾವಾಪೃಥಿವಿಗಳನ್ನೆಲ್ಲಾ ವ್ಯಾಪಿಸುವ ಅಗ್ನಿಯನ್ನು ಉತ್ಪನ್ನ ಮಾಡಿದರು ಅವನನ್ನು ಮೂರುವಿಧವಾದ ರೂಪಗಳನ್ನು ತಾಳುವ ಸ್ವರೂಪವನ್ನು ಕೊಟ್ಟು ನಿರ್ಮಿಸಿದರು ಆ ಅಗ್ನಿಯು ಎಲ್ಲಾ ಓಷಧಿಗಳನ್ನು ಪಕ್ವವಾಗುವಂತೆ ಮಾಡುತ್ತಾನೆ
(೧೦-೪೮-೧೧)

" ಯಾವಾಗ ದೇವತೆಗಳು ಈ ಅಗ್ನಿಯನ್ನೂ, ಅದಿತಿಪುತ್ರನಾದ ಸೂರ್ಯನನ್ನೂ ದ್ಯುಲೋಕದಲ್ಲಿ ಧರಿಸಿದರೋ ಯಾವಾಗ ಸೂರ್ಯನೂ ವೈಶ್ವಾನರನೂ ಒಟ್ಟಿಗೆ ಸೇರಿಕೊಂಡು ಆವಿರ್ಭವಿಸಿದರೋ ಆ ಒಡನೆಯೇ ದೇವತೆಗಳು ಸಕಲವಾದ ಲೋಕಗಳನ್ನೂ ಸ್ಪಷ್ಟವಾಗಿ ನೋಡಲು ಶಕ್ತರಾದರು" (೧೦-೪೮-೧೧)

ಈ ರೀತಿ ವರ್ಣಿತವಾಗಿರುವ ಈ ಮಂತ್ರಗಳ ತಾತ್ಪರ್ಯವನ್ನು ನಿರುಕ್ತಕಾರರು ಯಾವ ರೀತಿ ವಿವರಿಸಿರುವರು ಎಂಬುದನ್ನು ಪರಿಶೀಲಿಸಿದರೆ ಈ ಅಂಶಗಳು ವಿಶದವಾಗಿ ತಿಳಿಯುತ್ತವೆ ನಿರುಕ್ತಕಾರರು ನಿರುಕ್ತದಲ್ಲಿ **"ತತಃ ಸೂರ್ಯೋ ಜಾಯತೇ ಪ್ರಾತರುದ್ಯನ್ ಸ ಏವ"** (೭-೩೭), ಅನಂತರ ಪ್ರಾತಃಕಾಲದಲ್ಲಿ ಯಾವ ಸೂರ್ಯನು ಉದಯಿಸುವನೋ ಅವನೇ ಅಗ್ನಿಯು ಎಂದರೆ ಅಗ್ನಿಯೇ ಸೂರ್ಯರೂಪದಲ್ಲಿ ಉದಯಿಸುತ್ತಾನೆ ಎಂದು ಸೂರ್ಯಾಗ್ನಿಗಳ ತಾದಾತ್ಮ್ಯವನ್ನು ತೋರಿಸಿದ್ದಾರೆ ಮತ್ತು ಇದೇ ಮೇಲೆ ಉದ್ಧೃತವಾದ ೧೦-೪೮-೧೦ ನೇ ಮಂತ್ರವನ್ನು ವಿವರಿಸುತ್ತಾ,

" ತ್ರೇಧಾ ಭಾವಾಯ ಪೃಥಿವ್ಯಾಮಂತರಿಕ್ಷೇ ದಿವೀತಿ ಶಾಕಪೂಣಿಃ "

(ನಿ ೭-೨೪)

ಶಾಕಪೂಣಿಯ ಮತವಲ್ಲಿ **ತ್ರೇಧಾ** ಎಂಬುದಕ್ಕೆ ಪೃಥ್ವೀ, ಅಂತರಿಕ್ಷ ಮತ್ತು ದ್ಯುಲೋಕಗಳೆಂದು ಇವು ಮೂರೂ ಅಗ್ನಿಯ ಸ್ಥಾನಗಳು ಎಂದೂ ತಾತ್ಪರ್ಯವೆಂದು ತಿಳಿಸಿದ್ದಾರೆ ೭ದಲ್ಲದೇ, **" ಯದಸ್ಯ ದಿವಿ ತೃತೀಯಂ ತದಸಾವಾದಿತ್ಯಃ"** ದ್ಯುಲೋಕದಲ್ಲಿರುವ ಅಗ್ನಿಯು ಮೂರನೆಯ ರೂಪವೇ ಈ ಆದಿತ್ಯನು ಎಂದು ಹೇಳಿರುವ ಬ್ರಾಹ್ಮಣವಾಕ್ಯವನ್ನೂ ಉದಾಹರಿಸಿದ್ದಾರೆ

ಋ. ಸಂ ೧೦-೮೮-೧೧ ನೇ ಮಂತ್ರದಲ್ಲಿ ವರ್ಣಿತವಾದ **'ಮಿಥುನೌ'** ಎಂಬ ಪದಕ್ಕೆ ಸಾಯಣರ ವಿವರಣೆಯಂತೆ ಮೇಲೆ **ಸೂರ್ಯ** ಮತ್ತು **ವೈಶ್ವಾನರ** ಎಂದರ್ಥಮಾಡಿದೆ ಆದರೆ ಅದಕ್ಕೆ ನಿರುಕ್ತಕಾರರು ಈ ರೀತಿಯ ವಿವರಣೆಯನ್ನು ಹೇಳಿದ್ದಾರೆ

" ಯದಾ ಚರಿಷ್ಣೂ ಮಿಥುನೌ ಪ್ರಾದುರಭೂತಾಂ। ಸರ್ವದಾ ಸಹಚಾರಿಣಾವುಷಾಶ್ಚ ಆದಿತ್ಯಶ್ಚ " (ನಿ ೭-೨೯)

ಮಿಥುನ ಶಬ್ದಕ್ಕೆ ಇಲ್ಲಿ ಸರ್ವದಾ ಒಟ್ಟಿಗೆ ಸಂಚರಿಸತಕ್ಕ **ಉಷಸ್ಸು** ಮತ್ತು **ಆದಿತ್ಯ**ನೆಂದರ್ಥಮಾಡಿದ್ದಾರೆ

ಹೀಗೆ ದ್ಯುಲೋಕಸ್ಥನಾದ ಸೂರ್ಯನೊಡನೆ ತಾದಾತ್ಮ್ಯವನ್ನು ತೋರಿಸಿರುವುದಲ್ಲದೇ, ಅಂತರಿಕ್ಷಸ್ಥರಾದ ಇಂದ್ರ ಮತ್ತು ವಾಯುಗಳೊಡನೆಯೂ ಇದೇ ತಾದಾತ್ಮ್ಯವನ್ನು ತೋರಿಸಿ ವಿವರಿಸಿರುವ ನಿರುಕ್ತವಾಕ್ಯವನ್ನು ಹಿಂದೆ ಉದಾಹರಿಸಿ ತಿಳಿಸಿದೆ. ಈ ರೀತಿ ವಿವರಣೆಗಳನ್ನು ಕೊಟ್ಟು **ಅಗ್ನಿಯು** ಸೂರ್ಯಾದಿ ನಾನಾರೂಪಗಳಲ್ಲೂ ಇರತಕ್ಕವನು ಎಂದು ಹೇಳಲು ನಿರುಕ್ತಕಾರರ ಬೇರೆ ವಾಕ್ಯಗಳನ್ನೂ ಆಧಾರವಾಗಿ ತೆಗೆದುಕೊಳ್ಳಬಹುದು. ಋಕ್ಸಂಹಿತೆಯ **" ಇದಂ ವಿಷ್ಣುರ್ವಿಚಕ್ರಮೇ .. ."** (೧-೨೨-೧೭) ಎಂಬ ಮಂತ್ರದ ತಾತ್ಪರ್ಯವನ್ನು ಈ ರೀತಿ ವಿವರಿಸಿದ್ದಾರೆ. ಮತ್ತು ಶಾಕಪೂಣಿಯ ಮತವನ್ನೂ ಈ ಸಂದರ್ಭದಲ್ಲಿ ತಿಳಿಸಿದ್ದಾರೆ.

" ತ್ರಿಧಾ ನಿಧತ್ತೇ ಪದಂ ತ್ರೇಧಾ ಭಾವಾಯ ಪೃಥಿವ್ಯಾಮಂತರಿಕ್ಷೇ ದಿವೀತಿ ಶಾಕಪೂಣಿಃ।

(ನಿ. ೧೨-೧೯)

ಇದು ಶಾಕಪೂಣಿಯವರ ಮತ. ಎಂದರೆ, ಮೂರು ಲೋಕಗಳನ್ನು ಮಾತ್ರ ನಿರ್ದೇಶಿಸಿದೆ. ವಿಷ್ಣುವಿನ ಪಾದವು ಈ ಮೂರು ಲೋಕಗಳನ್ನೂ ವ್ಯಾಪಿಸಿತು ಎಂಬುದಕ್ಕೂ ಅಗ್ನಿಯ ಮೂರು ಸ್ಥಾನಗಳು ಎಂಬುದಕ್ಕೂ ಏನು ಸಂಬಂಧ ಎಂಬುದನ್ನು ಮಾತ್ರ ತಿಳಿಸಿಲ್ಲ. ಈ ಅಂಶವನ್ನು ಇದೇ ಸಂದರ್ಭದಲ್ಲಿ ವಿವರಿಸುತ್ತಾ ದುರ್ಗಾಚಾರ್ಯರು ತಮ್ಮ ವ್ಯಾಖ್ಯಾನದಲ್ಲಿ ಸ್ಪಷ್ಟಪಡಿಸಿದ್ದಾರೆ.

'' ಪಾರ್ಥಿವೋಽಗ್ನಿರ್ಭೂತ್ವಾ ಪೃಥಿವ್ಯಾಂ ಯತ್ಕಿಂಚಿದಸ್ತಿ ತದ್ವಿಕ್ರಮತೇ ತದಧಿತಿಷ್ಠತಿ ।
ಅಂತರಿಕ್ಷೇ ವಿದ್ಯುತಾತ್ಮನಾ ದಿವಿ ಸೂರ್ಯಾತ್ಮನಾ ''

(ದುರ್ಗಾಚಾರ್ಯಕೃತವ್ಯಾಖ್ಯಾ ನಿ. ೧೨-೧೯)

ಇದೇ ವಿಷ್ಣುವು ಪಾರ್ಥಿವಾಗ್ನಿಯ ರೂಪದಲ್ಲಿ ಪೃಥಿವಿಯನ್ನು ವ್ಯಾಪಿಸುತ್ತಾನೆ. ಅಂತರಿಕ್ಷದಲ್ಲಿ ವೈದ್ಯುತಾಗ್ನಿರೂಪದಲ್ಲೂ ದ್ಯುಲೋಕದಲ್ಲಿ ಸೂರ್ಯರೂಪದಲ್ಲೂ ಆ ಎರಡು ಲೋಕಗಳನ್ನೂ ವ್ಯಾಪಿಸುತ್ತಾನೆ, ಎಂದು ವಿವರಿಸಿದ್ದಾರೆ ಇಂತಹ ಅಭಿಪ್ರಾಯಗಳಿಗೆ ಆಧಾರಭೂತವಾಗಿಯೂ ಇವುಗಳನ್ನು ಸಮರ್ಥಿಸುವುದಾಗಿಯೂ ಇರುವ ಈ ವಿಭಾಗಗಳನ್ನು ಋಗ್ವೇದದಲ್ಲಿಯೂ ಕಾಣಬಹುದು.

"ಅಗ್ನಿಯು ಪ್ರಥಮತಃ ದ್ಯುಲೋಕದಲ್ಲಿ ಆದಿತ್ಯಾತ್ಮನಾಗಿ ಉತ್ಪನ್ನನಾದನು. ಎರಡನೆಯದಾಗಿ ಈ ಪೃಥ್ವಿಯಲ್ಲಿ ಜಾತವೇದೋ ರೂಪನಾದ ಅಗ್ನಿಸ್ವರೂಪವನ್ನು ಹೊಂದಿದನು. ಮೂರನೆಯದಾಗಿ ಅಂತರಿಕ್ಷದಲ್ಲಿ ವಿದ್ಯುದ್ರೂಪದಿಂದ ಜನಿಸಿದನು.'' (ಋ. ಸಂ ೧೦-೪೫-೧)

ಎಂದು ವಿಭಾಗಮಾಡಿರುವ ಇದೇ ಕ್ರಮವನ್ನು ಅಥರ್ವವೇದದಲ್ಲೂ ತಿಳಿಸಿದೆ

ಅಗ್ನಿರ್ದಿವ ಆ ತಪತಿ ಅಗ್ನೇರ್ದೇವಸ್ಯ ಉರು ಅಂತರಿಕ್ಷಂ ।
ಅಗ್ನಿಂ ಮರ್ತಾಸ ಇಂಧತೇ ಹವ್ಯವಾಹಂ ಘೃತಪ್ರಿಯಂ ॥

(ಅ. ವೇ ೨೦-೧೦-೨೨)

ಅಗ್ನಿಯು ದ್ಯುಲೋಕದಿಂದ ಪ್ರಜ್ವಲಿಸುತ್ತಾನೆ ಈ ಅಗ್ನಿಗೆ ಅಂತರಿಕ್ಷವೂ ಅಧೀನವಾಗಿದೆ ಪೃಥಿವೀಸ್ಥರಾದ ಮಾನವರು ಘೃತಪ್ರಿಯನಾದ ಈ ಅಗ್ನಿಯನ್ನು ಪೃಥಿವಿಯಲ್ಲಿ ಪ್ರಜ್ವಲಿತನಾಗುವಂತೆ ಮಾಡುತ್ತಾರೆ **" ಇದಂ ತ ಏಕಂ ಪರ ಊ ತ ಏಕಂ ತೃತೀಯೇನ ಜ್ಯೋತಿಷಾ ಸಂವಿಶಸ್ವ "** (೧೦-೫೬-೧೮) ಎಂಬ ವಾಕ್ಯದಲ್ಲಿ ತಿಳಿಸಿದೆ. **' ಅರ್ಕಸ್ತ್ರೀಧಾತೂ ರಜಸೋ ವಿಮಾನಃ '** (ಋ ಸಂ ೩-೫೬-೭, ವಾ ಸಂ ೧೪-೬೬) ಎಂಬಲ್ಲಿ ಸ್ಪರ್ಶಿಸಿರುವ ಅಗ್ನಿಯ ಮೂರು ವಿಧವಾದ ಸ್ಪರ್ಶಗಳೂ ಈ ವಿಭಾಗಗಳನ್ನೇ ನಿರ್ದೇಶಿಸಿದೆ ೫-೪-೪ ನೇ ಮಂತ್ರದಲ್ಲಿ **ತ್ರಿಷಧಸ್ಥ ಹವ್ಯಂ** ಎಂಬ ಸನ್ನಿವೇಶವನ್ನು ವಿವರಿಸುತ್ತಾ ಸಾಯಣರು ಈ ರೀತಿ ವಿವರಿಸಿದ್ದಾರೆ **" ತ್ರಿಷು ದಿವ್ಯಾದಿಷು ಸ್ಥಾನೇಷು ಸ್ಥಿತಃ "** ದ್ಯುಲೋಕಾದಿ ಮೂರು ಸ್ಥಾನಗಳನ್ನಾಕ್ರಮಿಸುವವನು ಎಂದರ್ಥ ೪-೫-೪ ನೇ ಮಂತ್ರದಲ್ಲಿ ಪ್ರಯುಕ್ತವಾಗಿರುವ **ತ್ರಿಪಸ್ತ್ಯ** ಎಂಬ ಪದಕ್ಕೂ ಇದೇ ತಾತ್ಪರ್ಯ ಇದನ್ನೇ ೧-೯೫-೩ ನೇ ಋಕ್ಕಿನಲ್ಲಿ **" ತ್ರೀಣಿ ಜಾನಾ ಪರಿಭೂಷಂತ್ಯಸ್ಯ "** ಎಂಬ ವಾಕ್ಯದಿಂದ ತಿಳಿಸಿದೆ ಈ ಮೂರಕ್ಕೂ ವಡವಾನಲ, ಸೂರ್ಯ, ವಿದ್ಯುತ್ತು ಎಂದರ್ಥವೆಂದು ಸಾಯಣರ ಅಭಿಪ್ರಾಯ

ಇದಲ್ಲದೇ, **ದ್ವಿಜನ್ಮಾ** ಎಂಬುದೂ ಸಹ ಅಗ್ನಿಗೆ ಸಾಧಾರಣವಾದ ವಿಶೇಷಣವಾಗಿದೆ. (೧-೬೦-೧; ೧-೧೪೦-೨; ೧-೧೪೯-೨, ೩) ಇಲ್ಲಿಯೂ **ದ್ವಿಜನ್ಮಾ** ಎಂಬ ವಿಶೇಷಣಕ್ಕೆ ಅರ್ಥಾಂತರಗಳು ಹೇಳಲ್ಪಟ್ಟವೆ. ಪೃಥಿವೀ ಮತ್ತು ಅಂತರಿಕ್ಷಗಳಿಂದ ಉತ್ಪನ್ನನಾದುದರಿಂದ ಈ ರೀತಿ ಸ್ತುತನಾಗಿರಬಹುದು. ಅಥವಾ ಎರಡು ಅರಣಿಗಳಿಂದ ಉತ್ಪನ್ನನಾದುದರಿಂದ ಈ ರೀತಿ ಸ್ತುತನಾಗಿರಬಹುದು. ಅಥವಾ ಮೊದಲು ಸ್ವಾಭಾವಿಕವಾದ ಜನ್ಮವಿದ್ದು ಅನಂತರ ಅರಣಿಯಿಂದ ಉತ್ಪನ್ನನಾದುದರಿಂದಲೂ ಈ ವರ್ಣನವಿರಬಹುದು ಈ ಎಲ್ಲಾ ಅಭಿಪ್ರಾಯಗಳನ್ನೂ ಸಾಯಣರು ವ್ಯಕ್ತಪಡಿಸಿದ್ದಾರೆ " ಎಲೈ ಅಗ್ನಿಯೇ, ನೀನು ದ್ಯುಲೋಕೋತ್ಪನ್ನನಾಗಿಯೂ. ಅಂತರಿಕ್ಷೋತ್ಪನ್ನನಾಗಿಯೂ ಇದ್ದೀಯೆ ಅಂತಹ ನಿನ್ನನ್ನು ಸ್ತುತಿಗಳಿಂದ ಪೂಜಿಸುತ್ತೇನೆ " ಇತ್ಯಾದಿ ವಾಕ್ಯಗಳಲ್ಲಿ ಈ ಅಂಶವು ತಿಳಿಸಲ್ಪಡುತ್ತದೆ.

(೯-೪೩-೨೮)

ಅಗ್ನಿಯ ಉತ್ಪತ್ತಿಯನ್ನು ವರ್ಣಿಸುವಾಗ ಮುಖ್ಯವಾಗಿ ಅರಣಿಮಥನದಿಂದ ನಿಷ್ಪನ್ನವಾಗುವ ಸನ್ನಿವೇಶವೇ ಅಧಿಕವಾಗಿ ಪ್ರಶಂಸಿತವಾಗಿದೆ. ಅವುಗಳಲ್ಲಿ ಒಂದೆರಡು ಸನ್ನಿವೇಶಗಳನ್ನು ಇಲ್ಲಿ ಪರಿಶೀಲಿಸಬಹುದು

" ಅರಣಿ ಮಥನಕ್ಕೆ ಬೇಕಾದ ಸಾಧನವೂ, ಅಗ್ನ್ಯುತ್ಪಾದನೆಗೆ ಬೇಕಾದ ಸಲಕರಣೆಗಳೂ ಸಿದ್ಧವಾಗಿವೆ ಪ್ರಜೆಗಳಿಗೆ ಅಗ್ನಿಯನ್ನು ಒದಗಿಸಿ ಪಾಲಿಸತಕ್ಕ ಈ ಅರಣಿಯನ್ನು ಸಿದ್ಧಪಡಿಸು "

(೩-೨೯-೧)

" ಸ್ತ್ರೀಗರ್ಭಕೋಶದಲ್ಲಿ ಗರ್ಭವು ಸ್ಥಾಪಿತವಾಗಿರುವಂತೆ, ಈ ಅರಣಿಗಳಲ್ಲಿ ಅಗ್ನಿಯು ಸುಪ್ತನಾಗಿದ್ದಾನೆ. ಈ ಅಗ್ನಿಯು ಪ್ರತಿದಿನವೂ ಯಜಮಾನರಿಂದ ಸ್ತುತಿಸಲ್ಪಡಬೇಕು. "

(೩-೨೯-೨)

" ಮಥನಕ್ರಿಯೆಯಲ್ಲಿ ಚಾತುರ್ಯವನ್ನು ಹೊಂದಿದ ನೀನು ಮೇಲಿನ ಅರಣಿಯನ್ನು ಕೆಳಗಿನ ಅರಣಿಯ ಜೊತೆಯಲ್ಲಿ ಸೇರಿಸು ಮಥನಕ್ರಿಯೆಯಾದನಂತರ ಅಗ್ನ್ಯುತ್ಪತ್ತಿಯಾಗುತ್ತದೆ "

(೩-೨೯ ೩)

ಇತ್ಯಾದಿ ವಾಕ್ಯಗಳು ಅರಣಿಮಥನವನ್ನೂ, ಅರಣಿಮಥದಿಂದ ಉತ್ಪನ್ನವಾಗತಕ್ಕ ಅಗ್ನಿಯ ಸ್ವರೂಪವನ್ನೂ ಸ್ತುತಿಸುತ್ತವೆ. ಈ ಮಥನಕ್ರಿಯೆಯಿಂದ ನಿಷ್ಪನ್ನವಾಗತಕ್ಕ ಅಗ್ನಿಯು ಯಜ್ಞಸಂರಕ್ಷಕನಾದುದರಿಂದ ಈ ಅಗ್ನಿಯು ಅತ್ಯಂತ ಪೂಜ್ಯನಾಗಿದ್ದಾನೆ **" ಅಯಮಗ್ನಿಃ ಪೃತನಾಷಾಟ್ ಸುವೀರೋ ಯೇನ ದೇವಾಸೋ ಅಸಹಂತ ದಸ್ಯೂನ್ "** ಈ ಅಗ್ನಿಯ ಮಹಿಮೆಯಿಂದಲೇ ದೇವತೆಗಳೆಲ್ಲರೂ ಶತ್ರುನಾಶವನ್ನುಂಟುಮಾಡಲು ಸಾಮರ್ಥ್ಯವನ್ನು ಪಡೆದರು ಎಂದಿದೆ ಈ ರೀತಿಯಾಗಿ ಯಜ್ಞಾರ್ಥವಾಗಿ ನಿರ್ಮಥಿತವಾದ ಅರಣಿಯಿಂದ ಉತ್ಪನ್ನನಾದ ಅಗ್ನಿಯ ಪ್ರಶಂಸೆಯು ಅಗ್ನಿಯ ಮಹತ್ವವನ್ನೂ ಅವನಿಂದ ಲೋಕಕ್ಕೆ ಆಗತಕ್ಕ ಉಪಕಾರವನ್ನೂ ತಿಳಿಸುತ್ತದೆ ಈ ಪ್ರಶಂಸೆಯು ಋಕ್ಸಂಹಿತೆಯಲ್ಲೇ ಅಲ್ಲದೇ, ಬೇರೆ ಶ್ರುತಿವಾಕ್ಯಗಳಲ್ಲೂ ಹೇರಳವಾಗಿವೆ. ಉದಾಹರಣೆಗೆ—

ಸೈಷಾ ಸ್ವರ್ಗ್ಯಾಹುತಿರ್ಯದಗ್ನ್ಯಾಹುತಿರ್ಯದಿ ಹ ವಾ ಅಸ್ಯೈಬ್ರಾಹ್ಮಣೋಕ್ತೋ ಯದಿ ದುರುಕ್ತೋಕೋ ಯಜತೇ೭ಥ ಹೈಷಾಹುತಿರ್ಗಚ್ಛತ್ಯೇವ ದೇವಾನ್ಸ ಪಾಪ್ಮನಾ ಸಂಸೃಜ್ಯತೇ ॥

(ಐ ಬ್ರಾ ೧-೧೩)

ಈ ಅಗ್ನಿಯಲ್ಲಿ ಅರ್ಪಿತವಾಗುವ ಆಹುತಿಯು ಸ್ವರ್ಗಸಾಧಕವಾದುದು. ಅಬ್ರಾಹ್ಮಣನಾದರೂ, ಪಾಪಿಷ್ಠನೆಂದು ಅಪಯಶಸ್ಸನ್ನು ಪಡೆದವನಾದರೂ ಶ್ರದ್ಧೆಯಿಂದ ಈ ಆಹುತಿಯನ್ನರ್ಪಿಸಿದರೆ ಅದು ದೇವತೆಗಳನ್ನು ಖಂಡಿತ ಸೇರಿಯೇ ಸೇರುತ್ತದೆ. ಪಾಪಕರ್ಮವನ್ನು ಮಾಡಿದವನ ಪಾಪದ ಸಂಸರ್ಗವು ಈ ಅಗ್ನ್ಯಾಹುತಿಗೆ ಇರುವುದಿಲ್ಲ.

ಇದೇ ಅಗ್ನಿಯ ದಿವ್ಯಸ್ವರೂಪವು ಶತಪಥಬ್ರಾಹ್ಮಣದ ವಾಕ್ಯದಲ್ಲಿ ಬೇರೊಂದು ರೀತಿಯಲ್ಲಿದೆ. ಅದರ ವಿವರಣೆಯನ್ನು ಇಲ್ಲಿ ಕೊಡಲು ಉಚಿತವಾಗಿರುತ್ತದೆ.

"ಸ ಯತ್ರೈ ಅಗ್ನಿಂ ಸಸೃಜೇ ಸ ಇದಂ ಜಾತಃ ಸರ್ವಮೇವ ದಗ್ಧುಂ ದಧ್ಯೇ। ಇತ್ಯೇವ ಅವಿಲ ಮೇಮು। ತಾ ಯಾಸ್ತರ್ಹಿ ಪ್ರಜಾ ಆಸುಸ್ತಾ ಹ ಏವಂ ಸಂಜೇಷ್ಯುಂ ದಧ್ಯೇ। ಸೋ೨ತಿತಿಕ್ಷ- ಮಾಣ ಪುರುಷಮೇವಾಭ್ಯೇಯಾಯ। ಸ ಹ ಉವಾಚ। ನ ವೈ ಅಹಮಿದಂ ತಿತಿಕ್ಷೇ ಹಂತ ತ್ವಾ ಪ್ರವಿಶಾನಿ। ತಂ ಮಾಜನಯಿತ್ವಾ ಬಿಭೃಹಿ। ಸ ಯೆಥೈವ ಮಾಂ ತ್ವಮಸ್ಮಿನ್ ಲೋಕೇ ಜನಯಿತ್ವಾ ಭರಿಷ್ಯಸಿ ಏವಮೇವಾಹಂ ತ್ವಾಂ ಅಮುಷ್ಮಿನ್ ಲೋಕೇ ಜನಯಿತ್ವಾ ಭರಿಷ್ಯಾ- ಮೀತಿ॥ (ಶ ಬ್ರಾ. ೨-೩-೩-೧)

ಪ್ರಜಾಪತಿಯಿಂದ ಸೃಷ್ಟನಾದ ಅಗ್ನಿಯು ಸಮಸ್ತವನ್ನೂ ದಹಿಸಲಾರಂಭಿಸಿದಾಗ ಜಗತ್ತು ಭ್ರಾಂತಿಗೊಂಡಿತು. ಅದಕ್ಕೆ ಪ್ರತಿಕ್ರಿಯೆಯಾಗಿ ಆಗ ಉತ್ಪನ್ನವಾಗಿದ್ದ ಪ್ರಾಣಿಗಳೆಲ್ಲವೂ ಸೇರಿಕೊಂಡು ಅವನನ್ನು ಬಂಧಿಸಿ ಮರ್ದಿಸತೊಡಗಿದವು. ಆಗ ಅಗ್ನಿಯು ಪುರುಷನಲ್ಲಿಗೆ ಬಂದು ಅವನ ಮರೆಹೊಕ್ಕು, ಈ ಮರ್ದನವನ್ನು ನಾನು ಸಹಿಸಲಾರೆನು ನಾನು ನಿನ್ನಲ್ಲಿ ಪ್ರವೇಶಿಸಲು ಅವಕಾಶವನ್ನು ಕೊಡು ನೀನು ಪುನಃ ನನ್ನನ್ನು ಉತ್ಪನ್ನವಾಡಿ ನನ್ನನ್ನು ಪೋಷಿಸು. ನೀನು ನನಗೆ ಪೃಥ್ವಿಯಲ್ಲಿ ಈ ರಕ್ಷಣೆಯನ್ನೂ ಪೋಷಣೆಯನ್ನೂ ಒದಗಿಸಿದರೆ, ನಿನಗೆ ಪರಲೋಕದಲ್ಲಿ ಅದಕ್ಕೆ ಪ್ರತಿ ಫಲವಾದ ರಕ್ಷಣೆಯನ್ನೂ ಪೋಷಣೆಯನ್ನೂ ಒದಗಿಸುತ್ತೇನೆ ಎಂದು ಭರವಸೆಯನ್ನು ಕೊಟ್ಟನು.

ಈ ರೀತಿಯಾಗಿ ಮಾನವನಿಂದ ಉತ್ಪನ್ನವಾಗಿಯೂ, ಮಾನವನಿಂದಲೇ ಪ್ರಜ್ವಲಿತನಾಗಿಯೂ, ಪೋಷಿತ ನಾಗಿಯೂ ಇರತಕ್ಕ ಅಗ್ನಿಯು ಯಜ್ಞಾಗ್ನಿಯಾಗಿ, ಯಜ್ಞಾರ್ಥವಾಗಿ ಅರಣಿರೂಪವಾದ ಸಾಧನದಿಂದ ಉತ್ಪನ್ನನಾಗಿರುತ್ತಾನೆ ಈ ಅರಣಿರೂಪದ ಸಾಧನದಿಂದ ಉತ್ಪನ್ನನಾದ ಅಗ್ನಿಯನ್ನೇ **ದ್ವಿಜನ್ಮಾ। ದ್ವಿಮಾತಾ** ಎಂಬ ವಿಶೇಷಣಗಳಿಂದ ಸ್ತುತಿಸಿದೆ

ದ್ವಿಜನ್ಮಾ ಇತ್ಯಾದಿ ವಿಶೇಷಣಗಳನ್ನು ಮೇಲೆ ವಿವರಿಸಿದೆ ಇದರಂತೆಯೇ, **ಭೂರಿಜನ್ಮಾ** ಎಂಬ ವಿಶೇಷಣವೂ ಅಗ್ನಿಯ ಮಹತ್ವಪೂರಿತವಾದ ಉತ್ಪತ್ತಿಯನ್ನು ಪ್ರಶಂಸಿಸುವುದಾಗಿದೆ ೧-೯೫-೨, ೧೦-೫-೧ ಇತ್ಯಾದಿ ವಾಕ್ಯಗಳಲ್ಲಿ ಈ ವಿಶೇಷಣವು ಅಗ್ನಿಯ ಉತ್ಪತ್ತಿಕ್ರಮವನ್ನು ವರ್ಣಿಸುತ್ತದೆ. **"ದಶ ಯುವತಯಃ ಇಮಂ ಗರ್ಭಂ ಜನಯಂತಿ"** ಇತ್ಯಾದಿ ಸ್ಥಳಗಳಲ್ಲಿ **ದಶ ಯುವತಯಃ** ಎಂಬುದಕ್ಕೆ ದಶಾಂಗುಲಿಗಳು ಎಂದರ್ಥ. ೩-೨೯-೩ ರಲ್ಲು ಅಗ್ನಿಯನ್ನು **ಇಳಾಪುತ್ರ**ನೆಂದು ಕರೆದಿದೆ. (ಇಲ್ಲಿ **ಇಳಾ** ಶಬ್ದಕ್ಕೆ ಯಾವ ಅರ್ಥವನ್ನಾದರೂ ಹೇಳಬಹುದು.)

ಯಜ್ಞಾರ್ಥವಾಗಿ ಅಗ್ನಿಯನ್ನು ಪ್ರಥಮತಃ ಉತ್ಪನ್ನಮಾಡಿ ಪ್ರಜ್ವಲಿಸುವಂತೆ ಮಾಡಿದ ಮನು, ಅಂಗಿರಸ್ವಾನ್, ಭೃಗು, ಅಥರ್ವನ್, ದಧೀಚಿ ಇತ್ಯಾದಿ ನಾನಾ ಸಂತತಿಗಳೂ ಪ್ರಸಿದ್ಧವಾಗಿವೆ ಅವುಗಳಲ್ಲಿ ಕೆಲವನ್ನು ಮಾತ್ರ ಉದಾಹರಣೆಗೆ ತೆಗೆದುಕೊಳ್ಳಬಹುದು.

"ಎಲೈ ಅಗ್ನಿಯೇ, ಮಾನವರಿಗೆ ಉಪಕಾರಾರ್ಥವಾಗಿ ನಿನ್ನನ್ನು ಮನುವು ಪ್ರಥಮತಃ ಪ್ರಜ್ವಲಿಸುವಂತೆ ಮಾಡಿ ನಿನ್ನ ರೂಪವಾದ ತೇಜಸ್ಸನ್ನು ಉತ್ಪನ್ನಮಾಡಿದನು" (೧–೩೬–೧೯)

"ಮನುವು ತನ್ನ ಭಕ್ತ್ಯತಿಶಯದಿಂದ ಯಾವ ರೀತಿ ಅಗ್ನಿಯನ್ನು ಯಜ್ಞಕ್ಕೆ ಆಕರ್ಷಿಸಿದನೋ, ಅದೇ ರೀತಿ ನಾವೂ ಸಹ ಅಗ್ನಿಯನ್ನು ಆಕರ್ಷಿಸೋಣ." (೭–೨–೩)

"ಯಾವ ದೇವತಾತ್ಮನಾದ ಮನುವು ನಿನ್ನನ್ನಗ್ನಿದ್ದೀಪಿಸಿ ಪ್ರಥಮತಃ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡಿ ನೊದಲನೆಯ ಹವಿಸ್ಸನ್ನರ್ಪಿಸಿದನೋ ಅಂತಹ ಎಲೈ ಆದಿತ್ಯನೇ, ನಮಗೆ ರಕ್ಷಣೆಯನ್ನು ನೀಡು" (೧೮–೬೩–೭)

"ಎಲೈ ಅಗ್ನಿಯೇ, ಹಿಂದೆ ಸುಮಿತ್ರನೊಡಗೂಡಿದ ಮನುವು ಯಾವ ನಿನ್ನ ಜ್ವಾಲೆಯನ್ನು ಪ್ರಜ್ವಲಿತವಾಗು ವಂತೆ ಮಾಡಿದನೋ, ಈಗ ಪ್ರಕಾಶಿಸುತ್ತಿರುವುದೂ ಅದೇ ಜ್ವಾಲೆಯಾಗಿದೆ." (೧೮–೬೯–೩)

"ಎಲೈ ಅಗ್ನಿಯೇ, ಹಿಂದೆಲ್ಲಾ ಯಾವ ರೀತಿ ಭೃಗುವೂ, ಮನುವೂ, ಅಂಗಿರಸ್ಸೂ ಯಾವ ರೀತಿ ನಿನ್ನನ್ನು ಪ್ರಾರ್ಥಿಸಿ ಪ್ರಜ್ವಲಿತನಾಗುವಂತೆ ಮಾಡಿದರೋ, ಈಗಲೂ ಅದೇ ರೀತಿ ನಾವು ನಿನ್ನನ್ನು ಪ್ರಾರ್ಥಿಸಿ, ನಮ್ಮ ಯಜ್ಞ ಶಾಲೆಯಲ್ಲಿ ಪ್ರಕಾಶಿಸಬೇಕೆಂದು ಬೇಡುತ್ತೇವೆ." (೮–೪೩–೧೩)

"ಎಲೈ ಅಗ್ನಿಯೇ, ಅಥರ್ವನು ನಿನ್ನನ್ನು ಪದ್ಮಸತ್ರದಿಂದ ಹೊರಕ್ಕೆ ಆವಿರ್ಭವಿಸುವಂತೆ ಮಾಡಿದನು" (೬–೧೬–೧೩)

"ಎಲೈ ಅಗ್ನಿಯೇ, ಅಥರ್ವಪುತ್ರನಾದ ದಧೀಚಿಯು ನಿನ್ನನ್ನು ಪ್ರಜ್ವಲಿತನಾಗುವಂತೆ ಮಾಡಿದನು" (೬–೧೬–೧೪)

"ಅಥರ್ವನಿಂದ ಉತ್ಪನ್ನನಾದ ಅಗ್ನಿಯು ಸಕಲ ಶಾಸ್ತ್ರಗಳ ಮರ್ಮವನ್ನೂ ಅರಿತಿದ್ದಾನೆ ಅಲ್ಲದೇ, ವಿವಸ್ವಂತನಿಗೆ ದೂತನಾಗಿದ್ದಾನೆ" (೧೮–೬೧–೫)

"ಎಲೈ ಅಗ್ನಿಯೇ, ಭೃಗುಗಳು ನಿನ್ನನ್ನು ಮಾನವರ ಮಧ್ಯದಲ್ಲಿ ಸ್ಥಾಪಿಸಿದ್ದಾರೆ" (೧–೫೮–೬)

"ದಾಂತಪ್ತಿದ ಪ್ರಾಣಿಯಂತೆ, ಅಗ್ನಿಯನ್ನು ಕಾಣದ ಭೃಗುಗಳು ತಮ್ಮ ಪ್ರಜ್ಞಾವಿಶೇಷದಿಂದ ಕೂಡಿದ ಭಕ್ತಿಯಿಂದಲೂ, ಪೂಜಾದಿಗಳಿಂದಲೂ ಪ್ರಾರ್ಥಿಸಿ ಹುಡುಕುತ್ತಾ, ಕೊನೆಯಲ್ಲಿ ನೀರಿನಲ್ಲಿ ಅಂತರ್ಗತನಾಗಿದ್ದ ಅಗ್ನಿ ಯನ್ನು ಕಂಡುಹಿಡಿದರು." (೧೦–೪೬–೨)

"ಯಜ್ಞಾರ್ಹನಾದ ಅಗ್ನಿಯನ್ನು ಮಾನವರಿಗೆ ಋತ್ವಿಗ್ರೂಪದಲ್ಲಿ ಕಾವ್ಯ ಉಶನಸ್ಸು ಎಂಬುವನು ಸ್ಥಾಪಿಸಿ ದನು ಎಂಬ ಪ್ರಖ್ಯಾತಿಯಿದೆ" (೮–೨೩–೧೬)

ಈ ರೀತಿಯಲ್ಲಿ ಅರಣಿಯಿಂದ ಅಗ್ನಿಯು ಉತ್ಪನ್ನನಾದೊಡನೆಯೇ ಆತ್ಯಾಶ್ಚಯವನ್ನು ವ್ಯಕ್ತಪಡಿಸುವ ಸನ್ನಿವೇಶಗಳೂ ಅನೇಕವಾಗಿವೆ ಉದಾಹರಣೆಗಾಗಿ,

"ಎಲೈ ಅಗ್ನಿಯೇ, ರಸರಹಿತವೂ, ಶುಷ್ಕವೂ, ನಿರ್ಜೀವಿಯೂ ಆದ ಅರಣಿಗಳಿಂದ ಚೈತನ್ಯಾತ್ಮಕನಾದ ನೀನು ಉತ್ಪನ್ನನಾದೊಡನೆಯೇ, ಯಜಮಾನರು ಭಕ್ತಿಯಿಂದ ನಿನ್ನನ್ನು ಪೂಜಿಸಿದರು." (೧–೬೮–೨)

ಇತ್ಯಾದಿಯಾದ ಪ್ರಶಂಸೆಯು ೩-೨೩-೨, ೩, ೭-೧-೧, ೧೦-೪೯-೧೫, ೧೦-೭-೫ ಇತ್ಯಾದಿ ನಾನಾ ಋಕ್ಕುಗಳಲ್ಲಿರುತ್ತದೆ ಈ ಆಶ್ಚರ್ಯದ ಜೊತೆಗೆ, ನೂತನವಾಗಿ ಉತ್ಪನ್ನವಾದ ಶಿಶುವಿನ ಮೇಲೆ ತೋರಿಸುವ ಪ್ರೇಮಾತಿಶಯವೂ ಸಹ ಪ್ರಕಟಿತವಾಗಿದೆ

" ಈ ಅಗ್ನಿಯು ಅರಣಿಗಳಿಂದ ಆಗತಾನೇ ಉತ್ಪನ್ನವಾದ ಶಿಶುವಿನಂತೆ ಜನಿಸಿದ್ದಾನೆ " (೫-೯-೩)

ಇವನು ಅರಣಿಗಳ ಪುತ್ರನೇ ಅಲ್ಲದೇ, ವನಸ್ಪತಿಗಳಿಗೆಲ್ಲಾ ಪುತ್ರರೂಪನಾಗಿದ್ದಾನೆ (**ಸೂನುಂ ವನಸ್ಪತೀನಾಂ** :—೮-೨೩-೨೫). ಶಿಶುರೂಪನಾದ ಈ ಅಗ್ನಿಯು ಅಲೌಕಿಕವೂ, ಅದ್ಭುತವೂ ಆದ ಕರ್ಮಗಳನ್ನು ಮಾಡುವುದೇ ಅತ್ಯಂತ ಆಶ್ಚರ್ಯಾವಹವಾದುದೂ ಸ್ತುತ್ಯವೂ ಆದ ಕಾರ್ಯವಾಗಿದೆ

" ಈ ಶಿಶುವು ಉತ್ಪನ್ನವಾದೊಡನೆಯೇ, ತನ್ನ ಅಲೌಕಿಕವಾದ ಪ್ರಭಾವದಿಂದ ತನ್ನ ಪಿತೃಗಳನ್ನೇ ನುಂಗುವ ಪ್ರಯತ್ನವನ್ನು ಮಾಡುತ್ತದೆ. ಈ ಅಸಾಧಾರಣವಾದ ಶಕ್ತಿಯು ಮಾನವನಾದ ಯಜಮಾನನ ಗ್ರಹಣಕ್ಕೆ ವಿಾರಿದುದು ಎಂದರೆ, ಅಗ್ನಿಯ ಶಕ್ತಿಯೆಷ್ಟೆಂದು ಮಾನವನಿಂದ ಅಳೆಯಲು ಸಾಧ್ಯವೇ ಇಲ್ಲ " (೧೦-೭೯-೪)

" ಅಗ್ನಿಯು ಉತ್ಪನ್ನನಾದೊಡನೆಯೇ, ನುಲುಚಿಕೊಂಡು ಓಡುವ ಸರ್ಪದಂತೆ ತೀವ್ರಗಮನವುಳ್ಳವನಾಗಿ ಮಾನವನ ಹಿಡಿತಕ್ಕೆ ಸಿಲುಕದೆ ತಪ್ಪಿಸಿಕೊಳ್ಳುತ್ತಾನೆ." (೧೦-೧೫೫-೧)

" ಆದರೆ, ಅವನ ಆಸ್ಯಕ್ಕೆ (ಬಾಯಿಯಲ್ಲಿ) ಘೃತಾದಿಗಳನ್ನರ್ಪಿಸಿ ಅವುಗಳಿಂದ ಯಜಮಾನರು ಅವನನ್ನು ಪೋಷಿಸುತ್ತಾರೆ " (೩-೨೧-೧)

" ಎಲೈ ಅಗ್ನಿಯೇ, ನೀನು ದೇವಹೋತೃವಾಗಿದ್ದೀಯೆ ನಮ್ಮಿಂದ ಆರ್ಪಿತವಾದ ಈ ಆಜ್ಯಾಹುತಿಗಳನ್ನು ಸ್ವೀಕರಿಸು." (೩-೨೧-೧, ೨, ೩) (೫-೧೪-೬, ೮-೩೯-೩, ೮-೪೩-೧೧, ೨೨, ೧೦-೬೯-೧, ೧೦-೧೧೮-೪, ಅ. ವೇ. ೧-೭-೨)

ಋ ಸಂ. ೩-೨೬-೭ ನೇ ಮಂತ್ರದಲ್ಲಿ ಅಗ್ನಿಯು ಘೃತವೇ ನನ್ನ ಕಣ್ಣು (**ಘೃತಂ ಮೇ ಚಕ್ಷುಃ**) ಎಂದು ಪ್ರಕಟಿಸುತ್ತಾನೆ.

ಅಗ್ನಿಯ ಸ್ವಾಭಾವಿಕ ಗುಣಗಳನ್ನು ವರ್ಣಿಸುವ ವಿಶೇಷಣಗಳು.

ಅಗ್ನಿಯ ವಿಶೇಷ ಗುಣಗಳನ್ನು ವರ್ಣಿಸುವ ವಿಶೇಷಣಗಳು ಅನೇಕವಿವೆ. ಆದರೆ ಅವುಗಳಲ್ಲಿ ಬಹಳವಾಗಿ ಅಗ್ನಿಯ ಭೌತಿಕಗುಣಗಳನ್ನು ವರ್ಣಿಸುವುದೇ ಆಗಿದೆ.

ಸರ್ಪಿರಾಸುತಿಃ ; ಘೃತಾನ್ನಃ । ಘೃತವೇ ಅನ್ನವಾಗಿ ಉಳ್ಳವನು. (೨-೭-೬ , ೭-೩-೧ , ೧೦-೬೯-೨)

ಘೃತನಿರ್ಣಿಕ್—ಘೃತವೇ ಸ್ವರೂಪವಾಗಿ ಉಳ್ಳವನು (೩-೧೭-೧ , ೩-೨೭-೫ ; ೧೦-೧೨೨-೨)

ಘೃತಕೇಶಃ—ಘೃತವೇ ಕೇಶರೂಪವಾಗಿ ಉಳ್ಳವನು (೭-೪೯-೨)

ಘೃತಪೃಷ್ಠಃ—ಘೃತವೇ ಪೃಷ್ಠಭಾಗವಾಗಿ ಉಳ್ಳವನು (೫ ೪-೩ , ೫-೩೭-೧ , ೭-೨-೪ , ೧೦-೧೨೨-೪)

ಘೃತಪ್ರತೀಕಃ—ಘೃತದಿಂದ ಮಿನುಗುಟ್ಟತಕ್ಕವನು. (೩-೧-೧೪ , ೫-೧೧-೧ , ೧೦-೨೧-೭)

ಘೃತಯೋನಿಃ—ಘೃತವೇ ಉತ್ಪತ್ತಿಸ್ಥಾನವಾಗಿ ಉಳ್ಳವನು. (೫-೮-೬, ೨-೩-೧೧)

ದ್ವನ್ನೆಃ—ಸಮಿದ್ರೂಪವಾದ ಕಾಷ್ಠಗಳೇ ಅನ್ನವಾಗಿ ಉಳ್ಳವನು. (೨-೭-೬)

ಧೂಮಕೇತು—ಧೂಮವೇ ಪ್ರಜ್ಞಾಪಕವಾದ ಸಂಜ್ಞೆಯುಳ್ಳವನು. (೧-೨೭-೧೧, ೧-೪೪-೩, ೧-೯೪-೧೦; ೫-೧೧-೩; ೮-೪೩-೪, ೮-೪೪-೫, ೧೦-೪-೫, ೧೦-೧೨-೨)

ಅಗ್ನಿಯು ಸ್ತಂಭದಂತಿರುವ ತನ್ನ ಧೂಮರೇಖೆಯನ್ನು ಆಂತರಿಕ್ಷಕ್ಕೆ ಕಳುಹುತ್ತಾನೆ. **ಮೇತೇವ ಧೂಮಂ ಸ್ತಭಾಯದುಪ ದ್ಯಾಂ**) (೪-೬-೨, ೭-೨೧, ೭-೩-೩, ೭-೧೬-೩)

ಅಗ್ನಿಯ ಧೂಮವು ಕಂಪನಾತ್ಮಕವಾಗಿದೆ ಅವನ ಜ್ವಾಲೆಯನ್ನು ಯಾರೂ ಹಿಡಿದು ತಮ್ಮ ವಶಮಾಡಿ ಕೊಳ್ಳುವಂತಿಲ್ಲ (**ಅಗೃಭೀತಶೋಚಿಷಂ**) (೮-೨೩-೧)

ಪಶುಗಳ ನೇಲೆಲ್ಲಾ ಪ್ರಭುತ್ವವನ್ನು ಮಾಡುವ ವೃಷಭದಂತೆ, ಅಗ್ನಿಯು ವಾಯುಪ್ರಚೋದಿತನಾಗಿ ವನಾಂತರಗಳಲ್ಲೆಲ್ಲಾ ನುಗ್ಗುತ್ತಾ ತನ್ನ ಶಕ್ತಿಯನ್ನು ಪ್ರಕಾಶಪಡಿಸುತ್ತಾನೆ (೧-೫೮-೪, ೫, ೧-೬೫-೮)

ಅಗ್ನಿಯು ಅಂಧಕಾರವನ್ನು ನಾಶಪಡಿಸತಕ್ಕವನು (**ತಮೋಹಾ**) ಪುತ್ತು ರಾತ್ರಿಯ ಕಗ್ಗತ್ತಲೆಯಲ್ಲೂ ನೋಡತಕ್ಕ ಶಕ್ತಿಯುಳ್ಳವನು (೧-೧೪೦-೧, ೧೯೪-೭)

ಕಗ್ಗತ್ತಲೆಯಲ್ಲಿ ಪೂರ್ಣವಾಗಿ ಆವೃತವಾಗಿದ್ದ ವೃಧ್ನಿಯೂ, ಆಂತರಿಕ್ಷಲೋಕಗಳೂ ಅಗ್ನಿಯ ಪ್ರಕಾಶನಾದೊಡನೆಯೇ ತಾವೂ ಪ್ರಕಾಶಕ್ಕೆ ಬಂದವು ಒಡನೆಯೇ ದೇವತೆಗಳೂ, ದ್ಯಾವಾಪೃಥಿವಿಗಳೂ, ಆಪ್ಸೂ, ಓಷಧಿಗಳೂ ಅವನ ಸಖಿತ್ವವನ್ನು ಹೊಂದಿ ತತ್ಫಲವಾದ ಸಂತೋಷವನ್ನು ಪಡೆದವು. (೧೦-೪೮-೨)

ಚಿತ್ರಭಾನುಃ, ಚಿತ್ರಶೋಚಿಃ ಇತ್ಯಾದಿ ವಿಶೇಷಣಗಳು ಅಗ್ನಿಯ ನಾನಾವಿಧವಾದ ತೇಜಸ್ಸಿನ ಸ್ವರೂಪವನ್ನೂ, ಜ್ವಾಲೆಯ ಮಹತ್ವವನ್ನೂ ತಿಳಿಸುತ್ತವೆ ಅವನ ಜ್ವಾಲೆಗಳು ಅಸಾಧಾರಣವಾದ ಪ್ರಭೆಯುಳ್ಳವು.

(೧-೨೭-೬, ೨-೧೦-೨, ೫-೨೬-೨, ೬-೧೦-೩, ೭-೯-೩, ೭ ೧೨-೧, ೮-೧೯-೨)

ಇದೇ ಗುಣವನ್ನೇ, **ಊರ್ಧ್ವಶೋಚಿಃ**—ಊರ್ಧ್ವಮುಖವುಳ್ಳ ಪ್ರಭೆಯುಳ್ಳವನು, **ಶುಕ್ರಶೋಚಿಃ**—ರುಚ್ರವಾದ ಜ್ವಾಲೆಯುಳ್ಳವನು, **ಪಾವಕಶೋಚಿಃ**—ಪವಿತ್ರವಾದ ಪ್ರಭೆಯುಳ್ಳವನು ಇತ್ಯಾದಿಯಾದ ಅನೇಕ ವಿಶೇಷಣಗಳು ವಿಶದವಾಗಿ ತಿಳಿಸುತ್ತವೆ (೬-೫-೨, ೭ ೧೫-೧೦, ೮-೨೩-೨೦, ೮.೪೩-೩೧, ೧ ೧೪೦-೧, ೫ ೨-೩)

ಪ್ರಭಾಯುತವಾದ ಅಗ್ನಿಯ ಜ್ವಾಲೆಗಳನ್ನು ವಿಸ್ತೃತವಾಗಿ ಹರಡಿದ ತಲೆಗೂದಲಿಗೆ ಹೋಲಿಸಿದೆ (**ಶೋಚಿಷ್ಕೇಶಃ**) (೧-೪೫-೬, ೩,೧೪-೧, ೩-೧೭-೧, ೩-೨೭-೪ ೫-೨ ೩, ೫-೪೧- ೦) ಆ ಜ್ವಾಲೆಗಳು ಹೊಂಬಣ್ಣದಿಂದ ಪ್ರಕಾಶಿಸುವುದರಿಂದ ಸುವರ್ಣನಿರ್ಮಿತವಾದುದೆಂದೂ, ಸುವರ್ಣದ ಪ್ರಭೆಯುಳ್ಳದ್ದೆಂದೂ ಅನೇಕ ವಿಧವಾಗಿ ವರ್ಣಿತವಾಗಿವೆ (**ಹಿರಣ್ಯರೂಪಂ ಜನಿತಾ ಜಜಾನ**) (೩.೨೧೩. ೪-೩೫-೧, ೧೦.೨೦-೯, ೫-೭೭). ಅಗ್ನಿಯ ಜ್ವಾಲೆಗಳೇ ಅವನ ಆಯುಧಗಳು ಜ್ವಾಲಾರೂಪವಾದ ಈ ಆಯುಧಗಳ ವರ್ಣನೆಯೂ ಅನೇಕವಿಧವಾಗಿವೆ ಅಗ್ನಿಯು ಹರಿತವಾದ ಆಯುಧಗಳನ್ನು ಧರಿಸಿದ್ದಾನೆ. (**ತಿಗ್ಮಹೇತಿಃ; ತಿಗ್ಮಭೃಷ್ಟಿಃ**) (೪-೪-೪, ೪-೫-೩)

ಹರಿತವಾದ ದಂತವುಳ್ಳವನು. **(ತಿಗ್ಮಜಂಭಃ)**; ದಹನಾತ್ಮಕವಾದ ದಂತವುಳ್ಳವನು. **(ತಪುರ್ಜಂಭಃ)** ಪ್ರಕಾಶಮಾನವಾದ ದಂತವುಳ್ಳವನು, ಸುವರ್ಣಾತ್ಮಕವಾದ ದಂತವುಳ್ಳವನು. ಅಯೋಮಯವಾದ ದಂತದಿಂದ ಕೂಡಿ ದಹನಾತ್ಮಕವಾದ ಕೆನ್ನೆಯನ್ನು ಹೊಂದಿದ್ದಾನೆ. (೧-೭೯-೭, ೧೧೪೩-೫, ೪-೫-೪, ೪೧೫-೫ : ೪-೧೯-೨೨ ೧-೫೪-೫, ೪-೨೩-೪ : ೫-೨-೩ : ೧೦-೪೭-೨, ೭-೪೯-೧೩, ೧೦-೭೯-೧).

ಇಂತಹ ವರ್ಣನೆಗಳ ಜೊತೆಯಲ್ಲಿ, ಅವನು ಪಾದರಹಿತನು ಮತ್ತು ಶಿರೋರಹಿತನು **(ಅಪಾದ್, ಅಶೀರ್ಷಾ)** ಇತ್ಯಾದಿ ಗುಣಪ್ರಕಾಶವೂ ಒಂದು **ವೈಶಿಷ್ಟ್ಯ**ವನ್ನು ತೋರಿಸುತ್ತದೆ. (೪-೧-೧೧)

ಆದರೆ, ಇದಕ್ಕೆ ವಿರುದ್ಧವಾಗಿ ಇನ್ನೊಂದುಕಡೆ ಇವನು ದಹನಾತ್ಮಕವಾದ ಶಿರಸ್ಸುಳ್ಳವನು ಎಂದೂ ತಿಳಿಸಿದೆ. **(ತಪುರ್ಮೂರ್ಧಾ)** (೭-೩-೧)

ಅಗ್ನಿಗೆ ಮೂರು ಶಿರಸ್ಸುಗಳೂ, ಸಪ್ತರಶ್ಮಿಗಳೂ ಇವೆ **(ತ್ರಿಮೂರ್ಧಾನಂ ಸಪ್ತರಶ್ಮಿಂ)**. ಅವನಿಗೆ ನಾಲ್ಕು ಕಣ್ಣುಗಳಿವೆ. **(ಚತುರಕ್ಷಃ)**; ಅವನು ಸಹಸ್ರಚಕ್ಷುಸ್ಸುಳ್ಳವನು **(ಸಹಸ್ರಾಕ್ಷಃ)**; ಸಹಸ್ರಕೊಂಬುಗಳುಳ್ಳವನು. **(ಸಹಸ್ರಶೃಂಗಃ)**. (೧-೧೪೬-೧, ೩-೫-೨ ೧-೩೧-೨ . ೧-೫೯-೧೨, ೫-೧-೮).

ಅಗ್ನಿಯು ಸ್ವರೂಪತಃ ಸುವರ್ಣಾತ್ಮಕನು ಮತ್ತು ಪ್ರಭಾಯುತನು. ಆದರೆ, ಅವನ ಸಂಚಾರಮಾರ್ಗವು ಕೃಷ್ಣವರ್ಣವುಳ್ಳದು, ಮತ್ತು ಅವನ ರಥಚಕ್ರವೂ ಸಹ ಕೃಷ್ಣವರ್ಣಾತ್ಮಕವು (೩-೪-೬ · ೬-೧೦-೪, ೭-೪-೨, ೪-೩೩-೧೯)

ಇವನು ವನವನ್ನೆಲ್ಲಾ ಆಕ್ರಮಿಸಿ, ಎಲ್ಲವನ್ನೂ ದಹಿಸಿ, ತನ್ನ ಜ್ವಾಲಾರೂಪದ ಜಿಹ್ವೆಯಿಂದ ಎಲ್ಲವನ್ನೂ ಕೃಷ್ಣವರ್ಣವುಳ್ಳದ್ದನ್ನಾಗಿ ಮಾಡುತ್ತಾನೆ. ಮತ್ತು ಸರ್ವಭಕ್ಷಕನೆಂದೂ ಪ್ರಖ್ಯಾತನಾಗಿದ್ದಾನೆ. (ವಿಶ್ವಾದ್) (೧-೧೪೩-೫, ೫-೪೧-೧೦, ೬-೬೦-೧೦, ೧೦-೭೯-೨, ೪-೪೪-೨೬)

ವಾಯುವಿನಿಂದ ಚೋದಿತನಾಗಿ ವನವನ್ನೆಲ್ಲಾ ವ್ಯಾಪಿಸಿ ಮುನ್ನುಗ್ಗುತ್ತಾ, ಪೃಥ್ವಿಯ ರೋಮರೂಪವಾದ ತೃಣಾದಿಗಳನ್ನೆಲ್ಲಾ ಛೇದಿಸಿ, ದಹಿಸಿ, ನಾಪಿತನು ಶ್ಮಶ್ರುವನ್ನು ಕತ್ತರಿಸಿ ನುಣುಪಾಗಿ ಮಾಡುವಂತೆ (೧೦-೧೪೨-೪) ಎಲ್ಲವನ್ನೂ ನುಣ್ಣಗೆ ಮಾಡುತ್ತಾನೆ **(ರೋಮಾ ಪೃಥಿವ್ಯಾಃ)** (೧-೬೫-೪-)

ಪ್ರಬಲಪರಾಕ್ರಮವುಳ್ಳ ಸೇನೆಯನ್ನು ಸ್ವತಂತ್ರವಾಗಿ ಬಿಟ್ಟರೆ ಅದರ ಆರ್ಭಟದಿಂದ ಶತ್ರುಜನಗಳಿಗೆ ಭೀತಿಯನ್ನು ಹುಟ್ಟಿಸುವಂತೆ ಅಗ್ನಿಯೂ ತನ್ನ ಪ್ರಬಲಶಕ್ತಿಯಿಂದ ಎಲ್ಲರಿಗೂ ಭಯಜನಕನಾಗಿದ್ದಾನೆ (೧-೬೬೮, ೧-೧೪೩-೫; ೧೦-೧೪೨-೪).

ಅವನ ಜ್ವಾಲೆಗಳು ಸಮುದ್ರದ ಅಲೆಗಳಂತೆ ಭೋರ್ಗರೆಯುತ್ತವೆ. ಮತ್ತು ಅವನು ಗುಡುಗಿನಂತೆ ಗರ್ಜಿಸುತ್ತಾನೆ. (೧-೪೪-೧೨, ೭-೩-೬, ೧೦-೪೫-೪). ಬಿರುಗಾಳಿಯಂತೆ ಶಬ್ದಮಾಡುತ್ತಲೂ, ಸಿಂಹದಂತೆ ಗರ್ಜಿಸುತ್ತಲೂ ಮುನ್ನುಗ್ಗುತ್ತಾನೆ. **(ನಾನದನ್ ನ ಸಿಂಹಃ)** (೩-೨-೧೧)

ಅಗ್ನಿಯು ಹೊಂಬಣ್ಣವುಳ್ಳವೂ, ವಾಯುಪ್ರಚೋದಿತವೂ ಆದ ಅಶ್ವಗಳನ್ನು ರಥಕ್ಕೆ ಕಟ್ಟಿಕೊಂಡು ಹೊರಟಾಗ ನೃಸಭದಂತೆ ಗುಟುರುಹಾಕುತ್ತಾನೆ. ತನ್ನ ಜ್ವಾಲೆಗಳೊಡನೆ ಮುನ್ನುಗ್ಗಿ ವನವನ್ನೆಲ್ಲಾ ವ್ಯಾಪಿಸುವಾಗ ತೃಣಾದಿ ಗಳನ್ನೆಲ್ಲಾ ದಹಿಸುತ್ತಾನೆ. ಆ ಕಾಲದಲ್ಲಿ ಕಿಡಿಗಳು ಶಬ್ದಮಾಡುತ್ತಾ ಎಲ್ಲೆಲ್ಲಾ ವ್ಯಾಪಿಸುತ್ತವೆ ಈ ಕಿಡಿಗಳ ಶಬ್ದದಿಂದ ಆ ವನದಲ್ಲಿರುವ ಪಕ್ಷಿಗಳೆಲ್ಲವೂ ಭೀತಿಗೊಳ್ಳುತ್ತವೆ. (೧-೯೪-೧೦)

ಶಬ್ದಮಾಡುತ್ತಾ ಮುನ್ನುಗ್ಗುವ ಬಿರುಗಾಳಿಯಂತೆಯೂ, ಆರ್ಭಟಿಸುವ ಸಿಡಿಲಿನಂತೆಯೂ ಅಗ್ನಿಯು ಅಪ್ರತಿಹತವಾದುದೂ ಸರ್ವವ್ಯಾಪಕವಾದುದೂ ಆದ ಶಕ್ತಿಯನ್ನು ಹೊಂದಿದ್ದಾನೆ. (೧-೧೪೩-೫)

ಅವನು ನಾನಾವಿಧವಾದ ರೂಪಪ್ರಭೇದಗಳನ್ನು ಹೊಂದುತ್ತಾ, ಸೂರ್ಯನಂತೆ ಪ್ರಕಾಶಿಸುತ್ತಾನೆ. (೭-೩-೬)

ಅವನ ತೇಜಸ್ಸು ಸೂರ್ಯರಶ್ಮಿಗಳಂತೆಯೂ, ಉಷಸ್ಸಿನ ಕಿರಣಗಳಂತೆಯೂ ಆಕರ್ಷಕವೂ ಪ್ರಕಾಶಮಾನವೂ ಆಗಿವೆ. (೧೦-೯೧-೪)

ಅಲ್ಲದೆ, ವಿದ್ಯುದ್ರೂಪವಾದ ರಥದಲ್ಲಿಯೇ ಸಂಚಾರಮಾಡುತ್ತಾನೆ. (೩-೧೪-೧)

ಅವನ ರಥವು ಪ್ರಭಾಯುತವೂ, ಹಿರಣ್ಮಯವಾದುದೂ, ಆಕರ್ಷಕವಾದುದೂ ಆಗಿದೆ (೧-೧೪೦-೧ : ೧-೧೪೧-೧೨, ೩-೫-೩, ೫-೧-೧೧, ೧೦-೧-೫, ೪-೧-೮, ೩-೩-೯, ೪-೨-೪)

ಅವನ ರಥವನ್ನು ಎಳೆಯತಕ್ಕ ಅಶ್ವಗಳು ಇನ್ನೂ ಆಕರ್ಷಕವಾಗಿವೆ. ಅವು ಘೃತಪೃಷ್ಠವುಳ್ಳವಾಗಿಯೂ, ವಾಯುಪ್ರಚೋದಿತವಾಗಿಯೂ (**ವಾತೇಜೂತಾಃ**), ಹೊಂಬಣ್ಣವುಳ್ಳವಾಗಿಯೂ (**ರೋಹಿತಾಃ**), ಕ್ರಿಯಾಶಕ್ತಿಯುಳ್ಳವಾಗಿಯೂ (**ಜೇರಾಶ್ವಾಃ**), ನಾನಾರೂಪಗಳನ್ನು ಧರಿಸುವುಗಳಾಗಿಯೂ (**ವಿಶ್ವರೂಪಾಃ**), ಮನಃಸಂಕಲ್ಪದಿಂದಲೇ ರಥಕ್ಕೆ ಯೋಜಿತಗಳಾಗುವುವಾಗಿಯೂ (**ಮನೋಯುಜಃ**) ಆಗಿವೆ ಇದಲ್ಲದೇ, ಇನ್ನೂ ಇತರ ಅನೇಕ ವಿಶೇಷಣಗಳಿಂದಲೂ ವರ್ಣಿತವಾಗಿವೆ. (೧-೧೪-೬, ೧-೪೫-೨, ೧-೬೪-೧೦, ೧-೧೪೧ ೧೨, ೨-೪-೨, ೨-೧೦-೨, ೪-೧-೪, ೪-೨-೨, ೪, ೪-೬-೯, ೬-೧೬-೪೩, ೭-೧೬-೨, ೮-೪೩-೧೬, ೧೦-೭-೪, ೧೦-೭೦-೨)

ಇಂತಹ ಅಸಾಧಾರಣವಾದ ರೂಪವೂ, ಪ್ರಭಾವವೂ ಉಳ್ಳ ಅಶ್ವಗಳನ್ನು ಅಗ್ನಿಯು ದೇವತೆಗಳನ್ನು ಯಜ್ಞಕ್ಕೆ ಕರೆತರುವುದಕ್ಕಾಗಿ ತನ್ನ ರಥಕ್ಕೆ ಯೋಜಿಸುತ್ತಾನೆ (೧-೧೪-೧೨, ೩-೬-೬, ೪-೬೪-೧)

ಅಗ್ನಿಯ ದಿವ್ಯಕರ್ಮಗಳು.

ಅಗ್ನಿಯ ಕರ್ಮಗಳು ಅತ್ಯಂತ ಪೂಜ್ಯವಾದವೆಂದೂ, ಪ್ರಭಾವಪೂರಿತವಾದವೆಂದೂ ಪ್ರಶಂಸಿತವಾಗಿವೆ. ಇಂದ್ರನಂತೆ ಪ್ರಭಾವಯುತನಾದ ಈ ಅಗ್ನಿಯು ದಿವ್ಯಲೋಕವಾಸಿಗಳೆಲ್ಲಾ ಪ್ರಭುವೆಂದು ಪ್ರಶಂಸಿತನಾಗಿದ್ದಾನೆ. (**ಸಮ್ರಾಜೋ ಅಸುರಸ್ಯ**) (೭-೬-೧)

ಮೇಲೆ ಉದಾಹೃತವಾದ ಕೆಲವು ಸನ್ನಿವೇಶಗಳಲ್ಲಿ, ಅವನು ದ್ಯಾವಾಪೃಥಿವಿಗಳಿಂದ ಉತ್ಪನ್ನನಾದವನೆಂದು ವರ್ಣಿತವಾಗಿದ್ದರೂ, ಬೇರೆ ಕಡೆಗಳಲ್ಲಿ ಆ ದ್ಯಾವಾಪೃಥಿವಿಗಳು, ವಿಸ್ತೃತವಾಗಿ ಪ್ರಸರಿಸಲು ಅಗ್ನಿಯೇ ಕಾರಣವೆಂದೂ, ಅವನ ಶಕ್ತಿಯಿಂದಲೇ ಅವು ಸ್ಥಿರವಾಗಿ ನಿಂತಿವೆಯೆಂದೂ ತಿಳಿಸಿದೆ. ಅಲ್ಲದೇ, ಅವುಗಳ ಸೃಷ್ಟಿಗೂ ಅವನೇ

ಕಾರಣನೆಂದೂ, ಸತ್ಯಾತ್ಮಕವಾದ ಮಂತ್ರಗಳಿಂದ ಅವುಗಳನ್ನು ಧರಿಸಿ ರಕ್ಷಿಸುವನೆಂದೂ ವಿವರಿಸಿದೆ. (೩-೬ ೫, ೬-೫೫-೪, ೬-೮೮-೩, ೧-೯೬-೪, ೬-೫೫-೬, ೧-೬೭-೩).

ಅಗ್ನಿಯ ಜ್ವಾಲೆಗಳು ದ್ಯಾವಾಪೃಥಿವಿಗಳನ್ನು ಬೇರೆಬೇರೆ ಮಾಡಿ ಪ್ರತ್ಯೇಕವಾಗಿರಿಸಿವೆ ಅಂತರಿಕ್ಷದ ತೇಜೋರಾಶಿಗಳ ಸ್ಥಿತಿಗೂ, ಪಾರ್ಥಿವಪ್ರದೇಶಗಳ ರಕ್ಷಣೆಗೂ ಅಗ್ನಿಯ ಪ್ರಭಾವವೇ ಕಾರಣವಾಗಿದೆ (೬ ೮-೩, ೬-೭-೭, ೬-೮-೨).

ಅಗ್ನಿಯಿಂದ ಮಿತ್ರನು ಉತ್ಪನ್ನನಾದನು. ಕ್ಷಯರಹಿತವಾದ ತೇಜೋಮಂಡಲವುಳ್ಳ ಸೂರ್ಯನು ಅಂತರಿಕ್ಷವನ್ನು ಹತ್ತಲು ಅಗ್ನಿಯೇ ಕಾರಣನು. ಪೃಥಿವಿಯ ಮೇಲೆ ಸಂಚರಿಸುವುದೂ, ಅಂತರಿಕ್ಷದಲ್ಲಿ ಹಾರುವುದೂ, ಜಲಚರವಾಗಿರುವುದೂ, ಜಂಗಮವೂ, ಸ್ಥಾವರವೂ ಆದ ಸಕಲ ಭೂತಗಳನ್ನೂ ಅವನೇ ಸೃಷ್ಟಿಸಿದನು. ೧೦-೮-೪, ೧೦-೧೫೬-೪, ೧೦-೮೮-೪)

[ಈ ಕೊನೆಯ (೧೦-೮೮-೪) ವಾಕ್ಯಕ್ಕೆ ಕೊಂಚ ವಿವರಣೆಯನ್ನು ಹೇಳುವುದು ಅವಶ್ಯವಾಗಿರುತ್ತದೆ,

ಸ ಪತತ್ರೀತ್ಪರಂ ಸ್ಥಾ ಜಗದ್ಯಚ್ಚಾವ್ರತ್ರಮಗ್ನಿರಕೃಣೋಜ್ಜಾತವೇದಾಃ ।

(೧೦-೮೮-೪).

ಈ ವಾಕ್ಯವನ್ನು ನಿರುಕ್ತಕಾರರು ಉದಾಹರಿಸಿದ್ದಾರೆ. (ನಿ. ೫-೩). ದುರ್ಗಾಚಾರ್ಯರು ಈ ಸಂದರ್ಭವನ್ನು ವಿವರಿಸುತ್ತಾ, ಇಲ್ಲಿ ನಿರ್ದಿಷ್ಟವಾಗಿರುವ ಸಕಲಭೂತಗಳನ್ನೂ ಅಗ್ನಿಯು ಪ್ರಳಯಕಾಲದಲ್ಲಿ ತನ್ನಲ್ಲೇ ಲಯವನ್ನು ಹೊಂದುವಂತೆ ಮಾಡಿಕೊಳ್ಳುತ್ತಾನೆಂದು ತಾತ್ಪರ್ಯವೆಂದು ತಿಳಿಸಿದ್ದಾರೆ. ಇದೇ ಸೂಕ್ತದ ಮುಂದಿನ ಮಂತಗಳೂ ಈ ವಿವರಣೆಗೆ ಆಧಾರವಾಗಿರುತ್ತವೆ.

"ತಸ್ಮಿನ್ನಗ್ನೌ ಸೂಕ್ತವಾಕೇನ ದೇವಾ ಹವಿರ್ವಿಶ್ವ ಆಜುಹವುಸ್ತನೂಪಾಃ ।"

(೧೦-೮೮-೭)

ಎಂಬ ಮುಂದಿನ ಮಂತ್ರದಲ್ಲಿ, ಸಕಲ ದೇವತೆಗಳು ಸಹ **'ಇದಂ ದ್ಯಾವಾಪೃಥಿವೀ'** ಇತ್ಯಾದಿ ಸ್ತುತಿವಾಕ್ಯಗಳೊಡನೆ ಅಗ್ನಿಯಲ್ಲಿ ಹವಿಸ್ಸನ್ನು ಹಿರಿಸಿದರು ಎಂದಿದೆ. ಆದರೆ, ಆ ಹವಿಸ್ಸಿನ ಸ್ವರೂಪವೇನು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

"ಯಂ ದೇವಾಸೋಽಜನಯಂತಾಗ್ನಿಂ ಯಸ್ಮಿನ್ನಾಜುಹವುರ್ಭುವನಾನಿ ವಿಶ್ವಾ ।
ಸೋ ಅರ್ಚಿಷಾ ಪೃಥಿವೀಂ ದ್ಯಾಮುತೇಮಾಮೃಜೂಯಮಾನೋ ಅತಪನ್ಮಹಿತ್ವಾ ॥"

(೧೦-೮೮-೯)

ದೇವತೆಗಳು ಯಾವ ಅಗ್ನಿಯನ್ನು ನಿರ್ಮಿಸಿದರೋ, ಯಾವ ಅಗ್ನಿಯಲ್ಲಿ ಸಕಲ ವಿಶ್ವವನ್ನೂ ಆಹುತಿರೂಪದಲ್ಲಿ ಅರ್ಪಿಸಿದರೋ, ಆ ಅಗ್ನಿಯು ತನ್ನ ದಿವ್ಯತೇಜಸ್ಸಿನಿಂದ ಸಕಲ ದ್ಯಾವಾಪೃಥಿವಿಗಳನ್ನೂ, ತದಂತರ್ಗತವಾದ ಸಮಸ್ತ ಭೂತಜಾತಗಳನ್ನೂ ತನ್ನ ಮಹತ್ವದಿಂದ ದಗ್ಧಮಾಡಿದನು, ಎಂದು ವಿವರಿಸಿದೆ.

ಆದುದರಿಂದ ದುರ್ಗಾಚಾರ್ಯರು ಹೇಳಿರುವ ವಿವರಣೆಗೆ ಈ ಮಂತ್ರಗಳು ಆಧಾರಭೂತವಾಗಿವೆ ಆದರೆ, ನಿರುಕ್ತಕಾರರು ಮಾತ್ರ **ಅಗ್ನಿರಕೃಣೋತ್** (೧೦ ೮೮-೪) ಎಂಬುದಕ್ಕೆ **'ಅಗ್ನಿರಕರೋಜ್ಜಾತವೇದಾಃ'** ಎಂದರ್ಥ ಮಾಡಿದ್ದಾರೆ.]

ಅಂತರಿಕ್ಷನೆಲ್ಲಾ ನಕ್ಷತ್ರರೂಪವಾದ ತೇಜೋರಾಶಿಗಳನ್ನು ಹೊಂದಿರಲು ಅಗ್ನಿಯೇ ಕಾರಣನು.
(೧-೬೮-೫)

ಇದೇ ಅಗ್ನಿಯು ಅಂತರಿಕ್ಷಕ್ಕೆ ಶಿರೋರೂಪನು ಮತ್ತು ಶಿಖರಪ್ರಾಯನು. ಪೃಥ್ವಿಯ ನಾಭಿರೂಪನು.
(೧-೫೯-೨, ೬-೭-೧, ೮-೪೪-೧, ೧೦-೮೮-೫).

ಸ್ತಂಭದಂತೆ ಊರ್ಧ್ವಮುಖನಾಗಿದ್ದಾನೆ. ಮತ್ತು ಅವನ ಮಹತ್ವವು ದ್ಯಾವಾಪೃಥಿವಿಗಳೆಲ್ಲದರ ಮಹತ್ವವನ್ನೂ ವಿಾರಿಸುತ್ತದೆ. (೪-೫-೧, ೧-೫೯-೫, ೩-೩-೧೦)

ಈ ಅಗ್ನಿಯ ಮಹತ್ಕರ್ಮಗಳನ್ನು ನೋಡಿ ಮಾನವರೆಲ್ಲರೂ ಗಾಬರಿಗೊಳ್ಳುತ್ತಾರೆ. ಅವನ ನಿಯಮಗಳೂ, ರಚನೆಗಳೂ ಯಾರಿಂದಲೂ ಉಲ್ಲಂಘಿಸಲಾಗುವುದಿಲ್ಲ (೫-೪-೩, ೫-೯-೧, ವಾ. ಸಂ. ೧೧-೩೬, ೬-೭-೫, ೪-೪೪-೫೫, ೪-೯೨-೩).

ದ್ಯಾವಾಪೃಥಿವಿಗಳೂ, ಭೂತಭವಿಷ್ಯದ್ವರ್ತಿಗಳಾದ ಸಕಲ ಭೂತಗಳೂ ಈ ಅಗ್ನಿಯ ಆಜ್ಞೆಯನ್ನೇ ಪಾಲಿಸುತ್ತವೆ. (೭-೫-೪, ಅ. ವೇ. ೪-೩೩-೭)

ದೇವತೆಗಳಿಗಾಗಿ ಈ ಅಗ್ನಿಯು ಸಮಸ್ತ ಸಂಪತ್ತನ್ನೂ, ಸಕಲ ಪ್ರದೇಶಗಳನ್ನೂ ಯುದ್ಧದಲ್ಲಿ ಜಯಿಸಿ ಕೊಟ್ಟನು. ಮತ್ತು ಅವರನ್ನೆಲ್ಲಾ ಆಪತ್ತಿನಿಂದ ರಕ್ಷಿಸಿದನು (ಸಹಸ್ರಜಿತ್ ೧-೧೪೮-೧) (೧-೫೯-೫, ೭-೧೩-೨)

ಈ ಅಗ್ನಿಯು ಕತ್ತಲೆಯಲ್ಲಿ ಮರೆಸಿಕೊಂಡಾಗ ಎಲ್ಲಾ ದೇವತೆಗಳೂ ಬೆದರಿ ಇವನಿಗೆ ಪೂಜೆಯನ್ನರ್ಪಿಸುತ್ತಾರೆ. (೬-೯-೭)

ವರುಣ, ಮಿತ್ರ, ಮರುತ್ತುಗಳು ಮತ್ತು ಮೂರುಸಾವಿರದ ಮುನ್ನೂರ ಮುವ್ವತ್ತ ಒಂಭತ್ತುಮಂದಿ ದೇವತೆಗಳೂ ಇವನಿಗೆ ಪೂಜೆಯನ್ನರ್ಪಿಸುತ್ತಾರೆ. (೩-೯-೯, ೩-೧ -೪, ೧೦-೬೯-೯)

ಈ ಅಗ್ನಿಯ ಪ್ರಭಾವದಿಂದಲೇ ವರುಣ, ಮಿತ್ರ ಮತ್ತು ಅರ್ಯಮಾದಿಗಳು ಜಯವನ್ನು ಹೊಂದುತ್ತಾರೆ.
(೧-೧೪೧-೯)

ಇವನು ಸಕಲ ಜಗತ್ತನ್ನೂ ವೀಕ್ಷಿಸಲೂ ಮತ್ತು ಅವುಗಳ ಮರ್ಮವನ್ನು ತಿಳಿಯಲೂ ಶಕ್ತನಾಗಿದ್ದಾನೆ.
(೩-೫೪-೧೦, ೧೦-೧೨೭-೪)

ಅಂತರಿಕ್ಷದ ಸೀಮಾಪ್ರದೇಶಗಳನ್ನೂ. ದೇವಮಾನವಾದಿಗಳ ಉತ್ಪತ್ತಿಕ್ರಮಗಳನ್ನೂ ದೇವತೆಗಳ ನಿಯಮಗಳನ್ನೂ ಅರಿತಿದ್ದಾನೆ (೧-೭೦-೧, ೩, ೩-೪-೧೧, ೬-೧೫-೧೩)

ಅವನು ದಿವ್ಯಸ್ವರೂಪನಾದುದರಿಂದಲೇ, ಮಾನವರ ಕರ್ಮರಹಸ್ಯಗಳನ್ನರಿತು ಅವನನ್ನುದ್ದೇಶಿಸಿ ಹರಿಸಿದ ಸಕಲ ಸ್ತುತಿಗಳನ್ನೂ ತಿಳಿದು ಅವರಿಗೆ ಒಲಿಯುತ್ತಾನೆ. (೪-೩೯-೬, ೪-೪೩-೩೩, ೬-೭-೫, ೫-೧೨-೧, ೫-೧೫-೧, ೭-೨-೩, ೭೬-೧).

ಅಗ್ನಿಯು ತನ್ನ ಭಕ್ತರಲ್ಲಿಟ್ಟಿರುವ ಸಾಕ್ಷಾತ್ಸಂಬಂಧ.

ಅಗ್ನಿಯ ಉಪಾಸಕರು ಸಕಲ ವಿಧವಾದ ಅಭ್ಯುದಯವನ್ನೂ, ಸಂಪತ್ತನ್ನೂ ಪಡೆಯುತ್ತಾರೆ. ಮತ್ತು ದೀರ್ಘಾಯುಗಳಾಗಿರುತ್ತಾರೆ. ಯಶಸ್ಸಿನಿಂದ ಪ್ರಖ್ಯಾತರಾಗಿ ಪ್ರಕಾಶಿಸುತ್ತಾರೆ. **(ರಾಯೋ ದ್ಯುಮ್ನೇನ ಶ್ರವಸಾ ವಿಭಾತಿ).** (೬-೨-೪, ೫, ೬-೫-೫, ೬-೧೦-೩, ೬-೧೩-೪, ೬-೧೫-೧೧, ೭-೧೧-೨, ೮-೧೯-೫, ೬, ೮-೪೪-೧೫, ೮-೭೩-೯)

ಯಾವ ಯಜಮಾನನು ಅಶ್ವಗಳೊಡನೆಯೂ, ಸುವರ್ಣಾದಿ ಸಂಪತ್ತುಗಳಿಂದ ಕೂಡಿದ ರಥಗಳೊಡನೆಯೂ ಕೂಡಿ ಅತಿಧಿರೂಪನಾದ ಅಗ್ನಿಗೆ ಅವುಗಳೆಲ್ಲವನ್ನೂ ಅಗ್ನಿಯ ಅನುಗ್ರಹವೆಂದು ತಿಳದು ಅಗ್ನಿಯನ್ನು ಪೂಜಿಸುವನೋ ಅಂತಹ ಯಜಮಾನನಿಗೆ ಅಗ್ನಿಯು ಸಖನು. ಮತ್ತು ಅವನ ಆಪತ್ತುಗಳನ್ನೆಲ್ಲಾ ಪರಿಹರಿಸುತ್ತಾನೆ. (೪-೪-೧೦)

ಸಮಿಧಾದಿ ಯಜ್ಞಸಾಧನಗಳನ್ನಾರಿಸಲು ಯಾವನು ರಾತ್ರಿಹಗಲು ದುಡಿದು ಅಗ್ನಿಯ ಪೂಜೆಯನ್ನು ಮಾಡಲು ಶ್ರಮಿಸುವನೋ, ಅವನಿಗೆ ಅಗ್ನಿಯು ಸಕಲ ರಕ್ಷಣೆಗಳನ್ನೂ ಒದಗಿಸುತ್ತಾನೆ. (೪-೩-೬)

ಹವಿರಾದ್ಯನ್ನಗಳಿಂದ ಯಾವ ಯಜಮಾನನು ಅಗ್ನಿಯನ್ನು ಪೋಷಿಸಿ ಬೆಳೆಸುವನೋ ಅಂತಹ ಯಜಮಾನನನ್ನು ಅಗ್ನಿಯು ತನ್ನ ಸಹಸ್ರ ಚಕ್ಷುಸ್ಸುಗಳಿಂದಲೂ ನೋಡಿಕೊಂಡು ರಕ್ಷಿಸುವನು. (೧೦-೭೯-೫)

ಯಾವ ಭಕ್ತನು ತನ್ನ ಸೇವಾರೂಪವಾದ ಪೂಜೆಯಿಂದ ಅಗ್ನಿಯನ್ನು ಸತ್ಕರಿಸುವನೋ ಅಂತಹ ಯಜಮಾನನಿಗೆ ಸತ್ಪುತ್ರನನ್ನು ದಯಪಾಲಿಸುತ್ತಾನೆ. ಆ ಪುತ್ರನು ತನ್ನ ತಂದೆಗೆ ಯಶಸ್ಸನ್ನುಂಟುಮಾಡುತ್ತಾನೆ. (೪-೨೫-೫)

ಅಗ್ನಿಯಿಂದ ರಕ್ಷಿತನಾಗತಕ್ಕವನೂ, ಉತ್ತೇಜಿತನಾಗತಕ್ಕವನೂ ಆದ ಪುರುಷನು ಯುದ್ಧದಲ್ಲಿ ಪ್ರಭೂತವಾದ ಅನ್ನವನ್ನು ಪಡೆಯುತ್ತಾನೆ. ಮತ್ತು ಇವನಿಗೆ ಪರಾಜಯವೆಂಬುದೇ ಇರುವುದಿಲ್ಲ.
(೧-೨೭.೭, ಸಾ ವೇ. ೨-೭೬೫)

ಅಗ್ನಿಯನ್ನುದ್ವೇಷಿಸಿ ಯಜ್ಞಮಾಡಿ ಅಗ್ನಿಯನ್ನು ಪೂಜಿಸುವ ಯಜಮಾನನಿಗೆ ಶತ್ರುಬಾಧೆಯೆಂಬುದೇ ಇರುವುದಿಲ್ಲ. ಅಂತಹ ಶತ್ರುವು ಎಷ್ಟು ಪ್ರಬಲನಾಗಿದ್ದರೂ ಮತ್ತು ಎಂತಹ ಮಾಯಾಶಕ್ತಿಯನ್ನು ಹೊಂದಿದ್ದರೂ ಸಹ ಈ ಯಜಮಾನನೊಂದಿಗೆ ಹೋರಾಡಿ ಸೋಲಿಸಲು ಸಾಧ್ಯವಾಗುವುದಿಲ್ಲ (೪-೩೩-೧೫)

ಕೇವಲ ದೈಹಿಕ ಶಕ್ತಿಯನ್ನು ಮಾತ್ರವಲ್ಲದೇ, ಯಜಮಾನನಿಗೆ ಆಯುಃಶಕ್ತಿಯನ್ನೂ ಕೊಡುತ್ತಾನೆ. ಯಜಮಾನನಿಗೆ ಅಮರ್ತ್ಯತ್ವವನ್ನನುಗ್ರಹಿಸುತ್ತಾನೆ (೧-೩೧-೭, ೭-೭-೭, ೭ ೪-೬)

ದೇವತೆಗಳೆಲ್ಲರೂ ಸೇರಿ ಅಗ್ನಿಯನ್ನೇ ಅಮರ್ತ್ಯತ್ವಕ್ಕೆ ಕೇಂದ್ರನನ್ನಾಗಿ ಮಾಡಿದರು. **(ಅಮೃತಸ್ಯ ನಾಭಿಃ)**
(೩-೧೭-೪)

ಈ ವಿಶೇಷಗುಣಗಳಿರುವುದರಿಂದಲೇ ಅವನ ಭಕ್ತರು ಅವನನ್ನು ಸಂತುಷ್ಟವಾದ ಹೃದಯದಿಂದ ಅರಸುತ್ತಾರೆ.
(೮-೪೩-೩೧)

ಮೃತನ ದೇಹವನ್ನು ಪೂರ್ಣವಾಗಿ ದಹಿಸಿ ಮೃತನ ಆತ್ಮನನ್ನು ಸಜ್ಜನರ ಲೋಕಕ್ಕೆ ಕರೆದೊಯ್ಯಬೇಕೆಂದು ಅಗ್ನಿಯು ಪ್ರಾರ್ಥಿತನಾಗಿದ್ದಾನೆ. (೧೦-೧೬-೪)

ಇಲ್ಲಿ ಉದಾಹೃತವಾಗಿರುವ ೧೦-೧೬-೪ ನೇ ಮಂತ್ರದಲ್ಲಿ ಸಂಶಯಾಸ್ಪದವಾದ ಒಂದಂಶವಿದೆ ಅದೇನೆಂದರೆ,

ಅಜೋ ಭಾಗಸ್ತಪಸಾ ತಂ ತಪಸ್ವ ತಂ ತೇ ಶೋಚಿಸ್ತಪತು ತಂ ತೇ ಅರ್ಚಿಃ ।
ಯಾಸ್ತೇ ಶಿವಾಸ್ತನ್ವೋ ಜಾತವೇದಸ್ತಾಭಿರ್ವಹೈನಂ ಸುಕೃತಾಸು ಲೋಕಂ ।

ಎಂಬ ಈ ಮಂತ್ರದಲ್ಲಿ **ಅಜ** ಶಬ್ದಕ್ಕೆ ಸಾಯಣರು ಜನ್ಮರಹಿತವಾದ ಪುರುಷರೂಪವೆಂದರ್ಥಮಾಡಿದ್ದಾರೆ. ಎಂದರೆ, ಆತ್ಮನೆಂದಾಯಿತು. ಈ ಆತ್ಮನನ್ನು ಪೂರ್ಣವಾಗಿ ಶುದ್ಧಿಗೊಳಿಸಿ ಸುಕೃತಿಗಳ ಲೋಕಕ್ಕೆ ಕರೆದೊಯ್ಯಿ ಎಂದು ಪ್ರಾರ್ಥಿಸಿದೆಯೆಂದು ವಿವರಿಸಿದೆ

ಕೆಲವು ಪಂಡಿತರ ಮತದಲ್ಲಿ, **ಅಜ** ಶಬ್ದಕ್ಕೆ ಯಜ್ಞಪಶುವಾದ ಆಡು ಎಂದು ತಿಳಿಸಿದೆ ಆಹುತಿಗಾಗಿ ಅರ್ಪಿತವಾದ ಅಜವು ಅಗ್ನಿಗೆ ಸೇರತಕ್ಕದ್ದು ಅಂತಹ ಅಜವನ್ನು ಪೂರ್ಣವಾಗಿ ಪಕ್ವವಾಗುವಂತೆ ದಹಿಸಿ ಅದರ ಆತ್ಮನನ್ನು ಸುಕೃತಿಗಳ ಲೋಕಕ್ಕೆ ಕರೆದುಕೊಂಡು ಹೋಗು ಎಂದು ಪ್ರಾರ್ಥಿಸಿದೆಯೆಂದು ತಿಳಿಸಿದೆ ಈ ವಿವರಣೆಯಲ್ಲಿ ತಾವು ಸ್ವಾತಂತ್ರ್ಯವನ್ನು ವಹಿಸಿದೆಯೆಂದೂ ತಮ್ಮ ವಿವರಣೆಗೆ ಸಾಹಾಯಕವಾಗಿರುವ ಆಶ್ವಲಾಯನಗೃಹ್ಯ ಸೂತ್ರವನ್ನೂ (೪-೨-೪, ೪-೩-೨೦,) ಕಾತ್ಯಾಯನ ಶ್ರೌತಸೂತ್ರವನ್ನೂ (೨೫-೭-೩೪) ಉದಾಹರಿಸಿ ತಮ್ಮ ಅರ್ಥವನ್ನು ಸಮರ್ಥಿಸಿರುವರೆಂದೂ ತಿಳಿಸಿದ್ದಾರೆ.

ಆದರೆ ಪ್ರಕೃತವಾದ ಮಂತ್ರವನ್ನು ಇದೇ ಸೂಕ್ತದ ಬೇರೆ ಮಂತ್ರಗಳೊಡನೆ ಪರಿಶೀಲಿಸಿದರೆ, ಇಲ್ಲಿ **ಅಜ** ಶಬ್ದಕ್ಕೆ ಯಜ್ಞಪಶುವೆಂದು ಹೇಳಲು ಸಾಧ್ಯವಾಗಲಾರದು. ಇದರ ಹಿಂದಿನ ೧ ಮತ್ತು ೨ನೇ ಮಂತ್ರಗಳಲ್ಲಿ ಮೃತನ ದೇಹವನ್ನು ಸುಡುವಾಗ ಅವನ ದೇಹದ ದಹನಕಾಲದಲ್ಲಿ ಯಾವ ಸಂಸ್ಕೃತಿಯನ್ನುಂಟುಮಾಡಬೇಕೋ ಅದನ್ನು ಮಾಡಲು ಅಗ್ನಿಯನ್ನು ಪ್ರಾರ್ಥಿಸಿದೆ. ಮೂರನೆಯ ಮಂತ್ರಗಳಲ್ಲಿ ದೇಹದ ಪಂಚಭೂತಾತ್ಮಕವಾದ ಎಲ್ಲಾ ಭಾಗಗಳೂ ಆಯಾ ಮೂಲಭೂತಗಳೊಂದಿಗೆ ಹೋಗಿ ಸೇರಲೆಂದು ಆಶಂಸಿಸಿದೆ **(ಸೂರ್ಯಂ ಚಕ್ಷುರ್ಗಚ್ಛತು ವಾತ-ಮಾತ್ಮಾ** ।). ಪ್ರಕೃತವಾವ ಎಂದರೆ, ಇಲ್ಲಿ ಉದಾಹೃತವಾದ ನಾಲ್ಕನೆಯ ಮಂತ್ರದಲ್ಲಿ ಮೃತನ **ಅಜ**ವಾದ ಆತ್ಮವು ಸುಕೃತಿಗಳ ಲೋಕವನ್ನು ಸೇರಲೆಂದು ಆಶಿಸಿದೆ. ಆದುದರಿಂದ ಇಲ್ಲಿ **ಅಜ** ಶಬ್ದಕ್ಕೆ ಯಜ್ಞಪಶುವೆಂದರ್ಥ ಮಾಡುವುದು ಅಷ್ಟು ಉಚಿತವಾಗಲಾರದು ಇದೇ ಸನ್ನಿವೇಶವನ್ನು **ಯಮನ** ವಿಚಾರವನ್ನು ಪರಿಶೀಲಿಸುವಾಗ ಮುಂದೆ ಇನ್ನೂ ವಿಸ್ತೃತವಾಗಿ ವಿವರಿಸಲಾಗುತ್ತದೆ.

ಸಮುದ್ರದ ಮೇಲೆ ದೋಣಿಯಿಂದ ಸುರಕ್ಷಿತವಾಗಿ ಪ್ರಯಾಣಿಕರನ್ನು ಸಾಗಿಸುವಂತೆ, ತನ್ನ ಪೂಜಕರನ್ನು **ಈ** ಅಗ್ನಿಯು ಆಪತ್ತುಗಳ ಮೂಲಕ ಸಾಗಿಸುತ್ತಾನೆ. (೩-೨೦-೪, ೫-೪-೯, ೭-೧೨-೨)

ನೃಕ್ಷಗಳಿಂದ ಯಾನ ರೀತಿ ಶಾಖೆಗಳು ಎಲ್ಲಾ ಕಡೆಗಳಿಗೂ ಪ್ರಸರಿಸುವುವೋ, ಅದೇ ರೀತಿ ಅಗ್ನಿಯಿಂದ ಅನುಗ್ರಹಗಳು ಎಲ್ಲಾ ಯಜಮಾನರಲ್ಲೂ ಪ್ರಸರಿಸುವುದು. (೬-೧೩-೧)

ಮರಳುಗಾಡಿನಲ್ಲಿ ನೀರಿನ ಪ್ರದೇಶಗಳಿರುವಂತೆ ಕಷ್ಟಕ್ಕೆ ಸಿಕ್ಕಿದವರಿಗೆ ಉಪಕಾರಕನಾಗಿರುತ್ತಾನೆ (೧೦-೪-೧)

ಜಗತ್ತಿನ ಸಕಲ ಸಂಪತ್ತುಗಳೂ ಅಗ್ನಿಯಲ್ಲೇ ಶೇಖರಿತವಾಗಿವೆ. (೧೦-೬-೬)

ದ್ಯಾವಾವೃಥಿವಿಗಳಲ್ಲೂ, ಅಂತರಿಕ್ಷದಲ್ಲೂ, ಸಕಲ ಲೋಕಗಳಲ್ಲೂ, ಯಾವ ಯಾವ ನಿಧಿಗಳಿವೆಯೋ, ಅವೆಲ್ಲವನ್ನೂ ಅಗ್ನಿಯು ತನ್ನಲ್ಲೇ ಸಂಗ್ರಹಮಾಡಿಟ್ಟುಕೊಂಡು ತಾನೇ ಆ ಎಲ್ಲಾ ನಿಧಿಗಳಿಗೂ ಪ್ರಭುವಾಗಿದ್ದಾನೆ.
(೭-೬ ೭, ೧೦-೯೧-೩)

ಈ ವಿಧವಾಗಿ ಅಗ್ನಿಯು ಸಕಲ ಸ್ವಾಮ್ಯವನ್ನೂ ಪ್ರಭುತ್ವವನ್ನೂ ಹೊಂದಿರುವುದರಿಂದ ಎಲ್ಲಾ ವಿಧವಾದ ಸಂಪತ್ತುಗಳಿಗೂ, ಅನ್ನಕ್ಕಾಗಿಯೂ, ಆಪತ್ತುಗಳಿಂದ ರಕ್ಷಿಸುವುದಕ್ಕಾಗಿಯೂ, ದಾರಿದ್ರ್ಯ, ಪುತ್ರರಾಹಿತ್ಯ ಇತ್ಯಾದಿ ಅವಸ್ಥೆಗಳನ್ನು ತಪ್ಪಿಸುವುದಕ್ಕಾಗಿಯೂ ಸಹ ಇದೇ ಅಗ್ನಿಯನ್ನು ಎಲ್ಲರೂ ಎಲ್ಲಾ ಕಾಲಗಳಲ್ಲೂ ಸ್ತುತಿಸಿ ಪ್ರಾರ್ಥಿಸುತ್ತಾರೆ. (೧-೧೨-೮, ೯ , ೧-೩೬-೧೨ , ೧-೫೮-೧೯ , ೨-೪-೮ , ೨ ೭-೨, ೩ , ೨-೯-೫ , ೩-೧-೨೧ , ೩-೧೩-೭ , ೩-೧೬-೫ , ೪-೨-೨೦ ; ೪-೩-೧೪ , ೪-೧೧-೬ , ೫-೩-೧೧ , ೬-೧-೧೨ , ೬-೪-೮ , ೬-೫-೭ , ೬-೬-೭ , ೬-೬-೭ , ೬-೧,೫, ೧೩, ೧೯).

ಈ ಅಗ್ನಿಯು, ಇಂತಹ ಪ್ರಾರ್ಥನೆಗಳ ಫಲವಾಗಿ, ಯಜಮಾನನನ್ನು ರಕ್ಷಿಸಲು ನೂರಾರು ಆಯೋನಿರ್ಮಿತವಾದ ಭಿತ್ತಿಗಳೊಡನೆ ಬರುತ್ತಾನೆ (೬-೪೮-೮ , ೭-೩-೯).

ಅಂತಹ ಭಿತ್ತಿಗಳೊಡಗೂಡಿ ತಾನೇ ಒಂದು ರಕ್ಷಕವಾದ ಕೋಟೆಯಂತಿರುತ್ತಾನೆ. (೭-೧೫-೧೪).

ಶುಷ್ಕವಾದ ಪೊದೆಗಳನ್ನು ಯಾವ ರೀತಿ ದಹಿಸುವನೋ ಅದರಂತೆ ಯಜಮಾನನ ಶತ್ರುಗಳನ್ನು ಕ್ಷಣಮಾತ್ರದಲ್ಲಿ ನಿಶ್ಶೇಷವಾಗಿ ದಹಿಸಿಬಿಡುತ್ತಾನೆ. (೪-೪-೪)

ವಿದ್ಯುತ್ತಿನ ಹೊಡೆತದಿಂದ ವೃಕ್ಷವು ದಗ್ಧವಾಗುವಂತೆ ಇವನು ದುಷ್ಟರನ್ನು ನಾಶಪಡಿಸುತ್ತಾನೆ. (೬-೮-೫)

ಇಂತಹ ಅಸಾಧಾರಣವಾದ ಸಾಮರ್ಥ್ಯವಿರುವುದರಿಂದಲೇ, ಯುದ್ಧರಂಗದಲ್ಲಿ ನಾಯಕನಾಗಿರುವಂತೆ ಆಹೂತನಾಗುತ್ತಾನೆ (೮ ೪೩-೭೧ . ೮-೭೩-೮).

ಯಜ್ಞಕರ್ತನು ಮಾನವರಿಗೆ ಸಹಜವಾದ ಅಜ್ಞಾನದಿಂದ ಯಾವ ವಿಧವಾದ ಅಪರಾಧವನ್ನು ಮಾಡಿದ್ದರೂ ಅಗ್ನಿಯು ಅದನ್ನು ಕ್ಷಮಿಸುವಂತೆಯೇ ಅವನು ಅದಿತಿಯ ವಿಷಯದಲ್ಲಿ ನಿರಪರಾಧಿಯಾಗಿರುವಂತೆ ಅನುಗ್ರಹಿಸಬೇಕೆಂದೂ ಪ್ರಾರ್ಥಿತನಾಗಿದ್ದಾನೆ. (೭-೯೩-೭)

ಅಪರಾಧಿಗಳ ವಿಷಯದಲ್ಲಿ ವರುಣನು ಕ್ರೋಧವನ್ನು ಪ್ರಕಟಿಸುವುದರಿಂದಲೂ, ಅಂತಹ ಕ್ರೋಧವು ಮಾನವನಿಗೆ ಕೆಡಕನ್ನುಂಟುಮಾಡುವುದರಿಂದಲೂ, ವರುಣನು ಯ-ಜಮಾನನಮೇಲೆ ಕೋಪಮಾಡದಿರುವಂತೆ ಮಾಡಬೇಕೆಂದು ಬೇಡಲ್ಪಡುತ್ತಾನೆ (೪-೧-೪)

ಇನ್ನು ಕೆಲವೆಡೆಗಳಲ್ಲಿ ಯಜಮಾನನು ತನಗೆ ಸಹಜವಾದ ಸೌಜನ್ಯದಿಂದ ಅಗ್ನಿಯನ್ನುದ್ದೇಶಿಸಿ ಈ ರೀತಿ ತಿಳಿಸುತ್ತಾನೆ.

" ಎಲೈ ಅಗ್ನಿಯೇ, ನಾನೇ ನಿನ್ನ ಶಕ್ತಿಯನ್ನು ಹೊಂದಿದ್ದು ನೀನೇ ನನ್ನ ಸ್ಥಾನದಲ್ಲಿದ್ದಿದ್ದರೆ, ನಿನ್ನ ಅಪಾರವಾದ ಭಕ್ತ್ಯತಿಶಯಕ್ಕೆ ಮಣಿದು ನಿನ್ನ ಇಷ್ಟಾರ್ಥಗಳನ್ನೆಲ್ಲಾ ಪೂರೈಸುತ್ತಿದ್ದೆನು (ಅದರಂತೆ ನನ್ನ ಭಕ್ತ್ಯತಿಶಯವನ್ನು ಮೆಚ್ಚಿ ಈಗ ನೀನು ನನ್ನ ಇಷ್ಟಾರ್ಥಗಳನ್ನು ಸಾಧಿಸಿಕೊಡು ಎಂದು ತಾತ್ಪರ್ಯ) (೮-೪೪-೨೩)

" ನಾನೇ ಅಮರ್ತ್ಯನಾಗಿದ್ದು ನೀನು ಮರ್ತ್ಯನಾಗಿದ್ದಿದ್ದರೆ, ನಿನಗೆ ಎಂದಿಗೂ ದಾರಿದ್ರ್ಯದುಃಖವನ್ನು ಭವಿಸಲು ಅವಕಾಶವನ್ನು ಕೊಡುತ್ತಿರಲಿಲ್ಲ ನನ್ನ ಭಕ್ತರು ಎಂದೆಂದಿಗೂ, ದಾರಿದ್ರ್ಯವನ್ನಾಗಲಿ, ಇತರ ವಿಧವಾದ ಖೇದನನ್ನಾಗಲಿ ಹೊಂದಬೇಕೂಡದೆಂಬುದೇ ನನ್ನ ಪೂರ್ಣವಾದ ಆಶಯ. (೮ ೧೯-೨೫)

ಕೆಲವೆಡೆಗಳಲ್ಲಿ ಯಾವುದಾದರೂ ಪ್ರಸಿದ್ಧನಾದ ಋಷಿಯು ಯಜ್ಞಕ್ಕಾಗಿ ಅಗ್ನಿಯನ್ನು ಸಮಿದ್ಧನನ್ನಾಗಿ ಮಾಡಿದ್ದರೆ, ಆ ಸನ್ನಿವೇಶಗಳಲ್ಲಿ ಇದೇ ಋಷಿಯ ನಾಮದಿಂದ ಪ್ರಸಿದ್ಧನಾಗಿದ್ದಾನೆ ಉದಾಹರಣೆಗೆ ೮-೯೨-೩ರಲ್ಲಿ ಅಗ್ನಿಯು **ದೈವೋದಾಸೋಽಗ್ನಿಃ** । ಎಂದು ನಿರ್ದಿಷ್ಟನಾಗಿದ್ದಾನೆ ಎಂದರೆ, ದಿವೋದಾಸನಾಮಕನಾದ ಋಷಿಯಿಂದ ಆಹೂತನೂ, ಪೂಜಿತನೂ ಆದವನೆಂದರ್ಥ.

೮-೧೯-೩ರಲ್ಲು **ಸಮ್ರಾಜಂ ತ್ರಾಸದಸ್ಯವಂ** ಎಂದಿದೆ ತ್ರಸದಸ್ಯುವೆಂಬ ಒಬ್ಬ ರಾಜರ್ಷಿ. ಅವನಿಂದ ಸಮಿದ್ಧನೂ, ಆಹೂತನೂ ಪೂಜಿತನೂ ಆದ ಅಗ್ನಿಯೆಂದರ್ಥ ೧೦-೬೯-೧೧ರಲ್ಲಿ **ಅಗ್ನೇರ್ವಧ್ರ್ಯಶ್ವಸ್ಯ** ಎಂಬಲ್ಲಿಯೂ ಸಹ ಇದೇ ರೀತಿ ಅರ್ಥವನ್ನು ಹೇಳಬೇಕು (೧-೧ -೧೧ರಲ್ಲು **ಇಂದ್ರಸ್ಯ** ಕೌಶಿಕಪದ ವಿಶೇಷಣದಿಂದ ವರ್ಣಿತವಾಗಿರುವುದೂ ಒಂದು ಉದಾಹರಣೆ)

ಅಗ್ನಿಯು ಇತರ ದೇವತೆಗಳೊಡನೆ ಸಾಕ್ಷಾತ್ ಸಂಬಂಧವನ್ನಿಟ್ಟಿರುವುದರಿಂದ ಕೆಲವು ಸಂದರ್ಭಗಳಲ್ಲಿ ಆ ದೇವತೆಗಳಿಗೂ ಅಗ್ನಿಗೂ ತಾದಾತ್ಮ್ಯವನ್ನೇ ತೋರಿಸಲಾಗಿದೆ ಇಂದ್ರ, ವಿಷ್ಣು, ವರುಣ, ಮಿತ್ರ, ಅರ್ಯಮ, ಅಂಶ, ತ್ವಷ್ಟೃ, ರುದ್ರ, ಪೂಷ, ಸವಿತೃ, ಭಗ, ಇತ್ಯಾದಿ ಪುಂದೇವತೆಗಳೊಡನೆಯೂ, ಅದಿತಿ, ಹೋತ್ರಾ, ಭಾರತೀ, ಇಳಾ, ಸರಸ್ವತೀ ಇತ್ಯಾದಿ ಸ್ತ್ರೀದೇವತೆಗಳೊಡನೆಯೂ ಐಕ್ಯವನ್ನು ತೋರಿಸಿದೆ.

ತ್ವಮಗ್ನ ಇಂದ್ರೋ ವೃಷಭಃ ಸತಾಮಸಿ ತ್ವಂ ವಿಷ್ಣುರುರುಗಾಯೋ ನಮಸ್ಯಃ ।
(ಋ ಸಂ. ೩-೧-೩)

ತ್ವಮಗ್ನೇ ರಾಜಾ ವರುಣೋ ಧೃತವ್ರತಸ್ತ್ವಂ ಮಿತ್ರೋ ಭವಸಿ ದಸ್ಮ ಈಡ್ಯಃ ।
(ಋ. ಸಂ ೩-೧-೪)

ತ್ವಮಗ್ನೇ ಅದಿತಿರ್ದೇವ ದಾಶುಷೇ ತ್ವಂ ಹೋತ್ರಾ ಭಾರತೀ ವರ್ಧಸೇ ಗಿರಾ ।
ತ್ವಮಿಳಾ ಶತಹಿಮಾಸಿ ದಕ್ಷಸೇ ತ್ವಂ ವೃತ್ರಹಾ ವಸುಪತೇ ಸರಸ್ವತೀ ॥
(ಋ ಸಂ ೩-೧-೧೧)

ಇತ್ಯಾದಿಯಾಗಿ ಅಗ್ನಿಯು ವರ್ಣಿತನಾಗಿದ್ದಾನೆ ಅಲ್ಲದೇ. **" ತ್ವೇ ವಿಶ್ವೇ ಸಹಸಸ್ಪುತ್ರ ದೇವಾಃ "** ಶಕ್ತಿಪುತ್ರನಾದ ಎಲೈ ಅಗ್ನಿಯೇ, ನಿನ್ನಲ್ಲಿಯೇ ಸಕಲದೇವತೆಗಳೂ ಅಂತರ್ಗತರಾಗಿದ್ದಾರೆ ಉಳಿದವರೆಲ್ಲರೂ ನಿನ್ನ ವಿಭೂತಿ ವಿಶೇಷಣಗಳೇ ಆಗಿದ್ದಾರೆ ಎಂದೂ ಸ್ತಂಸೆಯಿದೆ (೫-೩-೧). (ಈ ವಿಷಯವನ್ನು **' ಇಂದ್ರಂ ಮಿತ್ರಂ ವರುಣಂ '** ಎಂಬ ೧-೧೬೪-೪೬ ನೇ ಮಂತ್ರವಲ್ಲಿ ವಿಶೇಷವಿಷಯಗಳಲ್ಲಿ ವಿವರಿಸಿದೆ) ಇದರಂತೆಯೇ ಅಥರ್ವವೇದದಲ್ಲೂ ಸಹ ಸ್ತುತಿಸಿದೆ.

ಸ ವರುಣಃ ಸಾಯಮಗ್ನಿರ್ಭವತಿ ಸ ಮಿತ್ರೋ ಭವತಿ ಪ್ರಾತರುದ್ಯನ್ ।
ಸ ಸವಿತಾ ಭೂತ್ವಾ ಅಂತರಿಕ್ಷೇಣ ಯಾತಿ ಸ ಇಂದ್ರೋ ಭೂತ್ವಾ ತಪತಿ ಮಧ್ಯತೋ ದಿವಂ ॥
(ಅ. ವೇ. ೧೩-೩-೧೩)

ಅಗ್ನಿಯು ಸಾಯಂಕಾಲದಲ್ಲಿ ವರುಣರೂಪವನ್ನು ತಾಳುತ್ತಾನೆ. ಪ್ರಾತಃಕಾಲದಲ್ಲಿ ಮಿತ್ರರೂಪದಲ್ಲಿ ಉದಯಿಸುತ್ತಾನೆ. ಸವಿತೃರೂಪದಲ್ಲಿ ದ್ಯುಲೋಕದಲ್ಲಿ ಸಂಚರಿಸುತ್ತಾನೆ. ಇಂದ್ರರೂಪದಲ್ಲಿ ಅಂತರಿಕ್ಷ್ಯಮಧ್ಯೇ ಪ್ರಕಾಶಿಸುತ್ತಾನೆ.

ಇದೇ ಅಗ್ನಿಯು, ಚಕ್ರನೇಮಿಯು ಚಕ್ರವ ಅರಿಗಳನ್ನು ಸುತ್ತುವರಿದಿರುವಂತೆ ಎಲ್ಲಾ ದೇವತೆಗಳನ್ನೂ ಸುತ್ತುವರಿದು ನಿಂತಿದ್ದಾನೆ. (೫-೧೩-೬, ೩-೫-೪, ೫-೩-೧, ೭-೧೫ ೩; ೧೦-೪-೫)

ಅನೇಕ ಸೂಕ್ತಗಳಲ್ಲಿ ಅಗ್ನಿಯು ಇಂದ್ರನೊಡನೆ ಸಾಹಚರ್ಯವನ್ನು ಹೊಂದಿರುವಂತೆ ವರ್ಣಿತನಾಗಿದ್ದಾನೆ. (೧-೧೦೪, ೧-೧೦೯, ೩-೧೨, ೬-೫೯ ರಿಂದ ೬೦, ೭-೯೩, ೭ ೯೪, ೮-೩೮, ೮-೪೦)

ಈ ಎರಡು ದೇವತೆಗಳೂ ಸಹ ಸಮಾನವಾದ ಮಾತೆಯನ್ನು ಳ್ಳವರಾಗಿಯೂ ಒಂದೇ ತಂದೆಯುಳ್ಳವರೆಂದೂ, ಸಮಾನವಾದ ಮಾತಾಪಿತೃಗಳ ಅವಳೀವಸ್ಯಕ್ಕಳೆಂದೂ ವರ್ಣಿತರಾಗಿದ್ದಾರೆ (೬ ೫೯-೨) **ವಜ್ರಿಣಾ,** ವಜ್ರಾಯುಧವನ್ನು ಹಿಡಿದಿರುವವರು, **ವೃತ್ರಹಣಾ,** ವೃತ್ರಾಸುರನ ಹಂತಕರು ಮತ್ತು ಶತ್ರುಪಟ್ಟಣಗಳ ನಾಶಕರು ಎಂದು ವರ್ಣಿತರಾಗಿದ್ದಾರೆ (೩-೧೨-೪, ೬, ೬-೫೯-೩, ೯.೬೧-೩, ೭ ೯೩-೧, ೪, ೮-೩೮ ೨).

ಇಂದ್ರಾಗ್ನಿಗಳಿಬ್ಬರೂ ಜೊತೆಯಲ್ಲಿ ಬಂದು ಸೋಮಪಾನವನ್ನು ಮಾಡಬೇಕೆಂದು ಇಬ್ಬರನ್ನೂ ಒಟ್ಟಿಗ ಕರೆದಿದೆ. (೭-೯೩-೬ ೮-೩೮-೪, ೭ ರಿಂದ ೯)

ಒಂದೆಡೆಯಲ್ಲಿ ಅವರಿಬ್ಬರನ್ನೂ ' **ಅಶ್ವಿನಾ** ' ಅಶ್ವವುಳ್ಳವರು ಎಂದು ಇಬ್ಬರಿಗೂ ಸಾಧಾರಣವಾದ ವಿಶೇಷಣದಿಂದ ವರ್ಣಿಸಿದೆ (೧-೧೦೯-೪)

ಯಾವ ಕರ್ಮವು ಇಂದ್ರನ ವಿಶೇಷಕರ್ಮವೆಂದು ಪ್ರಸಿದ್ಧವಾಗಿದೆಯೋ. ಅಂತಹ ವೃತ್ರವಧವೂ, ಶತ್ರುಪಟ್ಟಣಗಳ ನಾಶವೂ ಅಗ್ನಿಯ ಅಸಾಧಾರಣಕರ್ಮವೆಂದು ಪ್ರಶಂಸಿತವಾಗಿರುವ ಸನ್ನಿವೇಶಗಳೂ ಕೆಲವಿವೆ (೧ ೫೯-೬, ೧-೭೮-೪, ೬-೧೬-೧೪, ೫೯, ೪೮, ೭-೫-೩, ೭-೬.೨, ೮-೬೩-೪)

ಅಂಧಕಾರರೂಪವುಳ್ಳ ದಸ್ಯುವನ್ನು ಮನೆಯಿಂದ ಓಡಿಸಿ ಆರ್ಯನಾದ ಯಜಮಾನನಿಗೆ ಅತಿಶಯವಾದ ಜ್ಯೋತಿಯನ್ನು ಒದಗಿಸಿದನು ಎಂದು ಸ್ತುತನಾಗಿದ್ದಾನೆ. (೭-೫-೬, ೧-೫೯ ೨, ೧೦-೬೯-೬).

ಆರ್ಯಸಂತತಿಗೆ ಸೇರಿದ ಸಕಲ ಯಜಮಾನರ ಅಭ್ಯುದಯಕ್ಕೂ ಅಗ್ನಿಯೇ ಕಾರಣನು (೮-೯೨-೧).

ಆರ್ಯರ ಉದ್ಧಾರವಾಗಬೇಕಾದರೆ ಪಣಿಗಳ ನಾಶವಾಗಬೇಕು ಆದುದರಿಂದ ಅಗ್ನಿಯು ಅವೈದಿಕರಾದ ಪಣಿಗಳನ್ನೆಲ್ಲಾ ನಾಶಪಡಿಸುತ್ತಾನೆ. (೬-೬-೩)

ಇಂತಹ ಕಾರ್ಯಗಳು ಇಂದ್ರನ ಅಸಾಧಾರಣ ಕರ್ಮಗಳೆಂದು ಪ್ರಸಿದ್ಧವಾಗಿದ್ದರೂ ಒಂದೊಂದು ಸಲ ಅಗ್ನಿಯೂ ಇಂತಹ ಕಾರ್ಯಗಳನ್ನು ನೆರವೇರಿಸಿ ಆರ್ಯನಾದ ಯಜಮಾನನಿಗೆ ಸಹಾಯ ಮಾಡಿದನು ಎಂದು ಪ್ರಶಂಸಿದೆ. ಹೀಗೆಯೇ, ೮-೩೮-೧ ನೇ ಮಂತ್ರದಲ್ಲಿ **ಇಂದ್ರ** ಮತ್ತು **ಅಗ್ನಿ** ಈ ಎರಡು ದೇವತೆಗಳನ್ನೂ ಒಟ್ಟಿಗೆ **ಯಜ್ಞಸ್ಯ ಋತ್ವಿಜಾ** ಯಜ್ಞಕ್ಕೆ ಋತ್ವಿಕ್ಕುಗಳು ಎಂದು ನಿರ್ದೇಶಿಸಿದೆ ಋತ್ವಿಗ್ರೂಪನಾಗಿರುವುದು ಅಗ್ನಿಯ ವಿಶೇಷಗುಣ. ಅದೇ ಗುಣದಿಂದಲೂ, ಕರ್ಮದಿಂದಲೂ ಇಂದ್ರನೂ ವರ್ಣಿತನಾಗಿದ್ದಾನೆ

೧-೯ ರಲ್ಲಿ ಅಗ್ನಿಯು ಸೋಮನೊಂದಿಗೆ ಪೂಜಿತನಾಗಿದ್ದಾನೆ ಹೀಗೆ ಅಗ್ನಿಯು ವೈಯಕ್ತಿಕವಾದುದೂ ಇತರ ದೇವತೆಗಳಲ್ಲೆಲ್ಲಾ ಅಂತರ್ಯಾಮಿಯಾಗಿದ್ದುಕೊಂಡು ಅವರೊಡನೆ ಸಾಹಚರ್ಯದಿಂದ ಪ್ರಕಟಿಸುವುದೂ ಆದ ವಿಶೇಷ ಗುಣಗಳ ವರ್ಣನೆಯು ಋಕ್ಸಂಹಿತೆಯಲ್ಲಿ ಪ್ರಶಸ್ಯವಾಗಿದೆ.

ಮೊದಲನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಆತ್ರೇಯೇ ಪಂಚಮೇ ಮಂಡಲೇ ಷಡನುವಾಕಾಃ । ತತ್ರ ಸ್ಪಥಮೇऽನುವಾಕೇ ಚತುರ್ದಶ ಸೂಕ್ತಾನಿ । ತತ್ರಾಬೋಧ್ಯಗ್ನಿರಿತಿ ದ್ವಾದಶರ್ಚಂ ಪ್ರಥಮಂ ಸೂಕ್ತಂ । ಆತ್ರೇಯಮನುಕ್ರಮಣಿಕಾ । ಅಬೋಧಿ ದ್ವಾದಶ ಬುಧಗವಿಷ್ಠಿರಾವಿತಿ । ಪಂಚಮೇ ಮಂಡಲೇऽನುಕ್ತಗೋತ್ರಮಾತ್ರೇಯಂ ವಿದ್ಯಾದಿತಿ ಪರಿಭಾಷಿತತ್ವಾದಾತ್ರೇಯೌ ಬುಧಗವಿಷ್ಠಿರಾವೃಷೀ । ಆನಾದೇಶಪರಿಭಾಷಯಾ ತ್ರಿಷ್ಟುಪ್ । ಮಂಡಲಾದಿಪರಿಭಾಷಯಾಗ್ನಿರ್ದೇವತಾ ॥ ಪ್ರಾತರನುವಾಕ ಆಗ್ನೇಯೇ ಕ್ರತೌ ತ್ರೈಷ್ಟುಭೇ ಛಂದಸ್ಯಾಶ್ವಿನಶಸ್ತ್ರೇ ಚೈತದಾದಿಚತ್ವಾರಿ ಸೂಕ್ತಾನಿ । ತಥಾ ಚ ಸೂತ್ರಿತಂ । ಅಬೋಧ್ಯಗ್ನಿಃ ಸಮಿಧೇತಿ ಚತ್ವಾರಿ । ಆ. ೪-೧೩ । ಇತಿ ॥ ಅಧ್ಯಾಯೋತ್ಸರ್ಜನೋಪಾಕರಣಯೋರ್ಧಾಮಂತೇ ವಿಶ್ವಮಿತಿ ದ್ವ್ಯೃಚೇನೈವ ವಿನಿಯೋಗ ಉಕ್ತಃ ॥

ಅನುವಾದವು—ಆತ್ರಿಋಷಿವೃಷ್ಟವಾದ ಐದನೆಯ ಮಂಡಲದಲ್ಲಿ ಆರು ಅನುವಾಕಗಳಿರುವವು ಅವುಗಳಲ್ಲಿ ಮೊದಲನೆಯ ಅನುವಾಕಕ್ಕೆ ಹದಿನಾಲ್ಕು ಸೂಕ್ತಗಳಿರುವವು. ಅವುಗಳಲ್ಲಿ **ಅಬೋಧ್ಯಗ್ನಿಃ** ಎಂಬ ಈ ಸೂಕ್ತವು ಮೊದಲನೆಯದು ಇದರಲ್ಲಿ ಹನ್ನೆರಡು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಅಬೋಧಿ ದ್ವಾದಶ ಬುಧಗವಿಷ್ಠಿರೌ** ಎಂದು ಹೇಳಿರುವುದು ಐದನೆಯ ಮಂಡಲದಲ್ಲಿ ಗೋತ್ರ ಮೊದಲಾದ ವಿವರಗಳನ್ನು ಹೇಳಿದಿರುವ ಋಷಿಗಳನ್ನು ಆತ್ರೇಯಗೋತ್ರೋದ್ಭವರೆಂದೇ ಪರಿಗಣಿಸಬೇಕೆಂದು ಹೇಳಿರುವುದರಿಂದ ಈ ಸೂಕ್ತದ ಋಷಿಗಳಾದ ಬುಧ, ಗವಿಷ್ಠಿರ ಎಂಬುವರೂ ಆತ್ರಿಗೋತ್ರೋದ್ಭವರಾದ ಋಷಿಗಳೆಂದೇ ಹೇಳಬೇಕು ಮಂಡಲದ ಪ್ರಾರಂಭದ ಸೂಕ್ತದಲ್ಲಿ ಸಾಮಾನ್ಯವಾಗಿರುವಂತೆ ಈ ಸೂಕ್ತಕ್ಕೂ ಅಗ್ನಿಯೇ ದೇವತೆಯು; ತ್ರಿಷ್ಟುಪ್ಛಂದಸ್ಸು. ಪ್ರಾತರನುವಾಕ ಮಂತ್ರಸರನಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ತ್ರಿಷ್ಟುಪ್ಛಂದಸ್ಸಿನ ಋಕ್ಕುಗಳಿಗಾಗಿಯೂ, ಆಶ್ವಿನಶಸ್ತ್ರ ಮಂತ್ರಗಳಿಗಾಗಿಯೂ ಈ ಸೂಕ್ತದ ಮತ್ತು ಇದರ ಮುಂದಿನ ಮೂರೂ ಸೂಕ್ತಗಳ ವಿನಿಯೋಗವಿರುವುದೆಂದು ಅಶ್ವಲಾಯನಶ್ರೌತಸೂತ್ರದ—**ಅಬೋಧ್ಯಗ್ನಿಃ ಸಮಿಧೇತಿ ಚತ್ವಾರಿ** ಎಂಬ ಸೂತ್ರದಿಂದ (ಆ ೪-೧೩) ವಿವೃತವಾಗಿರುವುದು. ಅಧ್ಯಾಯೋತ್ಸರ್ಜನ ಮತ್ತು ಉಪಾಕರಣಪ್ರಧಾನಹೋಮಗಳಲ್ಲಿ ಹಿಂದಿನ ಮಂಡಲದ ಕೊನೆಯ ಋಕ್ಕಾದ **ಧಾಮಂತೇ ವಿಶ್ವಂ** ಎಂಬ ಋಕ್ಕನ್ನೂ ಈ ಮಂಡಲದ ಪ್ರಥಮ ಋಕ್ಕಾದ **ಅಬೋಧ್ಯಗ್ನಿಃ** ಎಂಬ ಋಕ್ಕನ್ನೂ ಪ್ರಧಾನಾಹುತಿಗಳಿಗಾಗಿ ಉಪಯೋಗಿಸಬೇಕೆಂದು ಹಿಂದಿನ ಋಕ್ಕಿನ ವಿನಿಯೋಗದಲ್ಲಿಯೇ ಹೇಳಲಾಗಿದೆ

ಸೂಕ್ತ—೧

ಮಂಡಲ—೫ ॥ ಅನುವಾಕ—೧ ॥ ಸೂಕ್ತ—೧ ॥

ಅಷ್ಟಕ—೩ ॥ ಅಧ್ಯಾಯ—೮ ॥ ವರ್ಗ—೧೨, ೧೩ ॥

॥ ಸೂಕ್ತದಲ್ಲಿರುವ ಋಕ್ಕುಗಳ ಸಂಖ್ಯೆ—೧೨ ॥

॥ ಋಷಿಃ—ಬುಧಗವಿಷ್ಠಿರಾವಾತ್ರೇಯೌ ॥

॥ ದೇವತಾ—ಅಗ್ನಿಃ ॥

॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಅಬೋಧ್ಯಗ್ನಿಃ ಸಮಿಧಾ ಜನಾನಾಂ ಪ್ರತಿ ಧೇನುಮಿವಾಯತೀಮುಷಾಸಂ।
ಯಹ್ವಾ ಇವ ಪ್ರ ವಯಾನುಜ್ಜಿಹಾನಾಃ ಪ್ರ ಭಾನವಃ ಸಿಸ್ರತೇ ನಾಕಮಚ್ಛ॥

॥ ಪದಪಾಠಃ ॥

ಅಬೋಧಿ । ಅಗ್ನಿಃ । ಸಂ೽ಇಧಾ । ಜನಾನಾಂ । ಪ್ರತಿ । ಧೇನುಂ೽ಇವ । ಆ೽ಯತೀಂ । ಉಷಸಂ ।
ಯಹ್ವಾಃ೽ಇವ । ಪ್ರ । ವಯಾಂ । ಉತ್೽ಜಿಹಾನಾಃ । ಪ್ರ । ಭಾನವಃ । ಸಿಸ್ರತೇ । ನಾಕಂ । ಅಚ್ಛ ॥ ೧ ॥

॥ ಸಾಯಣಭಾಷ್ಯಂ ॥

ಅಯಮಗ್ನಿರ್ಜನಾನಾಮಧ್ವರ್ಯ್ವಾದೀನಾಂ ಸಮಿಧಾ ಸಮಿದ್ಭಿರಬೋಧಿ । ಪ್ರಬುದ್ಧೋ೽ಭೂತ್ । ಧೇನುಮಿವ । ಅಗ್ನಿಹೋತ್ರಾರ್ಥಧೇನುಂ ಪ್ರತಿ ಯಥಾ ಪ್ರಾತರ್ಬುಧ್ಯತೇ ತದ್ವದಾಯತೀಮಾಗಚ್ಛಂತೀಮುಷಸಂ ಪ್ರತಿ । ಉಷಃಕಾಲ ಇತ್ಯರ್ಥಃ । ಅಥ ಪ್ರಬುದ್ಧಸ್ಯಾಗ್ನೇರ್ಭಾನವೋ ಜ್ವಾಲಾ ಯಹ್ವಾ ಮಹಾಂತೋ ವಯಾಂ ಶಾಖಾಂ ಪ್ರೋಜ್ಜಿಹಾನಾಃ ಪ್ರೋದ್ಗಮಯಂತೋ ವೃಕ್ಷಾ ಇವ ಪ್ರೋಜ್ಜಿಹಾನಾಃ ಸ್ವಾಧಿಷ್ಠಾನಂ ತ್ಯಜಂತೋ ನಾಕಮಂತರಿಕ್ಷಮಚ್ಛಾಭಿಮುಖ್ಯೇನ ಪ್ರ ಸಿಸ್ರತೇ । ಪ್ರಸರಂತಿ ॥

॥ ಪ್ರತಿಪದಾರ್ಥ ॥

ಅಗ್ನಿಃ—ಅಗ್ನಿಯು । **ಜನಾನಾಂ**—ಅಧ್ವರ್ಯುಗಳ । **ಸಮಿಧಾ**—ಸಮಿತ್ತುಗಳಿಂದ (ಪ್ರಜ್ವಲಿತನಾಗಿ) । **ಆಯತೀಂ**—ಆವಿರ್ಭವಿಸುತ್ತಿರುವ । **ಉಷಸಂ ಪ್ರತಿ**—ಉಷಸ್ಸಿಗೆ ಅಭಿಮುಖವಾಗಿ । **ಧೇನುಮಿವ**—ಪ್ರೀತಿಕಾರಕವಾದ ಧೇನುವಿನಂತೆ । **ಅಬೋಧಿ**—ಪ್ರಬುದ್ಧನಾಗಿದ್ದಾನೆ । **ಭಾನವಃ**—ಈ ಅಗ್ನಿಯ ಜ್ವಾಲೆಗಳು । **ಯಹ್ವಾಃ**—ಮಹತ್ಸ್ವರೂಪವುಳ್ಳವಾಗಿ । **ವಯಾಂ**—ಶಾಖೆಗಳನ್ನು । **ಪ್ರ ಉಜ್ಜಿಹಾನಾ ಇವ**—ನಾನಾ ಕಡೆಗಳಿಗೂ ಬೀಸಿ ಹರಡಿರುವ ವೃಕ್ಷಗಳಂತೆ । **ನಾಕಂ ಅಚ್ಛ**—ಅಂತರಿಕ್ಷಕ್ಕೆ ಅಭಿಮುಖವಾಗಿ । **ಪ್ರ ಸಿಸ್ರತೇ**—ಹರಡಿ ವ್ಯಾಪಿಸುತ್ತದೆ.

॥ ಭಾವಾರ್ಥ ॥

ಅಧ್ವರ್ಯುಗಳ ಸವಿ ತ್ತುಗಳಿಂದ ಪ್ರಜ್ವಲಿತನಾದ ಅಗ್ನಿಯು ಆವಿರ್ಭವಿಸುತ್ತಿರುವ ಉಷಸ್ಸಿಗೆ ಅಭಿಮುಖವಾಗಿ ಪ್ರೀತಿಕಾರಕವಾದ ಧೇನುವಿನಂತೆ ಪ್ರಬುದ್ಧನಾಗಿದ್ದಾನೆ ಈ ಅಗ್ನಿಯ ಜ್ವಾಲೆಗಳು ಮಹತ್‌ಸ್ವರೂಪವುಳ್ಳವಾಗಿ, ತನ್ನ ಶಾಖೆಗಳನ್ನು ನಾನಾ ಕಡೆಗಳಿಗೂ ಬೀಸಿ ಹರಡಿರುವ ವೃಕ್ಷಗಳಂತೆ, ಅಂತರಿಕ್ಷಕ್ಕೆ ಅಭಿಮುಖವಾಗಿ ಹರಡಿ ವ್ಯಾಪಿಸುತ್ತವೆ

English Translation.

Agni is awakened by the fuel (supplied by) the priests at the dawn, approaching lika a cow (to pasture) his flames rise up to the sky like stately (trees) throwing aloft their branches

॥ ವಿಶೇಷವಿಷಯಗಳು ॥

ಅಗ್ನಿಃ ಜನಾನಾಂ ಸಮಿಧಾ ಆಯತೀಂ ಉಷಸಂ ಪ್ರತಿ ಧೇನುಮಿವ ಅಬೋಧಿ—ಅಧ್ವರ್ಯ್ವಾದೀನಾಂ ಋತ್ವಿಜಾಂ ಸಮಿದ್ಭಿಃ ಉಷಃಕಾಲೇ (ಪ್ರಾತಃಕಾಲೇ) ಆಗಚ್ಛಂತೀಂ ಉಷಸಂ ಪ್ರತಿ ಯಥಾ ಅಗ್ನಿ ಹೋತ್ರಾರ್ಥಂ ಧೇನುಃ ಪ್ರಾತಃ ಪ್ರಬುಧ್ಯತೇ ತಥಾ ಪ್ರಬುದ್ಧೋ ಽಭೂತ್ । ಯಜ್ಞಮಾಡುವಾಗ ಯಜ್ಞಾರ್ಧವಾಗಿ ಹಾಲು ಬೇಕಾಗುವುದರಿಂದ ಅದನ್ನು ಕರೆಯುವುದಕ್ಕಾಗಿ ಮಲಗಿರುವ ಗೋವನ್ನು ಪ್ರಾತಃಕಾಲದಲ್ಲಿ ಹೊತ್ತಿಗೆ ಮುಂಚಿತವಾಗಿಯೇ ಎಬ್ಬಿಸಿ ಹಾಲನ್ನು ಕರೆಯುವುದು ರೂಢಿಯು. ಆದರಂತೆ ಉಷೋಭಿಮುಖವಾಗಿ ಎಂದರೆ ಉಷಃಕಾಲವಾದೊಡನೆಯೇ ಅಧ್ವರ್ಯು ಮೊದಲಾದ ಋತ್ವಿಜರು ಯಜ್ಞಾರ್ಧವಾಗಿ ಅಗ್ನಿಯನ್ನು ಸಮಿತ್ತು ಮೊದಲಾದ ಕಾಷ್ಠಗಳಿಂದ ಚೆನ್ನಾಗಿ ಉರಿಯುವಂತೆ ಮಾಡುವರು ಎಂದಭಿಪ್ರಾಯವು ಪ್ರಾತಃಕಾಲದಲ್ಲಿ ಹಾಲು ಕರೆಯುವುದಕ್ಕಾಗಿ ಹಸುವನ್ನು ಎಚ್ಚರಗೊಳಿಸುವಂತೆ ಉಷಃಕಾಲದಲ್ಲಿಯೇ ಅಗ್ನಿಯನ್ನು ಸಮಿತ್ತುಮೊದಲಾದಕಾಷ್ಠಗಳಿಂದ ಅಧ್ವರ್ಯು ಮೊದಲಾದ ಋತ್ವಿಗ್ಜನರು ಉದ್ದೀಪನಗೊಳಿಸುವರು ಎಂದು ಅಗ್ನಿಗೆ ಧೇನುವಿನ ದೃಷ್ಟಾಂತವನ್ನು ಕೊಟ್ಟು ಅರ್ಥವಿವರಣೆ ಮಾಡಲಾಗಿದೆ

ಯಹ್ವ್ಯಃ ಇವ ವಯಾಂ ಪ್ರ ಉಜ್ಜಿಹಾನಾಃ ಭಾನವಃ ನಾಕಂ ಅಚ್ಛ ಸಿಸ್ರತೇ— ಅಥ ಪ್ರಬುದ್ಧಸ್ಯಾಗ್ನೇಃ ಜ್ವಾಲಾಃ ಮಹಾಂತಃ ಶಾಖಾಂ ಪ್ರೋದ್ಗಮಯಂತೋ ವೃಕ್ಷಾ ಇವ ಅಂತರಿಕ್ಷಮಾಭಿಮುಖ್ಯೇನ ಪ್ರಸರಂತಿ ॥ ಹಿಂದಿನ ವಾಕ್ಯದಲ್ಲಿ ಹೇಳಿದಂತೆ ಋತ್ವಿಕ್ಕುಗಳಿಂದ ಪ್ರಜ್ವಲಿತವಾದ ಅಗ್ನಿಯು ತನ್ನ ಪ್ರಕಾಶಮಾನವಾದ ಜ್ವಾಲೆಗಳನ್ನು, ಅಂತರಿಕ್ಷದಲ್ಲಿ ವೃಕ್ಷಗಳು ತಮ್ಮ ಕೊಂಬೆಗಳನ್ನು ಎತ್ತರವಾಗಿ ಚಾಚುವಂತೆ, ಪ್ರಸರಿಸುತ್ತದೆ ಎಂದಭಿಪ್ರಾಯವು. ಇಲ್ಲಿ ಅಗ್ನಿಯ ಜ್ವಾಲೆಗಳಿಗೂ ವೃಕ್ಷದ ಕೊಂಬೆಗಳಿಗೂ ದೃಷ್ಟಾಂತವನ್ನು ಹೇಳಿದೆ ವೃಕ್ಷದ ಶಾಖೆಗಳು ಅಂತರಿಕ್ಷದಲ್ಲಿ ಅತ್ಯುನ್ನತಪ್ರದೇಶವನ್ನು ವ್ಯಾಪಿಸುವಂತೆ ಅಗ್ನಿಯ ಜ್ವಾಲೆಗಳು ಬಹಳ ಎತ್ತರಕ್ಕೆ ಹರಡುತ್ತವೆ ಎಂದರೆ ಅಗ್ನಿಯು ಬಹಳ ಜಾಜ್ವಲ್ಯಮಾನವಾಗಿ ಉರಿಯುತ್ತಿರುವನು ಎಂಬಭಿಪ್ರಾಯವು ಇಲ್ಲಿ ಸೂಚಿತವಾಗಿದೆ.

॥ ಸಂಹಿತಾಪಾಠಃ ॥

ಅಬೋಧಿ ಹೋತಾ ಯಜಥಾಯ ದೇವಾನೂರ್ಧ್ವೋ ಅಗ್ನಿಃ ಸುಮನಾಃ ಪ್ರಾತರಸ್ಥಾತ್ ।
ಸಮಿದ್ಧಸ್ಯ ರುಶದದರ್ಶಿ ಪಾಜೋ ಮಹಾನ್ದೇವಸ್ತಮಸೋ ನಿರಮೋಚಿ ॥೨॥

॥ ಪದಪಾಠಃ ॥

ಅಬೋಧಿ । ಹೋತಾ । ಯಜಥಾಯ । ದೇವಾನ್ । ಊರ್ಧ್ವಃ । ಅಗ್ನಿಃ । ಸುಽಮನಾಃ । ಪ್ರಾತಃ । ಅಸ್ಥಾತ್ ।
ಸಂಽಇದ್ಧಸ್ಯ । ರುಶತ್ । ಅದರ್ಶಿ । ಪಾಜಃ । ಮಹಾನ್ । ದೇವಃ । ತಮಸಃ । ನಿಃ । ಅಮೋಚಿ ॥ ೨ ॥

॥ ಸಾಯಣಭಾಷ್ಯಂ ॥

ಅಯಂ ಹೋತಾ ಹೋಮನಿಷ್ಪಾದಕೋಽಗ್ನಿರ್ದೇವಾನ್ಯಷ್ಟವ್ಯಾನ್ಯಜಥಾಯ ಯಷ್ಟುಮ್ ಬೋಧಿ । ಬುಧ್ಯತೇ । ಸೋಽಗ್ನಿಃ ಪ್ರಾತಃಕಾಲೇ ಸುಮನಾಃ ಶೋಭನಮನಸ್ಕೋ ಯಜಮಾನಾನುಗ್ರಹಬುದ್ಧಿಃ ಸನ್ ಊರ್ಧ್ವೋಽಸ್ಥಾತ್ । ಉತ್ತಿಷ್ಠತಿ । ಸಮಿದ್ಧಸ್ಯಾಸ್ಯ ರುಶದ್ರೋಚಮಾನಂ ಪಾಜೋ ಬಲಂ ಜ್ವಾಲಾಲಕ್ಷಣಮದರ್ಶಿ । ದೃಶ್ಯತೇ । ಅಥ ತಥಾಭೂತೋ ಮಹಾನ್ದೇವಸ್ತಮಸೋಽಂಧಕಾರಾನ್ನಿರಮೋಚಿ । ನಿರ್ಮುಕ್ತೋಽಭೂತ್ ॥

॥ ಪ್ರತಿಪದಾರ್ಥ ॥

ಹೋತಾ—ಹೋಮಸಂಪಾದಕನಾದ । **ಅಗ್ನಿಃ**— ಅಗ್ನಿಯು । **ಸುಮನಾಃ**—ಶೋಭನಾತ್ಮಕವಾದ ಮನಸ್ಸುಳ್ಳವನಾಗಿ । **ದೇವಾನ್**—ದೇವತೆಗನ್ನುದ್ದೇಶಿಸಿ । **ಯಜಥಾಯ**—ಯಜ್ಞಮಾಡುವುದಕ್ಕೆ । **ಅಬೋಧಿ**—ಪ್ರಬುದ್ಧನಾಗುತ್ತಾನೆ । **ಪ್ರಾತಃ**—ಉಷಃಕಾಲದಲ್ಲಿ । **ಊರ್ಧ್ವಃ ಅಸ್ಥಾತ್**—ಮೇಲ್ಮುಖನಾಗಿ ಉದಯಿಸುತ್ತಾನೆ । **ಸಮಿದ್ಧಸ್ಯ**—ಪ್ರಜ್ವಲಿತನಾದ ಈ ಅಗ್ನಿಯ । **ರುಶತ್**—ಆಕರ್ಷಕವಾದ । **ಪಾಜಃ**—ಶಕ್ತಿಯು । **ಅದರ್ಶಿ**—ಎಲ್ಲರಿಗೂ ಗೋಚರವಾಗಿದೆ । **ಮಹಾನ್**— ಮಹಾತ್ಮನೂ । **ದೇವಃ**— ದೇವತಾತ್ಮನೂ ಆದ ಅಗ್ನಿಯು । **ತಮಸಃ**—ಅಂಧಕಾರದಿಂದ । **ನಿರಮೋಚಿ**—ಮುಕ್ತನಾಗಿ ಹೊರಕ್ಕೆ ಬಂದಿದ್ದಾನೆ.

॥ ಭಾವಾರ್ಥ ॥

ಹೋಮಸಂಪಾದನಾದ ಅಗ್ನಿಯು, ಶೋಭನಾತ್ಮಕವಾದ ಮನಸ್ಸುಳ್ಳವನಾಗಿ ದೇವತೆಗಳನ್ನುದ್ದೇಶಿಸಿ ಯಜ್ಞಮಾಡುವುದಕ್ಕಾಗಿ ಪ್ರಬುದ್ಧನಾಗುತ್ತಾನೆ. ಉಷಃಕಾಲದಲ್ಲಿ ಮೇಲ್ಮುಖನಾಗಿ ಉದಯಿಸುತ್ತಾನೆ. ಪ್ರಜ್ವಲಿತನಾದ ಈ ಅಗ್ನಿಯ ಆಕರ್ಷಕವಾದ ಶಕ್ತಿಯು ಎಲ್ಲರಿಗೂ ಗೋಚರವಾಗಿದೆ. ಮಹಾತ್ಮನೂ ದೇವತಾತ್ಮನೂ ಆದ ಅಗ್ನಿಯು ಅಂಧಕಾರದಿಂದ ಮುಕ್ತನಾಗಿ ಹೊರಕ್ಕೆ ಬಂದಿದ್ದಾದೆ.

English Translation.

The offerer of the oblation is awakened for the worship of the gods: favourably minded, Agni has risen up with the dawn. the radiant vigour of the kindld (fire) is manifested, the great deity has been liberated from the darkness.

॥ ವಿಶೇಷವಿಷಯಗಳು ॥

ಹೋತಾ ಅಗ್ನಿಃ ದೇವಾನ್ ಯಜಥಾಯೇ ಅಬೋಧಿ—ಹೋಮನಿಷ್ಪಾದಕನಾದ ಅಗ್ನಿಯು ಯಜ್ಞದಲ್ಲಿ ದೇವತೆಗಳನ್ನು ಆಹ್ವಾನಿಸಿ ಪೂಜಿಸುವುದಕ್ಕಾಗಿ ಪ್ರಾತಃಕಾಲದಲ್ಲಿ ಎಚ್ಚರಗೊಳ್ಳುತ್ತಾನೆ. ಎಂದರೆ ಪ್ರಾತಃಕಾಲದಲ್ಲಿ ಯಜ್ಞಮಾಡುವುಕ್ಕಾಗಿಯೂ, ದೇವತೆಗಳನ್ನು ಆಹ್ವಾನಿಸಿ ಅವರಿಗೆ ಯಜ್ಞಾಗ್ನಿಯಲ್ಲಿ ಹವಿಸ್ಸನ್ನರ್ಪಿಸುವುದಕ್ಕಾಗಿಯೂ ಯಜ್ಞಮಾಡುವ ಯಜಮಾನರು ಅಥವಾ ಋತ್ವಿಕ್ಕುಗಳು ಅಗ್ನಿಯನ್ನು ಹೊತ್ತಿಸುತ್ತಾರೆ ಎಂದಭಿಪ್ರಾಯವು.

ಸುಮನಾಃ ಸನ್ ಊರ್ಧ್ವಃ ಅಸ್ಥಾತ್—**ಸೋಽಗ್ನಿಃ ಪ್ರಾತಃಕಾಲೇ ಶೋಭನಮನಸ್ಕೋ ಯಜಮಾನಾನುಗ್ರಹಬುದ್ಧಿಃ ಸನ್ ಊರ್ಧ್ವ ಉತ್ತಿಷ್ಠತಿ**। ಯಜ್ಞಕುಂಡದಲ್ಲಿ ಪ್ರತಿಷ್ಠಾಪಿತನಾದ ಅಗ್ನಿಯು ಯಜ್ಞಮಾಡುವ ಯಜಮಾನನಿಗೆ ಅನುಗ್ರಹಮಾಡಬೇಕೆಂಬ ಒಳ್ಳೆಯ ಮನಸ್ಸಿನಿಂದ ತನ್ನ ಪ್ರಕಾಶಮಾನವಾದ ಜ್ವಾಲೆಗಳನ್ನು ಮೇಲಕ್ಕೆ ಪ್ರಸರಿಸಿ ಬೆಳಗುತ್ತಾನೆ

ಸಮಿದ್ಧಸ್ಯ ರುಶತ್ ಪಾಜಃ ಆದರ್ಶಿ—**ಅಸ್ಯಾಗ್ನೇಃ ರೋಚಮಾನಂ ಬಲಂ ಜ್ವಾಲಾಲಕ್ಷಣಂ ಸರ್ವೈರ್ದೃಶ್ಯತೇ**। ಪಾಜಃಶಬ್ದವು ಬಲನಾಮಗಳಲ್ಲಿ ಪರಿಕಲ್ಪಿತವಾಗಿದೆ ಇಲ್ಲಿ **ರುಶತ್ ಪಾಜಃ** ಪ್ರಕಾಶಮಾನವಾದ ಬಲವು ಎಂದರೆ ಬಹಳ ಪ್ರಕಾಶಮಾನವಾಗಿ ಉರಿಯುತ್ತಿರುವ ಅಗ್ನಿಜ್ವಾಲೆಯೆಂದಭಿಪ್ರಾಯವು. ಚೆನ್ನಾಗಿ ಹೊತ್ತಿಸಲ್ಪಟ್ಟು ತನ್ನ ಪ್ರಕಾಶಮಾನವಾದ ಜ್ವಾಲೆಗಳಿಂದ ಚೆನ್ನಾಗಿ ಉರಿಯುತ್ತಿರುವ ಅಗ್ನಿಯು ಎಲ್ಲರಿಗೂ ಗೋಚರವಾಗಿರುತ್ತದೆ

ಮಹಾನ್ ದೇವಃ ತಮಸಃ ನಿರಮೋಚಿ—**ಏವಂಭೂತಃ ಮಹಾನ್ ದೇವ ಅಂಧಕಾರಾತ್ ನಿರ್ಮುಕ್ತೋಽಭೂತ್**। ಈ ರೀತಿ ಇರುವ ಮಹಾಮಹಿಮನಾದ ಅಗ್ನಿಯು ಪ್ರಾತಃಕಾಲದ ಮಬ್ಬಿನಲ್ಲಿ ಸುತ್ತಲೂ ಆವರಿಸಿದ್ದ ಕತ್ತಲೆಯಿಂದ ಬಿಡುಗಡೆ ಹೊಂದಿ ಪ್ರಕಾಶಿಸುತ್ತಿರುವನು ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ಯದೀಂ ಗಣಸ್ಯ ರಶನಾಮಜೀಗಃ ಶುಚಿರಂಕ್ತೇ ಶುಚಿಭಿರ್ಗೋಭಿರಗ್ನಿಃ ।
ಆದ್ದಕ್ಷಿಣಾ ಯುಜ್ಯತೇ ವಾಜಯಂತ್ಯುತ್ತಾನಾಮೂರ್ಧ್ವೋ ಅಧಯಜ್ಜುಹೂಭಿಃ ॥ ೩ ॥

॥ पदपाठः ॥

यत् । ईं । गणस्य । रशनाम् । अजीगः । शुचिः । अंक्ते । शुचिऽभिः । गोऽभिः । अग्निः ।
अत् । दक्षिणा । युज्यते । वाजऽयंतीः । उत्ऽतानाम् । ऊर्ध्वः । अधयत् । जुहूऽभिः ॥

॥ सायणभाष्यं ॥

यदा यदेमं यमग्निर्गणस्य संघातस्य जगतो रशनां रज्जुरिव व्यापारप्रतिबंधकं तमोऽजीगः । गिरति गृह्णाति वा । सर्वमिद्धो भवतीत्यर्थः । तदा शुचिर्दीप्तोऽग्निः शुचिभिर्गोरूपैर्दीप्तैः रश्मिभिरंक्ते । व्यनक्ति विश्वं जगत् । अदनंतरमेव दक्षिणा प्रवृद्धा वाजयंत्यन्नमिच्छंत्याज्यधारा युज्यते । युक्ता भवति । अथवा दक्षिणा प्रवृद्धाज्यधारा युज्यते । तां च धारामुत्तानामूर्ध्वतानामुपरि विस्तृतामूर्ध्व उन्नतः सन् जुहूभिरधयत् । पिबति ॥

॥ प्रतिपदार्थ ॥

यत्—यावाग । ईं—अग्नियु । गणस्य—संघातरूपवाद जगत्तिन । रशनाम्—रज्जुविनंतै प्रतिबंधकवाद तमस्सन्नु । अजीगः—तन्न स्वाधीनदल्लिरुवंतै हिडिदनो (आग) । शुचिः—प्रकाशमाननाद । अग्निः—अग्नियु । शुचिभिः—कांतियुतवाद । गोभिः—रश्मिगळिंद । अंक्ते—(विश्ववन्नेल्ला) प्रकाशिसुवंतै माडुत्तानै । अत्—आ ओडनेयिं । दक्षिणा—प्रवृद्धवादुदू । वाजयंतीः—अन्नवन्नु इच्छिसुवुदू आद आज्यधारेयु । युज्यते—अर्पितवागुत्तदै । उत्तानाम्—तन्न मेलै अर्पितवाद ई आज्यधारेयन्नु । ऊर्ध्वः—ऊर्ध्वमुखनागि । जुहूभिः—जुहू पात्रेगळिंद । अधयत्—पानमाडुत्तानै.

॥ भावार्थ ॥

संघातरूपवाद जगत्तिगै प्रतिबंधकवाद तमस्सन्नु अग्नियु तन्न स्वाधीनदल्लिरुवंतै यावाग हिडिदनो आग प्रकाशमाननाद अग्नियु कांतियुतरादं रश्मिगळिंद विश्ववन्नेल्ला प्रकाशिसुवंतै माडुत्तानै. आ ओडनेयिं, प्रवृद्धवादुदू, अन्नवन्नु इच्छिसुवुदू आद आज्यधारेयु अर्पितवागुत्तदै. तन्न मेलै अर्पितवाद ई आज्यधारेयन्नु ऊर्ध्वमुखनागि जुहूपात्रेगळिंद पानमाडुत्तानै.

English Translation.

When he seized upon the (confining) girdle of the aggregated (world), then, bright-shining, he makes all manifest with brilliant rays : thereupon the precious food-desiring (oblation) is added (to the flame), and Agni soaring aloft, drinks it as it is (spread out) recumbent by the ladles.

। ವಿಶೇಷವಿಷಯಗಳು ।

ಯೆತ್ ಈಂ ಗಣಸ್ಯ ರತನಾಂ ಅಜೀಗಃ (ತದಾ) ಶಚೀಃ ಅಗ್ನಿಃ ಕುಬಿಭಿಃ ಗೋಭಿಃ ಅಂಕ್ತೇ—ಯದಾ ಅಯಮಗ್ನಿಃ ಸಂಘಾತ್ಮಕಸ್ಯ ಜಗತಃ ರಜ್ಜುಮಿವ ವ್ಯಾಪಾರಪ್ರತಿಬಂಧಕಂ ತಮಃ ಗೃಹ್ಣಾತಿ ತದಾ ದೀಪ್ಯೋ೭ಯಮಗ್ನಿಃ ದೀಪ್ತೈ ರಶ್ಮಿಭಿರ್ವಿಶ್ವಂ ಜಗತ್ ವ್ಯನಕ್ತಿ । ಈ ಜಗತ್ತನ್ನೆಲ್ಲಾ ಹಗ್ಗದಿಂದ ಕಟ್ಟಿ ಹಿಡಿದಿರುವಂತೆ ಕತ್ತಲೆಯು ಎಲ್ಲಾ ಸ್ಥಳದಲ್ಲಿಯೂ ವ್ಯಾಪಿಸಿ ಹರಡಿರುವುದು. ಇಂತಹ ಕತ್ತಲೆಯನ್ನು ಅಗ್ನಿಯು ತನ್ನ ಪ್ರಕಾಶಮಾನವಾದ ರಶ್ಮಿಗಳಿಂದ (ಬೆಳಕಿನಿಂದ ಹಗ್ಗದಿಂದ ಕಟ್ಟಿ ಹಿಡಿದು ಸ್ವಾಧೀನದಲ್ಲಿರಿಸಿಕೊಳ್ಳುವಂತೆ,) ತನ್ನ ಪ್ರಕಾಶವನ್ನು ಬೀರಿ ಎಲ್ಲಾ ಕಡೆಯಲ್ಲಿಯೂ ಬೆಳಕಾಗುವಂತೆ ಮಾಡಿರುವನು.

ಅತ್ ದಕ್ಷಿಣಾ ವಾಜಯಂತೀ ಯುಜ್ಯತೇ—ಅನಂತರಮೇವ ಪ್ರವೃದ್ಧಾ ಅನ್ನಮಿಚ್ಛಂತ್ಯಾಜ್ಯ ಧಾರಾ ಯುಕ್ತಾ ಭವತಿ । ಅಥವಾ ದಕ್ಷಿಣಾ ಪ್ರವೃದ್ಧಾಜ್ಯಧಾರಾ ಯುಜ್ಯತೇ । ಅನಂತರ ಎಂದರೆ ಅಗ್ನಿಯು ಚೆನ್ನಾಗಿ ಪ್ರಜ್ವಲಿತವಾಗಿರುವಾಗ ಅನ್ನಾದ್ಯಾಹಾರಗಳನ್ನು ಅಪೇಕ್ಷಿಸುವ ಯಜಮಾನಾದಿ ಜನರು ಅಗ್ನಿಯಲ್ಲಿ ಬಹಳವಾಗಿ ಆಜ್ಯವನ್ನು (ತುಪ್ಪವನ್ನು) ಹೋಮಮಾಡುವರು

ಉತ್ತಾನಾಂ ಊರ್ಧ್ವಃ ಜುಹೂಭಿಃ ಆಧಯತ್—ತಾಂ ಚ ಧಾರಾಂ ಊರ್ಧ್ವತಾನಾಮುಪರಿ ವಿಸ್ತೃತಾಂ ಉನ್ನತಃ ಸನ್ ಜುಹೂಭಿಃ ಪಿಬತಿ । ಜುಹೂ ಎಂದರೆ ಆಜ್ಯವನ್ನು ಅಗ್ನಿಯಲ್ಲಿ ಹೋಮಮಾಡುವುದಕ್ಕಾಗಿ ಉಪಯೋಗಿಸುವ ಮರದ ಸೌಟುಗಳು ಈ ರೀತಿ ಋತ್ವಿಗ್ಯಜಮಾನರು ಅಗ್ನಿಯಲ್ಲಿ ಜುಹೂ ಎಂಬ ಮರದ ಸೌಟುಗಳಿಂದ ಹೋಮಮಾಡುತ್ತಿರುವ (ಎತ್ತರದಿಂದ ಸುರಿಯುತ್ತಿರುವ) ಆಜ್ಯಧಾರೆಯನ್ನು (ಘೃತವನ್ನು) ಅಗ್ನಿಯು ತನ್ನ ಜ್ವಾಲೆಗಳನ್ನು ಮೇಲಕ್ಕೆ ಚಾಚಿ ಪಾನಮಾಡುವನು ಅಗ್ನಿಯಲ್ಲಿ ಆಜ್ಯವನ್ನು ಹೋಮಮಾಡಿದಪ್ಪೊ ಜ್ವಾಲೆಯು ಮೇಲಕ್ಕೇಳುವುದು ಸಹಜವು ಆ ವಿಷಯವನ್ನೇ ಇಲ್ಲಿ—ಅಗ್ನಿಯು ತನ್ನ ಜ್ವಾಲೆಗಳನ್ನು ಮೇಲಕ್ಕೆ ಪ್ರಸರಿಸಿ ಆಜ್ಯವನ್ನು ಪಾನಮಾಡುವನು ಎಂದು ಪ್ರಕಾರಾಂತರದಿಂದ ವರ್ಣಿಸಿದೆ.

॥ ಸಂಹಿತಾಪಾಠಃ ॥

ಅಗ್ನಿಮಚ್ಛಾ ದೇವಯತಾಂ ಮನಾಂಸಿ ಚಕ್ಷೂಂಷೀವ ಸೂರ್ಯೇ ಸಂ ಚರಂತಿ ।

ಯದೀಂ ಸುವಾತೇ ಉಷಸಾ ವಿರೂಪೇ ಶ್ವೇತೋ ವಾಜೀ ಜಾಯತೇ ಅಗ್ರೇ ಅಹ್ನಾಂ ॥ ೪ ॥

। ಪದಪಾಠಃ ।

ಅಗ್ನಿಂ । ಅಚ್ಛ । ದೇವ್ಯಯತಾಂ । ಮನಾಂಸಿ । ಚಕ್ಷೂಂಷಿಽಇವ । ಸೂರ್ಯೇ । ಸಂ । ಚರಂತಿ ।

ಯತ್ । ಈಂ । ಸುವಾತೇ ಇತಿ । ಉಷಸಾ । ವಿರೂಪೇ ಇತಿ ವಿಽರೂಪೇ । ಶ್ವೇತಃ । ವಾಜೀ । ಜಾಯತೇ ।

ಅಗ್ರೇ । ಅಹ್ನಾಂ ॥ ೪ ॥

। ಸಾಯಣಭಾಷ್ಯಂ ।

ಅಗ್ನಿಂ ದೇವಮಚ್ಛಾಭಿಮುಖ್ಯೇನ ದೇವಯತಾಂ ದೇವಾನಾತ್ಮನ ಇಚ್ಛತಾಂ ಯಜಮಾನಾನಾಂ ಮನಾಂಸಿ ಸಂ ಚರಂತಿ । ದೇವಾ ಯಷ್ಟವ್ಯಾಸ್ತದರ್ಥಂ ಕದಾಯಂ ವರ್ಧಿಷ್ಯತೀತಿ ಧ್ಯಾಯಂತೀತ್ಯರ್ಥಃ । ಚಕ್ಷೂಂಷೀವ ಸರ್ವೇಷಾಂ ಪ್ರಾಣಿನಾಂ ಯಥಾ ಸೂರ್ಯೇ ಸಂಚರಂತಿ ತದ್ವತ್ । ಯದ್ಯದೇಮೇನಮಗ್ನಿಮುಷಸಾ ಸಹ ವಿರೂಪೇ ನಾನಾರೂಪೇ ದ್ಯಾವಾಪೃಥಿವ್ಯೌ ಸುವಾತೇ । ಜನಯೇತಃ । ತದಾನೀಂ ಶ್ವೇತಃ ಪ್ರಕೃಷ್ಟವರ್ಣೋಽಪೇತೋ ವಾಜೀ ವೇಜನವಾನಗ್ನಿರಹ್ನಾಮಗ್ರ ಉದಯಕಾಲೇ ಜಾಯತೇ । ಪ್ರವರ್ಧತ ಇತ್ಯರ್ಥಃ ॥

। ಪ್ರತಿಪದಾರ್ಥ ।

ಸೂರ್ಯೇ—ಸೂರ್ಯನಲ್ಲಿ ಆಸಕ್ತವಾದ । **ಚಕ್ಷೂಂಷೀವ**—(ಮಾನವರ)ಚಕ್ಷುಸ್ಸುಗಳಂತೆ । **ದೇವಯತಾಂ**—ದೇವತೆಗಳ ಅನುಗ್ರಹವನ್ನು ಪಡೆಯಲಿಚ್ಛಿಸುವ ಯಜಮಾನರ । **ಮನಾಂಸಿ**—ಮನಸ್ಸುಗಳು । **ಅಗ್ನಿಂ ಅಚ್ಛ**—ಅಗ್ನಿಗೆ ಅಭಿಮುಖವಾಗಿ । **ಸಂ ಚರಂತಿ**—ಸಂಚರಿಸುತ್ತವೆ । **ವಿರೂಪೇ**—ನಾನಾ ರೂಪಗಳುಳ್ಳ ದ್ಯಾವಾಪೃಥಿವಿಗಳು । **ಯತ್**—ಯಾವಾಗ । **ಈಂ**—ಈ ಅಗ್ನಿಯನ್ನು । **ಉಷಸಾ ಸಹ**—ಉಷಸ್ಸಿನೊಡನೆ । **ಸುವತೇ**—ಹಡೆಯುತ್ತಾರೋ (ಆಗ) । **ಶ್ವೇತಃ**—ಉತ್ಕೃಷ್ಟವಾದ ವರ್ಣವಳ್ಳವನೂ । **ವಾಜೀ**—ವೇಗಶಾಲಿಯೂ ಆದ ಅಗ್ನಿಯು । **ಅಹ್ನಾಂ ಅಗ್ರೇ**—ಉದಯಕಾಲದಲ್ಲಿ । **ಜಾಯತೇ**—ಉತ್ಪನ್ನನಾಗುತ್ತಾನೆ.

। ಭಾವಾರ್ಥ ।

ಸೂರ್ಯನಲ್ಲಿ ಆಸಕ್ತವಾದ ಮಾನವರ ಚಕ್ಷುಸ್ಸುಗಳಂತೆ ದೇವತೆಗಳ ಅನುಗ್ರಹವನ್ನು ಪಡೆಯಲಿಚ್ಛಿಸುವ ಯಜಮಾನರ ಮನಸ್ಸುಗಳು ಅಗ್ನಿಗೆ ಅಭಿಮುಖವಾಗಿ ಸಂಚರಿಸುತ್ತವೆ. ನಾನಾರೂಪವುಳ್ಳ ದ್ಯಾವಾಪೃಥಿವಿಗಳು ಈ ಅಗ್ನಿಯನ್ನು ಉಷಸ್ಸಿನೊಡನೆ ಹಡೆದೊಡನೆಯೇ, ಉತ್ಕೃಷ್ಟವಾದ ವರ್ಣವುಳ್ಳವನೂ ವೇಗಶಾಲಿಯೂ ಆದ ಅಗ್ನಿಯು ಉದಯಕಾಲದಲ್ಲಿ ಉತ್ಪನ್ನನಾಗುತ್ತಾನೆ.

English Translation

The minds of the devout turn to Agni, as the eyes (of men) look towords the the sun : when the multiform (heaven and earth) bring him forth along with the dawn, he is born as a white courser in the beginning of the days.

॥ ವಿಶೇಷವಿಷಯಗಳು ॥

ಸೂರ್ಯೇ ಚಕ್ಷೂಂಷೀವ ದೇವಯತಾಂ ಮನಾಂಸಿ ಅಗ್ನಿಂ ಅಚ್ಛ ಸಂ ಚರಂತಿ—ಸೂರ್ಯನನ್ನು ನೋಡ ಬಯಸುವ ಜನರು ಯಾವ ರೀತಿ ತಮ್ಮ ಕಣ್ಣುಗಳನ್ನು ಮೇಲಕ್ಕೆತ್ತಿ ನೋಡುವರೋ ಆದರಂತೆ ದೇವತೆಗಳನ್ನು ಯಜ್ಞಾಗ್ನಿಯಲ್ಲಿ ಆರಾಧಿಸಬೇಕೆಂದು ಇಚ್ಛಿಸುವ ಜನರು ಅಗ್ನಿಯ ಅಭಿಮುಖವಾಗಿ ನಿಂತು ಈ ಅಗ್ನಿಯು ಯಜ್ಞದಲ್ಲಿ ಹವಿಸ್ಸನ್ನು ಸ್ವೀಕರಿಸುವುದಕ್ಕಾಗಿ ಯಾವಾಗ ಚೆನ್ನಾಗಿ ಪ್ರಜ್ವಲಿತನಾಗುವನು ಎಂಬ ಕುತೂಹಲದಿಂದ ಅಗ್ನಿಯನ್ನೇ ನೋಡುತ್ತಿರುವರು ಎಂದಭಿಪ್ರಾಯವು

ವಿರೂಪೇ ಯತ್ ಈಂ ಉಷಸಾ ಸಹ ಸುವತೇ ಶ್ವೇತಃ ವಾಜೀ ಅಹ್ನಾಂ ಅಗ್ರೇ ಜಾಯತೇ । ನಾನಾರೂಪವುಳ್ಳ ವಸ್ತುಗಳಿಂದ ಸಹಿತರಾದ ದ್ಯಾವಾಪೃಥಿವಿಗಳು ಉಷಃಕಾಲದಲ್ಲಿ ಉಷಸ್ಸನ್ನೂ, ಅಗ್ನಿಯನ್ನೂ ಉತ್ಪನ್ನಮಾಡುವವು. ಎಂದರೆ ಉಷಃಕಾಲದಲ್ಲಿಯೇ ಅಗ್ನಿಯು ಪ್ರತಿಷ್ಠಿಸಲ್ಪಡುವನು ಅಂತಹ ಸಮಯದಲ್ಲಿ ಎಂದರೆ ಪ್ರಾತಃಕಾಲದಲ್ಲಿ ಅಗ್ನಿಯು ಬೇಗನೆ ಕಾಷ್ಠಾದಿಗಳಲ್ಲಿ ವ್ಯಾಪಿಸಿ ಪ್ರಕಾಶಮಾನನಾಗಿ ಬೆಳಗುವನು.

॥ ಸಂಹಿತಾಪಾಠಃ ॥

ಜನಿಷ್ವ ಹಿ ಜೇನ್ಯೋ ಅಗ್ರೇ ಅಹ್ನಾಂ ಹಿತೋ ಹಿತೇಷ್ವರುಷೋ ವನೇಷು ।
ದಮೇದಮೇ ಸಪ್ತ ರತ್ನಾ ದಧಾನೋಽಗ್ನಿರ್ಹೋತಾ ನಿ ಷಸಾದಾ ಯಜೀಯಾನ್ ॥ ೫ ॥

॥ ಪದಪಾಠಃ ॥

ಜನಿಷ್ವ । ಹಿ । ಜೇನ್ಯಃ । ಅಗ್ರೇ । ಅಹ್ನಾಂ । ಹಿತಃ । ಹಿತೇಷು । ಅರುಷಃ । ವನೇಷು ।
ದಮೇಽದಮೇ । ಸಪ್ತ । ರತ್ನಾ । ದಧಾನಃ । ಅಗ್ನಿಃ । ಹೋತಾ । ನಿ । ಸಸಾದ । ಯಜೀಯಾನ್ ॥ ೫ ॥

॥ ಸಾಯಣಭಾಷ್ಯಂ ॥

ಅಯಮಗ್ನಿರ್ಜೇನ್ಯ ಉತ್ಪಾದನೀಯೋಽಹ್ನಾಮಗ್ರ ಉದಯಕಾಲೇ ಜನಿಷ್ವ । ಪ್ರಾದುರಭೂತ್ । ಪಶ್ಚಾತ್ ಹಿತೇಷು ವನೇಷು ವನೋತ್ಥೇಷು ಕಾಷ್ಠೇಷ್ವರುಷ ಆರೋಚಮಾನಃ ಸನ್ ಹಿತಃ । ಸ್ಥಾಪಿತಃ । ಪಶ್ಚಾದ್ದಮೇ ದಮೇ ತತ್ತದ್ಯಾಗಗೃಹೇ ಸಪ್ತ ರತ್ನಾ ರಮಣೀಯಾನಿ ಸಪ್ತ ಜ್ವಾಲಾ ದಧಾನೋ ಧಾರಯಮಾಣಃ । ಅಥವಾ ಯಜಮಾನೇಭ್ಯಃ ಸಪ್ತವಿಧಾನಿ ರತ್ನಾನಿ ದಧಾನೋಽಗ್ನಿರ್ಹೋತಾ ಹೋಮನಿಷ್ಪಾದಕಃ ಸನ್ ಯಜೀಯಾನ್ಯಷ್ಟ್ಯರ್ಥಃ ಸನ್ ನಿ ಸಸಾದ । ನಿಷಣ್ಣೋ ಭವತಿ ॥

॥ ಪ್ರತಿಪದಾರ್ಥಃ ॥

ಜೇನ್ಯಃ—ಉತ್ಪನ್ನನಾಗಲು ಯೋಗ್ಯನಾದ ಅಗ್ನಿಯು । **ಅಹ್ನಾಂ ಅಗ್ರೇ**—ಉದಯಕಾಲದಲ್ಲಿ । **ಜನಿಷ್ವ**—ಉತ್ಪನ್ನನಾದನು (ಅನಂತರ) । **ಹಿತೇಷು**—ತನ್ನ ಪ್ರಸರಕ್ಕೆ ಅನುಕೂಲವಾದ । **ವನೇಷು**—

ವನಗಳಲ್ಲಿ। **ಅರುಷಃ**—ಪ್ರಕಾಶಮಾನನಾಗಿ। **ಹಿತಃ**—ಸ್ಥಾಪಿತನಾಗಿದ್ದಾನೆ (ಅಮೇಲೆ)। **ದಮೇದಮೇ**—ಪ್ರತಿಯೊಂದು ಯಾಗಗೃಹದಲ್ಲಿಯೂ। **ಸಪ್ತರತ್ನಾ**—ರಮಣೀಯವಾದ ತನ್ನ ಸಪ್ತಜ್ವಾಲೆಗಳನ್ನೂ। **ದಧಾನಃ**—ಧರಿಸಿಕೊಂಡು। **ಅಗ್ನಿಃ**—ಅಗ್ನಿಯು। **ಹೋತಾ**—ಹೋಮಸಂಪಾದಕನಾಗಿಯೂ। **ಯಜೀಯಾನ್**—ಯಜ್ಞಾರ್ಹನಾಗಿಯೂ। **ನಿಷಸಾದ**—ಆಸನ್ನನಾಗಿದ್ದಾನೆ (ಕುಳಿತಿದ್ದಾನೆ).

॥ ಭಾವಾರ್ಥ ॥

ಉತ್ಪನ್ನನಾಗಲು ಯೋಗ್ಯನಾದ ಅಗ್ನಿಯು ಉದಯಕಾಲದಲ್ಲಿ ಆವಿರ್ಭೂತನಾಗಿ ಪ್ರಥಮತಃ, ತನ್ನ ಪ್ರಸರಕ್ಕೆ ಹಿತಕಾರಿಯಾದ ವನಕಾಷ್ಠಾದಿಗಳಲ್ಲಿ ಸ್ಥಾಪಿತನಾಗಿದ್ದಾನೆ. ನಂತರ ಪ್ರತಿಯೊಂದು ಯಾಗಗೃಹದಲ್ಲಿಯೂ, ರಮಣೀಯವಾದ ತನ್ನ ಸಪ್ತಜ್ವಾಲೆಗಳನ್ನೂ ಧರಿಸಿಕೊಂಡು ಹೋಮಸಂಪಾದಕನಾಗಿಯೂ, ಯಜ್ಞಾರ್ಹನಾಗಿಯೂ ಆಸನ್ನನಾಗಿದ್ದಾನೆ.

English Translation.

(Agni), capable of birth, is born in the beginning of the days, radiant, he is deposited in the friendly woods, and then the adorable Agni, the offerer of the oblation, displaying seven precions (rays), is seated in every house.

॥ ವಿಶೇಷನಿಷಯಗಳು ॥

ಜೇನ್ಯಃ ಅಹ್ನಾಂ ಅಗ್ರೇ ಜನಿಷ್ಟ, ಹಿತೇಷು ವನೇಷು ಅರುಷಃ ಹಿತಃ—**ಅಯಮಗ್ನಿಃ ಉತ್ಪಾದನೀಯಃ ಉದಯಕಾಲೇ ಪ್ರಾದುರಭೂತ್। ಪಶ್ಚಾತ್ ವನೋತ್ಪನ್ನೇಷು ಕಾಷ್ಠೇಷು ಅರೋಚಮಾನಸ್ಸನ್ ಸ್ಥಾಪಿತಃ।** ಈ ಅಗ್ನಿಯು ಯಜ್ಞಾರ್ಧವಾಗಿ ಪ್ರಾತಃಕಾಲದಲ್ಲಿಯೇ ಯಜ್ಞಕುಂಡದಲ್ಲಿ ಸ್ಥಾಪಿತನಾಗಿ ಚೆನ್ನಾಗಿ ಹೊತ್ತಿಕೊಳ್ಳುವುದಕ್ಕಾಗಿ ಹಾಕುವ ಕಾಷ್ಠಾದಿಗಳಲ್ಲಿ ವ್ಯಾಪಿಸಿ ಎಂದರೆ ಕಾಷ್ಠಾದಿಗಳನ್ನು ದಹಿಸುತ್ತಾ ಜಾಜ್ವಲ್ಯಮಾನನಾಗಿ ಬೆಳಗುತ್ತಿರುವನು

ದಮೇ ದಮೇ ಸಪ್ತ ರತ್ನಾ ದಧಾನಃ ಅಗ್ನಿಃ ಹೋತಾ ಯಜೀಯಾನ್ ನಿಷಸಾದ—**ಪಶ್ಚಾತ್ ತತ್ತದ್ಯಾಗಗೃಹೇ ರಮಣೀಯಾ ಸಪ್ತಜ್ವಾಲಾಃ ಧಾರಯಮಾಣಃ ಅಥವಾ ಯಜಮಾನೇಭ್ಯಃ ಸಪ್ತವಿಧಾನಿ ರತ್ನಾನಿ ದಧಾನಃ ಅಗ್ನಿಃ ಹೋಮನಿಷ್ಪಾದಕಃ ಸನ್ ಯಜ್ಞಮ್ಯಃ ನಿಷನ್ನೋ ಭವತಿ।** ಆನಂತರ ಈ ಅಗ್ನಿಯು ಪ್ರತಿಯಜ್ಞಗೃಹದಲ್ಲಿಯೂ ತನ್ನ ಸಪ್ತವಿಧವಾದ ಜ್ವಾಲೆಗಳಿಂದ ಬೆಳಗುತ್ತಿರುವನು ಅಥವಾ ಯಜ್ಞಮಾಡುವ ಯಜಮಾನರಿಗೆ ಏಳುವಿಧ ರತ್ನಗಳನ್ನು ಕೊಡುವನನಾಗಿ ಬೆಳಗುತ್ತಿರುವನು. ಈ ರೀತಿ ಹೋಮನಿಷ್ಪಾದಕನಾದ ಅಗ್ನಿಯು ಯಜ್ಞನಿರ್ವಹಣಕ್ಕಾಗಿ ಅಗ್ನಿಕುಂಡಲದಲ್ಲಿ ಕುಳಿತಿರುವನು ಎಂದರೆ ಬೆಳಗುತ್ತಿರುವನು.

ಪುರಾಣಾದಿಗಳಲ್ಲಿ ಅಗ್ನಿಯ ಏಳುವಿಧ ಜ್ವಾಲೆಗಳಿಗೆ ಕಾಳೀ, ಕರಾಳೀ ಇತ್ಯಾದಿ ಹೆಸರುಗಳಿವೆ ಈ ಜ್ವಾಲೆಗಳನ್ನು ಅಗ್ನಿಯ ಜಿಹ್ವೆ (ನಾಲಗೆ) ಯೆಂದೂ ಹೇಳುವುದುಂಟು.

। संहितापाठः ।

अग्निर्होता न्यसीदद्यजीयानुपस्थे मातुः सुरभा ऊ लोके ।
युवा कविः पुरुनिष्ठ ऋतावा धर्ता कृष्टीनामुत मध्य इद्धः ॥ ६ ॥

। पदपाठः ।

अग्निः । होता । नि । असीदत् । यजीयान् । उपऽस्थे । मातुः । सुरभौ । ऊं इति । लोके ।
युवा । कविः । पुरुनिष्ठऽस्थः । ऋतऽवा । धर्ता । कृष्टीनाम् । उत । मध्ये । इद्धः ॥ ६ ॥

। सायणभाष्यं ।

जीवति यजमाने मृते इति शब्दो यदि स्यात्तदानीं सुरभिमतीष्टिः कार्या। तत्रेयमनुवाक्या । सूत्रितं च । अग्निर्होता न्यसीदद्यजीयानाज्यध्मेमकर्दित्यव-वीतिं नो अद्य । ऐ. ब्रा.ं. ८-६ । इति ॥

अयमग्निर्होता होममनिष्पादकः सन् यजीयोऽत्यन्तयष्टृतमश्च सन् न्यसीदत् । निषसाद । कुत्रेति तदुच्यते। मातुः सर्वस्य निर्मातुर्भूम्या उपस्थ उत्सङ्गे तत्रापि सुरभावाज्यादिसौरभ्ययुक्ते लोके सर्वैर्दर्शनीये स्थाने नेदिलक्षणे । उतापि च युवा नित्यतरुणः सर्वत्र मिश्रितो वा कविर्मेधावी पुरुनिष्ठोः बहुस्थान ऋतावा यज्ञवान्धर्ता सर्वस्य धारक एवंभूतः सन् कृष्टीनामृत्विग्यजमानानां मध्य इद्धः समिद्धः सन् वर्तत इति शेषः ॥

। प्रत्यक्षरार्थ ।

अग्निः—अग्नियु । होता—होमसंपादकनागियू । यजीयान्—यज्ञार्हनागियू । मातुः—तन्न जननियाद पृथ्विय । उपस्थे—तोडियंतिरुवुदू । सुरभौ—सुवासनेयुळ्ळुद्दू आद । लोके—यज्ञवेदियल्लि । न्यसीदत्—आसन्ननागिद्दानॆ । उत—मत्तु । युवा—नित्यतरुणनू । कविः—मेधावियू । पुरुनिष्ठः—अनेकप्रदेशगळल्लि स्थितनू । ऋतावा—यज्ञवंतनू । धर्ता—सर्वजगद्धारकनू आगि । कृष्टीनाम्—यजमानादिगळ । मध्ये—मध्यदल्लि । इद्धः—प्रज्वलितनागिद्दानॆ

॥ ಭಾವಾರ್ಥ ॥

ಅಗ್ನಿಯು ಹೋಮಸಂಪಾದಕನಾಗಿಯೂ, ಯಜ್ಞಾರ್ಹನಾಗಿಯೂ ಇದ್ದು ತನ್ನ ಜನನಿಯಾದ ಪೃಥ್ವಿಯ ತೊಡೆಯಂತಿರುವುದೂ, ಸುವಾಸನೆಯುಳ್ಳದ್ದೂ ಆದ ಯಜ್ಞವೇದಿಯಲ್ಲಿ ಆಸನ್ನನಾಗಿದ್ದಾನೆ. ಮತ್ತು ನಿತ್ಯತರುಣನೂ, ಮೇಧಾವಿಯೂ, ಅನೇಕ ಪ್ರದೇಶಗಳಲ್ಲಿ ಸ್ಥಿತನೂ, ಯಜ್ಞವಂತನೂ, ಸರ್ವಜಗದ್ಧಾರಕನೂ ಆಗಿ ಋತ್ವಿಗ್ಯಜಮಾನಾದಿಗಳ ಮಧ್ಯದಲ್ಲಿ ಪ್ರಜ್ವಲಿತನಾಗಿದ್ದಾನೆ.

English Translation.

The adorable Agni, the offerer of the oblation has sat down in a fragrant place on the top of his mother (earth) : youthful, wise, many-stationed, the celebrator of sacrifice, the sústainer (of all), kindled (he abides) amongst men

॥ ವಿಶೇಷವಿಷಯಗಳು ॥

ಯಜ್ಞಮಾಡುವ ಯಜಮಾನನು ಜೀವಿಸಿದ್ದರೂ ಮೃತನಾದನು ಎಂಬ ಸುದ್ದಿಯು ಹರಡಿದಲ್ಲಿ ಆ ದೋಷ ಪರಿಹಾರಕ್ಕಾಗಿ ಸುರಭಿಮತಿ ಎಂಬ ಇಷ್ಟಿಯನ್ನು ಮಾಡಬೇಕು. ಆಗ ಹೋಮಕಾಲದಲ್ಲಿ ಅಗ್ನಿರ್ಹೋತಾ ಎಂಬ ಈ ಋಕ್ಕನ್ನು ಅನುವಾಕ್ಯಾನುಮಂತ್ರವನ್ನಾಗಿ ಪರಿಸಬೇಕೆಂದು **ಅಗ್ನಿರ್ಹೋತಾ ನ್ಯಸೀದದ್ಯ ಜೀಯಾನ್ತ್ಸ್ಯಧ್ವೀಮಕ-ದೇವವೀತಿಂ ನೋ ಅದ್ಯ** ಎಂಬ ಐತರೇಯಬ್ರಾಹ್ಮಣವಾಕ್ಯವು ನಿರ್ದೇಶಿಸುವುದು (ಐ. ಬ್ರಾ ೭-೯)

ಹೋಮಾರ್ಥವಾಗಿ ಅಗ್ನಿಯು ಪ್ರಜ್ವಲಿತವಾಗಿದೆ. ಶುದ್ಧವೂ, ನಿರ್ಮಲವೂ, ಒಳ್ಳೆಯ ವಾಸನೆಯಿಂದ ಯುಕ್ತವಾದುದೂ ಆದ ಯಜ್ಞವೇದಿಯಲ್ಲಿ ಅಗ್ನಿಯು ಚೆನ್ನಾಗಿ ಬೆಳಗುತ್ತಾನೆ. ಈ ಅಗ್ನಿಯ ಸುತ್ತಲೂ ಋತ್ವಿಗ್ಯಜಮಾನರು ಯಜ್ಞಾರ್ಥವಾಗಿ ನೆರೆದಿದ್ದಾರೆ. ಈ ಅಗ್ನಿಯು ಏಕಕಾಲದಲ್ಲಿ ಅನೇಕಯಜ್ಞಗೃಹಗಳಲ್ಲಿ ಇರಲು ಸಮರ್ಥನು, ಯಜ್ಞಕ್ಕೆ ಮುಖ್ಯಸಾಧನಭೂತನಾದವನು, ಜಗತ್ತನ್ನು ಅಥವಾ ಯಜ್ಞವನ್ನು ರಕ್ಷಿಸತಕ್ಕವನು. ಇಂತಹ ಗುಣವಿಶಿಷ್ಟನಾದ ಅಗ್ನಿಯು ಯಜ್ಞವೇದಿಯಲ್ಲಿ ಪ್ರಜ್ವಲಿತನಾಗಿ ಬೆಳಗುತ್ತಿರುವನು ಎಂದು ಈ ಋಕ್ಕಿನ ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ಪ್ರ ಣು ತ್ಯಂ ವಿಪ್ರಮಧ್ವರೇಷು ಸಾಧುಮಗ್ನಿಂ ಹೋತಾರಮಿಳತೇ ನಮೋಭಿಃ ।
ಆ ಯಸ್ತತಾನ ರೋದಸೀ ಋತೇನ ನಿತ್ಯಂ ಮೃಜಂತಿ ವಾಜಿನಂ ಘೃತೇನ ॥

॥ ಪದಪಾಠಃ ॥

ಪ್ರ । ನು । ತ್ಯಂ । ವಿಪ್ರಂ । ಅಧ್ವರೇಷು । ಸಾಧುಂ । ಅಗ್ನಿಂ । ಹೋತಾರಂ । ಈಳತೇ । ನಮಃಭಿಃ ।
ಆ । ಯಃ । ತತಾನ । ರೋದಸೀ ಇತಿ । ಋತೇನ । ನಿತ್ಯಂ । ಮೃಜಂತಿ । ವಾಜಿನಂ । ಘೃತೇನ ॥ ೬ ॥

॥ ಸಾಯಣಭಾಷ್ಯಂ ॥

ತ್ಯಂ ತಮಗ್ನಿಂ ನಮೋಭಿಃ ಸ್ತುತಿಭಿರ್ನು ಕ್ಷಿಪ್ರಂ ಪ್ರೇಳತೇ । ಸ್ತುವಂತಿ । ಕೀದೃಶಂ ತಂ । ವಿಪ್ರಂ ಮೇಧಾವಿನಮಧ್ವರೇಷು ಸಾಧುಂ ಫಲಸಾಧಕಂ ಹೋತಾರಂ ಹೋಮನಿಷ್ಪಾದಕಂ । ಯೋ ದೇವೋ ರೋದಸೀ ದ್ಯಾವಾಪೃಥಿವ್ಯಾವೃತೇನೋದಕೇನಾ ತತಾನ । ವಿಸ್ತಾರಿತವಾನ್ । ಅಗ್ನೌ ಪ್ರಾಸ್ತಾಹುತೇರಾದಿತ್ಯದ್ವಾರಾ ವೃಷ್ಟ್ಯುತ್ಪಾದಕತ್ವಾತ್ । ಅಥವಾ ಋತೇನ ಸತ್ಯಭೂತೇನ ಹವಿಷಾ ದಿವಂ ತಥಾಭೂತೇನ ವೃಷ್ಟ್ಯಾದಿಫಲೇನ ಭುವಂ ಚಾ ತತಾನ । ವಾಜಿನಮನ್ನವಂತಂ ದೇವಂ ಯಜಮಾನಾ ನಿತ್ಯಂ ಘೃತೇನೋದಕೇನಾಜ್ಯೇನ ವಾ ಮೃಜಂತಿ । ಪರಿಚರಂತಿ ॥

॥ ಪ್ರತಿಪದಾರ್ಥ ॥

ಯಃ—ಯಾವ ಅಗ್ನಿಯು । **ರೋದಸೀ**—ದ್ಯಾವಾಪೃಥಿವಿಗಳನ್ನು । **ಋತೇನ**—ಉದಕದಿಂದ (ಅಥವಾ ಸತ್ಯಾತ್ಮಕವಾದ ಹವಿಸ್ಸಿನಿಂದ) । **ಆ ತತಾನ**—ವಿಸ್ತರಿಸುವಂತೆ ಮಾಡಿದನೋ । **ತ್ಯಂ**—ಅಂತಹವನೂ । **ವಿಪ್ರಂ**—ಮೇಧಾವಿಯೂ । **ಅಧ್ವರೇಷು**—ಯಾಗಗಳಲ್ಲಿ । **ಸಾಧುಂ**—ಫಲಸಾಧಕನೂ । **ಹೋತಾರಂ**—ಹೋಮ ಸಂಪಾದಕನೂ ಆದ । **ಅಗ್ನಿಂ**—ಅಗ್ನಿಯನ್ನು । **ನಮಃಭಿಃ**—ಸ್ತುತಿಗಳಿಂದ । **ನು**—ಕ್ಷಿಪ್ರವಾಗಿ । **ಪ ಈಳತೇ**—ಸ್ತುತಿಸುತ್ತಾರೆ । **ವಾಜಿನಂ**—ಅನ್ನವಂತನಾದ ಅಗ್ನಿಯನ್ನು । **ನಿತ್ಯಂ**—ಪ್ರತಿದಿನವೂ । **ಘೃತೇನ**—ಘೃತದಿಂದ । **ಮೃಜಂತಿ**—ಉಪಚರಿಸಿ ಪೂಜಿಸುತ್ತಾರೆ

॥ ಭಾವಾರ್ಥ ॥

ಯಾವ ಅಗ್ನಿಯು ಸತ್ಯಾತ್ಮಕವಾದ ಹವಿಸ್ಸಿನಿಂದಲೂ ಮತ್ತು ವೃಷ್ಟಿಯಿಂದಲೂ ಸಹ ದ್ಯಾವಾಪೃಥಿವಿಗಳೆರಡನ್ನೂ ಸಹ ವಿಸ್ತರಿಸುವಂತೆ ಮಾಡಿದನೋ ಅಂತಹವನೂ, ಮೇಧಾವಿಯೂ, ಯಾಗಗಳಲ್ಲಿ ಫಲಸಾಧಕನೂ, ಹೋಮಸಂಪಾದಕನೂ ಆದ ಅಗ್ನಿಯನ್ನು ಸ್ತುತಿಗಳಿಂದ ಪ್ರಶಂಸಿಸುತ್ತಾರೆ ಮತ್ತು ಅನ್ನವಂತನಾದ ಅಗ್ನಿಯನ್ನು ಪ್ರತಿದಿನವೂ ಘೃತದಿಂದ ಉಪಚರಿಸುತ್ತಾರೆ.

English Translation.

They glorify at present with hymns that Agni, who is intelligent, the fullfiller (of desires) at sacrifices, the offerer of oblations, who has charged heaven and earth with water, and whom they always worship with clarified butter as the bestower of food

॥ ವಿಶೇಷವಿಷಯಗಳು ॥

ಯಃ ರೋದಸೀ ಋತೇನ ಆ ತತಾನ—ಯಃ ದೇವಃ (ಅಗ್ನಿಃ) ದ್ಯಾವಾಪೃಥಿವ್ಯೌ ಉದಕೇನ ವಿಸ್ತಾರಿತವಾನ್ । ಅಗ್ನೌ ಪ್ರಾಸ್ತಾಹುತೇರಾದಿತ್ಯದ್ವಾರಾ ವೃಷ್ಟ್ಯುತ್ಪಾದಕತ್ವಾತ್ । ಅಥವಾ ಋತೇನ ಸತ್ಯಭೂತೇನ ಹವಿಷಾ ದಿವ್ಯಂ ತಥಾಭೂತೇನ ವೃಷ್ಟ್ಯುದಿಫಲೇನ ಭುವಂ ಚ ಆ ತತಾನ । ಈ ವಾಕ್ಯಕ್ಕೆ ಸಾಯಣರು ಎರಡು ವಿಧವಾಗಿ ಅರ್ಥವಿವರಣೆ ಮಾಡಿರುವರು. ಈ ಅಗ್ನಿಯು ದ್ಯಾವಾಪೃಥಿವಿಗಳನ್ನು (ಭೂಮ್ಯಂತರಿಕ್ಷಗಳನ್ನು) ಉದಕದಿಂದ ವ್ಯಾಪಿಸುವಂತೆ ಮಾಡಿದನು ಅಂತರಿಕ್ಷವನ್ನೂ, ಭೂಮಿಯನ್ನೂ ಅಗ್ನಿಯು (ವಿದ್ಯುದಗ್ನಿಯೂ) ವೃಷ್ಟ್ಯುದಕದಿಂದ ವ್ಯಾಪಿಸುವಂತೆ ಮಾಡಿನನು ಅಥವಾ ಅಗ್ನಿಯಲ್ಲಿ ಅರ್ಪಿಸಿದ ಆಹುತಿಗಳು (ಹೋಮಗಳು) ಸ್ವರ್ಗದಲ್ಲಿರುವ ಆದಿತ್ಯನನ್ನು ಸೇರಿ ಅವನಿಗೆ ಅದರಿಂದ ತೃಪ್ತಿಯುಂಟಾಗಿ ಆದಿತ್ಯನ ಮೂಲಕ ಭೂಮ್ಯಂತರಿಕ್ಷಗಳು ವೃಷ್ಟ್ಯುದಕದಿಂದ ವ್ಯಾಪಿಸಿದವು ಎಂಬುದು ಒಂದು ವಿಧವಾದ ಅರ್ಥವು ಅಥವಾ ಋತಶಬ್ದಕ್ಕೆ ಸತ್ಯವೆಂದು ಅರ್ಥಮಾಡಿದರೆ ಸತ್ಯಾತ್ಮಕವಾದ ಹವಿಸ್ಸಿನಿಂದ ಎಂದರೆ ಅಗ್ನಿಯಲ್ಲಿ ಹೋಮ ಮಾಡುವ ಹವಿರಾದಿಗಳಿಂದ ಸ್ವರ್ಗವನ್ನು ಎಂದರೆ ಸ್ವರ್ಗದಲ್ಲಿರುವ ದೇವತೆಗಳನ್ನು ತೃಪ್ತಿಪಡಿಸಿದಂತೆ ಆಗುವುದು ಈ ರೀತಿ ಹವಿರರ್ಪಣೆಯಿಂದ ದೇವತೆಗಳಿಗೆ ಸಂತೋಷವುಂಟಾಗಿ ಅವರು ಭೂಮಿಗೆ ವೃಷ್ಟಿರೂಪವಾದ ಫಲವನ್ನು ಒದಗಿಸಿಕೊಡುವರು. ಆದುದರಿಂದ ಭೂಮಿಗೂ ತೃಪ್ತಿಯುಂಟಾದಂತಾಯಿತು ಈ ರೀತಿ ಅಗ್ನಿಯು ದ್ಯಾವಾಪೃಥಿವಿಗಳೆರಡನ್ನೂ ವ್ಯಾಪಿಸಿದನೆಂದು ಇಲ್ಲಿ ವರ್ಣಿಸಿದೆ

॥ ಸಂಹಿತಾಪಾಠಃ ॥

ಮಾರ್ಜಾಲ್ಯೋ ಮೃಜ್ಯತೇ ಸ್ವೇ ದಮೂನಾಃ ಕವಿಪ್ರಶಸ್ತೋ ಅತಿಥಿಃ ಶಿವೋ ನಃ ।
ಸಹಸ್ರಶೃಂಗೋ ವೃಷಭಸ್ತದೋಜಾ ವಿಶ್ವಾನ್ ಅಗ್ನೇ ಸಹಸಾ ಪ್ರಾಸ್ಯನ್ಯಾನ್ ॥

॥ ಪದಪಾಠಃ ॥

ಮಾರ್ಜಾಲ್ಯಃ । ಮೃಜ್ಯತೇ । ಸ್ವೇ । ದಮೂನಾಃ । ಕವಿಪ್ರಶಸ್ತಃ । ಅತಿಥಿಃ । ಶಿವಃ । ನಃ ॥
ಸಹಸ್ರಶೃಂಗಃ । ವೃಷಭಃ । ತತ್ । ಓಜಾಃ । ವಿಶ್ವಾನ್ । ಅಗ್ನೇ । ಸಹಸಾ । ಪ್ರ । ಅಸಿ । ಅನ್ಯಾನ್ ॥ ೪ ॥

॥ ಸಾಯಣಭಾಷ್ಯಂ ॥

ಮಾರ್ಜಾಲ್ಯಃ ಸಂಮಾರ್ಜನೀಯೋಽಯಮಗ್ನಿರ್ಮೃಜ್ಯತೇ । ಪರಿಚರ್ಯತೇ । ಸ್ವೇ ಸ್ವಕೀಯೇ ಸ್ಥಾನೇ । ಕೀದೃಶೋಽಯಂ । ದಮೂನಾ ದಾನಮನಾ ದಾಂತಮನಾ ವಾ ಕವಿಪ್ರಶಸ್ತಃ ಕವಿಭಿರ್ಮೇಧಾ-

ವಿಭಿಃ ಪ್ರಶಸ್ತಃ ಪ್ರಕರ್ಷೇಣ ಸ್ತುತ್ಯೋ ನೋಽಸ್ಮಾಕಮತಿಥಿರತಿಥಿವತ್ಪೂಜ್ಯಃ ಶಿವಃ ಸುಖಕರಶ್ಚ । ಸಹಸ್ರಶೃಂಗೋಽಪರಿಮಿತಜ್ವಾಲೋ ವೃಷಭೋ ವರ್ಷಿತಾ ಫಲಾನಾಂ ತದೋಜಾಃ । ಯತ್ಪ್ರಸಿದ್ಧಂ ಬಲಂ ತೇಜೋ ವಾಸ್ತಿ ತದೇವೌಜೋ ಯಸ್ಯ ತಾದೃಶಃ । ಸರ್ವಬಲಸ್ವರೂಪ ಇತ್ಯರ್ಥಃ । ಅಥ ಪ್ರತ್ಯಕ್ಷವಾದಃ । ಹೇ ಅಗ್ನೇ ವಿಶ್ವಾನನ್ಯಾನ್ ಸ್ವವ್ಯತಿರಿಕ್ತಾನ್ ಸರ್ವಾನ್ ಸಹಸಾ ಬಲೇನ ಪ್ರಾಸಿ । ಪ್ರೇತಿ ಪರೇತ್ಯರ್ಥೇ । ಪರಾಭವಸಿ । ವ್ಯಾಪ್ತುಂ ವಾ ಪ್ರಭವಸಿ ॥

॥ ಪ್ರತಿಪದಾರ್ಥ ॥

ದಮೂನಾಃ—ದಾನಮನಸ್ಕನೂ । **ಕವಿಪ್ರಶಸ್ತಃ**—ಋಷಿಗಳಿಂದ ಪ್ರಶಂಸಿತನೂ । **ನಃ**—ನಮಗೆ । **ಅತಿಥಿಃ**—ಅತಿಥಿಯಂತೆ ಪೂಜ್ಯನೂ । **ಶಿವಃ**—ಮಂಗಳಕರನೂ । **ಸಹಸ್ರಶೃಂಗಃ**—ಸಹಸ್ರಾರು ಜ್ವಾಲೆಗಳುಳ್ಳವನೂ । **ವೃಷಭಃ**—ಕಾಮವರ್ಷಕನೂ । **ತದೋಜಾಃ**—ಪ್ರಸಿದ್ಧವಾದ ಬಲವುಳ್ಳವನೂ । **ಮಾರ್ಜಾಲ್ಯಃ**—ಪೂಜಾಯೋಗ್ಯನೂ ಆದ ಅಗ್ನಿಯು । **ಸ್ವೇ**—ತನ್ನ ಸ್ವಂತ ಯಜ್ಞಗೃಹದಲ್ಲಿ । **ಮೃಜ್ಯತೇ**—ಪೂಜಿಸಲ್ಪಡುತ್ತಾನೆ । **ಅಗ್ನೇ**—ಎಲೈ ಅಗ್ನಿಯೇ । **ವಿಶ್ವಾನ್ ಅನ್ಯಾನ್**—ನಿನಗಿಂತ ಬೇರೆಯಾದ ಸಮಸ್ತರನ್ನೂ । **ಸಹಸಾ**—(ನಿನ್ನ) ಶಕ್ತಿಯಿಂದ । **ಪ್ರಾಸಿ**—ಮಿಗಿಲಿನ ಪ್ರಭಾವವುಳ್ಳವನಾಗಿದ್ದೀಯೆ.

॥ ಭಾವಾರ್ಥ ॥

ದಾನಮನಸ್ಕನೂ, ಋಷಿಗಳಿಂದ ಪ್ರಶಂಸಿತನೂ, ನಮಗೆಲ್ಲಾ ಅತಿಥಿಯಂತೆ ಪೂಜ್ಯನೂ, ಮಂಗಳಕರನೂ, ಸಹಸ್ರಾರು ಜ್ವಾಲೆಗಳುಳ್ಳವನೂ ಕಾಮವರ್ಷಕನೂ, ಪ್ರಸಿದ್ಧವಾದ ಬಲವುಳ್ಳವನೂ, ಪೂಜಾಯೋಗ್ಯನೂ ಆದ ಅಗ್ನಿಯು ತನ್ನ ಸ್ವಂತಯಜ್ಞಗೃಹದಲ್ಲಿ ಪೂಜಿಸಲ್ಪಡುತ್ತಾನೆ. ಎಲೈ ಅಗ್ನಿಯೇ, ನಿನಗಿಂತ ಬೇರೆಯಾದ ಸಮಸ್ತರನ್ನೂ ನಿನ್ನ ಶಕ್ತಿಯಿಂದ ಮಿಗಿಲಿನ ಪ್ರಭಾವವುಳ್ಳವನಾಗಿದ್ದೀಯೆ

English Translation.

Entitled to worship, he is worshipped in his own (abode), humble-minded, eminent amongst sages, our auspicious guest, the thousand-rayed the showerer (of benefits), of well-known might, you, Agni, surpass all others in strength.

॥ ನಿರುಕ್ತವಿವರಣ ॥

ಮಾರ್ಜಾಲ್ಯಃ—**ಸಂಮಾರ್ಜನೀಯೋಽಯಮಗ್ನಿಃ । ಮೃಜ್ಯತೇ ಪರಿಚರ್ಯತೇ ।** ಮೃಜ್ಞಾತುವಿಗೆ ಪರಿಚರಿಸು, ಸೇವಿಸು ಎಂಬರ್ಥವಿರುವುದರಿಂದ ಆ ಧಾತುವಿನಿಂದ ನಿಷ್ಪನ್ನವಾದ ಮಾರ್ಜಾಲ್ಯಃ ಎಂಬ ಶಬ್ದಕ್ಕೆ ಪೂಜಿಸಲ್ಪಡುವ, ಸೇವಿಸಲ್ಪಡುವ ಎಂಬರ್ಥವಿದ್ದು ಅಗ್ನಿಗೆ ವಿಶೇಷಣಪದವಾಗಿದೆ

ದಮೂನಾಃ—ಈ ಶಬ್ದಕ್ಕೆ ಯಾಸ್ಕರು—

ದಮೂನಾಃ । ದಮೂನಾ ದಮಮನಾ ವಾ, ದಾನಮನಾ ವಾ ದಾಂತಮನಾ ವಾ । ಅಪಿ ವಾ ದಮ ಇತಿ ಗೃಹನಾಮ ತನ್ಮನಾಃಸ್ಯಾತ್ । ಮನೋ ಮನೋತೇಃ ॥ (ನಿ. ೪-೪)

ಎಂದು ನಿರ್ವಚನವನ್ನು ಹೇಳಿರುವರು—ಎಂದರೆ, **ದಮೂನಾಃ** ಎಂಬ ಶಬ್ದಕ್ಕೆ ಕ್ರೂರಿಯಲ್ಲದವನು ಅಥವಾ ದಯವುಳ್ಳವನೆಂದೂ, ಅಥವಾ ದಾನವನ್ನು ಕೊಡಲು ಮನಸ್ಸುಳ್ಳವನಾಗಿರುವನೆಂದೂ, ಅಥವಾ ತನ್ನ ಮನಸ್ಸನ್ನು ತನ್ನ ನಿಯಮನ ಅಥವಾ ಸ್ವಾಧೀನದಲ್ಲಿಟ್ಟುಕೊಂಡಿರುವವನೆಂದೂ ಮೂರು ವಿಧವಾದ ಅರ್ಥವಿರುವುದು. ಅಥವಾ ದನು ಎಂಬ ಶಬ್ದಕ್ಕೆ ಮನೆಯೆಂದು ಅರ್ಥವಿರುವುದರಿಂದ **ದಮೂನಾಃ** ಎಂದರೆ ಮನೆಯಲ್ಲಿ ವಾಸಮಾಡಲು ಆಸಕ್ತಿಯುಳ್ಳವನೆಂದೂ ಅರ್ಥವಾಗಬಹುದು. **ಮನಃ** ಶಬ್ದವು ಯೋಚಿಸು ಎಂಬರ್ಥವಿರುವ **ಮನ್** ಧಾತುವಿನಿಂದ ನಿಷ್ಪನ್ನವಾಗಿದೆ.

ಸಂಹಿತಾಪಾಠಃ

प्र सद्योऽअग्नेऽअत्येष्यन्यान्विर्यस्मै चारुतमोऽबभूथ ॥
ईळेन्योऽवपुष्योऽविभावाप्रियोऽविशामतिथिर्मानुषीणाम् ॥ ९ ॥

ಪದಪಾಠಃ

प्र । सद्यः । अग्ने । अति । एषि । अन्यान् । अपिः । यस्मै । चारुऽतमः । बभूथ ।
ईळेन्यः । वपुष्यः । विभाऽवा । प्रियः । विशाम् । अतिथिः । मानुषीणाम् ॥ ९ ॥

॥ सायणभाष्यम् ॥

हे अग्ने त्वं यज्ञमासाद्य सद्यस्तदानीमेवान्यान् स्वसमानानत्येषि अतिक्रामसि । यस्मै चारुतमः सन्नाविर्बभूव । किंच त्वमिळेन्यः स्तुत्यो वपुष्यो वपुष्करो दीप्तिकरो वा विभावा विशिष्टदीप्तिमान् प्रियः प्रियभूतो विशां सर्वेषां प्राणिनां तथातिथिः पूज्यो मानुषीणां प्रजानां भवसि ॥

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ಯಸ್ಮೈ**—ಯಾವ ಯಜಮಾನನಿಗಾಗಿ । **ಚಾರುತಮಃ**—ಆಕರ್ಷಕವಾದ ರೂಪವುಳ್ಳವನಾಗಿಯೂ । **ಪ್ರ**—ಅತಿಶಯವಾಗಿಯೂ । **ಅವಿರ್ಬಭೂಥ**—ಆವಿರ್ಭೂತನಾಗುವೆಯೋ । **ಸದ್ಯಃ**—ಆ ಒಡನೆಯೇ । **ಅನ್ಯಾನ್**—ಇತರರಲ್ಲಿಗೂ । **ಅತ್ಯೇಷಿ**—ದಾಟಹೋಗುತ್ತೀಯೆ । **ಈಳೇನ್ಯಃ**—ಸ್ತುತ್ಯನೂ । **ವಪುಷ್ಯಃ**—ಸುಂದರರೂಪವುಳ್ಳವನೂ । **ವಿಭಾವಾ**—ಅತಿಶಯವಾದ ಪ್ರಕಾಶವುಳ್ಳವನೂ । **ಪ್ರಿಯಃ**—ಪ್ರೀತಿಪಾತ್ರನೂ । **ಮಾನುಷೀಣಾಂ ವಿಶಾಂ**—ಸಕಲ ಮಾನವ ಪ್ರಜೆಗಳಿಗೂ । **ಅತಿಥಿಃ**—ಅತಿಥಿಯಂತೆ ಪೂಜ್ಯನೂ (ಆಗಿದ್ದೀಯೆ).

। ಭಾವಾರ್ಥ ।

ಎಲೈ ಅಗ್ನಿಯೇ, ಯಾವ ಯಜಮಾನನಿಗಾಗಿ ನೀನು ಅತಿಶಯವಾದ ದೇಹದ ರೂಪವುಳ್ಳವನಾಗಿ ಆವಿರ್ಭೂತನಾಗುವೆಯೋ, ಆ ಒಡನೆಯೇ, ಇತರರಲ್ಲಿಗೂ ದಾಟಹೋಗುತ್ತೀಯೆ ನೀನು ಸ್ತುತ್ಯನೂ, ಸುಂದರವಾದ ರೂಪವುಳ್ಳವನೂ, ಅತಿಶಯವಾದ ಪ್ರಕಾಶವುಳ್ಳವನೂ, ಪ್ರೀತಿಪಾತ್ರನೂ, ಸಕಲ ಮಾನವಪ್ರಜೆಗಳಿಗೂ ಪೂಜ್ಯನೂ ಆಗಿದ್ದೀಯೆ.

English Translation.

(Too) quickly, Agni, you pass to others from him to whom you have been manifest. most beautiful, adorable, radiant, many-shinning, the loved of people, the guest of men.

। ವಿಶೇಷವಿಷಯಗಳು ।

ಮುಖ್ಯಾಭಿಪ್ರಾಯವು—ಎಲೈ ಅಗ್ನಿಯೇ, ನೀನು ಯಾವ ಯಜಮಾನನಿಗೆ ಉಪಕಾರಮಾಡಬೇಕೆಂಬ ಬುದ್ಧಿಯಿಂದ ಅವನ ಯಜ್ಞಗೃಹದಲ್ಲಿ ಆಕರ್ಷಕವಾದ ರೂಪವುಳ್ಳವನಾಗಿ ಎಂದರೆ ಅತ್ಯಂತ ಪ್ರಕಾಶಯುಕ್ತನಾಗಿ ಬೆಳಗುವಿಯೋ ಆಂತಹ ಯಜಮಾನನನ್ನು ಬಿಟ್ಟು ಇತರ ಯಜಮಾನರ ಬಳಿಗೆ ಹೋಗುವುದಿಲ್ಲ. ನಿನ್ನನ್ನು ಸರ್ವರೂ ಸ್ತುತಿಸುವರು. ನಿನ್ನ ರೂಪವು ಬಹಳ ಆಕರ್ಷಕವಾಗಿಯೂ ಕಾಂತಿಯುತವಾಗಿಯೂ ಇದೆ. ಆದ್ದರಿಂದ ನೀನು ಎಲ್ಲರಿಗೂ ಪ್ರೀತಿಪಾತ್ರನೂ ಅತಿಥಿಯಂತೆ ಪೂಜಾರ್ಹನೂ ಆಗಿರುವೆ.

ಅತಿಥಿಃ—ಯಾಸ್ಕರು **ಅತಿಥಿಶಬ್ದಕ್ಕೆ ಅತಿಥಿರಭ್ಯತಿತೋ ಗೃಹಾನ್ ಭವತಿ। ಅಭ್ಯೇತಿ ತಿಥಿಷು ಪರಕುಲಾನೀತಿ ವಾ ಪರಗೃಹಾಣೀತಿ ವಾ। ಅಯಮಪೀತರೋಽತಿಥಿರೇತಸ್ಮಾದೇವ** (ನಿ. ೪-೪) ಎಂದು ನಿರ್ವಚನವನ್ನು ಹೇಳಿರುವರು ಎಂದರೆ ಹೊರಗೆ ಸಂಚರಿಸುತ್ತಿದ್ದು ಗೃಹಗಳಿಗೆ ಪೂರ್ವಸೂಚನೆಯಿಲ್ಲದೆ ಬರುವನು ಅಥವಾ ತನ್ನ ವಂಶವಲ್ಲದ ಅಥವಾ ತನ್ನ ಮನೆಯಲ್ಲವ ಇತರ ಮನೆಗೆ ಪೌರ್ಣಮಾಸ್ಯಾದಿತಿಥಿಗಳಲ್ಲಿ (ದಿನಗಳಲ್ಲಿ) ಕಾರ್ಯಾರ್ಥವಾಗಿ ಬರುವನು ಎಂದು ಅತಿಥಿಶಬ್ದಕ್ಕ ಅರ್ಥವಿರುವುದು. ಅಥವಾ ತಿಥಿನಿಯಮವಿಲ್ಲದೆ ಯಾವ ದಿನವೆಂದರೆ ಆ ದಿನ ಪರರ ಮನೆಗೆ ಹೋಗುವವನಾದದ್ದರಿಂದ ಇವನಿಗೆ ಅತಿಥಿಯೆಂದು (ತಿಥಿನಿಯಮವಿಲ್ಲದವನು) ಎಂದೂ ಅರ್ಥವಿವರಣೆ ಮಾಡಬಹುದು



। ಸಂಹಿತಾಪಾಠ ।

ತುಭ್ಯಂ ಭರಂತಿ ಕ್ಷಿತಯೋ ಯವಿಷ್ಠ ಬಲಿಮಗ್ನೇ ಅಂತಿತ ಓತ ದೂರಾತ್।
ಆ ಭಂದಿಷ್ಠಸ್ಯ ಸುಮತಿಂ ಚಿಕಿದ್ಧಿ ಬೃಹತ್ತೇ ಅಗ್ನೇ ಮಹಿ ಶರ್ಮ ಭದ್ರಂ ॥

॥ ಪದಪಾಠಃ ॥

ತುಭ್ಯಂ । ಭರಂತಿ । ಕ್ಷಿತಯಃ । ಯವಿಷ್ಠ । ಬಲಿಂ । ಅಗ್ನೇ । ಅಂತಿತಃ । ಅ । ಉತ । ದೂರಾತ್ ।

ಆ । ಭಂದಿಷ್ಠಸ್ಯ । ಸ್ತುವತಿಂ । ಚಿಕಿದ್ಧಿ । ಬೃಹತ್ । ತೇ । ಅಗ್ನೇ । ಮಹಿ । ಶರ್ಮ । ಭದ್ರಂ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಯವಿಷ್ಠ ಯುವತಮಾಗ್ನೇ ತುಭ್ಯಂ ಕ್ಷಿತಯೋ ಮನುಷ್ಯಾ ಭರಂತಿ । ಸಂಪಾದಯಂತಿ । ಕಿಂ । ಬಲಿಂ ಪೂಜಾಂ ಹವಿರ್ಲಕ್ಷಣಾಮಂತಿಕೋ೭ಂತಿಕಾದುತಾಪಿ ಚ ದೂರಾತ್ । ಆ ಇತಿ ಚಾರ್ಥೇ । ಕಿಂಚ ಭಂದಿಷ್ಠಸ್ಯಾತಿಶಯೇನ ಸ್ತೋತುಃ ಸುಮತಿಂ ಸ್ತುತಿಮಾ ಚಿಕಿದ್ಧಿ । ಆಜಾನೀಹಿ । ಹೇ ಅಗ್ನೇ ತೇ ತವ ಶರ್ಮ ಸುಖಮಸ್ಮಭ್ಯಂ ದಾತವ್ಯಂ ಬೃಹನ್ಮಹದ್ಭದ್ರಂ ಸ್ತುತ್ಯಂ ಚ ॥

॥ ಪ್ರತಿಪದಾರ್ಥ ॥

ಯವಿಷ್ಠ—ಅತ್ಯಂತ ಯುವಕನಾದ । **ಅಗ್ನೇ**—ಎಲೈ ಅಗ್ನಿಯೇ । **ಕ್ಷಿತಯಃ**—ಮಾನವರೂಪರಾದ ಯಜಮಾನರು । **ತುಭ್ಯಂ**—ನಿನಗಾಗಿ । **ಬಲಿಂ**—ಹವಿಸ್ಸಿನೊಡಗೂಡಿದ ಪೂಜೆಯನ್ನು । **ಭರಂತಿ**—ಸಂಪಾದಿಸುತ್ತಾರೆ । **ಅಂತಿತಃ**—ಸಮೀಪದಿಂದಾಗಲಿ । **ಉತ**—ಅಥವಾ । **ದೂರಾತ್**—ದೂರಪ್ರದೇಶದಿಂದಾಗಲಿ। **ಭಂದಿಷ್ಠಸ್ಯ**—ಅತಿಶಯವಾಗಿ ಸ್ತುತಿಸುವ ಸ್ತೋತೃವಿನ । **ಸುಮತಿಂ**—ಶ್ರೇಷ್ಠವಾದ ಸ್ತುತಿಯನ್ನು । **ಆ ಚಿಕಿದ್ಧಿ**—ಚೆನ್ನಾಗಿ ಅರಿತು (ಸ್ವೀಕರಿಸು) । **ಅಗ್ನೇ**—ಎಲೈ ಅಗ್ನಿಯೇ । **ತೇ**—ನಿನ್ನಿಂದ (ದತ್ತವಾಗುವ)। **ಶರ್ಮ**—ಸುಖವು । **ಬೃಹತ್**—ಪ್ರಭೂತವಾದುದೂ । **ಮಹಿ**—ಮಹತ್ತಾದುದೂ । **ಭದ್ರಂ**—ಮಂಗಳಾತ್ಮಕವೂ ಆಗಿದೆ

॥ ಭಾವಾರ್ಥ ॥

ಅತ್ಯಂತ ಯುವಕನಾದ ಎಲೈ ಅಗ್ನಿಯೇ, ಈ ಮಾನವರೂಪರಾದ ಯಜಮಾನರು ನಿನಗಾಗಿ ಹವಿಸ್ಸಿನೊಡಗೂಡಿದ ಪೂಜೆಯನ್ನು ಸಂಪಾದಿಸಿ ಅರ್ಪಿಸುತ್ತಾರೆ. ಸಮೀಪದಿಂದಾಗಲಿ ಅಥವಾ ದೂರಪ್ರದೇಶದಿಂದಾಗಲಿ, ಅತಿಶಯವಾಗಿ [ಸ್ತುತಿಸುವ ಸ್ತೋತೃವಿನ ಶ್ರೇಷ್ಠವಾದ ಸ್ತುತಿಯನ್ನು ಚೆನ್ನಾಗಿ ಅರಿತು ಸ್ವೀಕರಿಸು ಎಲೈ ಅಗ್ನಿಯೇ, ನಿನ್ನಿಂದ ನಮಗೆ ದತ್ತವಾಗುವ ಸುಖವು ಪ್ರಭೂತವಾದುದೂ, ಮಹತ್ತಾದುದೂ, ಮಂಗಳಾತ್ಮಕವೂ ಆಗಿದೆ.

English Translation.

To you, youngest (of the gods), men present oblations, whether nigh or from far : accept the praise of him who most extols you , for the felicity (which you confer), Agni, is great, vast, auspicious.

॥ ವಿಶೇಷವಿಷಯಗಳು ॥

ಕ್ಷಿತಯಃ—**ಕ್ಷಿತಯಃ** ಎಂಬ ಶಬ್ದವು ಮನುಷ್ಯಾಃ ನರಃ ಎಂದು ಮೊದಲಾದ ಇಪ್ಪತ್ತೈದು ಮನುಷ್ಯ ನಾಮಗಳಲ್ಲಿ ಪರಿಠವಾಗಿರುವುದರಿಂದ (ನಿ. ೩–೭) ಕ್ಷಿತಯಃ ಎಂದರೆ ಮನುಷ್ಯರು.

ಯವಿಷ್ಠ—ಯುವತಮ । ಅಗ್ನಿಯನ್ನು ಯವಿಷ್ಠ ಎಂಬ ಶಬ್ದದಿಂದ ಸಂಬೋಧಿಸುವದು ಋಗ್ವೇದದಲ್ಲಿ ವಿಶೇಷರೂಢಿಯಲ್ಲಿದೆ. ಅಗ್ನಿಯು ಉರಿಯುತ್ತಿರುವಾಗ ಆದಕ್ಕೆ ಸಮಿತ್, ಕಾಷ್ಠ ಮೊದಲಾದವುಗಳನ್ನು ಹಾಕುತ್ತಿದ್ದರೆ ಯಾವಾಗಲೂ ಚೆನ್ನಾಗಿ ಉರಿಯುತ್ತಲೇ ಇರುವುದು ಮನುಷ್ಯರು ಅಥವಾ ಪ್ರಾಣಿಗಳು ತಮ್ಮ ಮಧ್ಯ ವಯಸ್ಸಿನಲ್ಲಿ ಪುಷ್ಟಿಕರವಾದ ಆಹಾರಾದಿಗಳಿಂದ ವೃದ್ಧಿಗೊಂಡು ಸಂಪೂರ್ಣ ಶಕ್ತಿಸಾಮರ್ಥ್ಯಗಳಿಂದ ಸಹಿತರಾಗಿರುವಾಗ ಅವರನ್ನು ಯುವಕರು ಎಂದರೆ ತಮ್ಮ ಜೀವಮಾನದಲ್ಲಿ ಅತ್ಯಂತ ಶಕ್ತಿಸಾಮರ್ಥ್ಯಗಳನ್ನು ಹೊಂದಿರುವ ಸ್ಥಿತಿಯಲ್ಲಿರುವವರು ಎಂದು ಹೇಳಬಹುದು. ಆದರಂತೆ ಅಗ್ನಿಯಲ್ಲಿ ಕಾಷ್ಠಾದಿಗಳನ್ನು ಹಾಕುತ್ತಿರುವಾಗ ಆದು ಚೆನ್ನಾಗಿ ಉರಿಯುತ್ತಿರುವುದು ಆದನ್ನೇ ಯುವಕರ ಸ್ಥಿತಿಗೆ ಹೋಲಿಸಿದೆ ಮನುಷ್ಯ ಮೊದಲಾದ ಪ್ರಾಣಿಗಳ ಯೌವನವು ಕೆಲವುಕಾಲ ಮಾತ್ರವಿದ್ದು ಅನಂತರ ಕಡಿಮೆಯಾಗುತ್ತಾಬಂದು ಕೊನೆಗೆ ನಷ್ಟವಾಗುವುದು. ಆದರೆ ಅಗ್ನಿಯ ವಿಷಯದಲ್ಲಿ ಹಾಗಲ್ಲ ಕಾಷ್ಠಾದಿಗಳನ್ನು ಹಾಕಿ ದೀಪ್ತಿಗೊಳಿಸುತ್ತಿರುವವರೆಗೂ ಎಷ್ಟುಕಾಲವಾದರೂ ಚೆನ್ನಾಗಿ ಉರಿಯುತ್ತಿರುವುದರಿಂದ ಅಗ್ನಿಯನ್ನು ಅನೇಕ ಸಂದರ್ಭಗಳಲ್ಲಿ ನಿತ್ಯತರುಣ, ಯಾವಾಗಲೂ ಯುವಕನಾಗಿರುವವನು ಎಂಬ ವಿಶೇಷಣಗಳಿಂದ ಸ್ತುತಿಸುವರು

॥ ಸಂಹಿತಾಪಾಠಃ ॥

ಆದ್ಯ ರಥಂ ಭಾನುಮೋ ಭಾನುಮಂತಮಗ್ನೇ ತಿಷ್ಮ ಯಜತೇಭಿಃ ಸಮಂತಂ ।
ವಿದ್ವಾನ್ಪಥೀನಾಮುರ್ವಂತರಿಕ್ಷಮೇಹ ದೇವಾನ್ಹವಿರದ್ಯಾಯ ವಕ್ಷಿ ॥೧೧॥

॥ ಪದಪಾಠಃ ॥

ಆ । ಅದ್ಯ । ರಥಂ । ಭಾನುಽಮಃ । ಭಾನುಽಮಂತಂ । ಅಗ್ನೇ । ತಿಷ್ಮ । ಯಜತೇಭಿಃ । ಸಂಽಅಂತಂ ।
ವಿದ್ವಾನ್ । ಪಥೀನಾಂ । ಉರು । ಅಂತರಿಕ್ಷಂ । ಅ । ಇಹ । ದೇವಾನ್ । ಹವಿಃಽಅದ್ಯಾಯ । ವಕ್ಷಿ ॥೧೧॥

। ಸಾಯಣಭಾಷ್ಯಂ ।

ಹೇ ಭಾನುಮೋ ದೀಪ್ತಿಮನ್ನಗ್ನೇ ಅದ್ಯಾಸ್ಮಿನ್ಯಾಗದಿನೇ ಭಾನುಮಂತಂ ದೀಪ್ತಿಮಂತಂ ಸಮಂತಂ ಸಮೀಚೀನಪ್ರಾಂತೋಪೇತಂ ರಥಂ ಯಜತೇಭಿರ್ಯಷ್ಟವ್ಯೈರ್ದೇವೈಃ ಸಹಾ ತಿಷ್ಮ। ಆರೋಹ। ವಿದ್ವಾನ್ಯಷ್ಟವ್ಯದೇವಪರಿಜ್ಞಾನವಾಂಸ್ತ್ವಂ ಪಥೀನಾಂ ದೇವಯಜನಮಾರ್ಗಾನ್ಪ್ರತಿ ॥ ದ್ವಿತೀಯಾರ್ಥೇ ಷಷ್ಠೀ ॥ ಉರ್ವಂತರಿಕ್ಷಂ ಪ್ರಭೂತೇಽಂತರಿಕ್ಷೇ ದೇವಾನ್ಯಷ್ಟವ್ಯಾನ್ಹವಿರದ್ಯಾಯ ಹವಿರ್ಭಕ್ಷಣಾಯೇಹಾವಕ್ಷಿ । ಆವಹಸಿ ॥

॥ ಪ್ರತಿಪದಾರ್ಥ ॥

ಭಾನುಮಃ—ಪ್ರಭಾವಯುತನಾದ । **ಅಗ್ನೇ**—ಎಲೈ ಅಗ್ನಿಯೇ । **ಅದ್ಯ**—ಈ ಯಾಗದ ದಿನ । **ಯಜ್ಞ ತೇಭಿಃ** — ಯಜ್ಞಾರ್ಹರಾದ ಇತರ ದೇವತೆಗಳೊಡನೆ । **ಭಾನುಮಂತಂ** — ಕಾಂತಿಯುತವಾದುದೂ । **ಸಮಂತಂ**—ಅಲಂಕೃತವಾದ ಪ್ರಾಂತಪ್ರದೇಶವುಳ್ಳದ್ದೂ ಆದ । **ರಥಂ**—ನಿನ್ನ ರಥವನ್ನು । **ಆ ತಿಷ್ಠ**—ಹತ್ತಿ ಕುಳಿತುಕೋ । **ವಿದ್ವಾನ್**—ಸಕಲವನ್ನೂ ತಿಳಿದ ನೀನು । **ಉರ್ವಂತರಿಕ್ಷಂ**—ಪ್ರಭೂತವಾದ ಅಂತರಿಕ್ಷದಲ್ಲಿ । **ಪಥೀನಾಂ**—ಯಜ್ಞಗಮನಮಾರ್ಗದಿಂದ । **ದೇವಾನ್**—ದೇವತೆಗಳನ್ನು । **ಹವಿರದ್ಯಾಯ**—ಹವಿಸ್ಸನ್ನು ಸ್ವೀಕರಿಸುವುದಕ್ಕಾಗಿ । **ಇಹ**—ಈ ಯಾಗಕ್ಕೆ । **ಆ ವಕ್ಷಿ**—ಕರೆದುಕೊಂಡು ಬಾ ।

॥ ಭಾವಾರ್ಥ ॥

ಪ್ರಭಾವಯುತನಾದ ಎಲೈ ಅಗ್ನಿಯೇ, ಈ ಯಾಗದ ದಿನ, ಯಜ್ಞಾರ್ಹರಾದ ಇತರ ದೇವತೆಗಳೊಡನೆ ಕಾಂತಿಯುತವಾದುದೂ, ಅಲಂಕೃತವಾದ ಪ್ರಾಂತಪ್ರದೇಶವುಳ್ಳದ್ದೂ ಆದ ನಿನ್ನ ರಥವನ್ನು ಹತ್ತಿ ಕುಳಿತುಕೊ, ಸರ್ವಜ್ಞನಾದ ನೀನ ಪ್ರಭೂತವಾದ ಅಂತರಿಕ್ಷದಲ್ಲಿ, ಯಜ್ಞಗಮನಮಾರ್ಗದಿಂದ ದೇವತೆಗಳನ್ನು, ಹವಿಸ್ಸನ್ನು ಸ್ವೀಕರಿಸಿ ಭಕ್ಷಿಸುವುದಕ್ಕಾಗಿ ಈ ಯಾಗಕ್ಕೆ ಕರೆದುಕೊಂಡು ಬಾ.

English Translation

Ascend to-day, radiant Agni, your resplendent, well-conducted chariot, together with the adorable (gods) · cognizant of the ways (of worship), bring hither, by the vast firmament, the gods to partake of the oblation.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಯಜ್ಞಭೂಮಿಗೆ ಬರುವಾಗ ರಥದಲ್ಲಿ ಕುಳಿತುಕೊಂಡು ಯಜ್ಞಾರ್ಹರಾದ ದೇವತೆಗಳನ್ನು ಕರೆದುಕೊಂಡುಬರಬೇಕೆಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ ಅಗ್ನಿಯ ರಥವು ಅತ್ಯಂತ ಪ್ರಕಾಶಮಾನವಾಗಿರುವುದೆಂದೂ ಇಂತಹ ರಥದಲ್ಲಿ ಹತ್ತಿ ಕುಳಿತುಕೊಂಡು ಯಜ್ಞದಲ್ಲಿ ಅರ್ಪಿಸುವ ಹವಿಸ್ಸನ್ನು ಭಕ್ಷಿಸುವುದಕ್ಕಾಗಿ ಆಹ್ವಾನಿತರಾದ ದೇವತೆಗಳನ್ನು ಅಂತರಿಕ್ಷನಮಾರ್ಗದಿಂದ ಕರೆದುಕೊಂಡುಬರಬೇಕೆಂದೂ ವರ್ಣಿಸಿದೆ.

॥ ಸಂಹಿತಾಪಾಠಃ ॥

ಅವೋಚಾಮ ಕವಯೇ ಮೇಧ್ಯಾಯ ವಚೋ ವಂದಾರು ವೃಷಭಾಯ ವೃಷ್ಣೇ ।
ಗವಿಷ್ಠಿರೋ ನಮಸಾ ಸ್ತೋಮಮಗ್ನೌ ದಿವೀವ ರುಕ್ಮಮುರುವ್ಯಂಚಮಶ್ರೇತ್ ॥ ೧೨ ॥

। ಪದಪಾಠಃ ।

ಅವೋಚಾಮ । ಕವಯೇ । ಮೇಧ್ಯಾಯ । ವಚಃ । ವಂದಾರು । ವೃಷಭಾಯ । ವೃಷ್ಣೇ ।

ಗವಿಷ್ಠಿರಃ । ನಮಸಾ । ಸ್ತೋಮಂ । ಅಗ್ನೌ । ದಿವಿ ।ಇವ । ರುಕ್ಮಂ । ಉರುವ್ಯಂಚಂ । ಆಶ್ರೇತ್ ॥೧೩॥

॥ ಸಾಯಣಭಾಷ್ಯಂ ॥

ವಯಮಾಶ್ರೇಯಾಃ ಕವಯೇ ಮೇಧಾವಿನೇ ಮೇಧ್ಯಾಯ ಮೇಧಾರ್ಹಾಯ ವೃಷಭಾಯ ವರ್ಷಕಾಯ ಫಲಾನಾಂ ವೃಷ್ಣೇ ಸೇಕ್ತ್ರೇ ಯೂನೇ ವಂದಾರು ವಂದನಶೀಲಂ ವಚಃ ಸ್ತೋತ್ರಮವೋ-ಚಾಮ । ಅಥ ಋಷಿರಾತ್ಮಾನಂ ಪರೋಕ್ಷೇಣೈವ ನಿರ್ದಿಶ್ಯ ಸ್ತುತಿಮುಪಸಂಹರತಿ । ಗವಿಷ್ಠಿರೋ೭ಯ-ಮೃಷಿರ್ನಮಸಾ ನಮಸ್ಕಾರೇಣ ಹವಿಷಾ ವಾ ಯುಕ್ತಂ ಸ್ತೋಮಂ ಸ್ತೋತ್ರಮಗ್ನಾವಶ್ರೇತ್ । ಶ್ರಯತಿ ಸ್ಮ । ದಿವಿ ರುಕ್ಮಂ ರೋಚಮಾನಮುರುವ್ಯಂಚಮುರುಗಮನಮಾದಿತ್ಯಮಿವ ॥

॥ ಪ್ರತಿಪದಾರ್ಥ ॥

ಕವಯೇ—ಮೇಧಾವಿಯೂ । **ಮೇಧ್ಯಾಯ**—ಪೂಜಾರ್ಹನೂ । **ವೃಷಭಾಯ**—ಕಾಮವರ್ಷಕನೂ । **ವೃಷ್ಣೇ**—ಯುವಕನೂ ಆದ ಅಗ್ನಿಯನ್ನುದ್ದೇಶಿಸಿ । **ವಂದಾರು**—ಸ್ತೂಯೋಗ್ಯವಾದ । **ವಚಃ**—ಸ್ತುತಿಯನ್ನು । **ಅವೋಚಾಮ**—ಪರಿಸುತ್ತೇವೆ । **ಗವಿಷ್ಠಿರಃ**—ಗವಿಷ್ಠಿರನಾಮಕನಾದ ಈ ಋಷಿಯು । **ನಮಸಾ**—ನಮಸ್ಕಾರದೊಡನೆ । **ಸ್ತೋಮಂ**—ಸ್ತೋತ್ರವನ್ನು । **ದಿವಿ**—ಅಂತರಿಕ್ಷದಲ್ಲಿ । **ರುಕ್ಮಂ** — ಹೊಂಬಣ್ಣದಿಂದ ಪ್ರಕಾಶಿಸುವವನೂ । **ಉರುವ್ಯಂಚಂ**—ಆದಿತ್ಯನಂತೆ ಅಧಿಕವಾಗಿ ವ್ಯಾಪಿಸುವವನೂ ಆದ । **ಅಗ್ನೌ**—ಅಗ್ನಿಯಲ್ಲಿ । **ಆಶ್ರೇತ್**—ಅರ್ಪಿಸಿದ್ದಾನೆ

॥ ಭಾವಾರ್ಥ ॥

ಮೇಧಾವಿಯೂ, ಪೂಜಾರ್ಹನೂ, ಕಾಮವರ್ಷಕನೂ, ಯುವಕನೂ ಆದ ಅಗ್ನಿಯನ್ನುದ್ದೇಶಿಸಿ ಪೂಜಾಯೋಗ್ಯವಾದ ಸ್ತುತಿಯನ್ನು ಪರಿಸುತ್ತೇವೆ. ಗವಿಷ್ಠಿರನಾಮಕನಾದ ಈ ಋಷಿಯು ನಮಸ್ಕಾರ ಪೂರ್ವಕವಾದ ತನ್ನ ಸ್ತೋತ್ರವನ್ನು, ಅಂತರಿಕ್ಷದಲ್ಲಿ ಹೊಂಬಣ್ಣದಿಂದ ಪ್ರಕಾಶಿಸುವವನೂ, ಆದಿತ್ಯನಂತೆ ಅಧಿಕವಾಗಿ ವ್ಯಾಪಿಸುವವನೂ ಆದ ಅಗ್ನಿಯಲ್ಲಿ ಅರ್ಪಿಸಿದ್ದಾನೆ.

English Translation.

We have uttered aloud this encomiastic praise to the wise, holy, vigorous (Agni), the showerer (of benefits) Gavishthira offers with reverence (this) praise to Agni, like the wide-sojourning (sun), effulgent in the sky.

॥ ವಿಶೇಷವಿಷಯಗಳು ॥

ಸೂಕ್ತವ ಉಸಸಂಹಾರರೂಪವಾದ ಈ ಕೊನೆಯ ಋಕ್ಕಿನಲ್ಲಿ ಸೂಕ್ತದ್ರಷ್ಟೃವಾವ ಗವಿಷ್ಠಿರನೆಂಬ ಋಷಿಯು ತನ್ನ ಹೆಸರನ್ನು ನಿರ್ದೇಶಿಸಿ ಅಗ್ನಿಯನ್ನು ತಾನು ಉತ್ತಮವಾದ ವಾಕ್ಯಗಳಿಂದ ಸ್ತುತಿಸಿ ಆದಿತ್ಯನಂತೆ ತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಅಗ್ನಿಯಲ್ಲಿ ನಮಸ್ಕಾರಪೂರ್ವಕವಾದ ಸ್ತೋತ್ರವನ್ನೂ, ಹವಿಸ್ಸನ್ನೂ ಅರ್ಪಿಸಿರುವೆನೆಂದು ತನ್ನ ಕರ್ತವ್ಯವನ್ನು ವ್ಯಕ್ತಂಸೆಮಾಡಿದ್ದಾನೆ ಈ ಸೂಕ್ತಕ್ಕೆ ಬುಧ, ಗವಿಷ್ಠಿರ ಎಂಬ ಇಬ್ಬರು ಋಷಿಗಳು ದ್ರಷ್ಟೃಗಳಾಗಿದ್ದರೂ ಇಲ್ಲಿ ಗವಿಷ್ಠಿರ ಎಂಬ ಒಬ್ಬ ಋಷಿಯ ಹೆಸರು ಮಾತ್ರ ಪಠಿತವಾಗಿದೆ ಬುಧಋಷಿಯ ಹೆಸರನ್ನು ನಿರ್ದೇತಿಸಿರುವುದಿಲ್ಲ

ಎರಡನೆಯ ಸೂಕ್ತವು

ಪೀಠಿಕೆ.

ಕುಮಾರ; ವೃಶಃ; ಜಾನಃ

ಐದನೆಯ ಮಂಡಲದಲ್ಲಿ ಎರಡನೆಯ ಸೂಕ್ತಕ್ಕೆ ಈ ಮೂವರು ಋಷಿಗಳೂ ದ್ರಷ್ಟೃಗಳೆಂದು ತಿಳಿಸಿದೆ. **ಕುಮಾರ**ನೆಂಬುದು ಅಗ್ನಿಯ ಪರ್ಯಾಯನಾಮಗಳಲ್ಲೊಂದು ಅದೇ ಕುಮಾರಪದದಿಂದ ಈ ಸೂಕ್ತದಲ್ಲಿ ಅಗ್ನಿಯು ನಿರ್ದಿಷ್ಟವಾಗಿ ಇದ್ದಾನೆ ಅದೇ ಋಷಿನಾಮವೂ ಆಗಿದೆಯೆಂದು ತಿಳಿಸಿದೆ ಇದಕ್ಕೆ ಈ ಕಾರಣದಿಂದಲೇ **ಕೌಮಾರ** ಸೂಕ್ತವೆಂದೂ ಹೆಸರಿರಬಹುದು. ಅಗ್ನಿಗೆ ಕುಮಾರನೆಂಬ ಹೆಸರು ಹೇಗೆ ಬಂದಿತು ಎಂಬುದಕ್ಕೆ ಶತಪಥಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿದೆ

> ''ತದ್ಯಾನಿ ತಾನಿ ಭೂತಾನಿ । ಋತವಸ್ತೇ೨ಧ ಯೇಃ ಸ ಭೂತಾನಾಂ ಪತಿಃ ಸಂವತ್ಸರಃ ಸೋ೨ಥ ಯಾ ಸೋಷಾಃ ಪತ್ನ್ಯೃಷಸೀ ಸಾ ತಾನಿಮಾನಿ ಭೂತಾನಿ ಚ ಭೂತಾನಾಂ ಪತಿಃ ಸಂವತ್ಸರ ಉಷಸಿ ರೇತೋ೨ಸಿಂಚನ್ತ್ಸ ಸಂವತ್ಸರೇ ಕುಮಾರೋ೨ಜಾಯತ ... ॥''
>
> (ಶ. ಬ್ರಾ ೬-೧-೩-೮)

ಈ ಭೂತಗಳೇ ಋತುಗಳು ಭೂತಪತಿಯೇ ಸಂವತ್ಸರವು ಉಷಸ್ಸೇ ಪತ್ನಿಯು. ಭೂತಾತ್ಮಕವಾದ ಋತುಗಳೂ, ಭೂತಪತಿಯಾದ ಸಂವತ್ಸರವೂ ಪತ್ನಿಯಾದ ಉಷಸ್ಸಿನಲ್ಲಿ ರೇತಸ್ಸನ್ನು ಸಿಂಚಿಸಿದವು. ಅದರ ಫಲವಾಗಿ ಕುಮಾರನ ಉತ್ಪತ್ತಿಯಾಯಿತು. ಈ ಕುಮಾರನು ಅಗ್ನಿಯ ಒಂಭತ್ತನೆಯ ರೂಪವು ಇಂತಹ ಸ್ವರೂಪವುಳ್ಳ ಅಗ್ನಿಯ ಪ್ರಶಂಸೆಯಿರುವುದರಿಂದ ಈ ಸೂಕ್ತದ ದ್ರಷ್ಟೃವಿನ ಹೆಸರೂ **ಕುಮಾರ**ನೆಂದೇ ಇರುತ್ತದೆ.

ಇದಲ್ಲದೇ ವೃಶಜಾನ ಎಂಬ ಋಷಿಯೂ ಈ ಸೂಕ್ತದ ಕರ್ತೃವೆಂದೂ ಊಹಿಸಿದೆ **ವೃಶಜಾನ** ಎಂಬುವನ ವಿಷಯವನ್ನು ಸೂಕ್ಷ್ಮವಾಗಿ ಬೃಹದ್ದೇವತೆಯಲ್ಲಿ ಈ ರೀತಿ ತಿಳಿಸಿದೆ

> **ಐಷ್ವಾಕುಸ್ತ್ರಯರುಣೋ ರಾಜಾ ತ್ರೈವೃಷ್ಣೋ ರಥಮಾಸ್ಥಿತಃ ।**
> **ಸಂಜಗ್ರಾಹಾಶ್ವರಶ್ಮೀಂಶ್ಚ ವೃಶೋ ಜಾನಃ ಪುರೋಹಿತಃ ॥** (ಬೃ. ದೇ. ೫-೧೪)

ಇಕ್ಷ್ವಾಕುವಂಶೋತ್ಪನ್ನನೂ, ತ್ರಿವೃಷ್ಣನ ಪುತ್ರನೂ ಆದ ತ್ರ್ಯರುಣನು ಒಂದುಸಲ ರಥದಲ್ಲಿ ಕುಳಿತು ಹೊರಟನು ಆಗ ಅವನ ಗೃಹಪುರೋಹಿತನೂ, ಜನಪುತ್ರನೂ ಆದ ವೃಶನು ಅಶ್ವಗಳ ಕಡಿವಾಣಗಳನ್ನು ಹಿಡಿದು ರಥವನ್ನು ನಡೆಸುತ್ತಿದ್ದನು

ಸ ಬ್ರಾಹ್ಮಣಕುಮಾರಸ್ಯ ರಥೋ ಗಚ್ಛಚ್ಚಿರೋಽಚ್ಚಿನತ್ ।
ಏನಸ್ವೀತ್ಯಬ್ರವೀಚ್ಛ್ವೈವ ಸ ರಾಜ್ಞೇನಂ ಪುರೋಹಿತಂ ॥

(ಬೃ ದೇ ೫-೧೫)

ವೃಶಜಾನನು ನಡೆಸುತ್ತಿದ್ದ ಈ ರಥವು ಒಬ್ಬ ಬ್ರಾಹ್ಮಣ ಕುಮಾರನ ಮೈಮೇಲೆ ಹರಿಯಿತು ಈ ಕಾರಣದಿಂದ ಅವನ ತಲೆಯು ಕತ್ತರಿಸಿಹೋಯಿತು ಆಗ ತ್ರ್ಯರುಣನು ತನ್ನ ಪುರೋಹಿತನನ್ನು ಕುರಿತು "ನೀನೇ ರಥವನ್ನು ನಡೆಸುತ್ತಿದ್ದುದರಿಂದ ಈ ಹತ್ಯೆಯಿಂದುಂಟಾಗುವ ಪಾಪಕ್ಕೆ ನೀನೇ ಭಾಗಿಯು" ಎಂದು ನಿಸ್ಕೃಷ್ಟವಾಗಿ ಹೇಳಿದನು

ಸೋಽಥರ್ವಾಂಗಿರಸಾನ್ ಮಂತ್ರಾನ್ ದೃಷ್ಟ್ವಾ ಸಂಜೀವ್ಯ ತಂ ಶಿಶುಂ ।
ಕ್ರೋಧಾತ್ಸಂತ್ಸಜ್ಯ ರಾಜಾನಮನ್ಯದೇಶಂ ಸಮಾಶ್ರಿತಃ ॥

(ಬೃ ದೇ ೫-೧೬)

ರಾಜನು ಈ ರೀತಿ ಕಠಿಣವಾಗಿ ಹೇಳಲು, ವೃಶನ ಮನಸ್ಸಿಗೆ ಖೇದವುಂಟಾಯಿತು. ಒಡನೆಯೇ ಅವನು ಅಥರ್ವಾಂಗಿರಸಮಂತ್ರಗಳನ್ನು ಸಾಕ್ಷಾತ್ಕರಿಸಿಕೊಂಡು ಅವುಗಳನ್ನು ಪಠಿಸಿದನು ಆ ಮಂತ್ರಗಳ ಪ್ರಭಾವದಿಂದ ಆ ಮಗುವಿನ ಪ್ರಾಣವು ಬಂದಿತು ಆದರೂ ಸಹ, ರಾಜನ ನಿಸ್ಕುರವಾದ ಮಾತಿಗೆ ಅಸಮಾಧಾನಗೊಂಡು ಕೋಪದಿಂದ ಆ ರಾಜನನ್ನು ತ್ಯಜಿಸಿ, ಬೇರೆ ದೇಶದ ರಾಜನನ್ನು ಆಶ್ರಯಿಸಲು ಹೊರಟುಹೋದನು

ಹರೋಽಸ್ಯಾಗ್ನೇರ್ನಶಾಸ್ಯ ತಸ್ಯಾಪಕ್ರಮಣಾದ್ಭಯೇಃ ।
ಆಗ್ನೌ ಪ್ರಾಸ್ತಾನಿ ಹವ್ಯಾನಿ ನ ಹ್ಯಪಚ್ಯಂತ ಕಾನಿಚಿತ್ ॥

(೫-೧೭)

ಪುರೋಹಿತನು ಈ ರೀತಿ ಕೋಪಿಸಿಕೊಂಡು ಹೊರಟುಹೋದುದರ ಫಲವಾಗಿ ಆ ರಾಜನ ಗೃಹದಲ್ಲಿ ಅಗ್ನಿಯ ಶಾಖವೂ ನಾಶವಾಯಿತು. ಅವನು ಅರ್ಪಿಸಿದ ಆಹುತಿಗಳಲ್ಲಿ ಯಾವುದೂ ಪಕ್ವವಾಗಲಿಲ್ಲ. ಅವನ ಯಾಗಪ್ರಯತ್ನಗಳೆಲ್ಲಾ ವಿಫಲವಾದವು

ತತಃ ಪ್ರವ್ಯಥಿತೋ ರಾಜಾ ಸೋಽಭಿಗಮ್ಯ ಪ್ರಸಾದ್ಯ ತಂ ।
ಆನೀತ್ವಾ ಸ ವೃಶಂ ಜಾನಂ ಪುನರೇವ ಪುರೋದಧೇ ॥

(೫-೧೮)

ಪುರೋಹಿತನೂ ಹೊರಟುಹೋಗಿ, ಆದರ ಫಲವಾಗಿ ಆದರ ಅಗ್ನಿಯ ಪ್ರಭಾವವೂ ಲುಪ್ತವಾದುದರಿಂದ ರಾಜನು ಬಹಳ ದುಃಖಿತನಾದನು ಅನಂತರ ವೃಶಜಾನನಿದ್ದಲ್ಲಿಗೆ ಹೋಗಿ, ಅವನನ್ನು ಪ್ರಾಜಾದಿಗಳಿಂದ ಸತ್ಕರಿಸಿ ಅವನನ್ನು ಪುನಃ ಕರೆತಂದನು ಮತ್ತು ತಿರುಗಿಯೂ ತನ್ನ ಪುರೋಹಿತನನ್ನಾಗಿ ಮಾಡಿಕೊಂಡನು.

ಸ ಪ್ರಸನ್ನೋ ವೃಶೋಽನ್ವೈಚ್ಛದ್ಭರಮಗ್ನೇರ್ನ್ಯಪಕ್ಷಯೇ ।
ಅವಿಂದತ ಪಿಶಾಚೀಂ ತಾಂ ಜಾಯಾಂ ತಸ್ಯ ಚ ಭೂಪತೇಃ ॥ (೫–೯).

ವೃಶಜಾನನು ರಾಜನ ಪಶ್ಚಾತ್ತಾಪದಿಂದಲೂ ಅವನ ಪೂಜೆಗಳಿಂದಲೂ ಸಮಾಧಾನಗೊಂಡು ಅವನ ಪೌರೋಹಿತ್ಯವನ್ನು ಪುನಃ ಸ್ವೀಕರಿಸಿದನು. ನಂತರ ರಾಜನ ಗೃಹದಲ್ಲಿ ಅಗ್ನಿಯನ್ನು ಸ್ಥಾಪಿಸಿ ಆ ಅಗ್ನಿಯ ಶಾಖವು ಪುನಃ ಉಂಟಾಗಲಿ ಎಂದು ಪ್ರಾರ್ಥಿಸಿದನು ಆದರೆ, ಆ ಪ್ರಾರ್ಥನೆಯ ಫಲವಾಗಿ ರಾಜನಿಗೆ ಪೈಶಾಚೀರೂಪದ ಪತ್ನಿಯು ಲಭಿಸಿದುದನ್ನು ಕಂಡನು.

ನಿಷಣ್ಣಸ್ಯ ತಯಾ ಸಾರ್ಧಂ ಆಸಂದ್ಯಾಂ ಕಶಿಪಾವಪಿ ।
ತಾಮುಪಾಮಂತ್ರಯಾಂಚಕ್ರೇ ಕಮೇತಂ ತ್ವಮಿತಿ ತ್ವೃಚಾ ॥ (೫–೨೦)

ಆಗ ಆ ಪೈಶಾಚೀರೂಪದ ರಾಜನ ಪತ್ನಿಯೊಡನೆ ತಾನೇ ಆಸನದಲ್ಲಿ ಕುಳಿತು **" ಕಮೇತಂ ತ್ವಂ "** (ಋ. ಸಂ ೫–೨–೨) ಎಂಬ ಮಂತ್ರವನ್ನು ಪಠಿಸಿ ಆಕೆಯನ್ನು " ಎಲೈ ಯುವತಿಯೇ, ನೀನು ಪೈಶಾಚೀರೂಪವನ್ನು ಧರಿಸಿ ಪೋಷಿಸುವ ಈ ಬಾಲಕನಾರು? " ಇತ್ಯಾದಿಯಾಗಿ ಪ್ರಶ್ನಿಸಿದನು

ಹರಃ ಕುಮಾರರೂಪೇಣ ಬ್ರುವಂಸ್ತಾಮಭ್ಯಭಾಷತ ।
ವಿಜ್ಯೋತಿಷೇತಿ ಚೋಕ್ತ್ವಾಯಾಂ ಸಹಸಾಗ್ನಿರುದಜ್ವಲತ್ ॥
(೫–೨೧)

ಅಗ್ನಿತಾಪವನ್ನು ಕುಮಾರನೆಂದು ನಿರ್ದೇಶಿಸಿ, ಆ ಪೈಶಾಚೀಸ್ತ್ರೀಯನ್ನು ಮೇಲೆ ಹೇಳಿದ ಮಂತ್ರದಿಂದ (೫–೨–೨) ಪ್ರಶ್ನಿಸಿದೊಡನೆಯೇ, ಪುನಃ **" ವಿ ಜ್ಯೋತಿಷಾ.... "** (೫–೨–೯) ಎಂಬ ಮಂತ್ರವನ್ನು ಪಠಿಸಿದನು " ಅಗ್ನಿಯು ಮಹತ್ತಾದುದೂ, ವೈವಿಧ್ಯದಿಂದ ಕೂಡಿದುದೂ ಆದ ಜ್ವಾಲೆಗಳಿಂದ ಪ್ರಕಾಶಿಸುತ್ತಿದ್ದಾನೆ ಅವನು ತನ್ನ ಜ್ವಾಲೆಗಳನ್ನು ಬಹಳ ತೀಕ್ಷ್ಣವಾಗುವಂತೆ ಮಾಡಿಕೊಳ್ಳುತ್ತಾನೆ " ಎಂಬುದೇ ಆ ಮಂತ್ರದ ತಾತ್ಪರ್ಯ. ಈ ಮಂತ್ರವನ್ನು ಪಠಿಸಿದೊಡನೆಯೇ ಅಗ್ನಿಯ ಮಹತ್ತಾದ ಜ್ವಾಲೆಯು ಪ್ರಾದುರ್ಭೂತವಾಯಿತು

ಸಹಮಾನಃ ಸಮಾಯಾಂತಂ ಪ್ರಕಾಶಂ ಚ ಪ್ರಕಾಶಯನ್ ।
ಪಿಶಾಚೀಮದಹತ್ತಾಂ ಸ ಯತ್ರ ಚೋಪವಿವೇಶ ಸಾ ॥ (೫–೨೨)

ಮಹತ್ತಾದ ಆ ಅಗ್ನಿಜ್ವಾಲೆಯು ತನ್ನ ಮಹತ್ತ್ವಛೆಯಿಂದ ಪ್ರಕಾಶಿಸುತ್ತಾ, ತನ್ನನ್ನು ಸವಿಾಪಿಸಿದವರನ್ನೆಲ್ಲಾ ದೂರಕ್ಕೆ ಓಡಿಸುತ್ತಾ ಕೊನೆಗೆ ಆ ಪೈಶಾಚೀರೂಪದ ಸ್ತ್ರೀಯನ್ನು ಕುಳಿತಿದ್ದ ಜಾಗದಲ್ಲಿಯೇ ದಹಿಸಿ ಭಸ್ಮವಾಗುವಂತೆ ಮಾಡಿತು. ಇದೇ **ವೃಶಜಾನನ** ಮಹಚ್ಛಕ್ತಿವರ್ಣನಾತ್ಮಕವಾದ ಕಥೆ. ಈ ಮಹತ್ತ್ವವನ್ನು ಪ್ರಶಂಸಿಸುವ ೫–೨–೨ ಮತ್ತು ೫–೨–೯ನೇ ಮಂತ್ರಗಳು ಬೇರೆಕಡೆಗಳಲ್ಲಿಯೂ ಪ್ರಶಂಸಿತವಾಗಿವೆ.

ಏಷ ಏವ ಪರಾಮೃಶ್ವೋ ಭಾಲ್ಲವಿಬ್ರಾಹ್ಮಣೇ ದ್ವ್ಯಚಃ ।
ನಿದಾನಸಂಜ್ಞಕೇ ಗ್ರಂಥೇ ಛಂದೋಗಾನಾಮಿತಿ ಶ್ರುತಿಃ ॥ (೫–೨೩)

ಈ ಮಂತ್ರಗಳೆರಡೂ ಸಹ ಭಾಲ್ಲವೀಬ್ರಾಹ್ಮಣದಿಂದ ಉದಾಹೃತವಾಗಿವೆ. ಮತ್ತು ಛಂದೋಗರ ನಿದಾನಗ್ರಂಥದಲ್ಲಿಯೂ ಪ್ರಶಂಸಿತವಾಗಿವೆ ಇದು ವೃಶಜಾನನ ಮಹತ್ವವನ್ನು ತಿಳಿಸುವ ಸನ್ನಿವೇಶವಾಗಿದೆ. ಮೇಲೆ ಉದಾಹೃತವಾಗಿರುವ ಈ ಕಥೆಯನ್ನೇ ಸಾಯಣರು ಋ. ಸಂ ೫-೨-೧೯ನೇ ಮಂತ್ರದ ಭಾಷ್ಯದ ಸಂದರ್ಭದಲ್ಲಿ ತಿಳಿಸಿದ್ದಾರೆ.

॥ ಸಾಯಣಭಾಷ್ಯಂ ॥

ಕುಮಾರಂ ಮಾತೇತಿ ದ್ವಾದಶರ್ಚಂ ದ್ವಿತೀಯಂ ಸೂಕ್ತಂ। ಆತ್ರೇಃ ಪುತ್ರಃ ಕುಮಾರಃ ಋಷಿರ್ಜನನಾಮ್ನಃ ಪುತ್ರೋ ವೃಶೋ ವೋಭೌ ವಾತ್ರ ಋಷೀ। ಕನೇತಂ ತ್ವಂ ವಿ ಜ್ಯೋತಿಷೇತ್ಯನ-ಯೋಸ್ತು ವೃಶ ಏವ ನೋಭೌ ನ ಕುಮಾರಃ। ಅಂತ್ಯಾ ಷಟ್ಪಂಚಾಶದಕ್ಷರಾ ಶಕ್ವರೀ ತಿಷ್ಟ್ವಾಸ್ತ್ರಿಷ್ಟುಭಃ। ಅಗ್ನಿರ್ದೇವತಾ। ಅತ್ರಾನುಕ್ರಮಣಿಕಾ। ಕುಮಾರಂ ಕುಮಾರೋ ವೃಶೋ ವಾ ಜಾನ ಉಭೌ ವಾ ಶಕ್ವರ್ಯಂತಂ ಕಂ ವೀತ್ಯೃಚೋಸ್ತು ವೃಶ ಏವೇತಿ॥ ಪ್ರಾತರನುವಾಕಾಪ್ತಿನಶಸ್ತ್ರಯೋರಸ್ಯಾಪಿ ಸೂಕ್ತಸ್ಯ ವಿನಿಯೋಗ ಉಕ್ತಃ ಪೂರ್ವಸೂಕ್ತೇನ ಸಹ॥

ಅನುವಾದವು—**ಕುಮಾರಂ ಮಾತಾ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು ಈ ಸೂಕ್ತಕ್ಕೆ ಆತ್ರಿಋಷಿಯ ಪುತ್ರನಾದ **ಕುಮಾರಃ** ಎಂಬುವನು ಋಷಿಯು, ಅಥವಾ **ಜನ** ಎಂಬ ಹೆಸರಿನ ಋಷಿಯ ಪುತ್ರನಾದ **ವೃಶಃ** ಎಂಬುವನು ಋಷಿಯು, ಅಥವಾ ಈ ಇಬ್ಬರೂ ಈ ಸೂಕ್ತಕ್ಕೆ ಋಷಿಗಳಾಗಬಹುದು. ಆದರೆ ಈ ಸೂಕ್ತದ **ಕನೇತಂ ತ್ವಂ** (೨ನೆಯ ಋಕ್ಕು) ಮತ್ತು **ವಿ ಜ್ಯೋತಿಷಾ** (೯ನೇ ಋಕ್ಕು) ಎಂಬ ಈ ಎರಡು ಋಕ್ಕುಗಳಿಗೆ ಮಾತ್ರ **ವೃಶಃ** ಎಂಬುವನೊಬ್ಬನೇ ಋಷಿಯು ಮೇಲೆ ಹೇಳಿದಂತೆ ಕುಮಾರನಾಗಲಿ ಅಥವಾ ಇಬ್ಬರೂ ಆಗಲಿ ಋಷಿಗಳಲ್ಲ, ಅಗ್ನಿಯು ದೇವತೆಯು, **ಈ ಸೂಕ್ತದ** ಕೊನೆಯ ಋಕ್ಕು ಏವತ್ತಾರು ಅಕ್ಷರಗಳುಳ್ಳ ಶಕ್ವರೀ ಎಂಬ ಛಂದಸ್ಸಿನದು ಉಳಿದ ಋಕ್ಕುಗಳೆಲ್ಲಾ ತ್ರಿಷ್ಟುಪ್ ಛಂದಸ್ಸುವು. ಅನುಕ್ರಮಣಿಕೆಯಲ್ಲಿ--**ಕುಮಾರಂ ಕುಮಾರೋ ವೃಶೋ ವಾ ಜಾನ ಉಭೌ ವಾ ಶಕ್ವರ್ಯಂತಂ ಕಂ ವೀತ್ಯೃ ಚೋಸ್ತು ವೃಶ ಏವ** ಎಂದು ಹೇಳಿರುವುದು ಪ್ರಾತರನುವಾಕ ಮತ್ತು ಆಪ್ತಿನಶಸ್ತ್ರಮಂತ್ರಪರನಕ್ಯಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದಿನ ಸೂಕ್ತದ ವಿನಿಯೋಗದಲ್ಲಿಯೇ ನೋಳಲಾಗಿದೆ.

ಸೂಕ್ತ—೨

ಮಂಡಲ—೫ ॥ ಅನುವಾಕ—೧ ॥ ಸೂಕ್ತ—೨ ॥
ಅಷ್ಟಕ—೩ ॥ ಅಧ್ಯಾಯ—೮ ॥ ವರ್ಗ—೧೪, ೧೫ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥
॥ ಋಷಿಃ—೧, ೩-೮, ೧೦-೧೨ ಕುಮಾರ ಆತ್ರೇಯೋ ವೃಶೋ ವಾ ಜಾನ ಉಭೌ ವಾ ೨, ೯ ವೃಶೋ ಜಾನಃ ॥
॥ ದೇವತಾ—ಅಗ್ನಿಃ ॥
॥ ಛಂದಃ—೧-೧೧ ತ್ರಿಷ್ಟುಪ್। ೧೨ ಶಕ್ವರೀ ॥

॥ संहितापाठः ॥

कुमारं माता युवतिः समुब्धं गुहा बिभर्ति न ददाति पित्रे।
अनीकमस्य न मिनज्जनासः पुरः पश्यन्ति निहितमरत्तौ ॥ ८ ॥

॥ पदपाठः ॥

कुमारं । माता । युवतिः । सं२उब्धं । गुहा । बिभर्ति । न । ददाति । पित्रे ।
अनीकं । अस्य । न । मिनत् । जनासः । पुरः । पश्यन्ति । नि२हितं । अरत्तौ ॥ ८ ॥

॥ सायणभाष्यं ॥

शाट्यायनब्राह्मणोक्त इतिहास इहोच्यते। राजा त्रैवृष्ण इक्ष्वाकस्य्रुणोऽभवदस्य च ॥ पुरोहितोऽवृशो जान ऋषिरासीत्तदा ऋलु। संगृह्णन्ति रथान्राज्ञां रक्षणाय पुरोहिताः ॥ त्र्यरुणस्य वृशो रश्मिं संजग्राह पुरोहितः। कुमारोऽवर्त्मनि क्रीडन्त्रथचक्रेण घातितः ॥ भिन्नः कुमारश्चक्रेण मुमारार्थं पुरोहितः। त्वं हंतास्येति राजानं राजा चाह पुरोहितं ॥ त्वं हंतास्य कुमारस्य नाहमित्यब्रवीत्तदा। यतस्त्वं रथनेमस्य नियंतासत्त्वया हतः ॥ रथस्वामी यतोऽराजन् तस्मात्त्वं तस्य घातकः। एवं एवदनान्तौ तावित्यूकून्स्वमागतौ ॥ तौ पप्रच्छतुरिक्ष्वाकून् केनासौ निहतोऽद्विजाः। तेऽब्रुवन्त्रथयंतारं हंतारं वृशसंज्ञकं ॥ स वृशोऽनार्शसाम्ना तं कुमारं समजीवयत्। एवमाख्यायतत्रैव पुनरन्यदुदीरितं ॥ यत इक्ष्वाकवोऽराजाद्धंतारमृषिमब्रुवन्। तस्मात्तेषां गृहेष्वग्नेस्तेजोऽनिर्गतमेषु च ॥ गृहे पाकादयोऽनासन् तत्कारणमबिंतयन्। वृशं कुमारहंतारं यदवोचामतेन नः ॥ असाक्रमुद्धरो वह्नेरराह्वयामो वृशं वयं। इति संचिंत्य तमृषिमाह्वयामासुरादरात् ॥ समागत्य ततः शीघ्रं तेषामग्नेरहरो भवेत्। इति वार्शनेन साम्नासावकामयत पूर्ववत् ॥ एवं गायन् स ऋषिर्ब्रह्महत्यां भार्यार्जाताताम् त्रसदस्योर्न्यपस्य। पिशाचवेषां हर आदाय चाग्नेर्गृहान्निर्हत्या कशिपा स्थापयंतीम् ॥ दृष्ट्वा समृक् तद्धरस्तोषयित्वा सामा पशत्वाद्योजयामास चाग्निं। ततः सतेजाः संजातोऽभवत्त्वातादिः पूर्ववत् ॥ एवं शाट्यायनेनोक्तं काण्डकोक्तमथोच्यते। वृतः पुरोधा अभवत्त्र-

ಸದಸ್ಯೋರ್ಮಹೀಪತೇಃ॥ ಸ ರಥಂ ಧಾವಯೆನ್ರಾಜಾ ಬ್ರಾಹ್ಮಣಸ್ಯ ಕುಮಾರಕಂ । ಚಿಚ್ಛೇದ ರಥಚಕ್ರೇಣ ಪ್ರಮಾದಾತ್ಸೋಽಬ್ರವೀದ್ಪ್ಲಕಂ ॥ ಪುರೋಹಿತೇ ವರ್ತಮಾನೇ ತ್ವಯಿ ಮಾಂ ಹಂತಿ ರಾಗತಾ । ಏಷಾ ತ್ವಯಾಪನೇತವ್ಯಾ ಋಷಿಮಿತ್ಯಬ್ರವೀನ್ನೃಪಃ ॥ ಸ ಋಷಿರ್ವಾರ್ಕ್ಷಸಾಮ್ನಾ ತಂ ಕುಮಾರಮುದಜೀವ-ಯತ್ ॥ ಮಾತಾ ಕುಮಾರಸ್ಯೋತ್ಪಾದಯಿತ್ರೀ ಯುವತಿರ್ಯೌವನೋಪೇತಾ ಕುಮಾರಂ ಪಥಿ ಸಂಚರಂತಂ ಸಮುಬ್ಜಂ ಚಕ್ರೇಣ ಹತಂ ಗುಹಾ ಗುಹಾಯಾಂ ಬಿಭರ್ತಿ । ಧಾರಯತಿ । ನ ದದಾತಿ ಪಿತ್ರೇ ತಸ್ಯ ಜನಕಾಯ । ಯದ್ವಾ । ಮಾತಾ ಸರ್ವಸ್ಯ ನಿರ್ಮಾತ್ರೀ ಪೃಥಿವೀ ಸಮುಬ್ಜಂ ಸಮ್ಯಕ್ ನಿಗೂಢಂ ಗುಹಾ ಬಿಭರ್ತಿ । ನ ದದಾತಿ ಪಿತ್ರೇ । ಅಸ್ಯ ಕುಮಾರಸ್ಯಾನೀಕಂ ರೂಪಂ ಮಿನತ್ ಹಿಂಸಿತಂ ಜನಾಸೋ ಜನಾ ನ ಪಶ್ಯಂತಿ । ಕಿಂತು ಅರತಾವರಮನೇ ದೇಶೇ ನಿಹಿತಂ ಸ್ಥಿತಂ ಪುರಃ ಪುರೋದೇಶೇ ಪಶ್ಯಂತಿ । ಅಥವಾಯಂ ವೃಶೇನ ಪುನರುಜ್ಜೀವಿತಃ ಕುಮಾರ ಆತ್ಮಾನಮಪರೋಕ್ಷತಯಾ ವಕ್ತಿ । ಕಥಯತಿ । ಜಾನೋ ವಾ ತಂ ಜೀವಯಿತ್ವಾ ವಕ್ತಿ । ಅಥವಾ ಸೂಕ್ತಸ್ಯಾಗ್ನೇಯತ್ವಾತ್ಕುಮಾರ ಇತ್ಯಗ್ನಿರುಚ್ಯತೇ । ತಂ ಮಾತಾರಣೀರ್ಯುವತಿರ್ಮಿಶ್ರಯಂತೀ ಸಮುಬ್ಜಂ ನಿಗೂಢಂ ಗುಹಾಯಾಂ ಬಿಭರ್ತಿ । ಪಿತ್ರ ಉತ್ಪಾದಕಾಯ ಯಜಮಾನಾಯ ನ ದದಾತಿ । ಅಸ್ಯಾಗ್ನೇರ್ಮಿನತ್ ಹಿಂಸತ್ ದಾಹಕಮನೀಕಂ ತೇಜೋ ಜನಾ ನ ಪಶ್ಯಂತಿ । ಕಿಂತು ಅರತಾವರಣ್ಯಾಂ ಹಿತಂ ಪಶ್ಯಂತಿ ॥

॥ ಪ್ರತಿಪದಾರ್ಥ ॥

ಯುವತಿಃ—ಯೌವನೋಪೇತಳಾದ । **ಮಾತಾ**—ತಾಯಿಯು । **ಸಮುಬ್ಜಂ**—ಚಕ್ರದಿಂದ ಹಿಂಸಿತನಾದ । **ಕುಮಾರಂ**—ಪುತ್ರನನ್ನು । **ಗುಹಾ**—ರಹಸ್ಯದಲ್ಲಿ । **ಬಿಭರ್ತಿ**—ಧರಿಸುತ್ತಾಳೆ । **ಪಿತ್ರೇ**—ಪುತ್ರನ ತಂದೆಗೆ । **ನ ದದಾತಿ**—ಒಪ್ಪಿಸುವುದಿಲ್ಲ । **ಅಸ್ಯ**—ಈ ಕುಮಾರನ । **ಮಿನತ್**—ಹಿಂಸಿತವಾದ । **ಅನೀಕಂ**—ರೂಪವನ್ನು । **ಜನಾಸಃ**—ಜನಗಳು । **ನ ಪಶ್ಯಂತಿ**—ನೋಡುವುದಿಲ್ಲ (ಆದರೆ) । **ಪುರಃ**—ತಮ್ಮ ಮುಂಭಾಗದಲ್ಲಿ । **ಅರತೌ**—ಕ್ಷುಬ್ಧವಾದ ಸ್ಥಿತಿಯಲ್ಲಿ । **ನಿಹಿತಂ**—ಇಡಲ್ಪಟ್ಟ ಪುತ್ರನನ್ನು (ಮಾತ್ರ) । **ಪಶ್ಯಂತಿ**—ನೋಡುತ್ತಾರೆ.

॥ ಭಾವಾರ್ಥ ॥

ಯೌವನೋಪೇತಳಾದ ತಾಯಿಯು ಚಕ್ರದಿಂದ ಹಿಂಸಿತನಾದ ಪುತ್ರನನ್ನು ರಹಸ್ಯದಲ್ಲಿ ಧರಿಸುತ್ತಾಳೆ ಪುತ್ರನ ತಂದೆಗೆ ಒಪ್ಪಿಸುವುದಿಲ್ಲ ಆದರೆ ತಮ್ಮ ಮುಂಭಾಗದಲ್ಲಿ ಕ್ಷುಬ್ಧವಾದ ಸ್ಥಿತಿಯಲ್ಲಿ ಇಡಲ್ಪಟ್ಟ ಪುತ್ರನನ್ನು ಮಾತ್ರ ನೋಡುತ್ತಾರೆ.

- English Translation

The young mother cherishes her mutilated boy in secret, and gives him not up to the father : men behold not his mutilated form, but (see him) when placed before (them) in an unresting (position).

॥ ವಿಶೇಷವಿಷಯಗಳು ॥

ಈ ಸೂಕ್ತದ ಮೊದಲನೆಯ ಋಕ್ಕಿನಲ್ಲಿ ವಿವರಿಸಿರುವ ವಿಷಯವಾಗಿ ಭಾಷ್ಯಕಾರರು ಸಾಮವೇದದ ಶಾಟ್ಯಾಯನಬ್ರಾಹ್ಮಣದಲ್ಲಿ ಉಕ್ತವಾಗಿರುವ ಕಥಾಸಂದರ್ಭವನ್ನು ಈ ರೀತಿ ವಿವರಿಸಿದಾರೆ---

ಶಾಟ್ಯಾಯನಬ್ರಾಹ್ಮಣೋಕ್ತ ಇತಿಹಾಸ ಇಹೋಚ್ಯತೇ ।
ರಾಜಾ ತ್ರೈವೃಷ್ಣ ಏಷ್ಟ್ವಾಕಃ ತ್ರ್ಯರುಣೋ೨ಭವದಸ್ಯ ಚೆ ॥
ಪುರೋಹಿತೋ ವೃಶೋ ಜಾನ ಋಷಿರಾಸೀತ್ತದಾ ಖಲು ।
ಸಂಗೃಹ್ಣಂತಿ ರಥಾನ್ ರಾಜ್ಞಾಂ ರಕ್ಷಣಾಯ ಪುರೋಹಿತಾಃ ॥
ತ್ರೈರುಣಸ್ಯ ವೃಶೋ ರಶ್ಮಿಂ ಸಂಜಗ್ರಾಹ ಪುರೋಹಿತಃ ।
ಕುಮಾರೋ ವರ್ಷ್ಮನಿ ಕ್ರೀಡನ್ಸಧಚಕ್ರೇಣ ಘಾತಿತಃ ॥
ಛಿನ್ನಃ ಕುಮಾರಶ್ಚಕ್ರೇಣ ಮಮಾರಾಥ ಪುರೋಹಿತಃ ।
ತ್ವಂ ಹಂತಾಸ್ಯೇತಿ ರಾಜಾನಂ ರಾಜಾ ಚಾಪಿ ಪುರೋಹಿತಂ ॥
ತ್ವಂ ಹಂತಾಸ್ಯ ಕುಮಾರಸ್ಯ ನಾಹಮಿತ್ಯಬ್ರವೀತ್ತದಾ ।
ಯತಸ್ತ್ವಂ ರಥವೇಗಸ್ಯ ನಿಯಂತಾತಸ್ತ್ವಯಾ ಹತಃ ॥
ರಥಸ್ವಾಮಿ ಯತೋ ರಾಜನ್ ತಸ್ಮಾತ್ತ್ವಂ ತಸ್ಯ ಘಾತಕಃ ।
ಏವಂ ವಿವದಮಾನೌ ತಾವಿಕ್ಷ್ವಾಕೂನ್ವೃಷ್ಟುಮಾಗತೌ ॥
ತೌ ಪಪ್ರಚ್ಛತುರಿಕ್ಷ್ವಾಕೂನ್ ಕೇನಾಸೌ ನಿಹತೋ ದ್ವಿಜಃ ।
ತೇ೨ಬ್ರುವನ್ರಥಯಂತಾರಂ ಹಂತಾರಂ ವೃಶಸಂಜ್ಞಕಂ ॥
ಸ ವೃಶೋ ವಾರ್ಶಸಾಮ್ನಾ ತಂ ಕುಮಾರಂ ಸಮಜೀವಯತ್ ।
ಏವಮಾಖ್ಯಾಯ ತಶ್ಚೈವ ಪುನರನ್ಯದುದೀರಿತಂ ॥
ಯತ ಇಕ್ಷ್ವಾಕವೋ ರಾಗಾದ್ಧಂತಾರಮೃಷಿಮಬ್ರುವನ್ ।
ತಸ್ಮಾತ್ತೇಷಾಂ ಗೃಹೇಷ್ವಗ್ನೇಸ್ತೇಜೋ ನಿರ್ಗತಮೇಷು ಚೆ ॥
ಗೃಹೇ ಪಾಕಾದಯೋ ನಾಸನ್ ತತ್ಕಾರಣಮಚಿಂತಯನ್ ।
ವೃತಂ ಕುಮಾರಹಂತಾರಂ ಯದವೋಚಾಮ ತೇನ ನಃ ॥
ಆಸಾಕ್ರಮದ್ಧರೋ ವಹ್ನೇರಾಹ್ವಯಾಮ ವೃತಂ ವಯಂ ।
ಇತಿ ಸಂಚಿಂತ್ಯ ತಮೃಷಿಮಾಹ್ವಯಾಮಾಸುರಾದರಾತ್ ॥
ಸಮಾಗತ್ಯ ತತಃ ಶೀಘ್ರಂ ತೇಷಾಮಗ್ನೇರ್ಹರೋ ಭವೇತ್ ।
ಇತಿ ವಾರ್ಶೇನ ಸಾಮ್ನಾಸಾವಕಾಮಯತ ಪೂರ್ವವತ್ ॥

ಏವಂ ಗಾಯನ್ ಸ ಋಷಿರ್ಬ್ರಹ್ಮಹತ್ಯಾಂ
ಭಾರ್ಯಾಜಾತಾಂ ತ್ರಸದಸ್ಯೋರ್ನೃಪಸ್ಯ ।
ಪಿತಾಚಕ್ರೇಷಾಂ ಹರ ಆದಾಯ ಚಾಗ್ನೇ-
ರ್ಗೃಹಾನ್ನೀತ್ವಾ ಕಶಿಪೌ ಸ್ಥಾಪಯಂತೀಂ ॥

ದೃಷ್ಟ್ವಾ ಸಮ್ಯಕ್ ಕದ್ಧರಸ್ತೋಷಯಿತ್ವಾ
ಸಾಮ್ನಾ ಪಶ್ಚಾದ್ಯೋಜಯಾಮಾಸ ಚಾಗ್ನಿಂ ।
ತತಃ ಸತೇಜಾಃ ಸಂಜಾತೋಽಭವತ್ಪಾಕಾದಿ ಪೂರ್ವವತ್ ।
ಏವಂ ಶಾಟ್ಯಾಯನೇನೋಕ್ತಂ ತಾಂಡ್ಯಕೋಕ್ತಮಥೋಚ್ಯತೇ ॥
ವೃಶಃ ಪುರೋಧಾ ಅಭವತ್ತ್ರಸದಸ್ಯೋರ್ಮಹೀಪತೇಃ ।
ಸ ರಥಂ ಧಾವಯನ್ರಾಜಾ ಬ್ರಾಹ್ಮಣಸ್ಯ ಕುಮಾರಕಂ ॥
ಜಿಚ್ಛೈದ ರಥಚಕ್ರೇಣ ಪ್ರಮಾದಾತ್ತೋಽಬ್ರವೀದ್ಭೃಶಂ ।
ಪುರೋಹಿತೇ ವರ್ತಮಾನೇ ತ್ವಯಿ ಮಾ ಹಂತಿರಾಗತಾ ॥
ಏಷಾ ತ್ವಯಾಪನೇತವ್ಯಾ ಋಷಿಮಿತ್ಯಬ್ರವೀನ್ನೃಪಃ ।
ಸ ಋಷಿರ್ವಾರ್ಶಸಾಮ್ನಾ ತಂ ಕುಮಾರಮುದಜೀವಯತ್ ॥

ಇಕ್ಷ್ವಾಕುವಂಶದಲ್ಲಿ ತ್ರಿವೃಷ್ಣಪುತ್ರನಾದ **ತ್ರೈಯರುಣಿ**ನೆಂಬ ರಾಜನಿದ್ದನು ಅವನಿಗೆ ಜನಪುತ್ರನೂ, ಮಹರ್ಷಿಯೂ ಆದ **ವೃಶ**ನೆಂಬ ಪುರೋಹಿತನಿದ್ದನು ರಾಜನೂ, ಪುರೋಹಿತನೂ ಒಟ್ಟಿಗೆ ಹೊರಕ್ಕೆ ಹೊರಟರೆ ಆಗ ಪುರೋಹಿತನೇ ಸಾರಥಿಯಾಗಿದ್ದುಕೊಂಡು ರಥವನ್ನು ಹೊಡೆಯಬೇಕೆಂಬ ಸಂಪ್ರದಾಯವಿದ್ದಿತು ಆದರಂತೆಯೇ ವೃಶನು ಆಶ್ವಗಳ ಲಗಾಮನ್ನು ಹಿಡಿದುಕೊಂಡು ರಥವನ್ನು ಹೊಡೆಯುತ್ತಿದ್ದನು ಈ ಸಂದರ್ಭದಲ್ಲಿ ರಥದ ದಾರಿಯಲ್ಲಿ ಒಬ್ಬ ಬ್ರಾಹ್ಮಣನ ಹುಡುಗನು ಆಟವಾಡುತ್ತಿದ್ದನು ಈ ರಥದ ಚಕ್ರವು ಆ ಹುಡುಗನ ಮೇಲೆ ಹರಿದುದರಿಂದ ಕೂಡಲೇ ಹುಡುಗನು ಮೃತಪಟ್ಟನು ಆ ಮೃತಿಜನ್ಯವಾದ ಪಾಪಕ್ಕೆ ಯಾರು ಭಾಗಿಯೆಂಬುದಾಗಿ ಅವರಿಬ್ಬರಲ್ಲೇ ಒಂದು ವಿವಾದವು ಆರಂಭವಾಯಿತು ರಥವನ್ನು ಹೊಡೆಯುತ್ತಿದ್ದುದರಿಂದ ನೀನೇ (ಪುರೋಹಿತನೇ) ಪಾಪಭಾಗಿಯೆಂದು ರಾಜನೂ, ರಥಕ್ಕೆ ಸ್ವಾಮಿಯಾದುದರಿಂದ ರಾಜನೇ ಪಾಪಭಾಗಿಯೆಂದು ಪುರೋಹಿತನೂ, ಪರಸ್ಪರ ಒಬ್ಬರ ಮೇಲೊಬ್ಬರು ದೋಷವನ್ನು ಆರೋಪಿಸತೊಡಗಿದರು ಆಗ ಅವರಿಬ್ಬರೂ ತಮ್ಮ ವಿವಾದವನ್ನು **ಇಕ್ಷ್ವಾಕು**ಗಳ ಪರಿಷತ್ತಿಗೆ ಒಪ್ಪಿಸಿದರು ಅಲ್ಲಿ ಪುರೋಹಿತನನೇ ತಪ್ಪೆಂದು ತೀರ್ಮಾನಿಸಲಾಯಿತು (ಈ ರೀತಿ ತಮ್ಮ ವಿವಾದವನ್ನು ಪರಿಷತ್ತಿಗ ಒಪ್ಪಿಸುವುದೂ ನುತ್ತು ಪರಿಷತ್ತು ತನ್ನ ತೀರ್ಮಾನನನ್ನು ತಿಳಿಸುವುದೂ ಸಹ ಹಿಂದೆ ಉದಾಹೃತವಾಗಿರುವ ಬೃಹದ್ವೇನತಾವಾಕ್ಯಗಳಲ್ಲಿಲ್ಲ) ರಥದ ವೇಗವನ್ನು ತಡೆಯುವುದು ಸಾರಥಿಯ ಕರ್ತವ್ಯವಾದುದರಿಂದಲೂ ಮತ್ತು ವೃಶನು ಸಾರಥಿಯಾಗಿದ್ದು ಅದನ್ನು ನಿರ್ವಹಿಸದೇ ಇದ್ದುದರಿಂದಲೂ ಅವನೇ ಪಾಪಭಾಗಿಯು ಎಂದು ಯಾವಾಗ **ತೀರ್ಮಾನಿಸಲಾಯಿತೋ**, ಆ ಒಡನೆಯೇ ಋಷಿಯು **ವಾರ್ಶ ಸಾಮ** ಎಂಬ ಸಾಮಮಂತ್ರದ ದರ್ಶನವನ್ನು ಪಡೆದು ಆ ಮಂತ್ರನನ್ನು ಪರಿಸಿ ಅವರ ಪ್ರಭಾವನಿಂದ ಮೃತನಾಗಿದ್ದ ಬಾಲಕನಿಗೆ ಪುನ: ಜೀವವು ಬರುವಂತೆ ಮಾಡಿದನು ಆದರ, ತನ್ನ ನಿಶ್ಚಯದಲ್ಲಿ ಅನ್ಯಾಯವಾಗಿ ದೋಷಾರೋಪನನ್ನು ಮಾಡಿ ತನಗೆ ವಿರುದ್ಧವಾಗಿ ತೀರ್ಮಾನವನ್ನು ಹೇಳಿದ ಇಕ್ಷ್ವಾಕುಗಳ ಮೇಲೆ ಕ್ರುದ್ಧನಾಗಿ " ಅವರ ಗೃಹದಲ್ಲಿ ಸಮಿದ್ಧನಾಗತಕ್ಕ ಅಗ್ನಿಗೆ ವೀರ್ಯವೂ, ತೇಜಸ್ಸೂ ಲುಪ್ತವಾಗಲಿ ಎಂದು ಶಪಿಸಿದನು. ಮತ್ತು ಅವರನ್ನು ತ್ಯಜಿಸಿ ಹೊಟುಹೋದನು. (ಆ ದೇಶದ ರಾಜನಲ್ಲಿಗೆ ಹೋಗಿ ಸೇರಿದನೆಂಬ ಬೃಹದ್ವೇನತಾವಾಕ್ಯವಿದೆ). ಆ ಶಾಪದ ಫಲವಾಗಿ ಇಕ್ಷ್ವಾಕುಗಳ ಗೃಹದಲ್ಲಿ ಸ್ಥಾಪಿತವಾದ ಅಗ್ನಿಯ ತೇಜಸ್ಸೆಲ್ಲವೂ ಲುಪ್ತವಾಯಿತು (**ಅಗ್ನೌ ಪ್ರಯುಕ್ತಾನಿ ಹವ್ಯಾನಿ ನ ಹ್ಯಪಚ್ಯಂತ ತಾನಿತಿ** ।) ಅಗ್ನಿಯ ತೇಜಸ್ಸು ಲುಪ್ತವಾದುದ

ರಿಂದ ಆ ಅಗ್ನಿಯಲ್ಲಿ ಅರ್ಪಿತವಾದ ಹವಿರಾದಿಗಳು ಪಕ್ವವಾಗಲಿಲ್ಲ ಮತ್ತು ಅಡಿಗೆಯು ಮನೆಯಲ್ಲಿಯೂ ಅಗ್ನಿಯಿಲ್ಲದ್ದರಿಂದ ಪಾಕಾದಿಗಳನ್ನು ಮಾಡಲೂ ಸಾಧ್ಯವಾಗಲಿಲ್ಲ.

ಆದ್ದರಿಂದ ಆಗ ಅವರೆಲ್ಲರೂ ಚಿಂತಾಕ್ರಾಂತರಾಗಿ ವೃಶನಿರುವ ಪ್ರದೇಶಕ್ಕೆ ಹೋಗಿ ಅವನನ್ನು ಪ್ರಾರ್ಥಿಸಿ ಹಿಂತಕ್ಕೆ ಕರೆತಂದರು. ಆಗ ಪುನಃ ಹಿಂದೆ ಪರಿಸಿದ್ದ ವಾರ್ಶಸಾನು ಎಂಬ ಮಂತ್ರವನ್ನೇ ಪರಿಸಿದುದರಿಂದ ಲುಪ್ತವಾಗಿದ್ದ ಅಗ್ನಿಯ ತೇಜಸ್ಸು ಪುನರಾವಿರ್ಭೂತವಾಯಿತು ಎಂದಿದೆ (ಇಲ್ಲಿಯವರೆಗೆ ಕಥೆಯು ಸಾನುಂಜಸ್ಯವು ಸನ್ನಿವೇಶಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತದೆ ಆದರೆ ಇನೇ ವಿಷಯವನ್ನು ಮುಂದುವರಿಸುತ್ತಾ ಕಥೆಯನ್ನು ಇನ್ನೂ ಬೆಳೆಸಿದೆ). ಹಿಂದೆ ತನಗೆ ಅಸಮಾಧಾನವಾದೊಡನೆಯೇ ಶಪಿಸಿದುದರಿಂದ, ಬ್ರಹ್ಮಹತ್ಯಾದೋಷವು ತ್ರಸದಸ್ಯುವಿನ ಪತ್ನೀರೂಪಲ್ಲಿದ್ದು ಪಿಶಾಚಿವೇಷದಿಂದ ಅಗ್ನಿಯ ತೇಜಸ್ಸು ಅಪಹರಿಸಿತು ಮತ್ತು ತನ್ನ ಆಚ್ಛಾದನದಿಂದ (ವಸ್ತ್ರದಿಂದ ಅವನ್ನು ಮರೆಯಿಸಿತು. ವೃಶನು ಅವನ್ನು ಕಂಡುಕೊಂತು, ಹರಸ್ಸನ್ನು (ಅಗ್ನಿಯ ತೇಜಸ್ಸು) ಅಲ್ಲಿಂದ ಬಿಡಿಸಿ ಪುನಃ ಅಗ್ನಿಯಲ್ಲಿಯೇ ಸೇರಿಸಿದನು ಆ ಒಡನೆಯೇ ಅಗ್ನಿಯು ಪ್ರಜ್ವಲಿತನಾಗಿ, ತನ್ನಲ್ಲಿ ಅರ್ಪಿತವಾದ ಹವಿರಾದಿಗಳನ್ನು ಪಕ್ವಗೊಳಿಸತೊಡಗಿದನು (ಸೈಶಾಚೀ ರೂಪವ ಬ್ರಹ್ಮಕತ್ಯಾ ದೋಷವನ್ನು ನಿರ್ದೇಶಿಸಿ ವೃಶನು ಮಂತ್ರವನ್ನು ಪರಿಸಿದ್ದನ್ನು ಬೃಹದ್ದೇವತೆಯಲ್ಲಿ ತಿಳಿಸಿದೆ. ಈ ವಿಷಯವನ್ನು ಹಿಂದೆ ಉದ್ಧರಿಸಿದೆ)

ಇದುವರೆಗೂ ಹೇಳಿದ ಕಥೆಯು ಶಾಟ್ಯಾಯನ ಮಹರ್ಷಿಯು ಹೇಳಿರುವಂತೆ ವಿವರಿಸಿದೆ ಈಗ ತಾಂಡ್ಯ ಬ್ರಾಹ್ಮಣದಲ್ಲಿ ಹೇಳಿರುವ ಕಥಾಭಾಗದಲ್ಲಿರುವ ವ್ಯತ್ಯಾಸವನ್ನು ವಿವರಿಸಲಾಗುವುದು ರಾಜನಾದ ತ್ರಸದಸ್ಯುವು ತನ್ನ ಪುರೋಹಿತನಾಗಿ ತನ್ನ ಬ್ರಹ್ಮಹತ್ಯಾದೋಷವನ್ನು ಪರಿಹರಿಸಬೇಕೆಂದು ಪ್ರಾರ್ಥಿಸಲಾಗಿ ಅದರಂತೆ ಪುನಃ ವೃಶನೇ ಪುರೋಹಿತನಾದನು ಮತ್ತು ವಾರ್ಶಸಾನುವ ಪ್ರಭಾವದಿಂದ, ವೃತನಾಗಿದ್ದ ಬಾಲಕನನ್ನು ಬದುಕಿಸಿದನು ಎಂದು ವೃಶನ ಮಹತ್ತ್ವವನ್ನು ಸ್ತುತಿಸಿದೆ ಇದು ಕಥಾ ಸಂದರ್ಭ

ಈ ಕಥಾರೂಪವಾದ ಪೀಠಿಕೆಯಿರುವುದರಿಂದ, ಪ್ರಕೃತವಾದ ಮಂತ್ರದಲ್ಲಿ **ಯುವತಿಃ** ಎಂಬ ಪದಕ್ಕೆ ತ್ರ್ಯರುಣನ ಪತ್ನೀರೂಪವಾದ ಸೈಶಾಚೀ ಸ್ತ್ರೀಯನ್ನು ನಿರ್ದೇಶಿಸಿದೆಯೆಂದು ಹೇಳಬೇಕು ಆದರೆ ಈ ಅರ್ಥವನ್ನು ಹೇಳುವುದು ಹೇಗೆಂದರೆ, ಬೃಹದ್ದೇವತಾವಾಕ್ಯವೇ ಇದಕ್ಕೆ ಆಧಾರ

ನಿಷಣ್ಣಸ್ಯ ತಯಾ ಸಾರ್ಧಂ ಅಸಂದ್ಯಾಂ ಕಶಿಪಾವಸಿ ।
ತಾಮುಸಾಮುಂತಯಾಂಚಿಕ್ರೇ ಕಮೇತಂ ತ್ವಮಿತಿ ತ್ವೃಚಾ ॥

(ಬೃ ದೇ ೫–೨೦)

ಆ ಪೈಶಾಚೀರೂಪವ ತ್ರ್ಯರುಣಪತ್ನಿಯೊಡನೆ ಒಂದೇ ಆಸನದಲ್ಲಿ ಕುಳಿತು ವೃಶನು **ಕಮೇತಂ ತ್ವಂ ಯುವತೇ ಕುಮಾರಂ** (೫-೨–೨) ಎಂಬ ಮಂತ್ರವನ್ನು ಪರಿಸಿದನು ಎಂದಿದೆ. ಇಲ್ಲಿ (೫-೨-೨) ಸಾಯಣರು **ಯುವತೇ..... ... ಪೇಷೀ ಹಿಂಸಿಕಾ ಪಿಶಾಚಿಕಾ ಸತೀ ;** ಪಿಶಾಚಿ ರೂಪದ ಯುವತಿಯೇ ಎಂದರ್ಥ ವಾಡಿರುವುದರಿಂದ, ಮೊದಲನೇ ಮಂತ್ರಕ್ಕೂ ಎಂದರೆ ಪ್ರಕೃತವಾದ ಮಂತ್ರದಲ್ಲಿಯ **ಯುವತಿ** ಶಬ್ದಕ್ಕೂ ಪೈಶಾಚೀಸ್ತ್ರೀಯೆಂದೇ ಅರ್ಥವಾಡಿದರೆ ಅನುಚಿತವಾಗಲಾರದು. ತಾನು ಕುಮಾರ ರೂಪನಾದ (**ಅಗ್ನೇರುತ್ಪದ್ಯಮಾನಸ್ಯಾತ್ ಕುಮಾರಶಬ್ದೇನ ವ್ಯವಹಾರಃ**) ಅಗ್ನಿಯನ್ನು ಅಂತರ್ಹಿತವಾಡಿ ಪಾಲಕನಾದ ಯಜಮಾನನಿಗೆ ಕೊಡುವುದಿಲ್ಲ ಎಂದು ಒಂದು ವಿಧವಾದ ಅರ್ಥವನ್ನು ಹೇಳಬಹುದು. ಈ ಅರ್ಥವು ಕಥಾಸಂದರ್ಭಕ್ಕೂ, ಬೃಹದ್ದೇವತೆಯಲ್ಲಿ ಹೇಳಿರುವ

ವಿವರಣೆಗೂ ಹೊಂದಿಕೊಳ್ಳುತ್ತದೆ ಆದರೆ, ಸಾಯಣನು ಕುಮಾರಶಬ್ದಕ್ಕೆ, ರಥದ ಚಕ್ರವಿಂದ ಹತನಾದ ಕುಮಾರನೆಂದೂ, ಆತನನ್ನು ಈ ಯುವತಿಯು ಆತನ ಪಿತೃವಿಗೆ ಅರ್ಪಿಸದೇ ತನ್ನಲ್ಲಿಯೇ ಗೂಢವಾಗಿಟ್ಟಿರುವಳೆಂದೂ, ಆದುದರಿಂದ ಈ ಸ್ತುತಿಯೆಂದೂ ತಿಳಿಸಿದ್ದಾರೆ ಈ ಅರ್ಥವು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಅಲ್ಲದೇ, ಇದಕ್ಕೆ ಹೊಂದಿಕೊಳ್ಳುವಂತೆ, ಉತ್ತರಾರ್ಧವನ್ನು ವಿವರಿಸಿಲ್ಲ ಆದುದರಿಂದ ಇಲ್ಲಿ **ಕುಮಾರ** ಶಬ್ದಕ್ಕೆ **ಅಗ್ನಿ**ಯೆಂದರ್ಥ ಮಾಡುವುದೇ ಉಚಿತವಾಗಿರುತ್ತದೆ ಸಾಯಣರ ವೈಕಲ್ಪಿಕವಾದ ಎರಡನೆಯ ವಿವರಣವು ಈ ಅರ್ಥವನ್ನು ಸಮರ್ಥಿಸುತ್ತದೆ. ಅದು ಹೇಗೆಂದರೆ,

'ಮಾತಾ ಸರ್ವಸ್ಯ ನಿರ್ಮಾತ್ರೀ ಪೃಥಿವೀ ಸಮುಬ್ಜಂ ಸಮ್ಯಕ್ ನಿಗೂಢಂ ಗುಹಾ ಬಿಭರ್ತಿ ।
ನ ದದಾತಿ ಪಿತ್ರೇ ।

ಸಕಲಸ್ಯೂ ನಿರ್ಮಾತ್ರಿಯಾದ ಪೃಥ್ವಿಯು ಉತ್ಪನ್ನನಾದ ಈ ಅಗ್ನಿಯನ್ನು ಗೂಢವಾಗಿ ಧರಿಸಿದ್ದು ಪಾಲಕನಾದ ಯಜಮಾನನಿಗೆ ಸುಲಭವಾಗಿ ಅರ್ಪಿಸುವುದಿಲ್ಲ ಎಂಬುದು ಒಂದರ್ಥ. ಅಥವಾ, **ಮಾತೃ** ಶಬ್ದಕ್ಕೆ **ಅರಣಿ**ಯೆಂದಿನ್ನೊಂದರ್ಥವನ್ನೂ ಹೇಳಿದ್ದಾರೆ **ಸೂಕ್ತಸ್ಯ ಆಗ್ನೇಯತ್ವಾತ್ ಕುಮಾರಾ ಇತ್ಯಗ್ನಿರುಚ್ಯತೇ ।** ಈ ಸೂಕ್ತವು ಅಗ್ನಿನಿರ್ದಿಷ್ಟವಾದುದರಿಂದ ಇಲ್ಲಿ **ಕುಮಾರ** ಶಬ್ದಕ್ಕೆ ಅಗ್ನಿಯೆಂದರ್ಥ ಈ ಅಗ್ನಿಗೆ ಅರಣಿಯು ಜನಸಿ ಅರಣ್ಯಂತ ರ್ಗತವಾದ ಅಗ್ನಿಯ ತೇಜಸ್ಸನ್ನು ಮಾನವರು ನೋಡುವುದಿಲ್ಲ ಎಂದು ಕೊನೆಯದಾಗಿ ವಿವರಿಸಿದೆ ಆದರೆ, ಅಗ್ನಿಗೆ **ಕುಮಾರ**ನೆಂಬ ಹೆಸರಿನ ಪ್ರಸಿದ್ಧಿಯು ಹೇಗೆ ಎಂಬುದನ್ನು ಪರಿಶೀಲಿಸಬೇಕು

ಈ ಸೂಕ್ತದ ಪೀಠಿಕೆಯಲ್ಲಿ ಶತಪಥಬ್ರಾಹ್ಮಣವಾಕ್ಯವನ್ನುದ್ಧರಿಸಿ ಅಲ್ಲಿ ಅಗ್ನಿಯ ಉತ್ಪತ್ತಿಯನ್ನೂ, ಅಗ್ನಿಗೆ **ರುದ್ರಾದಿ** ಅಪ್ಪನಾಮಗಳೊಂದಿಗೆ ಕುಮಾರನೆಂಬುದು ನವನವಾದ ನಾಮವೆಂದೂ ವರ್ಣಿತವಾಗಿರುವುದನ್ನು ತಿಳಿಸಿದ. ಇದೇ ಅಗ್ನಿಯು ಋಕ್ಸಂಹಿತೆಯಲ್ಲೂ ಸಹ ಅನೇಕ ಸನ್ನಿವೇಶಗಳಲ್ಲಿ **ಶಿಶು**ವೆಂದೂ, **ಕುಮಾರ**ನೆಂದೂ ಪ್ರಶಂಸಿತ ನಾಗಿದ್ದಾನೆ ಉದಾಹರಣೆಗೆ —

ತನಿದ್ಗಚ್ಛಂತಿ ಜುಹ್ವಸ್ತಮರ್ವತೀರ್ವಿಶ್ವಾನ್ಯೇಕಃ ಶೃಣವದ್ವಚಾಂಸಿ ಮೇ ।
ಪುರುಪ್ರೈಷಸ್ತುರಿರ್ಯಜ್ಞಸಾಧನೋಽಚ್ಛಿದ್ರೋತಿಃ ಶಿಶುರಾದತ್ತ ಸಂ ರಭಃ ॥

(ಋ ಸಂ ೮-೧೪೫-೪)

ಸ ಈಂ ವೃಷಾಜನಯತ್ಸಾಸು ಗರ್ಭಂ ಸ ಈಂ ಶಿಶುರ್ಧಯತಿ ತಂ ರಿಹಂತಿ ।

(ಋ ಸಂ ೨-೩೫-೧೩)

ಇತ್ಯಾದ್ಯನೇಕ ಸನ್ನಿವೇಶಗಳಲ್ಲಿ ಅಗ್ನಿಯು **ಶಿಶು**ರೂಪನಾಗಿದ್ದರೂ ಅಸಾಧಾರಣವಾದ ಕೆಲಸಗಳನ್ನು ಮಾಡುವವನೆಂದು ಸ್ತುತಿಸಿದೆ ಇದಲ್ಲದೇ, ಇನ್ನು ಕೆಲವೆಡೆಗಳಲ್ಲಿ **ಕುಮಾರ** ಪದವು ಅಗ್ನಿ ಪರ್ಯಾಯವಾಗಿದೆಯೆಂದು ಹೇಳುವುದಕ್ಕೂ ಅವಕಾಶವಿರುತ್ತದೆ. ಪ್ರಕೃತವಾದ ಸೂಕ್ತದಲ್ಲಿ **ಕುಮಾರ** ಶಬ್ದಕ್ಕೆ **ಅಗ್ನಿ**ಯೆಂದರ್ಥಮಾಡುವಂತೆ, ಆ ಸನ್ನಿವೇಶಗಳಲ್ಲೂ ಸಹ ಅದೇ ರೀತಿ ಅರ್ಥವನ್ನು ಹೇಳಬಹುದು ಉದಾಹರಣೆಗೆ—

ಬೋಧದ್ಯನ್ಮಾ ಹರಿಭ್ಯಾಂ ಕುಮಾರಃ ಸಾಹದೇವ್ಯಃ । ಅಚ್ಛಾ ನ ಹೂತ ಉದರಂ ।

(೪-೧೫-೭)

ಉತ ತ್ಯಾ ಯೆಜತಾ ಹರೀ ಕುಮಾರಾತ್ಸಾಹದೇವ್ಯಾತ್ । ಪ್ರಯೆತಾ ಸದ್ಯ ಆ ದದೇ ॥

(೪-೧೫-೪)

ಎಂಬಲ್ಲಿ ಸಹದೇವಪುತ್ರನಾದ ಕುಮಾರನಿಂದ ವಾಮದೇವನು ಅಶ್ವಗಳನ್ನು ಪಡೆದ ಸನ್ನಿವೇಶವನ್ನು ತಿಳಿಸಿದೆ. ಇದು **ಅಗ್ನಿ** ಪರವಾದ ಸೂಕ್ತವು, ಎಂದು ಸಾಯಣಭಾಷ್ಯದಿಂದ ತಿಳಿಯುತ್ತದೆ

'' ಸೋ೨ಗ್ನಿಂ ತು ಪಂಚದಶಭಿರಿಂದ್ರಂ ಸೋಡಶಭಿಃ ಪರೈಃ ॥

(ಬೃ ದೇ ೪-೧೨೭)

ನಾಲ್ಕನೆಯ ಮಂಡಲದಲ್ಲಿ ಮೊದಲು ೧೫ ಸೂಕ್ತಗಳೂ ಅಗ್ನಿಪರವಾಗಿವೆಯೆಂದು ಬೃಹದ್ದೇವತೆಯಲ್ಲಿ ತಿಳಿಸಿದೆ ಆದರೆ, ಕೆಲವು ವಿಶೇಷ ವಿಷಯಗಳನ್ನು ತಿಳಿಸುವಾಗ, ಮೇಲೆ ಉದಾಹೃತವಾದ ಎರಡು ಮಂತ್ರಗಳನ್ನುಮಾತ್ರ ನಿರ್ದೇಶಿಸಿ,

ಲಿಂಗೋಕ್ತದೈವತೇ ಸೂಕ್ತೇ ಏಕೇ ಪ್ರತ್ಯಗ್ನಿರೇವತು ।
ಯುಷ್ಮಿರ್ಬೋಧದಿತಿ ದ್ವಾಭ್ಯಾಂ ಸ್ತೌತಿ ಸೋಮಕಮೇವ ತು ॥

(ಬೃ. ದೆ ೪-೧೪೯)

ಋ. ಸಂ. ೪-೧೫, ೧೪ ನೇ ಸೂಕ್ತಗಳು ಆಯಾ ದೇವತೆಗಳ ವೈಯಕ್ತಿಕವಾದ ಗುಣಗಳನ್ನು ಪ್ರಶಂಸಿಸಿ ಪರಿತವಾಗಿದೆ. ಆದರೆ, '**ಬೋಧದ್ಯನ್ಮಾ**', ಮತ್ತು '**ಉತ ತ್ಯಾ ಯೆಜತಾ**' ಎಂಬ ಎರಡು ಮಂತ್ರಗಳು ಮಾತ್ರ **ಅಗ್ನಿ**ಪರವೆಂದು ಕೆಲವರೂ, **ಸೋಮಕೋದ್ದಿಷ್ಟವೆಂದು** ಇನ್ನು ಕೆಲವರೂ ಹೇಳಿರುತ್ತಾರೆಂದು ತಿಳಿಸಿದೆ. ಆದುದರಿಂದ **ಈ** ಎರಡು ಮಂತ್ರಗಳಿಗೆ ನಿರ್ದಿಷ್ಟವಾದ ಅರ್ಥವನ್ನು ಹೇಳುವುದು ಶ್ರಮವೆಂದು ಹೇಳಿದಂತಾಯಿತು "ಇತರ ಶ್ರುತಿವಾಕ್ಯಗಳ ಆಧಾರದ ಮೇಲೆ ಇಲ್ಲಿ **ಕುಮಾರ**ನೆಂಬುದಕ್ಕೆ ಅಗ್ನಿಯೆಂದೇ ಅರ್ಥಮಾಡಬಹುದು ಮತ್ತು ಎರಡು ಅಶ್ವಗಳೂ ಅಶ್ವಿನೀದೇವತೆಗಳನ್ನು ನಿರ್ದೇಶಿಸುವುವು ಸಹದೇವಶಬ್ದಕ್ಕೆ ದೇವತಾಸಾನಿಧ್ಯವೆಂದರ್ಥಮಾಡಬಹುದು. ಅಹೋರಾತ್ರಗಳನ್ನಾಗಲೀ ಶುಕ್ಲ ಮತ್ತು ಕೃಷ್ಣಪಕ್ಷಗಳನ್ನಾಗಲಿ ಪ್ರತಿಬಿಂಬಿಸುವ ಅಶ್ವಿನೀದೇವತೆಗಳೇ ಅಶ್ವಿದ್ವಯವು" ಇತ್ಯಾದಿಯಾಗಿ ಕೆಲವು ಪಂಡಿತರು **ಈ** ಸಂದರ್ಭದಲ್ಲಿ ವಿವರಣೆಯನ್ನು ಹೇಳಿದ್ದಾರೆ. ಆದರೆ ಉದ್ಧೃತವಾಗಿರುವ **ಈ** ಮಂತ್ರಗಳಲ್ಲಿ **ಕುಮಾರ**ಪದಕ್ಕೆ ಅಗ್ನಿಯೆಂದರ್ಥಮಾಡಿದರೆ ಉಳಿದ ಪದಗಳಿಗೂ ಅದಕ್ಕನುಗುಣವಾದ ತಾತ್ಪರ್ಯಗಳನ್ನು ಹೇಳಬೇಕು. ಇದು ಪ್ರಯಾಸದ ಕೆಲಸ ನಿಸ್ಸಂಶಯವಾದ ಶ್ರುತಿವಾಕ್ಯಗಳ ಆಧಾರವಿಲ್ಲದೇ **ಈ** ಅರ್ಥವನ್ನು ಒಪ್ಪುವುದಕ್ಕಾಗಲಾರದು. ಆದರೂ ಸಹ, ಬೃಹದ್ದೇವತಾಕಾರರ ವಾಕ್ಯದಿಂದಲೇ, **ಈ** ಮಂತ್ರಗಳ ಅರ್ಥವು ಗಹನವಾದುದು ಎಂದು ತಿಳಿಯುತ್ತದೆ ಆದುದರಿಂದ ಅಗ್ನಿಯೆಂದರ್ಥಮಾಡುವುದೂ ಒಂದು ವಿಧದಲ್ಲಿ ಉಚಿತವೇ ಆಗಿರುತ್ತದೆ

ಯುವತಿ ಶಬ್ದಕ್ಕೆ **ಪೈಶಾಚೀ** ಸ್ತ್ರೀಯೆಂದರ್ಥಮಾಡುವುದು ಒಂದುವಿಧ. ಅಥವಾ **ಉಷಸ್ಸಿ**ಂದರ್ಥಮಾಡುವುದು ಇನ್ನೊಂದು ವಿಧ ಆದರೆ ಇಲ್ಲಿ ಕಥಾಸಂದರ್ಭಕ್ಕನುಸಾರವಾಗಿ ಪೈಶಾಚೀಸ್ತ್ರೀಯೆಂದೇ, ಅರ್ಥಮಾಡಬಹುದೆಂದು ಹೇಳಿದರೆ, ಅದೂ ನಿಸ್ಸಂಶಯವಾಗಿಲ್ಲ ಸಾಯಣರೇ, **ಯುವತಿ** ಶಬ್ದಕ್ಕೆ ಮೂರು ವಿಧವಾದ ಅರ್ಥವನ್ನು ಹೇಳಿದ್ದಾರೆ ಆದುದರಿಂದ **ಯುವತಿ** ಶಬ್ದಕ್ಕೆ **ಉಷಸ್ಸೆಂದು** ಅರ್ಥಮಾಡಿದರೂ ಪ್ರಕೃತದಲ್ಲಿ ಸಮಂಜಸವಾಗಿರುತ್ತದೆಯಾದುದರಿಂದ **ಈ** ವಿಷಯವನ್ನು ಮುಂದಿನ ಮಂತ್ರದ ವಿಶೇಷವಿಷಯಗಳಲ್ಲಿ ತಿಳಿಸಲಾಗುತ್ತದೆ

ಈ ಋಕ್ಕಿನ ವಿವರಣೆಯ ವಿಷಯದಲ್ಲಿ ವಿಲ್ಸನ್ ಪಂಡಿತನು ಈ ರೀತಿ ಹೇಳಿದ್ದಾನೆ—

According to what is no doubt the most accurate interpretation of this verse, and of those which follow, they contain only a metaphorically obscure allusion to the lighting of the sacrificial fire the mother is the two pieces of touch-wood, which retain fire, the child, and will not spontaneously give it up to the father, the yajamana, until forced by attrition : till then, also, people, the priests, do not behold it, but they see it when bursting into ignition this however, has not satisfied the commentators, and a curious and strange legend has been devised for the interpreation of the text, or has been perhaps, applied to it by way of explanation, having been previously current . it is more probably, however, suggested by, than suggestive of, the verses : Sayana quotes the Shatyayana Brahmana as the authority · the story is this Raja Tryaruna, the son of Trivrishna of the race of Ikshwakus had for his Purohita Vrishna the son of Jara , it was the custom, it is said, when a Raja and his Purohit went out in the same chariot, that the latter should drive, and on an occasion of this kind, the chariot went over a Brahman boy who was playing in the road, and killed him. a dispute ensued between the Raja and the priest as to which was the murderer, the former accusing the latter because he was driving, the the Purohit retorting, that as the chariot was the Raja's, he was the responsible person they referred the matter to an assembly of the Ikshwakus, who decided against the Purohit Vrisha restored the boy to life by the prayer thenceforth called after him the Varsha-saman, but being offended with the Ikshwakus for what he considered their partiality, fire thenceforth ceased to perform its functions in their dwellings and the cooking of their food and other offices ceased . attributing this to the displeasure of the Rishi, the Ikshwakus respectfully invoked his presence, and with the same mantra he prayed that the energy of fire would be restored to them, which accordingly took place . this energy or activity is designated by the unusual term of Haras, Agner haras so far the legend is intelligible, but what follows is rather obscure . Sayana proceeds . so

singing, the Rishi having seen distinctly Brahmanicide become the wife of the king Trasadasyu, in the garb of a Pishachi, and that she, having taken the Haras away from the fire-chamber, was concealing it in her regal clothing (kashipau?) he, having propitiated that Haras by Varsha Sama, re-united it with Agni, upon which the offices of fire, in cooking and the like, were discharged as before : Sayana adds to his version a quotation from the Tandya which stops with the restoration of the boy to life. Niti-manjari cites the legend from the Brihad-devata, the first part of which is the same as that given above but there is some slight variation in the conclusion : after the decision against the Purohit, this authority continues, the Atharvan having seen (or composed) the Angirasa mantras, restored the boy to life, but beeing in wrath, desertedthe king, and went to another country upon his departure, the Haras or function of Agni ceased, and there were no more burnt-offerings. the Raja, being much distressed, went to the Rishi, and pacified and brought him back, and prevailed upon him to become his Purohit once more still the fire withheld its activity, until the Rishi discovered that the queen was in reality a Pishachi, with whom the Haras had associated, and was seated on the throne with her, and hidden in her robe. on discovering this, the Rishi repeated the second stanza of this Suktha, "Young mother, etc." to which Haras, in the form of a boy, replied the Rishi then recited the ninth stanza, "Agni shines etc," on which the flame burst forth and consumed the Pishachi after which things went on as before : if there be any meaning in this legend, it may possibly intimate some quarrel between the princes and priests, and a consequent temporary discontinuance of worship with fire.

॥ संहितापाठः ॥

कमेतं त्वं युवते कुमारं पेषी बिभर्षि महिषी जजान ।
पूर्वीर्हि गर्भः शरदो ववर्धापश्यं जातं यदसूत माता ॥ ३ ॥

॥ ಪದಪಾಠಃ ॥

ಕಂ । ಏತಂ । ತ್ವಂ । ಯುವತೇ । ಕುಮಾರಂ । ಪೇಷೀ । ಬಿಭರ್ಷಿ । ಮಹಿಷೀ । ಜಜಾನ ।

ಪೂರ್ವೀಃ । ಹಿ । ಗರ್ಭಃ । ಶರದಃ । ವವರ್ಧ । ಅಪಶ್ಯಂ । ಜಾತಂ । ಯತ್ । ಅಸೂತ । ಮಾತಾ ॥ ೨ ॥

॥ ಸಾಯಣಭಾಷ್ಯಂ ॥

ಅತ್ರಾಗ್ನೇರುತ್ಪದ್ಯಮಾನತ್ವಾತ್ಪ್ರಮಾರಶಬ್ದೇನ ವ್ಯವಹಾರಃ । ಹೇ ಯುವತೇ ತ್ವಂ ಕಮೇತಂ ಕುಮಾರಂ ಪೇಷೀ ಹಿಂಸಿಕಾ ಪಿಶಾಚಿಕಾ ಸತೀ ಬಿಭರ್ಷಿ । ಏವಂ ವೃಶಾಖ್ಯೋ ಮಹರ್ಷಿಃ ಕಶಿಪುನಾಚ್ಛ-ನ್ನಮಗ್ನೇರ್ಹರೋ ಬ್ರೂತೇ । ತ್ವಯೋನುತ್ಪಾದಿತತ್ವಾದ್ಧಾರಣಮನುಚಿತಮಿತ್ಯರ್ಥಃ । ಮಹಿಷೀ ಮಹತೀ ಪೂಜನೀಯಾರಣಿರೇನಂ ಜಜಾನ । ಅಜನಯೆತ್ । ತದೇವಾಹ । ಗರ್ಭಃ ಶಿಕೋರ್ಗರ್ಭಹರೋಽರಣ್ಯಾಃ ಸಂಬಂಧೀ ಗರ್ಭೋ ಹಿ ಯಸ್ಮಾತ್ಪೂರ್ವೀಃ ಶರದೋ ಗತಾನನೇಕಾನ್ ಸಂವತ್ಸರಾನ್ವವರ್ಧ । ವವೃಧೇ । ಅಹಂ ಚ ತತೋ ಜಾತಮಪಶ್ಯಂ । ಯದ್ಯಸ್ಮಾನ್ಮಾತಾರಣಿರಸೂತ । ಉದಪಾದಯತ್ । ರಾಜಕುಮಾರ ಪಕ್ಷೇ ಹೇ ಯುವತೇ ಭೂದೇವಿ ಕಮೇತಂ ಕುಮಾರಂ ಪೇಷೀ ಸತೀ ಬಿಭರ್ಷಿ । ಅವಶಿಷ್ಟಂ ಕುಮಾರಜನನಪರತಯಾ ಯೋಜ್ಯಂ । ಏವಮುತ್ತರತ್ರಾಪಿ ಕುಮಾರಾಗ್ನಿಹರಸೋಃ ಪರತ್ವೇನ ಯಥೋಚಿತಂ ವ್ಯಾಖ್ಯೇಯಂ ॥

॥ ಪ್ರತಿಪದಾರ್ಥ ॥

ಯುವತೇ—ಎಳೆ ತರುಣಿಯೇ । **ಪೇಷೀ**—ಹಿಂಸಾಸ್ವರೂಪವನ್ನು ಹೊಂದಿರುವ । **ತ್ವಂ**—ನೀನು । **ಕಂ ಏತಂ ಕುಮಾರಂ**—ಯಾವ ಈ ಕುಮಾರನನ್ನು । **ಬಿಭರ್ಷಿ**—ಪೋಷಿಸುತ್ತಿದ್ದೀಯೆ? (ನೀನು ಪೋಷಿಸುತ್ತಿರುವ ಈ ಕುಮಾರನಾರು?) **ಮಹಿಷೀ**—ಪೂಜ್ಯಳಾದ ಮಾತೆಯು । **ಜಜಾನ**—(ಇವನನ್ನು) ಹಡೆದಳು । **ಗರ್ಭಃ**—ಈ ಪುತ್ರನ ಗರ್ಭವು । **ಪೂರ್ವೀಃ ಶರದಃ**—ಅನೇಕ ಸಂವತ್ಸರಗಳ ಕಾಲ । **ವವರ್ಧ ಹಿ**—ಬೆಳೆಯುತಲ್ಲವೇ । **ಯತ್**—ಯಾವಾಗ । **ಮಾತಾ**—ತಾಯಿಯು । **ಅಸೂತ**—ಹಡೆದಳೋ (ಆಗ) । **ಜಾತಂ**—ಉತ್ಪನ್ನನಾದ ಈ ಪುತ್ರನನ್ನು **ಅಪಶ್ಯಂ**—ನಾನು ನೋಡಿದೆನು

॥ ಭಾವಾರ್ಥ ॥

ಎಳೆ ತರುಣಿಯೇ, ಹಿಂಸಾಸ್ವರೂಪವನ್ನು ಹೊಂದಿರುವ ನೀನು ಪೋಷಿಸುತ್ತಿರುವ ಈ ಕುಮಾರನಾರು? ಪೂಜ್ಯಳಾದ ಮಹಾಮಾತೆಯು ಇವನನ್ನು ಹಡೆದಳು. ಈ ಪುತ್ರನ ಗರ್ಭವು ಅನೇಕ ಸಂವತ್ಸರಗಳ ಕಾಲ ಬೆಳೆಯಿತು. ಇವನ ತಾಯಿಯು ಇವನನ್ನು ಹಡೆದಾಗ ಉತ್ಪನ್ನನಾದ ಈ ಪುತ್ರನನ್ನು ನಾನು ನೋಡಿದೆನು

English Translation.

Young mother, what boy is this whom you, (become) a malevolent spirit, foster? The mighty (queen) has given him birth, the embryo has

thriven through many years. I have seen him born as the mother brought him forth.

॥ ವಿಶೇಷವಿಷಯಗಳು ॥

ಸಾಯಣರು **ಈ** ಮಂತ್ರದಲ್ಲಿ **ಅಗ್ನೇರುತ್ಪದ್ಯಮಾನತ್ವಾತ್ ಕುಮಾರಶಬ್ದೇನ ವ್ಯವಹಾರಃ** । ಉತ್ಪನ್ನನಾಗಿರುವುದರಿಂದ ಅಗ್ನಿಯು ಇಲ್ಲಿ ಕುಮಾರಶಬ್ದವಾಚ್ಯನಾಗಿರುವನು ಎಂದು ತಿಳಿಸಿ, **ಯುವತಿಶಬ್ದಕ್ಕೆ** ಪೈಶಾಚೀ ಸ್ತ್ರೀಯೆಂದರ್ಥಮಾಡಿದ್ದಾರೆ. ಆದರೆ ಈ ಮಂತ್ರದಲ್ಲಿ ಮುಂದಕ್ಕೆ **ಮಹಷೀ ಜಜಾನ**—ಪೂಜ್ಯಳಾದ ಮಾತೆಯು **ಈ ಪುತ್ರನನ್ನು ಹಡೆದಳು, ಗರ್ಭಃ ಪೂರ್ವೀಃ ಶರದಃ ವವರ್ಧ ಹಿ** । ಈ ಗರ್ಭವು ಅನೇಕ ಸಂವತ್ಸರಗಳ ಕಾಲ ಬೆಳೆಯಿತು ಇತ್ಯಾದಿಯಾದ ವರ್ಣನೆಯೂ ಇರುತ್ತದೆ ಒಂದು ವೇಳೆ ಕಥಾಸನ್ನಿವೇಶಕ್ಕನುಗುಣವಾಗಿ, ಇಲ್ಲಿ ಪೈಶಾಚೀ ಸ್ತ್ರೀಯೆಂದರ್ಥಮಾಡಿದರೂ ಸಹ, ತ್ರ್ಯರುಣನ ಪತ್ನೀರೂಪಳಾಗಿದ್ದ ಆ ಪೈಶಾಚಿಸ್ತ್ರೀಯು ಅಗ್ನಿಯನ್ನು ಮರಿಮಾಡಿವಳೇ ಹೊರತು, ಅವನನ್ನು ಹಡೆಯಲಿಲ್ಲ, ಮತ್ತು ಭರಿಸಲೂ ಇಲ್ಲ ಆದುದರಿಂದ ಪ್ರಕೃತದಲ್ಲಿ **ಯುವತಿ** ಶಬ್ದಕ್ಕೆ ಅಗ್ನಿಮಾತೆಯಾದ **ಉಷಸ್ಸಿಂದು** ಅರ್ಥಮಾಡುವುದೂ ಉಚಿತವಾಗಿರುತ್ತದೆ

ಏತಾ ಉ ತ್ಯಾಃ ಪ್ರತ್ಯದೃಶ್ರನ್ ಪುರಸ್ತಾಜ್ಜ್ಯೋತಿರ್ಯಚ್ಛಂತೀರುಷಸೋ ವಿಭಾತೀಃ ।
ಅಜೀಜನನ್ಸೂರ್ಯಂ ಯಜ್ಞಮಗ್ನಿಮಪಾಚೀನಂ ತಮೋ ಅಗಾದಜುಷ್ಪಂ ॥

(ಋ ಸಂ ೭-೭೮-೩)

ಇತ್ಯಾದಿ ಸ್ಥಳಗಳಲ್ಲಿ ಉಷಸ್ಸು **ಅಗ್ನಿ** ಜನನಿಯು ಎಂದು ನಿಸ್ಸಂದಿಗ್ಧವಾಗಿ ತಿಳಿಸಿದೆ. ಅಲ್ಲದೇ ಹಿಂದೆ, **ಈ** ಸೂಕ್ತದ ಪೀಠಿಕೆಯಲ್ಲಿ ಉದ್ಧೃತವಾಗಿರುವ ಶತಪಥಬ್ರಾಹ್ಮಣದ ವಾಕ್ಯದಲ್ಲಿ ಉಷಸ್ಸಿನಿಂದ ಅಗ್ನಿಯು ಜನಿಸಿ ಅವನೇ ಕುಮಾರ ನಾಮಾಂಕಿತನಾದನು ಮತ್ತು **ರುದ್ರಾದಿ** ಇತರ ಅಷ್ಟನಾಮಗಳನ್ನು ಹೊಂದಿದನು ಎಂಬುದನ್ನೂ ತಿಳಿಸಿದೆ

ಏಷಾ ದಿವೋ ದುಹಿತಾ ಪ್ರತ್ಯದರ್ಶಿ ವ್ಯುಚ್ಛಂತೀ ಯುವತಿಃ ಶುಕ್ರವಾಸಾಃ ।
ವಿಶ್ವಸ್ಯೇಶಾನಾ ಪಾರ್ಥಿವಸ್ಯ ವಸ್ತ ಉಷೋ ಅದ್ಯೇಹ ಸುಭಗೇ ವ್ಯುಚ್ಛ ॥

(ಋ ಸಂ ೧-೧೧೩-೨)

ಇತ್ಯಾದ್ಯನೇಕ ಮಂತ್ರಗಳಲ್ಲಿ ಉಷಸ್ಸಿನ ಯುವತಿತ್ವವೂ ಅವಕ್ಕನುರೂಪವಾದ ಸೌಂದರ್ಯವೂ ವರ್ಣಿತವಾಗಿದೆ. ಅಗ್ನಿಜನನಿಯೂ ಯುವತಿಯೂ ಆದ ಉಷಸ್ಸಿಗೆ **ಪೇಷೀ** ಎಂಬ ವಿಶೇಷಣವು ಹೇಗೆ ಎಂಬುದು ವಿಮರ್ಶಿಸ ಬೇಕಾದದ್ದು ಪೈಶಾಚೀಸ್ತ್ರೀಯೆಂದರೆ **ಈ** ವಿಶೇಷಣವು ಉಚಿತವಾಗಿರುತ್ತದೆ, ಉಷಸ್ಸೆಂದರೆ ಹೊಂದಿಕೊಳ್ಳುವುದಿಲ್ಲ ಎಂದು ಹೇಳಿದರೆ, ಅದಕ್ಕುತ್ತರವಾಗಿ, **ಪೇಷೀ** ಎಂಬುದು ಉಷಸ್ಸಿನ ಸ್ವರೂಪವನ್ನು ವರ್ಣಿಸುವ ವಿಶೇಷಣವೆಂದು ಧಾರಾಳವಾಗಿ ಹೇಳಬಹುದು.

ಏತದ್ಧೇದುತ ವೀರ್ಯಂ೧ ಇಂದ್ರ ಚಕರ್ಥ ಪೌಂಸ್ಯಂ ।
ಸ್ತ್ರಿಯಂ ಯದ್ದುರ್ಹಣಾಯುವಂ ವಧೀರ್ದುಹಿತರಂ ದಿವಃ ॥

(ಋ. ಸಂ. ೪-೩೦-೪)

ದಿವಶ್ಚಿದಸ್ಯಾ ದುಹಿತರಂ ಮಹಾನ್ ಮಹಿಯಮಾನಾಂ ।
ಉಷಾಸಮಿಂದ್ರ ಸಂ ಪಿಣಕ್ ॥

(೪-೩೦-೯)

ಈ ಇಂದ್ರನು ಪರಾಕ್ರಮಶಾಲಿಯು ಇವನು ದ್ಯುಲೋಕ ಪುತ್ರಿಯಾದ ಉಷಸ್ಸನ್ನು ಪ್ರಬಲವಾಗಿ ಹೊಡೆದನು ತನ್ನ ಆತ್ಮ ಪ್ರಶಂಸೆಯಲ್ಲೇ ನಿರತಳಾಗಿದ್ದ ಉಷಸ್ಸನ್ನು ಇಂದ್ರನು ಪೂರ್ಣವಾಗಿ ಮರ್ದನಮಾಡಿದನು

ಅಪೋಷಾ ಅನಸಃ ಸರತ್ಸಂಪಿಷ್ವಾದಹ ಬಿಭ್ಯುಷೀ । ನಿ ಯಚ್ಛೀಂ ಶಿಶ್ನಥದ್ವೃಷಾ ॥
ಏತದಸ್ಯಾ ಅನಃ ಶಯೇ ಸುಸಂಪಿಷ್ಟಂ ವಿಪಾಶ್ಯಾ । ಸಸಾರ ಶೀಂ ಪರಾವತಃ ॥

(೪-೩೦-೧೦, ೧೧)

ಉಷಸ್ಸಿನ ರಥವು ಛಿದ್ರವಾದೊಡನೆಯೇ ಅವಳು ಇಂದ್ರನಿಗೆ ಬೆದರಿ ಓಡಿದಳು ಅವಳು ಬಿಟ್ಟು ಹೋದ ರಥವು ಛಿದ್ರಿತವಾಗಿ ಅಲ್ಲಿಯೇ ಉಳಿಯಿತು ಇತ್ಯಾದಿಯಾಗಿ ಇಂದ್ರನಿಂದ ಹಿಂಸಿತಳಾದ ಉಷಸ್ಸು **ಸಂ ಪಿಣಕ್, ಸು ಸಂಪಿಷ್ಟ** ಇತ್ಯಾದಿ ವಿಪೇಷಣಗಳುಳ್ಳ ಮಂತ್ರಗಳಿಂದ ಪ್ರಶಂಸಿಸಲ್ಪಟ್ಟಿದ್ದಾಳೆ **ಸಂ ಪಿಣಕ್** ಎಂಬುದು ಅವಳ ಸ್ಥಿತಿಯನ್ನು ತಿಳಿಸುತ್ತದೆ **ಸು ಸಂಪಿಷ್ಟ** ಎಂಬುದು ಅವಳ ರಥದ ಸ್ಥಿತಿಯನ್ನು ತಿಳಿಸುತ್ತದೆ ಆದುದರಿಂದ ಪ್ರಕೃತವಾದ ಮಂತ್ರದಲ್ಲಿ **ಪೇಷೀ** ಎಂಬ ವಿಶೇಷಣವೂ ಸಹ ಉಷಸ್ಸಿನ ಹಿಂಸಿತವಾದ ಸ್ವರೂಪವನ್ನು ತಿಳಿಸಬಹುದು.

ಈ ಅರ್ಥವು ಹೊಂದುವುದಾದರೆ, ಇಂದ್ರನಿಂದ ಹಿಂಸಿತಳಾದ ಉಷಸ್ಸು ತನ್ನ ಪುತ್ರನಾದ ಅಗ್ನಿಯನ್ನು ಭರಿಸಿ ಪೋಷಿಸಿದುದೂ ಉಷಸ್ಸಿನ ಆವಿರ್ಭಾವವಾದೊಡನೆಯೇ ಅಗ್ನಿಯ ಪ್ರಜ್ವಲನವೂ ನಂತರ ಯಜಮಾನನು ಅಗ್ನಿಯನ್ನು ಕಾಣುವುದೂ ವರ್ಣಿತವಾಗಿದೆಯೆಂದು ಹೇಳಬಹುದು

॥ ಸಂಹಿತಾಪಾಠಃ ॥

ಹಿರಣ್ಯದಂತಂ ಶುಚಿವರ್ಣಮಾರಾತ್ಕ್ಷೇತ್ರಾದಪಶ್ಯಮಾಯುಧಾ ಮಿಮಾನಂ ।
ದದಾನೋ ಅಸ್ಮಾ ಅಮೃತಂ ವಿಪೃಕ್ವತ್ಕಿಂ ಮಾಮನಿಂದ್ರಾಃ ಕೃಣವನ್ನನುಕ್ಥಾಃ ॥ ೩ ॥

॥ ಪದಪಾಠಃ ॥

ಹಿರಣ್ಯದಂತಂ । ಶುಚಿವರ್ಣಂ । ಆರಾತ್ । ಕ್ಷೇತ್ರಾತ್ । ಅಪಶ್ಯಂ । ಆಯುಧಾ । ಮಿಮಾನಂ ।
ದದಾನಃ । ಅಸ್ಮೈ । ಅಮೃತಂ । ವಿಪೃಕ್ವತ್ । ಕಿಂ । ಮಾಂ । ಅನಿಂದ್ರಾಃ । ಕೃಣವನ್ । ಅನುಕ್ಥಾಃ । ೩ ॥

॥ सायणभाष्यं ॥

हिरण्यदंतं हिरण्यसदृशदंतस्थानीयज्वालोपेतं शुचिवर्णं प्रदीप्तवर्णमायुधायुधान्यायुधस्थानीयान् स्फुलिंगान् ज्वालां वा मिमानं निर्मिमाणमग्निमारात्समीपे क्षेत्रात्रै क्षेत्रे देशेऽपश्यं। पश्येयं। एवं वृतः कामयते। अहमस्मा अग्नयेऽमृतमविनाश्यमृतत्वसाधनं वा विपृक्वत्सर्वतोव्याप्तं हविः स्तोत्रं वा ददानः। दातास्मि। मामनिंद्राः। इंद्रः परमैश्वर्योऽग्निः। तद्रहिता अनिंद्राः। इंद्रमयजंत इत्यर्थः। अनुक्था अस्तुतयः इंद्रमस्तुवंतश्च किं कृणवन्। किं कुर्युरुः॥

॥ प्रतिपदार्थ ॥

हिरण्यदंतं—हिरण्यनिर्मितವಾದ ದಂತದಂತೆ ಪ್ರಕಾಶಿಸುವ ಜ್ವಾಲಾಯುಕ್ತನೂ। **शुचिवर्णं**—ಪ್ರಭಾಯುತವಾದ ವರ್ಣವುಳ್ಳವನೂ। **आयुधा**—ಆಯುಧಗಳಂತಿರುವ ಕಿಡಿಗಳನ್ನು। **मिमानं**—ನಿರ್ಮಿಸುವವನೂ ಆದ ಅಗ್ನಿಯನ್ನು। **आरात्**—ಸಮೀಪಸ್ಥವಾದ। **क्षेत्रात्रै**—ಪ್ರದೇಶದಲ್ಲಿ। **अपश्यं**—ನೋಡಿದ್ದೇನೆ। **अस्मै**—ಈ ಅಗ್ನಿಗೆ। **अमृतं**—ಅಮೃತತ್ವಸಾಧಕವಾದುದೂ। **विपृक्वत्**—ಸರ್ವತ್ರ ವ್ಯಾಪ್ತವಾದುದೂ ಆದ ಹವಿಸ್ಸನ್ನು। **ददानः**—ಅರ್ಪಿಸುವ। **मां**—ನನ್ನನ್ನು। **अनिंद्राः**—ಪರಮೈಶ್ವರ್ಯಯುಕ್ತನಾದ ಅಗ್ನಿಯನ್ನು ಪೂಜಿಸದಿರುವನರೂ। **अनुक्थाः**—ಅವನಿಗೆ ಸ್ತುತಿಯನ್ನರ್ಪಿಸದಿರುವವರೂ ಆದ ನಾಸ್ತಿಕರು। **किं कृणवन्**—ಏನು ತಾನೇ ಮಾಡಬಲ್ಲರು?

॥ भावार्थ ॥

ಹಿರಣ್ಯನಿರ್ಮಿತವಾದ ದಂತದಂತೆ ಪ್ರಕಾಶಿಸುವ ಜ್ವಾಲಾಯುಕ್ತನೂ ಪ್ರಭಾಯುತವಾದ ವರ್ಣವುಳ್ಳವನೂ, ಆಯುಧಗಳಂತಿರುವ ಕಿಡಿಗಳನ್ನು ನಿರ್ಮಿಸುವವನೂ ಆದ ಅಗ್ನಿಯನ್ನು ಸಮೀಪಸ್ಥವಾದ ಪ್ರದೇಶದಲ್ಲಿ ನಾನು ನೋಡಿದ್ದೇನೆ. ಇಂತಹ ಅಗ್ನಿಗೆ ಅಮೃತತ್ವಸಾಧಕವಾದುದೂ, ಸರ್ವತ್ರ ವ್ಯಾಪ್ತವಾದುದೂ ಆದ ಹವಿಸ್ಸನ್ನು ಅರ್ಪಿಸುವ ನನ್ನನ್ನು, ಪರಮೈಶ್ವರ್ಯಯುಕ್ತನಾದ ಅಗ್ನಿಯನ್ನು ಪೂಜಿಸದಿರುವವರೂ, ಅವನಿಗೆ ಸ್ತುತಿಯನ್ನರ್ಪಿಸದಿರುವವರೂ ಆದ ನಾಸ್ತಿಕರು ಹಿಂಸಿಸಲಾರರು

English Translation

I have seen him from a near place, golden-toothed, bright-coloured wielding (flames-like) weapons, (when) offering to him the ambrosial, all-diffusing (oblation) : what can those who acknowledge not Indra, who repeat not his praise, do unto me?

॥ ವಿಶೇಷವಿಷಯಗಳು ॥

ಹಿರಣ್ಮದಂತಂ ಇತ್ಯಾದಿ ವಿಶೇಷಣಗಳಿಂದ ಪ್ರಕೃತವಾದ ಮಂತ್ರದಲ್ಲಿ ಅಗ್ನಿಯನ್ನು ಪ್ರಶಂಸಿಸಿದೆ. ಆದರೆ, **ಇಲ್ಲಿ, ಅನಿಂದ್ರಾಃ** ಎಂಬ ಪದದ ತಾತ್ಪರ್ಯವನ್ನು ತಿಳಿಯಬೇಕಾದುದು ಅವಶ್ಯವಾಗಿರುತ್ತದೆ. ಈ ಪದಕ್ಕೆ ಸಾಯಣರ ನಿರ್ವಚನವು ಈ ರೀತಿಯಲ್ಲಿರುತ್ತದೆ.

ಇಂದ್ರಃ ಪರಮೈಶ್ವರ್ಯಃ ಅಗ್ನಿಃ । ತದ್ರಹಿತಾಃ ಅನಿಂದ್ರಾಃ । ಇಂದ್ರಮಯೇಜಂತ ಇತ್ಯರ್ಥಃ । **ಇಂದ್ರ** ಶಬ್ದಕ್ಕೆ ಪರಮೈಶ್ವರ್ಯವೆಂದರ್ಥ ಈ ಐಶ್ವರ್ಯಯುಕ್ತನಾದುದರಿಂದ **ಅಗ್ನಿ**ಯೂ ಇಂದ್ರಶಬ್ದವಾಚ್ಯನು ಆದುದರಿಂದ ಇಲ್ಲಿ **ಅನಿಂದ್ರಾಃ** ಎಂಬುದಕ್ಕೆ ಇಂದ್ರಪೂಜಕರಲ್ಲದ ಎಂದರೆ, ಅಗ್ನಿಪೂಜಕರಲ್ಲದ ಆವೈದಿಕರು ಎಂದರ್ಥ.

ಈ ನಿರ್ವಚನವು ನಿರುಕ್ತಕಾರರು **ಇಂದ್ರ**ಶಬ್ದಕ್ಕೆ ಹೇಳಿರುವ ಅನೇಕ ವಿವರಣೆಗಳಲ್ಲೊಂದಾಗಿದೆ ಅವನ್ನೆಲ್ಲಾ ಹಿಂದೆ ವಿಶದವಾಗಿ ತಿಳಿಸಿದೆ ಆದರೆ, ಅಗ್ನಿಯು **ಇಂದ್ರ** ಶಬ್ದವಾಚ್ಯನಾಗಿರುವುದರಿಂದ ಈ ಪದಕ್ಕೆ ನಿಷ್ಕೃಷ್ಟವಾದ ಅರ್ಥವನ್ನು ತಿಳಿಯಬೇಕು ಆನಂತರ ಇಂದ್ರನಿಗೂ ಅಗ್ನಿಗೂ ಇರುವ ತಾದಾತ್ಮ್ಯವನ್ನು ಪರಿಶೀಲಿಸಬಹುದು ನಿರುಕ್ತಕಾರರಿಗೂ ಪೂರ್ವದಲ್ಲಿಯೇ ಇಂದ್ರಶಬ್ದಾರ್ಥವನ್ನು ವಿವರಿಸಲಾಗಿದೆ.

ಇಂಥೋ ಹ ವೈ ನಾನೈಷ ಯೋಽಯಂ ದಕ್ಷಿಣೇಽಕ್ಷನ್ ಪುರುಷಸ್ತಂ ವಾ ಏತಮಿಂಧಂ ಸಂತಮಿಂದ್ರ ಇತ್ಯಾಚಕ್ಷತೇ ಪರೋಕ್ಷೇಣೈವ ಪರೋಕ್ಷಪ್ರಿಯಾ ಇವ ಹಿ ದೇವಾಃ ಪ್ರತ್ಯಕ್ಷದ್ವಿಷಃ ।

(ಶ ಬ್ರಾ ೧೪-೬-೧೧-೨, ಬೃ. ಉ ೪-೨-೨)

ದಕ್ಷಿಣಾಕ್ಷಿಯಲ್ಲಿರುವ ಪುರುಷನು ಪ್ರಜ್ವಲಿತವಾದ ವಿಶೇಷಗುಣವಿರುವುದರಿಂದ ಇಂದ್ರಶಬ್ದವಾಚ್ಯನಾಗಿದ್ದಾನೆ (ಇದು ಅಗ್ನಿಯ ಎಂದರೆ ತೇಜಸ್ಸಿನ ಗುಣವಾಗಿರುತ್ತದೆ) ತೇಜೋಯುಕ್ತನಾದುದರಿಂದ ತಿಳಿದವರು ಈ ಪುರುಷನನ್ನು ಇಂದ್ರನೆಂದು ನಿರ್ದೇಶಿಸುತ್ತಾರೆ ಎಂದು ತಿಳಿಸಿದೆ ಇದನ್ನೇ ಇನ್ನೂ ವಿವರವಾಗಿ ಬೇರೆ ಕಡೆ ಈ ರೀತಿ ಉಕ್ತವಾಗಿದೆ

ಸ ಯೋಽಯಂ ಮಧ್ಯೇ ಪ್ರಾಣಃ । ಏಷ ಏನೇಂದ್ರ ಸ್ತಾನೇಷ ಪ್ರಾಣಾನ್ಮಧ್ಯತ ಇಂದ್ರಿಯೇಣೈಂಧ ಯದೈಂಧ ತಸ್ಮಾದಿಂಧ ಇಂಥೋ ಹ ವೈ ತಮಿಂದ್ರ ಇತ್ಯಾಚಕ್ಷತೇ ॥

(ಶ ಬ್ರಾ. ೬-೧-೧-೨)

ದೇಹಮಧ್ಯವರ್ತಿಯಾದ ಈ ಪ್ರಾಣವೇ ಇಂದ್ರನು ಈ ತತ್ತ್ವವೇ ದೇಹದ ಇತರ ಪ್ರಾಣಿಗಳಿಗೂ ಚೈತನ್ಯವನ್ನೂ ತೇಜಸ್ಸನ್ನೂ ಒದಗಿಸುತ್ತದೆ ಈ ರೀತಿ ಉಳಿದ ಪ್ರಾಣಿಗಳಿಗೂ ತೇಜಸ್ಸನ್ನೊದಗಿಸುವುದರಿಂದ ಈ ತತ್ತ್ವವು ಇಂದ್ರ ಶಬ್ದವಾಚ್ಯವು ಎಂದಿದೆ **"ಅಸ್ಮಿನ್ ವಾ ಇದಮಿಂದ್ರಿಯಂ"** ಇತ್ಯಾದಿಯಾಗಿ ತೈತ್ತಿರೀಯ-ಬ್ರಾಹ್ಮಣದಲ್ಲೂ ಈ ಅರ್ಥವನ್ನೇ ತಿಳಿಸಿದೆ (ತೈ ಬ್ರಾ ೨-೨-೧೦-೪) ಇದಲ್ಲದೇ ಯಾಸ್ಕರ ಸುಮಾರು ಹದಿನೈದು ವಿಧವಾದ ನಿರ್ವಚನವನ್ನು ಹಿಂದೆ ಉದ್ಧರಿಸಿ ವಿವರಿಸಿದೆ

ಈ ರೀತಿಯಾಗಿ **ಇಂದ್** ಶಬ್ದವು ಪ್ರಜ್ವಲಿತವಾದ ತೇಜಸ್ಸು ಎಂಬರ್ಥವನ್ನು ಕೊಡುವ ಪದಗಳಿಗೆ ಮೂಲ ರೂಪವಾಗಿದೆ. ಪ್ರಸಿದ್ಧನಾದ ಇಂದ್ರನಿಗೆ ಮಾತ್ರವಲ್ಲದೇ, ತೇಜೋಯುತರಾದ ಇತರ ದೇವತೆಗಳ ಪರವಾಗಿಯೂ ಈ ಪದದ ಪ್ರಯೋಗವಿರುತ್ತದೆ.

ಅಭೂದುಷಾ ಇಂದ್ರತಮಾ ಮಘೋನ್ಯಜೀಜನತ್ಸುವಿತಾಯ ಶ್ರವಾಂಸಿ ।
ವಿ ದಿವೋ ದೇವೀ ದುಹಿತಾ ದಧಾತ್ಯಂಗಿರಸ್ತಮಾ ಸುಕೃತೇ ವಸೂನಿ ॥

(ಋ. ಸಂ. ೭-೭೯-೩)

ಎಂಬಲ್ಲಿ **ಇಂದ್ರತಮಾ** ಎಂಬುದಕ್ಕೆ ಸಾಯಣರು **ಸರ್ವಸ್ಯ ಈಶ್ವರತಮಾ** ಎಂದು ಅರ್ಥಮಾಡಿದ್ದರೂ ಸಹ, **ಮೇಲೆ** ಶತಪಥಾದಿ ಬ್ರಾಹ್ಮಣವಾಕ್ಯಗಳಲ್ಲಿ ಹೇಳಿರುವಂತೆ ಇಲ್ಲಿಯೂ ಸಹ ಅತ್ಯಂತ ತೇಜೋಯುತಳಾದ ಎಂಬರ್ಥವೇ ಸಹಜ ವಾಗಿರುತ್ತದೆ. ಹೀಗೆಯೇ,

ಇಂದ್ರತಮಾ ಹಿ ಧಿಷ್ಣ್ಯಾ ಮರುತ್ತಮಾ ದಸ್ರಾ ದಂಸಿಷ್ಠಾ ರಥ್ಯಾ ರಥೀತಮಾ ।

(ಋ. ಸಂ. ೧-೧೮೨-೨)

ಎಂಬಲ್ಲಿ ಅಶ್ವಿನೀದೇವತೆಗಳಿಗೆ ವಿಶೇಷಣವಾಗಿ ಪ್ರಯುಕ್ತವಾಗಿರುವಾಗಲೂ ಸಹ ಇದೇ ಅರ್ಥವನ್ನು ಹೇಳಬೇಕಾಗು ತ್ತದೆ. ಇಂದ್ರನೂ ಸಹ **ಈ** ತೇಜೋಗುಣವಿರುವುದರಿಂದಲೇ, ಅಗ್ನಿಯಿಂದ ನಿರ್ವಹಿಸಲ್ಪಡುವ **ಕಾರ್ಯ**ವನ್ನೂ ಮಾಡುವನೆಂದು ವರ್ಣಿತನಾಗಿದ್ದಾನೆ. ಉದಾಹರಣೆಗೆ—

ಇಂದ್ರಃ ಸಮತ್ಸು ಯಜಮಾನಮಾರ್ಯಂ. ..... ।
ಧ್ವಸ್ಮನ್ವ ವಿಶ್ವಂ ತೇತೃಷಾಣಮೋಷತಿ ನ್ಯರ್ಶಸಾನಮೋಷತಿ ॥

(ಋ ಸಂ ೧-೧೩೦-೮)

ಇಂದ್ರನು ಕರ್ಮರಹಿತರಾದ ಅಸುರಾದಿಗಳನ್ನೂ, ಅವರ ಅನುಚರರನ್ನೂ ದಹಿಸಿ ಭಸ್ಮಮಾಡಿದನೆಂದು ವರ್ಣಿತವಾಗಿದೆ. (ದಹನಕರ್ಮವು ಅಗ್ನಿಯ ಕಾರ್ಯ). ಮತ್ತು,

ಭೀಮಸ್ತುವಿಷ್ಮಾನ್ ಚರ್ಷಣಿಭ್ಯ ಆತಪಃ ಶಿಶೀತೇ ವಜ್ರಂ ತೇಜಸೇ ನ ವಂಸಗಃ ।

(ಋ. ಸಂ. ೧-೫೫-೧)

ಎಂಬಲ್ಲಿಯೂ **ಆತಪಃ** ಎಂಬುದು ಇಂದ್ರನ ಗುಣವನ್ನು ತೋರಿಸುವ ವಿಶೇಷಣ **ಆಸಮಂತಾತ್ತಾಪಕಾರಿ** ಸುತ್ತಲೂ ತಾಪವನ್ನುಂಟುಮಾಡುವನು ಎಂದರ್ಥ ಇದೂ ಸಹ ಅಗ್ನಿಯಕಾರ್ಯ, ಮತ್ತು ಇಂದ್ರವಿಶೇಷಣವಾಗಿದೆ. ಋ. ಸಂ ೩-೩೧-೧೦ ನೇ ಮಂತ್ರದಲ್ಲಿ **ಪ್ರತ್ನಸ್ಯ ರೇತಸಃ** ಎಂಬುದು ಇಂದ್ರವರ್ಣನೆಯಾದರೂ, **ಈ** ಸನ್ನಿವೇಶದಲ್ಲಿ ಆದಿತ್ಯನ ಸ್ವರೂಪವನ್ನು ತಿಳಿಸುವುದಾಗಿದೆ ಎಂದರೆ, ಇಂದ್ರನೇ ಆದಿತ್ಯನ ಗುಣವನ್ನು ಹೊಂದಿರುವನು ಎಂದೂ ಹೇಳ ಬಹುದು ಆದುದರಿಂದ ಅಗ್ನಿಯ ರೂಪಾಂತರವಾದ ಆದಿತ್ಯನಿಗೂ ಇಂದ್ರನಿಗೂ ತಾದಾತ್ಮ್ಯವನ್ನು ಹೇಳಿದೆಯೆಂದೂ ಹೇಳಬಹುದು ಹೀಗೆಯೇ, ಇಂದ್ರನು ಅಗ್ನಿಕೃತವಾದ ಕರ್ಮಗಳನ್ನು ಮಾಡತಕ್ಕವನು, ತೇಜೋಯುತನು, ಶತ್ರು ಗಳನ್ನು ದಹಿಸತಕ್ಕವನು ಎಂದು ಹೇಳಿರುವಂತೆಯೇ, ಅಗ್ನಿಯೂ ಸಹ ಅನೇಕವೇಳೆ ಇಂದ್ರನಿಯತವಾದ ಕರ್ಮ ಗಳನ್ನು ಮಾಡತಕ್ಕವನೆಂದೂ ವರ್ಣಿತನಾಗಿದ್ದಾನೆ

ಪ್ರ ನೂ ಮಹಿತ್ವಂ ವೃಷಭಸ್ಯ ವೋಚಂ ಯಂ ಪೂರವೋ ವೃತ್ರಹಣಂ ಸಚಂತೇ ।
ವೈಶ್ವಾನರೋ ದಸ್ಯುಮಗ್ನಿರ್ಜಘನ್ವಾಁ ಅಧೂನೋತ್ಕಾಷ್ಠಾ ಅವ ಶಂಬರಂ ಭೇತ್ ॥

(ಋ. ಸಂ ೧-೫೯-೬)

ಎಂಬಲ್ಲಿ ಅಗ್ನಿಯು ವೃತ್ರಹಂತಕನೆಂದೂ, ಶಂಬರಾಸುರನ ಭೇದಕನೆಂದೂ ವರ್ಣಿತನಾಗಿದ್ದಾನೆ. ಇವೆರಡೂ ಇಂದ್ರನ ಕರ್ಮಗಳೆಂದು ಪ್ರಸಿದ್ಧವಾಗಿದೆ. ಹೀಗೆಯೇ, " **ತಮು ತ್ವಾ ವೃತ್ರಹಂತಮಂ.....** " ಇತ್ಯಾದಿಯಾಗಿಯೂ (೧-೭೮-೪) ಅನೇಕ ಕಡೆಗಳಲ್ಲಿ ಅಗ್ನಿಯು ವರ್ಣಿತನಾಗಿದ್ದಾನೆ. ಅಲ್ಲದೇ ಇಂದ್ರನಿಗೂ ಅಗ್ನಿಗೂ ಸ್ಪಷ್ಟವಾಗಿ ತಾದಾತ್ಮ್ಯವನ್ನೇ ಹೇಳಿರುವ ಸನ್ನಿವೇಶಗಳೂ ಹೇರಳವಾಗಿದೆ ಉದಾಹರಣೆಗೆ—

" **ಅಥ ಯತ್ರೈತಶ್ಚತ್ವಾರೀಪ್ತೋ ಭವತಿ । ಊರ್ಧ್ವೋ ಹೈವೈಷೋಽಗ್ನಿಃ ಪರಮಯಾ ಜೂತ್ಯಾ ಬಲ್ಪಲೀತಿ ತರ್ಹಿ ಹೈಷ ಭವತೀಂದ್ರಃ ॥**

(ಶ ಬ್ರಾ ೨-೩-೨-೧೧)

ಇದೇ ಅಗ್ನಿಯು ಪೂರ್ಣವಾಗಿ ಪ್ರಜ್ವಲಿತನಾಗಿ, ತನ್ನ ಜ್ವಾಲೆಗಳಿಂದ ವ್ಯಾಪಿಸುತ್ತಲೂ, ಧೂಮಗಳನ್ನು ಹರಡುತ್ತಲೂ ವೇಗವಾಗಿ ಊರ್ಧ್ವಮುಖನಾಗಿ ಪ್ರಸರಿಸುವ ಕಾಲದಲ್ಲಿ ಇವನನ್ನೇ ಇಂದ್ರನೆಂದು ಪ್ರಶಂಸಿಸುತ್ತಾರೆ

ಸ ಉಸಹವಮಿಷ್ವಾ ಭಕ್ಷಯತಿ ಮಧು ಹುತಮಿಂದ್ರಕಮೇಽಗ್ನಾವಿತಿ ।

(ಶ ಬ್ರಾ ೧೪-೨-೨-೪೨)

ಇತ್ಯಾದಿ ವಾಕ್ಯಗಳಲ್ಲಿ ಅಗ್ನಿಯನ್ನು ಅತ್ಯಂತ ಶ್ರೇಷ್ಠನಾದ ಇಂದ್ರನೆಂದೇ ಸ್ತುತಿಸಿದೆ. ಹೀಗೆ ಇಂದ್ರಾಗ್ನಿಗಳ ತಾದಾತ್ಮ್ಯವು ಅನೇಕ ಕಡೆಗಳಲ್ಲಿ ವರ್ಣಿತವಾಗಿರುವುದರಿಂದ ಪ್ರಕೃತದಲ್ಲಿ **ಅನಿಂದ್ರಾಃ** ಎಂಬ ಅಗ್ನಿವಿಶೇಷವಾಚಕವು ಉಚಿತವಾಗಿದೆ.

॥ ಸಂಹಿತಾಪಾಠಃ ॥

ಕ್ಷೇತ್ರಾದಪಶ್ಯಂ ಸನುತಶ್ಚರಂತಂ ಸುಮದ್ಯೂಥಂ ನ ಪುರು ಶೋಭಮಾನಂ ।
ನ ತಾ ಅಗೃಭ್ರನ್ನಜನಿಷ್ವ ಹಿ ಷಃ ಪಲಿಕ್ನೀರಿದ್ಯುವತಯೋ ಭವಂತಿ ॥ ೪ ॥

॥ ಪದಪಾಠಃ ॥

ಕ್ಷೇತ್ರಾತ್ । ಅಪಶ್ಯಂ । ಸನುತರಿತಿ । ಚರಂತಂ । ಸುಽಮತ್ । ಯೂಥಂ । ನ । ಪುರು । ಶೋಭಮಾನಂ ।
ನ । ತಾಃ । ಅಗೃಭ್ರನ್ । ಅಜನಿಷ್ವ । ಹಿ । ಸಃ । ಪಲಿಕ್ನೀಃ । ಇತ್ । ಯುವತಯಃ । ಭವಂತಿ ॥ ೪ ॥

॥ ಸಾಯಣಭಾಷ್ಯಂ ॥

ಅಹಂ ವೃತ ಇದಾನೀಂ ಕ್ಷೇತ್ರಾತ್ ಕ್ಷೇತ್ರೇ ಸನುತಃ । ಅಂತರ್ಹಿತನಾಮೈತತ್ । ನಿಗೂಢಂ ಚರಂತಮರಣ್ಯಾಂ ಯೂಥಂ ನ ಗವಾಂ ಸಮೂಹಮಿವ ಸುಮತ್ಸ್ವಯಮೇವ ಪುರು ಬಹು ಶೋಭಮಾ-

ನಮಸಶ್ಯಂ । ಸಶ್ಚಾಮಿ । ಪುರಾ ಹರಸಃ ಪಿಶಾಚ್ಯಾಕ್ರಮಣಕಾಲೇ ತಾ ಜ್ವಾಲಾ ನಿರ್ವೀರ್ಯಾ ನಾಗೃಭ್ರನ್ । ನಾಗೃಹ್ಣಂತ ನರಾಃ । ಇದಾನೀಂ ಸೋಽಗ್ನಿರಜನಿಷ್ಟ ಹಿ । ಹರಸಾ ಪ್ರಾದುರಭೂತ್ಪಲು । ಅತ ಏವ ಹೇತೋಃ ಪಲಿಕ್ನೀರಿಶ್ಪಲಿಕ್ನ್ಯಃ ಪಲಿತಾ ಜೀರ್ಣಾ ಜ್ವಾಲಾ ಏವೇದಾನೀಂ ಯುವತಯೋ ಭವಂತಿ ॥

॥ ಪ್ರತಿಪದಾರ್ಥ ॥

ಕ್ಷೇತ್ರಾತ್—ಒಂದು ಪ್ರದೇಶದಿಂದ (ಮತ್ತೊಂದು ಪ್ರದೇಶಕ್ಕೆ) । **ಸನುತಃ**—ಗುಪ್ತವಾಗಿ । **ಸುಮತ್**—ತಾನಾಗಿಯೇ । **ಚರಂತಂ**—ಸಂಚರಿಸುವವನೂ । **ಯೂಥಂ ನ**—ಗೋವುಗಳ ಹಿಂಡಿನಂತೆ । **ಪುರು**—ಅಧಿಕವಾಗಿ । **ಶೋಭಮಾನಂ**—ಪ್ರಕಾಶಿಸುವವನೂ ಆದ ಅಗ್ನಿಯನ್ನು । **ಅಪಶ್ಯಂ**—ನಾನು ನೋಡುತ್ತೇನೆ । **ತಾಃ**—ಹಿಂದೆ ಪ್ರವೃದ್ಧವಾಗಿದ್ದ ಆ ಜ್ವಾಲೆಗಳನ್ನು । **ನ ಅಗೃಭ್ರನ್**—ಯಾರೂ ನೋಡಲಾಗಲಿಲ್ಲ । **ಸಃ**—ಅದೇ ಅಗ್ನಿಯು । **ಅಜನಿಷ್ಟ ಹಿ**—ಪುನಃ ಉತ್ಪನ್ನನಾಗಿದ್ದಾನೆ । **ಪಲಿಕ್ನೀರಿತ್**—ವಾರ್ಧಕ್ಯವನ್ನು ಹೊಂದಿದ್ದ ಅದೇ ಜ್ವಾಲೆಗಳು **ಯುವತಯಃ**—ತಾರುಣ್ಯವನ್ನು ಹೊಂದಿದವುಗಳಾಗಿ । **ಭವಂತಿ**—ಆಗಿವೆ.

॥ ಭಾವಾರ್ಥ ॥

ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಗೋವುಗಳ ಹಿಂಡಿನಂತೆ ಸ್ವತಃ ಸಂಚರಿಸುವವನೂ, ಅತ್ಯಧಿಕವಾಗಿ ಪ್ರಕಾಶಿಸುವವನೂ ಆದ ಅಗ್ನಿಯನ್ನು ನಾನು ನೋಡುತ್ತೇನೆ. ಹಿಂದೆ ಪ್ರವೃದ್ಧವಾಗಿದ್ದ ಆ ಜ್ವಾಲೆಗಳನ್ನು ಯಾರೂ ನೋಡಲಾಗಲಿಲ್ಲ ಅದೇ ಅಗ್ನಿಯು ಪುನಃ ಉತ್ಪನ್ನನಾಗಿದ್ದಾನೆ ವಾರ್ಧಕ್ಯವನ್ನು ಹೊಂದಿದ್ದ ಅದೇ ಜ್ವಾಲೆಗಳು ಪುನಃ ತಾರುಣ್ಯವನ್ನು ಹೊಂದಿದವುಗಳಾಗಿ ಆಗಿವೆ.

English Translation.

I have seen him passing secretly from place (to place) like a herd (of cattle), shining brightly of his own accord : they apprehended not those (flames of his), but he has (again) been born, and they which had become grey-haired are (once more) young.

॥ ವಿಶೇಷವಿಷಯಗಳು ॥

ಸನುತಃ—ಈ ಪದವು ನಿಘಂಟು, ಸ್ವಸಃ ಇತ್ಯಾದಿ ಅಂತರ್ಹಿತನಾಮಗಳಲ್ಲಿ ಪರಿಗಣಿತವಾಗಿದೆ (ನಿ. ೩-೨೫) ರಹಸ್ಯವಾದುದು, ಸಾಧಾರಣವಾಗಿ ಇತರರ ಗೋಚರಕ್ಕೆ ಬರದಿರುವುದು ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ದುಷ್ಟರನ್ನು ದೂರಮಾಡಿ ಕಣ್ಮರೆಯಾಗಿರು ಎಂದು ಪ್ರಾರ್ಥಿಸುವ ಸನ್ನಿವೇಶಗಳಲ್ಲೆಲ್ಲಾ ಈ ಪದದ ಪ್ರಯೋಗವು ಅಧಿಕವಾಗಿರುತ್ತದೆ.

ಯೂಯಂ ದೇವಾಃ ಪ್ರಮತಿರ್ಯಾಯನೋಜೋಯೂಯಂ ದ್ವೇಷಾಂಸಿ ಸನುತರ್ಯುಯೋತ.

(ಋ. ಸಂ. ೨-೨೯-೨)

ಅರೇ ದ್ವೇಷಾಂಸಿ ಸನುತರ್ದಧಾಮಾಯಾಮ ಪ್ರಾಂಚೋ ಯಜಮಾನಮಚ್ಛ ।

(ಋ. ಸಂ. ೫-೪೫-೫)

स्मैः स इवैर्मुमुरत्पोप्यं रयिं सनुतर्धेहि तं नः (ಋ. ಸಂ ೪-೯೭-೩);
विदानासो वसवो राध्यस्या राज्ञो द्वेषस्सनुतर्युयोत (ಋ. ಸಂ ೧೦-೨೭-೬).

ಹೀಗೆ ದ್ವೇಷಿಗಳನ್ನು ದೂರವಾಗಿಡು, ಎಂಬ ಪ್ರಾರ್ಥನೆಗಳಲ್ಲಿಯೇ ಈ ಪದದ ಪ್ರಯೋಗವಿರುವುದು ಒಂದು ವಿಶೇಷ ಆದರೆ, ಇವುಗಳಲ್ಲಿ ೫-೬೫-೫ ನೇ ಮಂತ್ರದ **सनुतः** ಎಂಬ ಪದಕ್ಕೆ ಮಾತ್ರ ಸಾಯಣರು ವ್ಯತ್ಯಸ್ತವಾದ ಅರ್ಥವನ್ನು ಹೇಳಿದ್ದಾರೆ **सनुत्यै**ಎಂಬ ಋಕಾರಾಂತ ಶಬ್ದವನ್ನಾಗಿ ತೋರಿಸಿ **सनुतः द्वेषांसि—संभक्ष्यान् शत्रून्** ನಮ್ಮ ಸಂಪತ್ತಿನಲ್ಲಿ ಭಾಗವಹಿಸಬೇಕೆಂಬ ಆಸೆಯುಳ್ಳ ಶತ್ರುಗಳನ್ನು ಎಂದರ್ಥಮಾಡಿದ್ದಾರೆ. ಅಲ್ಲಿಯೂ ಸಹ ಉಳಿದೆಡೆಗಳಲ್ಲಿ ಅವ್ಯಯರೂಪವಾದ **सनुतः** ಎಂಬುದಕ್ಕೆ ಯಾವ ಅರ್ಥವನ್ನು ತೋರಿಸಿದ್ದಾರೋ ಅದೇ ರೀತಿ ಅರ್ಥವನ್ನು ಹೇಳಿದ್ದರೂ ತಪ್ಪಾಗಿರಲಾರದು ಆದರೆ **संभक्ष्यान्** ಎಂದು ಹೇಳಿರುವುದೂ ಅನುಚಿತವಲ್ಲ

ಪ್ರಕೃತವಾದ ಮಂತ್ರದಲ್ಲಿ ಅಗ್ನಿಯ ಗೂಢವಾದ ಸಂಚಾರವು ವರ್ಣಿತವಾಗಿದೆ ಯಾರಿಗೂ ಗೋಚರವಾಗದ ರೀತಿಯಲ್ಲಿ ಸಂಚರಿಸುವವನು ಎಂದು ತಾತ್ಪರ್ಯ

सुमत्—**सुमत्** ಶಬ್ದಕ್ಕೆ **स्वयं** ಎಂದರ್ಥ (ನಿ ೬-೨೨) ಇತರರ ಪ್ರೇರಣೆಯಿಲ್ಲದೇ ತಾನೇ ನಿರ್ವಹಿಸುವುದು ಎಂಬರ್ಥದಲ್ಲಿ ಈ ಪದದ ಪ್ರಯೋಗವಿದೆ ನಿರುಕ್ತಕಾರರು, **'उप प्रागात्सुमन्मेऽधायि'** (ಋ ಸಂ ೧-೧೬೭-೭) ಎಂಬ ಮಂತ್ರವನ್ನುದಾಹರಿಸಿ ಈ ಪದದ ತಾತ್ಪರ್ಯವನ್ನು ವಿವರಿಸಿದ್ದಾರೆ. **'उप प्रागात्सुमत्'** ನಾನು ಇಚ್ಛಿಸಿದ ಅರ್ಥವು ತಾನಾಗಿಯೇ ನನ್ನನ್ನು ಬಂದು ಸೇರಲಿ ಎಂಬುದೇ ಪ್ರಾರ್ಥನೆ. ಈ ಪದವು ಕಲ್ಯಾಣ, ಶೋಭನ ಇತ್ಯಾದ್ಯರ್ಥಗಳಲ್ಲಿ ಪ್ರಯುಕ್ತವಾಗಿರುವುದನ್ನು ಹಿಂದೆ ತಿಳಿಸಿದೆ

॥ ಸಂಹಿತಾಪಾಠಃ ॥

के मे मर्यकं वि यवन्त गोभिर्न येषां गोपा अरणश्चिदास ।
य ईं जगृभुरव ते सृजन्त्वजाति पश्व उप नश्चिकित्वान् ॥ ५ ॥

॥ ಪದಪಾಠಃ ॥

के । मे । मर्यकं । वि । यवन्त । गोभिः । न । येषां । गोपाः । अरणः । चित् । आस ।
ये । ईं । जगृभुः । अव । ते । सृजन्तु । अ । अजाति । पश्वः । उप । नः । चिकित्वान् ॥

॥ ಸಾಯಣಭಾಷ್ಯಂ ॥

ಕೇ ಮೇ ಮದೀಯಂ ಮರ್ಯಕಂ ಮರ್ತ್ಯಸಂಘಂ ರಾಷ್ಟ್ರಂ ಗೋಭಿಃ ಸಹ ವಿ ಯವಂತ ವಿಯುಕ್ತಮಕುರ್ವನ್ । ಗಾ ಭೃತ್ಯಾಂಶ್ಚ ವ್ಯಯೋಜಯನ್ । ಯೇಷಾಂ ಗೋಪಾ ಅಸ್ಮಾಕಂ ಗೋಪಯಿತಾರಣಶ್ಚಿದಭಿಗಂತಾ ನಾಸ । ಬಭೂವ । ಸೋ೨ಯಮಗ್ನಿಃ । ಯೇ ದ್ವೇಷಿಣ ಈಮೇನಂ ಜನಸಂಘಂ ರಾಷ್ಟ್ರಂ ಜಗೃಭುಃ । ಗೃಹ್ಣಂತಿ । ತೇ೨ವ ಸೃಜಂತು । ನಶ್ಯಂತು । ಕಿಂಚ ಚಿಕಿತ್ವಾನ್ ಚೇತನಾವಾನಸ್ಮದ್ವಿಷಯಜ್ಞಾನವಾನಗ್ನಿರ್ನೋ೨ಸ್ಮಾಕಂ ಪಶ್ವಃ ಪಶೂನುಪಾಜಾತಿ । ಉಪಾಗಚ್ಛತಿ ॥

॥ ಪ್ರತಿಪದಾರ್ಥ ॥

ಯೇಷಾಂ—ಯಾವ ನನ್ನ ಸಂಬಂಧಿಯಾದ ಭೃತ್ಯರಿಗೂ ಪಶುಗಳಿಗೂ । **ಗೋಪಾಃ**—ರಕ್ಷಕನು । **ಅರಣಶ್ಚಿತ್**—(ಶತ್ರುಗಳನ್ನು) ಪ್ರತಿಭಟಿಸುವವನಾಗಿ । **ನ ಆಸ**—ಇರಲಿಲ್ಲವೋ ಅಂತಹ । **ಮೇ**—ನನಗೆ ಸಂಬಂಧಿಸಿದ । **ಮರ್ಯಕಂ**—(ಭೃತ್ಯರೂಪರಾದ) ಪ್ರಜೆಗಳನ್ನು । **ಗೋಭಿಃ**—ಗೋವುಗಳಿಂದ । **ಕೇ**—ಯಾರು । **ವಿ ಯವಂತ**—ಪ್ರತ್ಯೇಕಿಸಿದ್ದಾರೆ । **ಯೇ**—ಯಾವ ಶತ್ರುಗಳು । **ಈಂ**—ಈ ಭೃತ್ಯಸಂಘವನ್ನು । **ಜಗೃಭುಃ**—ಹಿಡಿದಿದ್ದಾರೋ । **ತೇ**—ಅವರು । **ಅವ ಸೃಜಂತು**—ನಾಶವನ್ನು ಹೊಂದಲಿ । **ಚಿಕಿತ್ವಾನ್**—ನಮ್ಮ ಕಷ್ಟವನ್ನರಿತ ಅಗ್ನಿಯು । **ನಃ**—ನಮ್ಮ । **ಪಶ್ವಃ**—ಪಶುಗಳನ್ನು (ಸಂರಕ್ಷಿಸಲು) । **ಉಪ ಆಜಾತಿ**—ಸಮೀಪಿಸಿ ಬರಲಿ.

॥ ಭಾವಾರ್ಥ ॥

ಯಾವ ನನ್ನ ಭೃತ್ಯರಿಗೂ ಪಶುಗಳಿಗೂ ರಕ್ಷಕನೂ ಶತ್ರುಗಳನ್ನು ಪ್ರತಿಭಟಿಸುವವನೂ ಆದ ಅಗ್ನಿಯು ಸಮೀಪದಲ್ಲಿಲ್ಲದಿರುವಾಗ ನನ್ನ ಪ್ರಜೆಗಳನ್ನು ಬಂಧಿಸಿ ಅವರನ್ನು ಗೋವುಗಳಿಂದ ಪ್ರತ್ಯೇಕಿಸಿದವರು ಯಾರು ? ನನ್ನ ಈ ಭೃತ್ಯಸಂಘವನ್ನು ಬಂಧಿಸಿರುವ ಶತ್ರುಗಳು ನಾಶವನ್ನು ಹೊಂದಲಿ. ನಮ್ಮ ಕಷ್ಟಗಳನ್ನರಿತ ಅಗ್ನಿಯು ನಮ್ಮ ಪಶುಗಳನ್ನು ಸಂರಕ್ಷಿಸಲು ನಮ್ಮನ್ನು ಸಮೀಪಿಸಿ ಬರಲಿ

English Translation.

Who have disunited my people from cattle? Was there not for them an invincible protector? May they who have seized upon that (people) perish, for he who knows (our wishes) approaches to (protect) the cattle.

॥ ವಿಶೇಷವಿಷಯಗಳು ॥

ಅರಣಃ—**ಅರಣ** ಶಬ್ದವು **ರಣ್** ಧಾತುವಿನಿಂದ ನಿಷ್ಪನ್ನವಾಗಿ ಅದರ ನಿಷೇಧಾರ್ಥವನ್ನು ಸೂಚಿಸುತ್ತದೆ. **ರಣ** ಶಬ್ದವು ಹರ್ಷಾರ್ಥದಲ್ಲಿಯೂ ಯುದ್ಧವೆಂಬರ್ಥದಲ್ಲಿಯೂ ಪ್ರಯುಕ್ತವಾಗಿರುತ್ತದೆ.

ಕೃತೇ ಚಿದತ್ರ ಮರುತೋ ರಣಂತಾನವದ್ಯಾಸಃ ಶುಚಯಃ ಪಾವಕಾಃ ।

(ಋ ಸಂ. ೭-೫೭-೫)

ಇತ್ಯಾದಿ ಮಂತ್ರಗಳಲ್ಲಿ ಹರ್ಷಧ್ವನಿಯನ್ನು ಸೂಚಿಸುವ ಪದವಾಗಿದೆ. ಅನೇಕ ಕಡೆಗಳಲ್ಲಿ ಯುದ್ಧಪರ್ಯಾಯವಾಗಿದೆ. ಆದುದರಿಂದ **ಅರಣ** ಪದವು ಹರ್ಷಾಭಾವವನ್ನಾಗಲಿ ಸೂಚಿಸುವುದಾಗಿದೆ. ನಿರುಕ್ತಕಾರರು—

ನಹಿ ಗೃಭಾಯೋರಣಃ ಸುಶೇವೋ೭ನ್ಯೋದರ್ಯೋ ಮನಸಾ ಮಂತವಾ ಉ ।

(ಋ ಸಂ ೭-೪-೮)

ಎಂಬ ಮಂತ್ರವನ್ನು ಉದಾಹರಿಸಿ (ಸಿ ೩-೨) ಈ ಪದಪ್ರಯೋಗದ ಸಂದರ್ಭವನ್ನು ಮಾತ್ರ ತಿಳಿಸಿದ್ದಾರೆ. ಸಾಯಣರಿಂದ ಉದಾಹೃತವಾಗಿರುವ ಮಂತ್ರದಲ್ಲಿ ಈ ಪದಕ್ಕೆ **ಅರಮಮಾಣಃ** ಎಂದರೆ ತಾನೂ ಹರ್ಷಪಡದೇ, ಇತರರನ್ನು ಹರ್ಷಪಡಿಸದೇ ಇರತಕ್ಕವನೆಂದರ್ಥವಾಗುತ್ತದೆ ಇತರರ ಪುತ್ರನು ಹರ್ಷಕಾರಕನಾಗುವುದಿಲ್ಲವೆಂದರ್ಥ. ಅಥವಾ ಇದೇ ಅರ್ಥವನ್ನು ಕೊಡುವುದರಿಂದಲೇ **ಶತ್ರು**ವೆಂದೂ ಆಗಬಹುದು. ಈ ಅರ್ಥದಲ್ಲೂ ಈ ಪದವನ್ನು ಪ್ರಯೋಗಿಸಿದೆ ಉದಾಹರಣೆಗೆ—

ಇಮ ಇಂದ್ರ ಭರತಸ್ಯ ಪುತ್ರಾ ಅಪಪಿತ್ವಂ ಚಿಕಿತುರ್ನ ಪ್ರಪಿತ್ವಂ ।
ಹಿನ್ವಂತ್ಯಶ್ವಮರಣಂ ನ ನಿತ್ಯಂ ಜ್ಯಾವಾಜಂ ಪರಿ ಣಯಂತ್ಯಾಜೌ ॥

(ಋ ಸಂ ೩-೫೩-೨೪)

ಎಲೈ ಇಂದ್ರನೇ, ಈ ಭರತಪುತ್ರರು ವಸಿಷ್ಠರೊಂದಿಗೆ ಪ್ರತ್ಯೇಕತೆಯನ್ನೇ ಅಪೇಕ್ಷಿಸುವರೇ ಹೊರತು ಐಕ್ಯವನ್ನಪೇಕ್ಷಿಸುವುದಿಲ್ಲ. ಶಾಶ್ವತವಾದ **ಶತ್ರು**ಗಳಂತೆ ಸರ್ವದಾ ಅವರೊಡನೆ ಹೋರಾಡಲು ಸಿದ್ಧರಾಗಿದ್ದಾರೆ ಎಂಬ ತಾತ್ಪರ್ಯವುಳ್ಳ ಈ ಮಂತ್ರದಲ್ಲಿ **ಅರಣ** ಶಬ್ದಕ್ಕೆ **ಶತ್ರು**ವೆಂದರ್ಥ ಹರ್ಷಕಾರಕನಲ್ಲವುದರಿಂದ ತದಾತ್ಮವಿಗೂ ಇದು ಪರ್ಯಾಯ ಪದವಾಗಿರುವ ಸಂದರ್ಭವುಂಟು—

ನೇಶಂ ವಾ ನಿತ್ಯಂ ವರುಣಾರಣಂ ವಾ ಯಂತ್ಸೀಮಾಗಶ್ಚಕೃಮಾ ಶಿಶ್ರಥಸ್ತತ್ ।

(ಋ ಸಂ ೫ ೮೫-೭)

ಎಂಬಲ್ಲಿ **ಅರಣ** ಶಬ್ದಕ್ಕೆ ಆರಬ್ಧವೆಂಬ ಒಂದರ್ಥವೂ, ಆದಾತ್ಮವೆಂದು ಇನ್ನೊಂದರ್ಥವೂ ವೈಕಲ್ಪಿಕವಾಗಿ ಹೇಳಲ್ಪಟ್ಟಿದೆ. ಹೀಗೆ ಸಂದರ್ಭಾನುಸಾರವಾಗಿ ಅರ್ಥಗಳನ್ನು ಹೇಳಿದರೂ ಸಹ ಮೂಲಧಾತುವು ಹರ್ಷಾರ್ಥಕವಾದ **ರಣ್** ಧಾತುವೇ ಆಗಿರುತ್ತದೆ ಹರ್ಷಭಾವನೇ ಅರಣ ಶಬ್ದದ ತಾತ್ಪರ್ಯ ಪ್ರಕೃತವಾದ ಋಕ್ಕಿನಲ್ಲಿ **ಅಭಿಗಂತಾ** ಎಂದರ್ಥನುಡಿರುವುದಕ್ಕೆ ಶತ್ರುಗಳನ್ನು ಪ್ರತಿಭಟಿಸಿ ಹಿಂಸಿಸುವವನು ಎಂದು ತಾತ್ಪರ್ಯವಾಗಿರಬಹುದು

। ಸಂಹಿತಾಪಾಠಃ ।

ವಸಾಂ ರಾಜಾನಂ ವಸತಿಂ ಜನಾನಾಮರಾತಯೋ ನಿ ದಧುರ್ಮರ್ತ್ಯೇಷು ।
ಬ್ರಹ್ಮಾಣ್ಯತ್ರೇರವ ತಂ ಸೃಜಂತು ನಿಂದಿತಾರೋ ನಿಂದ್ಯಾಸೋ ಭವಂತು ॥

। ಪದಪಾಠಃ ।

ವಸಾಂ । ರಾಜಾನಂ । ವಸತಿಂ । ಜನಾನಾಂ । ಅರಾತಯಃ । ನಿ । ದಧುಃ । ಮರ್ತ್ಯೇಷು ।

ಬ್ರಹ್ಮಾಣಿ । ಅತ್ರೇಃ । ಅವ । ತಂ । ಸೃಜಂತು । ನಿಂದಿತಾರಃ । ನಿಂದ್ಯಾಸಃ । ಭವಂತು ॥ ೬ ॥

। ಸಾಯಣಭಾಷ್ಯಂ ।

ವಸಾಂ ವಸತಾಂ ಪ್ರಾಣಿನಾಂ ರಾಜಾನಂ ಸ್ವಾಮಿನಂ ಜನಾನಾಂ ಪ್ರಾಣಿನಾಂ ವಸತಿಮಾವಾಸ-ಭೂತಂ ತ್ರ್ಯರುಣಮುಕ್ತಲಕ್ಷಣಮಗ್ನಿಂ ವಾರಾತಯೋ ನಿ ದಧುಃ। ಅಗೋಪಯನ್ । ಮರ್ತ್ಯೇಷು ಲೋಕೇಷು ಮಧ್ಯೇ । ಅತ್ರೇರತ್ರಿಗೋತ್ರಸ್ಯ ವೃಶಸ್ಯ ಬ್ರಹ್ಮಾಣಿ ಮಂತ್ರಾಃ ಸ್ತೋತ್ರಾಣಿ ವಾ ತಂ ಕುಮಾರಮಗ್ನಿಂ ವಾವ ಸೃಜಂತು । ಅಥವಾತ್ರೇರತ್ರಿಗೋತ್ರಸ್ಯ ಕುಮಾರಂ ಬ್ರಹ್ಮಾಣಿ । ಯದ್ವಾ। ವೃಶಸ್ಯ ಬ್ರಹ್ಮಾಣ್ಯತ್ರೇರತ್ರಿಗೋತ್ರೇಂ ॥ ಕರ್ಮಣಿ ಷಷ್ಠೀ ॥ ತಂ ಕುಮಾರಮವ ಸೃಜಂತು । ವಿಸೃಜಂತು । ನಿಂದಿತಾರೋ೭ಸ್ಮನ್ನಿಂದಕಾ ನಿಂದ್ಯಾಸೋ೭ಸ್ಮಾಭಿರ್ನಿಂದ್ಯಾ ಭವಂತು । ಅತ್ರೇರ್ಬ್ರಹ್ಮಾಣೇತ್ಯೇತದುಪ-ಜೀವ್ಯ ವೃಶಮಪ್ಯಾತ್ರೇಯಂ ವದಂತಿ । ಆತ್ರೇಯಃ ಕುಮಾರ ಇತಿ ಪಕ್ಷೇ ಸ ಏವ ಪ್ರಾಣಮಯಮಾ-ತ್ಮಾನಮವಸೃಜಂತ್ಯಿತ್ಯಾಶಾಸ್ತೇ ॥

। ಪ್ರತಿಪದಾರ್ಥ ।

ವಸಾಂ—ಪ್ರಾಣಿಗಳಿಗೆ । **ರಾಜಾನಂ**—ಸ್ವಾಮಿಯೂ । **ಜನಾನಾಂ**—ಮಾನವರಿಗೆಲ್ಲಾ । **ವಸತಿಂ**—ಆವಾಸಭೂತನೂ ಆದ ಅಗ್ನಿಯನ್ನು । **ಅರಾತಯಃ**—ಶತ್ರುಗಳು । **ಮರ್ತ್ಯೇಷು**—ಮರ್ತ್ಯಲೋಕಗಳ ನಡುವೆ । **ನಿ ದಧುಃ**—ಮರೆಸಿಟ್ಟರು । **ಅತ್ರೇಃ**—ಅತ್ರಿಮಹರ್ಷಿಯ ವಂಶಸ್ಥನಾದ ವೃಶನ । **ಬ್ರಹ್ಮಾಣಿ**—ಸ್ತೋತ್ರಗಳು । **ತಂ**—ಆ ಅಗ್ನಿಯನ್ನು । **ಅವ ಸೃಜಂತು**—ಮರೆಯಿಂದ ಹೊರಕ್ಕೆ ಬರುವಂತೆ ಮಾಡಲಿ । **ನಿಂದಿತಾರಃ**—ನಮ್ಮನ್ನು ನಿಂದಿಸುವ ಶತ್ರುಗಳು । **ನಿಂದ್ಯಾಸಃ**—ನಮ್ಮ ದೂಷಣೆಗೆ ಪಾತ್ರರಾಗಿ । **ಭವಂತು**—ಆಗಲಿ.

। ಭಾವಾರ್ಥ ।

ಪ್ರಾಣಿಗಳಿಗೆಲ್ಲಾ ಸ್ವಾಮಿಯೂ, ಮಾನವರಿಗೆಲ್ಲಾ ಆವಾಸಭೂತನೂ ಆದ ಅಗ್ನಿಯನ್ನು ಶತ್ರುಗಳು ಮರ್ತ್ಯ ಲೋಕಗಳ ನಡುವೆ ಮರೆಸಿಟ್ಟರು. ಅತ್ರಿಮಹರ್ಷಿಯ ವಂಶಸ್ಥನಾದ ವೃಶನ ಸ್ತೋತ್ರಗಳು ಮರೆಯಾದ ಅಗ್ನಿಯನ್ನು ಹೊರಕ್ಕೆ ಬರುವಂತೆ ಮಾಡಲಿ. ನಮ್ಮನ್ನು ನಿಂದಿಸುವ ಶತ್ರುಗಳು ನಮ್ಮ ದೂಷಣೆಗೆ ಪಾತ್ರರಾಗಲಿ.

English Translation.

Enemies have secreted amongst mortals, the king of living beings, the asylum of men: may the prayers of Atri set him free, may those who revile be reviled.

॥ ವಿಶೇಷವಿಷಯಗಳು ॥

ಹಿಂದೆ ವಿವರಿಸಿದಂತೆ ವೈಶನ ಸ್ತುತಿಯು ಮರೆಯಾಗಿದ್ದ ಅಗ್ನಿಯನ್ನು ಯಜಮಾನನಿಗೆ ಗೋಚರಮಾಡಿಸಿದ ಸನ್ನಿವೇಶವು ಸ್ತುತವಾಗಿದೆ. ವೈಶನು ಅಗ್ನಿಯನ್ನು ಪ್ರಾರ್ಥಿಸುವ ಸನ್ನಿವೇಶವಿದು

ಅತ್ರೇಃ ಬ್ರಹ್ಮಾಣಿ ಅವ ಸೃಜಂತು—ಅತ್ರಿಗೋತ್ರೋತ್ಪನ್ನನಾದ ವೈಶನ ಸ್ತೋತ್ರಗಳು ಮರೆಯಾಗಿರುವ ಅಗ್ನಿಯನ್ನು ಹೊರಕ್ಕೆ ಬರುವಂತೆ ಮಾಡಲಿ ಎಂದು ಸ್ತುತಿಯು

ಬ್ರಹ್ಮಾಣಿ—ಬ್ರಹ್ಮಶಬ್ದವನ್ನು **ಅನ್ನ**ನಾಮಗಳಲ್ಲಿಯೂ **ಧನ**ನಾಮಗಳಲ್ಲಿಯೂ ಪರಿಸಿದೆ (ನಿ ೩-೯) ವೃದ್ಧಿಯನ್ನು ಹೊಂದು ಎಂಬರ್ಥವುಳ್ಳ **ಬೃಹ್**ಧಾತುನಿಷ್ಪಂದ ನಿಷ್ಪನ್ನವಾಗಿದೆ. ವೃದ್ಧಿಕಾರಕವಾದ ಕರ್ಮ ಅಥವಾ ಅನ್ನ**ಃ**ಎಂಬರ್ಥವಾಗುತ್ತದೆ

ತಸ್ಮಿನ್ ಬಹ್ಮಾಣಿ ಪೂರ್ವಥೇಂದ್ರ ಉಕ್ಥಾ ಸಮಗ್ಮತಾರ್ಚನ್ನನು ಸ್ವರಾಜ್ಯಂ ।

(ಋ. ಸಂ ೧-೮೦-೧೬)

ಇತ್ಯಾದಿ ಋಕ್ಕುಗಳಲ್ಲಿ **ಹವಿ**ರೂಪವಾದ **ಅನ್ನ**ವೆಂದರ್ಥಮಾಡಿದೆ. ಇದು ಸಾಯಣಭಾಷ್ಯದ ಅರ್ಥ ಇದೇ ವಾಕ್ಯವನ್ನು ನಿರುಕ್ತಕಾರರು ಉದಹರಿಸಿ **ತಸ್ಮಿನ್ ಬ್ರಹ್ಮಾಣಿ ಕರ್ಮಾಣಿ** ಎಂದು ಬ್ರಹ್ಮಶಬ್ದಕ್ಕೆ **ಕರ್ಮ**ವೆಂದರ್ಥಮಾಡಿದ್ದಾರೆ ಇದಲ್ಲದೇ, ಸ್ತುತಿಯೆಂಬರ್ಥವೂ ಪ್ರಸಿದ್ಧವಾಗಿದೆ

ಪ್ರಾಣದ್ಬ್ರಹ್ಮಾಪಿ ಸುಪ್ರೀತಃ ಸುತಾಯ ತದಥರ್ವಣಃ ।
ಸ ಚೌಭವದೃಷಿಸ್ತೇನ ಬ್ರಹ್ಮಣಾ ದೀಪ್ತಿಮತ್ತರಃ ॥

(ಬೃ ದೇ. ೩-೧೪)

ಎಂಬಲ್ಲಿ ಅಥರ್ವನಿಗೆ ಇಂದ್ರನು ಸ್ತುತಿರೂಪವಾದ ಮಂತ್ರವನ್ನು ಉಪದೇಶಿಸಿದ ಸನ್ನಿವೇಶವು ವರ್ಣಿತವಾಗಿದೆ ದಧೀಚಿ ಋಷಿಯು ಆ **ಬ್ರಹ್ಮ**ನನ್ನು (ಸ್ತುತಿರೂಪವಾದ ಮಂತ್ರ) ಸ್ವೀಕರಿಸಿ ಅತ್ಯಂತ ಕಾಂತಿಯುಕ್ತನಾದನು ಎಂದು ಬ್ರಹ್ಮಶಬ್ದಕ್ಕಿರುವ ಮಂತ್ರಪರವಾದ ಅರ್ಥವನ್ನು ಹೇಳಿದೆ ಪ್ರಕೃತವಾದ ಮಂತ್ರದಲ್ಲೂ ಸಹ ಸ್ತುತಿ ಅಥವಾ ಮಂತ್ರ ಎಂದರ್ಥಮಾಡಿದ್ದಾರೆ ಈ ಪದಕ್ಕೆ ಅನ್ನ, ಕರ್ಮ, ಮಂತ್ರ, ಪರಬ್ರಹ್ಮ, ಇತ್ಯಾದ್ಯನೇಕಾರ್ಥಗಳು ಹೇಗೆ ಸಾಧ್ಯ, ಯಾವ ಯಾವ ಸನ್ನಿವೇಶಗಳಲ್ಲಿ ಯಾವ ರೀತಿಯ ಪ್ರಯೋಗಗಳಿವೆ ಎಂಬುದನ್ನು ಜೇರೆಕಡೆ ತಿಳಿಸಲಾಗುತ್ತದೆ

॥ ಸಂಹಿತಾಪಾಠಃ ॥

ಶುನಶ್ಚಿಚ್ಛೇಪಂ ನಿದಿತಂ ಸಹಸ್ರಾದ್ಯೂಪಾದಮುಂಚೋ ಅಶಮಿಷ್ಟ ಹಿ ಷಃ ।
ಏವಾಸ್ಮದಗ್ನೇ ವಿಮುಮುಗ್ಧಿ ಪಾಶಾನ್ಹೋತಶ್ಚಿಕಿತ್ವ ಇಹ ತೂ ನಿಷದ್ಯ ॥

॥ पदपाठः ।

शुनः꣡शेपं । चित् । नि꣡दितं । स꣡हस्रात् । यू꣡पात् । अ꣡मुंचः । अ꣡शमिष्व । हि । सः ॥
ए꣡व । अ꣡स्मत् । अ꣡ग्ने । वि । मु꣡मुग्धि । पा꣡शान् । हो꣡तरिति । चि꣡कित्वः । इ꣡ह । तु ।
नि꣡꣯षद्य ॥ ६ ॥

॥ सायणभाष्यं ॥

अंजःसव अहवनीयोऽसा꣡नेः शुनश्चि꣡च्छेपमित्यृ꣡चा । अग्निमाहवनीयमुप-स्थापयांचकार शुनश्चि꣡च्छेपं निदितं सहस्रात् । ऐ. ब्रा. ६-०६ । इति ब्राह्मणं ॥

हे अग्ने निदितं नितरां बद्धं शुनःशेपमृषिं सहस्रादनेकरूपाद्यूपादु-मुंचः । अमोचयः । चिदिति पूरणः । शुनःशेपमिति पदस्य मध्ये पदान्तरस्य संहितायां व्यत्ययेनावस्थितिः । स ऋषिरशमिष्व हि । शान्तवान् खलु । यद्वा । स हि यस्मादशमिष्व । स्तुतिकर्म्मैतत् । तस्मादेवं । तस्मादमुंच इति संबंधः । एवैवमस्मदस्मत्तः पाशान्नि मुमुग्धि । विमोचय । हे होतर्हे चिकित्वश्चेतनावन्नग्ने इह तु वेद्यां निषद्यावस्थाय ॥

॥ प्रतिपदार्थ ॥

(एलै अग्नियै) । निदितं—पूर्णवागि बद्धनाद । शुनःशेफं—शुनःशेफ नेंब ऋषियन्नु । सहस्रात्—सहस्रारु । यूपात्—बंधनगळिंद । अमुंचः—नीनु बिडिसिद्दीयै । सः—आ ऋषियु । अशमिष्व—प्रशांतचित्तनागियै इद्दनु । होतः -होम संपादकनू । चिकित्वः—प्रज्ञावंतनू आद । अग्ने—एलै अग्नियै । इह तु—ई यज्ञ वेदियल्लियै । निषद्य—कुळितुकोंडु । एव—शुनश्शेफनन्नु बिडिसिदंतेयै । अस्मत्—नम्मिंद । पाशान्—पाशगळन्नु । वि मुमुग्धि—बिडिसु.

॥ भावार्थ ॥

एलै अग्नियै, पूर्णवागि सहस्रारु स्तंभगळिगे बद्धनाद शुनःशेफनेंब ऋषियन्नु अवन एल्ला बंधनगळिंदलू नीनु बिडिसिदै आदे रीतियल्लि, एलै होमसंपादकनू, प्रज्ञावंतनू आद अग्नियै, ई यज्ञवेदियल्लियै कुळितुकोंडु नम्मिंद एल्ला पाशगळन्नू बिडिसु.

English Translation.

You have liberated fettered Shunahshepa from a thousand stakes, for he was patient in endurance: so, Agni, free us from our bonds, having sat down here (at our sacrifice), intelligent offerer of oblations.

। ವಿಶೇಷವಿಷಯಗಳು ।

ತನ್ನನ್ನು ಪಾಪರೂಪವಾದ ಅಥವಾ ದುಃಖರೂಪವಾದ ಪಾಶಗಳಿಂದ ಬಿಡಿಸಬೇಕೆಂದು ಇಲ್ಲಿ ಋಷಿಯು ಅಗ್ನಿಯನ್ನು ಪ್ರಾರ್ಥಿಸಿಕೊಳ್ಳುತ್ತಾನೆ. ಈ ಪ್ರಾರ್ಥನೆಯಲ್ಲಿ **ಶುನಃಶೇಫನ** ಉಪಮಾನವಿದೆ. ಅಗ್ನಿಯು ಶುನಃಶೇಫನನ್ನು ರಕ್ಷಿಸಿದಂತೆ, ಅವನನ್ನು ಪಾಶದಿಂದ ಬಿಡಿಸಿದಂತೆ ತನ್ನನ್ನೂ ಬಿಡಿಸಬೇಕೆಂಬ ಸ್ತುತಿಯಿದೆ. ಇದೇ ಶುನಃಶೇಫನ ಕಥೆಯನ್ನು ಐತರೇಯಬ್ರಾಹ್ಮಣದಲ್ಲಿ ಉಕ್ತವಾಗಿರುವಂತೆ ಋ. ಸಂ. ೧–೨೭ ನೇ ಸೂಕ್ತದ ವಿಶೇಷ ವಿಷಯಗಳಲ್ಲಿ (ಋಗ್ವೇದಸಂಹಿತಾ, ಭಾಗ ೩) ವಿಸ್ತೃತವಾಗಿ ತಿಳಿಸಿದೆ. ಅವನು ಅಗ್ನಿ, ಸವಿತೃ, ವರುಣ, ಇಂದ್ರ ಇತ್ಯಾದಿ ದೇವತೆಗಳನ್ನು ಕ್ರಮವಾಗಿ ಪ್ರಾರ್ಥಿಸಿ ಅವರೆಲ್ಲರ ಅನುಗ್ರಹದಿಂದ ಮತ್ತು ಅದರಲ್ಲೂ ಇಂದ್ರನ ಅನುಗ್ರಹದಿಂದ ತನ್ನ ಪಾಶವನ್ನು ಬಿಡಿಸಿಕೊಂಡನು ಎಂದು ತಿಳಿಸಿದೆ ಈ ಶುನಃಶೇಫನ ಕಥೆಯು ಆಧುನಿಕ ವಿಮರ್ಶಕರ ದೃಷ್ಟಿಯಿಂದ ಒಂದು ಪ್ರಧಾನವಾದ ಸನ್ನಿವೇಶವಾಗಿದೆ. ಅನೇಕ ದೃಷ್ಟಿಗಳಿಂದ ಈ ಸನ್ನಿವೇಶವು ವಿಮರ್ಶೆಗೆ ಆಸ್ಪದವಾಗಿರುತ್ತದೆ. ಹಿಂದೆ ಈ ಕಥೆಯ ಅನುಪೂರ್ವಿಯನ್ನು ಮಾತ್ರ ಹೇಳಿರುತ್ತದೆಯೇ ಹೊರತು ಈ ಆಖ್ಯಾನದ ಮರ್ಮವೇನು ಎಂಬುದನ್ನು ಪರಿಶೀಲಿಸಿಲ್ಲ. ಪ್ರಕೃತದಲ್ಲಿ ಶುನಃಶೇಫಾಖ್ಯಾನದ ತತ್ತ್ವವೇನು ಎಂಬುದನ್ನು ಪರಿಶೀಲಿಸುವುದು ಉಚಿತವಾಗಿರುತ್ತದೆ. ಆನಂತರ ಪ್ರಕೃತವಾದ ಮಂತ್ರದಲ್ಲಿ ಈ ಉಪಮಾನದ ಔಚಿತ್ಯವನ್ನು ಅರ್ಥಮಾಡಿಕೊಳ್ಳಬಹುದು

ವೈದಿಕಸಾಹಿತ್ಯದಲ್ಲಿ ಪ್ರಸಿದ್ಧವಾಗಿರುವ ಆಖ್ಯಾನಗಳಲ್ಲಿ ಶುನಃಶೇಫಾಖ್ಯಾನಕ್ಕೆ ಇರುವ ಪ್ರಾಧಾನ್ಯವೂ ಪ್ರಶಸ್ತಿಯೂ ಇನ್ನಾವುದಕ್ಕೂ ಇರಲಾರದು. ಆದುದರಿಂದಲೇ ಬ್ರಾಹ್ಮಣಾದಿ ವೈದಿಕಗ್ರಂಥಗಳಲ್ಲೂ ಪುರಾಣಾದಿ ಲೌಕಿಕಗ್ರಂಥಗಳಲ್ಲೂ ಈ ಆಖ್ಯಾನವು ಪದೇಪದೇ ಉದಾಹೃತವಾಗಿ ಪರಿತವಾಗುತ್ತಿದೆ.

ಈ ಆಖ್ಯಾನವು ಪೂರ್ಣವಾಗಿ ಐತರೇಯಬ್ರಾಹ್ಮಣದಲ್ಲಿ (೭–೩) ಪರಿತವಾಗಿದೆ. ಹರಿಶ್ಚಂದ್ರಪುತ್ರನಾದ ರೋಹಿತನ ಪ್ರತಿನಿಧಿಯಾಗಿ ಶುನಃಶೇಫನು ಯಜ್ಞಪಶುವಾಗಿ ಸ್ವೀಕೃತವಾದುದೂ, ವಿಶ್ವಾಮಿತ್ರನ ಅನುಗ್ರಹದಿಂದ ಶುನಃಶೇಫನು ವರುಣಾದಿಗಳನ್ನು ಸ್ತುತಿಸಿ ಪಾಶದಿಂದ ಮುಕ್ತನಾದುದೂ ಅಲ್ಲಿ ವರ್ಣಿತವಾಗಿರುವ ಕಥೆ ಈ ಕಥೆಯು ಆಧಾರದ ಮೇಲೆ ಆಧುನಿಕಪಂಡಿತರಲ್ಲಿ ಕೆಲವರು ವೈದಿಕಕಾಲದಲ್ಲಿ ಪುರುಷಯಜ್ಞವು ಆಚರಣೆಯಲ್ಲಿತ್ತು ಎಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ ಆದರೆ ಈ ಅಭಿಪ್ರಾಯಕ್ಕೆ ಶ್ರುತಿವಾಕ್ಯಗಳು ಅಸ್ಪಷ್ಟ ಸಮರ್ಪಕವಾದ ಸಮರ್ಥನೆಯನ್ನು ಕೊಡುವುದಿಲ್ಲ ಆ ಕಥಾಸಂದರ್ಭವನ್ನು ಪರಿಶೀಲಿಸಿದರೆ, ಸನ್ನಿವೇಶವು ಈ ರೀತಿಯಿರುತ್ತದೆ

ಯಜ್ಞಾಂಗಗಳಾದ ಪೂರ್ವಭಾವಿಯಾದ ಕರ್ಮಗಳೆಲ್ಲವೂ ನೆರವೇರಿದನಂತರ ಪ್ರಧಾನಯಜ್ಞದಲ್ಲಿ ಪಶು ಬಂಧನವೂ ಪಶುಶ್ಛೇದನವೂ ಆಗಬೇಕಾದ ಕಾಲದಲ್ಲಿ ಶುನಃಶೇಫನನ್ನು ಯೂಪಸ್ತಂಭಕ್ಕೆ ಬಂಧಿಸಲು ಯಾರೂ ಒಪ್ಪಲಿಲ್ಲ ಆಗ ಅಜೀಗರ್ತನೇ (ತಂದೆಯೇ) ಈ ಕಾರ್ಯಕ್ಕೆ ನೆರವಾಗಲು ಒಪ್ಪುತ್ತಾನೆ ಅನೂ ಅಲ್ಲದೇ, ಪರಿಪನಂತೆ ತನ್ನ ಮಗನನ್ನೇ ಛೇದಿಸಲೂ ಒಪ್ಪಿಂಡುತ್ತಾನೆ ಆಗ ಶುನಃಶೇಫನು ತಾನು ಮೃಗಿಂತೆ ಛೇದಿಸಲ್ಪಡುವನೆಂದು ಗಾಬರಿ ಪಟ್ಟು ದೇವತೆಗಳಲ್ಲಿ ಮೊರೆಯಿಡುತ್ತಾನೆ ಕ್ರಮವಾಗಿ, ಪ್ರಜಾಪತಿ, ಅಗ್ನಿ, ಸವಿತೃ, ವರುಣ, ಇಂದ್ರ, ಅಶ್ವಿನೀ ದೇವತೆಗಳು ಉಪಸ್ಸು ಈ ದೇವತೆಗಳನ್ನು ಪ್ರಾರ್ಥಿಸಿ ಇವರ ಸಹಾಯವನ್ನಪೇಕ್ಷಿಸುತ್ತಾನೆ ಉಪಸ್ಸನ್ನುದ್ದೇಶಿಸಿ ಅವಳನ್ನು ಸ್ತುತಿಸುವ ಮಂತ್ರಗಳನ್ನು ಒಂದೊಂದಾಗಿ ಪರಿಸುವಾಗ ಅವನ ಬಂಧನಗಳೆಲ್ಲವೂ ಪೂರ್ಣವಾಗಿ ಸಡಿಲಿ

ಅವನು ಮುಕ್ತನಾಗುತ್ತಾನೆ (ಹರಿಶ್ಚಂದ್ರನ ವ್ಯಾಧಿಯು ನಾಶವಾಗುತ್ತದೆ) ಆಗ ಶುನಃಶೇಫನು ಋತ್ವಿಕ್ಕುಗಳ ನಡುವೆ ಸೇರಿಕೊಳ್ಳಬೇಕೆಂದು ಪ್ರಾರ್ಥಿತನಾಗುತ್ತಾನೆ ಆಗ **ಆಂಜಸ್ಯವದ** ಕ್ರಮವನ್ನು ಅರಿತು ಅದರಂತೆ ಅಭಿಷವಕರ್ಮವನ್ನಾಚರಿಸುತ್ತಾನೆ.

ಅನಂತರ ಅಜೀಗರ್ತನನ್ನು ತಂದೆಯಾಗಿ ಸ್ವೀಕರಿಸಲು ತಿರಸ್ಕರಿಸಿ ವಿಶ್ವಾಮಿತ್ರನ ಪುತ್ರತ್ವವನ್ನು ಪಡೆಯುತ್ತಾನೆ. ಇದು ಐತರೇಯಬ್ರಾಹ್ಮಣೋಕ್ತದ ಕಥೆ. ಆದರೆ ಈ ಪೂರ್ಣವಾದ ಕಥೆಗೆ ಋಕ್ಸಂಹಿತೆಯು ಪೂರ್ಣವಾಗಿ ಆಧಾರವಾಗಿದೆಯೆಂದು ಹೇಳಲಾಗುವುದಿಲ್ಲ. ಋಕ್ಸಂಹಿತೆಯಲ್ಲಿ ಈ ಆಖ್ಯಾನದ ಪರನವು ಸೂರ್ಣವಾಗಿ ಎಲ್ಲಿಯೂ ಇಲ್ಲ ಆದರೂ ಸಹ ಈ ಕಥಾಸಂದರ್ಭವು ಅನೇಕ ಕಡೆಗಳಲ್ಲಿ ಸೂಚಿತವಾಗಿದೆ. **ಆಂಜಃಸವ**ರೂಪವಾದ ಅಭಿಷವ ಕರ್ಮವು ಪ್ರಥಮತಃ ಶುನಃಶೇಫನಿಂದಲೇ ದೃಷ್ಟವಾದುದೆಂದು ಪ್ರಸಿದ್ಧವಾಗಿದೆ. ಇದರಲ್ಲಿ ಋಕ್ಸಂಹಿತಾವಾಕ್ಯಗಳು ಪ್ರಧಾನವಾದ ಸ್ತುತಿವಾಕ್ಯಗಳಾಗಿವೆ. ಇವೆಲ್ಲವೂ ಶುನಃಶೇಫನಿಂದ ಪಠಿತವಾದವು. ಅವುಗಳು ಯಾವುವೆಂದು ಪ್ರಥಮತಃ ತಿಳಿದರೆ, ನಂತರ ಈ ಆಖ್ಯಾನದ ಅಂತಸ್ತತ್ತ್ವವು ಸುಲಭವಾಗಿ ಅರ್ಥವಾಗುತ್ತದೆ ಆಂಜಃಸವಕರ್ಮ ಕಾಲದಲ್ಲಿ ಶುನಃಶೇಫನಿಂದ ಪಠಿತವಾದ ಮಂತ್ರಗಳ ಕ್ರಮವು ಈ ರೀತಿಯಿದೆ:—

೧. **ಕಸ್ಯ ನೂನಂ ಕತಮಸ್ಯಾಮೃತಾನಾಂ** (೧–೨೪–೧) ಪ್ರಜಾಪತಿಯ ಪ್ರಾರ್ಥನೆ

೨. **ಅಗ್ನೇರ್ವಯಂ ಪ್ರಥಮಸ್ಯಾಮೃತಾನಾಂ** (೧–೨೪–೨) ಅಗ್ನಿಸ್ತುತಿ.

೩. **ಅಭಿ ತ್ವಾ ದೇವ ಸವಿತಃ** (೧–೨೪–೩ ರಿಂದ ೫) ಸವಿತೃಸ್ತುತಿ.

೪ **ನ ಹಿ ತೇ ಕ್ಷತ್ರಂ ನ ಸಹೋ ನ ಮನ್ಯುಂ** (೧–೨೪–೬ ರಿಂದ ೧೫) ೧–೨೫–೧ ರಿಂದ ೨೧ ಎಂಬ ೩೧ ಮಂತ್ರಗಳೂ ವರುಣಸ್ತುತಿ.

೫. **ವಸಿಷ್ಠಾ ಹಿ ಮಿಯೇಧ್ಯ** (೧–೨೬–೧) ೧–೨೬–೧ ರಿಂದ ೧೨ ಎಂಬ ೨೨ ಮಂತ್ರಗಳೂ ಪುನಃ ಅಗ್ನಿಸ್ತುತಿಗಳು.

೬. **ನಮೋ ಮಹದ್ಭ್ಯೋ** ಎಂಬುದು (೧–೨೭–೧೩) ವಿಶ್ವೇದೇವಪ್ರಾರ್ಥನೆ.

೭ **ಯಚ್ಚಿದ್ಧಿ ಸತ್ಯ ಸೋಮಪಾ** (೧–೨೯–೧, ೧–೩೦–೧ ರಿಂದ ೧೫) ಎಂಬ ಮಂತ್ರಗಳು ಇಂದ್ರ ಪ್ರಶಂಸಾತ್ಮಕವು.

ಈ ಮಂತ್ರಗಳಿಂದ ಇಂದ್ರನು ಸಂತುಷ್ಟನಾಗಿ ಶುನಃಶೇಫನಿಗ ಸುವರ್ಣದ ರಥವನ್ನು ಕೊಡುತ್ತಾನೆ. ಆಗ ಶುನಃಶೇಫನು **ಶಶ್ವದಿಂದ್ರ** (೧–೩೦–೨೬) ಇತ್ಯಾದಿ ಮಂತ್ರಗಳನ್ನು ಪಠಿಸಿ ಅದನ್ನು ಸ್ವೀಕರಿಸುತ್ತಾನೆ ನಂತರ ಅಶ್ವಿನೀ ಮತ್ತು ಉಷೋದೇವತೆಗಳನ್ನು ಪ್ರಾರ್ಥಿಸಿ ಸ್ತುತಿಸುತ್ತಾನೆ. ಆಗ ಇವನು ಬಂಧನದಿಂದ ಪೂರ್ಣವಾಗಿ ಮುಕ್ತನಾಗುತ್ತಾನೆ.

(ಈ ಮಂತ್ರಗಳಿಗೂ ಬ್ರಾಹ್ಮಣೋಕ್ತವಾದ ಕಥೆಗೂ ಸಂಬಂಧವಿಲ್ಲವೆಂದೂ Keith ಮುಂತಾದ ಪಂಡಿತರು ಅಭಿಪ್ರಾಯಪಡುತ್ತಾರೆ. Journal of Royal Asatic Socicty 1911, p. 988 ಈ ಅಂಶವನ್ನು ಶ್ರುತಿವಾಕ್ಯಗಳ ಆಧಾರದ ಮೇಲೆ ವಿಮರ್ಶಿಸಿ ನಿಷ್ಕರ್ಷಿಸಬೇಕಾಗಿರುತ್ತದೆ).

ಐತರೇಯ ಬ್ರಾಹ್ಮಣದ ಕಥೆಯೇ ಶಾಂಖಾಯನ ಶ್ರೌತಸೂತ್ರದಲ್ಲೂ ಉಕ್ತವಾಗಿದೆ. (೧೫-೧೭-೭)

ಆದರೆ ಪ್ರಾರಭೇದವು ಇರುತ್ತದೆ. ಇದೇ ಕಥಾಸಂದರ್ಭವನ್ನು ಬೃಹದ್ದೇವತೆಯಲ್ಲಿ ಈ ರೀತಿ ತಿಳಿಸಿದೆ.

ಸ್ತೂಯಮಾನಃ ಶಶ್ವದಿತಿ ಪ್ರೀತಸ್ತು ಮನಸಾ ದದೌ ।

ಶುನಃಶೇಫಾಯ ದಿವ್ಯಂ ತು ರಥಂ ಸರ್ವಂ ಹಿರಣ್ಮಯಂ ॥

(ಬೃ ದೇ ೩- ೧೦೩)

ಶಶ್ವತ್ (೧-೩೦-೧೬) ಇತ್ಯಾದಿ ಸ್ತುತಿಗಳಿಂದ ಪ್ರೀತನಾದ ಇಂದ್ರನು ತನ್ನಲ್ಲಿಯೇ ಸಂತುಷ್ಟನಾಗಿ ಶುನಃಶೇಫನಿಗೆ ದಿವ್ಯವಾದುದೂ ಹಿರಣ್ಮಯವಾದುದೂ ಆದ ರಥವನ್ನು ದಾನವಾಗಿ ಕೊಟ್ಟನು.

ಕಸ್ಯ ಸಂಚೋದನಾಜ್ಜೀಗರ್ತಿಃ ಶುನಃಶೇಫಃ ಸ ಕೃತ್ರಿಮೋ ವೈಶ್ವಾಮಿತ್ರೋ ದೇವರಾತಃ ।

(ಸರ್ವಾನುಕ್ರಮಣೀ.)

ಅಜೀಗರ್ತಪುತ್ರನಾದ ಶುನಃಶೇಫನು ನಂತರ ವಿಶ್ವಾಮಿತ್ರಪುತ್ರನಾದನೆಂದು ಸರ್ವಾನುಕ್ರಮಣಿಯು ತಿಳಿಸುತ್ತದೆ.

ಇದೇ ಕಥೆಯು ಇತಿಹಾಸಪುರಾಣಾದಿಗಳಲ್ಲಿ ಸ್ವಲ್ಪ ವ್ಯತ್ಯಾಸವನ್ನು ಹೊಂದಿ ಪರಿತವಾಗಿದೆ. ರಾಮಾಯಣದಲ್ಲಿ ಶುನಃಶೇಫನು ಋಚೀಕಋಷಿಯ ಪುತ್ರನೆಂದು ಹೇಳಿದೆ ಹರಿಶ್ಚಂದ್ರನಿಗೆ ಬದಲಾಗಿ ಅಂಬರೀಷಚಕ್ರವರ್ತಿಯೆಂದಿದೆ. ಮಹಾಭಾರತದಲ್ಲಿ ಶುನಃಶೇಫನು ಋಚೀಕಪುತ್ರನು ಆದರೆ ಅಂಬರೀಷನಲ್ಲ ಹರಿಶ್ಚಂದ್ರನೇ ರಾಜನು

ಪುರಾಣಗಳಲ್ಲಿ ಈ ಕಥಾಸಂದರ್ಭವು ಎರಡು ವಿಧವಾಗಿ ವರ್ಣಿತವಾಗಿದೆ. ಭಾಗವತವೂ, ದೇವೀಭಾಗವತವೂ ಐತರೇಯಬ್ರಾಹ್ಮಣದ ಕಥೆಯನ್ನವಲಂಬಿಸಿರುತ್ತದೆ ವಿಷ್ಣುಧರ್ಮಶ್ರೀ ರಾಮಾಯಣದ ಕಥೆಯನ್ನವಲಂಬಿಸಿರುತ್ತದೆ. ಆದುದರಿಂದ ಈ ಕಥಾಪರಿಸರದಲ್ಲಿ ಮೂರು ಮಾರ್ಗಗಳನ್ನು ಕಾಣಬಹುದು

೧ ಐತರೇಯಬ್ರಾಹ್ಮಣ, ೨ ರಾಮಾಯಣ, ೩ ಮಹಾಭಾರತ—ಇವುಗಳಲ್ಲಿ ಕಥಾಭಾಗದ ಮುಖ್ಯಾಂಶವು ಒಂದೇ ಎನಿಸಿಕೆಯಲ್ಲಿ ಸ್ವಲ್ಪ ವ್ಯತ್ಯಾಸವಿರುತ್ತದೆ.

ಪ್ರಸ್ತುತದಲ್ಲಿ, ಋಸ್ಸಂಹಿತೆಯಲ್ಲಿ ಶುನಃಶೇಫನ ಸಿರ್ದೇಶವೂ, ಅವನಿಂದ ನಿರ್ಮಿತವಾದ ಮತ್ತು ಪಠಿತವಾದ ಮಂತ್ರಗಳೂ ಐತರೇಯಬ್ರಾಹ್ಮಣದಲ್ಲಿ ವಿವೃತವಾಗಿರುವ ಆಖ್ಯಾನಕ್ಕೆ ಪೂರ್ಣವಾಗಿ ಆಧಾರವಾಗಿರುವುದೇ, ಅಥವಾ ಐತರೇಯಬ್ರಾಹ್ಮಣದಲ್ಲಿ ಹೇಳಿರುವ ಕೆಲವು ಮುಖ್ಯ ಸನ್ನಿವೇಶಗಳು ಅನಂತರ ಕಲ್ಪಿತವಾದವೇ ಎಂಬುದನ್ನೂ ತಿಳಿಯಬೇಕಾದ ಸ್ಪಷ್ಟೀಯವಿರುತ್ತದೆ ಅನಂತರ ಈ ಆಖ್ಯಾನವು ವೈದಿಕಕಾಲದಲ್ಲಿ ನಿಷೇಧದ ಆಚರಣೆಯಿದ್ದಿತು ಎಂಬ ವಿಷಯವನ್ನು ಸಮರ್ಥಿಸುವುದೇ ಎಂಬುದನ್ನೂ ಪರಿಶೀಲಿಸಬೇಕಾಗುತ್ತದೆ

ಐತರೇಯಬ್ರಾಹ್ಮಣದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳು ಮೂರು —೧ ಹರಿಶ್ಚಂದ್ರ ಮತ್ತು ವರುಣರ ಸಮಯ. ತತ್ಫಲವಾಗಿ ಹರಿಶ್ಚಂದ್ರನು ರೋಹಿತನಂಬ ಪುತ್ರನನ್ನು ಪಡೆದುದ. ೨ ಅಜೀಗರ್ತ ಮತ್ತು ಶುನಃಶೇಫನ ಸನ್ನಿವೇಶ ೩. ವಿಶ್ವಾಮಿತ್ರನಿಗೂ ಅವನ ಪುತ್ರರಿಗೂ ನಡೆದ ಸಂವಾದ ಮತ್ತು ವಿಶ್ವಾಮಿತ್ರನು ಶುನಃಶೇಫನನ್ನು ಪುತ್ರನನ್ನಾಗಿ ಸ್ವೀಕರಿಸಿದುದು

ಹರಿಶ್ಚಂದ್ರ, ರೋಹಿತ, ಅಜೀಗರ್ತ ಮತ್ತು ಈ ಸಂದರ್ಭದಲ್ಲಿ ವಿಶ್ವಾಮಿತ್ರನ ಪ್ರವೇಶ ಇವಾವುದೂ ಋಕ್ಸಂಹಿತೆಯಲ್ಲಿ ವರ್ಣಿತವಾಗಿಲ್ಲ. ಆದುದರಿಂದಲೇ ಋಕ್ಸಂಹಿತೆಯು ಈ ಪೂರ್ಣವಾದ ಕಥೆಗೆ ಆಧಾರವಲ್ಲವೆಂದೂ ಬ್ರಾಹ್ಮಣದಲ್ಲಿ ಕಲ್ಪಿತವಾದ ಕಥೆಗೆ ಪೋಷಕವಾಗಿ ಮೇಲೆ ತಿಳಿಸಿರುವ ೧೦೦ ಮಂತ್ರಗಳನ್ನೂ ಆ ಸಮಯಕ್ಕೆ ಉಚಿತವಾಗಿ ಕಥಾಂತರ್ಗತವಾಗಿರುವಂತೆ ಸೇರಿಸಿಕೊಂಡಿದೆಯೆಂದೂ Roth ಮುಂತಾದ ಆಂಗ್ಲ ಪಂಡಿತರು ಅಭಿಪ್ರಾಯ ಪಟ್ಟಿದ್ದಾರೆ. ಅವರ ಮತದಂತೆ, ಶುನಃಶೇಫನೆಂಬ ಋಷಿಯು ಯಾವುದೋ ಆಪತ್ತಿಗೆ ಸಿಕ್ಕಿಬಿದ್ದು ವರುಣಾದಿ ದೇವತೆಗಳನ್ನು ಪ್ರಾರ್ಥಿಸಿದುದರ ಫಲವಾಗಿ ಅವರ ಅನುಗ್ರಹವನ್ನು ಪಡೆದು ಬಂಧನದಿಂದ ಮುಕ್ತನಾಗುತ್ತಾನೆ (ಋ ಸಂ. ೧-೨೪-೧೨, ೧-೨೪-೧೩, ೫-೨-೭) ಇದು ಋಕ್ಸಂಹಿತೆಯ ಆಧಾರ. ಇದನ್ನೇ ಹರಿಶ್ಚಂದ್ರನ ಕಥಾರೂಪದಲ್ಲಿ ಬ್ರಾಹ್ಮಣಾದಿಗಳಲ್ಲಿ ಬೆಳೆಸಿ ಶುನಃಶೇಫನು ಯಜ್ಞಪಶುವಾಗಿ ಮಾಡಲ್ಪಟ್ಟು ನಂತರ ವಿಶ್ವಾಮಿತ್ರನ ಸಹಾಯದಿಂದ ಮುಕ್ತನಾಗಿ ಆತನ ಪುತ್ರತ್ವವನ್ನು ಪಡೆಯುವವರೆಗೂ ವಿಸ್ತರಿಸಿದೆ ಎಂಬುದೇ ಈ ಮತದ ಅಭಿಪ್ರಾಯ ಋಕ್ಸಂಹಿತೆಯಲ್ಲಿ ಕೇವಲ ಬಂಧನವೆಂಬ ವರ್ಣನೆಯಿದೆ ಅಥವಾ ಪ್ರಕೃತವಾದ ಮಂತ್ರದಲ್ಲಿ (೫-೨-೭) **ಯೂಪಾತ್** ಎಂಬ ಶಬ್ದಪ್ರಯೋಗವಿದೆಯಾದುದರಿಂದ ಇಲ್ಲಿ ಯಜ್ಞಪಶುವೆಂದೇ ಭಾವಿಸಬೇಕೆಂದರೆ- **ಸಹಸ್ರಾತ್** ಎಂಬ ವಿಶೇಷಣವಿರುತ್ತದೆ. ಆದುದರಿಂದ ಇಲ್ಲಿ ಯೂಪಶಬ್ದಕ್ಕೆ ವಾಚ್ಯವಾಗಿ ಯಜ್ಞಪಶುವನ್ನು ಕಟ್ಟುವ ಸ್ತಂಭವೆಂದು ಅರ್ಥಮಾಡದೆ, ಲಾಕ್ಷಣಿಕವಾದ ಯೂಪರೂಪಕ್ಕೆ ಬಂಧನವೆಂದರ್ಥಮಾಡಬಹುದೆಂದೂ ಆಗ ಪುರುಷಪಶುವೆಂಬ ತಾತ್ಪರ್ಯವಾಗುವುದಿಲ್ಲವೆಂದೂ ಕೆಲವರ ಮತ. ಸಾಯಣರು ಸಹಸ್ರಾತ್ ಎಂಬುದಕ್ಕೆ **ಸಹಸ್ರರೂಪಾತ್** ಎಂದರ್ಥಮಾಡಿದ್ದಾರೆ. ಪಶುವನ್ನು ಕಟ್ಟುವ ಸ್ತಂಭವು ಸಹಸ್ರರೂಪವಾಗಿರುವುದಿಲ್ಲ. ಆದುದರಿಂದ ಅನೇಕವಿಧವಾದ ಬಂಧನಗಳಿಂದ ಬಿಡಿಸಲ್ಪಟ್ಟನು ಎಂದು ಲಾಕ್ಷಣಿಕವಾದ ತಾತ್ಪರ್ಯವನ್ನು ಹೇಳಬೇಕೆಂದು ಕೆಲವರು ಅಭಿಪ್ರಾಯಪಡುತ್ತಾರೆ

ಒಂದುವೇಳೆ ಯೂಪವು ಯಜ್ಞಸ್ತಂಭವೆಂಬ ಅರ್ಥವನ್ನೇ ಕೊಡುವುದೆಂದು ಹೇಳಿದರೂ ಸಹ ಈ ಒಂದು ಉದಾಹರಣೆಯಿಂದಲೇ ನರಮೇಧವು ಇತರ ಮೇಧಗಳಂತೆ ಪ್ರಚಾರದಲ್ಲಿದ್ದಿತೆಂದು ಹೇಳಲಾಗುವುದಿಲ್ಲ. ಶುನಃಶೇಫನ ಬಂಧನವು ಕೇವಲ ಯಾದೃಚ್ಛಿಕವಾದುದು ವರುಣನಿಗೂ, ಹರಿಶ್ಚಂದ್ರನಿಗೂ ನಡೆದ ಸಮಯದ ಫಲವಾಗಿ ಈ ಬಂಧನದಲ್ಲಿ ಪರ್ಯವಸಾನವಾಗುತ್ತದೆ. ಮತ್ತು ಈ ಸಂದರ್ಭದಲ್ಲಿ ನಡೆದ ಘಟನೆಗಳೇ ನರಮೇಧಕ್ಕೆ ಪ್ರತಿಭಟನೆಯನ್ನೂ ತೋರಿಸುತ್ತವೆ. ಯಜ್ಞಯೂಪದಲ್ಲಿ ಬಂಧಿತವಾಗಿದ್ದ ಪಶುವನ್ನು ಛೇದಿಸುವುದಕ್ಕೆ ಋತ್ವಿಕ್ಕುಗಳ ಸಹಾಯವು ಅವಶ್ಯವಾಗಿರುತ್ತದೆ. ಆ ಯಜ್ಞಪ್ರದೇಶಕ್ಕೆ ಸಂಬಂಧಿಸಿದ ಋತ್ವಿಕ್ಕುಗಳಾರೂ ಈ ನೀಚಕಾರ್ಯಕ್ಕೆ ಸಹಾಯ ಮಾಡಲೊಪ್ಪುವುದಿಲ್ಲ. ಅಲ್ಲಿ ಆ ಕಾರ್ಯಕ್ಕೆ ನಿಯತನಾದ ಶಮಿತೃವೂ ಹಿಂಜರಿಯುತ್ತಾನೆ. ನೀಚನೂ, ಮುರಾಸಯುಳ್ಳವನೂ ಆದ ಪಿತೃನೇ ಈ ಕಾರ್ಯಕ್ಕೆ ಮುಂದಬರಿಯುತ್ತಾನೆ. ಅಲ್ಲದೇ, ಇದು ಆರ್ಯನ ಕಾರ್ಯವಲ್ಲ. ಅನಾರ್ಯನ ಕಾರ್ಯವೆಂಬುದೂ ಇದರಿಂದ ವ್ಯಕ್ತವಾಗುತ್ತದೆ. ಬ್ರಾಹ್ಮಣರೆಲ್ಲರೂ ಆರ್ಯರೆಂಬ ಅಭಿಪ್ರಾಯವು ಋಕ್ಸಂಹಿತೆಯಲ್ಲೂ ಇಲ್ಲ. ವೈದಿಕಕರ್ಮರಹಿತರನ್ನೆಲ್ಲಾ ಒಟ್ಟಿಗೆ ಅನಾರ್ಯರೆಂದು ವರ್ಣಿಸಿರುವ ಸಂದರ್ಭವೂ ಹಿಂದೆ ಋಕ್ಸಂಹಿತಾವಾಕ್ಯಗಳಲ್ಲಿ ಅನೇಕ ಕಡೆಗಳಲ್ಲಿ ತಿಳಿಸಿದೆ ಶುನಃಶೇಫನ ಪಿತೃವಿನ ಹೆಸರೂ, ಇವನ ಸಹೋದರರ ಹೆಸರೂ ಈ ಅಂಶವನ್ನು ಸ್ಥಿರಪಡಿಸುತ್ತದೆ. **ಅಜೀಗರ್ತ**ನೆಂದರೆ ನುಂಗಲು ಏನೂ ಇಲ್ಲದವನು ಎಂದರೆ ದಟ್ಟದರಿದ್ರನೆಂದರ್ಥ **ಶುನಃಪುಚ್ಛ** ಇತ್ಯಾದಿ ಹೆಸರುಗಳೂ ಸಹ ಇವನ ನೀಚತ್ವವನ್ನೇ ತೋರಿಸುತ್ತದೆ. ಆದರೆ ಕೇವಲ ದಾರಿದ್ರ್ಯವೇ ಅನಾರ್ಯತ್ವವಲ್ಲ. ಇತರ ವ್ಯವಹಾರಗಳೂ ಇವನ ನೀಚತ್ವವನ್ನು ತೋರಿಸುತ್ತವೆ. ಮತ್ತು ಯಜ್ಞಪಶುವನ್ನು ಛೇದಿಸಲು ನಿಯುಕ್ತರಾದ ಶಮಿತೃಗಳೇ ಈ ಕಾರ್ಯಕ್ಕೆ ಒಪ್ಪದಿರುವಾಗ ಈ ನೀಚನಾದ ಪಿತೃವು ಈ ಕಾರ್ಯಕ್ಕೆ

ಒಪ್ಪಿದುದರಿಂದ ಅವನ ಪಾಪಕಾರ್ಯಕ್ಕೆ ಶಿಕ್ಷಾರೂಪವಾಗಿ ಬಂಧನದಿಂದ ಮುಕ್ತನಾದ ಶುನಃಶೇಫನು ಪುನಃ ಅಜೀಗರ್ತನನ್ನು ಪಿತೃವನ್ನಾಗಿ ಪರಿಗ್ರಹಿಸಲು ತಿರಸ್ಕರಿಸುತ್ತಾನೆ ಮತ್ತು ತಾನು ದಿವ್ಯಸೂಕ್ತಗಳ ದರ್ಶನವನ್ನು ಪಡೆದುದರಿಂದ ತಾನೂ ಋತ್ವಿಕ್ಕಾಗಲು ಅರ್ಹತೆಯನ್ನು ಪಡೆಯುತ್ತಾನೆ ಎಂಬ ಅನೇಕ ಸಂದರ್ಭಗಳು, ನರಮೇಧವು ಎಷ್ಟು ಪಾಪಕಾರ್ಯವೆಂದು ವೈದಿಕ ಮಾರ್ಗಾವಲಂಬಿಗಳು ಭಾವಿಸಿದ್ದರೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ

" ಸ ಹೋವಾಚ ಶುನಶೇಪೋ ಯಮಃ ಸಕೃತ್ಪಾತಕಂ ಕುರ್ಯಾತ್ಕುರ್ಯಾದೇನತ್ತತೋಪರಂ । ನಾಪಗಾಃ ಶೌದ್ರಾನ್ನಾಯಮಾದಸಂಧೇಯಂ ತ್ವಯಾ ಕೃತಮಿತ್ಯಸಂಧೇಯಮಿತಿ ಹ ವಿಶ್ವಾಮಿತ್ರ ಉಪಪಸಾದ ಸ ಹೋವಾಚ ವಿಶ್ವಾಮಿತ್ರೋ ಭೀಮ ಏವ ಸೌಯವಸಿಃ ಶಾಸೇನ ವಿಶಶಾಸಿಷುಃ । ಅಸ್ಥನ್ಮೃತಸ್ಯ ಪುತ್ರೋ ಭೂಃ ....."

(ಐ ಬ್ರಾ ೭-೧೭)

" ಮಗುವೇ, ನಾನು ಹಿಂದೆ ಮಾಡಿದುದು ತಪ್ಪಾಯಿತು ಈ ಪಾಪವನ್ನು ನೀಗಿಸಿಕೊಳ್ಳುತ್ತೇನೆ ಮನೆಗೆ ಬಾ" ಎಂದು ಅಜೀಗರ್ತನು ಹೇಳಿದುದಕ್ಕೆ ಪ್ರತಿಯಾಗಿ ಶುನಃಶೇಫನು " ಒಂದು ಸಲ ಈ ಪಾಪಕೃತ್ಯಕ್ಕೆ ಹೇಸದ ನೀನು ಇಂತಹ ಕೃತ್ಯವನ್ನು ಪುನಃ ಪುನಃ ಮಾಡುವುದಕ್ಕೂ ಹಿಂಜರಿಯುವುದಿಲ್ಲ ನಿನ್ನ ಈ ಕೃತ್ಯಕ್ಕೆ ಪ್ರಾಯಶ್ಚಿತ್ತವೇ ಇಲ್ಲ" ಎನ್ನಲಾಗಿ ವಿಶ್ವಾಮಿತ್ರನೂ ಸಹ " ಇಲ್ಲ, ಇಂತಹ ಕೃತ್ಯಕ್ಕೆ ಪ್ರಾಯಶ್ಚಿತ್ತವೇ ಇಲ್ಲ" ಎಂಬುದಾಗಿ ಸಮರ್ಥಿಸುತ್ತಾನೆ. ಪುನಃ " ನಿನ್ನ ವಧೆಕ್ಕಾಗಿ ಕೈಯನ್ನು ಎತ್ತಿ ಹಿಡಿದಿದ್ದಾಗ ಅಜೀಗರ್ತನು ಭೀಕರಸ್ವರೂಪನಾಗಿದ್ದನು ಪುನಃ ಅವನ ಮಗನಾಗಬೇಡ" ಎಂದುಪದೇಶಿಸುತ್ತಾನೆ.

ಈ ರೀತಿ ಕಥಾಂಗ್ರತವಾದ ಜುಗುಪ್ಸೆಯೇ ಸ್ಪಷ್ಟವಾಗಿರುವಾಗ ಈ ವಿಷಯದಲ್ಲಿ ಬೇರೆ ಆಧಾರವೇ ಬೇಕಾಗಿಲ್ಲ ಈ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ತಿಳಿಸುತ್ತಾ Max Muller ಎಂಬ ಪಂಡಿತನೂ ಸಹ ಈ ರೀತಿ ಹೇಳಿದ್ದಾನೆ .—" It does not necessarily follow from this legend that the Rishis, the authors of the Vedic Hymns offered human sacrifices."

ವೈದಿಕಕಾಲದ ಋಷಿಗಳು ಯಜ್ಞಕಾಲಗಳಲ್ಲಿ ಪುರುಷರೂಪವಾದ ಹವಿಸ್ಸನ್ನು ಅರ್ಪಿಸುತ್ತಿದ್ದರೆಂಬುದನ್ನು ಈ ಸನ್ನಿವೇಶದಿಂದ ಮಾತ್ರವೇ ಹೇಳಲು ಸಾಧ್ಯವೇ ಇಲ್ಲ ಎಂಬುದು ಸ್ಪಷ್ಟವಾಗಿದೆ.

[History of Ancient Sanskrit Literature 1926 Ed. p 221]

Weber ಎಂಬುವನು ಪುರುಷಮೇಧವು ಪ್ರಚಾರದಲ್ಲಿದ್ದಿತು ಎಂದು ತಿಳಿಸಿದ್ದಾನೆ ಆ ಮತವನ್ನು ವಿರೋಧಿಸುತ್ತಾ, Eggling ಎಂಬ ಪಂಡಿತನು—

"This legeud, so far from bearing witness to the existence of human sacrifices as a generally recognised practice"

(Sacred Books of the East, Vol 44, p XXXVI).

ಈ ಸನ್ನಿವೇಶಗಳಿಂದ ಮಾತ್ರವೇ ನರಮೇಧವು ರೂಢಿಯಲ್ಲಿದ್ದಿತು ಎಂದು ಹೇಳುವುದರಲ್ಲಿ ಸ್ವಲ್ಪವೂ ತಿರಳ್ಳಿಲ್ಲ ಎಂದು ಸ್ಪಷ್ಟಪಡಿಸಿದ್ದಾನೆ.

ಆದುದರಿಂದ **ಸಹಸ್ರಾತ್ ಯೂಪಾತ್** ಎಂದು ಇರುವಲ್ಲಿ, ಪ್ರಕೃತವಾದ ಮಂತ್ರದಲ್ಲಿ ಪಾಪರೂಪವಾದ ಬಂಧನವೆಂದರ್ಥಮಾಡಬೇಕು. ಅದರಂತೆಯೇ ತನ್ನನ್ನೂ ಬಂಧನದಿಂದ ಬಿಡಿಸಬೇಕೆಂದು ಅಗ್ನಿಯನ್ನು ಋಷಿಯು ಪ್ರಾರ್ಥಿಸಿದ್ದಾನೆ.

॥ ಸಂಹಿತಾಪಾಠಃ ॥

ಹೃಣೀಯಮಾನೋ ಅಪ ಹಿ ಮದೈಯೇಃ ಪ್ರ ಮೇ ದೇವಾನಾಂ ವ್ರತಪಾ

ಉವಾಚ ।

ಇಂದ್ರೋ ವಿದ್ವಾ ಅನು ಹಿತ್ವಾ ಚಚಕ್ಷ ತೇನಾಹಮಗ್ನೇ ಅನುಶಿಷ್ಟ ಆಗಾಂ॥

॥ ಪದಪಾಠಃ ॥

ಹೃಣೀಯಮಾನಃ । ಅಪ । ಹಿ । ಮತ್ । ಐಯೇಃ । ಪ್ರ । ಮೇ । ದೇವಾನಾಂ । ವ್ರತಪಾಃ । ಉವಾಚ ।

ಇಂದ್ರಃ । ವಿದ್ವಾನ್ । ಅನು । ಹಿ । ತ್ವಾ । ಚಚಕ್ಷ । ತೇನ । ಅಹಂ । ಅಗ್ನೇ । ಅನುಶಿಷ್ಟಃ । ಆ । ಅಗಾಂ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಹೃಣೀಯಮಾನಃ ಕ್ರುಧ್ಯಂಸ್ತ್ವಂ ಮತ್ ಮತ್ತೋಽಪೈಯೇರ್ಹಿ । ಅಪಾಗಾಃ ಖಲು॥ ಈ ಗತಾವಿತ್ಯಸ್ಮಾತ್ ಶ್ಯನ್ವಿಕರಣಾಲ್ಲಙಿ ಮಧ್ಯಮೇ ಛಾಂದಸೇ ಪರಸ್ಮೈಪದ ಆಡಾಗಮೇ ವೃದ್ಧಿ ವ್ಯತ್ಯಯೇನ ಶ್ಯನೋಽಕಾರಸ್ಯ ಏಕಾರೇ ಚ ಕೃತೇ ರೂಪಂ॥ ಮೇ ಮಹ್ಯಂ ದೇವಾನಾಂ ವ್ರತಪಾಃ ಕರ್ಮಣಾಂ ಪಾಲಕ ಇಂದ್ರಃ ಪ್ರೋವಾಚ ಹಿ । ಸ ಏವ ವಿದ್ವಾನ್ ತ್ವಾನು ಚಚಕ್ಷ । ತ್ವಾಂ ದದರ್ಶ । ತೇನಾನುಶಿಷ್ಟೋಽಹಂ ಹೇ ಅಗ್ನೇ ತ್ವಾಮಾಗಾಮಿತಿ । ಏವಂ ವೃಶ ಆಡ ॥

ಪ್ರತಿಪದಾರ್ಥ

ಹೃಣೀಯಮಾನಃ—(ನನ್ನ ಅಪರಾಧಗಳಿಂದ) ಕ್ರುದ್ಧನಾದ ನೀನು । **ಮತ್**—ನನ್ನಿಂದ । **ಅಪ ಐಯೇಃ ಹಿ**—ದೂರವಾಗಿ ಹೊರಟುಹೋದೆಯಲ್ಲವೇ ? । **ದೇವಾನಾಂ**—ದೇವತೆಗಳ । **ವ್ರತಪಾಃ**—ಕರ್ಮ ಪಾಲಕನಾದ । **ಇಂದ್ರಃ**—ಇಂದ್ರನು । **ಮೇ**—ನನಗೆ । **ಪ್ರ ಉವಾಚ**—ಹೇಳಿ ತಿಳಿಸಿದ್ದಾನೆ । **ವಿದ್ವಾನ್**—ನಿನ್ನ ಸ್ವರೂಪವನ್ನು ತಿಳಿದ ಅವನೇ । **ತ್ವಾ**—ನಿನ್ನನ್ನು । **ಅನು ಚಚಕ್ಷ**—ಆರಿಸಿ ನೋಡಿದ್ದಾನೆ । **ತೇನ**—ಆ ಇಂದ್ರನಿಂದ । **ಅನುಶಿಷ್ಟಃ**—ಉಪದಿಷ್ಟನಾದ । **ಅಹಂ**—ನಾನು । **ಅಗ್ನೇ**—ಎಲೈ ಅಗ್ನಿಯೇ । **ಆಗಾಂ**—ನಿನ್ನನ್ನು ಸವಿಾಪಿಸಿ ಬಂದಿದ್ದೇನೆ

॥ ಭಾವಾರ್ಥ ॥

ಎಲೈ ಅಗ್ನಿಯೇ, ನನ್ನ ಅಪರಾಧಗಳಿಂದ ಕ್ರುದ್ಧನಾದ ನೀನು ನನ್ನಿಂದ ದೂರನಾಗಿ ಹೊರಟುಹೋದೆಯಲ್ಲವೇ? ದೇವತೆಗಳ ಕರ್ಮಪಾಲಕನಾದ ಇಂದ್ರನು ನನಗೆ ನಿನ್ನ ವಿಷಯವನ್ನು ಹೇಳಿ ತಿಳಿಸಿದ್ದಾನೆ. ನಿನ್ನ ಸ್ವರೂಪವನ್ನು ತಿಳಿದ ಅವನೇ ನಿನ್ನನ್ನು ಅರಿಸಿ ನೋಡಿದ್ದಾನೆ. ಆ ಇಂದ್ರನಿಂದ ಉಪದಿಷ್ಟನಾದ ನಾನು ನಿನ್ನನ್ನು ಸಮೀಪಿಸಿ ಬಂದಿದ್ದೇನೆ

English Translation

When angered, (Agni), depart from me: the protector of the worship of the gods, (Indra), has spoken to me the wise Indra has looked upon you, and instructed by him, I have come, Agni, to you.

॥ ವಿಶೇಷವಿಷಯಗಳು ॥

೧ ವೃಶನರಾಜನಿಂದ (ತ್ರ್ಯರುಣ) ಅಗ್ನಿಯು ಅಪಗತನಾದುದು

೨ ಪುನಃ ಅಥರ್ವಾಂಗಿರಸಮಂತ್ರವನ್ನು ಪಠಿಸಿ ಅಗ್ನಿಯನ್ನು ಆವಿರ್ಭವಿಸುವಂತೆ ಮಾಡಿದುದು.

೩. ಇದೇ ಅಗ್ನೀಂಧನತಂತ್ರವನ್ನು ಇಂದ್ರನು ಉಪದೇಶಮಾಡಿದುದು ಈ ಮೂರು ಅಂಶಗಳೂ ಸಹ ಈ ಮಂತ್ರದಲ್ಲಿ ಸೂಚಿತವಾಗಿವೆ.

ಹೃಣೀಯಮಾನಃ ಮತ್ತಃ ಅಪ ಐಯೀಃ । ಕ್ರುದ್ಧನಾಗಿ ನನ್ನಿಂದ ದೂರವಾಗಿ ಹೊರಟುಹೋದೆ ಎಂದು ಅಗ್ನಿಯನ್ನು ಸಂಬೋಧಿಸಿದೆ. ಅಗ್ನಿಯ ಹವಿಸ್ಸು ಅಪಗತವಾಗಿ ತ್ರ್ಯರುಣನ ಹವಿರಾದಿಗಳು ಪಕ್ವವಾಗದೇ ಪುನಃ ತ್ರ್ಯರುಣನು ವೃಶನ ಸಹಾಯವನ್ನು ಪಡೆದುದನ್ನು ಹಿಂದೆ ತಿಳಿಸಿದೆ ಮತ್ತು ಅಥರ್ವಾಂಗಿರಸಮಂತ್ರಪಠನದಿಂದ ಮೃತನಾಗಿದ್ದ ಬಾಲಕನನ್ನು ಬದುಕುವಂತೆ ಮಾಡಿದುದೂ ಮತ್ತು ಅಗ್ನಿಯ ಹವಿಸ್ಸನ್ನು ಪುನಃ ಆವಿರ್ಭೂತವಾಗುವಂತೆ ಮಾಡಿದುದೂ ಸಹ ಹಿಂದೆ ತಿಳಿಸಿದೆ ಆದರೆ ಈ ಅಥರ್ವಾಂಗಿರಸಮಂತ್ರವನ್ನು ಇಂದ್ರನು ಉಪದೇಶಮಾಡಿದುದು ಹೇಗೆಂಬುದನ್ನೂ ಸಹ ಹಿಂದೆ ತಿಳಿಸಿದೆ **"ಸ ಹೇಂದ್ರೋಣೋಕ್ತ ಆಸ "** (ಶ ಬ್ರಾ ೧೪-೧-೧-೧೯) ಎಂಬ ಮಂತ್ರವನ್ನುದ್ಧರಿಸಿ (ಋಗ್ವೇದಸಂಹಿತಾ ಭಾಗ ೧೧ ಪುಟ 85) ಇಂದ್ರನಿಂದ ಉಪದಿಷ್ಟವಾದ ಅಥರ್ವಾಂಗಿರಸ ಮಂತ್ರದ ಮಹತ್ವವನ್ನು ತಿಳಿಸಿದೆ ಆದರೆ, ಅಲ್ಲಿ ದಧೀಚಿ ಋಷಿಯ ವೃತ್ತಾಂತವನ್ನು ತಿಳಿಸುವ ಸಂದರ್ಭವಿದೆ. ಪ್ರಕೃತದಲ್ಲಿ ಇಂದ್ರನಿಗೂ ವೃಶನಿಗೂ ಗುರುಶಿಷ್ಯಭಾವವು ಹೇಳಲ್ಪಟ್ಟಿದೆ **ಸೋಽಥರ್ವಾಂಗಿರಸಾನ್ಮಂತ್ರಾನ್ ದೃಷ್ಟ್ವಾ**" ಎಂದಿರುವುದರಿಂದ ಇಲ್ಲಿಯೂ ವೃಶನಿಗೂ ಇಂದ್ರನಿಗೂ ಇರುವ ಗುರುಶಿಷ್ಯಸಂಬಂಧವನ್ನು ಸೂಚಿಸುವುದಾಗಿದೆ. ತ್ರ್ಯರುಣನು ಅತ್ರಿಗೋತ್ರೋತ್ಪನ್ನನು. ಅತ್ರಿಯು ಅಥರ್ವಾಂಗಿರಸನ ವಂಶೋತ್ಪನ್ನನು

"ಆತ್ರೇಯಾದಾತ್ರೇಯೋ ಮಾಂಟೇಃ .... ಆಥರ್ವಣಾದ್ದಧ್ಯಙ್"

(ಬೃ. ಉ. ೨-೬-೩)

ಎಂದು ಬೃಹದಾರಣ್ಯಕದಲ್ಲಿ ಅತ್ರಿವಂಶೋತ್ಪನ್ನರಾದ ಋಷಿಗಳ ಕ್ರಮವಿದೆ. ಆದರೆ, ವೃಶನು ಅಥರ್ವಾಂಗಿರಸನ ಪುತ್ರನಾಗಿರಬಹುದು. ಪ್ರಕೃತದಲ್ಲಿ ವೃಶನು ಅಥರ್ವಾಂಗಿರಸಮಂತ್ರವನ್ನು ದರ್ಶಿಸಿ ಪಠಿಸಿದನು ಎಂದಿದೆ ಆದುದರಿಂದ

ಇಲ್ಲಿ ಸನ್ನಿವೇಶವೇನೆಂಬುದು ನಿಸ್ಸಂದೇಹವಾಗಿ ಹೇಳಲಾಗುವುದಿಲ್ಲ. ಆದರೆ, **'ಅಗ್ನಿರ್ಜಾತೋ ಅಥರ್ವಣಾ'** (೧೦-೨೧-೫) ಇತ್ಯಾದಿ ಮಂತ್ರಗಳು ಅಥರ್ವಾಂಗಿರಸ್ಸಿನ ಪ್ರವೃತ್ತಿಯೇ ಅಗ್ನಿಯ ಪ್ರಥಮಪ್ರಜ್ವಲನಕ್ಕೆ ಕಾರಣವೆಂದು ತಿಳಿಸಿದೆ.

॥ ಸಂಹಿತಾಪಾಠಃ ॥

ವಿ ಜ್ಯೋತಿಷಾ ಬೃಹತಾ ಭಾತ್ಯಗ್ನಿರಾವಿರ್ವಿಶ್ವಾನಿ ಕೃಣುತೇ ಮಹಿತ್ವಾ ।
ಪ್ರಾದೇವೀರ್ಮಾಯಾಃ ಸಹತೇ ದುರೇವಾಃ ಶಿಶೀತೇ ಶೃಂಗೇ ರಕ್ಷಸೇ ವಿನಿಕ್ಷೇ ॥ ೯ ॥

॥ ಪದಪಾಠಃ ॥

ವಿ । ಜ್ಯೋತಿಷಾ । ಬೃಹತಾ । ಭಾತಿ । ಅಗ್ನಿಃ । ಆವಿಃ । ವಿಶ್ವಾನಿ । ಕೃಣುತೇ । ಮಹಿತ್ವಾ ।
ಪ್ರ । ಅದೇವೀಃ । ಮಾಯಾಃ । ಸಹತೇ । ದುಃಎವಾಃ । ಶಿಶೀತೇ । ಶೃಂಗೇ ಇತಿ । ರಕ್ಷಸೇ । ವಿನಿಕ್ಷೇ ॥ ೯ ॥

॥ ಸಾಯಣಭಾಷ್ಯಂ ॥

ಅಯಮಗ್ನಿರ್ಜ್ಯೋತಿಷಾ ತೇಜಸಾ ಬೃಹತಾ ಮಹತಾ ವಿ ಭಾತಿ । ವಿಶೇಷೇಣ ದೀಪ್ಯತೇ । ಅಥ ತಥಾಭೂತಃ ಸನ್ ಮಹಿತ್ವಾ ಸ್ವಮಹತ್ತ್ವೇನ ವಿಶ್ವಾನಿ ಸರ್ವಾಣಿ ಪದಾರ್ಥಜಾತಾನ್ಯಾವಿಷ್ಕೃಣುತೇ । ಪ್ರಕಟೀಕರೋತಿ । ಏವಂ ಪ್ರವೃದ್ಧೋಽಗ್ನಿರದೇವೀರದೇವನಶೀಲಾ ಆಸುರೀರ್ಮಾಯಾ ದುರೇವಾ ದುಃಖಗಮನಾಃ ಪ್ರಸಹತೇ । ಅಭಿಭವತಿ । ಕಿಂಚ ಶಿಶೀತೇ । ತೀಕ್ಷ್ಣೀಕರೋತಿ । ಶೃಂಗೇ ಶೃಂಗಾಣಿ । ಶೃಂಗಸದೃಶೀರ್ಜ್ವಾಲಾ ವಾ ಜ್ವಾಲಾಃ ಶಿಶೀತೇ । ತೀಕ್ಷ್ಣೀಕರೋತಿ । ಕಿಮರ್ಥಂ । ರಕ್ಷಸೇ ವಿನಿಕ್ಷೇ ರಕ್ಷಸೋ ನಾಶಾಯೇ । ನಿಶ್ಯತಿ ಶೃಂಗೇ ರಕ್ಷಸೋ ವಿನಿಕ್ಷಣನಾಯೇ । ನಿ. ೪-೧೮ । ಇತಿ ಯಾಸ್ಕಃ ॥

॥ ಪ್ರತಿಪದಾರ್ಥ ॥

ಅಗ್ನಿಃ—ಅಗ್ನಿಯು । **ಬೃಹತಾ**—ಅತ್ಯಧಿಕವಾದ । **ಜ್ಯೋತಿಷಾ**—ತೇಜಸ್ಸಿನಿಂದ । **ವಿ ಭಾತಿ**—ಪ್ರಕಾಶಿಸುತ್ತಾನೆ । **ಮಹಿತ್ವಾ**—ತನ್ನ ಮಾಹಾತ್ಮ್ಯದಿಂದ । **ವಿಶ್ವಾನಿ**—ಸಮಸ್ತ ಭೂತಗಳನ್ನೂ । **ಆವಿಃ ಕೃಣುತೇ**—ಪ್ರಕಾಶಪಡಿಸುತ್ತಾನೆ । **ಅದೇವೀಃ**—ಆಸುರೀಸ್ವಭಾವವುಳ್ಳವೂ । **ದುರೇವಾಃ**—ದುಃಖಕಾರಕವಾದವೂ ಆದ । **ಮಾಯಾಃ**—ದುಷ್ಟಶಕ್ತಿಗಳನ್ನು । **ಪ್ರ ಸಹತೇ**—ಮೆಟ್ಟಿ ತುಳಿಯುತ್ತಾನೆ । **ಶೃಂಗೇ**—ಶೃಂಗಗಳಂತಿರುವ ತನ್ನ ಜ್ವಾಲೆಗಳನ್ನು । **ರಕ್ಷಸೇ**—ರಾಕ್ಷಸ ಶಕ್ತಿಯ । **ವಿನಿಕ್ಷೇ**—ನಾಶಕ್ಕಾಗಿ । **ಶಿಶೀತೇ**—ತೀಕ್ಷ್ಣವಾಗಿ ಮಾಡಿಕೊಳ್ಳುತ್ತಾನೆ.

। ಭಾವಾರ್ಥ ।

ಅಗ್ನಿಯು ತನ್ನ ಅತ್ಯಧಿಕವಾದ ತೇಜಸ್ಸಿನಿಂದ ಪ್ರಕಾಶಿಸುತ್ತಾನೆ ತನ್ನ ಮಾಹಾತ್ಮ್ಯದಿಂದ ಸಮಸ್ತಭೂತಗಳನ್ನೂ ಪ್ರಕಾಶಪಡಿಸುತ್ತಾನೆ ಆಸುರೀಸ್ವಭಾವವುಳ್ಳವೂ, ದುಃಖಕಾರಕವೂ ಆದ ದುಷ್ಟಶಕ್ತಿಗಳನ್ನು ಮೆಟ್ಟಿತುಳಿಯುತ್ತಾನೆ. ಶೃಂಗಗಳಂತಿರುವ ತನ್ನ ಜ್ವಾಲೆಗಳನ್ನು ರಾಕ್ಷಸಶಕ್ತಿಯ ನಾಶಕ್ಕಾಗಿ ತೀಕ್ಷ್ಣವಾಗಿ ಮಾಡಿಕೊಳ್ಳುತ್ತಾನೆ.

English Translation.

Agni shines with great and varied radiance, he makes all things manifest by his might; he overcomes undivine malignant delusions, he sharpens his horns for the destruction of the Rakshasas.

। ಸಂಹಿತಾಪಾಠಃ ।

ಉತ ಸ್ವಾನಾಸೋ ದಿವಿ ಷಂತ್ವಗ್ನೇಸ್ತಿಗ್ಮಾಯುಧಾ ರಕ್ಷಸೇ ಹಂತವಾ ಉ ।
ಮದೇ ಚಿದಸ್ಯ ಪ್ರ ರುಜಂತಿ ಭಾಮಾ ನ ವರಂತೇ ಪರಿಬಾಧೋ ಅದೇವೀಃ ॥

। ಪದಪಾಠಃ ॥

ಉತ । ಸ್ವಾನಾಸಃ । ದಿವಿ । ಸಂತು । ಅಗ್ನೇಃ । ತಿಗ್ಮಾಯುಧಾಃ । ರಕ್ಷಸೇ । ಹಂತವೈ । ಊಂ ಇತಿ ।
ಮದೇ । ಚಿತ್ । ಅಸ್ಯ । ಪ್ರ । ರುಜಂತಿ । ಭಾಮಾಃ । ನ । ವರಂತೇ । ಪರಿಬಾಧಃ । ಅದೇವೀಃ ॥ ೧೦ ॥

। ಸಾಯಣಭಾಷ್ಯಂ ।

ಉತಾಪಿ ಚಾಗ್ನೇಃ ಸ್ವಾನಾಸಃ ಶಬ್ದಂ ಕುರ್ವಾಣಾ ಜ್ವಾಲಾ ದಿವಿ ಷಂತು। ದ್ಯುಲೋಕೇ ಪ್ರಾದುರ್ಭವಂತು । ಕಿಮರ್ಥಂ । ತಿಗ್ಮಾಯುಧಾಸ್ತೀಕ್ಷ್ಣಾಯುಧಸ್ಥಾನೀಯಾ ಜ್ವಾಲಾಃ। ರಕ್ಷಸೇ ಹಂತವಾ ಉ ರಕ್ಷಸೋ ಹನನಾಯ । ಉ ಇತಿ ಪೂರಣಃ । ಮದೇ ಚಿತ್ ಹರ್ಷೇ ಸತ್ಯಸ್ಯಾಗ್ನೇರ್ಭಾಮಾಃ ಕ್ರೋಧಾದೀಪ್ತಯೋ ವಾ ಪ್ರ ರುಜಂತಿ । ಪ್ರಕರ್ಷೇಣ ಭಂಗಂ ಗಚ್ಛಂತಿ ಪೀಡಯಂತಿ ವಾ ರಕ್ಷಾಂಸಿ । ಪರಿಬಾಧಃ ಪರಿತೋ ಬಾಧಿಕಾ ಅದೇವೀರದೇವನಾ ಅಸುರ್ಯಃ ಸೇನಾ ನ ವರಂತೇ । ನ ವಾರಯಂತ್ಯೇನಂ ॥

। ಪ್ರತಿಪದಾರ್ಥ ।

ಉತ—ಮತ್ತು । ಅಗ್ನೇಃ—ಅಗ್ನಿಯ । ಸ್ವಾನಾಸಃ—ಶಬ್ದಮಾಡತಕ್ಕವೂ । ತಿಗ್ಮಾಯುಧಾಃ—ತೀಕ್ಷ್ಣವಾದ ಆಯುಧದಂತೆ ನಾಶಕಾರಕವೂ ಆದ ಜ್ವಾಲೆಗಳು । ರಕ್ಷಸೇ—ರಾಕ್ಷಸ ಶಕ್ತಿಯ । ಹನ್ತವಾ ಉ—

ನಾಶಕ್ಯಾಗಿಯೇ। **ದಿವಿ**—ದ್ಯುಲೋಕದಲ್ಲಿ। **ಷಂತು**—ಪ್ರಾದುರ್ಭೂತವಾಗಲಿ। **ಮದೇ ಚಿತ್**—ಹರ್ಷವುಂಟಾದಾಗ। **ಅಸ್ಯ**—ಈ ಅಗ್ನಿಯ। **ಭಾಮಾಃ**—ಪ್ರಭೆಗಳು। **ಪ್ರ ರುಜಂತಿ**—(ಅಸುರರನ್ನು) ಪೂರ್ಣವಾಗಿ ಹಿಂಸಿಸುತ್ತವೆ। **ಪರಿಬಾಧಃ**—ಸುತ್ತಲೂ ಬಾಧೆಯನ್ನಪೇಕ್ಷಿಸುವವರೂ। **ಅದೇವೀಃ**—ಅಸುರೀ ಸ್ವರೂಪವುಳ್ಳವರೂ ಆದ ಶತ್ರುಗಳು। **ನ ವರಂತೇ**—(ಅಗ್ನಿಯ ಈ ರಶ್ಮಿಗಳನ್ನು) ತಡೆಯಲಾರರು

॥ ಭಾವಾರ್ಥ ॥

ಶಬ್ದಮಾಡತಕ್ಕವೂ, ತೀಕ್ಷ್ಣವಾದ ಆಯುಧದಂತೆ ನಾಶಕಾರಕವೂ ಆದ ಅಗ್ನಿಯ ಜ್ವಾಲೆಗಳು ರಾಕ್ಷಸ ಶಕ್ತಿಯ ನಾಶಕ್ಯಾಗಿ ದ್ಯುಲೋಕದಲ್ಲಿ ಪ್ರಾದುರ್ಭೂತವಾಗಲಿ ಈ ಅಗ್ನಿಯ ಪ್ರಭೆಗಳು ತಮಗೆ ಹರ್ಷವುಂಟಾದಾಗ ಅಸುರರನ್ನು ಪೂರ್ಣವಾಗಿ ಹಿಂಸಿಸುತ್ತವೆ. ಸುತ್ತಲೂ ಬಾಧೆಯನ್ನುಂಟುಮಾಡಲು ಕಾದಿರುವವರೂ, ಅಸುರೀಸ್ವರೂಪವುಳ್ಳವರೂ ಆದ ಶತ್ರುಗಳು ಅಗ್ನಿಯ ಈ ರಶ್ಮಿಗಳನ್ನು ತಡೆಯಲಾರರು.

English Translation.

May your roaring (flames), Agni, be manifest in the sky as sharp weapons wherewith to slay the Rakshasas . in his exhilaration his shining (rays) inflict (destruction), and undivine opposing (hosts) arrest him not

॥ ಸಂಹಿತಾಪಾಠಃ ॥

ಏತಂ ತೇ ಸ್ತೋಮಂ ತುವಿಜಾತ ವಿಪ್ರೋ ರಥಂ ನ ಧೀರಃ ಸ್ವಪಾ ಅತಕ್ಷಂ।
ಯದೀದಗ್ನೇ ಪ್ರತಿ ತ್ವಂ ದೇವ ಹರ್ಯಾಃ ಸ್ವರ್ವತೀರಪ ಏನಾ ಜಯೇಮ॥

॥ ಪದಪಾಠಃ ॥

ಏತಂ। ತೇ। ಸ್ತೋಮಂ। ತುವಿಽಜಾತ। ವಿಪ್ರಃ। ರಥಂ। ನ। ಧೀರಃ। ಸುಽಅಪಾಃ। ಅತಕ್ಷಂ।
ಯದಿ। ಇತ್। ಅಗ್ನೇ। ಪ್ರತಿ। ತ್ವಂ। ದೇವ। ಹರ್ಯಾಃ। ಸ್ವಃಽವತೀಃ। ಅಪಃ। ಏನ। ಜಯೇಮ ॥೧೧॥

॥ ಸಾಯಣಭಾಷ್ಯಂ ॥

ಹೇ ತುವಿಜಾತ ಬಹುಭಾವಮಾಪನ್ನಾಗ್ನೇ ತೇ ತ್ವದರ್ಥಮೇತಂ ಸ್ತೋಮಮೇತಸ್ತೋತ್ರಂ ವಿಪ್ರೋ ಮೇಧಾವೀ ಸ್ತೋತಾ ರಥಂ ನ ರಥವಿವ ಧೀರಃ ಸ್ವಪಾಃ ಶೋಭನಕರ್ಮಾಹಮತಕ್ಷಂ। ಸಮಪಾದಯಂ। ಹೇ ಅಗ್ನೇ ದೇವ ತ್ವಂ ಯದೀದೇನಂ ಸ್ತೋಮಂ ಪ್ರತಿ ಹರ್ಯಾಃ। ಪ್ರತಿಕಾಮಯೇಥಾಃ। ತರ್ಹಿ ಸ್ವರ್ವತೋಃ ಸ್ವರಣವತೀರ್ವ್ಯಾಪ್ತಿಮತೀರಪ ಏನೈನೇನ ಜಯೇಮ। ಪ್ರಾಪ್ನುಯಾಮ ॥

॥ ಪ್ರತಿಪದಾರ್ಥ ॥

ತುವಿಜಾತೇ—ನಾನಾರೂಪಗಳಿಂದ ಆವಿರ್ಭೂತನಾಗುವ ಎಲೈ ಅಗ್ನಿಯೇ। **ವಿಪ್ರೇಃ**—ಮೇಧಾವಿಯೂ। **ಧೀರಃ**—ಶ್ರೇಷ್ಠವಾದ ಬುದ್ಧಿಯುಳ್ಳವನೂ। **ಸ್ವಪಾಃ**—ಉತ್ತಮವಾದ ಕರ್ಮವುಳ್ಳವನೂ ಆದ ನಾನು। **ತೇ**—ನಿನ್ನನ್ನುದ್ದೇಶಿಸಿ। **ಏತಂ ಸ್ತೋಮಂ**—ಈ ಸ್ತುತಿಯನ್ನು। **ರಥಂ ನ**—(ಕುಶಲತೆಯಿಂದ) ರಥವನ್ನು ನಿರ್ಮಿಸುವಂತೆ। **ಅತಕ್ಷಂ**—ನಿರ್ಮಿಸಿದ್ದೇನೆ। **ದೇವ**—ದೇವತಾತ್ಮನಾದ। **ಅಗ್ನೇ**—ಎಲೈ ಅಗ್ನಿಯೇ। **ತ್ವಂ**—ನೀನು। **ಯದೀತ್**—ಈ ಸ್ತೋತ್ರವನ್ನು। **ಪ್ರತಿ ಹರ್ಯಾಃ**—ಅನುಗ್ರಹಿಸಿ ಸ್ವೀಕರಿಸು। **ಏನಾ**—ಈ ಸ್ತುತಿಯ ಮಹಿಮೆಯಿಂದ। **ಸ್ವರ್ವತೀಃ**—ಸರ್ವತ್ರ ವ್ಯಾಪಿಸತಕ್ಕ। **ಅಪಃ**—ಉದಕಗಳನ್ನು। **ಜಯೇಮ**—ನಾವು ಹೊಂದುವಂತಾಗಲಿ.

॥ ಭಾವಾರ್ಥ ॥

ನಾನಾರೂಪಗಳಿಂದ ಆವಿರ್ಭೂತನಾಗುವ ಎಲೈ ಅಗ್ನಿಯೇ, ಮೇಧಾವಿಯೂ, ಶ್ರೇಷ್ಠವಾದ ಬುದ್ಧಿಯುಳ್ಳವನೂ, ಉತ್ತಮವಾದ ಕರ್ಮವುಳ್ಳವನೂ ಆದ ನಾನು ನಿನ್ನನ್ನುದ್ದೇಶಿಸಿ ಕುಶಲತೆಯಿಂದ ರಥವನ್ನು ನಿರ್ಮಿಸುವಂತೆ ಈ ಸ್ತುತಿಯನ್ನು ನಿರ್ಮಿಸಿದ್ದೇನೆ ದೇವತಾತ್ಮನಾದ ಎಲೈ ಅಗ್ನಿಯೇ, ಈ ಸ್ತೋತ್ರವನ್ನು ನೀನು ಅನುಗ್ರಹಿಸಿ ಸ್ವೀಕರಿಸು. ಈ ಸ್ತುತಿಯ ಮಹಿಮೆಯಿಂದ ಸರ್ವತ್ರ ವ್ಯಾಪಿಸಿ ಪ್ರವಹಿಸತಕ್ಕ ಉದಕಗಳನ್ನು ನಾವು ಪಡೆಯುವಂತಾಗಲಿ.

English Translation.

This praise have I, a devout worshipper, composed for your, (Agni), who are born with many (faculties), as a steady dexterous (artisan fabricates) a car: if, divine Agni, you approve of it, then may we obtain abundant flowing water.

॥ ಸಂಹಿತಾಪಾಠಃ ॥

ತುವಿಗ್ರೀವೋ ವೃಷಭೋ ವಾವೃಧಾನೋಶತ್ರುಗಿರ್ಯಃ ಸಮಜಾತಿ ವೇದಃ।
ಇತೀಮಮಗ್ನಿಮಮೃತಾ ಅವೋಚನ್ಬರ್ಹಿಷ್ಮತೇ ಮನವೇ ಶರ್ಮ ಯಂ-
ಸದ್ಧವಿಷ್ಮತೇ ಮನವೇ ಶರ್ಮ ಯಂಸತ್ ॥ ೧೭ ॥

॥ ಪದಪಾಠಃ ॥

ತುವಿಗ್ರೀವಃ । ವೃಷಭಃ । ವವೃಧಾನಃ । ಅಶತ್ರುಃ । ಅರ್ಯಃ । ಸಂ । ಅಜಾತಿ । ವೇದಃ ।

ಇತಿ । ಇಮಂ । ಅಗ್ನಿಂ । ಅಮೃತಾಃ । ಅವೋಚನ್ । ಬರ್ಹಿಷ್ಮತೇ । ಮನವೇ । ಶರ್ಮ । ಯಂಸತ್ ।

ಹವಿಷ್ಮತೇ । ಮನವೇ । ಶರ್ಮ । ಯಂಸತ್ ॥ ೧೨ ॥

॥ ಸಾಯಣಭಾಷ್ಯಂ ॥

ತುವಿಗ್ರೀವೋ ಬಹುಜ್ವಾಲಃ ಪ್ರಭೂತಗ್ರೀವೋ ವಾ ವೃಷಭೋ ವರ್ಷಿತಾ ಕಾಮಾನಾಂ ವವೃಧಾನೋ ವರ್ಧಮಾನೋಽಗ್ನಿರರ್ಯೋಽರೇರ್ವೀದೋ ಧನಮಶತ್ರ್ವಕಂಟಕಂ ಸಮಜಾತಿ । ಸಂಯೋಜಯತಿ । ಇತೀಮಮರ್ಥಮಗ್ನಿಮಮೃತಾ ಅನ್ಯೇ ದೇವಾ ಅವೋಚನ್ । ಯಸ್ಮಾದೇವಂ ತಸ್ಮಾದ್ಬರ್ಹಿಷ್ಮತೇ ಯಾಗವತೇ ಮನವೇ ಮನುಷ್ಯಾಯ ಯಜಮಾನಾಯ ಶರ್ಮ ಸುಖಂ ಯಂಸತ್ । ಯಚ್ಛತು । ಹವಿಷ್ಮತೇ ಚ ಶರ್ಮ ಯಂಸತ್ ॥

॥ ಪ್ರತಿಪದಾರ್ಥ ॥

ತುವಿಗ್ರೀವಃ—ಕತ್ತುಗಳಂತಿರುವ ಅನೇಕ ಜ್ವಾಲೆಗಳುಳ್ಳವನೂ । **ವೃಷಭಃ**—ಕಾಮವರ್ಷಕನೂ । **ವವೃಧಾನಃ**—ವೃದ್ಧಿಯನ್ನು ಹೊಂದುವವನೂ ಆದ ಅಗ್ನಿಯು । **ಅರ್ಯಃ**—ಶತ್ರುವಿನ । **ವೇದಃ**—ಧನವನ್ನು । **ಅಶತ್ರು**—ವಿರೋಧರಹಿತನಾಗಿ । **ಸಮಜಾತಿ**—ಶೇಖರಿಸುತ್ತಾನೆ । **ಇತೀಮಂ**—ಇಂತಹ ಸಂಪದ್ಯುಕ್ತನಾದ । **ಅಗ್ನಿಂ**—ಅಗ್ನಿಯನ್ನು । **ಅಮೃತಾಃ**—(ಇತರ) ದೇವತೆಗಳೆಲ್ಲಾ । **ಅವೋಚನ್**—ಪ್ರಶಂಸಿಸುತ್ತಾರೆ (ಈ ಪ್ರಶಂಸೆಯ ಪ್ರಭಾವದಿಂದಲೇ) । **ಬರ್ಹಿಷ್ಮತೇ**—ಯಜ್ಞವಂತನಾದ । **ಮನವೇ**—ಯಜಮಾನನಿಗೆ । **ಶರ್ಮ**—ಸುಖವನ್ನು । **ಯಂಸತ್**—ಕೊಡಲಿ । **ಹವಿಷ್ಮತೇ ಮನವೇ**—ಹವಿಸ್ಸನ್ನರ್ಪಿಸುವ ಯಜಮಾನನಿಗೆ । **ಶರ್ಮ**—ಸುಖವನ್ನು । **ಯಂಸತ್**—ಕೊಡಲಿ

॥ ಭಾವಾರ್ಥ ॥

ಕತ್ತಿನ ರೂಪದಲ್ಲಿರುವ ಅನೇಕ ಜ್ವಾಲೆಗಳುಳ್ಳವನೂ, ಕಾಮವರ್ಷಕನೂ, ವೃದ್ಧಿಯನ್ನು ಹೊಂದುವವನೂ ಆದ ಅಗ್ನಿಯು ಶತ್ರುವಿನ ಧನವನ್ನು ಯಾವ ವಿರೋಧವೂ ಇಲ್ಲದೇ ಶೇಖರಿಸುತ್ತಾನೆ. ಇಂತಹ ಸಂಪದ್ಯುಕ್ತನಾದ ಅಗ್ನಿಯನ್ನು ಇತರ ದೇವತೆಗಳೆಲ್ಲಾ ಪ್ರಶಂಸಿಸುತ್ತಾರೆ ಈ ಪ್ರಶಂಸೆಯ ಪ್ರಭಾವದಿಂದ, ಯಜ್ಞವಂತನಾದವನೂ, ಹವಿಸ್ಸನ್ನರ್ಪಿಸುವವನೂ ಆದ ಯಜಮಾನನಿಗೆ ಅಗ್ನಿಯು ಸುಖವನ್ನುಂಟುಮಾಡಲಿ.

English Translation.

The many-necked, the showerer (of benefits), ever increasing, collects together the wealth of the enemy without opposition: the immortals have enjoined Agni that he will bestow happiness on the man who offers sacrifice, that he will bestow happiness on the man who offers oblations.

ಮೂರನೆಯ ಸೂಕ್ತವು

॥ ಸಾಯಣಭಾಷ್ಯಂ ॥

ತ್ವಮಗ್ನೇ ವರುಣ ಇತಿ ದ್ವಾದಶರ್ಚಂ ತೃತೀಯಂ ಸೂಕ್ತಮಾತ್ರೇಯಸ್ಯ ವಸುಶ್ರುತಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ । ತ್ವಮಗ್ನೇ ವಸುಶ್ರುತ ಇತ್ಯನುಕ್ರಾಂತಂ ॥ ಪ್ರಾತರನುವಾಕಾಶ್ವಿನಶಸ್ತ್ರಯೋರ್ವಿನಿಯೋಗೋಽಬೋಧ್ಯಗ್ನಿರಿತ್ಯುಕ್ತಃ ॥

ಅನುವಾದವು—**ತ್ವಮಗ್ನೇ ವರುಣಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು. ಈ ಸೂಕ್ತಕ್ಕೆ ಆತ್ರಿಗೋತ್ರೋದ್ಭವನಾದ ವಸುಶ್ರುತನೆಂಬುವನು ಋಷಿಯು, ಅಗ್ನಿಯು ದೇವತೆಯು, ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ **ತ್ವಮಗ್ನೇ ವಸುಶ್ರುತಃ** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಪರನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು **ಅಬೋಧ್ಯಗ್ನಿಃ** ಎಂಬ ಸೂಕ್ತದ (ಈ ಮಂಡಲದ ಮೊದಲನೆಯ ಸೂಕ್ತದ) ವಿನಿಯೋಗದಲ್ಲಿಯೇ ಹೇಳಿರುವುದು.

ಸೂಕ್ತ—೩

ಮಂಡಲ—೫ ॥ ಅನುವಾಕ—೧ ॥ ಸೂಕ್ತ—೩ ॥
ಅಷ್ಟಕ—೩ ॥ ಅಧ್ಯಾಯ—೮ ॥ ವರ್ಗ—೧೬, ೧೭ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥
॥ ಋಷಿಃ— ವಸುಶ್ರುತ ಆತ್ರೇಯಃ ॥
॥ ದೇವತಾ—ಅಗ್ನಿಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ತ್ವಮ॑ಗ್ನೇ ವರು॑ಣೋ॒ ಜಾಯ॑ಸೇ॒ ಯತ್ತ್ವಂ ಮಿ॒ತ್ರೋ ಭವ॑ಸಿ॒ ಯತ್ಸ॒ಮಿ॑ದ್ಧಃ।
ತ್ವೇ ವಿಶ್ವೇ॑ ಸಹಸಸ್ಪು॒ತ್ರ ದೇ॒ವಾಸ್ತ್ವಮಿಂ॑ದ್ರೋ॒ ದಾ॒ಶುಷೇ॒ ಮರ್ತ್ಯಾ॑ಯ ॥

॥ ಪದಪಾಠಃ ॥

ತ್ವಂ । অ॒ಗ್ನೇ॒ । ವರು॑ಣಃ । ಜಾಯ॑ಸೇ । ಯತ್ । ತ್ವಂ । ಮಿ॒ತ್ರಃ । ಭವ॑ಸಿ । ಯತ್ । ಸಂ॒ಇ॑ದ್ಧಃ ।
ತ್ವೇ ಇತಿ॑ । ವಿಶ್ವೇ॑ । ಸ॒ಹ॒ಸಃ॒ । ಪು॒ತ್ರ॒ । ದೇ॒ವಾಃ । ತ್ವಂ । ಇಂ॒ದ್ರಃ॒ । ದಾ॒ಶುಷೇ॑ । ಮರ್ತ್ಯಾ॑ಯ ॥ ೧ ॥

। ಸಾಯಣಭಾಷ್ಯಂ ।

ಹೇ ಅಗ್ನೇ ತ್ವಂ ವರುಣಸ್ತಮಸಾಂ ವಾರಕೋ ರಾತ್ರ್ಯಭಿಮಾನೀ ದೇವೋಽಪಿ ತ್ವಮೇವ ಯದ್ಯದಾ ಜಾಯಸೇ । ಕಿಂಚ ಕ್ವಂ ಮಿತ್ರೋಽಹರಭಿಮಾನೀ ದೇವಃ ಪ್ರಮಿತೇಸ್ತ್ರಾತಾ ಯದ್ಯದಾ ಸಮಿದ್ಧಃ । ತ್ವಮುತ್ಪನ್ನಮಾತ್ರಃ ಸನ್ ತಮೋ ನಿವಾರಯಸಿ ಪ್ರವೃದ್ಧಃ ಸನ್ ಹಿತಕಾರೀ ಭವಸೀತ್ಯರ್ಥಃ। ತ್ವೇ ತ್ವಯಿ ವಿಶ್ವೇ ಸರ್ವೇಽಪಿ ದೇವಾ ವರ್ತಂತೇ । ತ್ವದ್ಭತ್ತ್ಯೇನ ಹವಿಷಾ ತೇಷಾಂ ಜೀವನಾತ್ । ತೇ ದೇವಾ ಬಿಭ್ಯತೋಽಗ್ನಿಂ ಹ್ಯಾವಿಶನ್ನಿತಿ ಹಿ ಶ್ರುತೇಃ। ಹೇ ಸಹಸಸ್ಪುತ್ರ ಬಲೇನ ಮಥ್ಯಮಾನತ್ವಾತ್ । ಕಿಂಚ ತ್ವಮಿಂದ್ರಃ ಸ್ವಾಮಿ ದಾಶುಷೇ ಹವಿರ್ದಾತ್ರೇ ಮರ್ತ್ಯಾಯ ಯಜಮಾನಾಯ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ತ್ವಂ**—ನೀನು । **ಯತ್**—ಯಾವಾಗ । **ಜಾಯಸೇ**—ಉತ್ಪನ್ನನಾಗುತ್ತೀಯೋ (ಆಗ) । **ವರುಣಃ**—ವರುಣರೂಪನು । **ಯತ್**—ಯಾವಾಗ । **ಸಮಿದ್ಧಃ**—ಪ್ರಜ್ವಲಿತನಾಗುವೆಯೋ (ಆಗ) । **ತ್ವಂ**—ನೀನು । **ಮಿತ್ರಃ ಭವಸಿ**—ಮಿತ್ರರೂಪನೂ ಆಗುತ್ತೀಯೆ । **ತ್ವೇ**—ನಿನ್ನಲ್ಲಿ । **ವಿಶ್ವೇ**—ಸಮಸ್ತವಾದ । **ದೇವಾ**—ದೇವತೆಗಳೂ (ಅಂತರ್ಗತರಾಗಿದಾರೆ) । **ಸಹಸಸ್ಪುತ್ರ**—ಶಕ್ತಿಪುತ್ರನಾದ ಎಲೈ ಅಗ್ನಿಯೇ । **ತ್ವಂ**—ನೀನು । **ದಾಶುಷೇ**—ಹವಿಸ್ಸನ್ನರ್ಪಿಸುವ । **ಮರ್ತ್ಯಾಯ**—ಮಾನವನಿಗೆ । **ಇಂದ್ರಃ**—ಇಂದ್ರ (ಸ್ವಾಮಿ) ರೂಪನಾಗಿದ್ದೀಯೆ ।

। ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಉತ್ಪನ್ನನಾಗುವ ಕಾಲದಲ್ಲಿ ವರುಣರೂಪನು ನಂತರ ಪ್ರಜ್ವಲಿತನಾದಾಗ ಮಿತ್ರರೂಪನು. ನಿನ್ನಲ್ಲೇ ಸಮಸ್ತ ದೇವತೆಗಳೂ ಅಂತರ್ಗತರಾಗಿದ್ದಾರೆ. ಶಕ್ತಿಪುತ್ರನಾದ ಎಲೈ ಅಗ್ನಿಯೇ, ನೀನು ಹವಿಸ್ಸನ್ನರ್ಪಿಸುವ ಮಾನವನ ಭಾಗಕ್ಕೆ ಇಂದ್ರರೂಪನಾಗಿದ್ದೀಯೆ

English Translation.

You, Agni, are born Varuna, you become Mitra when kindled : in you, son of strength, are all the gods : you are Indra, son of strength, to the mortal who presents (oblations)

ಈ ಸೂಕ್ತಕ್ಕೂ ಮುಂದಿನ ಮೂರು ಸೂಕ್ತಗಳಿಗೂ (ಈ ಮಂಡಲದ ೩, ೪, ೫, ೬ನೇ ಸೂಕ್ತಗಳು) ವಸುಶ್ರುತನೆಂಬುವನು ಋಷಿಯು. ಈ ವಸುಶ್ರುತನು ಆತ್ರೇಯಗೋತ್ರೋದ್ಭವನು ಎಂಬ ವಿಷಯವಲ್ಲದೆ ಮತ್ತೆ ಬೇರೆ ಯಾವವಿಷಯವೂ ತಿಳಿಯಲವಕಾಶವಿಲ್ಲ.

ಈ ಸೂಕ್ತದ ಈ ಋಕ್ಕಿನಲ್ಲಿಯೂ ಮುಂದಿನ ಕೆಲವು ಋಕ್ಕುಗಳಲ್ಲಿಯೂ ಅಗ್ನಿಯನ್ನು ಇತರ ದೇವತಾ ಸ್ವರೂಪನೆಂದು ವರ್ಣಿಸಿ ಸ್ತುತಿಸಲಾಗಿದೆ. ಮತ್ತು ಅಗ್ನಿಯಲ್ಲಿ ಹೋಮಮಾಡುವ ಹವಿಸ್ಸುಗಳನ್ನು ಎಲ್ಲಾ ದೇವತೆಗಳೂ

ಅಗ್ನಿಮುಖವಾಗಿಯೇ ಸ್ವೀಕರಿಸುವುದರಿಂದ ಅಗ್ನಿಯು ಸರ್ವದೇವತಾ ಸ್ವರೂಪನೆಂದು ಹೇಳಲ್ಪಡುವನು ಈ ವಿಷಯ ಸಮರ್ಥನೆಗಾಗಿ ಭಾಷ್ಯಕಾರರು—

ದೇವಾಸುರಾಃ ಸಂಯತ್ತಾ ಆಸನ್ತೇ ದೇವಾ ಬಿಭ್ಯತೋಽಗ್ನಿಂ ಪ್ರಾವಿಶನ್ತ್ಸಾದಾಹುರಗ್ನಿಃ ಸರ್ವಾ ದೇವತಾ ಇತಿ ತೇಽಗ್ನಿಮೇವ ವರೂಥಂ ಕೃತ್ವಾಸುರಾನಭ್ಯಭವನ್ ।

(ತೈ ಸಂ. ೬-೨-೨-೬, ೭)

ಎಂಬ ತೈತ್ತಿರೀಯ ಸಂಹಿತಾವಾಕ್ಯವನ್ನು ಉದಾಹರಿಸಿದ್ದಾರೆ ಎಂದರೆ ಪೂರ್ವದಲ್ಲಿ ದೇವತೆಗಳು ಅಸುರರೂ ಯುದ್ಧಸನ್ನದ್ಧರಾದರು ಆಗ ಅಸುರರ ಬಲವು ಹೆಚ್ಚಾಗಿದ್ದುದನ್ನು ಕಂಡು ದೇವತೆಗಳಿಗೆ ಭಯವುಂಟಾಯಿತು ಆದಕ್ಕಾಗಿ ದೇವತೆಗಳು ಅಗ್ನಿಯೇ ತಮ್ಮನ್ನು ರಕ್ಷಿಸಬೇಕೆಂದು ಅವನ ಮರೆಹೊಕ್ಕರು ಅವನಲ್ಲಿ (ಅಗ್ನಿಯಲ್ಲಿ) ಪ್ರವೇಶ ಮಾಡಿ ಐಕ್ಯರಾಗಿಬಿಟ್ಟರು ಅನಂತರ ಅಗ್ನಿಯು ರಕ್ಷಣೆಯಿಂದ ದೇವತೆಗಳು ಅಸುರರನ್ನು ಜಯಿಸಲು ಸಾಧ್ಯವಾಯಿತು ಎಂದು ಹೇಳಿದೆ ಇದೇ ಮೊದಲಾದ ಕಾರಣಗಳಿಂದ ಅಗ್ನಿಯಲ್ಲಿ ಸಮಸ್ತ ದೇವತೆಗಳೂ ನೆಲಸಿರುವರೆಂದೂ ಅಗ್ನಿಯು ಸರ್ವದೇವತಾತ್ಮಕನೆಂದೂ ಪ್ರಸಿದ್ಧಿಯು

ವರುಣಃ ಮಿತ್ರಃ—ಮಿತ್ರನು ಅಹಸ್ಸಿಗೆ (ಹಗಲಿಗೆ) ಅಭಿಮಾನಿ ದೇವತೆಯೆಂದೂ, ವರುಣನು ರಾತ್ರ್ಯಭಿಮಾನಿ ದೇವತೆಯೆಂದೂ—**ಮೈತ್ರ್ಯಂ ವಾ ಅಹಃ । ವಾರುಣೀ ರಾತ್ರಿಃ** ಎಂಬ ಶ್ರುತಿವಾಕ್ಯವು ಸಾರುವುದು ಅಗ್ನಿಯ ಪ್ರಕಾಶವು ರಾತ್ರಿಕಾಲದಲ್ಲಿಯೇ ಹೆಚ್ಚಾಗಿ ಪ್ರಕಾಶಿಸುವುದರಿಂದಲೂ ಅಗ್ನಿಯು ತನ್ನ ಪ್ರಕಾಶದಿಂದ ಕತ್ತಲನ್ನು ನಿವಾರಣೆ ಮಾಡಿ ಬೆಳಕನ್ನು ಉಂಟುಮಾಡುವುದರಿಂದಲೂ ಅಗ್ನಿಯನ್ನು ವರುಣ, ಮಿತ್ರ ಎಂಬ ದೇವತೆಗಳೆಂದು ಸ್ತುತಿಸಲಾಗಿದೆ.

ಸಹಸಃ ಪುತ್ರ—ಶಕ್ತಿಯ ಪುತ್ರನೆಂದು ಅಗ್ನಿಯನ್ನು ಸಂಬೋಧಿಸಲಾಗಿದೆ ಯಜ್ಞಾದಿಗಳಲ್ಲಿ ಅಗ್ನಿಯನ್ನು ಅರಣಿಗಳಲ್ಲಿ (ಮುರವ ತುಂಡುಗಳಲ್ಲಿ) ಮಥಿಸಿ ಉತ್ಪನ್ನಮಾಡುವಾಗ ಅಗ್ನಿಮಥನಕ್ಕಾಗಿ ಹೆಚ್ಚಾಗಿ ಶಕ್ತಿಯನ್ನು ಉಪಯೋಗಿಸಬೇಕಾಗಿರುವುದರಿಂದ ಅಗ್ನಿಯು ಶಕ್ತಿ (ಬಲ) ಇಂದ ಉತ್ಪನ್ನವಾಗುವನು ಆದ್ದರಿಂದ ಅಗ್ನಿಯು ಶಕ್ತಿಯ (ಬಲದ) ಪುತ್ರನು ಎಂದು ಹೇಳುವುದು ರೂಢಿಯಾಗಿದೆ

॥ ಸಂಹಿತಾಪಾಠಃ ॥

ತ್ವಮ್ಅರ್ಯಮಾ ಭವಸಿ ಯತ್ಕನೀನಾಂ ನಾಮ ಸ್ವಧಾವನ್ಗುಹ್ಯಂ ಬಿಭರ್ಷಿ ।
ಅಂಜಂತಿ ಮಿತ್ರಂ ಸುಧಿತಂ ನ ಗೋಭಿರ್ಯದ್ದಂಪತೀ ಸಮನಸಾ ಕೃಣೋಷಿ॥

॥ ಪದಪಾಠಃ ॥

ತ್ವಂ । ಅರ್ಯಮಾ । ಭವಸಿ । ಯತ್ । ಕನೀನಾಂ । ನಾಮ । ಸ್ವಧಾವನ್ । ಗುಹ್ಯಂ । ಬಿಭರ್ಷಿ ।
ಅಂಜಂತಿ । ಮಿತ್ರಂ । ಸುಽಧಿತಂ । ನ । ಗೋಭಿಃ । ಯತ್ । ದಂಪತೀ ಇತಿ ದಂಽಪತೀ । ಸಽಮನಸಾ ।
ಕೃಣೋಷಿ ॥ ೨ ॥

॥ ಸಾಯಣಭಾಷ್ಯಂ ॥

ವಿವಾಹೇ ಚತುರ್ಥ್ಯಾಮಾಜ್ಯಾಹುತೌ ತ್ವಮರ್ಯಮೇತ್ಯೇಷಾ । ಸೂತ್ರಿತಂ ಚ । ತ್ವಮರ್ಯಮಾ ಭವಸಿ ಯತ್ಕನೀನಾಮಿತಿ ವಿವಾಹೇ ಚತುರ್ಥೀಂ । ಆ. ಗೃ. ೧-೪ । ಇತಿ ॥

ಹೇ ಅಗ್ನೇ ತ್ವಮರ್ಯಮಾ ಭವಸಿ । ಸರ್ವೇಷಾಂ ನಿಯಮಿತಾಸಿ । ಯದ್ಯದಾ ಕನೀನಾಂ ಕನ್ಯಕಾನಾಂ ಸಂಬಂಧ್ಯಸಿ । ಕಿಂಚ ಹೇ ಸ್ವಧಾವನ್ ಹವಿರ್ಲಕ್ಷಣಾನ್ನವನ್ ಗುಹ್ಯಂ ಗೋಪನೀಯಂ ನಾಮ ಬಿಭರ್ಷಿ ವೈಶ್ವಾನರ ಇತಿ ತನ್ನಾಮ । ಸುಧಿತಂ ಸುಷ್ಠು ನಿಹಿತಂ ಮಿತ್ರಂ ನ ಮಿತ್ರಮಿವ ಗೋಭಿಃ । ವಿಕಾರೇ ಪ್ರಕೃತಿಶಬ್ದಃ । ಗೋವಿಕಾರೈಃ ಕ್ಷೀರಾದಿಭಿರಂಜಂತಿ । ಯದ್ಯಸ್ಮಾದ್ದಂಪತೀ ಜ್ಯಾಯಾಪತೀ। ಸಮನಸಾ ಸಮಾನಮನಸ್ಕೌ ಕೃಣೋಷಿ । ಕರೋಷಿ ॥

॥ ಪ್ರತಿಪದಾರ್ಥ ॥

ಹೇ ಅಗ್ನೇ—(ಎಲೈ ಅಗ್ನಿಯೇ) । **ಯತ್**—ಯಾವಾಗ । **ತ್ವಂ**—ನೀನು । **ಕನೀನಾಂ**—ಕನ್ಯಕೆಯರೊಂದಿಗೆ ಸಂಬಂಧವನ್ನು ಹೊಂದುವೆಯೋ ಆಗ ! **ಅರ್ಯಮಾ**—ಅರ್ಯಮರೂಪನಾಗಿ । **ಭವಸಿ**—ಆಗುತ್ತೀಯೆ । **ಸ್ವಧಾವನ್**—ಹವಿಸ್ಸಿನ ರೂಪದ ಅನ್ನವನ್ನು ಹೊಂದಿರುವ ಎಲೈ ಅಗ್ನಿಯೇ । **ಗುಹ್ಯಂ**—ರಹಸ್ಯವಾದ । **ನಾಮ**—ಹೆಸರನ್ನು । **ಬಿಭರ್ಷಿ**—ಧರಿಸಿದ್ದೀಯೆ । **ಯತ್**—ಯಾವ ಪ್ರಭಾವದಿಂದ । **ದಂಪತೀ**—ಜಾಯಾಪತಿಗಳನ್ನು । **ಸಮನಸಾ**—ಒಂದೇ ಮನಸ್ಸುಳ್ಳವರನ್ನಾಗಿ । **ಕೃಣೋಷಿ**—ಮಾಡುವೆಯೋ (ಆದುದರಿಂದಲೇ) । **ಸುಧಿತಂ**—ಶ್ರೇಷ್ಠವಾಗಿ ಸಕ್ಕರಿಸಲ್ಪಟ್ಟ । **ಮಿತ್ರಂ ನ**—ಸ್ನೇಹಿತನಂತೆ । **ಗೋಭಿಃ**—ಗೋವಿಕಾರವಾದ ಕ್ಷೀರಾದಿಗಳಿಂದ **ಅಂಜಂತಿ**—ಅಲಂಕರಿಸುತ್ತಾರೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಕನ್ಯಕೆಯರೊಂದಿಗೆ ಸಂಬಂಧವನ್ನು ಹೊಂದಿದಾಗ ಅರ್ಯಮದೇವನಾಗುತ್ತೀಯೆ, ಹವಿಸ್ಸಿನ ರೂಪದ ಅನ್ನವನ್ನು ಹೊಂದಿರುವ ಎಲೈ ಅಗ್ನಿಯೇ, ನೀನು ರಹಸ್ಯವಾದ ಹೆಸರನ್ನು ಹೊಂದಿದ್ದೀಯೆ. ಯಾವ ಪ್ರಭಾವದಿಂದ ನೀನು ಪತಿಪತ್ನಿಯರನ್ನು ಒಂದೇ ಮನಸ್ಸುಳ್ಳವರನ್ನಾಗಿ ಮಾಡುತ್ತೀಯೋ ಆ ಕಾರಣದಿಂದಲೇ, ನಿನ್ನನ್ನು ಉತ್ತಮವಾಗಿ ಸಕ್ಕರಿಸಲ್ಪಡುವ ಸುಹೃತ್ತಿನಂತೆ ಗೋವಿಕಾರವಾದ ಕ್ಷೀರಾದಿಗಳಿಂದ ಅಲಂಕರಿಸುತ್ತಾರೆ.

English Translation.

You are Aryaman in relation to maidens, you bear, enjoyer of sacrificial food, a mysterious name : they anoint you, like a welcome friend with milk and butter, when you make husband and wife of one mind.

॥ ವಿಶೇಷವಿಷಯಗಳು ॥

ವಿವಾಹಪ್ರಧಾನಹೋಮದಲ್ಲಿ ಆಜ್ಯಾಹುತಿಯನ್ನು ಅಗ್ನಿಯಲ್ಲಿ ಹೋಮಮಾಡುವಾಗ **ತ್ವಮರ್ಯಮಾ** ಎಂಬ ಈ ಋಕ್ಕನ್ನು ನಾಲ್ಕನೆಯ ಆಹುತಿಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಗೃಹ್ಯಸೂತ್ರದ

त्वमर्य्यमा भवसि यत्कनीनामिति विवाहे चतुर्थ्यन्तं ಎಂಬ ಸೂತ್ರದಿಂದ (ಅ ಗೃ ೧-೪-೭) ವಿವೃತವಾಗಿರುವುದು.

यत् त्वं कनीनाम् अर्य्यमा भवसि—ಎಲೈ ಅಗ್ನಿಯೇ, ನೀನು ಯಾವಾಗ ಕನ್ಯಕೆಯರೊಂದಿಗೆ ಸಂಬಂಧವನ್ನು ಹೊಂದುತ್ತೀಯೋ ಆಗ ಅರ್ಯಮರೂಪನಾಗಿ ಆಗುತ್ತೀಯೆ ಎಂದರೆ ಇಲ್ಲಿ ಕನ್ಯಕೆಯರ ಸಂಬಂಧವೆಂದರೆ ವಿವಾಹದಲ್ಲಿ ಪ್ರಧಾನಹೋಮವಾಡುವಾಗ ವಿವಾಹಾಗ್ನಿಗೆ **अर्य्यमा** ಎಂಬ ಹೆಸರು ಪ್ರಸಿದ್ಧವಾಗಿರುವುದು. **ಈ** ವಿಷಯದಲ್ಲಿ—**आर्य्यमणं नु देवं कन्या अग्निमयक्षत**—ವಿವಾಹಕಾಲದಲ್ಲಿ ಕನ್ಯೆಯಾದವಳು **अर्य्यमा** ಎಂಬ ಹೆಸರಿನಿಂದ ಪ್ರಸಿದ್ಧವಾದ ಅಗ್ನಿಯನ್ನು ಪೂಜಿಸುತ್ತಾಳೆ ಎಂಬ ಶ್ರುತ್ಯಂತರವಾಕ್ಯವೂ ಇರುವುದು. ಆದುದರಿಂದ ಕನ್ಯೆಯ ಸಂಬಂಧವಾದ ವಿವಾಹಾಗ್ನಿಗೆ **अर्य्यमा** ಎಂದು ಹೆಸರು. ಆ ವಿಷಯವನ್ನೇ ಇಲ್ಲಿ ಹೇಳಿರುವುದು

स्वधावन् गुह्यं नाम बिभर्षि— हविर्लक्षणान्नवन् गोपनीयं वैश्वानर इति नाम बिभर्षि । ಎಲೈ ಅಗ್ನಿಯೇ, ನೀನು ಹವಿರ್ಲಕ್ಷಣರೂಪವಾದ ಅನ್ನವನ್ನು ಯಜಮಾನರಿಂದ ಸ್ವೀಕರಿಸಿ ಉದ್ದಿಷ್ಟದೇವತೆಗಳಿಗೆ ಒಯ್ಯುವುದರಿಂದ ನಿನಗೆ ವೈಶ್ವಾನರನೆಂಬ ರಹಸ್ಯವಾದ ಹೆಸರೂ ಇರುವುದು ವೈಶ್ವಾನರನೆಂದರೆ ಸಮಸ್ತರಿಗೂ ಸ್ನೇಹಿತನಾಗಿರುವವನು ಎಂದರ್ಥವು ಇಲ್ಲಿ ಯಜ್ಞಮಾಡುವ ಯಜಮಾನರಾದಿ ಸಮಸ್ತ ಮಾನವರಿಗೂ, ನಿನ್ನ ಮೂಲಕ ಹವಿಸ್ಸನ್ನು ಸ್ವೀಕರಿಸುವ ದೇವತೆಗಳಿಗೂ ಬೇಕಾದವನಾಗಿರುವುದರಿಂದ ನೀನು ಎಲ್ಲರ ವಿಷಯದಲ್ಲಿಯದಲ್ಲಿಯೂ ಎಂದರೆ ದೇವಮಾನವಾದಿಸಮಸ್ತರ ವಿಷಯದಲ್ಲಿ ಸ್ನೇಹಿತನಾಗಿರುವೆ ಎಂದಭಿಪ್ರಾಯವು ವೈಶ್ವಾನರಾಗ್ನಿಪದದಿಂದ ಸೂಚಿತವಾಗಿದೆ

यत् दंपती समनसा कृणोषि सुधितं मित्रं न गोभिः अंजन्ति—ಎಲೈ ಅಗ್ನಿಯೇ ವಿವಾಹಕಾರ್ಯದಲ್ಲಿ ನೀನು ವಧೂವರರನ್ನು ಏಕಮನಸ್ಕರನ್ನಾಗಿ ಎಂದರೆ ಪರಸ್ಪರ ಪ್ರೀತಿಯುಕ್ತರನ್ನಾಗಿ ಮಾಡುವುದರಿಂದ ಮಿತ್ರನ ವಿಷಯದಲ್ಲಿ ಜನರು ಯಾವರೀತಿ ಆದರಾತಿಶಯಗಳಿಂದ ವರ್ತಿಸುವರೋ ಆದರಂತೆ ನಿನ್ನನ್ನು ಕ್ಷೀರಾದಿ ದ್ರವ್ಯಗಳಿಂದ ಸತ್ಕರಿಸಿ ಪೂಜಿಸುವರು ಎಂದಭಿಪ್ರಾಯವು. ಇಲ್ಲಿ **गोभिः गोविकारैः क्षीरादिभिः** ಎಂದರೆ ಗೋವಿನಿಂದ ಲಭಿಸುವ ಕ್ಷೀರವನ್ನು ಸೂಚಿಸುವುದಕ್ಕಾಗಿ **गोभिः** ಎಂದು ಗೋಶಬ್ದವನ್ನೇ ಉಪಯೋಗಿಸಿದೆ.

॥ संहितापारः ॥

तव श्रियो नुरुतो मर्जयन्त रुद्र यत्ते जनिमु चारु-
चित्रम् ।
पदं यद्विष्णोरुपमं निधायि तेन पासि गुह्यं नामु
गोनाम् ॥ ५ ॥

। ಪದಪಾಠಃ ।

ತವ । ಶ್ರಿಯೇ । ಮರುತಃ । ಮರ್ಜಯಂತ । ರುದ್ರ । ಯತ್ । ತೇ । ಜನಿಮ । ಚಾರು । ಚಿತ್ರಂ ।

ಪದಂ । ಯತ್ । ವಿಷ್ಣೋಃ । ಉಪಮಂ । ನಿಧಾಯಿ । ತೇನ । ಪಾಸಿ । ಗುಹ್ಯಂ । ನಾಮ । ಗೋನಾಂ॥

। ಸಾಯಣಭಾಷ್ಯಂ ।

ಅನಯೋಗ್ನೇರ್ಮಾಧ್ಯಮಿಕೇ ಮೂರ್ತಿರುಚ್ಯತೇ। ಹೇ ಅಗ್ನೇ ತವ ಶ್ರಿಯೇ ಶ್ರಯಣಾಯ ಮರುತೋಽಪೋಽಂತರಿಕ್ಷಸ್ಥಾ ಮರ್ಜಯಂತ । ಮಾರ್ಜಯಂತಿ । ಹೇ ರುದ್ರ ವೃಷ್ಟ್ಯಾ ರುದ್ರವದ್ವರ್ಧಿತ-ರಗ್ನೇ ತೇ ತವ ಯಜ್ಜನಿಮ।ಜನ್ಮ ವೈದ್ಯುತಲಕ್ಷಣಂ ಚಾರು ಚರಣೀಯಂ ಚಿತ್ರಂ ಚಾಯನೀಯಂ ।ಚಿತ್ಯಥಮಿತಿ ಚೀದುಚ್ಯತೇ । ವಿಷ್ಣೋರ್ವ್ಯಪನಶೀಲಸ್ಯ ದೇವಸ್ಯೋಪಮಂ ಗುಹ್ಯಮಗಮ್ಯಂ ಯತ್ಪದಂ ನಿಧಾಯಿ। ಅನೇನಾಂತರಿಕ್ಷಮುಕ್ತಂ। ಉಪಮೇಯಮಿನ ವಿಷ್ಣೋರ್ಮಧ್ಯಮಂ ಪದಂ ತಸ್ಮಾನ್ನಾಂತರಿಕ್ಷಂ ಪಶ್ಯಂತೀತಿ ಬ್ರಾಹ್ಮಣಂ । ತೇನ ಗೋನಾಮುದಕಾನಾಂ ಗುಹ್ಯಂ ನಾಮ ನಾಮಾನಿ ಪಾಸಿ । ರಕ್ಷಸಿ ॥

। ಪ್ರತಿಪದಾರ್ಥ ।

ಎಲೈ ಅಗ್ನಿಯೇ । **ತವ**—ನಿನ್ನ । **ಶ್ರಿಯೇ**—ಮಹಿಮೆಯ ಪ್ರಕಾಶಕ್ಕಾಗಿ। **ಮರುತಃ**—ಮರುತ್ತುಗಳು । **ಮರ್ಜಯಂತೆ**—(ಅಂತರಿಕ್ಷವನ್ನು) ಶುದ್ಧಿಮಾಡುತ್ತವೆ । **ರುದ್ರ**—ರುದ್ರನಂತಿರುವ ಎಲೈ ಅಗ್ನಿಯೇ । **ತೇ**—ನಿನ್ನ । **ಜನಿಮ**—ವೈದ್ಯುತರೂಪದ ಉತ್ಪತ್ತಿಯು । **ಯತ್**—ಯಾವುದೆಯೋ ಅದು । **ಚಾರು**—ಮನೋಹರವಾಗಿಯೂ । **ಚಿತ್ರಂ**—ಆಶ್ಚರ್ಯಾವಹವಾಗಿಯೂ (ಇದೆ) । **ವಿಷ್ಣೋಃ**—ವಿಷ್ಣುವಿನ । **ಯತ್**—ಯಾವ । **ಉಪಮಂ ಪದಂ**—ಮಧ್ಯನು ಪಾದವು । **ನಿಧಾಯಿ**—ಇಡಲ್ಪಟ್ಟಿದೆಯೋ । **ತೇನ**—ಆದರಿಂದ । **ಗೋನಾಂ**—ಉದಕಗಳ । **ಗುಹ್ಯಂ ನಾಮ**—ರಹಸ್ಯವಾದ ಹೆಸರುಗಳನ್ನು । **ಪಾಸಿ**—ರಕ್ಷಿಸುತ್ತೀಯೆ

। ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನ ಮಹಿಮೆಯ ಪ್ರಕಾಶಕ್ಕಾಗಿ ಮರುತ್ತುಗಳು ಅಂತರಿಕ್ಷವನ್ನು ಶುದ್ಧಿಮಾಡುತ್ತವೆ ರುದ್ರನಂತಿರುವ ಎಲೈ ಅಗ್ನಿಯೇ, ನಿನ್ನ ವೈದ್ಯುತರೂಪದ ಉತ್ಪತ್ತಿಯು ಮನೋಹರವಾಗಿಯೂ ಆಶ್ಚರ್ಯಕರವಾಗಿಯೂ ಇವೆ ವಿಷ್ಣುವಿನ ಮಧ್ಯಮಪಾದದ ನಿಕ್ಷೇಪದ ಕಾರಣದಿಂದ ನೀನು ಉದಕಗಳ ರಹಸ್ಯವಾದ ಹೆಸರುಗಳನ್ನು ಪೋಷಿಸುತ್ತೀಯೆ

English Translation.

For your glory the Maruts sweep (the firmament), when your birth, Rudra, is beautiful and wonderful : the middle step of Vishnu has been placed, so you cherish the mysterious name of the waters

॥ ವಿಶೇಷವಿಷಯಗಳು ॥

ಈ ಋಕ್ಕಿನ ಅರ್ಥವು ಸ್ವಲ್ಪ ತೊಡಕಾಗಿರುವುದು. ಇಲ್ಲಿ ಮಧ್ಯಮಸ್ಥಾನ ದೇವತೆಯಾದ ವೈದ್ಯುತಾಗ್ನಿಯನ್ನು (ಮಿಂಚು) ಸ್ತುತಿಸಲಾಗಿದೆ.

(ಹೇ ಅಗ್ನೇ) ತವ ಶ್ರಿಯೇ ಮರುತಃ ಮರ್ಜಯಂತ—ತವ ಶ್ರಯಣಾಯ ಮರುತಃ ಅಂತರಿಕ್ಷ್ಯಾಃ ಮಾರ್ಜಯಂತಿ । ಎಲೈ ಅಗ್ನಿಯೇ, ನಿನ್ನ ಮಹಿಮೆಯನ್ನು ಪ್ರಕಾಶಪಡಿಸುವುದಕ್ಕಾಗಿ ಮರುತ್ತುಗಳು ಅಂತರಿಕ್ಷವನ್ನು ಶುದ್ಧಿಮಾಡುತ್ತವೆ. ಅಂತರಿಕ್ಷದಲ್ಲಿ ವಿದ್ಯುದ್ಗೋಚರವು ವೃಷ್ಟಿಯ ಸಮಯದಲ್ಲಿ ಮಾತ್ರ ಆಗುವುದು ಆ ಕಾಲದಲ್ಲಿ ಗಾಳಿಯು (ವೇಗವಾಗಿ ಬೀಸುವ ಗಾಳಿಗೆ ಮರುತ್ ಎಂದು ಹೆಸರು) ವೇಗವಾಗಿ ಬೀಸುವುದು. ಅನಂತರ ವೃಷ್ಟಿಕಾಲದಲ್ಲಿ ಅಥವಾ ತತ್ಪೂರ್ವದಲ್ಲಿ ವೈದ್ಯುತಾಗ್ನಿ ಅಥವಾ ಮಿಂಚು ಗೋಚರವಾಗುವುದು. ವೈದ್ಯುತಾಗ್ನಿಯು ಕಾಣಿಸುವುದಕ್ಕಿಂತ ಮುಂಚಿತವಾಗಿ ಗಾಳಿಯು ರಭಸವಾಗಿ ಬೀಸುವುದರಿಂದ ವಿದ್ಯುದಗ್ನಿಯ ಮಹಿಮೆಯನ್ನು ಎಲ್ಲರಿಗೂ ತಿಳಿಸುವುದಕ್ಕಾಗಿ ಗಾಳಿಯು ಅಂತರಿಕ್ಷದಲ್ಲಿ ಬೀಸಿ ಅಂತರಿಕ್ಷವನ್ನು ಶುದ್ಧಿಮಾಡುವುದೆಂದು ಇಲ್ಲಿ ಪ್ರಕಾರಾಂತರವಾಗಿ ವರ್ಣಿಸಿದೆ. ರಾಜನ ಆಗಮನ ಕಾಲದಲ್ಲಿ ಮಾರ್ಗವನ್ನು ಶುದ್ಧಿಮಾಡುವುದು ಸ್ವಾಭಾವಿಕವಾಗಿದೆ ಎಂದರೆ ರಾಜನು ಬರುವುದಕ್ಕೆ ಮುಂಚಿತವಾಗಿ ಮಾರ್ಗಶುದ್ಧಿಕ್ರಿಯೆಯು ನಡೆಯುವುದು .ಅದರಂತೆ ವಿದ್ಯುದಗ್ನಿಯ ಆವಿರ್ಭಾವಕ್ಕೆ ಮುಂಚಿತವಾಗಿ ಗಾಳಿಯು ವೇಗವಾಗಿ ಬೀಸುತ್ತಾ ಅಗ್ನಿಯ ಸಂಚಾರಮಾರ್ಗವಾದ ಅಂತರಿಕ್ಷವನ್ನು ಶುದ್ಧಿಗೊಳಿಸುವುದೆಂದು ವರ್ಣಿಸಲಾಗಿದೆ.

ರುದ್ರ ತೇ ಜನಿಮ ಯತ್ ಚಾರು ಚಿತ್ರಂ ವಿಷ್ಣೋಃ ಯತ್ ಪದಂ ಉಪಮಂ ಪದಂ ನಿಧಾಯಿ— ಇಲ್ಲಿ ಅಗ್ನಿಯನ್ನು ರುದ್ರಶಬ್ದದಿಂದ ಸಂಬೋಧಿಸಿದೆ ರುದ್ರವದ್ವರ್ಧಿತಃ— ರುದ್ರನಂತೆ ಪ್ರವರ್ಧಮಾನನು ಎಂದು ಸಾಯಣರ ವಿವರಣೆಯು ಎಲೈ ಅಗ್ನಿಯೇ, ಅಂತರಿಕ್ಷದಲ್ಲಿ ನಿನ್ನ ಆವಿರ್ಭಾವವು ವಿಷ್ಣುವಿನ ಪಾದಪ್ರಕ್ಷೇಪದಂತೆ ಅತ್ಯಾಶ್ಚರ್ಯಕರವಾಗಿದೆ ಎಂದು ಇಲ್ಲಿ ಹೇಳಿದೆ ವಿಷ್ಣುವಿನ ಮೂರು ಪಾದಪ್ರಕ್ಷೇಪಗಳು ಭೂಮಿ, ಅಂತರಿಕ್ಷ, ಸ್ವರ್ಗ ವೆಂಬ ಮೂರು ಸ್ಥಾನಗಳಲ್ಲಿರುವುದೆಂದು ಪ್ರಸಿದ್ಧಿಯಾಗಿರುವುದರಿಂದ ಇಲ್ಲಿ ಅಂತರಿಕ್ಷದಲ್ಲಿ ವಿಷ್ಣುವಿನ ಎರಡನೆಯ ಪಾದವಿಕ್ಷೇಪವನ್ನು ಸೂಚಿಸಿದೆ. ಅತ್ಯಾಶ್ಚರ್ಯಕರವಾದ ಎಂದರೆ ಅಂತರಿಕ್ಷದಲ್ಲಿ ಪೂರ್ವಸೂಚನೆಯಿಲ್ಲದೆ ಆಕಸ್ಮಿಕವಾಗಿ ಗೋಚರಿಸುವ ಮಿಂಚು ಅಥವಾ ವಿದ್ಯುದಗ್ನಿಯು ವಿಷ್ಣುವಿನ ಅಂತರಿಕ್ಷದಲ್ಲಿರುವ ದ್ವಿತೀಯ ಪಾದವಿಕ್ಷೇಪದಂತೆ ಆಶ್ಚರ್ಯಕಾರಕವಾಗಿರುವುದು ಎಂದು ವಿಷ್ಣುವಿನ ಪಾದವಿಕ್ಷೇಪದ ಉಪಮಾನವನ್ನು ಹೇಳಿದೆ.

ತೇನ ಗೋನಾಂ ಗುಹ್ಯಂ ನಾಮ ಪಾಸಿ—ತೇನ ಉದಕಾನಾಂ ನಾಮಾನಿ ರಕ್ಷಸಿ । ಎಲೈ ಅಗ್ನಿಯೇ, ಈ ವಿಧವಾದ ನಿನ್ನ ಆಶ್ಚರ್ಯಕರವಾದ ಕರ್ಮಾಚರಣೆಯಿಂದ ಉದಕಗಳ (ವೃಷ್ಟ್ಯುದಕಗಳ) ಹೆಸರುಗಳನ್ನು ರಕ್ಷಿಸುತ್ತೀಯೆ ಎಂದರೆ ರಹಸ್ಯವಾದ ಉದಕಗಳ ಮಹಿಮೆಯನ್ನು ಪ್ರಕಾಶಪಡಿಸುತ್ತೀಯೆ ಎಂದಭಿಪ್ರಾಯವು. ಈ ಕೊನೆಯ ವಾಕ್ಯದ ಸರಿಯಾದ ಅರ್ಥವೇನೆಂಬುದು ಸ್ಪಷ್ಟವಾಗಿಲ್ಲ

। संहितापाठः ।

तव श्रियो सुदृशो देव देवाः पुरू दधानाः अमृतं सपन्त।
होतारमग्निं मनुषो नि षेदुर्दशस्यन्त उशिजः शंस-
मायोः ॥ ४ ॥

॥ पदपाठः ॥

तव । श्रियः । सुऽदृशः । देव । देवाः । पुरु । दधानाः । अमृतं । सपन्त ।
होतारं । अग्निं । मनुषः । नि । सेदुः । दशस्यन्तः । उशिजः । शंसं । आयोः ॥ ४ ॥

। सायणभाष्यं ।

हे देवाग्ने सुदृशस्तव श्रियः समृद्ध्या देवा इन्द्राद्यदयः पुरु बहुधा दधानास्त्वयि प्रीतिं धारयन्तोऽमृतं सपन्त । सेवन्ते । होतारं होमनिष्पादकमग्निं मनुषो मनुष्या नि षेदुः । परिचरन्त्यृत्विजः । किं कुर्वन्तः । दशस्यन्तो हविर्वितरन्तः शंसं फलमुशिजः कामयमानस्यायोर्मनुष्यस्य यजमानस्यार्थं ॥

। प्रतिपदार्थ ।

देव—प्रकाशमानना अग्नियेः। तव—निन्न। श्रियो—कान्तिसंपत्तिनिंद। सुदृशः—रम्यवाद रूपवन्नु हॊंदिद। देवाः—इन्द्रादि देवतेगळु। पुरु—अधिकवागि। दधानाः—प्रीतियन्नु हॊंदिदवरागि। अमृतं—अमृतवन्नु। सपन्त—सेवियिसुत्तारे। शंसं—यज्ञ्ञ फलवन्नु। उशिजः—अपेक्षिसिद। आयोः—मानवनाद यजमानन्गागि। दशस्यन्तः—हविस्सन्नु अर्पिसतक्क। मनुषः—ऋत्विगादिगळु। होतारं—होमसं पादकनाद। अग्निं—अग्नियन्नु। निषेदुः—उपचरिसि पूजिसुत्तारे.

। भावार्थ ।

प्रकाशमाननाद ऎलै अग्नियेः, निन्न कान्तिसंपत्तिनिंद रम्यवाद रूपवन्नु हॊंदिद इन्द्रादि देवतेगळु निन्नल्लि अधिकवाद प्रीतियन्नु हॊंदिदवरागि अमृतवन्नु सेवियिसुत्तारे. यज्ञ्ञ फलवन्नु अपेक्षिसिद मानवनाद यजमानन्गागि हविर्दातरादि ऋत्विक्कुगळु होमसंपादकनाद अग्नियन्नु उपचरिसि पूजिसुत्तारे.

English Translation.

Divine (Agni), the gods (made) comely by your glory, and bearing (the) great (affection), sip the ambrosia : men adore Agni, the conveyer of the burnt-offering presenting, oblations on behalf of the institutor of the rite, desirous of (its) reward

॥ विशेषविषयगळु ॥

अग्नियु तन्न महिमेयिंद यजमानरु अर्पिसुव हविरादिगळन्नु देवतेगळिगे ऒय्युवुदरिंद आ देवतेगळु अग्नि य मत्तु यजमानर विषयदल्लि प्रीतरागि यज्ञदल्लि अर्पिसुव सोमरूपवाद अमृतवन्नु संतोषदिंद सेविसुत्तारे मत्तु यजमानन पर्वागि हविस्सन्नु अर्पिसुव ऋत्विक्कुगळु होमनिष्पादकनाद अग्नियन्नु उपचरिसि पूजिसुत्तारे एंदु मुख्याभिप्रायवु.

॥ संहितापाठः ॥

न त्वद्धोतापूर्व्यो अग्ने यजीयान्न काव्यैः परो अस्ति स्वधावः ।
विशश्च यस्या अतिथिर्भवासि स यज्ञेन वनवद्देव मर्तान् ॥५॥

॥ पदपाठः ॥

न । त्वत् । होता । पूर्वः । अग्ने । यजीयान् । न । काव्यैः । परः । अस्ति । स्वधाऽवः ।
विशः । च । यस्याः । अतिथिः । भवासि । सः । यज्ञेन । वनवत् । देव । मर्तान् ॥ ५ ॥

॥ सायणभाष्यं ॥

हे अग्ने त्वत्तोऽन्यो नास्ति होता पूर्वः पूरकः पुराणो वा यजीयान्यष्टा वा । काव्यैः स्तोत्रैः स्तुत्यैः परः परस्तात्परस्मिन्नपि काले नास्ति । हे देव हे स्वधावोऽन्नवन् यस्या विशः प्रजायाः ऋत्विग्रूपायाः अतिथिर्भवासि । अतिथिवत्पूज्यो भवसि । स यजमानस्मद्दत्तेन हविषा मर्तान् वनवत् । वृणक्ति । ऐनस्ति । यद्वा । मर्तान्परिचारकान्त्संनवत् । संभजेत् ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ತ್ವತ್**—ನಿನ್ನನ್ನು ಬಿಟ್ಟರೆ । **ಪೂರ್ವಃ**—ನಿನಗಿಂಲೂ ಮೊದಲು । **ಹೋತಾ**—ಹೋಮಸಂಪಾದಕನು । **ನ ಅಸ್ತಿ**—ಯಾರೂ ಇಲ್ಲ । **ಕಾವ್ಯೈಃ**—ಸ್ತುತಿಗಳಿಂದ ಪ್ರಶಂಸಿತನಾದ । **ಯಜೀಯಾನ್**—ಯಜ್ಞಕರ್ತನು । **ಪರಃ**—ನಿನಗಿಂತಲೂ ಬೇರೆ ಯಾರು । **ನ**—ಇಲ್ಲ । **ದೇವ**—ದೇವತಾತ್ಮನಾದ ಅಗ್ನಿಯೇ । **ಸ್ವಧಾವಃ**—ಅನ್ನವಂತನಾಗಿ । **ಯಸ್ಯಾ ವಿಶಃ**—ಯಾವ ಋತ್ವಿಗಾದಿ ಪ್ರಜೆಗೆ । **ಅತಿಥಿಃ**—ಅತಿಥಿಯಾಗಿ । **ಭವಸಿ**—ಆಗುತ್ತೀಯೋ । **ಸಃ**—ಅಂತಹ ಮಾನವನು । **ಯಜ್ಞೇನ**—ಯಜ್ಞದ ಸಹಾಯದಿಂದ । **ಮರ್ತಾನ್**—ತನ್ನ ಮಾನವ ರೂಪರಾದ ಶತ್ರುಗಳನ್ನು । **ವನವತ್**—ನಾಶಮಾಡುತ್ತಾನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಉತ್ತಮನಾದ ಹೋತೃವಾಗಲಿ, ಸ್ತುತಿಗಳಿಂದ ಪ್ರಶಂಸಿತನಾದ ಯಜ್ಞಕರ್ತನಾಗಲಿ ನಿನ್ನನ್ನು ಬಿಟ್ಟರೆ ನಿನಗಿಂತಲೂ ಪೂರ್ವಭಾವಿಯಾಗಿ ಯಾರೂ ಇಲ್ಲ ಮುಂದೆಯೂ ನಿನ್ನನ್ನು ಮೀರಿಸಿದವರೂ ಯಾರೂ ಇರಲಾರದು. ದೇವತಾತ್ಮನಾದ ಎಲೈ ಅಗ್ನಿಯೇ, ನೀನು ಅನ್ನವಂತನಾಗಿ ಯಾವ ಋತ್ವಿಗಾದಿ ಪ್ರಜೆಗೆ ಅತಿಥಿಯಾಗಿ ಆಗುತ್ತೀಯೋ ಅಂತಹ ಮಾನವನು ಯಜ್ಞದ ಸಹಾಯದಿಂದ ತನ್ನ ಮಾನವರೂಪರಾದ ಶತ್ರುಗಳನ್ನು ನಾಶಮಾಡುತ್ತಾನೆ.

English Translation.

There is no more venerable offerer of oblations, Agni, than you, nor (one) prior to you, neither, giver of food, is any one subsequent (to be more glorified by hymns): the man of whom you are the guest destroys hostile men by sacrifice.

॥ ವಿಶೇಷವಿಷಯಗಳು ॥

ಎಲೈ ಅಗ್ನಿಯೇ, ಯಜ್ಞಕರ್ಮವನ್ನು ಆಚರಿಸುವ ಯಜಮಾನರಲ್ಲಿಯಾಗಲಿ ಅಥವಾ ಋತ್ವಿಕ್ಕುಗಳಲ್ಲಿಯಾಗಲಿ ಎಂದರೆ ಆಯಾ ಕರ್ಮಗಳ ತಿಳುವಳಿಕೆ ಮತ್ತು ಕರ್ಮನಿರ್ವಹಣೆಯಲ್ಲಿ ನಿನಗಿಂತ ಉತ್ತಮರಾದವರು ಯಾರೂ ಇಲ್ಲ. ನೀನೇ ಎಲ್ಲವನ್ನೂ ತಿಳಿದವನು ಇದಲ್ಲದೆ ನೀನು ಋತ್ವಿಗಾದಿ ಜನರಿಗೆ ಅತಿಥಿಯಂತೆ ಪೂಜ್ಯನಾಗಿ ಅನ್ನಾದಿಗಳನ್ನು ಕೊಟ್ಟು ಅವರ ಶತ್ರುಗಳನ್ನು, ದಾವಾಗ್ನಿಯು ವನವನ್ನು ನಾಶಮಾಡುವಂತೆ ನಾಶಮಾಡುತ್ತೀಯೆ ಅಥವಾ ನಿನ್ನನ್ನು ಉಪಚರಿಸುವ ಋತ್ವಿಗಾದಿ ಜನರಿಗೆ ಅನುಗ್ರಹ ಮಾಡುವುದಕ್ಕಾಗಿ ಅವರ ಬಳಿಗೆ ಹೋಗುವೆ ಎಂದಭಿಪ್ರಾಯವು.

॥ संहितापाठः ॥

वयमग्ने वनुयामा त्वोतास्तवास्मयवो हविषा बुध्यमानाः ।
वयं सन्तुयेर्ये विदथेष्वह्नां वयं रायास सहसस्पुत्र मर्तान् ॥ ६ ॥

॥ पदपाठः ॥

वयं । अग्ने । वनुयाम । त्वाऽऊतासः । तवास्मयवः । हविषा । बुध्यमानाः ।
वयं । सन्तुयेर्ये । विदथेषु । अह्नां । वयं । रायाः । सहसः । पुत्र । मर्तान् ॥

॥ सायणभाष्यं ॥

हे अग्ने वयं यजमानास्त्वोतास्त्वया रक्षिताः संतो वनुयाम । शत्रूंस्त्वेदयाम संभजेमहि वा धनं । कीदृशा वयं । तवास्मयवो तवास्माकमा हविषा त्वां बुध्यमाना बोधयंतोवयं समुयेर्ये समरणे जयेम शत्रूनिति शेषः । विदथेषु यागेषु प्राप्नुयाम बलं । यद्वा । वनुयामेत्येतदसुषजयेत्। अह्नां सर्वेष्वहःसु । किंच वयं हे सहसस्पुत्र बलस्य पुत्र पालक वाग्नेः रायाः धनेन सह मर्त्यानपत्यादीन् लभेमहि ॥

॥ प्रतिपदार्थ ॥

अग्ने—ಎಲೈ ಅಗ್ನಿಯೇ । **वयं**—ಯಜಮಾನರಾದ ನಾವು । **तवास्मयवः**—ಧನಾರ್ಥಿಗಳಾಗಿ । **हविषा**—ಹವಿಸ್ಸುಗಳಿಂದ । **बुध्यमानाः**—(ನಿನ್ನನ್ನು) ಎಚ್ಚರಗೊಳಿಸುತ್ತಾ । **त्वोतासः**—ನಿನ್ನಿಂದ ರಕ್ಷಿತರಾಗಿ । **वनुयाम**—ಧನವನ್ನು ಹೊಂದುವಂತಾಗಲಿ । **अह्नां**—ಸಕಲ ದಿನಗಳಲ್ಲಿಯೂ । **विदथेषु**—ಯಜ್ಞಗಳಲ್ಲಿ (ಶಕ್ತಿಯನ್ನು ಪಡೆದು) । **वयं**—ನಾವು । **समर्येषु**—ಯುದ್ಧದಲ್ಲಿ (ಜಯವನ್ನು ಕೊಂದುವಂತಾಗಲಿ)। **सहसस्पुत्र**—ಶಕ್ತಿಪುತ್ರನಾದ ಎಲೈ ಅಗ್ನಿಯೇ। **वयं**—ನಾವು। **रायाः**—ಧನಸಂಪತ್ತಿನೊಂದನೆ। **मर्तान्**—ಪುತ್ರಭೃತ್ಯಾದಿಗಳನ್ನು (ಪಡೆಯುವಂತಾಗಲಿ)

॥ भावार्थः ॥

ಎಲೈ ಅಗ್ನಿಯೇ, ಯಜಮಾನರಾದ ನಾವು ಧನಾರ್ಥಿಗಳಾಗಿ ಹವಿಸ್ಸುಗಳಿಂದ ನಿನ್ನನ್ನು ಎಚ್ಚರಗೊಳಿಸುತ್ತಾ ನಿನ್ನಿಂದ ರಕ್ಷಿತರಾಗಿ ಧನವನ್ನು ಹೊಂದುವಂತಾಗಲಿ. ಸಕಲದಿನಗಳಲ್ಲಿಯೂ ಯಜ್ಞಗಳಲ್ಲಿ ಶಕ್ತಿಯನ್ನು ಪಡೆದೂ

ನಾವು ಯುದ್ಧದಲ್ಲಿ ಜಯವನ್ನು ಹೊಂದುವಂತಾಗಲಿ. ಶಕ್ತಿಪುತ್ರನಾದ ಎಲೈ ಅಗ್ನಿಯೇ, ನಾವು ಧನಸಂಪತ್ತಿನೊಡನೆ ಪುತ್ರಭೃತ್ಯಾದಿಗಳನ್ನು ಪಡೆಯುವಂತಾಗಲಿ.

English Translation

May we, desirous of wealth, Agni, and arousing you by oblations, secure in your protection, acquire (riches): may we (be victorious) in battle, (successful) in sacrifices every day; and may we, son of strength, obtain with riches male (descendants)

॥ संहितापाठः ॥

यो॒न॒ आगो॑ अ॒भ्ये॑नो॑ भ॒रात्यधी॑दघ॒मघ॑शंसे दधात ।
ज॒हि॒ चि॑कित्वो॒ अ॒भिश॒स्तिमे॑तामग्ने॒ यो नो॑ मु॒र्च॑यति द्वये॑न ॥ ६ ॥

॥ पदपाठः ॥

यः । नः । आगः । अभि । एनः । भरति । अधि । इत् । अघं । अघऽशंसे । दधात ।
जहि । चिकित्वः । अभिऽशस्तिं । एतां । अग्ने । यः । नः । मुर्चयति । द्वयेन ॥ ६ ॥

॥ सायणभाष्यं ॥

यो मर्त्य आगोऽपराधमेनः पापं च नोऽस्मभ्यमभि भरति । अभितः करोति । तस्मिन्नघशंसेऽघं पापमधि दधात । ददात्वग्निः । इति पूरणः । आगोऽपराधं यो मह्यमिदं करोति तस्मा एवाग्निस्तत्फलं करोत्वित्यर्थः । अथ प्रत्यक्षेणोच्यते। हे अग्ने एतामभिशस्तिं जहि । उत्तरत्र यच्छब्दश्रवणात्तदानुगुण्येनैनमभिशंसकमिति व्याख्येयम् । योऽभिशस्ता नोऽस्मान्द्वयेनोक्तेनागसैनसा वा मुर्चयति । बाधते । तमिति ॥

॥ प्रतिपदार्थ ॥

यः—ಯಾವ ಮಾನವನು । नः–ನಮ್ಮ ವಿಷಯದಲ್ಲಿ । आगः–ದೌರ್ಬ್ಯವನ್ನೂ । एनः–ಪಾಪಕಾರ್ಯವನ್ನೂ । अभि भरति—ನಡೆಸುತ್ತಾನೆಯೋ (ಅಂತಹ) । अघशंसे—ದುಷ್ಟಬುದ್ಧಿಯುಳ್ಳ ಪಾಪಿಷ್ಠನಲ್ಲಿ ।

ಅಘಂ—ಸ್ವಹಿಂಸಾಕಾರಕವಾದ ಪಾಪವನ್ನು । **ಅಧಿ ದಧಾತ**—ಅಗ್ನಿಯು (ತುಂಬಿಡಲಿ) । **ಅಗ್ನೇ**—ಎಲೈ ಅಗ್ನಿಯೇ । **ಯಃ**—ಯಾವ ಹಿಂಸಕನು । **ನಃ**—ನಮ್ಮನ್ನು । **ದ್ವಯೇನ**—ಮೇಲೆ ಹೇಳಿದ ಎರಡು ವಿಧಗಳಿಂದಲೂ । **ಮರ್ಚಯತಿ**—ಹಿಂಸಿಸುವನೋ । **ಏತಾಂ ಅಭಿಶಸ್ತಿಂ**—ಅಂತಹ ಹಿಂಸಕನನ್ನು । **ಚಿಕಿತ್ವಃ**—ತಿಳಿದವನಾಗಿ । **ಜಹಿ**—ನಾಶಮಾಡು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಮಾನವನು ನಮ್ಮ ವಿಷಯದಲ್ಲಿ ದೌಷ್ಟ್ಯವನ್ನೂ ಪಾಪಕಾರ್ಯವನ್ನೂ ನಡೆಸುವನೋ, ಅಂತಹ ದುಷ್ಟಬುದ್ಧಿಯುಳ್ಳ ಪಾಪಿಷ್ಠನಲ್ಲಿ ಸ್ವಹಿಂಸಾಕಾರಕವಾದ ಪಾಪವನ್ನೇ ತುಂಬಿಡು. ಮತ್ತು ಯಾವ ಹಿಂಸಕನು ನಮ್ಮನ್ನು ಮೇಲೆಹೇಳಿದ ಎರಡು ವಿಧಗಳಿಂದಲೂ ಹಿಂಸಿಸುವನೋ ಅಂತಹ ಹಿಂಸಕನನ್ನು ನೀನು ತಿಳಿದವನಾಗಿ ಅವನನ್ನು ನಾಶಮಾಡು.

English Translation

May Agni inflict (evil) upon the evil-doer who commits offence or wickedness against us, destroy, sagacious Agni, the calumniator who injures us in these two ways.

॥ ವಿಶೇಷವಿಷಯಗಳು ॥

ಯಃ ನಃ ಅಗಃ ಏನಃ ಅಭಿ ಭವತಿ ಅಘಶಂಸೇ ಅಘಂ ಅಧಿ ದಧಾತ—ಎಲೈ ಅಗ್ನಿಯೇ, ಯಾವ ಪುರುಷನು ನಮ್ಮ ವಿಷಯದಲ್ಲಿ ಅಪರಾಧಗಳನ್ನು ಮಾಡಿ ಪಾಪಕೃತ್ಯಗಳನ್ನೆಸಗುವನೋ ಅಂತಹ ದುಷ್ಟನಲ್ಲಿ ಪಾಪವೇ ಶೇಖರಿತವಾಗುವಂತೆ ಮಾಡು. ಎಂದರೆ ಅವನಿಗೆ ಪಾಪಕಾರ್ಯದಲ್ಲಿಯೇ ಆಸಕ್ತಿಯನ್ನು ಹುಟ್ಟಿಸಿ ಅವನ ಪಾಪ ಕರ್ಮಗಳ ಫಲವಾಗಿ ಅವನಿಗೆ ಕೆಡಕಾಗಲಿ ಎಂದಭಿಪ್ರಾಯವು.

ಅಗ್ನೇ ಯಃ ನಃ ದ್ವಯೇನ ಮರ್ಚಯತಿ ಏತಾಂ ಅಭಿಶಸ್ತಿಂ ಚಿಕಿತ್ವಃ ಜಹಿ—ಎಲೈ ಅಗ್ನಿಯೇ, ಮೇಲೆ ಹೇಳಿದ ಎರಡು ವಿಧವಾದ ಅಕೃತ್ಯಗಳನ್ನು ಮಾಡುವ ದುಷ್ಟಮನುಷ್ಯನನ್ನು ತಿಳಿದು ಅವನನ್ನು ನಿಗ್ರಹಿಸು ಎಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ.

॥ ಸಂಹಿತಾಪಾಠಃ ॥

ತ್ವಾಮ॑ಸ್ಯಾ ವ್ಯು॑ಷಿ ದೇ॒ವ ಪೂರ್ವೇ॑ ದೂ॒ತಂ ಕೃ॑ಣ್ವಾ॒ನಾ ಅ॑ಯಜಂತ ಹ॒ವ್ಯೈಃ।
ಸಂ॒ಸ್ಥೇ ಯದ॑ಗ್ನ॒ ಈಯ॑ಸೇ ರ॒ಯೀಣಾಂ॑ ದೇ॒ವೋ ಮ॒ರ್ತೈರ್ವ॑ಸು॒ಭಿರಿ॒ಧ್ಯ॑-
ಮಾ॑ನಃ ॥ ೮ ॥

॥ ಪದಪಾಠಃ ॥

ತ್ವಾಂ । ಅಸ್ಯಾಃ । ವ್ಯುಷಿ । ದೇವ । ಪೂರ್ವೇ । ದೂತಂ । ಕೃಣ್ವಾನಾಃ । ಅಯಜಂತ । ಹವ್ಯೈಃ ।
ಸಂಽಸ್ಥೇ । ಯತ್ । ಅಗ್ನೇ । ಈಯಸೇ । ರಯಿಣಾಂ । ದೇವಃ । ಮರ್ತೈಃ । ವಸುಽಭಿಃ । ಇಧ್ಯಮಾನಃ ॥

ಹೇ ಅಗ್ನೇ ತ್ವಾಮಸ್ಯಾ ರಾತ್ರೇರ್ವ್ಯುಷಿ । ವ್ಯುಷ್ಯಾಯಾಮುಷಸೀತ್ಯರ್ಥಃ । ಪೂರ್ವೇ ಪುರಾತನಾ ಯಜಮಾನಾ ದೂತಂ ದೇವಾನಾಂ ಪ್ರೇರಕಂ ಕೃಣ್ವಾನಾಃ ಕುರ್ವಾಣಾ ಅಯಜಂತ ಹವ್ಯೈರ್ಹವಿರ್ಭಿಃ ಸಾಧನೈ ರಯಿಣಾಂ ಹವಿರ್ಲಕ್ಷಣಾನಾಂ ಸಂಸ್ಥೇ ಸಂಸ್ಥಾನ ಆಸಾದನೇ ಸತಿ ಹೇ ಅಗ್ನೇ ಯದ್ಯದೇಯಸೇ। ಗಚ್ಛಸಿ । ದೇವೋ ದ್ಯೋತಮಾನೋ ಮರ್ತೈರ್ಮನುಷ್ಯೈರ್ಯರ್ತ್ವಿಗ್ಭಿರ್ವಸುಭಿರ್ವಾಸಕೈರಿಧ್ಯಮಾನಃ ಸಮಿಧ್ಯಮಾನಃ ಸನ್ ॥

॥ ಪ್ರತಿಪದಾರ್ಥ ॥

ದೇವ—ಪೂಜ್ಯನಾದ । **ಅಗ್ನೇ**—ಎಲೈ ಅಗ್ನಿಯೇ । **ಯತ್**—ಯಾವಾಗ । **ದೇವಃ**—ಪ್ರಕಾಶಮಾನನಾದ ನೀನು । **ವಸುಭಿಃ**—ನಿನಗೆ ವಾಸದಾತರಾದ । **ಮರ್ತೈಃ**—ಋತ್ವಿಕ್ಕುಗಳಿಂದ । **ಇಧ್ಯಮಾನಃ**—ಪ್ರಜ್ವಲಿತನಾಗಿ । **ರಯಿಣಾಂ**—ಹವಿಸ್ಸಿನ ರೂಪವಾದ ಧನಗಳ । **ಸಂಸ್ಥೇ**—ಸಮುದಾಯವಿರುವ ಯಜ್ಞಾದಿಗಳಿಗೆ । **ಈಯಸೇ**—ಹೋಗಿರುವೆಯೋ (ಆಗ) । **ಪೂರ್ವೇ**—ಪುರಾತನರಾದ ಯಜಮಾನರು । **ತ್ವಾಂ**—ನಿನ್ನನ್ನು । **ದೂತಂ**—ದೇವದೂತನನ್ನಾಗಿ । **ಕೃಣ್ವಾನಾಃ**—ಮಾಡುತ್ತಾ । **ಅಸ್ಯಾಃ**—ರಾತ್ರಿಯ । **ವ್ಯುಷಿ**—ಕೊನೆಯ ಭಾಗವಾದ ಉಷಃಕಾಲದಲ್ಲಿ । **ಹವ್ಯೈಃ**—ಹವಿಸ್ಸುಗಳ ಅರ್ಪಣೆಯಿಂದ । **ಅಯಜಂತ**—ಪೂಜಿಸಿದ್ದಾರೆ

॥ ಭಾವಾರ್ಥ ॥

ಪೂಜ್ಯನಾದ ಎಲೈ ಅಗ್ನಿಯೇ, ಪ್ರಕಾಶಮಾನನಾದ ನೀನು, ನಿನಗೆ ವಾಸದಾತರಾದ ಋತ್ವಿಕ್ಕುಗಳಿಂದ ಪ್ರಜ್ವಲಿತನಾಗಿ, ಹವಿಸ್ಸಿನ ರೂಪದೆ ಧನಗಳ ಸಮುದಾಯವಿರುವ ಯಜ್ಞಸ್ಥಾನಗಳಿಗೆ ಪುರಾತನರಾದ ಯಜಮಾನರು ನಿನ್ನನ್ನು ದೇವದೂತನನ್ನಾಗಿ ಮಾಡುತ್ತಾ ರಾತ್ರಿಯ ಕೊನೆಯ ಭಾಗವಾದ ಉಷಃಕಾಲದಲ್ಲಿ ಹವಿಸ್ಸುಗಳ ಅರ್ಪಣೆಯಿಂದ ನಿನ್ನನ್ನು ಪೂಜಿಸಿದ್ದಾರೆ.

English Translation

Former (worshippers) constituting you, divine (Agni), the messenger (of the gods), have worshipded you with oblations at the dawn of day, when you proceed to the place (of the aggregation) of the wealth (of sacrifice), bright-shining, kindled by the mortals who have given you an abode.

॥ ವಿಶೇಷವಿಷಯಗಳು ॥

ಎಲೈ ಅಗ್ನಿಯೇ, ಹಿಂದಿನ ಕಾಲದಲ್ಲಿಯೂ ಯಜ್ಞಮಾಡುತ್ತಿದ್ದ ಯಜಮಾನರು ಉಷಃಕಾಲದಲ್ಲಿ ನಿನಗೆ ಹವಿಸ್ಸನ್ನು ಅರ್ಪಿಸಿ ಪೂಜಿಸುತ್ತಿದ್ದರು. ಆ ಕಾಲದಲ್ಲಿ ಎಂದರೆ ಯಜ್ಞದಲ್ಲಿ ನೀನು ಋತ್ವಿಕ್ಕುಗಳಿಂದ ಯಜ್ಞವೇದಿಯಲ್ಲಿ ಸ್ಥಾಪಿತನಾಗಿ, ಪ್ರಕಾಶಮಾನನಾಗಿ ಬೆಳಗುತ್ತಿರುವೆ. ಇಂತಹ ನಿನ್ನನ್ನು ತಾವು ಅರ್ಪಿಸುವ ಹವಿಸ್ಸನ್ನು ದೇವತೆಗಳಿಗೆ ಒಯ್ಯುವ ದೂತನನ್ನಾಗಿ ಭಾವಿಸಿ ನಿನ್ನನ್ನು ಹವಿರಾದಿಗಳಿಂದ ನಾನಾವಿಧವಾಗಿ ಪೂಜಿಸಿದ್ದಾರೆ. ಎಂದರೆ ಹಿಂದಿನವರೂ ಸಹ ನಮ್ಮಂತೆಯೇ ನಿನ್ನನ್ನು ಉಷಃಕಾಲದಲ್ಲಿ ಯಜ್ಞಾದಿಗಳಲ್ಲಿ ಹವಿರರ್ಪಣೆಯಿಂದ ಪೂಜಿಸಿ ಉಪಚರಿಸುತ್ತಿದ್ದರು ಎಂದು ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ಅವ॑ स्पृधि पितरं योधि॑ विद्वान्पु॒त्रो यस्ते॑ सहसः सूनऊ॑हे ।

कदा॑ चिकित्वो॒ अभि॑ चक्ष्से॑ नो॒ऽग्ने॑ क॒दाँ ऋ॑त॒चिद्या॑तयासे ॥

॥ ಪದಪಾಠಃ ॥

अव॑ । स्पृ॒धि॒ । पि॒त॒र॑म् । योधि॑ । वि॒द्वान् । पु॒त्रः । यः । ते॒ । सहसः । सू॒नो॒ इति॑ । ऊ॒हे॒ ।

कदा॑ । चि॒कि॒त्वः॒ । अ॒भि । च॒क्ष्से॒ । नः॒ । अग्ने॑ । क॒दा । ऋ॒त्व॒चित् । या॒त॒या॒से ॥ ९ ॥

॥ ಸಾಯಣಭಾಷ್ಯಂ ॥

हे सहसः सूनोः बलस्य पुत्रा॒ग्ने॑ त्वमव स्पृधि । पारय । योधि । पृथक्कुरु सासात् । यः पुत्रः पुत्रस्थानीयस्तव यो यजमानस्ते त्वां पितरं बालकं पितृभूतं विद्वान् जानन् ऊहे । वहति हविः । तमेवं कुर्वित्यृषिरात्मानं परोक्षेणाह । हव्यवाळग्निरजरः पिता नः । ऋग्वे. ७-४-७ । इति हि वक्ष्यति । यदा । पित्रपुत्रभावो व्यत्यस्तः । पितरं पित्रवद्रक्षकं यजमानमव स्पृधि योधि च यस्त्वं पुत्रः पुत्रवत्सदा रक्षणीयः । त्वं पुत्रो भवसि यस्ते॒ऽनिधत् । ऋग्वे. ३-८-९ । इति हि श्रुतिः । हे चिकित्वश्चेतनावन्नग्ने कदा नोऽस्मानभि चक्ष्से । अपिपश्यसि । कदा च ऋतचिद्यज्ञस्योदकस्य वा चेतयिता यातयासे । प्रेरयसि सन्मार्गेण ॥

‖ ಪ್ರತಿಪದಾರ್ಥ ‖

ಸಹಸಃ ಸೂನೋ—ಶಕ್ತಿಪುತ್ರನಾದ ಎಲೈ ಅಗ್ನಿಯೇ। **ಯಃ ಪುತ್ರಃ**—(ನಿನಗೆ) ಪುತ್ರರೂಪನಾದ ಯಾವ ಯಜಮಾನನು। **ತೇ**—ನಿನ್ನನ್ನು। **ಪಿತರಂ**—ತನ್ನ ಪಿತೃರೂಪನನ್ನಾಗಿ। **ವಿದ್ವಾನ್**—ತಿಳಿದುಕೊಂಡು। **ಊಹೇ**—ಹವಿಸ್ಸನ್ನು ತಂದೊಪ್ಪಿಸುವನೋ (ಅವನನ್ನು)। **ಅವ ಸ್ಪೃಧಿ**—ದುಃಖದಿಂದ ಕೊನೆಗಾಣಿಸು। **ಯೋಧಿ**—ಪಾಪದಿಂದ ಬೇರೆಮಾಡು। **ಅಗ್ನೇ**—ಎಲೈ ಅಗ್ನಿಯೇ। **ಚಿಕಿತ್ವಃ**—ಎಲ್ಲವನ್ನೂ ತಿಳಿದವನಾಗಿ। **ನಃ**—ನಮ್ಮನ್ನು। **ಕದಾ**—ಯಾವಾಗ। **ಅಭಿ ಚಕ್ಷಸೇ**—ಅನುಗ್ರಹಿಸಿ ವೀಕ್ಷಿಸುತ್ತೀಯೆ। **ಋತಚಿತ್**—ಯಜ್ಞಾದಿಗಳಿಗೆ ಪ್ರೇರಕನಾಗಿ। **ಕದಾ**—ಯಾವಾಗ। **ಯಾತಯಾಸೇ**—(ನಮ್ಮನ್ನು ಸನ್ಮಾರ್ಗಕ್ಕೆ) ಪ್ರೇರಿಸುತ್ತೀಯೆ.

‖ ಭಾವಾರ್ಥ ‖

ಶಕ್ತಿಪುತ್ರನಾದ ಎಲೈ ಅಗ್ನಿಯೇ, ನಿನಗೆ ಪುತ್ರರೂಪನಾದ ಯಾವ ಯಜಮಾನನು ನಿನ್ನನ್ನು ತನ್ನ ಪಿತೃರೂಪನೆಂದು ತಿಳಿದು ಭಕ್ತಿಯಿಂದ ನಿನಗೆ ಹವಿಸ್ಸನ್ನು ತಂದೊಪ್ಪಿಸುವನೋ ಅವನನ್ನು ದುಃಖದಿಂದ ಕೊನೆಗಾಣಿಸು. ಪಾಪದಿಂದ ಬೇರೆಮಾಡು. ಎಲೈ ಅಗ್ನಿಯೇ, ನೀನು ಸಕಲವನ್ನೂ ತಿಳಿದವನಾಗಿ ನಮ್ಮನ್ನು ಯಾವಾಗ ಅನುಗ್ರಹಿಸಿ ವೀಕ್ಷಿಸುತ್ತೀಯೆ? ಯಜ್ಞಾದಿ ಕಾರ್ಯಗಳಿಗೆ ಪ್ರೇರಕನಾಗಿ ನಮ್ಮನ್ನು ಯಾವಾಗ ಸನ್ಮಾರ್ಗಕ್ಕೆ ತರುತ್ತೀಯೆ?

English Translation.

Convey him (to safety) in war, son of strength, who like a wise son offers to you (reverence) as to a father: when, sagacious Agni, do you look upon us? when, director of sacrifice, do you direct us (to good ways)'

‖ ವಿಶೇಷವಿಷಯಗಳು ‖

ಈ ಋಕ್ಕಿನಲ್ಲಿ ಅಗ್ನಿಗೂ ಯಜಮಾನನಿಗೂ ಪಿತೃಪುತ್ರಭಾವವನ್ನು ಆರೋಪಿಸಿ ಅಗ್ನಿಯನ್ನು ಸ್ತುತಿಸಲಾಗಿದೆ. ತಂದೆಯು ಮಗನನ್ನು ಹೇಗೆ ರಕ್ಷಿಸುವನೋ ಅದರಂತೆ ಪಾಲಕನಾದ ಅಗ್ನಿಯು ಪುತ್ರಸ್ಥಾನೀಯನಾದ ಯಜಮಾನನನ್ನು ರಕ್ಷಿಸು ಎಂಬುದು ಒಂದು ವಿಧವಾದ ವಿವರಣೆಯು. ಈ ವಿಷಯಸಮರ್ಥನೆಗಾಗಿ—

ಹವ್ಯವಾಳಗ್ನಿರಜರಃ ಪಿತಾ ನೋ ವಿಭುರ್ವಿಭಾವಾ ಸುದೃಶೀಕೋ ಅಸ್ಮೇ।
ಸುಗಾರ್ಹಪತ್ಯಾಃ ಸಮಿಷೋ ದಿದೀಹ್ಯಸ್ಮದ್ರ್ಯಙ್ಙಸ್ಮಿ ಮಿಮಾಹಿ ಶ್ರವಾಂಸಿ॥

(ಋ ಸಂ. ೫-೪-೨)

ಎಂಬ ಋಕ್ಕನ್ನು ಉದಾಹರಿಸಿರುವರು ನಮಗೆ (ಯಜಮಾನನಿಗೆ) ಪಿತೃಸ್ಥಾನೀಯನಾದ ಅಥವಾ ಪಾಲಕನಾದ ಅಗ್ನಿಯು ಯಜಮಾನನ ಪರವಾಗಿ ದೇವತೆಗಳಿಗೆ ಹವಿಸ್ಸನ್ನು ವಹಿಸುತ್ತಾ ನಮ್ಮನ್ನು ರಕ್ಷಿಸಲಿ ಎಂಬರ್ಥವು ಇಲ್ಲಿ ಸೂಚಿತವಾಗಿದೆ. ಅಥವಾ ಯಜಮಾನರು ತಮ್ಮ ಪುತ್ರರನ್ನು ಯಾವರೀತಿ ಎಚ್ಚರಿಕೆಯಿಂದ ರಕ್ಷಿಸುವರೋ ಅದರಂತೆ ಪುತ್ರಸ್ಥಾನೀಯನಾದ ಅಗ್ನಿಯನ್ನು ರಕ್ಷಿಸುವರು ಎಂಬ ಇನ್ನೊಂದುವಿಧವಾದ ಅರ್ಥವಿವರಣೆಯೂ ಸಾಧ್ಯವೆಂದು ತೋರಿಸಿ ಅದರ ಸಮರ್ಥನೆಗಾಗಿ—

ತ್ವಂ ಪುತ್ರೋ ಭವಸಿ ಯಸ್ತೇಽವಿಧತ್ ತ್ವಂ ಸಖಾ ಸುಶೇವಃ ಪಾಸ್ಯಾಧೃಷಃ ।
(ಋ ಸಂ. ೨-೧-೯)

ಎಂಬ ಋಕ್ಕನ್ನು ಉದಾಹರಿಸಿದಾರೆ. ಇಲ್ಲಿ ಅಗ್ನಿಯನ್ನು ಪುತ್ರ, ಸ್ನೇಹಿತ ಮೊದಲಾದ ಆದರಾತಿಶಯವನ್ನು ಸೂಚಿಸುವ ಶಬ್ದಗಳಿಂದ ಸ್ತುತಿಸಲಾಗಿದೆ

॥ ಸಂಹಿತಾಪಾಠಃ ॥

ಭೂರಿ ನಾಮು ವಂದಮಾನೋ ದಧಾತಿ ಪಿತಾ ವಸೋ ಯದಿ ತಜ್ಜೋಷಯಾಸೇ ।
ಕುವಿದ್ದೇವಸ್ಯ ಸಹಸಾ ಚಕಾನಃ ಸುಮ್ನಮಗ್ನಿರ್ವನತೇ ವಾವೃಧಾನಃ ॥೧೦॥

॥ ಪದಪಾಠಃ ॥

ಭೂರಿ । ನಾಮ । ವಂದಮಾನಃ । ದಧಾತಿ । ಪಿತಾ । ವಸೋ ಇತಿ । ಯದಿ । ತತ್ । ಜೋಷಯಾಸೇ ।
ಕುವಿತ್ । ದೇವಸ್ಯ । ಸಹಸಾ । ಚಕಾನಃ । ಸುಮ್ನಂ । ಅಗ್ನಿಃ । ವನತೇ । ವವೃಧಾನಃ ॥ ೧೦ ॥

॥ ಸಾಯಣಭಾಷ್ಯಂ ॥

ಭೂರಿ ಪ್ರಭೂತಂ ನಾಮ ತ್ವದೀಯಂ ನಾಮ ವಂದಮಾನಃ ಸನ್ ದಧಾತಿ । ಧಾರಯತಿ । ಸಾಮರ್ಥ್ಯಾದ್ಧವಿಃ । ಅಥವಾ ನಾಮಕಂ ಹವಿಃ ಪ್ರಭೂತಂ ಧಾರಯತಿ ದಾತುಂ । ಪಿತಾ ಪಾಲಕಸ್ತ್ವಂ ಹೇ ವಸೋ ವಾಸಕಾಗ್ನೇ ಯದಿ ತದ್ಧವಿರ್ಜೋಷಯಾಸೇ । ಸೇವಸೇ । ದೇವಸ್ಯ ವ್ಯವಹರ್ತುರ್ಯಜಮಾನಸ್ಯ ಕುವಿದ್ಬಹು ಹವಿಃ ಸಹಸಾ ಬಲೇನ ಯುಕ್ತಃ ಸನ್ ಚಕಾನಃ ಕಾಮಯಮಾನಃ । ಯದ್ವಾ ಕರ್ಮಣಿ ಷಷ್ಠೀ । ದೇವಂ ಯಜಮಾನಂ ಕಾಮಯಮಾನೋಽಗ್ನಿರ್ವವೃಧಾನೋ ವರ್ಧಮಾನೋ ಯಜಮಾನಂ ವರ್ಧಯನ್ವಾ ಸುಮ್ನಂ ವನತೇ । ಪ್ರಯಚ್ಛತಿ ।

॥ ಪ್ರತಿಪದಾರ್ಥ ॥

ವಸೋ—ನಿವಾಸನಾದಿಯಿಂದ ಎಲ್ಲರನ್ನೂ ಕಾಪಾಡುವ ಅಗ್ನಿಯೇ, **ಪಿತಾ**—ಪಾಲಕನಾದ ನೀನು **ಯತ್**—ಯಾವಾಗ **ತತ್**—ಯಜಮಾನನಿಂದ ಅರ್ಪಿತವಾದ ಹವಿಸ್ಸನ್ನು **ಜೋಷಯಸೇ**—ಸೇವಿಸುತ್ತಿಯೋ (ಆಗ) **ನಾಮ**—(ಯಜಮಾನನಿಂದ) ನಿನ್ನ ಸ್ತುತಿಸಿದ್ಧವಾದ ಪೆಸರನ್ನು **ವಂದಮಾನಃ**—ಪ್ರಶಂಸಿಸುತ್ತಾ **ಭೂರಿ**—ಪ್ರಭೂತವಾಗಿ **ದಧಾತಿ**—(ಹವಿಸ್ಸನ್ನು) ಹಿಡಿದಿರುತ್ತಾನೆ **ಸಹಸಾ**—ಶಕ್ತಿಯುತನಾದ **ಅಗ್ನಿಃ**—ಅಗ್ನಿಯು **ವವೃಧಾನಃ**—ವೃದ್ಧಿಯನ್ನು ಹೊಂದುತ್ತಲೂ **ಕುವಿತ್**—ಪ್ರಭೂತವಾದ ಹವಿಸ್ಸನ್ನು **ಚಕಾನಃ**—ಆಶಿಸುತ್ತಲೂ **ದೇವಸ್ಯ**—ಹವಿರ್ದಾತನಾದ ಯಜಮಾನನಿಗೆ **ಸುಮ್ನಂ**—ಸುಖವನ್ನು **ವನತೇ**—ಉಂಟುಮಾಡುತ್ತಾನೆ.

॥ ಭಾವಾರ್ಥ ॥

ವಸತಿದಾಯಕನಾದ ಎಲೈ ಅಗ್ನಿಯೇ, ಪಾಲಕನಾದ ನೀನು ಯಜಮಾನನಿಂದ ಅರ್ಪಿತವಾದ ಹವಿಸ್ಸನ್ನು ಸೇವಿಸಲಿಚ್ಛಿಸಿದಾಗೆಲ್ಲಾ, ಯಜಮಾನನು ನಿನ್ನ ಪ್ರಸಿದ್ಧವಾದ ಹೆಸರನ್ನು ಪ್ರಶಂಸಿಸುತ್ತಾ ಪ್ರಭೂತವಾದ ಹವಿಸ್ಸನ್ನು ನಿನಗೆ ಅರ್ಪಿಸಲು ಹಿಡಿದಿರುತ್ತಾನೆ ಶಕ್ತಿಯುತನಾದ ಅಗ್ನಿಯು ವೃದ್ಧಿಯನ್ನು ಹೊಂದುತ್ತಲೂ, ಪ್ರಭೂತವಾದ ಹವಿಸ್ಸನ್ನು ಆಶಿಸುತ್ತಲೂ ಸಹ ಹವಿರ್ದಾತನಾದ ಯಜಮಾನನಿಗೆ ಸುಖವನ್ನುಂಟುಮಾಡುತ್ತಾನೆ

English Translation

Glorifyiug you he offers the copious oblation, if, bestower of dwellings, you as a father are pleased to accept it Agni, ever augmenting, and desirous (to befriend), by his might, the devout (worshipper, offering) copious oblations, bestows upon him happiness.

॥ ಸಂಹಿತಾಪಾಠಃ ॥

ತ್ವಮಂಗ ಜರಿತಾರಂ ಯವಿಷ್ಠ ವಿಶ್ವಾನ್ಯಗ್ನೇ ದುರಿತಾತಿ ಪರ್ಷಿ ।
ಸ್ತೇನಾ ಅದೃಶ್ರನ್ರಿಪವೋ ಜನಾಸೋಽಜ್ಞಾತಕೇತಾ ವೃಜಿನಾ ಅಭೂವನ್ ॥

॥ ಪದಪಾಠಃ ॥

ತ್ವಂ । ಅಂಗ । ಜರಿತಾರಂ । ಯವಿಷ್ಠ । ವಿಶ್ವಾನಿ । ಅಗ್ನೇ । ದುಃಇತಾ । ಅತಿ । ಪರ್ಷಿ ॥
ಸ್ತೇನಾಃ । ಅದೃಶ್ರನ್ । ರಿಪವಃ । ಜನಾಸಃ । ಅಜ್ಞಾತಕೇತಾಃ । ವೃಜಿನಾಃ । ಅಭೂವನ್ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಅಂಗ ಸ್ವಾಮಿನ್ಯವಿಷ್ಠ ಯುವತಮಾಗ್ನೇ ಜರಿತಾರಂ ಸ್ತೋತಾರಮನುಗ್ರಹೀತುಂ ವಿಶ್ವಾನಿ ದುರಿತಾ ದುರಿತಾನ್ಯತಿ ಪರ್ಷಿ । ಅತಿಪಾರಯಸಿ । ಸ್ತೇನಾಸ್ತಸ್ಕರಾ ಅದೃಶ್ರನ್ । ದೃಶ್ಯಂತೇ । ರಿಪವೋ ಜನಾಸಃ ಶತ್ರುಭೂತಾ ಮನುಷ್ಯಾ ಅಜ್ಞಾತಕೇತಾ ಅಪ್ರಜ್ಞಾತಚಿಹ್ನಾ ವೃಜಿನಾ ಅಸ್ಮಾಭಿರ್ವರ್ಜಿತಾ ಅಭೂವನ್ । ಭವಂತಿ ॥

॥ ಪ್ರತಿಪದಾರ್ಥ ॥

ಯವಿಷ್ಠ—ಅತ್ಯಂತಯುವಕನೂ । ಅಂಗ—ಸ್ವಾಮಿಯೂ ಆದ । ಅಗ್ನೇ—ಎಲೈ ಅಗ್ನಿಯೇ । ತ್ವಂ—ನೀನು । ಜರಿತಾರಂ—ಸ್ತೋತೃವನ್ನು । ವಿಶ್ವಾನಿ—ಸಮಸ್ತವಾದ । ದುರಿತಾ—ಪಾಪಗಳಿಂದಲೂ ।

ಅತಿ ಪರ್ಷಿ—ಕೊನೆಗಾಣಿಸುತ್ತೀಯೆ । **ಸ್ತೇನಾಃ**—ಚೋರರು । **ಆದೃಶ್ರನ್**—ನಮ್ಮ ಗೋಚರಕ್ಕೆ ಸಿಕ್ಕೆ ಬಿದ್ದಿದ್ದಾರೆ । **ಅಜ್ಞಾತಕೇತಾಃ**—ರಹಸ್ಯವಾಗಿ ಸಂಚರಿಸತಕ್ಕ (ನಮಗೆ ತಿಳಿಯದೇ ಕೇಡುಬಯಸುವ) । **ರಿಪವೋ ಜನಾಸಃ**—ಶತ್ರುಜನರು । **ವೃಜಿನಾಃ**—ನಮ್ಮಿಂದ ತ್ಯಾಗಮಾಡಲ್ಪಟ್ಟವರಾಗಿ । **ಅಭೂವನ್**—ಆಗಿದ್ದಾರೆ

॥ ಭಾವಾರ್ಥ ॥

ಅತ್ಯಂತಯುವಕನೂ, ಸ್ವಾಮಿಯೂ ಆದ ಎಲೈ ಅಗ್ನಿಯೇ, ನೀನು ನಿನ್ನ ಸ್ತೋತೃವನ್ನು ಸಮಸ್ತವಾದ ಪಾಪಗಳಿಂದಲೂ ಕೊನೆಗಾಣಿಸುತ್ತೀಯೆ ನಮ್ಮ ಚೋರರೆಲ್ಲಾ ನಮ್ಮ ಗಮನಕ್ಕೆ ಸಿಕ್ಕಿಬಿದ್ದಿದ್ದಾರೆ. ನಮ್ಮ ಕೇಡನ್ನು ಬಯಸಿ ನಮಗೆ ತಿಳಿಯದೇ ರಹಸ್ಯಚಿಹ್ನೆಗಳುಳ್ಳ ಸಕಲ ಶತ್ರುಜನರೂ ನಮ್ಮಿಂದ ತ್ಯಕ್ತರಾಗಿದ್ದಾರೆ.

English Translation.

Agni, youngst (of the gods), verily you bear your adorer (safe) beyond all calamities thieves have been detected, and hostile men with covert evil intentions, have been avoided (by us.)

॥ ವಿಶೇಷವಿಷಯಗಳು ॥

ಸಮಸ್ತಪಾಪಗಳಿಂದ ನಮ್ಮನ್ನು ರಕ್ಷಿಸಬೇಕೆಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ. ಈ ವಿಧವಾದ ಪ್ರಾರ್ಥನೆಯನ್ನೊಳಗೊಂಡ ವಾಕ್ಯಗಳು ಅಗ್ನಿಯ ಸ್ತುತಿಯಲ್ಲಿ ವಿಶೇಷವಾಗಿ ಕಂಡುಬರುವುದು ಕೆಲವು ಸಂದರ್ಭಗಳಲ್ಲಿ ಉಪಮಾನ ಸಹಿತವಾಗಿಯೂ ವರ್ಣನೆ ಇದೆ. ಈ ವಿಷಯದಲ್ಲಿ—

ವಿಶ್ವಾನ್ಯಗ್ನೇ ದುರಿತಾತಿ ಪರ್ಷಿ—(ಋ ಸಂ ೫-೩-೧೧)

ಸಿಂಧುಂ ನ ನಾವಾ ದುರಿತಾತಿ ಪರ್ಷಿ—(ಋ ಸಂ ೫-೪-೯)

ಸ ನಃ ಪರ್ಷದತಿ ದುರ್ಗಾಣಿ ವಿಶ್ವಾ ನಾವೇವ ಸಿಂಧುಂ ದುರಿತಾತ್ಯಗ್ನಿಃ ।

(ಋ ಸ ೧-೯೯-೧)

ಇತ್ಯಾದಿ ಅನೇಕ ಉದಾಹರಣೆಗಳನ್ನು ಕೊಡಬಹುದು

॥ ಸಂಹಿತಾಪಾಠಃ ॥

ಇನೋ॑ ಯಾ॒ಮಾಸ॑ಸ್ತ್ವ॒ದ್ರಿಗ॑ಭೂವ॒ನ್ವಸ॑ವೇ॒ ವಾ॒ ತದಿ॑ದಾಗೋ॑ ಅವಾಚಿ ॥
ನಾ॒ಹಾ॒ಯ॒ಮ॒ಗ್ನಿರ॒ಭಿಶ॑ಸ್ತ್ಯೋ॑ ನ್ಯೋ॑ ನ ರೀ॒ಷ॑ತೇ ವಾವೃ॒ಧಾ॒ನಃ ಪ॒ರಾ ದಾ॑ತ್॥

॥ ಪದಪಾಠಃ ॥

ಇಮೇ । ಯಾವಮಾಸಃ । ತ್ವದ್ರಿಕ್ । ಅಭೂವನ್ । ವಸವೇ । ವಾ । ತತ್ । ಇತ್ । ಆಗಃ । ಅವಾಚಿ ।
ನ । ಅಹ । ಅಯಂ । ಅಗ್ನಿಃ । ಅಭಿಶಸ್ತಯೇ । ನಃ । ನ । ರಿಷತೇ । ವವೃಧಾನಃ । ಪರಾ । ದಾತ್ ॥೧೨॥

॥ ಸಾಯಣಭಾಷ್ಯಂ ॥

ಇಮೇ ಯಾವಮಾಸೋ ಗಂತಾರಃ ಸ್ತೋವಮಾಸ್ತ್ವದ್ರಿಕ್ ತ್ವದಭಿಮುಖಾ ಅಭೂವನ್ । ಭವಂತಿ । ವಾ ಅಥವಾ ವಸವೇ ವಾಸಕಾಯ ತದಾಗೋಽಪರಾಧವಮಾಶಾಸನರೂಪಮವಾಚಿ । ಉಕ್ತವಾನಹಮಗ್ನಿಂ। ಇದಂ ದೇಹೀತಿ ಯಾಚನಮೇವಾಪರಾಧಃ । ಇದಿತಿ ಪೂರಣಃ । ಯದ್ವಾ । ತದಿದಂ ವಕ್ಷ್ಯಮಾಣಂ ಶತ್ರುಭಿಃ ಕೃತಮಾಗೋಽವಾಚಿ । ಕಿಂಚಾಯಮಗ್ನಿರ್ವವೃಧಾನಃ ಸ್ತುತ್ಯಾ ವರ್ಧಮಾನಃ ಸನ್ ನಾಹ ಸ್ಮೈವಾಭಿಶಸ್ತಯೇ ನಿಂದಕಾಯ ನೋಽಸ್ಮಾನ್ ಪರಾ ದಾತ್ । ಪರಾದದ್ಯಾತ್ । ತಥಾ ರಿಷತೇ ಹಿಂಸಕಾಯ ನೈವ ಪರಾ ದಾತ್ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಯಾವಮಾಸಃ**—ನಿನ್ನನ್ನೇ ಅರಸಿ ಹೊರಟಿರುವ । **ಇಮೇ**—ಈ ಸ್ತುತಿಗಳು । **ತ್ವದ್ರಿಕ್**—ನಿನಗೆ ಅಭಿಮುಖವಾಗಿಯೇ । **ಅಭೂವನ್**—ಆಗಿವೆ । **ವಾ**—ಅಥವಾ ಒಂದುವೇಳೆ । **ವಸವೇ**—ವಾಸದಾಯಕವಾದ ಅಗ್ನಿಯ ವಿಷಯದಲ್ಲಿ। **ತತ್**—ನನ್ನ ಯಾಚನೆಯು। **ಆಗಃ**—ಪಾಪರೂಪದಲ್ಲಿ । **ಅವಾಚಿ**—ಉಕ್ತವಾಗಿದ್ದರೂ ಇದ್ದಿರಬಹುದು । **ಅಯಂ**—ಈ ಅಗ್ನಿಯು । **ವವೃಧಾನಃ**—(ನನ್ನ ಸ್ತುತಿಯಿಂದ) ವೃದ್ಧಿಯನ್ನು ಹೊಂದುತ್ತಾ । **ನಃ**—ನಮ್ಮನ್ನು । **ಅಭಿಶಸ್ತಯೇ**—ನಿಂದಕನಾದ ಶತ್ರುವಿನ ವಶಕ್ಕೆ । **ನ ಅಹ ಪರಾ ದಾತ್**—ಖಂಡಿತ ಒಪ್ಪಿಸದಿರಲಿ । **ರಿಷತೇ ನ**—ಹಿಂಸಕನಾದ ಶತ್ರುವಿಗೂ ಒಪ್ಪಿಸದಿರಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನನ್ನೇ ಅರಸಿ ಹೊರಟಿರುವ ಈ ಸ್ತುತಿಗಳು ನಿನಗೆ ಅಭಿಮುಖವಾಗಿಯೇ ಇವೆ. ಅಥವಾ ಒಂದುವೇಳೆ ನನ್ನ ಯಾಚನೆಯಿಂದ ನಿನಗೆ ತೊಂದರೆಯಾದರೂ ಆಗಬಹುದು. ಈ ಪಾಪವನ್ನು ಮನ್ನಿಸಿ, ನನ್ನ ಸ್ತುತಿಗಳಿಂದ ವೃದ್ಧಿಯನ್ನು ಪಡೆದು, ನಮ್ಮನ್ನು ನಿಂದಿಸುವವನೂ, ಹಿಂಸಿಸುವವನೂ ಆದ ಶತ್ರುವಿನ ವಶಕ್ಕೆ ಮಾತ್ರ ನಮ್ಮನ್ನು ಒಪ್ಪಿಸಬೇಡ.

English Translation.

These (encomiums) are directed towards you, but perhaps an offence has thereby been uttered to (you), the giver of dwellings. may Agni, augmenting (by our praise), yield us not up to the maligner or the malevolent.

॥ ವಿಶೇಷವಿಷಯಗಳು ॥

ಉಪಸಂಹಾರರೂಪವಾದ ಈ ಕೊನೆಯ ಋಕ್ಕಿನಲ್ಲಿ ಋಷಿಯು ಅಗ್ನಿಯನ್ನು ಸ್ತುತಿಸುತ್ತಾ ಕಾರಣಾಂತರದಿಂದ ಅಥವಾ ಅಜ್ಞಾನದಿಂದ ಅಗ್ನಿಯ ವಿಷಯದಲ್ಲಿ ಪಾಪವನ್ನು ಆಚರಿಸಿದ್ದರೆ ಅದೆಲ್ಲವನ್ನೂ ಕ್ಷಮಿಸಿ, ಶತ್ರುವಿನ ವಶವಾಗದಂತೆ ರಕ್ಷಿಸಬೇಕೆಂದು ಅಗ್ನಿಯನ್ನು ಪ್ರಾರ್ಥಿಸಿದಾನೆ

ನಾಲ್ಕನೆಯ ಸೂಕ್ತವು

॥ ಸಾಯಣಭಾಷ್ಯಂ ॥

ತ್ವಾಮಗ್ನ ಇತ್ಯೇಕಾದಶರ್ಚಂ ಚತುರ್ಥಂ ಸೂಕ್ತಮಾತ್ರೇಯಸ್ಯ ವಸುಶ್ರುತಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ । ಅನುಕ್ರಾಂತಂ ಚ । ತ್ವಾಮಗ್ನ ಏಕಾದಶೇತಿ ॥ ಪ್ರಾತರನುವಾಕಾಶ್ವಿನಶಸ್ತ್ರ-ಯೋರ್ವಿನಿಯೋಗೋಽಬೋಧ್ಯಗ್ನಿರಿತ್ಯತ್ರೋಕ್ತಃ ॥

ಅನುವಾದವು—**ತ್ವಾಮಗ್ನೇ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಆತ್ರೇಯಗೋತ್ರದ ವಸುಶ್ರುತನೆಂಬುವನು ಋಷಿಯು; ಅಗ್ನಿಯು ದೇವತೆಯು, ತ್ರಿಷ್ಟುಪ್‌ಛಂದಸ್ಸು ಅನುಕ್ರಮಣಿಕೆಯಲ್ಲಿ **ತ್ವಾಮಗ್ನ ಏಕಾದಶ** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಪರನಕ್ಯಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಈ ಮಂಡಲದ **ಅಬೋಧ್ಯಗ್ನಿಃ** ಎಂಬ ಮೊದಲನೆಯ ಸೂಕ್ತದ ವಿನಿಯೋಗದಲ್ಲಿಯೇ ಹೇಳಲಾಗಿದೆ.

ಸೂಕ್ತ—೪

ಮಂಡಲ—೫ ॥ ಅನುವಾಕ—೧ ॥ ಸೂಕ್ತ—೪ ॥
ಆಷ್ಟಕ—೩ ॥ ಅಧ್ಯಾಯ—೮ ॥ ವರ್ಗ—೧೮, ೧೯ ॥

ಸೂಕ್ತದಲ್ಲಿರುವ ಋಕ್ಕುಗಳ ಸಂಖ್ಯೆ—೧೧ ॥
ಋಷಿಃ—ವಸುಶ್ರುತ ಆತ್ರೇಯಃ ॥
ದೇವತಾ—ಅಗ್ನಿಃ ॥
ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ತ್ವಾಮ॑ಗ್ನೇ ವಸುಪ॒ತಿಂ ವಸೂ॑ನಾ॒ಮಭಿ॒ ಪ್ರ ಮಂ॑ದೇ ಅಧ್ವ॒ರೇಷು॑ ರಾಜನ್ ।
ತ್ವಯಾ॒ ವಾಜಂ॒ ವಾಜ॑ಯಂತೋ॒ ಜಯೇ॑ಮ॒ಾಭಿ ಷ್ಯಾಮ॑ ಪೃತ್ಸು॒ತೀರ್ಮ॑-
ರ್ತ್ಯಾ॒ನಾಂ ॥ ೧ ॥

॥ ಪದಪಾಠಃ ॥

ತ್ವಾಂ । ಅಗ್ನೇ । ವಸುಪತಿಂ । ವಸೂನಾಂ । ಅಭಿ । ಪ್ರ । ಮಂದೇ । ಅಧ್ವರೇಷು । ರಾಜನ್ ॥

ತ್ವಯಾ । ವಾಜಂ । ವಾಜಯಂತಃ । ಜಯೇಮ । ಅಭಿ । ಷ್ಯಾಮ । ಪೃತ್ಸುತೀಃ । ಮರ್ತ್ಯಾನಾಂ ॥೧॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ವಸೂನಾಂ ವಸುಪತಿಂ । ವೃತ್ರ್ಯವೃತ್ರಿಭ್ಯಾಂ ವಸೂನಾಂ ಬಾಹುಲ್ಯಂ ತತ್ಸ್ವಾಮಿತ್ವಂ ಚೋಕ್ತಂ । ಬಹೂನಾಂ ಧನಾನಾಂ ಸ್ವಾಮಿನಂ ತ್ವಾಮಧ್ವರೇಷು ಯಾಗೇಷ್ವಭಿ ಪ್ರ ಮಂದೇ । ಅಭಿಮುಖ್ಯೇನ ಸ್ತೌಮಿ ಹೇ ರಾಜನ್ । ಕಿಂಚ ತ್ವಯಾನುಕೂಲೇನ ವಾಜಯಂತೋಽನ್ನಮಿಚ್ಛಂತೋ ವಯಂ ವಾಜಂ ಜಯೇಮ । ಕಿಂಚ ಮರ್ತ್ಯಾನಾಂ ಮರಣಧರ್ಮಕಾಣಾಂ ಪೃತ್ಸುತೀಃ ಸೇನಾ ಅಭಿ ಷ್ಯಾಮ । ಅಭಿಭವೇಮ ॥

॥ ಪ್ರತಿಪದಾರ್ಥ ॥

ರಾಜನ್—ಪ್ರಭುವಾದ । **ಅಗ್ನೇ**—ಎಲೈ ಅಗ್ನಿಯೇ । **ವಸೂನಾಂ**—ಅನೇಕವಿಧವಾದ ಸಂಪತ್ತುಗಳಿಗೆ **ವಸುಪತಿಂ**—ಒಡೆಯನಾದ । **ತ್ವಾಂ**—ನಿನ್ನನ್ನು । **ಅಧ್ವರೇಷು**—ಯಾಗಗಳಲ್ಲಿ । **ಅಭಿ ಪ್ರ ಮಂದೇ**—ಸ್ತುತಿಸಿ ತುಷ್ಟಿಯನ್ನುಂಟುಮಾಡುತ್ತೇನೆ । **ವಾಜಯಂತಃ** — ಅನ್ನಾಪೇಕ್ಷಿಗಳಾದ ನಾವು । **ತ್ವಯಾ**—ನಿನ್ನ ಅನುಗ್ರಹದಿಂದ । **ವಾಜಂ**—ಅನ್ನವನ್ನು । **ಜಯೇಮ**--ಪಡೆಯುವಂತಾಗಲಿ । **ಮರ್ತ್ಯಾನಾಂ**—ಶತ್ರು ಜನರ । **ಪೃತ್ಸುತೀಃ**—ಸೇನೆಗಳನ್ನು । **ಅಭಿ ಷ್ಯಾಮ**—ಜಯಿಸುವಂತಾಗಲಿ ।

॥ ಭಾವಾರ್ಥ ॥

ಪ್ರಭುವಾದ ಎಲೈ ಅಗ್ನಿಯೇ, ಅನೇಕವಿಧವಾದ ಸಂಪತ್ತುಗಳಿಗೆ ಒಡೆಯನಾದ ನಿನ್ನನ್ನು ಯಾಗಗಳಲ್ಲಿ ಸ್ತುತಿಸಿ ನಿನಗೆ ತುಷ್ಟಿಯನ್ನುಂಟುಮಾಡುತ್ತೇನೆ ಅನ್ನಾಪೇಕ್ಷಿಗಳಾದ ನಾವು ನಿನ್ನ ಅನುಗ್ರಹದಿಂದ ಅನ್ನವನ್ನು ಪಡೆಯುವಂತಾಗಲಿ. ಶತ್ರುಜನರ ಸೇನೆಗಳನ್ನು ಜಯಿಸುವಂತಾಗಲಿ

English Translation.

Royal Agni, I glorify at sacrifices, you who are the lord of vast riches, may we who are in want of food obtain food through you, and (through you) may we overcome hosts of (hostile) men.

ಈ ಋಕ್ಕಿನ ಅರ್ಥವು ಸ್ಪಷ್ಟವಾಗಿದೆ **ವಸುಪತಿಂ ವಸೂನಾಂ** ಎಂಬ ಒಂದೇ ಅರ್ಥವಿರುವ ಶಬ್ದಗಳ ದ್ವಿರುಕ್ತಿಯು ಋಗ್ವೇದದಲ್ಲಿ ಅನೇಕಕಡೆಗಳಲ್ಲಿರುವುದು **ರಯಿಪತಿಂ ರಯಿಣಾಂ, ವಿಶಾಂ ವಿಶ್ಪತಿಂ, ದೇವೋ ದೇವಾನಾಂ, ಜ್ಯೋತಿಷಾಂ ಜ್ಯೋತಿಃ** ಇತ್ಯಾದ್ಯನೇಕ ಉದಾಹರಣೆಗಳಿವೆ

ಪೃತ್ಸುತೀಃ—**ಪೃತ್ಸು** ಶಬ್ದವು ಸಂಗ್ರಾಮ (ಯುದ್ಧ) ನಾಮಗಳಲ್ಲಿ ಪಠಿತವಾಗಿದೆ (ನಿ. ೩-೯) ಪೃತ್ಸುತೀಃ ಎಂದರೆ ಯುದ್ಧಗಳಲ್ಲಿ ಭಾಗವಹಿಸುವ ಸೇನೆಗಳು ಎಂದರ್ಥವು

॥ ಸಂಹಿತಾಪಾಠಃ ॥

ಹವ್ಯವಾಳಗ್ನಿರಜರಃ ಪಿತಾ ನೋ ವಿಭುರ್ವಿಭಾವಾ ಸುದೃಶೀಕೋ ಅಸ್ಮೇ ।
ಸುಗಾರ್ಹಪತ್ಯಾಃ ಸಮಿಷೋ ದಿದೀಹ್ಯಸ್ಮದ್ಯ್ಗ್ಂಕ್ಸಂ ಮಿಮೀಹಿ ಶ್ರವಾಂಸಿ ॥

॥ ಪದಪಾಠಃ ॥

ಹವ್ಯವಾಟ್ । ಅಗ್ನಿಃ । ಅಜರಃ । ಪಿತಾ । ನಃ । ವಿಭುಃ । ವಿಭಾವಾ । ಸುದೃಶೀಕಃ । ಅಸ್ಮೇ ಇತಿ ।
ಸುಗಾರ್ಹಪತ್ಯಾಃ । ಸಂ । ಇಷಃ । ದಿದೀಹಿ । ಅಸ್ಮದ್ಯ್ಗ್ಂಕ್ । ಸಂ । ಮಿಮೀಹಿ । ಶ್ರವಾಂಸಿ ॥ ೨ ॥

ಸಾಯಣಭಾಷ್ಯಂ ।

ದರ್ಶಪೂರ್ಣಮಾಸೇ ಪತ್ನೀಸಂಯಾಜೇ ಗೃಹಪತೇರ್ಯಾಜ್ಯೈಷಾ। ಸೂತ್ರಿತಂ ಚ । ಹವ್ಯವಾಳಗ್ನಿರಜರಃ ಪಿತಾ ನ ಇತಿ ಪತ್ನೀಸಂಯಾಜಾಃ । ಆ. ೧-೧೦ । ಇತಿ ॥ ದೇವಸುವಾಂ ಹವಿಷ್ಪಪ್ಯಗ್ನೇರೇಷೈವ ಯಾಜ್ಯಾ। ಸೂತ್ರಿತಂ ಚ। ಹವ್ಯವಾಳಗ್ನಿರಜರಃ ಪಿತಾ ನಸ್ತ್ವಂ ಚ ಸೋಮ ನೋ ವಶಃ। ಆ ೪-೧೧। ಇತಿ॥

ಅಯಂ ಹವ್ಯವಾಡಗ್ನಿರಜರೋಽಜೀರ್ಣಃ ಸನ್ ನಃ ಪಿತಾ ಭವತ್ವಿತಿ ಶೇಷಃ । ಕಿಂಚ ವಿಭುರ್ವ್ಯಾಪ್ತಃ ವಿಭಾವಾ ದೀಪ್ತಿಮಾನ್ ಸುದೃಶೀಕಃ ಶೋಭನದರ್ಶನೋಽಸ್ಮೇ ಅಸ್ಮಾಕಂ ಭವತು । ಅಥ ಪ್ರತ್ಯಕ್ಷವದಾಃ । ಸುಗಾರ್ಹಪತ್ಯಾಃ ಶೋಭನಗಾರ್ಹಪತ್ಯಯುಕ್ತಾನೀಷೋಽನ್ನಾನಿ ಸಂ ದಿದೀಹಿ । ಸಮ್ಯಕ್ ಪ್ರಕಾಶಯ । ದದಸ್ವ ನಾ । ಅಸ್ಮದ್ಯ್ಗ್ಂಕ್ ಅಸ್ಮದಭಿಮುಖಂ ಶ್ರವಾಂಸ್ಯನ್ನಾನಿ ಸಂ ಮಿಮೀಹಿ । ಸಮ್ಯಕ್ ಪ್ರಯಚ್ಛ ॥

॥ ಪ್ರತಿಪದಾರ್ಥ ॥

ಹವ್ಯವಾಟ್—ದೇವತೆಗಳಿಗೆ ಹವಿಸ್ಸನ್ನು ಪಹಿಸುವವನೂ। **ಅಜರಃ**—ಕ್ಷಯರಹಿತನೂ ಆದ । **ಅಗ್ನಿಃ**—ಅಗ್ನಿಯು । **ನಃ**—ನಮಗೆ । **ಪಿತಾ**—ಪಾಲಕನಾಗಲಿ । **ವಿಭುಃ**—ಸರ್ವವ್ಯಾಪಕನೂ । **ವಿಭಾವಾ**—ಪ್ರಕಾಶಯುತನೂ ಆದ ಅಗ್ನಿಯು । **ಅಸ್ಮೇ**—ನಮಗೆ । **ಸುದೃಶೀಕಃ**—ಶೋಭನಾತ್ಮಕವಾದ ದರ್ಶನವುಳ್ಳವನಾಗಿರಲಿ । **ಸುಗಾರ್ಹಪತ್ಯಾಃ**—ಶ್ರೇಷ್ಠವಾದ ಗಾರ್ಹಪತ್ಯಕ್ಕೆ ಉಪಯುಕ್ತವಾದ । **ಇಷಃ**—ಅನ್ನಗಳನ್ನು । **ಸಂ ದಿದೀಹಿ**—ನಮಗೆ ತೋರಿಕೊಡು । **ಅಸ್ಮದ್ಯ್ಗ್ಂಕ್**—ನಮಗೆ ಅಭಿಮುಖವಾಗಿ । **ಶ್ರವಾಂಸಿ**—ಅನ್ನಗಳನ್ನು । **ಸಂ ಮಿಮೀಹಿ**—ತುಂಬಿಡು

॥ ಭಾವಾರ್ಥ ॥

ದೇವತೆಗಳಿಗೆ ಹವಿಸ್ಸನ್ನು ವಹಿಸುವವನೂ, ಕ್ಷಯರಹಿತನೂ ಆದ ಅಗ್ನಿಯು ನಮ್ಮ ಪಾಲಕನಾಗಿರಲಿ. ಸರ್ವವ್ಯಾಪಕನೂ, ಪ್ರಕಾಶಯುತನೂ ಆದ ಅಗ್ನಿಯು ನಮಗೆ ಶೋಭನಾತ್ಮಕವಾದ ದರ್ಶನವುಳ್ಳವನಾಗಿರಲಿ ಎಲೈ ಅಗ್ನಿಯೇ, ಶ್ರೇಷ್ಠವಾದ ಗಾರ್ಹಪತ್ಯಕ್ಕೆ ಉಪಯುಕ್ತವಾದ ಅನ್ನಗಳನ್ನು ನಮಗೆ ಒದಗಿಸಿಕೊಡು

English Translation.

May the undecaying Agni, the bearer of oblations. be a father to us, all-pervading and resplendent (mav he be) to us of pleasing aspect supply us plentifully with food in return for our well-maintained household fire: grant us viands abundantly.

॥ ವಿಶೇಷವಿಷಯಗಳು ॥

ದರ್ಶಪೂರ್ಣಮಾಸಯಾಗದಲ್ಲಿ ಪತ್ನೀಸಂಯಾಜನೆಂಬ ಹೋಮವನ್ನು ಮಾಡುವಾಗ ಗೃಹಪತಿಯು ಈ ಮಂತ್ರವನ್ನು ಯಾಜ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಹವ್ಯವಾಳಗ್ನಿರಜರಃ ಪಿತಾ ನ ಇತಿ ಪತ್ನೀಸಂಯಾಜಾಃ** ಎಂಬ ಸೂತ್ರದಿಂದಲೂ (ಆ. ೧-೧೦) ದೇವಸುನ ಹವಿಸ್ಸುಗಳೆಂಬ ಎಂಟು ಆಹುತಿಗಳಲ್ಲಿ ಅಗ್ನಿಯನ್ನುದ್ದೇಶಿಸಿ ಮಾಡುವ ಹೋಮದಲ್ಲಿಯೂ ಈ ಋಕ್ಕನ್ನು ಯಾಜ್ಯಾನುವಾಕ್ಯಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಹವ್ಯವಾಳಗ್ನಿರಜರಃ ಪಿತಾ ನಸ್ತ್ವಂ ಚ ಸೋಮ ನೋ ವಶಃ** ಎಂಬ ಸೂತ್ರದಿಂದಲೂ (ಆ. ೪-೧೧) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ವಿಶಾಂ ಕವಿಂ ವಿಶ್ಪತಿಂ ಮಾನುಷೀಣಾಂ ಶುಚಿಂ ಪಾವಕಂ ಘೃತಪೃಷ್ಠಮಗ್ನಿಂ ।
ನಿ ಹೋತಾರಂ ವಿಶ್ವವಿದಂ ದಧಿಧ್ವೇ ಸ ದೇವೇಷು ವನತೇ ವಾರ್ಯಾಣಿ ॥೩॥

॥ ಪದಪಾಠಃ ॥

ವಿಶಾಂ । ಕವಿಂ । ವಿಶ್ಪತಿಂ । ಮಾನುಷೀಣಾಂ । ಶುಚಿಂ । ಪಾವಕಂ । ಘೃತಪೃಷ್ಠಂ । ಅಗ್ನಿಂ ।
ನಿ । ಹೋತಾರಂ । ವಿಶ್ವವಿದಂ । ದಧಿಧ್ವೇ । ಸಃ । ದೇವೇಷು । ವನತೇ । ವಾರ್ಯಾಣಿ ॥ ೩ ॥

॥ ಸಾಯಣಭಾಷ್ಯಂ ॥

ಮಾನುಷೀಣಾಂ ವಿಶಾಂ ವಿಶ್ಪತಿಂ ಸರ್ವಾಸಾಂ ಮನುಷ್ಯರೂಪಾಣಾಂ ಪ್ರಜಾನಾಂ ಪಾಲಕಂ ಸ್ವಾಮಿನಂ ವಾ ಕವಿಂ ಮೇಧಾವಿನಂ ಶುಚಿಂ ಶುದ್ಧಂ ದೀಪ್ತಂ ವಾ ಪಾವಕಮನ್ಯೇಷಾಂ ಶೋಧಕಂ

ಘೃತಪೃಷ್ಠಂ ಪ್ರದೀಪ್ತಪೃಷ್ಠೋಪಲಕ್ಷಿತಶರೀರಂ । ಅಥವಾ ಉಪರಿತನಭಾಗಾಜ್ಯೋಪೇತಂ ಹೋತಾರಂ ಹೋಮನಿಷ್ಪಾದಕಂ ವಿಶ್ವವಿದಂ ವಿಶ್ವಸ್ಯ ವೇತ್ತಾರಮಗ್ನಿಂ ನಿ ದಧಿಧ್ವೇ । ಧಾರಯಥ । ಹೇ ಋತ್ವಿಜಃ । ಸ ದೇವೋ ದೇವೇಷು ಮಧ್ಯೇ ವಾರ್ಯಾಣಿ ವರಣೀಯಾನಿ ಧನಾನಿ ವನತೇ । ಸಂಭಜತೇ೨ಸ್ಮದರ್ಥಂ । ಸ್ವಯಂ ವಾ ವಾರ್ಯಾಣಿ ಹವೀಂಷಿ ವನತೇ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **ಮಾನುಷೀಣಾಂ ವಿಶಾಂ**—ಸಕಲಮಾನವ ಪ್ರಜೆಗಳಿಗೂ । **ವಿಶ್ಪತಿಂ**–ಪಾಲಕನಾ। **ಕವಿಂ**— ಮೇಧಾವಿಯೂ । **ಶುಚಿಂ**— ಶುದ್ಧನೂ । **ಪಾವಕಂ**— ಶುದ್ಧಿಕಾರಕನೂ । **ಘೃತಪೃಷ್ಠಂ**— ಆಜ್ಯೋಪೇತವಾದ ಶರೀರವುಳ್ಳವನೂ । **ಹೋತಾರಂ**— ಹೋಮಸಂಪಾದಕನೂ । **ವಿಶ್ವವಿದಂ**--ಸಕಲವನ್ನೂ ತಿಳಿದವನೂ ಆದ । **ಅಗ್ನಿಂ**--ಅಗ್ನಿಯನ್ನು । **ನಿ ದಧಿಧ್ವೇ**—ಪೂಜ್ಯಸ್ಥಾನದಲ್ಲಿ ಧರಿಸಿರಿ (ಸ್ಥಾಪಿಸಿರಿ)। **ಸಃ** – ಆ ಅಗ್ನಿಯು । **ದೇವೇಷು**—ದೇವತೆಗಳ ಮಧ್ಯದಲ್ಲಿ । **ವಾರ್ಯಾಣಿ**—ಅಪೇಕ್ಷಿತಗಳಾದ ಧನಗಳನ್ನು । **ವನತೇ** – ಒದಗಿಸಿಕೊಡುತ್ತಾನೆ.

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ಸಕಲ ಮಾನವ ಪ್ರಜೆಗಳಿಗೂ ಪಾಲಕನೂ, ಮೇಧಾವಿಯೂ, ಶುದ್ಧನೂ, ಶುದ್ಧಿಕಾರಕನೂ, ಆಜ್ಯೋಪೇತವಾದ ಶರೀರವುಳ್ಳವನೂ, ಹೋಮಸಂಪಾದಕನೂ, ಸಕಲವನ್ನೂ ತಿಳಿದವನೂ ಆದ ಅಗ್ನಿಯನ್ನು ಪೂಜ್ಯಸ್ಥಾನದಲ್ಲಿ ಸ್ಥಾಪಿಸಿರಿ. ಅದೇ ಅಗ್ನಿಯು ದೇವತೆಗಳ ಮಧ್ಯದಲ್ಲಿ ಅಪೇಕ್ಷಿತವಾದ ಧನಗಳನ್ನು ಒದಗಿಸಿಕೊಡುತ್ತಾ ².

English Translation

You (priests) possess the wise lord of human beings, the pure, the purifying, Agni, cherished with oblations of butter, the offerer of the burnt-offering, the all-knowing , he among the gods bestows desirable (riches)

॥ ಸಂಹಿತಾಪಾಠಃ ॥

ಜುಷಸ್ವಾಗ್ನ ಇಳಯಾ ಸಜೋಷಾ ಯತಮಾನೋ ರಶ್ಮಿಭಿಃ ಸೂರ್ಯಸ್ಯ ।
ಜುಷಸ್ವ ನಃ ಸಮಿಧಂ ಜಾತವೇದ ಆ ಚ ದೇವಾನ್ಹವಿರದ್ಯಾಯ ವಕ್ಷಿ ॥೪॥

॥ ಪದಪಾಠಃ ।

ಜುಷಸ್ವ । ಅಗ್ನೇ । ಇಳಯಾ । ಸ್ಯಜೋಷಾಃ । ಯತಮಾನಃ । ರಶ್ಮಿಭಿಃ । ಸೂರ್ಯಸ್ಯ ।

ಜುಷಸ್ವ । ನಃ । ಸಂ೨ಇಧಂ । ಜಾತ್ಯವೇದಃ । ಆ । ಚ । ದೇವಾನ್ । ಹವಿಃ೨ಅದ್ಯಾಯ । ವಕ್ಷಿ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಜುಷಸ್ವ । ಸೇವಸ್ವ ಸ್ತುತಿಂ । ಇಳಯಾ ವೇದಿಲಕ್ಷಣಯಾ ಭೂಮ್ಯಾ ವಾಚಾ ವಾ ಸಜೋಷಾಃ ಸಮಾನಪ್ರೀತಿಃ । ತಥಾ ಸೂರ್ಯಸ್ಯ ರಶ್ಮಿಭಿರ್ಯತಮಾನಃ ಪ್ರಯತ್ನಮುಪಃಕಾಲೇ ಕುರ್ವನ್। ಕಿಂಚ ಹೇ ಜಾತವೇದೋ ಜಾತಸ್ಯ ವೇದಿತರಗ್ನೇ ನೋಽಸ್ಮದೀಯಾಂ ಸಮಿಧಂ ಜುಷಸ್ವ । ಸೇವಸ್ವ। ಅವಹ ಚ ದೇವಾನ್ಹವಿರದ್ಯಾಯ ಹವಿರದನಾಯ । ಅವಾಹ್ಯ ವಕ್ಷಿ । ವಹಸಿ ತದ್ಧವಿಃ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ಸೂರ್ಯಸ್ಯ**—ಸೂರ್ಯನ । **ರಶ್ಮಿಭಿಃ**—ರಶ್ಮಿಗಳೊಡನೆ । **ಯತಮಾನಃ**—ಪ್ರಯತ್ನಿಸುವವನಾಗಿಯೂ । **ಇಳಯಾ**—ಇಳಾದೇವಿಯೊಡನೆ । **ಸಜೋಷಾಃ**—ಸಮಾನವಾದ ಪ್ರೀತಿಯುಳ್ಳವನಾಗಿಯೂ । **ಜುಷಸ್ವ**—(ನಮ್ಮ ಸ್ತುತಿಗಳನ್ನು) ಸೇವಿಸು । **ಜಾತವೇದಃ**—ಜಾತಪ್ರಜ್ಞನಾದ ಎಲೈ ಅಗ್ನಿಯೇ । **ನಃ**—ನಮ್ಮ । **ಸಮಿಧಂ**—ಸಮಿತ್ತುಗಳನ್ನು । **ಜುಷಸ್ವ**—ಸೇವಿಸು । **ಹವಿರದ್ಯಾಯ**—ಹವಿಸ್ಸನ್ನು ಭಕ್ಷಿಸಲು । **ದೇವಾನ್**—ದೇವತೆಗಳನ್ನು । **ಆ ವಕ್ಷಿ**—ಕರೆದುಕೊಂಡು ಬಾ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಉಪಃಕಾಲದಲ್ಲಿ ಸೂರ್ಯರಶ್ಮಿಗಳೊಡನೆ ಪ್ರಯತ್ನಿಸುವವನಾಗಿಯೂ, ಇಳಾದೇವಿಯೊಡನೆ ಸಮಾನವಾದ ಪ್ರೀತಿಯುಳ್ಳವನಾಗಿಯೂ, ನಮ್ಮ ಸ್ತುತಿಗಳನ್ನು ಸೇವಿಸು. ಜಾತಪ್ರಜ್ಞನಾದ ಎಲೈ ಅಗ್ನಿಯೇ, ನಮ್ಮ ಸಮಿತ್ತುಗಳನ್ನು ಸೇವಿಸು. ಹವಿಸ್ಸನ್ನು ಭಕ್ಷಿಸಲು ದೇವತೆಗಳನ್ನು ಕರೆದುಕೊಂಡು ಬಾ.

English Translation.

Be propitiated, Agni, sharing in satisfaction with Ila, vieing with the rays of the sun . be gratified, Jatavedas, by our fuel, and bring the gods to partake of the oblation.

ಇಳಯಾ—ಇಳಾಶಬ್ದವು ಇಪ್ಪತ್ತೊಂದು ಪೃಥಿವೀನಾಮಗಳಲ್ಲಿಯೂ (ನಿ ೨-೫) ವಾಙ್ನಾಮಗಳಲ್ಲಿಯೂ (ನಿ. ೨-೨೩) ಅನ್ನನಾಮಗಳಲ್ಲಿಯೂ (ನಿ ೩-೯) ಗೋನಾಮಗಳಲ್ಲಿಯೂ (ನಿ ೩-೯) ಪಠಿತವಾಗಿದೆ. ಇದಲ್ಲದೆ ಇಳಾ ಎಂಬ ಪ್ರತ್ಯೇಕದೇವತೆಯೂ ಇದೆ ಪ್ರಕೃತ ಋಕ್ಕಿನಲ್ಲಿ ಭಾಷ್ಯಕಾರರು **ಇಳಯಾ** ಎಂಬ ಶಬ್ದಕ್ಕೆ **ವೇದಿಲಕ್ಷಣಯಾ ಭೂಮ್ಯಾ ವಾಚಾ ವಾ**—ವೇದಿರೂಪವಾದ ಯಜ್ಞಭೂಮಿಯಿಂದ ಅಥವಾ ವಾಕ್ಕಿನಿಂದ ಎಂಬ ಎರಡರ್ಥಗಳಲ್ಲಿ ಯಾವುದನ್ನಾದರೂ ಹೇಳಬಹುದೆಂದು ತಿಳಿಸಿದಾರೆ

। ಸಂಹಿತಾಪಾಠಃ ।

ಜುಷ್ಟೋ ದಮೂನಾ ಅತಿಥಿರ್ದುರೋಣ ಇಮಂ ನೋ ಯಜ್ಞಮುಪ
ಯಾಹಿ ವಿದ್ವಾನ್ ।
ವಿಶ್ವಾ ಅಗ್ನೇ ಅಭಿಯುಜೋ ವಿಹತ್ಯಾ ಶತ್ರೂಯತಮಾ ಭರಾ ಭೋಜ-
ನಾನಿ ॥ ೫ ॥

॥ ಪದಪಾಠಃ ॥

ಜುಷ್ಟಃ । ದಮೂನಾಃ । ಅತಿಥಿಃ । ದುರೋಣೇ । ಇಮಂ । ನಃ । ಯಜ್ಞಂ । ಉಪ । ಯಾಹಿ । ವಿದ್ವಾನ್ ।
ವಿಶ್ವಾಃ । ಅಗ್ನೇ । ಅಭಿಯುಜಃ । ವಿಽಹತ್ಯ । ಶತ್ರೂಽಯತಾಂ । ಆ । ಭರ । ಭೋಜನಾನಿ ॥ ೫ ॥

॥ ಸಾಯಣಭಾಷ್ಯಂ ॥

ಅಥ ಪವಿತ್ರೇಷ್ವಾಂ ಸ್ತಿಷ್ಟಕೃತೋಽನುವಾಕ್ಯೈಷಾ । ಸೂತ್ರಿತಂ ಚ । ಜುಷ್ಟೋ ದಮೂನಾ ಅಗ್ನೇ ಶರ್ಧ ಮಹತೇ ಸೌಭಗಾಯೇತಿ ಸಂಯಾಜ್ಯೇ । ಅ. ೨-೧೨ । ಇತಿ ॥ ಮರುದ್ಭ್ಯಃ ಪುರೋಡಾಶಂ ಸಪ್ತಕಪಾಲಮಿತ್ಯತ್ರಾಪಿ ಸ್ತಿಷ್ಟಕೃತೋಽನುವಾಕ್ಯಾ । ಅತ್ಯಾಸೋ ನ ಯೇ ಮರುತಃ ಸ್ವಂಚೋ ಜುಷ್ಟೋ ದಮೂನಾಃ । ಅ. ೨-೧೪ । ಇತಿ ॥

ಜುಷ್ಟಃ ಪರ್ಯಾಪ್ತೋ ದಮೂನಾ ದಾನಮನಾ ದಾಂತಮನಾ ವಾ ಅತಿಥಿಸ್ತದ್ವದ್ದುರೋಣೇ ಗೃಹೇ ಪೂಜ್ಯಃ ಸನ್ ಇಮಂ ನೋಽಸ್ಮದೀಯಂ ಯಜ್ಞಮುಪ ಯಾಹಿ । ಉಪಗಚ್ಛ । ವಿದ್ವಾನ್ ಜಾನನ್ ಹೇ ಅಗ್ನೇ ವಿಶ್ವಾ ಅಭಿಯುಜೋ ಸರ್ವಾನಭಿಯೋಕ್ತೃನ್ವಿಹತ್ಯ ಶತ್ರೂಯತಾಂ ತೇಷಾಂ ಭೋಜನಾನ್ಯನ್ನಾನಿ ಧನಾನ್ಯಾ ಭರ । ಆಹರ । ಅತಿಥಿರಭ್ಯತಿತೋ ಗೃಹಾನ್ಪ್ರವತೀತ್ಯಾದಿನಿರುಕ್ತಂ । ನಿ. ೪-೫. । ದ್ರಷ್ಟವ್ಯಂ ॥

॥ ಸ್ರಕ್ತಿಸಪಾರ್ಥ ॥

(ಎಲೈ ಅಗ್ನಿಯೇ,) **ಜುಷ್ಟಃ**— ಸಂತೃಪ್ತಿಯನ್ನು ಹೊಂದುವವನಾಗಿಯೂ । **ದಮೂನಾಃ**—ದಾನ ಮನಸ್ಕನಾಗಿಯೂ । **ದುರೋಣೇ**—ನಮ್ಮ ಯಜ್ಞಗೃಹದಲ್ಲಿ । **ಅತಿಥಿಃ**—ಪೂಜ್ಯನಾಗಿಯೂ ಇರುವ ನೀನು । **ನಃ**—ನಮ್ಮ ಯಜ್ಞದಲ್ಲಿ । **ಇಮಂ ಯಜ್ಞಂ**—ಈ ಯಜ್ಞವನ್ನು । **ವಿದ್ವಾನ್**—ಅರಿತವನಾಗಿ । **ಉಪ ಯಾಹಿ**—ಯಜ್ಞಕ್ಕೆ ದಯಮಾಡು । **ಅಗ್ನೇ**—ಎಲೈ ಅಗ್ನಿಯೇ । **ವಿಶ್ವಾಃ**—ಸಮಸ್ತವಾದ । **ಅಭಿಯುಜಃ**—ನಮ್ಮ ಎದುರಾಳಿಗಳನ್ನು (ಶತ್ರುಗಳನ್ನು) । **ವಿಹತ್ಯ**—ನಾಶಪಾಡಿ । **ಶತ್ರೂಯತಾಂ**—ಆ ಶತ್ರುಗಳಿಗೆ ಸೇರಿದ । **ಭೋಜನಾನಿ**—ಅನ್ನಸಂಪತ್ತುಗಳನ್ನೆಲ್ಲಾ ಅಥವಾ ಧನಗಳನ್ನೆಲ್ಲಾ । **ಆ ಭರ**—(ನಮಗೆ) ತೆಗೆದುಕೊಂಡು ಬಾ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಮ್ಮ ಪೂಜೆಯಿಂದ ಸಂತೃಪ್ತಿಯನ್ನು ಹೊಂದುವವನಾಗಿಯೂ, ದಾನಮನಸ್ಕನಾಗಿಯೂ, ನಮ್ಮ ಯಜ್ಞಗೃಹದಲ್ಲಿ ಅತಿಥಿಯಂತೆ ಪೂಜ್ಯನಾಗಿಯೂ ಇರುವ ನೀನು ನಮ್ಮ ಈ ಯಜ್ಞವನ್ನರ್ಪಿತವನಾಗಿ ಈ ಯಜ್ಞಕ್ಕೆ ದಯಮಾಡು. ಎಲೈ ಅಗ್ನಿಯೇ, ಸಮಸ್ತಶತ್ರುಗಳನ್ನೂ ನಾಶಮಾಡಿ ಆ ಶತ್ರುಗಳಿಗೆ ಸೇರಿದ ಅನ್ನಸಂಪತ್ತುಗಳನ್ನೆಲ್ಲಾ ನಮಗೆ ಕೊಡುವುದಕ್ಕಾಗಿ ತೆಗೆದುಕೊಂಡು ಬಾ.

English Translation.

Propitiated, lowly-minded, a guest in the dwelling, come, you who are wise, to this our sacrifice : having destroyed, Agni, all our adversaries, bring off the possessions of those who bear us enmity.

॥ ವಿನಿಯೋಗ ॥

ಪವಿತ್ರೇಷ್ಟಿಯಲ್ಲಿ **ಜುಷ್ಟೋ ದಮೂನಾ** ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಅಶ್ವಲಾಯನಶ್ರೌತಸೂತ್ರದ **ಜುಷ್ಟೋ ದಮೂನಾ ಅಗ್ನೇ ಶರ್ಧ ಮಹತೇ ಸೌಭಗಾಯೇತಿ ಸಂಯೋಜ್ಯೇ** ಎಂಬ ಸೂತ್ರದಿಂದಲೂ (ಆ. ೨-೧೨) **ಮರುದ್ಭ್ಯಃ ಪುರೋಡಾಶಂ ಸಪ್ತಕಪಾಲಂ.** ಎಂದು ಹೇಳಿರುವ ಸ್ವಿಷ್ಟಕೃದ್ಧೋಮದಲ್ಲಿ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಅಶ್ವಲಾಯನಶ್ರೌತಸೂತ್ರದ— **ಆತ್ಮಾಸೋ ನ ಯೇ ಮರುತಃ ಸ್ವಂಚೋ ಜುಷ್ಟೋ ದಮೂನಾಃ** ಎಂಬ ಸೂತ್ರದಿಂದಲೂ (ಆ. ೨-೧೮) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ವ॒ಧೇನ॒ ದಸ್ಯುಂ॑ ಪ್ರ ಹಿ ಚಾ॒ತಯ॑ಸ್ವ॒ ವಯ॑ಃ ಕೃಣ್ವಾ॒ನಸ್ತ॒ನ್ವೇ॑ ಸ್ವಾ॒ಯೈ ।
ಪಿಪ॑ರ್ಷಿ॒ ಯತ್ಸ॒ಹಸ॑ಸ್ಪುತ್ರ॒ ದೇ॒ವಾನ್ಸ್ಯೋ॑ ಅ॒ಗ್ನೇ ಪಾ॑ಹಿ ನೃ॒ತಮ॒ ವಾಜೇ॑ ಅ॒ಸ್ಮಾನ್ ॥ ೬ ॥

॥ ಪದಪಾಠಃ ॥

ವ॒ಧೇನ॑ । ದಸ್ಯು॑ಂ । ಪ್ರ । ಹಿ । ಚಾ॒ತಯ॑ಸ್ವ । ವಯ॑ಃ । ಕೃ॒ಣ್ವಾ॒ನಃ । ತ॒ನ್ವೇ॑ । ಸ್ವಾ॒ಯೈ ।
ಪಿಪ॑ರ್ಷಿ । ಯತ್ । ಸ॒ಹಸ॑ಃ । ಪು॒ತ್ರ॒ । ದೇ॒ವಾನ್ । ಸಃ । ಅ॒ಗ್ನೇ॒ । ಪಾ॒ಹಿ॒ । ನೃ॒ತಮ॒ । ವಾಜೇ॑ । ಅ॒ಸ್ಮಾನ್ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ವಧೇನಾಯುಧೇನ ದಸ್ಯುಮುಪಕ್ಷಪಯಿತಾರಂ ಪ್ರ ಹಿ ಜಾತಯಸ್ವ । ಪ್ರಣಾಶಯ । ಹೀತಿ ಪೂರಣಃ । ವಯಃ ಕೃಣ್ವಾನಃ ಕುರ್ವಾಣಸ್ತ್ವೇ ಶರೀರಾಯ ಸ್ವಾಯೈ ಸ್ವೀಯಾಯ । ಅಥವಾ ಸ್ವಾಯೈ ತನ್ವೇ ಯಜಮಾನಾದಿರೂಪಾಯ ಪುತ್ರಾಯ ವಯೋಽನ್ನಂ ಕುರ್ವಾಣಃ । ಯದ್ಯಸ್ಮಾತ್ ಸಹಸಸ್ಪುತ್ರಾಗ್ನೇ ದೇವಾನ್ಪಿಪರ್ಷಿ । ತರ್ಪಯಸಿ । ಹೇ ನೃತಮ ನೇತೃತಮಾಗ್ನೇ ಸ ತ್ವಂ ವಾಜೇ ಸಂಗ್ರಾಮೇಽಸ್ಮಾನ್ ಪಾಹಿ । ರಕ್ಷ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ವಯಃ**—(ಶತ್ರುವಿನ) ಅನ್ನವನ್ನು । **ಸ್ವಾಯೈ ತನ್ವೇ**—ನಿನ್ನ ಸ್ವಂತ ಸ್ವತ್ತನ್ನಾಗಿ **ಕೃಣ್ವಾನಃ**—ಮಾಡಿಕೊಳ್ಳುತ್ತಾ । **ವಧೇನ**– ವಧಸಾಧನವಾದ ಆಯುಧದಿಂದ । **ದಸ್ಯುಂ**—ಹಿಂಸಕನಾದ ಶತ್ರುವನ್ನು । **ಪ್ರ ಹಿ ಜಾತಯಸ್ವ**—ಪೂರ್ಣವಾಗಿ ನಾಶಗೊಳಿಸು । **ಸಹಸಸ್ಪುತ್ರ** - ಶಕ್ತಿಪುತ್ರನೂ । **ನೃತಮ** — ಅತ್ಯುತ್ತಮನಾದ ನೇತೃವೂ ಆದ । **ಅಗ್ನೇ** -- ಎಲೈ ಅಗ್ನಿಯೇ । **ಯತ್**—ಯಾವ ನೀನು । **ದೇವಾನ್**—ದೇವತೆಗಳನ್ನು । **ಪಿಪರ್ಷಿ**--ತೃಪ್ತಿಪಡಿಸುತ್ತೀಯೋ । **ಸಃ**-- ಅಂತಹ ನೀನು । **ವಾಜೇ**—ಯುದ್ಧದಲ್ಲಿ । **ಅಸ್ಮಾನ್**—ನಮ್ಮನ್ನು । **ಪಾಹಿ**—ರಕ್ಷಿಸು

॥ ಭಾವಾರ್ಥ ॥

ಎಲೈ ಅಗ್ನಿಯೇ, ಶತ್ರುವಿನ ಸಂಪತ್ತುಗಳನ್ನು ನಿನ್ನ ಸ್ವಂತ ಸ್ವತ್ತುಗಳನ್ನಾಗಿ ಮಾಡಿಕೊಳ್ಳುತ್ತಾ, ವಧಸಾಧನವಾದ ಆಯುಧದಿಂದ ಹಿಂಸಕನಾದ ಶತ್ರುವನ್ನು ಪೂರ್ಣವಾಗಿ ನಾಶಗೊಳಿಸು ಶಕ್ತಿಪುತ್ರನೂ, ಅತ್ಯುತ್ತಮನಾದ ನೇತೃವೂ ಆದ ಎಲೈ ಅಗ್ನಿಯೇ, ದೇವತೆಗಳನ್ನು ತೃಪ್ತಿಪಡಿಸುವ ನೀನು ನಮ್ಮನ್ನೂ ಅದೇ ಕಾರಣದಿಂದಲೇ ಯುದ್ಧದಲ್ಲಿ ರಕ್ಷಿಸು.

English Translation

Demolish, Agni, with your weapon, the Dasyu, appropriating the sustenance to your own person , and inasmuch, son of strength, as you satisfy the gods, so Agni, chief of leaders, protect us in battle

॥ ಸಂಹಿತಾಪಾಠಃ ॥

ವಯಂ ತೇ ಅಗ್ನ ಉಕ್ಥೈರ್ವಿಧೇಮ ವಯಂ ಹವ್ಯೈಃ ಪಾವಕ ಭದ್ರಶೋಚೇ।

ಅಸ್ಮೇ ರಯಿಂ ವಿಶ್ವವಾರಂ ಸಮಿನ್ವಾಸ್ಮೇ ವಿಶ್ವಾನಿ ದ್ರವಿಣಾನಿ ಧೇಹಿ ॥ ೬ ॥

॥ ಪದಪಾಠಃ ॥

ವಯಂ । ತೇ । ಅಗ್ನೇ । ಉಕ್ಥೈಃ । ವಿಧೇಮ । ವಯಂ । ಹವ್ಯೈಃ । ಸಾವಕ । ಭದ್ರಶೋಚೇ ।
ಅಸ್ಮೇ ಇತಿ । ರಯಿಂ । ವಿಶ್ವವಾರಂ । ಸಂ । ಇನ್ವ । ಅಸ್ಮೇ ಇತಿ । ವಿಶ್ವಾನಿ । ದ್ರವಿಣಾನಿ । ಧೇಹಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತೇ ತ್ವಾಂ ವಯಮುಕ್ಥೈಃ ಶಸ್ತ್ರೈರ್ವಿಧೇಮ । ಪರಿಚರೇಮ । ವಯಂ ಹವ್ಯೈರ್ಹವಿರ್ಭಿರ್ವಿಧೇಮ । ಸಾವಕ ಶೋಧಕ ಹೇ ಭದ್ರಶೋಚೇ ಕಲ್ಯಾಣದೀಪ್ತೇ ಅಸ್ಮೇ ಅಸ್ಮಭ್ಯಂ ವಿಶ್ವವಾರಂ ವಿಶ್ವೈರ್ವರಣೀಯಂ ರಯಿಂ ಧನಂ ಸಮಿನ್ವ । ಪ್ರಾಪಯ । ಅಸ್ಮೇ ಅಸ್ಮಭ್ಯಂ ವಿಶ್ವಾನಿ ದ್ರವಿಣಾನಿ ದೇಹಿ । ಸ್ಥಾಪಯ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ವಯಂ**—ನಾವು । **ತೇ**—ನಿನ್ನನ್ನು । **ಉಕ್ಥೈಃ**—ಶಸ್ತ್ರಮಂತ್ರಗಳಿಂದ । **ವಿಧೇಮ**—ಉಪಚರಿಸುತ್ತೇವೆ । **ಸಾವಕ**—ಶುದ್ಧಿಕಾರಕನೂ । **ಭದ್ರಶೋಚೇ**—ಮಂಗಳಕರವಾದ ಕಾಂತಿಯುಳ್ಳವನೂ ಆದ ಅಗ್ನಿಯೇ । **ಹವ್ಯೈಃ**—ಹವಿಸ್ಸುಗಳಿಂದಲೂ । **ವಯಂ**—ನಾವು (ನಿನ್ನನ್ನು ಪೂಜಿಸುತ್ತೇವೆ) । **ಅಸ್ಮೇ**—ನಮಗೆ । **ವಿಶ್ವವಾರಂ**—ಸರ್ವರಿಂದಲೂ ಅಪೇಕ್ಷಿತವಾದ । **ರಯಿಂ**—ಧನವನ್ನು । **ಸಮಿನ್ವ**—ಒದಗಿಸಿಕೊಡು । **ವಿಶ್ವಾನಿ**—ಸಮಸ್ತವಾದ । **ದ್ರವಿಣಾನಿ**—ಸಂಪತ್ತುಗಳನ್ನೂ । **ಧೇಹಿ**—ಕೊಡು.

॥ ಭಾವಾರ್ಥ ॥

ಶುದ್ಧಿಕಾರಕನೂ, ಮಂಗಳಕರವಾದ ಕಾಂತಿಯುಳ್ಳವನೂ ಆದ ಎಲೈ ಅಗ್ನಿಯೇ, ನಾವು ನಿನ್ನನ್ನು ಶಸ್ತ್ರಮಂತ್ರಾತ್ಮಕವಾದ ಸ್ತುತಿಯಿಂದಲೂ, ಹವಿಸ್ಸುಗಳಿಂದಲೂ ಪೂಜಿಸುತ್ತೇವೆ ನಮಗೆ ಸರ್ವರಿಂದಲೂ ಅಪೇಕ್ಷಿತವಾದುದೂ, ಸಮಸ್ತವಾದುದೂ ಆದ ಧನಸಂಪತ್ತುಗಳನ್ನೊದಗಿಸಿಕೊಡು.

English Translation.

We worship you, Agni, with hymns, we (worship you), purifier, and of auspicious lustre, with oblations. bestow upon us all desired riches; bestow upon us all sorts of wealth.

॥ ಸಂಹಿತಾಪಾಠಃ ॥

ಅಸ್ಮಾಕಮಗ್ನೇ ಅಧ್ವರಂ ಜುಷಸ್ವ ಸಹಸಃ ಸೂನೋ ತ್ರಿಷಧಸ್ಥ ಹವ್ಯಂ ।
ವಯಂ ದೇವೇಷು ಸುಕೃತಃ ಸ್ಯಾಮ ಶರ್ಮಣಾ ನಸ್ತ್ರಿವರೂಥೇನ ಪಾಹಿ ॥

। ಪದಪಾಠಃ ।

ಅಸ್ಮಾಕಂ । ಅಗ್ನೇ । ಅಧ್ವರಂ । ಜುಷಸ್ವ । ಸಹಸಃ । ಸೂನೋ ಇತಿ । ತ್ರಿಷಧಸ್ಥ । ಹವ್ಯಂ ।

ವಯಂ । ದೇವೇಷು । ಸುಕೃತಃ । ಸ್ಯಾಮ । ಶರ್ಮಣಾ । ನಃ । ತ್ರಿವರೂಥೇನ । ಪಾಹಿ ॥ ೪ ॥

ಹೇ ಅಗ್ನೇ ಅಸ್ಮಾಕಮಧ್ವರಂ ಜುಷಸ್ವ । ಸೇವಸ್ವ । ಹೇ ಸಹಸಃ ಸೂನೋ ಹೇ ಬಲಸ್ಯ ಪುತ್ರ ತ್ರಿಷಧಸ್ಥ ತ್ರಿಷು ಕ್ಷಿತ್ಯಾದಿಷು ಸ್ಥಾನೇಷು ಸ್ಥಿತ ಹವ್ಯಂ ಹವಿರ್ಜುಷಸ್ವ । ಯದ್ವಾ । ಅಧ್ವರಂ ಹವಿರಿತಿ ಯೋಜ್ಯಂ । ಅಹಿಂಸಿತಂ ಹವಿರಿತ್ಯರ್ಥಃ । ವಯಂ ಯಜಮಾನಾ ದೇವೇಷು ಮಧ್ಯೇ ಸುಕೃತಃ ಶೋಭನಾಪೂರ್ವಕರ್ತಾರಃ ಸ್ಯಾಮ ಭವೇಮ। ತ್ರಿವರೂಥೇನ ವಾಙ್ಮಿಕಾದಿಭೇದೇನ ತ್ರಿಧಾ ವರಣೀಯೇನ ಶರ್ಮಣಾ ಸುಖೇನ ತ್ರಿಚ್ಛಿದ್ರೇಣ ಗೃಹೇಣ ವಾ ನಃ ಪಾಹಿ । ರಕ್ಷ ॥

॥ ಪ್ರತಿಪದಾರ್ಥ ॥

ಸಹಸಃ ಸೂನೋ—ಶಕ್ತಿಪುತ್ರನೂ । **ತ್ರಿಷಧಸ್ಥ**—ಕ್ಷಿತ್ಯಾದಿ ಮೂರು ಸ್ಥಾನಗಳಲ್ಲಿರುವವನೂ ಆದ । **ಅಗ್ನೇ**—ಎಲೈ ಅಗ್ನಿಯೇ। **ಅಸ್ಮಾಕಂ**—ನಮ್ಮ। **ಅಧ್ವರಂ**—ಯಜ್ಞವನ್ನೂ । **ಹವ್ಯಂ**—ಹವಿಸ್ಸನ್ನೂ। **ಜುಷಸ್ವ**—ಸೇವಿಸು । **ವಯಂ**—ಯಜ್ಞಕರ್ತರಾದ ನಾವು । **ದೇವೇಷು**—ದೇವತೆಗಳ ಮಧ್ಯದಲ್ಲಿ । **ಸುಕೃತಃ** - ಶ್ರೇಷ್ಠವಾದ ಕರ್ಮಕರ್ತರಾಗಿ । **ಸ್ಯಾಮ**—ಆಗುವಂತೆ ಅನುಗ್ರಹಿಸು । **ತ್ರಿವರೂಥೇನ**—ಮೂರುಪ್ರಕಾರಗಳಾದ । **ಶರ್ಮಣಾ**—ಸುಖಸಾಧನಗಳಾದ ರಕ್ಷಣೆಗಳಿಂದ ಅಥವಾ ಗೃಹದಿಂದ । **ನಃ**—ನಮ್ಮನ್ನು । **ಪಾಹಿ**—ರಕ್ಷಿಸು

॥ ಭಾವಾರ್ಥ ॥

ಶಕ್ತಿಪುತ್ರನೂ, ಕ್ಷಿತ್ಯಾದಿಸ್ಥಾನತ್ರಯದಲ್ಲಿರುವವನೂ ಆದ ಎಲೈಅಗ್ನಿಯೇ, ನಮ್ಮ ಯಜ್ಞವನ್ನೂ, ಹವಿಸ್ಸನ್ನೂ ಸ್ವೀಕರಿಸು ಮತ್ತು ಸೇವಿಸು ಯಜ್ಞಕರ್ತರಾದ ನಾವು ದೇವತೆಗಳ ಮಧ್ಯದಲ್ಲಿ ಶ್ರೇಷ್ಠವಾದ ಕರ್ಮಕರ್ತರಾಗಿರುವಂತೆ ಅನುಗ್ರಹಿಸು. ಮೂರುವಿಧವಾದವೂ, ಸುಖಸಾಧನವೂ ಆದ ರಕ್ಷಣೆಗಳಿಂದ ನಮ್ಮನ್ನು ರಕ್ಷಿಸು

English Translation

Accept, Agni, our sacrifice son of strength, the abider in the three regions, (accept our) oblation may we be (regarded) amongst the gods as doers of good cherish us with triply-protected felicity

॥ ವಿಶೇಷವಿಷಯಗಳು ॥

ತ್ರಿಷಧಸ್ಥ— ಮೂರು ಸ್ಥಾನಗಳಲ್ಲಿರುವ ಎಲೈ ಅಗ್ನಿಯೇ ಎಂದು ಅಗ್ನಿಯನ್ನು ತ್ರಿಸಧಸ್ಥಶಬ್ದದಿಂದ ಸಂಬೋಧಿಸಿದೆ ಪೃಥಿವೀ, ಅಂತರಿಕ್ಷ, ಸ್ವರ್ಗ ಎಂಬಿವೇ ಮೂರು ಸ್ಥಾನಗಳು. ಅಗ್ನಿಯು ಪಾರ್ಥಿವಾಗ್ನಿರೂಪದಿಂದ (ಯಜ್ಞಾಗ್ನಿ ಅಥವಾ ಗೃಹ್ಯಾಗ್ನಿ) ಪೃಥಿವಿಯಲ್ಲೆಯೂ, ವೈದ್ಯುತಾಗ್ನಿರೂಪದಿಂದ (ಮಿಂಚು) ಅಂತರಿಕ್ಷದಲ್ಲಿಯೂ, ಆದಿತ್ಯರೂಪದಿಂದ ಸ್ವರ್ಗಸ್ಥಾನದಲ್ಲಿಯೂ ಇರುವನು ಎಂದು ತ್ರಿಷಧಸ್ಥ ಶಬ್ದದ ಮುಖ್ಯಾರ್ಥವು.

ಅಧ್ವರಂ ಹವಿಃ—ಅಧ್ವರಂ ಹವಿರಿತಿಯೋಜ್ಯಂ । ಅಹಿಂಸಿತಂ ಹವಿರಿತ್ಯರ್ಥಃ । ಇಲ್ಲಿ **ಅಧ್ವರಂ** ಎಂಬ ಶಬ್ದವನ್ನು ಹವಿಃ ಎಂಬ ಶಬ್ದಕ್ಕೆ ವಿಶೇಷಣಪದವನ್ನಾಗಿ ಉಪಯೋಗಿಸಬೇಕೆಂದು ಭಾಷ್ಯಕಾರರ ವಿವರಣೆಯಿರುವುದು. **ಧ್ವರತಿರ್ಹಿಂಸಾಕರ್ಮಾ**—ಧ್ವರನೆಂದರೆ ಹಿಂಸೆಯೆಂದೂ, ಅಧ್ವರವೆಂದರೆ ಹಿಂಸಾರಹಿತವಾದ ಎಂದೂ ಯಾಸ್ಕರ ನಿರ್ವಚನವಿದೆ. ಆದುದರಿಂದ ಇಲ್ಲಿ **ಅಧ್ವರಂ ಹವಿಃ** ಎಂದರೆ ಹಿಂಸಾರಹಿತವಾದ ಹವಿಸ್ಸು ಎಂದರ್ಥವು. ಹಿಂಸಾರಹಿತವಾದ ಹವಿಸ್ಸೆಂದರೆ—ಪ್ರಾಣಿವಧೆ ಮೊದಲಾದ ಪಶುಹೋಮವಲ್ಲ ಆಜ್ಯ, ಅನ್ನ ಮೊದಲಾದ ಪ್ರಾಣಿಹಿಂಸೆಯಿಲ್ಲದೆ ದೊರೆಯುವ ಹೋಮದ್ರವ್ಯಗಳು ಎಂದಭಿಪ್ರಾಯವು

ತ್ರಿವರೂಥೇನ—ವಾಚಿಕಾದಿಭೇದೇನ ತ್ರಿಧಾ ವರಣೀಯೇನ । ಕಾಯಿಕ, ವಾಚಿಕ, ಮಾನಸಿಕ ಎಂಬ ಮೂರುವಿಧವಾದ ಎಂದರ್ಥವು.

॥ ಸಂಹಿತಾಪಾಠಃ ॥

ವಿಶ್ವಾನಿ ನೋ ದುರ್ಗಹಾ ಜಾತವೇದಃ ಸಿಂಧುಂ ನ ನಾವಾ ದುರಿತಾತಿ ಪರ್ಷಿ ।
ಅಗ್ನೇ ಅತ್ರಿವನ್ನಮಸಾ ಗೃಣಾನೋಽಸ್ಮಾಕಂ ಬೋಧ್ಯವಿತಾ ತನೂನಾಂ ॥

॥ ಪದಪಾಠಃ ॥

ವಿಶ್ವಾನಿ । ನಃ । ದುಃಽಗಹಾ । ಜಾತಽವೇದಃ । ಸಿಂಧುಂ । ನ । ನಾವಾ । ದುಃಽಇತಾ । ಅತಿ । ಪರ್ಷಿ ।
ಅಗ್ನೇ । ಅತ್ರಿವತ್ । ನಮಸಾ । ಗೃಣಾನಃ । ಅಸ್ಮಾಕಂ । ಬೋಧ್ಯಿ । ಅವಿತಾ । ತನೂನಾಂ ॥ ೯ ॥

॥ ಸಾಯಣಭಾಷ್ಯಂ ॥

ಹೇ ಜಾತವೇದೋ ನೋಽಸ್ಮಾಕಂ ದುರ್ಗಹಾ ದುಃಖೇನ ಗಾಹ್ಯಾನಿ ದುಃಖೇನ ಭೋಗ್ಯಾನಿ ವಿಶ್ವಾನಿ ದುರಿತಾನ್ಯತಿ ಪರ್ಷಿ । ಅತಿಸಾರಯ । ಸಿಂಧುಂ ನ ನಾವಾ ನದೀಂ ನಾವಿಕೋ ಯಥಾ ತದ್ವತ್ । ಹೇ ಅಗ್ನೇ ಅತ್ರಿವತ್ ಅತ್ರೇರ್ಯಥಾ ತಥಾಸ್ಮಾಕಂ ನಮಸಾ ಸ್ತೋತ್ರೇಣ ಗೃಣಾನಃ ಸ್ತ್ಯೂಯಮಾನಃ ಸನ್ ಅಸ್ಮಾಕಂ ತನೂನಾಮವಿತಾ ರಕ್ಷಕೋ ಬೋಧಿ । ಬುಧ್ಯಸ್ವ ॥

॥ ಪ್ರತಿಪದಾರ್ಥ ॥

ಜಾತವೇದಃ—ಜಾತವೇದೋನಾಮಕನಾದ ಎಲೈ ಅಗ್ನಿಯೇ ! **ನಃ**—ನಮ್ಮನ್ನು । **ದುರ್ಗಹಾ**—ದುಃಖದಿಂದ ಅನುಭವಿಸುತ್ತಿರುವ ! **ವಿಶ್ವಾನಿ ದುರಿತಾ**—ಸಮಸ್ತವಾದ ಪಾಪಗಳಿಂದಲೂ । **ನಾವಾ**—ದೋಣಿಯಿಂದ । **ಸಿಂಧುಂ ನ**—ನದಿಯನ್ನು ಸುಖವಾಗಿ ದಾಟುವಂತೆ । **ಅತಿ ಪರ್ಷಿ**—ಶೀಘ್ರವಾಗಿ ದಾಟಿಸಿ ಕೊನೆಗಾಣಿಸು

ಅಗ್ನೇ—ಎಲೈ ಅಗ್ನಿಯೇ। **ಅತ್ರಿವತ್**—ಅತ್ರಿಋಷಿಯ ಸ್ತುತಿಯಿಂದ ತೃಪ್ತನಾದಂತೆ। **ನಮಸಾ**—ನಮ್ಮ ಸ್ತುತಿಗಳಿಂದ। **ಗೃಣಾನಃ**—ಪ್ರಶಂಸಿತನಾಗಿ। **ಅಸ್ಮಾಕಂ**—ನಮ್ಮ। **ತನೂನಾಂ**—ಶರೀರಗಳಿಗೆ। **ಅವಿತಾ**—ರಕ್ಷಕನಾಗಿರುವಂತೆ। **ಬೋಧಿ**—ತಿಳಿ.

॥ ಭಾವಾರ್ಥ ॥

ಜಾತವೇದೋರೂಪನಾದ ಎಲೈ ಅಗ್ನಿಯೇ, ದೋಣಿಯಿಂದ ನದಿಯನ್ನು ಸುಖವಾಗಿ ದಾಟುವಂತೆ, ದುಃಖದಿಂದ ಅನುಭವಿಸುತ್ತಿರುವ ನಮ್ಮ ಸಮಸ್ತ ಪಾಪಗಳಿಂದಲೂ ನಮ್ಮನ್ನು ದಾಟಿಸಿ ಅವುಗಳಿಂದ ಕೊನೆಗಾಣಿಸು. ಎಲೈ ಅಗ್ನಿಯೇ, ಅತ್ರಿಋಷಿಯ ಸ್ತುತಿಯಿಂದ ತೃಪ್ತನಾದಂತೆ, ನಮ್ಮ ಸ್ತುತಿಗಳಿಂದಲೂ ಪ್ರಶಂಸಿತನಾಗಿ ತೃಪ್ತಿಯನ್ನು ಹೊಂದಿ ನಮ್ಮ ಶರೀರಗಳಿಗೆ ರಕ್ಷಕನಾಗಿರಬೇಕೆಂದು ತಿಳಿ.

English Translation.

You convey us, Jatavedas, across all intolerable evils as (people are carried) over a river by a boat : Agni, you are glorified by us with reverence, such as (that shewn) by Atri, know yourself the protector of our persons.

॥ ವಿಶೇಷವಿಷಯಗಳು ॥

ದುರ್ಗಹಾ—ದುಃಖೇನ ಗಾಹ್ಯಾನಿ, ದುಃಖೇನ ಭೋಗ್ಯಾನಿ। ದುಃಖದಿಂದ ಅನುಭವಿಸಲು ಸಾಧ್ಯವಾದ ಎಂದರೆ ದುಃಖಗಳಿಂದ ತುಂಬಿರುವ ಕಷ್ಟಪರಂಪರೆಗಳು ಎಂದರ್ಥ.

ದುರಿತಾನಿ—ಪಾಪಗಳು, ಕಷ್ಟಗಳು, ಕ್ಲೇಶಗಳು ಇತ್ಯಾದಿ.

ಅತ್ರಿವತ್—ಇಲ್ಲಿ ಈ ಸೂಕ್ತದ ದ್ರಷ್ಟೃವಾದ ವಸುಶ್ರುತಋಷಿಯು ಅತ್ರಿಗೋತ್ರೋದ್ಭವನಾದುದರಿಂದ ತನ್ನ ವಂಶದ ಮೂಲಪುರುಷನಾದ ಅತ್ರಿಯ ಹೆಸರನ್ನು ಪ್ರಸ್ತಾಪಿಸಿ ಹಿಂದೆ ಅತ್ರಿಋಷಿಯ ವಿಷಯದಲ್ಲಿ ಅಗ್ನಿಯು ಯಾವರೀತಿ ಅಭಿಮಾನದಿಂದ ರಕ್ಷಕನಾಗಿದ್ದನೋ ಆದರಂತೆ ತನ್ನ ವಿಷಯದಲ್ಲಿಯೂ ಇರಬೇಕೆಂದು ಪ್ರಾರ್ಥಿಸಿದಾನೆ.

॥ ಸಂಹಿತಾಪಾಠಃ ॥

ಯಸ್ತ್ವಾ ಹೃದಾ ಕೀರಿಣಾ ಮನ್ಯಮಾನೋಽಮರ್ತ್ಯಂ ಮರ್ತ್ಯೋ ಜೋಹವೀಮಿ ।
ಜಾತವೇದೋ ಯಶೋ ಅಸ್ಮಾಸು ಧೇಹಿ ಪ್ರಜಾಭಿರಗ್ನೇ ಅಮೃತತ್ವಮಶ್ಯಾಂ ॥ ೧೦ ॥

। ಪದಪಾಠಃ ।

ಯಃ । ತ್ವಾ । ಹೃದಾ । ಕೀರಿಣಾ । ಮನ್ಯಮಾನಃ । ಅಮರ್ತ್ಯಂ । ಮರ್ತ್ಯಃ । ಜೋಹವೀಮಿ ।

ಜಾತವೇದಃ । ಯಶಃ । ಅಸ್ಮಾಸು । ಧೇಹಿ । ಪ್ರಜಾಭಿಃ । ಅಗ್ನೇ । ಅಮೃತತ್ವಂ । ಅಶ್ಯಾಂ ॥ ೧೦ ॥

। ಸಾಯಣಭಾಷ್ಯಂ ।

ಪುತ್ರಕಾಮೇಷ್ಟ್ಯಾಂ ಯೇಸ್ತ್ವೇತ್ಯೇಷಾ ಪ್ರಧಾನಸ್ಯ ಯಾಜ್ಯಾ । ಸೂತ್ರಿತಂ ಚ । ಯೇಸ್ತ್ವಾ ಹೃದಾ ಕೀರಿಣಾ ಮನ್ಯಮಾನೋಽಗ್ನಿಸ್ತುವಿಶ್ರವಸ್ತಮಂ । ಅ ೨-೧೦ । ಇತಿ ॥

ಯೋ ಮರ್ತ್ಯೋ ಮರಣಧರ್ಮಾಹಮಮರ್ತ್ಯಮನಾಶಂ ತ್ವಾ ತ್ವಾಂ ಕೀರಿಣಾ ಸ್ತುತ್ಯಾದಿಷು ವಿಕ್ಷಿಪ್ತೇನ ಹೃದಾ ಹೃದಯೇನ ಯುಕ್ತೋ ಮನ್ಯಮಾನಃ ಸ್ತುವನ್ ಜೋಹವೀಮಿ । ಅತ್ಯರ್ಥಮಾಹ್ವಯಾಮಿ । ಯೆದ್ಯಾ । ಸ್ತೋತೄವಾಚಕೇನ ಕೀರಿಣಾಶಬ್ದೇನ ಸ್ತುತಿರುಪಲಕ್ಷ್ಯತೇ । ಸ್ತುತಿಯುಕ್ತೇನ ಮನಸಾ ತ್ವಾಂ ಮನ್ಯಮಾನೋ ಜೋಹವೀಮಿ । ಹೇ ಜಾತವೇದೋ ಯಶೋ ಧನಂ ಪ್ರಜಾಂ ವಾಸ್ಮಾಸು ಧೇಹಿ । ಪ್ರಜಾಭಿಸ್ತ್ವದ್ದತ್ತಾಭಿರ್ಹೇ ಅಗ್ನೇಽಹಮಮೃತತ್ವಂ ಸಂತತ್ಯವಿಚ್ಛೇದಲಕ್ಷಣಮಶ್ಯಾಂ । ಪ್ರಾಪ್ನುಯಾಂ । ಪ್ರಜಾಮನು ಪ್ರಜಾಯೇಸೇ ತದು ತೇ ಮರ್ತ್ಯಾಮೃತಂ । ತೈ. ಬ್ರಾ. ೧-೫-೫-೬ । ಇತಿ ಹಿ ಶ್ರುತಿಃ ॥

। ಪ್ರತಿಪದಾರ್ಥ ।

(ಎಲೈ ಅಗ್ನಿಯೇ) **ಮರ್ತ್ಯಃ**—ಮರಣಧರ್ಮವುಳ್ಳ । **ಯಃ**—ಯಾವ ನಾನು । **ಅಮರ್ತ್ಯಂ**—ಮರಣರಹಿತನಾದ । **ತ್ವಾ**—ನಿನ್ನನ್ನು । **ಕೀರಿಣಾ**—ಸ್ತೋತ್ರಯುಕ್ತವಾದ । **ಹೃದಾ**—ಹೃದಯದಿಂದ । **ಮನ್ಯಮಾನಃ**—ಸ್ತುತಿಸುತ್ತಾ । **ಜೋಹವೀಮಿ**—(ಸಹಾಯಕ್ಕಾಗಿ) ಕರೆಯುತ್ತೇನೆಯೋ । (ಆದುದರಿಂದಲೇ) । **ಜಾತವೇದಃ**—ಜಾತಪ್ರಜ್ಞನಾದ ಎಲೈ ಅಗ್ನಿಯೇ । **ಅಸ್ಮಾಸು**—ನಮ್ಮಲ್ಲಿ । **ಯಶಃ**—ಧನವನ್ನು । **ಧೇಹಿ**—ಇಡು । **ಅಗ್ನೇ**—ಎಲೈ ಅಗ್ನಿಯೇ । **ಪ್ರಜಾಭಿಃ**—(ನಿನ್ನಿಂದ ದತ್ತವಾದ) ಪ್ರಜೆಗಳೊಡನೆ ಕೂಡಿದ ನಾನು । **ಅಮೃತತ್ವಂ**—ಮರಣರಾಹಿತ್ಯವನ್ನು । **ಅಶ್ಯಾಂ**—ಹೊಂದುವಂತಾಗಲಿ.

। ಭಾವಾರ್ಥ ।

ಜಾತಪ್ರಜ್ಞನಾದ ಎಲೈ ಅಗ್ನಿಯೇ, ಮರಣಧರ್ಮವುಳ್ಳ ನಾನು ಮರಣರಹಿತನಾದ ನಿನ್ನನ್ನು ಸ್ತುತಿಯುಕ್ತವಾದ ಹೃದಯದಿಂದ ಸ್ತುತಿಸುತ್ತಾ ನನ್ನ ರಕ್ಷಣೆಗಾಗಿ ಕರೆಯುತ್ತೇನೆ ಆದುದರಿಂದ ನೀನು ಅನುಗ್ರಹಿಸಿ ನಮ್ಮಲ್ಲಿ ಸಂಪತ್ತನ್ನಿಡು ನಿನ್ನಿಂದ ದತ್ತವಾದ ಪ್ರಜೆಗಳೊಡನೆ ಕೂಡಿದ ನಾನು ಮರಣರಾಹಿತ್ಯವನ್ನು ಹೊಂದುವಂತೆ ಅನುಗ್ರಹಿಸು

English Translation.

Inasmuch as I who am a mortal earnestly invoke you who are an immortal, praising you with a devoted heart , therefore, Jatavedas, grant us food, and may I obtain immortality through my posterity.

॥ ವಿಶೇಷವಿಷಯಗಳು ॥

ಪುತ್ರಕಾಮೇಷ್ಟಿಯಲ್ಲಿ **ಯಸ್ತ್ವಾ ಹೃದಾ** ಎಂಬ ಈ ಋಕ್ಕನ್ನು ಪ್ರಧಾನ ಹೋಮದಲ್ಲಿ ಯಾಜ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಯಸ್ತ್ವಾ ಹೃದಾ ಕೀರಿಣಾ ಮನ್ಯಮಾನೋಽಗ್ನಿಸ್ತುವಿಶ್ರವಸ್ತಮಂ** ಎಂಬ ಸೂತ್ರದಿಂದ (ಆ. ೩–೧೦) ವಿವೃತವಾಗಿರುವುದು.

ಈ ಋಕ್ಕಿನಲ್ಲಿ ಋಷಿಯು ತನ್ನ ಅಲ್ಪತ್ವವನ್ನೂ ಅಗ್ನಿಯ ಮಹತ್ತ್ವವನ್ನೂ ತೋರಿಸುವುದಕ್ಕಾಗಿ ತನ್ನನ್ನು ಮರ್ತ್ಯಶಬ್ದದಿಂದಲೂ, ಅಗ್ನಿಯನ್ನು ಅಮರ್ತ್ಯಶಬ್ದದಿಂದಲೂ ನಿರ್ದೇಶಿಸಿದಾನೆ

ಹೃದಾ ಕೀರಿಣಾ ಮನ್ಯಮಾನಃ ಜೋಹವೀಮಿ– ಇಲ್ಲಿ ಕೀರಿ ಶಬ್ದವು ಸ್ತೋತೃನಾಮಗಳಲ್ಲಿ ಪರಿತವಾಗಿದೆ (ನಿ ೩–೧೯). **ಹೃದಾ ಕೀರಿಣಾ** ಎಂಬ ಶಬ್ದಗಳಿಗೆ ಅಗ್ನಿಯ ಸ್ತುತಿಯಲ್ಲಿಯೇ ಆಸಕ್ತವಾದ ಮನಸ್ಸಿನಿಂದ ಎಂದರ್ಥವು. ಇಂತಹ ಅಗ್ನಿಯಲ್ಲಿ ನೆಟ್ಟ ಮನಸ್ಸಿನಿಂದ ಯುಕ್ತವಾದ ಸ್ತೋತ್ರಗಳಿಂದ ಸ್ತುತಿಸುತ್ತಾ ಅಗ್ನಿಯನ್ನು ಯಜ್ಞಭೂಮಿಗೆ ಆಹ್ವಾನ ಮಾಡುತ್ತೇನೆಂದು ಋಷಿಯು ಹೇಳಿದಾನೆ

ಅಗ್ನೇ ಪ್ರಜಾಭಿಃ ಅಮೃತತ್ವಂ ಅಶ್ಯಾಂ—ಹೇ **ಅಗ್ನೇ ತ್ವದ್ದತ್ತಾಭಿಃ ಪ್ರಜಾಭಿಃ ಸಂತತ್ಯವಿಚ್ಛೇದಲಕ್ಷಣಂ ಪ್ರಾಪ್ನುಯಾಂ**। ಎಲೈ ಅಗ್ನಿಯೇ, ನಿನ್ನ ಅನುಗ್ರಹದಿಂದ ಲಬ್ಧವಾದ ಪುತ್ರಪೌತ್ರಾದಿ ಸಂತತಿಯನ್ನು ವಿಚ್ಛಿನ್ನರಹಿತವಾಗಿ ನಾನು ಪಡೆಯುವಂತಾಗಲಿ, ಈ ವಿಷಯದಲ್ಲಿ ಭಾಷ್ಯಕಾರರು—

ಅಮೃತಂ ಮರ್ತ್ಯಾಭ್ಯಃ । ಪ್ರಜಾಮನು ಪ್ರಜಾಯಸೇ । ತದು ತೇ ಮರ್ತ್ಯಾಮೃತಂ ।
(ತೈ ಬ್ರಾ ೧–೫–೫–೬)

ಎಂಬ ತೈತ್ತಿರೀಯಬ್ರಾಹ್ಮಣವಾಕ್ಯವನ್ನು ಉದಾಹರಿಸಿದ್ದಾರೆ ಇಲ್ಲಿ **ಪ್ರಜಾಭಿಃ ಅಮೃತತ್ವಂ** ಎಂಬ ಶಬ್ದಗಳಿಗೆ–ತಂದೆಗೆ ಪುತ್ರ, ಪುತ್ರನಿಗೆ ಪೌತ್ರ ಇತ್ಯಾದಿಯಾಗಿ ವಂಶಸರಂಪರೆಯು ಅವಿಚ್ಛಿನ್ನವಾಗಿ ನಡೆದುಬರುವುದೆಂಬ ಅರ್ಥವಿವರಣೆ ಮಾಡಿದ್ದಾರೆ ಯಜ್ಞಮಾಡುವ ಯಜಮಾನನು ಅಥವಾ ಮಂತ್ರದ್ರಷ್ಟೃವಾದ ಋಷಿಯು ಅಗ್ನಿಯ ಅನುಗ್ರಹದಿಂದ ತನ್ನ ವಂಶಸರಂಪರೆಯು ಅವಿಚ್ಛಿನ್ನವಾಗಿ ನಡೆದುಬರುವಂತಾಗಲಿ ಎಂದು ಅಗ್ನಿಯನ್ನು ಪ್ರಾರ್ಥಿಸಿದಾನೆ

॥ ಸಂಹಿತಾಪಾಠಃ ॥

ಯಸ್ತ್ವಾ ತ್ವಂ ಸುಕೃತೇ ಜಾತವೇದ ಉ ಲೋಕಮಗ್ನೇ ಕೃಣವಃ ಸ್ಯೋನಂ।
ಅಶ್ವಿನಂ ಸ ಪುತ್ರಿಣಂ ವೀರವಂತಂ ಗೋಮಂತಂ ರಯಿಂ ನಶತೇ ಸ್ವಸ್ತಿ ॥೧೯॥

॥ ಪದಪಾಠಃ ॥

ಯಸ್ತ್ವಾ । ತ್ವಂ । ಸುಕೃತೇ । ಜಾತವೇದಃ । ಊಂ ಇತಿ । ಲೋಕಂ । ಅಗ್ನೇ । ಕೃಣವಃ । ಸ್ಯೋನಂ ।
ಅಶ್ವಿನಂ । ಸಃ । ಪುತ್ರಿಣಂ । ವೀರವಂತಂ । ಗೋಮಂತಂ । ರಯಿಂ । ನಶತೇ । ಸ್ವಸ್ತಿ ॥ ೧೯ ॥

॥ ಸಾಯಣಭಾಷ್ಯಂ ॥

ತಸ್ಯಾಮೇವ ಪುತ್ರಕಾಮೇಷ್ಟ್ಯಾಂ ಯಸ್ಮೈ ತ್ವಮಿತ್ಯೇಷಾಗ್ನೇಃ ಪುತ್ರವತೋಽನುವಾಕ್ಯಾ। ಯಸ್ಮೈ ತ್ವಂ ಸುಕೃತೇ ಜಾತವೇದೋ ಯಸ್ತ್ವಾ ಹೃದಾ ಕೀರಿಣಾ ಮನ್ಯಮಾನಃ। ಆ. ೨-೧೦। ಇತಿ ಹಿ ಸೂತ್ರಿತಂ ॥

ಹೇ ಜಾತವೇದೋಽಗ್ನೇ ತ್ವಂ ಯಸ್ಮೈ ಸುಕೃತೇ ಸುಕರ್ಮಣೇ ಯಜಮಾನಾಯ। ಉ ಇತಿ ಪೂರಣಃ। ಲೋಕಂ ಸ್ಯೋನಂ ಸುಖಕರಂ ಕೃಣವ । ಅಕರೋಃ। ಯದ್ವಾ। ಲೋಕಮಾಲೋಕೇನ ಸ್ಯೋನಂ ಕೃಣವಃ। ಅನುಗ್ರಹೇಣ ಕುರ್ವಿತ್ಯರ್ಥಃ। ಸ ಯಜಮಾನೋಽಶ್ವಿನಂ ಬಹ್ವಶ್ವೋಪೇತಂ ಪುತ್ರಿಣಂ ಬಹುಪುತ್ರೋಪೇತಂ ವೀರವಂತಂ ವೀರೈರ್ಯುಕ್ತಂ ವೋಪೇತಂ ಗೋಮಂತಂ ರಯಿಂ ಧನಂ ನಶತೇ। ಪ್ರಾಪ್ನೋತಿ। ಸ್ವಸ್ತ್ಯವಿನಶ್ವರಂ ॥

। ಪ್ರತಿಪದಾರ್ಥ ॥

ಜಾತವೇದಃ—ಜಾತವೇದೋರೂಪನಾದ। **ಅಗ್ನೇ**- ಎಲೈ ಅಗ್ನಿಯೇ। **ತ್ವಂ**--ನೀನು। **ಯಸ್ಮೈ**—ಯಾವ। **ಸುಕೃತೇ**—ಸತ್ಕರ್ಮಕಾರಕನಾದ ಯಜಮಾನನ ವಿಷಯವಲ್ಲಿ। **ಲೋಕಂ**—ನಿನ್ನ ವೀಕ್ಷಣವನ್ನು। **ಸ್ಯೋನಂ**—ಅನುಗ್ರಹಾತ್ಮಕವಾದುದನ್ನಾಗಿ । **ಕೃಣವಃ**—ಮಾಡುತ್ತೀಯೋ । **ಸಃ**—ಆ ಯಜಮಾನನು। **ಆಶ್ವಿನಂ**—ಅಶ್ವೋಪೇತವಾದುದೂ। **ಪುತ್ರಿಣಂ**—ಬಹುಪುತ್ರೋಪೇತವಾದುದೂ। **ವೀರವಂತಂ**—ಶಕ್ತಿಯುತವಾದುದೂ। **ಗೋಮಂತಂ**—ಗೋವುಗಳಿಂದ ಯುಕ್ತವಾದುದೂ ಆದ । **ರಯಿಂ**—ಧನವನ್ನು। **ಸ್ವಸ್ತಿ**—ನಾಶರಹಿತವಾದುದನ್ನಾಗಿ। **ನಶತೇ**—ಹೊಂದುತ್ತಾನೆ

॥ ಭಾವಾರ್ಥ ॥

ಜಾತವೇದೋರೂಪನಾದ ಎಲೈ ಅಗ್ನಿಯೇ, ನೀನು ಯಾವ ಸತ್ಕರ್ಮಕಾರಿಯಾದ ಯಜಮಾನನ ವಿಷಯದಲ್ಲಿ ಅನುಗ್ರಹಾತ್ಮಕವಾದ ಬುದ್ಧಿಯನ್ನು ತೋರಿಸುತ್ತಾ ನೋಡುವೆಯೋ ಆ ಯಜಮಾನನು ಅಶ್ವೋಪೇತವಾದುದೂ, ಬಹುಪುತ್ರೋಪೇತವಾದುದೂ, ಶಕ್ತಿಯುತವಾದುಗೂ, ಗೋವುಗಳಿಂದ ಯುಕ್ತವಾದುದೂ ಆದ ಧನವನ್ನು ಹೊಂದುತ್ತಾನೆ ಅದು ನಾಶರಹಿತವೂ, ಮಂಗಳಕಾರಿಯೂ ಆಗಿರುತ್ತದೆ

English Translation

Upon whatsoever performer of good works you, Agni, who are Jatavedas, cast a favourable regard, he enjoys welfare, and riches comprehending horses, cattle, sons, and male descendants

॥ ವಿಶೇಷವಿಷಯಗಳು ॥

ಉ—**ಉ** ಎಂಬ ಶಬ್ದವು ಪಾದಪೂರಣಕ್ಕಾಗಿ ಎಂದರೆ ಒಂದು ಋಕ್ಕಿನ ಪಾದದಲ್ಲಿ ನಿರ್ದಿಷ್ಟಸಂಖ್ಯೆಯ ಅಕ್ಷರಗಳಲ್ಲಿ ಒಂದು ಅಕ್ಷರವು ಕಮ್ಮಿಯಾಗಿದ್ದಾಗ ಅದನ್ನು ಪೂರ್ತಿಮಾಡುವುದಕ್ಕಾಗಿ ಉ ಎಂಬ ಶಬ್ದವನ್ನು ಉಪಯೋಗಿಸುವರು ಎಂದು—**ಅಥಾಪಿ ಪದಪೂರಣ ಇದಮು ತದು** (ನಿ. ೧-೫) ಎಂದು ಯಾಸ್ಕರು ನಿರ್ವಚನವನ್ನು ಹೇಳಿದಾರೆ. ಇಂತಹ ಸಂದರ್ಭದಲ್ಲಿ ಈ ಶಬ್ದಕ್ಕೆ ನಿರ್ದಿಷ್ಟವಾದ ಯಾವ ಅರ್ಥವೂ ಇರುವುದಿಲ್ಲ

ಸ್ಯೋನಂ—ಸ್ಯೋನಂ ಎಂಬ ಶಬ್ದವು ಇಷ್ಟತ್ತು ಸುಖನಾಮಗಳಲ್ಲಿ ಪರಿತವಾಗಿರುವುದು. (ನಿ ೩-೧೩) ಇಲ್ಲಿ ಋಷಿಯು ಯಜ್ಞವಮಾಡುವ ಯಜಮಾನನಿಗೆ ಅಗ್ನಿಯು ಸುಖವನ್ನುಂಟುಮಾಡುವುದಲ್ಲದೆ, ಅವನಿಗೆ ಅಶ್ವಗಳನ್ನೂ, ಉತ್ತಮವಾದ ಎಂದರೆ ಪರಾಕ್ರಮವುಳ್ಳ ಪುತ್ರಸಂತತಿಯನ್ನೂ, ಗೋವುಗಳನ್ನೂ, ಧನವನ್ನೂ ಅನುಗ್ರಹಮಾಡಿ ಕೊಡಬೇಕೆಂದು ಪ್ರಾರ್ಥಿಸಿದಾನೆ

ಸ್ವಸ್ತಿ—ಸ್ವಸ್ತಿ ಶಬ್ದಕ್ಕೆ ಯಾಸ್ಕರು—**ಸ್ವಸ್ತೀತ್ಯವಿನಾಶಿನಾಮ। ಅಸ್ತಿರಭಿಪೂಜಿತಃ ಸು ಅಸ್ತೀತಿ।** (ನಿ ೩-೨೧) ಎಂದು ನಿರ್ವಚನವನ್ನು ಹೇಳಿದಾರೆ ಸ್ವಸ್ತಿ ಶಬ್ದವು ಸು+ಅಸ್ತಿ ಎಂಬ ಶಬ್ದಗಳು ಸೇರಿ ನಿಷ್ಪನ್ನವಾಗಿದೆ. ಈ ಶಬ್ದಕ್ಕೆ ಚೆನ್ನಾಗಿ ಪೂಜಿಸಲ್ಪಡುವವನು ಎಂದರ್ಥವು ಆದರೆ, ಪ್ರಯೋಗದಲ್ಲಿ ಈ ಶಬ್ದಕ್ಕೆ ಅವಿನಾಶಿನಾಮ—ನಾಶವಿಲ್ಲದ, ಯಾವಾಗಲೂ ಸುರಕ್ಷಿತವಾಗಿರುವ ಎಂಬರ್ಥವಿರುವುದು ಇಲ್ಲಿ ಋಷಿಯು ತನಗೆ ಯಾವಾಗಲೂ ನಾಶವಾಗದಿರತಕ್ಕ ಧನಾದಿಗಳನ್ನು ಕೊಡಬೇಕೆಂದು ಅಗ್ನಿಯನ್ನು ಪ್ರಾರ್ಥಿಸುವಾಗ **ರಯಿಂ ಸ್ವಸ್ತಿ** ಎಂಬ ಶಬ್ದ ಪ್ರಯೋಗವನ್ನು ಮಾಡಿರುವನು

ಐದನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಸುಸಮಿದ್ಧಾಯೇತ್ಯೇಕಾದಶರ್ಚಂ ಪಂಚಮಂ ಸೂಕ್ತಮಾತ್ರೇಯಸ್ಯ ವಸುಶ್ರುತಸ್ಯಾರ್ಷಂ ಗಾಯತ್ರಮಿಧ್ಮಾದ್ಯುಕ್ತದೇವತಾಕಂ। ಆಪ್ರಮಿತ್ಯುಕ್ತತ್ವಾತ್ತನೂನಪಾದ್ವರ್ಜಿತಂ। ಅನುಕ್ರ. ಮ. ೧. ಸೂ. ೧೩ । ಸುಸಮಿದ್ಧಾಯಾಪ್ರಂ ಗಾಯತ್ರಮಿತ್ಯನುಕ್ರಮಣಿಕಾ। ಅತ್ರೇಣಾಮಿದಮಾಪ್ರೀಸೂಕ್ತಂ। ಸಮಿದ್ಧೋ ಅದ್ಯೇತಿ ಸರ್ವೇಷಾಂ ಯೇಧರ್ಷಿ ವಾ। ಆ. ೩-೨ । ಇತ್ಯುಕ್ತತ್ವಾತ್ ॥

ಅನುವಾದವು—**ಸುಸಮಿದ್ಧಾಯೇ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು ಈ ಸೂಕ್ತಕ್ಕೆ ಅತ್ರಿಗೋತ್ರೋದ್ಭವನಾದ ವಸುಶ್ರುತನೆಂಬುವನು ಋಷಿಯು, ಆಪ್ರೀ ಸೂಕ್ತಗಳಿರುವಂತೆ ಈ ಸೂಕ್ತದ ಹನ್ನೊಂದು ಋಕ್ಕುಗಳಿಗೂ ಇಧ್ಮಾದಿ ಹನ್ನೊಂದನುನುಂದಿ ದೇವತೆಗಳು, ಗಾಯತ್ರೀಛಂದಸ್ಸು ಅನುಕ್ರಮಣಿಕೆಯಲ್ಲಿ (ಅನು ೧-೧೩) ಈ ಸೂಕ್ತದ ವಿಚಾರದಲ್ಲಿ **ಆಪ್ರಂ** ಎಂದು ಹೇಳಿರುವುದರಿಂದ ತನೂನಪಾತ್ ಎಂಬ ದೇವತಾಕವಾದ ಮಂತ್ರವು ಈ ಸೂಕ್ತದಲ್ಲಿರುವುದಿಲ್ಲ ಅದಕ್ಕೆ ಬದಲಾಗಿ ನರಾಶಂಸ ದೇವತಾಸ್ತುತಿ ಇದೆ ಅನುಕ್ರಮಣಿಕೆಯಲ್ಲಿ—**ಸುಸಮಿದ್ಧಾಯಾಪ್ರಂ ಗಾಯತ್ರಂ** ಎಂದು ಹೇಳಿರುವುದು ಅತ್ರಿಗೋತ್ರೋದ್ಭವರಾದವರು ಸರಿಸಬೇಕಾದ ಆಪ್ರೀಸೂಕ್ತವಿದು ಈ ವಿಷಯದಲ್ಲಿ **ಸಮಿದ್ಧೋ ಅದ್ಯೇತಿ ಸರ್ವೇಷಾಂ ಯೇಧರ್ಷಿ ವಾ** ಎಂದು ಆಶ್ವಲಾಯನಶ್ರೌತಸೂತ್ರವಿರುವುದು (ಆ ೩-೨)

ಸೂಕ್ತ—೫

ಮಂಡಲ—೫ ॥ ಅನುವಾಕ—೧.॥ ಸೂಕ್ತ—೫ ॥
ಅಷ್ಟಕ—೩ ॥ ಅಧ್ಯಾಯ—೮ ॥ ವರ್ಗ—೨೦, ೨೧ ॥

। ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ।

। ಋಷಿಃ— ವಸುಶ್ರುತ ಆತ್ರೇಯಃ ॥

। ದೇವತಾ— ಆಪ್ರೀಸೂಕ್ತಂ ॥ ೧ ಇಧ್ಮಃ ಸಮಿಧ್ಯೋಽಗ್ನಿರ್ವಾ । ೨. ನರಾಶಂಸಃ ।
೩ ಇಳಾ । ೪. ಬರ್ಹಿಃ । ೫. ದೇವೀರ್ದ್ವಾರಃ । ೬. ಉಷಾಸಾನಕ್ತಾ ।
೭. ದೈವ್ಯಾಹೋತಾರೌ ಪ್ರಚೇತಸೌ । ೮. ತಿಸ್ರೋ ದೇವ್ಯಃ ಸರಸ್ವತೀ-
ಭಾಭಾರತ್ಯಃ । ೯. ತ್ವಷ್ಟಾ । ೧೦. ವನಸ್ಪತಿಃ । ೧೧. ಸ್ವಾಹಾಕೃತಯಃ ॥

। ಛಂದಃ—ಗಾಯತ್ರೀ ॥

। ಸಂಹಿತಾಪಾಠಃ ।

ಸುಸಮಿದ್ಧಾಯ ಶೋಚಿಷೇ ಘೃತಂ ತೀವ್ರಂ ಜುಹೋತನ ।
ಅಗ್ನಯೇ ಜಾತವೇದಸೇ ॥ ೧ ॥

। ಪದಪಾಠಃ ।

ಸು॒ಸಮಿದ್ಧಾ॒ಯ । ಶೋ॒ಚಿಷೇ॑ । ಘೃ॒ತಂ । ತೀ॒ವ್ರಂ । ಜು॒ಹೋ॒ತ॒ನ ।
ಅ॒ಗ್ನಯೇ॑ । ಜಾ॒ತ॒ವೇ॒ದಸೇ ॥ ೧ ॥

। ಸಾಯಣಭಾಷ್ಯಂ ।

ಸುಸಮಿದ್ಧಾಯ ಸುಷ್ಠು ಸಮಿದ್ಧಾಯೈತನ್ನಾಮಕಾಯಾಗ್ನಯೇ **ಶೋಚಿಷೇ** ದೀಪ್ತಿಮತೇ **ಘೃತಮಾಜ್ಯಂ ತೀವ್ರಂ** ಪ್ರಭೂತಂ **ಜುಹೋತನ** ಹೇ ಋತ್ವಿಜ **ಅಗ್ನಯೇಽಂಗನಾದಿಗುಣಯುಕ್ತಾಯ ಜಾತವೇದಸೇ** ಜಾತಧನಾಯ ॥

॥ ಪ್ರತಿಪದಾರ್ಥಃ ॥

(ಎಲೈ ಋತ್ವಿಕ್ಕುಗಳೇ) **ಸುಸಮಿದ್ಧಾಯೈ**---ಸುಸಮಿದ್ಧರೂಪನೂ (ಅತಿಶಯವಾಗಿ ಪ್ರಜ್ವಲಿತನಾದವನೂ)। **ಜಾತವೇದಸೇ**—ಜಾತವೇದೋರೂಪನೂ । **ಶೋಚಿಷೇ**—ಪ್ರಭಾಯುತನೂ ಆದ । **ಅಗ್ನಯೇ**—ಅಗ್ನಿಯನ್ನುದ್ದೇಶಿಸಿ । **ಘೃತಂ**—ಆಜ್ಯವನ್ನು । **ತೀವ್ರಂ**—ಪ್ರಭೂತವಾಗಿ । **ಜುಹೋತನ**—ಅರ್ಪಿಸಿರಿ.

। ಭಾವಾರ್ಥ ।

ಎಲೈ ಋತ್ವಿಕ್ಕುಗಳೇ, ಸುಸಮಿದ್ಧನಾಮಕನೂ, ಜಾತವೇದೋರೂಪನೂ, ಪ್ರಭಾಯುತನೂ ಆದ ಅಗ್ನಿಯನ್ನುದ್ದೇಶಿಸಿ ಪ್ರಭೂತನಾಗಿ ಆಜ್ಯವನ್ನರ್ಪಿಸಿರಿ.

English Translation.

Offer abundant butter to the resplendent, Susamiddha, to Agni, to Jatavedas.

॥ ವಿಶೇಷವಿಷಯಗಳು ॥

ಈ ಸೂಕ್ತವು ಆಪ್ರೀ ಸೂಕ್ತವು ಆಪ್ರೀ ಸೂಕ್ತಗಳ ವಿಷಯವಾಗಿ ನಾವು ಹಿಂದೆ ಅನೇಕಾವರ್ತಿ ವಿಸ್ತಾರವಾದ ವಿವರಣೆಯನ್ನು ಬರೆದಿದ್ದೇವೆ ಆದರಲ್ಲಿಯೂ ಋ ಸಂ. ಭಾಗ ೧೫, ಪುಟಗಳು 665–747 ರಲ್ಲಿ ವಿವರಿಸಿರುವ ಆಪ್ರೀ ಸೂಕ್ತ ಸಂಬಂಧವಾದ ವಿಷಯಗಳೆಲ್ಲಾ ಪ್ರಕೃತ ಸೂಕ್ತಕ್ಕೂ ಅನ್ವಯಿಸುವುದರಿಂದ ಇಲ್ಲಿ ಮತ್ತೆ ವಿವರಿಸುವುದಿಲ್ಲ. ಆ ವಿಷಯಗಳನ್ನೆಲ್ಲಾ ಅಲ್ಲಿಯೇ ನೋಡಿ ತಿಳಿದುಕೊಳ್ಳಬಹುದು

॥ ಸಂಹಿತಾಪಾಠಃ ॥

ನರಾಶಂಸಃ ಸುಷೂದತೀಮಂ ಯಜ್ಞಮದಾಭ್ಯಃ ।
ಕವಿರ್ಹಿ ಮಧುಹಸ್ತ್ಯಃ ॥ ೨ ॥

ನರಾಶಂಸಃ । ಸುಸೂದತಿ । ಇಮಂ । ಯಜ್ಞಂ । ಅದಾಭ್ಯಃ ।
ಕವಿಃ । ಹಿ । ಮಧುಹಸ್ತ್ಯಃ ॥ ೨ ॥

॥ ಸಾಯಣಭಾಷ್ಯಂ ॥

ನರಾಶಂಸಃ ನರೈಃ ಶಂಸನೀಯೋಽಯಮಗ್ನಿರಿಮಂ ಯಜ್ಞಮಿದಂ ಹವಿರ್ವಾ ಸುಷೂದತಿ । ಸುಷ್ಠು ಪ್ರೇರಯತಿ । ಸ ದೇವೋಽದಾಭ್ಯೋಽಹಿಂಸ್ಯಃ ಕೇನಾಪಿ ಕವಿರ್ಮೇಧಾವೀ ಮಧುಹಸ್ತ್ಯೋ ಮಧುರಹಸ್ತ್ಯಃ ॥

॥ ಪ್ರತಿಪದಾರ್ಥ ।

ಅದಾಭ್ಯಃ—ಯಾರ ಹಿಂಸೆಗೂ ಸಿಲುಕದವನೂ । **ಕವಿಃ**—ಮೇಧಾವಿಯೂ । **ಮಧುಹಸ್ತ್ಯಃ**—ಆಹ್ಲಾದಕರವಾದ ಹಸ್ತವುಳ್ಳವನೂ ಆದ । **ನರಾಶಂಸಃ**—ನರಾಶಂಸನಾಮಕನಾದ ಅಗ್ನಿಯು । **ಇಮಂ ಯಜ್ಞಂ**—ಈ ಯಜ್ಞವನ್ನು । **ಸುಷೂದತಿ ಹಿ**—ಉತ್ತಮವಾಗಿ ಪ್ರೇರಿಸುತ್ತಾನೆಯಲ್ಲವೇ ?

॥ ಭಾವಾರ್ಥ ॥

ಯಾರ ಹಿಂಸೆಗೂ ಸಿಲುಕದವನೂ, ಮೇಧಾವಿಯೂ, ಆಹ್ಲಾದಕರವಾದ ಹಸ್ತವುಳ್ಳವನೂ ಆದ ನರಾಶಂಸ ನಾಮಕನಾದ ಅಗ್ನಿಯು ಈ ಯಜ್ಞವನ್ನು ಉತ್ತಮರೀತಿಯಲ್ಲಿ ಪ್ರೇರಿಸುತ್ತಾನೆ

English Translation.

Narashansa animates this sacrifice, he who is uninjurable, who verily is wise and sweet-handed.

॥ संहितापाठः ॥

ईळितो अग्न आ वहेंद्रं चित्रमिह प्रियं ।
सुखै रथेभिरूतयेऽ ॥ ४ ॥

॥ पदपाठः ॥

ईळितः । अग्नेऽ । आ । वह । इंद्रं । चित्रं । इह । प्रियं ।
सुऽखैः । रथेभिः । ऊतयेऽ ॥ ४ ॥

॥ सायणभाष्यं ॥

हे अग्नेऽ ईळितः स्तुतः सन्ना वहेंद्रं चित्रं चायनीयं प्रियमिहास्मिन्यज्ञेऽ सुखै रथेभिः रथैरूतयेऽस्मद्रक्षणाय ॥

॥ प्रतिपदार्थ ॥

ईळितः—(पूजितनाद) ईळितनाद । अग्नेऽ—ಎಲೈ ಅಗ್ನಿಯೇ । चित्रं—ಆಕರ್ಷಕವಾದ ರೂಪವುಳ್ಳವನೂ । प्रियं—ನಮಗೆಲ್ಲಾ ಹಿತಕಾರಕನೂ ಆದ । इंद्रं—ಇಂದ್ರನನ್ನು । इह—ಈ ಯಜ್ಞದಲ್ಲಿ । ऊतयेऽ—ನಮ್ಮ ರಕ್ಷಣೆಗಾಗಿ । सुखैः—ಸುಖಕರವಾದ । रथेभिः—ರಥಗಳಲ್ಲಿ । आ वह—ಕರೆದುಕೊಂಡು ಬಾ

॥ भावार्थ ॥

ಸ್ತುತ್ಯನಾದ ಎಲೈ ಅಗ್ನಿಯೇ, ಆಕರ್ಷಕವಾದ ರೂಪವುಳ್ಳವನೂ, ನಮಗೆಲ್ಲಾ ಹಿತಕಾರಕನೂ ಆದ ಇಂದ್ರನನ್ನು ಈ ಯಜ್ಞದಲ್ಲಿ ನಮ್ಮ ರಕ್ಷಣೆಗಾಗಿ ಸುಖಕರವಾದ ರಥಗಳಲ್ಲಿ ಕರೆದುಕೊಂಡು ಬಾ

English Translation.

Agni, you are llita bring heither the wonderful and friendly Indra, with his easy-going chariots for our protection.

॥ संहितापाठः ॥

ऊर्णम्रदा वि प्रथस्वाभ्यर्का अनूषत ।

भवा नः शुभ्र सातये ॥ ४ ॥

॥ पदपाठः ॥

ऊर्णम्रदाः । वि । प्रथस्व । अभि । अर्काः । अनूषत ।

भव । नः । शुभ्र । सातये ॥ ४ ॥

॥ सायणभाष्यं ॥

हे ऊर्णम्रदा ऊर्णार्कंबलवत् मृदु हे बर्हिर्वि प्रथस्व । प्रथय । अर्काः स्तोतारोऽभ्यनूषत । स्तुवंति । हे शुभ्र दीप्ते सातये धनाय तद्दानाय वा नोऽस्माकं भव ॥

॥ प्रतिपदार्थ ॥

ऊर्णम्रदाः—ರತ್ನಗಂಬಳಿಯಂತೆ ಮೃದುವಾದ ಎಲೈ ಬರ್ಹಿಯೇ । **अर्काः**—ಸ್ತೋತೃಗಳು । **अभि अनूषत**—ನಿನ್ನನ್ನು ಸ್ತುತಿಸುತ್ತಾರೆ । (ಆದುದರಿಂದ) **वि प्रथस्व**—ವಿಸ್ತೃತವಾಗಿ ಹರಡು । **शुभ्र**—ಪ್ರಕಾಶಯುಕ್ತನಾದ ಬರ್ಹಿಯೇ । **नः**—ನಮ್ಮ ವಿಷಯದಲ್ಲಿ । **सातये**—ಧನದಾನದ ಮನಸ್ಸುಳ್ಳವನಾಗಿ । **भव**—ಆಗಿರು.

॥ ಭಾವಾರ್ಥ ॥

ರತ್ನಗಂಬಳಿಯಂತೆ ಮೃದುವಾದ ಎಲೈ ಬರ್ಹಿಯೇ, (ಬರ್ಹಿಃ ಎಂದರೆ ಆಸನಾರ್ಥವಾಗಿ ಹರಡಿರುವ ದರ್ಭೆಗಳು) ಸ್ತೋತೃಗಳು ನಿನ್ನನ್ನು ಸ್ತುತಿಸುತ್ತಾರೆ ಆದುದರಿಂದ ನೀನು ವಿಸ್ತೃತವಾಗಿ ಹರಡು. ಪ್ರಕಾಶಯುತನಾದ ಬರ್ಹಿಯೇ, ನಮಗೆ ಧನದಾನವನ್ನು ಮಾಡಬೇಕೆಂಬ ಮನಸ್ಸುಳ್ಳವನಾಗಿರು.

English Translation.

(Grass), soft as wool, be spread , the worshipers praise you . be to us radiant (grass, the source of) liberality.

॥ ಸಂಹಿತಾಪಾಠಃ ॥

ದೇವೀರ್ದ್ವಾರೋ ವಿ ශ್ರಯಧ್ವಂ ಸುಪ್ರಾಯಣಾ ನ ಊತಯೇ ।
ಪ್ರಪ್ರ ಯಜ್ಞಂ ಪೃಣೇತನ ॥ ೫ ॥

॥ ಪದಪಾಠಃ ॥

ದೇವೀಃ । ದ್ವಾರಃ । ವಿ । ශ್ರಯಧ್ವಂ । ಸುಪ್ರಾಯಣಾಃ । ನಃ । ಊತಯೇ ।
ಪ್ರಪ್ರ । ಯಜ್ಞಂ । ಪೃಣೇತನ ॥ ೫ ॥

॥ ಸಾಯಣಭಾಷ್ಯಂ ॥

ಹೇ ದ್ವಾರೋ ಯಜ್ಞಸ್ಯ ದ್ವಾರಾಭಿಮಾನಿನ್ಯೋ ಹೇ ದೇವೀರ್ದೇವ್ಯೋ ವಿ ශ್ರಯಧ್ವಂ । ವಿಯುಕ್ತಾ ಭವತ ।। ಸುಪ್ರಾಯಣಾಃ ಶೋಭನಗಮನಸಾಧನಾ ನೋಽಸ್ಮಾಕಮೂತಯೇ ರಕ್ಷಣಾಯೈ ಯಜ್ಞಂ ಯಜಮಾನಂ ಪ್ರಪ್ರ ಪೃಣೇತನ । ಪೂರಯತ ಕಾಮ್ಯೈರ್ಯಜ್ಞಮೇವ ವಾ ಫಲೈಃ ॥

॥ ಪ್ರತಿಪದಾರ್ಥ ॥

ದೇವೀಃ—ದೇವತಾತ್ಮರಾದ । **ದ್ವಾರಃ**—ಯಜ್ಞದ ದ್ವಾರಾಭಿಮಾನದೇವತೆಗಳೇ । **ಸುಪ್ರಾಯಣಾಃ**—ಶ್ರೇಷ್ಠವಾದ ಸಂಚಾರಸಾಧನವುಳ್ಳವರಾಗಿ । **ನಃ**—ನಮ್ಮ । **ಊತಯೇ**—ರಕ್ಷಣಾರ್ಥವಾಗಿ । **ವಿ ශ್ರಯಧ್ವಂ**—ವಿವಿಕ್ತರಾಗಿ ದಾರಿಮಾಡಿರಿ । **ಯಜ್ಞಂ**—ಯಜ್ಞಕರ್ಮವನ್ನು । **ಪ್ರಪ್ರ**—ಪೂರ್ಣವಾಗಿ । **ಪೃಣೇತನ**—ನೆರವೇರುವಂತೆ ಮಾಡಿರಿ.

॥ ಭಾವಾರ್ಥ ॥

ದೇವತಾತ್ಮರಾದ ಎಲೈ ಯಜ್ಞದ ದ್ವಾರಾಭಿಮಾನ ದೇವತೆಗಳೇ, ಶ್ರೇಷ್ಠವಾದ ಸಂಚಾರಸಾಧನವುಳ್ಳವರಾಗಿಯೂ, ನಮ್ಮ ರಕ್ಷಣಾರ್ಥವಾಗಿಯೂ ವಿವಿಕ್ತರಾಗಿ ನಮಗೆ ದಾರಿಮಾಡಿಕೊಡಿರಿ ನಮ್ಮ ಯಜ್ಞಕರ್ಮವು ಪೂರ್ಣವಾಗಿ ನೆರವೇರುವಂತೆ ಮಾಡಿರಿ.

English Translation.

Open divine doors, our passages to preservation, fulfill the sacrifice (with its rewards).

॥ संहितापाठः ॥

सुप्रतीके वयोवृधा यह्वी ऋतस्य मातरा ।

दोषामुषासमीमहे ॥ ६ ॥

॥ पदपाठः ॥

सुप्रतीके इति सुऽप्रतीके । वयोऽवृधा । यह्वी इति । ऋतस्य । मातरा ।

दोषाम् । उषसम् । ईमहे ॥ ६ ॥

॥ सायणभाष्यम् ॥

हे अहोरात्रेशब्दाभिमानिदेव्यौ सुप्रतीके सुरूपे शोभनाङ्गे वा वयोवृधान्नस्य वर्धयित्र्यौ यह्वी महत्यावृतस्य यज्ञस्योदकस्य वा मातरा निर्मात्र्यौ तयोर्मध्ये प्रत्येकं दोषाम् रात्रिदेवीमुषसमहर्देवीमीमहे । स्तुमः ॥

॥ प्रतिपदार्थ ॥

सुप्रतीके— श्रेष्ठವಾದ ರೂಪವುಳ್ಳವರೂ । **वयोवृधा**— ಅನ್ನಕ್ಕೆ ವೃದ್ಧಿಕಾರಕರೂ । **यह्वी**—ಮಹತ್ಸ್ವರೂಪವುಳ್ಳವರೂ। **ऋतस्य**—ಯಜ್ಞಕ್ಕೆ। **मातरा**—ಜನನಿಯರೂ ಆದ। **दोषाम्**—ರಾತ್ರಿದೇವಿಯನ್ನೂ । **उषसम्**—ಅಹರ್ದೇವಿಯನ್ನೂ । **ईमहे**—ಸ್ತುತಿಸುತ್ತೇವೆ

॥ भावार्थ ॥

ಶ್ರೇಷ್ಠವಾದ ರೂಪವುಳ್ಳವರೂ, ಅನ್ನಕ್ಕೆ ವೃದ್ಧಿಕಾರಕರೂ, ಮಹತ್ಸ್ವರೂಪವುಳ್ಳವರೂ, ಯಜ್ಞಕ್ಕೆ ಜನನಿಯರೂ ಆದ ರಾತ್ರಿದೇವಿಯನ್ನೂ ಅಹರ್ದೇವಿಯನ್ನೂ ನಾವು ಸ್ತುತಿಸುತ್ತೇವೆ

English Translation

We glorify the evening and the morning, lovely, food-bestowing, mighty, the mothers of sacrifice.

॥ संहितापाठः ॥

वातस्य पत्मन्नीळिता दैव्या होतारा मनुषः ।

इमं नो यज्ञमा गतं ॥ ७ ॥

॥ पदपाठः ॥

वातस्य । पत्मन् । तुळिता । दैव्या । होतारा । मनुषः ।
इमं । नः । यज्ञं । अ । गतं ॥ ६ ॥

॥ सायणभाष्यं ॥

वातस्य पत्मन् । लुप्तोपमैषा । वायोर्गमनसदृशगमनार्थमाळिताभ्यां स्तुतौ । यद्वा । वातस्य पतनसाधनेऽन्तरिक्षे गच्छंतौ दैव्या देवादग्नेरादित्याच्च समुद्भूतौ होतारा देवानामाह्वातारौ युवां मनुषो मनुष्यस्येमं नोऽस्माकं यज्ञमा गतं । आगच्छतं । नो मनुषो यज्ञमिति व्यधिकरणे षष्ठ्यौ । अस्माकं यजमानस्य यज्ञमित्यर्थः ॥

॥ प्रतिपदार्थ ॥

वातस्य पत्मन्—वायुविन मार्गदल्लि संचरिसुववरू । **दैव्या होतारा**—देवतेगळन्नु यज्ञक्के करेयुववरू आद देवतेगळे । **नः**—नम्म । **मनुषः**—मानवरूपियाद यजमानन । **इमं यज्ञं**—ई यज्ञक्के । **अ गतं**—दयमाडि

॥ भावार्थ ॥

वायुविन मार्गदल्लि संचरिसुववरू, देवतेगळन्नु यज्ञक्के करेयुववरू आद ऎरॆ देवतेगळे, नम्म यजमानन ई यज्ञक्के दयमाडिरि.

English Translation.

Praised (by us), divine invokers of the gods, come, moving on the path of the wind, to this sacrifice of our patron.

॥ संहितापाठः ॥

इळा सरस्वती मही तिस्रो देवीर्मयोभुवः ।
बर्हिः सीदन्त्वस्रिधः ॥ ७ ॥

॥ पदपाठः ॥

इळा । सरस्वती । मही । तिस्रः । देवीः । मयःऽभुवः ।
बर्हिः । सीदन्तु । अस्रिधः ॥ ७ ॥

॥ ಸಾಯಣಭಾಷ್ಯಂ ॥

ಇಳಾ ಪೃಥಿವೀ ಸರಸ್ವತೀ । ಸರ ಉದಕಂ । ತಸ್ಮಾತ್ಸರಸ್ವಾನ್ಭವತಿ । ತಸ್ಯ ಸ್ತ್ರೀ ಸರಸ್ವತೀ । ಮಹೀ ಮಹತೀ ಭಾರತೀ ಭರತಸ್ಯಾದಿತ್ಯಸ್ಯ ಪತ್ನೀ । ಅತ್ರ ಯದ್ಯಪ್ಯೇಷಾ ನೋಕ್ತಾ ತಥಾಪಿ ಸರ್ವತ್ರ ಸಹದೃಷ್ಟತ್ವಾತ್ತ್ರಿಸಂಖ್ಯಾಶ್ರವಣಾಚ್ಚ ಸಾ ಗೃಹ್ಯತೇ । ಅಥವೈತಾಃ ಕ್ಷಿತ್ಯಂತರಿಕ್ಷದ್ಯುಸ್ಥಾನಾ ವಾಗ್ದೇವ್ಯಃ । ಏತಾ ಮಯೋಭುವಃ ಸುಖಸ್ಯ ಭಾವಯಿತ್ರ್ಯೋಽಸ್ರಿಧೋಽಹಿಂಸಿಕಾಃ ಸತ್ಯೋ ಬರ್ಹಿರ್ಬರ್ಹಿಷಿ ಸೀದಂತು । ಉಪವಿಶಂತು ॥

॥ ಪ್ರತಿಪದಾರ್ಥ ॥

ಮಯೋಭುವಃ—ಸುಖದಾತ್ರಿಯರೂ । **ಅಸ್ರಿಧಃ** - ಅಹಿಂಸಕರೂ । **ದೇವೀಃ**—ದೇವತಾತ್ಮರೂ ಆದ । **ಇಳಾ**—ಇಳಾದೇವಿಯೂ । **ಸರಸ್ವತೀ**—ಸರಸ್ವತಿಯೂ । **ಮಹೀ**—ಮಹತ್ಸ್ವರೂಪವುಳ್ಳ ಭಾರತಿಯೂ । **ಬರ್ಹಿಃ** - ದರ್ಭಾಸನದಮೇಲೆ । **ಸೀದಂತು**—ಆಸೀನರಾಗಲಿ (ಕುಳಿತುಕೊಳ್ಳಲಿ)

॥ ಭಾವಾರ್ಥ ॥

ಸುಖದಾತ್ರಿಯರೂ, ಅಹಿಂಸಕರೂ, ದೇವತಾತ್ಮರೂ ಆದ ಇಳಾ, ಸರಸ್ವತೀ ಮತ್ತು ಮಹತ್ಸ್ವರೂಪವುಳ್ಳ ಭಾರತಿ ಈ ಮೂವರು ದೇವಿಯರೂ ಸಹ ದರ್ಭಾಸನದಮೇಲೆ ಆಸೀನರಾಗಲಿ.

English Translation.

May Ila, Saraswati, Mahi, the three goddesses who are the sources of happiness, sit down, benevolent, upon the sacred grass.

॥ ವಿಶೇಷವಿಷಯಗಳು ॥

ಈ ಋಕ್ಕು ಋ. ಸಂ ೧-೧೩ ನೇ **ಸುಸಮಿದ್ಧೋ ನ ಆ ವಹ** ಎಂಬ ಸೂಕ್ತದಲ್ಲಿ ೯ ನೇ ಋಕ್ಕಾಗಿ ಪಠಿತವಾಗಿದೆ ಅಲ್ಲಿ ಆ ಸೂಕ್ತಕ್ಕೆ ಮೇಧಾತಿಥಿಃ ಕಾಣ್ವಃ ಎಂಬುವನು ಋಷಿಯು ಪ್ರಕೃತ ಋಕ್ಕಿಗ ವಸುಶ್ರುತ ಆತ್ರೇಯಃ ಎಂಬುವನು ಋಷಿಯು ಇವರಲ್ಲಿ ಯಾರು ಪೂರ್ವೀಕರು ಅಥವಾ ಇಬ್ಬರೂ ಸಮಕಾಲೀನರೇ ಎಂಬ ವಿಷಯವು ಗೊತ್ತಾಗುವುದಿಲ್ಲ.

॥ ಸಂಹಿತಾಪಾಠ ॥

ಶಿವಸ್ತ್ವಷ್ಟರಿಹಾ ಗಹಿ ವಿಭುಃ ಪೋಷ ಉತ ತ್ಮನಾ ।
ಯಜ್ಞೇಯಜ್ಞೇ ನ ಉದವ ॥ ೯ ॥

॥ ಪದಪಾಠಃ ॥

ಶಿವಃ । ತ್ವಷ್ಟಃ । ಇಹ । ಆ । ಗಹಿ । ವಿಭುಃ । ಪೋಷೇ । ಉತ । ತ್ಮನಾ ।
ಯಜ್ಞೇಯಜ್ಞೇ । ನಃ । ಉತ್ । ಅವ ॥ ೯ ॥

॥ ಸಾಯಣಭಾಷ್ಯಂ ॥

ಹೇ ತ್ವಷ್ಟರ್ದೇವ ತ್ವಂ ಶಿವಃ ಸುಖಕರಃ ಸನ್ನಿಹಾ ಗಹಿ । ಅಸ್ಮದ್ಯಜ್ಞಮಾಗಚ್ಛ। ವಿಭುರ್ವ್ಯಾಪ್ತಸ್ತ್ವಂ ಪೋಷೇ ಪೋಷಕರಣೇ । ಉತಾಗತ್ಯ ಚ ತ್ವನಾತ್ಮನಾ ಸ್ವಯಮೇವ ಯಜ್ಞೇ ಯಜ್ಞೇ ಸರ್ವೇಷು ಯಜ್ಞೇಷು ನೋಽಸ್ಮಾನುದವ । ಉತ್ಕೃಷ್ಟಂ ರಕ್ಷ ॥

॥ ಪ್ರತಿಪದಾರ್ಥ ॥

ತ್ವಷ್ಟಃ—ಎಲೈ ತ್ವಷ್ಟೃದೇವನೇ । **ಪೋಷೇ**—ಪೋಷಣ ವ್ಯಾಪಾರದಲ್ಲಿ । **ವಿಭುಃ**—ಸರ್ವವ್ಯಾಪಿಯೂ। **ಶಿವಃ**—ಸುಖಕರನೂ ಆಗಿ । **ಇಹ**—ಈ ಯಜ್ಞಕ್ಕೆ । **ಆ ಗಹಿ**—ದಯಮಾಡು । **ಯಜ್ಞೇ ಯಜ್ಞೇ**—ಪ್ರತಿಯೊಂದು ಯಜ್ಞದಲ್ಲಿಯೂ । **ನಃ**—ನಮ್ಮನ್ನು । **ಉದವ**—ಪೂರ್ಣವಾಗಿ ರಕ್ಷಿಸು.

॥ ಭಾವಾರ್ಥ ॥

ಎಲೈ ತ್ವಷ್ಟೃದೇವನೇ, ಜಗತ್ಪೋಷಣ ವ್ಯಾಪಾರದಲ್ಲಿ ಸರ್ವವ್ಯಾಪಿಯೂ, ಸುಖಕರನೂ ಆಗಿ, ಈ ಯಜ್ಞಕ್ಕೆ ದಯಮಾಡು. ಪ್ರತಿಯೊಂದು ಯಜ್ಞದಲ್ಲಿಯೂ ನಮ್ಮನ್ನು ಪೂರ್ಣವಾಗಿ ರಕ್ಷಿಸು.

English Translation

Twashtri, being propitious, you are diffusive in kindness, come of your own accord, protect us in repeated sacrifices.

॥ ಸಂಹಿತಾಪಾಠಃ ॥

ಯತ್ರ॑ ವೇತ್ಥ॑ ವನಸ್ಪತೇ॒ ದೇ॒ವಾನಾಂ॑ ಗುಹ್ಯಾ॑ ನಾಮಾ॑ನಿ ।
ತತ್ರ॑ ಹ॒ವ್ಯಾನಿ॑ ಗಾಮಯ ॥ ೧೦ ॥

॥ ಪದಪಾಠಃ ॥

ಯತ್ರ॑ । ವೇತ್ಥ॑ । ವ॒ನ॒ಸ್ಪ॒ತೇ॒ । ದೇ॒ವಾನಾ॑ಂ । ಗು॒ಹ್ಯಾ॑ । ನಾಮಾ॑ನಿ ॥
ತತ್ರ॑ । ಹ॒ವ್ಯಾನಿ॑ । ಗಾ॒ಮ॒ಯ ॥ ೧೦ ॥

॥ ಸಾಯಣಭಾಷ್ಯಂ ॥

ಆಗ್ನಿಹೋತ್ರ ಉತ್ತರಾಹುತಿಸ್ಕಂದನೇ ಯತ್ರ ವೇತ್ಥೇತ್ಯನಯಾ ಸಮಿಧಮಾದಧ್ಯಾತ್। ಸೂತ್ರಿತಂ ಚ । ಯತ್ರ ವೇತ್ಥ ವನಸ್ಪತ ಇತ್ಯುತ್ತರಸ್ಯಾ ಆಹುತ್ಯಾಃ ಸ್ಕಂದನೇ । ಆ. ೩-೧೧ । ಇತಿ ॥

ಹೇ ವನಸ್ಪತೇ ಯೂಪಾಭಿಮಾನಿದೇವ ಯತ್ರ ಯಸ್ಮಿನ್ ಸ್ಥಾನೇ ವೇತ್ಥ ದೇವಾನಾಂ ಗುಹ್ಯಾ ಗುಹ್ಯಾನಿ ನಾಮಾನಿ ನಾಮಕಾನಿ ರೂಪಾಣಿ ತತ್ರ ಹವ್ಯಾನಿ ಗಮಯ । ಪ್ರಾಪಯ ॥

॥ ಪ್ರತಿಪದಾರ್ಥ ॥

ವನಸ್ಪತೇ—ಎಲೈ ಯೂಪಾಭಿಮಾನಿಯಾದ ದೇವನೇ । **ಯತ್ರ**—ಯಾವ ಯಾವ ಸ್ಥಾನಗಳಲ್ಲಿ । **ದೇವಾನಾಂ**—ದೇವತೆಗಳ । **ಗುಹ್ಯಾ**—ರಹಸ್ಯವಾದ । **ನಾಮಾನಿ**—ನಾಮರೂಪಗಳನ್ನು । **ವೇತ್ಥ**—ಅರಿತಿರುವೆಯೋ । **ತತ್ರ**—ಅಲ್ಲಿಗೆಲ್ಲಾ । **ಹವ್ಯಾನಿ**—ಹವಿಸ್ಸುಗಳನ್ನು । **ಗಮಯ**—ತೆಗೆದುಕೊಂಡುಹೋಗಿ ಸೇರಿಸು.

॥ ಭಾವಾರ್ಥ ॥

ಎಲೈ ಯೂಪಾಭಿಮಾನಿಯಾದ ದೇವನೇ, ನೀನು ಯಾವ ಯಾವ ಸ್ಥಾನಗಳಲ್ಲಿ ದೇವತೆಗಳ ರಹಸ್ಯವಾದ ನಾಮರೂಪಗಳನ್ನು ಅರಿತಿರುವೆಯೋ, ಅಲ್ಲಿಗೆಲ್ಲಾ ಹವಿಸ್ಸುಗಳನ್ನು ತೆಗೆದುಕೊಂಡು ಹೋಗಿ ಅವರಿಗೆ ಸೇರಿಸಿಕೊಡು

English Translation.

Wherever you know, Vanaspati, the secret forms of the gods to be, thither convey the oblations

॥ ವಿಶೇಷವಿಷಯಗಳು ॥

ಅಗ್ನಿಹೋತ್ರಮಾಡುವಾಗ ಉತ್ತರಾಹುತಿಗಾಗಿ **ಯತ್ರ ವೇತ್ಥ** ಎಂಬ ಈ ಋಕ್ಕಿನಿಂದ ಸಮಿತ್ತನ್ನು ಅಗ್ನಿಯಲ್ಲಿ ಹೋಮಮಾಡಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯತ್ರ ವೇತ್ಥ ವನಸ್ಪತ ಇತ್ಯುತ್ತರಸ್ಯಾ ಆಹುತ್ಯಾಃ ಸ್ಕಂದನೇ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ ೩-೧೨)

॥ ಸಂಹಿತಾಪಾಠಃ ॥

ಸ್ವಾಹಾಗ್ನಯೇ ವರುಣಾಯ ಸ್ವಾಹೇಂದ್ರಾಯ ಮರುದ್ಭ್ಯಃ ॥
ಸ್ವಾಹಾ ದೇವೇಭ್ಯೋ ಹವಿಃ ॥ ೧೧ ॥

॥ ಪದಪಾಠಃ ॥

ಸ್ವಾಹಾ । ಅಗ್ನಯೇ । ವರುಣಾಯ । ಸ್ವಾಹಾ । ಇಂದ್ರಾಯ । ಮರುತ್ಭ್ಯಃ ॥
ಸ್ವಾಹಾ । ದೇವೇಭ್ಯಃ । ಹವಿಃ ॥ ೧೧ ॥

ಅಗ್ನ್ಯಾದಿ ವಿಶ್ವೇ ದೇವಾಃ । ತೇಭ್ಯೋ ದೇವೇಭ್ಯ ಇದಂ ಹವಿಃ ಸ್ವಾಹಾ ಕರೋಮೀತಿ ಶೇಷಃ । ಸ್ವಾಹುತಂ ಕರೋಮೀತ್ಯರ್ಥಃ । ಏವಂ ಸ್ವಾಹಾಕೃತೈಃ ಸ್ತುತಿಃ ॥

॥ ಪ್ರತಿಪದಾರ್ಥ ॥

ಹವಿಃ— ಹವಿಸ್ಸು । **ಅಗ್ನಯೇ**— ಅಗ್ನಿಯನ್ನುದ್ದೇಶಿಸಿ । **ಸ್ವಾಹಾ**— ಸ್ವಾಹಾಕಾರಪೂರ್ವಕವಾಗಿ ಅರ್ಪಿತವಾಗುತ್ತದೆ । **ವರುಣಾಯ**—ವರುಣನಿಗೂ । **ಇಂದ್ರಾಯ**— ಇಂದ್ರನಿಗೂ । **ಮರುದ್ಭ್ಯಃ**—ಮರುತ್ತುಗಳಿಗೂ । **ಸ್ವಾಹಾ**—ಸ್ವಾಹಾಕಾರವಾದ ಅರ್ಪಣೆಯು । **ದೇವೇಭ್ಯಃ**—ಸಕಲ ದೇವತೆಗಳನ್ನೂ ಉದ್ದೇಶಿಸಿ । **ಸ್ವಾಹಾ**—ಸ್ವಾಹಾಕಾರಪೂರ್ಣವಾದ ಅರ್ಪಣೆಯು.

॥ ಭಾವಾರ್ಥ ॥

ಅಗ್ನಿಯನ್ನೂ, ವರುಣ, ಇಂದ್ರ ಮತ್ತು ಮರುತ್ತುಗಳು, ಇತರ ಎಲ್ಲಾ ದೇವತೆಗಳು ಇವರೆಲ್ಲರನ್ನೂ ಉದ್ದೇಶಿಸಿ ಸ್ವಾಹಾಕಾರಪೂರ್ವಕವಾಗಿ ಹವಿಸ್ಸು ಅರ್ಪಿತವಾಗುತ್ತದೆ.

English Translation.

The oblation is offered with reverence to Agni, to Varuna, with reverencc to Indra, to the Maruts, with reverence to the gods.

ಆರನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಅಗ್ನಿಂ ತಂ ಮನ್ಯ ಇತಿ ದಶರ್ಚಂ ಷಷ್ಠಂ ಸೂಕ್ತಂ ವಸುಶ್ರುತಸ್ಯಾರ್ಷಮಾಗ್ನೇಯಂ ಪಾಂಕ್ತಂ । ಅಗ್ನಿಂ ತಂ ದಶ ಪಾಂಕ್ತಮಿತ್ಯನುಕ್ರಮಣಿಕಾ ॥ ಪ್ರಾತರನುವಾಕ ಅಗ್ನೇಯೇ ಕ್ರತೌ ಪಾಂಕ್ತೇ ಛಂದಸ್ಯಾಶ್ವಿನಶಸ್ತ್ರೇ ಚೇದಂ ಸೂಕ್ತಂ । ಅಗ್ನಿಂ ತಂ ಮನ್ಯ ಇತಿ ಪಾಂಕ್ತಂ । ಅ. ೪-೧೩ । ಇತಿ ಹಿ ಸೂತ್ರಿತಂ ॥ ಅಶ್ವಮೇಧಿಕೇ ಮಧ್ಯಮೇಽಹನೀದಮೇವಾಜ್ಯಶಸ್ತ್ರಂ । ಸೂತ್ರಿತಂ ಚ । ಅಗ್ನಿಂ ತಂ ಮನ್ಯ ಇತ್ಯಾಜ್ಯಂ ತಸ್ಯೈಕಾಹಿಕಮುಪರಿಷ್ಟಾತ್ । ಅ. ೧೦-೧೦ । ಇತಿ ॥ ಅದ್ಯ ಅಭಿಪ್ಲವಿಕೇಷೂಕ್ಥ್ಯೇಷು ಮೈತ್ರಾವರುಣಸ್ಯಾನುರೂಪಸ್ತ್ರೈಚಃ । ಸೂತ್ರಿತಂ ಚ । ಅಗ್ನಿಂ ತಂ ಮನ್ಯೇ ಯೋ ವಸುರಾಗ್ನೇ ಸ್ಥೂರಂ ರಯಿಂ ಭರ । ಅ. ೭-೮ । ಇತಿ ॥

ಅನುವಾದವು—**ಅಗ್ನಿಂ ತಂ ಮನ್ಯೇ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಸುಶ್ರುತನು ಋಷಿಯು; ಅಗ್ನಿಯು ದೇವತೆಯು; ಪಂಕ್ತಿಶ್ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಅಗ್ನಿಂ ತಂ ದಶ ಪಾಂಕ್ತಂ** ಎಂದು ಹೇಳಿರುವುದು. ಪ್ರಾತರನುವಾಕ ಮಂತ್ರಪಠನಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ಪಂಕ್ತಿಶ್ಛಂದಸ್ಸಿನ ಮಂತ್ರಗಳಿಗಾಗಿಯೂ ಆಶ್ವಿನಶಸ್ತ್ರಮಂತ್ರಗಳಿ

ಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಅಗ್ನಿಂ ತಂ ಮನ್ಯೇ ಇತ್ಯಾಜ್ಯಂ ತಸ್ಯೈಕಾಹಿಕಮುಪರಿಷ್ಟಾತ್** ಎಂಬ ಸೂತ್ರದಿಂದ (ಆ ೧೦-೧೦) ವಿವೃತವಾಗಿರುವುದು, ಮತ್ತು ಅಭಿಪ್ಲವ ಸಂಬಂಧವಾದ ಉಕ್ಥ್ಯವೆಂಬ ಯಾಗದಲ್ಲಿಯೂ ಮೈತ್ರಾವರುಣನೆಂಬ ಋತ್ವಿಜನು ಈ ಸೂಕ್ತದ ಮೊದಲ ಮೂರು ಋಕ್ಕುಗಳನ್ನು ಅನುರೂಪ ತೃಚ (ಮೂರು ಋಕ್ಕುಗಳು) ವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಅಗ್ನಿಂ ತಂ ಮನ್ಯೇ ಯೋ ವಸುರಾಗ್ನೇ ಸ್ಥೂರಂ ರಯಿಂ ಭರ** ಎಂಬ ಸೂತ್ರದಿಂದ (ಆ ೭-೮) ವಿವೃತವಾಗಿರುವುದು.

ಸೂಕ್ತ—೭

ಮಂಡಲ—೫ ॥ ಅನುವಾಕ—೧ ॥ ಸೂಕ್ತ—೭ ॥
ಅಷ್ಟಕ—೩ ॥ ಅಧ್ಯಾಯ—೮ ॥ ವರ್ಗ—೨೨, ೨೩ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
॥ ಋಷಿಃ—ವಸುಶ್ರುತ ಆತ್ರೇಯಃ ॥
॥ ದೇವತಾ—ಅಗ್ನಿಃ ॥
। ಛಂದಃ—ಪಂಕ್ತಿಃ ॥

॥ ಸಂಹಿತಾಪಾಠಃ ॥

ಅಗ್ನಿಂ ತಂ ಮನ್ಯೇ ಯೋ ವಸುರಸ್ತಂ ಯಂ ಯಂತಿ ಧೇನವಃ ।
ಅಸ್ತಮರ್ವಂತ ಆಶವೋಽಸ್ತಂ ನಿತ್ಯಾಸೋ ವಾಜಿನ ಇಷಂ ಸ್ತೋತೃಭ್ಯ ಆ ಭರ ॥ ೧ ॥

॥ ಪದಪಾಠಃ ॥

ಅಗ್ನಿಂ । ತಂ । ಮನ್ಯೇ । ಯಃ । ವಸುಃ । ಅಸ್ತಂ । ಯಂ । ಯಂತಿ । ಧೇನವಃ ।
ಅಸ್ತಂ । ಅರ್ವಂತಃ । ಆಶವಃ । ಅಸ್ತಂ । ನಿತ್ಯಾಸಃ । ವಾಜಿನಃ । ಇಷಂ । ಸ್ತೋತೃಭ್ಯಃ । ಆ । ಭರ ॥

॥ ಸಾಯಣಭಾಷ್ಯಂ ॥

ತಮಗ್ನಿಂ ಮನ್ಯೇ । ಸ್ತೌಮಿ । ಯೋಽಗ್ನಿರ್ವಸುರ್ವಾಸಕಃ । ಯಮಸ್ತಂ ಸರ್ವೇಷಾಂ ಗೃಹವದಾಶ್ರಯೀಭೂತಂ ಧೇನವೋ ಯಂತಿ । ಗಚ್ಛಂತಿ ಪ್ರೀಣಯಿತುಂ । ಅಸ್ತಮುಕ್ತಲಕ್ಷಣಮರ್ವಂತೋಽರಣವಂತೋಽಶ್ವಾ ಆಶವಃ ಶೀಘ್ರಗಾಮಿನೋ ಯಂತಿ । ತಥಾ ನಿತ್ಯಾಸೋ ನಿತ್ಯಪ್ರವೃತ್ತಯೋ ವಾಜಿನೋ ಹವಿರ್ಲಕ್ಷಣಾನ್ನವಂತೋ ಯಜಮಾನಾ ಯಮಸ್ತಂ ಯಂತಿ ತಂ ಮನ್ಯೇ । ಇಷಮನ್ನಂ ಸ್ತೋತೃಭ್ಯೋಽಸ್ಮಭ್ಯಮಾ ಭರಾಗ್ನೇ ॥

॥ ಪ್ರತಿಪದಾರ್ಥ ॥

ಯಃ—ಯಾವ ಅಗ್ನಿಯು । **ವಸುಃ**—ವಸತಿದಾಯಕನೋ । **ಅಸ್ತಂ**— ಗೃಹದಂತೆ ಆಶ್ರಯದಾತ ಾಗಿರುವ । **ಯಂ**—ಯಾವ ಅಗ್ನಿಯನ್ನು । **ಧೇನವಃ**—ಧೇನುಗಳು । **ಯಂತಿ**—ಹೋಗಿ ಸೇರಿಕೊಳ್ಳುವುವೋ । **ಸ್ತಂ**—ಆಶ್ರಯಭೂತನಾದ ಯಾವನನ್ನು । **ಆಶವಃ**—ಶೀಘ್ರಗಾಮಿಗಳಾದ । **ಅರ್ವಂತಃ**—ಅಶ್ವಗಳು (ಹೋಗಿ ೇರುವುವೋ) । **ಅಸ್ತಂ**—ಆಶ್ರಯಭೂತನಾದ ಯಾವನನ್ನು । **ನಿತ್ಯಾಸಃ**—ನಿತ್ಯಕರ್ಮಗಳುಳ್ಳವರೂ । **ವಾಜಿನಃ**– ವಿಸ್ಸಿನರೂಪದ ಅನ್ನವುಳ್ಳವರೂ ಆದ ಯಜಮಾನರು (ಹೋಗಿ ಸೇರುವರೋ) । **ತಂ**—ಅಂತಹ ಅಗ್ನಿಯನ್ನು । **ನ್ಯೇ**—ಧ್ಯಾನಪೂರ್ವಕವಾಗಿ ಸ್ತುತಿಸುತ್ತೇನೆ । (ಎಲೈ ಅಗ್ನಿಯೇ) **ಸ್ತೋತೃಭ್ಯಃ**—ಸ್ತೋತೃಗಳಾದ ನಮಗೆ । **ಷಂ**—ಅನ್ನವನ್ನು । **ಆ ಭರ**—ತೆಗೆದುಕೊಂಡು ಬಾ

॥ ಭಾವಾರ್ಥ ॥

ಯಾವನು ಸಕಲರಿಗೂ ವಸತಿದಾಯಕನೋ ಮತ್ತು ತನ್ನ ಗೃಹದಂತೆ ಆಶ್ರಯಭೂತನಾದ ಯಾರನ್ನು ೇನುಗಳೂ, ಶೀಘ್ರಗಾಮಿಗಳಾದ ಅಶ್ವಗಳೂ ಮತ್ತು ನಿತ್ಯಕರ್ಮಯುಕ್ತರಾಗಿ ಹವಿಸ್ಸಿನ ರೂಪದ ಅನ್ನವುಳ್ಳ ಯಜ ಾನರೂ ಹೋಗಿ ಸೇರುವರೋ ಅಂತಹ ಅಗ್ನಿಯನ್ನು ಧ್ಯಾನಪೂರ್ವಕವಾಗಿ ಸ್ತುತಿಸುತ್ತೇನೆ ಎಲೈ ಅಗ್ನಿಯೇ, ತೋತೃಗಳಾದ ನಮಗೆ ಅನ್ನವನ್ನು ತೆಗೆದುಕೊಂಡು ಬಾ.

English Translation.

I glorify that Agni who is the giver of dwellings, to whom, as to ıeir home, the milch cows, the light-faced steeds, the constant offerers of oblations, repair. (Agni), bring food to your adorers.

॥ ಸಂಹಿತಾಪಾಠಃ ॥

ಸೋ ಅ॒ಗ್ನಿ॒ರ್ಯೋ ವಸು॑ರ್ಗೃ॒ಣೇ ಸಂ ಯ॒ಮ್ರಾಯಂ॑ತಿ ಧೇ॒ನವಃ॑ ।
ಸ ಮ॒ರ್ವಂ॑ತೋ ರ॒ಘುದ್ರು॑ವಃ॒ ಸಂ ಸು॒ಜಾತಾ॑ಸಃ ಸೂ॒ರಯ॒ ಇಷಂ॒ ಸ್ತೋ॒ತೃ॒ಭ್ಯ॒ ಆ ಭ॑ರ ॥ ೨ ॥

॥ ಪದಪಾಠಃ ॥

ಃ । ಅ॒ಗ್ನಿಃ । ಯಃ । ವಸುಃ॑ । ಗೃ॒ಣೇ । ಸಂ । ಯಂ । ಅ॒ಯಂ॒ತಿ॒ । ಧೇ॒ನವಃ॑ ।
ಂ । ಅರ್ವಂ॑ತಃ । ರ॒ಘುದ್ರು॑ವಃ । ಸಂ । ಸು॒ಜಾತಾ॑ಸಃ । ಸೂ॒ರಯ॑ಃ । ಇಷಂ॑ । ಸ್ತೋ॒ತೃ॒ಭ್ಯ॒ । ಆ । ಭ॒ರ ॥ ೨ ॥

॥ ಸಾಯಣಭಾಷ್ಯಂ ॥

ಸೋಽಗ್ನಿಃ ಸ ಋಲ್ವಗ್ನಿರ್ಯೋ ವಸುರ್ವಾಸಕೋ ಗೃಣೇ । ಸ್ತೂಯತೇ । ಯಂ ಧೇನವಃ ಸಮಾಯಂತಿ ಹೋಮಾರ್ಥಂ । ಅರ್ವಂತೋಽಶ್ವಾ ರಘುದ್ರುವೋ ಲಘುಗಮನಾಃ ಸಮಾಯಂತಿ । ಸುಜಾತಾಸಃ ಸೂರಯೋ ಮೇಧಾವಿನೇಶ್ಚ ಸಮಾಯಂತಿ ಸ ಋಲ್ವಗ್ನಿರಿತಿ ॥

॥ ಪ್ರತಿಪದಾರ್ಥ ॥

ಯಃ—ಯಾರು । **ಗೃಣೇ**—ಸ್ತುತಿಕರ್ತನಿಗೆ । **ವಸುಃ**—ವಸತಿದಾಯಕನೋ । **ಯಂ**—ಯಾರನ್ನು । **ಧೇನವಃ**—ಧೇನುಗಳು । **ಸು ಆಯಂತಿ**—(ಹೋಮಾರ್ಥವಾಗಿ) ಬಂದು ಸೇರುವುವೋ । **ರಘುದ್ರುವಃ**—ಅತಿವೇಗವಾದ ಓಟವುಳ್ಳ । **ಅರ್ವಂತಃ**—ಅಶ್ವಗಳು । **ಸಂ (ಆಯಂತಿ)**—ಬಂದು ಸೇರುವುವೋ । ಮತ್ತು **ಸುಜಾತಾಸಃ**—ಶ್ರೇಷ್ಠವಾದ ಸ್ಥಿತಿಯುಳ್ಳ । **ಸೂರಯಃ**—ಮೇಧಾವಿಗಳು । **ಸಂ (ಆಯಂತಿ)**—ಬಂದು ಸೇರುವರೋ । **ಸಃ**—ಅವನೇ । **ಅಗ್ನಿಃ**—ಅಗ್ನಿಯು (ಎಲೈ ಅಗ್ನಿಯೇ) । **ಸ್ತೋತೃಭ್ಯಃ**—ಸ್ತೋತೃಗಳಾದ ನಮಗೆ । **ಇಷಂ**—ಅನ್ನವನ್ನು । **ಆ ಭರ**—ತಂದೊದಗಿಸು.

॥ ಭಾವಾರ್ಥ ॥

ಯಾರು ಸ್ತುತಿಕರ್ತನಿಗೆ ವಸತಿದಾಯಕನೋ, ಯಾರನ್ನು ಧೇನುಗಳು ಹೋಮಾರ್ಥವಾಗಿ ಬಂದು ಸೇರುವುವೋ ಮತ್ತು ನಾಗಾಲೋಟವುಳ್ಳ ಅಶ್ವಗಳೂ, ಶ್ರೇಷ್ಠವಾದ ಸ್ಥಿತಿಯುಳ್ಳ ಸೂರಿಗಳೂ ಬಂದು ಸೇರುವರೋ, ಅವನೇ ಅಗ್ನಿಯು ಎಲೈ ಅಗ್ನಿಯೇ, ಸ್ತೋತೃಗಳಾದ ನಮಗೆ ಅನ್ನವನ್ನು ತಂದೊಗಿಸು.

English Translation.

He is Agni, who is praised as the giver of dwellings, to whom the milch cows, the light-faced steeds, the well-born, devout worshippers repair: Agni, bring food to your adorers

॥ ಸಂಹಿತಾಪಾಠಃ ॥

ಅಗ್ನಿರ್ಹಿ ವಾಜಿನಂ ವಿಶೇ ದದಾತಿ ವಿಶ್ವಚರ್ಷಣಿಃ ।
ಅಗ್ನೀ ರಾಯೇ ಸ್ವಾಭುವಂ ಸ ಪ್ರೀತೋ ಯಾತಿ ವಾರ್ಯಮಿಷಂ ಸ್ತೋತೃಭ್ಯ ಆ ಭರ ॥ ೩ ॥

॥ पदपाठः ॥

ग्निः । हि । वाजिनम् । विशे । ददाति । विश्वऽचर्षणिः ।

ग्निः । रायेः । सुऽअभुवम् । सः । प्रीतः । याति । वार्यम् । इषम् । स्तोतृऽभ्यः ।
अ । भर ॥ ६ ॥

॥ सायणभाष्यम् ॥

अग्निर्ह्यमग्निः खलु विशे यजमानाय वाजिनमन्नवन्तं पुत्रमश्वमन्नं ददाति । विश्वचर्षणिः । विश्वे चर्षणयो मनुष्या रक्षणीया अर्चका वा यस्य स त्वोक्तः । यद्वा । पश्यतीकर्म्यृतत् । सर्वस्य द्रष्ट्राग्नेः रायेः धनार्थिनेः । अथवा रायोऽर्थे चतुर्थी । धनं स्वाभुवं सुष्ठु सर्वत्र व्याप्तं वार्यं सर्वैर्वरणीयं प्रीतः सन् याति । यमयति । दातुं वा गच्छति । इषमित्यादि गतम् ॥

॥ श्रुतपदार्थ ॥

